೧೧

ಸಮಗ್ರ
ವಚನ
ಸಂಪುಟ

ಜನಪ್ರಿಯ ಆವೃತ್ತಿ

# ಸಂಕೀರ್ಣ ವಚನಸಂಪುಟ

# ೬

ಸಂಪಾದಕ
ಎಸ್. ಶಿವಣ್ಣ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

# ಸಂಕೀರ್ಣ ವಚನಸಂಪುಟ : ಆರು

(ಬಸವೋತ್ತರ ಯುಗ)

೧. ಬಸವಣ್ಣನವರ ವಚನಸಂಪುಟ - ಸಂ : ಡಾ. ಎಂ. ಎಂ. ಕಲಬುರ್ಗಿ
೨. ಅಲ್ಲಮಪ್ರಭುದೇವರ ವಚನಸಂಪುಟ - ಸಂ : ಡಾ. ಬಿ. ವ್ಹಿ. ಮಲ್ಲಾಪುರ
೩. ಚೆನ್ನಬಸವಣ್ಣನವರ ವಚನಸಂಪುಟ - ಸಂ : ಡಾ. ಬಿ. ವ್ಹಿ. ಮಲ್ಲಾಪುರ
೪. ಸಿದ್ಧರಾಮೇಶ್ವರ ವಚನಸಂಪುಟ - ಸಂ : ಡಾ. ಎಸ್. ವಿದ್ಯಾಶಂಕರ
೫. ಶಿವಶರಣೆಯರ ವಚನಸಂಪುಟ - ಸಂ : ಡಾ. ವೀರಣ್ಣ ರಾಜೂರ
೬. ಸಂಕೀರ್ಣ ವಚನಸಂಪುಟ : ಒಂದು - ಸಂ : ಡಾ. ಎಂ. ಎಂ. ಕಲಬುರ್ಗಿ
೭. ಸಂಕೀರ್ಣ ವಚನಸಂಪುಟ : ಎರಡು - ಸಂ : ಡಾ. ಎಸ್. ವಿದ್ಯಾಶಂಕರ
೮. ಸಂಕೀರ್ಣ ವಚನಸಂಪುಟ : ಮೂರು - ಸಂ : ಡಾ. ಬಿ. ಆರ್. ಹಿರೇಮಠ
೯. ಸಂಕೀರ್ಣ ವಚನಸಂಪುಟ : ನಾಲ್ಕು - ಸಂ : ಡಾ. ಬಿ. ಆರ್. ಹಿರೇಮಠ
೧೦. ಸಂಕೀರ್ಣ ವಚನಸಂಪುಟ : ಐದು - ಸಂ : ಡಾ. ವೀರಣ್ಣ ರಾಜೂರ
೧೧. ಸಂಕೀರ್ಣ ವಚನಸಂಪುಟ : ಆರು - ಸಂ : ಎಸ್. ಶಿವಣ್ಣ
೧೨. ಸಂಕೀರ್ಣ ವಚನಸಂಪುಟ : ಏಳು - ಸಂ : ಡಾ. ವೀರಣ್ಣ ರಾಜೂರ
೧೩. ಸಂಕೀರ್ಣ ವಚನಸಂಪುಟ : ಎಂಟು - ಸಂ : ಡಾ. ವೀರಣ್ಣ ರಾಜೂರ
೧೪. ಸಂಕೀರ್ಣ ವಚನಸಂಪುಟ : ಒಂಬತ್ತು - ಸಂ : ಡಾ. ವೀರಣ್ಣ ರಾಜೂರ
೧೫. ವಚನ ಪರಿಭಾಷಾಕೋಶ - ಸಂ : ಡಾ. ಎಸ್. ಜಿ. ಮಹಾದೇವಪ್ಪ

# ಸಂಕೀರ್ಣ ವಚನಸಂಪುಟ : ಆರು

(ಬಸವೋತ್ತರ ಯುಗ)

ಸಂಪಾದಕ

ಎಸ್. ಶಿವಣ್ಣ

ಹಸ್ತಪ್ರತಿ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು

**SANKEERNA VACHANASAMPUTA : ARU :** Complete Vachanas of 5 Vachanakaras of Post Basaveshvara Period, Ed. by S. Shivanna, Bangalore and Published by The Administrative Officer, Kannada Pusthaka Pradhikara (Kannada Book Authority), Pampa Mahakavi Road, Chamarajpet, Bangalore - 560 018

ISBN : 81-7713-098-6

Pp. xxxvi + 696

ಹಕ್ಕುಗಳನ್ನು ಕಾಯ್ದಿರಿಸಿದೆ

ಪ್ರಥಮ ಮುದ್ರಣ : ೧೯೯೩
ದ್ವಿತೀಯ ಪರಿಷ್ಕೃತ ಮುದ್ರಣ : ೨೦೦೧

ಪ್ರತಿ : ಐದು ಸಾವಿರ

ಬೆಲೆ : **ರೂ. ೮೫೦/-**
(೧೫ ಸಂಪುಟಗಳ ಸೆಟ್)

ಅಕ್ಷರ ಜೋಡಣೆ
ಸ್ನೇಹ ಪ್ರಿಂಟರ್ಸ್, ಬೆಂಗಳೂರು

ಮುದ್ರಣ
ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
೧೧೬/೨, ೫ನೇ ಮುಖ್ಯರಸ್ತೆ
ಚಾಮರಾಜಪೇಟೆ, ಬೆಂಗಳೂರು-೧೮
✆ : ೬೬೧೩೧೨೩, ೬೬೧೮೬೫೨

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ


## ಸಂಪಾದಕ ಮಂಡಳಿ

ಪ್ರಧಾನ ಸಂಪಾದಕರು

**ಡಾ. ಎಂ. ಎಂ. ಕಲಬುರ್ಗಿ**

ವಿಶ್ರಾಂತ ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸದಸ್ಯರು

**ಡಾ. ಎಂ. ಚಿದಾನಂದಮೂರ್ತಿ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಡಾ. ಸಿ. ಪಿ. ಕೃಷ್ಣಕುಮಾರ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು

**ಡಾ. ಎಸ್. ವಿದ್ಯಾಶಂಕರ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಎಸ್. ಶಿವಣ್ಣ**

ವಿಶ್ರಾಂತ ಸಂಪಾದಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಕೆ. ಸಿ. ರಾಮಮೂರ್ತಿ**

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

# ಮುನ್ನುಡಿ

**ಎಸ್. ಎಂ. ಕೃಷ್ಣ**
ಮುಖ್ಯಮಂತ್ರಿಗಳು

ಕನ್ನಡನಾಡಿನ ಪ್ರಥಮ ಪ್ರಜಾಸಾಹಿತ್ಯವಾಗಿರುವ ವಚನವಾಙ್ಮಯ ನಮ್ಮ ಪರಂಪರೆಯ ಅಪೂರ್ವ ಸಾಂಸ್ಕೃತಿಕ ಆಸ್ತಿಯೆನಿಸಿದೆ. ಅನೇಕ ಜನ ವಿದ್ವಾಂಸರು, ಅನೇಕ ಸಂಸ್ಥೆಗಳು ಈ ಸಾಹಿತ್ಯವನ್ನು ಬೆಳಕಿಗೆ ತರಲು ಕಳೆದ ನೂರು ವರ್ಷಗಳಿಂದ ದುಡಿಯುತ್ತ ಬಂದುದು, ಇದರ ವ್ಯಾಪಕತೆಯ ದ್ಯೋತಕವಾಗಿದೆ. ಹೀಗೆ ಪ್ರಕಟವಾಗಿದ್ದ ಮತ್ತು ಅಪ್ರಕಟಿತ ಸ್ಥಿತಿಯಲ್ಲಿದ್ದ ಈ ಸಾಹಿತ್ಯದ ದ್ವಿತೀಯ ಆವೃತ್ತಿಯನ್ನು ವಚನ ಪರಿಭಾಷಾಕೋಶವೂ ಒಳಗೊಂಡಂತೆ ೧೫ ಸಂಪುಟಗಳ ಮೂಲಕ ಕರ್ನಾಟಕ ಸರ್ಕಾರ ಹೊರತರುತ್ತಿರುವುದು, ನಮ್ಮ ಸಾಹಿತ್ಯ ಪ್ರಕಟಣೆಯ ಇತಿಹಾಸದಲ್ಲಿ ಒಂದು ಗಣ್ಯ ಸಾಧನೆಯೆಂದೇ ಹೇಳಬೇಕು. ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ತನ್ನ ಕರ್ತವ್ಯವೆಂದು ಭಾವಿಸಿ, ಕರ್ನಾಟಕದ ಪ್ರಜಾಸರ್ಕಾರ ಈ ಕೆಲಸವನ್ನು ಪೂರೈಸಿದೆ.

ವಚನಸಾಹಿತ್ಯಕ್ಕೆ ನಮ್ಮ ನಾಡಿನಲ್ಲಿ ಸುಮಾರು ೮೦೦ ವರ್ಷಗಳ ಇತಿಹಾಸವಿದೆ. ಈವರೆಗೆ ಬಸವಯುಗದ ಬರವಣಿಗೆಯನ್ನು ಹೊರತರಲು ವಿದ್ವಾಂಸರು ಹೆಚ್ಚು ಗಮನ ಕೊಟ್ಟಿದ್ದರು. ಈ ಯೋಜನೆ ಅದನ್ನೂ ಒಳಗೊಂಡು, ಬಸವೋತ್ತರ ಯುಗದ ಮೇಲೆಯೂ ಒತ್ತುಕೊಟ್ಟುದು ವಿಶೇಷವೆನಿಸಿದೆ. ಇದರಿಂದಾಗಿ ಈ ಯೋಜನೆಗೆ "ಒಂದು ಸಾಹಿತ್ಯ ಪ್ರಕಾರದ ಪ್ರಕಟಣೆ" ಎಂಬ ಕೀರ್ತಿ ಸಲ್ಲುತ್ತದೆ.

ವಚನವೆಂಬುದು ಚಳುವಳಿ ಸಾಹಿತ್ಯಪ್ರಕಾರವಾಗಿದೆ. ಆತ್ಮಕಲ್ಯಾಣದೊಂದಿಗೆ ಸಮಾಜಕಲ್ಯಾಣವನ್ನೂ ಕಾರ್ಯಗತಗೊಳಿಸಲು ಹೋರಾಡಿ ಮಡಿದ ಮಹಾತ್ಮರ ಸಾಹಿತ್ಯವಿದು. ರಾಜಸತ್ತೆ, ಪುರೋಹಿತಸತ್ತೆ, ಪುರುಷಸತ್ತೆಗಳೆಂಬ ಪ್ರತಿಗಾಮಿ ಸತ್ತೆಗಳ ವಿರುದ್ಧ, ಕರ್ನಾಟಕದ ಎಲ್ಲ ಸಮಾಜದ ಜನರು ನಡೆಸಿದ ಹೋರಾಟದ ಉಪನಿಷ್ಪತ್ತಿಯಾದ ಈ ಸಾಹಿತ್ಯದಲ್ಲಿ ಜೀವಪರಧ್ವನಿಗಳು ದಟ್ಟವಾಗಿ ಕೇಳಿಸುತ್ತವೆ. ಪ್ರಾಚೀನ ಕರ್ನಾಟಕದ ಬೌದ್ಧಿಕ ಶ್ರಮದ ವಿದ್ವತ್ ಜನತಾಸಾಹಿತ್ಯಕ್ಕಿಂತ ದೈಹಿಕ ಶ್ರಮದ ಜನತಾಸಾಹಿತ್ಯ ಹೇಗೆ ಭಿನ್ನವಾಗಿದೆಯೆಂಬುದನ್ನು ಕಾಣಬೇಕಾದರೆ ನಾವು ಈ ಸಾಹಿತ್ಯಕ್ಕೇ ಮೊರೆಹೊಗಬೇಕು.

"ವಿಪ್ರ ಮೊದಲು ಅಂತ್ಯಜ ಕಡೆಯಾಗಿ" ಸಮಾಜದ ಎಲ್ಲ ವರ್ಗದ ಸ್ತ್ರೀ-ಪುರುಷರ ಸಂಕೀರ್ಣ ಧ್ವನಿಗಳು ಇದರಲ್ಲಿ ತುಂಬ ಕಲಾತ್ಮಕವಾಗಿ

ಎರಕಗೊಂಡಿವೆ. ಹೀಗಾಗಿ ಸಮಗ್ರ ಕರ್ನಾಟಕದ ಪ್ರಾತಿನಿಧಿಕ ಧ್ವನಿಯೆನಿಸಿದ ಈ ಸಾಹಿತ್ಯದ ಪ್ರಕಟನೆಯು ತನ್ನ ಕರ್ತವ್ಯದ ಭಾಗವೆಂದು ಭಾವಿಸಿರುವ ಕರ್ನಾಟಕ ಸರ್ಕಾರ, ಅದನ್ನು ಸುಲಭ ಬೆಲೆಯಲ್ಲಿ ಜನತೆಗೆ ನೀಡುತ್ತಿದೆ.

ಈ ಯೋಜನೆಯ ನೇತೃತ್ವ ವಹಿಸಿ ದುಡಿದ ಡಾ. ಎಂ. ಎಂ. ಕಲಬುರ್ಗಿ ಅವರ ಶ್ರದ್ಧೆಯನ್ನು, ಸಂಪಾದಕ ಮಂಡಳಿಯ ಮಾರ್ಗದರ್ಶನವನ್ನು, ಸಂಪಾದಕರ ಶ್ರಮವನ್ನು ಸ್ಮರಿಸುತ್ತ, ಈ ಐತಿಹಾಸಿಕ ಪ್ರಕಟನೆಯ ಪರಿಷ್ಕೃತ ದ್ವಿತೀಯ ಆವೃತ್ತಿ ಸಂಪುಟಗಳನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

❊

# ಬಿನ್ನಹ

**ರಾಣಿ ಸತೀಶ್**

ಕನ್ನಡ ಮತ್ತು ಸಂಸ್ಕೃತಿ ಸಚಿವರು

ಸಾಹಿತ್ಯಕ್ಕೆ ಸಾಹಿತ್ಯ, ಶಾಸ್ತ್ರಕ್ಕೆ ಶಾಸ್ತ್ರವಾಗಿರುವ ವಚನವಾಙ್ಮಯ ನಮ್ಮ ಪರಂಪರೆಯ ಅಪೂರ್ವ ಸೃಷ್ಟಿಯಾಗಿದೆ; ಅತ್ಯಪೂರ್ವ ಆಸ್ತಿಯೆನಿಸಿದೆ. ಪಂಡಿತರ ಮಾರ್ಗಸಾಹಿತ್ಯಕ್ಕೆ ಪ್ರತಿಯಾಗಿ ಸಾಮಾನ್ಯರ ಈ ದೇಶೀಸಾಹಿತ್ಯ ಹೊರಹೊಮ್ಮಿದ್ದು ೧೨ನೆಯ ಶತಮಾನದಲ್ಲಿ; ಕಲಚುರಿಗಳ ರಾಜಧಾನಿಯಾಗಿದ್ದ ಕಲ್ಯಾಣದಲ್ಲಿ; ಬಸವಾದಿ ಶರಣರ ಚಳುವಳಿಯಲ್ಲಿ.

ಮೂಲತಃ ಭಾರತೀಯರದು ಆತ್ಮ ಪರಮಾತ್ಮನಾಗಬೇಕೆಂಬ ವ್ಯಕ್ತಿಕೇಂದ್ರಿತ ಸಿದ್ಧಾಂತ. ಶರಣರು ಇದನ್ನು ಸಮಾಜಕೇಂದ್ರಿತ ಸಿದ್ಧಾಂತಕ್ಕೆ ವಿಸ್ತರಿಸಿದರು. ಹೀಗಾಗಿ ವ್ಯಕ್ತಿ ಕಲ್ಯಾಣದ ಜೊತೆ ಸಮಾಜಕಲ್ಯಾಣವೂ ಈ ಚಳುವಳಿಯ ಮುಖ್ಯ ಲಕ್ಷಣವೆನಿಸಿತು. ಸಾಹಿತ್ಯ ಸಾಹಿತ್ಯಕ್ಕಾಗಿ ಅಲ್ಲ, ವ್ಯಕ್ತಿ ಪರಿವರ್ತನೆಗಾಗಿ, ಸಮಾಜ ಪರಿವರ್ತನೆಗಾಗಿಯೆಂಬ ಸಿದ್ಧಾಂತ ಇಲ್ಲಿ ಅರ್ಥ ಪಡೆಯಿತು.

೧೨ನೆಯ ಶತಮಾನದ ಹೊತ್ತಿಗೆ, ಶೂದ್ರಜೀವ ದೇವನಾಗಲಾರನೆಂಬ ಸಿದ್ಧಾಂತ ಸ್ಥಾಪಿತವಾಗಿದ್ದಿತು. ಸಮಾಜದಲ್ಲಿ ಪುರುಷ-ಸ್ತ್ರೀ, ಪ್ರಭು-ಪ್ರಜೆ, ಬ್ರಾಹ್ಮಣ-ಶೂದ್ರರಲ್ಲಿ ಸಮಾನತೆ ಸಾಧ್ಯವಿಲ್ಲವೆಂಬ ಭೇದಸಂಸ್ಕೃತಿಯೂ ನಿರ್ಮಾಣವಾಗಿದ್ದಿತು. ಈಗ, ಶೂದ್ರನಿಗೂ ದೇವರಾಗುವ ಅರ್ಹತೆಯಿದೆ; ಸ್ತ್ರೀಗೆ ಪುರುಷನಷ್ಟು - ಪ್ರಜೆಗೆ ಪ್ರಭುವಿನಷ್ಟು - ಶೂದ್ರನಿಗೆ ಬ್ರಾಹ್ಮಣನಷ್ಟು ಅಧಿಕಾರವಿದೆಯೆಂದು ಶರಣರು ವಾದಿಸಿದರು. ಇದರ ಫಲವಾಗಿ, ಹೊಸ ಸಮಾಜವೊಂದು ಸೃಷ್ಟಿಯಾಯಿತು. ಇದರಿಂದಾಗಿ ಎಲ್ಲರೂ ಸ್ವತಂತ್ರರು, ಎಲ್ಲರೂ ಸಮಾನರು, ಎಲ್ಲರೂ ಸಹೋದರರೆಂಬ ತತ್ವ ಅನುಷ್ಠಾನಕ್ಕೆ ಬಂದಿತು. ಇದರ ಮುಂದುವರಿಕೆಯೆಂಬಂತೆ ಎಲ್ಲರೂ ದುಡಿಯಬೇಕು ಎಂಬ ಕಾಯಕತತ್ವ, ಎಲ್ಲರೂ ಹಂಚಿಕೊಂಡು ಉಣ್ಣಬೇಕು ಎಂಬ ದಾಸೋಹತತ್ವಗಳು ಆಕಾರ ಪಡೆದವು.

ಹೊಸ ಸಮಾಜದ ಈ ಎಲ್ಲ ನೆಲೆಗಳನ್ನು ಗುರಿಯಿಟ್ಟು ಆಡಿದ ಶರಣರ ಮಾತು ವಚನವೆಂಬ ಸಾಹಿತ್ಯಪ್ರಕಾರವಾಗಿ ಮೂಡಿತು. ವರ್ಗಭೇದ, ವರ್ಣಭೇದ, ಲಿಂಗಭೇದವೆನ್ನದೆ ಎಲ್ಲ ಜನವರ್ಗದವರ ಸಾವಿರ ಸಾವಿರ ವಚನಗಳು ಈ ಕಾಲದಲ್ಲಿ ಸೃಷ್ಟಿಯಾದವು. ಆದರೆ ಒಮ್ಮೆಲೇ ತಲೆದೋರಿದ ಕಲ್ಯಾಣ ಕ್ರಾಂತಿಯಿಂದಾಗಿ ಈ ಸಾಹಿತ್ಯ ನಾಡಿನ ತುಂಬ ಹರಿದು ಹಂಚಿಹೋಯಿತು.

ಹೀಗೆ ಹಂಚಿಹೋಗಿದ್ದ ಈ ಸಾಹಿತ್ಯವನ್ನು ೧೫-೧೬ನೆಯ ಶತಮಾನಗಳಲ್ಲಿ

ಶೋಧಿಸುವ, ಸಂಪಾದಿಸುವ ಪ್ರಯತ್ನ ನಡೆದು, ನೂರಾರು ಸಂಪಾದನ ಕೃತಿಗಳು ಹುಟ್ಟಿ ಬಂದು, ವಚನಸಾಹಿತ್ಯ ವೀರಶೈವ ಮಠಗಳಲ್ಲಿ ತಕ್ಕ ಮಟ್ಟಿಗೆ ರಕ್ಷಿಸಲ್ಪಟ್ಟಿತು. ದುರ್ದೈವದ ಸಂಗತಿಯೆಂದರೆ ಮಠಗಳಲ್ಲಿ ಪ್ರವೇಶ ಪಡೆದ ಸಂಸ್ಕೃತ ಭಾಷೆಯಿಂದಾಗಿ ಕನ್ನಡ ಭಾಷೆಯ ಈ ವಚನಗಳು ಅಲ್ಲಿ ಮೂಲೆ ಸೇರಿದವು.

ಹೀಗೆ ಮೂಲೆಗುಂಪಾಗಿದ್ದ ವಚನಸಾಹಿತ್ಯವು ೨೦ನೆಯ ಶತಮಾನದಲ್ಲಿ ಅನೇಕ ಜನ ವಿದ್ವಾಂಸರ, ಹತ್ತಾರು ಸಂಸ್ಥೆಗಳ ಪ್ರಯತ್ನದ ಫಲವಾಗಿ ಪ್ರಕಟಣೆಗೊಳ್ಳುತ್ತ ಬಂದಿತು. ಈಗ ೧೨ನೆಯ ಶತಮಾನದ ಶರಣಸಾಹಿತ್ಯ ಪ್ರಕಟನೆಗೆ ಒತ್ತುಬಿದ್ದರೂ ಅದು ಬಿಡಿಬಿಡಿಯಾಗಿ ಪ್ರಕಟಣೆಗೊಂಡಿತು. ಆ ತರುವಾಯದ ಶರಣ ಸಾಹಿತ್ಯವಂತೂ ಉಪೇಕ್ಷೆಗೆ ಗುರಿಯಾಯಿತು. ಈ ಎರಡೂ ಕೊರತೆಗಳನ್ನು ನೀಗಿಸುವ ಉದ್ದೇಶದಿಂದ ಎಲ್ಲ ಶರಣರ ಎಲ್ಲ ವಚನಗಳನ್ನು ಸಂಪುಟ ಶ್ರೇಣಿಯಲ್ಲಿ ಪ್ರಕಟಿಸಲು ಕರ್ನಾಟಕ ಸರಕಾರ "ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಯನ್ನು ಕೈಗೆತ್ತಿಕೊಂಡಿತು.

ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ ವ್ಯಾಪಕ ಕಾರ್ಯ ನಡೆದು, ೨೦ ಸಾವಿರ ವಚನ, ೧೦ ಸಾವಿರ ಪುಟಗಳನ್ನೊಳಗೊಂಡ ೧೫ ಸಂಪುಟಗಳು ೧೯೯೩ರಲ್ಲಿ ಬೆಳಕು ಕಂಡವು. ಆಶ್ಚರ್ಯದ ಸಂಗತಿಯೆಂದರೆ ಇದರ ೫ ಸಾವಿರ ಪ್ರತಿಗಳು ಒಂದೇ ವರ್ಷದಲ್ಲಿ ಮಾರಾಟವಾಗಿ, ಜನರಿಂದ ಬೇಡಿಕೆ ಹೆಚ್ಚುತ್ತ ನಡೆಯಿತು. ಇದನ್ನು ಪೂರೈಸುವ ದಿಕ್ಕಿನಲ್ಲಿ ಪರಿಷ್ಕೃತ ದ್ವಿತೀಯ ಆವೃತ್ತಿ ಈಗ ಹೊರಬರುತ್ತಲಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆಯಾಗಿ ಕನ್ನಡದ ಈ ಅಪೂರ್ವ ಆಸ್ತಿಯನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

※

# ನಿರ್ದೇಶಕರ ಮಾತು

**ಕೆ. ಸಿ. ರಾಮಮೂರ್ತಿ**
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ವಚನಸಾಹಿತ್ಯ, ಕರ್ನಾಟಕದ ಬಹುದೊಡ್ಡ ಸಾಂಸ್ಕೃತಿಕ ಸಂಪತ್ತು. ಪ್ರಾಚೀನ ಕರ್ನಾಟಕದ ಜನಸಾಮಾನ್ಯರ ಧ್ವನಿಯಾಗಿರುವ ಇದನ್ನು ಪ್ರಕಟಿಸುವುದು, ಪ್ರಸಾರ ಮಾಡುವುದು ಜನತಂತ್ರ ಸರಕಾರದ ಮುಖ್ಯ ಕರ್ತವ್ಯವಾಗಿದೆ.

ಭಾರತದಲ್ಲಿ ಆತ್ಮೋದ್ಧಾರದ ಬಗ್ಗೆ ಉದಾತ್ತ ತತ್ವಗಳನ್ನು ಪ್ರತಿಪಾದಿಸುತ್ತ ಬಂದಿದ್ದರೂ ಸಮಾಜೋದ್ಧಾರದ ಬಗ್ಗೆ ಉಪೇಕ್ಷೆ ಬೆಳೆದು, ಅಲ್ಲಿ ಶೋಷಣೆ ವರ್ಧಿಸುತ್ತ ಬಂದುದು ನಮ್ಮ ಇತಿಹಾಸದ ಒಂದು ವಿಪರ್ಯಾಸವೇ ಸರಿ. ೧೨ನೆಯ ಶತಮಾನದಲ್ಲಿ ಉಲ್ಬಣಗೊಂಡಿದ್ದ ಈ ವಿಷಮ ಪರಿಸ್ಥಿತಿಯನ್ನು ನಾಶಗೊಳಿಸಿ, ಸಮಸ್ಥಿತಿಯನ್ನು ಸಮಾಜದಲ್ಲಿ ತರಲು ಹೋರಾಡಿದವರು, ಕಲ್ಯಾಣದ ಶರಣರು. ಈ ಕಾರ್ಯಕ್ಕಾಗಿ ಅವರು ಕೈಕೊಡ ಜನಪರ ಆಂದೋಲನ ನಮ್ಮ ದೇಶದ ಇತಿಹಾಸದಲ್ಲಿಯೇ ಒಂದು ವಿಶಿಷ್ಟ ಘಟನೆಯಾಗಿದೆ.

ಭಾರತದಲ್ಲಿ ರಾಜಸತ್ತೆಯ ಸ್ಥಾಪನೆಗಾಗಿ ರಾಜರು, ಮತಸತ್ತೆಯ ಸ್ಥಾಪನೆಗಾಗಿ ಧರ್ಮಗಳು ಪರಸ್ಪರ ಸಂಘರ್ಷಕ್ಕಿಳಿದುದು ಸರ್ವಶ್ರುತ. ಆದರೆ ಸಾಮಾಜಿಕ ನ್ಯಾಯದ ಸ್ಥಾಪನೆಗಾಗಿ ಈ ರಾಜಸತ್ತೆ, ಮತಸತ್ತೆಗಳ ವಿರುದ್ಧ ಸಮಾಜದ ವಿವಿಧ ಸ್ತರಗಳ ಜನತೆ, ಅದರಲ್ಲಿಯೂ ದೀನರು-ದಲಿತರು-ಮಹಿಳೆಯರು ಬೀದಿಗಿಳಿದು ನಡೆಸಿದ ಈ ಆಂದೋಲನ, ಇಪ್ಪತ್ತನೆಯ ಶತಮಾನವೂ ಆಶ್ಚರ್ಯಪಡುವ ಸಂಗತಿಯಾಗಿದೆ.

ಅಂದಿನ ಸನ್ನಿವೇಶಕ್ಕೆ ಅನುಗುಣವಾಗಿ ಧಾರ್ಮಿಕ ಕ್ಷೇತ್ರದಲ್ಲಿ ಅಂಕುರಿಸಿದ ಈ ಆಂದೋಲನ, ಸಾಮಾಜಿಕ ಕ್ಷೇತ್ರವನ್ನೂ ಆವರಿಸಿದ ಕಾರಣ, ಇದನ್ನು 'ಸಮಾಜೋ ಧಾರ್ಮಿಕ' ಆಂದೋಲನವೆಂದು ಗುರುತಿಸಲಾಗುತ್ತದೆ. ಸಮಾಜವೆನ್ನುವುದು ಸಂಕೀರ್ಣ ವ್ಯವಸ್ಥೆ. ಅದರ ಎಲ್ಲ ಸ್ತರಗಳನ್ನೂ ಎಲ್ಲ ಮಗ್ಗಲುಗಳನ್ನೂ ಬದಲಿಸಲು ಮಾಡಿದ ಪ್ರಯತ್ನವಾಗಿರುವುದರಿಂದ ಇದು ಒಂದು "ಸಮಗ್ರ ಆಂದೋಲನ"ವಾಗಿದೆ. ಈ ಆಂದೋಲನದ ನೇರ ಧ್ವನಿ, ವಚನಸಾಹಿತ್ಯ.

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನಿಂದಾಗಿ ವ್ಯಕ್ತಿ ಸ್ವಾತಂತ್ರ್ಯ ಪಡೆದ ಜನವರ್ಗವು ವ್ಯಕ್ತಪಡಿಸಿದ ಅಭಿಪ್ರಾಯ ಸ್ವಾತಂತ್ರ್ಯದ ಫಲ, ಈ ಸಾಹಿತ್ಯ. ಹೀಗಾಗಿ ಇಲ್ಲಿ ಆತ್ಮವಿಮರ್ಶೆಯಷ್ಟೇ ವಿಪುಲವಾಗಿ ಸಮಾಜವಿಮರ್ಶೆಯನ್ನೂ ಕಾಣಬಹುದಾಗಿದೆ. ಅದರಲ್ಲಿಯೂ ವರ್ಣಭೇದ ನಿರಾಕರಣೆ, ವರ್ಗಭೇದ

ನಿರಾಕರಣ, ಲಿಂಗಭೇದ ನಿರಾಕರಣೆಗಳಂಥ ವಿಚಾರಗಳು ಸ್ಫೋಟಗೊಂಡುದು ಲಕ್ಷಿಸತಕ್ಕ ಸಂಗತಿಯಾಗಿದೆ. ಇಲ್ಲಿ ಪುರುಷರಷ್ಟೇ ಪ್ರಧಾನವಾಗಿ ಮಹಿಳೆಯರೂ, ಕುಲಜರಷ್ಟೇ ಪ್ರಧಾನವಾಗಿ ಅಂತ್ಯಜರೂ, ಪ್ರಭುಗಳಷ್ಟೇ ಪ್ರಧಾನವಾಗಿ ಪ್ರಜೆಗಳೂ ಬಾಳಿದುದು, ಬರೆದುದು ಬಹುಶಃ ಜಗತ್ತಿನ ಇತಿಹಾಸದಲ್ಲಿಯೇ ಏಕೈಕ ಉದಾಹರಣೆಯಾಗಿದೆ. ಇಂಥ ವಿಚಾರಶೀಲರ ಅಂದರೆ ಇವರ ತತ್ವ-ಸಾಹಿತ್ಯಗಳ ಉತ್ತರಾಧಿಕಾರಿಗಳಾದುದು ನಮ್ಮ ಭಾಗ್ಯ; ಇವರ ಸಾಹಿತ್ಯಸಂಪತ್ತನ್ನು ರಕ್ಷಿಸುವುದು, ಪ್ರಸಾರಮಾಡುವುದು ನಮ್ಮ ಕರ್ತವ್ಯ. ಈ ಕರ್ತವ್ಯದ ಭಾಗವಾಗಿ "ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಯನ್ನು ಕರ್ನಾಟಕ ಸರಕಾರ ಕೈಗೆತ್ತಿಕೊಂಡಿತು.

ಈವರೆಗೆ ವಚನಸಾಹಿತ್ಯ ಬಿಡಿಬಿಡಿಯಾಗಿ ಭಾಗಶಃ ಪ್ರಕಟವಾಗಿದ್ದಿತು, ಕೆಲವು ಭಾಗ ಅಪ್ರಕಟಿತ ಸ್ಥಿತಿಯಲ್ಲಿ ಉಳಿದಿದ್ದಿತು. ಇದೆಲ್ಲವನ್ನು ಕ್ರೋಢೀಕರಿಸಿ, ಪರಿಷ್ಕರಿಸಿ ಪ್ರಕಟಿಸುವುದು ಶ್ರಮದ ಕೆಲಸ. ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ, ಅನೇಕ ಜನ ವಿದ್ವಾಂಸರ ಮತ್ತು ಸಂಪಾದಕ ಮಂಡಳಿ ಸದಸ್ಯರ ಸಂಯುಕ್ತ ಪರಿಶ್ರಮದಿಂದ ಈ ಬೃಹತ್ ಯೋಜನೆ ಪೂರ್ತಿಗೊಂಡುದು ಸಂತೋಷದ ಸಂಗತಿ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಆಶ್ರಯದಲ್ಲಿ ಅಸ್ತಿತ್ವಕ್ಕೆ ಬಂದು, ನಿರ್ದಿಷ್ಟ ಅವಧಿಯಲ್ಲಿ ಪೂರ್ಣಗೊಂಡ ಈ ಐತಿಹಾಸಿಕ ಯೋಜನೆಗಾಗಿ ಸಂಬಂಧಪಟ್ಟ ಎಲ್ಲ ವಿದ್ವಾಂಸರನ್ನು ಅಭಿನಂದಿಸುತ್ತೇನೆ. ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟವಾಗುತ್ತಲಿರುವ ಈ ಪರಿಷ್ಕೃತ ದ್ವಿತೀಯ ಆವೃತ್ತಿ ಸಂಪುಟಗಳನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

*

# ಪ್ರಕಾಶಕರ ಮಾತು

## ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ

ಸಮಗ್ರ ವಚನ ಸಂಪುಟಗಳ ಪರಿಷ್ಕೃತ ಆವೃತ್ತಿ ಪ್ರಕಟಣೆ ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ನಡೆದಿರುವ ಒಂದು ದಿವ್ಯಘಟನೆ. ವಚನಸಾಹಿತ್ಯದ ಪ್ರಕಟಣೆಗೆ ಸುಮಾರು ಎಂಬತ್ತು ವರ್ಷಗಳ ಇತಿಹಾಸವಿದೆ. ವಚನಪಿತಾಮಹ ಶ್ರೀ ಫ. ಗು. ಹಳಕಟ್ಟಿ ಅವರಿಂದ ಪ್ರಕಟಣೆಯ ದಿವ್ಯಘಟನೆ ಆರಂಭಗೊಂಡಿತು. ಇದೀಗ ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದ ಮೂಲಕ ಸಹಸ್ರಮಾನದ ಸೂರ್ಯೋದಯದ ವೇಳೆಗೆ ಇದು ಒಂದು ಪೂರ್ಣ ಘಟ್ಟಕ್ಕೆ ಬಂದಿದೆ. ಶರಣ ಸಾಹಿತ್ಯದ ಪ್ರಕಟಣೆಯ ಇತಿಹಾಸದಲ್ಲಿ ಇದು ಚಾರಿತ್ರಿಕ ಘಟನೆಯೇ ಸರಿ. ಈ ನಡುವೆ ವಚನಸಾಹಿತ್ಯದ ಸಹಸ್ರಾರು ಬಿಡಿ ಪ್ರಕಟಣೆಗಳು ಹೊರಬಂದಿವೆ. ವಿಶ್ವವಿದ್ಯಾಲಯಗಳು, ಖಾಸಗಿ ಸಂಸ್ಥೆಗಳು, ಮಠಗಳು, ಶಿಕ್ಷಣ ಕೇಂದ್ರಗಳು, ಖಾಸಗಿ ಪ್ರಕಾಶಕರು, ಆಸಕ್ತ ಲೇಖಕರು ಬಿಡಿಬಿಡಿಯಾಗಿ ವಚನಸಾಹಿತ್ಯದ ಪ್ರಕಟಣೆಗಳನ್ನು ಹೊರತಂದಿದ್ದಾರೆ. ನಾವು ಪ್ರೀತಿಯಿಂದ ಇವರನ್ನೆಲ್ಲ ಈ ಹೊತ್ತಿನಲ್ಲಿ ನೆನೆಯುವುದು, ಆ ಪಾತ್ರಃಸ್ಮರಣೀಯರ ಹಾದಿಯಲ್ಲಿ ಮುನ್ನಡೆಯುವುದು ನಮ್ಮ ಸಾಂಸ್ಕೃತಿಕ ಕರ್ತವ್ಯ.

ಸಮಗ್ರ ವಚನ ಸಂಪುಟಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ೧೯೯೩ರಲ್ಲಿ ಪ್ರಕಟಗೊಂಡಿದ್ದವು. ಆ ಸಂಪುಟಗಳು ಪ್ರಕಟವಾದ ವರ್ಷವೇ ಕನ್ನಡಿಗರ ಮನೆಯನ್ನು ಸೇರಿಕೊಂಡವು. ಆದರೆ, ಸಂಪುಟಗಳ ಬೇಡಿಕೆ ಮಹಾಜನರಿಂದ ಇದ್ದೇ ಇತ್ತು. ಅನಂತರ ಕರ್ನಾಟಕ ಸರ್ಕಾರ ಪರಿಷ್ಕೃತ ಆವೃತ್ತಿಗೆ ತಾತ್ವಿಕ ಒಪ್ಪಿಗೆ ನೀಡಿತು. ಹೀಗೆ ಒಪ್ಪಿಗೆ ನೀಡಿದ ಸಂಸ್ಕೃತಿ ಸಂಪನ್ನರೂ ಮುಖ್ಯಮಂತ್ರಿಗಳೂ ಆದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರನ್ನು ತುಂಬು ಹೃದಯದಿಂದ ಈ ಪ್ರಕಟಣೆಯ ದಿವ್ಯಘಟನೆಯ ಹೊತ್ತಿನಲ್ಲಿ ಸ್ಮರಿಸಿಕೊಳ್ಳುತ್ತೇನೆ. ಅನಂತರ ನಾಡಿನ ಶ್ರೇಷ್ಠ ವಿದ್ವಾಂಸರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ವಚನ ಸಂಪುಟಗಳ ಪರಿಷ್ಕೃತ ಆವೃತ್ತಿ ಸಿದ್ಧಗೊಂಡವು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಪ್ರಕಟಿಸಬೇಕಿತ್ತು. ಆದರೆ, ಆ ಕಾರ್ಯವನ್ನು ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಒಪ್ಪಿಸಿದ್ದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಔದಾರ್ಯ; ಅದನ್ನು ಪಡೆದು ಪ್ರಕಟಿಸುತ್ತಿರುವುದು ಪುಸ್ತಕ ಪ್ರಾಧಿಕಾರದ ಭಾಗ್ಯ. ಈ ಭಾಗ್ಯಕ್ಕೆ ಕಾರಣರಾದವರು ಕನ್ನಡ ಮತ್ತು ಸಂಸ್ಕೃತಿ

ಇಲಾಖೆಯ ಸಚಿವೆಯರಾದ ಮಾನ್ಯ ಶ್ರೀಮತಿ ರಾಣಿ ಸತೀಶ್ ಮತ್ತು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ. ಇವರಿಬ್ಬರ ಆಸಕ್ತಿಯ ಫಲ ಈ ಕಾರ್ಯವನ್ನು ಆಗುಗೊಳಿಸಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವೆಯರ ಆಪ್ತ ಕಾರ್ಯದರ್ಶಿ ಡಾ. ಎ. ಆರ್. ಮಂಜುನಾಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಶ್ರೀ ಸಿ. ಎಸ್. ಕೇದಾರ್, ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ಜಂಟಿ ನಿರ್ದೇಶಕ ಶ್ರೀ ಕಾ. ತ. ಚಿಕ್ಕಣ್ಣ ಪ್ರಕಟಣೆಯ ವಿವಿಧ ಹಂತಗಳಲ್ಲಿ ನನಗೆ ನೆರವಾಗಿದ್ದಾರೆ. ಈ ಮೇಲಿನ ಎಲ್ಲ ಮಹನೀಯರಿಗೂ ಕನ್ನಡ ಪುಸ್ತಕ ಪ್ರಾಧಿಕಾರವು ಅನನ್ಯವಾದ ಕೃತಜ್ಞತೆಯನ್ನು ಅರ್ಪಿಸುತ್ತದೆ.

ಸಮಗ್ರವಚನ ಸಂಪುಟಗಳ ಪರಿಷ್ಕೃತ ಆವೃತ್ತಿಯ ಸಂಪಾದಕ ಮಂಡಳಿಯ ವಿದ್ವಾಂಸರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಪಿ. ಕೃಷ್ಣಕುಮಾರ್, ಡಾ. ಎಸ್. ವಿದ್ಯಾಶಂಕರ್, ಎಸ್. ಶಿವಣ್ಣ ಇವರನ್ನು, ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಹೊರತರಲು ಒಪ್ಪಿಗೆ ನೀಡಿದ ಪುಸ್ತಕ ಪ್ರಾಧಿಕಾರದ ಸ್ಥಾಯಿಸಮಿತಿ ಸದಸ್ಯರಾದ ಪ್ರೊ. ರಾಮೇಗೌಡ, ಶ್ರೀ ಆರ್. ಜಿ. ಹಳ್ಳಿ ನಾಗರಾಜ್, ಪ್ರೊ. ಸಿದ್ಧಪ್ಪ ಉತ್ನಾಳ್, ಶ್ರೀ ಛಾಯಾಪತಿ ಮತ್ತು ಶ್ರೀಮತಿ ಇಂದಿರಾ ಶಿವಣ್ಣ ಇವರನ್ನು ತುಂಬು ಮನಸ್ಸಿನಿಂದ ನೆನೆಯುತ್ತೇನೆ. ಹದಿನೈದು ಸಂಪುಟಗಳ ಅಕ್ಷರ ಜೋಡಣೆ ಮಾಡಿಕೊಟ್ಟವರನ್ನು, ಬಹು ಅಂದವಾಗಿ ಮುದ್ರಿಸಿದವರನ್ನು, ಸುಂದರವಾಗಿ ಮತ್ತು ಆಕರ್ಷಕವಾಗಿ ಸಂಪುಟಗಳನ್ನು ಬೈಂಡ್ ಮಾಡಿಕೊಟ್ಟವರನ್ನು, ಮುಖಪುಟ ವಿನ್ಯಾಸ ಮಾಡಿಕೊಟ್ಟವರನ್ನು, ತುಂಬು ಪ್ರೀತಿಯಿಂದ ನೆನೆಯುವುದು ನನ್ನ ಕರ್ತವ್ಯ. ಇವರ ಮುದ್ರಣ ಪರಿಣತಿಯ ಫಲ ಈ ಸಂಪುಟಗಳಿಗೆ ದೊರಕಿ ಅಂದವಾಗಲು ಕಾರಣವಾಗಿದೆ. ಪುಸ್ತಕ ಪ್ರಾಧಿಕಾರದ ಆಡಳಿತಗಾರರಾದ ಶ್ರೀ ಬಲವಂತರಾವ್ ಪಾಟೀಲ ನನ್ನೊಡನೆ ಉದ್ದಕ್ಕೂ ಸಹಕರಿಸಿದ್ದಾರೆ. ಈ ಮೇಲೆ ಹೆಸರಿಸಿದ ಎಲ್ಲ ಮಹನೀಯರನ್ನು ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇನೆ.

ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸುತ್ತಿರುವ ಸಮಗ್ರ ವಚನ ಸಂಪುಟಗಳನ್ನು ಕನ್ನಡದ ಮಹಾಜನತೆ ಪ್ರೀತಿಯಿಂದ ಸ್ವೀಕರಿಸಬೇಕೆಂದು ಬೇಡುತ್ತೇನೆ.

■■

⁕

# ಸಂಪಾದಕೀಯ

## ಡಾ. ಎಂ. ಎಂ. ಕಲಬುರ್ಗಿ

ಪ್ರಧಾನ ಸಂಪಾದಕರು

ಕರ್ನಾಟಕದ ಇತಿಹಾಸದಲ್ಲಿ ಶಿವಶರಣರ ಚಳುವಳಿ ಒಂದು ಅಪೂರ್ವ ಘಟನೆ, ವಚನಗಳ ಸೃಷ್ಟಿ ಒಂದು ಅನನ್ಯ ಪ್ರಯೋಗ. ಸಮಾಜದ ಎಲ್ಲ ವರ್ಗ, ಎಲ್ಲ ವರ್ಣಗಳ ಜನಸಮುದಾಯ ಬಸವಣ್ಣನವರ ನೇತೃತ್ವದಲ್ಲಿ ಕೈಕೊಂಡಿದ್ದ ವ್ಯಕ್ತಿಕಲ್ಯಾಣ ಮತ್ತು ಸಮಾಜಕಲ್ಯಾಣ ಚಳುವಳಿಯ ಸೃಷ್ಟಿಯೆನಿಸಿದ ಈ ವಚನಗಳು, ಜಾಗತಿಕ ಸಾಹಿತ್ಯದ ಮಹತ್ವಪೂರ್ಣ ಭಾಗವೆನಿಸಿವೆ.

'ವಚನ' ಶಬ್ದಕ್ಕೆ ಇಲ್ಲಿ ಗದ್ಯ ಸಾಹಿತ್ಯಪ್ರಕಾರವೆಂದು ಅರ್ಥವಲ್ಲ; ಪ್ರತಿಜ್ಞೆ, ಆತ್ಮಸಾಕ್ಷಿಯ ಮಾತು ಎಂದು ಅರ್ಥ. ನಡೆ ಹೇಗೇ ಇರಲಿ, ನುಡಿ ಮಾತ್ರ ಕಲಾತ್ಮಕವಾಗಿದ್ದುದು 'ರಚನೆ'ಯಾದರೆ, ನಡೆದಂತೆ ನುಡಿದ ಆತ್ಮಸಾಕ್ಷಿಯ ವಾಣಿ 'ವಚನ'ವೆನಿಸುತ್ತದೆ.

ವಚನಗಳು ಆಚಾರ್ಯರ ಸಾಹಿತ್ಯವಲ್ಲ, ಅನುಭಾವಿಗಳ ಸಾಹಿತ್ಯ. ಆಚಾರ್ಯರು ಜೀವಿಸಿರುವಾಗಲೇ ತಮ್ಮ ವಿಚಾರಗಳನ್ನು ಬರೆದು, ಅವುಗಳಿಗೆ ಸಂವಿಧಾನಾತ್ಮಕ ಮುದ್ರೆ ಒತ್ತುತ್ತಾರೆ. ಅನುಭಾವಿಗಳು ಮಾತ್ರ ತಮ್ಮ ಚಿಂತನೆಯನ್ನು ಹೃದಯದಿಂದ ಹೃದಯಕ್ಕೆ ಮುಟ್ಟುವಂತೆ ಬಿಡಿಮಾತುಗಳ ಮೂಲಕ ಹೇಳುತ್ತಾರೆ. ಬಿಡಿಮುತ್ತುಗಳಂತೆ ಸೂರೆಯಾದ ಅವುಗಳನ್ನು ಸಂಗ್ರಹಿಸುವ, ಸಂಕಲಿಸುವ, ಸಂಪಾದಿಸುವ ಕೆಲಸವನ್ನು ಉತ್ತರಕಾಲೀನ ಅನುಯಾಯಿಗಳು ಮಾಡುತ್ತಾರೆ. ಏಸುವಿನ ವಾಣಿಯಾದ ಬೈಬಲ್, ಮಹಮ್ಮದನ ಉಪದೇಶವಾದ ಕುರಾನ್, ಬುದ್ಧನ ಬೋಧೆಯಾದ ತ್ರಿಪಿಟಕ, ಶರಣರ ಸಂದೇಶವಾದ ವಚನಕೃತಿಗಳು ಈ ಬಗೆಯ ಉತ್ತರಕಾಲೀನ ಸಂಕಲನಗಳಾಗಿವೆ.

ಮೂಲತಃ ವಚನನಿಧಿ ಜನರಿಂದ, ಜನರಿಗಾಗಿ ಹುಟ್ಟಿ, ಜನರ ಮಧ್ಯದಲ್ಲಿ ಬಾಳಿದ ಸಾಹಿತ್ಯವಾಗಿದೆ. ಹೀಗಾಗಿ ಹನ್ನೆರಡರಿಂದ ಹದಿನೈದನೆಯ ಶತಮಾನಕ್ಕೆ ಬರುವಷ್ಟರಲ್ಲಿ ಅದಕ್ಕೆ ವಿಪುಲ ಭಿನ್ನಪಾಠಗಳು ಹುಟ್ಟಿಕೊಂಡವು. ಆಮೇಲೆ ಸಂಕಲನ-ಸಂಪಾದನ ಕಾರ್ಯದಿಂದಾಗಿ ಕೆಲವೊಮ್ಮೆ ಪ್ರಕ್ಷಿಪ್ತ ವಚನಗಳೂ ತಲೆಯೆತ್ತಿದವು. ಈ ಗೊಂದಲ ಕಾರಣವಾಗಿ ಕವಿಸಾಹಿತ್ಯಕ್ಕಿಂತ ವಚನಸಾಹಿತ್ಯದ ಸಂಪಾದನಕಾರ್ಯ ತುಂಬ ಜಟಿಲಸ್ವರೂಪದ್ದಾಗಿದೆ.

ಪ್ರಾಚೀನ ಕನ್ನಡ ಸಾಹಿತ್ಯದ ಪ್ರಕಟನಕಾರ್ಯವನ್ನು ಮೊದಲು ಕೈಗೆತ್ತಿಕೊಂಡವರು, ಕ್ರೈಸ್ತ ಪಾದ್ರಿಗಳು. ಜೈನ ಪುರಾಣ-ಕಾವ್ಯಗಳನ್ನು, ವೈದಿಕ ಪುರಾಣ-ಕೀರ್ತನೆಗಳನ್ನು, ವೀರಶೈವ ಶಾಸ್ತ್ರ-ಪುರಾಣಗಳನ್ನು ಪ್ರಕಟಿಸಿದ ಇವರು, ವಚನಸಾಹಿತ್ಯವನ್ನು ಮಾತ್ರ ತಪ್ಪಿಯೂ ಪ್ರಕಟಿಸಲಿಲ್ಲ. ದೇಶೀ ವಿದ್ವಾಂಸರೇ ಈ ಕೆಲಸವನ್ನು ಪ್ರಾರಂಭ ಮಾಡಬೇಕಾಯಿತು. ಈ

ದಿಸೆಯಲ್ಲಿ ಮೊದಲು ಪ್ರಕಟವಾದ ವಚನಕೃತಿ (೧೮೮೩) 'ಅಪ್ರಮಾಣ ಕೂಡಲ ಸಂಗಮದೇವಾ' ಮುದ್ರಿಕೆಯ ವಚನಗಳನ್ನೊಳಗೊಂಡ "ಶಿಖಾರತ್ನಪ್ರಕಾಶ"[೧]. ಆಮೇಲೆ ಒಂದು ಮೈಲಿಗಲ್ಲಿನಂತೆ ಪ್ರಕಟವಾದ ವಚನಕೃತಿ, ಬಸವಣ್ಣನವರ ಷಟ್‌ಸ್ಥಲವಚನ ಸಂಪುಟ. ಅದು ಮೊದಲು ಬೆಳಕು ಕಂಡುದು ೧೮೮೯ರಲ್ಲಿ[೨]. ಅಲ್ಲಿಂದ ಸರಿಯಾಗಿ ಒಂದು ಶತಮಾನ ಕಳೆಯುವಷ್ಟರಲ್ಲಿ ಅಂದರೆ ೧೯೮೮ರಲ್ಲಿ ಈ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ' ಅಸ್ತಿತ್ವಕ್ಕೆ ಬಂದುದು ಒಂದು ಯೋಗಾಯೋಗವಾಗಿದೆ; ವಚನಸಾಹಿತ್ಯದ ಪ್ರಕಟನಚರಿತ್ರೆಯ ಶತಮಾನಸ್ಮರಣೆಯಾಗಿದೆ.

ಈ ನೂರು ವರ್ಷಗಳ ಕಾಲವ್ಯಾಪ್ತಿಯಲ್ಲಿ ವಚನಸಾಹಿತ್ಯ ಪ್ರಕಟಣೆಗಾಗಿ ಅನೇಕರು ದುಡಿದಿರುವರಾದರೂ ಯೋಜನಾಬದ್ಧ ವ್ಯಾಪಕ ಪ್ರಯತ್ನಗಳು, ವಿಜಾಪುರ, ಧಾರವಾಡ, ಗದಗಗಳಲ್ಲಿ ಹೀಗೆ ಜರುಗಿವೆ :

೧. ಶಿವಾನುಭವ ಗ್ರಂಥಮಾಲೆ, ವಿಜಾಪುರ - ಡಾ. ಫ. ಗು. ಹಳಕಟ್ಟಿ

೨. ಕನ್ನಡ ಅಧ್ಯಯನ ಪೀಠ, ಕ. ವಿ. ಧಾರವಾಡ - ಡಾ. ಆರ್. ಸಿ. ಹಿರೇಮಠ

೩. ತೋಂಟದಾರ್ಯಮಠ, ಗದಗ - ಡಾ. ಎಂ. ಎಂ. ಕಲಬುರ್ಗಿ

ವಚನಸಾಹಿತ್ಯದ ಪ್ರಕಟನ ಕಾರ್ಯ ಹೀಗೆ ವಿಜಾಪುರದಲ್ಲಿ ಪ್ರಾರಂಭವಾಗಿ, ಧಾರವಾಡದಲ್ಲಿ ಬೆಳೆದು, ಗದುಗಿನಲ್ಲಿ ಒಂದು ನಿಲುಗಡೆಗೆ ಬರುತ್ತಿದ್ದಂತೆಯೇ, ಈಗ ನಾಲ್ಕನೆಯ ಘಟ್ಟದಲ್ಲಿ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ'ಯ ಅಂಗವಾಗಿ, ೧೫ ಸಂಪುಟಗಳು ಕರ್ನಾಟಕ ಸರಕಾರದ ಮೂಲಕ ಪ್ರಕಟವಾಗುತ್ತಲಿವೆ. ಸುಮಾರು ೧೧೦ ಜನ ಪ್ರಕ್ಷಿಪ್ತ ವಚನಕಾರರನ್ನೂ ಪ್ರಕ್ಷಿಪ್ತವಾಗಿರಬಹುದಾದ ಅನೇಕ ವಚನಗಳನ್ನೂ ಕೈಬಿಟ್ಟು ಸಂಯೋಜಿಸಲಾದ ಈ ಹದಿನೈದು ಸಂಪುಟಗಳ ಒಟ್ಟು ಪುಟ ಸುಮಾರು ಹತ್ತು ಸಾವಿರ; ಒಟ್ಟು ವಚನ ಸಂಖ್ಯೆ ಸುಮಾರು ಇಪ್ಪತ್ತು ಸಾವಿರ. ವಚನಸಾಹಿತ್ಯವನ್ನು ಒಮ್ಮೆ ಸಮಗ್ರವಾಗಿ ಹೊರತಂದ ಪ್ರಥಮ ಮಹತ್ವಾಕಾಂಕ್ಷೆಯ ಯೋಜನೆಯಿದು. ಈ ಸಾಹಿತ್ಯದ ಗಡಿಗೆರೆಗಳನ್ನು, ಸಂಖ್ಯಾಬಾಹುಳ್ಯವನ್ನು ವ್ಯವಸ್ಥೆಗೊಳಿಸಿ ಕೊಟ್ಟು, ವಿದ್ವಾಂಸರ ಅಧ್ಯಯನದ ಮುಂದುವರಿಕೆಗೆ ಒಂದು ನಿರ್ದಿಷ್ಟ ಚೌಕಟ್ಟನ್ನು ಒದಗಿಸಿದ ಹಿರಿಮೆ ಈ ಯೋಜನೆಗೆ ಸಲ್ಲುತ್ತದೆ.

ಈ ಯೋಜನೆಯ ಅಂಗವಾಗಿ ಬಸವಣ್ಣನವರ ವಚನ, ಪ್ರಭುದೇವರ ವಚನ, ಚೆನ್ನಬಸವಣ್ಣನವರ ವಚನ, ಸಿದ್ಧರಾಮೇಶ್ವರ ವಚನ, ಶಿವಶರಣೆಯರ ವಚನ - ಹೀಗೆ ಐದು ಸಂಪುಟಗಳು, ಬಸವ ಸಮಕಾಲೀನ ಮಿಕ್ಕ ಶರಣರ ವಚನಗಳ ನಾಲ್ಕು ಸಂಪುಟಗಳು,

---

೧. ಮೊದಲು ಪ್ರಕಟವಾದ ವಚನಕೃತಿ ಅಖಂಡೇಶ್ವರ ವಚನ (೧೮೮೨)ವೆಂದು ಡಾ. ಬಿ. ನಂಜುಂಡ ಸ್ವಾಮಿ ಅವರ ಅಭಿಪ್ರಾಯ. (ಬಸವಪಥ ೧೬.೬)

೨. ಬಸವಣ್ಣನವರ ಷಟ್ಸ್ಥಲದ ವಚನಗಳು ಪ್ರಥಮ ಸಲ ಬೆಳಕುಕಂಡುದು ೧೮೮೬ರಲ್ಲಿಯೆಂದು ಡಾ. ಬಿ. ನಂಜುಂಡಸ್ವಾಮಿ ಹೇಳುತ್ತಾರೆ. (ಬಸವಪಥ ೧೫-೫ ಪು. ೪೫)

ಬಸವೋತ್ತರ ಕಾಲೀನ ಶರಣರ ವಚನಗಳ ಐದು ಸಂಪುಟಗಳು ಮತ್ತು ಒಂದು ವಚನ ಪರಿಭಾಷಾಕೋಶ - ಹೀಗೆ ಹದಿನೈದು ಸಂಪುಟಗಳು ಬೆಳಕುಕಾಣುತ್ತಲಿವೆ. ಇವುಗಳಲ್ಲಿ ಮೊದಲಿನ ಐದು ಸಂಪುಟಗಳು (ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಶಿವಶರಣೆಯರು) ಈಗಾಗಲೇ ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಪ್ರಕಟವಾಗಿದ್ದವು. ಆ ಬಳಿಕ ಲಭ್ಯವಾದ ನೂರಾರು ಹೊಸ ವಚನಗಳನ್ನು ಸೇರಿಸಿ, ಈ ಐದೂ ಸಂಪುಟಗಳಿಗೆ ಸಮಗ್ರರೂಪ ಕೊಟ್ಟಿದ್ದೇವೆ ಮತ್ತು ಪರಿಷ್ಕರಿಸಿದ್ದೇವೆ.

ಬಸವ ಸಮಕಾಲೀನ ಮಿಕ್ಕ ಶರಣರ ನಾಲ್ಕು ಸಂಪುಟಗಳ ಕೆಲಸ ಈವರೆಗೆ ಸಮರ್ಪಕವಾಗಿ ನಡೆದಿರಲಿಲ್ಲ. ಈ ಶರಣರ ಸಂಖ್ಯೆ, ಇವರ ವಚನಸಂಖ್ಯೆ ಅಸ್ಪಷ್ಟವಾಗಿಯೇ ಉಳಿದಿದ್ದಿತು. ವಚನಗಳೂ ಅಲ್ಲಿಷ್ಟು, ಇಲ್ಲಿಷ್ಟು ಪ್ರಕಟವಾಗಿದ್ದವು. ಒಂದಿಷ್ಟು ಅಪ್ರಕಟಿತ ಸ್ಥಿತಿಯಲ್ಲಿಯೇ ಉಳಿದುಬಿಟ್ಟಿದ್ದವು. ಇವೆಲ್ಲವುಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ ಈ ನಾಲ್ಕೂ ಸಂಪುಟಗಳಿಗೆ ಸಮಗ್ರ ರೂಪ ಕೊಟ್ಟಿದ್ದೇವೆ. ಒಟ್ಟಿನಲ್ಲಿ ಬಸವಯುಗದ ಈ ಎಲ್ಲ ಒಂಬತ್ತು ಸಂಪುಟಗಳಿಗೆ ಸುಮಾರು ಸಾವಿರದಷ್ಟು ಹೊಸ ವಚನಗಳನ್ನು ಸೇರಿಸಿದ್ದೇವೆ.

ಬಸವೋತ್ತರ ಕಾಲೀನ ಶರಣರ ಸಂಪುಟಗಳ ಕೆಲಸ ಇನ್ನೂ ಅಲಕ್ಷಿತವಾಗಿದ್ದಿತು. ಈವರೆಗೆ ತಿಳಿದುಬಂದಿದ್ದ ವಚನಕಾರರ ಹೊಸ ವಚನಗಳನ್ನು ಶೋಧಿಸುವುದರೊಂದಿಗೆ, ಅನೇಕ ಹೊಸ ವಚನಕಾರರನ್ನೂ ಬೆಳಕಿಗೆ ತಂದಿದ್ದೇವೆ. ಇದರಿಂದಾಗಿ ಬಸವೋತ್ತರಯುಗದ ಶರಣರನ್ನೂ ಅವರ ವಚನಗಳ ವ್ಯಾಪ್ತಿಯನ್ನೂ ಜನತೆಯ ಮುಂದಿಟ್ಟ ಪ್ರಥಮ ಕೀರ್ತಿ ಈ ಐದು ಸಂಪುಟಗಳಿಗೆ ಸಲ್ಲುತ್ತದೆ. ಹೀಗೆ ಬಸವಯುಗ, ಬಸವೋತ್ತರಯುಗಗಳ ವಚನಸಾಹಿತ್ಯಕ್ಕೆ ಸಂಬಂಧಪಟ್ಟ ಎಲ್ಲ ಕೊರತೆಗಳನ್ನು ತುಂಬಿಕೊಡುವ ಒಂದು ಪರಿಪೂರ್ಣ ಯೋಜನೆ ಇದಾಗಿದೆ. ಮೊದಲ ಬಾರಿಗೆ ೧೯ನೆಯ ಶತಮಾನದವರೆಗಿನ ಎಲ್ಲ ಶರಣರ ಎಲ್ಲ ವಚನಗಳನ್ನು ಒಂದೆಡೆ ಸಂಗ್ರಹಿಸಿ, ಒಂದು ಕ್ರಮಕ್ಕೆ ಅಳವಡಿಸಿ, ಸಂಪುಟ ಶ್ರೇಣಿಯಲ್ಲಿ ಹೊರತಂದ ದೊಡ್ಡಪ್ರಯತ್ನ ಇಲ್ಲಿದೆ.

ವಚನಸಾಹಿತ್ಯದ ಪರಿಷ್ಕರಣಕಾರ್ಯ ತುಂಬ ಜಟಿಲವಾದುದು. ೧. ಎಲ್ಲ ಶರಣರ ಎಲ್ಲ ವಚನಗಳನ್ನು ಎಲ್ಲ ಪ್ರಾಚೀನ ಆಕರಗಳಿಂದ ಸಂಗ್ರಹಿಸುವುದು, ೨. ಪ್ರಕ್ಷಿಪ್ತವಾಗಿರಬಹುದಾದ ವಚನಕಾರರನ್ನು, ವಚನಗಳನ್ನು ಕೈಬಿಡುವುದು, ೩. ನಿಜವಚನಗಳ ಪಾಠವನ್ನು ಪರಿಷ್ಕರಿಸುವುದು - ಇದು ಈ ಯೋಜನೆಯ ಉದ್ದೇಶವಾಗಿದೆ. ಈ ಉದ್ದೇಶ ಸಾಧನೆಗಾಗಿ ಎಲ್ಲ ಪ್ರಾಚೀನ ಆಕರಗಳಿಂದ ಅಂದರೆ ಸುಮಾರು ೧೦೮ ಆಕರಗಳಿಂದ ಎಲ್ಲ ವಚನಗಳನ್ನು ಸಂಗ್ರಹಿಸಿ, ಪ್ರತಿಯೊಂದು ವಚನದ ಕೆಳಗೆ ಅದರ ಎಲ್ಲ ಆಕರಗಳನ್ನು ನಮೂದಿಸಿದ 'ವಚನ ಬ್ಯಾಂಕ'ನ್ನು ಅಸ್ತಿತ್ವಕ್ಕೆ ತರಲಾಯಿತು. ಒಂದು ವಚನಕ್ಕೆ ಇರುವ ವಿವಿಧ ಪಾಠಾಂತರ, ರೂಪಾಂತರಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಲು, ಮುದ್ರಿಕೆಯ ವ್ಯತ್ಯಾಸವನ್ನು ಗಮನಿಸಲು, ಒಬ್ಬ ವಚನಕಾರನ ಒಟ್ಟು ವಚನಗಳ ಸಂಖ್ಯೆಯನ್ನು ನಿರ್ಧರಿಸಲು, ಕೊನೆಯದಾಗಿ ವಚನದ ನಿಜಪಾಠವನ್ನು ನಿರ್ಣಯಿಸಲು ಈ ಬ್ಯಾಂಕ್ ತುಂಬ ನೆರವಾಯಿತು.

ಇವು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿ, ಅನ್ಯಪಾಠಗಳನ್ನು ಅಡಿಯಲ್ಲಿ ನಮೂದಿಸದೆ ಕೈಬಿಟ್ಟಿದ್ದೇವೆ. ಜನಸಾಮಾನ್ಯರ ಅನುಕೂಲತೆಗಾಗಿ ಶಕಟರೇಫೆಗೆ ಬದಲು ರೇಫೆ ಇಟ್ಟುಕೊಂಡಿದ್ದೇವೆ. ಅಭ್ಯಾಸಿಗಳ ಉಪಯೋಗ ದೃಷ್ಟಿಯಿಂದ ಕಠಿಣ ಪದಕೋಶ, ಅಕಾರಾದಿ, ಆಕರಸೂಚಿಗಳನ್ನು ಅನುಬಂಧದಲ್ಲಿ ಕೊಟ್ಟಿದ್ದೇವೆ. ಹೆಚ್ಚಿನದಾಗಿ ಪಾರಿಭಾಷಿಕ ಪದಗಳ ಒಂದು ಸ್ವತಂತ್ರ ಕೋಶವನ್ನೇ ಪ್ರಕಟಿಸಿದ್ದೇವೆ. ಒಟ್ಟಿನಲ್ಲಿ, ಇವು ಜನಪ್ರಿಯ ಆವೃತ್ತಿಗಳಾದರೂ ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ಆದರ್ಶದಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

## ಕೃತಜ್ಞತೆ

ವಿಶ್ವವಿದ್ಯಾಲಯದಂಥ ಶಿಕ್ಷಣ ಸಂಸ್ಥೆಗಳು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಂಥ ಸಾರ್ವಜನಿಕ ಸಂಸ್ಥೆಗಳು, ವೀರಶೈವ ಮಠಗಳಂಥ ಧಾರ್ಮಿಕ ಸಂಸ್ಥೆಗಳು, ಡಾ. ಫ. ಗು. ಹಳಕಟ್ಟಿಯವರಂಥ ವಿದ್ವಾಂಸ ವ್ಯಕ್ತಿಗಳು ನಿರಂತರ ದುಡಿದರೂ ವಚನಸಾಹಿತ್ಯ ಪೂರ್ಣಪ್ರಮಾಣದಲ್ಲಿ ಪ್ರಕಟವಾಗಲು ಒಂದುನೂರು ವರ್ಷ ಹಿಡಿದುದು ಅದರ ಗಾತ್ರಬಾಹುಳ್ಯಕ್ಕೆ ಸಾಕ್ಷಿಯಾಗಿದೆ. ನೂರುವರ್ಷ ದುಡಿದು, ಸಾಮಗ್ರಿಯನ್ನು ಪ್ರಕಟಿಸಿದ ಈ ಎಲ್ಲ ವ್ಯಕ್ತಿ-ಸಂಸ್ಥೆಗಳಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆಯ ಕಾರ್ಯಾಲಯ ಅಸ್ತಿತ್ವಕ್ಕೆ ಬಂದು ಕೆಲಸ ಪ್ರಾರಂಭವಾದದ್ದು ಅಕ್ಟೋಬರ್ ೧೫, ೧೯೮೮ರಂದು. ಹಸ್ತಪ್ರತಿಗಳು ಅಚ್ಚಿಗೆ ಹೋದದ್ದು ೧೬ ಮಾರ್ಚ್ ೧೯೯೦ರಂದು. ಹೀಗೆ ಮೊದಲೇ ಯೋಜಿಸಿದಂತೆ ಎರಡು ವರ್ಷಗಳ ನಿರ್ದಿಷ್ಟ ಅವಧಿಯಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಿದ್ದೇವೆ. ಪ್ರತಿಯೊಂದು ಹಂತದಲ್ಲಿಯೂ ಈ ಯೋಜನೆ ಸಕ್ರಮವಾಗಿ ಮುನ್ನಡೆಯುವುದಕ್ಕಾಗಿ 'ಸಂಪಾದಕ ಮಂಡಳಿ'ಯ ಸದಸ್ಯರಾದ ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಪಿ. ಕೃಷ್ಣಕುಮಾರ, ಡಾ. ಎಸ್. ವಿದ್ಯಾಶಂಕರ, ಶ್ರೀ ಎಸ್. ಶಿವಣ್ಣ ಅವರು ಉದ್ದಕ್ಕೂ ಬೆಲೆಯುಳ್ಳ ಸಲಹೆ-ಮಾರ್ಗದರ್ಶನ ನೀಡಿದ್ದಾರೆ. ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ಆರಂಭದ ಕೆಲವು ತಿಂಗಳು ಸಂಪಾದಕ ಮಂಡಳಿಯ ಸದಸ್ಯರಾಗಿ, ವಿಶ್ವಾಸದಿಂದ ನೆರವಾಗಿದ್ದಾರೆ. ಸಂಪಾದಕ ಮಿತ್ರರಾದ ಡಾ. ಬಿ. ವ್ಹಿ. ಮಲ್ಲಾಪುರ, ಡಾ. ಎಸ್. ವಿದ್ಯಾಶಂಕರ, ಡಾ. ವ್ಹಿ. ಬಿ. ರಾಜೂರ, ಡಾ. ಬಿ. ಆರ್. ಹಿರೇಮಠ, ಶ್ರೀ ಎಸ್. ಶಿವಣ್ಣ ತುಂಬ ಶ್ರಮ-ಶ್ರದ್ಧೆಗಳಿಂದ ಸಂಪಾದನ ಕೆಲಸ ಪೂರೈಸಿದ್ದಾರೆ. ಸಹಾಯಕ ಸಂಶೋಧಕರಾದ ಶ್ರೀಮತಿ ವಿಜಯಶ್ರೀ ಹಿರೇಮಠ, ಶ್ರೀ ವಾಯ್. ಎಂ. ಯಾಕೊಳ್ಳಿ, ಶ್ರೀ ಬಿ. ವ್ಹಿ. ಕೋರಿ ಅವರು ದಣಿವನ್ನು ಲೆಕ್ಕಿಸದೆ ದುಡಿದಿದ್ದಾರೆ. ಇವರೆಲ್ಲರಿಗೆ ನಾವು ಕೃತಜ್ಞರಾಗಿದ್ದೇವೆ.

ಈ ಯೋಜನೆಯನ್ನು ಅನುದಾನ ಮಾಡಿದ ಕರ್ನಾಟಕ ಸರಕಾರದ ಔದಾರ್ಯಕ್ಕೆ ನಮ್ಮ ಅಭಿನಂದನೆಗಳು ಸಲ್ಲುತ್ತವೆ. ಈ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆ, ಶ್ರೀ ಎಸ್. ಆರ್. ಬೊಮ್ಮಾಯಿ, ಶ್ರೀ ವೀರೇಂದ್ರ ಪಾಟೀಲ, ಶ್ರೀ ಎಸ್. ಬಂಗಾರಪ್ಪ ಅವರಿಗೂ, ಸಾಹಿತಿಗಳೂ ಸಾಹಿತ್ಯ-ಸಂಸ್ಕೃತಿಗಳ ಗಾಢ ಆಸಕ್ತರೂ

ಆಗಿರುವ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಂ. ವೀರಪ್ಪ ಮೊಯಿಲಿ ಅವರಿಗೂ ಋಣಿಯಾಗಿದ್ದೇವೆ.

ಈ ಯೋಜನೆ ಅಸ್ತಿತ್ವಕ್ಕೆ ಬರುವಲ್ಲಿ ವಿಶೇಷ ಆಸಕ್ತಿ ವಹಿಸಿದವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಂದಿನ ಸಚಿವರಾಗಿದ್ದ ಶ್ರೀ ಎಂ. ಪಿ. ಪ್ರಕಾಶ ಅವರು. ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಅನನ್ಯ ಪ್ರೀತಿ-ಗೌರವ ಬೆಳೆಸಿಕೊಂಡಿರುವ ಶ್ರೀಯುತರಿಗೆ ನಾವು ಕೃತಜ್ಞರಾಗಿದ್ದೇವೆ. ಆಮೇಲೆ ಈ ಇಲಾಖೆಗೆ ಸಚಿವರಾಗಿ ಬಂದ ಶ್ರೀ ಎಂ. ವೀರಪ್ಪ ಮೊಯಿಲಿ, ಶ್ರೀ ಕೆ. ಎಚ್. ರಂಗನಾಥ, ಶ್ರೀ ಎಸ್. ರಮೇಶ್, ಇಂದಿನ ಸಚಿವರಾದ ಮಾನ್ಯ ಶ್ರೀ ಎಚ್. ವಿಶ್ವನಾಥ್ ಅವರಿಗೆ ನಮ್ಮ ಗೌರವಗಳು ಸಲ್ಲುತ್ತವೆ.

ಈ ಪ್ರಸಂಗದಲ್ಲಿ ಆತ್ಮೀಯ ಆಡಳಿತ ನಿರ್ದೇಶನ ಮಾಡಿದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಂದಿನ ನಿರ್ದೇಶಕರಾಗಿದ್ದ ಶ್ರೀ ಐ. ಎಂ. ವಿಠ್ಠಲಮೂರ್ತಿ, ಶ್ರೀ ಬಿ. ಪಾರ್ಥಸಾರಥಿ, ಕಮಿಷನರ್ ಡಾ. ಪಿ. ಎಸ್. ರಾಮಾನುಜಂ, ಇಂದಿನ ಕಮಿಷನರ್‌ರಾದ ಶ್ರೀ ಪಿ. ಎಸ್. ವಿ. ರಾವ್ ಅವರನ್ನೂ ಅಧಿಕ ನಿರ್ದೇಶಕರಾದ ಶ್ರೀ ಕೆ. ದೇವರಸಯ್ಯ, ಉಪನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರನ್ನೂ ನೆನೆಯುವುದು ಪ್ರೀತಿಯ ವಿಷಯವಾಗಿದೆ.

ಇಂಥ ಒಂದು ಬೃಹತ್ ಯೋಜನೆಗೆ ಕಾರ್ಯಾಲಯವೊಂದು ಅತ್ಯವಶ್ಯ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಈ ಅವಕಾಶ ಕಲ್ಪಿಸಿಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿ ಡಾ. ಜಿ. ಕೆ. ನಾರಾಯಣರೆಡ್ಡಿ, ಇಂದಿನ ಕುಲಪತಿ ಡಾ. ಎಸ್. ರಾಮೇಗೌಡ ಅವರ ಔದಾರ್ಯವನ್ನು, ಪೀಠದ ಮುಖ್ಯಸ್ಥರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುತ್ತೇವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳೂ ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ದಾಳಿಗೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಮುದ್ರಿಕೆ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ವಚನಗಳನ್ನು ಶುದ್ಧೀಕರಿಸುವುದು - ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ವಚನಸಾಹಿತ್ಯದ ಮೇಲಿನ ಗೌರವ, ಕೆಲಸದ ಮೇಲಿನ ಪ್ರೀತಿಗಳು ನಮ್ಮಿಂದ ಈ ಕಾರ್ಯ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತ, ಎರಡು ವರ್ಷ ರಾತ್ರಿಯನ್ನೂ ಹಗಲುಮಾಡಿ ದುಡಿದು ರೂಪಿಸಿದ ಈ ಹದಿನೈದು ಸಂಪುಟಗಳನ್ನು ಸಹೃದಯಲೋಕಕ್ಕೆ ಅರ್ಪಿಸುತ್ತೇವೆ. 'ಶಿವಶರಣರ ಸಮಗ್ರ ವಚನಸಾಹಿತ್ಯ' ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ-ಮನಗಳನ್ನು ಬೆಳಗಲೆಂದು ಹಾರೈಸುತ್ತೇವೆ.

## ದ್ವಿತೀಯ ಆವೃತ್ತಿ

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಸಂಪುಟಗಳು ೧೯೯೩ರಲ್ಲಿ ಪ್ರಕಟವಾಗಿ, ಒಂದು ವರ್ಷ ಕಳೆಯುವಷ್ಟರಲ್ಲಿ ಮಾರಾಟವಾದವು. ಕರ್ನಾಟಕ ಸರಕಾರದ ಗ್ರಂಥಪ್ರಕಟನೆಯ ಇತಿಹಾಸದಲ್ಲಿಯೇ ಈ ಬಗೆಯ ಮಾರಾಟ ಒಂದು ದಾಖಲೆ. ಜನತೆಯ ಅಪಾರ ಬೇಡಿಕೆಯನ್ನು ಗಮನಿಸಿ, ಈಗ ಪರಿಷ್ಕೃತ ದ್ವಿತೀಯ ಆವೃತ್ತಿಯನ್ನು ಪ್ರಕಟಿಸುತ್ತಿದ್ದೇವೆ. ಇತ್ತೀಚೆಗೆ ಲಭ್ಯವಾದ ಸುಮಾರು ಒಂದು ಸಾವಿರ ಹೊಸವಚನಗಳನ್ನು ಸೇರಿಸುವ, ಮೊದಲ ಆವೃತ್ತಿಯ ವಚನಪಾಠವನ್ನು ಮತ್ತೆ ಪರಿಷ್ಕರಿಸುವ ಮೂಲಕ ಮೊದಲಿನ ೧೪ ಸಂಪುಟಗಳನ್ನು ಸಮಗ್ರವಾಗಿ ಮತ್ತೆ ರೂಪಿಸಿದ್ದೇವೆ. ೧೫ನೆಯ ಸಂಪುಟ (ಪರಿಭಾಷಾಕೋಶ) ವನ್ನು ಹೊಸದಾಗಿ ಸಿದ್ಧಪಡಿಸಿದ್ದೇವೆ. ಹೊಸ ವಿಚಾರ, ಶೋಧಗಳ ಬೆಳಕಿನಲ್ಲಿ ಸಂಪಾದಕೀಯ, ಪ್ರಸ್ತಾವನೆಗಳನ್ನು ಸೂಕ್ತ ರೀತಿಯಲ್ಲಿ ಪರಿಷ್ಕರಿಸಿದ್ದೇವೆ.

ಈ ಆವೃತ್ತಿ ಬೆಳಕು ಕಾಣಲು ವಿಶೇಷ ಆಸಕ್ತಿ ವಹಿಸಿದ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಮಾನ್ಯ ಶ್ರೀಮತಿ ರಾಣಿ ಸತೀಶ್ ಅವರಿಗೂ ನಾವು ಋಣಿಯಾಗಿದ್ದೇವೆ. ಈ ಕೆಲಸ ನಿರ್ದಿಷ್ಟ ಕಾಲಾವಧಿಯಲ್ಲಿ ಪೂರ್ಣಗೊಳ್ಳುವಂತೆ ನೋಡಿಕೊಂಡ ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ ಅವರಿಗೂ ಅವರ ಸಿಬ್ಬಂದಿ ವರ್ಗಕ್ಕೂ, ಮಾರ್ಗದರ್ಶನ ಮಾಡಿ ಸಂಪುಟಗಳ ಉತ್ತಮಿಕೆ ಕಾರಣರಾದ ಸಂಪಾದಕ ಮಂಡಲದ ಸದಸ್ಯರಿಗೂ, ಸಂಸ್ಕೃತ ಶ್ಲೋಕಗಳನ್ನು ಪರಿಷ್ಕರಿಸಿಕೊಟ್ಟ ಮೈಸೂರಿನ ಪೂಜ್ಯ ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು ಕುಂದೂರುಮಠ ಅವರಿಗೂ, ೧೫ನೆಯ ಪರಿಭಾಷಾ ಸಂಪುಟವನ್ನು ಹೊಸದಾಗಿ ರೂಪಿಸಿಕೊಟ್ಟ ಡಾ. ಎಸ್. ಜಿ. ಮಹಾದೇವಪ್ಪ ಅವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ. ಹತ್ತು ಸಾವಿರ ಪುಟಗಳ, ಹದಿನೈದು ಸಂಪುಟಗಳ ಪ್ರಕಟನೆ ಸುಲಭದ ಕೆಲಸವೇನಲ್ಲ. ಸಾಹಿತ್ಯದ ಮೇಲಿನ, ಅದರಲ್ಲಿಯೂ ವಚನಸಾಹಿತ್ಯದ ಮೇಲಿನ ಪ್ರೀತಿ ಕಾರಣವಾಗಿ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟಿಸಿದ ಅಧ್ಯಕ್ಷರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ನಾವು ಋಣಿಯಾಗಿದ್ದೇವೆ.

ಮೊದಲ ಆವೃತ್ತಿಯಲ್ಲಿ ಉಳಿದುಕೊಂಡಿದ್ದ ಕೊರತೆ, ದೋಷಗಳನ್ನು ಕಷ್ಟಪಟ್ಟು ಹುಡುಕಿ, ನಮಗೆ ಪೂರೈಸಿದ ತುಮಕೂರಿನ ಶ್ರೀ ಎಂ. ಚಂದ್ರಪ್ಪ ಅವರಿಗೂ, ಬೆಂಗಳೂರಿನ ಶ್ರೀ ಎಸ್. ಶಿವಣ್ಣ ಅವರಿಗೂ ನಾವು ಕೃತಜ್ಞರಾಗಿದ್ದೇವೆ.

★

# ಪ್ರಸ್ತಾವನೆ

ಸಮಗ್ರ ವಚನ ಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆಯ ಒಂದು ಭಾಗವಾಗಿ "ಸಂಕೀರ್ಣ ವಚನ ಸಂಪುಟ : ಆರು" ಪ್ರಕಟವಾಗುತ್ತಲಿದೆ. ಇದರಲ್ಲಿ ತೋಂಟದ ಸಿದ್ಧಲಿಂಗಯತಿ, ಘನಲಿಂಗಿದೇವ, ಗುಮ್ಮಳಾಪುರದ ಸಿದ್ಧಲಿಂಗ, ಸ್ವತಂತ್ರ ಸಿದ್ಧಲಿಂಗ ಮತ್ತು ಇಮ್ಮಡಿ ಗುರುಸಿದ್ಧಸ್ವಾಮಿ -ಹೀಗೆ ಐದು ಜನರಿಗೆ ಸಂಬಂಧಿಸಿದ ವಚನಗಳನ್ನು ಸಂಕಲಿಸಲಾಗಿದೆ. ಈ ಮೊದಲು ಪ್ರಕಟವಾಗಿದ್ದರೂ ಹೊಸ ಓಲೆ ಪ್ರತಿಗಳನ್ನು ಪರಿಶೀಲಿಸಿ ಇವುಗಳನ್ನು ಪರಿಷ್ಕರಿಸಲಾಗಿದೆ.

**ತೋಂಟದ ಸಿದ್ಧಲಿಂಗ ಯತಿ:**

ವೀರಶೈವ ಸಾಹಿತ್ಯದಲ್ಲಿ ತೋಂಟದ ಸಿದ್ಧಲಿಂಗರ ಹೆಸರು- ಪಲವಾರು ಶತಮಾನಗಳ ಅನಂತರ- ಇಂದಿಗೂ ಜನರ ನೆನಪಿನಲ್ಲಿ ಹಚ್ಚಹಸುರಾಗಿ ಉಳಿದು ಬಂದಿದೆ. 'ಷಟ್‌ಸ್ಥಲಜ್ಞಾನಸಾರಾಯಸ್ವರೂಪ'ರಾಗಿದ್ದ ಇವರು ಸುತ್ತೂರು ಸಿಂಹಾಸನದ ಘನಲಿಂಗಿದೇವರಿಂದ 'ತೋಂಟದ ಅಲ್ಲಮ'ರೆಂಬ ಖ್ಯಾತಿಗೆ ಭಾಜನರಾಗಿದ್ದಾರೆ.

ಪರಂಪರೆಯ ಹೇಳಿಕೆಯಂತೆ ಸಿದ್ಧಲಿಂಗರು 'ನಿರಂಜನವಂಶ' ಪರಂಪರೆಯಲ್ಲಿ ೧೯ನೆಯವರು. ಇವರು ಹರದನಹಳ್ಳಿಯ ಸೀಮೆಯಲ್ಲಿ ಜನಿಸಿದಂತೆ ಕಾಣುತ್ತದೆ. ಗೋಸಲ ಚೆನ್ನಬಸವಸ್ವಾಮಿಗಳ ಕರಸಂಜಾತರಾದ ಇವರು ಕಗ್ಗೆರೆಯಲ್ಲಿ ತಪಸ್ಸು ಕೈಕೊಂಡು, 'ಷಟ್‌ಸ್ಥಲಬ್ರಹ್ಮಿ'ಗಳಾಗಿ, ಅಪಾರ ಶಿಷ್ಯವೃಂದವನ್ನು ಪಡೆದಿದ್ದರು. ಇವರ ಶಿಷ್ಯ-ಪ್ರಶಿಷ್ಯ ಪರಂಪರೆ ಶತಮಾನದಿಂದ ಶತಮಾನಕ್ಕೆ ಅವಿಚ್ಛಿನ್ನವಾಗಿ ಮುಂದುವರೆದಿದೆ.

ಸಿದ್ಧಲಿಂಗರು ತಾವು ಸ್ವತಃ ವೀರಶೈವ ಸಿದ್ಧಾಂತಾನುಗುಣವಾದ 'ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ' ಅಂಕಿತದ ೭೦೧ ವಚನಗಳನ್ನು ಸ್ಥಲಕಟ್ಟಿನ ವಿಭಾಗ ಕ್ರಮದಲ್ಲಿ 'ಷಟ್‌ಸ್ಥಲಜ್ಞಾನ ಸಾರಾಮೃತ' ಹೆಸರಿನಲ್ಲಿ ರಚಿಸಿದ್ದಾರೆ. ಇವರ ಶಿಷ್ಯಸಮೂಹದಲ್ಲಿ ಬೋಳಬಸವರು, ಘನಲಿಂಗಿಗಳು, ಗುಮ್ಮಳಾಪುರದ ಸಿದ್ಧಲಿಂಗರು, ಜಗುನಿ ಮರುಳಾಚಾರ್ಯರು, ಹಿರಣ್ಯದೇವ ಮೊದಲಾದವರಿದ್ದಾರೆ.

ಸಿದ್ಧಲಿಂಗರು ಭಾರತ ದೇಶವನ್ನೆಲ್ಲಾ ಸಂಚರಿಸಿರುವರೆಂಬುದಕ್ಕೆ ಸಾಕ್ಷಿಯಾಗಿ ಹಲವಾರೆಡೆ ಇವರ ಹೆಸರಿನ 'ಗದ್ದುಗೆ'ಗಳು ನಿರ್ಮಾಣಗೊಂಡವು. ಇವರ ಸಂಚಾರದಲ್ಲಿ ೭೦೦ ವಿರಕ್ತರು ಭಾಗವಹಿಸುತ್ತಿದ್ದರೆಂದು ಪರಂಪರೆಯ ಹೇಳಿಕೆ ಇದೆ.

ಕಗ್ಗೆರೆ / ಎಡೆಯೂರುಗಳ ಅರಸರಾಗಿದ್ದ ಬಸವೇಂದ್ರ ಗಂಗಾಂಬಿಕೆಯರು, ಸಿದ್ಧಲಿಂಗರ ಸಮಾಧಿ ಕಾಲದಲ್ಲಿ - ಎಡೆಯೂರಿನಲ್ಲಿ - ಸ್ವತಃ ಭಾಗವಹಿಸಿದ್ದ ಸಂಗತಿ ಸುವ್ವಿಮಲ್ಲನ 'ಸಿದ್ಧೇಶ್ವರ ಸಾಂಗತ್ಯ'ದಲ್ಲಿ ದಾಖಲಿಸಲಾಗಿದೆ. ಇವರಿಗಾಗಿ ಎಡೆಯೂರಿನಲ್ಲಿ ಕಲ್ಲುಮಠವನ್ನು ಕಟ್ಟಲು ಚಿಟ್ಟಿಗದೇವರಿಗೆ ದಾನಿವಾಸ ನಿವಾಸಿಗಳಾದ, ಪಾದೋದಕ ಪ್ರಸಾದ ಸಂಪನ್ನರೂ ಆದ ಚೆನ್ನವೀರಪ್ಪ ಒಡೆಯ ಹಾಗು ಪಾರ್ವತಮ್ಮ ದಂಪತಿಗಳು 'ಪದಾರ್ಥವನ್ನು ಕೊಟ್ಟು ನಮಸ್ಕರಿಸಿದ' ಸಂಗತಿ ಅಲ್ಲಿಯ ಶಿಲಾಶಾಸನದಿಂದ ತಿಳಿದುಬಂದಿದೆ.

ತೋಂಟದ ಸಿದ್ಧಲಿಂಗರು ಹಾಗಲವಾಡಿ ಭೈರವಭೂಪ, ಬಿಜ್ಜಾವರದ ಚಿಕ್ಕಭೂಪ-ಸೋಮಾಂಬೆ ಮತ್ತು ಇವರ ಮಗ ಇಮ್ಮಡಿ ಚಿಕ್ಕಭೂಪಾಲರ ಹಿರಿಯ ಸಮಕಾಲೀನರು. ಇವರು ಹದಿನಾರನೆಯ ಶತಮಾನದ ಮೊದಲ ೭-೮ ದಶಕಗಳವರೆಗೆ ಜೀವಿಸಿದುದಾಗಿ ನಿರ್ಧರಿಸಬಹುದಾಗಿದೆ.

ಸಿದ್ಧಲಿಂಗರಿಗೆ ಸಂಬಂಧಿಸಿದ ಸಾಹಿತ್ಯ ವಿವಿಧ ಛಂದೋಪ್ರಕಾರಗಳಲ್ಲಿ ಅಂದಿನಿಂದ ಇಂದಿನವರೆಗೂ ಅನುಸ್ಯೂತವಾಗಿ ಬೆಳೆದುಬಂದಿದೆ.

(I) ಕೆಲವು ಕೃತಿಗಳು ಸಂಪೂರ್ಣವಾಗಿ ಇವರ ಜೀವನ ಚರಿತ್ರೆ / ಪವಾಡ ಕಥನಗಳಿಗೆ ಮೀಸಲಾಗಿವೆ.

೧೫೬೧ : ಶಾಂತೇಶನ ಸಿದ್ಧೇಶ್ವರ ಪುರಾಣ (ಭಾ.ಷ.)

೧೬೦೦ : ಸುವ್ವಿಮಲ್ಲನ ಸಿದ್ಧೇಶ್ವರನ ಸಾಂಗತ್ಯ

೧೬೦೦ : ಸಿದ್ಧನಂಜೇಶನ ತೋಂಟದ ಸಿದ್ಧದೇಶಿಕನ ಭಾವರತ್ನಾಭರಣ (ವಾ.ಷ.)

೧೬೦೦ : ಚೆನ್ನವೀರ ಜಂಗಮದೇವನ ಷಟ್ಸ್ಥಲ ವಲ್ಲಭ (ಚಂಪು)

೧೬೧೬ : ವಿರಕ್ತ ತೋಂಟದಾರ್ಯನ ಸಿದ್ಧೇಶ್ವರ ಪುರಾಣ (ವಾ.ಷ.)

೧೭೧೯-೨೧ : ಹೇರಂಬ (ನಾರಾಯಣ)ನ ಸಿದ್ಧಲಿಂಗೇಶ್ವರ ಸಾಂಗತ್ಯ

೧೭೪೧ : ಮರಿಸಿದ್ಧಲಿಂಗೇಶ್ವರಾಚಾರ್ಯನ ಅಷ್ಟಾವರಣ ಪ್ರಶಸ್ತಿ

೧೯೧೨ : ನಂ. ಶಿವಪ್ಪಶಾಸ್ತ್ರಿಗಳ ಸಿದ್ಧಲಿಂಗೇಶ್ವರ ವಿಜಯ (ಗದ್ಯ)

(II) ಕೆಲವು ಕೃತಿಗಳಲ್ಲಿ ಇತರರ ಚರಿತೆಗಳೊಡನೆ ಸಿದ್ಧಲಿಂಗರ ಚರಿತ್ರೆ ಉಕ್ತವಾಗಿದೆ ಅಥವ ಅವರ ಜೀವನದ ಕೆಲವು ಘಟನೆಗಳು ಮಾತ್ರ ನಿರೂಪಿತವಾಗಿವೆ.

೧೫೭೦ : ಕವಿ ಪವಾಡಸ [ತೋಂಟದ ಸಿದ್ಧಲಿಂಗ ತಾರಾವಳಿ]

೧೫೮೪ : ವಿರೂಪಾಕ್ಷ ಪಂಡಿತನ ಚೆನ್ನಬಸವಪುರಾಣ (ವಾ.ಷ.)

೧೬೦೦ : ಸುವ್ವಿಮಲ್ಲನ ತೋಂಟದ ಸಿದ್ಧೇಶ್ವರ ತಾರಾವಳಿ

೧೬೦೦ : ಸಿದ್ಧನಂಜೇಶನ ಗುರುರಾಜ ಚಾರಿತ್ರ (ವಾ.ಷ.)

೧೬೪೦ : ಗರುಣಿ ಬಸವಲಿಂಗನ ಸಿದ್ಧೇಶ್ವರನ ಮಹಿಮಾ ತಾರಾವಳಿ

೧೬೫೦ : ಮರುಳಸಿದ್ಧೇಶನ ಗುರುಲಿಂಗಜಂಗಮಚಾರಿತ್ರ (ಸಾಂ)

೧೭೫೦ : ಪುರಾಣದ ಸಿದ್ಧಲಿಂಗಾಚಾರ್ಯನ ಷಟ್‌ಸ್ಥಲ ಶಿವಾಯಣ (ಭಾ.ಷ.)

೧೮೬೩-೭೦ : ಮಹಾದೇವನ ಮಹಾಲಿಂಗೇಂದ್ರ ವಿಜಯ (ವಾ.ಷ.)

? : ? ಪಟ್ಟವಲ್ಲರಿ (ಗದ್ಯ)

? : ? (ಬ್ಯಾಡಗಿ ಮುದ್ರಣ, ೧೯೦೫)

? : ? ನಿರಂಜನವಂಶ ರತ್ನಾಕರ (ಗದ್ಯ) (ಸಂ.) ಫ.ಗು. ಹಳಕಟ್ಟಿ

? : ? ನಿರಂಜನವಂಶ ರತ್ನಾಕರ (ಗದ್ಯ) (ಭಾಗ-೨)
(ಸಂ) ಚೆನ್ನಮಲ್ಲಿಕಾರ್ಜುನ

೧೯೦೯ : ಬಸವಪ್ಪಾ ವೀರಪ್ಪಾ ಕೋಟಿ ಅವರ ನಿರಂಜನ ಜಂಗಮವಂಶ ದರ್ಪಣ (ಗದ್ಯ)

(III) ಸಿದ್ಧಲಿಂಗರ ಸ್ತುತಿರೂಪವಾದ ರಚನೆಗಳು

ಸು. ೧೬೫೦ : ನಂದಿ ಕೃತ ಸಿದ್ಧೇಶ್ವರ ತ್ರಿವಿಧಿ (೫೫)

ಸು. ೧೬೫೦ : ಸಿದ್ಧಲಿಂಗೇಶ್ವರನ ಸಿದ್ಧೇಶ್ವರ ತ್ರಿವಿಧಿ (೩೭)

ಸು. ೧೭೫೦ : ಸಿದ್ಧಲಿಂಗಮುನಿ ರಚಿತ ಸಿದ್ಧಲಿಂಗ ರಗಳೆ

ಸು. ೧೮೦೦ : ಸಿದ್ಧಲಿಂಗಾಷ್ಟಕ (ವೃತ್ತ ೮) [ಶ್ರೀ ಮಹಾದ್ವಿರಾಜ...]

ಸು. ೧೮೦೦ : ಸಿದ್ಧಲಿಂಗಾಷ್ಟಕ (ವಾ.ಷ. ೯) [ಸುದತಿ ಕೇಳ್...]

ಸು. ೧೮೦೦ : ಸಿದ್ಧೇಶ್ವರ ಅಷ್ಟಕ (ವೃತ್ತ ೮) [ಭೋ ವನಿತೆ...]

ಸು. ೧೮೦೦ : ಬಸವಲಿಂಗರಾಜನ ಎಡೆಯೂರು ಸಿದ್ಧಲಿಂಗನ ದಯಾನಿಧಿ ಅಷ್ಟಕ (೯ ವೃ)

ಸು. ೧೮೦೦ : ? ತೋಂಟದ ಸಿದ್ಧಲಿಂಗಾಷ್ಟಕ (೮ ವೃ) [ಸ್ತುತಿಸಿ ಬದುಕುವೆ....]

ಸು. ೧೮೦೦ : ? ತೋಂಟದ ಸಿದ್ಧೇಶ್ವರನ ಅಷ್ಟಕ (೮ ವೃ + ೧ ಕಂ) [ಶ್ರೀಮದ್ದೇವ.....]

? : ತೋಂಟದ ಸಿದ್ಧಲಿಂಗೇಶ್ವರನ ವಾರ್ಧಿಕ (೨೫ ವಾ.ಷ.)

ಸು. ೧೯೧೨ : ಮಾಗಡಿ ವೀರಪ್ಪಶಾಸ್ತ್ರಿಗಳ ಸಿದ್ಧಲಿಂಗೇಶ್ವರ ಶತಕ (ವಾ.ಷ.)

ತೋಂಟದ ಸಿದ್ಧಲಿಂಗರ ವಚನಗಳಲ್ಲಿ ಅಲ್ಲಲ್ಲಿ ಬೆಡಗಿನ ವಚನಗಳೂ ಇವೆ. ಇವುಗಳಿಗೆ ಕಾಲಾನುಕ್ರಮದಲ್ಲಿ ಟೀಕೆಗಳು ರಚಿತಗೊಂಡಿವೆ. -ಸೋಮಶೇಖರಶಿವಯೋಗಿ (೧೭೦೦) ಕೃತ 'ತೋಂಟದ ಸಿದ್ಧಲಿಂಗೇಶ್ವರನ ಷಟ್ಸ್ಥಲಜ್ಞಾನ ಸಾರಾಮೃತದ ಬೆಡಗಿನ ವಚನದ ಟೀಕೆ'. ಇದರಲ್ಲಿ ೧೫೨ ವಚನಗಳಿಗೆ ಟೀಕೆ ಇದೆ.

-ಅಜ್ಞಾತ ಕರ್ತೃ ಕೃತ (?) 'ಷಟ್‌ಸ್ಥಲಜ್ಞಾನ ಸಾರಾಮೃತ ಟೀಕೆ'. ಇದರಲ್ಲಿ ೨೬೭ ವಚನಗಳಿವೆ.

-ಅಜ್ಞಾತ ಕೃತ (೧೯. ಶ.) 'ತೋಂಟದಾರ್ಯ ವಚನ ಟೀಕೆ'. ಇದರಲ್ಲಿ ೭೦೧ ವಚನಗಳ ಸಮಗ್ರ ವಚನ ಟೀಕೆ ಲಭ್ಯ. ಇದರ ಕರ್ತೃ ಹುಮನಾಬಾದಿನ ನಿರಂಜನ ಸ್ವಾಮಿ ಆಗಿರುವ ಸಾಧ್ಯತೆಯಿದೆ.

-ಇದಲ್ಲದೆ ಇನ್ನೂ ಕೆಲವು ಟೀಕೆಗಳು ದೊರೆಯುವುದಾಗಿ ಮಿತ್ರರಾದ ಶ್ರೀ ಪಿ.ಎಂ. ಗಿರಿರಾಜು, ಮೈಸೂರು ಅವರು ತಿಳಿಸಿದ್ದಾರೆ.

ಸಿದ್ಧಲಿಂಗರ ವಚನಗಳನ್ನು ಸಂಪಾದನೆ ಚೆನ್ನಂಜೇದೇವ (೧೫೮೦), ಎಳಮಲೆ ಗುರುಶಾಂತದೇವ (೧೬೦೦), ಸಂಪಾದನೆ ಸಿದ್ಧವೀರಣ್ಣೊಡೆಯ (೧೬೦೦), ಸಂಪಾದನೆ ಬೋಳಬಸವ (೧೬೭೫), ಸಂಪಾದನೆ ಪರ್ವತೇಶ (೧೬೯೮) ಮೊದಲಾದ ಸುಮಾರು ೨೦-೨೫ ಜನರು ತಮ್ಮ ತಮ್ಮ ಸಂಕಲನಗಳಲ್ಲಿ ಉದಾಹರಿಸಿದ್ದಾರೆ. ಅಲ್ಲದೆ 'ಉದ್ಧರಣೆ ವಾಚ್ಯ'ಗಳ ವಿವರಣೆಯಲ್ಲಿ ಇವರ ವಚನಗಳಿವೆ.

ವೀರಶೈವ ಧಾರ್ಮಿಕ ಸಮಾರಂಭಗಳಲ್ಲೊಂದಾದ 'ಚರಂತಿಗೆ' ಸಮಯದಲ್ಲಿ ಕೊಡುವ ಪುಸ್ತಕಗಳಲ್ಲಿ 'ಸಿದ್ಧೇಶ್ವರ ವಚನ'ವೂ ಒಂದಾಗಿದೆ.

ಸಿದ್ಧಲಿಂಗರ ವಚನವೊಂದು ಚಿತ್ರದುರ್ಗದಲ್ಲಿ ಶಿಲಾಶಾಸನೋಕ್ತವಾಗಿದೆ.

ಸಿದ್ಧಲಿಂಗೇಶ್ವರರ ಜಾತ್ರೆ ಎಡೆಯೂರಿನಲ್ಲಿ ಪ್ರತಿವರ್ಷ ತಪ್ಪದೆ ಚೈತ್ರಮಾಸ ಶುದ್ಧ ಸಪ್ತಮಿಯಲ್ಲಿ ನಡೆಯುತ್ತಿದ್ದು ಇದರಲ್ಲಿ ಅಪಾರವಾದ ಭಕ್ತಸಮೂಹ ಹಾಗೂ ಪರ-ಚರ ಗುರುಮೂರ್ತಿಗಳು ಭಾಗವಹಿಸುತ್ತಾರೆ.

ಪ್ರಸ್ತುತ ತೋಂಟದ ಸಿದ್ಧಲಿಂಗರ ವಚನ ಸಂಪುಟವನ್ನು ಶ್ರೀ ಚೆನ್ನಮಲ್ಲಪ್ಪ ಮಾಸ್ತರರ (೧೯೫೧) ಹಾಗು ಪ್ರಾ. ಆರ್.ಸಿ. ಹಿರೇಮಠರ (೧೯೬೪) ಕೃತಿಗಳನ್ನು ಆಧರಿಸಿ ಸಿದ್ಧಪಡಿಸಲಾಗಿದೆ. ಅನುಮಾನ ಉಂಟಾದೆಡೆಗಳಲ್ಲಿ ಕನ್ನಡ ಅಧ್ಯಯನ ಕೇಂದ್ರದ (ಬೆಂಗಳೂರು ವಿಶ್ವವಿದ್ಯಾಲಯ) ಸಂಗ್ರಹದಲ್ಲಿನ ಕ್ರಮಾಂಕ ಕೆ. ೫೭೮, ಕೆ. ೬೧೫/೨, ಕೆ. ೭೫೦ ನೆಯ ಓಲೆ ಪ್ರತಿಗಳನ್ನು ಬಳಸಿಕೊಂಡು ಪರಿಷ್ಕರಿಸಲಾಗಿದೆ.

**ಘನಲಿಂಗಿದೇವ:**

'ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ' ಅಂಕಿತದ ವಚನಗಳ ಕರ್ತೃ ಘನಲಿಂಗಿದೇವ. ಈತನ ೬೩ (+೩) ವಚನಗಳು ಇಂದು ಉಪಲಬ್ಧವಿವೆ. ಈತ ಮೈಸೂರು ಜಿಲ್ಲೆಯಲ್ಲಿನ ಕಪಿಲಾನದಿ ತೀರದಲ್ಲಿರುವ ಶ್ರೀ ಸುತ್ತೂರು ವೀರಸಿಂಹಾಸನದ ಅಧ್ಯಕ್ಷ. ವಚನವೊಂದರಲ್ಲಿ ತನ್ನ ಹಿಂದಿನ ಗುರು ಪರಂಪರೆಯನ್ನು ತಿಳಿಸುವಲ್ಲಿ ಸುತ್ತೂರು ಸಿಂಹಾಸನದ ಪರ್ವತದೇವರ ಶಿಷ್ಯರು ಭಂಡಾರಿ ಬಸವಪ್ಪೊಡೆಯದೇವರು, ಇವರ ಶಿಷ್ಯರು ಕೂಗಲೂರ ಸಂಜಯ್ಯದೇವರು, ಆ ದೇವರ ಕರಕಮಲದಲ್ಲಿ ಉದಯವಾದ ಶರಣುವೆಣ್ಣು ತಾನೆಂದು ತಿಳಿಸಿದ್ದಾನೆ. ಅಲ್ಲದೆ ಪರಮಾರಾಧ್ಯ ತೋಂಟದಾರ್ಯರು 'ಘನಲಿಂಗಿ' ಎಂಬ ನಾಮಕರಣವನ್ನು ತನಗೆ ಮಾಡಿದುದಾಗಿ ತಿಳಿಸಿದ್ದಾನೆ. ವಿರೂಪಾಕ್ಷ ಪಂಡಿತ (೧೫೮೪) 'ಚೆನ್ನಬಸವ ಪುರಾಣ' (೬೩-೪೭)ದಲ್ಲೂ, ವಿರಕ್ತ ತೋಂಟದಾರ್ಯ (೧೬೧೬) 'ಸಿದ್ಧೇಶ್ವರ ಪುರಾಣ' (೧೫-೪೬)ದಲ್ಲೂ, 'ನಿರಂಜನ ವಂಶರತ್ನಾಕರ' (ಸಂ. ಫ.ಗು.ಹ.)ದಲ್ಲೂ ಘನಲಿಂಗಿದೇವನು ತೋಂಟದಾರ್ಯರ ಶಿಷ್ಯಪರಂಪರೆಯವನೆಂದು ಉಲ್ಲೇಖಗೊಂಡಿದೆ.

ತುಮಕೂರಿನಲ್ಲಿ ಸಿದ್ಧಲಿಂಗಸ್ವಾಮಿಗಳ ಮೆರವಣಿಗೆ ನಡೆದಾಗ ಅದರಲ್ಲಿ ಭಾಗವಹಿಸಿದ್ದ ಶರಣ ಸಮೂಹದಲ್ಲಿ ಘನಲಿಂಗಿದೇವರು ಒಬ್ಬರು. ಅವರ ಆಗಿನ ವ್ಯಕ್ತಿತ್ವದ ಚಿತ್ರಣವನ್ನು ವಿರಕ್ತ ತೋಂಟದಾರ್ಯ ಈ ರೀತಿ ಕೊಟ್ಟಿದ್ದಾನೆ:

'ಉರೆ ಕೃಷ್ಣಕಂಬಳವ ಪೊದೆದುತ್ತಮಾಂಗವಂ
ನೆರೆ ಮುಂಡಿತಂಗೆಯ್ದು ಕರತಲದ ಲಿಂಗದೊಳ್
ಬೆರಗುವಡೆದಿತರೇತರವನರಿಯದಿರ್ಪ ನಿಶ್ಚಳ ವಿರತ....'

(ಸಿದ್ಧೇಶ್ವರ ಪುರಾಣ, ೧೫-೪೬)

ಘನಲಿಂಗಿದೇವ ತೋಂಟದ ಸಿದ್ಧಲಿಂಗದೇವರ ಕಿರಿಯ ಸಮಕಾಲೀನ. ಸಿದ್ಧಲಿಂಗರು ಕ್ರಿ.ಶ. ೧೫೬೧ ರಲ್ಲಿ ಜೀವಂತರಾಗಿದ್ದ ಅಂಶ ಶಾಂತೇಶನ 'ಸಿದ್ಧೇಶ್ವರ ಪುರಾಣ'ದಿಂದ ತಿಳಿದುಬಂದಿದೆ. ಅಲ್ಲದೆ ಘನಲಿಂಗಿದೇವ ತನ್ನ ವಚನದಲ್ಲಿ ಹೆಸರಿಸಿರುವ ಭಂಡಾರಿ ಬಸವಪ್ಪೊಡೆಯದೇವ ಕ್ರಿ.ಶ. ೧೫೧೪ ರಲ್ಲಿನ ನಂಜನಗೂಡಿನ ೩ ಶಿಲಾಶಾಸನಗಳಲ್ಲಿ (ಎ.ಕ ; III ನಂಜನಗೂಡು, ೧೯೭೪, ೩೯೫, ೩೯೬, ೪೦೧) ಉಕ್ತನಾಗಿದ್ದಾನೆ. ಹೀಗಾಗಿ ಘನಲಿಂಗಿದೇವ ೧೬ನೆಯ ಶತಮಾನದ ಪೂರ್ವೋತ್ತರ ಕಾಲಮಾನದಲ್ಲಿ ಬದುಕಿ ಬಾಳಿದ್ದಾನೆ.

ಈತನ ಸಮಾಧಿಸ್ಥಾನ ಕಗ್ಗೆರೆ.

'ಕಾಡಸಿದ್ಧೇಶ್ವರರ ವಚನ'ಗಳ ಟೀಕೆಯಲ್ಲಿ (ಬಳ್ಳಾರಿ, ೧೯೩೮, ಪು. ೪೫೦) 'ಇಂದಿನ ಗಣಂ'ಗಳನ್ನು ತಿಳಿಸುತ್ತ ಘನಲಿಂಗಿದೇವನನ್ನು ಸಿದ್ಧೇಶ್ವರ ಸ್ವಾಮಿಗಳು, ಸಿಂಗಳಾಪುರದ ಬಸವರಾಜದೇವರೊಡನೆ ಹೆಸರಿಸಿದೆ.

ಕುಷ್ಟಗಿ ವಿರಕ್ತ ಕರಿಬಸವರಾಜದೇವನ (೧೭೦೦) 'ವಚನ'ಗಳ ಮೇಲೆ ಆಗಿರುವ ಘನಲಿಂಗಿದೇವನ ವಚನಗಳ ಪ್ರಭಾವವನ್ನು ಈಗಾಗಲೇ ರೆ|| ಉತ್ತಂಗಿ ಚೆನ್ನಪ್ಪ ಮತ್ತು ಪ್ರೊ. ಜಿ.ಎಂ. ಉಮಾಪತಿಶಾಸ್ತ್ರಿಗಳು ಗುರುತಿಸಿದ್ದಾರೆ.

ಘನಲಿಂಗಿದೇವರ ವಚನಗಳನ್ನು ಎಳಮಲೆ ಗುರುಶಾಂತದೇವ (೧೬೦೦), ಸಂಪಾದನೆ ಬೋಳಬಸವ (೧೬೭೫) ಹಾಗೂ ಅಜ್ಞಾತ ವಚನ ಸಂಕಲನಕಾರರ 'ನಿಷ್ಕಲಲಿಂಗ ಚಿದಾನಂದ ಲೀಲೆ' ಮತ್ತು 'ಭಕ್ತ್ಯಾನಂದ ಸುಧಾರ್ಣವ'ಗಳಲ್ಲಿ ಕಾಣಬಹುದು.

ಹಸ್ತಪ್ರತಿಗಳಲ್ಲಿ ಪ್ರಾಯಿಕವಾಗಿ ಘನಲಿಂಗಿಗಳ ೬೩/೬೪ ವಚನಗಳು ದೊರೆಯುತ್ತವೆ. 'ಭಕ್ತ್ಯಾನಂದ ಸುಧಾರ್ಣವ'ದಲ್ಲಿ 'ಎನ್ನ ಕಾಯ ಪ್ರಸಾದವಾಯಿತ್ತು....' ಹಾಗೂ 'ಮೋಹಮದರಾಗ ವಿಷದ.....' ಎಂಬ ಎರಡು ಹೆಚ್ಚಿನ ವಚನಗಳು ಲಭಿಸಿವೆ. ಇವುಗಳಲ್ಲಿ 'ಎನ್ನ ಕಾಯ ಪ್ರಸಾದವಾಯಿತ್ತು.....' ಎಂಬ ವಚನ ಎಳಮಲೆ ಗುರುಶಾಂತದೇವನ 'ಅಷ್ಟಾವರಣ ಸ್ತೋತ್ರದ ವಚನಗಳು' ಸಂಕಲನದಲ್ಲಿದೆ. ಇವಲ್ಲದೆ 'ಅಗ್ನಿ ಅಗ್ನಿಯ ಕೂಡಿ....' ಎಂಬ ವಚನ 'ಕನ್ನಡ ಅಧ್ಯಯನ ಕೇಂದ್ರ'ದ ಕಾಲದ ಪ್ರತಿ ಕ್ರಮಾಂಕ ಬಿ. ೬೩೩ ರಲ್ಲಿದ್ದು ಅದು ಈವರೆವಿಗೂ ಪ್ರಕಟವಾಗಿಲ್ಲ. ಈಗ ಮೊದಲಬಾರಿಗೆ ಅಚ್ಚಾಗುತ್ತಿದ್ದು, ಪ್ರಸ್ತುತ ಕೃತಿಯಲ್ಲಿ ಘನಲಿಂಗಿದೇವರ ವಚನ ಸಂಖ್ಯೆ ೬೬ಕ್ಕೇರಿದೆ.

ಘನಲಿಂಗಿದೇವರ ವಚನಗಳನ್ನು ಸಂಪಾದಿಸುವಲ್ಲಿ ಪಂ.ಬಿ. ಶಿವಮೂರ್ತಿ ಶಾಸ್ತ್ರಿಗಳು (೧೯೫೦) ಮತ್ತು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು (೧೯೬೪) ಪ್ರಕಟಿಸಿದ ಕೃತಿಗಳನ್ನು ಆಧರಿಸಲಾಗಿದೆ. ಅಲ್ಲದೆ ಕ.ಅ. ಕೇಂದ್ರದಲ್ಲಿನ (ಬೆಂ.ವಿ.ವಿ.) ಕ್ರಮಾಂಕ ಕೆ. ೫೪೯/೭, ಬಿ. ೬೩೩ ಹಾಗೂ ಕೆ. ೮೫೯/೩ ರ ಓಲೆ/ಕಾಗದದ ಪ್ರತಿಗಳನ್ನು ಬಳಸಿಕೊಳ್ಳಲಾಗಿದೆ.

**ಗುಮ್ಮಳಾಪುರದ ಸಿದ್ಧಲಿಂಗ:**

'ಪರಂಜ್ಯೋತಿ ಮಹಾಲಿಂಗ ಗುರುಸಿದ್ಧಲಿಂಗ ಪ್ರಭುವಿನಲ್ಲಿ.... ಬೋಳ ಬಸವೇಶ್ವರಾ ನಿಮ್ಮ ಧರ್ಮ ನಿಮ್ಮ ಧರ್ಮ' ಎಂಬ ಅಂಕಿತದಿಂದ ಕೊನೆಗೊಳ್ಳುವ ವಚನಗಳ ಕರ್ತೃ ಗುಮ್ಮಳಾಪುರದ ಸಿದ್ಧಲಿಂಗ. ಈತನ ೧೮ ವಚನಗಳು ಇದುವರೆಗೂ ಉಪಲಬ್ಧವಿದ್ದು 'ಷಟ್‌ಸ್ಥಲ ಲಿಂಗಾಂಗ ಸಂಬಂಧದ ನಿರ್ವಚನ' ಎಂಬ ಹೆಸರಿನಲ್ಲಿ ಪ್ರಕಟವಾಗಿವೆ. ಈತನ ಮತ್ತೊಂದು ವಚನ ಸಂಕಲನ ರೂಪದ ಕೃತಿ 'ಶೂನ್ಯ ಸಂಪಾದನೆ'.

ತೋಂಟದ ಸಿದ್ಧಲಿಂಗ ಮತ್ತು ಬೋಳಬಸವರ ಶಿಷ್ಯ ಪರಂಪರೆಯವ ಗುಮ್ಮಳಾಪುರದ ಸಿದ್ಧಲಿಂಗ. ಧಾರ್ಮಿಕ ವಲಯದ ನಂಬಿಕೆಯಂತೆ ಈತ 'ಶೂನ್ಯಪೀಠ'ದ ಉತ್ತರಾಧಿಕಾರಿಗಳಲ್ಲೊಬ್ಬ.

ಚಿಕ್ಕನಂಜೇಶ (೧೬೦೦) 'ರಾಘವಾಂಕ ಚಾರಿತ್ರ'ದಲ್ಲಿ (೧೯-೮೭) ಗುರುಸಿದ್ಧಲಿಂಗ 'ಷಟ್ಸ್ಥಲಬ್ರಹ್ಮ ಕೋವಿದ'ನೆಂದೂ 'ಬಸವಾದಿಗಳ ವಚನಮಂ ಜಂಗಮಕೆ ಮುದದಿ ವ್ಯಾಖ್ಯಾನಮಂ ಮಾಡುತ್ತಿದ್ದ'ನೆಂದು ತಿಳಿಸಿದ್ದಾನೆ. ತುಮಕೂರಿನಲ್ಲಿ ನಡೆದ ತೋಂಟದ ಸಿದ್ಧಲಿಂಗರ ಮೆರೆವಣಿಗೆಯಲ್ಲಿ ಗು. ಸಿದ್ಧಲಿಂಗ ಭಾಗವಹಿಸಿದ್ದುದನ್ನು ವಿರಕ್ತ ತೋಂಟದಾರ್ಯ (೧೬೧೬) 'ಸಿದ್ಧೇಶ್ವರ ಪುರಾಣ'ದಲ್ಲಿ (೧೫-೩೯) ತಿಳಿಸಿದ್ದಾನೆ. ಆಗಿನ ಈತನ ಚಿತ್ರಣ ಇಂತಿದೆ. 'ಲಲಿತ ರುದ್ರಾಕ್ಷಿಯಾಭರಣವನಲಂಕರಿಸಿ, ಸಲೆ ಭಸಿತಮಂ ನೊಸಲೊಳಿಟ್ಟು, ಥಳಥಳಿಸಿಯುಜ್ವಲಿಪ ಕೆಂಜೆಡೆಯನೆಳವಿಟ್ಟು ಶಿವತತ್ವಾನುಭಾವಿ'ಯಾಗಿದ್ದನಂತೆ.

ಗು. ಸಿದ್ಧಲಿಂಗನನ್ನು ಎಡೆಯೂರಿನ ಶಿಲಾಶಾಸನವು ತೋಂಟದ ಸಿದ್ಧಲಿಂಗನೊಡನಿದ್ದ ಇತರ ವಿರತರೊಡನೆ ಹೆಸರಿಸಿದೆ. ಈತನ 'ಶೂನ್ಯ ಸಂಪಾದನೆ'ಯ ಒಂದು ಪ್ರತಿಯನ್ನು ಕ್ರಿ.ಶ. ೧೫೮೦ ರಲ್ಲಿ ಎಳವಂದೂರ ಚೆನ್ನರಾಜನು ವಿರಕ್ತ ಸಿದ್ಧಲಿಂಗರಿಗೆ ಪ್ರತಿಮಾಡಿಸಿ ಅರ್ಪಿಸಿದ್ದಾನೆ. ಹೀಗಾಗಿ ಗು. ಸಿದ್ಧಲಿಂಗ ೧೬ ನೆಯ ಶತಮಾನದ ಉತ್ತರಾರ್ಧದಲ್ಲಿದ್ದನೆಂಬ ಸಂಗತಿ ಸ್ಪಷ್ಟ.

ಈತನ ವಚನಗಳು ಎಳಮಲೆ ಗುರುಶಾಂತದೇವ (೧೬೦೦) 'ಮಿಶ್ರ ಸ್ತೋತ್ರದ ವಚನ'ಗಳಲ್ಲಿ ಹಾಗೂ 'ಉದ್ಧರಣೆ ವಾಚ್ಯ'ದಲ್ಲಿನ 'ಶೂನ್ಯಲಿಂಗ ಉದ್ಧರಣೆ' (ಕೆ. ೧೩೦೬, ಗರಿ ೩೩ ಮುಂ, ಕ. ಅ. ಕೇಂದ್ರ)ಗಳಲ್ಲಿವೆ.

ಲಿಂ. ಡಾ. ಫ.ಗು. ಹಳಕಟ್ಟಿಯವರು ಈತನ ೧೮ ವಚನಗಳನ್ನು 'ಶಿವಾನುಭವ' ಪತ್ರಿಕೆಯ ೧೭-೧೮ ನೆಯ ಸಂಪುಟ (೧೯೪೩-೪೪)ಗಳಲ್ಲಿ ಮೊದಲು ಪ್ರಕಟಿಸಿದ್ದಾರೆ. ಇವನ್ನೇ ಆಧರಿಸಿ ಪ್ರಸ್ತುತ ಕೃತಿಯನ್ನು ಅಣಿಗೊಳಿಸಲಾಗಿದೆ. ಕ.ಅ. ಕೇಂದ್ರವಲ್ಲಿನ ಕ್ರಮಾಂಕ ಕೆ. ೫೮೯/೫ (೧೧-೩೧) ರ ಓಲೆ ಪ್ರತಿಯನ್ನು ಅವಲೋಕಿಸಿ ಹಲವೆಡೆ ಪಾಠಪರಿಷ್ಕರಣವನ್ನು ಮಾಡಲಾಗಿದೆ.

**ಸ್ವತಂತ್ರ ಸಿದ್ಧಲಿಂಗ:**

'ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ' ಅಂಕಿತದ ವಚನಕಾರ ಸ್ವತಂತ್ರ ಸಿದ್ಧಲಿಂಗ. ಈತನ ೪೩೦ ವಚನಗಳು ಉಪಲಬ್ಧವಿದ್ದು ಪ್ರಕಟವಾಗಿವೆ.* ಇತ್ತೀಚೆಗೆ ಲಭ್ಯವಾದ ಶಕವರ್ಷ ೧೭೬೫ರಲ್ಲಿ ಪ್ರತಿ ಮಾಡಿದ ಕಾಗದದ ಪ್ರತಿಯೊಂದರಿಂದ ಇವರು ೭೦೦ ವಚನಗಳನ್ನು ರಚಿಸಿದ ಸಂಗತಿ ಬೆಳಕಿಗೆ ಬಂದಿದೆ.

---

* ಇತ್ತೀಚೆಗೆ ದೊರಕಿದ ಐದು ಹೆಚ್ಚಿನ ವಚನಗಳನ್ನು ದ್ವಿತೀಯ ಪರಿಷ್ಕರಣದ ಮುದ್ರಣದಲ್ಲಿ ಸೇರಿಸಿದೆ. ಹೀಗಾಗಿ ಈತನ ಉಪಲಬ್ಧ ವಚನ ಸಂಖ್ಯೆ ೪೩೦+೫=೪೩೫ ಆಗುತ್ತದೆ.

ಸ್ವತಂತ್ರ ಸಿದ್ಧಲಿಂಗರು ವಚನಗಳನ್ನಲ್ಲದೆ 'ಜಂಗಮರಗಳೆ' ಹಾಗೂ ವಚನ ಸಂಕಲನರೂಪದ ೨೧ ವಚನಗಳ 'ಮುಕ್ತಾಂಗನಾ ಕಂಠಮಾಲೆ'ಗಳನ್ನು ರಚಿಸಿದ್ದಾರೆ.

ಸ್ವತಂತ್ರ ಸಿದ್ಧಲಿಂಗರು ವಚನಗಳಲ್ಲಿ ಅಥವ ಇತರ ಕೃತಿಗಳಲ್ಲಿ ತಮ್ಮ ಗುರುಪರಂಪರೆಯ ಬಗೆಗಾಗಲೀ ಅಥವಾ ಕಾಲದ ಬಗೆಗಾಗಲೀ ಮೌನವಹಿಸಿದ್ದಾರೆ. ಹೀಗಾಗಿ ಇವರ ಕಾಲನಿರ್ಣಯದ ಬಗೆಗೆ ನಾವು ಬಾಹ್ಯ ಆಧಾರಗಳ ಮೊರೆ ಹೋಗಬೇಕಾಗಿದೆ.

ಪರಂಪರೆಯ ನಂಬಿಕೆಯಂತೆ ಸ್ವತಂತ್ರ ಸಿದ್ಧಲಿಂಗರು ಎಡೆಯೂರ ತೋಂಟದ ಸಿದ್ಧಲಿಂಗರ ಶಿಷ್ಯರು. ವಿರೂಪಾಕ್ಷ ಪಂಡಿತನ (೧೫೮೪). 'ಚೆನ್ನಬಸವ ಪುರಾಣ'ದಲ್ಲಿ (೬೩-೪೭) ತೋಂಟದ ಸಿದ್ಧಲಿಂಗರ ಶಿಷ್ಯರೆಂದು ಉಲ್ಲೇಖಿತರಾದ ಸಿದ್ಧಲಿಂಗೇಶ್ವರ ಹಾಗೂ ದೊಡ್ಡ ಸಿದ್ಧಲಿಂಗೇಶ್ವರರೊಡನೆ ಸ್ವತಂತ್ರ ಸಿದ್ಧಲಿಂಗರನ್ನು ಸಮೀಕರಿಸುವ ಪ್ರಯತ್ನವನ್ನು ವಿದ್ವಾಂಸರು ಮಾಡಿದ್ದಾರೆ.

ಆರ್. ನರಸಿಂಹಾಚಾರ್ಯರು ಇವರಲ್ಲೊಬ್ಬ ಸ್ವತಂತ್ರಸಿದ್ಧಲಿಂಗೇಶ್ವರನಿರಬಹುದೆಂದು ಅಭಿಪ್ರಾಯಪಟ್ಟರೆ ಪ್ರೊ. ಸಿ. ಮಹಾದೇವಪ್ಪನವರು ಸಿದ್ಧಲಿಂಗೇಶ್ವರನೇ ಸ್ವತಂತ್ರ ಸಿದ್ಧಲಿಂಗನೆಂದಿದ್ದಾರೆ. ಈ ಮತವನ್ನು ಒಪ್ಪದ ಡಾ. ಎಚ್.ಪಿ. ಮಲ್ಲೇದೇವರು ದೊಡ್ಡ ಸಿದ್ಧಲಿಂಗೇಶ್ವರನೆ ಸ್ವ. ಸಿದ್ಧಲಿಂಗೇಶ್ವರನೆಂದು ನಿರ್ಧರಿಸಿದ್ದಾರೆ. ಶ್ರೀ ಪಿ.ಎಂ. ಗಿರಿರಾಜು ಅವರು ಗುರುಸಿದ್ಧಸ್ವಾಮಿಗಳ (೧೭೦೦) 'ನಿಜಾಚರಣೆ ವಚನ' ಸಂಕಲನದ ಅಂತ್ಯದಲ್ಲಿನ ಗುರುಪರಂಪರೆಯಲ್ಲಿ ಉಕ್ತವಾಗಿರುವ ಮರಿಬಸವಲಿಂಗೇಶ್ವರ ಸ್ವಾಮಿಯ ಶಿಷ್ಯ ಸ್ವತಂತ್ರ ಸಿದ್ಧೇಶ್ವರ ಸ್ವಾಮಿಯೇ ಪ್ರಸ್ತುತ ವಚನಕಾರನಾದ ಸ್ವ. ಸಿದ್ಧಲಿಂಗೇಶ್ವರನೆಂಬ ಅಭಿಪ್ರಾಯವನ್ನು ಮುಂದಿಟ್ಟಿದ್ದಾರೆ.

ಸ್ವತಂತ್ರ ಸಿದ್ಧಲಿಂಗರ ಕಾಲದ ಬಗೆಗೂ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲ. ಶ್ರೀ ಆರ್. ನರಸಿಂಹಾಚಾರ್ಯರು ಈತನ ಕಾಲ 'ಸು. ೧೪೮೦' ಎಂದೂ, ಡಾ.ಎಚ್.ಪಿ. ಮಲ್ಲೇದೇವರು '೧೫ನೇ ಶತಕದ ಉತ್ತರಾರ್ಧ ೧೬ನೇ ಶತಕದ ಆದಿಯಲ್ಲಿರಬೇಕು' ಎಂದೂ, ಶ್ರೀ ಪಿ.ಎಂ. ಗಿರಿರಾಜು ಅವರು '೧೫೫೦-೧೫೭೦ ರ ನಡುವೆ'ಯೆಂದೂ ಊಹಿಸಿದ್ದಾರೆ.

ಸ್ವ. ಸಿದ್ಧಲಿಂಗನ ವಚನಗಳನ್ನು ಸಂಪಾದನೆಯ ಚೆನ್ನಂಜೇದೇವ (೧೫೮೦), ಎಳಮಲೆ ಗುರುಶಾಂತದೇವ (೧೬೦೦), ಸಂಪಾದನೆ ಸಿದ್ಧವೀರಣ್ಣೊಡೆಯದೇವರು (೧೬೦೦) ಗಳು ತಮ್ಮ ಸಂಕಲನಗಳಲ್ಲಿ ಉದಾಹರಿಸಿರುವುದರಿಂದ ಸ್ವ. ಸಿದ್ಧಲಿಂಗರ ಕಾಲ ೧೬ನೆಯ ಶತಮಾನದ ಉತ್ತರಾರ್ಧವೆಂದು ನಿರ್ಧರಿಸಬಹುದಾಗಿದೆ.

ಸ್ವ. ಸಿದ್ಧಲಿಂಗರ ಸ್ಥಳದ ಬಗೆಗೆ ಡಾ. ಎಚ್.ಪಿ. ಮಲ್ಲೇದೇವರು ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಕಾಪನಹಳ್ಳಿಯಿದ್ದು ಅಲ್ಲಿಗೆ ಸಮೀಪದಲ್ಲಿನ

ಗಜರಾಜಗಿರಿಯಲ್ಲಿ ಈತನ ಸಮಾಧಿಯಿದೆಯೆಂದೂ, ಅಲ್ಲಿ ಪ್ರತಿವರ್ಷ ಮಾಘ ಶುದ್ಧ ಪೂರ್ಣಿಮಾ ದಿನ ಜಾತ್ರೆ ನಡೆಯುತ್ತಿರುವುದಾಗಿಯು ತಿಳಿಸಿದ್ದಾರೆ. ಇವರ ಅಭಿಪ್ರಾಯಕ್ಕೆ ಪೋಷಕ ಪೂರಕವಾಗಿ ಸ್ವತಂತ್ರ ಸಿದ್ಧಲಿಂಗರ ಸಮಾಧಿ ಇಲ್ಲಿತ್ತೆಂಬ ಅಂಶ ಇತ್ತೀಚೆಗೆ ದೊರಕಿರುವ ಮಂಗಳಾರತಿ ಸ್ವರೂಪದ 'ಸ್ವರವಚನ'ವೊಂದರಿಂದ ಸಮರ್ಥಿತವಾಗುತ್ತಿ-ರುವುದು ಸಂತಸದ ಸಂಗತಿ ಹಾಗೂ ಅಷ್ಟೇ ಗಮನಾರ್ಹ:

'ಬೆಳಗೀರೆ ಮಂಗಳಾರತಿಯ ಮುಂದೆ
ಹೊಳೆವ ಸ್ವತಂತ್ರ ಸಿದ್ಧಲಿಂಗನಿಗೆ
ಬೆಳಗೀರೆ ಮಂಗಳಾರತಿಯ　　　　　　|| ಪಲ್ಲ ||

.................ಷಟ್ಸ್ಥಲ ಸಾರ್ವಭೌಮ
ಕಾಪನಹಳ್ಳಿಯ ಗವಿಯ ಸರ್ವ
ಪಾಪನಾಶನ ನದಿತೀರವಾಸನಿಗೆ
ಬೆಳಗೀರೆ ಮಂಗಳಾರತಿಯ'　　　　　　|| ೩ ||

(ಕೆ. ೧೬೨೦ (೨೪-೫) ಕ.ಅ. ಕೇಂದ್ರ ಬೆಂ.ವಿ.ವಿ.)

ಮುಮ್ಮಡಿ ಕೃಷ್ಣರಾಜ ಒಡೆಯರು (೧೭೯೪-೧೮೬೮) ಇವರ ಸಮಾಧಿಗೆ 'ಉಂಬಳಿ' ಕೊಟ್ಟಿದ್ದಾರೆ.

ಕ್ರಿ.ಶ. ೧೭೦೪ ರಲ್ಲಿ ಪ್ರತಿಯಾದ 'ವೀರಮಾಹೇಶ್ವರಾಚಾರಸಂಗ್ರಹ'ದ (ಎಸ್.ಎ. ೫೬೪, ಪ್ರಾಚ್ಯ ಸಂಶೋಧನಾ ಸಂಸ್ಥೆ, ಮೈಸೂರು) ಅಂತ್ಯದಲ್ಲಿ 'ಶ್ರೀ ಗುರು ಸ್ವತಂತ್ರ ಸಿದ್ಧಲಿಂಗೇಶ್ವರಾಯ ನಮಃ' ಎಂದಿದೆ.

ಸೋಮಶೇಖರ ಶಿವಯೋಗಿಯ (೧೭೦೦) 'ಬಸವಣ್ಣನವರ ವಚನಗಳ ಟೀಕೆ'ಯ ಆರಂಭದಲ್ಲಿ 'ಸಾಧ್ಯ ಗಣ'ಗಳನ್ನು ಹೆಸರಿಸುವಲ್ಲಿ 'ಸ್ವತಂತ್ರ ಸಿದ್ಧಲಿಂಗ ಸ್ವಾಮಿ'ಗಳೆಂದು ಕರೆಯಲಾಗಿದೆ.

'ಶಾಂಭವೀ ಚಕ್ರೋದ್ಧರಣೆ'ಯಲ್ಲಿ ಈತನ ವಚನಗಳ ಉಲ್ಲೇಖವಿದೆ.

ಪ್ರಸ್ತುತ ಸ್ವತಂತ್ರ ಸಿದ್ಧಲಿಂಗರ ವಚನಗಳನ್ನು ಡಾ. ಎಚ್.ಪಿ. ಮಲ್ಲೆದೇವರ (೧೯೭೫) ಆವೃತ್ತಿಯನ್ನು ಆಧರಿಸಿ ಸಿದ್ಧಮಾಡಲಾಗಿದೆ. ಸಂದೇಹ ಬಂದಡೆ ಕ.ಅ. ಕೇಂದ್ರದಲ್ಲಿನ (ಬೆಂ.ವಿ.ವಿ.) ಸಂಗ್ರಹದಲ್ಲಿನ ಕೆ. ೭೭೪, ಕೆ. ೮೪೯ ಹಾಗೂ ಬಿ.೧೩೯೮ ರ ಓಲೆ/ಕಾಗದದ ಪ್ರತಿಗಳನ್ನು ಪರಿಷ್ಕರಣಕ್ಕೆ ಬಳಸಿಕೊಂಡಿದೆ.

**ಇಮ್ಮಡಿ ಗುರುಸಿದ್ಧ ಸ್ವಾಮಿ:**

ಚೆನ್ನೂಲಾದ್ರಿ ಪ್ರಭು ಶೂನ್ಯಸಿಂಹಾಸನ ಮಠದ ಮೂಲ ಕರ್ತೃಗಳು ಕಟ್ಟಿಗೆಹಳ್ಳಿ ಸಿದ್ಧಲಿಂಗ ಸ್ವಾಮಿಗಳ ಶಿಷ್ಯರಾದ ಮುರಿಗೆ ಶಾಂತವೀರ ಮಹಾಸ್ವಾಮಿಗಳು (?-೧೭೦೩). ಇವರ ಉತ್ತರಾಧಿಕಾರಿಗಳಾಗಿ ಗುರುಸಿದ್ಧ ಸ್ವಾಮಿಗಳು ಮುರಿಗಾ ಪೀಠಕ್ಕೆ ಅಧಿಕಾರಿಗಳಾಗಿ

ಬಂದರು. ಇವರನ್ನು ಇಮ್ಮಡಿ ಮುರಿಗಾ ಗುರುಸಿದ್ಧ ಸ್ವಾಮಿಗಳೆಂದು ಹೆಸರಿಸಲಾಗಿದೆ. ಇವರಿಗೆ ದ್ವಿತೀಯ ಮುರಿಗಾ ಗುರುಸಿದ್ಧದೇಶಿಕೇಂದ್ರ, ಲೀಲಾಖ್ಯದ ಮುರಿಗಾಖ್ಯ ಶಿವಯೋಗಿ ಇತ್ಯಾದಿಯಾಗಿ ಕರೆಯಲಾಗಿದೆ.

ಪ್ರಾರಂಭದ ವಿದ್ಯಾಭ್ಯಾಸದ ಬಗೆಗೆ ಇಮ್ಮಡಿ ಗುರುಸಿದ್ಧರು 'ಪ್ರಭುಲೀಲಾ', 'ಹಾಲಾಸ್ಯ ಪುರಾಣ'ಗಳ ಆದ್ಯಂತ್ಯಗಳಲ್ಲಿ ತಿಳಿಸಿದ್ದಾರೆ. ಅದರಂತೆ ಧನುಗೂರಿನ ನಿರಂಜನ ಪೀಠಾಧಿಪತಿ ಗುರು ಉದ್ದಾನಮೂರ್ತಿ. ಇವನ ವಂಶಜ ಸೋಮಶೇಖರ ಸದ್ಗುರು. ಈತನಿಂದ ಉಪದೇಶಿತನಾದ ಹಾಗೂ ಕರಜಾತನಾದ ಗುರುಸಿದ್ಧದೇಶಿಕ, ಕುಂಭಪಲ್ಲಿ ಬಸವಲಿಂಗ ಸ್ವಾಮಿಗಳಿಂದಲೂ ಶಿಕ್ಷಿತನಾದವ. ಅಲ್ಲದೆ ಮುರಿಗಾ ಶಾಂತವೀರನ ಅನುಗ್ರಹದಿಂದ ಷಟ್ಸ್ಥಲಮಾರ್ಗಜ್ಞನಾಗಿ ಗುರುರೂಪವಾದನು. ಗುರುಸಿದ್ಧ ಚಿತ್ರದುರ್ಗ ಪೀಠಕ್ಕೆ ಗುರುವಾಗಿ ಬರುವ ಮೊದಲು ಹುಲ್ಲಹಳ್ಳಿಯ ಸ್ವಾಮಿಯಾಗಿದ್ದು ಅನಂತರ ಚಿತ್ರದುರ್ಗದ ಬೃಹನ್ಮಠದಲ್ಲಿ ಗುರುವಾಗಿ ಇಮ್ಮಡಿ ಮುರಿಗಾ ಗುರುಸಿದ್ಧ ಶಿವಯೋಗಿ ಎಂದು ಪ್ರಸಿದ್ಧನಾದನು. ಗುರುಸಿದ್ಧ ೧೭೨೩ರಲ್ಲಿ ಪ್ರತಿಮಾಡಿದ ನೀಲಕಂಠ ನಾಗನಾಥಾಚಾರ್ಯನ 'ವೀರಮಾಹೇಶ್ವರಾಚಾರ ಸಂಗ್ರಹ'ದ ಅಂತ್ಯದಲ್ಲಿ 'ಲೀಲಾಖ್ಯದ ಮುರಿಗಾಖ್ಯ ಶಿವಯೋಗಿ ನಾ ಲಿಖಿತ್ವಾ' ಎಂದು ತಿಳಿಸಿದ್ದಾನೆ. (ಎಸ್.ಎ. ೫೬೪, ಪ್ರಾಚ್ಯ ಸಂಶೋಧನಾ ಸಂಸ್ಥೆ, ಮೈಸೂರು).

ಇಮ್ಮಡಿ ಗುರುಸಿದ್ಧ ಸ್ವಾಮಿ ಉಭಯ ಭಾಷಾ ಸಾಹಿತ್ಯ ವಚನಾ ನೈಪುಣ್ಯತೆ ಪಡೆದ ಉದ್ಧಾಮ ಪಂಡಿತ ಹಾಗೂ ವಾಗ್ಮಿ. ಈಗ ತಿಳಿದು ಬಂದಿರುವಂತೆ ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಕ್ರಮವಾಗಿ ೨೨ ಮತ್ತು ೩ ಕೃತಿಗಳನ್ನು ರಚಿಸಿದ್ದಾನೆ. ಈತನ ಕೃತಿಗಳಲ್ಲೆಲ್ಲ ಶಿವಲಿಂಗ / ಶಿವಲಿಂಗೇಶ್ವರ ಅಂಕಿತದ ಉಲ್ಲೇಖ ತಪ್ಪದೆ ಬಂದಿದೆ.

ಕನ್ನಡದಲ್ಲಿ-

-ಅನ್ಯಮತ ಖಂಡನದ ಹೋಳಿಪದ (೫೫)

-ಉದ್ಧರಣೆಯ ವಾರ್ಧಕ ಷಟ್ಪದಿ (೩೯)

-ಕನ್ನಡ ವಿರೂಪಾಕ್ಷ ಪಂಚಾಶಿಕೆ (ಭಾ.ಷ.) (ಕೃತಿ ರಚನಾ ಕಾಲ : ೮-೪-೧೭೦೮)

-ಕರಣಹಸಿಗೆ ಟೀಕೆ (ಗದ್ಯ)

-ಕೈವಲ್ಯ ಸೋಪಾನನಾಮೈಕೋತ್ತರ ಶತಸ್ಥಲ (ಹಾ)

-ಕೊರವಂಜಿ ಕಟ್ಟಳೆ

-ಜಲಂಧರನ ಕಾಳಗ (ಯ)

-ಪರಮತಖಂಡನದ ವಾರ್ಧಕ ಷಟ್ಪದಿ (೧೦೮) (ಅಪೂರ್ಣ)

-ಬಿಜ್ಜಾಂಬ ಚರಿತೆ (ಯ) (ಕೃತಿ ರಚನಾ ಕಾಲ : ೧೭೧೨)

-ಮಿಶ್ರಾರ್ಪಣ ವಾರ್ಧಕ (ವಾ.ಷ. -೫)

-ಮುರಿಗೆ ತಾರಾವಳಿ

-ಯೋಗಕಲಾಪಸಾರ (ಭಾ.ಷ.)

-ಲಿಂಗಾಚಾರ ರಚನಾಗಮ ಟೀಕೆ (ಕೃತಿ ರಚನಾ ಕಾಲ : ೧೭೧೪)

-ಶಿವಮತ ಪ್ರತಿಷ್ಠಾಪನ ವಾರ್ಧಕ (೩೭)

-ಶಿವರಹಸ್ಯ ಪುರಾಣ (ಭಾ.ಷ.) (ಕಾಂಡ ೭)

-ಶಿವಲಿಂಗ ನಾಂದ್ಯ (ಭಾ+ವಾ. ಷ.) -೨೫

-ಶಿವಲಿಂಗ ಮಹಿಮಾ ಷಟ್ಪದ (ವಾ.ಷ. -೧೨೫)

-ಶಿವಾಧಿಕ್ಯ ತಿಲಕ (ವಾ.ಷ. -೧೦೮) (ಅಲಭ್ಯ)

-ಶೂನ್ಯಮಂತ್ರಗೋಪ್ಯ (ವ-೨೦೯)

-ಸ್ಕಂದಕಲ್ಯಾಣ (ಚೌಪದಿ-೧೨-೧೦೩೬)

-ಹಾಡುಗಳು (೩೬೧)

-ಹಾಲಾಸ್ಯ ಪುರಾಣ (ಚಂಪು) (ಕೃತಿ ರಚನಾ ಕಾಲ : ೩೧-೫-೧೭೨೦)

ಸಂಸ್ಕೃತದಲ್ಲಿ-

ಚಾಮರವೃತ್ತ (೩/೫), ನಂದೀಶ್ವರ ದಂಡಕ, ಪ್ರಭುಲೀಲಾ (ಚಂಪು)

ಕಾಲ ವಿಚಾರ-

'ಪ್ರಭುಲೀಲೆ'ಯ (ಸಂ. ಜಿ. ಮರುಳಸಿದ್ಧಯ್ಯ, ೧೯೬೬, ಮೈಸೂರು) ಪು.XIರಲ್ಲಿ 'ಇವರ ಜೀವನ ಕಾಲ ಕ್ರಿ.ಶ. ೧೬೮೭-೧೮೨೪ ಎಂದು ನಿರ್ಧರಿಸಬಹುದು' ಎಂದಿದ್ದಾರೆ. ಈತನ ಅಂತ್ಯ ವರ್ಷವನ್ನು ನಿರ್ಧರಿಸುವಲ್ಲಿ ಇಮ್ಮಡಿ ಗುರುಸಿದ್ಧರು ತಾವೇ ಸ್ವತಃ ಪ್ರತಿ ಮಾಡಿರುವ 'ವೀರಮಾಹೇಶ್ವರಾಚಾರ ಸಂಗ್ರಹ'ದ ಅಂತ್ಯದಲ್ಲಿನ ಕಾಲೋಲ್ಲೇಖವನ್ನು ಆಧರಿಸಲಾಗಿದೆ. 'ಪ್ರಭುಲೀಲೆ'ಯಲ್ಲಿ ಈ ಕಾಲದ ಉಲ್ಲೇಖ ೨೮-೧೨-೧೮೨೪ ಎಂದಿತ್ತು. ಕೃತಿ ಪ್ರಕಟವಾದ ನಂತರ ಈಚೆಗೆ ಈ ಉಲ್ಲೇಖದ ಕಾಲಮಾನವನ್ನು ಪುನರ್‌ಪರಿಶೀಲಿಸಿದ ವಿದ್ವಾನ್ ಎಂ.ಎಸ್. ಬಸವರಾಜಯ್ಯನವರು ಈ ಕಾಲೋಲ್ಲೇಖ ಕ್ರಿ.ಶ. ೨೩-೨-೧೭೨೩ ಕ್ಕೆ ಸರಿಹೊಂದುತ್ತದೆ ಎಂಬ ಅಂಶವನ್ನು ಬೆಳಕಿಗೆ ತಂದಿದ್ದಾರೆ. ಅಲ್ಲದೆ ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು ಗುರುಸಿದ್ಧ ಕ್ರಿ.ಶ. ೧೭೨೯ ರಲ್ಲಿ ಲಿಂಗೈಕ್ಯನಾದನೆಂಬ ಅಂಶವನ್ನು ಸೂಚಿಸಿದ್ದಾರೆ. ಹೀಗಾಗಿ ಇಮ್ಮಡಿ ಗುರುಸಿದ್ಧರು ೧೭ನೇ ಶತಮಾನದ ಉತ್ತರಾರ್ಧ ಹಾಗೂ ೧೮ನೆಯ

ಶತಮಾನದ ಪೂರ್ವಾರ್ಧದಲ್ಲಿನ ಮೊದಲ ಮೂರು ದಶಕಗಳವಧಿಯಲ್ಲಿದ್ದರೆಂದು ಸದ್ಯದಲ್ಲಿ ನಿರ್ಧರಿಸಬಹುದಾಗಿದೆ.

ಗುರುಸಿದ್ಧರ ಸಮಾಧಿ ಶಿವಮೊಗ್ಗ ಜಿಲ್ಲೆ ಆನಂದಪುರಂನಲ್ಲಿದೆ. ಈ ಸಮಾಧಿಗೆ ಕೆಳದಿ ಬಸಪ್ಪನಾಯಕ ೨ ಅಂಗೀರಸ ಸಂವತ್ಸರದಲ್ಲಿ (=೧೭೫೨ A.D.) ದತ್ತಿಯೊಂದನ್ನು ಕೊಟ್ಟಿದ್ದಾನೆ (ಎ.ಕ. VII, ಹೊನ್ನಾಳಿ ೭೪, ಪು. ೪೦೬). ಅಲ್ಲದೆ ಈತ ಆನಂದಪುರದ ಮುರಿಗೆದೇವರಿಗೆ ವರ್ಷ ವರ್ಷವೂ ರಥೋತ್ಸವವಾಗುವಂತೆ ಏರ್ಪಡಿಸಿದುದನ್ನು ಲಿಂಗಣ್ಣನ (೧೭೬೦) 'ಕೆಳದಿನೃಪ ವಿಜಯ' (ಆಶ್ವಾಸ ೧೧, ಪದ್ಯ ೧೮, ೧೯೭೬) ದಾಖಲಿಸಿದೆ. ಈತನ ಗದ್ದಿಗೆಯ ಬಳಿ ಬಸವಾರಾಧ್ಯನ 'ಶಿವಯೋಗ ಪ್ರದೀಪಿಕೆ'ಯ ಪ್ರತಿ ಲಿಖಿತವಾಗಿದೆ. (ಕ.ಹ.ವ.ಸೂ. VIII, ಸಂ. ೪೩೪)

ಇಮ್ಮಡಿ ಗುರುಸಿದ್ಧರ ಶಿಷ್ಯ ಸೋಮಶೇಖರ ಶಿವಯೋಗಿ (೧೭೦೦) 'ಬಸವನ ಷಟ್ಸ್ಥಲದ ಬೆಡಗಿನ ವಚನದ ಟೀಕೆ' ಮತ್ತು 'ತೋಂಟದ ಸಿದ್ಧಲಿಂಗನ ಷಟ್ಸ್ಥಲ ಜ್ಞಾನಸಾರಾಮೃತದ ವಚನದ ಟೀಕೆ'ಗಳಲ್ಲಿ ಇವನನ್ನು ನೆನೆದಿದ್ದಾನೆ.

ಇವನ ಪ್ರೀತಿಯ ಶಿಷ್ಯನಾದ ಸಂಗೀತದ ಚೆನ್ನಬಸವಪ್ಪ 'ಶಿವಯೋಗ ಪ್ರದೀಪಿಕೆ'ಯನ್ನು ಲಿಖಿಸಿದ್ದಾನೆ. (ಕ.ಹ.ವ.ಸೂ. VI, ೧೭೩೮)

ಇವರ ಸೇವಕ ಚಂನಬಸವ 'ಕೈವಲ್ಯ ಸೋಪಾನ ನಾಮೈಕೋತ್ತರ ಶತಸ್ಥಲ'ವನ್ನು ಲಿಖಿಸಿದ್ದಾನೆ. (ಜಿ.ಎ. ಶಿವಲಿಂಗಯ್ಯನವರ ಸಂಗ್ರಹ).

ಗುರುಸಿದ್ಧರ 'ಬಿಜ್ಜವ್ವೆ ಚರಿತೆ'ಯನ್ನು ರಾಗದ ಬಸವಲಿಂಗೇಶ ಪ್ರತಿ ಮಾಡಿದ್ದಾನೆ. (ಪ್ರಭುಲೀಲೆ IX)

ಸಂಸ್ಕೃತದಲ್ಲಿ ಇಮ್ಮಡಿ ಗುರುಸಿದ್ಧರ ಉಲ್ಲೇಖಗಳು-

-ಸ್ವಾದಿ ಚೆನ್ನಬಸವಸ್ವಾಮಿಗಳ ವೀರಶೈವೋತ್ಕರ್ಷ ಪ್ರದೀಪಿಕೆಯ ಆದಿ.

-ಮರುಳೇಶನ 'ಮಲ್ಲಿಕಾರ್ಜುನ ಸ್ತೋತ್ರಂ' 'ದೇವಿಸ್ತೋತ್ರಂ' ಮತ್ತು 'ದೇವ್ಯಷ್ಟಕಂ'ಗಳ ಅಂತ್ಯದಲ್ಲಿ (ಪ್ರಭುಲೀಲೆ XVI).

ಕನ್ನಡದಲ್ಲಿ ಇಮ್ಮಡಿ ಗುರುಸಿದ್ಧರ ಉಲ್ಲೇಖಗಳು-

-ಕಾಶಿ ಗುರುಲಿಂಗ ಶಿವಯೋಗಿ (೧೭೦೮); ಶಿವಸೂತ್ರ ಟೀಕಾ ಆದಿ+ಅಂತ್ಯ

-ರಾಚೂಟಿ : ಬಸವ ಸ್ತೋತ್ರ (ಭಾ.ಷ.)

-ಮರಿಶಾಂತ ಬಸವದೇವ : ಸೋದೆ ಬಸವಲಿಂಗರಾಜನ ಭಕ್ತಿಚಂದ್ರೋದಯ (ವಾ.ಷ.)

-ಎಳಂದೂರು ಪರ್ವತ ಶಿವಯೋಗಿಯ (ಸು. ೧೭೦೦) 'ಶಾಂತವೀರೇಶ್ವರ' ಅಂಕಿತದ ವಚನಗಳು.

-ಮೋರಟಗಿ ಸಿದ್ಧಲಿಂಗನ (೧೮೦೦) 'ಏಕೋ ವಿಂಶತಿ ಶಾರದ'

ಮರುಳಸಿದ್ಧದೇವನ (೧೮ ಶ.) ಶಿವಭಿಕ್ಷಾಟನ ಲೀಲೆ (ಚಂಪು)

-ಸಿದ್ಧಲಿಂಗ ಶಿವಯೋಗಿಯ (೧೮ ಶ.) 'ಭೈರವೇಶ್ವರ ಪುರಾಣ' (ಚಂಪು)

-ಕಡಕೋಳ ಮಡಿವಾಳೇಶ್ವರನ (೧೯ ಶ.) ನಿಜಲೀಲಾನುಭವ.

ಅಜ್ಞಾತ ಕರ್ತೃವಿನ 'ಸ್ಕಾಂದ ಪುರಾಣ' (ಭಾ.ಷ.)

ಮಹಾದೇವನ (೧೮೬೩-೭೦) 'ಮಹಾಲಿಂಗೇಂದ್ರ ವಿಜಯ' (ವಾ.ಷ.)

ವೀರಶೈವ ಸಿದ್ಧಾಂತ ನಿರೂಪಣೆಯನ್ನೇ ವಸ್ತುವಾಗುಳ್ಳ ಪ್ರಸ್ತುತ ಕೃತಿ 'ಶೂನ್ಯ ಮಂತ್ರಗೋಪ್ಯ'ದಲ್ಲಿ ಶಿವಲಿಂಗೇಶ ಅಂಕಿತದ ೨೦೯ ವಚನಗಳಿವೆ. ಈ ಕೃತಿಯನ್ನು ೧೯೭೮ ರಲ್ಲಿ ಡಾ. ಎಸ್. ವಿದ್ಯಾಶಂಕರ ಅವರು 'ಇಮ್ಮಡಿ ಮುರಿಗಾ ಗುರುಸಿದ್ಧ ಶಿವಯೋಗಿಯ ಕೃತಿಗಳು' ಎಂಬ ಸಂಪುಟದಲ್ಲಿ ಪ್ರಕಟಿಸಿದ್ದರು. ೧೯೪ನೆಯ ವಚನ ಅವರ ಸಂಪಾದನೆಯಲ್ಲಿ ಕೈಬಿಟ್ಟು ಹೋಗಿತ್ತು. ಅದನ್ನು ಈ ಪರಿಷ್ಕರಣದಲ್ಲಿ ಸೇರಿಸಲಾಗಿದೆ. ಅಲ್ಲದೆ ಡಾ. ಎಸ್. ವಿದ್ಯಾಶಂಕರ ಅವರು ಉಪಯೋಗಿಸಿಕೊಂಡಿದ್ದ ಕ.ಅ. ಕೇಂದ್ರದ (ಬೆಂ.ವಿ.ವಿ.) ಓಲೆ ಪ್ರತಿ ಕೆ. ೨೨೫/೨ ನ್ನು ಮತ್ತೊಮ್ಮೆ ಪರಿಶೀಲಿಸಿ ಹಲವಾರು ಪಾಠಗಳನ್ನು ತಿದ್ದಲಾಗಿದೆ.

ಪ್ರಸ್ತುತ ಸಂಕೀರ್ಣ ವಚನ ಸಂಪುಟ ಆರು : ಈ ಕೃತಿಯನ್ನು ಪರಿಷ್ಕರಿಸಲು ನನಗೆ ಅವಕಾಶ ಮಾಡಿಕೊಟ್ಟ ಡಾ. ಎಂ.ಎಂ. ಕಲಬುರ್ಗಿ, ಸಂಪಾದನಾ ಸಮಿತಿಯ ಸದಸ್ಯರುಗಳಾದ ಡಾ. ಎಂ. ಚಿದಾನಂದ ಮೂರ್ತಿ, ಡಾ. ಸಿ.ಪಿ. ಕೃಷ್ಣ ಕುಮಾರ್, ಡಾ. ಎಸ್. ವಿದ್ಯಾಶಂಕರ, ಡಾ. ಬಿ.ವಿ. ಮಲ್ಲಾಪುರ, ಡಾ. ವೀರಣ್ಣ ರಾಜೂರ, ಡಾ. ಬಿ.ಆರ್. ಹಿರೇಮಠ ಅವರಿಗೂ ನನ್ನ ವಂದನೆಗಳು. ಈ ಸಂಪುಟದಲ್ಲಿನ ಕೃತಿಗಳ ಮೊದಲ ಸಂಪಾದಕರುಗಳಿಗೆ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಿಗೆ ನನ್ನ ನಮನಗಳು. ಈ ಸಂಪುಟವನ್ನು ಸುಂದರವಾಗಿ ಅಚ್ಚು ಮಾಡಿದ ಸ್ನೇಹಾ ಪ್ರಿಂಟರ್ಸ್‌ನ ಸಿಬ್ಬಂದಿಗೆ ನನ್ನ ವಂದನೆಗಳು.

ಪ್ರಸ್ತುತ ಸಂಪುಟದ ದ್ವಿತೀಯ ಆವೃತ್ತಿಯಾದ ಈ ಸಂಪುಟದಲ್ಲಿ ಸ್ವತಂತ್ರ ಸಿದ್ಧಲಿಂಗೇಶ್ವರರ ೫ ಅಪ್ರಕಟಿತ ವಚನಗಳನ್ನು ಕೂಡಿಸಿ ಪ್ರಕಟಿಸಲಾಗಿದೆ. ಉಳಿದ ನಾಲ್ಕು ವಚನಕಾರರ ವಚನ ಸಂಖ್ಯೆಗಳಲ್ಲಿ ಯಾವ ಬದಲಾವಣೆಯೂ ಇಲ್ಲ. 'ಪ್ರಸ್ತಾವನೆ'ಯನ್ನು ಇತ್ತೀಚಿನ ಸಂಶೋಧನೆಗಳ ಹಿನ್ನೆಲೆಯಲ್ಲಿ ಅದ್ಯಾವತ್ತಾಗುವಂತೆ ಪರಿಷ್ಕರಿಸಲಾಗಿದೆ.

ಎಸ್. ಶಿವಣ್ಣ

*

# ಪರಿವಿಡಿ


ಮುನ್ನುಡಿ

ಬಿನ್ನಹ

ನಿರ್ದೇಶಕರ ಮಾತು

ಪ್ರಕಾಶಕರ ಮಾತು

ಸಂಪಾದಕೀಯ

ಪ್ರಸ್ತಾವನೆ

| | | |
|---|---|---|
| ೧. | ತೋಂಟದ ಸಿದ್ಧಲಿಂಗ ಶಿವಯೋಗಿಗಳ ವಚನಗಳು | ೧ |
| ೨. | ಸರ್ವಶೂನ್ಯನಿರಾಲಂಬಸ್ಥಲ | ೫ |
| ೩. | ಶೂನ್ಯಲಿಂಗಸ್ಥಲ | ೮ |
| ೪. | ನಿಃಕಲಲಿಂಗಸ್ಥಲ | ೧೦ |
| ೫. | ಮಹಾಲಿಂಗಸ್ಥಲ | ೧೪ |
| ೬. | ಅಂಗಲಿಂಗೋದ್ಭವಸ್ಥಲ | ೧೭ |
| ೭. | ಪಂಚಮೂರ್ತಿ ಲಿಂಗಸ್ಥಲದ ವಚನ | ೩೨ |
| ೮. | ಪಿಂಡಸ್ಥಲದ ವಚನ | ೪೦ |
| ೯. | ಪಿಂಡಜ್ಞಾನಸ್ಥಲದ ವಚನ | ೪೬ |
| ೧೦. | ಸಂಸಾರಹೇಯಸ್ಥಲದ ವಚನ | ೫೪ |
| ೧೧. | ಗುರುಕರುಣಸ್ಥಲದ ವಚನ | ೭೨ |
| ೧೨. | ಲಿಂಗಧಾರಣಸ್ಥಲದ ವಚನ | ೭೯ |
| ೧೩. | ವಿಭೂತಿಧಾರಣಸ್ಥಲದ ವಚನ | ೮೬ |
| ೧೪. | ರುದ್ರಾಕ್ಷಿಯಸ್ಥಲದ ವಚನ | ೯೨ |
| ೧೫. | ಪಂಚಾಕ್ಷರೀಸ್ಥಲದ ವಚನ | ೯೪ |
| ೧೬. | ಭಕ್ತಿಸ್ಥಲದ ವಚನ | ೧೦೪ |
| ೧೭. | ಮಾಹೇಶ್ವರಸ್ಥಲದ ವಚನ | ೧೨೮ |

೧೮. ಪ್ರಸಾದಿಸ್ಥಲದ ವಚನ ೧೪೩
೧೯. ಪ್ರಾಣಲಿಂಗಿಸ್ಥಲದ ವಚನ ೧೫೬
೨೦. ಶರಣಸ್ಥಲದ ವಚನ ೨೦೫
೨೧. ಐಕ್ಯಸ್ಥಲದ ವಚನ ೨೬೪
೨೨. ನಿರವಯಸ್ಥಲದ ವಚನ ೩೦೬
೨೩. ಘನಲಿಂಗಿದೇವರ ವಚನಗಳು ೩೧೨
೨೪. ಗುಮ್ಮಳಾಪುರದ ಸಿದ್ಧಲಿಂಗದೇವರ ವಚನಗಳು ೩೭೯
೨೫. ಸ್ವತಂತ್ರ ಸಿದ್ಧಲಿಂಗೇಶ್ವರರ ವಚನಗಳು ೪೦೯
೨೬. ಇಮ್ಮಡಿ ಗುರುಸಿದ್ಧಸ್ವಾಮಿಗಳ ಶೂನ್ಯಮಂತ್ರಗೋಪ್ಯ ೫೭೨

**ಅನುಬಂಧ**

ಕಠಿಣ ಪದಕೋಶ ೬೬೫
ತೋಂಟದ ಸಿದ್ಧಲಿಂಗ ಶಿವಯೋಗಿಗಳ ವಚನಗಳ ಅಕಾರಾದಿ ೬೭೨
ಘನಲಿಂಗಿದೇವರ ವಚನಗಳ ಅಕಾರಾದಿ ೬೮೪
ಗುಮ್ಮಳಾಪುರದ ಸಿದ್ಧಲಿಂಗದೇವರ ವಚನಗಳ ಅಕಾರಾದಿ ೬೮೬
ಸ್ವತಂತ್ರ ಸಿದ್ಧಲಿಂಗೇಶ್ವರರ ವಚನಗಳ ಅಕಾರಾದಿ ೬೮೭
ಶೂನ್ಯಮಂತ್ರಗೋಪ್ಯದ ಅಕಾರಾದಿ ೬೯೩

# ತೋಂಟದ ಸಿದ್ಧಲಿಂಗ ಶಿವಯೋಗಿಗಳ ವಚನಗಳು

೧

ನಿರವಯ ನಿರಾಮಯಂ ನಿರಾಕುಳಂ
ನಿರ್ದ್ವಂದ್ವಂ ನಿರ್ಮಳ ನಿಜಸ್ವರೂಪಂ
ನಿರ್ಭಾವ ನಿಃಪುರುಷ ನಿರಂಜನ ನಿರಾಕಾರಂ
ನಿರಾವರಣ ನಿರುಪಮ ನಿರ್ಗುಣ. ನಿರಾಧಾರ ನಿರಾಲಂಬಂ
ಸರ್ವಾಧಾರ ಸದಾಶಿವಂ ಅತ್ಯತಿಷ್ಠದ್ದಶಾಂಗುಲಂ ನಿತ್ಯನಿಶ್ಚಿಂತಂ;
ನಿರ್ಮಲ ನಿರ್ಮಾಯ ನಿರಾಳಕಂ;
ಹರ ಹರಾ ಶಿವಶಿವಾ ಜಯ ಜಯ ಜಯತು
ಶರಣ ಕರುಣಾಕರ ತ್ರಾಹಿ ಮಾಂ ಭಕ್ತಿವತ್ಸಲ ಮತ್ರಾಣನಾಥ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

೨

ಜ್ಞಾನಗಮ್ಯಂ ದೃಢಪ್ರಾಜ್ಞಂ ದೇವದೇವಂ ತ್ರಿಲೋಚನಂ
ಮಹಾದೇವಂ ಮಹಾತ್ಮಾನಂ ಮಹಾಜ್ಞಾನ ಪರಾತ್‌ಪರಂ
ಮಹಾಪಾಪಹರಂ ದೇವಂ ಮದ್ದೇವ ದೇವ ದೇವಂ
ಹರ ಹರಾ ಶಿವಶಿವಾ ಜಯ ಜಯ ಜಯತು
ಶರಣ ಕರುಣಾಕರ ತ್ರಾಹಿ ಮಾಂ ಭಕ್ತಿವತ್ಸಲ ಮತ್ಪ್ರಾಣನಾಥ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨ ॥

೩

ಕನಕಗಿರಿನಿವಾಸಂ ಕಾಮನಾಶಂ ಕಮಲವೈರಿಭೂಷಂ
ವಿನುತನಾಮಧೇಯಂ ಅನುಪಮಾವತಾರಸಾರಂ
ಪರಮ ವೀರಶೈವಭಕ್ತಿಭಾವಂ ಜನಿತಪುಣ್ಯಕಾಯಂ
ಭವರೋಗವೈದ್ಯಂ ಭವಹರಂ
ಹರ ಹರಾ ಶಿವಶಿವಾ ಜಯ ಜಯ ಜಯತು
ಶರಣ ಕರುಣಾಕರ ತ್ರಾಹಿ ಮಾಂ ಭಕ್ತಿವತ್ಸಲ ಮತ್ಪ್ರಾಣನಾಥ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩ ॥

೪

ಕೆಂಜೆಡೆಯ ಭಾಳನೇತ್ರಂ
ರಂಜಿಪ ರವಿಕೋಟಿ ತೇಜದಿಂದುರವಣಿಪಂ
ಕಂಜಪದಯುಗದೊಳು ಹೊಳೆವುತ್ತಿಹ ನಂಜುಗೊರಳಭವ
ಭವಕುಕ್ಷಿಯೊಳೀರೇಳುಭುವನವಂ ಮಿಗೆ ತಾಳ್ದ
ರಾಕ್ಷಸಹರ ರಕ್ಷಿಸೆನ್ನುವಂ
ಹರ ಹರಾ ಶಿವಶಿವಾ ಜಯ ಜಯ ಜಯತು
ಶರಣ ಕರುಣಾಕರ ತ್ರಾಹಿ ಮಾಂ ಭಕ್ತಿವತ್ಸಲ ಮತ್ಪ್ರಾಣನಾಥ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪ ॥

೫

ಪಂಚವಕ್ತ್ರಂ ದಶಭುಜಂ ದಶಪಂಚನೇತ್ರಂ
ದ್ವಿಪಾದಂ ತನುವೇಕಂ ಶುದ್ಧಸ್ಫಟಿಕಪ್ರದ್ಯುಕ್ತಂ
ಪ್ರಭಾಮಯಮೂರ್ತಿ

ಹರ ಹರಾ ಶಿವಶಿವಾ ಜಯ ಜಯ ಜಯತು
ಶರಣ ಕರುಣಾಕರ ತ್ರಾಹಿ ಮಾಂ ಭಕ್ತಿವತ್ಸಲ ಮತ್ಪ್ರಾಣನಾಥ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫ ॥

೬

ನಾದಪ್ರಿಯಂ ನಾದಮಯಂ ನಾದೋರ್ಲಿಂಗ ನಗೇಶ್ವರಂ
ಆದಿ ಮಧ್ಯಾಂತರಹಿತಂ ವೇದೋ ವೇದವಿದಂ ವರಂ
ಮಂತ್ರಮೂರ್ತಿ ಮಹಾರುದ್ರಂ ಓಮಿತಿ ಜ್ಯೋತಿರೂಪಕಂ
ಹರ ಹರಾ ಶಿವಶಿವಾ ಜಯ ಜಯ ಜಯತು
ಶರಣ ಕರುಣಾಕರ ತ್ರಾಹಿ ಮಾಂ ಭಕ್ತಿವತ್ಸಲ ಮತ್ಪ್ರಾಣನಾಥ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬ ॥

೭

ದನುಜಮನುಜ ದಿವಿಜಲೋಕಭರಿತಂ
ಧರ್ಮಚರಿತಂ ದುರಿತದೂರಂ ವನಧಿವಡಬ ತೇಜೋಮಯಂ
ಪಂಚವಕ್ತ್ರಂ ಪ್ರಪಂಚುರಹಿತಂ ಪರಾತ್ಪರಂ
ಹರ ಹರಾ ಶಿವಶಿವಾ ಜಯ ಜಯ ಜಯತು
ಶರಣ ಕರುಣಾಕರ ತ್ರಾಹಿ ಮಾಂ ಭಕ್ತಿವತ್ಸಲ ಮತ್ಪ್ರಾಣನಾಥ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭ ॥

೮

ಅನಾದಿಗಣೇಶ್ವರನ ಶಿಷ್ಯ ಆದಿಗಣೇಶ್ವರ.
ಆದಿಗಣೇಶ್ವರನ ಶಿಷ್ಯ ನಿರ್ಮಾಯನೆಂಬ ಗಣೇಶ್ವರ.
ನಿರ್ಮಾಯನೆಂಬ ಗಣೇಶ್ವರನ ಶಿಷ್ಯರು ನಿರಂಜನನೆಂಬ ಗಣೇಶ್ವರ.
ನಿರಂಜನನೆಂಬ ಗಣೇಶ್ವರನ ಶಿಷ್ಯರು ಜ್ಞಾನಾನಂದನೆಂಬ ಗಣೇಶ್ವರನು.
ಜ್ಞಾನಾನಂದನೆಂಬ ಗಣೇಶ್ವರನ ಶಿಷ್ಯರು ಆತ್ಮಗಣೇಶ್ವರನು.
ಆತ್ಮಗಣೇಶ್ವರನ ಶಿಷ್ಯರು ಅಧ್ಯಾತ್ಮಗಣೇಶ್ವರ.
ಅಧ್ಯಾತ್ಮಗಣೇಶ್ವರನ ಶಿಷ್ಯರು ರುದ್ರನೆಂಬ ಗಣೇಶ್ವರ.
ರುದ್ರನೆಂಬ ಗಣೇಶ್ವರನ ಶಿಷ್ಯರು ಬಸವಪ್ರಭುದೇವರು.
ಬಸವಪ್ರಭುದೇವರ ಶಿಷ್ಯರು ಆದಿಲಿಂಗದೇವರು.

ಆದಿಲಿಂಗದೇವರ ಶಿಷ್ಯರು ಚೆನ್ನವೀರೇಶ್ವರದೇವರು.
ಚೆನ್ನವೀರೇಶ್ವರದೇವರ ಶಿಷ್ಯರು ಹರದನಹಳ್ಳಿಯ
ಗೋಸಲದೇವರು.
ಹರದನಹಳ್ಳಿಯ ಗೋಸಲದೇವರ ಶಿಷ್ಯರು ಶಂಕರದೇವರು.
ಶಂಕರದೇವರ ಶಿಷ್ಯರು ದಿವ್ಯಲಿಂಗದೇವರು.
ದಿವ್ಯಲಿಂಗದೇವರ ಶಿಷ್ಯರು ಚೆನ್ನಬಸವೇಶ್ವರದೇವರು.
ಚೆನ್ನಬಸವೇಶ್ವರದೇವರ ಕರಕಮಲದಲ್ಲಿ ಉತ್ಪತ್ತಿಯಾದ ಶಿಶು
**ಸಿದ್ಧಲಿಂಗ** ನಾನಯ್ಯ.
ಹೀಂಗೆ ಅನಾದಿವಿಡಿದು ಬಂದ ಗುರು
ಅನಾದಿವಿಡಿದು ಬಂದ ಲಿಂಗ
ಅನಾದಿವಿಡಿದು ಬಂದ ಜಂಗಮ
ಅನಾದಿವಿಡಿದು ಬಂದ ಗುರು-ಶಿಷ್ಯ ಸಂಬಂಧ
ಅನಾದಿವಿಡಿದು ಬಂದ ಪಾದೋದಕ ಪ್ರಸಾದ
ಅನಾದಿವಿಡಿದು ಬಂದ ಭಕ್ತಿ ಜ್ಞಾನ ವೈರಾಗ್ಯ
ಅನಾದಿ ಸಂಸಿದ್ಧವಾದ ವೀರಶೈವಾಚಾರ ಸಂಪತ್ತು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮ ॥

೯

ಯೋಗಿಯಲ್ಲ; ಜೋಗಿಯಲ್ಲ; ಶ್ರವಣನಲ್ಲ; ಸನ್ಯಾಸಿಯಲ್ಲ;
ಕಾಳಾಮುಖಿಯಲ್ಲ; ಪಾಶುಪತಿಯಲ್ಲ;
ಈ ಷಡುದರುಶನಂಗಳಾಚರಣೆಯಲ್ಲ. ಶರಣನಾಚರಣೆ ಬೇರೆ.
ಆದಿಶೈವ, ಮಹಾಶೈವ, ಅನುಶೈವ, ಅಂತರಶೈವ,
ಪ್ರವರಶೈವ, ಅಂತ್ಯಶೈವವೆಂಬ ಈ ಆರು ಶೈವದ ನೀತಿಯಲ್ಲ.
ಇಂತಿವೆಲ್ಲರ ಉತ್ಪತ್ತಿ ಸ್ಥಿತಿ ಲಯಂಗಳಿಗೆ ಕರ್ತ.
ಶುದ್ಧ, ವಿಶೇಷ, ನಿರ್ವಾಣವೆಂದು
ವೀರಶೈವ ಮೂರು ತೆರನಾಗಿಪ್ಪುದು.
ಆ ಮೂರು ತಾನೆ ಆರು ತೆರನಾಗಿ ತೋರಿತ್ತದೆಂತೆಂದೊಡೆ:
ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂದು.
ಇಂತೀ ಆರು ಪ್ರಕಾರದಲ್ಲಿ ವರ್ತಿಸುತ್ತಿಹುದು ವೀರಶೈವ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯ ॥

# ಸರ್ವಶೂನ್ಯನಿರಾಲಂಬಸ್ಥಲ

ಸೂತ್ರ॥ ಇಂತು ಶೈವ ವೀರಶೈವದ ಆದ್ಯಂತ್ಯವನು ಸಂಪಾದಿಸಿ
ಶೈವಭಾಗೆಯನ್ನು ನಿವೃತ್ತಿಮಾಡಿ, ಅನಾದಿಸಂಸಿದ್ಧವಾಗಿ
ಶರಣಂಗೆ ವೀರಶೈವವೇ ಅಧಿಕವೆಂದು ಪ್ರತಿಷ್ಠಿಸಿದ ಶರಣನು
ತನ್ನ ಪರವಸ್ತುವಿನ ಆದ್ಯಂತವನರಿದು ಸ್ಥಲನಿರ್ದೇಶನ
ಮಾಡುತ್ತಿರ್ದನಾಗಿ ಪ್ರಥಮದಲ್ಲಿ
ಸರ್ವಶೂನ್ಯನಿರಾಲಂಬಸ್ಥಲವಾದುದು.

೧೦

ಆದಿ ಮಧ್ಯಾವಸಾನವಿಲ್ಲದಂದು,
ಆದಿ ಅನಾದಿ, ಬಿಂದು, ಕಳೆಗಳಿಲ್ಲದಂದು,
ಸಾವಯ, ನಿರವಯವಿಲ್ಲದಂದು,
ತತ್ವ ಬ್ರಹ್ಮಾಂಡಾದಿ
ಲೋಕಾದಿ ಲೋಕಂಗಳೇನುಯೇನೂ ಇಲ್ಲದಂದು;
ನಿತ್ಯ ನಿರಂಜನ ಪರವಸ್ತು ನೀನೊರ್ಬನೆಯಿದ್ದೆಯಲ್ಲ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

೧೧

ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಚಂದ್ರ, ಸೂರ್ಯ,
ಆತ್ಮನೆಂಬ ಅಷ್ಟತನುಮೂರ್ತಿಸ್ವರೂಪುಗೊಳ್ಳದಂದು,
ನಾನು, ನೀನೆಂಬ ಭ್ರಾಂತಸೂತಕ ಹುಟ್ಟದಂದು,
ನಾಮ, ರೂಪು, ಕ್ರೀಗಳೇನುಯೇನೂ ಇಲ್ಲದಂದು,
ಸರ್ವಶೂನ್ಯವಾಗಿರ್ದೆಯಲ್ಲ ನೀನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨ ॥

೧೨

ವಾಚ್ಯಾವಾಚ್ಯಂಗಳಿಲ್ಲದಂದು,
ಪಕ್ಷಾಪಕ್ಷಗಳಿಲ್ಲದಂದು,

ಸಾಕ್ಷಿ, ಸಭೆಗಳಿಲ್ಲದಂದು,
ಪೃಥ್ವಿ ಆಕಾಶಾದಿಗಳಿಲ್ಲದಂದು,
ಉತ್ಪತ್ತಿ, ಸ್ಥಿತಿ, ಲಯಂಗಳಿಲ್ಲದಂದು,
ಸತ್ವ, ರಜ, ತಮಗಳೆಂಬ ಗುಣತ್ರಯಂಗಳಿಲ್ಲದಂದು,
ಅಹಂಕಾರ ಮಮಕಾರ ಪ್ರಕೃತಿ ಮಹತ್ತು,
ಮಾಯಾಪ್ರಪಂಚು ಮೊಳೆದೋರದಂದು,
ಮಾಯಿಕ, ನಿರ್ಮಾಯಿಕಂಗಳು ಹುಟ್ಟದಂದು,
ಜ್ಞಾನಾಜ್ಞಾನಗಳು ಉದಯವಾಗದಂದು,
ರೂಪು ನಿರೂಪು ಹುಟ್ಟದಂದು,
ಕಾಮ ನಿಃಕಾಮಂಗಳಿಲ್ಲದಂದು,
ಮಾಯಾಮಾಯಂಗಳೇನುಯೇನೂ ಇಲ್ಲದಂದು,
ನಿನ್ನ ನಿರ್ಮಾಯನೆಂದು ಹೆಸರಿಟ್ಟು ಹೇಳುವರಾರೂ ಇಲ್ಲದಂದು,
ನಿಜವು ನಿನ್ನಯ ಘನತೆಯ ನೀನರಿಯದೆ,
ಇದಿರನು ಅರಿಯದೆ, ಏನನು ಅರಿಯದೆ,
ನೀನೆ ನೀನಾಗಿರ್ದೆಯಲ್ಲಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩ ॥

೧೩

ಅಂತರವಿಲ್ಲದಂದು, ಬಾಹ್ಯವಿಲ್ಲದಂದು,
ಅಡಿ, ಮುಡಿ, ಒಡಲು, ಮತ್ತೊಂದೆಡೆಯೇನೂ ಇಲ್ಲದಂದು,
ದೇಶ, ದಿಕ್ಕುಗಳು ವಿಶ್ವಪ್ರಪಂಚುಯೇನೂ ಇಲ್ಲದಂದು,
ಸ್ಥಾವರ ಜಂಗಮಾತ್ಮಕಂಗಳಿಗೆ ಆಧಾರಕರ್ತೃವೆಂಬ
ನಾಮಂಗಳೇನೂ ಇಲ್ಲದಂದು,
ಸರ್ವಶೂನ್ಯನಿರಾಲಂಬವಾಗಿರ್ದೆಯಲ್ಲಾ ನೀನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪ ॥

೧೪

ಸ್ಥೂಲ ಸೂಕ್ಷ್ಮ ಪರತತ್ವವೆಂಬ ನಾಮ ನಿನಗಿಲ್ಲದಂದು,
ನಿನ್ನ ಸ್ಥೂಲನೆಂದು ಕುರುಪಿಡುವ
ಅಜ, ಹರಿ, ಸುರಪತಿ ಮೊದಲಾದ ದೇವತೆಗಳಿಲ್ಲದಂದು,
ನಿನ್ನ ಸೂಕ್ಷ್ಮನೆಂದು ಕುರುಪಿಡುವ
ಮನು ಮುನೀಶ್ವರರಿಲ್ಲದಂದು,

ನಿನ್ನ ಸ್ಥೂಲ ಸೂಕ್ಷ್ಮ ಪರಾತ್ಪರನೆಂದು,
ನಿನ್ನ ಆದಿ ಮಧ್ಯಾವಸಾನ ಅಖಂಡ ಪರಿಪೂರ್ಣತ್ವವನರಿವ,
ಅವಿರಳ ಜ್ಞಾನಸಂಬಂಧಿಗಳಪ್ಪ ಗಣಾಧೀಶ್ವರರಿಲ್ಲದಂದು,
ಇವರಾರೂ ಇಲ್ಲದಂದು
ಅನಾದಿ ಪರಶಿವನೆಂದೆನಲಿಲ್ಲ ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫ ॥

೧೫

ಅಂದಾದಿಬಿಂದು ಉದಯಿಸದಂದು,
ಮಾಯಾಶಕ್ತಿ ಹುಟ್ಟದಂದು,
ಪರಶಿವತತ್ವದಲ್ಲಿ ಚಿತ್ತು ತಲೆದೋರದಂದು,
ಚಿತ್ತಿನಿಂದ ನಾದ ಬಿಂದು ಕಳೆಗಳುದಯವಾಗದಂದು,
ನಾದ ಬಿಂದು ಕಳೆವೊಂದಾಗಿ ಚಿತ್ಪಿಂಡ ರೂಹಿಸದಂದು,
ಶೂನ್ಯ ಮಹಾಶೂನ್ಯವಿಲ್ಲದಂದು,
ನಿಃಕಲ ನಿರಾಳತತ್ವನೆಂಬ ಹೆಸರಿಲ್ಲದಂದು,
ನಿತ್ಯನಿರಂಜನ ನೀನೊರ್ಬನೆಯಿರ್ದೆಯಲ್ಲ ನಿನ್ನ ನೀನರಿಯದೆ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬ ॥

೧೬

ಬಿಂದುಮಾಯಿಕವಿಲ್ಲದಂದು
ಮೂವತ್ತಾರು ತತ್ವಂಗಳುತ್ಪತ್ತಿಯಾಗದಂದು,
ತತ್ ಪದ ತ್ವಂ ಪದ ಅಸಿ ಪದವೆಂಬ ಪದತ್ರಯಂಗಳಿಲ್ಲದಂದು
ತತ್ ಪದವೆ ಲಿಂಗ, ತ್ವಂ ಪದವೆ ಅಂಗ, ಅಸಿ ಪದವೆ ಲಿಂಗಾಂಗಸಂಯೋಗ
ಈ ಅಂಗ ಲಿಂಗ ಸಂಬಂಧವೆಂದು,
ಈ ತತ್ವಮಸ್ಯಾದಿ ವಾಕ್ಯಾರ್ಥವಿಲ್ಲದಂದು,
ಅಲ್ಲಿಂದತ್ತತ್ತ ನೀನು ಪರಾತ್ಪರನು ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭ ॥

# ಶೂನ್ಯಲಿಂಗಸ್ಥಲ

ಸೂತ್ರ॥ ಇಂತು ಸರ್ವಶೂನ್ಯ ನಿರಾಲಂಬವಾದ ಪರವಸ್ತು ಅನಿರ್ವಾಚ್ಯಮಪ್ಪ ಮಹಾಶೂನ್ಯಸ್ಥಲವನೈದಿತ್ತದೆಂತೆಂದೊಡೆ: ಮುಂದೆ ಶೂನ್ಯಲಿಂಗಸ್ಥಲವಾದುದು.

೧೭

ತನುವಿಲ್ಲದಂದಿನ, ಮನವಿಲ್ಲದಂದಿನ,
ಕಾಲಕರ್ಮಂಗಳಿಲ್ಲದಂದಿನ, ಕರಣಂಗಳಿಲ್ಲದಂದಿನ,
ಇಂದ್ರಿಯಂಗಳ ವ್ಯವಹಾರದ ಸುಖವಿಲ್ಲದಂದಿನ,
ಇವೇನುಯೇನೂ ಇಲ್ಲದಂದು,
ನೀನು, ಶೂನ್ಯನಾಗಿರ್ದೆಯಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

೧೮

ಆದಿ ಅನಾದಿಗಳಿಲ್ಲದಂದು,
ನಾದ ಬಿಂದು ಕಳೆ ಮೊಳೆದೋರದಂದು,
ದೇಹ ದೇಹಿಗಳುತ್ಪತ್ತಿಯಾಗದಂದು,
ಜೀವಾತ್ಮ ಪರಮಾತ್ಮರೆಂಬವರಿಲ್ಲದಂದು,
ಸಕಲ ಸಚರಾಚರಂಗಳ ಸುಳುಹಿಲ್ಲದಂದು,
ಇವೇನುಯೇನೂ ಇಲ್ಲದಂದು,
ನೀನು ಶೂನ್ಯನಾಗಿರ್ದೆಯಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨ ॥

೧೯

ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವನೆಂಬ
ಪಂಚಾಧಿದೇವತೆಗಳಿಲ್ಲದಂದು,
ಈ ಪಂಚೈವರ ಲಯ ಗಮನಂಗಳಿಗೆ ಕಾರಣವಾದ
ಶಿವಶಕ್ತಿಗಳಿಲ್ಲದಂದು,

ಈ ಶಿವ ಶಕ್ತಿಗಳಿಗೆ ಕಾರಣವಾದ
ಸತ್ತು ಚಿತ್ತು ಆನಂದ ನಿತ್ಯಪರಿಪೂರ್ಣವೆಂಬ
ನಿಃಕಲತತ್ವವಿಲ್ಲದಂದು,
ನೀನು ಶೂನ್ಯನಾಗಿರ್ದೆಯಯ್ಯಾ,
ಮಹಾಲಿಂಗಗರು ಶಿವಸಿದ್ಧೇಶ್ವರ ಪ್ರಭುವೇ. ॥ ೩ ॥

೨೦

ಅಂಡಜ ಪಿಂಡಜ ಬಿಂದುಜ ಉದಯವಾಗದಂದು,
ಆತ್ಮತತ್ವ ವಿದ್ಯಾತತ್ವ ಶಿವತತ್ವವೆಂಬ
ತತ್ವತ್ರಯಂಗಳ ನಾಮಸೀಮೆಗಳೇನುಯೇನೂ ಇಲ್ಲದಂದು,
ಆಚಾರ ಅನಾಚಾರವಿಲ್ಲದಂದು,
ಸೀಮೆ ನಿಸ್ಸೀಮೆಯಿಲ್ಲದಂದು,
ಗಮನ ನಿರ್ಗಮನವಿಲ್ಲದಂದು,
ಪುಣ್ಯಪಾಪ, ಕರ್ಮಧರ್ಮ, ಸ್ವರ್ಗನರಕ, ಇಹಪರವಿಲ್ಲದಂದು,
ಪರಾತ್ ಪರವಸ್ತು ನೀನೊಬ್ಬನೆ ಇರ್ದೆಯಲ್ಲ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪ ॥

೨೧

ಪಂಚಭೂತಂಗಳುತ್ಪತ್ತಿ ಇಲ್ಲದಂದು,
ಅಂಡಜವಳಯ ರಚಿಸದಂದು,
ಚತುರ್ದಶಭುವನಂಗಳಿಲ್ಲದಂದು,
ಪಂಚಾಶತಕೋಟಿವಿಸ್ತೀರ್ಣದ
ಅನಂತಕೋಟಿ ಬ್ರಹ್ಮಾಂಡಾದಿ
ಲೋಕಾದಿ ಲೋಕಂಗಳೇನುಯೇನೂ ಇಲ್ಲದಂದು,
ನಾನು ನೀನೆಂಬ ವಾಕು ಹುಟ್ಟದಂದು,
ಅನಿರ್ವಾಚ್ಯ ಮಹಾಶೂನ್ಯನಾಗಿರ್ದೆಯಲ್ಲ ನೀನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫ ॥

## ನಿಃಕಲಲಿಂಗಸ್ಥಲ

ಸೂತ್ರ॥ ಇಂತು ಅನಿರ್ವಾಚ್ಯ ಮಹಾಶೂನ್ಯಸ್ಥಲವನೆಯ್ದಿದ [ಪರಾ]ಪರವಸ್ತು ತನ್ನಿಂದ ತಾನೆ ಸ್ವಯಂಭುವಾಗಿ ನಿಃಕಲಲಿಂಗಸ್ಥಲವನಯ್ದಿತ್ತದೆಂತೆಂದೊಡೆ : ಮುಂದೆ ನಿಃಕಲಲಿಂಗಸ್ಥಲವಾದುದು.

೨೨

ತಂದೆಯಿಲ್ಲದ, ತಾಯಿಯಿಲ್ಲದ,
ಹೆಸರಿಲ್ಲದ, ಕುಲವಿಲ್ಲದ,
ಹುಟ್ಟಿಲ್ಲದ, ಹೊಂದಿಲ್ಲದ,
ಅಯೋನಿಸಂಭವ ನೀನಾದಕಾರಣ
ನಿನ್ನ ನಾನು ನಿಃಕಲಲಿಂಗವೆಂದೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

೨೩

ಆದಿಯ ಸಂಗದಲಾದವನ ದೇವರೆಂದೆನ್ನೆ,
ಸಂಗಸುಖದಲಿಪ್ಪವನ ದೇವರೆಂದೆನ್ನೆ,
ಶಕ್ತಿಸಂಪುಟವಾದವನ ದೇವರೆಂದೆನ್ನೆ,
ಇಬ್ಬರಸಂಗದಲಾದವನ ದೇವರೆಂದೆನ್ನೆ,
ಭಾವ ಸದ್ಭಾವ ನಿರ್ಭಾವವೆಂಬ
ಭಾವತ್ರಯವುಳ್ಳವನ ದೇವರೆಂದೆನ್ನೆ,
ಸಗುಣ ನಿರ್ಗುಣವುಳ್ಳವನ ದೇವರೆಂದೆನ್ನೆ,
ಸಗುಣ ನಿರ್ಗುಣಗಳಿಗೆ ಮಿಗೆ ಮಿಗೆಯಾಗಿ ತೋರುವ
ಪರಮಾವ್ಯಯ ನೀನಾದ ಕಾರಣ,
ನಿರವಯಲಿಂಗವೆಂದೆ; ನಿಃಕಲಪರಬ್ರಹ್ಮವೆಂದೆ,
ಏಕಮೇವನದ್ವಿತೀಯ ಪರಾತ್ಪರವೆಂದೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨ ॥

೨೪

ರೂಪಲ್ಲದೆ, ನಿರೂಪಲ್ಲದೆ,
ಸಾವಯನಲ್ಲದೆ, ನಿರವಯನಲ್ಲದೆ,
ನಾಮನಲ್ಲದೆ, ನಿರ್ನಾಮನಲ್ಲದೆ,
ಇವಾವ ಪರಿಯೂ ಅಲ್ಲದ ಕಾರಣ,
ನೀನು ನಿಃಕಲನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩ ॥

೨೫

ಕಾರ್ಯನಲ್ಲ, ಕಾರಣನಲ್ಲ,
ಕಲ್ಪಿತನಲ್ಲ, ನಿರ್ವಿಕಲ್ಪಿತನಲ್ಲ,
ನೆನಹುಮಾತ್ರದಿಂದ ಜಗವ ಸೃಷ್ಟಿಸಿದೆನೆಂಬ
ಭಾವ ಬಣಿತೆಯವಲ್ಲ,
ಇದಿರಿಂಗೆ ತಾನಿಲ್ಲ, ತನಗೆ ಇದಿರಾಗಿ ಒಂದು ವಸ್ತುವಿಲ್ಲ,
ಪ್ರತಿಯಿಲ್ಲದಪ್ರತಿಮ, ಅನುಪಮಮಹಿಮ,
ನಿನ್ನ ನಿಃಕಲನೆಂದೆಂಬರಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪ ॥

೨೬

ಚಿತ್ತ ಬುದ್ಧಿ ಅಹಂಕಾರ ಹುಟ್ಟದಂದು,
ಮನ ಜ್ಞಾನ ಭಾವಂಗಳುತ್ಪತ್ತಿಯಿಲ್ಲದಂದು,
ಜ್ಞಾತೃ ಜ್ಞಾನ ಜ್ಞೇಯಂಗಳು ಹುಟ್ಟದಂದು,
ಜ್ಞಾನ ಸುಜ್ಞಾನ ಮಹಜ್ಞಾನವೆಂಬ,
ವೃತ್ತಿಜ್ಞಾನಂಗಳಿಲ್ಲದಂದು,
ಅಖಂಡ ಪರಿಪೂರ್ಣ ಅದ್ವಯ ನಿಃಕಲ ನಿಜಜ್ಞಾನಮೂರ್ತಿ
ನೀನೆಯಯ್ಯಾ, ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.
॥ ೫ ॥

೨೭

ಎಡನಿಲ್ಲ ಬಲನಿಲ್ಲ, ಹಿಂದಿಲ್ಲ ಮುಂದಿಲ್ಲದ ಕಾರಣ
ಅಡಿಯಿಲ್ಲದ ಮುಡಿಯಿಲ್ಲದ ಒಡಲಿಲ್ಲದ,

ಹಿಡಿಯಲಿಲ್ಲದ, ಬಿಡಲಿಲ್ಲದ, ನೋಡಲಿಲ್ಲದ, ನುಡಿಸಲಿಲ್ಲದ,
ಕೂಡಲಿಲ್ಲದ, ಅಪ್ರತಿಮ ನೀನಾಗಿ,
ಅರುಹಿಲ್ಲದ, ಮರಹಿಲ್ಲದ, ಮಹಾಮಹಿಮ ನೀನಾದಕಾರಣ,
ನಿನ್ನ, ನಿರವಯಲಿಂಗವೆಂದೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬ ॥

೨೮

ನಿರಾಧಾರ ನಿರಾಲಂಬ ಸರ್ವಾಧಾರ
ಸರ್ವಜ್ಞ ಸರ್ವಗತ ಸರ್ವೇಶ್ವರ
ನಿನ್ನ, ನಿರವಯನೆಂದೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭ ॥

೨೯

ಸಾಧ್ಯ ಸಾಧಕರಿಲ್ಲದಂದು,
ಪೂಜ್ಯ ಪೂಜಕರಿಲ್ಲದಂದು,
ದೇವ ಭಕ್ತನೆಂಬ ನಾಮ ತಲೆದೋರದಂದು,
ಉಪಾಸ್ಯ ಉಪಾಸಕರಿಲ್ಲದಂದು,
ಅಂಗಸ್ಥಲ ಲಿಂಗಸ್ಥಲವಾಗದಂದು,
ನಿನ್ನ, ನೀಕಲ ಶಿವತತ್ವವೆಂದೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮ ॥

೩೦

ವೇದ ಶಾಸ್ತ್ರ ಪುರಾಣಾಗಮಂಗಳುದಯವಾಗದಂದು,
ದ್ವೈತಾದ್ವೈತವಿಲ್ಲದಂದು
ಶ್ವೇತ, ಪೀತ, ಹರಿತ, ಮಾಂಜಿಷ್ಠ, ಕಪೋತ,
ಮಾಣಿಕ್ಯವರ್ಣವೆಂಬ
ಈ ಷಡುವರ್ಣಮುಖ್ಯವಾದ ಸಮಸ್ತವರ್ಣಂಗಳಿಲ್ಲದಂದು,
ನೀನು, ವಾಚಾತೀತ ಮನಾತೀತ ವರ್ಣಾತೀತ
ಭಾವಾತೀತ ಜ್ಞಾನಾತೀತನಾಗಿ,
ನೀನು, ನೀಕಲನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯ ॥

೨೧

ಆ ಸತ್ತು ಆ ಚಿತ್ತು ಆ ಆನಂದಾದಿಗಳಿಲ್ಲದಂದು,
ಸಚ್ಚಿದಾನಂದ ಪರಬ್ರಹ್ಮ ನೀನೆಯಾಗಿ
ಎಲ್ಲಾ ತತ್ವಂಗಳಿಗೆ ನೀನದಿಯಾಗಿ, ನಿನಗೊಂದಾದಿಯಿಲ್ಲದೆ
ನೀ, ನಿರಾದಿಯಾದಕಾರಣ
ನಿನ್ನ, ನಿಃಕಲಶಿವತತ್ವವೆಂದರಿದೆನು ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦ ॥

೨೨

ಅಂಗವಾರು, ಲಿಂಗವಾರು
ಶಕ್ತಿಯಾರು, ಭಕ್ತಿಯಾರು,
ಇಂತಿವೆಲ್ಲವ ನಿನ್ನಲ್ಲಿ ಗರ್ಭೀಕರಿಸಿಕೊಂಡು
ಸಚ್ಚಿದಾನಂದ ನಿತ್ಯಪರಿಪೂರ್ಣ ನಿರಂಜನ ನೀನಾದ ಕಾರಣ
ನಿನ್ನ, ನಿಃಕಲಶಿವತತ್ವವೆಂದೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೧॥

## ಮಹಾಲಿಂಗಸ್ಥಲ

ಸೂತ್ರ॥ ಇಂತು ತನ್ನ ಸ್ವಲೀಲೆಯಿಂದ ನಿಃಕಲಲಿಂಗಸ್ಥಲವನೈದಿದ ಪರವಸ್ತು, ತಿಳಿದುಪ್ಪವೆ ಗಟ್ಟಿಗೊಂಡು ಹೆರುಮುಪ್ಪವಾದ ಹಾಂಗೆ, ಅನಂತ ಮೂರ್ತಿಗಳನು ಅನಂತ ತತ್ವಂಗಳನು ಅನಂತ ಕೋಟಿ ಬ್ರಹ್ಮಾಂಡಗಳನು ಸರ್ವೇ ಸಮಸ್ತವೆಲ್ಲವನು ತನ್ನಲ್ಲಿ ಹುಟ್ಟಿಸಿ, ತನ್ನಲ್ಲಿ ಗರ್ಭೀಕರಿಸಿ, ತನ್ನಲ್ಲಿ ಲಯವ ಮಾಡಿಕೊಂಡು, ಅಖಂಡ ಪರಿಪೂರ್ಣ ಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗಸ್ಥಲವನೈದಿತ್ತದೆಂತೆಂದೊಡೆ: ಮುಂದೆ ಮಹಾಲಿಂಗಸ್ಥಲವಾದುದು.

೩೩

ನಿಃಕಲ ಶಿವತತ್ವದಲ್ಲಿ ಜ್ಞಾನಚಿತ್ತು ಉದಯವಾಯಿತ್ತು.
ಆ ಚಿತ್ತಿನಿಂದ ಅಕಾರ ಉಕಾರ ಮಕಾರಂಗಳೆಂಬ
ಅಕ್ಷರತ್ರಯಂಗಳಾದವು.
ಅಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಳೆ.
ಇಂತೀ ತ್ರಿವಿಧಕ್ಕೆ ತಾಯಿ ಚಿತ್ತು.
ಇಂತೀ ನಾಲ್ಕು ಒಂದಾದಲ್ಲಿ ಓಂಕಾರವೆಂಬ
ಪ್ರಣವಮುತ್ಪತ್ತಿಯಾಯಿತ್ತು.
ಆ ಓಂಕಾರವೆಂಬ ಪ್ರಣವವೇ,
ಅಖಂಡ ಪರಿಪೂರ್ಣ ಗೋಳಕಾಕಾರ ತೇಜೋಮೂರ್ತಿಯಪ್ಪ
ಮಹಾಲಿಂಗನೋಡ ಮಹಾಲಿಂಗಗುರು
ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

೩೪

ಪರಶಕ್ತಿ ಶಾಂತಿಯೆನಲು ಪರಶಿವಶಕ್ತಿಯ ನಾಮವೀಗ.
ನಾದ ಬಿಂದು ಕಳೆ ಕಳಾನ್ವಿತ ಈ ನಾಲ್ಕು
ನಿಃಕಲತತ್ವಯೋಗಿಗಳ ಧ್ಯಾನ, ಭಕ್ತರ ಪೂಜೆ.
ವೇದಾಗಮಂಗಳ ಶ್ರುತಕ್ಕೆ ಅತೀತವಾಗಿ, ವಾಙ್ಮನಾತೀತವಾಗಿ,
ಆ ವಾಙ್ಮನಕ್ಕಗೋಚರವಾದ ನಿಃಕಲತತ್ವವೇ
ಸಕಲ ನಿಃಕಲವಾಗಿ ತೋರಿತ್ತದೆಂತೆಂದೊಡೆ:

ಸದಾಶಿವತತ್ವ, ಈಶ್ವರತತ್ವ, ಮಹೇಶ್ವರತತ್ವ ಈ ಮೂರು
ಸಕಲ ನಿಃಕಲತತ್ವಯೋಗಿಗಳ ಧ್ಯಾನವ ಕೈಕೊಂಡು,
ಭಕ್ತರ ಪೂಜೆಯ ಕೈಕೊಂಡು,
ಜಪ ತಪ, ನೇಮ ನಿತ್ಯ, ವೇದಾಗಮಂಗಳ ಸ್ತುತಿಯನು
ಕೈಕೊಂಡು,
ಜಗದುತ್ಪತ್ತಿಕಾರಣ ಪರಶಿವನ ಸಂಕಲ್ಪದಿಂದ,
ನಾದ ಬಿಂದು ಕಳೆ ಸಮೇತವಾಗಿ ಲಿಂಗವೆನಿಸಿತ್ತು.
ಅದಕ್ಕೆ ಕರ ಚರಣಾದ್ಯವಯವಂಗಳಿಲ್ಲ.
ಅಖಂಡ ಪರಿಪೂರ್ಣ ಗೋಳಕಾಕಾರ ತೇಜೋಮೂರ್ತಿ
ಸ್ವರೂಪನುಳ್ಳದು.
ವ್ಯಕ್ತ ಅವ್ಯಕ್ತ ಆನಂದ ಸುಖಮಯವಾಗಿದ್ದಂತಾದು.
ಅನಂತಕೋಟಿ ಬ್ರಹ್ಮಾಂಡಗಳ ತನ್ನಲ್ಲಿ ಗರ್ಭೀಕರಿಸಿಕೊಂಡು,
ಅನಂತಕೋಟಿ ಸೋಮ ಸೂರ್ಯಪ್ರಕಾಶವನುಳ್ಳ
ಪರಂಜ್ಯೋತಿರ್ಲಿಂಗವು
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨ ॥

೩೫

ಸ್ಥಾವರ ಜಂಗಮಾತ್ಮಕಂಗಳ ಲಯ ಗಮನಂಗಳಿಗೆ ಆಧಾರವಾಗಿ
ನಿರ್ಮಲವಾಗಿ, ಸ್ಥಿರವಾಗಿ, ಸರ್ವಸರ್ವಜ್ಞಾನ ಸರ್ವಾತ್ಮಕ
ನಿರ್ವಿಕಾರ ನಿತ್ಯಾತ್ಮಕನಾದ ಪರಮಾತ್ಮಲಿಂಗವು,
"ಪರಂ ಗೂಢಂ ಶರೀರಸ್ಥಂ ಲಿಂಗಕ್ಷೇತ್ರಮನಾದಿವತ್।
ಯಥಾದಿಮೀಶ್ವರಂ ತೇಜಂ ತಲ್ಲಿಂಗಂ ಪಂಚಸಂಜ್ಞಕಂ॥"
ಎಂಬ ಪಂಚಸಂಜ್ಞೆಯನೊಳಕೊಂಡು
"ಅಣೋರಣೀಯಾನ್ ಮಹತೋ ಮಹೀಯಾನ್"
ಎಂದುದಾಗಿ,
ಅಣುವಿಂಗಣು ಮಹತ್ತಕ್ಕೆ ಮಹತ್ತಾಗಿಪ್ಪ ಮಹಾಲಿಂಗದ
ನಿಲುಕಡೆ ಕಾಣ ಮಹಾಲಿಂಗಗುರು
ಶಿವಸಿದ್ಧೇಶ್ವರ ಪ್ರಭುವೇ. ॥ ೩ ॥

೩೬

ಪಂಚಶಕ್ತಿಯನು ಪಂಚಸಾದಾಖ್ಯವನು
ಪಂಚಕಲೆಗಳನು ಪಂಚಾಕ್ಷರಂಗಳನು ಪಂಚಭೂತಾತ್ಮವನು
ತನ್ನಲ್ಲಿ ಗರ್ಭೀಕರಿಸಿಕೊಂಡು

ತಾನು ಚಿದ್ಬ್ರಹ್ಮಾಂಡಾತ್ಮಕನಾಗಿ, ಚಿನ್ಮಯನಾಗಿ,
ಚಿದ್ರೂಪನಾಗಿ, ಚಿತ್ಪ್ರಕಾಶನಾಗಿ, ಚಿದಾನಂದನಾಗಿ
ಸುಖ ದುಃಖ ಮೋಹ ಭಯಂಗಳ ಹೊದ್ದದೆ,
ಸರ್ವವ್ಯಾಪಕನಾಗಿ, ಸರ್ವಚೈತನ್ಯಮಯನಾಗಿಪ್ಪ
ಪರಂಜ್ಯೋತಿರ್ಲಿಂಗವು ಎನ್ನ ಪ್ರಾಣಲಿಂಗವಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪ ॥

೩೭

ಮಹಾಲಿಂಗವೆಂದುಂಟು. ಅದೆಂತಾದುದಯ್ಯಾ ಎಂದಡೆ,
ಸ್ವರಾಕ್ಷರ ವಿಕಲಾಕ್ಷರ ವ್ಯಾಪಕಾಕ್ಷರವೆಂದು ಮೂರುಪ್ರಕಾರ.
ಸ್ವರಾಕ್ಷರವೆಲ್ಲ ನಾದಸಂಬಂಧ.
ವಿಕಲಾಕ್ಷರವೆಲ್ಲ ಬಿಂದುಸಂಬಂಧ.
ವ್ಯಾಪಕಾಕ್ಷರವೆಲ್ಲ ಕಳಾಸಂಬಂಧ.
ನಾದವೇ ಆಕಾರ, ಬಿಂದುವೆ ಉಕಾರ, ಕಳೆಯೆ ಮಕಾರ.
ಈ ನಾದ ಬಿಂದು ಕಳೆಗಳ ಗರ್ಭೀಕರಿಸಿಕೊಂಡಿರ್ಪುದು ಚಿತ್ತು.
ಆ ಚಿತ್‌ಪ್ರಣಮಸ್ವರೂಪವೆ, ಅದ್ವೈ, ತಾನಂದದಿಂದ
ಸಂಪೂರ್ಣವನುಳ್ಳ
ಆದಿಮಹಾಲಿಂಗವು, ಅನುಪಮಲಿಂಗವು, ಅನಾಮಯಲಿಂಗವು,
ಅದ್ವಯಲಿಂಗವು, ಪರಮಲಿಂಗವು, ಪರಾಪರಲಿಂಗವು,
ಪಿಂಡಾಂಡವನೊಳಕೊಂಡ ಅಖಂಡ ಲಿಂಗವು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫ ॥

## ಅಂಗಲಿಂಗೋದ್ಭವಸ್ಥಲ

ಸೂತ್ರ॥ ಇಂತು ಅಖಂಡ ಗೋಳಕಾಕಾರ ಮಹಾಲಿಂಗವು ತನ್ನ ಸ್ವಲೀಲೆಯಿಂದ ಲಿಂಗಸ್ಥಲ ಅಂಗಸ್ಥಲವೆಂದು ಎರಡು ಪ್ರಕಾರವಾಯಿತ್ತಾಗಿ ಮುಂದೆ ಅಂಗಲಿಂಗೋದ್ಭವ ಸ್ಥಲವಾದುದು.

೩೮

ಪ್ರಥಮದಲ್ಲಿ ನಿರಾಕಾರಿಪರವಸ್ತು ತಾನೊಂದೆ.
ಆ ನಿರಾಕಾರ ಪರವಸ್ತುವಿನಲ್ಲಿ ಮಹಾಜ್ಞಾನ ಉದಯವಾಗಿ,
ಆ ಮಹಾಜ್ಞಾನವೇ ಅನಾದಿ ಶರಣರೂಪಾಗಿ,
ಆ ನಿರಾಕಾರ ಪರವಸ್ತುವಿಗೆ ಆಧಾರವಾಗಿ,
ಚಿನ್ನ ಬಣ್ಣದ ಹಾಂಗೆ ಭಿನ್ನವಿಲ್ಲದಿಪ್ಪುದ ನೀ ಬಲ್ಲೆಯಲ್ಲದೆ
ಮತ್ತಾರು ಬಲ್ಲರು ಹೇಳು?
ಆ ನಿರಾಕಾರ ಪರವಸ್ತುವೆ ನಿಃಕಲಲಿಂಗವಾದಲ್ಲಿ,
ಆ ನಿಃಕಲಲಿಂಗದಿಂದ ಜ್ಞಾನಚಿತ್ತು ಉದಯವಾಗಿ,
ಆ ಜ್ಞಾನಚಿತ್ತುವೆ ಶರಣರೂಪಾಗಿ,
ಆ ನಿಃಕಲಲಿಂಗಕ್ಕಾಶ್ರಯವಾಗಿ,
ಚಿದಂಗಸ್ವರೂಪನಾಗಿಪ್ಪುದ ನೀ ಬಲ್ಲೆಯಲ್ಲದೆ
ಮತ್ತಾರು ಬಲ್ಲರು ಹೇಳು?
ಆ ನಿಃಕಲಜ್ಞಾನಚಿತ್ತುವೆ ಬಲಿದು ಚಿಚ್ಛಕ್ತಿಯಾದಲ್ಲಿ,
ಆ ಚಿಚ್ಛಕ್ತಿಯ ಸಂಗದಿಂದ ನೀನು ಮಹಾಲಿಂಗವಾದಲ್ಲಿ,
ಆ ಶಾಂತ್ಯತೀತೋತ್ತರೆಯೆಂಬ ಕಲೆಯಿಂದ ನಾನು ಉದಯವಾಗಿ,
ಆ ಮಹಾಲಿಂಗಕ್ಕಾಶ್ರಯವಾಗಿ,
ಐಕ್ಯನಾಗಿಪ್ಪುದ ನೀ ಬಲ್ಲೆಯಲ್ಲದೆ ಮತ್ತಾರು ಬಲ್ಲರು ಹೇಳು?
ಆ ಚಿಚ್ಛಕ್ತಿಯಿಂದ ಪರಶಕ್ತಿ ಉದಯವಾಗಿ,
ಆ ಪರಶಕ್ತಿಯ ಸಂಗದಿಂದ ನೀನು ಪ್ರಸಾದಲಿಂಗವಾದಲ್ಲಿ,
ಆ ಶಾಂತ್ಯತೀತೆಯೆಂಬ ಕಲೆಯಲ್ಲಿ ನಾನುದಯವಾಗಿ,
ಆ ಪ್ರಸಾದಲಿಂಗಕ್ಕಾಶ್ರಯವಾಗಿ,

ಶರಣರೂಪಾಗಿಪ್ಪುದ ನೀ ಬಲ್ಲೆಯಲ್ಲದೆ ಮತ್ತಾರುಬಲ್ಲರು ಹೇಳು?
ಆ ಪರಶಕ್ತಿಯಿಂದ ಆದಿಶಕ್ತಿ ಉದಯವಾಗಿ,
ಆ ಆದಿಶಕ್ತಿಯ ಸಂಗದಿಂದ ನೀನು ಶುದ್ಧ ಸುಜ್ಞಾನವೆಂಬ
ಜಂಗಮಲಿಂಗವಾದಲ್ಲಿ
ಆ ಶಾಂತಿಯೆಂಬ ಕಲೆಯಲ್ಲಿ ನಾನುದಯವಾಗಿ,
ಆ ಜಂಗಮಲಿಂಗಕ್ಕಾಶ್ರಯವಾಗಿ,
ಪ್ರಾಣಲಿಂಗಿಯಾಗಿಪ್ಪುದ ನೀ ಬಲ್ಲೆಯಲ್ಲದೆ
ಮತ್ತಾರು ಬಲ್ಲರು ಹೇಳು?
ಆ ಆದಿಶಕ್ತಿಯಿಂದ ಇಚ್ಛಾಶಕ್ತಿ ಉದಯವಾಗಿ,
ಆ ಇಚ್ಛಾಶಕ್ತಿಯ ಸಂಗದಿಂದ ನೀನು
ದಿವ್ಯ ಶಿವಲಿಂಗಾಕಾರವಾದಲ್ಲಿ
ಆ ವಿದ್ಯೆಯೆಂಬ ಕಲೆಯಲ್ಲಿ ನಾನುದಯವಾಗಿ,
ಆ ಶಿವಲಿಂಗಕ್ಕಾಶ್ರಯವಾಗಿ,
ಪರಮ ಪ್ರಸಾದಿಯಾಗಿಪ್ಪುದ
ನೀ ಬಲ್ಲೆಯಲ್ಲದೆ ಮತ್ತಾರು ಬಲ್ಲರು ಹೇಳು?
ಆ ಇಚ್ಛಾಶಕ್ತಿಯಿಂದ ಸುಜ್ಞಾನಶಕ್ತಿ ಉದಯವಾಗಿ
ಆ ಸುಜ್ಞಾನಶಕ್ತಿಯ ಸಂಗದಿಂದ ನೀನು ಗುರುಲಿಂಗವಾದಲ್ಲಿ
ಆ ಪ್ರತಿಷ್ಠೆಯೆಂಬ ಕಲೆಯಲ್ಲಿ ನಾನುದಯವಾಗಿ.
ಆ ಗುರುಲಿಂಗಕ್ಕಾಶ್ರಯವಾಗಿ,
ಮಹೇಶ್ವರನಾಗಿಪ್ಪುದ
ನೀ ಬಲ್ಲೆಯಲ್ಲದೆ ಮತ್ತಾರು ಬಲ್ಲರು ಹೇಳು?
ಆ ಸುಜ್ಞಾನಶಕ್ತಿಯಿಂದ ಕ್ರಿಯಾಶಕ್ತಿ ಉದಯವಾಗಿ,
ಆ ಕ್ರಿಯಾಶಕ್ತಿಯ ಸಂಗದಿಂದ ನೀನು ಆಚಾರಲಿಂಗವಾದಲ್ಲಿ
ಆ ನಿವೃತ್ತಿಯೆಂಬ ಕಲೆಯಲ್ಲಿ ನಾನುದಯವಾಗಿ,
ಆ ಆಚಾರಲಿಂಗಕ್ಕಾಶ್ರಯವಾಗಿ,
ಸದ್ಭಕ್ತನಾಗಿಪ್ಪುದ ನೀ ಬಲ್ಲೆಯಲ್ಲದೆ ಮತ್ತಾರು ಬಲ್ಲರು ಹೇಳು?
ನೀ ನಿನ್ನ ಸ್ವಲೀಲೆಯಿಂದ ನಾನಾರೂಪವಾದಲ್ಲಿ
ನಿನ್ನ ಬೆಂಬಳಿವಿಡಿದು ನಾನು ನಾನಾರೂಪಗುತ್ತಿರ್ದೆನಯ್ಯಾ.
ನೀನಾವಾವ ರೂಪಾದೆ ನಾನು ಆ ಆ ರೂಪಾಗುತ್ತಿರ್ದೆನಯ್ಯಾ.
ಇದು ಕಾರಣ, ಶರಣ ಲಿಂಗವೆರಡಕ್ಕೂ ಭಿನ್ನವಿಲ್ಲವೆಂಬುದನು
ಸ್ವಾನುಭಾವವಿವೇಕದಿಂದ ಅರಿದುದು ಅರುಹಲ್ಲದೆ
ಆಗಮಯುಕ್ತಿಯಿಂದ ಅರಿದುದು ಅರುಹಲ್ಲ.
ಅದೇನುಕಾರಣವೆಂದೊಡೆ;

ಶ್ರುತಜ್ಞಾನದಿಂದ ಸಂಕಲ್ಪಭ್ರಾಂತಿ ತೊಲಗದಾಗಿ,
ಈ ಷಡುಸ್ಥಲಮಾರ್ಗವನು
ದ್ವೈತಾದ್ವೈತದೊಳಗೆ ಕೂಡಲಿಕ್ಕಿ ನುಡಿಯಲಾಗದು.
ಈ ಲಿಂಗಾಂಗಸಂಬಂಧ ಸಮರಸೈಕ್ಯವ ತಿಳಿದ ಬಳಿಕ
ನಿತ್ಯನಿರಂಜನ ಪರತತ್ವವು ತಾನೆ ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

೩೯

ಲೋಕಾದಿ ಲೋಕಂಗಳೇನುಯೇನೂ ಇಲ್ಲದಂದು
ಏಕಮೇವಪರಬ್ರಹ್ಮವು ತಾನೊಂದೇ ನೋಡ!
ಅದು ತನ್ನನು ನೆನೆಯದೆ, ಇದಿರನು ನೆನೆಯದೆ
ನೆನಹು ನಿಷ್ಪತ್ತಿಯಾಗಿದ್ದಿತು ನೋಡ.
ಆ ನೆನಹಿಲ್ಲದ ಘನವಸ್ತು ನೆನೆವ ನೆನಹೆ
ಸಾರಯವಾಗಿ ಚಿತ್ತೆನಿಸಿಕೊಂಡಿತ್ತು.
ಅ ಚಿತ್ತೇ, ಸತ್ತು, ಚಿತ್ತು, ಆನಂದ, ನಿತ್ಯ, ಪರಿಪೂರ್ಣ
ಎಂಬ ಐದಂಗವನಂಗೀಕರಿಸಿ,
ನಿಃಕಲ ಶಿವತತ್ವವೆನಿಸಿತ್ತು ನೋಡ.
ಆ ನಿಃಕಲ ಶಿವತತ್ವ ತಾನೊಂದೆ,
ತನ್ನ ಶಕ್ತಿಯ ಚಲನೆಮಾತ್ರದಿಂದ
ಒಂದೆರಡಾಯಿತ್ತು ನೋಡ.
ಅದರೊಳಗೆ ಒಂದು ಲಿಂಗಸ್ಥಲ, ಮತ್ತೊಂದು ಅಂಗಸ್ಥಲ.
ಹೀಂಗೆ ಅಂಗ ಲಿಂಗವೆಂದು, ಉಪಾಸ್ಯ ಉಪಾಸಕನೆಂದು,
ವರ್ತಿಸುತ್ತಿಹುದು ನೋಡ.
ಆ ಪರಶಿವನ ಚಿಚ್ಛಕ್ತಿ ತಾನೆ ಎರಡು ತೆರನಾಯಿತ್ತು.
ಲಿಂಗಸ್ಥಲವನಾಶ್ರಯಿಸಿ ಶಕ್ತಿಯೆನಿಸಿತ್ತು,
ಅಂಗಸ್ಥಲವನಾಶ್ರಯಿಸಿ ಭಕ್ತಿಯೆನಿಸಿತ್ತು.
ಶಕ್ತಿಯೆ ಪ್ರವೃತ್ತಿಯೆನಿತ್ತು;
ಭಕ್ತಿಯೆ ನಿವೃತ್ತಿಯೆನಿಸಿತ್ತು.
ಶಕ್ತಿ ಭಕ್ತಿಯೆಂದೆರಡು ಪ್ರಕಾರವಾಯಿತ್ತು ಶಿವನ ಶಕ್ತಿ.
ಲಿಂಗವಾರು ತೆರನಾಯಿತ್ತು; ಅಂಗವಾರು ತೆರನಾಯಿತ್ತು.
ಶಕ್ತಿಯಾರು ತೆರನಾಯಿತ್ತು; ಭಕ್ತಿಯಾರು ತೆರನಾಯಿತ್ತು.
ಅದು ಹೇಂಗೆಂದಡೆ:
ಮೊದಲಲ್ಲಿ ಲಿಂಗ ಮೂರು ತೆರನಾಯಿತ್ತು.

ಅದು ಹೇಂಗೆಂದಡೆ:
ಭಾವಲಿಂಗವೆಂದು, ಪ್ರಾಣಲಿಂಗವೆಂದು, ಇಷ್ಟಲಿಂಗವೆಂದು,
ಮೂರು ತೆರನಾಯಿತ್ತು.
ಆ ಭಾವಲಿಂಗ, ಪ್ರಾಣಲಿಂಗ, ಇಷ್ಟಲಿಂಗವೆಂಬ ಲಿಂಗತ್ರಯವು
ಒಂದೊಂದು ಲಿಂಗವೆರಡೆರಡಾಗಿ ಆರು ತೆರನಾಯಿತ್ತು.
ಅದು ಹೇಂಗೆಂದಡೆ:
ಭಾವಲಿಂಗವು ಮಹಾಲಿಂಗವೆಂದು, ಪ್ರಸಾದಲಿಂಗವೆಂದು
ಎರಡು ತೆರನಾಯಿತ್ತು.
ಪ್ರಾಣಲಿಂಗವು ಜಂಗಮಲಿಂಗವೆಂದು, ಶಿವಲಿಂಗವೆಂದು
ಎರಡು ತೆರನಾಯಿತ್ತು.
ಇಷ್ಟಲಿಂಗವು ಗುರುಲಿಂಗವೆಂದು, ಆಚಾರಲಿಂಗವೆಂದು
ಎರಡು ತೆರನಾಯಿತ್ತು.
ಹೀಂಗೆ ಒಬ್ಬ ಶಿವನು ಆರು ತೆರನಾದನು.
ಶಾಂತ್ಯತೀತೋತ್ತರೆಯೆಂಬ ಕಲಾಪರಿಯಾಯವನುಳ್ಳ ಚಿಚ್ಛಕ್ತಿ,
ಶಾಂತ್ಯತೀತೆಯೆಂಬ ಕಲಾಪರಿಯಾಯವನ್ನುಳ್ಳ ಪರಾಶಕ್ತಿ,
ಶಾಂತಿಯೆಂಬ ಕಲಾಪರಿಯವನುಳ್ಳ ಆದಿಶಕ್ತಿ,
ವಿದ್ಯಾಕಲಾಪರಿಯಾಯವನುಳ್ಳ ಇಚ್ಛಾಶಕ್ತಿ,
ಪ್ರತಿಷ್ಠಾಕಲಾಪರಿಯಾಯವನುಳ್ಳ ಕ್ರಿಯಾಶಕ್ತಿ.
ನಿವೃತ್ತಿ ಕಲಾಪರಿಯಾಯವನುಳ್ಳ ಜ್ಞಾನಶಕ್ತಿ,
ಹೀಂಗೆ ಒಂದೇ ಶಿವಶಕ್ತಿ ಆರು ತೆರನಾಗಿ,
ಷಟ್‌ಪ್ರಕಾರವಹಂಥಾ ಲಿಂಗಕ್ಕೆ ಅಂಗರೂಪಾಯಿತ್ತು.
ಇದು ಲಿಂಗಷಟ್‌ಸ್ಥಲ.
ಇನ್ನು ಒಂದು ಅಂಗ ಮೂರು ತೆರನಾಯಿತ್ತು.
ಅದು ಹೇಂಗೆಂದಡೆ:
ಯೋಗಾಂಗ, ಭೋಗಾಂಗ, ತ್ಯಾಗಾಂಗವೆಂದು ಮೂರು
ಪ್ರಕಾರವಾಯಿತ್ತು.
ಈ ತ್ರಯಾಂಗ ಒಂದೊಂದು ಎರಡೆರಡಾಗಿ,
ಆರು ತೆರನಾಯಿತ್ತು.
ಅದು ಹೇಂಗೆಂದಡೆ:
ಯೋಗಾಂಗವೆ ಐಕ್ಯನೆಂದು, ಶರಣನೆಂದು ಎರಡು ತೆರನಾಯಿತ್ತು.
ಭೋಗಾಂಗವೆ ಪ್ರಾಣಲಿಂಗಿಯೆಂದು, ಪ್ರಸಾದಿಯೆಂದು
ಎರಡು ತೆರನಾಯಿತ್ತು.
ತ್ಯಾಗಾಂಗವೆ ಮಾಹೇಶ್ವರನೆಂದು, ಭಕ್ತನೆಂದು

ಎರಡು ತೆರನಾಯಿತ್ತು;
ಹೀಂಗೆ ಒಬ್ಬ ಶಿವಶರಣನು ಆರು ತೆರನಾದನು.
ಸಮರಸಭಕ್ತಿ, ಆನಂದಭಕ್ತಿ, ಅನುಭಾವಭಕ್ತಿ, ಅವಧಾನಭಕ್ತಿ,
ನೈಷ್ಠಿಕಾಭಕ್ತಿ, ಸದ್ಭಕ್ತಿ ಎಂದು
ಮಹಾಘನ ಅನುಪಮಭಕ್ತಿ ತಾನೆ ಆರು ತೆರನಾಗಿ,
ಷಟ್‌ಪ್ರಕಾರವಹಂಥ ಶರಣಂಗೆ ಅಂಗರೂಪವಾಯಿತ್ತು.
ಇದು ಅಂಗಷಟ್‌ಸ್ಥಲ.
ಇನ್ನು ಕ್ರಿಯಾಶಕ್ತಿಯಿಂದ ನಿವೃತ್ತಿಕಲೆ-
ಆ ನಿವೃತ್ತಿಕಲೆಯ ಸಂಕಲ್ಪಮಾತ್ರದಿಂದ ಮಾಯಾಶಕ್ತಿ ಪುಟ್ಟಿದಳು.
ಆ ಮಾಯಾಶಕ್ತಿಯಿಂದ ಸಮಸ್ತ ಜಗತ್ತಿನ ಉತ್ಪತ್ತಿ.
ಅಂಗವೆಂದಡೆ ಶರಣ; ಲಿಂಗವೆಂದಡೆ ಶಿವ.
ಆ ಶರಣಂಗೆ ಆ ಲಿಂಗವು ಆವಾಗವು ಪ್ರಾಣವು.
ಆ ಲಿಂಗಕ್ಕೆ ಆ ಶರಣ ಆವಾಗವೂ ಅಂಗವು.
ಈ ಶರಣ ಲಿಂಗವೆರಡಕ್ಕೂ ಬೀಜವೃಕ್ಷನ್ಯಾಯದ ಹಾಂಗೆ ಅಲ್ಲದೆ,
ಭಿನ್ನವಿಲ್ಲ.
ಇದು ಕಾರಣ, ಅನಾದಿಯಿಂದವು
ಶರಣನೆಂದಡೆ ಲಿಂಗ, ಲಿಂಗವೆಂದಡೆ ಶರಣ.
ಈ ಶರಣ ಲಿಂಗವೆರಡಕ್ಕೂ ಭೇದವಿಲ್ಲವೆಂಬುದನು
ಸ್ವಾನುಭಾವವಿವೇಕದಿಂದ ಅರಿದುದು ಅರುಹಲ್ಲದೆ,
ಆಗಮಯುಕ್ತಿಯಿಂದ ಅರಿದುದು ಅರುಹಲ್ಲ.
ಅದೇನು ಕಾರಣವೆಂದಡೆ;
ಶಾಸ್ತ್ರಜ್ಞಾನದಿಂದ ಸಂಕಲ್ಪ ಹಿಂಗದಾಗಿ.
ಈ ಷಟ್‌ಸ್ಥಲಮಾರ್ಗವು ದ್ವೈತಾದ್ವೈತದ ಪರಿವರ್ತನೆಯಲ್ಲ.
ಅದೇನು ಕಾರಣವೆಂದಡೆ;
ಇದು ಶಿವಾದ್ವೈತಮಾರ್ಗವಾದ ಕಾರಣ.
ಈ ಲಿಂಗಾಂಗಸಂಬಂಧ ಸಮರಸೈಕ್ಯವ ತಿಳಿದ ಬಳಿಕ
ಬೊಮ್ಮ ಪರಬೊಮ್ಮವೆಂದು ಬೇರುಂಟೆ ತಾನಲ್ಲದೆ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨ ॥

೪೦

ಸದ್ರೂಪು ಶರಣನಲ್ಲದೆ, ಅಸದ್ರೂಪು ಶರಣನಲ್ಲ.
ಚಿದ್ರೂಪು ಶರಣನಲ್ಲದೆ, ಅಚಿದ್ರೂಪು ಶರಣನಲ್ಲ.
ಆನಂದಸ್ವರೂಪು ಶರಣನಲ್ಲದೆ, ಅನಾನಂದಸ್ವರೂಪು ಶರಣನಲ್ಲ.

ಇದು ಕಾರಣ ನಿಮ್ಮ ಶರಣರು
ಪರಮ ನಿರ್ಮಲ ಸಚ್ಚಿದಾನಂದ ನಿತ್ಯ ಪರಿಪೂರ್ಣ
ಪರಶಿವ ಸ್ವರೂಪ ತಾನೆ ನೋಡಾ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩ ॥

೪೧

ಸದ್ರೂಪವೇ ಸಂಗನಬಸವಣ್ಣ ನೋಡ.
ಚಿದ್ರೂಪವೇ ಚೆನ್ನಬಸವಣ್ಣ ನೋಡ.
ಆನಂದ ಸ್ವರೂಪವೇ ಪ್ರಭುದೇವರು ನೋಡ.
ಇದು ಕಾರಣ,
ಸದ್ರೂಪವಾದ ಸಂಗನ ಬಸವಣ್ಣನೇ ಗುರು;
ಚಿದ್ರೂಪವಾದ ಚೆನ್ನಬಸವಣ್ಣನೇ ಲಿಂಗ;
ಆನಂದ ಸ್ವರೂಪವಾದ ಪ್ರಭುದೇವರೇ ಜಂಗಮವು ನೋಡ.
ನಿತ್ಯ ನಿರಂಜನ ಪರತತ್ವ ತಾನೆ ಮೂರು ತೆರನಾಯಿತ್ತು ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪ ॥

೪೨

ಸೂರ್ಯನಿಂದ ತೋರಿದ ಕಿರಣಂಗಳಿಗೂ
ಆ ಸೂರ್ಯನಿಗೂ ಭಿನ್ನವುಂಟೇ?
ಚಂದ್ರನಿಂದ ತೋರಿದ ಕಲೆಗೆ ಆ ಚಂದ್ರನಿಗೂ ಭಿನ್ನವುಂಟೇ?
ಅಗ್ನಿಯಿಂದ ತೋರಿದ ಕಾಂತಿಗೂ ಆ ಅಗ್ನಿಗೂ ಭಿನ್ನವುಂಟೇ?
ಜ್ಯೋತಿಯಿಂದ ತೋರಿದ ಬೆಳಗಿಗೂ
ಆ ಜ್ಯೋತಿಗೂ ಭಿನ್ನವುಂಟೇ?
ಅಗಮ್ಯ, ಅಗೋಚರ, ಅಪ್ರಮಾಣ, ಅಪ್ರತಿಮ ಮಹಾಲಿಂಗದಲ್ಲಿ
ಜ್ಯೋತಿಯಿಂದ ಜ್ಯೋತಿ ಉದಯಿಸಿದಂತೆ ಉದಯಿಸಿದ
ಶರಣಂಗೂ ಆ ಮಹಾಲಿಂಗಕ್ಕೂ ಭಿನ್ನವುಂಟೇ?
ಇದ ಬೇರೆಂಬ ಅರೆಮರುಳುಗಳನೇನೆಂಬೆನಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫ ॥

೪೩

ಆದಿಯಲ್ಲಿ ಶಿವಬೀಜ ತಾನಲ್ಲದಿರ್ದಡೆ
ಗುರೂಪದೇಶ ದೊರಕೊಂಡ ಪರಿಯೆಂತೋ?

ಆದಿಯಲ್ಲಿ ಶಿವಬೀಜ ತಾನಲ್ಲದಿರ್ದಡೆ
ಲಿಂಗ ಸಂಬಂಧ ದೊರಕೊಂಡ ಪರಿಯೆಂತೋ?
ಆದಿಯಲ್ಲಿ ಶಿವಬೀಜ ತಾನಲ್ಲದಿರ್ದಡೆ,
ಜಂಗಮ ಪ್ರಾಣಿಯಾದ ಪರಿಯೆಂತೋ?
ಆದಿಯಲ್ಲಿ ಶಿವಬೀಜ ತಾನಲ್ಲದಿರ್ದಡೆ,
ಪಾದೋದಕ ಪ್ರಸಾದ ಸಂಬಂಧಿಯಾದ ಪರಿಯೆಂತೋ?
ಆದಿಯಲ್ಲಿ ಶಿವಬೀಜ ತಾನಲ್ಲದಿರ್ದಡೆ,
ವಿಭೂತಿ, ರುದ್ರಾಕ್ಷಿ, ಪಂಚಾಕ್ಷರಧಾರಣವಾದ ಪರಿಯೆಂತೋ?
ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ,
ರುದ್ರಾಕ್ಷಿ, ಪ್ರಣವಪಂಚಾಕ್ಷರಿ
ಈ ಎಂಟು, ಶುದ್ಧ ಚಿದ್ರೂಪ ಪರಶಿವ ತಾನೇ ನೋಡಾ!
ಆ ಪರಶಿವಬೀಜವೇ ಚಿತ್ತು.
ಆ ಚಿತ್ತಿನ ಪ್ರಭೆಯಲ್ಲಿ ಶರಣನು ಉದಯಿಸಿದನು.
ಇದು ಕಾರಣ, ಆದಿಯಲ್ಲಿ ಶಿವಬೀಜ ಶರಣನಾದ ಕಾರಣ
ಶುದ್ಧ ನಿರ್ಮಲನು ನೋಡಾ ಶರಣನು,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ ॥ ೬ ॥

೪೪

ಸತ್ಯ 'ಜ್ಞಾನಮನಂತ ಬ್ರಹ್ಮ'ವೆಂಬ
ಸತ್ತು ಚಿತ್ತಾನಂದ ನಿತ್ಯಪರಿಪೂರ್ಣನಪ್ಪ ಪರಶಿವನ
ಚಿತ್ಪ್ರಾಣಶಕ್ತಿಯಿಂದ
ಪರಮ ಜ್ಞಾನಶಕ್ತಿ ಉದಯಿಸಿದಳು ನೋಡ.
ಆ ಪರಿಪೂರ್ಣಪ್ರಕಾಶ ಜ್ಯೋತಿರ್ಮಯ ಚಿದಗ್ನಿಸ್ವರೂಪವನುಳ್ಳ,
ಸಮ್ಯಜ್ಞಾನದಲ್ಲಿ,
ಶರಣನ ಉತ್ಪತ್ತಿ, ಶರಣನ ಸ್ಥಿತಿ, ಶರಣನ ಲಯ ಕಾಣಿಭೋ.
ಆ ಸದಮಲಾನಂದಚಿದ್ಬ್ರಹ್ಮಾಂಡಾತ್ಮಕ ತಾನೆಂಬುದನು
ಶ್ರೀಗುರುವಿನ ಮುಖದಿಂದ ಅರಿದು ನಿಶ್ಚಯಿಸಿದ ಬಳಿಕ
ತಾನೆ ನಿರಂತರ ನಿತ್ಯಮುಕ್ತನು; ಅನಾದಿ ಕೇವಲ ಮುಕ್ತನು;
ಶುದ್ಧ ನಿಃಕಲ ನಿರವಯ ನಿರಾಮಯನು ನೋಡಾ ಶರಣನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ ॥ ೭ ॥

೪೫

ವೇದಾಂತ ಸಿದ್ಧಾಂತವಪ್ಪ ತರ್ಕಮರ್ಕಟ ವಿಧಿಯ
ದರ್ಶನವಾದಿಗಳ ಪರಿ ವರ್ತನೆಯಲ್ಲ; ಶರಣನ ವರ್ತನೆ ಬೇರೆ.

ವೀರಶೈವ ಸಿದ್ಧಾಂತ ನಿರ್ಣಯ ನಿಜಭಕ್ತಿ.
ನಿಜ ಶಿವಜ್ಞಾನ, ಪರಮ ವೈರಾಗ್ಯವನುಳ್ಳ
ಸರ್ವಾಚಾರ ಸಂಪನ್ನ ಶರಣ.
ಲಿಂಗಾತ್ಮಕ, ಲಿಂಗೇಂದ್ರಿಯ, ಲಿಂಗಾಂಗಸಂಗಿ, ಘನಲಿಂಗಯೋಗಿ.
ಪ್ರಾಣಮುಕ್ತ, ಮನೋಮುಕ್ತ, ಶರೀರಮುಕ್ತ.
ಅನಾದಿ ಕೇವಲ ಮುಕ್ತರಯ್ಯಾ ನಿಮ್ಮ ಶರಣರು.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮ ॥

೪೬

ಆದಿಪರಮೇಶ್ವರನು ತನ್ನ ವಿನೋದಾರ್ಥ ಕಾರಣ
ಶರಣನಾಗಿ ತೋರಿದರೆ,
ಭೇದವ ಮಾಡಿ ನುಡಿವ ವಾದಿಗಳ ಬಾಯಲ್ಲಿ ಕೆರಹನಿಕ್ಕುವೆನು.
ಅನಾದಿ ಪರಶಿವನು ತಾನೆ ಶರಣನೆಂಬ ವಾಕ್ಯ
ಸತ್ಯ ಕಂಡಯ್ಯ, ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.
॥ ೯ ॥

೪೭

ಚಿನ್ಮಯ ವಸ್ತುವಿನಿಂದ ಚಿದ್ಬಿಂದು ಉದಯಿಸಿತ್ತು.
ಆ ಚಿತ್ತಿನ ಪ್ರಭೆಯಲ್ಲಿ ಶರಣನುದಯಿಸಿದನು.
ಇದು ಕಾರಣ,
ಚಿನ್ಮಯ, ಚಿದ್ರೂಪ, ಚಿತ್‌ಪ್ರಕಾಶ,
ಚಿದಾತ್ಮನೆ ಶರಣನೆಂಬ ವಾಕ್ಯ ಸತ್ಯಕಂಡಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ! ॥ ೧೦ ॥

೪೮

ಅದಿ ಅನಾದಿಗಳೇನೂ ಇಲ್ಲದ ನಿರುಪಮ ಲಿಂಗದಲ್ಲಿ
ಅನುಪಮಭಕ್ತಿ ಜನಿಸಿತ್ತು ನೋಡ.
ಆ ಭಕ್ತಿಯ ಗರ್ಭದಲ್ಲಿ ಸತ್ಯಶರಣನುದಯಿಸಿದನು.
ಇದು ಕಾರಣ,
ಅನಾದಿ ಕೇವಲ ಮುಕ್ತನೇ ಶರಣನೆಂಬ ವಾಕ್ಯ
ಸತ್ಯಕಂಡಯ್ಯ, ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.
॥ ೧೧ ॥

೪೯

ಅನಾದಿಕರ್ಮಿಗಳಾಗಿ, ಅವಾಂತರ ಮುಕ್ತರಾದೆವೆಂದು
ಭೇದವಮಾಡಿ ನುಡಿವವರೆಲ್ಲ
ಭವಬಾಧೆಯಲ್ಲಿ ಮುಳುಗಿ, ಭವಪಾಶಂಗಳು ಹರಿಯದೆಯಿಪ್ಪ
ಪಶುಭಾವದ ಪರಿಯ ನೋಡ.
ಇದು ಕಾರಣ,
ಆದಿಯಲ್ಲಿಯು ಮುಕ್ತರು, ಅನಾದಿಯಲ್ಲಿಯು ಮುಕ್ತರು,
ಎಂದೆಂದೂ ಮುಕ್ತರಯ್ಯ ನಿಮ್ಮ ಶರಣರು.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೨ ॥

೫೦

ಅನಾದಿ ಭವಿಗಳಾಗಿ ಅವಾಂತರ ಭಕ್ತರಾದೆವೆಂಬವರೆಲ್ಲ
ಹುಟ್ಟದ ಯೋನಿಯಲ್ಲಿ ಹುಟ್ಟಿ, ಮೆಟ್ಟದ ಭೂಮಿಯ ಮೆಟ್ಟಿ,
ಉಣ್ಣದ ಆಹಾರವನುಂಡು, ಕಾಣದ ಕರ್ಮಂಗಳ ಕಂಡು,
ಭವ ಭವದಲ್ಲಿ ಭಂಗಬಡುತಿಪ್ಪುದು ತಪ್ಪದು ನೋಡ.
ಇದು ಕಾರಣ,
ಆದಿಯಲ್ಲಿಯೂ ಭಕ್ತರು, ಅನಾದಿಯಲ್ಲಿಯೂ ಭಕ್ತರು.
ಎಂದೆಂದೂ ಭಕ್ತಿಸಮರಸರಾಗಿ ಭೇದವಾದಿಗಳಲ್ಲ ನಿಮ್ಮ
ಶರಣರು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೩ ॥

೫೧

ಅನಾದಿಮಲಿನರಾಗಿ, ಆದಿ ನಿರ್ಮಲರಾದೆವೆಂದು,
ನಿಮ್ಮ ಶರಣರಿಗೆ ಮಾಯಾಕರ್ಮವ ಕಲ್ಪಿಸಿ ನುಡಿವ
ಮಾದಿಗರನೆನಗೊಮ್ಮೆ ತೋರದಿರು.
ಇದು ಕಾರಣ,
ಅನಾದಿ ನಿತ್ಯ ನಿಶ್ಚಿಂತ ನಿರ್ಮಲ ನಿರಾವರಣರು ನಿಮ್ಮ ಶರಣರು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೪ ॥

೫೨

ಚಿನ್ನದಿಂದಾದ ಬಂಗಾರ ಚಿನ್ನದ ರೂಪಲ್ಲದೆ ಮತ್ತೊಂದು
ರೂಪಾಗಬಲ್ಲುದೆ ಹೇಳಾ?

ಲಿಂಗಮುಖದಿಂದ ಉದಯವಾದ ಶರಣರು
ಲಿಂಗದ ರೂಪಲ್ಲದೆ,
ಮತ್ತೊಂದು ರೂಪೆಂದೆನಬಹುದೇ? ಎನಲಾಗದು ನೋಡ.
ಶಿವನ ಅಂಶವಾದ ಶರಣರಿಗೆ ಮಲಿನಭಾವ ಕಲ್ಪಿಸುವ
ಮಹಾಪಾತಕರಿಗೆ ನಾಯಕನರಕ ತಪ್ಪದು ಕಾಣ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೫ ॥

೫೭

ಅನಾದಿ ಪರಶಿವತತ್ವದಿಂದ ಚಿತ್ತು ಉದಯವಾಯಿತ್ತು;
ಆ ನಿರ್ಮಲಮಹಾಜ್ಞಾನಚಿತ್‌ಸ್ವರೂಪವೇ ಬಸವಣ್ಣ ನೋಡ.
ಆ ಬಸವಣ್ಣನಿಂದ ನಾದ ಬಿಂದು ಕಳೆ.
ಆ ನಾದ ಬಿಂದು ಕಳೆ ಸಮರಸವಾಗಿ
ಅಖಂಡಪರಿಪೂರ್ಣಗೋಳಕಾಕಾರ ತೇಜೋಮೂರ್ತಿ
ಲಿಂಗಸ್ವರೂಪವಾಯಿತ್ತು ನೋಡ.
ಆ ಮಹಾಲಿಂಗದ ಪಂಚಸಾದಾಖ್ಯಮೂರ್ತಿ
ಉತ್ಪತ್ತಿಯಾಯಿತ್ತು ನೋಡ.
ಇದು ಕಾರಣ,
ಅನಾದಿಶರಣ ಆದಿಲಿಂಗವೆಂದೆ
**ಬಸವಣ್ಣನಿಂದ ಲಿಂಗವಾದ ಕಾರಣ.**
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೬ ॥

೫೮

ಲಿಂಗ ಜಂಗಮ ಭಕ್ತನೆಂದು ಈ ಮೂರಾದುದು
ಒಂದೇ ವಸ್ತು ನೋಡ.
ಚಿನ್ನಾದ ಸ್ವರೂಪವೇ ಜಂಗಮ.
ಚಿದ್ಬಿಂದು ಸ್ವರೂಪವೇ ಲಿಂಗ.
ಈ ನಾದ ಬಿಂದುವಿಂಗೆ ಆಧಾರವಾದ ಚಿತ್ಕಲಾ ಸ್ವರೂಪವೇ
ಚಿನ್ಮಯ ಭಕ್ತನು ನೋಡ.
ಶಿವಂಗೂ ಭಕ್ತಂಗೂ ಭಿನ್ನಮುಂಟೆ?
ಆ ಭಕ್ತಿಗೂ ಭಕ್ತಂಗೂ ಭೇದವುಂಟೆ?
ಇಲ್ಲವಾಗಿ-

ದೇವ ಬೇರೆ ಭಕ್ತ ಬೇರೆ ಎಂಬ ಕರ್ಮಕಾಂಡಿಗಳ ಮತವಂತಿರಲಿ.
ನಿಮ್ಮ ಶರಣರಿಗೆ ನಿಮಗೆ ಭಿನ್ನವಿಲ್ಲವೆಂದೆನು ಕಾಣ.
ಶರಣನೇ ಸಾಕ್ಷಾತ್ ಶಿವ ತಾನೇ ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೭ ॥

೫೫

ನಂದೀಶ್ವರ, ಭೃಂಗೀಶ್ವರ, ವೀರಭದ್ರ,
ದಾರುಕ, ರೇಣುಕ, ಶಂಖುಕರ್ಣ, ಗೋಕರ್ಣ,
ಏಕಾಕ್ಷರ, ತ್ರಯಕ್ಷರ, ಪಂಚಾಕ್ಷರ, ಷಡಕ್ಷರ,
ಸದಾಶಿವ, ಈಶ್ವರ, ಮಹೇಶ್ವರ, ರುದ್ರ,
ಘಂಟಾಕರ್ಣ, ಗಜಕರ್ಣ,
ಏಕಮುಖ ದ್ವಿಮುಖ, ತ್ರಿಮುಖ, ಚತುರ್ಮುಖ, ಪಂಚಮುಖ,
ಷಣ್ಮುಖ, ಶತಮುಖ, ಸಹಸ್ರಮುಖ ಮೊದಲಾದ
ಗಣಾಧೀಶ್ವರರು ಇವರು,
ನಿತ್ಯಪರಿಪೂರ್ಣವಹಂಥ ಪರಶಿವತತ್ವದಲ್ಲಿ
ಜ್ಯೋತಿಯಿಂದ ಜ್ಯೋತಿ ಉದಿಸಿದಂತೆ ಉದಯಿಸಿದ
ಶುದ್ಧ ಚಿದ್ರೂಪರಪ್ಪ ಪ್ರಮಥರು.
ಅನಾದಿಮುಕ್ತರಲ್ಲ, ಅವಾಂತರಮುಕ್ತರೆಂಬ ನಾಯ ನಾಲಗೆಯ
ಹದಿನೆಂಟುಜಾತಿಯ ಕೆರಹಿನಟ್ಟಿಗೆ ಸರಿಯೆಂಬೆ.
ಆ ಶ್ವಾನಜ್ಞಾನಿಗಳಪ್ಪವರ ಶೈವಪಶುಮತವಂತಿರಲಿ,
ಅವರಾಗಮವಂತಿರಲಿ.
ನಿಮ್ಮ ಶರಣರಿಗೆ, ನಿಮಗೆ, ಬೇರೆ ಮಾಡಿ ಸಂಕಲ್ಪಿಸಿ ನುಡಿವ
ಅಜ್ಞಾನಿ ಹೊಲೆಯರ ಎನಗೊಮ್ಮೆ ತೋರದಿರಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೮ ॥

೫೬

ಶಿವನೇ ಶರಣ, ಶರಣನೇ ಶಿವನೆಂದೆಂಬರು.
ಹೀಗೆಂದೆಂಬುದು ಶ್ರುತಪ್ರಮಾಣದ ವಾಚಾಳಕತ್ವವಲ್ಲದೆ
ಪರಮಾರ್ಥವಲ್ಲ ನೋಡ.
ಶರಣನೇ ಲಿಂಗವೆಂಬುದು ಏಕಾರ್ಥವಾದಡೆ,
ಇತರ ಮತದ ದ್ವೈತಾದ್ವೈತ ಶಾಸ್ತ್ರವ ಕೇಳಿ,

ಅಹುದೋ ಅಲ್ಲವೋ, ಏನೋ ಎಂತೋ ಎಂದು
ಸಂದೇಹಿಸಿದಲ್ಲಿ ಅದು ಅಜ್ಞಾನ ನೋಡಾ.
ಶಿವಜ್ಞಾನ ಉದಯವಾದ ಶರಣರ
ಆದಿ ಮಧ್ಯಾವಸಾನವರಿದು, ನಿಶ್ಚಯಿಸಿ, ನೆಲೆಗೊಂಡ ಬಳಿಕ
ಇತರ ಮತದ ವೇದ ಶಾಸ್ತ್ರ ಪುರಾಣ ಆಗಮಂಗಳ
ಶ್ರುತಿ ಭ್ರಾಂತಿಗೆ ಭ್ರಮೆಗೊಂಬನೆ ನಿಭ್ರಾಂತನಾದ ನಿಜಲಿಂಗೈಕ್ಯನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೯ ॥

೫೭

ಸೂರ್ಯನ ಬೆಳಗಿಂಗೆ
ಕೊಳ್ಳಿಯ ಬೆಳಗ ಹಿಡಿಯಲುಂಟೇ ಮರುಳೆ?
ತನ್ನ ಮುಖವ ತಾ ಬಲ್ಲವಂಗೆ
ಕನ್ನಡಿಯ ಹಿಡಿದು ನೋಡಲುಂಟೇ ಹೇಳಾ.
ತನ್ನ ಸುಳುಹಿನ ಸೂಕ್ಷ್ಮವ ತಾನರಿದ ಸ್ವಯಜ್ಞಾನಿಗೆ
ಇನ್ನಾವ ಆಗಮಬೋಧೆಯೇಕೆ ಹೇಳ?
ಅಗಮಶಿಕ್ಷೆಯೆಂಬುದು ಲೋಗರಿಗಲ್ಲದೆ,
ಆದಿಯಲ್ಲಿ ಶಿವಬೀಜವಾದ ಮಹಾಮಹಿಮರಿಗುಂಟೇ?
ಸ್ವಾನುಭಾವಜ್ಞಾನ ಎಲ್ಲರಿಗೂ ಇಲ್ಲವಲ್ಲಾ.
ಇಲ್ಲದಿರ್ದಡೆ ಮಾಣಲಿ, ಅದಕ್ಕೇನು ಕೊರತೆಯಿಲ್ಲ.
ಮತಾಂತರ ಶಾಸ್ತ್ರಾಗಮಂಗಳ ಮುಟ್ಟಲಾಗದು.
ಅದೇನು ಕಾರಣವೆಂದಡೆ:
ಅವರಂಗದ ಮೇಲೆ ಗುರು ಲಿಂಗ ಜಂಗಮ ಪಾದೋದಕ
ಪ್ರಸಾದವಿಲ್ಲದ ಕಾರಣ.
ಆ ಆಗಮದಲ್ಲಿ ಜಂಗಮಪ್ರಸಾದವ ಲಿಂಗಕ್ಕರ್ಪಿಸಿ,
ಕೊಟ್ಟು ಕೊಳಬೇಕೆಂಬ ಪ್ರಮಾಣವ ಹೇಳವಾಗಿ.
ಛಿಃ, ಅವೆಲ್ಲಿಯ ಆಗಮ, ಅವು ಅಂಗಲಿಂಗ ಸಂಬಂಧಿಗಳಿಗೆ
ಮತವೇ? ಅಲ್ಲ.
ಸದ್ಗುರುವಿನ ವಚನ ಪ್ರಮಾಣೇ? ಅಲ್ಲ.
ಗುರುವಚನ ಪ್ರಮಾಣವಲ್ಲದ ಮಾರ್ಗವ ಹಿಡಿದು
ಆಚರಿಸುವರೆಲ್ಲರು ಗುರುದ್ರೋಹಿಗಳು.
ಎಲೆ ಶಿವನೇ, ನೀ ಸಾಕ್ಷಿಯಾಗಿ ಅಂಗಲಿಂಗ ಸಂಬಂಧಿಗಳಿಗೆ
ಪರಮ ವೀರಶೈವಾಗಮವೇ ಪ್ರಮಾಣು.

ಪುರಾತನರ ಮಹಾವಾಕ್ಯವೇ ಪ್ರಮಾಣು.
ಉಳಿದುವೆಲ್ಲ ಹುಸಿ ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೦ ॥

೫೮

ಸುಧೆಯೊಳಗೆ ವಿಷವುಂಟೆ? ಮಧುರದೊಳಗೆ ಕಹಿಯುಂಟೆ?
ದಿನಮಣಿಯೊಳಗೆ ಕಪ್ಪುಂಟೆ? ಬೆಳದಿಂಗಳೊಳಗೆ ಕಿಚ್ಚುಂಟೆ?
ಅಮೃತಸಾಗರದೊಳಗೆ ಬೇವಿನ ಬಿಂದುವುಂಟೆ?
ಮಹಾಜ್ಞಾನಸ್ವರೂಪರಪ್ಪ ಶರಣರೇ ಲಿಂಗವೆಂದರಿದ ಮಹಾತ್ಮಂಗೆ
ಸಂಕಲ್ಪ ಭ್ರಮೆಯುಂಟೆ? ಅದೇತರ ವಿಶ್ವಾಸ? ಸುಡು ಸುಡು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೧ ॥

೫೯

ಸ್ವಯಾಧೀನಮುಕ್ತನೆಂಬವನೊಬ್ಬ;
ಪರಾಧೀನ ಮುಕ್ತನೆಂಬುವನೊಬ್ಬ.
ಕರ್ತೃಹೀನವಾಗಿ ಆತ್ಮನು ತನ್ನಿಂದ ತಾನೆ ಮುಕ್ತನೆಂಬುದು
ಅದು ಅಜ್ಞಾನ ನೋಡ.
ಆತ್ಮನು ಪಶುಪಾಶಬದ್ಧನು,
ಅನಾದಿ ಮಲಯುಕ್ತನಾಗಿ, ಪಶುವಾಗಿ. ಆತ್ಮನೊಬ್ಬನುಂಟೆಂಬೆ.
ಅನಾದಿಯಾಗಿ ಪಶುಪತಿಯಾಗಿ ನಿರ್ಮಲನಪ್ಪ
ಶಿವನೊಬ್ಬನು ಬೇರುಂಟೆಂಬೆ.
ಮಲ ಮಾಯಾ ಕರ್ಮವನುಂಡು ತೀರಿಸಿ
ಶಿವನ ಪ್ರಸಾದದಿಂದ ಮುಕ್ತನೆಂಬೆ.
ಆ ಮುಕ್ತಿಯಲ್ಲಿಯು ಪರಾಧೀನಮುಕ್ತನಲ್ಲದೆ ಏಕತ್ವವಿಲ್ಲ ಎಂಬೆ.
ಏಕತ್ವವಿಲ್ಲದಾಗಳೆ ಮುಕ್ತಿಯೆಂಬುದು ಹುಸಿ.
ಮಸಿಯೆಂದಾದರೂ ಬೆಳ್ಪಾದುದುಂಟೆ?
ಅಂಬರ ಮಾಸಿದರೆ ತೊಳದಡೆ ಬೆಳ್ಳಹುದಲ್ಲದೆ,
ಮಲದಲ್ಲಿ ಸೀರೆಯ ಮಾಡಿ ತೊಳೆದರೆ ಬಿಳಿದಾಗಬಲ್ಲುದೆ?
ಇದು ಕಾರಣ, ದ್ವೈತಕ್ಕೆ ಎಂದೂ ಮುಕ್ತಿಯಿಲ್ಲಯೆಂದೆ.
ಇತರ ಮತಂಗಳಂತಿರಲಿ.
ಪರಶಿವನ ಪರಶಕ್ತಿಯಿಂದ ಸುಜ್ಞಾನಶಕ್ತಿ ಉದಯವಾದಳು.

ಆ ಸುಜ್ಞಾನಶಕ್ತಿಯಗರ್ಭದಲ್ಲಿ ಶಿವಶರಣನುದಯವಾದ.
ಅಂತುದಯವಾದ ಶರಣನು ಆ ಸುಜ್ಞಾನಶಕ್ತಿಯ ಸಂಗವ ಮಾಡಿ,
ಆ ಸುಜ್ಞಾನಶಕ್ತಿಯೊಳಗೆ ತಾನೆಂಬ ಭಾವವ ಮರದು,
ತಾನೆ ಪರಶಿವತತ್ವದೊಳಗೆ
ದೀಪ ದೀಪವ ಬೆರಸಿದಂತೆ ರೂಪೆರಡಳಿದು ಏಕರ್ಥವಾಗಿ
ನಿತ್ಯ ಮುಕ್ತನಾದ ನಿಜಲಿಂಗೈಕ್ಯನು
ದ್ವೈತಿಯಲ್ಲ; ಅದ್ವೈತಿಯಲ್ಲ ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೨ ॥

೬೦

ಲಿಂಗದಿಂದ ಶರಣರುದಯಯವಾಗದಿರ್ದಡೆ,
ಬಸವ ಚೆನ್ನಬಸವ ಪ್ರಭುದೇವರು ಮುಖ್ಯವಾದ
ಏಳುನೂರುಯೆಪ್ಪತ್ತು ಅಮರಗಣಂಗಳು
ಎಲ್ಲರೂ ಕ್ಷೀರ ಕ್ಷೀರವ ಬೆರಸಿದಂತೆ, ನೀರು ನೀರು ಬೆರಸಿದಂತೆ,
ಘೃತ ಘೃತವ ಬೆರಸಿದಂತೆ, ಬಯಲು ಬಯಲ ಬೆರಸಿದಂತೆ
ಲಿಂಗವ ಬೆರಸಿ ಮಹಾಲಿಂಗವೆಯಾದರು ನೋಡ.
ಲಿಂಗದಿಂದ ಶರಣರುದಯವಾಗದಿರ್ದಡೆ,
ನೀಲಲೋಚನೆಯಮ್ಮ ಲಿಂಗದೊಳಗೆ ತನ್ನಂಗವನೇಕೀಕರಿಸಿ,
ಕೇವಲ ಪರಂಜ್ಯೋತಿರ್ಲಿಂಗದಲ್ಲಿ ನಿರವಯವಾದಳು ನೋಡಾ
ಇಂತಪ್ಪ ದೃಷ್ಟವ ಕಂಡು ನಂಬದಿರ್ಪುದು ಕರ್ಮದ ಫಲ.
ಅದು ಇವರ ಗುಣವೆ? ಶಿವನ ಮಾಯಾಪ್ರಪಂಚಿನ ಗುಣ
ನೋಡ.
ಈ ಪ್ರಪಂಚುಜೀವಿಗಳು ಅಲ್ಲ ಎಂಬುದು, ಅಹುದೆಂಬುದು
ಪ್ರಮಾಣೆ? ಅಲ್ಲ ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೩ ॥

೬೧

ಆದಿಯಲ್ಲಿ ಶಿವತತ್ವದಲ್ಲಿ ರೇಣುಕನುದಯ[ವಾ]ಗದಿರ್ದಡೆ,
ಇಲ್ಲಿ ಶಿವಲಿಂಗದಲ್ಲಿ ಉದಯವಾದ ಪರಿಯೆಂತೊ?
ಆ ಶಿವನಲ್ಲಿಯೆ ಹುಟ್ಟಿ ಶಿವನಲ್ಲಿಯೇ ಲಯವಾದ
ರೇವಣಸಿದ್ಧೇಶ್ವರನು,
ಅನಾದಿಮುಕ್ತನಲ್ಲ, ಅವಾಂತರಮುಕ್ತರೆಂಬ ಅಜ್ಞಾನಿಗಳಿಗೆ

ನಾಯಕನರಕ ತಪ್ಪದು.
ಸಕಲಕೋಟಿ ಬ್ರಹ್ಮಾಂಡಕ್ಕಾಧಾರಕಾರಣವಾಗಿಯು
ಸಮಸ್ತ ಲೋಕಂಗಳ ಪವಿತ್ರಕಾರಣವಾಗಿಯು
ಪರಮೇಶ್ವರನ ನಿಜಚಿನ್ಮಯಮಪ್ಪ ಊರ್ಧ್ವಮುಖದಲ್ಲಿ
ಚಿತ್ಕಲಾಸ್ವರೂಪರಪ್ಪ ರುದ್ರಗಣಂಗಲುದಯವಾದರು ನೋಡ.
ಆ ರುದ್ರಗಣಂಗಳು ಮತ್ತೂ ಜಗತ್ಪಾವನ ಕಾರಣ
ಮರ್ತ್ಯದಲ್ಲಿ ಅವತರಿಸಿದಡೆ,
ಅದೇನು ಕಾರಣ ಉದಯವಾದರು ವಾಸನಾಗುಣವಿಲ್ಲದೆ
ಎಂದು ಸಂದೇಹಿಸುವ
ಅವಲಕ್ಷಣ ನಾಯ ನಾಲಗೆಯ,
ಯಮದೂತರು ಕೀಳದೆ ಮಾಣ್ಬರೆ?
ಇವರಿಂಗೆ ನಾಯಕನರಕ ತಪ್ಪದು ಕಾಣ,
ಎಲೆ ಶಿವನೆ ನೀ ಸಾಕ್ಷಿಯಾಗಿ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೪ ॥

೬೨

ದ್ವೈತಿಯಲ್ಲ ಅದ್ವೈತಿಯಲ್ಲ ಕಾಣಿಭೋ ಶರಣ.
ದ್ವೈತಾದ್ವೈತವೆಂಬ ಉಭಯ ಕಲ್ಪನೆಯನಳಿದುಳಿದ ವೀರಮಾಹೇಶ್ವರನು
ಪರಶಿವನ ನಿರುತ ಸ್ವಯಾನಂದಸುಖಿ.
ಪರಶಿವನ ಪರಮ ತೇಜದಾದಿ ಬೀಜ.
ಪರಶಿವನ ಪರಮಜ್ಞಾನಪ್ರಕಾಶಮಯ ಪರಮಾನಂದದ, ನಿರುಪಮಲಿಂಗದ
ಪ್ರಭಾಕಿರಣವೇ ತಾನಾದ ಶರಣನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೫ ॥

## ಪಂಚಮೂರ್ತಿ ಲಿಂಗಸ್ಥಲದ ವಚನ

ಸೂತ್ರ।। ಇಂತು ಲಿಂಗಾಂಗಸ್ಥಲವನೈದಿದ ಶಿವತತ್ವವು ಜಗತ್ ಸೃಷ್ಟ್ಯರ್ಥಕಾರಣವಾಗಿ ಪಂಚಮೂರ್ತಿಲಿಂಗಸ್ಥಲವನೈದಿತ್ತದೆಂತೆಂದಡೆ:
ಮುಂದೆ ಪಂಚಮೂರ್ತಿಲಿಂಗಸ್ಥಲವಾದುದು.

೬೩

ನಿಃಕಲ ಶಿವನ ಮಧ್ಯದಲ್ಲಿ ಚಿಚ್ಛಕ್ತಿ ಉದಯಿಸಿದಳು.
ಆ ಚಿಚ್ಛಕ್ತಿಯ ಮಧ್ಯದಲ್ಲಿ ಶಾಂತ್ಯತೀತೋತ್ತರೆಯೆಂಬ ಕಲೆ.
ಆ ಶಾಂತ್ಯತೀತೋತ್ತರೆಯೆಂಬ ಕಲೆಯ ಮಧ್ಯದಲ್ಲಿ ಮಹಾಲಿಂಗ.
ಆತ ಮಹಾಲಿಂಗದ ಮಧ್ಯದಲ್ಲಿ ನಿರ್ಮುಕ್ತಸಾದಾಖ್ಯ.
ಆ ನಿರ್ಮುಕ್ತಸಾದಾಖ್ಯದ ಮಧ್ಯದಲ್ಲಿ
ಪಶುಪತಿಯೆಂಬ ಕಲಾಮೂರ್ತಿ.
ಆ ಪಶುಪತಿಯೆಂಬ ಕಲಾಮೂರ್ತಿಯ ಮಧ್ಯದಲ್ಲಿ
ಶಿವನೆಂಬ ಐಕ್ಯ.
ಆ ಐಕ್ಯ ಮಧ್ಯದಲ್ಲಿ ಉಪಮಾತೀತನು.
ಆ ಉಪಮಾತೀತನ ಮಧ್ಯದಲ್ಲಿ ಆತ್ಮನು.
ಇಂತು **ಮಹಾಸಾದಾಖ್ಯ**ದ ಸೃಷ್ಟಿ.
ಆ ಸಕಲ ಶಿವನ ಮಧ್ಯದಲ್ಲಿ ಪರಶಕ್ತಿ;
ಆ ಪರಶಕ್ತಿಯ ಮಧ್ಯದಲ್ಲಿ ಶಾಂತ್ಯತೀತೆಯೆಂಬ ಕಲೆ.
ಆ ಶಾಂತ್ಯತೀತೆಯೆಂಬ ಕಲೆಯ ಮಧ್ಯದಲ್ಲಿ ಪ್ರಸಾದಲಿಂಗ.
ಆ ಪ್ರಸಾದಲಿಂಗದ ಮಧ್ಯದಲ್ಲಿ ಶಿವಸಾದಾಖ್ಯ.
ಆ ಶಿವಸಾದಾಖ್ಯದ ಮಧ್ಯದಲ್ಲಿ
ಮಹಾದೇವನೆಂಬ ಕಲಾಮೂರ್ತಿ.
ಆ ಮಹಾದೇವನೆಂಬ ಕಲಾಮೂರ್ತಿಯ ಮಧ್ಯದಲ್ಲಿ
ಕ್ಷೇತ್ರಜ್ಞನೆಂಬ ಶರಣ.
ಆ ಶರಣನ ಮಧ್ಯದಲ್ಲಿ ಸದಾಶಿವನು.
ಆ ಸದಾಶಿವನ ಮಧ್ಯದಲ್ಲಿ ಆಕಾಶ-

ಇಂತು ಶಿವಸಾದಾಖ್ಯದ ಸೃಷ್ಟಿ.
ಆ ನಿಃಕಲ ಶಿವನ ಮಧ್ಯದಲ್ಲಿ ಆದಿಶಕ್ತಿ.
ಆ ಆದಿಶಕ್ತಿಯ ಮಧ್ಯದಲ್ಲಿ ಶಾಂತಿಯೆಂಬ ಕಲೆ.
ಆ ಶಾಂತಿಯೆಂಬ ಕಲೆಯ ಮಧ್ಯದಲ್ಲಿ ಜಂಗಮಲಿಂಗ.
ಆ ಜಂಗಮಲಿಂಗದ ಮಧ್ಯದಲ್ಲಿ ಅಮೂರ್ತಿಸಾದಾಖ್ಯ.
ಆ ಅಮೂರ್ತಿಸಾದಾಖ್ಯದ ಮಧ್ಯದಲ್ಲಿ
ಭೀಮೇಶ್ವರನೆಂಬ ಕಲಾಮೂರ್ತಿ.
ಆ ಭೀಮೇಶ್ವರನೆಂಬ ಕಲಾಮೂರ್ತಿಯ ಮಧ್ಯದಲ್ಲಿ
ಕರ್ತಾರನೆಂಬ ಪ್ರಾಣಲಿಂಗಿ.
ಆ ಕರ್ತಾರನೆಂಬ ಪ್ರಾಣಲಿಂಗಿಯ ಮಧ್ಯದಲ್ಲಿ ಈಶ್ವರ.
ಆ ಈಶ್ವರನ ಮಧ್ಯದಲ್ಲಿ ವಾಯು:
ಇಂತು **ಅಮೂರ್ತಿಸಾದಾಖ್ಯದ** ಸೃಷ್ಟಿ.
ಆ ನಿಃಕಲ ಶಿವನ ಮಧ್ಯದಲ್ಲಿ ಇಚ್ಛಾಶಕ್ತಿ.
ಆ ಇಚ್ಛಾಶಕ್ತಿಯ ಮಧ್ಯದಲ್ಲಿ ವಿದ್ಯೆಯೆಂಬ ಕಲೆ.
ಆ ವಿದ್ಯೆಯೆಂಬ ಕಲೆಯ ಮಧ್ಯದಲ್ಲಿ ಶಿವಲಿಂಗ.
ಆ ಶಿವಲಿಂಗದ ಮಧ್ಯದಲ್ಲಿ ಮೂರ್ತಿಸಾದಾಖ್ಯ.
ಆ ಮೂರ್ತಿಸಾದಾಖ್ಯದ ಮಧ್ಯದಲ್ಲಿ
ಮಹಾರುದ್ರನೆಂಬ ಕಲಾಮೂರ್ತಿ.
ಆ ಮಹಾರುದ್ರನೆಂಬ ಕಲಾಮೂರ್ತಿಯ ಮಧ್ಯದಲ್ಲಿ
ಭಾವನೆಂಬ ಪ್ರಸಾದಿ.
ಆ ಭಾವನೆಂಬ ಪ್ರಸಾದಿಯ ಮಧ್ಯದಲ್ಲಿ ರುದ್ರನು.
ಆ ರುದ್ರನ ಮಧ್ಯದಲ್ಲಿ ಅಗ್ನಿ.
ಇಂತು **ಮೂರ್ತಿಸಾದಾಖ್ಯದ** ಸೃಷ್ಟಿ.
ಆ ನಿಃಕಲ ಶಿವನ ಮಧ್ಯದಲ್ಲಿ ಪ್ರತಿಷ್ಠೆಯೆಂಬ ಕಲೆ.
ಆ ಪ್ರತಿಷ್ಠೆಯೆಂಬ ಕಲೆಯ ಮಧ್ಯದಲ್ಲಿ ಗುರುಲಿಂಗ.
ಆ ಗುರುಲಿಂಗದ ಮಧ್ಯದಲ್ಲಿ ಕರ್ತುಸಾದಾಖ್ಯ.
ಆ ಕರ್ತುಸಾದಾಖ್ಯದ ಮಧ್ಯದಲ್ಲಿ ಸರ್ವನೆಂಬ ಕಲಾಮೂರ್ತಿ.
ಆ ಸರ್ವನೆಂಬ ಕಲಾಮೂರ್ತಿಯ ಮಧ್ಯದಲ್ಲಿ
ಚೈತನ್ಯನೆಂಬ ಮಾಹೇಶ್ವರ.
ಆ ಚೈತನ್ಯನೆಂಬ ಮಾಹೇಶ್ವರನ ಮಧ್ಯದಲ್ಲಿ ವಿಷ್ಣು.
ಆ ವಿಷ್ಣುವಿನ ಮಧ್ಯದಲ್ಲಿ ಅಪ್ಪು.
ಇಂತು **ಕರ್ತುಸಾದಾಖ್ಯದ** ಸೃಷ್ಟಿ
ಆ ನಿಃಕಲ ಶಿವನ ಮಧ್ಯದಲ್ಲಿ ಕ್ರಿಯಾಶಕ್ತಿ.

ಆ ಕ್ರಿಯಾಶಕ್ತಿಯ ಮಧ್ಯದಲ್ಲಿ ನಿವೃತ್ತಿಯೆಂಬ ಕಲೆ.
ಆ ನಿವೃತ್ತಿಯೆಂಬ ಕಲೆಯ ಮಧ್ಯದಲ್ಲಿ ಆಚಾರಲಿಂಗ.
ಆ ಆಚಾರಲಿಂಗದ ಮಧ್ಯದಲ್ಲಿ ಕರ್ಮಸಾದಾಖ್ಯ.
ಆ ಕರ್ಮಸಾದಾಖ್ಯದ ಮಧ್ಯದಲ್ಲಿ ಭವನೆಂಬ ಕಲಾಮೂರ್ತಿ
ಆ ಭವನೆಂಬ ಕಲಾಮೂರ್ತಿಯ ಮಧ್ಯದಲ್ಲಿ
ಅಂತರಾಮಿಯೆಂಬ ಭಕ್ತ.
ಆ ಅಂತರಾಮಿಯೆಂಬ ಭಕ್ತನ ಮಧ್ಯದಲ್ಲಿ ಬ್ರಹ್ಮ
ಆ ಬ್ರಹ್ಮನ ಮಧ್ಯದಲ್ಲಿ ಪೃಥ್ವಿ.
ಆ ಬ್ರಹ್ಮನಿಂದ ನರರು ಸುರರು ಅಸುರರು
ಅಂಡಜ ಸ್ವೇದಜ ಉದ್ಭಿಜ ಜರಾಯುಜವೆಂಬ
ಸಕಲ ಚರಾಚರಂಗಳೆಲ್ಲವೂ ಹುಟ್ಟಿದವು.
ಇಂತಿವೆಲ್ಲವು ಶಿವನ ನೆನಹುಮಾತ್ರದಿಂದಲಾದವಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

೬೪

ವಸ್ತುವೆಂದರೆ ಪರಬ್ರಹ್ಮದ ನಾಮ.
ಆ ವಸ್ತು ತನ್ನಿಂದ ಭಾವವ ಕಲ್ಪಿಸಿ,
ಆ ಭಾವದಿಂದ ಮಾಯವ ಕಲ್ಪಿಸಿ,
ಆ ಮಾಯದಿಂದ ಮೋಹವ ಕಲ್ಪಿಸಿ,
ಆ ಮೋಹದಿಂದ ಸಕಲ ಪ್ರಪಂಚುವ ಹುಟ್ಟಿಸಿ,
ಆ ಪ್ರಪಂಚಿನಿಂದ ಸಮಸ್ತ ಜಗತ್ತು ಹುಟ್ಟಿತ್ತು ನೋಡ.
ಇಂತಿವೆಲ್ಲವು ನೀನಾಗೆಂದಡಾದವು;
ನೀ ಬೇಡಾಯೆಂದಡೆ ಮಾದವು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨ ॥

೬೫

ಪರಶಿವನಿಂದ ಚಿಚ್ಛಕ್ತಿ.
ಆ ಚಿಚ್ಛಕ್ತಿಯಿಂದ,
ಪರಾ ಆದಿ ಇಚ್ಛಾ ಜ್ಞಾನ ಕ್ರಿಯೆಯೆಂಬ
ಪಂಚಕಲಾಶಕ್ತಿಯರುದಯವಾದರು ನೋಡ.
ಆ ಕ್ರಿಯಾಶಕ್ತಿಯಿಂದ ನಿವೃತ್ತಿಕಲೆ.
ಆ ನಿವೃತ್ತಿಕಲೆಯಿಂದ ಮಹಾಮಾಯೆ ಹುಟ್ಟಿತ್ತು ನೋಡ.

ಆ ಮಹಾಮಾಯಾಶಕ್ತಿಯಿಂದ ಸಮಸ್ತ ಜಗತ್ತಿನ ಜನನ ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩ ॥

೬೬

ಅನಾದಿಯಾಗಿ ಶಿವನುಂಟು.
ಮಾಯೆಯು ಉಂಟು,
ಆತ್ಮನೂ ಉಂಟೆಂಬುದನಾವರಿಯೆವಯ್ಯ.
ಆದಿ ಅನಾದಿ ಸುರಾಳ ನಿರಾಳವಿಲ್ಲದಂದು,
ಮಾಯೆಯನು ಕಾಣೆ, ಆತ್ಮನನು ಕಾಣೆ.
ಮಹಾದೇವ ತಾನೊಬ್ಬನೇ ಇದ್ದನೆಂಬುದು
ಕಾಣಬಂದಿತ್ತು ನೋಡ ಶಿವಜ್ಞಾನದೃಷ್ಟಿಗೆ.
ಆ ಲಿಂಗನಿರ್ಮಿತದಿಂದ ಮಾಯೆ ಹುಟ್ಟಿತ್ತು ನೋಡ.
ಆ ಮಾಯೆಯಿಂದ ತತ್ವಬ್ರಹ್ಮಾಂಡಾದಿ
ಲೋಕಾದಿ ಲೋಕಂಗಳು ಹುಟ್ಟಿದವು ನೋಡ.
ಹೀಂಗೆ ನಿನ್ನ ನೆನಹುಮಾತ್ರದಿಂದ ತ್ರೈಜಗ ಹುಟ್ಟಿತ್ತು ನೋಡ.
ಆ ತ್ರೈಜಗಂಗಳ ಉತ್ಪತ್ತಿ ಸ್ಥಿತಿ ಲಯಂಗಳಿಗೆ
ನೀನೆ ಕಾರಣನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪ ॥

೬೭

ಸಚ್ಚಿದಾನಂದ ನಿತ್ಯಪರಿಪೂರ್ಣ ನಿಃಕಲ ಶಿವತತ್ವವು ತನ್ನಿಂದ ತಾನೆ
ಅಖಂಡ ಪರಿಪೂರ್ಣ ಗೋಳಕಾಕಾರ ಪರಂಜ್ಯೋತಿಸ್ವರೂಪವಪ್ಪ
ಮಹಾಲಿಂಗವಾಯಿತ್ತು ನೋಡ.
ಆ ಲಿಗದ ಮಧ್ಯದಲ್ಲಿ
ಬೀಜದಿಂದ ವೃಕ್ಷವು ಉದಯವಾಗುವ ಹಾಂಗೆ,
ಆ ಲಿಂಗವು ತನ್ನ ಇಚ್ಛಾಶಕ್ತಿಯ ಕೂಡಿಕೊಂಡು,
ಜಗದುತ್ಪತ್ತಿ ಸ್ಥಿತಿ ಲಯಂಗಳಿಗೆ ಕರ್ತುವಾಗಿ,
ಸಕಲ ನಿಃಕಲವಾಗಿ,
ಪಂಚಮುಖ ದಶಭುಜ ದಶಪಂಚನೇತ್ರ ದ್ವಿಪಾದ ತನುವೇಕ
ಶುದ್ಧ ಸ್ಫಟಿಕವರ್ಣದ ಧಾತುವಿನಿಂದ
ಒಪ್ಪುತ್ತಿಪ್ಪುದು ಸದಾಶಿವಮೂರ್ತಿ.
ಆ ಸದಾಶಿವನ ಈಶಾನ್ಯಮುಖದಲ್ಲಿ ಆಕಾಶ ಪುಟ್ಟಿತ್ತು.

ತತ್ಪುರುಷಮುಖದಲ್ಲಿ ವಾಯು ಪುಟ್ಟಿತ್ತು.
ಅಘೋರಮುಖದಲ್ಲಿ ಅಗ್ನಿ ಪುಟ್ಟಿತ್ತು.
ವಾಮದೇವಮುಖದಲ್ಲಿ ಅಪ್ಪು ಪುಟ್ಟಿತ್ತು.
ಸದ್ಯೋಜಾತಮುಖದಲ್ಲಿ ಪೃಥ್ವಿ ಪುಟ್ಟಿತ್ತು.
ಮನಸ್ಸಿನಲ್ಲಿ ಚಂದ್ರ, ಚಕ್ಷುವಿನಲ್ಲಿ ಸೂರ್ಯ.
ಪರಮಾತ್ಮ ಸ್ವರೂಪವಪ್ಪ ಗೋಪ್ಯಮುಖದಲ್ಲಿ ಆತ್ಮ ಹುಟ್ಟಿದನು.
ಇಂತು, ಪೃಥ್ವಿ ಅಪ್ಪು ತೇಜ ವಾಯು
ಆಕಾಶ ಚಂದ್ರ ಸೂರ್ಯ ಆತ್ಮನೆಂಬ
ಶಿವನ ಅಷ್ಟತನುಮೂರ್ತಿಯೆ ಸಮಸ್ತ ಜಗತ್ತಾಯಿತ್ತು.
ಆ ಜಗತ್ತಾವಾವವೆಂದಡೆ:
ಚತುರ್ದಶ ಭುವನಂಗಳು, ಸಪ್ತ ಸಮುದ್ರಂಗಳು,
ಸಪ್ತ ದ್ವೀಪಂಗಳು, ಸಪ್ತ ಕುಲಪರ್ವತಂಗಳು,
ಸಮಸ್ತ ಗ್ರಹರಾಶಿ ತಾರಾಪಥಂಗಳಂ ಗರ್ಭೀಕರಿಸಿಕೊಂಡು
ಬ್ರಹ್ಮಾಂಡವೆನಿಸಿತ್ತು.
ಇದು ಜಗದುತ್ಪತ್ತಿ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫ ॥

೬೮

ಶಿವನೂ ಉಂಟು, ಆತ್ಮನೂ ಉಂಟು, ಮಾಯೆಯೂ ಉಂಟು
ಎಂಬೆ ಎಲೆ ಮರುಳು ಮಾನವ.
ಆತ್ಮನನಾದಿಯೋ, ಮಾಯೆಯನಾದಿಯೋ, ಶಿವನನಾದಿಯೋ?.
ಈ ಮೂರೂ ಅನಾದಿಯಲ್ಲಿ ಉಂಟಾವರೆ,
ಆದಿಯೆಂದಡೆ ದೇಹ, ಅನಾದಿಯೆಂದಡೆ ಆತ್ಮನು.
ದೇಹವೂ ಆತ್ಮನೂ ಮಾಯೆಯೂ ಈ ಮೂರೂ ಇಲ್ಲದಂದು
ನಿತ್ಯನಿರಂಜನ ಪರಶಿವತತ್ವವೊಂದೇ ಇದ್ದಿತ್ತೆಂಬುದು
ಯಥಾರ್ಥವಲ್ಲದೆ,
ಉಳಿದವೆಲ್ಲ ಹುಸಿ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬ ॥

೬೯

ಇವು ಮೂರೂ ನಿತ್ಯವಾದಡೆ,
ಮಾಯೆಯೂ ಆತ್ಮನು ಉತ್ಪತ್ತಿ ಸ್ಥಿತಿ
ಪ್ರಳಯಕ್ಕೊಳಗಾಗುತ್ತಿಪ್ಪವು ನೋಡ.

ಶಿವನೆ ಉತ್ಪತ್ತಿ ಸ್ಥಿತಿ ಪ್ರಳಯರಹಿತನಾಗಿ
ನಿತ್ಯನಾಗಿಪ್ಪನು ನೋಡಾ.
ಇದು ಕಾರಣ,
ಅನಿತ್ಯವಾದ ಪಶುಪಾಶಂಗಳ ನಿತ್ಯವೆಂಬುದು
ಅದು ಅಜ್ಞಾನ ನೋಡಾ.
ಶಿವಜ್ಞಾನೋದಯದಿಂದ ತಿಳಿದುನೋಡಿದರೆ,
ಶಿವತತ್ವವೊಂದೇ ನಿತ್ಯವು; ಉಳಿದವೆಲ್ಲವು ಅನಿತ್ಯ ಕಾಣ.
ಹೀಂಗೆಂದು ಕಂಡ ಕಾಣಿಕೆ ನೀನೆ ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭ ॥

೭೦

ಆತ್ಮನೂ ಉಂಟು, ಮಲಮಾಯಾ ಕರ್ಮಂಗಳೂ ಉಂಟು;
ಶಿವನೂ ಉಂಟು ಎಂದಡೆ,
ಶಿವನೇನು ಪರಿಪೂರ್ಣನೋ ಖಂಡಿತನೋ?
ಶಿವನೇನು ಕಿಂಚಿಜ್ಞನೋ ಸರ್ವಜ್ಞನೋ?
ಶಿವನು ಪರಿಪೂರ್ಣನಾದಡೆ,
ಮಲಮಾಯಾ ಕರ್ಮಂಗಳಿದ್ದೆಡೆಯಾವುದು ಹೇಳ.
ಖಂಡಿತನೆಂಬೆಯಾ ಶಿವನೊಂದು ಮೂಲೆಯಲ್ಲಿಪ್ಪನೆ?
ಸರ್ವವ್ಯಾಪಕನೆಂಬುದು ಹುಸಿಯೆ? ಸರ್ವಜ್ಞನೆಂಬುದು ಹುಸಿಯೆ?
ಆದಡೆ ಕಿಂಚಿಜ್ಞನೆನ್ನು. ಕಿಂಚಿಜ್ಞನೆಂಬ ಶಾಸ್ತ್ರವುಂಟೇ?
ಪರಿಪೂರ್ಣಸರ್ವಮಯವಾದ ವಸ್ತು ನೀನೊಬ್ಬನೆಯಾಗಿ
ಪ್ರತಿಯಿಲ್ಲದಪ್ರತಿಮ ನೀನೆ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮ ॥

೭೧

ಅನಾದಿಯಾಗಿ ಪಶು ಪಾಶ ಮಲ ಮಾಯಾಕರ್ಮಗಳುಂಟಾದರೆ,
ಈ ಜಗವನೊಬ್ಬರೂ ಸೃಷ್ಟಿಮಾಡಿದ ಕರ್ತುವಲ್ಲ.
ಎಂದೆಂದೂ ಜಗವಿದ್ದಿತ್ತು ನಿತ್ಯವೆನ್ನು.
ಎಂದೆಂದೂ ಜಗವಿದ್ದಿತ್ತೆಂಬೆಯಾದರೆ,
ಶಿವನ ಸೃಷ್ಟಿ, ಸ್ಥಿತಿ, ಸಂಹಾರ, ಸ್ಥಿರೋಭಾವ, ಅನುಗ್ರಹವೆಂಬ
ಪಂಚಕೃತ್ಯಗಳು ಹುಸಿಯೆಂದೆನ್ನು.
ಶಿವನಿಗೆ ಸೃಷ್ಟಿ ಸ್ಥಿತಿ ಸಂಹಾರಾರ್ಥವುಂಟಾದರೆ,

ಈ ಜಗತ್ತೆಲ್ಲವೂ ಶಿವನ ನೆನಹು ಮಾತ್ರದಿಂದ ಹುಟ್ಟಿತ್ತಲ್ಲದೆ,
ಎಂದೆಂದೂ ಉಂಟೆಂಬುದು ಶೈವ ಪಶುಮತವಲ್ಲದೆ,
ವೀರಶೈವರ ಮತವಲ್ಲ.
ವೀರಶೈವರ ಮತವೆಂತೆಂದಡೆ:
ಘನ ಗಂಭೀರ ವಾರಿಧಿಯೊಳಗೆ ಫೇನತರಂಗ
ಬುದ್ಬುದ ಶೀಕರಾದಿಗಳು ತೋರಿದಡೆ,
ಆ ಸಾಗರ ಹೊರಗಾಗಿ ತೋರಬಲ್ಲವೆ?
ಆ ಪರಶಿವಸಾಗರದಲ್ಲಿ ತೃಣಾದಿ ಬ್ರಹ್ಮಾಂತವಾದ ದೇಹಿಗಳು
ಉತ್ಪತ್ತಿಯಾಗಿ ಮತ್ತಲ್ಲಿಯೇ ಅಡಗುತ್ತಿಪ್ಪರು ನೋಡ.
ಇದು ಕಾರಣ, ಲಿಂಗನಿರ್ಮಿತದಿಂದ ಜಗತ್ತಾಯಿತೆಂದೆ ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯ ॥

೨೨

ಪಶು ಪಾಶ ಮಲ ಮಾಯಾಕರ್ಮಂಗಳು ನಿತ್ಯವೆಂಬೆ.
ನಿತ್ಯವಾದಡೆ,
'ಪಶುಪಾಶವಿನಿರ್ಮುಕ್ತಃ ಪರಮಾತ್ಮಾ ಸದಾಶಿವಃ' ಎಂದುದಾಗಿ,
'ಇದಂ ಮಲತ್ರಯದೋಷಂ ಗುರುಣೈವ ವಿಮೋಚನಂ'
ಎಂದುದಾಗಿ,
ಪಶು ಪಾಶ ಮಲ ಮಾಯಾಕರ್ಮಂಗಳು
ಗುರೂಪದೇಶದಿಂದಲೂ ಶಿವಪ್ರಸಾದತ್ವದಿಂದಲೂ
ಕೆಡುತ್ತಿರ್ದಾವು.
ಪಶು ಪಾಶ ಮಲ ಮಾಯಾ ಕರ್ಮಂಗಳು
ಶಿವಯೋಗಿಗಳ ಮಧ್ಯವಲ್ಲಿಯೂ ಕೆಡುತ್ತಿರ್ದಾವು;
ಕೆಡುತ್ತಿರ್ದಂಥ ಅನಿತ್ಯವಾದ ವಸ್ತುವ,
ಅಬ್ರಚ್ಛಾಯವ ನಿತ್ಯವೆನ್ನಬಹುದೇ?
ನಿತ್ಯವೆಂಬೆಯಾದಡೆ, ಮಲಮಾಯಾಕರ್ಮಂಗಳು
ಎಂದೂ ತೊಲಗುವದಿಲ್ಲ ಎನ್ನು.
ಮಲಮಾಯಾಕರ್ಮಂಗಳು ಎಂದೂ ತೊಲಗುವದಿಲ್ಲ
ಎಂಬಾಗವೇ
ಮುಕ್ತಿಯಿಲ್ಲಯೆನ್ನು.
ಮುಕ್ತಿಯುಂಟಾದಡೆ,
ಮಲಮಾಯಾಕರ್ಮಂಗಳು ನಿತ್ಯವೆಂಬುದು ಅಬದ್ಧ.
ಅವು ನಿತ್ಯವಾದಾಗವೆ, ಉತ್ಪತ್ತಿ ಸ್ಥಿತಿ ಪ್ರಳಯಂಗಳಿಲ್ಲಾಯೆನ್ನು.

ಉತ್ಪತ್ತಿ ಸ್ಥಿತಿ ಪ್ರಳಯಂಗಳುಂಟಾದಲ್ಲಿ, ನಿತ್ಯವೆನಲಿಲ್ಲ.
ಪೃಥ್ವಿಯ ಲಯ ಅಪ್ಪುವಿನಲ್ಲಿ, ಅಪ್ಪುವಿನ ಲಯ ಅಗ್ನಿಯಲ್ಲಿ,
ಅಗ್ನಿಯ ಲಯ ವಾಯುವಿನಲ್ಲಿ, ವಾಯುವಿನ ಲಯ ಆಕಾಶದಲ್ಲಿ,
ಆಕಾಶದ ಲಯ ಆತ್ಮನಲ್ಲಿ, ಅತ್ಮನ ಲಯ ಮಹಾಲಿಂಗದಲ್ಲಿ.
ಇಂತಿವೆಲ್ಲವೂ ಮಹಾಲಿಂಗದಲ್ಲಿಯೇ ಹುಟ್ಟಿ,
ಮಹಾಲಿಂಗದಲ್ಲಿಯೇ ಲಯವಾಗುವಲ್ಲಿಯೆ
ಪಿಂಡಾಂಡವೆಲ್ಲವೂ ಲಯ. ಸಮಸ್ತ ತತ್ವಂಗಳೆಲ್ಲವೂ ಲಯ.
ಈ ಲಯ ಗಮಂಗಳಿಗೆ ಆಸ್ಪದವಾದ ಶಿವತತ್ವವೊಂದೇ
ನಿತ್ಯವಲ್ಲದೆ,
ಉಳಿದವೆಲ್ಲವೊ ನಿತ್ಯವೆಂಬುದು ಹುಸಿ ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦ ॥

೭೩

ನೆನಹಿಲ್ಲದ ಘನವಸ್ತು ಜಗತ್ ಸೃಷ್ಟ್ಯರ್ಥಕಾರಣ,
ನೆನೆದ ನೆನಹೇ ಸಾರಯವಾಯಿತ್ತಯ್ಯ
ಆ ನೆನಹು ಅಧೋಮುಖ ಊರ್ಧ್ವಮುಖವೆಂದು
ಎರಡು ತೆರನಾಗಿಪ್ಪುದಯ್ಯ.
ಅಧೋಮುಖದ ಪ್ರಕೃತಿಸೃಷ್ಟಿಯಿಂದ
ಹರಿ ವಿರಿಂಚಿ ಮೊದಲಾದ ಸಮಸ್ತ ಜಗತ್ತೆಲ್ಲಾ ಹುಟ್ಟಿತ್ತು
ನೋಡ.
ಊರ್ಧ್ವಮುಖವಪ್ಪ ನಿಜ ಚಿನ್ಮಯದ
ಮಹಾಜ್ಞಾನಪ್ರಭೆಯ ಸಾಮರ್ಥ್ಯದಲ್ಲಿ
ಪ್ರಮಥರು ರುದ್ರರು
ಮೊದಲಾದ ಮಹಾಗಣಂಗಳುತ್ಪತ್ತಿಯಾದರಯ್ಯ.
ಹೀಂಗೆ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವಿನ ಸೃಷ್ಟಿ
ಎರಡು ಪರಿಯಾಯವಾಗಿಪ್ಪುದು ಕಾಣಿರೋ. ॥ ೧೧ ॥

## ಪಿಂಡಸ್ಥಲದ ವಚನ

ಸೂತ್ರ॥ ಇಂತು ಪಂಚಮೂರ್ತಿಲಿಂಗಸ್ಥಲವನೆಯ್ದಿದ ಶಿವನ ಐದುಮುಖದಲ್ಲಿ ಪಂಚಭೂತಾತ್ಮ ಉತ್ಪತ್ತಿಯಾಗಿ, ಪಂಚಭೂತವೆ ದೇಹ ಆತ್ಮನೇ ದೇಹಿಯಾದ ಕಾರಣ, ದೇಹ ದೇಹಿಯೆಂಬೆರಡು ಸಮರಸವಾಗಿ ಪಿಂಡವೆನಿಸಿತ್ತಾಗಿ, ಮುಂದೆ ಪಿಂಡಸ್ಥಲವಾದುದು.

೭೪

ವಸ್ತುವೆಂದಡೆ ಪರಬ್ರಹ್ಮದ ನಾಮ.
ಆ ವಸ್ತುವಿನಿಂದ ಆತ್ಮನ ಜನನ.
ಆತ್ಮನಿಂದ ಆಕಾಶಪುಟ್ಟಿತ್ತು; ಆಕಾಶದಿಂದ ವಾಯು ಜನಿಸಿತ್ತು.
ವಾಯುವಿನಿಂದ ಅಗ್ನಿ ಪುಟ್ಟಿತ್ತು; ಅಗ್ನಿಯಿಂದ ಅಪ್ಪು ಪುಟ್ಟಿತ್ತು.
ಅಪ್ಪುವಿನಿಂದ ಪೃಥ್ವಿ ಪುಟ್ಟಿತ್ತು;
ಇಂತಿದೆಲ್ಲವೂ ಶಿವನ ಮುಖದಿಂದ ಹುಟ್ಟಿತ್ತೆಂದರಿವುದು.
ಇಂತು ಹುಟ್ಟಿದ ಪಂಚಭೂತಂಗಳೆ,
ಪಂಚವಿಂಶತಿತತ್ವಯುಕ್ತವಾಗಿ ದೇಹವಾಯಿತ್ತು.
ಅದು ಹೇಗೆಂದಡೆ:
ಆಕಾಶದಿಂದ ಅಂತಃಕರಣಚತುಷ್ಟಯಂಗಳು ಹುಟ್ಟಿದವು.
ವಾಯುವಿನಿಂದ ಪಂಚಪ್ರಾಣವಾಯುಗಳಾದುವಯ್ಯ.
ಅಗ್ನಿಯಿಂದ ಬುದ್ಧೀಂದ್ರಿಯಂಗಳು ಪುಟ್ಟಿದವಯ್ಯ.
ಅಪ್ಪುವಿನಿಂದ ಶಬ್ದಾದಿ ಪಂಚವಿಷಯಂಗಳು ಪುಟ್ಟಿದವಯ್ಯ.
ಪೃಥ್ವಿಯಿಂದ ವಾಗಾದಿ ಕರ್ಮೇಂದ್ರಿಯಂಗಳು ಪುಟ್ಟಿದವಯ್ಯ.
ಇಂತೀ ಚತುರ್ವಿಂಶತಿ ತತ್ವಯುಕ್ತವಾಗಿ,
ಶರೀರ ವ್ಯಕ್ತೀಕರಿಸಿತ್ತಯ್ಯ.
ಅದೆಂತೆಂದಡೆ:
ಆಕಾಶ ಆಕಾಶವ ಬೆರಸಲು ಜ್ಞಾನ ಪುಟ್ಟಿತ್ತು.
ಆಕಾಶ ವಾಯುವ ಬೆರಸಲು ಮನಸ್ಸು ಪುಟ್ಟಿತ್ತು.
ಆಕಾಶ ಅಗ್ನಿಯ ಬೆರಸಲು ಅಹಂಕಾರ ಪುಟ್ಟಿತ್ತು.
ಆಕಾಶ ಅಪ್ಪುವ ಬೆರಸಲು ಬುದ್ಧಿ ಪುಟ್ಟಿತ್ತು.

ಆಕಾಶ ಪೃಥ್ವಿಯ ಬೆರಸಲು ಚಿತ್ತ ಪುಟ್ಟಿತ್ತು.
ಇಂತಿವು, ಕರಣಚತುಷ್ಟಯದ ಉತ್ಪತ್ತಿಯಯ್ಯ.
ವಾಯು ಆಕಾಶವ ಬೆರಸಿದಲ್ಲಿ ಸಮಾನವಾಯುವಿನ ಜನನ.
ವಾಯು ವಾಯುವ ಬೆರಸಿದಲ್ಲಿ ಉದಾನವಾಯುವಿನ ಜನನ.
ವಾಯು ಅಗ್ನಿಯ ಬೆರಸಿದಲ್ಲಿ ವ್ಯಾನವಾಯುವಿನ ಜನನ.
ವಾಯು ಅಪ್ಪುವ ಬೆರಸಿದಲ್ಲಿ ಅಪಾನವಾಯುವಿನ ಜನನ.
ವಾಯು ಪೃಥ್ವಿಯ ಬೆರಸಿದಲ್ಲಿ ಪ್ರಾಣವಾಯುವಿನ ಜನನ.
ಇಂತಿವು, ವಾಯುಪಂಚಕದ ಉತ್ಪತ್ತಿಯಯ್ಯ.
ಅಗ್ನಿ ಆಕಾಶವ ಬೆರಸಲು ಶ್ರೋತ್ರೇಂದ್ರಿಯದ ಜನನ.
ಅಗ್ನಿ ವಾಯುವ ಬೆರಸಲು ತ್ವಗಿಂದ್ರಿಯದ ಜನನ.
ಅಗ್ನಿ ಅಗ್ನಿಯ ಬೆರಸಲು ನೇತ್ರೇಂದ್ರಿಯದ ಜನನ.
ಅಗ್ನಿ ಅಪ್ಪುವ ಬೆರಸಲು ಜಿಹ್ವೇಂದ್ರಿಯದ ಜನನ.
ಅಗ್ನಿ ಪೃಥ್ವಿಯ ಬೆರಸಲು ಘ್ರಾಣೇಂದ್ರಿಯದ ಜನನ.
ಇಂತಿವು, ಬುದ್ಧೀಂದ್ರಿಯಂಗಳುತ್ಪತ್ಯವಯ್ಯ.
ಅಪ್ಪು ಆಕಾಶವ ಬೆರಸಲು ಶಬ್ದ ಪುಟ್ಟಿತ್ತು.
ಅಪ್ಪು ವಾಯುವ ಬೆರಸಲು ಸ್ಪರ್ಶನ ಪುಟ್ಟಿತ್ತು.
ಅಪ್ಪು ಅಗ್ನಿಯ ಬೆರಸಲು ರೂಪು ಪುಟ್ಟಿತ್ತು.
ಅಪ್ಪು ಅಪ್ಪುವ ಬೆರಸಲು ರಸ ಪುಟ್ಟಿತ್ತು.
ಅಪ್ಪು ಪೃಥ್ವಿಯ ಬೆರಸಲು ಗಂಧ ಪುಟ್ಟಿತ್ತು.
ಇಂತಿವು, ಪಂಚವಿಷಯಂಗಳುತ್ಪತ್ಯವಯ್ಯ.
ಪೃಥ್ವಿ ಆಕಾಶವ ಬೆರಸಲು ವಾಗಿಂದ್ರಿಯದ ಜನನ.
ಪೃಥ್ವಿ ವಾಯುವ ಬೆರಸಲು ಪಾಣೇಂದ್ರಿಯದ ಜನನ.
ಪೃಥ್ವಿ ಅಗ್ನಿಯ ಬೆರಸಲು ಪಾದೇಂದ್ರಿಯದ ಜನನ.
ಪೃಥ್ವಿ ಅಪ್ಪುವ ಬೆರಸಲು ಗುಹ್ಯೇಂದ್ರಿಯದ ಜನನ.
ಪೃಥ್ವಿ ಪೃಥ್ವಿಯ ಬೆರಸಲು ಪಾಯ್ವಿಂದ್ರಿಯದ ಜನನ.
ಇಂತಿವು, ಚತುರ್ವಿಂಶತಿ ತತ್ವಂಗಳುತ್ಪತ್ತಿ.
ಈ ತತ್ವಂಗಳಿಗೆ ಎಲ್ಲಕ್ಕೆಯೂ ಆಶ್ರಯವಾಗಿ,
ಚೈತನ್ಯವಾಗಿ ಆತ್ಮನೊಬ್ಬನು.
ಇಂತು ಇಪ್ಪತ್ತೈದುತತ್ವಂಗಳ ಭೇದವೆಂದು ಅರಿಯಲು
ಯೋಗ್ಯವಯ್ಯ.
ಆಕಾಶದೊಳಗಣ ಆಕಾಶ ಜ್ಞಾನ.
ಆಕಾಶದೊಳಗಣ ವಾಯು ಮನಸ್ಸು.
ಆಕಾಶದೊಳಗಣ ಅಗ್ನಿ ಅಹಂಕಾರ.

ಆಕಾಶದೊಳಗಣ ಅಪ್ಪು ಬುದ್ಧಿ.
ಆಕಾಶದೊಳಗಣ ಪೃಥ್ವಿ ಚಿತ್ತ.
ಇಂತಿವು, ಆಕಾಶದ ಪಂಚೀಕೃತಿಯಯ್ಯ.
ವಾಯುವಿನೊಳಗಣ ವಾಯು ಉದಾನವಾಯು.
ವಾಯುವಿನೊಳಗಣ ಆಕಾಶ ಸಮಾನವಾಯು.
ವಾಯುವಿನೊಳಗಣ ಅಗ್ನಿ ವ್ಯಾನವಾಯು.
ವಾಯುವಿನೊಳಗಣ ಅಪ್ಪು ಅಪಾನವಾಯು.
ವಾಯುವಿನೊಳಗಣ ಪೃಥ್ವಿ ಪ್ರಾಣವಾಯು.
ಇಂತಿವು, ವಾಯುವಿನ ಪಂಚೀಕೃತಿಯಯ್ಯ.
ಅಗ್ನಿಯೊಳಗಣ ಅಗ್ನಿ ನೇತ್ರೇಂದ್ರಿಯ.
ಅಗ್ನಿಯೊಳಗಣ ಆಕಾಶ ಶ್ರೋತ್ರೇಂದ್ರಿಯ.
ಅಗ್ನಿಯೊಳಗಣ ವಾಯು ತ್ವಗಿಂದ್ರಿಯ.
ಅಗ್ನಿಯೊಳಗಣ ಅಪ್ಪು ಜಿಹ್ವೇಂದ್ರಿಯ.
ಅಗ್ನಿಯೊಳಗಣ ಪೃಥ್ವಿ ಘ್ರಾಣೇಂದ್ರಿಯ.
ಇಂತಿವು, ಅಗ್ನಿಯ ಪಂಚೀಕೃತಿಯಯ್ಯ.
ಅಪ್ಪುವಿನೊಳಗಣ ಅಪ್ಪು ರಸ.
ಅಪ್ಪುವಿನೊಳಗಣ ಆಕಾಶ ಶಬ್ದ.
ಅಪ್ಪುವಿನೊಳಗಣ ವಾಯು ಸ್ಪರ್ಶನ.
ಅಪ್ಪುವಿನೊಳಗಣ ಅಗ್ನಿ ರೂಪು.
ಅಪ್ಪುವಿನೊಳಗಣ ಪೃಥ್ವಿ ಗಂಧ.
ಇಂತಿವು, ಅಪ್ಪುವಿನ ಪಂಚೀಕೃತಿಯಯ್ಯ.
ಪೃಥ್ವಿಯೊಳಗಣ ಪೃಥ್ವಿ ಪಾಯ್ವಿಂದ್ರಿಯ.
ಪೃಥ್ವಿಯೊಳಗಣ ಆಕಾಶ ವಾಗಿಂದ್ರಿಯ.
ಪೃಥ್ವಿಯೊಳಗಣ ವಾಯು ಪಾಣೇಂದ್ರಿಯ.
ಪೃಥ್ವಿಯೊಳಗಣ ಅಗ್ನಿ ಪಾದೇಂದ್ರಿಯ.
ಪೃಥ್ವಿಯೊಳಗಣ ಅಪ್ಪು ಗುಹ್ಯೇಂದ್ರಿಯ.
ಇಂತಿವು, ಪೃಥ್ವಿಯ ಪಂಚೀಕೃತಿಯಯ್ಯ.
ಪಂಚಮಹಾಭೂತಂಗಳು ಪಂಚಪಂಚೀಕೃತಿಯನೆಯ್ದಿ
ಪಂಚವಿಂಶತಿ ಅಂಗರೂಪಾದ ಕಾಯದ ಕೀಲನು
ಸ್ವಾನುಭಾವದ ನಿಷ್ಠೆಯಿಂದರಿದು
ಈ ದೇಹಸ್ವರೂಪವು ತಾನಲ್ಲವೆಂದು
ತನ್ನ ಸ್ವರೂಪು ಪರಂಜ್ಯೋತಿಸ್ವರೂಪೆಂದು ತಿಳಿದು,
ಆ ಜ್ಯೋತಿರ್ಮಯ ಲಿಂಗಕಳೆಯೊಳಗೆ ಅಂಗಕಳೆಯ ಸಂಬಂಧಿಸಿ,

ಅಂಗಲಿಂಗಸಂಬಂಧ, ಪ್ರಾಣಲಿಂಗಸಂಬಂಧ ಮಾಡುವ
ಕ್ರಮವಿದಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

೭೫

ಲಿಂಗಸ್ಥಲದಲ್ಲಿ ಲಿಂಗಕಳೆ ಹೇಗಾಯಿತಯ್ಯ?
ಆವುದಾನೊಂದು ಕಳೆಯ ಸ್ಥಾಪಿಸುವ ಭೇದವಾವುದಯ್ಯ?
ಇವನರಿಯೆನು; ಕರುಣಿಸಯ್ಯ ತಂದೆ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨ ॥

೭೬

ವಸ್ತುವೆಂದೊಡೆ ಹೇಂಗಾಯಿತ್ತಯ್ಯ?
ಗ್ರಹಿಸುವ ಭೇದವಾವುದಯ್ಯ?
ಕಳೆಯ ಸ್ಥಾಪಿಸುವ ಭೇದವಾವುದಯ್ಯ?
ಇದರ ಗುಣವನಾನರಿಯೆನು; ಕರುಣಿಸಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩ ॥

೭೭

ವಸ್ತುವೆಂದಡೆ: ಹೇಂಗಾಯಿತ್ತಯ್ಯಾಯೆಂದಡೆ,
ಹೇಳಿಪೆ ಕೇಳಯ್ಯಾ ಮಗನೆ.
ಕಾಷ್ಟದಲ್ಲಿ ಅಗ್ನಿ ಹೇಂಗೆ ಹಾಂಗಿಪ್ಪುದು;
ಕ್ಷೀರದೊಳಗೆ ಘೃತ ಹೇಂಗೆ ಹಾಂಗಿಪ್ಪುದು;
ತಿಲದಲ್ಲಿ ತೈಲ ಹೇಂಗೆ ಹಾಂಗಿಪ್ಪುದು;
ಜಲದೊಳಗೆ ಸೂರ್ಯ ಹೇಂಗೆ ಹಾಂಗಿಪ್ಪುದು;
ಕನ್ನಡಿಯೊಳಗೆ ಪ್ರತಿಬಿಂಬ ಹೇಂಗೆ ಹಾಂಗಿಪ್ಪುದು;
ಸರ್ವತ್ರ ಎಲ್ಲಾ ಠಾವಿನಲ್ಲಿಯೂ ವಸ್ತುವಿನ ಕಳೆ
ಪರಿಪೂರ್ಣವಾಗಿಪ್ಪುದೆಂಬೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪ ॥

೭೮

ಇಂತೀ ಹಿಂದೆ ಹೇಳಿದ ವಸ್ತುವ ಬೇರಿಟ್ಟು ತಿಳಿಯಲಿಲ್ಲ.
ನಿನ್ನಲ್ಲಿ ಉಂಟು ತಿಳಿದು ನೋಡಯ್ಯ ಮಗನೆ.
ನಿನ್ನ ಪಿಂಡದ ಹೊರಗೆ ಭರಿತವಾಗಿ,

ತಲೆದೋರದೆ, ಕಾಣಿಸಿಕೊಳ್ಳದೆ
ಪಿಂಡಸ್ಥನಾಗಿ ಚಿದ್ರೂಪನದಾನೆ.
ಈ ಪಿಂಡಸ್ಥಲದ ಭೇದವ ತಿಳಿಯೆಂದನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫ ॥

೭೯

ಆದಿಪಿಂಡ ಮಧ್ಯಪಿಂಡ ಅನಾದಿಪಿಂಡವೆಂದು
ಮೂರು ಪ್ರಕಾರವಾಗಿಪ್ಪುದು.
ಆದಿಪಿಂಡವೇ ಜೀವಪಿಂಡ.
ಮಧ್ಯಪಿಂಡವೇ ಸುಜ್ಞಾನಪಿಂಡ.
ಅನಾದಿಪಿಂಡವೇ ಚಿತ್‌ಪಿಂಡ.
ಜೀವಪಿಂಡವೆಂದು
ಅಷ್ಟತನುಮೂರ್ತಿಗಳಿಂದ ಉತ್ಪತ್ತಿಯಾದವು. ಅಂದಿಂದ
ಭವಭವಂಗಳೊಳಗೆ ಬಂದು,
ಶಿವಕೃಪೆಯಿಂದ ಭವಕಲ್ಪಿತ ತೀರಿ,
ಶಿವವಾಸನಾ ಪಿಂಡಸ್ವರೂಪವನಂಗೀಕರಿಸಿದ್ದೀಗ ಜೀವಪಿಂಡ.
ಸುಜ್ಞಾನಪಿಂಡವೆಂದು
ಶಿವಾಜ್ಞೆಯಿಂದ ಚಿತ್ತಿನಂಶವೆ ಸಾಕಾರವಾಗಿ,
ಜಗದ್ಹಿತಾರ್ಥಕಾರಣ ಮರ್ತ್ಯಲೋಕದಲ್ಲಿ ಉದಯವಾಗಿ,
ಶರೀರಸಂಬಂಧಿಗಳಾಗಿಯು
ಆ ಶರೀರದ ಗುಣಧರ್ಮಕರ್ಮಂಗಳ ಹೊದ್ದಿಯು
ಹೊದ್ದದಿಪ್ಪರು.
ಅದೇನು ಕಾರಣವೆಂದಡೆ: ಚಿದಂಶಿಕರಾದ ಕಾರಣ.
ಶರೀರವಿಡಿದರೆಯೂ ಆ ಶರೀರಸಂಬಂಧಿಗಳಲ್ಲ ಎಂಬುವಕ್ಕೆ
ದೃಷ್ಟವಾವುದೆಂದಡೆ:
ಉರಿ ಬಂದು ಕರ್ಪೂರವ ಸೋಂಕಲಾಗಿ
ಕರ್ಪುರದ ಗುಣ ಕೆಟ್ಟು ಉರಿಯೇ ಆದಂತೆ,
ಪರುಷದ ಬಿಂದು ಬಂದು ಲೋಹವ ಸೋಂಕಲು
ಆ ಲೋಹದ ಗುಣ ಕೆಟ್ಟು ಚಿನ್ನವಾದಂತೆ,
ಆ ಶರಣರು ಬಂದು ಆ ಲಿಂಗವ ಸೋಂಕಲಾಗಿ,
ಆ ಪಂಚಭೂತದ ಪ್ರಕೃತಿಕಾಯ ಹೋಗಿ,
ಪ್ರಸಾದಕಾಯವಾಗಿತ್ತಾಗಿ.

ಇದು ಕಾರಣ, ಬಸವ ಮೊದಲಾದ ಪ್ರಮಥರು
ಧರಿಸಿದ ಶರೀರವೆಲ್ಲ
ಸುಜ್ಞಾನಪಿಂಡವೆಂದು ಹೇಳಲ್ಪಟ್ಟಿತ್ತು.
ಅದುಕಾರಣ ಪಂಚಭೂತಂಗಳ ಪವಿತ್ರವ ಮಾಡಲೋಸ್ಕರವಾಗಿ,
ಧರಿಸಿದ ಪಿಂಡವಲ್ಲದೆ, ವಾಸನಾಧರ್ಮದ ಪಿಂಡವಲ್ಲ.
ಶುದ್ಧರೇ ಅಹುದು ದೇಹಮಾತ್ರವಲಾದ
ವಾಸನಾಪಿಂಡವೆಂಬುದದು ಅಜ್ಞಾನ ನೋಡ.
ಚಿತ್ ಪಿಂಡವೆಂದು
ಚಿನ್ನ ಬಣ್ಣದ ಹಾಂಗೆ ಶಿವತತ್ವವ ಬಿಟ್ಟು ಎಂದೂ ಅಗಲದೆ
ಇದ್ದಂಥಾದು.
ಚಿದಂಗಸ್ವರೂಪವಾಗಿ,
ಚಿದ್ಘನಲಿಂಗಕ್ಕೆ ಚಿದ್ಭಾಂಡಸ್ಥಾನವಾಗಿದ್ದಂಥದು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬ ॥

೮೦

ದೇಹವ ಮರೆಗೊಂಡಿಪ್ಪ ಆತ್ಮನಂತೆ,
ಶಕ್ತಿಯ ಮರೆಗೊಂಡಿಪ್ಪ ಶಿವನಂತೆ,
ಕ್ಷೀರವ ಮರೆಗೊಂಡಿಪ್ಪ ತುಪ್ಪದಂತೆ,
ವಾಚ್ಯವ ಮರೆಗೊಂಡಿಪ್ಪ ಅನಿರ್ವಾಚ್ಯದಂತೆ,
ಲೋಕಾರ್ಥದೊಳಡಗಿಪ್ಪ ಪರಮಾರ್ಥದಂತೆ,
ಎನ್ನ ಆತ್ಮನೊಳಡಗಿಪ್ಪ ಪರಮಾರ್ಥ ತತ್ವವು,
ಬೀಜದೊಳಡಗಿದ ವೃಕ್ಷದಂತೆ ಇದ್ದಿತಯ್ಯ.
ನಾನರಿಯದ ಮುನ್ನ ಎನ್ನೊಳಡಗಿದ್ದಿತಯ್ಯ
ಶರಣ ಲಿಂಗ ಸಂಬಂಧ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭ ॥

## ಪಿಂಡಜ್ಞಾನಸ್ಥಲದ ವಚನ

ಸೂತ್ರ॥ ಇಂತು ಪಿಂಡಸ್ಥಲವನರಿದು ನಿಶ್ಚಯಿಸುತ್ತಿರಲು, ಮುಗಿಲ ಮರೆಯಿಂದ ಉದಯವಾದ ಸೂರ್ಯನಂತೆ ಪಿಂಡದೊಳಗಿರ್ದ ಶಿವತತ್ವ ಉದಯವಾಗಿ ತೋರಲು ಆತ್ಮತತ್ವವಿದು, ಶಿವತತ್ವವಿದೆಂಬ ವಿವೇಕ ತಲೆದೋರಿ, ಶಿವತತ್ವದ ಆದಿ ಮಧ್ಯಾವಸಾನ ಕಾಣಬಂದಿತ್ತಾಗಿ, ಮುಂದೆ ಪಿಂಡಜ್ಞಾನಸ್ಥಲವಾದುದು.

೮೧

ಒಳಹೊರಗೆ ಭರಿತನಾಗಿ ವಸ್ತು ತಲೆದೋರದೆ, ಕಾಣಿಸಿಕೊಳ್ಳದೆ
ಇಪ್ಪನೆನುತ್ತಿದ್ದಿರಿ;
ಆ ವಸ್ತುವಿನ ಗುಣ, ವಸ್ತುವಿನ ಸ್ವರೂಪು, ಆವುದು ಕರುಣಿಸಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

೮೨

ವಸ್ತುವಿನ ಸ್ವರೂಪ ಹೇಳಿಹೆ ಕೇಳು,
ಹೊಳೆವುತ್ತಿದ್ದ ಕಾಲಾಗ್ನಿಯೋಪಾದಿಯ ಕಾಂತಿಯನುಳ್ಳುದು;
ಅನಂತಕೋಟಿ ಮಿಂಚುಗಳ ಪ್ರಭೆಯ ಪ್ರಕಾಶವನುಳ್ಳುದು;
ಅನಂತಕೋಟಿ ಸೋಮ ಸೂರ್ಯರ ಪ್ರಭೆಯ ಪ್ರಕಾಶವನುಳ್ಳದು;
ಮುತ್ತು ಮಾಣಿಕ್ಯ ನವರತ್ನದ ಕಿರಣಂಗಳ ಪ್ರಭೆಯ
ಪ್ರಕಾಶವನುಳ್ಳುದು;
ನಿನ್ನ ಪಿಂಡದ ಮಧ್ಯದಲ್ಲಿ ಉದಯವಾಗಿ ತೋರುವ
ಪಿಂಡಜ್ಞಾನದ ಮಹದರುಹೆ
ಪರಬ್ರಹ್ಮವೆಂದು ಅರಿಯಲು ಯೋಗ್ಯವೆಂದೆನಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨ ॥

೮೩

ಈ ಪಿಂಡಜ್ಞಾನದ ಕಳೆ,
ವಾಕ್ಯನೂ ಮೀರಿತ್ತು ; ಮನಸ್ಸನೂ ಮೀರಿತ್ತು ;

ಅಕ್ಷರಂಗಳೂ ಮೀರಿತ್ತು ; ಜ್ಞಾನವನು ಮೀರಿ ತೋರುವ
ನಿರಂಜನ ಸೂಕ್ಷ್ಮವಸ್ತುವೆಂದು ಭಾವಿಸುವದೆಂದೆನಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩ ॥

೮೪

ಹೃದಯಕಮಲ ಕರ್ಣಿಕಾವಾಸದಲ್ಲಿ
ದಿಟಪುಟಜ್ಞಾನ ಉದಯವಾಗಿ ಧಿಕ್ಕರಿಸಲಾಗಿ,
ಸಟೆ ದೂರವಾಗಿ ವಿವರ್ಜಿತವಾದವು ನೋಡ.
ಕುಟಿಲ ಕುಹಕ ಅಟಮಟ ಅಭ್ರಚ್ಛಾಯವಳಿದು ಹೋಗದ
ಮುನ್ನ,
ಸ್ಫಟಿಕ ಪ್ರಜ್ವಲಾಕಾರವಾಯಿತ್ತು ನೋಡ.
ಆ ಶಿವಜ್ಞಾನಪ್ರಭೆಯೊಳಗೆ ನಿಟಿಲಲೋಚನನೆಂಬ ನಿತ್ಯನ ಕಂಡು,
ಅದೇ ಎನ್ನ ನಿಜವೆಂದು ಬೆರಸಿ ಅಭಿನ್ನಸುಖಿಯಾಗಿರ್ದೆನಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪ ॥

೮೫

ಮಿಂಚಿನ ಪ್ರಭೆಯಲ್ಲಿ ಪಂಚವದನನ ಕಂಡೆನಯ್ಯ.
ಸಂಚವಿಲ್ಲದೆ ನಿರೀಕ್ಷಿಸಲು ಪಂಚಪಂಚೀಕೃತಿಯ
ಪ್ರಪಂಚು ಪರಿಹಾರವಾಗಿ,
ನಿಃಪ್ರಪಂಚ ನಿರ್ಲೇಪಕನಾದೆನು ನೋಡ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫ ॥

೮೬

ನಿರಾಕಾರವೇ ಸಾಕಾರವಾಗಿ,
ನಿರ್ವಿಕಾರದ ಸೋಂಕಿನ ಸೊಬಗೆ ನೆಲೆವನೆಯಾಗಿಪ್ಪಿರಿ ಅಯ್ಯ.
ಆತ್ಮಜ್ಯೋತಿ, ಮನೋಜ್ಯೋತಿ, ಸ್ವಯಂಜ್ಯೋತಿ,
ಕೇವಲ ಪರಂಜ್ಯೋತಿ ಜ್ಞಾನಾನಂದಮಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬ ॥

೮೭

ಸಮಸ್ತ ಲೋಕಾದಿ ಲೋಕಂಗಳಿಲ್ಲದಂದು
ಅನಾದಿಪರಶಿವ ನೀನೊಬ್ಬನೆ ಇರ್ದೆಯಯ್ಯ.

ಆ ನಿರಾಕಾರ ಪರಶಿವನಿಂದ ನಾನುದಯವಾಗಿ,
ಮಾಯಾರಂಜನೆ ಹುಟ್ಟಿದ ಮುನ್ನ
ನಿರಂಜನನೆಂಬ ಗಣೇಶ್ವರನಾಗಿರ್ದೆನು.
ಜ್ಞಾನಾಜ್ಞಾನಗಳಿಲ್ಲದಂದು
ಜ್ಞಾನಾನಂದನೆಂಬ ಗಣೇಶ್ವರನಾಗಿರ್ದೆನು.
ಈ ಶರೀರವಿಲ್ಲದಂದು ನಿರ್ಮಲನೆಂಬ ಗಣೇಶ್ವರನಾಗಿರ್ದೆನು.
ಬಸವ ಮೊದಲಾದ ಪ್ರಮಥರೆಲ್ಲರೂ ಪ್ರಸಾದವ ಎನ್ನಲ್ಲಿ
ಸಂಬಂಧಿಸಿ,
ನಿನ್ನ ಕೃಪಾಪ್ರಸಾದವ ಎನ್ನಲ್ಲಿ ಮೂರ್ತಿಗೊಳಿಸಿ,
'ಇನ್ನಾವುದಕ್ಕೂ ಅಂಜಬೇಡ' ಎಂದು,
ನೀನು, ನಿನ್ನ ಪ್ರಮಥರು ಎನ್ನ ಆಜ್ಞಾಪಿಸಿ
ಮರ್ತ್ಯಕ್ಕೆ ಕಳುಹಿದಿರಿಯಾಗಿ,
ಕಳುಹಿದ ಭೇದವ ಶಿವಜ್ಞಾನೋದಯದಿಂದ ಅರಿದು
**ಸಿದ್ಧಲಿಂಗ**ನೆಂಬ ನಾಮ
ಎನಗೆ ನಿನ್ನಿಂದ ಬಂದಿತ್ತೆಂಬುದ ಅರಿದೆನು ಕಾಣಾ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭ ॥

೮೮

ಆತ್ಮವೃಕ್ಷಿಂದ ಈಶ್ವರನ ತಿಳಿದಲ್ಲದೆ, ಜಾತಿಸ್ಮರತ್ವವ ಕಾಣಬಾರದು;
ಜ್ಯೋತಿರ್ಮಯಲಿಂಗದಿಂದೊಗೆದ ಶರಣನ,
ಏತರಿಂದ ಕಂಡು ಹೇಳುವಿರಣ್ಣ?
ಮಾತಿನಿಂದ ಹೇಳಿಹೆನೆಂದಡೆ, ವಾಚಾತೀತ ಶಿವಶರಣನು.
ವಾಙ್ಮನಕ್ಕಗೋಚರವಾದ ಮಹಾಘನ ಪರತತ್ವದಲುದಯವಾದ
ಶರಣನ
ಮಾತಿಗೆ ತಂದು ನುಡಿವ ಮರುಳುಮಾನವರನೇನೆಂಬೆನಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮ ॥

೮೯

ಸ್ಫಟಿಕದ ಘಟದೊಳಗೆತ್ತಿದ ಜ್ಯೋತಿ,
ಒಳಹೊರಗೊಂದೆ ಸ್ವಯವಾಗಿ ಪ್ರಜ್ವಲಿಸುವಂತೆ,
ಎನ್ನೊಳಗಿಪ್ಪಾತನೂ ಹೊರಗಿಪ್ಪಾತನೂ ಒಂದೇ ವಸ್ತುವೆಂಬ

ಆದ್ಯಂತವು ಕಾಣುಬಂದಿತ್ತು ನೋಡ.
ಆ ಪರತತ್ವವೇ ಶರಣ ತಾನೆ ನೋಡ.
ಬೇರೊಂದು ಸ್ವರೂಪವಲ್ಲ ಕಾಣ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯ ॥

೯೦

ನೀರಜದೊಳಗೆ ಹುಟ್ಟಿದ ಕಿಚ್ಚು,
ವಾರಿಧಿಯ ಕುಡಿವುದ ಕಂಡೆನಯ್ಯ.
ಸಾಗರಬತ್ತಿ, ಇಪ್ಪತ್ತೈದು ಗ್ರಾಮವ ನುಂಗಿದ ಕಪ್ಪೆ,
ಬಾಯಾರಿ ಸತ್ತಿತ್ತು ಕಾಣ ದೇವ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦ ॥

೯೧

ಹರಿವ ನೀರ ಮಧ್ಯದಲ್ಲಿ
ಉರಿವ ಜ್ಯೋತಿಯ ಬೆಳಗೆ ನೋಡಿ ಕಂಡೆನಯ್ಯ.
ಸಾರಿರ್ದು ನೋಡಿದರೆ, ನೀರೊಳಗೆ ಮುಳುಗಿ ಉರಿವುತ್ತಿದೆ
ನೋಡ.
ದೂರದಲ್ಲಿರ್ದು ನೋಡಿದರೆ, ನೀರಮೇಲೆ ಉರಿವುತ್ತಿದೆ
ನೋಡ.
ಇದೇನೋ! ಇದೇನೋ!!
ಜ್ಯೋತಿಯ ಗುಣವೋ, ತನ್ನ ಭ್ರಾಂತಿನ ಗುಣವೋ ಎಂದು,
ಸ್ವಯಜ್ಞಾನ ಗುರುವಿನ ಮುಖದಿಂದ ವಿಚಾರಿಸಲು
ಹರಿವ ನೀರು ಬತ್ತಿತ್ತು; ಜ್ಯೋತಿ ಉಳಿಯಿತ್ತು.
ಆ ಉಳಿದ ಉಳಿಮೆಯೆ ತಾನೆಂದು ತಿಳಿದಾತನಲ್ಲದೆ,
ಶಿವಶರಣನಲ್ಲ ಕಾಣ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೧ ॥

೯೨

ಚಿನ್ನದ ಗಿರಿಯಲ್ಲಿ ಚಿನ್ಮಯಮೂರ್ತಿಯ ಕಂಡೆನಯ್ಯ.
ಚಿನ್ನ ಕಾರ್ಮಿಕವಲ್ಲ; ಚಿನ್ಮಯ ಮೂರ್ತಿಯಲ್ಲ;

ಇವರನ್ವಯವೇನು ಹೇಳ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೨ ॥

೯೩

ಚಿತ್ತನ ಮನೆಯಲ್ಲಿ ಸತ್ತಿಪ್ಪವನಿವನಾರೋ?
ಸತ್ತವನ ನೋಡಿ, ಎತ್ತಹೋದವರೆ,
ಎತ್ತಹೋದವ ಸತ್ತು, ಸತ್ತವನೆದ್ದು ಕೂಗುತ್ತಿದ್ದಾನೆ.
ಈ ಚಿತ್ರವನೇನೆಂಬೆನೋ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೩ ॥

೯೪

ಪುರುಷಾಮೃಗದ ಕೈಯಲ್ಲಿ, ಪರುಷವಿಪ್ಪುದ ಕಂಡೆನಯ್ಯ.
ಪರುಷವ ಸೋಂಕದೆ ಪಶುವಾಗಿದೆ ನೋಡ!
ಪುರುಷಾಮೃಗವನರಿದು ಪರುಷವ ಸಾಧನಮಾಡಬಲ್ಲ
ಹಿರಿಯನಾರನೂ ಕಾಣೆ.
ಕಸ್ತುರಿಯ ಮೃಗ ಬಂದು ಸುಳಿಯಲು
ಪುರುಷಾಮೃಗವಳಿದು, ಪರುಷಸಾಧನವಾಗಿ,
ಪರಃಪರವಾದುದೇನೆಂಬೆನಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೪ ॥

೯೫

ತಂದೆಯ ವಧುವ ತಂದು, ಮಗನಿಗೆ ಮದುವೆ ಮಾಡಿದೆ;
ಮಗನ ಪೆಂಡತಿ ತಂದು, ಅವರಪ್ಪಗೆ ಮದುವೆ ಮಾಡಿದೆ;
ಆದಿಪಿಂಡವೇ ಜೀವಪಿಂಡ;
ಅತ್ತೆ ಸೊಸೆಯ ನೆರದವಳು;
ತಂದೆಮಕ್ಕಳಿಬ್ಬರೂ ಪರಾಂಗನೆಯ ನೆರದು,
ಪರಾಪರವಸ್ತುವಾದುದನೇನೆಂಬೆನಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೫ ॥

೯೬

ಊರ ಮಧ್ಯದಲ್ಲಿ ಹುಟ್ಟಿದ ಕಿಚ್ಚು, ಮೇರುವೆಯ ಸುಟ್ಟಿತ್ತು
ನೋಡ.
ಕೇರಿಕೇರಿಯಲ್ಲಿ ಬೀದಿವರಿದು, ಅರಣ್ಯವನಾವರ್ತಿಸಿತ್ತು ನೋಡ.

ಅರಣ್ಯದೊಳಗಿರ್ದ ಅಂಗನೆಯ ಮುಡಿ ಬೆಂದು,
ಊರ ಹತ್ತಿದ ಕಿಚ್ಚು ಉಮಾಪತಿಯನಪ್ಪಲು
ನಾರಿಪುರುಷರಳಿದು ಮಾರಾರಿಯೊಬ್ಬನೆ ಅದನು ನೋಡಿರೇ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೬ ॥

೯೭

ಗಗನ ಮಂಡಲದಲ್ಲಿ ಹುಟ್ಟಿದ ಶಶಿಕಳೆ
ಭೂಮಂಡಲದಲ್ಲಿ ಉದಯವಾದುದ ಕಂಡೆನಯ್ಯ.
ಭೂಮಂಡಲದಲುದಯವಾದ ಶಶಿಕಳೆ,
ತ್ರೈಜಗವ ನುಂಗಿತ್ತು ನೋಡ.
ನಾರಿಯರ ತಲೆಯ ಮೆಟ್ಟಿ, ಮೇರುವೆಯ ಹೊಕ್ಕಿತ್ತು ನೋಡ.
ಮೇರುಗಿರಿಯ ಪರ್ವತವಲ್ಲಿಪ್ಪಾತನನೆಯ್ದೆ ನುಂಗಿತ್ತು ನೋಡ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೭ ॥

೯೮

ಪಶುವಿನ ಉದರದೊಳಗಿಪ್ಪ ಕ್ಷೀರ
ಶಿಶುವಿಂಗಲ್ಲದೆ ಪಶುವಿಂಗಲ್ಲದೆ ಇಪ್ಪ ಪರಿಯಿದೇನೋ?.
ಪಶುವಿನ ಕಳೇವರದಿಂ ಪೊರಮಟ್ಟು, ಕಾಲಾಗ್ನಿಯಾಗಿ
ಪಶುವ ಕೊಂದಿತ್ತು; ಶಿಶುವ ನುಂಗಿತ್ತು.
ಪಶುಪತಿಯ ಕೂಡಿ, ಶಿಶುವಿಂಗೆ ಪಶುವಿಂಗೆ
ಹೊರಗಾದ ವಿಷಯಾತೀತನು ನಿಮ್ಮ [ರೂಹು],
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೮ ॥

೯೯

ವಾರಣದುದರದಲ್ಲಿ ಮಾರಿ ಮನೆಯಮಾಡಿಕೊಂಡಡಿಪ್ಪಳು
ನೋಡ.
ಮಾರಿಯ ಮನೆಯ ಹೊಕ್ಕವರೆಲ್ಲ ದಾರಿಯ ಕಾಣದೆ,
ಹೋರಾಟಗೊಳುತ್ತಿದ್ದಾರೆ ನೋಡ.
ಇವರೆಲ್ಲರ ಹೋರಾಟವ ಕಂಡು,
ಮೂರುಲೋಕದ ಮಸ್ತಕವ ಮೆಟ್ಟಿ ನಿಲಲು,
ವಾರುಣದುದರ ಬೆಂದಿತ್ತು, ಮಾರಿ ಸತ್ತಳು.

ದಾರಿ ನಿವಾಟವಾಯಿತ್ತು ನಿಮ್ಮವರಿಗೆ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೯ ॥

೧೦೦

ಮುಚ್ಚಿದ ಕಣ್ಣು ತೆರದುದ ಕಂಡೆ;
ಕಿಚ್ಚಿನ ಜ್ವಾಲೆ ಕರವುದ ಕಂಡೆ;
ಮೃತ್ಯುಗಳ ಮೊತ್ತ ಕಿತ್ತೋಡುವುದ ಕಂಡೆ;
ಕತ್ತಲೆ ಬೆಳಗಾದುದ ಕಂಡೆ;
ಬಿಚ್ಚಿ ಬೇರಿಲ್ಲದ ಬೆಳಗೆನ್ನನೊಳಕೊಂಡು
ನಿತ್ಯ ಪ್ರಸನ್ನನಾದೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೦ ॥

೧೦೧

ಮರವೆಯ ತಮವ ಕಳೆಯಯ್ಯ.
ಅರುಹಿನ ಜ್ಯೋತಿಯ ಬೆಳಗಯ್ಯ.
ಅರುಹಿನ ಜ್ಯೋತಿಯ ಬೆಳಗಿ,
ನಿಮ್ಮ ಕುರುಹ ಕಂಡು ಕೂಡುವ
ತುರ್ಯಾವಸ್ಥೆಯ ಸುಖವನೆ ಕೊಡು ಕಂಡ ಮಹಾಲಿಂಗ ತಂದೆ.
ಕೊಡದಿರ್ದಡೆ ನಿನಗೆ ಪ್ರಮಥರಾಣೆ, ಬಸವಣ್ಣನಾಣೆ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೧ ॥

೧೦೨

ಊರ ಹೊರಗಣ ಮನೆಯೊಳಗೊಂದು ಉರಿಗಣ್ಣು ಹುಟ್ಟಿ,
ಈರೇಳುಲೋಕವ ನುಂಗಿ ಊರೆಲ್ಲವ ಸುಟ್ಟಿತ್ತು ನೋಡ.
ಊರ ಸುಟ್ಟ ಉರಿಗಣ್ಣು ಅದು ಆರಿಗೂ ಕಾಣಬಾರದು.
ಅದು ಮಾರಾರಿ ತಾನೆ ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೨ ॥

೧೦೩

ಅಂಗ ಹಲವರ ಮೇಲೆ ನಿಂದಾತನ
ಕಾಣುವ ಕಂಗಳು ಒಂದೇ ನೋಡ.

ಆ ಕಾಣುವ ಕಂಗಳು ತನ್ನ ಕಣ್ಣೋ,
ಬೇರೊಂದು ಬಿನ್ನಾಣದ ಕಣ್ಣೋ
ಎಂಬ ಬೆಡಗನರಿದು,
ತನ್ನ ಕಣ್ಣ ಕಳದು ಬಿನ್ನಾಣದ ಕಣ್ಣನಳಿಯಲು
ತನ್ನ ಮುನ್ನಿನ ಕಣ್ಣು ಕಾಣಬಂದಿತ್ತು ನೋಡ.
ಅದು ನಿನ್ನ ಕಣ್ಣಿಂದರಿದ ಮಾತ್ರದಲ್ಲಿ ಎನ್ನ ನುಂಗಿತ್ತು;
ನಿನ್ನಲ್ಲಿ ಅಡಗತ್ತು;
ಅದು ಅಡಗಿದ ಠಾವಿನಲ್ಲಿ ನಾನಡಗಿ ನಿರ್ವಯಲಾದೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೩ ॥

೧೦೪

ಕೋಡಗನ ಅಣಲ ಸಂಚದಲ್ಲಿ
ಎರಡು ದಾಡೆ ಹುಟ್ಟಿದವು ನೋಡಾ.
ಆ ದಾಡೆಯ ಸಂಚಲದಲ್ಲಿ
ಮೂರುಲೋಕವೆಲ್ಲ ಆಳುತ್ತ ಮುಳುಗುತ್ತಿದೆ ನೋಡ.
ತ್ರೈಜಗದ ಮಸ್ತಕವನೊಡದು ನೀವು ಮೂಡಲು
ಈರೇಳು ಲೋಕವೆಲ್ಲ ಬೆಳಗಾಯಿತ್ತು ನೋಡ.
ಈರೇಳು ಲೋಕವನೊಳಕೊಂಡ ಬೆಳಗು ತಾನೆಂದರಿಯಲು
ಕೋಡಗನಣಲಸಂಚದ ದಾಡೆ ಮುರಿಯಿತ್ತು;
ಮೂರುಲೋಕದ ವೇದನೆ ಮಾದುದ ಕಂಡೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೪ ॥

೧೦೫

ಅಯ್ಯಾ, ವಾಕ್ಕನೂ ಮೀರಿ, ಮನಸ್ಸನೂ ಮೀರಿ,
ಅಕ್ಷರಂಗಳನೂ ಮೀರಿ,
ಜ್ಞಾನವನೂ ಮೀರಿ ತೋರುವ ನಿರುಪಮವಸ್ತುವೆಂಬುತಿದ್ದಿರಿ:
ಅದು ರೂಪಾಗಿ, ಎನ್ನ ಕರಸ್ಥಲಕ್ಕೆ ಇಷ್ಟ, ಮನಸ್ಥಲಕ್ಕೆ ಪ್ರಾಣವಾಗಿ,
ಭಾವದಲ್ಲಿ ಭರಿತವಾಗಿ, ತೀವಿ ಪರಿಪೂರ್ಣವಾಗಿ,
ಎಡೆಕಡೆಯಿಲ್ಲದೆಯಿಪ್ಪ ಭೇದವ ಕರುಣಿಸಿದಿರಿಯಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೫ ॥

## ಸಂಸಾರಹೇಯಸ್ಥಲದ ವಚನ

ಸೂತ್ರ॥ ಇಂತು ಶಿವಶರಣನಂತರಂಗದಲ್ಲಿ ಶಿವಜ್ಞಾನ ತಲೆದೋರಿ, ಆ ಶಿವಜ್ಞಾನ ಪ್ರಭಾಪ್ರಕಾಶವ ಮಧ್ಯದಲ್ಲಿ ಪರಿಪೂರ್ಣತ್ವವನೈದಿದ ಸಚ್ಚಿದಾನಂದ ನಿತ್ಯ ಪರಿಪೂರ್ಣ ಕೇವಲ ಪರಶಿವತತ್ವವೆ ತನ್ನ ನಿಜವೆಂದರಿದು ಆ ಪರಮಜ್ಞಾನ ದೃಷ್ಟಿಯ ಮುಂದೆ ಇದಿರಿಟ್ಟು ತೋರುವ ಮರವೆಯೆಂಬ ಮಾಯಾಪ್ರಪಂಚನು ಅರುಹಿನಮುಖದಿಂದ ಅತಿಗಳೆವುತ್ತಿರ್ದನಾಗಿ ಮುಂದೆ ಸಂಸಾರಹೇಯಸ್ಥಲವಾದುದು.

೧೦೬

ಮೋಹನ ಮೊಲೆಯ ಮುದ್ದುಮೊಗದ ಭಾವಕಿಯರ,
ಲಲ್ಲೆನುಡಿಯೆಂಬ ನಯಗತ್ತಿ
ಎಲ್ಲರ ಹೃದಯವ ಕೊರವುತ್ತಿದೆ ನೋಡಾ.
ಇನ್ನೆಲ್ಲಿಯ ಅರುಹೋ ಶಿವ ಶಿವಾ,
ಬಲ್ಲತನ ಬರುದೊರೆ ಹೋಯಿತ್ತು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

೧೦೭

ಭಗಧ್ಯಾನವೆಂಬುವ ಬಂದಿಕಾನವ ಹೊಕ್ಕು,
ಸತಿಯರ ಸವಿನುಡಿಯೆಂಬ ಶಸ್ತ್ರವ ಹಾಯ್ದು,
ಅಂಗನೆಯರ ಶೃಂಗಾರವೆಂಬ ಕತ್ತಲೆಗವಿದು,
ಕಂಗಳು ಕೆಟ್ಟು, ಲಿಂಗನೆನಹೆಂಬ ಜ್ಯೋತಿ ನಂದಿತ್ತು ನೋಡ.
ಆ ಸ್ವಯಂ ಜ್ಯೋತಿ ಕೆಡದ ಮುನ್ನ, ಅಂಗವಿಕಾರವೆಂಬ ಅರಸು
ಅನಂತ ಹಿರಿಯರ ನುಂಗುವದ ಕಂಡು,
ಮಹಾಜ್ಞಾನಿಗಳು ಹೇಸಿ ಕಡೆಗೆ ತೊಲಗಿದರು ನೋಡ
ನಿಮ್ಮ ಪ್ರಮಥರು, ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.
॥ ೨ ॥

೧೦೮

ದೇವಸ್ತ್ರೀಯರ ಸಂಗಕ್ಕೆ ಎಣಿಸುವದೆಲ್ಲ ಕಾಯಗುಣ ಕಾಣಿರಣ್ಣ.
ಆವ ಹಾವಾದಡೇನು ವಿಷವೊಂದೇ ನೋಡ.
ಮಾಯಿಕಕ್ಕೆ ದೇವತ್ವವುಂಟೇ ಮರುಳು ಮಾನವ?
ಮಹಾದೇವನೇ ದೇವನಲ್ಲದೆ, ಅನಿತ್ಯವಾದ ಮಾಯಾಪ್ರಪಂಚು
ನಿತ್ಯವಾದ ಶಿವನ ನೆನೆದರೆ ಕೆಡುವುದು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩ ॥

೧೦೯

ಶಶಿಮುಖಿಯರ ಸಂಗಕ್ಕೆ ಎಣಿಸುವ ಪಶುಪ್ರಾಣಿಗಳು
ಪಶುಪತಿಯ ಸಂಗಸುಖಕ್ಕೆ ಯಾಕೆ ಎಣಿಸಲೊಲ್ಲರಯ್ಯ?
ಶಿವ ಶಿವಾ! ನೀ ಮಾಡಿದ ವಿಷಯದ ವಿಧಿ,
ಈರೇಳುಲೋಕವನಂಡಲೆವುತ್ತಿದೆ ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪ ॥

೧೧೦

ಲಲನೆಯರ ನಟನೆಯೆಂಬ ಕುಟಿಲಕ್ಕೆ ಸಿಕ್ಕಿ,
ಕೋಟಲೆಗೊಳದಿರ ಮರುಳು ಮಾನವ.
ನಿಟಿಲತಟದಲ್ಲಿ ಮಠವ ಮಾಡಿಕೊಂಡು
ನಿಶ್ಚಿಂತ ನಿರಾಳನಾಗಿರ.
ಹುಸಿಯ ಮಾಯಾತಮಂಧಕೆ ದಿಟಪುಟದಿವಾಕರ ಎನ್ನೊಡೆಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭು ಕಾಣಿರೋ. ॥ ೫ ॥

೧೧೧

ಉರಿಗೆ ತೋರಿದ ಬೆಣ್ಣೆ ಕರಗುವಂತೆ,
ಅಸಿಯ ಜವ್ವನೆಯರ ಕಂಡು ವಿಷಯಾತುರರಾಗಿ
ಕುಸಿವುತ್ತಿಪ್ಪರು ನೋಡಾ ಹಿರಿಯರು.
ಇದು ಹುಸಿಯೆಂದರಿದು
ನಿಮ್ಮ ಶರಣರು ಮನದ ಕೊನೆಯ ಮೊನೆಯಲ್ಲಿ
ಶಶಿಧರನ ಸಾಹಿತ್ಯವ ಮಾಡಬಲ್ಲರಾಗಿ,

ಸಂಸಾರವಿಷಯದೋಷ ಪರಿಹರವಪ್ಪುದು ತಪ್ಪುದು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬ ॥

೧೧೨

ತುರಿಯಮೇಲೆ ಉಗುರನಿಕ್ಕಿದರೆ, ಹಿತವಾಗಿಹುದು;
ಒತ್ತಿ ತುರಿಸಿದಡೆ ಒಡಲೆಲ್ಲಾ ಉರಿವ ದೃಷ್ಟಾಂತರವಂತೆ,
ವಿಷಯ ತೋರಿದಡೆ ಯೋನಿ ಚಕ್ರವ ನಿಶ್ಚಯಿಸುವುದು
ಆ ವಿಷಯ ತೀರಿದ ಬಳಿಕ ಆ ಯೋನಿ
ಸ್ನಾನದಕುಳಿಯಿಂದ ಕಡೆಯಾಗಿಪ್ಪುದು ನೋಡ.
ಸತಿಯೆಂಬವಳು ಸತ್ತ ಶವಕಿಂದ ಕಡೆಯಾಗಿಪ್ಪಳು ನೋಡ.
ಅಪ್ಪಬಾರದು ಅಪ್ಪಬಾರದು; ಅತಿ ಹೇಸಿಕೆ.
ಪಶುಪತಿ ನೀ ಮಾಡಿದ ವಿಷಯವಿಧಿ
ಈರೇಳುಲೋಕವನಂಡಲೆವುತ್ತಿದೆ ನೋಡ.
ಈ ಸಂಸಾರ ಪ್ರಪಂಚ ದೇವದಾನವ ಮಾನವರು
ಪರಿಹರಿಸಲಾರದೆ
ಆಳುತ್ತ ಮುಳುಗುತ್ತಲಿಪ್ಪರು ನೋಡ.
ಇದು ಕಾರಣ, ಸದಾಶಿವನನರಿದು ನೆನೆಯಲು
ಸಂಸಾರಪ್ರಪಂಚು ಕೆಡುವುದು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭ ॥

೧೧೩

ಮಲದೊಡನೆ ಕೈದಂಡೆಯನಿಕ್ಕಿದಡೆ,
ಮಾನಸಿಕೆ ಕೆಡದೆ ಮಾಣ್ಬುದೆ?
ನಾಯ ಸರಸ ಸೀರೆಯ ಕೇಡು, ಮಾಯಾಸಂಗ ಹರಣದ ಕೇಡು.
ಎಲೆ ಮಹಾಮಹೇಶ್ವರ ಶಿವನೇ
ನಿನ್ನ ಸಂಗವಲ್ಲದೆ ಈ ದುಸ್ಸಂಗವೆಲ್ಲಾ
ದುರ್ಗತಿಗೆ ಬೀಜ ಕಂಡಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮ ॥

೧೧೪

ಊರ ಹೊಲನ ಮೇದ ಬಸವ, ಕಾಡುಗಟ್ಟೆಯ ನೀರ ಕುಡಿದು
ಕಡೆಯಲ್ಲಿದ್ದ ಪಶುವಿನ ಮಡಿಲ ಮೂಸಿ,

ಉಚ್ಚೆಯ ಕುಡಿದು ಹಲ್ಲುಗಿರಿದು ಕ್ರೀಡಿಸುವಂತೆ
ಹಸಿವಿನಿಚ್ಚೆಗೆ ನಾಡ ಅಶನವ ತಿಂದು,
ವ್ಯಸನದಿಚ್ಚೆಗೆ ಯೋನಿಕಟ್ಟೆಯನರಿಸಿಕೊಂಡು ಹೋಗಿ,
ಅಶುದ್ಧದಲ್ಲಿ ಬಿದ್ದು ಹೊರಳುವ ಹಂದಿಯಂತೆ,
ಮಾಯಾಮೋಹದ ವಿರಹದೊಳಗೆ
ಆಳುತ್ತ ಮುಳುಗುತ್ತ ಇಪ್ಪವರು
ದೇವನನೆತ್ತ ಬಲ್ಲರಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. || ೯ ||

೧೧೫

ಹೆಂಗಳೊಲವೆಂಬುದು ಅಂಗಜನ ಅರಮನೆ:
ಭಂಗಂಬಡುತ್ತಿದ್ದಾರೆ ನೋಡಾ ತ್ರೈಜಗವೆಲ್ಲ!
ಇದು ಕಾರಣ,
ನಿಮ್ಮ ಶರಣರು ಲಿಂಗನೆನಹೆಂಬ ಕಿಚ್ಚಹಿಡಿಯಲು
ಅಂಗಜನ ಅರಮನೆ ಉರಿದು, ಭವ ಹೆರೆಹಿಂಗಿತ್ತು ನೋಡ,
ಇದೇ ಲಿಂಗದೊಲವು; ನಿಜೈಕ್ಯಪದ.
ಉಳಿದವೆಲ್ಲಾ ಹುಸಿ ಭ್ರಮೆ ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. || ೧೦ ||

೧೧೬

ಮಲವೊತ್ತಿದರೆ ಹಾಳುಗೇರಿಯಲ್ಲಿ ಬಿಡಬೇಕಯ್ಯ.
ಜಲವೊತ್ತಿದರೆ ಬಚ್ಚಲೊಳಗೆ ಬಿಡಬೇಕಯ್ಯ
ಇಂದ್ರಿಯವೊತ್ತಿದರೆ ಯೋನಿಯೆಂಬ ಬಚ್ಚಲೊಳಗೆ
ಬಿಡಬೇಕಯ್ಯ
ಸ್ನಾನನೊಂದು ಚರ್ಮವ ಕಚ್ಚಿತಂದು, ತಿಪ್ಪೆಯ ಕೆರದು ಹೂಳಿ,
ಮತ್ತೊಂದು ನಾಯಿ ಬಂದು ಕಚ್ಚಿಹಿತೆಂದು ಕಾಯ್ದುಕೊಂಡಿಪ್ಪಂತೆ
ತಾನುಚ್ಚೆಯ ಹೊಯಿವ ಬಚ್ಚಲಗುಂಡಿಯ ಜೀವದ ಹೆಣನ
ಮನೆಯ ಮರೆಯಲ್ಲಿರಿಸಿಕೊಂಡು,
ಮತ್ತೊಂದು ಬಂದು ಕಚ್ಚಿಹಿತ್ತೆಂದು
ಕುಕ್ಕನಾಯಂತೆ ಕಾಯ್ದುಕೊಂಡಿಪ್ಪವಂಗೆ ಶಿವಕೃಪೆಯಿನ್ನೆಲ್ಲಿಯದೋ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. || ೧೧ ||

೧೧೭

ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ
ಈ ಮೂರು ಮಲತ್ರಯಂಗಳು.
ಒಂದು ಕೆಂಪಿನ ಮಲ; ಒಂದು ಬೆಳ್ಪಿನ ಮಲ;
ಒಂದು ಕಪ್ಪಿನ ಮಲ.
ಈ ಮೂರು ಪ್ರಕಾರದ ಮಲವ ಭುಂಜಿಸಿ,
ಸಂಸಾರ ವಿಷಯ ಕೂಪವೆಂಬುವ
ತಿಪ್ಪೆಯ ಗುಂಡಿಯ ನೀರಕುಡಿದು,
ಮಾಯಾಮೋಹವೆಂಬ ಹಾಳುಗೇರಿಯ ಗೊಟ್ಟಿನಲ್ಲಿ ಬಿದ್ದು,
ಸೂಕರನಂತಿಪ್ಪವರ ಎಂತು ಭಕ್ತರೆಂಬೆ? ಎಂತು ದೇವರೆಂಬೆನಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೨ ॥

೧೧೮

ಪಡುವ ಕಚ್ಚಿದ ನಾಯಿ ಒಡೆಯನ ಕುರುಹ ಬಲ್ಲುದೆ?
ಹೊನ್ನು ಹೆಣ್ಣು ಮಣ್ಣು ಕಚ್ಚಿದ
ಮನುಜರು ನಿಮ್ಮನೆತ್ತ ಬಲ್ಲರಯ್ಯ?
ನಿಮ್ಮನರಿಯದ ಮನುಜರು ನಾಯಕುನ್ನಿಗಿಂದಲೂ
ಕರಕಷ್ಟ ನೋಡ!
ನಿತ್ಯವ ಹಿಡಿಯದೆ ಅನಿತ್ಯವ ಹಿಡಿದು,
ವ್ಯರ್ಥಕ್ಕೆ ಸತ್ತವರ ನೋಡಿ ಹೇಸಿದೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೩ ॥

೧೧೯

ವಿಷಯರತಿಯುಳ್ಳವಂಗೆ ಈಶ್ವರರತಿಯಿನ್ನೆಲ್ಲಿಯದೋ?
ಅಂಗವಿಕಾರವುಳ್ಳವರಿಗೆ ಲಿಂಗಾಂಗ ಸಂಬಂಧವಿನ್ನೆಲ್ಲಿಯದೋ
ಅಯ್ಯ?
ಮಾಯಾಪಟಲ ಹರಿಯದ ಹಿರಿಯರಿಗೆ ಮಹದ ಮಾತೇಕೋ?
ಸಂಸಾರಸಂಗಾನುಭಾವದ ದುಶ್ಚರಿತ್ರದೊಳಗಿಪ್ಪವರಿಗೆ
ಲಿಂಗಾನುಭಾವದ ಮಾತೇಕಿರೋ? ಬಿಡು ಬಿಡಾ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೪ ॥

## ೧೨೦

ಪಟ್ಟಣ ಪಾಳೆಯದೊಳಗೆ ವ್ಯವಹರಿಸುತ್ತಿಪ್ಪ ಸೆಟ್ಟಿಕಾರಿತಿಗೆ
ಒಬ್ಬ ಹುಟ್ಟುಗುರುಡ ಗಂಡನಾಗಿಪ್ಪನು ನೋಡ.
ಪಟ್ಟಣ ಬೆಂದು, ಪಾಳಯವಳಿದು,
ಸೆಟ್ಟಿಕಾತಿಯ ಮನವಾರ್ತೆ ಕೆಟ್ಟು,
ಹುಟ್ಟುಗುರುಡಂಗೆ ಕಣ್ಣು ಬಂದಲ್ಲದೆ
ಮುಂದಣ ಬಟ್ಟೆ ಯಾರಿಗೂ ಕಾಣಬಾರದು ನೋಡ.
ಸೂಕ್ಷ್ಮ ಶಿವಪಥದ ಹಾದಿ ಎಲ್ಲರಿಗೆ ಸಾಧ್ಯವೇ?
ಸಾಧ್ಯವಲ್ಲ ಕಾಣ.
ಸಾಧ್ಯವಲ್ಲ ಕಾಣಾ ಶಿವಜ್ಞಾನ ಸಂಪನ್ನಂಗಲ್ಲದೆ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೫ ॥

## ೧೨೧

ನೆಲ್ಲುದ್ದ ಮರನನೇರಿ ಇಳಿಯಲರಿಯದೆ
ತ್ರೈಜಗವೆಲ್ಲಾ ತಲ್ಲಣಿಸುತ್ತಿದೆ ನೋಡ.
ಅಲ್ಲಿಯ ಫಲವ ಬಯಸಿದ ಹಿರಿಯರೆಲ್ಲ ಹಳ್ಳದಲ್ಲಿ ಕೆಡೆದರೆ
ಇದ ಕಂಡು ಹೇಸಿ, ಕಡೆಗೆ ತೊಲಗಿದೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೬ ॥

## ೧೨೨

ತನುವೆಂಬುದೊಂದು ಹುತ್ತಕ್ಕೆ ಒಂಬತ್ತು ಬಾಗಿಲು;
ತಾಮಸವೆಂಬ ಸರ್ಪಂಗೆ ತಲೆ ಹದಿನಾಲ್ಕು; ಒಡಲಾರು.
ಬಾಲವ ಬ್ರಹ್ಮಲೋಕಕ್ಕಿಟ್ಟು, ಶಿರವ ಹರಿದ್ವಾರದಲ್ಲಿರಿಸಿ,
ಕರಣೇಂದ್ರಿಯಂಗಳೆಂಬ ಕಾಳಕೂಟ ವಿಷವನೆ ಉಗುಳುತ್ತಿದೆ ನೋಡ.
ಆ ವಿಷವು ಶಿವಶರಣರಲ್ಲದವರನೆಲ್ಲರ ಸುಡುವುದ ಕಂಡೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೭ ॥

೧೨೩

ಅಜ ಹರಿ ಸುರ ಮನು ಮುನಿಗಳ
ಮರುಳುಮಾಡಿ ಕಾಡಿತ್ತೀ ಮಾಯೆ.
ಪತಿವ್ರತೆಯೆಂಬುವರ ಪರಿಯಟಣಗೊಳಿಸಿತ್ತೀ ಮಾಯೆ.
ಯತಿಗಳೆಂಬವರ ಎದೆಯೆದೆಯನೊದೆದಿತ್ತೀ ಮಾಯೆ.
ಸಚರಾಚರಂಗಳನೆಲ್ಲವ ಜನನ ಮರಣಗಳೆಂಬ ಅಣಲೊಳಗಿಕ್ಕಿ
ಆಗಿದಗಿದು ಉಗಿಯಿತ್ತು ನೋಡ ಮಾಯೆ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ,
ನಿಮ್ಮ ಶರಣರಲ್ಲದವರ ಕೊಂದು ಕೂಗಿಸಿತ್ತು ನೋಡ ಈ ಮಾಯೆ.
॥ ೧೮ ॥

೧೨೪

ಕರಣಂಗಳೆಂಬ ಕತ್ತಲೆಗವಿದು
ಕಾಮುಕಾತುರದಿಂ ವಿಷಯಾಂಬುಧಿಯೊಳಗೆ ಮುಳುಗಿ
ಯತೀಶ್ವರರು ಯತೀಶ್ವರರು ಎಂದು
ಹಿತಗೆಟ್ಟು ನುಡಿದುಕೊಂಡು ನಡೆವ
ಮತಿಹೀನ ಮಾನವರನೇನೆಂಬೆ ಶಿವನೇ?
ಈಶ್ವರಶರಣಂಗೆ ವಿಕಾರ ಹೊದ್ದಿದಡೆ
ಮೀಸಲ, ನಾಯಿ ಮುಟ್ಟಿದಂತಾಯಿತ್ತು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೯ ॥

೧೨೫

ಕಟ್ಟರಸ [ನ] ಬಂದು ಕಳ್ಳರು ಮುತ್ತಲು,
ಪಟ್ಟಣ ಬೆದರಿತ್ತು ನೋಡ.
ಪಟ್ಟಣದ ತಳವಾರರು ಮುಷ್ಟರನೆಬ್ಬಟ್ಟಲು
ಬೆದರಿಕೆ ಬಿಟ್ಟೋಡಿತ್ತು ನೋಡ.
ಕಾಯಪಟ್ಟಣದ ಕಳವಳವಡಗಿತ್ತು.
ಇವನೇನೆಂಬೆನಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೦ ॥

೧೨೬

ಊರೊಳಗೆ ಉದಕತುಂಬಿ ಬಾಗಿಲೆಲ್ಲಿ ಕೆಸರಾದವು ನೋಡ.
ಮನೆಯೊಳಗೆ ಕಸ ಹೆಚ್ಚಿ, ಶಶಿಯ ನೆಳಲೀಯದು ನೋಡಿರೆ.
ಊರೊಳಗಣ ಉದಕವ ಹೊರಡಿಸಿ,
ಬಾಗಿಲೊಳಗಣ ಕೆಸರ ಸುಟ್ಟು,
ಮನೆಯೊಳಗಣ ಕಸವ ತೆಗೆದು,
ಶಶಿಯ ಸಲಹಿಕೊಂಬುದ ನೀನೊಲಿದು ಕರುಣಿಸಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೧ ॥

೧೨೭

ಕಾಮದಿಂದ ಕರಗಿದೆನಯ್ಯ, ಕ್ರೋಧದಿಂದ ಕೊರಗಿದೆನಯ್ಯ;
ಲೋಭ ಮೋಹಂಗಳಿಂದ ಅತಿ ನೊಂದೆನಯ್ಯ;
ಮದ ಮತ್ಸರಂಗಳಿಂದ ಬೆದಬೆದನೆ ಬೆಂದೆನಯ್ಯ;
ಅಹಂಕಾರ ಮಮಕಾರದಿಂದ ಮತಿಮಂದನಾಗಿರ್ದೆನಯ್ಯ;
ಇದು ಕಾರಣ,
ಎನ್ನ ಕಾಮಾದಿ ಷಡುವರ್ಗಂಗಳ ಕಳದು,
ಅಹಂಕಾರ ಮಮಕಾರಂಗಳ ಮಾಣಿಸಿ,
ನಿರಹಂಕಾರಿಯೆಂದೆನಿಸಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೨ ॥

೧೨೮

ಎನ್ನ ತನುವಿಕಾರದ ಭಯ, ಎನ್ನ ಮನವಿಕಾರದ ಭಯ,
ತನುಮನವನಂಡಲೆವ ಧನವಿಕಾರದ ಭಯ ನೋಡ.
ಹಗಲು ಹಸಿವಿನ ಚಿಂತೆ, ಇರುಳು ವಿಷಯದ ಚಿಂತೆ;
ಹಗಲಿರುಳು ಸಾವವೊಡಲನೆ ಸಂತವಿಡುತಿಹ ಚಿಂತೆಯದಲ್ಲದೆ
ಸದಾ ಶಿವನ ಧ್ಯಾನತತ್ಪರನಾಗಿ
ಶಿವತತ್ವವಿಚಾರದೊಳಗೆ ಇರಲೊಲ್ಲೆನು ನೋಡ.
ಸುಧೆಯನೊಲ್ಲದೆ ಹಡಿಕೆಗೆ ಮಚ್ಚಿದ
ಸ್ವಾನನ ವಿಧಿಯಂತಾಯಿತ್ತಯ್ಯ.
ಅಮೃತಮಯ ಲಿಂಗಸಂಗವನೊಲ್ಲದೆ
ಸಂಸಾರಸಂಗಕ್ಕೆ ಮಯ್ಯಾನುವ ಮರುಳುಮನವೆ
ನಿನ್ನ ನಾನೇನೆಂಬೆನಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೩ ॥

೧೨೯

ಹದ್ದ ನುಂಗಿದ ಕಾಗೆ ಬದ್ಧ ಭವಿ ನೋಡ.
ಎದ್ದು ಹಾರಲು ಸಿದ್ಧರ ಗಾರುಡವೆಲ್ಲ ಬಿದ್ದೋಡಿವು ನೋಡ.
ಬ್ರಹ್ಮಚರಿಯವೆಲ್ಲ ಭ್ರಮೆಗೊಂಡಿತ್ತು ನೋಡ.
ತ್ರಿಜಗವೆಲ್ಲಾ ಮೂರ್ಛೆಗತರಾವರು ನೋಡ.
ವೀರರು ಧೀರರು ವ್ರತಿಗಳು ಸಾಮರ್ಥ್ಯರೆಲ್ಲ
ಮತಿಗೆಟ್ಟು ಮರುಳಾದರು ನೋಡ.
ಸತಿ ಸುತರ ಕೂಟವನೊಲ್ಲೆನೆಂಬ ವಿರಕ್ತರೆಲ್ಲ
ವಿಕಾರಗೊಂಡರು ನೋಡ.
ಶಿವನಿರ್ಮಿತದಿಂದಾದ ಮಾಯವ ಪರಿಪರಿಸಿಹೆನೆಂವಡೆ,
ಅಜ ಹರಿ ರುದ್ರಾದಿಗಳಿಗೆ ಅಸಾಧ್ಯ ನೋಡ.
ಈ ಮಾಯಾ ಪ್ರಪಂಚ ಕಳೆವಡೆ
ಪರಶಿವಜ್ಞಾನ ಮುಖದಿಂದ ಅಲ್ಲದೆ ಪರಿಹರವಾಗದು ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೪ ॥

೧೩೦

ಕಸನೀರ ತರುವ ದಾಸಿಗೆ ಒಂದು ಶಿಶು ಹುಟ್ಟಿತ್ತು ನೋಡ.
ಶಿಶುವೆದ್ದು ತಾಯನಪ್ಪಲು ಕಸನೀರು ಅರತುಹೋಯಿತ್ತು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೫ ॥

೧೩೧

ಎನ್ನ ಮನಸ್ಸು ಹೊನ್ನು ಹೆಣ್ಣು ಮಣ್ಣ ನೆನನೆನೆದು
ನಿಮ್ಮ ನೆನಯಲೊಲ್ಲದು ನೋಡ.
ಎನ್ನ ಕಾಯ ನಿಮ್ಮ ಮುಟ್ಟದೆ
ಸಂಸಾರಕರ್ಮವನೆ ಮಾಡುತ್ತಿಪ್ಪುದು ನೋಡ.
ಎನ್ನ ಪ್ರಾಣ ನಿಮ್ಮ ಮುಟ್ಟದೆ
ಪ್ರಪಂಚನೊಳಗೇ ಮುಳುಗುತ್ತಿಪ್ಪುದು ನೋಡ.
ಎನ್ನ ಭಾವ ನಿಮ್ಮ ಭಾವಿಸಿ ಭ್ರಮೆಯಳಿಯದೆ,
ಸಂಸಾರ ಭಾವನೆ ಸಂಬಂಧವಾಗಿ ಮುಂದುಗಾಣದೆ,
ಮೋಕ್ಷಹೀನನಾಗಿರ್ದೆನಯ್ಯ.
ಸುರಚಾಪದಂತೆ ತೋರಿ ಅಡಗುವ ಅನಿತ್ಯತನುವನು
ನಿತ್ಯವೆಂದು, ನಿರುತವೆಂದು ವೃಥಾ ಹೋಯಿತ್ತು ಎನ್ನ ವಿವೇಕ.

ಸಂಸಾರವಲ್ಲಿ ಸವೆಸವೆದು ಅವಿವೇಕಿಯಾದೆನಯ್ಯ.
ಎನ್ನ ಅವಿವೇಕವ ಕಳೆದು, ಶಿವತತ್ವವಿವೇಕವನಿತ್ತು ಕರುಣಿಸಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೬ ॥

೧೩೨

ಅಹಂಕಾರಭಾವ, ಅವಿದ್ಯಾಭಾವ,
ಜ್ಞಾನಾಜ್ಞಾನಭಾವ, ಜ್ಞಾನವಿಕೃತಿಭಾವ
ವರ್ತನವಿಕೃತಿಭಾವ, ಮೋಹನವಿಕೃತಿಭಾವ ಎಂಬ
ಭ್ರಾಂತಿಭಾವವ ಮಾಣಿಸಯ್ಯ.
ಇಂದ್ರಿಯಭಾವ, ವಿಷಯಭಾವ
ಭೂತಭಾವ, ಕರಣಭಾವ
ವಿಶ್ವತೈಜಸ ಪ್ರಾಜ್ಞ[ವೆ]ಂಬ
ಜೀವಭಾವವ ಭ್ರಮೆಯ ಕಳೆಯಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೭ ॥

೧೩೩

ತನು ನಿನಗನ್ಯವೆಂದರಿಯದೆ, ತನು ನಿನ್ನದೆಂಬೆ;
ಮನ ನಿನಗನ್ಯವೆಂದರಿಯದೆ, ಮನ ನಿನ್ನದೆಂಬೆ;
ಧನ ನಿನಗನ್ಯವೆಂದರಿಯದೆ, ಧನ ನಿನ್ನದೆಂಬೆ;
ಸ್ಥೂಲ ಸೂಕ್ಷ್ಮ ಕಾರಣವೆಂದೆಂಬ ತನುತ್ರಯ ನೀನಲ್ಲ;
ಮನ ಮನನ ಮಾನನೀಯವೆಂದೆಂಬ ಮನತ್ರಯ ನೀನಲ್ಲ;
ಧನ ಮಮಕಾರ ಸಂಗ್ರಹವೆಂಬ ಕಾರ್ಮಿಕತ್ರಯ ನೀನಲ್ಲ;
ಇವು ಒಂದೂ ನೀನಲ್ಲ; ನೀನಾರೆಂದಡೆ:
ನೀನು ಸಚ್ಚಿದಾನಂದಸ್ವರೂಪವಪ್ಪ ಶಿವತತ್ವವೇ
ನೀನೆಂದು ತಿಳಿದುನೋಡ, ಉಳಿದವೆಲ್ಲಾ ಹುಸಿಯೆನ್ನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೮ ॥

೧೩೪

ತಂದೆ ತಾಯಿಗಳ ವಿಕಾರದ ಶುಕ್ಲಶೋಣಿತದ ಸಂಬಂಧವಪ್ಪ
ಸರ್ವಸೂತಕತನುವಿಡಿದ ಪ್ರಾಣಿಗಳಿಗೆ
ಯಮನ ಸಂಹಾರವ ಕಲ್ಪಿಸಿಕೊಂಡಿಪ್ಪ ಶಿವನ

ಪರಿಯಾನಾರೂ ಅರಿಯರಲ್ಲ.
ಈ ಮಾಯಿಕ ಸಂಬಂಧವಾದ ದೇಹ ತಾನೆಂದೆಂಬ
ಮೂಢಾತ್ಮರ ನಾನೇನೆಂಬೆನಯ್ಯ?
ಆತ್ಮ ಅನಾತ್ಮನ ವಿಚಾರಿಸಿ ತಿಳಿಯಲು
ಅಚೇತನವಾದ ಅನಾತ್ಮಸ್ವರೂಪೇ ದೇಹ;
ಆ ದೇಹಕ್ಕೆ ಆಶ್ರಯವಾಗಿಪ್ಪ ಚೈತನ್ಯನೇ ಆತ್ಮನು.
ಇದು ಕಾರಣ, ದೇಹವೇ ಜಡ; ಆತ್ಮನೇ ಅಜಡನು.
ಅದೇನುಕಾರಣ ದೇಹ ಜಡ, ಆತ್ಮನು ಅಜಡನುಯೆಂದಡೆ;
ದೇಹವೇ ಮಾಯಾಕಾರ್ಯವಾದ ಕಾರಣ ಜಡ;
ಇದು ಕಾರಣ, ಇಂದ್ರಿಯಂಗಳು ಜಡ; ವಿಷಯಂಗಳು ಜಡ;
ಕರಣಂಗಳು ಜಡ; ವಾಯುಗಳು ಜಡ; ಆತ್ಮನೇ ಅಜಡನು.
ಆತ್ಮನದೇನುಕಾರಣ ಅಜಡನೆಂದರೆ
ಶಿವಾಂಶಿಕನಾದಕಾರಣ ಅಜಡನು.
ಆ ಶುದ್ಧ ಚಿದ್ರೂಪನಾದ ಆತ್ಮನು
ಅವಿದ್ಯಾಸಂಬಂಧವಾದ ದೇಹೇಂದ್ರಿಯದ ಸಂಗದಿಂದ
ಸಂಸಾರಿಯಾಗಿಪ್ಪನು ನೋಡ.
ಈ ಸಂಸಾರವ್ಯಾಪ್ತಿಯಪಂಥ
ಜೀವನದ ಗುಣವ ಕಳೆದುಳಿದಿಹನೆಂದಡೆ
ದೇವ ದಾನರ ಮಾನವರಿಗೆ ದುರ್ಲಭ ನೋಡ.
ಈ ಮಾಯಾಪ್ರಪಂಚ ನಿವೃತ್ತಿಯಮಾಡುವ
ಮಹದರುಹು ತಾನೆಂತಾದೋ
ಅಂತಪ್ಪ ಅರುಹುಳ್ಳ ಶರಣರಿಗೆ
ನಮೋನಮೋಯೆಂಬೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೯ ॥

೧೩೫

ನಡುಮನೆಯೊಳಾಡುವ ಸಿಂಗಳೀಕನನೊಂದು
ಉಡು ನುಂಗಿದ್ದುದ ಕಂಡು
ಕಡೆಯಲಿದ್ದ ಕಾಳಲದೇವಿ ನಗುತ್ತದಾಳೆ ನೋಡ.
ನಡುಮಧ್ಯದಲ್ಲಿ ನಕ್ಷತ್ರ ಉದಯವಾಗಲು
ಉಡು ಸಿಂಗಳಿಕ ಮಡಿದು,
ಕಡೆಯಲಿದ್ದ ಕಾಳಲದೇವಿ ಕೆಡೆಮುರಿದೋಡಿದವಳು ನೋಡ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೦ ॥

೧೩೬

ಅಡವಿಯ ಹುಲ್ಲ ಮೇದ ಪಶು
ಮಡುವಿನಗ್ಘವಣಿಯ ಕುಡಿದು ನಡುಬೀದಿಯಲ್ಲಿ ಬರುತ್ತಿರಲು,
ಕಡೆಯಲಿರ್ದ ಹುಲಿ ಬಂದು ಹಿಡಿಯಲು,
'ನಿನ್ನೊಡವೆಯನೇನ ಬಳಸಿಕೊಂಡೆನೋ' ಎಂದು
ತನ್ನೊಡೆಯನ ಕರೆಯಲು,
ಹಿಡಿದ ಹುಲಿ ಬಿಟ್ಟೋಡಿತ್ತು ನೋಡ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೧ ॥

೧೩೭

ದೇವರ ಪೂಜಿಸಿ, ಕಾಯಗೊಂಡು ಹುಟ್ಟಿ,
ಪುತ್ರ ಮಿತ್ರ ಕಳತ್ರತ್ರಯ ಧನಧಾನ್ಯ ಷಡುಚಂದನಾದಿ
ಭೋಗಾದಿಭೋಗಂಗಳ ಪಡೆದು
ಭೋಗಿಸಿ ಸುಖಿಸಿಹೆನೆಂಬೆಯಲೆ ಮರುಳು ಮಾನವ,
ಕಾಯವೇ ದುಃಖದಾಗರವೆಂದು ಅರಿಯೆಯಲ್ಲ?
ಕಾಯವೇ ಸಕಲಧರ್ಮಕರ್ಮಕ್ಕಾಶ್ರಯವೆಂದರಿಯೆಯಲ್ಲ?
ಪುಣ್ಯ ಪಾಪವಶದಿಂದ
ಸ್ವರ್ಗನರಕಕ್ಕೆಡೆಯಾಡುತ್ತಿಪ್ಪುದನರಿಯೆಯಲ್ಲ?
ಹುಟ್ಟುವುದು ಮಹಾದುಃಖ; ಹುಟ್ಟಿ ಸಂಸಾರಶರಧಿಯೊಳು
ಬದುಕುವದು ದುಃಖ;
ಸಾವ ಸಂಕಟವನದ ನಾನೇನೆಂಬೆನಯ್ಯಾ,
ಅದು ಅಗಣಿತ ದುಃಖ.
ಆವಾವ ಪರಿಯಲ್ಲಿ ತಿಳಿದುನೋಡಲು,
ಈ ಮೂರು ಪರಿಯ ದುಃಖ ಮುಖ್ಯವಾದ
ಅನಂತ ದುಃಖ ನೋಡಾ.
ಈ ಕಾಯದ ಕಂಥೆಯ ತೊಟ್ಟು ಕರ್ಮದೊಳಗಿರದೆ,
ಮಾಯಾಮೋಹವ ತಾಳ್ದು ಮತ್ತನಾಗಿರದೆ,
ಪಂಚೇಂದ್ರಿಯಂಗಳ ಸುಖಕ್ಕೆ ಮಚ್ಚಿ ಮರುಳಾಗದೆ,
ಪಂಚವದನನ ನೆನೆನೆನೆದು
ಸಂಸಾರಪ್ರಪಂಚವ ತಪ್ಪಿಸಿಕೊಂಬ ಸುಬುದ್ಧಿಯ ಕಲಿಸ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೨ ॥

೧೩೮

ಗಿರಿಯ ಮೇಲಣ ಕೋಡಗ,
ಹಿರಿಯ ಮಾರಿಯ ನುಂಗಿತ್ತು ನೋಡ.
ಹಿರಿಯ ಮಾರಿಯ ನುಂಗಿ ಅವಸ್ಥೆ ಅಡಗದೆ,
ಎಪ್ಪತ್ತೈದು ಗ್ರಾಮವನೆಯಿದೆ ನುಂಗಿತ್ತು ನೋಡ.
ದಶಗಮನಂಗಳ ಕೂಡಿ
ವಿಶ್ವತೋಪಥದಲ್ಲಿ ನಡೆವುತಿಪ್ಪುದು ನೋಡ.
ಒಂದು ಪಥವ ತಾನೆಂದೂ ಅರಿಯದು ನೋಡ.
ತಾ ಬಂದಂದಿಂದ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೩ ॥

೧೩೯

ಕಾಯಗೊಂಡು ಹುಟ್ಟಿಸಿ, ಕರಣಾದಿಗುಣಂಗಳಿಗೆ ಗುರಿಮಾಡಿ,
ಕಾಡಿಸಾಡುವಿರಯ್ಯ.
ಇದು ಕಾರಣ, ಎನ್ನ ಕಾಯದ ಕರಣದ ಗುಣಂಗಳ ಕಳದು
ಎನ್ನ ಒಳಹೊರಗೆ ಹಿಡಿದಿಪ್ಪ ಮಾಯಾಪ್ರಪಂಚವ ಮಾಣಿಸಿ,
ನೀವಲ್ಲದೆ ಮತ್ತೇನುವನು ಅರಿಯದಂತೆ
ಸಂಸಾರಸುಖವ ನೆನೆಯದಂತೆ ಕರುಣಿಸಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೪ ॥

೧೪೦

ಹಾಲೋಗರವನುಂಡು ಬಾಲೆಯರ ತೋಳಮೇಲೊರಗಿದಡೆ
ಬಾರದ ಭವದಲ್ಲಿ ಬಪ್ಪುದು ತಪ್ಪದು ಕಾಣಿರಣ್ಣ.
ಅಲ್ಲಿಯ ಆಲಿಂಗನ ವಿಷ, ಚುಂಬನ ನಂಜು, ನೋಟ ಸರಳು,
ಸವಿನುಡಿ ಕಠಾರಿ ನೋಡ.
ಅಲ್ಲಿಯ ನೆನಹು ಆಜ್ಞಾನ ನೋಡ.
ಅದು ತನ್ನ ಹಿತಶತ್ರುತನದಿಂದ ಭ್ರಾಂತುಭಾವನೆಯ
ಹುಟ್ಟಿಸಿ ಕೊಲುವವಾಗಿ,
ಆ ಸಂಸಾರ ನಿನಗೆ ಹಗೆಯೆಂದು ತಿಳಿಯ, ಮರುಳುಮಾನವ.
ಇದುಕಾರಣ, ಸಂಸಾರಸುಖವನುಣ್ಣಲೊಲ್ಲದೆ,
ಬಾಲೇಂದುಮೌಳಿಯ ಜ್ಞಾನಪ್ರಸಾದವನುಂಡು ನಾನು

ಬದುಕಿದೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೫ ॥

೧೪೧

ಮೆತ್ತಾನ ಅಶನವನುಂಡು, ಕೆಚ್ಚಾನ ಚರ್ಮವ ಕಚ್ಚಿಕೊಂಡು
ಬೆಚ್ಚಾನ ಮನೆಯಲ್ಲಿ ಬಿದ್ದಿಪ್ಪವರಿಗೆ,
ಅಚ್ಚುಗವೆ ಅನಂತ ಬಹುದುಃಖ?
ಮೃತ್ಯುಂಜಯನನರಿಯದೆ
ಸಂಸಾರವೆಂಬ ಮೃತ್ಯುವಿನ ಬಾಯತುತ್ತಾಗಿ
ಉತ್ಪತ್ತಿ ಸ್ಥಿತಿ ಪ್ರಳಯಕೊಳಗಾದಿರಿಯಲ್ಲ?
ನಿತ್ಯ ನಿರಂಜನ ಪರವಸ್ತುವ ಮಚ್ಚಲರಿಯದೆ,
ವೃಥಾ ಕೆಟ್ಟಿತ್ತು ನೋಡಾ ತ್ರೈಜಗ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೬ ॥

೧೪೨

ಮಲದ ಕುಳಿವೊಂದು ಮುಖ; ಜಲದ ಕುಳಿವೊಂದು ಮುಖ;
ರಕ್ತದ ಕುಳಿವೊಂದು ಮುಖ; ಕೀವಿನ ಕುಳಿವೊಂದು ಮುಖ;
ಕ್ರಿಮಿಕೀಟಜಂತುಗಳು ತುಂಬಿಪ್ಪ ಕುಳಿವೊಂದು ಮುಖ;
ವಾತ ಪಿತ್ಥ ಶ್ಲೇಷ್ಮ ಸರ್ವಾಂಗದಲ್ಲಿ ತುಂಬಿ
ಸರ್ವತೋಮುಖವಾಗಿಪ್ಪುದು ನೋಡ.
ಕಿವಿಯಲ್ಲಿ ಗುಗ್ಗೆ, ಕಣ್ಣಿನಲ್ಲಿ ಜಾರು,
ಮೂಗಿನಲ್ಲಿ ಸುರಿವ ಸಿಂಬಳು,
ಹಲ್ಲಿನಲ್ಲಿ ಕಿನಿಕೆ, ಉರದಲ್ಲಿ ಮಾಂಸದ ಗ್ರಂಥಿ,
ಒಳಗೆ ಕರುಳ ಜಾಳಿಗೆ, ಅಮೇಧ್ಯದ ಹುತ್ತ,
ಹೊರಗೆ ಚರ್ಮದ ಹೊದಕೆ,
ಈ ಹೆಣ್ಣು ರೂಪಿನ ಬಣ್ಣದ ಕಾಯದ ಕಂಡು
ಕಣ್ಣುಗೆಟ್ಟು ಮನಮುಟ್ಟಿ ಮರುಳಾದಿರಲ್ಲ.
ಮುಕ್ಕಣ್ಣ, ನಿನ್ನನರಿಯದ ಬರಿಯ ಬಣ್ಣದ ಹಿರಿಯರು
ಭ್ರಮೆಗೊಂಬುದ ನೋಡಿ ನಾನು ಹೇಸಿ
ಕಡೆಗೆ ತೊಲಗಿದೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೭ ॥

೧೪೩

ಕತ್ತಲೆಯ ಪುರವ ಕಳ್ಳರು ಮುತ್ತಲು
ಪುರಪತಿ ಮುತ್ತಿಗೆಗೆ ಒಳಗಾದನು ನೋಡಾ ಅಯ್ಯ.

ಅತ್ತಳ ಊರಿಂದ ಬೆಳಗು ಪಸರಿಸಲು
ಮುತ್ತಿಗೆ ತೆಗೆದೋಡಿತ್ತು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೮ ॥

೧೪೪

ಮರ್ಕಟನ ತಲೆಯಲ್ಲಿ ಮಾಣಿಕವಿಪ್ಪುದ ಕಂಡೆನಯ್ಯ.
ಆ ಮರ್ಕಟನ ಹಿಡಿದು
ಮಾಣಿಕವ ತಕ್ಕೊಳ್ಳಲಾರಳವಲ್ಲ ನೋಡ!
ಆ ಮರ್ಕಟನ ಕೊಂದು ಮಾಣಿಕವ ತಕ್ಕೊಳ್ಳಬಲ್ಲಡೆ
ಮುಕ್ಕಣ್ಣ ಶಿವನೆಂದು ಬೇರುಂಟೆ ಹೇಳ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೯ ॥

೧೪೫

ಪಶುವನೇರಿದ ಕೋಣ ಶಿಶುವೇಥೆಗಾರ ನೋಡ.
ಪಶುವಿನ ಒಡೆಯ ಬಂದು ಕೋಣನನೆಬ್ಬಟ್ಟಲು
ಶಿಶುವಿನ ವೇದನೆ ಮಾಯಿತ್ತು ನೋಡ.
ಶಿಶುವೆದ್ದು ತನ್ನ ತಾಯನಪ್ಪಲು
ತಾಯಿ ತಂದೆಯನೊಡಗೂಡಿ ನಿಂದ ನಿಲವು
ತಾನೊಂದೇ ನೋಡ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೦ ॥

೧೪೬

ಎಮ್ಮೆಯನೇರಿದ ಎತ್ತು ಸಮ್ಮಗಾರ ನೋಡ
ಎತ್ತಿನ ಒಡೆಯ ಬಂದು ಎಮ್ಮೆಯ ಕೊಲ್ಲಲು
ಸಮ್ಮಗಾರನು ಸತ್ತು ನಿಮ್ಮ ಕಂಡೆನು ಕಾಣ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೧ ॥

೧೪೭

ಹಾಳುಕೇರಿಯಲೊಂದು ಹಂದಿಯೂ ನಾಯೂ
ಮೈಥುನವ ಮಾಡುವದ ಕಂಡು
ಆಕಾಶದಲಾಡಡುವ ಆರಗಿಳಿ ನಗುತ್ತಲಿದೆ ನೋಡ.
ಆಡುತ್ತಾಡುತ್ತ ಬಂದ ಆರಗಿಣಿ ಮಾರ್ಜಾಲನ ನುಂಗಲು

ಮಾಯಾವಿಲಾಸ ಅಡಗಿತ್ತು ನೋಡ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೨ ॥

೧೪೮

ಕರ್ಮಿ ಬಲ್ಲನೆ ಭಕ್ತಿಯ ಮರ್ಮವ,
ಚರ್ಮವ ತಿಂಬ ಸೊಣಗಬಲ್ಲುದೆ ಪಾಯಸದ ಸವಿಯ?
ಉಚ್ಚಿಯ ಬಚ್ಚಲ ಮಚ್ಚಿ ಕಚ್ಚಿ ಕಡಿದಾಡುವ ಮರುಳುಮಾನವರು
ನಿಶ್ಚಿಂತ ನಿರಾಳನಿಗೊಲಿದು ಒಚ್ಚತ ಹೋಗಿ
ಅಪ್ಪಿ ಅಗಲದಿಪ್ಪ ಅನುಪಮಸುಖವನಿವರೆತ್ತ ಬಲ್ಲರು?
ಸಂಸಾರವೆಂಬ ಸೊಕ್ಕು ತಲೆಗೇರಿ ಮುಂದುಗಾಣದೆ
ಅಕಟಕಟಾ ಕೆಟ್ಟಿತ್ತು ನೋಡ ತ್ರೈ ಜಗವೆಲ್ಲ.
ಸ್ವರ್ಗ ಮರ್ತ್ಯ ಪಾತಾಳಕ್ಕೆ ಪಶುಪತಿ ಏಕೋದೇವನೆಂದು ಅರಿದು
ಸಂಸಾರಪ್ರಪಂಚ ಮರೆಯಾ ಮರುಳೇ!
ಪರಮಸುಖದೊಳಗಿರ್ದು ಅಲ್ಪಸುಖಕ್ಕೆ ಆಸೆಮಾಡುವ
ಅಜ್ಞಾನಿಗಳನೇನೆಂಬೆನಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ? ॥ ೪೩ ॥

೧೪೯

ಊರಿಗೆ ಹೋಗುವ ದಾರಿಯೊಳಗೊಬ್ಬ
ಉಲುಗಿರಿ ಮನೆಯ ಮಾಡಿಕೊಂಡು,
ದಾರಿಗೊಂಡು ಹೋಗುವ ಅಯ್ಯಗಳ ಬಾರಿಭೋ ಬಾರಿಭೋ
ಎನುತ್ತೈದಾಳೆ ನೋಡ.
ನಾರಿಯ ವಿಲಾಸವ ನೋಡಿ
ದಾರಿಯ ತಪ್ಪಿದರು ನೋಡ ಅಯ್ಯಗಳು.
ನಾರಿಯ ಕೊಂದಲ್ಲದೆ ದಾರಿಯ ಕಾಣಬಾರದು
ನಾರಿಯ ಕೊಂದು ದಾರಿಹಿಡಿದು ನಡದು
ಊರ ಹೊಕ್ಕಲ್ಲದೆ ಉಪಟಳವಡಗದು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೪ ॥

೧೫೦

ಯುವತಿಯರ ವ್ಯವಹಾರವೆಂಬ ವಿಕಳತೆ ಹತ್ತಿ
ಯೋಗದ ಸಮತೆ ಸಡಿಲಿತ್ತು ನೋಡ.

ಸತ್ಯ ಸತ್ತಿತ್ತು, ಭಕ್ತಿಯರತಿತ್ತು.
ಮಾಯಾವಿಲಾಸವೆಂಬ ಮೃತ್ಯು ಮುಟ್ಟದ ಮುನ್ನ,
ನಿಮ್ಮತ್ತ ಹಿಡಿದು ಎತ್ತಿಕೊಳ್ಳಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೫ ॥

೧೫೧

ಚಿದಾನಂದಸುಖಮಯವಪ್ಪ ವಸ್ತುವಿಂಗೆ,
ಇಂದ್ರಿಯಾನಂದ ಹೊದ್ದಿದಡೆ ನಾ ನೊಂದೆನಯ್ಯ.
ನಾನು ಬೆಂದೆನಯ್ಯ. ನಾನು ಚಿದಾನಂದಸ್ವರೂಪನು.
ಈ ಅನಾನಂದವಿದೇನೋ? ಇದು ಕಾರಣ,
ಅನಾಯತವಪ್ಪ ಇಂದ್ರಿಯವಿಕಾರವ ಮಾಣಿಸಯ್ಯ ಎನ್ನ ತಂದೆ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೬ ॥

೧೫೨

ಚಿದ್ವಿಲಾಸದ ಮುಂದೆ ಇದಿರಿಟ್ಟು ತೋರುವ
ಮಾಯಾವಿಲಾಸದ ಹೊದ್ದಿಗೆಯಿದೇನೋ.
ಶುದ್ಧ ನಿರ್ಮಲ ನಿರಾವರಣನೆಂಬ ನಿಜಭಾವವೆ ನಿಶ್ಚಯವಾದರೆ,
ಎನ್ನ ತನು ಮನ ಭಾವದ ಒಳಹೊರಗೆ ಹಿಡಿದಿಪ್ಪ
ಮಾಯಾಪ್ರಪಂಚು ಮಾಬುದು ಕಾಣ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೭ ॥

೧೫೩

ಹೇಳಿಗೆಯೊಳಗಣ ಸರ್ಪ, ಈರೇಳುಲೋಕಂಗಳ ನುಂಗಿತ್ತು;
ಈರೇಳು ಲೋಕ ನುಂಗಿ ಕಾಳಕೂಟವಿಷವನೆ
ಉಗುಳುತ್ತಿದೆ ನೋಡ.
ಆ ವಿಷದ ಹೊಗೆ ಹತ್ತಿ ಎಲ್ಲಾ ಪ್ರಾಣಿಗಳು
'ಪಶುಪತಿ ಪಶುಪತಿ' ಎನುತ್ತಿರಲು ವಿಷದ ಹೊಗೆ ಕೆಟ್ಟಿತ್ತು,
ಹೇಳಿಗೆ ಮುರಿಯಿತ್ತು;
ಈರೇಳುಲೋಕವ ನುಂಗಿದ ಸರ್ಪ ತಾನು ಸತ್ತಿತ್ತು.
ಇದ ಮಾನವರು ಅರಿವುದಕ್ಕೆ ಉಪಮಾನವಿಲ್ಲ ಕಾಣ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೮ ॥

೧೫೪

ಆಡಿನ ಶಿರದಮೇಲೆ ಕುಣಿದಾಡುವ ಕೋಡಗ
ಮಾರುತನ ಕೂಡೆ ಉಡುವ ಹಡೆಯಿತ್ತು ನೋಡ.
ಉಡುವಿನ ನಾಲಗೆಯಲ್ಲಿ ಅಜ ಹರಿ
ಸುರ ಮನು ಮುನಿಗಳು ಅಡಗಿದರು.
ಇವರೆಲ್ಲರ ಯಜನಾದಿಕೃತ್ಯಂಗಳು
ಉಡುವಿನ ಕಾಲಿನಲ್ಲಿ ಅಡಗಿದವು.
ತ್ರಿಜಗವೆಲ್ಲವು ಹೀಂಗೆ ಪ್ರಳಯದಲ್ಲಿ ಮುಳುಗಿದೆಯಲ್ಲ.
ಉಡುವಿನ ನಾಲಗೆ ಕೊಯಿದು,
ಕುಣಿದಾಡುವ ಕೋಡಗನ ಕಾಲಮುರಿದು
ಅಜಪಶುವ ಕೊಂದು, ಅಗ್ನಿಯಲ್ಲಿ ಸುಟ್ಟು ಭಸ್ಮವಮಾಡಬಲ್ಲಾತನ
ಜನನಮರಣ ವಿರಹಿತನೆಂಬೆ, ತ್ರಿಜಗಾಧಿಪತಿಗಳಿಗೆ ಒಡೆಯನೆಂಬೆ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೯ ॥

೧೫೫

ಮಾರುತನ ಮುಖದ ಮಾನಿನಿ
ಆರುಮಂದಿಯ ಹಡೆದಳು ನೋಡ.
ಅವರು ಮೂರುಲೋಕವ ಕೊಲುವ ವೈರಿಗಳು.
ಅವರ ಜಯಿಸುವವರಾರನೂ ಕಾಣೆ!
ಅರಿಗಳಾರನು ಕೊಂದಾತ ತ್ರಿಜದೊಡೆಯನು ಕಾಣ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೦ ॥

೧೫೬

ಅಯಿವರ ಮುಖದಲ್ಲಿ ಆರುಮಂದಿ ಹುಟ್ಟಿ
ಎಲ್ಲರಿಗೆ ಕೈಯಾಗಿಪ್ಪರು ನೋಡ.
ಹಲವರ ಕೈಯಯೊಳಗಿಪ್ಪ ಒಬ್ಬ ಚಾಂಡಾಲಗಿತ್ತಿ
ಮೂರು ಮುಖದಲ್ಲಿ ಆರೂಢರ ನುಂಗಿದಳು ನೋಡ.
ಹಲವು ಕೈಗಳ ಹಾರಹೊಯಿದು
ಮೂರುಮುಖದಂಗನೆಯರ ಶಿರವ ನೆರೆ ಮೆಟ್ಟಿ ನಿಲ್ಲಬಲ್ಲರೆ
ಆತನು ನಿರ್ಮಾಯನು ಕಾಣ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೧ ॥

## ಗುರುಕರುಣಸ್ಥಲದ ವಚನ

ಸೂತ್ರ॥ ಇಂತು ಪರಮಜ್ಞಾನದ ವೃಷ್ಟಿಯ ಮುಂದೆ, ಇದಿರಿಟ್ಟು ತೋರುವ ಸಂಸಾರ ಪ್ರಪಂಚನಿವೃತ್ತಿಯ ಮಾಡಿದ ಶರಣಂಗೆ ಅಂತರಂಗದ ಜ್ಞಾನಗುರುವೆ ಸಾಕಾರವಾಗಿ ಪ್ರತ್ಯಕ್ಷವಾಗಿ ಸದ್ಗುರುವಾದ ಭೇದವ ತಾನರಿದು ಗುರುಪಾಸ್ತೆಯ ಮಾಡುತ್ತಿರ್ದನಾಗಿ, ಮುಂದೆ ಗುರುಕರುಣಸ್ಥಲವಾದುದು.

೧೫೭

ಎನ್ನ ಭವಿತನವ ಕಳೆದು ಭಕ್ತನ ಮಾಡಿದಿರಿಯಯ್ಯ.
ಪಂಚಭೂತದ ಪ್ರಕೃತಿಕಾಯವ ಕಳೆದು
ಪ್ರಸಾದಕಾಯವ ಮಾಡಿದಿರಿಯಯ್ಯ.
ವಾಯುಪ್ರಾಣೆಯ ಕಳೆದು ಲಿಂಗಪ್ರಾಣೆಯ ಮಾಡಿದಿರಿಯಯ್ಯ.
ಅಂಗೇಂದ್ರಿಯ ಕಳೆದು ಲಿಂಗೇಂದ್ರಿಯವ ಮಾಡಿದಿರಿಯಯ್ಯ.
ಅಂಗವಷಯಭ್ರಮೆಯ ಕಳೆದು
ಲಿಂಗವಿಷಯಭ್ರಾಂತನ ಮಾಡಿದಿರಿಯಯ್ಯ.
ಅಂಗ ಕರಣಂಗಳ ಕಳೆದು ಲಿಂಗ ಕರಣಂಗಳ ಮಾಡಿದಿರಿಯಯ್ಯ.
ಆ ಲಿಂಗ ಕರಣಂಗಳೇ ಹರಣ ಕಿರಣವಾಗಿ ಬಿಂಬಿಸುವಂತೆ
ಮಾಡಿದಿರಿಯಯ್ಯ.
ಕುಲಸೂತಕ ಛಲಸೂತಕ ತನುಸೂತಕ ಮನಸೂತಕ
ನೆನಹುಸೂತಕ ಭಾವಸೂತಕವೆಂಬ
ಇಂತೀ ಭ್ರಮೆಯ ಕಳೆದು ನಿಭ್ರಾಂತನ ಮಾಡಿ ರಕ್ಷಿಸಿದ
ಶ್ರೀಗುರುದೇವಂಗೆ ನಮೋನಮೋಯೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

೧೫೮

ಭವತಿಮಿರವೆಂಬ ಅಜ್ಞಾನದಿಂದ ಮುಸುಕಿಕೊಂಡು,
ಕಾಣಬಾರದೆಯಿದ್ದ ಕಣ್ಣಿಂಗೆ ಜ್ಞಾನವೆಂಬ ಅಂಜನವನೆಚ್ಚು
ಶಿವಪಥವಿದೆಂದು ತೋರಿಸಿದ ಸದ್ಗುರುದೇವಂಗೆ

ನಮೋನಮೋಯೆಂಬೆನಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨ ॥

೧೫೯

ಭವವೆಂಬ ಅರಣ್ಯದಲ್ಲಿ ಪ್ರವೇಶಿಸುತ್ತಿಪ್ಪವಂಗೆ
ಬೆಂದ ಅಜ್ಞಾನದಿಂದ ಸುತ್ತುತ್ತ ಹಿಂದು ಮುಂದು ಎಡಬಲ
ಅಡಿ ಆಕಾಶ ನಡುಮಧ್ಯವಾವುದೆಂದರಿಯದೆ
ಯಿರುವವದಕ್ಕೆಯಿಂಬುಗಾಣದವಂಗೆ
ಶಿವತತ್ವವೇ ಆಶ್ರಯವೆಂದು ತೋರಿಸಿದ ಶ್ರೀಗುರುದೇವಂಗೆ
ನಮೋನಮೋಯೆಂಬೆನಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩ ॥

೧೬೦

ಹಲವು ಜನ್ಮಂಗಳೆಲ್ಲ ಒದಗಿಸಲ್ಪಟ್ಟ
ಪಾಪಂಗಳೆಂಬ ಕರ್ಮಂಗಳನು
ಜ್ಞಾನಾಗ್ನಿಯಿಂದ ಸುಟ್ಟುರುಹಿ ಪ್ರಕಾಶಿಸಿ ತೋರಿಸಿದ
ಸದ್ಗುರುದೇವಂಗೆ
ನಮೋನಮೋಯೆಂಬೆನಯ್ಯ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪ ॥

೧೬೧

ಸುರತರು ವೃಕ್ಷದೊಳಗಲ್ಲ; ಸುರಧೇನು ಪಶುವಿನೊಳಗಲ್ಲ;
ಪರುಷ ಪಾಷಾಣದೊಳಗಲ್ಲ; ಶಿಷ್ಯನ ಭಾವಕ್ಕೆ ಗುರು ನರನಲ್ಲ;
ಗುರುವೇ ಪರಮೇಶ್ವರನೆಂದು ಭಾವಿಸಬಲ್ಲಡೆ ಶಿಷ್ಯನೆಂಬೆನಯ್ಯ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫ ॥

೧೬೨

ಗಂಡಗಿಂದ ಹೆಂಡತಿ ಮೊದಲೇ ಹುಟ್ಟಿದರು
ಆ ಗಂಡಗಿಂದ ಕಿರಿಯಳಲ್ಲದೆ ಹಿರಿಯಳಲ್ಲವಯ್ಯ.
ಗುರುವಿಂಗಿಂದ ಶಿಷ್ಯ ಅರುಹುಳ್ಳವನಾದರು
ಆ ಗುರುವಿಂಗೆ ಭೃತ್ಯನಲ್ಲದೆ ಕರ್ತನಲ್ಲವಯ್ಯ.

ಕುದುರೆಯ ಹಿಡಿಯ ಹೇಳಿದರೆ
ರಾವುತಿಕೆಯ ಮಾಡಿದರೆ ಒಪ್ಪುವರೇ?
ಆಳಾಗಿದ್ದು ಅರಸಾಗಿರ್ದೆನೆಂದರೆ ಒಪ್ಪುವರೇ?
ಮಗನೇನು ತಂದೆಯಾಗಬಲ್ಲನೇ?
ಇದುಕಾರಣ, ಶಿಷ್ಯಂಗೆ ಭಯಭಕ್ತಿ ಕಿಂಕುರ್ವಾಣವೆ ಇರಬೇಕು.
ಈ ಗುಣವುಳ್ಳರೆ ಆ ಶಿಷ್ಯನೆ ಗುರುವಪ್ಪುದು ತಪ್ಪದು ಕಾಣ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬ ॥

೧೬೩

ತಂದೆಯ ಸಾಮರ್ಥ್ಯದಿಂದ ಹುಟ್ಟಿದ ಮಗನಿಗೆ
ಆ ತಂದೆಯ ಸ್ವರೂಪಲ್ಲದೆ ಬೇರೊಂದೂ ಸ್ವರೂಪೆಂದು
ತಿಳಿಯಲುಂಟೇ ಅಯ್ಯ?
ಶಿವ ತಾನೆ ತನ್ನ ಸಾಮರ್ಥ್ಯವೆ ಒಂದೆರಡಾಗಿ
ಗುರುವೆಂದು ಶಿಷ್ಯನೆಂದು ಆಯಿತ್ತೆಂವಡೆ
ಆ ಗುರುವಿಂಗೂ ಶಿಷ್ಯಂಗೂ ಬೇರಿಟ್ಟು ನುಡಿಯಲಾಗದಯ್ಯ.
ಗುರುವಿನ ಅಂಗವೇ ಶಿಷ್ಯ; ಶಿಷ್ಯನ ಅಂಗವೇ ಗುರು.
ಆ ಗುರುವಿನ ಪ್ರಾಣವೇ ಶಿಷ್ಯ; ಶಿಷ್ಯನ ಪ್ರಾಣವೇ ಗುರು.
ಈ ಗುರುಶಿಷ್ಯಸಂಬಂಧ ಒಂದಾದ ಬಳಿಕ
ಗುರು ಶಿಷ್ಯರೆಂದು ಬೇರಿಟ್ಟು ನುಡಿವ ಭ್ರಷ್ಟರನೇನೆಂಬೆನಯ್ಯ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭ ॥

೧೬೪

ಒಳಹೊರೆಗೆಂಬಿ ಉಭಯ ಸಂದೇಹದಿಂದ
ಗುರುಶಿಷ್ಯರೆಂದು ನುಡಿದುಕೊಂಡು ನಡೆಯಬೇಕಾಯಿತಲ್ಲದೆ,
ಒಳ ಹೊರಗೆಂಬ ಉಭಯಸಂದೇಹವಳಿದು
ಜೀವ ಪರಮರೆಂದೆಂಬ ಉಭಯವು
ಪರಮನೊಬ್ಬನೇಯೆಂದು ತಿಳಿವರೆ,
ಗುರುವೇ ಶಿಷ್ಯ; ಶಿಷ್ಯನೇ ಗುರುವಾದುದನೇನೆಂಬೆನಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮ ॥

೧೬೫

ಅರುಹು ತಲೆದೋರಿತೆಂದು,
ಗುರುಹಿರಿಯರ ಜರಿಯಲಾಗದಯ್ಯ.

ಗುರುವನು ಜರಿಯೆ; ಹಿರಿಯರನು ಜರಿಯೆ
ಆದೇನು ಕಾರಣವೆಂದಡೆ:
ಗುರುವೇ ಸದ್ರೂಪು, ಲಿಂಗವೇ ಚಿದ್ರೂಪು,
ಜಂಗಮವೇ ಆನಂದಸ್ವರೂಪು.
ಇವು ಮೂರೂ ಬರಿಯ ಅರುಹು ಸ್ವರೂಪು.
ಅವ ಜರಿಯಲುಂಟೆ?
ನಡುವಣ ಪ್ರಕೃತಿಯ ಜರಿವುತ್ತಿಪ್ಪೆನಯ್ಯ.
ಆ ಪ್ರಕೃತಿಯ ಜರಿದರೆ
ಗುರುಹಿರಿಯರಿಗೆ ನಿಮಗೇಕೆ ದುಮ್ಮಾನವಯ್ಯ?
ಪ್ರಕೃತಿಯೇನು ನಿಮ್ಮ ಸೊಮ್ಮೆ ಹೇಳಿರಯ್ಯ.
ಜೀವನೋಪಾಯಕ್ಕೆ ಪರಮಾರ್ಥವನಲ್ಲಾಯೆಂಬ ಪ್ರಪಂಚಿಗಳ
ಮೆಚ್ಚನು ಕಾಣ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯ ॥

೧೬೬

ಗುರುವನು ಮಹಾದೇವನನು ಒಂದೇಯೆಂದು
ಭಾವಿಸಲು ಬೇಕು ನೋಡ.
ಎರಡೆಂಬ ಪ್ರತಿಭಾವ ತೋರಿದಡೆ, ಅದು ಅಜ್ಞಾನ ನೋಡ.
ಇದು ಕಾರಣ ಅವನಾನೊರ್ವನು ಎರಡೆಂದು ಭಾವಿಸಿದನಾದಡೆ,
ಅನೇಕಕಾಲ ನರಕದ ಕುಣಿಯಲ್ಲಿಪ್ಪುದು ತಪ್ಪದು ನೋಡ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦ ॥

೧೬೭

ಶಿವಾಶ್ರಯದಲ್ಲಿ ಹುಟ್ಟಿ, ಭವಾಶ್ರಯವ ನೆನೆರ
ಭಂಡರ ಮುಖವ ನೋಡೆ, ನೋಡೆ.
ಶಿವಾಶ್ರಯವೆಂದರೆ, ಶ್ರೀ ಗುರುವಿನ ಕರಕಮಲವೆಂಬ ಪರಿ;
ಭವಾಶ್ರಯವೆಂದರೆ, ತನ್ನ ಹಿಂದಣ ತಾಯಿ ತಂದೆಗಳೆಂಬ ಪರಿ.
ಇಂತು ಗುರುಕರಜಾತನಾಗಿ, ಗುರುಕುಮಾರನಾಗಿ,
ನರರ ಹೆಸರ ಹೇಳುವ ನರಕಜೀವಿಯ ಎನಗೊಮ್ಮೆ ತೋರದಿರ,
ತಾನು ಶುದ್ಧನಿರ್ಮಲನಾಗಿ ಮಲಸಂಬಂಧವ ಬೆರಸುವ
ಮರುಳುಮಾನವನ ಪರಿಯ ನೋಡ.
ಇಂತಪ್ಪ ಅಜ್ಞಾನಿಯ ಶಿಷ್ಯನೆಂದು ಕೈವಿಡಿಯಬಹುದೆ?

ಇಂತಿವರಿಬ್ಬರ ಗುರುಶಿಷ್ಯಸಂಬಂಧವ ಕಂಡು
ನಾನು ಹೇಸಿದೆನು ಕಾಣ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೧ ॥

೧೬೮

ಗುರುವಿನಿಂದ ಉಪದೇಶವ ಪಡೆದು,
ಗುರುಪುತ್ರ ನೆನಿಸಿಕೊಂಡ ಬಳಿಕ
ಪೂರ್ವದ ತಾಯಿತಂದೆಯೆಂದು, ಬಂಧುಗಳೆಂದು,
ಮಲಸಂಬಂಧವ ನೆನೆಯಲಾಗದು ಕಾಣಿರೊ.
ಇನ್ನಿವ ನೆನೆದಿರಾದರೆ ಶಿವದ್ರೋಹ ತಪ್ಪದಯ್ಯ.
ಇನ್ನು ನಿಮಗೆ ತಾಯಿ ತಂದೆಗಳ ಹೇಳಿಹೆ ಕೇಳಿರೆ.
ಗುರುವೇ ತಾಯಿ, ಗುರುವೇ ತಂದೆ, ಗುರುವೇ ಬಂಧುಗಳು.
ಗುರುವಿನಿಂದ ಪರವಿಸ್ತಾರೂ ಇಲ್ಲವೆಂದು
ನಂಬಬಲ್ಲರೆ ಶಿಷ್ಯನೆಂಬೆನಯ್ಯ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೨ ॥

೧೬೯

ಗುರುವಿನಿಂದ ಉಪದೇಶವ ಹಡದ ಶಿಷ್ಯಂಗೆ
ಭಾವವಾವುದಯ್ಯಯೆಂದಡೆ;
ಸದ್ಗುರು ಸಂದರೆ ಲಿಂಗದಲ್ಲಿ ಐಕ್ಯವಾದರೆಂದು ಭಾವಿಸುವುದಯ್ಯ.
ಲೋಕದವರಂತೆ ಸತ್ತರು ಕೆಟ್ಟರುಯೆಂದು
ಬರಿಯ ದುರ್ನುಡಿಯ ನುಡಿದರೆ,
ಅಘೋರ ನರಕ ತಪ್ಪದು ಕಾಣ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೩ ॥

೧೭೦

ಕೇಡಿಲ್ಲದ ಗುರುವಿಂಗೆ ಕೇಡ ಕಟ್ಟುವರಯ್ಯ.
ಕೇಡಿಲ್ಲದ ಲಿಂಗಕ್ಕೆ ಕೇಡ ಕಟ್ಟುವರಯ್ಯ.
ಕೇಡಿಲ್ಲದ ಜಂಗಮಕ್ಕೆ ಕೇಡ ಕಟ್ಟುವರಯ್ಯ.
ಕೇಡಿಲ್ಲದ ಮಂತ್ರಕ್ಕೆ ಕೇಡಕಟ್ಟಿ,
ಆಹ್ವಾನಿಸಿದಲ್ಲಿ ಇದ್ದಿತ್ತು,
ವಿಸರ್ಜಿಸಿದಲ್ಲಿ ಮಂತ್ರ ಭಿನ್ನವಾಯಿತ್ತೆಂದು,
ಸಂದೇಹದಲ್ಲಿ ಮುಳುಗಿ ಮೂಡುತ್ತಿಪ್ಪರಯ್ಯ.

ತನು ಮನ ಭಾವದಲ್ಲಿ ವಜ್ರಲೇಪದಂತೆ ಲೇಪಿಸಿಕೊಂಡು
ಒಳಹೊರಗೆ ಓಂನಮಶ್ಶಿವಾಯಯೆನುತ
ಸದಾ ಸನ್ನಿಹಿತನಾಗಿಪ್ಪುದನರಿಯದೆ, ಕೆಟ್ಟಿತ್ತು ಇದ್ದಿತ್ತು ಎನ್ನಲೇಕೆ?
ಕೆಡುವಾಗ ಹಾಲಂಬಿಲವೇ? ಬಳಸುವಾಗ ಹಾಲೋಗರವೇ?
ಅದು ಕೆಡುವುದು ಅಲ್ಲ; ಅಳಿವುದೂ ಅಲ್ಲ.
ನಿಮ್ಮ ಸಂಕಲ್ಪ ವಿಕಲ್ಪವೆಂಬ ಸಂದೇಹವೇ ಕೆಡಿಸುತ್ತ ಅಳಿಸುತ್ತ
ನಿಮ್ಮ ಕಾಡುತ್ತಿಪ್ಪವು ಕಾಣಿರಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೪ ॥

೧೭೧

ಗುರು ಅಳಿದನು ಉಳಿದನು ಎಂದೆಂಬರಿ.
ಗುರು ಅಳಿದರೆ ಜಗ ಉಳಿಯಬಲ್ಲುದೆ?
'ಸ್ಥಾವರಂ ಜಂಗಮಾಧಾರಂ ನಿರ್ಮಲಂ ಸ್ಥಿರಮೇವ ಚ।
ಜಗದ್ವಂದಿತಪಾದಾಯ ತಸ್ಮೈಶ್ರೀ ಗುರವೇ ನಮಃ॥'
ಎಂದುದಾಗಿ,
ಗುರು ಅಳಿವನೂ ಅಲ್ಲ; ಉಳಿವನೂ ಅಲ್ಲ.
ನಿಮ್ಮ ಭ್ರಾಂತಿಯೇ ಅಳಿದನು ಉಳಿದನು ಎಂದು
ಕುತ್ತಗೊಳಿಸುತ್ತಿದೆಯಲ್ಲಾ
ಈ ವಿಕಾರದಲ್ಲಿ ಮುಳುಗಿದವನ ಶಿಷ್ಯನೆಂದೆಂಬೆನೆ? ಎನ್ನೆನಯ್ಯ.
ಗುರು ಸತ್ತನೆಂದು ಬಸುರ ಹೊಯಿಕೊಂಡು
ಬಾಯಿಬಡಿಕೊಡು ಅಳುತ್ತಿಪ್ಪ ದುಃಖಜೀವಿಗಳಿಗೆ
ಗುರುವಿಲ್ಲ; ಗುರುವಿಲ್ಲವಾಗಿ ಲಿಂಗವಿಲ್ಲ;
ಲಿಂಗವಿಲ್ಲವಾಗಿ ಜಂಗಮವಿಲ್ಲವಯ್ಯಾ.
ಈ ತ್ರಿವಿಧವೂ ಇಲ್ಲವಾಗಿ,
ಪಾದೋದಕ ಪ್ರಸಾದವೂ ಇಲ್ಲವಯ್ಯ.
ಪಾದೋದಕ ಪ್ರಸಾದವಿಲ್ಲವಾಗಿ, ಮುಕ್ತಿಯೆಂಬುದು
ಎಂದೆಂದಿಗೂ ಇಲ್ಲವಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೫ ॥

೧೭೨

ತನುವನು ಶ್ರೀಗುರುವು ಕ್ರಿಯಾದೀಕ್ಷೆಯಿಂದ
ತನುಗುಣವನು ಭಸ್ಮೀಕೃತವ ಮಾಡಿದಬಳಿಕ,
ಅದು ದೃಶ್ಯ ಜಡ ತನುವಲ್ಲ.

ಶಿವಸ ತ್ರಿಯಾಚಾರದ ಮೂಲಸೂತ್ರವೆ ತನ್ನ ತನುವೆಂದರಿವುದು.
ಶ್ರೀಗುರು ಮಂತ್ರದೀಕ್ಷೆಯಿಂದ ಮನದ ಪೂರ್ವಾಶ್ರಯವ ಕಳೆದು
ಮನಕ್ಕೆ ಘನ ನೆನಹ ಸಂಬಂಧಿಸಿದನಾಗಿ, ಮನ ನಿರ್ಮಲದಾಗಿ
ಲಿಂಗಕ್ಕಾಶ್ರಯವೆಂದು ಅರಿವುದು.
ಶ್ರೀಗುರು ಜ್ಞಾನದೀಕ್ಷೆಯಿಂದ
ಪ್ರಾಣನ ಪ್ರಪಂಚಿನ ಪಶುಭಾವವ ಕಳೆದು
ಅಖಂಡಿತ ಜ್ಞಾನಲಿಂಗಕಳೆಯ ತನ್ನ ಪ್ರಾಣನಾಥನೆಂದು
ತಿಳುಹಿದನಾಗಿ,
ಪ್ರಾಣನ ಮಲಿನವೆಂಬುದು ಪಶುಭಾವವಲ್ಲದೆ ಲಿಂಗಭಾವವಲ್ಲ.
ಈ ಸಂದೇಹ ಭ್ರಾಂತಿಯುಳ್ಳ ಕಾರಣ, ಶೈವ ಹೊಲ್ಲ
ಎನ್ನುತ್ತಿರ್ದೆನಯ್ಯ.
ತಮ್ಮ ತಾವರಿದು ನಿಶ್ಚೈಸದಿರ್ದಡೆ ಮಾಣಲಿ.
ಗುರೂಪದೇಶದಿಂದ ನಿಶ್ಚೈಸುವುದು. ಇದು ಸಂದೇಹವಿಲ್ಲ ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೬ ॥

## ಲಿಂಗಧಾರಣಸ್ಥಲದ ವಚನ

ಸೂತ್ರ॥ ಇಂತು ಗುರುಕರುಣವ ಹಡೆದು, ಶಿಷ್ಯನ ಅಂಗವ ಬಿಟ್ಟು ಶ್ರೀಗುರು ಹಿಂಗಲಾಗದೆಂದು ಶಿಷ್ಯನ ಸ್ಥೂಲಾಂಗದ ಮೇಲೆ ಕ್ರಿಯಾಲಿಂಗ ಸ್ವರೂಪವನ್ನೈದಿದನಾಗಿ ಮುಂದೆ ಲಿಂಗಧಾರಣಸ್ಥಲವಾದುದು.

೧೭೩

ಗುರುದೇವನೇ ಮಹಾದೇವನು; ಗುರುದೇವನೇ ಸದಾಶಿವನು
ಗುರುದೇವನೇ ಪರತತ್ವವು; ಆ ಪರಶಿವ ತಾನೆ ಗುರುರೂಪಾಗಿ
ವರ್ತಿಸಿದನು, ಶಿಷ್ಯದೀಕ್ಷಾಕಾರಣ.
ಆ ಶ್ರೀಗುರು, ಶಿಷ್ಯನ ಮಸ್ತಕದಲ್ಲಿ ತನ್ನ ಹಸ್ತಕಮಲವನಿರಿಸಿ,
ಈ ಪ್ರಕಾರವಪ್ಪ ಲಿಂಗಕಳೆಯ ಪ್ರತಿಷ್ಠೆಯಂ ಮಾಡಿದನಾಗಿ,
ಆ ಗುರುವಿನ ಹಸ್ತದಿಂದ ಆ ಕಳೆ ಹುಟ್ಟಿ,
ಅದೇ ಕರಸ್ಥಲಕ್ಕೆ ಇಷ್ಟಲಿಂಗವಾಯಿತ್ತು;
ಮನಸ್ಥಲಕ್ಕೆ ಪ್ರಾಣಲಿಂಗವಾಯಿತ್ತು.
ಭಾವಭರಿತವಾಗಿ ಭಾವಲಿಂಗವಾಯಿತ್ತು.
ಇಷ್ಟ ಪ್ರಾಣ ಭಾವವೆಂಬ ತ್ರಿವಿಧಲಿಂಗವು ತಾನೆ
ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ,
ಪ್ರಸಾದಲಿಂಗ, ಮಹಾಲಿಂಗವೆಂದು ಆರುತೆರನಾಯಿತ್ತು.
ಆಚಾರಲಿಂಗದಲ್ಲಿಯೆ ಗುರುಲಿಂಗ ಶಿವಲಿಂಗ ಜಂಗಮಲಿಂಗ
ಪ್ರಸಾದಲಿಂಗ, ಮಹಾಲಿಂಗ
ಈ ಲಿಂಗಪಂಚಕವು ಗರ್ಭೀಕೃತವಾಗಿ
ಆಚಾರಲಿಂಗವೆಂದು ಕ್ರಿಯಾಲಿಂಗವೆಂದು
ಒಂದೇ ಪರಿಯಾಯವಾಗಿ
ಕ್ರಿಯಾಲಿಂಗವೆಂದು ಇಷ್ಟಲಿಂಗವೆಂದು
ಒಂದೇ ಪರಿಯಾಯವಾಗಿ
ಇಂತಿವೆಲ್ಲವನೊಳಕೊಂಡು ನಿನ್ನ ಕರಸ್ಥಲಕ್ಕೆ ಬಂದಿತ್ತು ವಸ್ತು.
ಈ ಕರಸ್ಥಲದ ಮಹಾಘನದ ನಿಲವನು ಹೀಗೆಂದು
ಅರಿವುದೆಂದನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

೧೭೪

ದೇಹದೊಡನೆ ಪ್ರಾಣ ಹುಟ್ಟಿತ್ತಯ್ಯ.
ಆ ದೇಹದೊಡನೆ ಮಿಶ್ರವಾದ ಪ್ರಾಣನು
ಶ್ರೀಗುರುವಿನ ಕರಕಮಲದಲ್ಲಿ ಉತ್ಪತ್ತಿಯಾಗಿ,
ಅಂಗದ ಮೇಲೆ ಲಿಂಗಸ್ವಾಯತವ ಮಾಡಿ
ಉರುತರ ಲಿಂಗದಲ್ಲಿ ಭರಿತ ಚರಿತ ಚಾರಿತ್ರನ ಮಾಡಿದನಾಗಿ
ಲಿಂಗದೇಹಿ ಲಿಂಗಪ್ರಾಣಿಯೆನಿಸಿಕೊಂಡು ಬದುಕಿದೆನಯ್ಯ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨ ॥

೧೭೫

ಈ ಪ್ರಕಾರದಲ್ಲಿ ಗುರುವಿನ ಹಸ್ತದಲ್ಲಿ ಹುಟ್ಟಿ
ಲಿಂಗದೇಹಿಯೆನಿಸಿಕೊಂಡ ಜ್ಞಾನಿಪುರುಷನು
ತನ್ನ ಜ್ಞಾನಸ್ವರೂಪವನರಿಯಬೇಕಯ್ಯ.
ಆ ಜ್ಞಾನವೇ ಆರುತೆರನಾಗಿಪ್ಪುದು. ಅವಾವವೆಂದಡೆ:
ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ,
ಪ್ರಸಾದಲಿಂಗ, ಮಹಾಲಿಂಗವೆಂದು ಇಂತೀ ಆರುತೆರನಾಗಿಪ್ಪುದು
ಈ ಷಡ್ವಿಧವ್ರತವನರಿದು ಆಚರಿಸುವ
ಕ್ರಮವೆಂತುಟಯ್ಯಯೆಂದಡೆ:
ಆಧಾರಚಕ್ರಸ್ಥಾನದಲ್ಲಿ ನಾಲ್ಕೆಸಳಕಮಲದ
ವ ಶ ಷ ಸಯೆಂಬ ನಾಲ್ಕು ಬೀಜಾಕ್ಷರದ
ಪೃಥ್ವಿತತ್ವದ ಕೆಂಪುವರ್ಣದ ನೆಲೆಯನರಿಯಬೇಕಯ್ಯ.
ಸ್ವಾಧಿಷ್ಠಾನಚಕ್ರದಲ್ಲಿ ಆರೆಸಳಕಮಲದ
ಬ ಭ ಮ ಯ ರ ಲಯೆಂಬ ಆರು ಬೀಜಾಕ್ಷರ ಯುಕ್ತವಾದ
ಅಪ್ಪುತತ್ವದ ನೀಲವರ್ಣದ ನೆಲೆಯನರಿಯಬೇಕಯ್ಯ.
ಮಣಿಪೂರಕಚಕ್ರಸ್ಥಾನದಲ್ಲಿ ಹತ್ತೆಸಳಕಮಲದ
ಡ ಢ ಣ ತ ಥ ದ ಧ ನ ಪ ಫ ಯೆ ಂ ಬ ಹತ್ತು ಬೀಜಾಕ್ಷರ
ಸ್ವಾಯತವಾಗಿಪ್ಪ
ಅಗ್ನಿತತ್ವದ ಕುಂಕುಮವರ್ಣದ ನೆಲೆಯನರಿಯಬೇಕಯ್ಯ.
ಅನಾಹತಚಕ್ರಸ್ಥಾನದಲ್ಲಿ ಹನ್ನೆರಡೆಸಳಕಮಲದ
ಕ ಖ ಗ ಘ ಙ ಚ ಛ ಜ ಝ ಞ ಟ ಠ ಯೆಂಬ ಹನ್ನೆರಡು
ಬೀಜಾಕ್ಷರಯುಕ್ತವಾಗಿರ್ಪ
ವಾಯುತತ್ವದ ಶ್ವೇತವರ್ಣದ ನೆಲೆಯನರಿಯಬೇಕಯ್ಯ.

ವಿಶುದ್ಧಿಚಕ್ರಸ್ಥಾನದಲ್ಲಿ ಪದಿನಾರೆಸಳಕಮಲದ
ಅ ಆ ಇ ಈ ಉ ಊ ಋ ೠ ಌ ೡ ಏ ಐ ಓ ಔ ಅಂ ಅಃ
ಎಂಬ ಹದಿನಾರು ಬೀಜಾಕ್ಷರ ಸ್ವಾಯತವಾಗಿಪ್ಪ
ಆಕಾಶತತ್ವದ ಸ್ಫಟಿಕವರ್ಣದ ನೆಲೆಯನರಿಯಬೇಕಯ್ಯ.

ಆಜ್ಞಾಚಕ್ರಸ್ಥಾನದಲ್ಲಿ ಎರಡೆಸಳಕಮಲದ
ಹಂ ಸ ಯೆಂಬ ಎರಡು ಬೀಜಾಕ್ಷರಯುಕ್ತವಾಗಿಪ್ಪ
ಆತ್ಮತತ್ವದ ಮಾಣಿಕ್ಯವರ್ಣದ ನೆಲೆಯನರಿಯಬೇಕಯ್ಯ.
ಇವೆಲ್ಲವಕ್ಕೂ ಮೇಲಣತತ್ವವೆನಿಸುವ ಬ್ರಹ್ಮರಂಧ್ರದಲ್ಲಿ
ಸಾವಿರೆಸಳಕಮಲದ, ಸಾವಿರ ಬೀಜಾಕ್ಷರ
ಸರ್ವತೋಮುಖವಾಗಿಪ್ಪ
ಭೇದವನರಿಯಬೇಕಯ್ಯ.
ಇನ್ನೀ ಚಕ್ರಂಗಳಿಗೆ ಲಿಂಗಸ್ವಾಯತಯುಕ್ತವಾಗಿಪ್ಪ
ಭೇದವ ಹೇಳಿಹೆನು:
ಆಧಾರಚಕ್ರದ ನಾಲ್ಕೆಸಳಕಮಲದ ಮಧ್ಯದಲ್ಲಿ
ಆಚಾರಲಿಂಗವ ಸ್ವಾಯತವ ಮಾಡಿ
ಸ್ವಾಧಿಷ್ಠಾನಚಕ್ರದ ಆರೆಸಳಕಮಲದ ಮಧ್ಯದಲ್ಲಿ
ಗುರುಲಿಂಗವ ಮೂರ್ತಿಗೊಳಿಸಿ
ಮಣಿಪೂರಕಚಕ್ರದ ಹತ್ತೆಸಳಕಮಲದ ಮಧ್ಯದಲ್ಲಿ
ಶಿವಲಿಂಗವ ಸಂಬಂಧಿಸಿ
ಅನಾಹತಚಕ್ರದ ಹನ್ನೆರಡೆಸಳಕಮಲದ ಮಧ್ಯದಲ್ಲಿ
ಜಂಗಮಲಿಂಗವ ನೆಲೆಗೊಳಿಸಿ
ವಿಶುದ್ಧಿಚಕ್ರದ ಹದಿನಾರೆಸಳಕಮಲದ ಮಧ್ಯದಲ್ಲಿ
ಪ್ರಸಾದಲಿಂಗವ ಮೂರ್ತಿಗೊಳಿಸಿ
ಆಜ್ಞಾಚಕ್ರದ ಎರಡೆಸಳಕಮಲದ ಮಧ್ಯದಲ್ಲಿ
ಮಹಾಲಿಂಗವ ನೆಲೆಗೊಳಿಸಿ
ಪ್ರಾಣದಲ್ಲಿ ಆಚಾರಲಿಂಗವ ಸಂಬಂಧಿಸಿ
ಜಿಹ್ವೆಯಲ್ಲಿ ಗುರುಲಿಂಗವ ಸ್ವಾಯತವಮಾಡಿ
ನೇತ್ರದಲ್ಲಿ ಶಿವಲಿಂಗವ ಮೂರ್ತಿಗೊಳಿಸಿ
ತ್ವಕ್ಕಿನಲ್ಲಿ ಜಂಗಮಲಿಂಗವ ನೆಲೆಗೊಳಿಸಿ
ಶ್ರೋತ್ರದಲ್ಲಿ ಪ್ರಸಾದಲಿಂಗವ ಸಂಬಂಧಿಸಿ
ಭಾವದಲ್ಲಿ ಮಹಾಲಿಂಗವ ನೆಲೆಗೊಳಿಸಿ
ಬ್ರಹ್ಮರಂಧ್ರದಲ್ಲಿರ್ಪ ಪರಿಪೂರ್ಣಲಿಂಗವು
ಸರ್ವಾಂಗದಲ್ಲಿಯು ಸ್ವಾಯತವಾಗಲು

ಅಂಗಸಂಗಗಳೆಲ್ಲವು ಲಿಂಗಸಂಗಗಳಾಗಿ
ಲಿಂಗ ದೃಕ್ಕೀ ನಿರಂತರ ಪ್ರಕಾಶಿಸುತಿಪ್ಪುದಯ್ಯ.
ಲಿಂಗಪ್ರಭೆಯೊಳಗೆ ಶಿವಶಿವಾಯೆನುತಿರ್ದೆನಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩ ॥

೧೭೬

ಇಂತು ಅಂತರಂಗದಲ್ಲಿ ಲಿಂಗಧಾರಣವಾಯಿತ್ತೆಂದಡೆ,
ಬಹಿರಂಗದಲ್ಲಿ ಅಂಗದ ಮೇಲೆ
ಇಷ್ಟಲಿಂಗಧಾರಣವಿಲ್ಲದೆ ಇರಬಹುದೆ? ಇರಬಾರದು,
ಅದು ವೀರಮಾಹೇಶ್ವರರ ಆಚರಣೆಯಲ್ಲದ ಕಾರಣ.
ಎಷ್ಟು ಅರುಹಾದರೂ ಅಂಗದಮೇಲೆ
ಶಿವಲಿಂಗಧಾರಣವಿಲ್ಲದಿರ್ದಡದು ಅರುಹಲ್ಲ:
ಅದು ನಮ್ಮ ಪುರಾತನರ ಮತವಲ್ಲ.
ಸಾಕ್ಷಾತ್ ಪರಮೇಶ್ವರನಾದರೂ ಆಗಲಿ,
ಅಂಗದಮೇಲೆ ಲಿಂಗಧಾರಣವಿಲ್ಲದಿದ್ದರೆ,
ಅವನ ಮುಖವ ನೋಡಲಾಗದು ಕಾಣ.
ಅದೇನುಕಾರಣವೆಂದರೆ:
ಅದು ಶಿವಾಚಾರದ ಪಥವಲ್ಲದ ಕಾರಣ.
ಗುರುಕರುಣದಿಂದ ಪಡೆದ ಲಿಂಗವ
ಕಕ್ಷೆ ಕರಸ್ಥಲ ಕಂಠ ಉತ್ತಮಾಂಗ ಮುಖ ಸೆಜ್ಜೆ ಅಮಳೋಕ್ಯ
ಮೊದಲಾದ ಸ್ಥಾನಂಗಳಲ್ಲಿ ಧರಿಸುವುದೇ ಸತ್ಪಥ ಕಾಣ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪ ॥

೧೭೭

ಎನ್ನ ಪ್ರಾಣನೊಳಗೆ ಹೂಳಿರ್ದ ಪರಮಕಳೆಯ ತೆಗದು
ಶಿವಲಿಂಗಮೂರ್ತಿಯ ಮಾಡಿ
ಎನ್ನ ಕರಸ್ಥಲಕ್ಕೆ ಕೊಟ್ಟನಯ್ಯ ಶ್ರೀಗುರು.
ಆ ಲಿಂಗವು ಸರ್ವಾವಸ್ಥೆಯಲ್ಲಿಯು
ಅಂಗವ ಬಿಟ್ಟು ಅಗಲಲಾಗದುಯೆಂದು
ನಿರೂಪಿಸಿದನಯ್ಯ ಶ್ರೀಗುರು.
ಇದು ಕಾರಣ,
ಅಂಗವ ಬಿಟ್ಟು ಲಿಂಗ ನಿಮಿಷಾರ್ಧವಗಲಿದಡೆ,
ನಾಯಕನರಕ ತಪ್ಪದಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫ ॥

೧೭೮

ಬಯಲ ಮೂರ್ತಿ ಮಾಡಿ,
ಎನ್ನ ಕರಸ್ಥಲಕ್ಕೆ ಕೊಟ್ಟನಯ್ಯ ಶ್ರೀಗುರು.
ಬಯಲಮೂರ್ತಿಯ ಅಮೂರ್ತಿಯ ಮಾಡಿ,
ಎನ್ನ ಪ್ರಾಣದೊಳಗಿರಿಸಿದನಯ್ಯ ಶ್ರೀಗುರು.
ಬಯಲು ಬಯಲನೆ ಬೆರಸಿ ಬಯಲೆಂದೆನಿಸಿ
ಎನ್ನ ಭಾವದೊಳಗಿರಿಸಿದನಯ್ಯ ಶ್ರೀಗುರು.
ಇದು ಕಾರಣ,
ಎನ್ನ ಕರಸ್ಥಲ ಮನಸ್ಥಲ ಭಾವಸ್ಥಲದಲ್ಲಿ ನಿಮ್ಮಧರಿಸಿ
ನಾನು ಅಂಗಲಿಂಗ ಸಂಬಂಧಿಯಾದೆನಯ್ಯ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬ ॥

೧೭೯

ವೇಧಾಧೀಕ್ಷೆ ಮಂತ್ರದೀಕ್ಷೆ ಕ್ರಿಯಾದೀಕ್ಷೆಯೆಂಬ
ದೀಕ್ಷಾತ್ರಯಂಗಳಿಂದ ತನುತ್ರಯಂಗಳ ಪೂರ್ವಾಶ್ರಯವ ಕಳದು
ಲಿಂಗತ್ರಯಂಗಳ ಸಂಬಂಧಿಸಿದನದೆಂತೆಂವಡೆ:
ವೇಧಾದೀಕ್ಷೆಯೆಂದು ಶ್ರೀಗುರು ತನ್ನ ಹಸ್ತವ
ಶಿಷ್ಯನ ಮಸ್ತಕವಲ್ಲಿ ಸಂಯೋಗವ ಮಾಡಿಮದು;
ಮಂತ್ರದೀಕ್ಷೆಯೆಂದು ಶ್ರೀಗುರು ಪ್ರಣವಪಂಜಾಕ್ಷರಿಯ ಮಂತ್ರವ
ಕರ್ಣದಲ್ಲಿ ಉಪದೇಶಿಸಿದುಮು;
ಕ್ರಿಯಾದೀಕ್ಷೆಯೆಂದು ಆ ಮಂತ್ರಸ್ವರೂಪವನೆ
ಇಷ್ಟಲಿಂಗಸ್ವರೂಪವ ಮಾಡಿ ಕರಸ್ಥಲದಲ್ಲಿ ಸಂಬಂಧಿಸಿದುಮು.
ಇದು ಕಾರಣ,
ವೇಧಾದೀಕ್ಷೆಯಿಂದ ಕಾರಣತನುವಿನ ಪೂರ್ವಾಶ್ರಯವಳಿದು
ಭಾವಲಿಂಗಸಂಬಂಧವಾಯಿತ್ತು.
ಮಂತ್ರದೀಕ್ಷೆಯಿಂದ ಸೂಕ್ಷ್ಮತನುವಿನ ಪೂರ್ವಾಶ್ರಯವಳಿದು
ಪ್ರಾಣಲಿಂಗಸಂಬಂಧವಾಯಿತ್ತು.
ಕ್ರಿಯಾದೀಕ್ಷೆಯಿಂದ ಸ್ಥೂಲತನುವಿನ ಪೂರ್ವಾಶ್ರಯವಳಿದು
ಇಷ್ಟಲಿಂಗಸಂಬಂಧವಾಯಿತ್ತು.
ಅಂಗತ್ರಯಂಗಳಲ್ಲಿ ಲಿಂಗತ್ರಯಂಗಳ ಧರಿಸಿದೆನಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭ ॥

೧೮೦

ಶ್ರೀಗುರು ಶಿವಗಣಂಗಳ ಮಧ್ಯದಲ್ಲಿ ಎನಗೆ ಉಪದೇಶಿಸುವಲ್ಲಿ
ಪರಮೇಶ್ವರನ ಪಂಚಮುಖವನೆ
ಪಂಚಕಳಶವಾಗಿ ಮೂರ್ತಿಗೊಳಿಸಿ,
ಗಣಂಗಳು ಸಾಕ್ಷಿಯಾಗಿ ಕರಸ್ಥಲಕ್ಕೆ ಶಿವಲಿಂಗವ ಕೊಟ್ಟು
'ಈ ಲಿಂಗವೆ ಗಂಡ ನೀನೇ ಹೆಂಡತಿ'ಯೆಂದು ಹೇಳಿ,
ಲಲಾಟದಲ್ಲಿ ವಿಭೂತಿಯ ಪಟ್ಟವ ಕಟ್ಟಿ
ಹಸ್ತದಲ್ಲಿ ಕಂಕಣವ ಕಟ್ಟಿ, ಪಾದೋದಕ ಪ್ರಸಾದವನಿತ್ತು
ಎಂದೆಂದಿಗೂ ಸತಿಪತಿಭಾವ ತಪ್ಪದಿರಲಿಯೆಂದು
ನಿರೂಪಿಸಿದದನಯ್ಯ ಶ್ರೀಗುರು.
ಆ ನಿರೂಪವ ಮಹಾಪ್ರಸಾದವೆಂದು ಕೈಕೊಂಡೆನಯ್ಯ.
ಇದು ಕಾರಣ, ಎನ್ನ ಪತಿಯಲ್ಲದೆ ಅನ್ಯವನರಿಯೆನಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮ ॥

೧೮೧

ಆಯತಲಿಂಗ ಸಂಬಂಧವಿಲ್ಲದಾತ ಅಂಗಭವಿ;
ಸ್ವಾಯತಲಿಂಗ ಸಂಬಂಧವಿಲ್ಲದಾತ ಮನಭವಿ;
ಸನ್ನಿಹಿತಲಿಂಗದ ಸಂಬಂಧವಿಲ್ಲದಾತ ಆತ್ಮಭವಿ;
ಇದು ಕಾರಣ, ಆಯತಲಿಂಗವ ಅಂಗದಲ್ಲಿ ಅಳವಡಿಸಿ,
ಸ್ವಾಯತಲಿಂಗವ ಮನದಲ್ಲಿ ಅಳವಡಿಸಿ
ಸನ್ನಿಹಿತಲಿಂಗವ ಆತ್ಮನಲ್ಲಿ ಅಳವಡಿಸಿ
ಅಂಗಮನಪ್ರಾಣದಲ್ಲಿ ಲಿಂಗವ ಧರಿಸಿ ಹೆರೆಹಿಂಗದಿರ್ದೆನಯ್ಯ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯ ॥

೧೯೨

ಭಾವ ಮನಕ್ಕೆ ಲಿಂಗವ ಧರಿಸಿ ಕಾಯಕ್ಕೆ ಲಿಂಗವಿಲ್ಲದಿರಬಹುವೇ?
ಎರಡಂಗ ಭಕ್ತರಾಗಿ, ಒಂದಂಗ ಭವಿಯಾಗಿಪ್ಪ
ಭ್ರಾಂತರ ಮುಖವ ನೋಡಲಾಗದು.
ತನು ಮನ ಭಾವದಲ್ಲಿ ಲಿಂಗವ ಧರಿಸಿ
ಲಿಂಗತ್ರಯಕ್ಕೆ ಅಂಗತ್ರಯಕ್ಕೆ ಅಗಲಿಕೆಯಿಲ್ಲದೆ
ಅಚಲಿತನಾಗಿರ್ದೆನಯ್ಯ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦ ॥

೧೮೩

ತನು ಶುದ್ಧವಿಲ್ಲ ಎಂಬಾತ
ಅಂಗದ ಮೇಲೆ ಲಿಂಗವ ಧರಿಸಲಾಗದು.
ಮನ ಶುದ್ಧವಿಲ್ಲ ಎಂಬಾತ
ಲಿಂಗವ ಹಿಡಿದು ಪೂಜೆಯ ಮಾಡಲಾಗದು.
ಪ್ರಾಣ ಮಲಿನವೆಂಬ ಪಶುಗಳಿಗೆ ಪ್ರಾಣಲಿಂಗವಲ್ಲಿಯದೋ?
ಇದು ಕಾರಣ,
ಆರು ಶೈವದಲ್ಲಿ ನಡೆವುತಿಪ್ಪವರೆಲ್ಲ
ಬಾರದ ಭವದಲ್ಲಿ ಬಪ್ಪುದು ತಪ್ಪದು ಕಾಣ ನೀ ಸಾಕ್ಷಿಯಾಗಿ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೧ ॥

೧೮೪

ಲಿಂಗವ ಹಿಡಿದ ಹಸ್ತವೆ ಲಿಂಗಕ್ಕೆ ಪೀಠ ಕಾಣಿರೊ.
ಲಿಂಗವ ಪೂಜಿಸುವ ಹಸ್ತವೆ ಶಿವಹಸ್ತ ಕಾಣಿರೊ.
ಲಿಂಗವ ಧರಿಸಿಪ್ಪ ಅಂಗವೆ ಲಿಂಗದಂಗ ತಾನೆ ನೋಡ.
ಲಿಂಗಪ್ರಸಾದವ ಕೊಂಬ ಪ್ರಾಣ ಲಿಂಗ ತಾನೆ ನೋಡ.
ಒಳಹೊರಗೆ ಲಿಂಗಭರಿತವಾಗಿಪ್ಪ ಲಿಂಗದೇಹಿ ಲಿಂಗಪ್ರಾಣಿಗೆ
ಕರ್ಮವ ಕಲ್ಪಿಸಿ ನುಡಿವ ಅಬದ್ಧರನೇನೆಂಬೆನಯ್ಯ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೨ ॥

## ವಿಭೂತಿಧಾರಣಸ್ಥಲದ ವಚನ

ಸೂತ್ರ ॥ ಇಂತು ಗುರುಕರುಣಮಂ ಪಡದು, ಅಂಗದ ಮೇಲೆ ಶಿವಲಿಂಗಧಾರಣವಾದ ಶರಣನು ತನ್ನಂತರಂಗದ ವಿಮಲ ಚಿದ್ವಿಭೂತಿಯನೆ ಕ್ರೀಯಿಟ್ಟು ಧರಿಸಬೇಕಾದ ಕಾರಣ ಮುಂದೆ ವಿಭೂತಿಧಾರಣಸ್ಥ ಲವಾದುದು.

೧೮೫

ಆದಿ ಆಧಾರದಲ್ಲಿ ವೇಧಿಸಿದ ಚಿದ್ಭಸ್ಮವ
ಭೇದಿಸಿ ಬಹಿಷ್ಕರಿಸಿ ಸರ್ವಾಂಗದಲ್ಲಿ ಧರಿಸಲು
ಭವಬಂಧನ ದುರಿತದೋಷಂಗಳು
ಪರಿಹರವಪ್ಪುದು ತಪ್ಪದು ನೋಡ.
ಇದು ಕಾರಣ ಅಡಿಗಡಿಗೆ ಶ್ರೀ ವಿಭೂತಿಯನೆ ಧರಿಸಿ
ಮಲತ್ರಯಂಗಳ ತೊಳೆದೆನು ನೋಡ.
ಮಲತ್ರಯಂಗಳು ಪರಿಹರವಾಗದ ಮುನ್ನ
ಭವಬಂಧನದ ಬೇರುಗಳ ಸಂಹರಿಸಿ
ಜನನ ಮರಣಂಗಳ ಒತ್ತಿ ಒರಸುವದು ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

೧೮೬

ಸಕಲ ಕರಣಂಗಳನು ಬಕುತಿಯ ಜ್ವಾಲೆಯಲ್ಲಿ ಸುಟ್ಟು
ಯುಕುತಿಯ ವಿಭೂತಿಯ ಧರಿಸಲು
ಮುಕುತಿಯಹುದಕೆ ಸಂದೇಹವಿಲ್ಲ.
ಇದು ಕಾರಣ ಶಿವಸಂಬಂಧವಾದ
ಶ್ರೀ ವಿಭೂತಿಯನೊಲಿದು ಧರಿಸುತಿರ್ದೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨ ॥

೧೮೭

ಇದು ಕಾರಣ, ಸರ್ವಾಂಗೋದ್ಧೂಳನವೆ ಅಧಿಕ ನೋಡ.
ಆತನ ರೋಮರೋಮಂಗಳೆಲ್ಲವು ಲಿಂಗಮಯ ನೋಡ.

ಆತನು ಪವಿತ್ರಕಾಯನು ನೋಡ.
ಆತನು ಸ್ವಯಂಜ್ಯೋತಿಸ್ವರೂಪನು ನೋಡ.
ಆತನು ಶುದ್ಧ ನಿರ್ಮಲನು ನೋಡ.
ಆ ಪರಶಿವಸ್ವರೂಪಂಗೆ ನಮೋನಮೋ ಎಂಬೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩ ॥

೧೮೮

ಬ್ರಹ್ಮರಂಧ್ರದಲ್ಲಿ ಅನಾದಿಗಣೇಶ್ವರನೆನಿಸಿ,
ಸರ್ವತೋಮುಖ[ವಾ]ಗಿಪ್ಪಿರಯ್ಯ.
ಲಲಾಟದಲ್ಲಿ ಆದಿಗಣೇಶ್ವರನೆನಿಸಿಪ್ಪಿರಯ್ಯ.
ಬಲದ ಕರ್ಣದಲ್ಲಿ ಆತ್ಮಗಣೇಶ್ವರನೆನಿಸಿಪ್ಪಿರಯ್ಯ.
ಎಡದ ಕರ್ಣದಲ್ಲಿ ಆಧ್ಯಾತ್ಮಗಣೇಶ್ವರನೆನಿಸಿಪ್ಪಿರಯಾಯ್ಯ.
ಬಲದ ನಯನದಲ್ಲಿ ನಿರ್ಮಾಯನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಎಡದ ನಯನದಲ್ಲಿ ನಿರ್ಮಲನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ನಾಸಿಕದಲ್ಲಿ ನಿರ್ಭಯನೆಂಬ ಗಣೇಶ್ವರನೆನೆಸಿಪ್ಪಿರಯ್ಯ.
ಜಿಹ್ವೆಯಲ್ಲಿ ನಿರ್ಭಾವನೆಂಬ ಗಣೇಶ್ವರನಿಸಪ್ಪಿರಯ್ಯ.
ಬೆನ್ನಿನಲ್ಲಿ ಪಂಚವದನನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಕಂಠದಲ್ಲಿ ಜ್ಞಾನಾನಂದನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಬಲದ ಭುಜದಲ್ಲಿ ಅಕ್ಷಯನೆಂಬ ಗಣೇಶ್ವರನೆಸಿಪ್ಪಿರಯ್ಯ.
ಎಡದ ಭುಜದಲ್ಲಿ ವ್ಯೋಮಸಿದ್ಧನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಬಲದ ತೋಳಿನಲ್ಲಿ ಸದಾಶಿವನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಎದದ ತೋಳಿನಲ್ಲಿ ಶೂಲಪಾಣಿಯೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಬಲದ ಮುಂಗೈಯಲ್ಲಿ
ಭಾಳಲೋಚನನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಎಡದ ಮುಂಗೈಯಲ್ಲಿ ಪಶುಪತಿಯೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಬಲದ ಬರಿಯಲ್ಲಿ ಭವಹರನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಎಡದ ಬರಿಯಲ್ಲಿ ಮೃಡನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಹೃದಯದಲ್ಲಿ ಓಂಕಾರನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ನಾಭಿಯಲ್ಲಿ ಶಂಕರನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಕಟಿಯಲ್ಲಿ ಮೃತ್ಯುಂಜಯನೆಂಬ ಗಣೇಶ್ವರನೆನಿಸಿಪ್ಪಿರಯ್ಯ
ಗುಹ್ಯದಲ್ಲಿ ಕಾಮಾಂತಕನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಗುಧಸ್ಥಾನದಲ್ಲಿ ಕಾಲಾಂತಕನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಬಲದ ತೊಡೆಯಲ್ಲಿ ಪ್ರಮಥನಾಥನೆಂಬ ಗಣೇಶ್ವರನೆನಿಸಿಪ್ಪಿರಯ್ಯ.

ಎಡದ ತೊಡೆಯಲ್ಲಿ
ಮಹಾಮಹೇಶ್ವರನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಬಲದ ಮಣಿಪಾದದಲ್ಲಿ
ಪಟ್ಟವರ್ಧನನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಎಡದ ಮಣಿಪಾದದಲ್ಲಿ
ಚಂದ್ರಶೇಖರನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಬಲದ ಕಣಪಾದದಲ್ಲಿ ಅಖಂಡಿತನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಎಡದ ಕಣಪಾದದಲ್ಲಿ ವ್ಯೋಮಕೇಶನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಬಲದ ಹರಡಿನಲ್ಲಿ ಜನನ ವಿರಹಿತನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಎಡದ ಹರಡಿನಲ್ಲಿ ವಿಶ್ವೇಶ್ವರನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಬಲದ ಮೇಗಾಲಲ್ಲಿ ಮೇಘವಾಹನನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಎಡದ ಮೇಗಾಲಲ್ಲಿ ಈಶಾನ್ಯನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಬಲದ ಉಂಗುಷ್ಠದಲ್ಲಿ
ಮಣಿಭೂಷಣನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಎಡದ ಉಂಗುಷ್ಠದಲ್ಲಿ ವಿರೂಪಕ್ಷನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಬಲದ ಅರೆಪಾದದಲ್ಲಿ
ಊರ್ಧ್ವಮುಖನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಎಡದ ಅರೆಪಾದದಲ್ಲಿ ಸಚರಾಚರನೆಂಬ ಗಣೇಶ್ವರನೆನಿಸಿಪ್ಪಿರಯ್ಯ.
ಆಧಾರಸ್ಥಾನದಲ್ಲಿ ಆಚಾರಲಿಂಗವೆನಿಸಿಪ್ಪಿರಯ್ಯ.
ಸ್ವಾಧಿಷ್ಠಾನದಲ್ಲಿ ಗುರುಲಿಂಗವೆನಿಸಿಪ್ಪಿರಯ್ಯ.
ಮಣಿಪೂರಕದಲ್ಲಿ ಶಿವಲಿಂಗವೆನಿಸಿಪ್ಪಿರಯ್ಯ.
ಅನಾಹತದಲ್ಲಿ ಜಂಗಮಲಿಂಗವೆನಿಸಿಪ್ಪಿರಯ್ಯ.
ವಿಶುದ್ಧಿಯಲ್ಲಿ ಪ್ರಸಾದಲಂಗವೆನಿಸಿಪ್ಪಿರಯ್ಯ.
ಆಜ್ಞಾಯಲ್ಲಿ ಮಹಾಲಿಂಗವೆನಿಸಿಪ್ಪರಯ್ಯ.
ಇಂತಿವೆಲ್ಲಾ ನಾಮಂಗಳನೊಳಕೊಂಡು,
'ಓಂ ನಮಃ ಶಿವಾಯ ಇತಿಮಂತ್ರಂ ಸರ್ವಮಂತ್ರಾನ್ ಸ್ಥಾಪಯೇತ್.
ಮಂತ್ರಮೂರ್ತಿ ಮಹಾರುದ್ರಂ, ಓಂ ಇತಿ ಜ್ಯೋತಿರೂಪಕಂ'
ಎನಿಸಿಕೊಂಡು
ಬಾಹ್ಯಾಭ್ಯಂತರದೊಳು ಪರಿಪೂರ್ಣವಾಗಿ ಪ್ರಕಾಶಿಸುತ್ತಿರ್ಪಿರಿಯಾಗಿ
ಸರ್ವಾಂಗವು ಲಿಂಗಮಯವೆಂದರಿದು
ಅಡಿಗಡಿಗೆ ಶ್ರೀ ವಿಭೂತಿಯನೆ ಧರಿಸುತಿಪ್ಪೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪ ॥

೧೮೯

ಅಡಿಗಡಿಗೆ ಭವಹರನ ನೆನೆವುತ್ತ, ಭಸಿತವ ಧರಿಸುತ್ತ
ಭವವ ತಪ್ಪಿಸಿಕೊಂಬ ಸುಖಕ್ಕೆ ಇನ್ನು ಸರಿಯುಂಟೆ?
ಪ್ರತಿಯಿಲ್ಲದ ಅಪ್ರತಿಮ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫ ॥

೧೯೦

'ಅನಾದಿಶಾಶ್ವತಂ ನಿತ್ಯಂ ಚೈತನ್ಯಂ ಚಿತ್‌ಸ್ವರೂಪಕಂ
ಚಿದಂಗ ವೃಷಭಾಕಾರಂ ಚಿದ್ಭಸ್ಮ ಲಿಂಗಧಾರಣಂ.
ಪ್ರಥಮಂ ಗೂಢನಿರ್ನಾಮಂ ದ್ವಿತೀಯಂ ಚಿದ್ರೂಪಕಂ
ತೃತೀಯಂ ಚಿದ್ವಿಲಾಸಂ ಚ ಚತುರ್ಥಂ ಭಸ್ಮಧಾರಣಂ
ಆಪಾದ ಮಸ್ತಕಾಂತಂಚ ರೋಮ ರೋಮ ಭವೇಚ್ಛಿವಃ
ಸ್ವಕಾಯಮುಚ್ಯತೇ ಲಿಂಗಂ ವಿಭೂತ್ಯುದ್ಧೂಳನಾತ್ ಭವೇತ್'.
ಎಂದುದಾಗಿ
ಅನಾದಿ ಶಾಶ್ವತ ನಿತ್ಯ ಪರಶಿವಸ್ವರೂಪು ತಾನೆ ನೋಡ ಶ್ರೀವಿಭೂತಿ.
ಪರಶಿವನ ಪರಮ ಚೈತನ್ಯ ಚಿತ್ ಸ್ವರೂಪು ತಾನೆ ನೋಡ ವಿಭೂತಿ.
ಚಿದಂಗ ವೃಷಭಾಕಾರ ತಾನೆ ನೋಡ ವಿಭೂತಿ.
ಆ ಚಿದ್ಭಸ್ಮವನೆ ನೀ ಧರಿಸಿಪ್ಪೆಯಯ್ಯ.
ನೀನೊಲಿದು ಧರಿಸಿದ ಪರಮಪಾವನ ಚಿದ್ಭಸ್ಮವನೆ
ನಾನು ಸರ್ವಾಂಗದಲ್ಲಿ ಧರಿಸಿ,
ಸರ್ವಾಂಗವೆಲ್ಲವು ಶಿವಮಯವಾಗಿರ್ದೆನು ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬ ॥

೧೯೧

ಕಾಲನ ಸುಟ್ಟ ಭಸ್ಮವ ಧರಿಸಿದೆನಯ್ಯ ಬಸವಣ್ಣಾ ನಿಮ್ಮಿಂದ;
ಕಾಮನ ಸುಟ್ಟ ಭಸ್ಮವ ಧರಿಸಿದೆನಯ್ಯ ಬಸವಣ್ಣಾ ನಿಮ್ಮಿಂದ;
ತನುತ್ರಯಂಗಳೆಂಬ ತ್ರಿಪುರವ
ಚಿತ್‌ಶಿಖಿಯೆಂಬ ಜ್ಞಾನಾಗ್ನಿಯಿಂದ ದಹಿಸಿದ
ಭಸ್ಮವ ಧರಿಸಿದೆನಯ್ಯ ಬಸವಣ್ಣಾ ನಿಮ್ಮಿಂದ;
ಸಂಚಿತ ಪ್ರಾರಬ್ಧ ಆಗಾಮಿಯೆಂಬ ಕರ್ಮತ್ರಯಂಗಳ ದಹಿಸಿದ

ಭಸ್ಮವ ಧರಿಸಿದೆನೆಯ್ಯ ಬಸವಣ್ಣಾ ನಿಮ್ಮಿಂದ.
ಸತ್ವ ರಜ ತಮಂಗಳ ಸುಟ್ಟುರುಹಿದ
ಭಸ್ಮವ ಧರಿಸಿದೆನಯ್ಯ ಬಸವಣ್ಣಾ ನಿಮ್ಮಿಂದ.
ಆಣವ ಮಾಯಾ ಕಾರ್ಮಿಕವೆಂಬ ಮಲತ್ರಯಂಗಳ ದಹಿಸಿದ
ಭಸ್ಮವ ಧರಿಸಿದೆನಯ್ಯ ಬಸವಣ್ಣಾ ನಿಮ್ಮಿಂದ.
ಜೀವಭಾವ ಇಂದ್ರಿಯಭಾವ ವಿಷಯಭಾವ ಭೂತಭಾವ
ಜನನಭಾವ ಬೀಜಭಾವವೆಂಬ ಭವಾಶ್ರಯವ
ಜ್ಞಾತೃ ಜ್ಞಾನ ಜ್ಞೇಯವೆಂಬ
ತ್ರಿಪುಟಿಯೇಕಾರ್ಥವಾದ ಅಗ್ನಿಯಿಂದ ಸುಟ್ಟುರುಹಿದ
ಭಸ್ಮವ ಧರಿಸಿದೆನಯ್ಯ ಬಸವಣ್ಣಾ ನಿಮ್ಮಿಂದ.
ಸ್ವರ್ಗ ಮರ್ತ್ಯ ಪಾತಾಳಕ್ಕೆ ಆಧಾರಸ್ಥಾನವೇ ಚಿತ್ತು.
ಆ ಚಿತ್‌ಸ್ವರೂಪವೇ ಬಸವಣ್ಣ.
ಇದು ಕಾರಣ ಚಿದ್ವಿಭೂತಿಯನೆ ಸದಾಕಾಲದಲ್ಲಿ ಧರಿಸಿ,
ಶುದ್ಧ ಚಿದ್ರೂಪನಾಗಿರ್ದೆನು ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭ ॥

೧೯೨

ಗಂಗಾಸ್ನಾನ ಕೋಟಾನುಕೋಟಿಗಿಂದ
ವಿಭೂತಿಯಸ್ನಾನವಧಿಕ ನೋಡ.
ಮಂತ್ರಸ್ನಾನ ಕೋಟಾನುಕೋಟಿಗಿಂದ
ವಿಭೂತಿಯಸ್ನಾನವಧಿಕ ನೋಡಾ.
ವಿಭೂತಿರೇಣುಮಾತ್ರದಿಂದ ರುದ್ರನಪ್ಪುದು ತಪ್ಪದು ನೋಡ.
ಸರ್ವಾಂಗದಲ್ಲಿ ಶ್ರೀ ವಿಭೂತಿಯ ಉದ್ಧೂಳನವ ಮಾಡಿದಾತನ
ನೇನೆಂದುಪಮಿಸುವೆನಯ್ಯ ಆ ಮಹಾತ್ಮನ?
ಆತನು ಜಗತ್ ಪಾವನನು ನೋಡಾ!
ಇಂತಪ್ಪ ಪವಿತ್ರಕಾಯಂಗೆ ನಮೋನಮೋಯೆಂಬೆನು ಕಾಣಾ.
ಆತನು ಪರಮಾತ್ಮಸ್ವರೂಪನಾದ ಕಾರಣ.
ಆತನು ಪಂಚಬ್ರಹ್ಮಸ್ವರೂಪನಾದ ಕಾರಣ.
ಆ ಮಹೇಶ್ವರಂಗೆ ಶರಣೆಂದು ಬದುಕಿದೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮ ॥

೧೯೩

ಶ್ರೀಗುರು ಈ ವಿಭೂತಿಯ ಎನ್ನ ಲಲಾಟದಲ್ಲಿ ಪಟ್ಟವ ಕಟ್ಟಲು
ಬ್ರಹ್ಮನ ಉತ್ಪತ್ಯದ ಅಂಡವೊಡೆಯಿತ್ತು ನೋಡ.
ಶ್ರೀಗುರು ಈ ವಿಭೂತಿಯನೆ ಅಡಿಗಡಿಗೆ ಧರಿಸ ಕಲಿಸಿದನಾಗಿ
ವಿಷ್ಣುವಿನ ಸ್ಥಿತಿಗತಿಯ ಕುಕ್ಷಿಹರಿಯಿತ್ತು ನೋಡ.
ಶ್ರೀಗುರು ಈ ವಿಭೂತಿಯ ಸರ್ವಾಂಗದಲ್ಲಿ
ಧರಿಸೆಂದು ಉಪದೇಶಿಸಿದನಾಗಿ,
ಅಂತರಂಗದ ಬಹಿರಂಗದ ಭ್ರಾಂತಿ ಭಸ್ಮವಾಗಿ.
ರುದ್ರನ ಲಯದ ಹೊಡೆಗಿಚ್ಚು ಕೆಟ್ಟಿತ್ತು ನೋಡ.
ಶ್ರೀಗುರು ಈ ವಿಭೂತಿಯ ಅನಾದಿಚಿತ್‌ಸ್ವರೂಪವೆಂದು
ತಿಳುಹಿದನಾಗಿ
ಅನಾದಿ ಸಂಸಿದ್ಧವಾದ ವಿಮಲಭೂತಿಯನೆ ಕ್ರೀಯಿಟ್ಟು
ಅಡಿಗಡಿಗೆ ಧರಿಸುತ್ತಿರ್ದೆನಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯ ॥

## ರುದ್ರಾಕ್ಷಿಯಸ್ಥಲದ ವಚನ

ಸೂತ್ರ॥ ಇಂತು ಗುರುಕರುಣಮಂ ಪಡೆದು ಅಂಗಪ್ರಾಣದಲ್ಲಿ ಲಿಂಗವ ಧರಿಸಿ, ಸರ್ವಾಂಗದಲ್ಲಿ ವಿಭೂತಿಯ ಉದ್ಧೂಳನವಂ ಮಾಡಿ, ಆ ಪವಿತ್ರ ಪಾವನವಪ್ಪ ಲಿಂಗಾಂಗದ ಮೇಲೆ ಶಿವನ ಆಭರಣವೆನಿಸುವ ರುದ್ರಾಕ್ಷಿಯಂ ಧರಿಸಬೇಕಾದ ಕಾರಣ ಮುಂದೆ ರುದ್ರಾಕ್ಷಿಯ ಸ್ಥಲವಾಮುದು.

೧೯೪

ತತ್ವಚಿಂತಾಮಣಿಗಳೆಂಬ ರುದ್ರಾಕ್ಷಿಗಳ ಭಕ್ತಿದಾರದಲ್ಲಿ ಸರಗೋಳಿಸಿ,
ಯುಕ್ತಿವಿಧಾನವಿಡಿದು ಧರಿಸಿ ಸದ್ಯೋನ್ಮುಕ್ತನಾದೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

೧೯೫

ಪರಶಿವನ ಜ್ಞಾನಚಕ್ಷುವಿನಲ್ಲಿ ಉದಯವಾದ ರುದ್ರಾಕ್ಷಿಯ
ಹಸ್ತ ತೋಳು ಉರ ಕಂಠ ಕರ್ಣ ಮಸ್ತಕದಲ್ಲಿ
ಧರಿಸಿದ ಶಿವಶರಣನೇ ರುದ್ರನು.
ಆ ರುದ್ರಾಕ್ಷಿಯ ಜಪಿಸಿದಾತನೇ ಸದ್ಯೋನ್ಮುಕ್ತನು. ಇದು ಕಾರಣ,
ಅಜ ಹರ ಸುರ ಮನು ಮುನೀಶ್ವರರು
ಶ್ರೀವಿಭೂತಿ ರುದ್ರಾಕ್ಷಿಯನೆ ಧರಿಸಿ,
ಶಿವಲಿಂಗಾರ್ಚನೆಯ ಮಾಡುತ್ತಿಪ್ಪರು;
ಪ್ರಮಥಗಣ ರುದ್ರಗಣ ಮುಖ್ಯವಾದ ಗಣಾಧೀಶ್ವರರು
ವಿಭೂತಿ ರುದ್ರಾಕ್ಷಿಯನೆ ಧರಿಸಿ,
ಪ್ರಣವ ಪಂಚಾಕ್ಷರಿಯನೆ ಜಪಿಸಿ,
ಪ್ರಣವ ಸ್ವರೂಪಿಗಳಾಗುತ್ತಿಪ್ಪರು.
ನೋಡಿದವರು ಮುಟ್ಟಿದವರು ಧರಿಸಿದವರು ಜಪಿಸಿದವರೆಲ್ಲ
ಸಕಲ ಪ್ರಪಂಚನಳಿದು ಪರಶಿವ ಸ್ವರೂಪರಪ್ಪುದು ತಪ್ಪದು ನೋಡ.
ಇದು ಕಾರಣ, ನಾನು ವಿಭೂತಿ ರುದ್ರಾಕ್ಷಿಯನೆ ಧರಿಸಿ,
ಶಿವಲಿಂಗಾರ್ಚನೆಯನೆ ಮಾಡಿ ಪ್ರಣವ ಪಂಚಾಕ್ಷರಿಯನೆ

ಜಪಿಸುತ್ತಿದ್ದೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨ ॥

೧೯೬

ಲಲಾಟದಲ್ಲಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿಯ ಮಾಲೆ
ಮುಖದಲ್ಲಿ ಶಿವಮಂತ್ರ, ಅಂಗದ ಮೇಲೆ ಶಿವಲಿಂಗಧಾರಣವುಳ್ಳ
ಶಿವಭಕ್ತನೆ ಸಾಕ್ಷಾತ್ ಶಿವ ತಾನೆ ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩ ॥

## ಪಂಚಾಕ್ಷರೀಸ್ಥಲದ ವಚನ

ಸೂತ್ರ॥ ಇಂತು ವಿಭೂತಿ ರುದ್ರಾಕ್ಷೆಯಂ ಧರಿಸಿ, ಅಂಗದ ಮೇಲೆ ಶಿವಲಿಂಗಸಂಪನ್ನನಾದ ವೀರಮಾಹೇಶ್ವರನು ಪ್ರಣವ ಮುಖ್ಯವಾದ ಪಂಚಾಕ್ಷರಿಯ ಜಪಿಸಬೇಕಾದ ಕಾರಣ, ಮುಂದೆ ಪಂಚಾಕ್ಷರೀಸ್ಥಲವಾದುದು.

೧೯೭

ಸದ್ಗುರುವಿನ ದೆಸೆಯಿಂದ ಆವನೋರ್ವನ ಕಿವಿಯಲ್ಲಿ
ಬ್ರಹ್ಮೋಪದೇಶವು ಹೇಳಲ್ಪಟ್ಟಿತ್ತು,
ಆ ಶಬ್ದವೇ ಬೀಜವೆನಿಸಿಕೊಂಡಿತ್ತಯ್ಯ.
ಅದು ಆವುದಯ್ಯ ಎಂದಡೆ:
ಶ್ರೀಗುರುವಿನ ದೆಸೆಯಿಂದ ಪಡೆದ ಶಿವಮಂತ್ರಾಕ್ಷರವೇ
ಬೀಜವನಿಸಿಕೊಂಡಿತ್ತಯ್ಯ.
ಅಂಥಾ ಪ್ರಾಣಿಯೆ ಜ್ಞಾನಕಾಯನೆನಿಸಿಕೊಂಬನಯ್ಯ.
ಶಿವಮಂತ್ರೋಪದೇಶವಿಲ್ಲದಾತನು
ಪ್ರಕೃತಿಕಾಯನೆನಿಸಿಕೊಂಬನಯ್ಯಾ.
ಇದು ಕಾರಣ, ಪ್ರಕೃತಿಕಾಯವೆಂದು ಜ್ಞಾನಕಾಯವೆಂದು
ಎರಡು ಭೇದವಾಗಿಪ್ಪುದಯ್ಯ.
ಶಿವಮಂತ್ರದೀಕ್ಷೋಪದೇಶವಾಗಲಾಗಿ,
ಪ್ರಕೃತಿಕಾಯ ಹೋಗಿ ಜ್ಞಾನಕಾಯವಪ್ಪುದು ತಪ್ಪದಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

೧೯೮

ನಾಮರೂಪು ಕ್ರೀಗಳೇನುಯೇನೂ ಇಲ್ಲದ
ನಿತ್ಯನಿರಂಜನ ಪರವಸ್ತು ತಾನೆ ನಿರಂಜನಪ್ರಣವ ನೋಡ.
[ಆ] ನಿರಂಜನ ಪರವಸ್ತುವಿನಲ್ಲಿ ಪರಮ ಚಿತ್ಕಲೆ ಉದಯವಾಗಿ,
ಆ ಚಿದ್ರೂಪ ಕಲೆಯ ಶುದ್ಧಪ್ರಣವವೆನಿಸಿತ್ತು ನೋಡ.

ಆ ಶುದ್ಧಪ್ರಣವದಲ್ಲಿ ಚಿತ್ತು;
ಆ ಚಿತ್ತೇ ಸಚ್ಚಿದಾನಂದಸ್ವರೂಪವನುಳ್ಳುದಾಗಿ,
ಚಿತ್‌ಪ್ರಣವವೆನಿಸಿತ್ತು ನೋಡ.
ಆ ಚಿತ್ ಪ್ರಣವಸ್ವರೂಪವಪ್ಪ ಪರತತ್ವದಲ್ಲಿ ಪರಶಕ್ತಿ
ಉದಯವಾಯಿತ್ತು.
ಆ ಪರಶಕ್ತಿಯಿಂದ ನಾದ ಬಿಂದು ಕಳೆಗಳಾದವಯ್ಯ.
ಅಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಳೆ;
ಇಂತೀ ಮೂರಕ್ಕೆ ಪರಶಕ್ತಿಯೇ ತಾಯಿ.
ಇಂತೀ ನಾಲ್ಕು ಒಂದಾದಲ್ಲಿ ಪ್ರಣವವಾಯಿತ್ತಯ್ಯ.
ಆ ಪ್ರಣವವೇ ಪಂಚಲಕ್ಷಣವಾಯಿತ್ತು; ಅದೆಂತೆಂದಡೆ:
ತಾರಕಾಕೃತಿ, ದಂಡಕಾಕೃತಿ, ಕುಂಡಲಾಕೃತಿ,
ಅರ್ಧಚಂದ್ರಾಕೃತಿ ಬಿಂದ್ವಾಕೃತಿ.
ಇಂತೀ ಪಂಚಾಕೃತಿಯಾಯಿತ್ತಯ್ಯ.
ತಾರಕಾಕೃತಿಯಲ್ಲಿ ನಕಾರ ಜನನ;
ದಂಡಕಾಕೃತಿಯಲ್ಲಿ ನಕಾರ ಜನನ.
ಕುಂಡಲಾಕೃತಿಯಲ್ಲಿ ಶಿಕಾರ ಜನನ.
ಅರ್ಧಚಂದ್ರಾಕೃತಿಯಲ್ಲಿ ವಕಾರ ಜನ.
ಬಿಂದ್ವಾಕೃತಿಯಲ್ಲಿ ಯಕಾರ ಜನನ.
ಇಂತೀ ಪ್ರಣವದಿಂದ ಪಂಚಾಕ್ಷರ[ಂ]ಗಳುತ್ಪತ್ಯವಾದವಯ್ಯ.
ಪ್ರಣವವೆ ಕೂಡಿ, ಷಡಕ್ಷರವೆಂದು ಹೇಳಲ್ಪಟ್ಟಿತಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨ ॥

೧೯೯

ಇದು ಕಾರಣ, ದೇವಗುರು ನಿರೂಪಿಸಿದ
ಷಡಕ್ಷರಮಂತ್ರವನಗಲ್ದು
ಹುಟ್ಟಿ ಸಾವ, ಕೆಡುವ ಮಂತ್ರತಂತ್ರಯಂತ್ರಾದಿಗಳ ಕಲಿತು
ಬದುಕಿಹೆನೆಂಬ ಕಾಳ್ವಿಚಾರವ ಬಿಡು ಗಡಾ ಮನುಜರಿರ.
“ಓಂ ನಮಃ ಶಿವಾಯ ಇತಿ ಮಂತ್ರಸ್ಸರ್ವ
ಮಂತ್ರಾಕ ಸ್ಥಾಪಯೇತ್”
ಎಂಬ ಬಿರಿದು ಕಾಣಿರೋ.
ಎಲ್ಲ ಮಂತ್ರಕ್ಕೂ ಶಿವಮಂತ್ರವೇ ಗುರುವೆಂದರಿಯದೆ,

ಅನ್ಯನಾಮವಿಡಿದು ಬಳಲುವ ಅನಾಚಾರಿಗಳ ಕಂಡಡೆ
ಎನ್ನ ಮನ ನಚ್ಚದು ಮಚ್ಚದಯ್ಯ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩ ॥

೨೦೦

ಓಂಕಾರವೆ ಶಿವ, ಯಕಾರವೆ ಸದಾಶಿವ,
ವಾಕಾರವೆ ಈಶ್ವರ, ಶಿಕಾರವೆ ಮಹೇಶ್ವರ,
ಮಃಕಾರವೆ ಈಶ್ವರ, ನಕಾರವೆ ಈಶಾನ.
ಈ ಷಡಕ್ಷರವೆ ಷಡ್ವಿಧಮಂತ್ರಮೂರ್ತಿಯಾಗಿ ಒಪ್ಪುತಿಪ್ಪುದಯ್ಯ.
ಮತ್ತೆ-ನಕಾರವೆ ಮೂರ್ತಿಬ್ರಹ್ಮ, ಮಃಕಾರವೆ ಪಿಂಡಬ್ರಹ್ಮ
ಶಿಕಾರವೆ ಕಲಾಬ್ರಹ್ಮ ವಾಕಾರವೆ ಆನಂದಬ್ರಹ್ಮ
ಯಕಾರವೆ ವಿಜ್ಞಾನಬ್ರಹ್ಮ ಓಂಕಾರವೆ ಪರಬ್ರಹ್ಮ
ಈ ಷಡಕ್ಷರವೆ ಷಡ್ವಿಧಬ್ರಹ್ಮವೆಂದು ಹೇಳಲ್ಪಟ್ಟಿತ್ತು ನೋಡ.
ಮತ್ತೆ- ನಕಾರವೆ ಕ್ರಿಯಾಶಕ್ತಿ: ಮಕಾರವೆ ಜ್ಞಾನಶಕ್ತಿ,
ಶಿಕಾರವೆ ಇಚ್ಛಾಶಕ್ತಿ, ವಾಕಾರವೇ ಆದಿಶಕ್ತಿ,
ಯಕಾರವೆ ಪರಶಕ್ತಿ, ಓಂಕಾರವೆ ಚಿಚ್ಛಕ್ತಿ,
ಇಂತಿವು ಮಂತ್ರಶಕ್ತಿಸ್ವರೂಪೆಂದರಿವುದು ನೋಡ.
ಮತ್ತೆ-ನಕಾರವೆ ಕರ್ಮಸಾದಾಖ್ಯ, ಮಃಕಾರವೆ ಕರ್ತೃಸಾದಾಖ್ಯ,
ಶಿಕಾರವೆ ಮೂರ್ತಿಸಾದಾಖ್ಯ, ವಾಕಾರವೇ ಅಮೂರ್ತಿಸಾದಾಖ್ಯ;
ಯಕಾರವೆ ಶಿವಸಾದಾಖ್ಯ, ಓಂಕಾರವೆ ಮಹಾಸಾದಾಖ್ಯ ನೋಡ.
ಮತ್ತೆ-ನಕಾರವೆ ಪೀತವರ್ಣ, ಮಃಕಾರವೆ ನೀಲವರ್ಣ,
ಶಿಕಾರವೆ ಕುಂಕುಮವರ್ಣ, ವಾಕಾರವೆ ಶ್ವೇತವರ್ಣ,
ಯಕಾರವೆ ಸ್ಫಟಿಕವರ್ಣ, ಓಂಕಾರವೆ ಜ್ಯೋತಿರ್ಮಯಸ್ವರೂಪು
ನೋಡ.
ಇಂತಿವು ಮಂತ್ರಮೂರ್ತಿಯ ವರ್ಣಭೇದವೆಂದರಿವುದಯ್ಯ.
ಮತ್ತೆ-ನಕಾರವೆ ಸದ್ಯೋಜಾತಮಂತ್ರಮೂರ್ತಿ.
ಮಃಕಾರವೆ ವಾಮದೇವಮಂತ್ರಮೂರ್ತಿ.
ಶಿಕಾರವೆ ಅಘೋರಮಂತ್ರಮೂರ್ತಿ.
ವಾಕಾರವೆ ತತ್ಪುರುಷಮಂತ್ರಮೂರ್ತಿ.
ಯಕಾರವೆ ಈಶಾನ್ಯಮಂತ್ರಮೂರ್ತಿ.
ಓಂಕಾರವೆ ಮಹಾಮಂತ್ರಮೂರ್ತಿ.
ಇಂತಿವು ಮಂತ್ರಮೂರ್ತಿಯ
ವದನಭೇದವೆಂದರಿವುದು ನೋಡ.

ಮತ್ತೆ-ನಕಾರವೆ ಸತ್ತು, ಮಃಕಾರವೆ ಚಿತ್ತು,
ಶಿಕಾರವೇ ಆನಂದ, ವಾಕಾರವೆ ನಿತ್ಯ,
ಯಕಾರವೇ ಪರಿಪೂರ್ಣ,
ಓಂಕಾರವೇ ನಿರಂಜನಸ್ವರೂಪವೆಂದರಿವುದಯ್ಯ.
ಮತ್ತೆ-ನಕಾರವೆ ಆಚಾರಲಿಂಗ, ಮಃಕಾರವೆ ಗುರುಲಿಂಗ,
ಶಿಕಾರೆವೆ ಶಿವಲಿಂಗ, ವಾಕಾರವೆ ಜಂಗಮಲಿಂಗ,
ಯಕಾರವೆ ಪ್ರಸಾದಲಿಂಗ, ಓಂಕಾರವೆ ಮಹಾಲಿಂಗ
ಇಂತಿವು ಷಡಕ್ಷರ ಮಂತ್ರಲಿಂಗವೆಂದರಿವುದಯ್ಯ.
ಇಂತಿವು ಲಿಂಗಷಡಕ್ಷರವೆಂದು ಹೇಳಲ್ಪಟ್ಟವು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪ ॥

೨೦೧

ನಕಾರವೆ ಪೃಥ್ವಿ: ಮಃಕಾರವೆ ಅಪ್ಪು, ಶಿಕಾರವೆ ಅಗ್ನಿ,
ವಾಕಾರವೆ ವಾಯು, ಯಕಾರವೆ ಆಕಾಶ,
ಓಂಕಾರವೆ ಆತ್ಮಸ್ವರೂಪು ನೋಡ.
ಮತ್ತೆ
ನಕಾರವೆ ಬ್ರಹ್ಮ, ಮಃಕಾರವೆ ವಿಷ್ಣು, ಶಿಕಾರವೆ ರುದ್ರ,
ವಾಕಾರವೆ ಈಶ್ವರ, ಯಕಾರವೆ ಸದಾಶಿವ,
ಓಂಕಾರವೆ ಮಹಾತ್ಮನು ನೋಡ.
ಮತ್ತೆ
ಅಂತ್ರರ್ಯಾಮಿಯೆ ನಕಾರ, ಚೈತನ್ಯನೆ ಮಃಕಾರ, ಭಾವನೆ ಶಿಕಾರ,
ಕರ್ತಾರನೆ ವಾಕಾರ, ಕ್ಷೇತ್ರಜ್ಞನೆ ಯಕಾರ,
ಶಿವನೆ ಓಂಕಾರ ನೋಡ.
ಮತ್ತೆ
ಕರ್ಮಾಂಗ ಸ್ವರೂಪನಪ್ಪ ಭಕ್ತನೆ ನಕಾರ.
ವಿದ್ಯಾಂಗ ಸ್ವರೂಪನಪ್ಪ ಮಾಹೇಶ್ವರನೆ ಮಃಕಾರ.
ಕಾಮಾಂಗ ಸ್ವರೂಪನಪ್ಪ ಪ್ರಸಾದಿಯೇ ಶಿಕಾರ.
ಯೋಗಾಂಗ ಸ್ವರೂಪನಪ್ಪ ಪ್ರಾಣಲಿಂಗಿಯೆ ವಾಕಾರ.
ಭೂತಾಂಗ ಸ್ವರೂಪನಪ್ಪ ಶರಣನೆ ಯಕಾರ.
ಶಿವಾಂಗ ಸ್ವರೂಪನಪ್ಪ ಐಕ್ಯನೆ ಓಂಕಾರ ನೋಡ,
ಮತ್ತೆ
ನಕಾರವೆ ಸದ್ಭಕ್ತಿ, ಮಃಕಾರವ ನೈಷ್ಠಿಕಾಭಕ್ತಿ, ಶಿಕಾರವೆ ಅವಧಾನಭಕ್ತಿ,

ವಾಕಾರವೆ ಅನುಭಾವಭಕ್ತಿ, ಯಕಾರವೆ ಆನಂದಭಕ್ತಿ,
ಓಂಕಾರವೆ ಸಮರಸಭಕ್ತಿ ನೋಡ.
ಮತ್ತೆ
ಆತ್ಮತತ್ವವೆ ನಕಾರ, ವಿದ್ಯಾತತ್ವವೆ ಮಃಕಾರ,
ಶಿಕಾರವೇ ಶಿವತತ್ವ ನೋಡ.
ವಾಕಾರವೇ ಈಶ್ವರತತ್ವ, ಯಕಾರವೇ ಸದಾಶಿವತತ್ವ,
ಓಂಕಾರವೆ ಪರತತ್ವ ನೋಡ.
ಮತ್ತೆ
ನಕಾರವೆ ಸುಚಿತ್ತ ಹಸ್ತ, ಮಃಕಾರವೆ ಸುಬುದ್ಧಿ ಹಸ್ತ,
ಶಿಕಾರವೆ ನಿರಹಂಕಾರ ಹಸ್ತ, ವಾಕಾರವೆ ಸುಮನ ಹಸ್ತ,
ಯಕಾರವೆ ಸುಜ್ಞಾನ ಹಸ್ತ, ಓಂಕಾರವೆ ಸದ್ಭಾವ ಹಸ್ತ,
ಇಂತಿವು ಅಂಗಷಡಕ್ಷರ ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫ ॥

೨೦೨

ಆಧಾರಚಕ್ರದಲ್ಲಿ ನಕಾರ ಸ್ವಾಯತ.
ಸ್ವಾಧಿಷ್ಠಾನಚಕ್ರದಲ್ಲಿ ಮಃಕಾರ ಸ್ವಾಯತ.
ಮಣಿಪೂರಕಚಕ್ರದಲ್ಲಿ ಶಿಕಾರ ಸ್ವಾಯತ.
ಅನಾಹತಚಕ್ರದಲ್ಲಿ ವಾಕಾರ ಸ್ವಾಯತ.
ವಿಶುದ್ಧಿಚಕ್ರದಲ್ಲಿ ಯಕಾರ ಸ್ವಾಯತ.
ಆಜ್ಞಾಚಕ್ರದಲ್ಲಿ ಓಂಕಾರ ಸ್ವಾಯತ.
ಇದು ಕಾರಣ, ಶರಣನ ಕಾಯವೇ ಷಡಕ್ಷರಮಂತ್ರಶರೀರವಾಗಿ,
ಸರ್ವಾಂಗವೆಲ್ಲವು ಜ್ಞಾನ ಕಾಯ ಕಾಣ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬ ॥

೨೦೩

ಓಂಕಾರವೆ ಪಂಚಭೂತಾತ್ಮಮಯ ನೋಡ.
ನಕಾರವೆ ದಶೇಂದ್ರಿಯ,
ಮಃಕಾರವೆ ಮನಪಂಚಕಂಗಳು ನೋಡ.
ಶಿಕಾರವೆ ಪ್ರಾಣಸ್ವರೂಪು,
ವಾಕಾರವೆ ದಶವಾಯುಗಳಸ್ವರೂಪು,
ಯಕಾರವೆ ತ್ರಿಗುಣಸ್ವರೂಪು ನೋಡ.

ಓಂಕಾರವೆ ಪಾದಾದಿ ಮಸ್ತಕಪರಿಯಂತರ
ಪರಿಪೂರ್ಣವಾಗಿ ತ್ವಗುಮಯವಾಗಿಪ್ಪುದು.
ನಕಾರವೆ ರುಧಿರಮಯವಾಗಿಪ್ಪುದು.
ಮಃಕಾರವೆ ಮಾಂಸಮಯವಾಗಿಪ್ಪುದು.
ಶಿಕಾರವೆ ಮೇದಸ್ಸುಮಯವಾಗಿಪ್ಪುದು.
ವಾಕಾರವೆ ಅಸ್ಥಿಮಯವಾಗಿಪ್ಪುದು.
ಯಕಾರವೆ ಮಜ್ಜಾಮಯವಾಗಿಪ್ಪುದು.
ಈ ಷಡಕ್ಷರಮಂತ್ರವೆಲ್ಲವು ಕೂಡಿ
ಶುಕ್ಲಮಯವಾಗಿಪ್ಪುದು ನೋಡ.
ಇದು ಕಾರಣ,
ಶರಣನ ಸಪ್ತಧಾತು ಸರ್ವೇಂದ್ರಿಯ ವಿಷಯ ಕರಣಂಗಳೆಲ್ಲವು
ಷಡಕ್ಷರಮಂತ್ರಮಯವಾಗಿಪ್ಪವು.
ಇದು ಕಾರಣ, ಶರಣನ ಶರೀರವೆ ಶಿವನ ಶರೀರ ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭ ॥

೨೦೪

ಶಿವನಲ್ಲದೆ ಬೇರೆ ದೈವವಿಲ್ಲ ನೋಡ ಎನಗೆ.
ಶಿವಮಂತ್ರವಲ್ಲದೆ ಬೇರೆ ಮಂತ್ರವಿಲ್ಲ ನೋಡ ಎನಗೆ.
ಇದು ಕಾರಣ,
'ಓಂ ನಮಃಶಿವಾಯ ಓಂ ನಮಃಶಿವಾಯ ಓಂ ನಮಃಶಿವಾಯ'
ಎಂಬ
ಷಡಕ್ಷರಮಂತ್ರವನೆ ಜಪಿಸುತಿರ್ದೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮ ॥

೨೦೫

ಶಿವಶಿವಾಯೆಂಬುದು ಭವಮುರಿತದೋಟ ಕಂಡಯ್ಯ.
ಹರಹರಯೆಂಬುದು ಹರಣದ ತೊಡಕಿನ ಮರಣವ
ಪರಿಹರಿಸುವುದು ನೋಡ.
ಇದು ಕಾರಣ,
ನಡೆವುತ್ತ ನುಡಿವುತ್ತ ಸರ್ವಾವಸ್ಥೆಯಲ್ಲಿಯು
'ಓಂ ನಮಃಶಿವಾಯ ಓಂ ನಮಃಶಿವಾಯ ಓಂ ನಮಃಶಿವಾಯ'
ಎಂಬ
ಪ್ರಣವ ಪಂಚಾಕ್ಷರಿಯನೆ ಸ್ಮರಿಸುತಿರ್ದೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯ ॥

೨೦೬

ಓಂಕಾರವೆ ನಾದಮಯ. ಓಂಕಾರವೆ ಮಂತ್ರಮಯ.
ಓಂಕಾರವೆ ಪರಿಪೂರ್ಣವಾಗಿ ಸರ್ವವ್ಯಾಪಕತ್ವವನ್ನುಳ್ಳುದು ನೋಡ.
ಪ್ರಣವವೆ ಪರಮಾತ್ಮಸ್ವರೂಪವಾಗಿ
ಪರಮೇಶ್ವರನ ಗೌಪ್ಯಮುಖ ನೋಡ.
ಪ್ರಣವವೆ ಶಿವಶರಣರ ಹೃದಯಾಧಿಪತಿ.
ಇದು ಕಾರಣ,
ಹೃದಯಕಮಲಮಧ್ಯದಲ್ಲಿ ಪ್ರಣವವನುಚ್ಚರಿಸುತ್ತ
ಪರಶಿವಧ್ಯಾನದಲ್ಲಿ ತರಹರವಾಗಿ ಪ್ರಣವಸ್ವರೂಪನಾಗಿದ್ದೆನಯ್ಯ.
ಪಂಚಾಕ್ಷರವೆ ಪಂಚಬ್ರಹ್ಮಮಯವಾಗಿ
ಆ ಪಂಚಾಕ್ಷರಿಮಂತ್ರವೆ ಶರೀರವಾಗಿರ್ದೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥೧೦॥

೨೦೭

ಪಂಚಾಕ್ಷರವೆ ಪಂಚಮುಖವಾಗಿ
ಎನ್ನ ಪಂಚೇಂದ್ರಿಯಂಗಳಾಗಿಪ್ಪವು ನೋಡ.
ಪ್ರಣವವೆ ಪ್ರಾಣಮೂರ್ತಿಯಾಗಿರ್ದೆನಯ್ಯ.
ಇದು ಕಾರಣ,
ಪರತತ್ವ ಜ್ಞಾನಮಯವಾಗಿ 'ಓಂ ನಮಃಶಿವಾಯ' ಎಂಬ
ಶಿವಷಡಕ್ಷರಮಂತ್ರವನೆ ಸ್ಮರಿಸಿ, ಭವಸಾಗರವ ದಾಂಟಿ
ಭಕ್ತನಾದೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥೧೧॥

೨೦೮

ಎನ್ನ ರೇಚಕ ಪೂರಕ ಕುಂಭಕಗಳೆಲ್ಲವು
ಶಿವಮಂತ್ರಮಯವಾಗಿ ಸಂಚರಿಸುತಿಪ್ಪವು.
ಎನ್ನ ಪೂರಕವೇ ['ಓಂ ಓಂ ಓಂ'] ಯೆಂಬ ಪ್ರಣವ
ಸ್ವರೂಪವಾಗಿಪ್ಪುದು ನೋಡ
ಎನ್ನ ರೇಚಕವೇ 'ನಮಃಶಿವಾಯ ನಮಃಶಿವಾಯ
ನಮಃಶಿವಾಯ' ಯೆನುತಿಪ್ಪುದು ನೋಡ.
ಎನ್ನ ಕುಂಭಕವೇ ಪರಶಕ್ತಿಮಯವಾಗಿ ಪರಂಜ್ಯೋತಿಸ್ವರೂಪವಾಗಿ

ಪರಮಚಿದ್ಬಾಂಡಸ್ಥಾನವಾಗಿಪ್ಪುದು ನೋಡ.
"ಮಂತ್ರಮಧ್ಯೇ ಭವೇಲ್ಲಿಂಗಂ। ಲಿಂಗಮಧ್ಯೇ ಭವೇನ್ಮಂತ್ರಃ
ಮಂತ್ರಲಿಂಗದ್ವಯೋರೈಕ್ಯಂ। ಇಷ್ಟಲಿಂಗಂ ತು ಶಾಂಕರಿ॥"
ಎಂದುದಾಗಿ,
ಎನ್ನ ರೇಚಕ ಪೂರಕ ಕುಂಭಕ ಸ್ವರೂಪವಪ್ಪ
ಶಿವಮಂತ್ರವೇ ಶಿವಲಿಂಗಸ್ವರೂಪವಾಗಿ
ಎನ್ನ ಕರಸ್ಥಲದಲ್ಲಿ ಕರತಳಾಮಳಕವಾಗಿ ಕಾಣಲ್ಪಟ್ಟಿತ್ತು ನೋಡ.
ಆ ಕರಸ್ಥಲದಲ್ಲಿ ಲಿಂಗವ ಕಂಗಳು ತುಂಬಿ ನೋಡಿ
ಮನಮುಟ್ಟಿ ನೆನೆದು
ಸಂದಿಲ್ಲದಿಷ್ಟಲಿಂಗದಲ್ಲಿ ಭಾವವಬಲಿದು
ಲಿಂಗವನಪ್ಪಿ ಅಗಲದೆ ಆ ಲಿಂಗದಲ್ಲಿ ಸದಾ ಸನ್ನಿಹಿತನಾಗಿರ್ದು
ಶಿವಶಿವಾ ಹರಹರಾಯೆನುತಿರ್ದೆನಯ್ಯಾ.
ನಿಮ್ಮ ನೆನಹಿನಿಂದ ನಿಮ್ಮುವನೆ ನೆನವುತಿರ್ದೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೨ ॥

## ೨೦೯

ಪ್ರಣವವೆ ಪರಬ್ರಹ್ಮವು. ಪ್ರಣವವೆ ಪರಾಪರವಸ್ತು.
ಪ್ರಣವವೆ ಪರತತ್ವವು. ಪ್ರಣವವೆ ಪರಂಜ್ಯೋತಿ ಪ್ರಕಾಶವು.
ಪ್ರಣವವೆ ಪರಶಿವ. ಪ್ರಣವವೆ ಶುದ್ಧಪ್ರಸಾದ.
ಪ್ರಣವವೆ ಪರಮಪದ.
ಪ್ರಣವವೆ
ವೇದಶಾಸ್ತ್ರ ಪುರಾಣಾಗಮಂಗಳುತ್ಪತ್ತಿಗೆ ಕಾರಣ ನೋಡ.
ಪ್ರಣವವೆ
ಸಪ್ತಕೋಟಿ ಮಹಾಮಂತ್ರ, ಅನೇಕೋಟಿ ಉಪಮಂತ್ರಂಗಳಿಗೆ
ಮಾತೃಸ್ಥಾನ ನೋಡ.
ಇಂತಪ್ಪ ಶಿವಸ್ವರೂಪವಪ್ಪ ಪ್ರಣವಮಂತ್ರವನೆ
ಶುದ್ಧಮಾಯಾಸಂಬಂಧವೆಂಬ ಅಬದ್ಧರ
ಎನಗೊಮ್ಮೆ ತೋರದಿರಯ್ಯ.
ಮಂತ್ರ ಜಡವಾದಲ್ಲಿಯೆ ಗುರು ಜಡ.
ಗುರು ಜಡವಾದಲ್ಲಿಯೆ ಲಿಂಗವು ಜಡ.
ಲಿಂಗವು ಜಡವಾದಲ್ಲಿಯೆ ಜಂಗಮವು ಜಡ.

ಜಂಗಮವು ಜಡವಾದಲ್ಲಿಯೇ ಪ್ರಸಾದವು ಜಡ.
ಪ್ರಸಾದವು ಜಡಯೆಂಬುವರಿಗೆ ಮುಕ್ತಿಯೆಂಬುದು ಎಂದೂ ಇಲ್ಲ.
ಮಂತ್ರ ಗುರು ಲಿಂಗ ಜಂಗಮ ಪ್ರಸಾದ ಮುಕ್ತಿ ಈ ಆರು
ಸಾಕ್ಷಾತ್ ಶಿವ ತಾನೆಯಲ್ಲದೆ ಬೇರಿಲ್ಲ.
ಶಿವ ಬೇರೆ ಇವು ಬೇರೆಯೆಂಬ ಅಜ್ಞಾನ ಕರ್ಮಕಾಂಡಿಗಳ
ಪಶುಮತ [ದ] ವರಯೆನಗೊಮ್ಮೆ ತೋರದಿರು.
ಇದು ಕಾರಣ, ಪ್ರಣವವೇ ಪರವಸ್ತು.
ಪಂಚಾಕ್ಷರವೆ ಪಂಚಮುಖವನ್ನುಳ್ಳ ಪರಮೇಶ್ವರ ತಾನೆ ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೩ ॥

೨೧೦

ಮಾನಸ ವಾಚಕ ಉಪಾಂಶಿಕವೆಂದು
ಪ್ರಣವ ಪಂಚಾಕ್ಷರಿಯ ಜಪ ಮೂರು ತೆರನಾಗಿಪ್ಪುದು.
ಮನಸಿನಲ್ಲಿಯೆ ಪ್ರಣವಮಂತ್ರವ ಸ್ಮರಿಸುವುದು ಮಾನಸ.
ವಾಕ್ಯದಿಂದ 'ಶಿವಾಯ ಹರಾಯ ಭವಾಯ
ಮೃಡಾಯ ಮೃತ್ಯುಂಜಯಾಯ
ಸೋಮಶೇಖರ ಪ್ರಭವೇ ವಿಭವೇ
ಶಿವಶಿವಾ ಶರಣು ಶರಣೆ'ಂಬುದೇ ವಾಚಕ.
ಕ್ರಿಯಾಕಾಲದಲ್ಲಿ ಇತರವಾಗಿ ಒಬ್ಬರು ಕೇಳದ ಹಾಗೆ
ತನ್ನ ಕಿವಿ ಕೇಳುವ ಹಾಗೆ
ಶಿವ ಮಂತ್ರದಲ್ಲಿ ಸುಯಿಧಾನಿಯಾಗಿ ಪುನಃಶ್ಚರಣೆಯಾಗಿ
ತ್ರಿಸಂಧ್ಯಾಕಾಲದಲ್ಲಿ ಬಿಡದೆ ಉಚ್ಚರಿಸುವುದೀಗ ಉಪಾಂಶಿಕ.
ಈ ಮೂರು ಪ್ರಕಾರದಲ್ಲಿ ಶಿವಮಂತ್ರವ ಜಪಿಸಬೇಕು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೪ ॥

೨೧೧

ಇದು ಕಾರಣ,
ಎನ್ನ ಮಾನಸ ನಿಮ್ಮುವನೆ ನೆನೆವುತಿಪ್ಪುದು.
ಎನ್ನ ವಾಚಕ ನಿಮ್ಮುವನೆ ಕೀರ್ತಿಸುತಿಪ್ಪುದು.
ಎನ್ನ ಕಾಯಕ ಷಟ್‌ಕರ್ಮಂಗಳನೆಲ್ಲ ಮರದು
ಶಿವಲಿಂಗಕೃತ್ಯವನೆ ಮಾಡುತಿಪ್ಪುದು ನೋಡ.
ಈ ಭಾಷೆ ಮನ ಮನತಾರ್ಕಣೆಯಾಗಿ ಹುಸಿಯಲ್ಲ.

ತನಗಿಲ್ಲದುದನುಂಟುಮಾಡಿಕೊಂಡು ಹುಸಿವನೇ ಶಿವಶರಣ?
ಅದಲ್ಲ ಬಿಡು.
ಎನ್ನ ಜಾಗರು ಸ್ವಪ್ನ ಸುಷುಪ್ತಿಯೊಳು
ಶಿವ ಶಿವಾ ಶಿವ ಶಿವಾಯೆಂದು ಭವಭಾರವ ನೀಗಿ
ನಾನು ಭಕ್ತನಾದೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೫ ॥

## ಭಕ್ತಿಸ್ಥಲದ ವಚನ

ಸೂತ್ರ॥ ಇಂತು ಶಿವಲಿಂಗಸಂಪನ್ನನಾಗಿ, ಪ್ರಣವ ಪಂಚಾಕ್ಷರಿಯನೆ ಜಪಿಸಿ, ಶಿವಲಿಂಗಾರ್ಚನೆಯಂ ಮಾಡಿ ಶಿವಲಿಂಗದ ಸಾಂಗಕ್ರಿಯೆಗಳಳವಟ್ಟು ಶ್ರದ್ಧೆಯೆಡೆಗೊಂಡಿತ್ತಾಗಿ, ಮುಂದೆ ಭಕ್ತಿಸ್ಥಲವಾದುದು.

೨೧೨

ಸದಾಚಾರದಲ್ಲಿ ನಡೆವವನ
ಶಿವನಲ್ಲಿ ಭಕ್ತಿಯಾಗಿಪ್ಪವನ
ಶಿವಲಾಂಛನವ ಕಂಡಲ್ಲಿ ವಂದನೆಗೈವುತಿಪ್ಪವನ
ಲಿಂಗ ಜಂಗಮವ ಒಂದೇ ಭಾವದಲ್ಲಿ ಕಂಡು
ಭೃತ್ಯಾಚಾರ ಸದಾಚಾರಯುಕ್ತನಾಗಿರಬಲ್ಲರೆ
ಭಕ್ತನ ಸ್ಥಲವಿದೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

## ಭಕ್ತನ ಭಕ್ತ

೨೧೩

ಅರ್ಥಪ್ರಾಣಾಭಿಮಾನವನು
ಗುರು ಲಿಂಗ ಜಂಗಮದ ಮುಖಕ್ಕೆ ಸಮರ್ಪಿಸಿ,
ಆ ಗುರು ಲಿಂಗ ಜಂಗಮವೆ
ತನು ಮನ ಪ್ರಾಣವಾಗಿರಬಲ್ಲರೆ,
ಭಕ್ತನ ಸ್ಥಲವಿದೆಂಬೆನಯ್ಯ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨ ॥

೨೧೪

ಅಂಗಕ್ಕೆ ಆಚಾರವೆ ಆಶ್ರಯ.
ಆಚಾರಕ್ಕೆ ಪ್ರಾಣವೆ ಆಶ್ರಯ.

ಪ್ರಾಣಕ್ಕೆ ಜ್ಞಾನವೆ ಆಶ್ರಯ.
ಜ್ಞಾನಕ್ಕೆ ಲಿಂಗವೆ ಆಶ್ರಯ.
ಲಿಂಗಕ್ಕೆ ಜಂಗಮವೆ ಆಶ್ರಯ.
ಇಂತೀ ಪಂಚಲಕ್ಷಣ ಪರಿಪೂರ್ಣವಾಗಿರಬಲ್ಲಡೆ
ಸದ್ಭಕ್ತನೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩ ॥

೨೧೫

ಪ್ರಥಮದಲ್ಲಿ ಭಕ್ತನಾದೆನೆಂಬರು.
ದ್ವಿತೀಯಲ್ಲಿ ಮಾಹೇಶ್ವರಾದೆನೆಂಬರು.
ತೃತೀಯದಲ್ಲಿ ಪ್ರಸಾದಿಯಾದೆನೆಂಬರು.
ನಾಲ್ಕನೆಯಲ್ಲಿ ಪ್ರಾಣಲಿಂಗಿಯಾದೆನೆಂಬರು.
ಅಯ್ದನೆಯಲ್ಲಿ ಶರಣನಾದೆನೆಂಬರು.
ಆರನೆಯಲ್ಲಿ ಐಕ್ಯನಾದೆನೆಂಬರು.
ಆರುಸ್ಥಲವ ಮೀರಿ ನಿರವಯಸ್ಥಲವನೆಯ್ದಿಹೆನೆಂಬರು.
ಇದು ಖಂಡಿತ ಷಟ್‌ಸ್ಥಲಬ್ರಹ್ಮಜ್ಞಾನ ನಿರ್ಣಯವಲ್ಲ.
ಆವಾವಸ್ಥಲವನಂಗಂಗೊಂಡರು
ಆ ಸ್ಥಲದಲ್ಲಿ ಷಡ್ವಿಧಲಿಂಗದಲ್ಲಿ ಬೆರಸಿ ಬೇರಿಲ್ಲದಿರಬಲ್ಲಡೆ
ಸದ್ಭಕ್ತನೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪ ॥

೨೧೬

ಭಕ್ತಾದ್ಯೈಕ್ಯಾಂತರಹ ಷಡಂಗಕ್ಕೆ
ಭಕ್ತನಂಗವೆ ಆದಿಯಾಗಿ
ಆ ಭಕ್ತಂಗೆ ಪೃಥ್ವಿಯೆ ಅಂಗವಾಗಿ
ಆ ಪೃಥ್ವಿಯ ಅಂಗವನುಳ್ಳ ಭಕ್ತನಲ್ಲಿಯೆ
ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನಪ್ಪ
ಅಂಗಪಂಚಕವು ಗರ್ಭೀಕೃತವಾಗಿ
ಆ ಭಕ್ತನಂಗದಲ್ಲಿಯೆ ಆಚಾರಲಿಂಗಸ್ವಾಯತವಾಗಿ
ಆ ಆಚಾರಲಿಂಗದಲ್ಲಿಯೆ
ಗುರುಲಿಂಗ ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗ
ಮಹಾಲಿಂಗವೆನಿಸುವ

ಲಿಂಗಪಂಚಕವು ಗರ್ಭೀಕೃತವಾಗಿ
ಆಚಾರಲಿಂಗವೆ ಸರ್ವಕಾರಣವಾಗಿ
ಇಂತೀ ಷಡ್ವಿಧಲಿಂಗವಲ್ಲಿಯೆ ಬೆರಸಿ ಬೇರಿಲ್ಲದಿರಬಲ್ಲರೆ
ಭಕ್ತನೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫ ॥

೨೧೭

ಸುದತಿ ಪುತ್ರ ಮಿತ್ರ ಮಾತೃಪಿತರು ಹಿತರು ನಿತ್ಯರೆಂದು
ಹದೆದು ಕುದಿದು ಕೋಟಲೆಗೊಂಬನ್ನಕ್ಕರ ಗುರುವೆಂದೆನೇ ಅಯ್ಯ.
ಸುರಚಾಪದಂತೆ ತೋರಿ ಕೆಡುವ
ಹೆಣ್ಣು ಹೊನ್ನು ಮಣ್ಣ ನಚ್ಚಿ ಮದಡನಾಗಿಪ್ಪನ್ನಕ್ಕರ
ಲಿಂಗವೆಂದೆನೇ ಅಯ್ಯ.
ಈ ಕಷ್ಟಸಂಸೃತಿಯ ಕೂಪತಾಪದೊಳಗೆ
ಬಿದ್ದುರುಳುವ ನಾಮನಷ್ಟರಿಗೆ ಜಂಗಮಲಿಂಗವೆಂದೆನೇ ಅಯ್ಯ.
ಈ ದುಷ್ಟದುರ್ಮಲತ್ರಯದ
ಅಂಧಕಾರ ಘೋರತರವಿಕಾರ ಸರ್ಪದಷ್ಟರಾದ ದುಷ್ಟರಿಗೆ
ಶಿವಸತ್ವಥವೆಂದೆನೆ ಹೇಳ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬ ॥

## ಭಕ್ತನ ಮಾಹೇಶ್ವರ

೨೧೮

ಏನನೋದಿದರೇನಯ್ಯಾ?
ಏನಕೇಳಿದರೇನಯ್ಯಾ?
ಏನಹಾಡಿದರೇನಯ್ಯಾ?
'ಓದಿ ಮರುಳಾದೆಯೋ ಕೂಚಿಭಟ್ಟ'ರೇ! ಎಂದು.
ಗಿಣಿಯೋದಿ ತನ್ನ ಹೇಲ ತಾ ತಿಂದಂತೆ
ಏಕಲಿಂಗನಿಷ್ಠಾಚಾರ ಸ್ವಾನುಭವವಿವೇಕ
ಸಿದ್ಧಾಂತ ನಿರ್ಣಯವಿಲ್ಲದೆ
ಮಾತಿಗೆ ಮಾತುಕಲಿತು ನುಡಿಗೆ ನುಡಿಯ ಕಲಿತು
ತರ್ಕಮರ್ಕಟರಂತೆ ಹೋರುವ
ಬಯಲಸಂಭ್ರಮದ ತರ್ಕಿಗಳ ಕಂಡರೆ,

ಮಾಗಿಯ ಕೋಗಿಲೆಯಂತೆ
ಮುಖ ಮುನಿಸಾಗಿರಿಸಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭ ॥

೨೧೯

ನವಿಲಾಡಿತೆಂದು ಕೆಂಬೋತ ಪಕ್ಕವ ತರಕೊಂಡಂತೆ
ಹುಲಿಯ ಬಣ್ಣಕ್ಕೆ ನರಿ ಮೈಯ ಸುಟ್ಟುಕೊಂಡಂತೆ
ಕೋಗಿಲೆ ಸ್ವರಗೆಯ್ದದೆಂದು ಕಾಗೆ ಕರೆದಂತೆ
ಲಿಂಗನಿಷ್ಠಾಂಗಿ **ವಚನಹಾಡಿ**ದರೆ ಒಪ್ಪುವನಲ್ಲದೆ
ನಿಷ್ಠೆಹೀನರು ಓದಿ ಹಾಡಿದರೆ
ನಳಿಗುಳ್ಳಿಯ ತಿಂದ ನರಿ ಹಳ್ಳದ ತಡಿಯಲ್ಲಿ
ಬಳ್ಳಿಟ್ಟು ಬಗುಳಿದಂತೆ ಏನೆಂದು
ಪಾಟಿ ಮಾಡರಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮ ॥

೨೨೦

ಅಷ್ಟವಿಧಾರ್ಚನೆಯ ಮಾಡಿದರೇನೋ
ತನುಗುಣಂಗಳ ಮೆಟ್ಟಿ ಮುರಿಯದನ್ನಕ್ಕರ?
ಷೋಡಶೋಪಚಾರವ ಮಾಡಿದರೇನೋ
ಸೂಳೆಯರಂತೆ ಹಲವು ಕಡೆಗೆ ಹೋಹ ಮನವ
ನೆನಹಿನ ಹಸ್ತದಲ್ಲಿ ಹಿಡಿದು
ಇಷ್ಟಲಿಂಗದಲ್ಲಿ ನೆನಹ ಗಟ್ಟಿಗೊಳಿಸಿ
ಕೃತನಿಶ್ಚಯದಿಂ ದೃಢವಿಡಿದು
ಅನಿಷ್ಟವ ಪರಿಹರಿಸಬಲ್ಲರೆ
ಆತನೆ ಶಿವಲಿಂಗಾರ್ಚಕನು; ಲಿಂಗಧ್ಯಾನ ಸಂಪನ್ನನು;
ಲಿಂಗವಲ್ಲದನ್ಯವನರಿಯದ ಅಚಲಿತ ಮಹಿಮನು ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯ ॥

೨೨೧

ಆಯತಲಿಂಗದಲ್ಲಿ ಅಂಗಗುಣವಳಿದು
ಸರ್ವಾಂಗವನು ಲಿಂಗನಿಷ್ಠೆಯಲ್ಲಿ ಘಟ್ಟಿಗೊಳಿಸಿ

ಲಿಂಗಾಂಗಸಂಗದಲ್ಲಿ ನಿರತನು ನೋಡ.
ಸ್ವಾಯತಲಿಂಗದಲ್ಲಿ ಮನ ವೇದ್ಯವಾಗಿ
ಮನೋಮಾಯವನಳಿದ ನಿರ್ಮಾಯ ನಿರಾಕುಳನು
ಮಾಯಾಪ್ರಪಂಚಿನೊಳಗೆ ಚರಿಸದ ಪ್ರಾಣಲಿಂಗನಿಷ್ಠನು ನೋಡ.
ಸನ್ನಿಹಿತಲಿಂಗದಲ್ಲಿ ತನ್ನನಳಿದು
ತಾನೆಂಬುವ ಭಾವವೇನೂ ತೋರದ ಮಹಾನುಭಾವಿಯ ನೋಡ.
ತಾನೆಂಬುದೇನೂ ಇಲ್ಲವಾಗಿ, ನೀನೆಂಬುದು ಇಲ್ಲ;
ನಾನು ನೀನೆಂಬದು ಇಲ್ಲವಾಗಿ,
ಲಿಂಗವೆ ಸರ್ವಮಯವಾಗಿಪ್ಪುದು ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦ ॥

೨೨೨

ಗುರುಮುಖದಿಂದ ಪರಮಲಿಂಗ ತನ್ನ ಕರವ ಸೇರಿದ ಬಳಿಕ
ಆ ಲಿಂಗದಲ್ಲಿ ಸ್ನೇಹ ಮೋಹವ ಬಲಿದು, ಲಿಂಗಪ್ರೇಮಿಯಾಗಿ,
ಲಿಂಗಭಾವದಲ್ಲಿ ತನ್ನ ಭಾವವ ಬಲಿದ ಬಳಿಕ
ಅನ್ಯವಿಷಯವ್ಯಾಪ್ತಿಯ
ವ್ಯವಹಾರದ ಭ್ರಾಂತಿಯಿಲ್ಲದಿರಬೇಕು ನೋಡ.
ಇದೇ ಏಕಚಿತ್ತಮನೋಭಾವಿಯ ಗುಣ;
ಇದೇ ಲಿಂಗಗ್ರಾಹಕನ ನಿರುತ.
ಲಿಂಗವ ಮುಟ್ಟಿ ಮತ್ತೇನನೂ ಮುಟ್ಟದ ನಿಃಕಳಂಕನ ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೧ ॥

೨೨೩

ಇಹಲೋಕದಲ್ಲಿ ಲಿಂಗವ ಪೂಜಿಸಿ
ಪರಲೋಕದ ಪದವಿಯ ಬಯಸುವನಲ್ಲ ನೋಡ.
ಇಹಪರವನೊಳಕೊಂಡ ಪರಿಪೂರ್ಣಲಿಂಗವು
ತನ್ನ ಸರ್ವಾಂಗದಲ್ಲಿ ಸನ್ನಿಹಿತವಾಗಿರಲು
ಆ ಲಿಂಗದಲ್ಲಿ ತನ್ನಂಗವ ಬೆರಸಿ
ಆ ಶುದ್ಧ ಪರಮಾತ್ಮಲಿಂಗವೇ ಗೂಡಾಗಿಪ್ಪ
ಲಿಂಗನಿಷ್ಠನ ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೨ ॥

೨೨೪

ಕಾಯದ ಮೇಲೆ ಲಿಂಗವಧರಿಸಿ ದೇವಪೂಜೆಯ ಮಾಡಿ
ಕಾಯವಳಿದು ದೇವತಾಭೋಗವನೆಯಿದಿಹೆನೆಂಬ
ಗಾವಿಲರ ಎನಗೊಮ್ಮೆ ತೋರದಿರಯ್ಯ.
ಕಾಯವನು ಜೀವವನು ಲಿಂಗದಲ್ಲಿರಿಸಬಲ್ಲರೆ
ಮಹಾದೇವನೆಂದು ಬೇರುಂಟೇ?
ಆ ಮಹೇಶ್ವರಂಗೆ ನಮೋನಮೋಯೆಂಬೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೩ ॥

೨೨೫

ಆಚಾರಲಿಂಗಾನುಭಾವದಿಂದ
ಪೃಥ್ವಿಯ ಪೂರ್ವಾಶ್ರಯವನಳಿದ ಸದಾಚಾರನಿಷ್ಠನ ನೋಡ!
ಸದ್ಗುರುರತಿಯಿಂದ
ಅಪ್ಪುತತ್ವದ ಪೂರ್ವಾಶ್ರಯವನಳಿದು ಸದ್ಗುರುನಿಷ್ಠನ ನೋಡ!
ಶಿವಲಿಂಗದ ಸಂಗದಿಂದ
ಅಗ್ನಿಯ ಪೂರ್ವಾಶ್ರಯವನಳಿದ
ಶಿವಲಿಂಗಪ್ರೇಮಿಯಾದ ಶಿವಾಚಾರನಿಷ್ಠನ ನೋಡ!
ಚರಲಿಂಗದ ಸಂಗದಿಂದ ವಾಯುವಿನ ಪೂರ್ವಾಶ್ರಯವನಳಿದ
ಜಂಗಮಲಿಂಗಗ್ರಾಹಕನ ನೋಡ!
ಪ್ರಸಾದಲಿಂಗದ ಸೇವಕತ್ವದಿಂದ ಕರ್ಮತ್ರಯವನಳಿದ
ನಿರ್ಮಲ ನಿರಾವರಣನ ನೋಡ!
ಮಹಾಲಿಂಗದ ಸಂಗದಿಂದ ಜೀವಭಾವವಳಿದ
ಮಹಾಮಹಿಮನ ನೋಡ!
ಲಿಂಗನಿಷ್ಠೆಯಿಂದ ಅಂಗಗುಣಂಗಳೆಲ್ಲವ ಕಳೆದುಳಿದ
ನಿರಂಗಸಂಗಿಯ ನೋಡ!
ಇಂತಪ್ಪ ಮಹೇಶ್ವರಂಗೆ ನಮೋನಮೋಯೆಂಬೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೪ ॥

## ಭಕ್ತನ ಪ್ರಸಾದಿ

೨೨೬

ಪತಿಭಕ್ತೆಯಾದರೆ, ತನ್ನ ಪತಿಗೆ ಸರ್ವೋಪಚಾರಂಗಳ ಮಾಡಿ
ಸಮಸ್ತ ಪದಾರ್ಥವನಾತಂಗೆ ನೀಡಿ

ಆತನುಂಡು ಮಿಕ್ಕುದನುಂಬುದೇ ಪತಿವ್ರತಾಭಾವವೆಂಬ
ಲೋಕದ ದೃಷ್ಟಾಂತದಂತೆ
ಶರಣಸತಿ ಲಿಂಗಪತಿಯೆಂಬುದನು ಗುರೂಪದೇಶದಿಂದರಿದು
ಆ ಗುರುವಚನಪ್ರಮಾಣಂಗಳಿಂದವೆ
ಸಮಸ್ತ ಪದಾರ್ಥವ
ತನ್ನ ಕರಸ್ಥಲದಲ್ಲಿರ್ಪ ಇಷ್ಟಲಿಂಗಕ್ಕೆ ಕೊಟ್ಟು ಕೊಂಬುದೆ ಆಚಾರ.
ಇದು ಕಾರಣ, ಇಷ್ಟಲಿಂಗಕ್ಕೆ ಕೊಡದೆ
ಅಂತರಂಗದಲ್ಲಿ ಪ್ರಾಣಲಿಂಗವುಂಟೆಂದು ಮನಕ್ಕೆ ಬಂದಂತೆ ತಿಂಬ
ಶ್ವಾನಜ್ಞಾನಿಗಳಿಗೆ ನಾಯಕನರಕ ತಪ್ಪದು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೫ ॥

೨೨೭

ತನ್ನಂಗದ ಮೇಲೆ ಶಿವಲಿಂಗವಿದ್ದು
ಸತ್ಕ್ರಿಯಾಮುಖದಿಂದ ಲಿಂಗಾರ್ಪಿತವ ಮಾಡಿ
ಆ ಲಿಂಗಪ್ರಸಾದವ ಕೊಂಬುದೆ ಶಿವಾಚಾರಪದ ನೋಡ!
ಆ ಸದ್ಭಕ್ತನಲ್ಲಿ ಶಿವನಿಪ್ಪನು.
ಹೀಂಗಲ್ಲದೆ,
ಅಂತರಂಗದಲ್ಲಿ ಆತ್ಮಲಿಂಗವುಂಟೆಂದು
ಮನ ಭಾವಂಗಳಿಂದರ್ಪಿತವೆಂದು
ಇಷ್ಟಲಿಂಗಾರ್ಪಣವಿಲ್ಲದ ಕರಕಷ್ಟಂಗೆ
ಅವನಿಗೆ ಆವ ಸತ್ಯವು ಇಲ್ಲ; ಆವ ಸದಾಚಾರವು ಇಲ್ಲ;
ಶಿವಜ್ಞಾನವೆಂಬುದು ಮುನ್ನವೆ ಇಲ್ಲ.
ಶಿವಲಿಂಗಾರ್ಪಣಹೀನವಾಗಿ ಕೊಂಬುದು ಅದು ಶಿವಜ್ಞಾನವೆ?
ಇಂತಪ್ಪ ಅಜ್ಞಾನಿ ಹೊಲೆಯರ ಎನಗೊಮ್ಮೆ ತೋರದಿರಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೬ ॥

೨೨೮

ಇಷ್ಟಲಿಂಗಕ್ಕೆ ಕೊಡದೆ. ಪ್ರಾಣಲಿಂಗಾರ್ಪಿತವ ಮಾಡುವ
ಪ್ರಪಂಚಿಗಳಿರ,
ಅಂಗದ ಮೇಲಿದ್ದುದು ಲಿಂಗವಲ್ಲವೆ?
ಪ್ರಾಣವೆ ಲಿಂಗವಾದರೆ, ಆ ಇಷ್ಟಲಿಂಗವೇತಕ್ಕೆ? ತೆಗೆದೇಕೆ ಬಿಡಿರಿ?
ಆ ಲಿಂಗವನೆ ಬಿಡಬಾರದಂತೆ
ಆ ಲಿಂಗಾರ್ಪಿತವಿಲ್ಲದೆ ಉಣಬಹುದೆ?

ತಥಾಪಿ ಉಂಡಿರಿಯಾದರೆ,
ಕೂಗಿಡೆ ಕೂಗಿಡೆ ನರಕದಲ್ಲಿಕ್ಕುವ.
ಶಿವಾರ್ಪಣವಿಲ್ಲದೆ ಬಾಯಿಗೆ ಬಂದಂತೆ ತಿಂಬ ಅನಾಮಿಕರ
ಎನಗೊಮ್ಮೆ ತೋರದಿರಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೭ ॥

೨೨೯

ಕಾಯಕ್ಕೆ ಇಷ್ಟಲಿಂಗವೆಂದೆಂಬಿರಿ;
ಮನಕ್ಕೆ ಪ್ರಾಣಲಿಂಗವೆಂದೆಂಬಿರಿ;
ಆತ್ಮಂಗೆ ತೃಪ್ತಿಲಿಂಗವೆಂದೆಂಬಿರಿ;
ಈ ತ್ರಿವಿಧಾಂಗದಲ್ಲಿ ತ್ರಿವಿಧಲಿಂಗಸಂಬಂಧವಾಯಿತ್ತೆಂದೆಂಬಿರಿ.
ಮನ ಭಾವಂಗಳಲ್ಲಿ ಅರ್ಪಿತಕ್ರೀಯಲ್ಲಿ
ಅರ್ಪಿತವಿಲ್ಲಾ ಎಂಬುದು ಅದು ಅರುಹೆ?
ಕ್ರಿಯೆಗೂ ಜ್ಞಾನಕ್ಕೂಕ ಭಿನ್ನವುಂಟೇ ಕುರಿಮಾನವ?
ಇದು ಕಾರಣ,
ಕಾಯದ ಕೈಮುಟ್ಟಿ ಕ್ರಿಯಾರ್ಪಣ.
ಮನದ ಕೈಮುಟ್ಟಿ ಜ್ಞಾನಾರ್ಪಣ.
ಭಾವದ ಕೈಮುಟ್ಟಿ ಪರಿಣಾಮಾರ್ಪಣ.
ಈ ತ್ರಿವಿಧಾರ್ಪಣದೊಳಗೆ
ಒಂದ ಬಿಟ್ಟು ಒಂದ ಅರ್ಪಿಸಲಾಗದು.
ಇದು ಕಾರಣ,
ಎಷ್ಟು ಅರುಹುಳ್ಳಾತನಾದರೂ ಆಗಲಿ
ಇಷ್ಟಲಿಂಗಾರ್ಪಣವಿಲ್ಲದೆ,
ಪ್ರಾಣವೇ ಲಿಂಗವಾಯಿತ್ತೆಂದು
ಅನ್ನ ಪಾನಂಗಳು ಮುಖ್ಯವಾಗಿ
ರೂಪಾಗಿ ಬಂದ ಸಮಸ್ತ ಪದಾರ್ಥಂಗಳನು
ತನ್ನ ಇಷ್ಟಲಿಂಗಕ್ಕೆ ಕೊಡದೆ ಬಾಯಿಚ್ಚೆಗೆ ತಿಂಬ ನರಕಜೀವಿಯ
ಎನಗೊಮ್ಮೆ ತೋರದಿರಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೮ ॥

೨೩೦

ರೂಪಾಗಿ ಬಂದ ಪದಾರ್ಥವ
ಕಾಯದ ಕೈಯಲ್ಲಿ ಇಷ್ಟಲಿಂಗಕ್ಕೆ ಕೊಟ್ಟು

ಶುದ್ಧಪ್ರಸಾದವ ಕೊಂಡು
ಸರ್ವಾಂಗಶುದ್ಧನಾದೆನು ನೋಡ.
ರುಚಿಯಾಗಿ ಬಂದ ಪದಾರ್ಥವ
ಮನದ ಕೈಯಲ್ಲಿ, ಜಿಹ್ವೆಯ ಮುಖದಲ್ಲಿ ಪ್ರಾಣಲಿಂಗಕ್ಕೆ ಕೊಟ್ಟು
ಸಿದ್ಧಪ್ರಸಾದಗ್ರಾಹಕನಾಗಿ
ಮನ ನಿರ್ಮಲವಾಯಿತ್ತು ನೋಡ.
ಪರಿಣಾಮವಾಗಿ ಬಂದ ಪದಾರ್ಥವ
ಭಾವದ ಕೈಯಲ್ಲಿ, ಹೃದಯದ ಮುಖದಲ್ಲಿ ತೃಪ್ತಿಲಿಂಗಕ್ಕೆ ಕೊಟ್ಟು
ಪ್ರಸಿದ್ಧಪ್ರಸಾದವ ಕೊಂಡು
ಶುದ್ಧಪರಮಾತ್ಮನಾದೆನು ನೋಡ.
ಈ ಕ್ರಿಯಾಜ್ಞಾನಾರ್ಪಣವಿರಬೇಕು.
ಕಾಯವು ಆತ್ಮನು ಬಯಲಾಹನ್ನಕ್ಕರ.
ಈ ಕಾಯವೂ ಜೀವವೂ ಪರತತ್ವದಲ್ಲಿ ಅಡಗದೆ,
ಬರಿಯ ವಾಗದ್ವೈತದಿಂದ ತಾನೆ ಲಿಂಗವಾದೆನೆಂದು,
ಇಷ್ಟಲಿಂಗಾರ್ಪಣವ ಬಿಡುವ ನಾಯ ಮುಖವ
ಎನಗೊಮ್ಮೆ ತೋರದಿಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೯ ॥

೨೩೧

ಗುರುಪ್ರಸಾದಕ್ಕೆ ಹೇಸುವರು, ಲಿಂಗಪ್ರಸಾದಕ್ಕೆ ಹೇಸುವರು,
ಜಂಗಮ ಪ್ರಸಾದಕ್ಕೆ ಹೇಸುವರು, ಭಕ್ತಪ್ರಸಾದಕ್ಕೆ ಹೇಸುವರು.
ಹೊಲತಿ ಮಾದಿಗಿತ್ತಿ ಬಲ್ಲವಳಾದರೆ,
ಹಲವು ಪರಿಯಲ್ಲಿ ಅವಳೆಂಜಲ ತಿನುತಿಪ್ಪಿರು ನೋಡಾ ಜಗ.
ಹದಿನೆಂಟು ಜಾತಿಯ ಎಂಜಲ ಹೇಹವಿಲ್ಲದೆ
ತಿಂಬ ಭವಜಾತಿಗಳಿಗೆ
ಪ್ರಸಾದ ದೊರಕೊಂಬುದೆ? ದೊರಕೊಳ್ಳದು.
ಅದೇನುಕಾರಣವೆಂದಡೆ:
ಭವಭವದಲ್ಲಿ ಯೋನಿಚಕ್ರದಲ್ಲಿ ತಿರುಗುತ್ತಿಪ್ಪರಾಗಿ.
ಈ ಅಶುದ್ಧಜೀವಗಳಿಗೆ ಶುದ್ಧವಹ ಶಿವಪ್ರಸಾದದಲ್ಲಿ
ಸಂಬಂಧ ಸಮನಿಸದು ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೦ ॥

೨೩೨

ಗುರುವ ಮುಟ್ಟಿ ಬಂದಲ್ಲಿ ಪ್ರಸಾದ.
ತನ್ನ ಬಾಯ ಮುಟ್ಟಿ ಬಂದಲ್ಲಿ ಎಂಜಲೆಂಬರು ನೋಡ.
ಲಿಂಗವ ಮುಟ್ಟಿ ಬಂದಲ್ಲಿ ಪ್ರಸಾದ,
ತನ್ನ ಬಾಯ ಮುಟ್ಟಿ ಬಂದಲ್ಲಿ ಎಂಜಲೆಂಬರು ನೋಡ.
ಜಂಗಮವ ಮುಟ್ಟಿಬಂದಲ್ಲಿ ಪ್ರಸಾದ,
ತನ್ನ ಬಾಯಿ ಮುಟ್ಟಿ ಬಂದಲ್ಲಿ ಎಂಜಲೆಂಬರು ನೋಡ.
ಗುರುವಿದ್ದಲ್ಲಿ ಅವಗುಣವುಂಟೆ?
ಲಿಂಗವಿದ್ದಲ್ಲಿ ಒಳ್ಳೆಯ ಸ್ಥಲ ಅಲ್ಲದ ಸ್ಥಲವುಂಟೆ?
ಜಂಗಮವಿದ್ದಲ್ಲಿ ಜಾತಿ ವಿಜಾತಿಯುಂಟೆ?
ಪ್ರಸಾದವಿದ್ದಲ್ಲಿ ಎಂಜಲುಂಟೆ?
ಇಂತಪ್ಪ ಪ್ರಪಂಚಜೀವಿಗಳನೆಂತು ಪ್ರಸಾದಿಗಳೆಂಬೆನಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೧ ॥

೨೩೩

ವಿಶ್ವಾಸದಿಂದ ಅಂಗನೆಯ ಕುಚ, ಲಿಂಗವಾದುದಿಲ್ಲವೆ?
ವಿಶ್ವಾಸದಿಂದ ಬಳ್ಳ ಲಿಂಗವಾದುದಿಲ್ಲವೆ?
ವಿಶ್ವಾಸದಿಂದ ಆಡಿನ ಹಿಕ್ಕೆ ಲಿಂಗವಾದುದಿಲ್ಲವೆ?
ವಿಶ್ವಾಸದಿಂದ ಲಿಂಗವನಪ್ಪಿದ ಹೆಣ್ಣು, ಗಂಡಾದುದಿಲ್ಲವೆ?
ವಿಶ್ವಾಸದಿಂದ ಓಗರವು ಪ್ರಸಾದವಾಗಿ
ಎಂಜಲೆಂದ ವಿಪ್ರರ ಮಂಡೆಯ ಮೇಲೆ ತಳೆಯಲು
ಕೆಂಡವಾಗಿ ಸುಟ್ಟುದಿಲ್ಲವೆ ಗ್ರಾಮಸಹಿತವಾಗಿ?
ಇದು ಕಾರಣ,
ವಿಶ್ವಾಸದಿಂದ ಗುರು; ವಿಶ್ವಾಸದಿಂದ ಲಿಂಗ;
ವಿಶ್ವಾಸದಿಂದ ಜಂಗಮ; ವಿಶ್ವಾಸದಿಂದ ಪ್ರಸಾದ.
ವಿಶ್ವಾಸಹೀನಂಗೆ ಗುರುವಿಲ್ಲ, ಲಿಂಗವಿಲ್ಲ,
ಜಂಗಮವಿಲ್ಲ, ಪ್ರಸಾದವಿಲ್ಲ ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೨ ॥

೨೩೪

ಪರುಷ ಸೋಂಕಲು
ಅವಲೋಹದ ಗುಣ ಕೆಟ್ಟು ಚಿನ್ನವಾಗದಿಹುದೆ?

ಹಲವು ತೃಣಂಗಳೆಲ್ಲವು
ಅಗ್ನಿಯ ಮುಟ್ಟಲು ಭಸ್ಮವಾಗಿದಿಹವೆ?
ಹಳ್ಳಕೊಳ್ಳದ ನೀರೆಲ್ಲಾ ಬಂದು
ಅಂಬುಧಿಯನೆಯ್ದಿ ಅಂಬುಧಿಯಪ್ಪುದು ತಪ್ಪದು ನೋಡ!
ಹಲವು ವರ್ಣದ ಪದಾರ್ಥವನೆಲ್ಲವ ತಂದು
ಶಿವಲಿಂಗಾರ್ಪಣವ ಮಾಡಲು
ಆ ಪದಾರ್ಥದ ಪೂರ್ವಾಶ್ರಯವಳಿದು
ಪ್ರಸಾದವಪ್ಪುದು ತಪ್ಪದು ನೋಡ!
ಆ ಪ್ರಸಾದವ ಕೊಂಬ ಪ್ರಸಾದಿ ಪವಿತ್ರಕಾಯನು ನೋಡ!
ಆತನು ಶುದ್ಧನಿರ್ಮಲನು ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೩ ॥

೨೩೫

ಗುರುಮುಖದಿಂದ ಕೊಂಬುದು ಶುದ್ಧ ಪ್ರಸಾದ.
ಲಿಂಗಮುಖದಿಂದ ಕೊಂಬುದು ಸಿದ್ಧ ಪ್ರಸಾದ.
ಜಂಗಮ ಮುಖದಿಂದ ಕೊಂಬುದು ಪ್ರಸಿದ್ಧ ಪ್ರಸಾದ.
ಗುರುಪ್ರಸಾದದಿಂದ ಎನ್ನ ತನು ಶುದ್ಧವಾಯಿತ್ತು.
ಲಿಂಗಪ್ರಸಾದದಿಂದ ಎನ್ನ ಮನ ಶುದ್ಧವಾಯಿತ್ತು.
ಜಂಗಮಮುಖದಿಂದ ಎನ್ನ ಮನ ಶುದ್ಧವಾಯಿತ್ತು.
ಜಂಗಮಪ್ರಸಾದದಿಂದ ಎನ್ನ ಪ್ರಾಣ ಶುದ್ಧವಾಯಿತ್ತು.
ನಿಮ್ಮ ಪ್ರಸಾದದಿಂದ ಶುದ್ಧವಾಗದೆ ತನ್ನಿಂದ ತಾನೆ ಶುದ್ಧನಾದೆನೆಂಬ
ವಾಗದ್ವೈತಿಯ ತೋರದಿರ.
ಜಂಗಮ ಪ್ರಸಾದವ ಲಿಂಗಕ್ಕೆ ಕೊಟ್ಟು
ಲಿಂಗ ಪ್ರಸಾದವ ತಾ ಗ್ರಹಿಸುವದೆ ಆಚಾರ.
ಹೀಂಗಲ್ಲದೆ,
ಜಂಗಮ ಪ್ರಸಾದವ ಅಂಗಕ್ಕೆ ಕೊಡಬಹುದಲ್ಲದೆ
ಲಿಂಗಕ್ಕೆ ಕೊಡಬಾರದೆಂಬ ಅನಾಚಾರಿಗೆ
ನಾಯಕನರಕ ತಪ್ಪದು ಕಾಣಾ, ನೀ ಸಾಕ್ಷಿಯಾಗಿ ಎಲೆ ಶಿವನೆ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೪ ॥

೨೩೬

ಅಟ್ಟ ಪದಾರ್ಥವೆಲ್ಲವ ಮೆಟ್ಟಿ ಮೆಟ್ಟಿ ತುಂಬಿಸಿಕೊಂಬರಯ್ಯ
ಹೊಟ್ಟೆಗೆ ಕಾಣದ ಅರಿಪಿನಂತೆ. ಇಷ್ಟಲಿಂಗಕ್ಕೆ ಕೊಟ್ಟೆನೆಂದು
ಲಿಂಗವ ಬಿಗಿಬಿಗಿದು ಕಟ್ಟಿಕೊಂಡು

ಹೊಟ್ಟೆಯ ತುಂಬಿಕೊಂಬ ಭ್ರಷ್ಟರಿಗೆ ಪ್ರಸಾದವೆಲ್ಲಿಯದೊ?
ತಟ್ಟುವ ಮುಟ್ಟುವ ಮರ್ಮವನರಿದು
ಕಾಯದ ಕರಣದ ಕೈಯಲ್ಲಿ ಇಷ್ಟಲಿಂಗದ ಮುಖವೈದನರಿದು
ಕೊಟ್ಟು ಕೊಳಬಲ್ಲರೆ ಪ್ರಸಾದಿಯೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೫ ॥

೨೩೭

ಭರಿತಬೋನ ಭರಿತಬೋನವೆಂದು
ಒಂದೆ ವೇಳೆ ಬಾಚಿಸಿಕೊಂಡು
ಲಿಂಗಕ್ಕೆ ಕೊಟ್ಟೆವು ಲಿಂಗಪ್ರಸಾದವಾಯಿತ್ತೆಂದು
ಬಿಗಿಬಿಗಿದು ಕಟ್ಟಿಕೊಂಡು
ಮತ್ತೊಂದು ಪದಾರ್ಥ ಬಂದರೆ ಲಿಂಗವ ಬಿಡಲಮ್ಮರಯ್ಯ.
ಆ ಪದಾರ್ಥವ ಕಂಡು ಮನದಲ್ಲಿ ಬಯಸಿ
ಕುದಿಕುದಿದು ಕೋಟಲೆಗೊಂಡು ಹಲ್ಲು ಬಾಯಾರುತ್ತಿಪ್ಪರಯ್ಯ,
ಅದೇಕೆ ಲಿಂಗವ ಬಿಡಲಮ್ಮಿರಿ ಕೈಯೇನು ಎಂಜಲೆ?
ಕೈಯೆಂಜಲಾದಂಗೆ ಬಾಯೆಲ್ಲಾ ಎಂಜಲು.
ಬಾಯೆಂಜಲಾದವಂಗೆ ಸರ್ವಾಂಗವೆಲ್ಲಾ ಎಂಜಲು.
ಎಂಜಲೆಂದರೆ ಅಮೇಧ್ಯ.
ಅಮೇಧ್ಯದ ಮೇಲೆ ಲಿಂಗವ ಧರಿಸಿಪ್ಪಿ[ರೇನು] ಹೇಳಿರಣ್ಣ?
ಈ ಸಂದೇಹಿಭ್ರಾಂತಿಯ ಕೈವಿಡಿಯಲೊಲ್ಲರು ನಿಮ್ಮ ಶರಣರು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೬ ॥

೨೩೮

ತನುವಿನಲ್ಲಿ ಗುರು ಭರಿತವಾದುದೆ ಭರಿತಬೋನ.
ಮನದಲ್ಲಿ ಲಿಂಗ ಭರಿತವಾದುದೆ ಭರಿತಬೋನ.
ಧನದಲ್ಲಿ ಜಂಗಮ ಭರಿತವಾದುದೆ ಭರಿಬೋನ.
ಪ್ರಾಣದಲ್ಲಿ ಪ್ರಸಾದ ಭರಿತವಾದುದೆ ಭರಿತಬೋನ.
ಅಂತರಂಗ ಬಹಿರಂಗದಲ್ಲಿ ಪರಿಪೂರ್ಣವಸ್ತು ಭರಿತವಾಗಿ
ಎಡೆ ಕಡೆಯಿಲ್ಲದ ವಸ್ತುವಿನಲ್ಲಿ ತಾ ಭರಿತವಾದುದೆ ಭರಿತಬೋನ.
ಹೀಂಗಲ್ಲದೆ:
ಪುರುಷಾಹಾರಪ್ರಮಾಣಿನಿಂದ ಓಗರವ ಗಡಣಿಸಿಕೊಂಡು
ಲಿಂಗಾರ್ಪಿತವಮಾಡಿ ಪ್ರಸಾದವೆಂದು ಕೊಂಡು
ಎಂಜಲುಯೆಂದು ಕಳೆದು ಬಂದ ಪದಾರ್ಥವ ಮುಟ್ಟಿ
ಲಿಂಗಾರ್ಪಿತವ ಮಾಡಲಮ್ಮದವರಿಗೆ ಲಿಂಗಾರ್ಪಿತವಿಲ್ಲ.

ಲಿಂಗಾರ್ಪಿತವಿಲ್ಲವಾಗಿ ಪ್ರಸಾದವಿಲ್ಲ.
ಪ್ರಸಾದವಿಲ್ಲವಾಗಿ ಮುಕ್ತಿಯೆಂಬುದು ಇಲ್ಲ.
ಇವರ ಲಿಂಗಾಂಗಸಂಬಂಧಿಗಳೆಂತೆಂಬೆನಯ್ಯ?
ಲಿಂಗಾಂಗಿಯ ಅಂಗದಲ್ಲಿ ಸಂದೇಹ ಸೂತಕ ಉಂಟೇ?
ಈ ಭಂಗಿತರ ಮುಖವ ನೋಡಲಾಗದು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೭ ॥

೨೩೯

ಅಂಗ ಲಿಂಗ, ಲಿಂಗ ಅಂಗವೆಂದೆಂಬಿರಿ;
ಅಂಗ ಸೂತಕವ ಹೇಳುವಿರಿ.
ಪ್ರಾಣವೆ ಪ್ರಸಾದ, ಪ್ರಸಾದವೆ ಪ್ರಾಣವೆಂದೆಂಬಿರಿ;
ಪ್ರಕೃತಿ ಭಾವವ ಕಲ್ಪಿಸಿಕೊಂಬಿರಿ;
ಇದು ಲಿಂಗಾಂಗ ಪ್ರಾಣಲಿಂಗ ಪ್ರಸಾದಭಾವವೆ? ಅಲ್ಲ ಕಾಣಿರೊ.
ಲಿಂಗಾಂಗ ಪ್ರಾಣಲಿಂಗ ಪ್ರಸಾದಭಾವ ಭರಿತವಾದರೆ,
ಲಿಂಗವ ಮುಟ್ಟಿ ಅರ್ಪಿಸಲಮ್ಮವೆಂಬುದು ಅಜ್ಞಾನ ನೋಡ!
ಈ ಅಜ್ಞಾನಿಗಳ ಅಂಗದಲ್ಲಿ ಲಿಂಗವುಂಟೆ?
ಮನದಲ್ಲಿ ಮಂತ್ರವುಂಟೆ? ಪ್ರಾಣದಲ್ಲಿ ಪ್ರಸಾದವುಂಟೆ?.
ಈ ಅಶುದ್ಧ ಜೀವಿಗಳಿಗೆ
ಶುದ್ಧವಹ ಶಿವಪ್ರಸಾದ ಸಂಬಂಧ ಎಂದೂ ಇಲ್ಲ ಕಾಣ!
ಲಿಂಗ ಸೋಂಕಿದ ಅಂಗದಲ್ಲಿ ಶುದ್ಧಾಶುದ್ಧ ಉಂಟೇ? ಇಲ್ಲ;
ಈ ಅನಂಗಸಂಗಿಗಳ ಮುಖವ ತೋರದಿರಾಯೆನಗೆ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೮ ॥

೨೪೦

ಲಿಂಗವಿದ್ದ ಹಸ್ತ ಲಿಂಗಕ್ಕೆ ಪೀಠ ಕಾಣಿರೊ.
ಲಿಂಗವ ಪೂಜಿಸುವ ಹಸ್ತವೆ ಶಿವಹಸ್ತ ಕಾಣಿರೊ.
ಲಿಂಗವ ಧರಿಸಿಪ್ಪಂಗವೆ ಲಿಂಗದಂಗವಾಗಿ
ಲಿಂಗಕ್ಕೂ ಅಂಗಕ್ಕೂ ಭಿನ್ನವಿಲ್ಲ ಕಾಣಿರೊ.
ಲಿಂಗಪ್ರಸಾದವ ಕೊಂಬ ಪ್ರಾಣ ಲಿಂಗ ತಾ ನೋಡ.
ಒಳಹೊರಗೆ ಲಿಂಗಭರಿತವಾಗಿಪ್ಪ ಲಿಂಗದೇಹಿ ಲಿಂಗಪ್ರಾಣಿಗೆ
ಲಿಂಗಸಹಭೋಜನವ ಮಾಡಬೇಕೆಂಬುದೆ ಸದಾಚಾರ.
ಹೀಂಗಲ್ಲದೆ

ಅಂಗಕ್ಕು ಲಿಂಗಕ್ಕು ಭೇದ ಭಾವವ ಕಲ್ಪಿಸಿಕೊಂಡು
ಲಿಂಗಸ ಭೋಜನವ ಮಾಡಬಾರದೆಂಬ
ಸಂದೇಹ ಸೂತಕ ಪ್ರಾಣಿಗಳಿಗೆ
ಅಂಗದಲ್ಲಿ ಲಿಂಗವಿಲ್ಲ, ಮನದಲ್ಲಿ ಮಂತ್ರವಿಲ್ಲ;
ಪ್ರಾಣದಲ್ಲಿ ಪ್ರಸಾದವಿಲ್ಲ.
ಪ್ರಸಾದವಿಲ್ಲದವರಿಗೆ ಮುಕ್ತಿಯೆಂಬುದೆಂದೂ ಇಲ್ಲ ನೀ ಸಾಕ್ಷಿಯಾಗಿ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೯ ॥

೨೪೧

ಒಂದೇ ವೇಳೆ ಪುರುಷಾಹಾರಪ್ರಮಾಣಿನಲ್ಲಿ ಗಡಣಿಸಿಕೊಂಡು
ಲಿಂಗಕ್ಕೆ ಕೊಟ್ಟು ಲಿಂಗವನವಧರಿಸಿಕೊಂಬಿರಿ.
ಮತ್ತೊಂದು ಪದಾರ್ಥ ಬಂದರೆ ಮುಟ್ಟಿ ಅರ್ಪಿಸಲಮ್ಮರು.
ಅದೇನು ಕಾರಣ? ಕೈಯೇನು ಎಂಜಲೆ?
ಕೈಯೆಂಜಲಾದವಂಗೆ ಬಾಯೆಲ್ಲಾಯೆಂಜಲು.
ಬಾಯೆಂಜಲಾದವಂಗೆ ಮೈಯೆಲ್ಲಾಯೆಂಜಲು.
ಎಂಜಲೆಂಜಲೆಂದರೆ ಅಮೇಧ್ಯ.
ಅಪವಿತ್ರಕಾಯದಮೇಲೆ ಲಿಂಗವ ಧರಿಸಿಕೊಂಡಿಪ್ಪಿರೆ?
ಇಂತಪ್ಪ ಸಂದೇಹಿ ಮಾನವರ ನಿಮ್ಮ ಪ್ರಸಾದಿಗಳು ಮೆಚ್ಚರಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೦ ॥

೨೪೨

ಅವುದಾನೊಂದು ಪದಾರ್ಥವ ಲಿಂಗಾರ್ಪಿತವ ಮಾಡಿದ ಬಳಿಕ
ಪದಾರ್ಥದ ಪೂರ್ವಾಶ್ರಯವಳಿದು ಪ್ರಸಾದವಾಯಿತ್ತು ನೋಡ.
ಆ ಪ್ರಸಾದವ ಮುಟ್ಟುವ ಹಸ್ತವು ಪ್ರಸಾದಹಸ್ತ.
ಆ ಪ್ರಸಾದವ ಕೊಂಬ ಜಿಹ್ವೆಯು ಪ್ರಸಾದಜಿಹ್ವೆ.
ಆ ಪ್ರಸಾದಕ್ಕೆ ಭಾಜನವಾಗಿಪ್ಪ ಸರ್ವಾಂಗವು
ಪ್ರಸಾದಕಾಯ ನೋಡ.
ಪ್ರಸಾದವೆಂದರೆ ಪರಶಿವಸ್ವರೂಪು ತಾನೆ ನೋಡ.
ಈ ಪರಮ ಪ್ರಸಾದಗ್ರಾಹಕನಾದ ಪ್ರಸಾದಿಯ
ಬಾಹ್ಯಾಭ್ಯಂತರವೆಲ್ಲ ಪ್ರಸಾದಮಯ ನೋಡ.

ಪ್ರಸಾದ ಸದ್ಭಾವದಲ್ಲಿ ಎಂಜಲೆಂಬ ಸಂಶಯ ಸುಳಿಯಲಾಗದು.
ಎಂಜಲೆಂಬ ಸಂಶಯ ಸುಳಿದರೆ ಅದು ಅಜ್ಞಾನ ನೋಡ.
ಅವಂಗೆ ಪ್ರಮಥ ಪ್ರಸಾದವಿಲ್ಲ ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೧ ॥

## ಭಕ್ತನ ಪ್ರಾಣಲಿಂಗಿ

೨೪೩

ಅಂಗದ ಮೇಲೆ ಲಿಂಗ ಕಾಣಲ್ಪಡುತಿಪ್ಪುದಯ್ಯ.
ಅಂಗದೊಳಗೆ ಪ್ರಾಣವಿಪ್ಪುದಯ್ಯ.
ತನುವಿನ ಮೇಲಿಪ್ಪ ಲಿಂಗವ
ಮನದಲ್ಲಿ ಸ್ವಾಯತಮಾಡಿ ನೆರೆಯಲರಿಯದೆ
ಧನ ಕಾಮಿನಿಯರ ಭ್ರಾಂತಿನಲ್ಲಿ ಜಿನುಗುವ ಮನುಜರಿಗೆ
ಪ್ರಾಣಲಿಂಗವೆಂದೇನೋ ಹೇಳ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೨ ॥

೨೪೪

ಹೊರಗೆ ಅಗ್ನಿ ಉರಿವುತಿಪ್ಪುದಯ್ಯ.
ಕುಂಭದೊಳಗೆ ಉದಕವಿಪ್ಪುದಯ್ಯ.
ಅಗ್ನಿಯ ಸಂಪರ್ಕದ ದೆಸೆಯಿಂದ ಕುಂಭದೊಳಗಿರ್ದ ಉದಕವು
ಹೇಂಗೆ ಉಷ್ಣವಹುದು ಹಾಂಗೆ
ಸರ್ವೇಂದ್ರಿಯವನುಳ್ಳಪ್ರಾಣನು
ತನ್ನ ಪೂರ್ವಗುಣವನು ಬಿಟ್ಟು ಲಿಂಗಕಳೆಯನೆ ವೇಧಿಸಿ
ಪ್ರಾಣವೆ ಲಿಂಗವೆನಿಸಿಕೊಂಡಿತ್ತಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೩ ॥

೨೪೫

ಅಂತರಂಗದಲ್ಲಿ ಜ್ಞಾನ,
ಬಹಿರಂಗದಲ್ಲಿ ಕ್ರಿಯೋಪಚಾರಯಿರುತ್ತಿರಲಿಕ್ಕಾಗಿ
ಏಕಭಾವನೆನಿಸಿಕೊಂಬುದಯ್ಯ.
ಅದು ಹೇಂಗೆಂದಡೆ:
ಹೊರಗೆ ಅಗ್ನಿ ಉರಿವುತಿಪ್ಪುದಯ್ಯ.

ಕುಂಭದಲ್ಲಿ ಉದಕವಿಪ್ಪುದು.
ಅಗ್ನಿಯ ಜ್ವಾಲೆಯ ಸಾಮರ್ಥ್ಯದಿಂದ
ಕುಂಭದೊಳಗಿನ ಉದಕವು ಹೇಂಗೆ ಉಷ್ಣವಪ್ಪುದು ಹಾಂಗೆ
ಜ್ಞಾನ ಸತ್ಕ್ರಿಯೋಪಚಾರವ ಮಾಡಲಾಗಿ
ಪ್ರಾಣವೆ ಲಿಂಗಸ್ವರೂಪವಪ್ಪುದು ತಪ್ಪದಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ! ॥ ೨೪ ॥

೨೪೬

ಅಗ್ನಿಯ ಸಂಪುಟದ ದೆಸೆಯಿಂದ
ಘಟದೊಳಗಿದ್ದ ಉದಕವು ಹೇಂಗೆ ಬತ್ತಿ ಬಯಲಪ್ಪುದಯ್ಯ
ಆ ಪ್ರಕಾರದಲ್ಲಿ ಜ್ಞಾನ ಸತ್ಕ್ರಿಯಾಸಮರಸವಾದಲ್ಲಿ
ಪ್ರಾಣವೆ ಲಿಂಗವಾಯಿತ್ತಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೫ ॥

೨೪೭

ಪ್ರಾಣನ ಪೂರ್ವಾಶ್ರಯವಳಿದು ಲಿಂಗ ನೆನಹು ಸಂಬಂಧಿಸಿದ
ಪ್ರಾಣಲಿಂಗಿಯ ಅಂಗವು ಹೇಂಗಿಹುದಯ್ಯ ಎಂದರೆ:
ಲಿಂಗ ನೆನಹೆ ಹಿಂಚಾಗಿ ಲಿಂಗ ನೆನಹೆ ಮುಂಚಾಗಿಹುದಯ್ಯ.
ಅಂಗವಿಷಯಂಗಳೆ ಹಿಂಚಾಗಿ
ಲಿಂಗವಿಷಯಂಗಳೆ ಮುಂಚಾಗಿಪ್ಪುದಯ್ಯ.
ಆವಾಗಲು ಲಿಂಗಸಹಿತವಾಗಿಯೆ
ಇಂದ್ರಿಯಂಗಳ ಭೋಗವ ಭೋಗಿಸುತಿಪ್ಪುದಯ್ಯ.
ಭೋಗಿಸುವ ಕ್ರಮವೆಂತುಟಯ್ಯ ಎಂದಡೆ:
ಘ್ರಾಣ, ಜಿಹ್ವೆ, ನೇತ್ರ, ತ್ವಕ್ಕು, ಶ್ರೋತ್ರವೆಂಬ ಮುಖದ್ವಾರಂಗಳಲ್ಲಿ
ಆಚಾರಲಿಂಗ ಗುರುಲಿಂಗ ಶಿವಲಿಂಗ
ಜಂಗಮಲಿಂಗ ಪ್ರಸಾದಲಿಂಗವೆಂಬ
ಲಿಂಗಸ್ಥಲಂಗಳ ಮೂರ್ತಿಗೊಳಿಸಿ
ಶಬ್ದ ಸ್ಪರ್ಶ ರೂಪು ರಸ ಗಂಧಂಗಳೆಂಬ ಈ ಪದಾರ್ಥಂಗಳ
ಲಿಂಗಮುಖಕ್ಕೆ ನೈವೇದಿಸಿ
ಆ ಲಿಂಗದ ಪ್ರಸನ್ನ ಪ್ರಸಾದವ ಸ್ವೀಕರಿಸುತಿಪ್ಪಾತನೆ
ಪ್ರಾಣಲಿಂಗಿ ಲಿಂಗಪ್ರಾಣಿಯಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೬ ॥

೨೪೮

ಇಂತು ಕ್ರೀಯಿಲ್ಲದೆ ಜ್ಞಾನ ಪ್ರಯೋಜನವಿಲ್ಲ;
ಜ್ಞಾನವಿಲ್ಲದೆ ಕ್ರೀ ಪ್ರಯೋಜನವಿಲ್ಲವಯ್ಯ
ಅದು ಹೇಂಗೆಂದರೆ:
ದೇಹವಿಲ್ಲದೆ ಪ್ರಾಣಕ್ಕೆ ಆಶ್ರಯವುಂಟೆ ಅಯ್ಯ?
ಪ್ರಾಣವಿಲ್ಲದೆ ಕಾಯಕ್ಕೆ ಚೈತನ್ಯವುಂಟೆ ಅಯ್ಯ?
ಕ್ರೀಯಿಲ್ಲದೆ ಜ್ಞಾನಕ್ಕೆ ಆಶ್ರಯವಿಲ್ಲ.
ಜ್ಞಾನವಿಲ್ಲದೆ ಕ್ರೀಗೆ ಆಶ್ರಯವಿಲ್ಲ.
ಕ್ರಿಯಾಜ್ಞಾನಪ್ರಕಾಶವಿಲ್ಲದೆ ಲಿಂಗಕ್ಕಾಶ್ರಯವಿಲ್ಲ.
ಇದು ಕಾರಣ,
ಜ್ಞಾನ ಸತ್ಕ್ರಿಯೋಪಚಾರವಿರಬೇಕೆಂದಿತ್ತಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೭ ॥

೨೪೯

ಈ ಲೋಕದಲ್ಲಿ ಸತ್ಕ್ರೀಯನೆ ಪ್ರತಿಷ್ಠೆಯ ಮಾಡುತ್ತಿಪ್ಪರು.
ಗೋವಿನ ದೇಹದಲ್ಲಿ ಘೃತವಿಪ್ಪುದು.
ಆ ಗೋವಿಂಗೆ ಪುಷ್ಟಿಯಾಗಲರಿಯದು.
ಆ ಗೋವ ಬೋಧಿಸಿ
ಹಾಲ ಕರೆದು ಕಾಸಿ ಹೆಪ್ಪನಿಕ್ಕಿ
ಆ ದಧಿಯ ಮಥನವ ಮಾಡಿ ಬೆಣ್ಣೆಯ ತೆಗೆದು
ಆ ನವನೀತದೆ ತುಪ್ಪವ ಕಾಸಿ ಆ ಗೋವಿಂಗೆ ಕುಡಿಸಲಾಗಿ
ದಿನದಿನಕ್ಕೆ ಪುಷ್ಟಿಯಪ್ಪುದು ತಪ್ಪದಯ್ಯ.
ಈ ಪ್ರಕಾರದಲ್ಲಿ ಲಿಂಗೋಪಚಾರವ ಮಾಡಲಾಗಿ ಜ್ಞಾನವಹುದು.
ಜ್ಞಾನವಾಗಲಿಕೆ ಸಮ್ಯಜ್ಞಾನವಹುದು.
ಸಮ್ಯಜ್ಞಾನವಾಗಲಾಗಿ ಪ್ರಾಣವೆ ಲಿಂಗವಪ್ಪುದು ತಪ್ಪದು.
ಸಂದೇಹವಿಲ್ಲವಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೮ ॥

೨೫೦

ಭಕ್ತ ಮಾಹೇಶ್ವರ ಪ್ರಸಾದಿಯೆಂದು
ಈ ಮೂರು ಕ್ರಿಯಾಂಗವಯ್ಯ.

ಪ್ರಾಣಲಿಂಗಿ ಶರಣ ಐಕ್ಯವೆಂದು
ಈ ಮೂರು ಜ್ಞಾನಾಂಗವಯ್ಯ.
ಆಚಾರಲಿಂಗ ಗುರುಲಿಂಗ ಶಿವಲಿಂಗವೆಂದು
ಈ ಮೂರು ಕ್ರಿಯಾಲಿಂಗವಯ್ಯ.
ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗವೆಂದು
ಈ ಮೂರು ಜ್ಞಾನಲಿಂಗವಯ್ಯ.
ಇವಕ್ಕೆ ಅಂಗ ಲಿಂಗ ಸಂಗ ಸಂಯೋಗನಿರ್ದೇಶವ ಹೇಳಿಹೆನು.
ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನೆಂದು
ಆ ಆರು ಕ್ರಿಯಾಂಗವು.
ಆಚಾರಲಿಂಗ ಗುರುಲಿಂಗ ಶಿವಲಿಂಗ
ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗವೆಂದು
ಲಿಂಗವಾರು ತೆರನಾಗಿಪ್ಪುದಯ್ಯ.
ಇನ್ನು ಸಂಗವಾರು ತೆರನದೆಂತೆಂದಡೆ:
ಘ್ರಾಣ, ಜಿಹ್ವೆ, ನೇತ್ರ, ತ್ವಕ್ಕು, ಶ್ರೋತ್ರ, ಭಾವವೆಂದು
ಸಂಗವಾರು ತೆರನಾಗಿಪ್ಪುದಯ್ಯ.
ಘ್ರಾಣದಲ್ಲಿ ಆಚಾರಲಿಂಗ, ಜಿಹ್ವೆಯಲ್ಲಿ ಗುರುಲಿಂಗ;
ನೇತ್ರದಲ್ಲಿ ಶಿವಲಿಂಗ; ತ್ವಕ್ಕಿನಲ್ಲಿ ಜಂಗಮಲಿಂಗ;
ಶ್ರೋತ್ರದಲ್ಲಿ ಪ್ರಸಾದಲಿಂಗ; ಭಾವದಲ್ಲಿ ಮಹಾಲಿಂಗಸಂಬಂಧ.
ಇಂತೀ ಷಡಂಗವು ಷಡ್ವಿಧಲಿಂಗದಲ್ಲಿ ಸಮರಸ ಸಂಯೋಗವಾದಲ್ಲಿ
ಅಂಗ ಲಿಂಗ ಸಂಬಂಧವೆನಿಸಿಕೊಂಡಿತಯ್ಯ.
ಇನ್ನು ಪ್ರಾಣಾಂಗವಾರು ತೆರನದೆಂತೆಂದಡೆ:
ಸುಚಿತ್ತ ಸುಬುದ್ಧಿ ನಿರಹಂಕಾರ ಸುಮನ ಸುಜ್ಞಾನ ಶುದ್ಧಾತ್ಮ
ಆ ಆರು ಪ್ರಾಣಾಂಗಗಳು.
ಇಂತೀ ಪ್ರಾಣಾಂಗಂಗಳಲ್ಲಿಯೂ ಹಿಂದೆ ಹೇಳಿದ ಷಡ್ವಿಧಲಿಂಗವು
ಮಾರ್ಗ ಕ್ರೀಯನೆಯ್ದಿ ಮೀರಿದ ಕ್ರಿಯಾಸ್ಥಲದಲ್ಲಿ ಬಂದು ನಿಂದು
ಜ್ಞಾನಗಮ್ಯವಾಗಿ ಸಂಗದನುವನರಿದು
ಪ್ರಾಣಾಂಗವಾರೂ ಲಿಂಗಸಂಬಂಧವಾದವಯ್ಯ.
ಹಿಂದೆ ಹೇಳಿದ ಕ್ರಿಯಾಂಗವಾರು
ಮುಂದೆ ಹೇಳುವ ಸುಚಿತ್ತಾದಿ ಭಾವಾಂತ್ಯವಹ ಜ್ಞಾನಾಂಗವಾರು.
ಈ ಉಭಯಾಂಗವು ಲಿಂಗಸಂಗದಿಂದ
ಲಿಂಗಕ್ಕೆ ಅಂಗಕ್ಕೆ ಆಶ್ರಯಸ್ಥಾನನಾಗಿ ನಿಂದ

ನಿರುಪಮ ಮಹಿಮ ಶರಣ ತಾನೆ
ಅಂಗಲಿಂಗ ಪ್ರಾಣಲಿಂಗ ಸಂಬಂಧಿಯೆನಿಸಿಕೊಂಬನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೯ ॥

ಭಕ್ತನ ಶರಣ

೨೫೧

ಗಂಡಂಗೆ ನಾಚಿದ ಹೆಂಡತಿ ಮಕ್ಕಳ ಹೇಂಗೆ ಹಡೆವಳಯ್ಯ?
ಲಿಂಗಕ್ಕೆ ನಾಚಿದಾತ ಶರಣನೆಂತಪ್ಪನಯ್ಯ?
ಈ ಲಜ್ಜೆ ನಾಚಿಕೆಯೆಂಬ ಪಾಶವಿದೇನಯ್ಯ?
ಸಂಕಲ್ಪ ವಿಕಲ್ಪದಿಂದ ಸಂದೇಹಿಸುವ ಭ್ರಾಂತಿಯೇ ಲಜ್ಜೆಯಯ್ಯ.
ಅಹುದೋ ಅಲ್ಲವೋ, ಏನೋ ಎಂತೋ ಎಂದು
ಹಿಡಿವುತ್ತ ಬಿಡುತ್ತಿಪ್ಪ ಲಜ್ಜಾಭ್ರಾಂತಿ ಉಡುಗಿರಬೇಕಯ್ಯ.
ಗಂಡನ ಕುರುಹನರಿಯದಾಕೆಗೆ ಲಜ್ಜೆ, ನಾಚಿಕೆ ಉಂಟಾದುದಯ್ಯ.
ಲಿಂಗವನರಿಯದಾತಂಗೆ
ಸಂಕಲ್ಪ ವಿಕಲ್ಪವೆಂಬ ಸಂದೇಹಭ್ರಾಂತಿ ಉಂಟಾದುದಯ್ಯ.
ಈ ಅರುಹು ಮರಹೆಂಬುಭಯದ ಮುಸುಕ ತೆಗೆದು
ನೆರೆ ಅರುಹಿನಲ್ಲಿ ಸನ್ನಿಹಿತವಿಲ್ಲದ ಜಡರುಗಳ ಕೈಯಲ್ಲಿ
ಲಿಂಗಾನುಭಾವವ ಬೆಸಗೊಳಲುಂಟೆ ಅಯ್ಯ?,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೦ ॥

೨೫೨

ಶರನಿಧಿ ರತ್ನವ ಧರಿಸಿದ್ದರೆ
ಆ ಮಹಾನದಿಗೆ ಒಂದು ಬಡತನ ಉಂಟೇ ಅಯ್ಯ?
ಮೇರುಗಿರಿಪರ್ವತ ಮೂಲಿಕೆಯ ಧರಿಸಿರ್ದರೆ
ಆ ಮೇರುಗಿರಿಪರ್ವತಕೆ ಒಂದು ಬಡತನ ಉಂಟೆ ಅಯ್ಯ?
ಅನಾದಿಮಯ ಪರಿಪೂರ್ಣಲಿಂಗವು ಶರಣನಾಗಿ ಪ್ರವರ್ತಿಸಿತ್ತು.
ಏತಕ್ಕಯ್ಯ ಎಂದರೆ;
ತನ್ನ ಮಹಿಮಾಗುಣ ವೈಭವವ ಪ್ರಕಾಶಿಸ ತೋರಲಾಯಿತ್ತಯ್ಯ!
ಶರಣ ಲಿಂಗವೆಂಬ ಅಂತರವೆಲ್ಲಿಯದೊ?

ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭು ತಾನೆ
ಶರಣ ಲಿಂಗವೆಂಬಾತ ಕಾಣಿರೊ. ॥ ೪೧ ॥

೨೫೩

ಮುಖದಲ್ಲಿ ಮಂತ್ರ, ಹೃದಯದಲ್ಲಿ ಧ್ಯಾನ,
ಪ್ರಾಣದಲ್ಲಿ ಲಿಂಗ ನೆನಹು ಕರಿಗೊಂಡ
ಶಿವಾತ್ಮಶರಣನ ಹೃದಯವೆ
ಪರಮೇಶ್ವರಂಗೆ ನಿವಾಸಸ್ಥಾನ, ನೆರೆಮನೆಯಾಗಿಪ್ಪುದಯ್ಯ.
ಆ ಪರಮೇಶ್ವರನೊಳಗಣ ಸಮರಸ ಭಾವವೆ
ಆ ಶರಣಂಗೆ ನಿತ್ಯ ನೇಮ ಪೂಜೆಯಾಗಿಪ್ಪುದಯ್ಯ.
ಇದೇ ಪೂರ್ಣ ಶರಣಭಾವ.
ಅಲ್ಲಿಯೆ ಲಿಂಗಸಿದ್ಧಿ. ಘನಲಿಂಗ ಪದ ಸ್ಥಿತಿ. ಲಿಂಗಪೂಜೆ.
ಮತ್ತಲ್ಲಿಯೆ ನಿಶ್ಚಯವದೇ ಪರಮಾರ್ಥ. ಇವಲ್ಲದೆ ಅನ್ಯವಪ್ಪೆಲ್ಲವು
ಆತ್ಮಅದುಃಖ ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೨ ॥

೨೫೪

ಅಷ್ಟಷಷ್ಟಿಕೋಟಿ ತೀರ್ಥವ ಮಿಂದರಿಲ್ಲ ಕಾಣಿರಣ್ಣ.
ಲಕ್ಷ ಲಕ್ಷ ಕೋಟಿ ಕೋಟಿ ಜಪ[ವ]ನೆಣಿಸಿದರಿಲ್ಲ ಕಾಣಿರಣ್ಣ.
ಧ್ಯಾನ ಮೌನ ಹೋಮ ನೇಮ ಅನುಷ್ಠಾನವ ಮಾಡಿದರಿಲ್ಲ
ಕಾಣಿರಣ್ಣ.
ನೂರಿಪ್ಪತ್ತುವೇಳೆ ಭೂಪ್ರದಕ್ಷಿಣವ ಮಾಡಿದರಿಲ್ಲ ಕಾಣಿರಣ್ಣ.
ಕಾಶಿ ಕೇದಾರ ಶ್ರೀಶೈಲ ಶಿವಗಂಗೆಗೈದಿದರಿಲ್ಲ ಕಾಣಿರಣ್ಣ.
ಇವೆಲ್ಲ ಬರಿಯ ಭ್ರಾಂತು.
ಇಪ್ಪ ಠಾವ ಹೇಳಿಹೆನು ಕೇಳಿರಣ್ಣ.
ಶ್ರೀಗುರು ಕರುಣದಿಂದ ಬಿಜಯಂಗೈಸಿ ಕೊಟ್ಟ
ಪರಮಲಿಂಗ ತನ್ನ ಕರದಲ್ಲಿ ತುಂಬಿಪ್ಪುದಯ್ಯ.
ಹಲವು ಕಡೆಗೆ ಹೋಹ ಮನವ ಧ್ಯಾನವೆಂಬ ಹಸ್ತದಲ್ಲಿ ಹಿಡಿದು
ಆ ಲಿಂಗದ ಗೊತ್ತಿನಲ್ಲಿ ಕಟ್ಟಿ ನೆರೆಯಬಲ್ಲರೆ
ಅಲ್ಲಿಪ್ಪನು ಶಂಭು ಪರಮೇಶ್ವರನು,
ಇದೇ ನಿಶ್ಚಯ; ಉಳಿದವೆಲ್ಲ ಹುಸಿ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೩ ॥

೨೫೫

ಪ್ರಾಣಲಿಂಗದಲ್ಲಿ ಅವಿಶ್ವಾಸ ಕಂಡು,
ಆ ತೀರ್ಥಲಿಂಗದಲ್ಲಿ ವಿಶ್ವಾಸವ ಮಾಡುವ,
ಬಣಗರ ಎನಗೊಮ್ಮೆ ತೋರದಿರ.
ಉಡಿಸಿ ತೊಡಿಸಿ ನೋಡುವ ಗಂಡನ
ತನು ಮುಟ್ಟಿ ಅಪ್ಪಿ, ಮನ ಮುಟ್ಟಿ ನೆರೆಯದೆ,
ಕಡೆಯಲ್ಲಿದ್ದವರಿಗೆ ಕಾಮಿಸುವ, ತುಡುಗುಣಿ ಹೊಲತಿಯಂತೆ,
ತನ್ನ ಲಿಂಗವ ಬಿಟ್ಟು, ಅನ್ಯಲಿಂಗಕ್ಕೆ ಹರಿವ ಅನಾಚಾರಿಗಳಿಗೆ,
ಮುನ್ನವೆ ಶಿವನಿಲ್ಲ ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೪ ॥

೨೫೬

ವಾಚಾತೀತ, ಮನೋತೀತ ಅಗೋಚರ
ನಿರ್ನಾಮ ನಿರ್ಗುಣ ನಿತ್ಯ ನಿರಂಜನ
ನಿರವಯ ನಿರಾಮಯ ನಿರ್ಮಲ
ನಿಃಕಲ ಜ್ಞಾನನಿರ್ಭೇದ್ಯ ನಿರುಪಾಧಿಕ ನಿರವಸ್ಥ ನಿರಾವರಣ
ಅದ್ವೈತಾನಂದ ಸಂಪೂರ್ಣವನ್ನುಳ್ಳ ಪರಶಿವ,
ತಾನೆ ಪರಮೇಶ್ವರನಾದನು.
ಆ ಪರಮೇಶ್ವರನಿಂದ ಸದಾಶಿವನಾದನು.
ಸದಾಶಿವನಿಂದ ಈಶ್ವರನಾದನು.
ಈಶ್ವರನಿಂದ ಮಹೇಶ್ವರನಾದನು.
ಮಹೇಶ್ವರನಿಂದ ರುದ್ರನಾದನು.
ರುದ್ರನಿಂದ ವಿಷ್ಣು ಹುಟ್ಟಿದನು.
ವಿಷ್ಣುವಿನಿಂದ ಬ್ರಹ್ಮ ಹುಟ್ಟಿದನು.
ಬ್ರಹ್ಮನಿಂದ ಸಕಲ ಜಗತ್ತೆಲ್ಲಾ ಆಯಿತು.
ಆಧಾರಚಕ್ರಕ್ಕೆ ಬ್ರಹ್ಮನಧಿದೇವತೆ;
ಸ್ವಾಧಿಷ್ಠಾನಚಕ್ರಕ್ಕೆ ವಿಷ್ಣು ಅಧಿದೇವತೆ;
ಮಣಿಪೂರಕಚಕ್ರಕ್ಕೆ ರುದ್ರನಧಿದೇವತೆ;
ಅನಾಹತಚಕ್ರಕ್ಕೆ ಈಶ್ವರಧೀನದೇವತೆ;
ವಿಶುದ್ಧಿಚಕ್ರಕ್ಕೆ ಸದಾಶಿವನಧಿದೇವತೆ;
ಆಜ್ಞಾಚಕ್ರಕ್ಕೆ ಪರಮೇಶ್ವರನಧಿದೇವತೆ.
ಆಧಾರಸ್ಥಾನದ ಬ್ರಹ್ಮತತ್ವಕ್ಕೆ ಆಚಾರಲಿಂಗವ ಸ್ವಾಯತವ ಮಾಡಿ

ಸ್ವಾಧಿಷ್ಠಾನದ ವಿಷ್ಣುತತ್ವಕ್ಕೆ ಗುರುಲಿಂಗವ ಸ್ವಾಯತವ ಮಾಡಿ
ಮಣಿಪೂರಕಸ್ಥಾನದ ರುದ್ರತತ್ವಕ್ಕೆ
ಶಿವಲಿಂಗವ ಸ್ವಾಯತವ ಮಾಡಿ
ಅನಾಹತಸ್ಥಾನದ ಈಶ್ವರತತ್ವಕ್ಕೆ
ಜಂಗಮಲಿಂಗವ ಸ್ವಾಯತವ ಮಾಡಿ
ವಿಶುದ್ಧಿಸ್ಥಾನದ ಸದಾಶಿವತತ್ವಕ್ಕೆ
ಪ್ರಸಾದಲಿಂಗವ ಸ್ವಾಯತವ ಮಾಡಿ
ಆಜ್ಞಾಸ್ಥಾನದ ಪರಮೇಶ್ವರನೆಂಬ ತತ್ವಕ್ಕೆ
ಮಹಾಲಿಂಗವ ಸ್ವಾಯತವ ಮಾಡಿ
ಪರಿಪೂರ್ಣಲಿಂಗವು ತಾನೆ ಸರ್ವಾಂಗದಲ್ಲಿ ಸ್ವಾಯತವಾಗಲು
ಆ ಶರಣನ ಸರ್ವಾಂಗವು ನಿರುಪಮ ಲಿಂಗಸ್ವಾಯತವಾಗಿ
ನಿರವಯಸ್ಥಲ ವೇದ್ಯವಾಯಿತ್ತಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೫ ॥

**ಭಕ್ತನ ಐಕ್ಯ**

೨೫೭

ತನುವಿನೊಳಗೆ ತನುವಾಗಿಪ್ಪಿರಯ್ಯ.
ಮನದೊಳಗೆ ಮನವಾಗಿಪ್ಪಿರಯ್ಯ.
ಭಾವದೊಳಗೆ ಭಾವವಾಗಿಪ್ಪಿರಯ್ಯ.
ಎನ್ನಂಗ ಪ್ರಾಣ ಮಹಾಲಿಂಗ ನೀವೆಯಾದ ಕಾರಣ
ಎನಗಿನ್ನಾವ ಭಂಗವೂ ಇಲ್ಲ ನೋಡ.
ಅದೇನು ಕಾರಣವೆಂದಡೆ:
ಎನ್ನಂಗವು ನಿಮ್ಮೊಳಗಡಗಿ
ಶುದ್ಧ ಪರಮಾತ್ಮನಾದೆನು ಕಾಣ.
ಇನ್ನಾವ ಪ್ರಪಂಚೂ ಎನಗಿಲ್ಲ ನೀನು ನಿರ್ಲೇಪಕನಾದ ಕಾರಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೬ ॥

೨೫೮

ಅಂಗಭಾವದಿಂದ ಲಿಂಗಮುಖವನು
ಲಿಂಗಮುಖವನು ಅರಿದು ಜಂಗಮ ಮುಖವನು ಅರಿದಡೆ
ಸಂಸಾರವೆಂಬ ಬಂಧನವಿಲ್ಲವಯ್ಯ.
ಜಂಗಮವೆಂದರೆ ಸಾಕ್ಷಾತ್ ಪರವಸ್ತು ತಾನೆ ನೋಡ.

ಅದೇನು ಕಾರಣವೆಂದಡೆ:
ಅಂಗವಾರಕ್ಕೆ ಲಿಂಗವಾರಕ್ಕೆ ಮೇಲಾಗಿ
ಆ ಅಂಗವನು ಲಿಂಗವನು ತನ್ನಲ್ಲಿ ಏಕೀಕರಿಸಿಕೊಂಡು
ತಾನು ಪರಮ ಚೈತನ್ಯನಾದ ಕಾರಣ.
ಆ ಪರವಸ್ತುವಿನ ಪ್ರಸನ್ನ ಪ್ರಸಾದಮುಖವನರಿದು
ಇಹ ಪರವ ನಿಶ್ಚೈಸೂದಿಲ್ಲ ನೋಡ.
ಅದೇನು ಕಾರಣವೆಂದಡೆ:
ಇಹ ಪರಕ್ಕೆ ಹೊರಗಾಗಿ
ಪರಮ ಪದದಲ್ಲಿ ಪರಿಣಾಮಿಯಾದನಾಗಿ
ಈ ತ್ರಿವಿಧವು ಒಂದೆಯೆಂದರಿದಾತನೆ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭು ತಾನೆ ಕಾಣಿರೋ. ॥ ೪೮ ॥

೨೫೯

ಎನಗೆ ಕಾಯವುಂಟೆಂಬರು ಕಾಯವೆನಗಿಲ್ಲವಯ್ಯ.
ಎನಗೆ ಜೀವವುಂಟೆಂಬರು ಎನಗೆ ಜೀವ ಮುನ್ನವೆ ಇಲ್ಲವಯ್ಯ.
ಎನಗೆ ಭಾವವುಂಟೆಂಬರು ಎನಗೆ ಭಾವ ಮುನ್ನವೆ ಇಲ್ಲವಯ್ಯ.
ಅದೇನು ಕಾರಣವೆಂದಡೆ:
ಎನ್ನ ಕಾಯ ಜೀವ ಪ್ರಾಣನಾಯಕ ಪರಮೇಶ್ವರ ನೀನಾದ ಕಾರಣ.
ಎನಗಿನ್ನಾವ ಭಯವೂ ಇಲ್ಲ ನೋಡ.
ನಾನು ನಿರ್ಭಯನಾದ ಕಾರಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೯ ॥

೨೬೦

ಕಡೆಯಲ್ಲಿ ಮೊದಲಲ್ಲಿ ಸುವರ್ಣವೊಂದಲ್ಲದೇ ಬೇರಿಲ್ಲ ಕಾಣಿರೋ.
ಬಂಗಾರ ಪ್ರಕೃತಿಯಿಂದ ಬೇರಿಟ್ಟು ತೋರಿತ್ತು ಎಂದಡೆ
ಬೇರಾಗಬಲ್ಲುದೆ ಅಯ್ಯ?
ಶುದ್ಧ ಪರಮಾತ್ಮ ತಾನೆ ಒಂದೆರಡಾಗಿ
ಜೀವ ಪರಮನೆಂದು ತೋರಿತ್ತೆಂದಡೆ
ಆವಾಗ ಜೀವ, ಆವಾಗ ಪರಮನೆಂಬ ಭೇದವನರಿಯದೆ
ಅರೆ ಮರುಳು ಆದಿರಲ್ಲ.
ದೇಹಭಾವದ ಉಪಾಧಿವುಳ್ಳನ್ನಕ್ಕರ ಜೀವನು;
ದೇಹಭಾವದ ಉಪಾಧಿ ಶಿವಭಾವದಲ್ಲಿ ಅಳಿದ ಬಳಿಕ

ಜೀವನೆಂಬವನು ಪರಮನೆಂಬವನು ತೀವಿ
ಪರಿಪೂರ್ಣ ಪರವಸ್ತು ತಾನೇ ತಾನೆಂಬಾತ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭು ತಾನೆ ಕಾಣಿರೋ.॥ ೪೯॥

೨೬೧

ಆದಿಯಲ್ಲಿ ನಾ ಹುಟ್ಟುವಂದು ಎನ್ನ ಒಡಹುಟ್ಟಿದರೈವರು ನೋಡ.
ಒಡಹುಟ್ಟಿದರೈವರು ಎನಗೆ ಒಡಲಾಗಿಪ್ಪರು ನೋಡ
ಒಡಲಸುರಿಗಿತ್ತು ಎನ್ನ ನಿಮಗಿತ್ತು
ನಿರ್ವಯಲಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೦ ॥

೨೬೨

ಕತ್ತಲೆಯನೊಳಕೊಂಡ ಬೆಳಗಿನಂತೆ
ಪಕ್ಷಿಯನೊಳಕೊಂಡ ತತ್ತಿಯಂತೆ
ಮುತ್ತನೊಳಕೊಂಡ ಚಿಪ್ಪಿನಂತೆ
ಸಾಗರವನೊಳಕೊಂಡ ಶಶಿಯಂತೆ
ಜಗವನೊಳಕೊಂಡ ಆಕಾಶದಂತೆ
ಎನ್ನ ನೀವು ಒಳಕೊಂಡಿರಿಯಾಗಿ
ನಾನೋ ನೀನೋ ಏನೆಂದರಿಯೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೧ ॥

೨೬೩

ಹೊನ್ನು ತನ್ನ ಬಣ್ಣದ ಲೇಸುವ ತಾನರಿಯದಂತೆ
ಬೆಲ್ಲ ತನ್ನ ಮಧುರವ ತಾನರಿಯದಂತೆ
ಪುಷ್ಪ ತನ್ನ ಪರಿಮಳವ ತಾನರಿಯದಂತೆ
ವಾರಿಶಿಲೆ ಅಂಬುವಿನೊಳು ಲೀಯವಾದಂತೆ
ಮನವು ಮಹಾಲಿಂಗವಲ್ಲಿ ಲೀಯವಾಗಿ
ಮನವಳಿದು ನೆನಹುಳಿದು
ನೆನಹು ನಿಃಪತಿಯಾಗಿ ನಾನು ನೀನಾಗಿರ್ದೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೨ ॥

## ಮಾಹೇಶ್ವರಸ್ಥಲದ ವಚನ

ಸೂತ್ರ॥ ಇಂತು ಶ್ರದ್ಧಾಭಕ್ತಿಯನು ಆಚರಿಸಿದ ಸದ್ಭಕ್ತಂಗೆ ಆ ಶ್ರದ್ಧಾಭಕ್ತಿಯಲ್ಲಿ ಕೃತನಿಶ್ಚಯ ನೆಲೆಗೊಂಡು ನಿಷ್ಠಾಮುಖದಿಂದ ಆ ಭಕ್ತನೆ ಮಾಹೇಶ್ವರನಾದನಾಗಿ ಮುಂದೆ ಮಾಹೇಶ್ವರಸ್ಥಲವಾದುದು.

೨೬೪

ಅನೃತ ಅನಾಚಾರ ಅನ್ಯಹಿಂಸೆ
ಪರಧನ ಪರಸ್ತ್ರೀ ಪರನಿಂದ್ಯವ ಬಿಟ್ಟು,
ಲಿಂಗನಿಷ್ಠೆಯಿಂದ ಶುದ್ಧಾತ್ಮಕನಾಗಿರಬಲ್ಲರೆ,
ಮಾಹೇಶ್ವರಸ್ಥಲವಿದೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

೨೬೫

ಜಲವೆ ಅಂಗವಾದ ಮಾಹೇಶ್ವರನಲ್ಲಿ
ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ ಭಕ್ತನಪ್ಪ
ಅಂಗಪಂಚಕವು ಗರ್ಭೀಕೃತವಾಗಿ
ಆ ಮಾಹೇಶ್ವರಂಗೆ ಗುರುಲಿಂಗಸಂಬಂಧವಾಗಿ
ಆ ಗುರುಲಿಂಗದಲ್ಲಿಯೆ
ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗ
ಆಚಾರಲಿಂಗವೆನಿಸುವ
ಲಿಂಗಪಂಚಕವು ಗರ್ಭೀಕೃತವಾಗಿ
ಗುರುಲಿಂಗವೆ ಆಶ್ರಯವಾಗಿ
ಇಂತೀ ಷಡ್ವಿಧಲಿಂಗದಲ್ಲಿಯೆ
ಬೆರಸಿ ಬೇರಿಲ್ಲದಿರಬಲ್ಲರೆ ಮಾಹೇಶ್ವರನೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨ ॥

೨೬೬

ತಾಪತ್ರಯಾದಿಗಳಳಿಯವು;
ಕೋಪ ಮೋಹಾದಿಗಳ ಸುಟ್ಟುರುಹಲರಿಯರು;
ಅಷ್ಟಮದಂಗಳ ಹಿಟ್ಟುಗುಟ್ಟಲರಿಯರು.
ಬಟ್ಟಬಯಲ ತುಟ್ಟ ತುದಿಯಣ ಮಾತನೇಕೆ ನುಡಿವಿರಣ್ಣ?
ಕರಕಷ್ಟ ಕರಕಷ್ಟ ಕಾಣಭೋ!
ಇಂದ್ರಿಯಂಗಳ ಮುಸುಕನುಗಿಯದೆ
ವಿಷಯಂಗಳ ಶಿರವನರಿಯದೆ
ಕರಣಂಗಳ ಕಳವಳವ ಕೆಡಿಸದೆ
ಕರ್ಮೇಂದ್ರಿಯಂಗಳ ಮೂಲದ ಬೇರ ಕಿತ್ತು ಭಸ್ಮವ  ಮಾಡದೆ
ಕಷ್ಟಕಾಮನ ನಷ್ಟವ ಮಾಡಲರಿಯದೆ
ಲಿಂಗನಿಷ್ಠರೆಂಬ ಕಷ್ಟವನೇನೆಂಬೆನಯ್ಯ?
ಮೃತ್ಯುಗಳ ಮೊತ್ತವ ಕಿತ್ತೆತ್ತಿ ಕೆದರದೆ
ಸತ್ವರಜತಮಂಗಳ ನಿವೃತ್ತಿಯ ಮಾಡದೆ
ನಿತ್ಯ ನಿಶ್ಚಿಂತ ನಿರ್ಮಲರೆಂಬ ಕಷ್ಟಯೋಗಿಗಳನೇನೆಂಬೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩ ॥

೨೬೭

ಶೈವರು ಕಟ್ಟಿದ ಗುಡಿಯ ಹೊಗಲೇಕೆ?
ಶೈವರು ನೆಟ್ಟ ಲಿಂಗವ ಮುಟ್ಟಿ ಪೂಜಿಸಲೇಕೆ?
ಆದಕೆ ಉಪಾಸಿತವ ಮಾಡಲೇಕೆ?
ನೆಟ್ಟಿದ್ದ ಕಲ್ಲಿಗೆ ನೀಡಿ ಕೆಡೆದರೆ
ಕಟ್ಟಿದ್ದ ಕಲ್ಲಿನ ಕಷ್ಟವ ನೋಡಿರೆ!
ಕಟ್ಟಿದ ಕಲ್ಲ ಕಳೆದಿಟ್ಟು ಬಿಟ್ಟು
ನೆಟ್ಟಿದ್ದ ಕಲ್ಲಿಗೆ ನಮಿಸಿರಾ ಭ್ರಷ್ಟರಿರ.
ತನ್ನ ಗುರು ಕೊಟ್ಟ ಇಷ್ಟಲಿಂಗ ಕೊಡಲರಿಯದೆಂದು,
ನೆಟ್ಟಿದ್ದ ಲಿಂಗ ಕೊಟ್ಟಿತ್ತೆಂಬ ಕೊಟ್ಟಿಗಳ ಕೆಡೆನೋಡಿ
ಹೊಟ್ಟೆ ಹುಣ್ಣಾಗುವಂತೆ ನಗುತಿರ್ದೆನಯ್ಯ.
ಅದೇನು ಕಾರಣವೆಂದಡೆ:
ಕಟ್ಟಿದ್ದುದೂ ಕಲ್ಲು, ನೆಟ್ಟಿದ್ದುದೂ ಕಲ್ಲು.
ಅದೇನು ಕಾರಣವೆಂದಡೆ;
ಏಕಲಿಂಗನಿಷ್ಠಾಚಾರವಿಲ್ಲದ ಕಾರಣ.

ಪ್ರಾಣಲಿಂಗಿಗೆ ಈ ಪಾಷಾಣದ ಹಂಗುಂಟೆ?
ಆತ್ಮನೊಳಗೆ ಹುಟ್ಟಿದ ಅನುಭಾವಲಿಂಗವ ಶ್ರೀಗುರು ತಂದು
ಕರಸ್ಥಲದಲ್ಲಿ ಇಷ್ಟಲಿಂಗವ ಮಾಡಿ ಇರಿಸಿದನಾಗಿ
ಇಷ್ಟ ಪ್ರಾಣ ಒಂದೇಯೆಂದು ಅರಿದು
ಆರಾಧಿಸಿ ಸುಖಿಯಾಗಿದ್ದೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪ ॥

೨೬೮

ಕೈಯಲ್ಲಿ ಹಣ್ಣಿದ್ದಂತೆ ಮರನನೇರಿ, ಕೊಂಬ ಬಾಗಿಸಿ
ಕಾಯ ಕೊಯಿವ ಅರೆಮರುಳನಂತೆ
ಅನಾದಿಮೂಲದೊಡೆಯ
ತನ್ನ ಕರಸ್ಥಲ ಮನಸ್ಥಲದಲ್ಲಿಪ್ಪುದ ತಾನರಿಯದೆ
ಬೇರೆ ಲಿಂಗವುಂಟು, ಬೇರೆ ಕ್ಷೇತ್ರವುಂಟು ಎಂದು
ಹಲವು ಲಿಂಗಕ್ಕೆ ಹರಿದು ಹಂಬಲಿಸುವ
ಈ ಸೂಳೆಗೆ ಹುಟ್ಟಿದವರಿಗೆ
ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ ಪ್ರಸಾದವಿಲ್ಲ
ಮುಕ್ತಿಯೆಂಬುದು ಎಂದೆಂದಿಗೂ ಇಲ್ಲ ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫ ॥

೨೬೯

ಇಷ್ಟಲಿಂಗವ ತೋರಿ
ನಾವು ನಿಷ್ಠೆವಾನರು, ನಾವು ಲಿಂಗಾಂಗಿಗಳೆಂದು
ಹೊಟ್ಟೆಯ ತುಂಬಿಕೊಳಬಹುದಲ್ಲದೆ
ಸರ್ವಾಂಗವನೂ ಲಿಂಗನಿಷ್ಠೆಯಲ್ಲಿ ಘಟ್ಟಿಗೊಳಿಸಬಾರದು
ಕಾಣಿರಣ್ಣ.
ಹೊಟ್ಟೆಯಾರ್ಥವುಳ್ಳವಂಗೆ ನಿಷ್ಠೆಯೆಲ್ಲಿಯದೊ?
ನಿಷ್ಠೆ ಹೀನರಿಗೆ ನೀವು ಕನಸಿನೊಳಗೂ ಇಲ್ಲ ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬ ॥

೨೭೦

ಪೃಥ್ವಿಯ ಮೇಲಣ ಕಲ್ಲ ತಂದು
ಮರ್ತ್ಯರೆಲ್ಲರು ಪೂಜಿಸಿ

ಶಿವಭಕ್ತಿಯೆಂದು ಮಾಡುತಿಪ್ಪರು ನೋಡ.
ಕೊಟ್ಟಾತನ ಗುರುವೆಂಬರು; ಕೊಂಡಾತನ ಶಿಷ್ಯನೆಂಬರು.
ಕೊಟ್ಟವ ಕೊಂಡವ ಉಭಯಮರ್ತ್ಯರೂ
ಮರಣಕ್ಕೊಳಗಾಗಿ ಹೋಹಲ್ಲಿ
ಪೃಥ್ವಿಯ ಕಲ್ಲು ಪೃಥ್ವಿಯಲುಳಿಯಿತ್ತು ನೋಡ.
ಭಕ್ತಿ ಭ್ರಷ್ಟಾಗಿ ಹೋಯಿತ್ತು.
ಹೀಂಗಲ್ಲ ಬಿಡಿ, ಇದು ಗುರುಶಿಷ್ಯಸಂಬಂಧವಲ್ಲ.
ಅರುಹು ಸಹಿತವಾಗಿ ಗುರುವೆಂದೆಂಬೆ;
ಆಚಾರ ಸಹಿತವಾಗಿ ಶಿಷ್ಯನೆಂದೆಂಬೆ;
ನಿಷ್ಠೆ ಸಹಿತವಾಗಿ ಲಿಂಗವೆಂದೆಂಬೆ,
ಇದು ಪರಮ ಸೌಖ್ಯ;
ಪರಮ ಭಕ್ತಿಯ ಪರಿಣಾಮವು.
ಉಳಿದವೆಲ್ಲ ಭ್ರಷ್ಟು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭ ॥

**ಮಾಹೇಶ್ವರನ ಭಕ್ತ**

೨೭೧

ಆಚಾರವಿಲ್ಲದ ಗುರು ಭೂತಪ್ರಾಣಿ.
ಆಚಾರವಿಲ್ಲದ ಲಿಂಗ ಶಿಲೆ.
ಆಚಾರವಿಲ್ಲದ ಜಂಗಮ ಮಾನವ.
ಆಚಾರವಿಲ್ಲದ ಪಾದೋದಕ ನೀರು.
ಆಚಾರವಿಲ್ಲದ ಪ್ರಸಾದ ಎಂಜಲು.
ಆಚಾರವಿಲ್ಲದ ಭಕ್ತ ದುಃಕರ್ಮಿ.
ಇದು ಕಾರಣ,
ಅಟ್ಟವನೇರುವುದಕ್ಕೆ ನಿಚ್ಚಣಿಗೆಯೆ ಸೋಪಾನವಯ್ಯ.
ಹರಪದವನೆಯ್ದುವರೆ
ಶ್ರೀಗುರು ಹೇಳಿದ ಸದಾಚಾರವೆ ಸೋಪಾನವಯ್ಯ.
ಗುರುಪದೇಶವ ಮೀರಿ,
ಮನಕ್ಕೆ ಬಂದಂತೆ ವರ್ತಿಸುವ ಪಾಪಿಗಳ
ಎನಗೊಮ್ಮೆ ತೋರದಿರಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮ ॥

೨೭೨

ಅಸುವಳಿದ ಕಾಯವಂತೆ
ದೆಸೆಗೆಟ್ಟೆನಯ್ಯ ದೆಸೆಗೆಟ್ಟೆನಯ್ಯ.
ಅದೇನು ಕಾರಣವೆಂದಡೆ:
ಪಶುಪತಿಯ ಭಕ್ತಿ ವಿಶ್ವಾಸವಿಲ್ಲದೆ ವಿಷಯಾತುರನಾಗಿರ್ದೆನಯ್ಯ.
ಇದು ಕಾರಣ,
ಎನ್ನ ಸಂಸಾರವಿಷಯಂಗಳ ಮಾಣಿಸಿ ಭಕ್ತನೆಂದೆನಿಸಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯ ॥

೨೭೩

ಸಕಲ ಗುರು, ಸಕಲ ನಿಃಕಲ ಜಂಗಮ, ನಿಃಕಲ ಲಿಂಗ
ಇಂತೀ ತ್ರಿವಿಧಲಿಂಗಕ್ಕೆ ಮಾಡುವ ಭಕ್ತಿಯ ಕ್ರಮವೆಂತೆಂದಡೆ:
ಲಿಂಗವು ಜಂಗಮವು ಗುರುವಿನಲ್ಲಿ ಉಂಟೆಂದು
ತನು ಮನ ಧನವ ಸವೆದು ಮಾಡುವುದು ಗುರುಭಕ್ತಿ.
ಗುರುವು ಜಂಗಮವು ಲಿಂಗದಲ್ಲಿ ಉಂಟೆಂದು
ಮನ ಧನ ತನು ಮುಟ್ಟಿ ಮಾಡುವುದು ಲಿಂಗಭಕ್ತಿ.
ಗುರುವು ಲಿಂಗವು ಜಂಗಮದಲ್ಲಿ ಉಂಟೆಂದು
ಧನ ಮನ ತನುವ ಸವೆದು ಮಾಡುವುದು ಜಂಗಮಭಕ್ತಿ.
ಈ ತ್ರಿವಿಧಲಿಂಗಕ್ಕೆ ತ್ರಿವಿಧ ಪ್ರಕಾರದಲ್ಲಿ
ಮಾಡಿ ಕೂಡಿ ವಿರಾಜಿಸುವಾತನೆ ಶಿವಭಕ್ತನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦ ॥

೨೭೪

ಪಂಚೇಂದ್ರಿಯ ಸಪ್ತಧಾತುಗಳ ಮುಟ್ಟದೆ
ಸದಾಶಿವನ ಮುಟ್ಟಿಪ್ಪ ಭಕ್ತನ ಪರಿಯ ನೋಡ.
ಕಾಮಾದಿ ಷಡುವರ್ಗಂಗಳ ಸೋಂಕದ
ನಿಸ್ಸೀಮನ ಪರಿಯ ನೋಡ.
ಗುಣತ್ರಯಂಗಳನರಿಯದ ನಿರ್ಗುಣನ ಪರಿಯ ನೋಡ.
ಅಹಂಕಾರತ್ರಯಂಗಳನಳಿದು ತಾಪತ್ರಯಂಗಳ ನೀಗಿ
ಕೋಪ ಮೋಹಾದಿಗಳ ವಿಸರ್ಜಿಸಿದ ಸದ್ಭಕ್ತನ ಪರಿಯ ನೋಡ.

ಒಳಹೊರಗನರಿಯದೆ
ನಿರಾಕುಳನಾದ ನಿಜಭಕ್ತನ ಪರಿಯ ನೋಡ.
ನಾನೆಂಬುದ ಮರದು ನೀನೆಂಬುದನಳಿದು
ತಾನು ತಾನಾದ ಸದ್ಭಕ್ತಂಗೆ
ನಮೋನಮೋಯೆಂದು ಬದುಕಿದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೧ ॥

೨೭೫

ಕಣ್ಣಿನಲ್ಲಿ ಕಾಮ ಮನದಲ್ಲಿ ಕ್ರೋಧ
ಪ್ರಾಣದಲ್ಲಿ ಲೋಭ ಬುದ್ಧಿಯಲ್ಲಿ ಮದ
ವಿವೇಕದಲ್ಲಿ ಮತ್ಸರ
ಅರುಹಿನಲ್ಲಿ ಮಾಯವುಳ್ಳನ್ನಕ್ಕರ
ಎಂತು ಭಕ್ತನೆಂಬೆ? ಎಂತು ಮಾಹೇಶ್ವರನೆಂಬೆ?
ಎಂತು ಪ್ರಸಾದಿಯೆಂಬೆ? ಎಂತು ಪ್ರಾಣಲಿಂಗಿಯೆಂಬೆ?
ಎಂತು ಶರಣನೆಂಬೆ? ಎಂತು ಐಕ್ಯನೆಂಬೆ?
ಎಂತು ಷಟ್ಸ್ಥಲದಲ್ಲಿ ಸಂಪೂರ್ಣನೆಂದೆಂಬೆ?
ಎಂತು ಧ್ಯಾನಿಗಳೆಂಬೆ? ಎಂತು ಅನುಭಾವಿಗಳೆಂಬೆ?
ವಾಕುಪೋಟಾರ್ಥಿಗಳು, ಉದರ ಘಾತಕರ
ಎನಗೊಮ್ಮೆ ತೋರದಿರ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೨ ॥

೨೭೬

ಶಿಶು ತಾಯ ಮರೆವುದೆ ಅಯ್ಯ?
ಪಶು ಕರುವ ಮರೆವುದೆ ಅಯ್ಯ?
ಅಂಗನೆ ರಮಣನ ಮರೆವಳೆ ಅಯ್ಯ?
ಗುಡುಗನಾಡುವನು ಗೊತ್ತ ಮರೆವನೆ ಅಯ್ಯ?
ಲಿಂಗಸಾವಧಾನಿಯಾದಾತ ಲಿಂಗದ ನೆನಹ ಮರೆವನೆ ಅಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೩ ॥

೨೭೭

ಕೈ[ಯ]ಮರೆದು ಕಾದುವ ಕಾಳಗವದೇನೋ?
ಮೈಮರೆದು ಮಾಡುವ ಮಾಟವದೇನೋ?
ಬಾಯಿ ಮರೆದು ಉಂಬ ಊಟವದೇನೋ?
ಸನ್ಮಾನ ಸಾವಧಾನ ಸನ್ನಹಿತವಿಲ್ಲದ ಲಿಂಗಸಂಧಾನ
ಜನ್ಮದ ಮೃತ್ಯು ನೋಡ.
ಎಚ್ಚರಿಕೆಯಿಲ್ಲದ ಅರ್ಪಿತ ವಿಕಾರ ನೋಡ.
ಸಂಕಲ್ಪ ವಿಕಲ್ಪವಿಲ್ಲದೆ
ಮನ ಲಿಂಗಸಾಹಿತ್ಯವಾದರೆ ಅರ್ಪಿತ;
ಅದು ಪ್ರಸಾದ ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೪ ॥

೨೭೮

ಎನ್ನ ಕಾಯ ಕಾಮಾರಿಯಲ್ಲಿ ಸಾವಧಾನವಾಯಿತ್ತಾಗಿ
ಕಾಯವೆನಗಿಲ್ಲ ನೋಡ.
ಎನ್ನ ಮನ ಮಾಹೇಶ್ವರನಲ್ಲಿ ಸಾವಧಾನವಾಯಿತ್ತಾಗಿ
ಮಾಯಾ ಪ್ರಪಂಚು ಪೆರೆದೆಗೆದೋಡಿತ್ತು ನೋಡ
ಎನ್ನ ಪ್ರಾಣ ಪರಮೇಶ್ವರನಲ್ಲಿ ಸಾವಧಾನವಾಯಿತ್ತಾಗಿ
ಪ್ರಾಣಾದಿ ವಾಯುಗಳ ಪ್ರಪಂಚಿನ ಗಮನಾಗಮನ
ನಾಸ್ತಿಯಾಯಿತ್ತು ನೋಡ.
ಎನ್ನ ಭಾವ ಭವಹರನಲ್ಲಿ ಸಾವಧಾನವಾಯಿತ್ತಾಗಿ
ಭಾವಾಭಾವಭ್ರಮೆಗಳು ಅಳಿದು ಹೋದುವು ನೋಡ.
ಭಾವ ನಿರ್ಭಾವವಾಗಿ ಬ್ರಹ್ಮವ ಮುಟ್ಟಿತ್ತಾಗಿ
ನಿಮ್ಮಯ ಪ್ರಸಾದ ಎನ್ನನೊಳಕೊಂಡಿತ್ತು ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೫ ॥

೨೭೯

ತನುವ ಮುಟ್ಟಿಹ ಮನ ಮನವ ಮುಟ್ಟಿದ ತನು
ತನು ಮನವ ಮುಟ್ಟಿಹ ಸರ್ವ ಕರಣಂಗಳ ನೋಡ.
ಕಾಯದ ಕರಣಂಗಳ ಮುಟ್ಟಿಹ ಜೀವನ ನೋಡ.

ಕಾಯ ಜೀವ ಕರಣಂಗಳ
ಶುದ್ಧ ಪರಮಾತ್ಮಲಿಂಗದಲ್ಲಿ ಮುಟ್ಟಿಸಬಲ್ಲರೆ
ಅದೇ ಅರ್ಪಿತ; ಅದೇ ಪ್ರಸಾದ ನೋಡ.
ಆ ಪ್ರಸಾದಿ ಎಂದೂ ಪ್ರಳಯ ವಿರಹಿತ ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೬ ॥

೨೮೦

ಕಾಯ ಲಿಂಗಾರ್ಪಿತವಾದ ಬಳಿಕ
ಕರ್ಮತ್ರಯಂಗಳು ಇರಲಾಗದು ನೋಡ.
ಜೀವ ಲಿಂಗಾರ್ಪಿತವಾದ ಬಳಿಕ
ಸಂಸಾರವ್ಯಾಪ್ತಿಯಹಂಥಾ ಜೀವನಗುಣವಿರಲಾಗದು.
ಅದು ಅರ್ಪಿತವಲ್ಲ ನೋಡ.
ಕರಣಂಗಳು ಲಿಂಗಾರ್ಪಿತವಾದ ಬಳಿಕ
ಆ ಕರಣಂಗಳೆಲ್ಲವು ಲಿಂಗಕಿರಣಂಗಳಾಗಿ
ಆ ಲಿಂಗಕಿರಣವೆ ಹರಣವಾಗಿರಬೇಕು ನೋಡ.
ಕಾಯದ ಜೀವದ ಕರಣದ ಗುಣವ ಕಳೆಯದ
ಲಿಂಗಾರ್ಪಿತ ಪ್ರಸಾದಿಗಳೆಂಬ ಪ್ರಪಂಚಿಗಳ ಮಚ್ಚನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೭ ॥

**ಮಾಹೇಶ್ವರನ ಪ್ರಾಣಲಿಂಗಿ**

೨೮೧

ಜ್ಯೋತಿಯಿದ್ದ ಮನೆಯಲ್ಲಿ ಕತ್ತಲೆಯುಂಟೆ?
ಲಿಂಗವಿದ್ದಂಗದಲ್ಲಿ ಅಜ್ಞಾನವುಂಟೆ?
ಅಜ್ಞಾನವಿಲ್ಲವಾಗಿ ಅಂಗವಿಕಾರವಿಲ್ಲ.
ಅಂಗವಿಕಾರವಿಲ್ಲವಾಗಿ
ಹೆಂಗಳಿಗೆ ಸೋಲರು, ಹೊಂಗಳಿಗೆಣಿಸರು
ಮಹಾಲಿಂಗೈಕ್ಯರಯ್ಯ ನಿಮ್ಮ ಪ್ರಮಥರು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೮ ॥

೨೮೨

ಅಂಗನೆಯ ಚಿತ್ತ,
ರಮಣನ ಸುತ್ತಿಮುತ್ತಿ ಅಪ್ಪಿ ಅಗಲದಿಪ್ಪಂತೆ
ಜಾಗ್ರ, ಸ್ವಪ್ನ, ಸುಷುಪ್ತಿಯಲ್ಲಿ
ಶರಣ ಚಿತ್ತರತಿ ಶಿವಲಿಂಗವ ಸುತ್ತಿ ಮುತ್ತಿ
ಅಪ್ಪಿ ಅಗಲದಿಪ್ಪರೆ
ಆ ಮಹಾತ್ಮನ ಏನೆಂದುಪಮಿಸುವೆನಯ್ಯ?
ಲಿಂಗಪ್ರಾಣಿಯ, ಪ್ರಾಣಲಿಂಗಸಂಬಂಧಿಯ?
ಸ್ವತಂತ್ರ ವಸ್ತುವಿನಲ್ಲಿ ಅರಿವರತು ಬೆರಗು ನಿಬ್ಬೆರಗಾದ,
ಘನ ಲಿಂಗಪ್ರಾಣಿಗೆ ನಮೋ ನಮೋಯೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೯ ॥

೨೮೩

ಇಂದ್ರಿಯಂಗಳುಳ್ಳನ್ನಕ್ಕರ ಪ್ರಾಣಂಗೆ ಬಂಧನ ಮಾಬುದೆ
ಭವದುಃಖಿಗಳಿರ?
ಇಂದ್ರಿಯಂಗಳನೆಲ್ಲವ ಲಿಂಗಸಂಧಾನವ ಮಾಡಬಲ್ಲರೆ
ಪ್ರಾಣನ ಬಂಧನ ಬಿಟ್ಟು ಓಡುವುದು ನೋಡ.
ಪ್ರಾಣಲಿಂಗವಾಗಿಯಲ್ಲದೆ ಪ್ರಳಯವ ಗೆಲಬಾರದು.
ಪ್ರಳಯ ಪ್ರಳಯದ ಹಳೆಯರಾಗಿಪ್ಪವರ
ಪ್ರಾಣಲಿಂಗಸಂಬಂಧಿಗಳೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೦ ॥

೨೮೪

ಕರ್ಕಸನ ಕಂಗಳೊಳಗೆ ರಾಕ್ಷಸರ ಪಡೆಯಿಪ್ಪುದ ಕಂಡೆನಯ್ಯ.
ರಾಕ್ಷಸರ ಪಡೆಯೊಳಗೆ ಮುಕ್ಕಣ್ಣನುದಯವಾಗಲು
ಕರ್ಕಸನ ಕಂಗಳು ಕೆಟ್ಟು
ರಾಕ್ಷಸರ ಪಡೆ ಮುರಿದೋಡಿತ್ತು ನೋಡ!
ಮುಕ್ಕಣ್ಣ ಶಿವನೊಲವ ನಾನೇನೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೧ ॥

೨೮೫

ಹೆಣ್ಣು ಪ್ರಾಣವೆ ಪ್ರಾಣವಾಗಿಪ್ಪರಯ್ಯ.
ಮಣ್ಣು ಪ್ರಾಣವೆ ಪ್ರಾಣವಾಗಿಪ್ಪರಯ್ಯ.
ಹೊನ್ನು ಪ್ರಾಣವೆ ಪ್ರಾಣವಾಗಿಪ್ಪರಯ್ಯ.

ಈ ಹೆಣ್ಣು ಮಣ್ಣು ಹೊನ್ನೆಂಬಿವು
ಪ್ರಾಣಂಗೆ ಪ್ರಪಂಚುಭಾವವೆಂದರಿದು
ಪ್ರಾಣಂಗೆ ಲಿಂಗಕಳೆಯ ಸಂಬಂಧಿಸಿ
ಲಿಂಗಕ್ಕೆ ಪ್ರಾಣಕಳೆಯ ಸಂಬಂಧಿಸಿ
ಪ್ರಾಣ ಲಿಂಗವೆಂಬ ಪ್ರತಿಭಾವ ತೋರದೆ
ಅಪ್ರತಿಮ ಲಿಂಗಸಂಬಂಧಿಯಾಗಿರ್ದೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. || ೧೧ ||

ಮಾಹೇಶ್ವರನ ಶರಣ

೧೮೬

ಡಂಬು ಮಚ್ಚರ್ಯಕ್ಕೆ ಇಂಬುಗೊಡದಿರಬಲ್ಲಡೆ ಶರಣ.
ಶಂಭುಪದಪದ್ಮಭಕ್ತಿಸಂಬುಗೆವಿಡಿದು ಅಗಲದಿರಬಲ್ಲಡೆ ಶರಣ.
ಸೂಸಲೀಯದೆ ಮನವ ಈಶಪದದಲ್ಲಿ
ಮೀಸಲಾಗಿರಿಸಿಕೊಂಡಿರಬಲ್ಲಡೆ
ಆ ಶರಣನ ಜಗದೀಶನೆಂಬೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. || ೧೨ ||

೧೮೭

ನೆಲ ನೀರು ಕಿಚ್ಚು ಗಾಳಿ ಬಯಲು ಕೂಡಿ
ಆದ ಪಿಂಡವ ತಾನೆಂದೆಂಬ
ಮಿಥ್ಯಾಚರ್ಮದೇಹಿಗಳನೇನೆಂಬೆನಯ್ಯ?
ನೆಲನಲ್ಲದ ನೀರಲ್ಲದ ಕಿಚ್ಚಲ್ಲದ ಗಾಳಿಯಲ್ಲದ
ಬಯಲಲ್ಲದ ಪ್ರಕೃತಿಯಲ್ಲದ ಪುರುಷನಲ್ಲದ
ಮೇಲಣ ಶುದ್ಧಸ್ವಯವೆ ತಾನೆಂದು ತಿಳಿದಾತನಲ್ಲದೆ
ಶರಣನಲ್ಲ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. || ೧೩ ||

೧೮೮

ಗಂಡಿಂಗೆ ಹೆಣ್ಣಲ್ಲದೆ ಹೆಣ್ಣಿಂಗೆ ಹೆಣ್ಣುಂಟೆ ಲೋಕದೊಳಗೆ
ಈ ಅರೆಮರುಳ ಶಿವನ ನಾನೇನೆಂಬೆನಯ್ಯ?
ಅಪಮಾನವ ಅನ್ಯರಿಗೆ ಕೊಡುವ ದೇವನ ಮರುಳುತನವ ನೋಡ.

ಅದೇನು ಕಾರಣವೆಂದಡೆ:
'ಪತಿರ್ಲಿಂಗಸ್ಸತೀ ಚಾಹಮಿತಿಯುಕ್ತಸ್ಸದಾ ತಥಾ
ಪಂಚೇಂದ್ರಿಯ ಸುಖಂ ನಾಸ್ತಿ ಶರಣಸ್ಥಲಮುತ್ತಮಂ॥'
ಎಂದುದಾಗಿ ಮುಕ್ಕಣ್ಣಂಗೆ ನಾ ಹೆಣ್ಣಾದ ಕಾರಣ
ಎನ್ನ ಕರಣೋಪಕರಣಗಳೆಲ್ಲವು ಲಿಂಗೋಪಕರಣಂಗಳಾಗಿ
ನಿಮ್ಮ ಚರಣವೆ ಹರಣವಾಗಿರ್ದೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೫ ॥

೨೮೯

ಅಂಗುಷ್ಠದಲ್ಲಿ ಸರ್ಪದಷ್ಟವಾಗಲು
ಸರ್ವಾಂಗವೆಲ್ಲವು ವಿಷಮಯವಾಗಿಪ್ಪುದು ನೋಡ.
ಶರಣನೆಂಬಂಗದ ಮೇಲೆ ಲಿಂಗದಷ್ಟವಾಗಲು
ಆ ಶರಣನ ಸರ್ವಾಂಗವೆಲ್ಲವು ಲಿಂಗವಪ್ಪುದು ತಪ್ಪದು ನೋಡ.
ಲಿಂಗವನಪ್ಪಿ ಲಿಂಗಸಂಗಿಯಾದ ಅಭಂಗ ಶರಣಂಗೆ
ಅನಂಗಸಂಗವುಂಟೆ? ಬಿಡಾ ಮರುಳೆ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೬ ॥

೨೯೦

ಶರಣನಂಗ ಲಿಂಗವನಪ್ಪಿತ್ತಾಗಿ
ಶರಣನ ತನುವೆ ಲಿಂಗದ ತನು ನೋಡ.
ಲಿಂಗದ ತನು ಶರಣನನಪ್ಪಿತ್ತಾಗಿ
ಶರಣನ ತನುವೆ ಲಿಂಗದ ತನು ನೋಡ.
ಶರಣನ ಮನ ಲಿಂಗವನಪ್ಪಿ, ಲಿಂಗದ ಮನ ಶರಣನನಪ್ಪಿದ ಕಾರಣ
ಶರಣನ ಮನವೆ ಲಿಂಗ; ಲಿಂಗದ ಮನವೆ ಶರಣ ನೋಡ.
ಶರಣನ ಹರಣ ಲಿಂಗವನಪ್ಪಿ
ಲಿಂಗದ ಹರಣ ಶರಣನನಪ್ಪಿದ ಕಾರಣ
ಶರಣನ ಹರಣವೆ ಲಿಂಗ
ಲಿಂಗದ ಹರಣವೆ ಶರಣ ನೋಡ.
ಶರಣನ ಭಾವ ಲಿಂಗವನಪ್ಪಿ
ಲಿಂಗದ ಭಾವ ಶರಣನನಪ್ಪಿದ ಕಾರಣ
ಶರಣನ ಭಾವವೆ ಲಿಂಗ;
ಲಿಂಗದ ಭಾವವೆ ಶರಣ ನೋಡ.

‘ಅಹಂ ಮಾಹೇಶ್ವರಃ ಪ್ರಾಣೋ। ಮಮ। ಪ್ರಾಣೋ ಮಾಹೇಶ್ವರಃ
ತಸ್ಮಾದ್ದ್ವಿರಳಂ ನಿತ್ಯಂ । ಶರಣಂ ನಾಮವರ್ತತೇ॥’
ಎಂದುದಾಗಿ ಭಾವ ಭೇದವಿಲ್ಲ ಶರಣ ಲಿಂಗಕ್ಕೆ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೭ ॥

೨೯೦

ತನ್ನ ಸತಿ, ತನ್ನ ಧನ ಉನ್ನತಿಯಲಿರಬೇಕು.
ಅನ್ಯ ಸತಿ, ಅನ್ಯ ಧನದಾಸೆಯನ್ನು
ಬಿಡಬೇಕೆಂಬುದು ನೋಡ, ಜಗ.
ತನ್ನ ಸತಿಯಾರು ಅನ್ಯಸತಿಯಾರೆಂದು
ಬಲ್ಲವರುಂಟೆ ಹೇಳ ಮರುಳೆ.
ಬಲ್ಲವರುಂಟುಂಟು ಶಿವಶರಣರು.
ತನ್ನ ಶಕ್ತಿಯೆ ಶಿವಶಕ್ತಿ;
ಅನ್ಯಶಕ್ತಿಯು ಮಾಯಾಶಕ್ತಿ ಕಾಣ ಮರುಳೆ.
ಇದು ಕಾರಣ,
ಮಾಯಾಶಕ್ತಿಯ ಸಂಗ ಭಂಗವೆಂದು ನಿವೃತ್ತಿಯ ಮಾಡಿ
ಶಿವಶಕ್ತಿಸಂಪನ್ನರಾಗಿ
ಶಿವಲಿಂಗವ ನೆರೆವರಯ್ಯ ನಿಮ್ಮ ಶರಣರು.
ಇದು ಕಾರಣ,
ಶರಣಂಗೆ ಅನ್ಯಸ್ತ್ರೀಯ ಸಂಗ ಅಘೋರನರಕ ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೮ ॥

೨೯೧

ವಂದಿಸಿ ನಿಂದಿಸುವ ಸಂದೇಹಿಯ ಮನೆಯ ಕೂಳು
ಹಂದಿಯ ಬಾಯ ತುತ್ತ ನಾಯಿ ಕಿತ್ತು ಕೊಂಡು
ತಿಂದಂತಾಯಿತ್ತು ಕಾಣ.
ಅದೇನು ಒಡಲ ಉಪಾಧಿಗೆ ತನ್ನ ನಿಂದಿಸಿದುದನರಿಯದೆ
ಭಕ್ತನೆಂದು ಒಳಗಿಟ್ಟುಕೊಂಡು ನಡೆವವರನೊಲ್ಲೆ ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೯ ॥

೨೯೨

ಒಳಗಿಟ್ಟು ಕೊಂಡು ನಡೆದರೂ ನಡೆಯಲಿ; ಅದಕೇನು?
ಶಿವಶರಣರಿಗೆ ತಥ್ಯ ಮಿಥ್ಯ ಸಲುವುದೆ?

ಸಲ್ಲದೆಂಮದಾಗಿ ಆದಿ-ವ್ಯಾಧಿ, ಸುಖ-ದುಃಖ,
ಭಯ-ಮೋಹ, ಪುಣ್ಯ-ಪಾಪ, ಇಹ-ಪರವೆಂಬ
ಉಪಾಧಿಯ ಹೊದ್ದವೆ
ಆಚಾರ ಅನಾಚಾರವೆಂಬುದರಿಯದಿರ್ದಡೆ
ಜಲದೊಳಗಣ ಸೂರ್ಯನಂತೆ
ವಿಶ್ವಪ್ರಪಂಚ ಹೊದ್ದಿಯು ಹೊದ್ದದೆ
ಬೆರಸಿಯು ಬೆರಸದೆ ಸರ್ವಸಾಕ್ಷಿಕನಾಗಿರಬಲ್ಲರೆ
ಆತಂಗೆ ಸಲುವುದೀ ಮತ
ಆಚಾರದೆಡೆಯಲ್ಲಿ ಅನುಸರಣೆಯುಂಟೆ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೦ ॥

೨೯೪

ಮಸಿ ಕಪ್ಪಾಯಿತ್ತೆಂದು
ಹಾವುಮೆಕ್ಕೆಯ ಹಣ್ಣು ಕಹಿಯಾಯಿತ್ತೆಂದು
ತಿಪ್ಪೆಯ ಹಳ್ಳ ಕದಡಿತ್ತೆಂದು
ಹಂದಿ ಹುಡು ಹುಡುಗುಟ್ಟಿತ್ತೆಂದು
ನಾಯಿ ಬಗುಳಿತ್ತೆಂದು ಸಂದೇಹಿಸಿದವರುಂಟೆ?
ಇದು ಕಾರಣ,
ಅರಿಯದ ಅಜ್ಞಾನಿಗಳು ನುಡಿದರೆ
ಅರುಹಿಂಗೆ ಭ್ರಮೆಯುಂಟೆ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೧ ॥

**ಮಾಹೇಶ್ವರನ ಐಕ್ಯ**

೨೯೫

ಭೂಲೋಕದಲ್ಲಿ ಕುಳ್ಳಿರ್ದು ಆಕಾಶದ ಸುದ್ದಿಯ ನುಡಿವರೆ
ಆಕಾಶದ ನೆಲೆಯ ಬಲ್ಲರೆ ಅಯ್ಯ?
ಪಾತಾಳಲೋಕದಲ್ಲಿದ್ದವರು ಕೈಲಾಸದ ಸುದ್ದಿಯ ನುಡಿವರೆ
ಕಂಡಂತೆ ಆಗಬಲ್ಲುದೆ ಅಯ್ಯ?
ತತ್ವಶಾಸ್ತ್ರವನೋದಿ
ತತ್ವಮಸ್ಯಾದಿ ವಾಕ್ಯಾರ್ಥಂಗಳ ತಿಳಿದು
ತತ್ವಮಸಿಯಾದನೆಂಬವರೆಲ್ಲಾ ಎತ್ತ ಹೋದರೋ?
ವ್ಯರ್ಥವಾಗಿ ಸತ್ತು ಹೋದರಲ್ಲ.

ಇದು ಕಾರಣ, ನಿಮ್ಮ ಶರಣರು
ಉತ್ಪತ್ತಿ ಸ್ಥಿತಿ ಪ್ರಳಯರಹಿತವಾದ ಮಹಾಲಿಂಗದಲ್ಲಿ
ಸಂಯೋಗವಾದ ಅಚ್ಚ ಲಿಂಗೈಕ್ಯರಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. || ೩೨ ||

೨೯೬

ತತ್ವಾರ್ಥವ ಬಲ್ಲೆವೆಂಬರಯ್ಯಾ ತತ್ತಿಯೊಳಗಣ ಬಾಲಕರು.
ತತ್ವಾನುಭಾವ ಸಂಭವಿಸಿದರೆ ಸತ್ತು ಹೋಗಲುಂಟೆ?
ಸತ್ತು ಹೋಗುವ ಪ್ರಾಣಿಗಳ ಶಿವತತ್ವಾನುಭಾವಿಗಳೆಂತೆಂಬೆನಯ್ಯ?
ಅನುಪಮ ಅದ್ವಯರೆಂತೆಂಬೆನಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. || ೩೩ ||

೨೯೭

ನಿರೂಪ ರೂಪು ಮಾಡಬಲ್ಲಡೆ ಶರಣ.
ರೂಪು ನಿರೂಪುವಿಡಿದಾಚರಿಸಿ
ತನು ಮನವ ಬಯಲ ಮಾಡಬಲ್ಲಡೆ ಶರಣ.
ರೂಪು ನಿರೂಪಳಿದು ನಿರ್ವಯಲಾದರೆ
ಆತನು ಲಿಂಗೈಕ್ಯನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. || ೩೪ ||

೨೯೮

ಒಳಗಿಪ್ಪಾತನ ಹೊರಗೆ ನೋಡಿ ಕಂಡೆನಯ್ಯ.
ಹೊರಗಿಪ್ಪಾತನ ಒಳಗೆ ನೋಡಿ ಕಂಡೆನಯ್ಯ.
ಒಳಹೊರಗಿಪ್ಪವರಿಬ್ಬರು ಒಂದಾಗಿ ನಿಂದ ನಿಲುವು
ಬಯಲು ಬಯಲ ಬೆರಸಿದಂತೆ ನಿರಾಳವಾಯಿತ್ತು ಕಾಣ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. || ೩೫ ||

೨೯೯

ನೇಮ ನೆಲಗತವಾಯಿತ್ತು,
ಸೀಮೆ ನಿಸ್ಸೀಮೆಯಾಯಿತ್ತು ನೋಡ.
ನೀರ ಕಿಚ್ಚು ನುಂಗಿ ಊರನಾವರಿಸಿತ್ತು ನೋಡ.

ಊರು ಬೆಂದು ಉಲುಹಳಿದುಳಿದು
ಸೀಮೆ ನಾಮವ ಮೀರಿ ತಾನು ಪರಾಪರನು ನೋಡ.
ತನ್ನಿಂದನ್ಯವಾಗಿ ಇನ್ನೇನೂ ಇಲ್ಲ.
ಅನ್ಯ ಅನನ್ಯವೆಂಬುದಳಿದುಳಿದು!
ಅದ್ವೈತ ಪರವಸ್ತುವಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೬ ॥

## ಪ್ರಸಾದಿಸ್ಥಲದ ವಚನ

ಸೂತ್ರ॥ ಇಂತು ನೈಷ್ಠಿಕಾಮುಖದಿಂದ ಆಚರಿಸಿದ ಮಾಹೇಶ್ವರನು ಆ ನೈಷ್ಠಿಕಾಬಲದಿಂದ ಶಿವಪ್ರಸನ್ನತೆ ಪ್ರಸಾದತ್ವವನೆಯ್ದಿದನಾಗಿ ಮುಂದೆ ಪ್ರಸಾದಿಸ್ಥಲವಾದುದು.

೩೦೦

ಸರ್ವಾಂಗವನು ಲಿಂಗನಿಷ್ಠೆಯಿಂದ ಘಟ್ಟಿಗೊಳಿಸಿ
ಮನವ ಉನ್ಮನಿಯಾವಸ್ಥೆಯನೆಯ್ದಿಸಿ
ಶತಪತ್ರದಲ್ಲಿ ಸೈತಿಟ್ಟು ಲಿಂಗಕ್ಕೆ ಅರ್ಪಿಸಿದ ನೈವೇದ್ಯವ
ಲಿಂಗ ನೆನಹಿನಲ್ಲಿಯೆ ಸ್ವೀಕರಿಸುವುದು
ಅಂಗಾರ್ಪಿತವ ವಿಸರ್ಜಿಸುವುದಯ್ಯ.
ತಟ್ಟುವ ಮುಟ್ಟುವ ಸೋಂಕುವ ವರ್ಮವನರಿದು
ಲಿಂಗಮುಖಕ್ಕೆ ನಿವೇದಿಸಿ
ಲಿಂಗಪ್ರಸಾದವ ಸ್ವೀಕರಿಸುತಿರಬಲ್ಲರೆ
ಪ್ರಸಾದಿಸ್ಥಲವಿದೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

೩೦೧

ಅಗ್ನಿಯೆ ಅಂಗವಾದ ಪ್ರಸಾದಿಯಲ್ಲಿ
ಪ್ರಾಣಲಿಂಗ ಶರಣ ಐಕ್ಯ ಭಕ್ತ ಮಾಹೇಶ್ವರನಪ್ಪ
ಅಂಗಪಂಚಕವು ಗರ್ಭೀಕೃತವಾಗಿ
ಆ ಪ್ರಸಾದಿಯಲ್ಲಿ ಶಿವಲಿಂಗ ಸಂಬಂಧವಾಗಿ
ಆ ಶಿವಲಿಂಗದಲ್ಲಿಯೆ
ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗ
ಆಚಾರಲಿಂಗ ಗುರುಲಿಂಗವೆನಿಸುವ
ಲಿಂಗಪಂಚಕವು ಗರ್ಭೀಕೃತವಾಗಿ
ಶಿವಲಿಂಗವೆ ಸರ್ವಾಶ್ರಯವಾಗಿ

ಇಂತೀ ಷಡ್ವಿಧಲಿಂಗದಲ್ಲಿ ಬೆರಸಿ ಬೇರಿಲ್ಲದಿರಬಲ್ಲರೆ
ಪ್ರಸಾದಿಯೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨ ॥

೩೦೨

ಜಂಗಮಕ್ಕೊಂದನಿಕ್ಕಿ ತಾನೊಂದನುಂಬನೆ ಪ್ರಸಾದಿ?
ಜಂಗಮ ಉಂಡರೆ ಮನದಲ್ಲಿ ಮರುಗುವನೆ ಪ್ರಸಾದಿ?
ಜಂಗಮಕ್ಕೆ ತಳಿಗಳ ತಳಿದು
ತಾ ಗಂಗಳ ತುಂಬಿ ಒಟ್ಟಿಸಿಕೊಂಡು ಕೊಂಬನೆ ಪ್ರಸಾದಿ?
ಪ್ರಸಾದಿಯಂತೆ ಪ್ರಪಂಚುಂಟೆ?
ಕಕ್ಕುಲತೆಯಮಾಡಿ ಕೊಂಡನಾದರೆ
ನಾಯಮಾಂಸ ತಿಂದ ಸಮಾನ ಕಾಣಿರೊ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩ ॥

೩೦೩

ಪ್ರಸಾದಿಗೆ ಲಕ್ಷಣವಾವುದೆಂದರೆ ಹೇಳಿಹೆ ಕೇಳಿ[ರಯ್ಯ]
ಕಾಯದಿಂದ ಮನಸ್ಸಿನಿಂದ ವಾಕ್ಯದಿಂದ
ಸತ್ಯಶುದ್ಧವಾಗಿ, ವಿಶ್ವಾಸ ಶ್ರದ್ಧೆಯೆಡೆಗೊಂಡು
ಶರೀರವನು ಪ್ರಾಣವನು ಒಡೆಯೆಂಗೆ ಸಮರ್ಪಿಸಿ
ಪ್ರಸಾದವ ಕೈಕೊಳಬಲ್ಲರೆ ಪ್ರಸಾದಿಯೆಂಬೆ.
ಹೀಂಗಲ್ಲದೆ
ಕುಳವೆಂಬ ಕೋಳಕ್ಕೆ ಸಿಲ್ಕಿದ ಕಾಳ್ವಿಚಾರಿ ಋಣಪಾತಕರ
ಪ್ರಸಾದಿ ಸದ್ಭಾವಿಯೆಂತೆಂಬೆನಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪ ॥

೩೦೪

ಗುರುಪ್ರಸಾದಿಯಾದ ಬಳಿಕ
ವಾತ ಪಿತ್ಥ ಶ್ಲೇಷ್ಮವೆಂಬ ತ್ರಿದೋಷವಿಲ್ಲದಿರಬೇಕು.
ಲಿಂಗಪ್ರಸಾದಿಯಾದ ಬಳಿಕ
ಶೀತೋಷ್ಣಾದಿಗಳ ಭಯವಿಲ್ಲದಿರಬೇಕು.
ಜಂಗಮಪ್ರಸಾದಿಯಾದ ಬಳಿಕ

ಅಧಿ ವ್ಯಾಧಿಯಿಲ್ಲದಿರಬೇಕು.
ಮಹಾಪ್ರಸಾದಿಯಾದ ಬಳಿಕ
ಮರಣವಿಲ್ಲದಿರಬೇಕು.
ತಾಪತ್ರಯ ತನುವ ಪೀಡಿಸುವನ್ನಕ್ಕರ
ಪ್ರಸಾದಿ ಪ್ರಸಾದಿಯೆಂದೇನೋ ಜಡರುಗಳಿರ?
ಕೆಂಡವ ಇರುಹೆ ಮುತ್ತಬಲ್ಲುದೆ?
ಸೊಣ ಹಾವರೆ ಮದಸೊಕ್ಕಿದಾನೆಯ ಬರಿ ಮುರಿಯಬಲ್ಲುದೆ?
ಪ್ರಸಾದಿಯ ಪ್ರಳಯಬಾಧೆಗಳು ಬಾಧಿಸಬಲ್ಲವೆ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫ ॥

ಪ್ರಸಾದಿಯ ಭಕ್ತ

೨೦೫

ಮಣ್ಣ ಮಚ್ಚಿ ಮನೆಯ ಮಚ್ಚಿದವಂಗೆ
ಗುರುವಿನ ಮಚ್ಚೆಲ್ಲಿಯದೊ?
ಹೆಣ್ಣ ನಚ್ಚಿ ಹೊನ್ನ ನಚ್ಚಿದವಂಗೆ
ಲಿಂಗದ ಮಚ್ಚೆಲ್ಲಿಯದೊ?
ಹೆಂಡತಿ ಮಕ್ಕಳು ಬಂಧುಗಳು ಹಿತರೆಂದು ಮಚ್ಚಿದವರಿಗೆ
ಜಂಗಮದ ಮಚ್ಚೆಲ್ಲಿಯದೋ?
ಗುರು ಲಿಂಗ ಜಂಗಮವ ನಂಬದವರಿಗೆ
ಮುಕ್ತಿಯೆಂಬುದು ಕನಸಿನಲ್ಲಿಯೂ ಇಲ್ಲವಯ್ಯ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ
ನಿಮ್ಮ ನಂಬದ ಪಾಪಿಗಳಿಗೆ. ॥ ೬ ॥

೨೦೬

ಗುರು ಲಿಂಗ ಜಂಗಮದ ಭಕ್ತರೆಂದು
ಗುಣಕಥನವ ನುಡಿದುಕೊಂಡು
ಎಮಗೆ ಅನ್ಯದೈವವಿಲ್ಲವೆಂಬ ಸೋರೆಯ ಬಣ್ಣದ
ಅಣ್ಣಗಳು ನೀವು ಕೇಳಿಭೋ.
ನೀವರಿಯದಿರ್ದರೆ ನಾ ಹೇಳಿಹೆ ಕೇಳಿಭೋ.
ಹೆಣ್ಣೊಂದು ಭೂತ; ಮಣ್ಣೊಂದು ಭೂತ; ಹೊನ್ನೊಂದು ಭೂತ.
ಹೆಣ್ಣು ನಿಮ್ಮದೆಂಬಿರಿ; ಮಣ್ಣು ನಿಮ್ಮದೆಂಬಿರಿ;
ಹೊನ್ನು ನಿಮ್ಮದೆಂಬಿರಿ.

ಅವೇ ಪ್ರಾಣವಾಗಿ ಸಾವುತ್ತ ಹುಟ್ಟುತ್ತಿಪ್ಪಿರಿ.
ಆ ಭೂತ ನಿಮ್ಮ ಹಿಡಿದು, ಹಿಸಿಕಿ ಕೊಂದು ಕೂಗಿ,
ತಿಂದು ತೇಗಿ, ಹೀರಿ ಹಿಪ್ಪೆಯ ಮಾಡಿ
ಗಾರುಮಾಡುತಿಪ್ಪವು ಕಾಣೆಭೋ.
ಅ[ವ] ನೀವು ಹಿಡಿದು ಕೀರ್ತಿಸುತಿರ್ದು
ಎಮಗೆ ಅನ್ಯದೈವವಿಲ್ಲೆಂಬ ಕುನ್ನಿಮನುಜರ ಮೆಚ್ಚುವನೆ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭ ॥

೩೦೭

ಮಡಕೆಯ ತುಂಬಿ ಪಾವಡವ ಕಟ್ಟುವರಲ್ಲದೆ
ಸರ್ವಾಂಗವನು ಸದಾಚಾರವೆಂಬ ಪಾವಡದಲ್ಲಿ
ಕಟ್ಟುವರನಾರನೂ ಕಾಣೆನಯ್ಯ.
ಬಾಯ ತುಂಬಿ ಬಿಗಿಬಿಗಿದು ಪಾವಡವ ಕಟ್ಟುವರಲ್ಲದೆ
ಮನದ ಬಾಯ ಅರುಹೆಂಬ ಪಾವಡದಲ್ಲಿ
ಕಟ್ಟುವರನಾರನು ಕಾಣೆನಯ್ಯ.
ಮುಖತುಂಬಿ ಪಾವಡವ ಕಟ್ಟುವರಲ್ಲದೆ
ಮೂಗು ಹೋದವರಂತೆ
ಭಾವ ತುಂಬಿ ನಿರ್ವಾಣವೆಂಬ ಪಾವಡವ
ಕಟ್ಟುವರನಾರನೂ ಕಾಣೆನಯ್ಯ.
ಅಂಗ ಆಚಾರದಲ್ಲಿ ಸಾವಧಾನವಾಗದೆ,
ಮನ ಅರುಹಿನಲ್ಲಿ ಸಾವಧಾನವಾಗದೆ,
ಭಾವ ನಿರ್ವಾಣದಲ್ಲಿ ಸಾವಧಾನವಾಗದೆ,
ಬರಿದೆ ಶೀಲವಂತರು ಶೀಲವಂತರೆಂದರೇನಯ್ಯ.
ತನು ಮನ ಧನ ಅವಗುಣವೆಂಬ ಭವಿಯ ಕಳೆಯದೆ
ಹೊರಗೆ ವ್ರತಿಗಳೆಂದರೆ ಆರು ಮಚ್ಚುವರಯ್ಯ?
ಹುಚ್ಚರಿರಾ ಸುಮ್ಮನಿರಿ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.
ಇವರ ಮೆಚ್ಚನು ಕಾಣಿರೋ! ॥ ೮ ॥

೩೦೮

ಸತ್ಯದಲ್ಲಿ ನಡೆವುದು ಶೀಲ;
ಸತ್ಯದಲ್ಲಿ ನುಡಿವುದು ಶೀಲ,

ಸಜ್ಜನ ಸದಾಚಾರದಲ್ಲಿ ವರ್ತಿಸಿ
ನಿತ್ಯವನರಿವುದೆ ಶೀಲ ಕಾಣಿಭೋ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವಿನಲ್ಲಿ. ॥ ೯ ॥

೩೦೯

ಮಾತಿನಲ್ಲಿ ಭವಿಯ ಬಿಟ್ಟರೇನೋ?
ಕನಸಿನಲ್ಲಿ ಮನಸಿನಲ್ಲಿ ಆವರಿಸಿಪ್ಪ
ಭವಿ ಭವಿಯೆಂಬ ಸಂದೇಹದ ಕೀಲಕಳೆದು
ನಿಸ್ಸಂದೇಹ ನಿರ್ಲೇಪಕನಾಗಿರಬಲ್ಲರೆ
ಶೀಲಸಂಪನ್ನರೆಂಬೆ.
ಉಳಿಮುದೆಲ್ಲ ಸೂತಕದ ಪಾತಕ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦ ॥

೩೧೦

ತನುವ ಗುರುವಿಂಗೆ ಸವೆವುದು ಶೀಲ;
ಮನವ ಲಿಂಗಕ್ಕೆ ಸವೆವುದು ಶೀಲ;
ಧನವ ಜಂಗಮಕ್ಕೆ ಸವೆವುದು ಶೀಲ;
ತನುವ ಗುರುವಿಂಬುಗೊಂಬುದು ಶೀಲ;
ಮನವ ಲಿಂಗವಿಂಬುಗೊಂಬುದು ಶೀಲ;
ಧನವ ಜಂಗಮವಿಂಬುಗೊಂಬುದು ಶೀಲ;
ಈ ತನು ಮನ ಧನದಲ್ಲಿ ನಿರ್ವಂಚಕನು ಶೀಲವಂತನಲ್ಲದೆ
ಕಚ್ಚಿದ ಬದ್ಧಭವಿಯ ಶೀಲವಂತನೆಂತೆಂಬೆನಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ,
ಮಾತಿನನೀತಿಯ ಶೀಲವಂತರ ಕಂಡು ಹೇಸಿತ್ತು ಮನ. ॥ ೧೧ ॥

೩೧೧

ಚಿಲುಮೆಯ ಅಗ್ಘವಣಿಯ ಕುಡಿದರೇನೋ,
ಜನ್ಮದ ಮೈಲಿಗೆಯ ತೊಳೆಯದನ್ನಕ್ಕರ?
ಕಾಡುಗಟ್ಟಿಯ ನೀರ ಕುಡಿದರೇನೋ,
ತನ್ನ ಕಾಡುವ ಕರಣಾದಿ ಗುಣಂಗಳ ಕಳೆದುಳಿಯದನ್ನಕ್ಕರ?
ಉಳ್ಳಿ ನುಗ್ಗೆಯ ಬಿಟ್ಟರೇನೋ,
ಸಂಸಾರದ ಸೊಕ್ಕಿನುಕ್ಕಮುರಿದು

ಮಾಯಾಮುರ್ವಾಸನೆಯ ವಿಸರ್ಜಿಸದನ್ನಕ್ಕರ?
ಸಪ್ಪೆಯನುಂಡರೇನೋ
ಸ್ತ್ರೀಯರ ಅಪ್ಪುಗೆ ಬಿಡದನ್ನಕ್ಕರ?
ಅದೇತರ ಶೀಲ, ಅದೇತರ ವ್ರತ ಮರುಳೇ?
ಅಂಗವಾಚಾರಲಿಂಗವಾಗಿ
ಮನವು ಅರಿವು ಸಂಬಂಧವಾಗಿ
ಸರ್ವ ದುರ್ಭಾವ ಚರಿತ್ರವೆಲ್ಲಾ ಕೆಟ್ಟು
ಸತ್ಯ ಸದ್ಭಾವ ನೆಲೆಗೊಂಡ ಸದ್ಭಕ್ತನ ಸುಶೀಲಕ್ಕೆ
ನಮೋನಮೋಯೆಂಬೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೨ ॥

## ಪ್ರಸಾದಿಯ ಮಾಹೇಶ್ವರ

೩೧೨

ಒಡಲು ಉಮಾಪತಿಯಲ್ಲಿ ನಿಂದು
ಮನವು ಮಾರಾರಿಯಲ್ಲಿ ಬಲಿದು ನಿಂದ ಕಾರಣ
ತನುಮನದ ತಾಮಸದ ತವಕ ಮುರಿದೋಡಿತ್ತು ನೋಡ.
ಜೀವ ಪ್ರಣವವನಪ್ಪಿ
ಪರಮಾತ್ಮ ಸ್ವರೂಪು ಕೃತ ನಿಶ್ಚಯವಾಗಿ
ಪ್ರಪಂಚ ತಲೆದೋರಲೀಯದು ನೋಡ.
ಭಾವ ಬ್ರಹ್ಮವನಪ್ಪಿ
ದೇಹ ಭಾವಂಗಳನೆಲ್ಲಾ ಕೊಡಹಿತ್ತು ನೋಡ.
ದೇಹ ಮೋಹವಳಿದು
ಸರ್ವಾಂಗವು ಲಿಂಗನಿಷ್ಠೆಯಲ್ಲಿ ಲೀಯವಾಯಿತ್ತು ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೩ ॥

೩೧೩

ಶಿವತತ್ವದ ಆದಿಮಧ್ಯಾವಸಾನವನರಿಯದೆ
ಭಕ್ತರೆಂತಪ್ಪಿರಿಯಯ್ಯ?
ಶಿವತತ್ವವಾದಿಯೇ ಮಹೇಶ್ವರ.
ಶಿವತತ್ವದ ಮಧ್ಯವೇ ಸದಾಶಿವ.
ಶಿವತತ್ವದವಸಾನವೇ ಪರತತ್ವ.

ಮಾಹೇಶ್ವರನಲ್ಲಿ ತನುವ ನಿಲ್ಲಿಸಿ
ಸದಾಶಿವನಲ್ಲಿ ತನ್ನ ಮನವ ಸಾಹಿತ್ಯವ ಮಾಡಲು
ಮನೋಮಧ್ಯದಲ್ಲಿ ಪಂಚಬ್ರಹ್ಮಮೂರ್ತಿಯಾಗಿಪ್ಪನು
ನೋಡಾ ಸೂಕ್ಷ್ಮತತ್ವವು.
ಪ್ರಾಣವು ಪರವನಪ್ಪಿ ಪರಾಪರನಾಗಿ
ಪ್ರಪಂಚವನೇನುವಂ ಮುಟ್ಟದೆ
ಪರಮಮಾಹೇಶ್ವರನಾಗಿರ್ದನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೪ ॥

೩೧೪

ಅಂಗಗುಣವುಂಟೆ ಲಿಂಗವನೊಳಕೊಂಡ ನಿರಂಗ ಸಂಗಿಗೆ?
ಆತ್ಮಗುಣವುಂಟೆ ಪರಮಾತ್ಮಲಿಂಗ ಸಂಬಂಧಿಗೆ?
ಅಹಂಭಾವವುಂಟೆ ತಾನೆಂಬ ಭಾವವಳಿದು
ದಾಸೋಹಂ ದಾಸೋಹಂ ಎಂಬ ನಿರ್ಮಲ ನಿರಾವರಣಂಗೆ?
ಸಂದೇಹಾವರಣ ಎಂದೂ ಇಲ್ಲ ನೋಡ.
ತಾನೆಂದೆಂದೂ
ಇಂದುಧರನಂಗದಲ್ಲಿ ಉದಯವಾಗಿ, ಬಂದನಾಗಿ,
ಹುಟ್ಟಿದ ಬಟ್ಟೆಯ ಮೆಟ್ಟಿ ನಡೆದು
ಮುಟ್ಟಿದಲ್ಲಿಯೆ ಹೊಂದುವಾತನೆ ಮಾಹೇಶ್ವರನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೫ ॥

೩೧೫

ತೈಲ ಬತ್ತಿ ಜ್ಯೋತಿಯ ಮುಟ್ಟಿ ಜ್ಯೋತಿಯಪ್ಪುದು ನೋಡ.
ಸದ್ಭಕ್ತಿ ಸ್ನೇಹ ಮೋಹದಿಂದ ಲಿಂಗಸ್ಪರುಶನವ ಮಾಡಿ,
ಆ ಭಕ್ತನ ದೇಹ ಮನ ಕರಣಂಗಳೆಲ್ಲವು
ಲಿಂಗವಾದವು ನೋಡ.
ಲಿಂಗವ ಮುಟ್ಟಿ ಮತ್ತೊಂದೇನುವ ಮುಟ್ಟದ ನಿರ್ಮೋಹಿಯ
ಮಾಹೇಶ್ವರನೆಂಬೆನು ಕಾಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೬ ॥

೩೧೬

ಬ್ರಹ್ಮರಂಧ್ರವೆಂ[ಬುದು] ಉತ್ತರೋತ್ತರ ಕೇತಾರವಯ್ಯ.
ಭ್ರೂಮಧ್ಯವೆಂಬ ಶ್ರೀಶೈಲ;

ಹೃದಯಕಮಲಕರ್ಣಿಕಾವಾಸವೆನಿಸುವ ಕಾಶಿ ಕಾಣಿಭೋ.
ಬ್ರಹ್ಮರಂಧ್ರದಲ್ಲಿ ಗುರುಸ್ವಾಯತ;
ಭ್ರೂಮಧ್ಯದಲ್ಲಿ ಲಿಂಗಸ್ವಾಯತ;
ಹೃದಯಕಮಲಕರ್ಣಿಕಾವಾಸದಲ್ಲಿ ಪರಮ ಜಂಗಮಲಿಂಗಸ್ವಾಯತ.
ಈ ಲಿಂಗಗಳು ಇದ್ದಲ್ಲಿಯೇ ಸಮಸ್ತ ಲಿಂಗಂಗಳಿರ್ಪವು.
ಅಲ್ಲಿಯೇ ಸಮಸ್ತ ತೀರ್ಥಯಾತ್ರೆಗಳಿಪ್ಪವು.
ಸಮಸ್ತ ಕ್ಷೇತ್ರಂಗಳು ಅಲ್ಲಿಯೇ ಇಪ್ಪವು.
ಗತಿಪಥ ಮುಕ್ತಿಯೂ ಅಲ್ಲಿಯೇ ಇಪ್ಪವು.
ಹೀಂಗೆ ತನ್ನ ಒಳಹೊರಗೆ ಭರಿತವಾಗಿಪ್ಪ ಲಿಂಗವ
ತಾ ಕುರುಹನರಿಯದೆ,
ಅನ್ಯಲಿಂಗವಲ್ಲಿ ವರವ ಹಡದೆನೆಂಬ ಕುನ್ನಿಗಳನೊಲ್ಲ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥೧೭॥

೩೧೭

ಹಿರಿಯ ಕಡಲನೊಂದು ಮಂಡುಕ ಕುಡಿವುದ ಕಂಡೆನಯ್ಯ.
ಮಂಡುಕನ ಮಾರ್ಜಾಲ ಹಿಡಿದಿದೆ ನೋಡ?
ಮಾರ್ಜಾಲನ ಮೂಷಕ ನುಂಗಿಮುದ ಕಂಡೆನಯ್ಯ.
ಮೂಷಕನ ಮೂವರ್ಣದ ಪಕ್ಷಿ
ಹಿಡಿದು ಮೈದೋರದು ನೋಡ.
ಇವೆಲ್ಲವ ಕೂಡಿಕೊಂಡು ಇಪ್ಪುದೊಂದು
ಕೊಟ್ಟದ ಗ್ರಾಮವ ಕಂಡೆನಯ್ಯ.
ಆ ಗ್ರಾಮದ ಬಾಗಿಲೊಳಗೊಬ್ಬ ಕರಿಯ ಕಬ್ಬಿಲನಿದ್ದು
ಜಾಲವ ಬೀಸಿ ಕೊಂಡೈದಾನೆ ನೋಡ.
ಆ ಜಾಲದೊಳಗೆ ಹರಿಬ್ರಹ್ಮದೇವತಾದಿಗಳು ಸಿಕ್ಕಿ
ಒದ್ದಾಡುತ್ತಿದ್ದಾರೆ ನೋಡ.
ಆ ಜಾಲದ ಹರಿದು, ಕರಿಯ, ಕಬ್ಬಿಲನ ಕೈಕಾಲು ಕಡಿದು,
ಕಿವಿ, ಮೂಗನುತ್ತರಿಸಿಯಲ್ಲದೆ ಪ್ರಾಣಲಿಂಗಸಂಬಂಧಿಯಲ್ಲ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥೧೮॥

೩೧೮

ಎನ್ನಂತರಂಗದ ಆತ್ಮನೊಳಗೆ
ಅಂಗವಿಲ್ಲದ ಅನಾಮಯನ ನೋಡಿ ಕಂಡೆನಯ್ಯ.

ಆ ಪುರುಷನ ಮುಟ್ಟಿ ಹಿಡಿದು,
ದರುಶನ ಸ್ವರುಷನವ ಮಾಡಿ ಕೂಡಿ ನೆರೆದಿಹೆನೆಂದರೆ
ಚಿತ್ತ ಮನಕ್ಕೆ ಅಗೋಚರವಾಗಿಪ್ಪನಯ್ಯ.
ಈ ಪುರುಶನ ಚಾರಿತ್ರ ವಿಪರೀತ ವಿಸ್ಮಯವಾಗಿದೆ ನೋಡ.
ಆತನ ರೂಪು ಲಾವಣ್ಯ ಯುಕ್ತಿ ವಿಧಾನವ
ಏನೆಂದುಪಮಿಸುವೆನಯ್ಯಾ?
ಉಪಮಾತೀತ ಅವಿರಳಾತ್ಮಕ ಚಿದ್ರೂಪ ಕಾಣಭೋ.
ಕೆಂಜೆಡೆಯಂ ಭಾಳನೇತ್ರಂ
ರಂಜಿಪ ರವಿಕೋಟಿತೇಜದಿಂದುರವಣಿಸುತ್ತಿದಾನೆ ನೋಡ.
ಕಂಜಪದಯುಗಳದೊಳು ಹೊಳವುತ್ತಿದಾನೆ
ನಂಜುಗೊರಳಭವ ಕಾಣಭೋ
ಭವರೋಗವೈದ್ಯ ಭವಹರ ಎನ್ನ ತಂದೆ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವನು
ಎನ್ನ ಹೃದಯದಲ್ಲಿ ಕಂಡು
ಮನೋಭಾವದಲ್ಲಿ ಆರಾಧಿಸುತ್ತಿರ್ದೆನಯ್ಯ. ॥ ೧೯ ॥

೩೧೯

ಮನೋಮಧ್ಯದಲ್ಲಿ ಒಂದು ಶಶಿ ಸಂಧಾನದ ಕಳೆ ಸಂಧಿಸಿ
ಅರುಣೋದಯವಾದಂತಿದೆ ಇದೇನಯ್ಯ?
ಅದು ಎನ್ನ ಭಾಗ್ಯದಿಂದ ಮತಿಪ್ರಕಾಶನವಾಯಿತ್ತಯ್ಯ.
ಆ ಪ್ರಸನ್ನ ಪ್ರಸಾದವನೊಳಕೊಂಡು, ಉತ್ತಮೋತ್ತಮವಾಗಿ
ನಿಮಗೆ ಸಲುವಳಿಯಾದುದನು ಆರು ಬಲ್ಲರಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೦ ॥

೩೨೦

ಅಂಗದಮೇಲೊಂದು ಲಿಂಗವ ಕಂಡೆ;
ಲಿಂಗದಮೇಲೊಂದಂಗವ ಕಂಡೆನು ನೋಡ.
ಅಂಗವೆಂದರೆ ಆತ್ಮನು; ಲಿಂಗವೆಂದರೆ ಪರಮನು.
ಶಿವಜೀವರೊಂದಾದಲ್ಲಿ,
ಪ್ರಾಣಾಪಾನ, ವ್ಯಾನ, ಉದಾನ, ಸಮಾನ,
ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯ[ವೆ]ಂಬ
ದಶವಾಯುಗಳ ಗಮನಾಗಮನದ ವಿಷಯವ್ಯಾಪ್ತಿಯಡಗಿ

ಆತ್ಮಲಿಂಗಸಂಬಂಧಿಯಾಗಿರ್ದೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೧ ॥

೩೨೧

ಸ್ವಾನುಭಾವ ವಿವೇಕ ಅಂತರ್ಗತವಾಗಿ
ಜ್ಞಾನ ತಲೆದೋರಿತ್ತಯ್ಯ.
ಆ ತಲೆಯೊಳಗೊಂದು ಚಿತ್ಪ್ರಾಣನ ಕಂಡೆನಯ್ಯ.
ಅದೇ ಎನ್ನ ಪ್ರಾಣದೊಡೆಯನೆಂದರಿದು
ಅಲ್ಲಿ ಸನುಮತ ಸಂಗಿಯಾಗಿ
ಘನಸಮರಸವಾಗಿ ಮನ ಮಗ್ನನಾಗಿ
ಸದಾ ಸನ್ನಹಿತನಾಗಿರ್ದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೨ ॥

**ಪ್ರಸಾದಿಯ ಶರಣ**

೩೨೨

ದೇವಸಾಲೆಯಲ್ಲಿ ದಿವ್ಯಮೂರ್ತಿಯ ಕಂಡೆನಯ್ಯಾ.
ದೇವಸಾಲೆಯು ಅಳಿವುದಲ್ಲ; ದಿವ್ಯಮೂರ್ತಿಯು ಕೆಡುವುದಲ್ಲ.
ಕೇಡಿಲ್ಲದ ಪರವಸ್ತು ತಾನೆಂದರಿದಾತನಲ್ಲದೆ,
ಶಿವಶರಣನಲ್ಲ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೩ ॥

೩೨೩

ಕರ್ಮೇಂದ್ರಿಯಂಗಳ ನಿರ್ಮೂಲ್ಯವ ಮಾಡಬಲ್ಲರೆ ಶರಣ.
ಅರಿಷಡ್ವರ್ಗಂಗಳ ಕಡಿದು ಕತ್ತರಿಸಬಲ್ಲರೆ ಶರಣ.
ಶಬ್ದಾದಿ ವಿಷಯಂಗಳ ಸಂಹರಿಸಿ,
ಬುದ್ಧೀಂದ್ರಿಯಂಗಳ ಒಮ್ದು ಸೂಕಬಲ್ಲರೆ ಶರಣ.
ಪ್ರಾಣಾದಿ ವಾಯುಗಳ ಪರಿಹರಿಸಿ,
ಅಂತಃಕರಣಂಗಳ ಭ್ರಾಮಕವ ನಿವೃತ್ತಿಯ ಮಾಡಬಲ್ಲರೆ ಶರಣ.
ಗುಣತ್ರಯಂಗಳನಳಿದು, ಪ್ರಣವಮೂಲವ ತಿಳಿದು,
ತ್ರಿಣಯನನಪ್ಪಿ ಅಗಲದಿರಬಲ್ಲರೆ
ಆ ಶರಣಂಗೆ ನಮೋನಮೋಯೆಂಬೆ.

ಇಂತಿವನೆಲ್ಲವ ತನ್ನೊಳಗಿರಿಸಿಕೊಂಡು
ತಾನೇ ಸತಿ, ಲಿಂಗವೇ ಪತಿಯಾಗಿ
ಪಂಚೇಂದ್ರಿಯಂಗಳು ನಾಸ್ತಿಯಾಯಿತ್ತೆಂಬ
ಪ್ರಪಂಚಿಗಳ ಮೆಚ್ಚರು ಕಾಣಾ ನಿಮ್ಮ ಶರಣರು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೪ ॥

೩೨೪

ಎಲ್ಲರು ಅಹುದೆಂಬುದು ಪ್ರಮಾಣವಲ್ಲ ಕಾಣಿಭೋ!
ಎಲ್ಲರು ಅಲ್ಲ ಎಂಬುದು ಪ್ರಮಾಣವಲ್ಲ ಕಾಣಿಭೋ.
ಅದೇನು ಕಾರಣವೆಂದರೆ:
ಶಿವಶರಣರ ಹೃದಯದಂತಸ್ಥವನರಿಯರಾಗಿ,
ಎನ್ನ ಅಹುದೆಂಬುದನು, ಅಲ್ಲ ಎಂಬುದನು ಮನ್ಮನೋಮೂರ್ತಿ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ ನೀನೆ ಬಲ್ಲೆ. ॥ ೨೫

೩೨೫

ಚಿತ್ರದ ಬೊಂಬೆ ರೂಪಾಗಿರ್ದರೇನೋ?
ಅಚೇತನವಾದ ಕಾರಣ ಪ್ರಯೋಜನಕಾರಿಯಾದುದಿಲ್ಲ.
ಹಾವುಮೆಕ್ಕೆಯ ಹಣ್ಣು ಸುಂಪಾಗಿರ್ದರೇನೋ?
ಕಹಿ ಬೆರೆದ ಕಾರಣ ಪ್ರಯೋಜನಕಾರಿಯಾದುದಿಲ್ಲ.
ಅತ್ತಿಯ ಹಣ್ಣು ಕಳಿತಿರ್ದರೇನೋ?
ಕ್ರಿಮಿ ಬಿಡದ ಕಾರಣ ಪ್ರಯೋಜನಕಾರಿಯಾದುದಿಲ್ಲ.
ತಿಪ್ಪೆಯ ಹಳ್ಳ ತಿಳಿದಿರ್ದರೇನೋ?
ಅಮೇಧ್ಯ ಬೆರೆದ ಕಾರಣ ಪ್ರಯೋಜನಕಾರಿಯಾದುದಿಲ್ಲ.
ವೇದ ಶಾಸ್ತ್ರ ಪುರಾಣಾಗಮಂಗಳನೋದಿ
ಎಲ್ಲರಲ್ಲಿಯೂ ಅನುಭಾವಿಗಳಾದರೇನೋ?
ಆಶೆಯೆಂಬ ಪಾಶದಲ್ಲಿ ಕಟ್ಟುವಡೆದು ಪಾಶಬದ್ಧರಾದ ಕಾರಣ
ಪ್ರಯೋಜನಕಾರಿಗಳಾದುದಿಲ್ಲ.
ನುಡಿವಂತೆ ನಡೆಯದವರ ನಡೆದಂತೆ ನುಡಿಯದವರ
ಎಂತು ಶಿವಶರಣರೆಂಬೆ ವಾಚಾಳಿಕರ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೬ ॥

೩೨೬

ಪುರಜನಂಗಳ ಮೆಚ್ಚಿಸುವಾಗ ಪುರುಷಾರ್ಥಿಯೆ ಶರಣ?
ಪರಿಜನಂಗಳ ಮೆಚ್ಚಿಸುವಾಗ ಪಾದರಗಿತ್ತಿಯೆ ಶರಣ?
ಸರ್ವರ ಮೆಚ್ಚಿಸುವಾಗ ಸಂತೆಯ ಸೂಳೆಯೇ ಶರಣ?
ತನ್ನ ಲಿಂಗದ ನಚ್ಚು ಮಚ್ಚು ಪರಬ್ರಹ್ಮದಚ್ಚು.
ನಿಂದಕರ ಸುಡುವ ಎದೆಗಿಚ್ಚು ನೋಡ.
ಕೆಂಡವ ಕೊಂಡು ಮಂಡೆಯ ತುರಿಸುವಂತೆ
ಕೆಂಡಗಣ್ಣನ ಶರಣರ ಇರವನರಿಯದೆ
ದೂಷಣೆಯ ಮಾಡುವ ನರಕಿಜೀವಿಗಳ
ನರಕದಲ್ಲಿಕ್ಕದೆ ಮಾಬನೆ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೭ ॥

**ಪ್ರಸಾದಿಯ ಐಕ್ಯ**

೩೨೭

ಆಚಾರ ಅನಾಚಾರವೆಂಬುದು ಇಲ್ಲ.
ಸೀಮೆ ನಿಸ್ಸೀಮೆಯೆಂಬುದು ಇಲ್ಲ.
ಗಮನ ನಿರ್ಗಮನವೆಂಬುದು ಇಲ್ಲವಯ್ಯ.
ಕರ್ಮ-ಧರ್ಮ, ಸುಖ-ದುಃಖ, ಪುಣ್ಯ-ಪಾಪ,
ಭಯ-ನಿರ್ಭಯ, ಮೋಹ-ಮಾಯಾ, ಇಹ-ಪರವೆಂಬ
ಉಭಯ ಸಂದೇಹವಿಲ್ಲವಯ್ಯ.
ಇವೇನೂ ಇಲ್ಲದ ಪರಮನಿರ್ವಾಣ ನಿರ್ವಯಲೆ
ಶರಣ ಲಿಂಗ ಸಮರಸವಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೮ ॥

೩೨೮

ಭೋಜನಸಾಲೆಯ ಆಧಾರದ ರತ್ನಪೀಠದಲ್ಲಿ ವಿರಾಜಿಸುವ
ರಾಜಮೂರ್ತಿ ಇವನಾರಯ್ಯ?
ಮೂಜಗದೊಡೆಯ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭು
ತಾನೆ ಕಾಣಿರೋ. ॥ ೨೯ ॥

೩೨೯

ಹಜಾರದ ಪೀಠದ ಮನೆಯಲ್ಲಿ
ಭಜಕಜನವರೇಣ್ಯನಿದಾನೆ ನೋಡ.
ಕುಜನ ಜನವಳಿದು
ಸುಜನಜನಮುಖಸ್ಸರೋಜ ರಾಜಹಂಸನೆಂಬಾತ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ ತಾನೆ ಕಾಣಿರೋ.
॥ ೩೦ ॥

೩೩೦

ಅಕ್ಷರವೆಂಬುದು ಲೆಕ್ಕದೊಳಗು;
ಲೆಕ್ಕವೆಂಬುದು ನೆನಹಿನೊಳಗು;
ಇವೆಲ್ಲಾ ಕಲ್ಪಿತದೊಳಗು.
ಕಲ್ಪಿತವೆಂಬುದು ಖಂಡಿತ ನೋಡ
ಅಖಂಡ ಪರಿಪೂರ್ಣ, ನಿರ್ವಿಕಲ್ಪ, ನಿತ್ಯಾತ್ಮಕನಾದ
ಲಿಂಗೈಕ್ಯನ ಕಲ್ಪಿತಕ್ಕೆ ತಂದು ನುಡಿವ
ಕರ್ಮಕಾಂಡಿಗಳನೇನೆಂಬೆನಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೧ ॥

೩೩೧

ಎರಡೆಂಬನ್ನಕ್ಕರ ನೆರಡಾಯಿತ್ತು; ಕರಡಿ ತೊಡರಿದೆ ನೋಡ.
ಎರಡನೊಂದೆಂದು ತಿಳಿಯಲು ನೆರಡು ಮಾಯಿತ್ತು;
ಕರಡಿ ಬಿಟ್ಟೋಡಿತ್ತು ನೋಡ.
ಕಾಣಬಹುದು ಶೂನ್ಯ ನಿರಾಳ ತಾನು ತಾನೆಂಬುದ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೨ ॥

೩೩೨

ಅದ್ಭುತದಾಕಾಶದಲ್ಲಿ ಶುಭ್ರವರ್ಣದ ಅಂಗನೆ
ವಿದ್ಯುಲ್ಲತೆಯ ಹಡೆದಳು ನೋಡಾ.
ವಿದ್ಯುಲ್ಲತೆಯ ಬೆಳಗಿನಿಂದ ಶುದ್ಧಪ್ರಸಾದವ ಕಂಡು
ಶುದ್ಧಾಶುದ್ಧವನಳಿದು, ನಾ ನೀನೆಂಬುದ ಹೊದ್ದದೆ.
ಎರಡಳಿದ ನಿರಾಳ ನೀನೇ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೩ ॥

## ಪ್ರಾಣಲಿಂಗಿಸ್ಥಲದ ವಚನ

ಸೂತ್ರ॥ ಇಂತು ಪ್ರಸಾದಿಸ್ಥಲದಲ್ಲಿ ಆಚರಿಸಿ, ಸಾವಧಾನಸಂಬಂಧಿಯಾದ ಪ್ರಸಾದಿ ತಾನೆ ಪ್ರಾಣಲಿಂಗಿಯಾದನಾಗಿ ಮುಂದೆ ಪ್ರಾಣಲಿಂಗಿಸ್ಥಲವಾದುದು.

೩೩೩

ಸುಗುಣವೆ ಲಿಂಗಪ್ರಾಣಿಯಯ್ಯ.
ದುರ್ಗುಣವೆ ವಾಯುಪ್ರಾಣಿಯಯ್ಯ.
ಸುಗುಣ ದುರ್ಗಣವೆಂಬುಭಯವನತಿಗಳದು,
ಸುಖ ದುಃಖಾದಿಗಳ ಸಮಾನಂಗಂಡು,
ಶತ್ರು ಮಿತ್ರಾದಿಗಳ ಸಮಾನಂಗಂಡು,
ಸ್ತುತಿ ನಿಂದ್ಯಾದಿಗಳ ಸಮಾನಂಗಂಡು,
ಹಾಸ್ಯ ವಿಸ್ಮಯ ವಿರಹ ಕರಣ ಹೇಸಿಕೆ
ಇಂತೀ ಪ್ರಾಣನ ವಿಷಯಭ್ರಾಂತಿಯನತಿಗಳೆದು,
ಪ್ರಾಣನ ಪೂರ್ವಾಶ್ರಯವನಳಿದು,
ಲಿಂಗದ ನೆನಹು ಸಂಬಂಧಿಸಿ,
ಲಿಂಗವೇ ಪ್ರಾಣವಾಗಿರಬಲ್ಲರೆ
ಪ್ರಾಣಲಿಂಗಿಸ್ಥಲವಿದೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

೩೩೪

ವಾಯುವೇ ಅಂಗವಾದ ಪ್ರಾಣಲಿಂಗಿಯಲ್ಲಿಯೆ
ಶರಣ ಐಕ್ಯ ಭಕ್ತ ಮಹೇಶ್ವರ ಪ್ರಸಾದಿಯಪ್ಪ
ಅಂಗಪಂಚಕವು ಗರ್ಭೀಕೃತವಾಗಿ
ಆ ಪ್ರಾಣಲಿಂಗಿಗೆ ಜಂಗಮಲಿಂಗ ಸ್ವಾಯತವಾಗಿ
ಆ ಜಂಗಮಲಿಂಗದಲ್ಲಿಯೇ
ಪ್ರಸಾದಲಿಂಗ ಮಹಾಲಿಂಗ ಆಚಾರಲಿಂಗ
ಗುರುಲಿಂಗ ಶಿವಲಿಂಗವೆನಿಸುವ

ಲಿಂಗಪಂಚಕವು ಗರ್ಭೀಕೃತವಾಗಿ
ಜಂಗಮಲಿಂಗವೆ ಆಶ್ರಯವಾಗಿ
ಇಂತೀ ಷಡ್ವಿಧಲಿಂಗದಲ್ಲಿ ಬೆರಸಿ ಬೇರಿಲ್ಲದಿರಬಲ್ಲರೆ
ಪ್ರಾಣಲಿಂಗಿಯೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨ ॥

೩೩೫

ಆಕಾಶದೊಳಗಣ ಆಕಾಶ, ಜ್ಞಾನ;
ಅಲ್ಲಿ ಪ್ರಸಾದಲಿಂಗ ಸ್ವಾಯತ.
ಆಕಾಶದೊಳಗಣ ವಾಯು, ಮನಸ್ಸು;
ಅಲ್ಲಿ ಜಂಗಮಲಿಂಗ ಸ್ವಾಯತ.
ಆಕ್ಕಶದೊಳಗಣ ಅಗ್ನಿ, ಅಹಂಕಾರ;
ಅಲ್ಲಿ ಶಿವಲಿಂಗ ಸ್ವಾಯತ.
ಆಕಾಶದೊಳಗಣ ಅಪ್ಪು, ಚಿತ್ತ;
ಅಲ್ಲಿ ಗುರುಲಿಂಗ ಸ್ವಾಯತ.
ಆಕಾಶದೊಳಗಣ ಪೃಥ್ವಿ, ಬುದ್ಧಿ;
ಅಲ್ಲಿ ಆಚಾರಲಿಂಗ ಸ್ವಾಯತ.
ಹೀಂಗೆ ಪಂಚಕರಣಂಗಳಲ್ಲಿಯೂ
ಲಿಂಗವೇ ಸ್ವಾಯತವಾಗಿಪ್ಪುದಯ್ಯ.
ವಾಯುವಿನೊಳಗಣ ವಾಯು, ವಾನವಾಯು;
ಅಲ್ಲಿ ಜಂಗಮಲಿಂಗ ಸ್ವಾಯತ.
ವಾಯುವಿನೊಳಗಣ ಆಕಾಶ, ಸಮಾನವಾಯು;
ಅಲ್ಲಿ ಪ್ರಸಾದಲಿಂಗ ಸ್ವಾಯತ.
ವಾಯುವಿನೊಳಗಣ ಅಗ್ನಿ, ಉದಾನವಾಯು;
ಅಲ್ಲಿ ಶಿವಲಿಂಗ ಸ್ವಾಯತ.
ವಾಯುವಿನೊಳಗಣ ಅಪ್ಪು, ಅಪಾನವಾಯು;
ಅಲ್ಲಿ ಗುರುಲಿಂಗ ಸ್ವಾಯತ.
ವಾಯುವಿನೊಳಗಣ ಪೃಥ್ವಿ. ಪ್ರಾಣವಾಯು;
ಅಲ್ಲಿ ಆಚಾರಲಿಂಗ ಸ್ವಾಯತ.
ಹೀಂಗೆ ವಾಯುಪಂಚಕದಲ್ಲಿಯೂ
ಲಿಂಗವೇ ಸ್ವಾಯತವಾಗಿಪ್ಪುದಯ್ಯ.
ಅಗ್ನಿಯೊಳಗಣ ಅಗ್ನಿ, ನೇತ್ರೇಂದ್ರಿಯ;
ಅಲ್ಲಿ ಶಿವಲಿಂಗ ಸ್ವಾಯತ.

ಅಗ್ನಿಯೊಳಗಣ ಆಕಾಶ, ಶ್ರೋತ್ರೇಂದ್ರಿಯ;
ಅಲ್ಲಿ ಪ್ರಸಾದಲಿಂಗ ಸ್ವಾಯತ.
ಅಗ್ನಿಯೊಳಗಣ ವಾಯು ತ್ವಗಿಂದ್ರಿಯ;
ಅಲ್ಲಿ ಜಂಗಮಲಿಂಗ ಸ್ವಾಯತ.
ಅಗ್ನಿಯೊಳಗಣ ಅಪ್ಪು, ಜಿಹ್ವೇಂದ್ರಿಯ;
ಅಲ್ಲಿ ಗುರುಲಿಂಗ ಸ್ವಾಯತ.
ಅಗ್ನಿಯೊಳಗಣ ಪೃಥ್ವಿ, ಘ್ರಾಣೇಂದ್ರಿಯ;
ಅಲ್ಲಿ ಆಚಾರಲಿಂಗ ಸ್ವಾಯತ.
ಹೀಂಗೆ ಬುದ್ಧೀಂದ್ರಿಯಂಗಳಲ್ಲಿಯೂ
ಲಿಂಗವೇ ಸ್ವಾಯತವಾಗಿಪ್ಪುದಯ್ಯ.
ಅಪ್ಪುವಿನೊಳಗಣ ಅಪ್ಪು, ರಸ;
ಅಲ್ಲಿ ಗುರುಲಿಂಗ ಸ್ವಾಯತ.
ಅಪ್ಪುವಿನೊಳಗಣ ಆಕಾಶ, ಶಬ್ದ;
ಅಲ್ಲಿ ಪ್ರಸಾದಲಿಂಗ ಸ್ವಾಯತ.
ಅಪ್ಪುವಿನೊಳಗಣ ವಾಯು, ಸ್ಪರ್ಶನ;
ಅಲ್ಲಿ ಜಂಗಮಲಿಂಗ ಸ್ವಾಯತ.
ಅಪ್ಪುವಿನೊಳಗಣ ಅಗ್ನಿ ರೂಪು;
ಅಲ್ಲಿ ಶಿವಲಿಂಗ ಸ್ವಾಯತ.
ಅಪ್ಪುವಿನೊಳಗಣ ಪೃಥ್ವಿ ಗಂಧ;
ಅಲ್ಲಿ ಆಚಾರಲಿಂಗ ಸ್ವಾಯತ.
ಹೀಂಗೆ ಪಂಚವಿಷಯಂಗಳಲ್ಲಿಯೂ
ಲಿಂಗವೇ ಸ್ವಾಯತವಾಗಿಪ್ಪುದಯ್ಯ.
ಪೃಥ್ವಿಯೊಳಗಣ ಪೃಥ್ವಿ, ಪಾಯ್ವಿಂದ್ರಿಯ;
ಅಲ್ಲಿ ಆಚಾರಲಿಂಗ ಸ್ವಾಯತ.
ಪೃಥ್ವಿಯೊಳಗಣ ಆಕಾಶ, ವಾಗಿಂದ್ರಿಯ;
ಅಲ್ಲಿ ಪ್ರಸಾದಲಿಂಗ ಸ್ವಾಯತ.
ಪೃಥ್ವಿಯೊಳಗಣ ವಾಯು, ಪಾಣೇಂದ್ರಿಯ;
ಅಲ್ಲಿ ಜಂಗಮಲಿಂಗ ಸ್ವಾಯತ.
ಪೃಥ್ವಿಯೊಳಗಣ ಅಗ್ನಿ, ಪಾದೇಂದ್ರಿಯ;
ಅಲ್ಲಿ ಶಿವಲಿಂಗ ಸ್ವಾಯತ.
ಪೃಥ್ವಿಯೊಳಗಣ ಅಪ್ಪು, ಗುಹ್ಯೇಂದ್ರಿಯ;
ಅಲ್ಲಿ ಗುರುಲಿಂಗ ಸ್ವಾಯತ.
ಹೀಂಗೆ ಪಂಚಕರ್ಮೇಂದ್ರಿಯಂಗಳಲ್ಲಿಯೂ

ಲಿಂಗವೇ ಸ್ವಾಯತವಾಗಿಪ್ಪುದಯ್ಯ.
ಆತ್ಮನೊಳಗಣ ಆತ್ಮ ಶುದ್ಧಾತ್ಮ;
ಅಲ್ಲಿ ಮಹಾಲಿಂಗ ಸ್ವಾಯತ.
ಆತ್ಮನೊಳಗಣ ಆಕಾಶ, ಸುಜ್ಞಾನ;
ಅಲ್ಲಿ ಪ್ರಸಾದಲಿಂಗ ಸ್ವಾಯತ.
ಆತ್ಮನೊಳಗಣ ವಾಯು, ಸುಮನ;
ಅಲ್ಲಿ ಜಂಗಮಲಿಂಗ ಸ್ವಾಯತ.
ಆತ್ಮನೊಳಗಣ ಅಗ್ನಿ, ನಿರಹಂಕಾರ;
ಅಲ್ಲಿ ಶಿವಲಿಂಗ ಸ್ವಾಯತ.
ಆತ್ಮನೊಳಗಣ ಅಪ್ಪು, ಸುಬುದ್ಧಿ;
ಅಲ್ಲಿ ಗುರುಲಿಂಗ ಸ್ವಾಯತ.
ಆತ್ಮನೊಳಗಣ ಪೃಥ್ವಿ, ಸುಚಿತ್ತ;
ಅಲ್ಲಿ ಆಚಾರಲಿಂಗ ಸ್ವಾಯತ.
ಇಂತೀ ಪ್ರಾಣಂಗಳಲ್ಲಿಯೂ ಲಿಂಗವೇ ಸ್ವಾಯತವಾಗಿಪ್ಪುವಯ್ಯ.
ಇಂತೀ ಅಂಗ ಪ್ರಾಣಂಗಳಲ್ಲಿಯು
ಲಿಂಗವೇ ಎಡೆಕಡೆಯಿಲ್ಲದ ಪ್ರಭೇದವನರಿದಾತನೆ
ಸರ್ವಾಂಗಲಿಂಗಿ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩ ॥

೩೩೬

ಪಂಚವಿಂಶತಿತತ್ವಾಶ್ರಯವೆಂಬ ಪಟ್ಟಣದೊಳಗೆ
ಆರುಬಣ್ಣದ ಪಕ್ಷಿ ಮೂರು ಗೂಡ ಮಾಡಿಕೊಂಡು
ನಾಲ್ಕರಾಹಾರವ ಕೊಂಬುವುದ ಕಂಡೆನಯ್ಯ.
ಐದರ ನೀರ ಕುಡಿದು ಪರಿಣಾಮಿಸುತ್ತಿದೆ ನೋಡ.
ಏಳರ ಮೊಲೆಯನುಂಡು ಎಂಟರಾಭರಣವ ತೊಟ್ಟಿದೆ ನೋಡಾ.
ಹತ್ತರ ಬೆಂಬಳಿವಿಡಿದು ಒಂಬತ್ತು ಬಾಗಿಲೊಳಗೆ
ನಡೆದಾಡುವವ ಕಂಡೆನಯ್ಯ.
ಕೊಂಬುಕೊಂಬಿನಯಿಂಬಿನಲ್ಲಿ ಸುಳಿದಾಡುತ್ತಿದೆ ನೋಡಯ್ಯ.
ಆ ಸುಳುಹಿನ ಸೂಕ್ಷ್ಮವ ತಿಳಿದು
ತನ್ನ ಸುಳುಹನರಿವ ಹಿರಿಯರಾರನು ಕಾಣೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪ ॥

೩೩೭

ಕೈಯಲ್ಲಿ ಕುರುಪು, ಬಾಯಲ್ಲಿ ಅರುಹ ನುಡಿವುತಿಪ್ಪ ಅಯ್ಯಗಳೆಲ್ಲ
ಇರುಪಿನ ಮೂತ್ರದಲ್ಲಿ ಪ್ರಳಯವಾದರು ನೋಡ.
ಬಳಿಕಿವರರುಹು ಬರುದೊರೆವೋಯಿತ್ತು.
ಇವರ ಪ್ರಾಣಲಿಂಗಿ ಸಂಬಂಧಿಗಳೆಂತೆಂಬೆನಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫ ॥

೩೩೮

ಮಂಜರ ದೃಷ್ಟಿಯಲ್ಲಿ ತೋರುವ ಇಂದ್ರಿಯ ಭೋಗಂಗಳು
ಮಹೇಂದ್ರಜಾಲವಾಗಿಪ್ಪುವು.
ಇದು ಮನಸಿನ ವಿಕಾರವೆಂಬುದನೊಬ್ಬರು ತಿಳಿಯದೆ
ತಬ್ಬಿಬ್ಬುಗೊಳುತ್ತಿವಾರೆ ನೋಡ ತ್ರೈ ಜಗವೆಲ್ಲ.
ಮಂಜರ ದೃಷ್ಟಿಯಲ್ಲಿ ಚಂದ್ರಮನುದಯವಾಗಲು
ಇಂದ್ರಿಯ ಭೋಗಂಗಳ ಮಹೇಂದ್ರಜಾಲವೆಲ್ಲ
ಬೆಂದು ಹೋದವು ನೋಡ ಎನ್ನ ತಂದೆ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬ ॥

೩೩೯

ಹಾರುವರ ಮನೆಯ ದೇವಿಯ ಹದಿರು ಚವರಿನಲ್ಲಿ
ಹಲಬರು ಸಿಕ್ಕಿ ಕೆಟ್ಟರು ನೋಡ.
ಹಾರುವರ ಕೊಂದು ಹದಿರು ಚದಿರು ಅಳಿವಲ್ಲದೆ
ದೇವರ ಕಾಣಬಾರದು. ಪ್ರಾಣಲಿಂಗ ಸಂಬಂಧಿಗಳೆಂಬರೆ,
ನಾಚದವರನೇನೆಂಬೆನಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭ ॥

೩೪೦

ಅರಳಿಯೆಲೆಯ ಮೇಯ ಬಂದ ಎರಳೆ
ಹಾರಿಬಿದ್ದುದ ಕಂಡೆನಯ್ಯ.
ಅರಳಿಯೆಲೆಯ ಹರಿಯಲು
ಎರಳೆ ಎದ್ದೋಡಿತ್ತು ನೋಡ.

ಓಡಿಹೋದ ಎರಳೆ ಅಡಗಿದ ಠಾವ ಬಲ್ಲರೆ,
ಪ್ರಾಣಲಿಂಗ ಸಂಬಂಧಿಗಳೆಂಬೆ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮ ॥

೩೪೧

ರಕ್ಕಸಿಯ [ಹೊಳಲ]ಲ್ಲಿ ಒಂದು ಪಕ್ಷಿ ಹುಟ್ಟಿ
ರಕ್ಕಸಿಯ ಕೊಂದುದ ಕಂಡೆನಯ್ಯ.
ಹಿಕ್ಕೆಯ ಬಿಟ್ಟು ಪಕ್ಕೆಯ ಮೇದು
ಅಖಂಡಿತನಾದುದು ಸೋಜಿಗ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯ ॥

೩೪೨

ಅಂಗಡಿಯ ಬೀದಿಯಲ್ಲಿ ಕೊಂಗಿತಿ ಕುಳಿತು
ಭಂಗವ ಮಾರುತಿಪ್ಪಳು ನೋಡ.
ಆಕೆಗೆ ಪರಿಗೆಯ ಪಂಗನೆಂಬವ ಗಂಡನಾಗಿಪ್ಪನು ನೋಡ.
ಅಂಗಡಿಯ ಬೀದಿಯ ಮುಚ್ಚಿ,
ಕೊಂಗಿತಿಯ ಕೋಡ ಮುರಿದು,
ಪರಿಗೆಯ ಪಂಗನ ಕೊಂದಲ್ಲದೆ,
ಲಿಂಗವ ಕಾಣಬಾರದು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦ ॥

೩೪೩

ಊರಿಗೆ ಪೋಪ ದಾರಿಯಲ್ಲಿ
ಒಂದು ಕೋಡಗ ಕುಳಿತಿಪ್ಪುದ ಕಂಡೆನಯ್ಯ.
ಊರಿಗೆ ಹೋಪ ಅಣ್ಣಗಳ ಏಡಿಸಿ ಕಾಡುತ್ತಿದೆ ನೋಡ.
ಕೋಡಗನ ಹಿಡಿದು ಕೊಡತಕ್ಕೆ ಹಾಕಿಹೆನೆಂದು ಹೋದರೆ,
ಊರನೆಲ್ಲ ನುಂಗಿತ್ತು.
ಆರಿಗೂ ಕಾಣಿಸದಿದೆ ಇದೇನು ಸೋಜಿಗವೋ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೧ ॥

೩೪೪

ಚಂದ್ರಮನೊಳಗಣ ಕಳಹಂಸೆಯೆದ್ದು ರಾಮವ ನುಂಗಲು
ಮಂಡಲದಸುರರು ಮಡಿದು,
ಚಂದ್ರಮನಬೆಳಗು ಮಂಡಲವನವಗವಿಸಲು
ಮಂಡಲ ಕರಗಿ
ಮಂಡಲಾಧಿಪತಿ ತನ್ನ ಕಂಡುದು ಸೋಜಿಗ ಸೋಜಿಗ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೨ ॥

೩೪೫

ಸಣ್ಣನ ನೂಲುವ ಚಿಣ್ಣಂಗೆ ಬಣ್ಣ ಮುನ್ನಿಲ್ಲ ನೋಡಯ್ಯ.
ಚಿಣ್ಣ ತಾನಾದರೇನಯ್ಯ? ಬಣ್ಣವುಳ್ಳವರ ಕಣ್ಣಿಗೆ
ಕಾಣಿಸನು ನೋಡಯ್ಯ.
ಬಣ್ಣವಳಿದು ಕಣ್ಣ ಕತ್ತಲೆ ಹರಿದಲ್ಲದೆ
ಚಿಣ್ಣನ ಕಾಣಬಾರದಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೩ ॥

೩೪೬

ಪಟ್ಟಸಾಲೆಯ ಗದ್ದುಗೆಯೊಳಗೆ
ಜಗಜಟ್ಟಿ ಮೂರ್ತಿ ಇವನಾರಯ್ಯ?
ಕಟ್ಟೆ ಒಡೆದು ಹೊಟ್ಟು ಹಾರಿತ್ತು; ಗಟ್ಟಿ ಉಳಿಯಿತ್ತು.
ಈ ಕಟ್ಟಣೆಯನೇನೆಂಬೆನೋ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೪ ॥

೩೪೭

ಗಾಜಿನ ಮನೆಯ ಮಾಡಿಕೊಂಡು ವಿರಾಜಿಸುವ ಗೀಜಿಗನು
ಓಜನ ಕೈಯಲ್ಲಿ ಸಿಕ್ಕಿ ಗಾಜು ಗೋಜಾಗುತ್ತಿದೆ.
ತನ್ನೋಜೆಯ ಮರೆಯಿತ್ತಲ್ಲಯ್ಯ.
ಗಾಜಿನ ಮನೆಯ ಮುರಿದು, ಓಜನ ಕೊಂದು
ಗಾಜು ಗೋಜುಬಿಟ್ಟು ತನ್ನೋಜೆಯನರಿದಲ್ಲದೆ ಒಳ್ಳಿತ್ತಲ್ಲ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೫ ॥

೩೪೮

ತುಂಟ ಬಂಟಂಗೆ ನಂಟರು ನಾಲ್ವರು ನೋಡ.
ಬಂಟರು ಎಂಟುಮಂದಿಗಳಾಗಿಪ್ಪರಯ್ಯ.
ನಂಟರು ನಾಲ್ವರ ಕೊಂದು ಬಂಟರು ಎಂಟಮಂದಿಯ ಬಿಟ್ಟಲ್ಲದೆ
ತುಂಟತನ ಬಿಡದು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೬ ॥

೩೪೯

ಕಾವಿಯ ಸೀರೆಯ ಒಡೆಯರು
ಬಾವಿಯ ಆಳವ ನೋಡಿಹೆನೆಂದು ಹೋದರೆ
ಬಾವಿಯ ಬಗದೇವಿ ನುಂಗಿದುದ ಕಂಡೆನಯ್ಯ.
ಬಾವಿಯ ಹೂಳಿ, ಬಗದೇವಿಯ ಕೊಂದು
ಕಾವಿಯ ಸೀರೆಯ ಹರಿದಲ್ಲದೆ
ದೇವರ ಕಾಣಬಾರದು; ಪ್ರಾಣಲಿಂಗ ಸಂಬಂಧಿಗಳೆಂಬರೆ
ನಾಚವವರನೇನೆಂಬೆನಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೭ ॥

೩೫೦

ಅರಿವಿನ ಕುರುಹನರಿಯದೆ
ತನುವ ಕರಗಿಸಿ ಮನವ ಬಳಲಿಸಿದರೆ ಏನು ಪ್ರಯೋಜನವೋ?
ಇಂದ್ರಿಯವ ನಿಗ್ರಹಮಾಡಿ ವಿಷಯಂಗಳ ಬಂಧಿಸಿ
ಆತ್ಮಂಗೆ ಬಂಧನವ ಮಾಡಿದರೆ
ಆತ್ಮದ್ರೋಹ ಕಾಣಿಭೋ.
ಹೀಂಗೆ ಉದ್ದೇಶದಿಂದ ತನುವ ಒಣಗಿಸಿದರೆ
ಹಸಿಯ ಮರನ ತರಿದು ಬಿಸಿಲಿಗೆ ಹಾಕಿದಂತೆ.
ತನು ಒಣಗಿದರೇನಯ್ಯ? ಮನದ ಮಲಿನ ಹಿಂಗದು.
ಮನದ ಮಲಿನ ಹಿಂಗದನ್ನಕ್ಕರ
ಭವ ಹಿಂಗಿತ್ತೆಂಬ ಭಂಡರನೇನೆಂಬೆನಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೮ ॥

೩೫೧

ಐದುಬಣ್ಣದ ಊರಿಂಗೆ ಐದುಬಗೆಯ ಕೇರಿ
ರಚಿಸುತ್ತಿದಾವೆ ನೋಡ.
ಊರುಕೇರಿಯ ಮಧ್ಯದಲ್ಲಿ ಅಷ್ಟದಳಮಂಟಪವದೆ ನೋಡ.
ಅಷ್ಟದಳಮಂಟಪದೊಳಗಾಡುವ ಹಂಸನ ನಿಲವ
ನಟ್ಟ ನಡುಮಧ್ಯದಲ್ಲಿ ನಿಲಿಸಿ ನೆರೆಯಬಲ್ಲಾತನೆ ದಿಟ್ಟ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೯ ॥

೩೫೨

ಅಷ್ಟದಳಕಮಲವ ಮೆಟ್ಟಿ ಚರಿಸುವ
ಹಂಸನ ಭೇದವ ಹೇಳಿಹೆನು:
ಪೂರ್ವದಳಕೇರಲು ಗುಣಿಯಾಗಿಹನು.
ಅಗ್ನಿದಳಕೇರಲು ಕ್ಷುಧೆಯಾಗಿಹನು.
ದಕ್ಷಿಣದಳಕೇರಲು ಕ್ರೋಧಿಯಾಗಿಹನು.
ನೈಋತ್ಯದಳಕೇರಲು ಅಸತ್ಯನಾಗಿಹನು,
ವರುಣದಳಕೇರಲು ನಿದ್ರೆಗೆಯ್ದುತಿಹನು.
ವಾಯುದಳಕೇರಲು ಸಂಚಲನಾಗಿಹನು.
ಉತ್ತರದಳಕೇರಲು ಧರ್ಮಿಯಾಗಿಹನು.
ಈಶಾನ್ಯದಳಕೇರಲು ಕಾಮಾತುರನಾಗಿಹನು.
ಈ ಅಷ್ಟದಳಮಂಟಪದ ಮೇಲೆ ಹರಿದಾಡುವ ಹಂಸನ
ಕುಳನ ತೊಲಗಿಸುವ ಕ್ರಮವೆಂತುಟಯ್ಯಾಯೆಂದೊಡೆ:
ಅಷ್ಟದಳಮಂಟಪದ ಅಷ್ಟಕೋಣೆಗಳೊಳಗೆ
ಅಷ್ಟ ಲಿಂಗಕಳೆಯ ಪ್ರತಿಷ್ಠಿಸಿ
ಹಂಸನ ನಟ್ಟ ನಡುಮಧ್ಯದಲ್ಲಿ ತಂದು ನಿಲಿಸಲು
ಮುಕ್ತಿಮೋಕ್ಷವನೆಯ್ದಿ ಪರವಶನಾಗಿಪ್ಪನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೦ ॥

೩೫೩

ಆದಿಯಲ್ಲಿ ಈಶ್ವರನು ಕೂಗಿದ ಕೂಗ
ತ್ರೈಜಗವೆಲ್ಲಾ ಕೂಗುತ್ತಿದೆ ನೋಡ.
ಮುದಿಬಳ್ಳು ಕೂಗಿದ ಕೂಗ ಮರಿಬಳ್ಳುಗಳೆಲ್ಲ

ಬಳ್ಳಿಟ್ಟು ಬಗುಳುತ್ತಿಪ್ಪವು ನೋಡ.
ಮರಿಬಳ್ಳುಗಳು ಬಗುಳಿದ ಬಗುಳು
ಮುದಿಬಳ್ಳುವ ಮುಟ್ಟದಿದೇನು ಸೋಜಿಗವೋ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭು
ವಾಙ್ಮನಕ್ಕಗೋಚರನಾದ ಕಾರಣ,
ಅವರ ನಡೆಯು ನುಡಿಯು ಮುಟ್ಟವು ಕಾಣಿರೋ. ।। ೨೧ ।।

೩೫೪

ಈಚಲ ತಿಂದ ನರಿ ತನ್ನ ವಿಕಾರಕ್ಕೆ ಒರಲುವಂತೆ
ಮಾತಿನ ಮಮಕಾರಕ್ಕೆ
ಆಗಮವ ಬಲ್ಲೆವೆಂದು ಕೂಗಿಡುವರು ನೋಡಾ.
ಆಗಮವತಿರಹಸ್ಯ.
ಆಗಮ ಹೇಗಿಪ್ಪುದೆಂಬುದ ಲೋಗರು ನೀವೆತ್ತ ಬಲ್ಲಿರಿ?
ಆಗಮಮೂರ್ತಿ ಅನುಭಾವಿ ಬಲ್ಲ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ,
ನಿಮ್ಮ ಶರಣರು ಬಲ್ಲರು. ।। ೨೨ ।।

೩೫೫

ಆಗಮವ ಬಲ್ಲೆ ಆಗಮವ ಬಲ್ಲೆವೆಂದು
ಆಗಮಜ್ಞರೆನಿಸಿಕೊಂಬರು ನೀವು ಕೇಳಿರೋ.
ಆಗಮವೆಂಮ ನುಡಿವ ವಾಗಿಂದ್ರಿಯವ ಬಲ್ಲಿರಲ್ಲದೆ,
ಆಗಮಮೂರ್ತಿ ಹೇಗಿಹುದು ಬಲ್ಲರೆ [ನೀವು] ಹೇಳಿ.
ಆಗಮಮೂರ್ತಿ ವಾಙ್ಮನಕ್ಕಗೋಚರವು.
ವಾಙ್ಮನಕ್ಕಗೋಚರವಾದ ವಸ್ತುವ
ಆಗಮದಿಂದ ಅಂತಿದೆ, ಇಂತಿದೆಯೆಂದು ಹೇಳುವ ಭ್ರಾಂತಿನ
ಬಹುಭಾರಿಗಳನೇನೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ।। ೨೩ ।।

೩೫೬

ಇಂದ್ರಿಯಂಗಳಿಗೊಂದೊಂದು ಮಾತ ಕಲಿತು
ಬಹಳವ ಬಲ್ಲೆವು, ಬ್ರಹ್ಮಜ್ಞಾನಿಗಳೆಂದು ನುಡಿಮಕೊಂಡು

ನಡೆಯಬಲ್ಲರಲ್ಲದೆ,
ಸಾವನರಿದಿಹೆನೆಂದರೆ ದೇವತಾದಿಗಳಿಗಳವಲ್ಲ ಕಾಣಿರಣ್ಣ.
ದೇವರ ಮೂರ್ತಿಯ ಭಾವದಲ್ಲಿ ಕಂಡಲ್ಲದೆ
ಭವ ದುಃಖ ಹಿಂಗವು ನೋಡ.
ಭವ ದುಃಖವ ಹಿಂಗಿಸದೆ ಶಿವಾನುಭವವೇಕೆ ಹೇಳಿರೇ?
ಹುಸಿಯನೇ ಹೊಸೆದು, ಪಸೆಯನೇ ಕೊಚ್ಚಿ
ಪಶುಪತಿಯ ಅನುಭಾವಿಗಳೆಂದು
ಪ್ರಳಯಕ್ಕೊಳಗಾಗಿ ಹೋದರು ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೪ ॥

೩೫೭

ಆಗಮಮೂರ್ತಿ ಅಂತರಾತ್ಮನೊಳಿರುತಿರೆ
ಆಗಮವನರಿಯಬೇಕೆಂದೇನು ಹೇಳಿರೋ?
ಆಗಮವ ವಿಚಾರಿಸಿ ಅರಿಯಬೇಕೆಂಬ ಅರುಹು ಲೋಗರಿಗಲ್ಲದೆ
ಆಗಮಮೂರ್ತಿಯೇ ತಾನಾದರುಹು ಕುರುಹುಗೊಂಡ ಮೂರ್ತಿಗೆ
ಆಗಮವಿಚಾರವೆಂದೇನು ಹೇಳ?
ಆಗಮ, ಅರುಹಿನಮೂರ್ತಿ ಮಾಡಿದರಾದವು ಕಾಣಿರಣ್ಣ.
ವೇದ, ವಿವೇಕಿ ನುಡಿದರಾದವು ಕಾಣಿರಣ್ಣ.
ಶಾಸ್ತ್ರ, ಸರ್ವಜ್ಞ ನಿರ್ಮಿಸಿದರಾದವು ಕಾಣಿರಣ್ಣ.
ಪುರಾಣ, ಅಗ್ರಗಣ್ಯ ಆಗೆಂದರಾದವು ಕಾಣಿರಣ್ಣ.
ತರ್ಕವ ಅತರ್ಕ್ಯನು, ಅರ್ಥಿಗೆ ಆಡಿಸಾಡಿ ನೋಡಬೇಕೆಂದು
ಮಾಡಿದ ನೋಡ.
ವೇದ ಶಾಸ್ತ್ರ, ಪುರಾಣಾಗಮ ತರ್ಕ ಇವು ಉಪಮೆಯೊಳಗು.
ಉಪಮೆಗೊಳಗಾದವು ಉಪಮಾತೀತನ ಇವೆತ್ತ ಬಲ್ಲವು ಹೇಳ?
ಆತ್ಮಲಿಂಗದ ಆದ್ಯಂತವನರಿಯದೆ
ದ್ವೈತಾದ್ವೈತಿಗಳೆಂದು ನುಡಿದುಕೊಂಡು ನಡೆವ
ಭವರೋಗಿಗಳನೇನೆಂಬೆನಯ್ಯ?
ಆಗಮಮೂರ್ತಿ, ಅಂತರಂಗ ಬಹಿರಂಗ
ಸರ್ವಾಂಗ ಅಂತರ್ಯಾಮಿಯಾಗಿಹುದ
ಶಿವ ಪ್ರಸನ್ನ ಪ್ರಸಾದದಿಂದೊದಗಿದ ಸ್ವಾನುಭಾವಿ ಬಲ್ಲ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವಿನಲ್ಲಿ?

ಬಸವಣ್ಣ, ಪ್ರಭು, ಚೆನ್ನಬಸವಣ್ಣ ಮುಖ್ಯರಾದ
ನಮ್ಮ ಪ್ರಮಥರು ಬಲ್ಲರು ಶಿವನ ಘನವ. || ೨೫೭ ||

೨೫೮

ಲಂಬಿಕಾಯೋಗಿಗಳ ಡೊಂಬರಿಗೆ ಸರಿಯೆಂಬೆ.
ಹಟಯೋಗಿಗಳ ಅಟಮಟಗಾರರೆಂದೆಂಬೆ.
ಅಷ್ಟಾಂಗಯೋಗಿಗಳ ಕಷ್ಟ ಕರ್ಮಿಗಳೆಂದೆಂಬೆ.
ಪವನಯೋಗಿಗಳ ಪ್ರಪಂಚಿಗಳೆಂದೆಂಬೆ.
ಲಯಯೋಗಿಗಳ ನಾಯಿಗಿಂದ ಕಡೆ ಎಂಬೆ.
ಅದೇನು ಕಾರಣವೆಂದರೆ;
ಲಯಯೋಗವೆಂಬುವದು ನಾನಾ ದರುಶನವಲ್ಲಿ ವರ್ತಿಸುವುದಾಗಿ
ಆದ ಶಿವಯೋಗಿಗಳು ಒಲ್ಲರು.
ಮಂತ್ರಯೋಗವೆಂಬುವದು ಸರ್ವಸಂದೇಹಕ್ಕಿಕ್ಕಿ ಕೊಲುತಿಪ್ಪುದು.
ಅದೇನು ಕಾರಣವೆಂದಡೆ:
ಮಂತ್ರವೇ ಲಿಂಗ, ಲಿಂಗವೇ ಮಂತ್ರವೆಂದರಿದು
ಲಿಂಗನೆನಹ ಸಂಬಂಧಿಸಿಕೊಳ್ಳಲರಿಯದೆ
ಲಿಂಗ ವಿರಹಿತವಾಗಿ ಮಾಡುತಿಪ್ಪರಾಗಿ.
ಅದ ಅಂಗ ಲಿಂಗ ಸಂಬಂಧಿಗಳು ಮಚ್ಚರು ನೋಡ.
ಅದೇನು ಕಾರಣವೆಂದರೆ:
ಕೆಲವು ಶೈವರುಗಳು ಮಾಡುವರಾಗಿ
ರಾಜಯೋಗವೆಂಬುವದು ಗಾಜು ಗೋಜು ನೋಡ.
ಅದನು ಲಿಂಗವಿರಹಿತವಾಗಿ
ಜ್ಞಾತೃ ಜ್ಞಾನ ಜ್ಞೇಯ ಒಂದಾದಲ್ಲಿಯೆ ಯೋಗವೆನುತಿಪ್ಪರಾಗಿ.
ಇವು ಒಂದೂ ಲಿಂಗಾಗಯೋಗದ ಹಜ್ಜೆಯಲ್ಲ ನೋಡ.
ಅದು ಕಾರಣ, ಲಿಂಗನಿಷ್ಠರು ಮಚ್ಚರು.
ಅದೇನು ಕಾರಣವೆಂದಡೆ:
ಲಿಂಗವ ತೆಗೆವಡೆ ಲಿಂಗದೊಡನೆ ಪ್ರಾಣ ಹೋಗದಾಗಿ,
ಅದೆಲ್ಲಿಯ ಯೋಗವಯ್ಯ ಭ್ರಾಂತುಯೋಗ.
ಇದು ಕಾರಣ, ನಿಮ್ಮ ಶರಣರು ಲಿಂಗಪ್ರಾಣಿಗಳು;
ಪ್ರಾಣಲಿಂಗಸಂಬಂಧಿಗಳು:
ಪ್ರಸಾದಮುಕ್ತರು

ಈ ಮೂರುಪ್ರಕಾರದಲ್ಲಿ ಕೂಡುತ್ತಿಪ್ಪರು ಶಿವಯೋಗಿಗಳು.
ಇದುಕಾರಣ ನಿಮ್ಮ ಶರಣರು
ಸ್ವಾನುಭಾವಜ್ಞಾನ ಶುದ್ಧಶಿವಯೋಗದಲ್ಲಿ
ಸ್ವರೂಪಜ್ಞಾನಿಗಳು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೬ ॥

೩೫೯

ನದಿವಾಸಿಗಳು, ವನವಾಸಿಗಳು, ಗಿರಿವಾಸಿಗಳು, ಗುಹೆವಾಸಿಗಳು,
ಇಂದ್ರಿಯ ಭಯಂಗಳಿಗಂಜಿ ಕಂದ ಮೂಲಂಗಳ ಭಕ್ಷಿಸುವ
ಕಾನನದ ಮರುಳುಗಳೆಲ್ಲ
ಲಿಂಗಪ್ರಾಣಿಗಳಿಗೆ,
ಪ್ರಾಣಲಿಂಗ ಸಂಬಂಧಿಗಳಾದ ಪರಶಿವಯೋಗಿಗಳಿಗೆ
ಸರಿಯೇ ಈ ಭ್ರಾಂತರೆಲ್ಲ?.
ಇದು ಕಾರಣ, ನಿಮ್ಮ ಶರಣರು
ಅಂಗ ಪ್ರಾಣ ಇಂದ್ರಿಯಂಗಳೆಲ್ಲವು ಲಿಂಗ ನಿವಾಸಿಗಳಾಗಿ
ಲಿಂಗದೊಳಡಗಿದ ಲಿಂಗಗ್ರಾಹಕರು ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೭ ॥

೩೬೦

ಊರನಾಶ್ರಯಿಸುವನೆ ಉಪಜೀವಿಗಳಂತೆ?
ಕಾಡನಾಶ್ರಯಿಸುವನೆ ಕರಡಿಯಂತೆ?
ಊರನಾಶ್ರಯಿಸುವನಲ್ಲ, ಕಾಡನಾಶ್ರಯಿಸುವನೂ ಅಲ್ಲ ನೋಡ.
ಊರಾವುದು ಕಾಡಾವುದು ಎಂದರಿಯದೆ
ಕಳವಳಿಸುತ್ತಿಪ್ಪರು ನೋಡ.
ಊರೆಂದರೆ: ಮಾಯಾಸಂಬಂಧವಾದ ಪಂಚಭೌತಿಕ ಗ್ರಾಮ.
ಕಾಡೆಂದರೆ: ಆ ಕಾಯವನಾಶ್ರಯಿಸಿಕೊಂಡಿಪ್ಪ
ಸಕಲ ಕರಣಂಗಳು ಕಾಣಮರುಳೆ.
ಕಾಯದ ಕರಣಂಗಳಿಗೆ ವಶಗತವಾಗಿರ್ದು
ಊರಿಗೆ ಹೊರಗಾಗಿದ್ದೆನೆಂಬ ಉಪಜೀವಿಗಳನೇನೆಂಬೆನಯ್ಯ?
ಇದುಕಾರಣ ನಿಮ್ಮ ಶರಣರು
ಕಾಯವನು ಜೀವವನು ಕರಣವನು
ಕೇವಲ ಪರಂಜ್ಯೋತಿಲಿಂಗದೊಳಗೆ ಬೆರಸಿ ಬೇರಿಲ್ಲದೆ

ಕಾಯವನು ಜೀವವನು ಕರಣವನು ಪೊದ್ದದೆ
ಮಹಾಘನಲಿಂಗಪದದೊಳಗಿಪ್ಪರಯ್ಯ
ಪ್ರಾಣಲಿಂಗ ಸಂಬಂಧಿಗಳು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೮ ॥

೩೬೧

ಆಶಾಪಾಶವೆಂಬ ಆಧಿವ್ಯಾಧಿ ಅಂಡಲೆವುತ್ತಿಪ್ಪವು ನೋಡ.
ದೋಷ ದುರ್ಗುಣವೆಂಬ ದುರಿತ ದುಃಖ
ಪೀಡಿಸುತಿಪ್ಪವು ನೋಡ.
ಸಕಲ ಕರಣಂಗಳೆಂಬ ಖಾಸದ ವ್ಯಾಧಿ ಹಿಡಿದು
ಕಳವಳಿಸುತಿಪ್ಪವು ನೋಡ.
ಈಶ್ವರೋವಾಚವ ನುಡಿದುಕೊಂಡು ನಡೆವರೆ ನಾಚವ
ಪಾಷಂಡಿ ವೇಷಧಾರಿ ಪಶುಗಳು,
ಪ್ರಾಣಲಿಂಗ ಸಂಬಂಧದ ಯೋಗವನಿವರೆತ್ತ ಬಲ್ಲರು?
ತಮ್ಮಂಗದಮೇಲೆ ಲಿಂಗವಿದ್ದು
ಅನ್ಯಮತನಾಚರಿಸುವ ಕುನ್ನಿಗಳಿಗೆ
ಪ್ರಾಣಲಿಂಗ ಸಂಬಂಧವೆಲ್ಲಿಯದೋ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೯ ॥

೩೬೨

ಇಷ್ಟಲಿಂಗ ಪ್ರಾಣಲಿಂಗವೆನುತಿಪ್ಪರು.
ಇಷ್ಟಲಿಂಗ ಪ್ರಾಣಲಿಂಗದ ಸುದ್ದಿಯನಾರುಬಲ್ಲರಯ್ಯ?
ಇಷ್ಟಲಿಂಗವನರಿದರೆ ಅನಿಷ್ಟ ಪರಿಹರವಾಗಿರಬೇಕು ನೋಡ.
ಪ್ರಾಣಲಿಂಗವನರಿದರೆ ಪ್ರಪಂಚು ನಾಸ್ತಿಯಾಗಿರಬೇಕು ನೋಡ.
ಇಷ್ಟವು ಪ್ರಾಣವು ಒಂದೆಯೆಂದರಿದು ಒಡವೆರಸಿದ ಬಳಿಕ
ಜಾಗ್ರ ಸ್ವಪ್ನ ಸುಷುಪ್ತಿಯೆಂಬ ತ್ರಿವಿಧಾವಸ್ಥೆಯಲ್ಲಿ
ಲಿಂಗವಲ್ಲದೆ ಮತ್ತೇನು ತೋರಲಾಗದು ನೋಡ.
ಆ ಮಹಾತ್ಮನು ಸರ್ವಾಂಗಪ್ರಾಣಲಿಂಗಮೂರ್ತಿ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೦ ॥

೩೬೩

ಅಂಗಲಿಂಗ ಸಂಬಂಧದ ನಿಲುಕಡೆಯನರಿಯದೆ
ಅಘೋರತಪವ ಮಾಡಿದರೇನು?

ಗಾಳಿಯಾಹಾರವ ಕೊಂಡರೇನು?
ತರಗೆಲೆಯ ಮೆದ್ದರೇನು?
ಗಿರಿಗಹ್ವರದೊಳಗಿದ್ದರೇನು?
ಅಂಗಲಿಂಗಸಂಬಂಧಿಗಳಾಗಬಲ್ಲರೆ
ಅಂಗಲಿಂಗಸಂಗದಿಂದಲ್ಲದೆ
ಅಂತರಂಗದಲ್ಲಿ ಅರುಹು ತಲೆದೋರದು;
ಅಂತರಂಗದಲ್ಲಿ ಅರುಹು ತಲೆದೋರಿದಲ್ಲದೆ
ಆತ್ಮಲಿಂಗದ ಆದ್ಯಂತವನರಿಯಬಾರದು.
ಆತ್ಮಲಿಂಗದ ಆದ್ಯಂತವನರಿಯದೆ ಅಘೋರತಪವಮಾಡಿದರೆ
ಅದೇತಕ್ಕೂ ಪ್ರಯೋಜನವಲ್ಲ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೧ ॥

೩೬೪

ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ,
ಧ್ಯಾನ, ಧಾರಣ, ಸಮಾಧಿ ಎಂದು
ಈಯೆಂಟು ಅಷ್ಟಾಂಗಯೋಗಂಗಳು.
ಈ ಯೋಗಂಗಳೊಳಗೆ ಉತ್ತರಭಾಗೆ, ಪೂರ್ವಭಾಗೆಯೆಂದು
ಎರಡು ಪ್ರಕಾರವಾಗಿಹವು.
ಯಮಾದಿ ಪಂಚಕವೈದು ಪೂರ್ವಯೋಗ;
ಧ್ಯಾನ, ಧಾರಣ, ಸಮಾಧಿಯೆಂದು ಮೂರು ಉತ್ತರಯೋಗ.
ಇವಕ್ಕೆ ವಿವರ:
ಇನ್ನು ಯಮಯೋಗ ಅವಕ್ಕೆ ವಿವರ:
ಅನೃತ, ಹಿಂಸೆ, ಪರಧನ, ಪರಸ್ತ್ರೀ, ಪರನಿಂದೆ
ಇಂತಿವೈದನು ಬಿಟ್ಟು
ಲಿಂಗಪೂಜೆಯ ಮಾಡುವುದೀಗ ಯಮಯೋಗ.
ಇನ್ನು ನಿಯಮಯೋಗ- ಅದಕ್ಕೆ ವಿವರ:
ಬ್ರಹ್ಮಚಾರಿಯಾಗಿ ನಿರಪೇಕ್ಷನಾಗಿ
ಆಗಮಧರ್ಮಂಗಳಲ್ಲಿ ನಡೆವವನು.
ಶಿವನಿಂದೆಯ ಕೇಳದಿಹನು.
ಇಂದ್ರಿಯಂಗಳ ನಿಗ್ರಹವ ಮಾಡುವವನು.
ಮಾನಸ, ವಾಚಸ, ಉಪಾಂಶಿಕವೆಂಬ ತ್ರಿಕರಣವಲ್ಲಿ
ಪ್ರಣವಪಂಚಾಕ್ಷರಿಯ ಸ್ಮರಿಸುತ್ತ ಶುಚಿಯಾಗಿಹನು.

ಅಶುಚಿತ್ತವ ಬಿಟ್ಟು ವಿಭೂತಿ ರುದ್ರಾಕ್ಷಿಯ ಧರಿಸಿ
ಶಿವಲಿಂಗಾರ್ಚನತತ್ಪರನಾಗಿ ಪಾಪಕ್ಕೆ ಭೀತನಾಗಿಹನು.
ಇದು ನಿಯಮಯೋಗ.
ಇನ್ನು ಆಸನಯೋಗ- ಅದಕ್ಕೆ ವಿವರ:
ಸಿದ್ಧಾಸನ, ಪದ್ಮಾಸನ, ಸ್ವಸ್ತಿಕಾಸನ, ಅರ್ಧಚಂದ್ರಾಸನ,
ಪರ್ಯಂಕಾಸನ ಈ ಐದು ಆಸನಯೋಗಂಗಳಲ್ಲಿ
ಸ್ವಸ್ಥಿರಚಿತ್ತನಾಗಿ ಮೂರ್ತಿಗೊಂಡು
ಶಿವಲಿಂಗಾರ್ಚನೆಯ ಮಾಡುವುದೀಗ ಆಸನಯೋಗ.
ಇನ್ನು ಪ್ರಾಣಾಯಾಮ- ಅದಕ್ಕೆ ವಿವರ:
ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ,
ಕೃಕರ, ದೇವದತ್ತ, ಧನಂಜಯವೆಂಬ ದಶವಾಯುಗಳು.
ಇವಕ್ಕೆ ವಿವರ:
ಪ್ರಾಣವಾಯು ಇಂದ್ರ ಲವರ್ಣನೀ.
ಹೃದಯಸ್ಥಾನದಲ್ಲಿರ್ದು
ಉಂಗುಷ್ಠತೊಡಗಿ ವಾ[ಣಾ]ಗ್ರಪರಿಯಂತರದಲ್ಲಿ
ಸತ್ತ್ವಾಣಿಸಿಕೊಂಡು ಉಚ್ಛ್ವಾಸ ನಿಶ್ವಾಸಂಗೆಯ್ದು
ಅನ್ನ ಜೀರ್ಣೀಕರಣವಂಕ ಮಾಡಿಸುತ್ತಿಹುದು.
ಅಪಾನವಾಯು ಹರಿತವರ್ಣ.
ಗುಧಸ್ಥಾನದಲ್ಲಿರ್ದು
ಮಲಮೂತ್ರಂಗಳ ವಿಸರ್ಜನೆಯಂ ಮಾಡಿಸಿ
ಅಧೋದ್ವಾರಮಂ ಬಲಿದು
ಅನ್ನರಸ ವ್ಯಾಪ್ತಿಯಂ ಮಾಡಿಸುತ್ತಿಹುದು.
ವ್ಯಾನವಾಯು ಗೋಕ್ಷಿರವರ್ಣ.
ಸರ್ವಸಂದಿಗಳಲ್ಲಿರ್ದು
ನೀಡಿಕೊಂಡಿರ್ದುದನು ಮುದುಡಿಕೊಂಡಿರ್ದುದನು ಅನುಮಾಡಿಸಿ
ಅನ್ನಪಾನವ ತುಂಬಿಸುತ್ತಿಹುದು.
ಉದಾನವಾಯು ಎಳೆಮಿಂಚಿನವರ್ಣ.
ಕಂಠಸ್ಥಾನದಲ್ಲಿರ್ದು
ಸೀನುವ, ಕೆಮ್ಮುವ, ಕನಸ ಕಾಣುವ, ಏಳಿಸುವ
ಛರ್ದಿನಿರೋಧನಂಗಳಂ ಮಾಡಿ
ಅನ್ನ ರಸವ ಆಹಾರಸ್ಥಾನಂಗೆಯಿಸುತ್ತಿಹುದು.
ಸಮಾನವಾಯು ನೀಲವರ್ಣ.

ನಾಭಿಸ್ಥಾನದಲ್ಲಿರ್ದು
ಆಪಾದಮಸ್ತಕ ಪರಿಯಂತರ ದೇಹಮಂ ಪಸರಿಸಿಕೊಂಡಂಥಾ
ಅನ್ನ ರಸವನು
ಎಲ್ಲಾ [ಲೋ]ಮನಾಳಂಗಳಿಗೆ ಹಂಚಿಕ್ಕುವದು.
ಈ ಐದು ಪ್ರಾಣಪಂಚಕ.
ಇನ್ನು ನಾಗವಾಯು ಪೀತವರ್ಣ.
[ಲೋ]ಮನಾಳಂಗಳಲ್ಲಿರ್ದು
ಚಲನೆಯಿಲ್ಲದೆ ಹಾಡಿಸುತ್ತಿಹುದು.
ಕೂರ್ಮವಾಯು ಶ್ವೇತವರ್ಣ.
ಉದರ ಲಲಾಟದಲ್ಲಿರ್ದು
ಶರೀರಮಂ ತಾಳ್ದು [ದೇಹಮಂ] ಪುಷ್ಟಿಯಂ ಮಾಡಿಕೊಂಡು
ಬಾಯ ಮುಚ್ಚುತ್ತ ತೆರೆವುತ್ತ ನೇತ್ರದಲ್ಲಿ
ಉನ್ಮೀಲನ ನಿಮೀಲನವಂ ಮಾಡಿಸುತ್ತಿಹುದು.
ಕೃಕರವಾಯು ಅಂಜನವರ್ಣ.
ನಾಸಿಕಾಗ್ರದಲ್ಲಿರ್ದು
ಕ್ಷುಧಾದಿ ಧರ್ಮಂಗಳಂ ನೆಗಳಿ
ಗಮನಾಗಮನಂಗಳಂ ಮಾಡಿಸುತ್ತಿಹುದು.
ದೇವದತ್ತವಾಯು ಸ್ಫಟಿಕವರ್ಣ.
ಗುಹ್ಯ [ಕಟಿ] ಸ್ಥಾನದಲ್ಲಿರ್ದು
ಕುಳ್ಳಿರ್ದಲ್ಲಿ ಮಲಗಿಸಿ, ಮಲಗಿರ್ದಲ್ಲಿ ಏಳಿಸಿ
ನಿಂದಿರಿಸಿ ಚೇತರಿಸಿ ಒರಲಿಸಿ ಮಾತಾಡಿಸುತ್ತಿಹುದು.
ಧನಂಜಯವಾಯು ನೀಲವರ್ಣ.
ಬ್ರಹ್ಮರಂಧ್ರದಲ್ಲಿರ್ದು
ಕರ್ಣದಲ್ಲಿ ಸಮುದ್ರಘೋಷಮಂ ಘೋಷಿಸಿ
ಮರಣಕಾಲಕ್ಕೆ ನಿರ್ಘೋಷಮಪ್ಪುದು.
ಈ ಪ್ರಕಾರದಲ್ಲಿ ಮೂಲವಾಯುವೊಂದೇ
ಸರ್ವಾಂಗದಲ್ಲಿ ಸರ್ವತೋಮುಖವಾಗಿ ಚರಿಸುತ್ತಿಹುದು.
ಆ ಪವನದೊಡನೆ ಪ್ರಾಣ ಕೂಡಿ
ಪ್ರಾಣದೊಡನೆ ಪವನ ಕೂಡಿ
ಹೃದಯಸ್ಥಾನದಲ್ಲಿ ನಿಂದು ಹಂಸನೆನಿಸಿಕೊಂಡು
ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ,
ವಿಶುದ್ಧಿ, ಆಗ್ನೇಯ ಎಂಬ ಷಡುಚಕ್ರದಳಂಗಳಮೇಲೆ ಸುಳಿದು

ನವನಾಳಂಗಳೊಳಗೆ ಚರಿಸುತ್ತಿಹುದು.
ಅಷ್ಟದಳಂಗಳೇ ಆಶ್ರಯವಾಗಿ
ಅಷ್ಟದಳಂಗಳ ಮೆಟ್ಟಿ ಚರಿಸುವ ಹಂಸನು
ಅಷ್ಟದಳಂಗಳಿಂದ ವಿಶುದ್ಧಿಚಕ್ರವನೆಯ್ದಿ
ಅಲ್ಲಿಂದ ನಾಸಿಕಾಗ್ರದಲ್ಲಿ
ಹದಿನಾರಂಗುಲ ಪ್ರಮಾಣ ಹೊರಸೂಸುತ್ತಿಹುದು;
ಹನ್ನೆರಡಂಗುಲ ಪ್ರಮಾಣ ಒಳಗೆ ತುಂಬುತ್ತಿಹುದು.
ಹೀಂಗೆ ರೇಚಕ ಪೂರಕದಿಂದ ಮರುತ ಚರಿಸುತ್ತಿರಲು
ಸಮಸ್ತ ಪ್ರಾಣಿಗಳ ಆಯುಷ್ಯವು ದಿನ ದಿನಕ್ಕೆ ಕುಂದುತ್ತಿಹುದು.
ಹೀಂಗೆ ಈಡಾ ಪಿಂಗಳದಲ್ಲಿ ಚರಿಸುವ
ರೇಚಕ ಪೂರಕಂಗಳ ಭೇದವನರಿದು
ಮನ ಪವನಂಗಳ ಮೇಲೆ ಲಿಂಗವ ಸಂಬಂಧಿಸಿ
ಮನ ಪವನ ಪ್ರಾಣಂಗಳ ಲಿಂಗದೊಡನೆ ಕೂಡಿ
ಲಿಂಗ ಸ್ವರೂಪವ ಮಾಡಿ
ವಾಯು ಪ್ರಾಣತ್ವವ ಕಳೆದು ಲಿಂಗ ಪ್ರಾಣಿಯ ಮಾಡಿ
ಹೃದಯ ಕಮಲ ಮಧ್ಯದಲ್ಲಿ ಪ್ರಣವವನುಚ್ಚರಿಸುತ್ತ
ಪರಶಿವ ಧ್ಯಾನದಲ್ಲಿ ತರಹರವಾಗಿಪ್ಪುದೀಗ ಪ್ರಾಣಾಯಾಮ.
ಇನ್ನು ಪ್ರತ್ಯಾಹಾರಯೋಗ- ಅದಕ್ಕೆ ವಿವರ:
ಆಹಾರದಿಂ ನಿದ್ರೆ, ನಿದ್ರೆಯಿಂ ಇಂದ್ರಿಯಂಗಳು,
ಇಂದ್ರಿಯಂಗಳಿಂದ ವಿಷಯಂಗಳು ಘನವಾಗುತ್ತಿಹುವು ನೋಡ.
ಆ ವಿಷಯದಿಂದ ದುಃಕರ್ಮಂಗಳ ಮಿಗೆ ಮಾಡಿ
ಜೀವಂಗೆ ಭವ ಭವದ ಬಂಧನವನೊಡಗೂಡಿ
ಆಯಸಂ ಬಡುತ್ತಿಪ್ಪರಜ್ಞಾನ ಕರ್ಮಿಗಳು;
ಈ ಅವಸ್ಥೆಯ ಹೊಗದಿಹರು ಸುಜ್ಞಾನಿ ಧರ್ಮಿಗಳು.
ಅದರಿಂದಲಾಹಾರಮಂ ಕ್ರಮ ಕ್ರಮದಿಂದ
ಉದರಕ್ಕೆ ಹವಣಿಸುತ್ತ ಬಹುದು.
ಗುರು ಕೃಪೆಯಿಂದ ಈ ಪ್ರಕಾರದಲ್ಲಿ
ಸರ್ವೇಂದ್ರಿಯಂಗಳನು ಲಿಂಗಮುಖದಿಂದ
ಸಾವಧಾನವ ಮಾಡಿಕೊಂಡಿಪ್ಪುದೀಗ ಪ್ರತ್ಯಾಹಾರಯೋಗ.
ಈ ಐದು ಪೂರ್ವಯೋಗಂಗಳು.
ಇನ್ನು ಧ್ಯಾನ, ಧಾರಣ, ಸಮಾಧಿಯೆಂದು ಮೂರು
ಉತ್ತರಯೋಗಂಗಳು.

ಇನ್ನು ಧ್ಯಾನಯೋಗ- ಅದಕ್ಕೆ ವಿವರ:
ಅಂತರಂಗದ ಶುದ್ಧ ಪರಮಾತ್ಮ ಲಿಂಗವನೇ
ಶಿವಲಿಂಗ ಸ್ವರೂಪವ ಮಾಡಿ
ಕರಸ್ಥಲಕ್ಕೆ ಶ್ರೀಗುರು ತಂದು ಕೊಟ್ಟನಾಗಿ
ಆ ಕರಸ್ಥಲದಲ್ಲಿದ್ದ ಶಿವಲಿಂಗವೇ
ಪರಮಾತ್ಮ ಲಿಂಗ[ರ್ಥ]ಚಿಪ್ಪವೆಂದರಿದು
[ಆ ಲಿಂಗವನೇ]
ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ,
ಆಜ್ಞೇಯ, ಬ್ರಹ್ಮರಂಧ್ರ ಮುಖ್ಯವಾದ ಸ್ಥಾನಂಗಳಲ್ಲಿ
ಆ ಶಿವಲಿಂಗಮೂರ್ತಿಯನೆ
ಆಹ್ವಾನ ವಿಸರ್ಜನೆಯಿಲ್ಲದೆ ಧ್ಯಾನಿಪುದೀಗ ಧ್ಯಾನಯೋಗ.
ಆ ಲಿಂಗವ ಭಾವ, ಮನ, ಕರಣ ಮುಖ್ಯವಾದ
ಸರ್ವಾಂಗವಲ್ಲಿ ಧರಿಸುವುದೀಗ ಧಾರಣಯೋಗ.
ಆ ಸತ್ಕ್ರಿಯಾ ಜ್ಞಾನಯೋಗದಿಂದ
ಪ್ರಾಣಂಗೆ ಶಿವಕಳೆಯ ಸಂಬಂಧಿಸಿ
ಇಷ್ಟ, ಪ್ರಾಣ, ಭಾವವೆಂಬ
ಲಿಂಗತ್ರಯವನು ಏಕಾಕಾರವ ಮಾಡಿ
ಅಖಂಡ ಪರಿಪೂರ್ಣ ಕೇವಲ ಪರಂಜ್ಯೋತಿ ಸ್ವರೂಪವಪ್ಪ
ಮಹಾಲಿಂಗದೊಳಗೆ ಸಂಯೋಗವಾಗಿ
ಭಿನ್ನವಿಲ್ಲದೆ ಏಕಾರ್ಥವಾಗಿಹುದೀಗ ಸಮಾಧಿಯೋಗ.
ಇಂತೀ ಅಷ್ಟಾಂಗಯೋಗದಲ್ಲಿ ಶಿವಲಿಂಗಾರ್ಚನೆಯ ಮಾಡಿ
ಶಿವತತ್ವದೊಡನೆ ಕೂಡುವುದೀಗ ಲಿಂಗಾಂಗಯೋಗ.
ಇನ್ನು ಕರ್ಮಕಾಂಡಿಗಳು ಮಾಡುವ ಕರ್ಮಯೋಗಂಗಳು-
ಅವಾವವೆಂದಡೆ:
ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರವೆಂಬ
ಈ ಐದನು ಲಿಂಗವಿರಹಿತವಾಗಿ ಮಾಡುತ್ತಿಪ್ಪರಾಗಿ
ಈ ಐದು ಕರ್ಮಯೋಗಂಗಳು.
ಅವರು ಲಕ್ಷಿಸುವಂಥಾ ವಸ್ತುಗಳು
ಉತ್ತರಯೋಗವಾಗಿ ಮೂರು ತೆರ.
ಅವಾವವೆಂದೆಡೆ:
ನಾದಲಕ್ಷ, ಬಿಂದುಲಕ್ಷ, ಕಲಾಲಕ್ಷವೆಂದು ಮೂರು ತೆರ.
ನಾದವೇ ಸಾಕ್ಷಾತ್ ಪರತತ್ವವೆಂದೇ ಲಕ್ಷಿಸುವರು.
ಬಿಂದುವೇ ಅಕಾರ, ಉಕಾರ, ಮಕಾರ.

ಈ ಮೂರು ಶುದ್ಧಬಿಂದು ಸಂಬಂಧವೆಂದೂ.
ಆ ಶುದ್ಧ ಬಿಂದುವೇ ಕೇವಲ ದಿವ್ಯ ಪ್ರಕಾಶವನುಳ್ಳುದೆಂದೂ
ಲಕ್ಷಿಸುವರು.
ಕಲೆಯೇ ಚಂದ್ರನ ಕಲೆಯ ಹಾಂಗೆ,
ಸೂರ್ಯನ ಕಿರಣಂಗಳ ಹಾಂಗೆ,
ಮಿಂಚುಗಳ ಪ್ರಕಾಶದ ಹಾಂಗೆ,
ಮುತ್ತು, ಮಾಣಿಕ್ಯ, ನವರತ್ನದ ದೀಪ್ತಿಗಳ ಹಾಂಗೆ,
ಪ್ರಕಾಶಮಯವಾಗಿಹುದೆಂದು ಲಕ್ಷಿಸುವುದೀಗ ಕಲಾಲಕ್ಷ್ಯ.
ಈ ಎಂಟು ಇತರ ಮತದವರು ಮಾಡುವ ಯೋಗಂಗಳು.
ಇವ ಲಿಂಗವಿರಹಿತವಾಗಿ ಮಾಡುವರಾಗಿ ಕರ್ಮಯೋಗಂಗಳು.
ಈ ಕರ್ಮಕೌಶಲ್ಯದಲ್ಲಿ ಲಿಂಗವಿಲ್ಲ ನೋಡ.
ಅದುಕಾರಣ ಇವ ಮುಟ್ಟಲಾಗದು.
ಇನ್ನು ವೀರಮಾಹೇಶ್ವರರುಗಳ ಲಿಂಗಸಂಧಾನವೆಂತೆಂದರೆ:
ಬ್ರಹ್ಮರಂಧ್ರದಲ್ಲಿಪ್ಪ ನಾದ ಚೈತನ್ಯವಪ್ಪ ಪರಮ ಚಿತ್ಕಲೆಯನೇ
ಭಾವ, ಮನ, ಕರದಲ್ಲಿ ಶ್ರೀಗುರು ತಂದು
ಸಾಹಿತ್ಯವ ಮಾಡಿದನಾಗಿ
ಭಾವದಲ್ಲಿ ಸತ್ವರೂಪವಪ್ಪ ಭಾವಲಿಂಗವೆನಿಸಿ
ಪ್ರಾಣದಲ್ಲಿ ಚಿತ್ ಸ್ವರೂಪವಪ್ಪ ಪ್ರಾಣಲಿಂಗವೆನಿಸಿ
ಕರಸ್ಥಲದಲ್ಲಿ ಆನಂದ ಸ್ವರೂಪವಪ್ಪ ಇಷ್ಟಲಿಂಗವೆನಿಸಿ
ಒಂದೇ ವಸ್ತು ತನು, ಮನ, ಭಾವಂಗಳಲ್ಲಿ
ಇಷ್ಟ, ಪ್ರಾಣ, ಭಾವವಾದ ಭೇದವನರಿದು
ಇಷ್ಟಲಿಂಗವ ದೃಷ್ಟಿಯಿಂದ ಗ್ರಹಿಸಿ
ಪ್ರಾಣಲಿಂಗವ ಮನಜ್ಞಾನದಿಂದ ಗ್ರಹಿಸಿ
[ತೃಪ್ತಿ]ಲಿಂಗವ ಭಾವಜ್ಞಾನದಿಂದ ಗ್ರಹಿಸಿ
ಈ ಲಿಂಗತ್ರಯವಿಡಿದಾಚರಿಸಿ ಲಿಂಗದೊಡನೆ ಕೂಡಿ
ಲಿಂಗವೇ ತಾನು ತಾನಾಗಿ
ವಿರಾಜಿಸುತ್ತಿಪ್ಪುದೀಗ ಶಿವಯೋಗ ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೨ ॥

೩೬೫

ಚಿತ್ತದ ಕಳೆಯಲ್ಲಿ ಸದ್ವಿವೇಕವೆಂಬ ಲಿಂಗಕಳೆ ಉದಯಿಸಿ
ಮಹಾಜ್ಞಾನ ಪ್ರಕಾಶವಾಗಿ ಮೆರೆವುತ್ತಿಹ ಚಿಲ್ಲಿಂಗವು

ಶರಣನ ದೇಹವೆಂಬ ಭೂಮಿಯ ಮರೆಯಲ್ಲಿ
ಅಡಗಿಪ್ಪುದು ನೋಡ.
ನೆಲನ ಮರೆಯ ನಿಧಾನದಂತೆ,
ಷಡಾಧಾರದಲ್ಲಿ ಷಡಾದಿಯಾಗಿ ಷಡಾತ್ಮಕನಾಗಿಪ್ಪುದು ನೋಡ.
ಪಂಚೇಂದ್ರಿಯ ದ್ವಾರಂಗಳಲ್ಲಿ ಪಂಚವದನನಾಗಿ
ಪ್ರಭಾವಿಸುತ್ತಿಪ್ಪುದು ನೋಡ.
ದಶವಾಯುಗಳ ಕೂಡಿ, ದೆಸೆದೆಸೆಗೆ ನಡೆವುತ್ತ
ವಿಶ್ವಚೈತನ್ಯನಾಗಿಪ್ಪುದು ನೋಡ.
ಸರ್ವಾಂಗದಲ್ಲಿಯೂ ತನ್ಮಯವಾಗಿಪ್ಪುದು ನೋಡ.
ಮನದಲ್ಲಿ ಮತಿಯ ಕಣಜ, ಮಾತಿನಲ್ಲಿ ಜ್ಯೋತಿರ್ಲಿಂಗವಾಗಿ
ಎನ್ನ ಬ್ರಹ್ಮರಂಧ್ರದಲ್ಲಿ ತೊಳಗಿ ಬೆಳಗುವ ಪರಂಜ್ಯೋತಿ ನೀನೇ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೩ ॥

೩೬೬

ಊರೊಳಗೆ ಅನೇಕ ಜ್ಯೋತಿಯ ಕಂಡೆ.
ಬಾಗಿಲೊಳಗೆ ನವರತ್ನವ ಕಂಡೆ.
ಮೇಲಣ ಮಾಣಿಕಕ್ಕೆ ಬೆಲೆಯಿಡಲಾರಳವಲ್ಲ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೪ ॥

೩೬೭

ಎನ್ನಂತರಂಗದೊಳಗಣ ಆತ್ಮಲಿಂಗ
ಅನಂತ ಜ್ಯೋತಿಯಂತಿಪ್ಪುದು ನೋಡ.
ಬಹಿರಂಗದಲ್ಲಿ ನವರತ್ನದಂತಿಪ್ಪುದಯ್ಯ.
ತಿಂಗಳ ಸೂಡಿದಭವನು
ಭವಭಂಗಿತರಿಗಾರಿಗೂ ಗೋಚರಿಸನು ಕಾಣ.
ಲಿಂಗನಿಷ್ಠಾಂಗಿಗಳಿಗೆ
ಮಂಗಳಮಯನಾಗಿ ತೋರ್ಪನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭು ತಾನೆ
ಕಾಣಿರೋ. ॥ ೩೫ ॥

೩೬೮

ಆಧಾರದೊಳಗಣ ಜ್ಯೋತಿ ಮೂಜಗವ ನುಂಗಿದುದ ಕಂಡೆನಯ್ಯ.
ಮೂಜಗ ಸತ್ತು ಮೂಜಗದೊಡೆಯನುಳಿದುದು
ಸೋಜಿಗವೆಂದೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೬ ॥

೩೬೯

ಹಾರುವ ಹಕ್ಕಿಗೆ ಗರಿಯಿಲ್ಲ ನೋಡ.
ಊರೊಳಗಿಪ್ಪ ಕಪಿಗೆ ತಲೆಯಿಲ್ಲ ನೋಡ.
ಹಾರುವ ಹಕ್ಕಿಗೆ ಗರಿಬಂದು
ಊರೊಳಗಿಪ್ಪ ಕಪಿಗೆ ತಲೆ ಬಂದಲ್ಲದೆ
ತಾನಾರೆಂಬುದನರಿಯಬಾರದು.
ತನ್ನಾದಿಯ ಶಿವತತ್ವವ ಭೇದಿಸಲರಿಯದೆ,
ವೇದಾಗಮ ಮುಖದಿಂದ ನಿಮ್ಮನರಿದೆನೆಂಬ
ಅಜ್ಞಾನಿಗಳನೇನೆಂಬೆನಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೭ ॥

೩೭೦

ಕುಂಡಲಿಯ ಒಲೆಯ ಭಾಂಡದಲ್ಲಿ ಮುಂಡಿಸಿಪ್ಪ
ತುಂಡುಮುಂಡುಕಾರ್ತಿ ಜಗವನೆಲ್ಲಾ ಬಂಡುಮಾಡುತ್ತಿದಾಳೆ
ನೋಡಾ.
ಕುಂಡಲಿಯ ಒಲೆಯಲ್ಲಿ ಕೆಂಡವ ಚಾಚಲು ಭಾಂಡವೊಡೆದು
ತಂಡು ಮುಂಡುಕಾರ್ತಿಯ ತಾಮಸ ಬೆಂದು
ಕುಂಡಲಿಯ ಸರ್ಪನೆದ್ದು ಮಂಡೆವಾಲನುಂಡು
ಮಡಿದುದ ಕಂಡೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೮ ॥

೩೭೧

ಐದೂರ ಹೊಲದಲಿ ಕಟ್ಟಿ ಪಶುವನು
ಆರೂರ ಹೊಕ್ಕು ಅರಿಸಿಹೆನೆಂದು ಹೋದರೆ

ಮೂರೇ ಮನೆಯಲ್ಲಿ ಈರುಗಾರಾಗಲಾಗಿ
ಅರಸಬಂದಯ್ಯಗಳು ಆಸತ್ತು ಹೋದರಲ್ಲ.
ಅರಸುವ ಅರುಹೆ ತಾನೆಂದು ತಿಳಿಯಲು
ಮೂರಾರಕ್ಷರವಾಗಿ ತೋರುವ
ಮೂಲಾಕ್ಷರಾತ್ಮಕ ತಾನೆ ತಪ್ಪದೆಂಬೆನಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೯ ॥

೩೭೨

ನಾದ, ಬಿಂದು, ಕಳಾ ಭೇದವ ತಿಳಿದಲ್ಲದೆ
ಆರಕ್ಷರವಾದ ತೆರನನರಿಯಬಾರದು.
ಆರಕ್ಷರಕ್ಕೆ ಮೂಲಪ್ರಣವವ ತಿಳಿದಲ್ಲದೆ
ನಾದ ತಲೆದೋರದು.
ನಾದ ಬೆಳಗಿನ ಕಳೆಯ ನೋಡಿ ಕಂಡಲ್ಲದೆ
ರಾಜ ಶಿವಯೋಗಿಯಾಗಬಾರದು.
ರಾಜ ಶಿವಯೋಗವೆಂಬುವದು
ಆದಿಯಲ್ಲಿ ಶಿವಬೀಜವಾದ
ಮಹಾಮಹಿಮನಿಗೆ ಸಾಧ್ಯವಪ್ಪುದಲ್ಲದೆ
ತ್ರೈಜಗದಲಾರಿಗೂ ಅಸಾಧ್ಯ ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೦ ॥

೩೭೩

ಆದಿಯಾಧಾರದಲ್ಲಿ ಆದಿಲಿಂಗವ ಕಂಡೆನಯ್ಯ.
ಆದಿಲಿಂಗದ ಸಂಧಾನದ ಭೇದಾದಿಭೇದದಿಂದ
ಮೂಲ ಪ್ರಣವವ ತಿಳಿದು
ನಾದ ಬೆಳಗಿನ ಕಳೆಯ ನೋಡಿ ಕಂಡೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೧ ॥

೩೭೪

ಮೊಸಳೆಯ ಹಿಡಿದ ಮೊಣ್ಣ ಮಂಡಲದ ವಿಷಪತ್ತಿ
ಜಗವೆಲ್ಲ ಮಸುಳಿಸಿ ಮರೆದೊರಗಿದುದ ಕಂಡೆನಯ್ಯ.

ವಿಷದ ಹೊಗೆಯನು ಕೆಡಿಸಿ ಮೊಸಳೆಯ ಬಿಡಿಸಿಕೊಂಬ
ಅಸಮಾನರನಾರನು ಕಾಣೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೨ ॥

೩೭೫

ಕಾಳರಾತ್ರೆಯ ಮನೆಯ ಮಂಟಪದ ಕೋಣೆ ಕೋಣೆಗಳೊಳಗೆ
ಏಳೆಂಟು ಕೋಣಗಳು ಹೂಣಿ ಹೊಡೆದಾಡುತ್ತಿವೆ ನೋಡ.
ಭಾನುವಿನ ಉದಯಕ್ಕೆ ಕೋಣ ಸತ್ತುದ ಕಂಡು
ಪ್ರಾಣವೇ ಲಿಂಗವಾಯಿತ್ತೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೩ ॥

೩೭೬

ಚಂದ್ರಮನ ರಾಹುವೆಡೆಗೊಳಲು
ಪುರ ನಿಂದಿರಿವುತ್ತಿದೆ ನೋಡ.
ಮಂದಾರಗಿರಿಯ ಸಲಿಲ ಮುಂಜೂರಲೊಸರಲು
ನಿಂದಿರುವುದು ಕೆಟ್ಟು ನಿಜ ನಿಂದಿತ್ತಯ್ಯ ಎನ್ನ ತಂದೆ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೪ ॥

೩೭೭

ನೂಲೆಳೆಯ ತೋರದ ಪಶುವಿಂಗೆ
ಮೇರುವೆಯ ತೋರ ಕೆಚ್ಚಲು ನೋಡ ಅಯ್ಯ.
ಅದಕ್ಕೆ ಕೋಡೆರಡಿಲ್ಲ ನೋಡ.
ಅದು ಮೊಲೆಗೊಕ್ಕುಳಹಾಲ ಕರೆವುದು.
ಕರೆವಾತಗೆ ಕೈಯಿಲ್ಲ;
ಕುಡಿವಾತಗೆ ಬಾಯಿಲ್ಲ ನೋಡ.
ಕೈಯಿಲ್ಲದೆ ಕರೆದು ಬಾಯಿಲ್ಲದೆ ಉಂಡು
ತೃಪ್ತಿಯಿಲ್ಲದೆ ಪರಿಣಾಮಿಸಬಲ್ಲಾತನಲ್ಲದೆ
ಶಿವಶರಣನಲ್ಲ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೫ ॥

೩೭೮

ತಲೆವಾಲೊಸರಲು
ನೆಲ ಬೆಂದು ನೀರರತು
ಕಿಚ್ಚು ಕೆಟ್ಟಿತ್ತು ನೋಡ
ಗಾಳಿಯ ದೂಳಿಯ ದಾಳಿನಿಂದು
ಅಂಬರದ ಸಂಭ್ರಮವಡಗಿತ್ತು ನೋಡ.
ಹಾಲಕುಡಿದ ಶಿಸು ಸತ್ತು ತಾನು ತಾನಾದುದ
ಏನೆಂದುಪಮಿಸುವೆನಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೬ ॥

೩೭೯

ಅಂಬರದ ಮಂಡಲದಲ್ಲಿ ಜಿವಾದಿತ್ಯನುದಯವಾಗಲು
ಅಂಬುಜ ಉದಯವಾಗಿ
ಅಮರಗಣಂಗಳು ಸಂಭ್ರಮಿಸುತ್ತಿದಾರೆ ನೋಡ.
ಅಮರಗಣ ತಿಂಥಿಣಿಯೊಳಗೆ
ಅನುಪಮ ಮಹಿಮನ ಕಂಡು
ಅಪ್ಪಿ ಅಗಲದೆ ಅಪ್ರತಿಮನಾಗಿರ್ದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೭ ॥

೩೮೦

ಪಿಂಡಾಂಡದ ಮೇಲೊಂದು ತುಂಬಿದ ಭಾಂಡೆಯ ಕಂಡೆನಯ್ಯ.
ಪಿಂಡಾಡವ ಹೊದ್ದದೆ ಅಖಂಡಮಯವಾಗಿದೆ ನೋಡ.
ಆ ಭಾಂಡವಯೆನ್ನ ಮಂಡೆಯ ಮೇಲೆ ಹೊತ್ತಿಪ್ಪೆನಯ್ಯ.
ಮೂಲಜ್ಞಾನಾಗ್ನಿಯೆದ್ದು ಮೇಲಣ ಕಮಲವ ತಾಗಲು
ಕಮಲದೊಳಗಣ ಕೊಡ ಕೊಡದೊಳಗಣ ಉದಕ
ಉಕ್ಕಿ ಶರೀರವ ಮೇಲೊಗಲು
ಪಿಂಡ ಕರಗಿ ಅಖಂಡಮಯನಾದೆನು.
ಅಮೃತ ಬಿಂದುವ ಸೇವಿಸಿ
ನಿತ್ಯಾನಿತ್ಯವ ಗೆದ್ದು
ನಿರ್ಮಲ ನಿರಾವರಣನಾದೆನು.
ಸೀಮೆಯ ಮೀರಿ ನಿಸ್ಸೀಮನಾದೆನು.

ಪರಮ ನಿರಂಜನನನೊಡಗೂಡಿ
ಮಾಯಾರಂಜನೆಯಳಿದು
ನಿರಂಜನನಾಗಿದ್ದೆನು ಕಾಣಾ.
ಸಮಸ್ತ ವಿಶ್ವಪ್ರಂಪಂಚಿಗೆ ಹೊರಗಾಗಿ
ನಿಃಪ್ರಪಂಚ ನಿರ್ಲೇಪನಾಗಿರ್ದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೮ ॥

೩೮೧

ಭವನಾಶಿನಿಯೆಂಬ ಶಿವಾಣಿಯ ಶಿರದಲ್ಲಿ
ಜಗಂಜ್ಯೋತಿಯ ಕಂಡೆನಯ್ಯ.
ಅದು ಹಗಲಿರುಳನರಿಯದೆ ಜಗಜಗಿಸುತ್ತಿದ್ದುದು ನೋಡ.
ಜಗಂಜ್ಯೋತಿಯ ಬೆಳಗಿನೊಳಗೆ
ಅಗಣಿತ ಮಹಿಮನಿದ್ದಾನೆ ನೋಡ.
ಆ ಅಪ್ರಮಾಣಲಿಂಗದೊಳಗೆ ನಾನಿರ್ದೆನು ಕಾಣಾ.
ಅನುಪಮ ಮಹಿಮ ಮಹಾಲಿಂಗಗುರು
ಶಿವಸಿದ್ಧೇಶ್ವರಾಯೆಂಬುದಕ್ಕೆ
ತೆರಹಿಲ್ಲ ನೋಡಿರೇ. ॥ ೪೯ ॥

೩೮೨

ನೆಲನಿಲ್ಲದ ಭೂಮಿಯಲ್ಲಿ ಒಂದು ತಲೆ ಹುಟ್ಟಿ
ತಲೆ ಹಲವು ಮುಖವಾಗಿದೆ.
ಅದರ ನೆಲೆಯ ಬಲ್ಲ ಹಿರಿಯರನಾರನು ಕಾಣೆ ನೋಡ.
ಹಲವು ಮುಖ ಹಾವಾಡಿಗನ ನುಂಗಲು
ನೆಲನೆತ್ತ ಹೋಯಿತ್ತೆಂದರಿಯೆನಯ್ಯ.
ಹಾವಾಡಿಗ ದೇವಾಡಿಗನೊಳಗಡಗಲು
ಹಾವೆತ್ತ ಹೋದವೋ ದೇವ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೦ ॥

೩೮೩

ಹಿಂದಳ ಅಂಗ, ಮುಂದಳ ಮುಖ
ಉಭಯ ಚೈತನ್ಯವೆಂದೆಂಬರಯ್ಯ.

ಹಿಂದು ಮುಂದು ಉಭಯಚೈತನ್ಯವೆಂಬಸ್ನಕ್ಕರ
ಬಂದಿತ್ತು ನೋಡ ತೊಡಕು.
ಹಿಂದು ಮುಂದು ಉಭಯಚೈತನ್ಯವೊಂದೂಯಿಲ್ಲದ ವರ್ತನೆ
ಸರ್ವಾಚಾರ ಸಂಪತ್ತು ನಿಮ್ಮ ಶರಣರ ಚರಿತ್ರ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೧ ॥

೩೮೪

ಹಜ್ಜೆಯುಳ್ಳ ಮೃಗ ಇಬ್ಬರ ಕೂಡಿ
ಹಲಬರ ನೆರಹಿ
ಹಬ್ಬವ ಮಾಡುವ ಭರವಸ
ಉಬ್ಬರವೆಂಬುವದನೊಬ್ಬರು ಅರಿಯರು ನೋಡ.
ಹಜ್ಜೆಯಿಲ್ಲದ ಮೃಗ ಇಬ್ಬರ ಕೂಡದು,
ಹಲಬರ ನೆರಪದು, ಹಬ್ಬವನೊಲ್ಲದು.
ತಾನೊಬ್ಬನೆಯಾಯಿತ್ತು ನೋಡ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವಿನ ಶರಣ
ಸ್ವತಂತ್ರ ಕಾಣಿರೋ. ॥ ೫೨ ॥

೩೮೫

ತಾನೊಬ್ಬನು; ಕೊಲುವರು ಹಲಬರು.
ಹಲವು ದಿಕ್ಕಿನ ಕಿಚ್ಚೆದ್ದು ಸುಡುವಲ್ಲಿ ನೆಲನ ಮರೆಹೊಗಲು
ಜಲಮಯವಾಯಿತ್ತು ನೋಡ.
ಜಲದೊಳಗಾಳುವನ ಜಲಂಧರ ರಕ್ಕಸ ಭಕ್ಷಿಸುತ್ತಿರಲು
ಆಕಟಕಟಾ ಶಿವನೇ ಯೆನಲು
ಮುಕ್ಕಣ್ಣ ತೆರೆದನು; ರಕ್ಕಸನ ಸೊಕ್ಕು ಮುರಿಯಿತ್ತು,
ಕೊಲುವರು ಹಲಬರು ನೆಲನ ಬಿಟ್ಟೋಡಿದರು.
ಹಲವು ದಿಕ್ಕಿನ ಕಿಚ್ಚು ಕೆಟ್ಟಿತ್ತು.
ನೆಲ ಕರಗಿತ್ತು; ಜಲವರತಿತ್ತು.
ಜಲಧಿಯ ದಾಂಟಿ, ಅಮೃತ ಸಾಗರವ ಬೆರಸಿ
ಅನುಪಮಸುಖಿಯಾದೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೩ ॥

೩೮೬

ತಾಳ ಮರನ ಹಿಡಿದು ತನಿರಸವನುಂಬನ್ನಕ್ಕರ
ಬಾರದ ಭವದಲ್ಲಿ ಬಪ್ಪುದು ತಪ್ಪದು ನೋಡ.
ತಾಳಮರನ ಹಿಡಿಯದೆ ತನಿರಸವ ಮುಟ್ಟದೆ
ಮೇಲಣ ಹಾಲ ಕುಡಿಯಬಲ್ಲರಾಗಿ
ನಿಮ್ಮ ಶಿರಣರು ಭವವಿರಹಿತರಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೪ ॥

೩೮೭

ಆಲಿಯ ಕೊನೆಯಲ್ಲಿ ಬೆಳೆದ ಹಾಲೆ
ಬಾಲೆಯರನೆ ಬಯಸುತ್ತಿಪ್ಪುದು ನೋಡ.
ಆಲಿಯ ಕೊನೆಯ ಹಾಲೆಯ ಹರಿದು
ಬಾಲೇಂದುಮೌಳಿ ತಾನಾದ ಲಿಂಗೈಕ್ಯವನೇನಹೇಳುವೆನಯ್ಯ?
ನೇತ್ರಕ್ಕೆ ಪ್ರತ್ಯಕ್ಷ ಘನಮಹಿಮ ತಾನಾದ ನಿಲವ
ಚೆನ್ನಬಸವಣ್ಣ ಬಲ್ಲ.
ಚೆನ್ನಬಸವಣ್ಣನ ಪಾದಕ್ಕೆ ನಮೋ ನಮೋಯೆನುತಿರ್ದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೫ ॥

೩೮೮

ಮನಸಿನ ಸಂಶಯ ಕನಸಿನ ಭೂತವಾಗಿ ಕಾಡುವದು ನೋಡ.
ಮನಸಿನ ಸಂಶಯವನಳಿದರೆ ಕನಸಿನ ಕಾಟ
ಬಿಟ್ಟೋಡಿತ್ತು ಕಾಣಾ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೬ ॥

೩೮೯

ಒಂಟೆಯ ತಲೆಯಲ್ಲಿ ಎಂಟಾನೆ ಹುಟ್ಟಿದುದ ಕಂಡೆನಯ್ಯ.
ಅವಕ್ಕೆ ನೆಂಟರು ಅರೇಳೆಂಟು ಹತ್ತು ನೋಡ.
ಒಂಟೆಯ ತಲೆಯಲ್ಲಿ ಉರಿಲಿಂಗ ಹುಟ್ಟಲು
ಎಂಟಾನೆ ಸತ್ತವು; ನಂಟರು ಕೈಬಿಟ್ಟರು.
ಒಂಟೆಯ ತಲೆಯ ಮೆಟ್ಟಿ ನಿಂದು
ಉರಿಯ ಪುರುಷನ ನೆರೆದು

ಕಂಟಕಂಗಳ ಗೆಲಿದು
ಸಂಸಾರಸಾಗರವ ದಾಂಟಿದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೭ ॥

೩೯೦

ಮೂರೊಂದುಗೂಡಿದ ಬಟ್ಟೆಯಲ್ಲಿ
ಮಾರಿ ಮನೆಯ ಮಾಡಿಕೊಂಡಿಪ್ಪುದ ಕಂಡೆನಯ್ಯ.
ಮಾರಿಯ ಮುಖದಲ್ಲಿ ಮರ್ಕಟ ಹುಟ್ಟಿ ಮಾರುತನ ಬೆರಸಿ
ಈರೇಳು ಲೋಕವ ನುಂಗಿತ್ತು ನೋಡ.
ಈರೇಳು ಲೋಕವ ನುಂಗಿದ ಕಪಿ ಮೇಲುಗಿರಿಯನೇರಿ
ದಾರಿಗೊಂಡು ಬರುವರ ಏಡಿಸಿ ಕಾಡುತ್ತಿರ್ದುದು ನೋಡ.
ಕೋಡಗನ ಮುಖವ ನೋಡಿಹೆನೆಂದು ಹೋದರೆ
ಅದು ಕಾಲಸರ್ಪನಾಗಿ ನುಂಗಿ
ಹೇಳಿಗೆಯೊಂದರೊಳಗಡಗಿತ್ತು ನೋಡ.
ಹೇಳಿಗೆ ಮುರಿಯಿತ್ತು; ಕಾಲಸರ್ಪ ಸತ್ತಿತ್ತು.
ಮೇಲುಗಿರಿಯನೇರಿದ ಮರ್ಕಟ
ನಾರಿಯ ಶಿರವ ಮೆಟ್ಟಿ
ಮಾರಾರಿಯ ಬೆರಸಿದ್ದ ಕಂಡು ಬೆರಗಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೮ ॥

೩೯೧

ಹಲವು ಬಣ್ಣದ ಊರೊಳಗೆ ಉರಿವ ಜ್ಯೋತಿಯ ಹಿಡಿದು
ಪರಿಪರಿಯ ಕೇರಿಯಲ್ಲಿ ಸುಳಿದಾಡುವಳಿವಳಾರೋ?
ಈ ಊರಿಗೆ ನಾನೊಡತಿ; ಇಲ್ಲಿ ಸುಳಿಯುವುದಕ್ಕೆ
ನಿನಗೇನು ಕಾರಣ ಹೇಳಾ?
ಈ ಊರಿಗೂ ನಿನಗೂ ನಾನೊಡತಿಯೆನುತ
ಊರ ಸುಟ್ಟು ನಾರಿಯ ಕೊಂದವಳು
ನಾನು ಪರಾಪರಾಂಗನೆಯೆನುತ
ಸ್ವಪತಿಯ ನೆರೆದು ನಿಷ್ಪತಿಯನೆಯಿದುದ ಕಂಡು
ಬೆರಗಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೯ ॥

೩೯೨

ಇಬ್ಬರಿಗೊಬ್ಬ ಮಗ ಹುಟ್ಟಿ
ಅವನೊಬ್ಬನಿಗೈವರು ಹೆಂಡಿರು ನೋಡ.
ಸವತಿ ಮಚ್ಚರವ ಬಿಟ್ಟು ತಮ್ಮ ತಮ್ಮ ಭಾವದಲ್ಲಿ
ನೆರೆವರು ನೋಡಾ.
ಅಯ್ವರ ಕೂಟದಲ್ಲಿ ಮೈಮರೆದಿದ್ದುದ ಕಂಡು
ಮೇಲೊಬ್ಬ ಸತಿ ಬಂದು ನೆರೆಯಲು
ಐವರ ಮನವಾರ್ತೆ ಕೆಟ್ಟು
ಆಕೆಯ ಸಂಗದಿಂದ ಸ್ವೈರೆರಗಾಗಿ
ಸರ್ವ ನಿರ್ವಾಣಿಯಾದೆನು ನೋಡ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೦ ॥

೩೯೩

ಅಂಗವಿಲ್ಲದ ಅನಾಮಯನ ಕಂಗಳಿಲ್ಲದೆ ಕಂಡೆ.
ಕಾಯವಿಲ್ಲದೆ ಅಪ್ಪಿದೆ.
ಮನವಿಲ್ಲದೆ ನೆನೆದೆ.
ಭಾವವಿಲ್ಲದೆ ಭಾವಿಸಿ
ಮಾಯವಿಲ್ಲದೆ ಸಂಗವ ಮಾಡಿ ನಿಸ್ಸಂಗಿಯಾದೆನು.
ನಿರುಪಾಧಿಕ ನಿಷ್ಕಳಂಕ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೧ ॥

೩೯೪

ಕರಿಯ ಕರದಲ್ಲಿ ಅರಿಯಾರು ಹುಟ್ಟಿ
ಸಿರಿದೇವಿಯ ಸೇವಿಸಿ
ಮತಿವಂತರ ಮರುಳು ಮಾಡಿ
ಗತಿ ಸತ್ಪಥಕೆ ವೈರಿಗಳಾದವು ನೋಡ.
ಕರಿಯ ಕರವ ಮುರಿದು
ಹರಿಯ ಮುಖದಲ್ಲಿ ಹಾಲು ಕುಡಿಯಬಲ್ಲರೆ
ಸಿರಿದೇವಿ ಮಡಿವಳು.
ಅರಿಗಳಾರು ನಮಗಾಧಾರವಿಲ್ಲೆನುತ
ತೆಗೆದೋಡಿಹುದ ಕಂಡೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೨ ॥

೩೯೫

ರಂಜನೆಯ ಕೊಡವಲ್ಲಿ ಮಂಜಿನುದಕವ ತುಂಬಿ
ಮಾನಿನಿ ಹೊತ್ತು ಮೂರು ಲೋಕವಲ್ಲಿ
ರಂಜಿಸುತ್ತಿದ್ದಾಳೆ ನೋಡ.
ಮಾನಿನಿಯ ರಂಜನೆಯ ಕಂಡು
ನಾನು, ಹಿರಿಯರೆಂಬವರೆಲ್ಲ
ಮಾನಿನಿಯ ಮಸಕದ ವಿಷಯಕೊಳಗಾದುವ
ಇನ್ನೇನ ಹೇಳುವೆನಯ್ಯ.
ರಂಜನೆಯ ಕೊಡವೊಡೆದು ಮಂಜಿನುದಕವರತು
ಮಾನಿನಿಯ ರಂಜನೆಯ ಮಸಕದ ವಿಷಯವಡಗಿದರೆ
ಪರಮ ನಿರಂಜನನೆಂದು ಬೇರುಂಟೇ ತಾನಲ್ಲದೆ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೩ ॥

**ಪ್ರಾಣಲಿಂಗಿಯ ಭಕ್ತ**

೩೯೬

ಸುರತರುವ ಬಿಟ್ಟು ಎಲವದ ಮರಕೆ ನೀರೆರೆವಂತೆ
ನೊರೆವಾಲ ಚೆಲ್ಲಿ ಕಾಟೆಯ ಬಯಸಿ ಬಾಯಾರುವಂತೆ
ತಾಯ ಮಾರಿ ತೊತ್ತ ಕೊಂಬವರಂತೆ
ರಂಭೆಯ ಬಿಟ್ಟು ಸಿಂಬೆಯ ಬಯಸುವ ಶಿಖಂಡಿಗಳಂತೆ
ನಿತ್ಯವಲ್ಲದ ನಿರುತವಲ್ಲದ ಸತ್ತು ಹೋಹ
ಮಾಯಾಪ್ರಪಂಚ ಮಚ್ಚಿದ ಮನುಜರು
ಮುಕ್ತ್ಯಂಗನೆಯನಪ್ಪಿ ಭಕ್ತ್ಯಾಮೃತವ ಸೇವಿಸಿ [ಸುವ]
ನಿತ್ಯಪದದ ಸುಖವ ವ್ಯರ್ಥಕಾಯರಿವರೆತ್ತಬಲ್ಲರು ಹೇಳ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೪ ॥

೩೯೭

ಬಹು ಜನಂಗಳು ಹೇತ ಹೇಲ
ಹಂದಿ ತಿಂದು ತನ್ನ ಒಡಲ ಹೊರೆವುದಯ್ಯ.
ತಾ ಹೇತ ಹೇಲ ಮರಳಿ ಮುಟ್ಟದು ನೋಡ.
ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ ಮರಳಿ

ಆ ಭವಿಯ, ನಂಟರು ಹೆತ್ತವರು ಬಂಧುಗಳೆಂದು ಬೆರಸಿದರೆ
ಆ ಹಂದಿಗಿಂದಲೂ ಕರ ಕಷ್ಟ ಕಾಣಾ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೫ ॥

೩೯೮

ಮೊಲನ ಕಂಡ ನಾಯಂತೆ
ಇಂದ್ರಿಯವಿಷಯಕ್ಕೆ ಮುಂದುವರಿಯದಿರಾ.
ಅಂಗನೆಯರ ಸಮ್ಮೇಳದಿಂ ಭಂಗಿತನಾಗದಿರಾ.
ಲಿಂಗವನಪ್ಪಿ ಸುಖಿಯಾಗ್ಗಿ ಎಲೆ ಮನವೆ.
ಅಂಗದಿಚ್ಛೆಗೆ ಆಯಸಂಬಡದಿರಾ.
ಲಿಂಗ ಸಂಗಿಗಳು ನೋಡಿ ನಗುವರೆಲೆ[ಲೆಲೆ] ಮನವೇ.
ಇಂದ್ರಿಯಭೋಗಂಗಳೆಂಬವು
ಕನಸಿನ ಸಿರಿಯಂತೆ ತೋರಿ ಅಡಗುವವೋ.
ಇವನೇಕೆ ನಚ್ಚುವೆ ಮಚ್ಚುವೆ ಹುಚ್ಚು ಮನವೇ?
ಹರಹರಾ ಶಿವ ಶಿವಾ ಎನ್ನೆಯೋ ಎಲೆಲೆ ಮನವೆ.
ನಿನ್ನ ನಾ ಬೇಡಕೊಂಬೆನಯ್ಯೋ ಎಲೆಲೆ ಮನವೇ.
ಸಿಂಹನ ಕಂಡ ಕರಿಯಂತೆ
ಕೆಡೆಬಡೆದೋಡದಿರಯ್ಯೋ ಪಾಪಿ ಮನವೇ.
ಲಿಂಗ ಪದವ ಸಾರಿ, ಶಿವಭಕ್ತನಾಗಿ
ಮುಕ್ತಿಸಮ್ಮೇಳನಾಗಯ್ಯ.
ಕರ್ತೃ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವನೊಡಗೂಡಿ
ನಿತ್ಯನಾಗಬಲ್ಲರೆಲೆಲೆ ಮನವೇ. ॥ ೬೬ ॥

೩೯೯

ಜೇನುತುಪ್ಪದಲ್ಲಿ ಬಿದ್ದು ಸಾವ ನೊಣನಂತೆ,
ಕೀಳುಮಾಂಸದ ಸವಿಗೆ,
ಗಂಟಲಗಾಣದಲ್ಲಿ ಸಿಕ್ಕಿ ಸಾವ ಮೀನಿನಂತೆ,
ಹೀನವಿಷಯಕ್ಕೆ ನಚ್ಚಿ ಮಚ್ಚದಿರಾ ಎಲೆಲೆ ಹುಚ್ಚ ಮನವೇ.
ಅಲ್ಪಸುಖಕ್ಕೆ ಮಚ್ಚಿ, ಅನಂತ ಭವಭಾರಕ್ಕೊಳಗಾಗಿ
ದುರ್ಗತಿಗಿಳಿಯದಿರಯ್ಯ ಬೆಂದ ಮನವೇ.
ಹರಹರಾ ಶಿವಶಿವಾಯೆಂಬುವವ ಮರೆಯದಿರು;
ಮರೆದೊರಗದಿರು.

ನಾಯ ಸಾವ ಸಾವೆ ಕಂಡಾ ಎಲೆಲೆಲೆ ಮನವೇ.
ಈ ಮರುಳತನವ ಬಿಟ್ಟು
ಎನ್ನೊಡೆಯ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವಿಗೆ
ಶರಣು ಶರಣೆನ್ನಕಲಿಯಾ ಸುಖಿಯಾಗಬಲ್ಲರೆಲೆ[ಲೆಲೆ]
ಮನವೇ. ॥ ೬೭ ॥

೪೦೦

ಬೂದಿಯಲ್ಲಿ ಹೊರಳುವ ಕತ್ತೆಯಂತೆ
ಎಲುವ ಕಡಿವ ಶ್ವಾನನಂತೆ
ಹಾತೆಯ ತಿಂಬ ಹಲ್ಲಿಯಂತೆ
ಕಿಚ್ಚ ಹಾಯಿವವಳಂತೆ
ಒಚ್ಚಿ ಹೊತ್ತಿನ ಭೋಗಕ್ಕೆ ಮಚ್ಚಿ ಹುಚ್ಚಾದಿರಿಯಲ್ಲ!
ಮತ್ಯುಂಜಯನನಪ್ಪದೆ ಮೃತ್ಯುವಿನ ಬಾಯತುತ್ತಾದವರ ಕಂಡು
ನಗುತ್ತಿದ್ದೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೮ ॥

## ಪ್ರಾಣಲಿಂಗಿಯ ಮಾಹೇಶ್ವರ

೪೦೧

ಸುಡುವಗ್ನಿ ಕಾಷ್ಠದಿರವ ಬಲ್ಲುದೆ ಅಯ್ಯಾ?
ಕೊರೆದು ಹರಿವ ಉದಕ ಗಿರಿಯ ಗರ್ವವ ಬಲ್ಲುದೆ ಅಯ್ಯಾ?
ಮುರಿದು ತಿಂಬ ತೋಳ ಕುರಿಯ ಮರಿಯ ಬೇನೆಯ ಬಲ್ಲುದೆ?
ಅಯ್ಯಾ
ತನ್ನವಸರಕ್ಕೆ ಆರನಾದರೂ ಸಾಧಿಸಿ ಭೇದಿಸಿ
ಕೊಂದೆ ತಿಂದೆನೆಂಬವ
ಅಸತ್ಯ ಸುಸತ್ಯದ ಕುರುಹ ಬಲ್ಲನೆ?
ಸತ್ಯದ ಕುರುಹನರಿಯನಾಗಿ ಶಿವಭಕ್ತಿಯನೆಂತರಿವನಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೯ ॥

೪೦೨

ಕತ್ತೆಗೇಕಯ್ಯ ಕಡಿವಾಣ, ತೊತ್ತಿಗೆ ತೋಳಬಂದಿಯೇಕಯ್ಯ?
ಶ್ವಾನಗೇಕೆ ಆನೆಯ ಜೋಹವಯ್ಯ?

ಹಂದೆಗೇಕೆ ಚಂದ್ರಾಯುಧವಯ್ಯ?
ಶಿವನಿಷ್ಠೆಯಿಲ್ಲದವಂಗೆ
ವಿಭೂತಿ ರುದ್ರಾಕ್ಷಿ ಶಿವಮಂತ್ರ ಶಿವಲಿಂಗವೆಂಬ
ಶಿವಚೋಪವೇತಕಯ್ಯ ಇವರಿಗೆ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೦ ॥

೪೦೨

ಕೊ[ತ್ತಿ]ಗೆ ಕೊಂಬು ಹುಟ್ಟಬಲ್ಲದೆ?
ಸುಚ್ಚಕ್ಕಿ ಮೊಳೆಯಬಲ್ಲುದೆ?
ಸತ್ತ ಮರ ಎಳಕ ಬಲ್ಲುದೆ?
ಅರೆಯ ಮೇಲೆ ತಾವರೆ ಬೆಳೆಯಬಲ್ಲಯ್ಯದೆ ಅಯ್ಯ?
ದುರ್ಬುದ್ಧಿ ಮಾನವರ ಭಾವದಲ್ಲಿ ಶಿವಜ್ಞಾನ
ಕರಿಗೊಳ್ಳಬಲ್ಲುದೆ ಅಯ್ಯ?
ಶಿವಜ್ಞಾನವಿಲ್ಲದವರಿಗೆ ಶಿವಕೃಪೆಯೆಲ್ಲಿಯದೋ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೧ ॥

೪೦೪

ಹಾವಿನೊಳಗಣ ಸಂಗ ಆವಾಗಲೆಂದರಿಯಬಾರದಯ್ಯ.
ಕಿಚ್ಚಿನೊಳಗಣ ಸಂಗ ಸುಟ್ಟು ಭಸ್ಮವ ಮಾಡುವದಯ್ಯ.
ಲಿಂಗದೃಷ್ಟಿ ತಪ್ಪಿ, ಅಂಗನೆಯರ ನೋಟ ಬೇಟ
ಕಂಗಳ ಕೆಡಿಸಿ ಭಂಗಿತರ ಮಾಡುವುದಯ್ಯ.
ಪರಸ್ತ್ರೀಯರ ಕೂಟ ಪಂಚಮಹಾಪಾತಕದಲ್ಲಿಕ್ಕುವುದಯ್ಯ.
ಧರೆಯೊಳಕೊಳ್ಳದು; ಹಿರಿಯರು ಮಚ್ಚರು.
ಹಿರಿಯರು ಮಚ್ಚರಾಗಿ ಶಿವ ಮುನ್ನವೆ ಮಚ್ಚನು.
ನಾಯಕನರಕ ತಪ್ಪದಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೨ ॥

೪೦೫

ಜ್ಯೋತಿಯ ತಮವೆಡೆಗೊಡಂತೆ
ಚಂದ್ರಮನ ರಾಹುವೆಡೆಗೊಂಡಂತೆ
ನಿಧಾನವ ಸರ್ಪನೆಡೆಗೊಂಡಂತೆ

ಅಂಬುಧಿಯ ಅನಲನೆಡೆಗೊಂಡಂತೆ
ಮನವ ಮಾಯನೆಡೆಗೊಂಡು
ನಿಮ್ಮ ನೆನಹ ನೆಲೆಗೊಳಲೀಯದೆ
ಮರಣಕ್ಕೊಳಗುಮಾಡುತ್ತಿಪ್ಪುದಯ್ಯ.
ಈ ತಮವ ಪರಿಪರಿಸಿ ಎನ್ನನುಳುಹಿಕೊಳ್ಳಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. || ೭೩ ||

೪೦೬

ಅಮೇಧ್ಯವ ಭುಂಜಿಸುವ ಸೂಕರ
ಅಮೃತದ ಸವಿಯನೆತ್ತಬಲ್ಲುದಯ್ಯ?
ಗೆಜ್ಜಲ ತಿಂಬ ಕರಡಿ ಖರ್ಜೂರದ ಹಣ್ಣಿನ
ಸವಿಯನೆತ್ತಬಲ್ಲುದಯ್ಯ?
ಬೇವ ತಿಂಬ ಕಾಗೆ ಬೆಲ್ಲದ ಸವಿಯನೆತ್ತ ಬಲ್ಲುದಯ್ಯ?
ಅಂಗನೆಯರ ಸಮ್ಮೇಳದ ವಿಕಾರದ ಭಂಗಿಯ
ಕೊಂಡು ಮೈಮರೆದ ಮನುಜರು
ಲಿಂಗಪ್ರೇಮದ ಸುಖವನಿವರೆತ್ತಬಲ್ಲರಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. || ೭೪ ||

೪೦೭

ಭೂಮಿಗೆ ಹುಟ್ಟಿದ ಕಲ್ಲು, ಕಲ್ಲುಕುಟ್ಟಿಗರ ಕೈಯ ಕಡಿಸಿಕೊಂಡ
ಶಿಲೆಯನೆಂತು ಲಿಂಗವೆಂದೆಂಬೆನಯ್ಯ?
ಕೊಟ್ಟಾತ ಗುರುವೆ? ಕೊಂಡಾತ ಶಿಷ್ಯನೆ? ಅಲ್ಲ ಕಾಣಿರಯ್ಯ.
ಶಿಲಾಲಿಖಿತವ ಕಳೆದು, ಕಳಾಭೇದವನರಿದು
ಕಳೆಯ ತುಂಬಿಕೊಡಬಲ್ಲರೆ ಗುರುವೆಂಬೆ:
ಕೊಂಡಾತ ಶಿಷ್ಯನೆಂಬೆನಯ್ಯ
'ಯಥಾ ಕಲಾ ತಥಾ ಭಾವೋ। ಯಥಾ ಭಾವಸ್ತಥಾ ಮನಃ॥
ಯಥಾ ಮನಸ್ತಥಾ ದೃಷ್ಟಿ। ರ್ಯಥಾ ದೃಷ್ಟಿಸ್ತಥಾ ಸ್ಥಲಂ॥'
ಎಂದುದಾಗಿ
ಈ ಭೇದವನರಿಯದೆ
ಇಷ್ಟವ ಮಾರುವಾತಂಗೂ ಕೊಂಬಾತಂಗೂ
ನಾಯಕನರಕ ತಪ್ಪದು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. || ೭೫ ||

೪೦೮

ಕಟ್ಟರಸಿಲ್ಲದ ರಾಜ್ಯದಂತೆ, ಜೀವನಿಲ್ಲದ ಕಾಯದಂತೆ
ದೇವನಿಲ್ಲದ ದೇಗುಲದಂತೆ,
ಪತಿಯಿಲ್ಲದ ಸತಿಯ ಶೃಂಗಾರದಂತೆ,
ಗುರುವಾಜ್ಞೆಯಿಲ್ಲದೆ
ತನ್ನ ಮನಕ್ಕೆ ತೋರಿದ ಹಾಂಗೆ ಮಾಡಿದ ಭಕ್ತಿ
ಶಿವನ ಮುಟ್ಟದು ನೋಡ.
ಶ್ರೀಗುರುವಿನ ವಾಕ್ಯದಿಂದಪುದೆಂದುವನು
ಅಲ್ಲ ಎಂದು ಉದಾಸಿನದಿಂದ ಮಾಡಿದ ಭಕ್ತಿ
ಅದು ಕರ್ಮಕ್ಕೆ ಗುರಿ ನೋಡ.
ಶ್ರೀಗುರುವಾಜ್ಞೆವಿಡಿದು ಆಚರಿಸುವ ಸತ್ಯ ಸಾತ್ವಿಕ ಭಕ್ತಿ
ಸದ್ಯೋನ್ಮುಕ್ತಿಗೆ ಕಾರಣ ನೋಡ.
ಏಕೋಭಾವದ ನಿಷ್ಠೆ
ಭವದ ವ್ಯಾಕುಲವನೆಬ್ಬಟ್ಟುವುದು ನೋಡ.
ಅಹುದೋ ಅಲ್ಲವೋ ಎಂಬ ಮನದ ಸಂದೇಹದ ಕೀಲ ಕಳೆದು
ಶಿವಲಿಂಗದೊಳಗೊಂದು ಮಾಡಿ ಬಂಧ ಮೋಕ್ಷ
ಕರ್ಮಂಗಳ ಒತ್ತಿ ಒರಸುವುದು ನೋಡ.
ಇಂದುಧರನೊಳಗೆ ಬೆರಸಿದ ಅಚಲಿತ ಮಹೇಶ್ವರಂಗೆ
ನಮೋ ನಮೋ ಎಂಬೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೬ ॥

## ಪ್ರಾಣಲಿಂಗಿಯ ಪ್ರಸಾದಿ

೪೦೯

ಭಕ್ತನಂಗವಾವುದು, ಮಾಹೇಶ್ವರನಂಗವಾವುದು,
ಪ್ರಸಾದಿಯಂಗವಾವುದು, ಪ್ರಾಣಲಿಂಗಿಯಂಗವಾವುದು,
ಶರಣನಂಗವಾವುದು, ಐಕ್ಯನಂಗವಾವುದು ಎಂದರೆ,
ಈ ಅಂಗಸ್ಥಲಗಳ ಭೇದವ ಹೇಳಿಹೆನಯ್ಯ:
ಭಕ್ತಂಗೆ ಪೃಥ್ವಿಯಂಗ.
ಮಾಹೇಶ್ವರಂಗೆ ಜಲವೆ ಅಂಗ.
ಪ್ರಸಾದಿಗೆ ಅಗ್ನಿಯೆ ಅಂಗ.

ಪ್ರಾಣಲಿಂಗಿಗೆ ವಾಯುವೆ ಅಂಗ.
ಶರಣಂಗೆ ಆಕಾಶವೆ ಅಂಗ.
ಐಕ್ಯಂಗೆ ಆತ್ಮನೆ ಅಂಗ
ಇಂತೀ ಅಂಗಸ್ಥಲಂಗಳ ಭೇದವ ತಿಳಿಯುವುದಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೭ ॥

೪೧೦

ಭಕ್ತಂಗೆ ಹಸ್ತವಾವುದು, ಮಾಹೇಶ್ವರಂಗೆ ಹಸ್ತವಾವುದು,
ಪ್ರಸಾದಿಗೆ ಹಸ್ತವಾವುದು, ಪ್ರಾಣಲಿಂಗಿಗೆ ಹಸ್ತವಾವುದು,
ಶರಣಂಗೆ ಹಸ್ತವಾವುದು, ಐಕ್ಯಂಗೆ ಹಸ್ತವಾವುದು ಎಂದರೆ,
ಈ ಹಸ್ತಂಗಳ ಭೇದವ ಹೇಳಿಹೆನಯ್ಯ:
ಭಕ್ತಂಗೆ ಸುಚಿತ್ತವೆ ಹಸ್ತ.
ಮಾಹೇಶ್ವರಂಗೆ ಸುಬುದ್ಧಿಯೆ ಹಸ್ತ.
ಪ್ರಸಾದಿಗೆ ನಿರಹಂಕಾರವೆ ಹಸ್ತ.
ಪ್ರಾಣಲಿಂಗಿಗೆ ಸುಮನವೆ ಹಸ್ತ.
ಶರಣಂಗೆ ಸುಜ್ಞಾನವೆ ಹಸ್ತ
ಐಕ್ಯಂಗೆ ಸದ್ಭಾವವೆ ಹಸ್ತ.
ಇಂತಿ ಹಸ್ತಂಗಳ ಭೇದವ ತಿಳಿವುದಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೮ ॥

೪೧೧

ಭಕ್ತಂಗೆ ಲಿಂಗವಾವುದು, ಮಾಹೇಶ್ವರಂಗೆ ಲಿಂಗವಾವುದು,
ಪ್ರಸಾದಿಗೆ ಲಿಂಗವಾವುದು, ಪ್ರಾಣಲಿಂಗಿಗೆ ಲಿಂಗವಾವುದು,
ಶರಣಂಗೆ ಲಿಂಗವಾವುದು, ಐಕ್ಯಂಗೆ ಲಿಂಗವಾವುದುಯೆಂದರೆ
ಈ ಲಿಂಗಸ್ಥಲಂಗಳ ಭೇದವ ಹೇಳಿಹೆನಯ್ಯಾ:
ಭಕ್ತಂಗೆ ಆಚಾರಲಿಂಗ.
ಮಾಹೇಶ್ವರಂಗೆ ಗುರುಲಿಂಗ.
ಪ್ರಸಾದಿಗೆ ಶಿವಲಿಂಗ.
ಪ್ರಾಣಲಿಂಗಿಗೆ ಜಂಗಮಲಿಂಗ.
ಶರಣಂಗೆ ಪ್ರಸಾದಲಿಂಗ.
ಐಕ್ಯಂಗೆ ಮಹಾಲಿಂಗವೆಂದು ಹೇಳಲ್ಪಟ್ಟಿತ್ತಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೯ ॥

೪೧೨

ಆಚಾರಲಿಂಗಕ್ಕೆ ಪೃಥ್ವಿಯೆ ಸಮರ್ಪಣ.
ಗುರುಲಿಂಗಕ್ಕೆ ಜಲವೆ ಸಮರ್ಪಣ.
ಶಿವಲಿಂಗಕ್ಕೆ ಅಗ್ನಿಯೆ ಸಮರ್ಪಣ.
ಜಂಗಮಲಿಂಗಕ್ಕೆ ವಾಯುವೆ ಸಮರ್ಪಣ.
ಪ್ರಸಾದಲಿಂಗಕ್ಕೆ ಆಕಾಶವೆ ಸಮರ್ಪಣ.
ಮಹಾಲಿಂಗಕ್ಕೆ ಆತ್ಮನೆ ಸಮರ್ಪಣವಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೦ ॥

೪೧೩

ಇನ್ನಿವಕ್ಕೆ ಅರ್ಪಿತಮುಖಂಗಳ ಹೇಳಿಹೆನು:
ಗುರುಲಿಂಗ ಶಿವಲಿಂಗ ಜಂಗಮಲಿಂಗ
ಪ್ರಸಾದಲಿಂಗ ಮಹಾಲಿಂಗ
ಈ ಐದು ಲಿಂಗವೂ
ಆಚಾರಲಿಂಗಕ್ಕೆ ಮುಖವೆಂದರಿಯಲುಬೇಕಯ್ಯ.
ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗ
ಮಹಾಲಿಂಗ ಆಚಾರಲಿಂಗ-
ಈ ಐದು ಲಿಂಗವು
ಗುರುಲಿಂಗಕ್ಕೆ ಮುಖವೆಂದರಿಯಲುಬೇಕಯ್ಯ.
ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗ
ಆಚಾರಲಿಂಗ ಗುರುಲಿಂಗ-
ಈ ಐದು ಲಿಂಗವು
ಶಿವಲಿಂಗಕ್ಕೆ ಮುಖವೆಂದರಿಯಲುಬೇಕಯ್ಯ.
ಪ್ರಸಾದಲಿಂಗ ಮಹಾಲಿಂಗ ಆಚಾರಲಿಂಗ
ಗುರುಲಿಂಗ ಶಿವಲಿಂಗ-
ಈ ಐದು ಲಿಂಗವು
ಜಂಗಮಲಿಂಗಕ್ಕೆ ಮುಖವೆಂದರಿಯಲುಬೇಕಯ್ಯ.
ಮಹಾಲಿಂಗ ಆಚಾರಲಿಂಗ ಗುರುಲಿಂಗ
ಶಿವಲಿಂಗ ಜಂಗಮಲಿಂಗ-
ಈ ಐದು ಲಿಂಗವು
ಪ್ರಸಾದಲಿಂಗಕ್ಕೆ ಮುಖವೆಂದರಿಯಲುಬೇಕಯ್ಯ.
ಆಚಾರಲಿಂಗ ಗುರುಲಿಂಗ ಶಿವಲಿಂಗ

ಜಂಗಮಲಿಂಗ ಪ್ರಸಾದಲಿಂಗ-
ಈ ಐದು ಲಿಂಗವು
ಮಹಾಲಿಂಗಕ್ಕೆ ಮುಖವೆಂದರಿಯಲುಬೇಕಯ್ಯ.
ಹೀಂಗೆ ಅಂಗಮುಖಂಗಳಲ್ಲಿಯೂ
ಲಿಂಗವೇ ಮುಖವಾಗಿಪ್ಪ ಭೇದವನರಿಯಲುಬೇಕಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೧ ॥

೪೧೪

ಇನ್ನೀ ಲಿಂಗಮುಖಕ್ಕೆ ಅರ್ಪಿಸುವ ಅವಧಾನವಾವುದೆಂದೊಡೆ:
ಪೃಥ್ವಿಯೇ ಅಂಗವಾದ ಭಕ್ತನು
ಸುಚಿತ್ತವೆಂಬ ಹಸ್ತದಿಂದ
ಆಚಾರಲಿಂಗಕ್ಕೆ
ಘ್ರಾಣವೆಂಬ ಮುಖದಲ್ಲಿ ಗಂಧವ ಸಮರ್ಪಣವ ಮಾಡಿ
ಆಚಾರಲಿಂಗದ ಪ್ರಸನ್ನ ಪ್ರಸಾದವ ಸ್ವೀಕರಿಸುತ್ತಿಪ್ಪನಯ್ಯ.
ಜಲವೇ ಅಂಗವಾದ ಮಾಹೇಶ್ವರನು
ಸುಬುದ್ಧಿಯೆಂಬ ಹಸ್ತದಿಂದ
ಗುರುಲಿಂಗಕ್ಕೆ
ಜಿಹ್ವೆಯೆಂಬ ಮುಖದಲ್ಲಿ ರಸವನು ಸಮರ್ಪಣವ ಮಾಡಿ
ಗುರುಲಿಂಗದ ಪ್ರಸನ್ನ ಪ್ರಸಾದವ ಸ್ವೀಕರಿಸುತ್ತಿಪ್ಪನಯ್ಯ.
ಅಗ್ನಿಯೇ ಅಂಗವಾದ ಪ್ರಸಾದಿಯು
ನಿರಹಂಕಾರವೆಂಬ ಹಸ್ತದಿಂದ
ಶಿವಲಿಂಗಕ್ಕೆ
ನೇತ್ರವೆಂಬ ಮುಖದಲ್ಲಿ ರೂಪವ ಸಮರ್ಪಣವ ಮಾಡಿ
ಶಿವಲಿಂಗದ ಪ್ರಸನ್ನ ಪ್ರಸಾದವ ಸ್ವೀಕರಿಸುತ್ತಿಪ್ಪನಯ್ಯ.
ವಾಯುವೇ ಅಂಗವಾದ ಪ್ರಾಣಲಿಂಗಿಯು
ಸುಮನವೆಂಬ ಹಸ್ತದಿಂದ
ಜಂಗಮಲಿಂಗಕ್ಕೆ
ತ್ವಕ್ಕೆಂಬ ಮುಖದಲ್ಲಿ ಸ್ಪರ್ಶನವ ಸಮರ್ಪಣವಮಾಡಿ
ಜಂಗಮಲಿಂಗದ ಪ್ರಸನ್ನ ಪ್ರಸಾದವ ಸ್ವೀಕರಿಸುತ್ತಿಪ್ಪನಯ್ಯ.
ಆಕಾಶವೇ ಅಂಗವಾದ ಶರಣನು
ಸುಜ್ಞಾನವೆಂಬ ಹಸ್ತದಿಂದ
ಪ್ರಸಾದಲಿಂಗಕ್ಕೆ

ಶ್ರೋತ್ರವೆಂಬ ಮುಖದಲ್ಲಿ ಶಬ್ದವ ಸಮರ್ಪಣವ ಮಾಡಿ
ಪ್ರಸಾದಲಿಂಗದ ಪ್ರಸನ್ನ ಪ್ರಸಾದವ ಸ್ವೀಕರಿಸುತ್ತಿಪ್ಪನಯ್ಯ
ಆತ್ಮನೇ ಅಂಗವಾದ ಐಕ್ಯನು
ಸದ್ಭಾವವೆಂಬ ಹಸ್ತದಿಂದ
ಮಹಾಲಿಂಗಕ್ಕೆ
ಮನವೆಂಬ ಮುಖದಲ್ಲಿ ತೃಪ್ತಿಯ ಸಮರ್ಪಣವ ಮಾಡಿ
ಮಹಾಲಿಂಗದ ಪ್ರಸನ್ನ ಪ್ರಸಾದವ ಸ್ವೀಕರಿಸುತ್ತಿಪ್ಪನಯ್ಯ.
ಈ ಅರ್ಪಿತ ಅವಧಾನದ ಭೇದವನರಿದು
ಭೋಗಿಸುವ ಭೋಗವಲ್ಲವು
ಲಿಂಗಭೋಗ ಪ್ರಸಾದ, ಅಂಗಭೋಗ ಅನರ್ಪಿತ;
ಅನರ್ಪಿತವೇ ಕರ್ಮದ ತವರುಮನೆ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವ ನೊಮ್ಮೆಯೂ
ಮುಟ್ಟವು. ॥ ೮೨ ॥

೪೧೫

ಮರಕ್ಕೂ ಕೊಂಬಿಗೂ ಭೇದವುಂಟೇ ಅಯ್ಯ?
ಅಂಗಕ್ಕೂ ಅವಯವಗಳಿಗೂ ಭೇದವುಂಟೇ ಅಯ್ಯ?
ಅಂಗದ ಮೇಲೆ ಲಿಂಗವನಿರಿಸಬಹುದು,
ಅವಯವಂಗಳ ಮೇಲೆ ಲಿಂಗನಿರಿಸಬಾರದೇಕೆಂಬಿರಯ್ಯ.
ಅಂಗವೇ ಶುದ್ಧ, ಅವಯವಂಗಳು ಅಶುದ್ಧವೇ ಮರುಳುಗಳಿರಾ?
ಮುಚ್ಚಿಕೊಂಡಿರಿ ಭೋ
ಲಿಂಗ ಪ್ರಸಾದವ ಕೊಂಬ ಶರಣಂಗೆ
ಕೈ, ಬಾಯಿ, ಅವಯವಂಗಳೊಳಗೆಲ್ಲವು ಲಿಂಗವೇ
ತುಂಬಿಪ್ಪುದು ಕಾಣಭೋ.
ಈ ಶರಣ ಲಿಂಗದ ಸಮರಸವನಿವರೆತ್ತ ಬಲ್ಲರಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೩ ॥

೪೧೬

ಭೂಮಿಯ ಮೇಲೆ ಹುಟ್ಟಿದ ಕಲ್ಲ ತಂದು
ಭೂತದೇಹಿಗಳ ಕೈಯಲ್ಲಿ ಕೊಟ್ಟು
ಕೊಟ್ಟ ಕೂಲಿಯ ತಕ್ಕೊಂಡು ಹೊಟ್ಟೆಯ ಹೊರೆವ ಭ್ರಷ್ಟರಿಗೆ

ಪ್ರಸಾದವೆಲ್ಲಿಯದೋ?
'ನಾದಂ ಲಿಂಗಮಿತಿ ಜ್ಞೇಯಂ। ಬಿಂದು ಪೀಠಮುದಾಹೃತಂ॥
ನಾದ ಬಿಂದುಯುತಂ ರೂಪಂ। ಲಿಂಗಾಕಾರಮಿಹೋಚ್ಯತೇ॥'
ಎಂಬುದಾಗಿ
ಇಷ್ಟಲಿಂಗದಾದಿಯನಿವರೆತ್ತ ಬಲ್ಲರು?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೪ ॥

೪೧೭

ಪ್ರಸಾದ ಪದಾರ್ಥ ಉಚ್ಛಿಷ್ಟವೆನುತಿಪ್ಪಿರಿ?
ಪ್ರಸಾದವಾವುದು ಪದಾರ್ಥವಾವುದು ಉಚ್ಛಿಷ್ಟವಾವುದು
ಹೇಳಾ ಮರುಳೆ?
ಪ್ರಸಾದವೆಂದರೆ ಪರಂಜ್ಯೋತಿಸ್ವರೂಪವಪ್ಪ ಶಿವತತ್ವವು;
ಪದಾರ್ಥವೆಂದರೆ ಆತ್ಮನು;
ಉಚ್ಚಿಷ್ಟವೆಂದರೆ ಮಾಯೆ ನೋಡ;
ಮಾಯಾಕಾರ್ಯವಾದುದೇ ದೇಹ.
ದೇಹೇಂದ್ರಿಯ ಮನಃಪ್ರಾಣಾದಿಗಳಪ್ಪ ಚತುರ್ವಿಂಶತಿ ತತ್ವಂಗಳು
ಆ ಚತುರ್ವಿಂಶತಿ ತತ್ವಂಗಳಿಗೆ
ಆಶ್ರಯವಾಗಿ ಚೈತನ್ಯವಾಗಿ ಆತ್ಮನು;
ಅಂತು ಆತ್ಮ ಸಹವಾಗಿ ಪಂಚವಿಂಶತಿ ತತ್ವಂಗಳು.
ಇಂತು ದೇಹೇಂದ್ರಿಯಾದಿಗಳ ಕಳೆದು
ಆತ್ಮನ ಪರಮಾತ್ಮನಲ್ಲಿ ಸಮರ್ಪಿಸಬಲ್ಲರೆ
ಪರಮ ಪ್ರಸಾದಿಯೆಂಬೆನು.
ಪರಂಜ್ಯೋತಿಪ್ರಕಾಶನೆಂಬೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೫ ॥

೪೧೮

ಪೃಥ್ವಿ, ಸುಚಿತ್ತ, ಘ್ರಾಣ, ಗಂಧ, ಪಾಯ್ವಿಂದ್ರಿಯ ಇವು
ಭಕ್ತನಂಗಮುಖಂಗಳು.
ಆ ಭಕ್ತಂಗೆ ಆಚಾರಲಿಂಗವೇ ಪ್ರಾಣವಾಗಿಪ್ಪುದಯ್ಯ.
ಅಪ್ಪು, ಸುಬುದ್ಧಿ, ಜಿಹ್ವೆ, ರಸ, ಗುಹ್ಯ ಈ ಐದು
ಮಹೇಶ್ವರನ ಅಂಗಮುಖಂಗಳು,
ಆ ಮಹೇಶ್ವರಂಗೆ ಗುರುಲಿಂಗವೇ ಪ್ರಾಣವಾಗಿಪ್ಪುದಯ್ಯ.

ಅಗ್ನಿ, ನಿರಹಂಕಾರ, ನೇತ್ರ, ರೂಪು, ಪಾದ ಈ ಐದು
ಪ್ರಸಾದಿಯ ಅಂಗಮುಖಂಗಳು.
ಆ ಪ್ರಸಾದಿಗೆ ಶಿವಲಿಂಗವೇ ಪ್ರಾಣಲಿಂಗವಾಗಿಪ್ಪುದಯ್ಯ.
ವಾಯು, ಸುಮನ, ತ್ವಕ್ಕು, ಸ್ಪರ್ಶನ, ಪಾಣಿ ಈ ಐದು
ಪ್ರಾಣಲಿಂಗಿಯ ಅಂಗಮುಖಂಗಳು.
ಆ ಪ್ರಾಣಲಿಂಗಿಗೆ ಜಂಗಮಲಿಂಗವೇ ಪ್ರಾಣವಾಗಿಪ್ಪುದಯ್ಯ.
ಆಕಾಶ, ಸುಜ್ಞಾನ, ಶ್ರೋತ್ರ, ಶಬ್ದ, ವಾಕು ಈ ಐದು
ಶರಣನ ಅಂಗಮುಖಂಗಳು.
ಆ ಶರಣನಿಗೆ ಪ್ರಸಾದಲಿಂಗವೇ ಪ್ರಾಣವಾಗಿಪ್ಪುದಯ್ಯ.
ಆತ್ಮ, ಸದ್‌ಭಾವ, ಮನ, ನೆನಹು, ಪರಿಣಾಮ ಈ ಐದು
ಐಕ್ಯನ ಅಂಗಮುಖಂಗಳು.
ಆ ಐಕ್ಯಂಗೆ ಮಹಾಲಿಂಗವೇ ಪ್ರಾಣವಾಗಿಪ್ಪುದಯ್ಯ.
ಇಂತೀ ಅಂಗಮುಖವನರಿದು
ಲಿಂಗಮುಖವ ಮಾಡಬಲ್ಲರೆ ಪ್ರಸಾದಿಯೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೬ ॥

೪೧೯

ಕಾಯಲಿಂಗಾರ್ಪಿತವಾಯಿತ್ತಾಗಿ
ಕರ್ಮ ನಿರ್ಮೂಲ್ಯವಾಗಿ
ನಿರ್ಮಲಾಂಗಿಯಾದೆನು ನೋಡಾ.
ಜೀವ ಲಿಂಗಾರ್ಪಿತವಾಯಿತ್ತಾಗಿ
ಜೀವ ಪರಮರೆಂಬ ಉಭಯವಳಿದು
ಚಿತ್ಪರಮಲಿಂಗವಾದೆನು ನೋಡಾ.
ಪ್ರಾಣಲಿಂಗಾರ್ಪಿತವಾಯಿತ್ತಾಗಿ
ಇಹಪರವನರಿಯೆನು ನೋಡಾ.
ಪರಿಣಾಮ ಲಿಂಗಾರ್ಪಿತವಾಯಿತ್ತಾಗಿ
ಶರಣ ಲಿಂಗವೆಂಬ ಕುರುಹಿಲ್ಲ ನೋಡಾ.
ನಾನೆಂಬುದು ಲಿಂಗಾರ್ಪಿತವಾಯಿತ್ತಾಗಿ
ನಾನು ಇಲ್ಲ, ನೀನು ಇಲ್ಲ ಏನು ಏನೂ ಇಲ್ಲದ
ಅಪ್ರತಿಮ ಪ್ರಸಾದಿಯಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೭ ॥

೪೨೦

ಸಂಗ್ರಹದ ಮನೆಯಲ್ಲಿ ಭೃಂಗೀಶ್ವರನೆದ್ದು
ಲಿಂಗಲೀಲೆಯಾಡುವುದ ಕಂಡೆನಯ್ಯ.
ನಂದೀಶ್ವರ ಮುಖ್ಯರಾದ ಪ್ರಮಥರು
ನಲಿದಾಡುತ್ತಿದಾರೆ ನೋಡ ಅಯ್ಯ.
ಸಂಗ್ರಹದ ಮನೆಯಳಿದು ಭೃಂಗಿ ಸಿಕ್ಕದೆ
ಭಂಗಿತರಾದರಲ್ಲಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೮ ॥

೪೨೧

ಮಾಳಿಗೆಯ ಮನೆಯ ಕಾಳಿಕೆಯೊಳಗೆ
ಹೊಳಿದ್ದ ವಸ್ತು ಇದೇನಯ್ಯ
ಮಾಳಿಗೆ ಬಯಲಾಗಿ ಕಾಳಿಕೆ ಅಳಿದಲ್ಲದೆ
ಹೂಳಿದ್ದ ವಸ್ತುವ ಕಾಣಲಾರಳವಲ್ಲ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೯ ॥

೪೨೨

ಅದ್ವೈತವ ನುಡಿವ ಬದ್ಧಭವಿಗಳಿರಾ
ಮನದ ಕ್ಷುದ್ರವಡಗದು ಕಾಣೆ ಭೋ.
ತತ್ವಾರ್ಥವ ನುಡಿವ ವ್ಯರ್ಥಕಾಯರುಗಳಿರಾ
ವಿಕಾರದ ಕತ್ತಲೆ ಹರಿಯದು ಕಾಣೆ ಭೋ.
ಶಿವಾನುಭಾವ ನಿಮಗೇಕೆ? ಸತ್ತ ಹಾಂಗಿರಿ ಭೋ.
ತತ್ವವತ್ತಲೆಯಾಗಿ ನೀವಿತ್ತಲೆಯಾಗಿ
ಮೃತ್ಯುವಿನ ಬಾಯ ತುತ್ತಾದಿರಲ್ಲಾ.
ತತ್ವವಿತ್ತುಗಳು ವೃಥಾ ಸತ್ತುದ ಕಂಡು
ಮೃತ್ಯುಂಜಯನ ಶರಣರು ನಗುತಿಪ್ಪರು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೦ ॥

೪೨೩

ಗಾಳಿ ಬೀಸುವನ್ನಕ್ಕರ ಮರನುಲಿಯದೆ ಮಾಣದಯ್ಯ.
ಕಾಯುವುಳ್ಳನ್ನಕ್ಕರೆ ವಿಕಾರ ಸಾಯದು ನೋಡ.
ಭಾವವುಳ್ಳನ್ನಕ್ಕರ ಭ್ರಮೆ ಅಡಗದಯ್ಯ.
ಮನವುಳ್ಳನ್ನಕ್ಕರ ಮಾಯೆ ಮಾಣದಯ್ಯ.
ಮಾಯವುಳ್ಳನ್ನಕ್ಕರ ಸಾವು ಮಾಣ್ಬುದೆ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೧ ॥

೪೨೪

ಮುಂದಳ ಮುಖಸಾಲೆಯೊಳಗೆ
ಉದ್ದಂಡಮೂರ್ತಿಯ ಕಂಡೆನಯ್ಯ.
ಲಂಡರ ಪುಂಡರ ಭಂಡರ ದಂಡಿಸುತ್ತಿದಾನೆ ನೋಡ!
ಮುಂದಣ ಮುಖಸಾಲೆಯ ಮುರಿದು
ಉದ್ದಂಡಮೂರ್ತಿ ಉಳಿದ ಪ್ರಚಂಡತೆಯನೇನೆಂಬೆನಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೨ ॥

೪೨೫

ನಡುವಳ ಮಂಟಪದಲ್ಲಿ ಮೃಡಮೂರ್ತಿಯ ಕಂಡೆನಯ್ಯ.
ಮೃಡನ ಗಡಣೆಯಲ್ಲಿ ಜಗವೆಲ್ಲ ಅಡಗಿ ಉಡುಗಿದೆ ನೋಡ!
ಈ ಒಡೆಯನ ಮಹಿಮೆಯನೇನೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೩ ॥

೪೨೬

ಮುಂದಳ ಮನೆಯಲ್ಲಿ ಚಂದ್ರಶೇಖರನಿದಾನೆ ನೋಡಾ ಅಯ್ಯ.
ಚಂದ್ರಶೇಖರನ ಸ್ನೇಹವ ಮಾಡಲು ಬಂಧನ ಹಿಂಗಿತ್ತಯ್ಯ.
ಜಗ ವಂದನೆಗೆಯ್ಯಲಾದೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೪ ॥

೪೨೭

ಷಡಕ್ಷರ ಶಕ್ತಿ ಯುಕ್ತವಾಗಿ
ಷಡುಸಾದಾಖ್ಯ ಮೂರ್ತಿ ಸಂಪೂರ್ಣವಾಗಿ

ಶರಣನ ಷಡಂಗದಲ್ಲಿ ಸದಾ ಸನ್ನಹಿತನಾಗಿ
ಸರ್ವ ಸರ್ವಜ್ಞ ಸರ್ವೇಶ ಸರ್ವಾನಂದಮಯ
ಷಟ್‌ಸ್ಥಲಬ್ರಹ್ಮಮೂರ್ತಿ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೫ ॥

**ಪ್ರಾಣಲಿಂಗಿಯ ಐಕ್ಯ**

೪೨೮

ಬ್ರಹ್ಮವೆನಲು ಪರಬ್ರಹ್ಮವೆನಲು
ಪರಮನೆನಲು ಪರಮೇಶ್ವರನೆನಲು
ಪರಮಾತ್ಮನೆನಲು ಪರತತ್ವವೆನಲು
ಪರಂಜ್ಯೋತಿಯೆನಲು ಪರವಸ್ತುವೆನಲು ಪರಾಪರವೆನಲು
ಇಂತಿವೆಲ್ಲಾ ನಾಮದಲ್ಲಿಯೂ ಪ್ರಕಾಶಿಸುತ್ತಿಪ್ಪಾತನು ಪರಶಿವನು.
ಪರಶಿವನೆಂದರೆ ಪರಮಾತ್ಮ.
ಪರಮಾತ್ಮನೆಂದರೆ ಮಹಾಲಿಂಗ.
ಆ ಮಹಾಲಿಂಗ ತಾನೆ ಪ್ರಸಾದಲಿಂಗವಾಗಿ ಉದ್ಭವಿಸಿತ್ತು.
ಪ್ರಸಾದಲಿಂಗದಲ್ಲಿ ಜಂಗಮಲಿಂಗ ಹುಟ್ಟಿತ್ತು.
ಜಂಗಮಲಿಂಗದಲ್ಲಿ ಶಿವಲಿಂಗ ಹುಟ್ಟಿತ್ತು.
ಶಿವಲಿಂಗದಲ್ಲಿ ಗುರುಲಿಂಗ ಜನಿಸಿತ್ತು.
ಗುರುಲಿಂಗದಲ್ಲಿ ಆಚಾರಲಿಂಗ ಉತ್ಪತ್ಯವಾಯಿತ್ತು.
ಇಂತೀ ಷಡ್ವಿಧಲಿಂಗವೂ ಒಂದರಿಂದೊಂದಾದವು.
ಒಂದನೊಂದ ಕೂಡಿಹವು.
ಇಂತೀ ಷಟ್‌ಸ್ಥಲವೂ ಏಕವೆಂದರಿವುದಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೬ ॥

೪೨೯

ಆಚಾರಲಿಂಗಕ್ಕೆ ಗುರುಲಿಂಗವೇ ಪ್ರಾಣ.
ಗುರುಲಿಂಗಕ್ಕೆ ಶಿವಲಿಂಗವೇ ಪ್ರಾಣ.
ಶಿವಲಿಂಗಕ್ಕೆ ಜಂಗಮಲಿಂಗವೇ ಪ್ರಾಣ.
ಜಂಗಮಲಿಂಗಕ್ಕೆ ಪ್ರಸಾದಲಿಂಗವೇ ಪ್ರಾಣ.
ಪ್ರಸಾದಲಿಂಗಕ್ಕೆ ಮಹಾಲಿಂಗವೇ ಪ್ರಾಣ.

ಇಂತಿವು ಒಂದಕ್ಕೊಂದು ಪ್ರಾಣವಾಗಿಪ್ಪವಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೭ ॥

೪೩೦

ಲಿಂಗಕ್ಕೂ ಪ್ರಾಣಕ್ಕೂ ಭೇದವಿಲ್ಲೆಂದರಿದು
ಲಿಂಗಾರ್ಚನೆಯ ಮಾಡಿ ಈ ಪ್ರಕಾರದಲ್ಲಿ ಆಚರಿಸಲಾಗಿ
ಷಟ್‌ಪ್ರಕಾರವಪ್ಪ ಲಿಂಗವು ಕ್ರಮ ತಪ್ಪದೆ ಸಾಧ್ಯವಪ್ಪುವು.
ಸಂಕಲ್ಪ ವಿಕಲ್ಪವಿಲ್ಲದೆ ಹೀಂಗೆಂದರಿಯಲು
ಆ ಪ್ರಾಣನು ಲಿಂಗಪ್ರಭೆಯೊಳಗೋಲಾಡುತ್ತಿಪ್ಪುದಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೮ ॥

೪೩೧

ಏಳು ಪೀಠದೊಳಗೆ ಸಾವಿರದೈವತ್ತೆರಡು
ಮನೆ ಮಾಡಿಪ್ಪುದ ಕಂಡೆನಯ್ಯ.
ಒಂದೇ ಜ್ಯೋತಿ ಸಾವಿರದೈವತ್ತೆರಡು ಜ್ಯೋತಿಯ
ಬೆಳಗುತ್ತಿದೆ ನೋಡಯ್ಯ.
ಏಳುಪೀಠದೊಳಗೆ ಏಕಾಕಾರ ಅಖಂಡಪರಿಪೂರ್ಣವಾಗಿಪ್ಪುದಯ್ಯ.
ಆ ಪರಿಪೂರ್ಣ ಪರಾಪರವೇ ತಾನೆಂದರಿದು
ಸಮರಸವನೆಯ್ದಬಲ್ಲಾತನಲ್ಲದೆ
ಶಿವೈಕ್ಯನಲ್ಲ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೯ ॥

೪೩೨

ಎನ್ನ ರೂಹೆ ನಿನ್ನ ರೂಹಯ್ಯಾ; ನಿನ್ನ ರೂಹೆ ಎನ್ನ ರೂಪಯ್ಯ.
ಎನ್ನ ಜೀವನವೆ ನಿನ್ನ ಜೀವನವಯ್ಯ;
ನಿನ್ನ ಜೀವನವೆ ಎನ್ನ ಜೀವನವಯ್ಯ.
ಎನ್ನ ಸುಖವೆ ನಿನ್ನ ಸುಖವಯ್ಯ;
ನಿನ್ನ ಸುಖವೆ ಎನ್ನ ಸುಖವಯ್ಯ.
ನಿನಗೆ ಎನಗೆ ಸಂದು ಸಂಶಯವಿಲ್ಲವಯ್ಯ.
ಸಂದುಂಟೆಯ ನುಡಿವುದೆಲ್ಲವು ಬಂಧನದ ನುಡಿ ಕಾಣಿರೋ.
ಆದಿಯಲು ಸಂದಿಲ್ಲ. ಅನಾದಿಯಲು ಸಂದಿಲ್ಲ.

ಎಂದೆಂದೂ ಸಂದಿಲ್ಲ ಶರಣ ಲಿಂಗಕ್ಕೆ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೦ ॥

೪೩೩

ಕರಿಯ ಶಿರದಲ್ಲಿ ಬರಿಕೈ ಹುಟ್ಟಿ
ಶರೀರವ ನುಂಗಿ ಉರಿಯನುಣ್ಣುತ್ತಿದೆ ನೋಡ.
ಉರಿಯ ನಾಲಿಗೆಯಲ್ಲಿ ಮನೋನ್ಮನಿ ಹುಟ್ಟಿ
ಕರಿಯ ಶಿರವ ಮೆಟ್ಟಿ ನಿಂದಳು ನೋಡ.
ಉರಿಯ ನಾಲಿಗೆ ಸಂದಿ, ಕರಿಯ ಬರಿಕೈ ಮುರಿದು
ನಿರ್ವಯಲ ಬೆರಸಿದಳು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೧ ॥

೪೩೪

ಮೂರುಮಂಡಲ ತಿರುಗುವಲ್ಲಿ
ಆರೂರವರು ಆಳುತ್ತಿರ್ಪರು ನೋಡ.
ಬೇರೊಂದೂರವರು ಬಂದು,
ಮೂರುಮಂಡಲವನೊಂದುಮಾಡಿ
ಆರೂರವರ ಆಳುವ ಮಾಣಿಸಿ
ಬೇರೊಂದೂರ ಹೊಕ್ಕು ನೋಡಲು
ಈ ಊರೊಳಗೆ ಸತ್ತವನಿವನಾರೋಯೆಂದು
ನೋಡಿಯೆತ್ತಹೋಗಲು
ಎಲ್ಲರೂ ಸತ್ತುದ ಕಂಡು ಬೆರಗಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೨ ॥

೪೩೫

ಹರಿಯ ಹೇಳಿಗೆಯಲ್ಲಿ ಮಾರ್ಜಾಲ ಮೂಷಕನ
ಹಡೆದುದ ಕಂಡೆನಯ್ಯ.
ಕರಿಯ ಬೇಡನ ಕೈವಿಡಿದು, ರಾಹುಕೇತುಗಳಾಗಿ
ಚಂದ್ರಸೂರ್ಯರ ಕೊರೆಕೊಳನುಂಡು
ಧರೆಯಾಕಾಶಕ್ಕೆ ಶರಿರವಿಲ್ಲದೆ ಎಡೆಯಾಡುವುದ ಕಂಡೆ.
ಸಿರಿವರ ವಾಣಿಪತಿಯೆಂಬವರ ತನ್ನ ಹೊರೆಯಲ್ಲಿಕ್ಕಿ ಆಳಿ

ಮನುಮುನೀಶ್ವರರ ಮರೆದೊರಗಿಸಿದ್ದ ಕಂಡೆ.
ಇದರ ನೆಲೆಯನರಿದು, ಹೊಲಬ ತಿಳಿದುಕೊಳಬಲ್ಲಾತನಲ್ಲದೆ
ಲಿಂಗೈಕ್ಯನಲ್ಲ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೩ ॥

೪೩೬

ಚಂದ್ರಮಂಡಲವಲ್ಲಿ ರವಿ ಅಗ್ನಿಯೋಕುಳಿಯನಾಡುವವ
ಹಿಂದಳ ಕೇರಿಯವರು ಕಂಡು
ಮುಂದಳೊರವರಿಗೆ ಮೊರೆಯ ಹೇಳುತ್ತಿದಾರೆ ನೋಡಿರೇ.
ಮುಂದಳೂರವರೆಲ್ಲಾ ರವಿಯೋಕುಳಿಯ ಸಂಗದಿಂದ
ಮಂಗಳ ಮುಂಗಳವೆನುತ ಶಿವಲಿಂಗೈಕ್ಯರಾದುದ ಕಂಡೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೪ ॥

೪೩೭

ಮರ್ತ್ಯಲೋಕದುದರದೊಳಗೆ ಮೃತ್ಯುದೇವತೆ
ಕತ್ತೆ ಕುದುರೆಯ ಹಡದು
ಪುತ್ರೋತ್ಸಾಹವ ಮಾಡುವವ ಕಂಡು
ಸತ್ಯಲೋಕದ ಸತಿಯರು ಬಂದು
ಇದೆತ್ತಳುಚ್ಚಾಹವೆಂದು ಬೆಸಗೊಳಲು
ಕತ್ತೆ ಕುದುರೆಗಳು ಸತ್ತು ಮೃತ್ಯುದೇವತೆಯೆತ್ತಹೋದಳೆಂದರಿಯೆ.
ಆ ಲೋಕವೆಲ್ಲವು ಮುಕ್ತಿಸಾಮ್ರಾಜ್ಯವಾದುದ ಕಂಡು
ಇದು ನಿತ್ಯ ನಿಜಲಿಂಗೈಕ್ಯವೆಂದರಿದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೫ ॥

೪೩೮

ಮೂಡಣಗಿರಿಯಲ್ಲಿ ಸೂರ್ಯನುದಯವಾಗಲು
ಮುಂದಣ ಕೇರಿಯ ಕೋಳಿ ಕೂಗುತ್ತದೆ ನೋಡ.
ಕೋಳಿಯ ದನಿಗೇಳುತ್ತ ಆ ಲೋಕದ ಪ್ರಾಣಿಗಳು
ಪ್ರಣಮನಂಗೆಯ್ಯುತ್ತಿಪ್ಪರು
ಕೋಳಿ ಸತ್ತಿತ್ತು, ಕೂಗು ಅಡಗಿತ್ತು.
ಪ್ರಣಮನಂಗೆಯ್ಯುತ್ತಿಪ್ಪ ಪ್ರಾಣಿಗಳೆಲ್ಲರು ಪ್ರಳಯವಾದುದ ಕಂಡು

ಲೋಕಾಲೋಕದ ತೋರಿಕೆ ಏಕಾಕಾರವಾಯಿತ್ತು.
ಅನುಪಮ ಲಿಂಗೈಕ್ಯಂಗೆ ಲೋಕ ಭ್ರಮೆಯುಂಟೆ?
ನಿಭ್ರಾಂತನಾದ ನಿತ್ಯನಿರಂಜನನಿಗಿನ್ನೆತ್ತಳ ರಂಜನೆ ಹೇಳಾ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೬ ॥

೪೩೯

ಕಾಲಾಗ್ನಿರುದ್ರನ ಲೋಕದಿಂದ ಜೇನುಮಳೆ ಕರೆವುದ
ಮಾನವಲೋಕದವರು ಕಂಡು
ಕಾಲಾಗ್ನಿರುದ್ರನ ಭುವನವೆತ್ತ ಜೇನಮಳೆಯತ್ತಲೆಂದು
ತಾವು ಚೋದ್ಯವ ಮಾಡುತ್ತಿರಲು
ಮೇಲಣ ಲೋಕದಿಂದ ಅಮೃತಸೋನೆ ಸುರಿಯಲು
ಕಾಲಾಗ್ನಿ ಕೆಟ್ಟಿತ್ತು.
ಜೇನಸೋನೆ ಅಮೃತವಾಗದ ಮುನ್ನ
ನೋಡಬಂದವರೆಲ್ಲ ಸತ್ತುದ ಕಂಡು
[ತಾ] ನಿರ್ವಯಲಾದನು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೭ ॥

೪೪೦

ರವಿಯ ಮಂಡಲದಲ್ಲಿ ಶಶಿಯ ಮೇಘದ ಸೋನೆ ಸುರಿವುತ್ತಿದೆ.
ಅಗ್ನಿವರ್ಣದ ಬೀಜದಲ್ಲಿ
ಐಮುವರ್ಣದ ವೃಕ್ಷ ಹುಟ್ಟಿತ್ತು ನೋಡಿರೇ.
ಆ ವೃಕ್ಷ ನಾನಾರೂಪಿನ ಫಲ ಪ್ರಜ್ವಲಿಸುತ್ತಿದೆ ನೋಡ.
ನಾನಾರೂಪಿನ ಪ್ರಜ್ವಲಾಕಾರ ಏನು ಏನೂ ಇಲ್ಲದ ಠಾವಿನಲ್ಲಿ
ವಿಶ್ರಾಂತಿಯನೆಯ್ದಿರೆ.
ನಾನು ಸ್ವಯಂಭುವಾದೆನು ಕಾಣಾ.
ಏನು ಏನೂ ಇಲ್ಲದ ನಿರಾಳ ನೀನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೮ ॥

೪೪೧

ತಲೆಯಲ್ಲಿ ಹುಟ್ಟಿದ ಕಣ್ಣು ನೆಲದೊಡೆಯನ ನುಂಗಿತ್ತು ನೋಡ.
ತಲೆಯಳಿಯಿತ್ತು; ನೆಲ ಬೆಂದಿತ್ತು.
ತಲೆಯೊಳಗಣ ಕಣ್ಣು

ತ್ರಿಜಗದಾಧಿಪತಿಯ ತಾನೆಂದು ನೋಡುತ್ತ ನೋಡುತ್ತ ಅಡಗಲು
ನೆಲದೊಡೆಯ ಸತ್ತುದ ಕಂಡು
ನಿರ್ವಯಲ ಸಮಾಧಿಸ್ಥಲವಾಗಿ
ಕುರುಹಳಿದ ಲಿಂಗೈಕ್ಯನಯೇನೆಂದುಪಮಿಸುವೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೯ ॥

೪೪೨

ಐದು ಬಣ್ಣದ ಗಿಡುವಿಂಗೆ ಇಪ್ಪತ್ತೈದು ಕೊನೆ ನೋಡ.
ಅಲ್ಲಿ ಸುತ್ತಿಯಾಡುವತನೊಬ್ಬನೆ ನೋಡ.
ಐದು ಬಣ್ಣವಳಿದು ಇಪ್ಪತ್ತೈದು ಶಾಖೆ ಮುರಿಯಲು
ಅಲ್ಲಿ ಆಡುವಾತ ಸತ್ತು ಕೋಳುಹೋಯಿತ್ತು;
ನಿಮ್ಮವರಿಗೆ ನಿತ್ಯನಿಜಲಿಂಗೈಕ್ಯ ಸಾಮ್ರಾಜ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೧೦ ॥

**ಶರಣಸ್ಥಲದ ವಚನ**

ಸೂತ್ರ॥ ಇಂತು ಅನುಭಾವ ಭಕ್ತಿಯಿಂದ ಪ್ರಾಣಲಿಂಗಿಸ್ಥಲವನಾಚರಿಸಿದ ಪ್ರಾಣಲಿಂಗಿ ತಾನೆ ಶರಣನಾದನಾಗಿ ಮುಂದೆ ಶರಣಸ್ಥಲವಾದುದು.

೪೪೩

ಲಿಂಗವೇ ಪತಿಯಾಗಿ ತಾನೆ ಸತಿಯಾಗಿ
ಅನ್ಯವನರಿಯದೆ ಪಂಚೇಂದ್ರಿಯರಹಿತನಾಗಿ
ತೆರಹಿಲ್ಲದರುಹು ತಾನಾಗಿ
ನೆರೆ ಅರುಹಿನೊಳು ನಿಬ್ಬೆರಗಾಗಿ
ಹೃದಯ ಕಮಲ ಮಧ್ಯದಲ್ಲಿ ಪರಮೇಶ್ವರನೊಳಗಣ
ಸಮರಸ ಸ್ನೇಹವೆರಸಿ
ಅಗಲದಿಪ್ಪುದೀಗ ಶರಣಸ್ಥಲವಿದೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

೪೪೪

ಆಕಾಶವೇ ಅಂಗವಾದ ಶರಣನಲ್ಲಿಯೆ
ಐಕ್ಯ ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿಯಪ್ಪ

ಲಿಂಗಪಂಚಕವು ಗರ್ಭೀಕೃತವಾಗಿ
ಆ ಶರಣಂಗೆ ಪ್ರಸಾದಲಿಂಗವೆ ಸ್ವಾಯತವಾಗಿ
ಆ ಪ್ರಸಾದಿಲಿಂಗವಲ್ಲಿಯೆ
ಮಹಾಲಿಂಗ ಆಚಾರಲಿಂಗ ಗುರುಲಿಂಗ ಶಿವಲಿಂಗ
ಜಂಗಮಲಿಂಗವೆನಿಸುವ
ಲಿಂಗಪಂಚಕವು ಗರ್ಭೀಕೃತವಾಗಿ
ಪ್ರಸಾದಲಿಂಗವೆ ಆಶ್ರಯವಾಗಿ
ಇಂತೀ ಷಡ್ವಿಧಲಿಂಗವಲ್ಲಿ ಬೆರಸಿ ಬೇರಿಲ್ಲದಿರಬಲ್ಲರೆ
ಶರಣನೆಂಬೆನಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨ ॥

೪೪೫

ನೀರೊಳಗಣ ಪಾವಕನೆದ್ದುರಿಯಲು
ಮೇರುಗಿರಿ ಬೆಂದುದ ಕಂಡೆನಯ್ಯ.
ಊರಳಿದು ಉಲುಹಡಗಿ
ಮಾರಿಮಸಣಿಯರು ಮಡಿದುದು ಸೋಜಿಗ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩ ॥

೪೪೬

ಸಪ್ತದ್ವೀಪದ ಮಧ್ಯದಲ್ಲಿ
ಇಪ್ಪತ್ತೈದು ಕೊನೆಯ ವೃಕ್ಷವ ಕಂಡೆನಯ್ಯ.
ಎಂಟರಾದಿಯಲ್ಲಿ ನಿಂದು
ಏಳರ ನೀರನಲ್ಲಿ ಬೆಳೆದು
ಆರರ ಭ್ರಮೆಯಲ್ಲಿ ಮುಳುಗಿ ಮೂಡುತ್ತಿಹುದು.
ಹತ್ತರ ಹಾದಿಯಲ್ಲಿ ಹರಿದು ಹಬ್ಬಿ ಕೊಬ್ಬುವುದಯ್ಯ.
ಎಲೆ ಹೂವು ಫಲವು ಹಲವಾಗಿಪ್ಪುದಯ್ಯ.
ಸಪ್ತದ್ವೀಪವೂ ಅಲ್ಲ ;
ಇಪ್ಪತ್ತೈದು ಕೊನೆಯೂ ಅಲ್ಲ ;
ಎಂಟಲ್ಲ, ಏಳಲ್ಲ, ಆರರ ಭ್ರಮೆಯಲ್ಲ ;
ಹತ್ತರ ಹಾದಿಯಲ್ಲಿ ಹರಿದು ಹಬ್ಬಿ ಕೊಬ್ಬುವುದಿಲ್ಲ ;
ಎಲೆ ಹೂವು ಫಲವು ಹಲವಾಗಿ ತೋರುವ
ತೋರಿಕೆ ತಾನಲ್ಲವೆಂದು

ನಡುವಣ ವೃಕ್ಷದ ನೆಲೆಯ ನಿರ್ಣಯವ ತಿಳಿದಾತನಲ್ಲದೆ
ಸಲೆ ಶಿವಶರಣನಲ್ಲ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪ ॥

೪೪೭

ಧರೆಯ ಮೇಲಣ ಅರೆಯಲ್ಲಿ
ಮೇರುಗಿರಿ ಹುಟ್ಟಿಮುದ ಕಂಡೆನಯ್ಯ.
ಗಿರಿಯ ಸನ್ನಿಧಿಯಲ್ಲಿ ವಜ್ರ ಉದಯಿಸಲು
ಗಿರಿ ಕರಗಿ ಅರೆವೊಡೆಮು, ಧರೆ ಬೆಂದು
ಕಾಲಾಗ್ನಿ ಎದ್ದು ಉರಿವುತ್ತಿದೆ ನೋಡ.
ಆ ಉರಿಯೇ ವಜ್ರದ ಪ್ರಭೆಯೆಂದೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫ ॥

೪೪೮

ಮದಗಜದ ಹೃದಯದಲ್ಲಿ ಮರಿವಾಲಿಪ್ಪುದ ಕಂಡೆನಯ್ಯ.
ಹುಲ್ಲೆ ಅರಿಯದೆ ಹುಲಿಯ ಬಾಯ ತುತ್ತಾಯಿತ್ತಲ್ಲಾ.
ಬಲ್ಲವರ ಕಡೆಯಿಂದ ಭಾಸ್ಕರನುದಯಿಸಲು
ಹುಲಿಬಿಟ್ಟು ಹುಲ್ಲೆ ಮರಿವಾಲನುಂಡು ಮರಣವನಳಿಯಿತ್ತಲ್ಲ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬ ॥

೪೪೯

ನೂಲೆಳೆಯ ತೋರದ ಮರದಲ್ಲಿ
ಬೆಟ್ಟದ ತೋರ ಕಾಯಿ ಫಲವಾದುದ ಕಂಡೆನಯ್ಯ.
ಮರನನೇರಿ ಕಾಯಿ ಕೊಯಿವನ್ನಕ್ಕರ
ಭವಭಾರ ಹಿಂಗದು ನೋಡ.
ಮರವನೇರದೆ ಕಾಯ ಮುಟ್ಟದೆ
ಮೇಲಣ ಹಣ್ಣಿನ ರುಚಿಯ ಚೆನ್ನಾಗಿ ಸ್ವೀಕರಿಸಬಲ್ಲಾತನಲ್ಲದೆ
ಶಿವಶರಣನಲ್ಲ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭ ॥

೪೫೦

ಹಾವ ಹಿಡಿವ ಚೇಳು ತಾನೆದ್ದೂರಲು
ಮೂಜಗವೆಲ್ಲವು ಬೇನೆಹತ್ತಿ ಬೇವುತ್ತಿದೆ ನೋಡ.
ಚೇಳಿನ ಮುಳ್ಳ ಮುರಿಯಲು ಬೇನೆ ಮಾಬುದು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮ ॥

೪೫೧

ಒಳಗೆಂಬವನೊಬ್ಬ; ಹೊರಗೆಂಬವನೊಬ್ಬ.
ರೂಪೆಂಬವನೊಬ್ಬ; ನಿರೂಪೆಂಬವನೊಬ್ಬ.
ಕಾಮಿಯೆಂಬವನೊಬ್ಬ; ನಿಃಕಾಮಿಯೆಂಬವನೊಬ್ಬ.
ಮಾಯೆಯೆಂಬವನೊಬ್ಬ; ನಿರ್ಮಾಯನೆಂಬವನೊಬ್ಬ.
ಶುದ್ಧನೆಂಬವನೊಬ್ಬ; ಅಶುದ್ಧನೆಂಬವನೊಬ್ಬ.
ಮಲಿನನೆಂಬವನೊಬ್ಬ; ನಿರ್ಮಲಿನನೆಂಬವನೊಬ್ಬ.
ಒಳಗೆಂಬಾತನು ಅಲ್ಲ; ಹೊರಗೆಂಬಾತನು ಅಲ್ಲ.
ರೂಪೆಂಬಾತನು ಅಲ್ಲ; ನಿರೂಪಪೆಂಬಾತನು ಅಲ್ಲ.
ಕಾಮಿಯೆಂಬಾತನು ಅಲ್ಲ; ನಿಃಕಾಮಿಯೆಂಬಾತನು ಅಲ್ಲ.
ಮಾಯಿ ಎಂಬಾತನೂ ಅಲ್ಲ. ನಿರ್ಮಾಯ ಎಂಬಾತನೂ ಅಲ್ಲ
ಶುದ್ಧನೆಂಬಾತನು ಅಲ್ಲ; ಅಶುದ್ಧನೆಂಬಾತನು ಅಲ್ಲ.
ಮಲಿನನೆಂಬಾತನು ಅಲ್ಲ; ನಿರ್ಮಲಿನನೆಂಬಾತನು ಅಲ್ಲ.
ನಾನು ನೀನೆಂಬುದೇನುಯೇನೂ ಇಲ್ಲದ
ಪರಾಪರವೇ ಶರಣನಯ್ಯ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯ ॥

೪೫೨

ತಾನೆ ಬ್ರಹ್ಮವೆಂದು ಕರ್ತೃಹೀನನಾದ ವಾಗದ್ವೈತಿಯಲ್ಲ.
ಅನಾದಿ ಭಿನ್ನವಾಗಿ ದ್ವೈತಿಯಲ್ಲ ನೋಡ ಶರಣನು.
ಅದೇನು ಕಾರಣವೆಂದರೆ:
ಮಹಾಘನ ಪರಶಿವತತ್ವದಲ್ಲಿ ಚಿತ್ತು ಉದಯಿಸಿತ್ತು.
ಆ ಚಿಚ್ಛಕ್ತಿಯಿಂದ ಶಿವಶರಣನುದಯಿಸಿದನು.
ಅಂತು ಉದಯಿಸಿದ ಚಿದ್ರೂಪಮನೇ ಶರಣನು;
ಸದ್ರೂಪವೇ ಲಿಂಗವು.

ಈ ಶರಣ ಲಿಂಗವೆರಡರ ಸಂಬಂಧವ
ದ್ವೈತವೆನಲಿಲ್ಲ; ಅದ್ವೈತವೆನಲಿಲ್ಲ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦ ॥

೪೫೩

ನಿರಾಕಾರ ಪರವಸ್ತು [ತಾನೆ] ತನ್ನ ವಿನೋದಾರ್ಥಕಾರಣ
ನಿಜಜ್ಞಾನವಾಗಿ ತೋರಿತ್ತು ನೋಡ.
ಆ ಮಹಾಜ್ಞಾನ ಚಿತ್ತೇ
ಅಂಗಸ್ಥಲ ಲಿಂಗಸ್ಥಲವೆಂದಾಯಿತ್ತು ನೋಡ.
ಅಂಗವೇ ಶರಣ; ಲಿಂಗವೇ ಶಿವ.
ಅಂಗಲಿಂಗದ ಸಂಗಸಮರಸ ತಾನೆಂಬಾತ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೧ ॥

೪೫೪

ದೇಹಾದಿಗುಣವಿಲ್ಲದ
ಜಾತಿ ವರ್ಣಾಶ್ರಮ ನಾಮರೂಪಿಲ್ಲದ
ಜಿಹ್ವಾ ಲಂಪಟತ್ವವಿಲ್ಲದ
ಮದ ಮೋಹಾದಿಗಳಿಲ್ಲದ
ಮಾಯಾದೇಹದ ಮಲತ್ರಯದ ದುರ್ವಾಸನೆಯಿಲ್ಲದ
ಸಂಗ ಸಂಯೋಗ ಸಂಬಂಧವೆಂಬ ಇಂದ್ರಿಯಂಗಳ ಬಂಧವಿಲ್ಲದ
ಜ್ಞಾತೃ ಜ್ಞಾನ ಜ್ಞೇಯವೆಂಬ ತ್ರಿಪುಟಿಯಿಲ್ಲದ
ತ್ರಿಪುಟಿಯ ಮೀರಿ, ತ್ರಿಪುಟಿಗೆ ನಿಲುಕದ ಸ್ಥಾನದ
ಅರುಹಿನ ಪರಬ್ರಹ್ಮವೇ ಶರಣಲಿಂಗ ಕಾಣಿಭೋ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವಿನ ಶರಣರು
ಅದ್ವೈತಾನಂದದಿಂದ ಸಂಪೂರ್ಣ ಕಾಣಿರೋ. ॥ ೧೨ ॥

೪೫೫

ಅಣಿಮಾ ಗರಿಮಾ ಲಘಿಮಾ ಮಹಿಮಾ
ಪ್ರಾಪ್ತಿ ಪ್ರಾಕಾಮ್ಯ ಈಶತ್ವ ವಶತ್ವವೆಂಬ
ಅಷ್ಟಮಹದೈಶ್ವರ್ಯವ ತೃಣೀಕರಿಸಿಕೊಂಡಿಪ್ಪನು
ನೋಡಾ ಶರಣನು.

ಅಂಜನಾಸಿದ್ಧಿ, ಘುಟಿಕಾಸಿದ್ಧಿ, ಕಾಯಸಿದ್ಧಿ, ರಸಸಿದ್ಧಿ,
ವಾಚಾಸಿದ್ಧಿ, ದೂರಶ್ರವಣ, ದೂರದೃಷ್ಟಿ, ತ್ರಿಕಾಲಜ್ಞಾನ,
ಪರಕಾಯಪ್ರವೇಶ, ಖೇಚರಗಮನ. ಅಗ್ನಿಸ್ತಂಭ, ಜಲಸ್ತಂಭ,
ಮಾರಣ, ಮೋಹನ, ಉಚ್ಚಾಟನ ಇಂತಿವು ಮೊದಲಾದ
ನಾನಾಕುಟಿಲಸಿದ್ಧಿಯ ಪ್ರಪಂಚ ಹೊದ್ದನು ನೋಡಾ ಶರಣನು.
ಗುಣತ್ರಯಂಗಳನಳಿದ ನಿರ್ಗುಣನು
ನಿತ್ಯನು ನಿರಾಮಯನು ನೋಡಾ ಶರಣನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೩ ॥

೪೫೬

ದನುಜ ಮನುಜ ದಿವಿಜರ ಅಲ್ಪಪದವಿಯನೇನೆಂದು
ಅರಿಯನು ನೋಡಾ ಶರಣನು.
ಮನುಮುನಿಗಳ ಕ್ಷಣಿಕ ಪದಗಿದವ
ಬಗೆವನೇ ನಿಃಕಾಮಿ ಶರಣನು?
ಕಾಮಧೇನು ಗೀಮಧೇನು ಕಲ್ಪತರು ಗಿಲ್ಪತರು
ಚಿಂತಾಮಣಿ ಗಿಂತಾಮಣಿ ಪರುಷ ಗಿರುಷಗಳೆಂಬ
ಪ್ರಪಂಚುಗಳ ಎಣಿಸುವನೆ ನಿಭ್ರಾಂತಶರಣನು?
ಇಹಲೋಕದ, ಸುಖ, ಪರಲೋಕದ ಗತಿ ಎಂಬ
ಇಹಪರವನೆಣಿಸುವನೆ ಶರಣನು?
ಇಹಪರವೆಂಬ ಇದ್ದಸೆಗೆಟ್ಟು
ಪರಾಪರವಸ್ತುವೇ ತಾನಾದ
ಪರಮ ಪರಿಣಾಮಿ ನೋಡಾ ಶರಣನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೪ ॥

೪೫೭

ಬ್ರಹ್ಮಪದವ ಪಡೆದೆನೆಂಬುದು ಭ್ರಮೆ ಕಾಣಿರೋ.
ವಿಷ್ಣುಪದವ ಪಡೆದೆನೆಂಬುದು ತೃಷ್ಣೆ ಕಾಣಿರೋ.
ಇಂದ್ರಪದವ ಪಡೆದೆನೆಂಬುದು ಬಂಧನ ಕಾಣಿರೆಲವೋ
ಮರುಳು ಮಾನವರಿರಾ.
ದೇವತಾದಿಭೋಗಂಗಳ ಪಡೆದಿಹೆನೆಂದು
ಪರಿಣಾಮಿಸುವ ಗಾವಿಲರನೇನೆಂಬೆನಯ್ಯ?
ದನುಜಪದ ನಿತ್ಯವೆಂಬ ಮನುಜರ ಮರುಳತನವ ನೋಡಾ.

ಬ್ರಹ್ಮವಿಷ್ಣು ಇಂದ್ರಾದಿಗಳಿಗೊಡೆಯನಾದ
ರುದ್ರನ ಪದವ ಪಡೆದೆನೆಂಬುದು- ಅದು ಅಂತಿರಲಿ.
ಅದೇನು ಕಾರಣವೆಂದರೆ:
ಇವೆಲ್ಲವೂ ಅನಿತ್ಯಪದವಾದ ಕಾರಣ.
ಇವೆಲ್ಲ ಪದಂಗಳಿಗೂ ಮೇಲಾದ
ಮಹಾಲಿಂಗ ಪದವೇ ನಿತ್ಯತ್ವಪದ.
ಆ ಮಹಾಲಿಂಗ ಪದದೊಳಗೆ ಸಂಯೋಗವಾದ
ಘನಲಿಂಗ ಪದಸ್ಥ ಶರಣನು ತನಗನ್ಯವಾಗಿ
ಒಂದು ವಸ್ತುವ ಬಲ್ಲನೇ ಅನನ್ಯ ಶರಣನು?
ಇದು ಕಾರಣ,
ತನುವ ಬಳಲಿಸಿ ತಪವಮಾಡಿ
ಫಲಪದವ ಪಡೆದು ಭೋಗಿಸಿಹೆನೆಂಬವರ ವಿಧಿಯೆಲ್ಲ
ಹಂದಿ ತಪವಮಾಡಿ
ಹಾಳು[ಗೇರಿ]ಯ ಪಡೆದಂತಾಯಿತ್ತು ಕಾಣಾ.
ಶಿವಪದವಲ್ಲದೆ ಉಳಿದ ಪದವೆಲ್ಲಾ ಹುಸಿ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೫ ॥

೪೫೮

ಅಂಗದ ಕಳೆ ಲಿಂಗದಲ್ಲಿ; ಲಿಂಗದ ಕಳೆ ಅಂಗದಲ್ಲಿ,
ಅಂಗಕಳೆ ಲಿಂಗಕಳೆ ಎಂಬುಭಯವಳಿದು
ಆತನ ಅಂಗವೆಲ್ಲವು ಲಿಂಗಮಯವಾಗಿ
ಅಂಗಲಿಂಗ ಪದಸ್ಥನಯ್ಯ ಶರಣನು.
ಮನದಲ್ಲಿ ಲಿಂಗ; ಲಿಂಗದಲ್ಲಿ ಮನಬೆರಸಿ
ಮನವು ಮಹಾಘನವನಿಂಬುಗೊಂಡಿಪ್ಪುದಾಗಿ
ಪ್ರಪಂಚುಪದಂಗಳನರಿಯನಯ್ಯ ಶರಣನು.
ಮನಲಿಂಗ ಪದಸ್ಥನಾದ ಕಾರಣ
ಪ್ರಾಣದೊಡನೆ ಲಿಂಗ; ಲಿಂಗದೊಡನೆ ಪ್ರಾಣ ಕೂಡಿ
ಪ್ರಾಣನ ಗುಣವಳಿದು
ಪ್ರಾಣಲಿಂಗ ಪದಸ್ಥನಯ್ಯ ಶರಣನು.
ಭಾವ ಬ್ರಹ್ಮವನಪ್ಪಿ
ಜಾಗ್ರ ಸ್ವಪ್ನ ಸುಷುಪ್ತಿಯೆಂಬ ಸರ್ವಾವಸ್ಥೆಯನಳಿದ
ಪರಮಾವಸ್ಥನಯ್ಯ ಶರಣನು.
ಎಲ್ಲಾ ಪದಂಗಳ ಮೀರಿ ಮಹಾಘನವನಿಂಬುಗೊಂಡ

ಘನಲಿಂಗ ಪದಸ್ಥನಯ್ಯಾ ಶರಣನು.
ಇಂತಪ್ಪ ಘನಮಹಿಮ ಶರಣಂಗೆ
ಅವಲೋಕವಲ್ಲಿಯೂ ಇನ್ನಾರು ಸರಿಯಿಲ್ಲ ;
ಪ್ರತಿಯಿಲ್ಲ ಅಪ್ರತಿಮ ಶರಣಂಗೆ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. || ೧೬ ||

೪೫೯

ಪರುಷ ಸೋಂಕಿಯೂ ಪಾಷಾಣ ಶುದ್ಧವಾಗದಿದ್ದರೆ
ಆ ಪರುಷದ ಗೊಡವೆ ಏತಕಯ್ಯ?
ಅಗ್ನಿ ಸೋಂಕಿಯೂ ಕಾಷ್ಠದ ಗುಣವಳಿಯದಿದ್ದರೆ
ಆ ಅಗ್ನಿಯ ಗೊಡವೆ ಏತಕಯ್ಯ?
ಗರುಡನಿದ್ದೂ ಸರ್ಪದ ಭಯ ಹಿಂಗದಿದ್ದರೆ
ಆ ಗರುಡನ ಗೊಡವೆ ಏತಕಯ್ಯ?
ವಜ್ರಾಂಗಿಯ ತೊಟ್ಟಿರ್ದೂ ಬಾಣದ ಭಯ ಹಿಂಗದಿದ್ದರೆ
ಆ ವಜ್ರಾಂಗಿಯ ಗೊಡವೆ ಏತಕಯ್ಯ?
ಆನೆಯನೇರಿಯೂ ಶ್ವಾನನ ಭಯಹಿಂಗದಿದ್ದರೆ
ಆ ಆನೆಯ ಗೊಡವೆ ಏತಕಯ್ಯ?
ಜ್ಯೋತಿಯಿದ್ದೂ ಕತ್ತಲೆ ಹರೆಯದಿದ್ದರೆ
ಆ ಜ್ಯೋತಿಯ ಗೊಡವೆ ಏತಕಯ್ಯ?
ಅಂಗದ ಮೇಲೆ ಚಿದ್ಘನಲಿಂಗವ ಧರಿಸಿದ್ದು
ತನುಮನದ ಅವಗುಣ ಹಿಂಗದಿದ್ದರೆ
ಆ ಲಿಂಗದ ಗೊಡವೆ ಏತಕಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ
ನೀವು ಸೋಂಕಿಯೂ ಭವ ಹಿಂಗದಿದ್ದರೆ
ನಿಮಗೆ ಕುಂದಯ್ಯ. || ೧೭ ||

೪೬೦

ಜಂಗಮದ ಗುಣವನು, ಜಂಗಮದ ಭೇದವನು
ಜಂಗಮದ ರೂಪವನು ಹೇಳಿಹೆ ಕೇಳಿರಣ್ಣ.
ಜಂಗಮವೆಂದರೆ ಪರಮಜ್ಞಾನ ಸ್ವರೂಪನು.
ಒಂದಿನ ಉಂಟಾಗಿ ಒಂದಿನ ಇಲ್ಲ[ವಾಗಿಪ್ಪ]
ಉಪಜೀವನಕನಲ್ಲ ಕಾಣಿರಣ್ಣ.
ಉಪಾಧಿ[ಕ] ನಿರುಪಾಧಿಕನೆಂಬ ಸಂದೇಹಭ್ರಾಂತನಲ್ಲ ಕಾಣಿಭೋ.

ಸತ್ತು ಚಿತ್ತಾನಂದಭರಿತನು,
ಭಕ್ತನ ಪ್ರಾಣವೇ ತಾನಾಗಿಪ್ಪ ನಿತ್ಯ ಪರಿಪೂರ್ಣನೇ
ಜಂಗಮದೇವನೆಂದರಿಯಲು ಯೋಗ್ಯ ಕಾಣೆ ಭೋ.
ಆ ಘನ ಚೈತನ್ಯವೆಂಬ ಜಂಗಮವ
ಮನೋಭಾವದಲ್ಲಿ ಆರಾಧಿಸಿ ಸುಖಿಯಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೮ ॥

೪೬೧

ಜಂಗಮವೇನು ಕಾಮಿಯೇ? ಕ್ರೋಧಿಯೇ? ಲೋಭಿಯೇ?
ಅಲ್ಲ ಕಾಣಿರಣ್ಣ.
ಮೋಹಿಯೇ? ಮದಡನೇ? ಮತ್ಸರನೇ? ಅಲ್ಲ ಕಾಣಿರಣ್ಣ.
ಅಹಂಕಾರಿಯೇ ಮಮಕಾರಿಯೇ ಪ್ರಪಂಚಿಯೇ?
ಇಂತೀ ಪ್ರಕೃತಿರೂಪನಲ್ಲ ಕಾಣಿರಣ್ಣ.
ನಿಃಕಾಮಿ, ನಿಃಕ್ರೋಧಿ, ನಿರ್ಲೋಭಿ, ನಿರ್ಮೋಹಿ,
ನಿರ್ಮದ, ನಿರ್ಮತ್ಸರನಯ್ಯ.
ನಿರಹಂಕಾರಿ, ನಿರ್ಮಮಕಾರಿ, ನಿಃಪ್ರಪಂಚಿ, ನಿರ್ಲೇಪಕನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭು ತಾನೆ
ಕಾಣಿಭೋ. ॥ ೧೯ ॥

೪೬೨

ಜಂಗಮವೇನು ಸಂಗಿಯೇ? ಭೂಭಾರಿಯೇ? ಸೀಮನೇ?
ಉಪಾಧಿಕನೇ?
ದೇಹಿಯೇ? ಮಲಿನನೇ? ಅನಿತ್ಯನೇ? ಅಲ್ಲ ಕಾಣಿರಯ್ಯ.
ನಿಸ್ಸಂಗಿ; ನಿರಾಭಾರಿ; ನಿಸ್ಸೀಮ; ನಿರುಪಾಧಿಕ; ನಿರ್ದೇಹಿಯಯ್ಯ.
ನಿರ್ಮಲ; ನಿತ್ಯ; ನಿರುಪಮ; ನಿರ್ಗುಣ; ನಿರಾಧಾರ; ನಿರಾಲಂಬ;
ಸರ್ವಾಧಾರ ಸದಾ ಆನಂದಿಯೆ ಜಂಗಮದೇವನಯ್ಯ.
ಆ ಜಂಗಮೆ ತಾನಾಗದೆ
ಜಂಗಮ ಜಂಗಮವೆಂದು ನುಡಿದುಕೊಂಡು ನಡೆದರೆ
ನಾಚದವರನೇನೆಂಬೆನಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೦ ॥

೪೬೩

ಜಂಗಮ ಜಂಗಮವೆಂದರೇನೋ ಲಜ್ಜಾಭಂಡರಿರಾ?
ಜಂಗಮವಂತೆ ಕಳಂಕಿಯೇ? ಅಪೇಕ್ಷಿಯೇ? ಅಶಕ್ತನೇ?
ಪಾಶಜೀವಿಗಳ[ನೆ]ಂತು ಜಂಗಮವೆಂಬೆನಯ್ಯ?
ಜಂಗಮವೇನು ದೋಷಿಯೇ? ದುರ್ಗುಣಿಯೇ? ಅಸತ್ಯನೇ?
ಅನಾಚಾರಿಯೇ? ಅಲ್ಲ ಕಾಣಿರಯ್ಯ.
ಹೇಳಿ[ಹೆನು] ಕೇಳಿ ನಿಃಕಳಂಕ, ನಿರಪೇಕ್ಷ, ನಿರಾಶಕ,
ನಿರ್ದೋಷಿ, ನಿಃಪುರುಷ; ಸತ್ಯ, ದಯೆ, ಕ್ಷಮೆ, ದಮೆ,
ಶಾಂತಿ, ಸೈರಣೆ, ಸಮಾಧಾನ ಸಂತೋಷ ಪರಿಣಾಮಿ.
ನುಡಿ ತತ್ವ; ನಡೆ ಪಾವನ; ಸುಳುಹು ವಸಂತಗಾಳಿ.
ಜಗದಾರಾಧ್ಯ, ಸ್ವಯ ಸ್ವತಂತ್ರ ಚರ ಪರಿಣಾಮಿ
ಪರಿಪೂರ್ಣ ಪ್ರಕಾಶ.
ಸರ್ವತತ್ವಾಶ್ರಯ. ಶೂನ್ಯ ನಿಶ್ಶೂನ್ಯ ನಿರಾಳನೇ
ಜಂಗಮದೇವ ಕಾಣಿಭೋ, ಕೇಳಿ[ರಯ್ಯ]
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವಿನ ಘನವ! ॥ ೨೧ ॥

೪೬೪

ಕಂಥೆ ಖಟ್ವಾಂಗ ದಂಡ ಕಮಂಡಲ ಗುಂಡುಗಪ್ಪರದ ಜೋಳಿಗೆ
ಕಾಮಾಕ್ಷಿ ಇವು
ಪಂಚಮುದ್ರೆ ಪರಿಪೂರ್ಣ ಸ್ಥಲಕುಳವೆಂದು
ನುಡಿದುಕೊಂಡು ನಡೆವರಯ್ಯ.
ಜೀವವೆಂಬುದು ಹಾರಿ
ಕಾಯವೆಂಬ ಕಂಥೆಯ ತಡೆಗೆಡೆದು
ಮೆಟ್ಟಿ ಮೆಟ್ಟಿ ಹೂಳುವಲ್ಲಿ ಬಿಟ್ಟು ಹೋಹ ಪ್ರಾಣಕ್ಕೆ
ಆವುದು ಕಂಥೆ? ಆವುದು ಖಟ್ವಾಂಗ?
ಆವುದು ದಂಡ? ಆವುದು ಕಮಂಡಲ?
ಆವುದು ಗುಂಡುಗಪ್ಪರದ ಜೋಳಿಗೆ?
ಆವುದು ಕಾಮಾಕ್ಷಿ? ಈ ಸ್ಥಲಕುಳದ ನಿರ್ಣಯವ ಬಲ್ಲರೆ
ಹಿರಿಯರೆಂದೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೨ ॥

೪೬೫

ಪಂಚಮುದ್ರೆ ಪಂಚಮುದ್ರೆಯೆಂದೇನೋ?
ಹೇಳಿಹೆ ಕೇಳಿ;
ಸರ್ವಾಂಗವನು ಸಮತೆಯೆಂಬ ಸದಾಚಾರದಲ್ಲಿಯೆ
ನೆಲೆಗೊಳಿಸಿದ್ದುದೇ ಕಂಥೆಯಯ್ಯ.
ಸುಬುದ್ಧಿಯೆಂಬ ಮಕುಟಕ್ಕೆ
ಅರುಹೆಂಬ ಬಟ್ಟಪಾವಡೆ, ಕ್ರೀಯೆಂಬ ಪಾಗ.
ವಿಚಾರದಿಂದ ಬಳಸಿ ಸುತ್ತಬೇಕು ಕಾಣಿರಣ್ಣ.
ದೃಢವೆಂಬ ದಂಡ, ವಿವೇಕವೆಂಬ ಕಪ್ಪರವ
ಹಿಡಿಯಬೇಕು ಕಾಣಿರಯ್ಯ.
ಜ್ಞಾನವೆಂಬ ಭಸ್ಮಘುಟಿಕೆ ಸುಮನವೆಂಬ ಗಮನ,
ಸುಚಿತ್ತವೆಂಬ ಸುಳುಹು, ಪರತತ್ವ ಸದ್ಭಾವದಿಂದ
ಪರಮದೇಹಿಯೆಂದು ಸುಳಿವ
ಪರದೇಶಿಕನ ತೋರಿ ಬದುಕಿಸಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೩ ॥

೪೬೬

ಕಬ್ಬಿನ ಹೊರಗಣ ಸೋಗೆಯ ಮೆದ್ದು
ಪರಿಣಾಮಿಸುವ ಪಶುವಿನಂತೆ,
ಹೊರವೇಷವ ಹಲ್ಲಣಿಸಿಕೊಂಡು
ಈಶ್ವರೋವಾಚವ ನುಡಿಯ ನುಡಿದು
ಬಲ್ಲವರೆನಿಸಿಕೊಳಬಹುದಲ್ಲದೆ,
ಈಶ್ವರನ ನಿಲವ ಈ ಉಪಚಾರದಲ್ಲಿ ಕಾಣಬಹುದೆ?
ಕಾಣಬಾರದು ಕಾಣಿರಯ್ಯ.
ಕಬ್ಬ ಕಡಿದು ಒಳಗಣ ಮಧುರವ ಸ್ವೀಕರಿಸುವ ಮದಗಜದಂತೆ
ಅಂತರಂಗದ ನಿಳಯದಲಿ ನಿಜವ ಕಂಡು ನಿವಾಸಿಗಳಾಗಿ
ಚಿದಂಗ ಚಿತ್ಪ್ರಾಣ ಚಿಚ್ಛಕ್ತಿ ಚಿದಾಕಾಶವೆನಿಸುವ
ಚಿದ್ಬ್ರಹ್ಮವೇ ಸ್ಥಳಕುಳವೆಂದರಿದು ಸುಳಿಯಬಲ್ಲರೆ ಸ್ಥಲಜ್ಞರೆಂಬೆ.
ಉಳಿದವರೆಲ್ಲಾ ಹುಸಿ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೪ ॥

೪೬೭

ಪರಮಾರ್ಥವ ನುಡಿದು ಪರರ ಕೈಯಾಂತು
ಬೇಡುವುದು ಕರಕಷ್ಟವಯ್ಯ.
ಪುರಾತರಂತೆ ನುಡಿಯಲೇಕೆ? ಕಿರಾತರಂತೆ ನಡೆಯಲೇಕೆ?
ಆಸೆಯಿಚ್ಛೆಗೆ ಲೇಸ ನುಡಿವಿರಿ.
ಇಚ್ಛೆಯ ನುಡಿವುದು ಉಚ್ಚೆಯ ಕುಡಿವುದು ಸರಿ ಕಾಣಿರೋ.
ಇಚ್ಛೆಯ ನುಡಿವನೆ ಶಿವಶರಣನು?
ಮಾತಿನಲ್ಲಿ ಬೊಮ್ಮವ ನುಡಿದು
ಮನದಲ್ಲಿ ಆಸೆಯ ಸೋನೆ ಕರೆವುತಿಪ್ಪುದು.
ಈ ವೇಷವ ಕಂಡೆನಗೆ ಹೇಸಿಕೆಯಾಯಿತ್ತು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೫ ॥

೪೬೮

ಹೊರಗೆ ವೇಷದ ಸೊಂಪು
ಒಳಗೆ ರೋಷದ ಮೊಟ್ಟೆಯಯ್ಯ.
ಅಶನವನಿಕ್ಕಿ ಹಣವ ಕೊಡದವರ ಕಂಡರೆ
ಶಾಪಿಸಿ ಕೋಪಿಸಿ ಪಾಪಿಗಳೆಂಬಿರಯ್ಯ.
ನಿಮ್ಮ ಕಿಚ್ಚಿಗೆ ಸಾಪಿಸಿ ಕೋಪಿಸಿ ಹೊಯಿದು ಕುತಾಪಿಸುವವರು
ನೀವು ಪಾಪಿಗಳಲ್ಲದೆ,
ಅವರು ಪಾಪಿಗಳೇ ತಿಳಿದು ನೋಡಿರಯ್ಯ.
ಜಗದ ಕರ್ತನ ವೇಷಧರಿಸಿ ಕರ್ತೃ ನೀವಾದ ಬಳಿಕ
ಮಾನವರು ಕೊಟ್ಟಾರು ಕೊಂಡಾರು ಎಂಬ ಭ್ರಾಂತಿಯೇಕೆ?
ಅರೆಮರುಳುಗಳಿರಾ, ಕೊಡುವಾತ ಶಿವನೆಂದರಿಯದ
ಉದರ ಘಾತಕ ಖುಲ್ಲರನೊಲ್ಲ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೬ ॥

೪೬೯

ಕಣ್ಣಿನಲ್ಲಿ ಕಂಡು ಮನದಲ್ಲಿ ಬಯಸಿ
ಬಣ್ಣಗುಂದಿ ಬಳಲುವರಯ್ಯ.
ಬಂದರೆ ಹೆಚ್ಚಿ, ಬಾರದಿದ್ದರೆ ಕುಂದಲೇತಕೆ?
ಕುಂದಿದರೆ ಬಪ್ಪುದೆ?

ಹಿರಿದು ಜರಿದು ಹೇಡಿಗೊಂಡು
ಕರಗಿ ಕೊರಗಿ ಕೋಡಿವರಿದು[ದೆಂದು]
ನಿಂದುರಿದು ಕಡುನೊಂದು ಭವಬಡುತ್ತಿಪ್ಪರಯ್ಯ.
ಒಂದು ನಿಮಿಷ ನಿಮಿಷಾರ್ಧ ನಿಮ್ಮ ನೆನಹಿಲ್ಲ ನೋಡ!
ಆಶೆಯೆಂಬ ಮಾಯಾಪಾಶದೊಳಗೆ ಸಿಕ್ಕಿ
ದೋಷ ದುರ್ಗುಣದಿಂದ ಬಿದ್ದುರುಳುವ ಪಾಶಬದ್ಧರ
ಈಶ ಲಾಂಛನಧಾರಿಗಳೆಂತೆಂಬೆನಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೭ ॥

೪೭೦

ಮಂಡೆ ಬೋಳಾಗಿ, ಮೈ ಬತ್ತಲೆಯಾಗಿಪ್ಪವರ ಕಂಡರೆ
ನಿರ್ವಾಣಿಗಳೆಂಬೆನೆ? ಎನ್ನೆನಯ್ಯ.
ಅಖಂಡಿತವಾಗಿ ಮನ ಬೋಳಾಗಿ ಭಾವ ಬತ್ತಲೆಯಾಗಿರಬಲ್ಲರೆ
ಅದು ನಿರ್ವಾಣವೆಂಬೆ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೮ ॥

೪೭೧

ಹೆಣ್ಣ ಬಿಟ್ಟೆ, ಮಣ್ಣ ಬಿಟ್ಟೆ ಹೊನ್ನ ಬಿಟ್ಟೆನೆಂದು
ಜಗದ ಕಣ್ಣ ಕಟ್ಟಿ ಮೆರೆವ
ಕಣ್ಣ ಬೇನೆಯ ಬಣ್ಣದ ಅಣ್ಣಗಳು ನೀವು ಕೇಳಿಭೋ.
ಮಾತಿನಲ್ಲಿ ಬಿಟ್ಟಿರಿಯೋ, ಮನದಲ್ಲಿ ಬಿಟ್ಟಿರಿಯೋ?
ಈ ನೀತಿಯ ಹೇಳಿರಿ ಎನಗೊಮ್ಮೆ.
ತನುಮನದ ಮಧ್ಯದಲ್ಲಿ ಇವರ ನೆನಹು ಕೆಟ್ಟು
ಲಿಂಗದ ನೆನಹಿನ ಆಯತವೇ ಸ್ವಾಯತವಾಗಿರಬಲ್ಲರೆ
ಇವ ಬಿಟ್ಟರೆಂದೆಂಬೆನಯ್ಯ.
ಮಾತಿನಲ್ಲಿ ಬಿಟ್ಟು ಮನದಲ್ಲಿ ಉಳ್ಳರೆ
ಭವಭವದಲ್ಲಿ ತಂದು
ಕುನ್ನಿ ನಾಯ ಕೆರವ ಕಚ್ಚಿಸುವ ಹಾಂಗೆ ಕಚ್ಚಿಸಿದಲ್ಲದೆ
ಮಾಣದು ಕಾಣಿರಯ್ಯ.
ಹಿಡಿದು ಸಂಸಾರಿಗಳಲ್ಲ. ಬಿಟ್ಟು ನಿಸ್ಸಂಸಾರಿಗಳಲ್ಲ.
ಎರಡೂ ಅಲ್ಲದ ಎಟುವರನೇನೆಂಬೆನಯ್ಯ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೯ ॥

೪೭೨

ಕಾಯವೆಂಬ ವನಿತೆಗೆ ಆತ್ಮನೆಂಬ ಪುರುಷನು ನೋಡ.
ಈ ದೇಹದ ಆತ್ಮನ ಸಂಪರ್ಕದಿಂದ ಹುಟ್ಟಿದ
ಸಕಲ ಕರಣೇಂದ್ರಿಯಂಗಳೆ ಮಕ್ಕಳು ನೋಡ.
ಇದೇ ಸಂಸಾರವೆಂಬುದನರಿಯದೆ
ಬಹಿರಂಗದಲ್ಲಿ, ನಾನು ಹೊನ್ನು ಹೆಣ್ಣು ಮಣ್ಣು ಬಿಟ್ಟು
ವಿರಕ್ತನಾದೆನೆಂಬ ಅಜ್ಞಾನಿಯ ಪರಿಯ ನೋಡ.
ಇದು ವಿರಕ್ತಿಯೇ? ಅಲ್ಲ.
ದೇಹೇಂದ್ರಿಯ ಮನಃಪ್ರಾಣಾದಿಗಳ
ಮಹದಲ್ಲಿ ಒಡಗೂಡಿದಾತನೇ ಪರಮ ವಿರಕ್ತನು.
ಆತಂಗೆ ನಮೋ ನಮೋಯೆಂಬೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೦ ॥

೪೭೩

ಹೆಣನ ಕಂಡರೆ ನಾಯಿ ಕಚ್ಚದೆ ಮಾಣ್ಬುದೇ?
ನೊಣನ ಕಂಡರೆ ಕಪ್ಪೆ ಹಿಡಿದಲ್ಲದೆ ಮಾಣ್ಬುದೇ?
ಹಣವ ಕಂಡರ ಮನ ಕನಲಿದಲ್ಲದೆ ಮಾಣ್ಬುದೇ?
ಬಿಸಿಯ ಕಂಡರೆ ಬೆಣ್ಣೆ ಕರಗಿದಲ್ಲದೆ ಮಾಣ್ಬುದೇ?
ಹುಸಿಯ ಕಂಡರೆ ಲೋಕ ನಚ್ಚುವುದು, ಮಚ್ಚುವುದು.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ,
ಇವರು ಮಚ್ಚಿಯೇನು?
ತಮ್ಮ ನಾಯಿಗೆ ತಮ್ಮ ಮಗುವ ಕೊಡಬೇಡ. ॥ ೩೧ ॥

೪೭೪

ಕಾಯ ಬತ್ತಲೆಯಿದ್ದರೇನೋ ಮಾಯವಳಿಯದನ್ನಕ್ಕರ?
ಮಂಡೆ ಬೋಳಾದರೇನೋ
ಸಂಸಾರ ವಿಷಯವ ಛೇದಿಸದನ್ನಕ್ಕರ?
ಇದೇತರ ನಿರ್ವಾಣ? ಸುಡು.
ನಿರಾಲಂಬಿಗಳಾದ ನಿಜ ಶರಣರು ಮಚ್ಚರು ಕಾಣಾ
ಹೊರ ವೇಷದ ಹೂಸಕ[ರ],
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೨ ॥

೪೭೫

ಶ್ವಾನಂಗೆ ಪೃಷ್ಠದಲ್ಲಿ ಬಾಲ;
ಉಪಾಧಿಕಂಗೆ ಬಾಯಲ್ಲಿ ಬಾಲ ನೋಡಾ.
ಮಮಕಾರವೆಂಬ ನಾಯಿಯೆದ್ದು ಮುರುಗಲು
ನಾಲಗೆಯೆಂಬ ಬಾಲ ಬಡಿದಾಡುತ್ತಿದೆ ನೋಡಾ.
ಒಡಲುಪಾಧಿಗೆ ಉಪಚಾರವ ನುಡಿದ ವಿರಕ್ತನ ನಾಲಿಗೆ
ನಾಯ ಬಾಲಕಿಂದ ಕರಕಷ್ಟ ನೋಡಾ.
ಪರಮಾರ್ಥ ಪದದಲ್ಲಿ ಪರಿಣಾಮಿಯಾದವನ ಬಾಯಲ್ಲಿ
ಪ್ರಪಂಚುಂಟೆ ಹೇಳಾ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೩ ॥

೪೭೬

ಪಂಚಭೂತೇಂದ್ರಿಯಂಗಳ ವಂಚನೆಯನತಿಗಳೆದ
ನಿರ್ವಂಚಕನ ನೋಡಾ.
ತನುವ್ಯಸನ, ಮನವ್ಯಸನ, ಧನವ್ಯಸನ, ರಾಜ್ಯವ್ಯಸನ
ವಿಶ್ವಾವ್ಯಸನ, ಉತ್ಸಾಹವ್ಯಸನ, ಸೇವಕಾವ್ಯಸನವೆಂಬ
ಸಪ್ತವ್ಯಸನಂಗಳ ಸಂಹಾರವ ಮಾಡಿದ ನಿರ್ವ್ಯಸನಿಯ ನೋಡಾ
ಷಡೂರ್ಮಿ ಷಡುವರ್ಗಂಗಳ ಹೊಡೆದಪ್ಪಳಿಸಿ
ದಶವಾಯುಗಳ ಗಮನಾಗಮನವ ಶಿರವನರಿದ
ಶಿವಜ್ಞಾನ ಸಂಪನ್ನನ ನೋಡಾ.
ಅಷ್ಟತನುಮೂರ್ತಿಗಳ ಒಳಹೊರಗೆ ತೊಳಗಿ ಬೆಳಗುವ
ಸ್ವಯಂಜ್ಯೋತಿ ತಾನಾಗಿ
ಅಷ್ಟತನುಮೂರ್ತಿಯ ಮದಂಗಳ ಸುಟ್ಟುರುಹಿ
ಒತ್ತಿ ಒರಸಿದ ಉಪಮಾತೀತನ ನೋಡಾ.
ಸರ್ವವಿಕಾರಂಗಳ ಗರ್ವಪರ್ವತವ ಮುರಿದು
ನಿರ್ವಿಕಾರಿಯಾದ ನಿಶ್ಚಲ ವಿರಕ್ತನ ನೋಡಾ.
ಒಳ ಹೊರಗೆಂಬ ಕುಳವಳಿದ ನಿಃಕಳಂಕ ನಿರಾಕುಳನ ನೋಡಾ.
ಅರುಹು ಮರಹಳಿದು, ನಿರ್ದೇಹಿಯಾಗಿ
ನಿರ್ಮಲಾತ್ಮಕನಾಗಿ ಲಿಂಗವನಪ್ಪಿ ಅಗಲದಿಪ್ಪ ಮಹಾತ್ಮ
ಶರಣರಿಂಗೆ
ನಮೋ ನಮೋಯೆಂದು ಬದುಕಿದೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೪ ॥

೪೭೭

ಅಂಗದ ಭಂಗವ ಲಿಂಗ ಸಂಗದಿಂದ ಪರಿಹರಿಸಬೇಕಯ್ಯ.
ಮನೋಮಾಯವ ಅರುಹಿನ ಬಲದಿಂದ ಪರಿಹರಿಸಬೇಕಯ್ಯ.
ಜೀವನೋಪಾಧಿಯ ಶಿವಾನುಭಾವದಿಂದ
ಹರಿಯಬೇಕು ಕಾಣಿರೋ.
ಕರಣದ ಕತ್ತಲೆಯ ಸದಮಲದ ಬೆಳಗನುಟ್ಟು
ಪರಿಹರಿಸಬೇಕು ಕಾಣಿರೋ.
ಜವ್ವನದ ಹೊರ ಮಿಂಚ, ಕಣ್ಣಿಗೆ ತೋರುವ ಕಾಮಜಾಲಂಗಳ
ಶಿವಜ್ಞಾನಾಗ್ನಿಯ[ಲಿ]ಕ್ಕಿ ಸುಟ್ಟುರುಹಿ
ಭಸ್ಮವಧರಿಸಬಲ್ಲರೆ ಶರಣನೆಂದೆಂಬೆ;
ಉಳಿದವೆಲ್ಲಾ ಹುಸಿಯೆಂಬೆ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೫ ॥

೪೭೮

ಸಪ್ತಕಮಲದ ಮಧ್ಯದಲ್ಲಿ ಉತ್ಪತ್ತಿಯಾದ ಪರಂಜ್ಯೋತಿ
ತತ್ವ ಬ್ರಹ್ಮಾಂಡದಿಂದತ್ತತ್ತಲಾದ ಘನಕೆ ಘನ
ಪರಕೆ ಪರವಾದ ಪರಾಪರವು ತಾನೆ ನೋಡಾ.
ಆ ಪರಾಪರವು ತಾನೆ
ತತ್ವಬ್ರಹ್ಮಾಂಡದೊಳಹೊರಗೆ ಸರ್ವವ್ಯಾಪಕನಾಗಿ,
ಪರಿಪೂರ್ಣನಾಗಿ,
ಸರ್ವವನು ಹೊದ್ದಿಯೂ ಹೊದ್ದದ, ಮುಟ್ಟಿಯೂ ಮುಟ್ಟದ
ಅಕಳಂಕನು ನೋಡಾ.
ಸಪ್ತಕಮಲದ ಎಸುಳುಗಳೊಳಗೆ ಅಕ್ಷರಾತ್ಮಕ ಲಿಂಗವಾಗಿ
ಅದ್ವಯನು ನೋಡಾ.
ನವಚಕ್ರಾಂಬುಜಗಳ ದಳ ಕುಳ ವರ್ಣಾದಿ ದೇವತೆಗಳ
ತೋರಿಕೆಯೇನುಯೇನೂ ಇಲ್ಲದ ನಿತ್ಯ ನಿರಂಜನ
ನಿರಾಮಯನಾದ ಶರಣಂಗೆ ನಮೋ ನಮೋಯೆಂಬೆನು.
ಆ ನಿರಾಮಯ ವಸ್ತುವೆ **ಸಂಗನಬಸವಣ್ಣನು** ನೋಡಾ.
ಆ ಚಿದದ್ವಯವಾದ ಬಸವಣ್ಣನೇ
ಎನ್ನ ಅಂಗಲಿಂಗ, ಎನ್ನ ಪ್ರಾಣಲಿಂಗ, ಎನ್ನ ಭಾವಲಿಂಗ,
ಎನ್ನ ಸರ್ವಾಂಗಲಿಂಗವು ಕಾಣಾ.
ಎನ್ನ ಷಡಾಧಾರದಲ್ಲಿ ಸಂಬಂಧವಾದ ಷಡಕ್ಷರ ಮಂತ್ರವು
ಬಸವಣ್ಣನಾದ ಕಾರಣ,

ಬಸವಲಿಂಗ ಬಸವಲಿಂಗ ಬಸವಲಿಂಗಾಯೆಂದು ಜಪಿಸಿ
ಭವಾರ್ಣವ ದಾಂಟಿದೆನು ಕಾಣಾ,
ಬಸವಣ್ಣನೇ ಪತಿಯಾಗಿ, ನಾನೇ ಸತಿಯಾಗಿ
ಶರಣನಾದೆನು ಕಾಣಾ.
ಬಸವನೇ ಲಿಂಗವಾದ ಕಾರಣ ನಾನಂಗವಾದೆನು.
ಕರ್ತೃವೇ ಬಸವಣ್ಣ, ಭೃತ್ಯನೇ ನಾನು.
ಒಡೆಯನೇ ಬಸವಣ್ಣ, ಬಂಟನೇ ನಾನಾದಕಾರಣ
ದೇಹವೇ ನಾನು, ದೇಹಿಯೇ ಬಸವಣ್ಣನಯ್ಯ.
ಇದು ಕಾರಣ,
ಎನ್ನ ನಡೆವ ಚೇತನ, ಎನ್ನ ನುಡಿವ ಚೇತನ,
ಎನ್ನ ನಡೆ ನುಡಿಯೊಳಗಿಪ್ಪ ಸರ್ವ ಚೈತನ್ಯಾತ್ಮಕ ಬಸವಣ್ಣನಯ್ಯ.
ಇಂತಪ್ಪ ಬಸವಣ್ಣನ ಶ್ರೀಪಾದದಲ್ಲಿ ಅಡಗಿ
ನಾನು ಶರಣನಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೬ ॥

೪೭೯

ನಿರಾಕಾರ ಬಯಲು ಮೂರ್ತಿಗೊಂಡು
ಮಹಾಜ್ಞಾನವೇ ಚಿತ್‌ಸ್ವರೂಪವಾಯಿತ್ತು.
ಆ ಚಿಚ್ಛಕ್ತಿಸ್ವರೂಪವೇ ಶರಣನಾಗಿ ಮೂರ್ತಿಗೊಂಡನು ನೋಡಾ.
ಆ ಶರಣನ ಸಹಸ್ರಾಂಶದಲ್ಲಿ ಸದಾಶಿವನಾದನು.
ಆ ಸದಾಶಿವನ ಸಹಸ್ರಾಂಶದಲ್ಲಿ ಈಶ್ವರ ಮೂರ್ತಿಗೊಂಡನು.
ಆ ಈಶ್ವರನ ಸಹಸ್ರಾಂಶದಲ್ಲಿ ರುದ್ರನಾದನು.
ಆ ರುದ್ರನ ಕೋಟ್ಯಂಶದಲ್ಲಿ ವಿಷ್ಣು ಹುಟ್ಟಿದನು.
ಆ ವಿಷ್ಣುವಿನ ಕೋಟ್ಯಂಶದಲ್ಲಿ ಬ್ರಹ್ಮನಾದನು.
ಆ ಬ್ರಹ್ಮನ ಕೋ ್ಯಾನುಕೋಟ್ಯಂಶದಿಂದ
ನರರು ಸುರರು ಸುರರು ಹೆಣ್ಣು ಗಂಡು ಮೊದಲಾದ
ಸಕಲ ಚರಾಚರಂಗಳೆಲ್ಲವು ಹುಟ್ಟಿದವು ನೋಡಾ.
ಇಂತಿವೆಲ್ಲವೂ ಪರಶಿವನ ನೆನಹುಮಾತ್ರದಿಂದ
ತೋರಿ ಅಡಗತ್ತಿಹವು.
ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ
ಇಂತೀ ಐವರನು ತನ್ನಲ್ಲಿ ಗರ್ಭೀಕರಿಸಿಕೊಂಡಿಪ್ಪನು
ಚಿತ್‌ಸ್ವರೂಪನಪ್ಪ ಶರಣನು.
ಆ ಶರಣನೇ ಚೆನ್ನಬಸವಣ್ಣನು.
ಆ ಚೆನ್ನಬಸವಣ್ಣನೇ ಎನ್ನಂತರಂಗದ ಸುಜ್ಞಾನ

ಪ್ರಾಣಲಿಂಗವೆಂದರಿದು
ಮನೋಭಾವದಿಂದ ಆರಾಧಿಸಿ
ಪ್ರಾಣಲಿಂಗ ಸಂಬಂಧಿಯಾಗಿದ್ದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೭ ॥

೪೮೦

ಲಿಂಗಕ್ಕೆ ನಾದವಿಲ್ಲ. ಅದೇನು ಕಾರಣ?
ನಿಃಶಬ್ದಮಯವಾದ ಕಾರಣ.
ಜಂಗಮಕ್ಕೆ ಬಿಂದುವಿಲ್ಲ. ಅದೇನು ಕಾರಣ?
ಅದು ಶಬ್ದಮಂತ್ರೋಪದೇಶವನುಳ್ಳುದಾದ ಕಾರಣ.
ಅದುಕಾರಣ, ನಾದ ಸ್ವರೂಪವೇ ಜಂಗಮ;
ಬಿಂದುಸ್ವರೂಪವೇ ಲಿಂಗ.
ಇದುಕಾರಣ, ಲಿಂಗವೇ ಜಂಗಮದ ಲಿಂಗ;
ಆ ಜಂಗಮವೇ ಲಿಂಗದ ಪ್ರಾಣ.
ಆ ನಾದ ಬಿಂದು ಸ್ವರೂಪ ಲಿಂಗವಪ್ಪ ಜಂಗಮಕ್ಕೆ ಆಧಾರವಪ್ಪ
ಚಿತ್ಕಲಾ ಸ್ವರೂಪನೇ ಭಕ್ತನು.
ಈ ನಾದ ಬಿಂದು ಕಳೆಗಳ ಕೂಡಿಕೊಂಡಿಪ್ಪ ಶಿವತತ್ವವು, ತಾನೇ
ಲಿಂಗ ಜಂಗಮ ಭಕ್ತನೆಂದು ಮೂರು ತೆರನಾದನು ನೋಡಾ.
ಈ ಮೂರು ಒಂದೆಯೆಂದು ಅರಿದೆನು ನೋಡ.
ಎನ್ನ ಶರಣತ್ವದ ಆದಿಯನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೮ ॥

೪೮೧

ಶರಣನೇ ಲಿಂಗ; ಲಿಂಗವೇ ಶರಣ
ಈ ಎರಡಕ್ಕೂ ಭಿನ್ನವಿಲ್ಲವಯ್ಯ
ಲಿಂಗಕ್ಕಿಂತಲು ಶರಣನೇ ಅಧಿಕವಯ್ಯ
ನಿಮಗೆ ಪಂಚಮುಖ;
ನಿಮ್ಮ ಶರಣಂಗೆ ಸಹಸ್ರ ಮುಖ, ಸಹಸ್ರ ಕಣ್ಣು,
ಸಹಸ್ರ ಬಾಹು, ಸಹಸ್ರ ಪಾದ.
ಆ ಶರಣನ ಮುಖದಲ್ಲಿ ರುದ್ರ;
ಭುಜದಲ್ಲಿ ವಿಷ್ಣು,
ಜಂಘೆಯಲ್ಲಿ ಅಜನ ಜನನ.

ಇಂದ್ರ ಪಾದವಲ್ಲಿ; ಚಂದ್ರ ಮನಸ್ಸಿನಲ್ಲಿ;
ಸೂರ್ಯ ಚಕ್ಷುವಿನಲ್ಲಿ; ಅಗ್ನಿ ವಕ್ತ್ರದಲ್ಲಿ;
ಪ್ರಾಣದಲ್ಲಿ ವಾಯು; ನಾಭಿಯಲ್ಲಿ ಗಗನ;
ಪಾದತಲದಲ್ಲಿ ಭೂಮಿ; ದಶದಿಕ್ಕು ಶ್ರೋತ್ರದಲ್ಲಿ ;
ಶಿರದಲುದಯ ತೆತ್ತೀಸಕೋಟಿ ದೇವಾದಿದೇವರ್ಕಳು.
ಇಂತು ಕುಕ್ಷಿಯಲ್ಲಿ ಜಗವ ನಿರ್ಮಿಸಿ[ನಿಕ್ಷೇಪಿ]ದನು
ಅಕ್ಷಯನು, ಅಗಣಿತನು.
ಇಂತಪ್ಪ ಮಹಾ ಮಹೇಶ್ವರನ ನಿಜ ಚಿನ್ಮಯ ಸ್ವರೂಪವೇ
ಪ್ರಭುದೇವರು ನೋಡಾ!
ಅಂತಪ್ಪ **ಪರಮ ಪ್ರಭುವೇ**
ಎನಗೆ **ಪರಮಾನಂದವಪ್ಪ ಪ್ರಾಣಲಿಂಗವೆಂದು** ಆರಾಧಿಸಿ
ಬದುಕಿದೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೯ ॥

೪೮೨

ಕಟ್ಟರಸಿಲ್ಲದ ರಾಜ್ಯ[ಕ್ಕೆ] ಕಳ್ಳರ ಭಯ,
ಒಕ್ಕಲಿಲ್ಲದ ಊರು ಹಾಳು,
ಮಕ್ಕಳಿಲ್ಲದ ಮನೆ ಮಸಣವಟ್ಟಿಗೆಯೆಂಬ
ಲೋಕದ ದೃಷ್ಟಾಂತದಂತೆ
ಮುಕ್ಕಣ್ಣನರುಹಿ[ಲ್ಲ]ದವನ ಹೃದಯ
ಕರ್ಕಸದ ವೀಧಿ, ರಕ್ಕಸರ ಹೊಳಲು ನೋಡಾ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೦ ॥

೪೮೩

ಇಪ್ಪತ್ತೈದು ಧರೆಯೊಳಗೆ ಮುಪ್ಪುರವಿಪ್ಪುದ ಕಂಡೆನಯ್ಯ.
ಮುಪ್ಪುರದೊಳಗೆ ಸಪ್ತಸಾಗರ ಸುತ್ತಿ ಹರಿದು
ಸರ್ವರ ತಲೆಯನೆತ್ತಲೀಸದು ನೋಡ.
ಸಪ್ತಸಾಗರವನೊಂದು ಕಪ್ಪೆ ಕುಡಿದು
ಸಪ್ತಸಾಗರವರತು
ಕಪ್ಪೆ ಸತ್ತು, ಇಪ್ಪತ್ತೈದು ಧರೆಯಳಿದು
ಮುಪ್ಪುರ ಬೆಂದುದ ಕಂಡೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೧ ॥

೪೮೪

ಬಣ್ಣದ ಮಡಕೆಯ ಹೊತ್ತಾಡುವ ಹೆಣ್ಣಿಗೆ
ಮೈಯೆಲ್ಲಾ ಮುಳ್ಳು, ಮುಖವೀರೈದು ನೋಡಾ.
ಬಣ್ಣದ ಮಡಕೆಯನೊಡೆದು
ಹೆಣ್ಣಿನ ಮೈಯ ಮುಳ್ಳನೆಲ್ಲಾ ಮುರಿದು
ಮುಖವೀರೈದ ಕೆಡಿಸಿದನು ನಿರ್ಮಲ ನಿರಾವರಣ ಶರಣನು.
ಆ ಶರಣಂಗೆ ನಮೋ ನಮೋಯೆಂಬೆನು ಕಾಣಾ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೨ ॥

೪೮೫

ಅಂಗದ ಕಂಗಳ ಕಳೆಯೊಳಗೊಂಡು ಲಿಂಗವ ಕಂಡೆ.
ಅದು ಕಾಮಾರಿ ನೋಡಾ.
ಆ ಲಿಂಗ ಸಂಗದಿಂದ ಅನಂಗ ಸಂಗವ ಕೊಡಹಿ
ಅವಿರಳ ಪರಬ್ರಹ್ಮನಾಗಿ
ಅರಿಷಡುವರ್ಗಂಗಳ ಗರ್ವವ ಮುರಿದನು ನೋಡಾ ಶರಣನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೩ ॥

೪೮೬

ಧರೆಯಾಕಾಶದ ಮಧ್ಯದಲ್ಲಿ
ಉರಿಯ ಸೀರೆಯನುಟ್ಟು
ಧರೆಯಾಕಾಶಕ್ಕೆ ಎಡೆಯಾಡುತಿದಾಳೆ ನೋಡಾ.
ಊರ ಒಳ ಹೊರಗೆ ತಾನಾಗಿ
ಆರು ಬಣ್ಣದ ಪಕ್ಷಿಯ ಶಿರದ ಅಮೃತವ ಕರೆದು
ತಾನು ಪರಮಾನಂದ ಲೀಲೆಯಿಂದ ನಲಿದಾಡುತಿದಾಳೆ ನೋಡಾ.
ಊರು ಬೆಂದು ಉಲುಹಳಡುಳಿದು
ಆರು ಬಣ್ಣದ ಪಕ್ಷಿಯಳಿದು
ಆರೂಢವಾಯಿತ್ತು ನೋಡಾ.
ಉರಿಯ ಸೀರೆಯ ಅಂಗನೆ ಉಪಮಾತೀತನ ನೆರೆದುದ ಕಂಡು
ಬೆರಗಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೪ ॥

೪೮೭

ಶರೀರವಿಲ್ಲದಂಗನೆಗೆ ಐವರು ಸ್ತ್ರೀಯರು ಹುಟ್ಟಿದರು ನೋಡಾ,
ಐವರು ಸ್ತ್ರೀಯರ ವಿಲಾಸದಿಂದ
ಅನೇಕ ಕೋಟಿ ಬ್ರಹ್ಮಾಂಡಗಳ ತೋರಿಕೆ ನೋಡಾ.
ಪಿಂಡಾಂಡಕ್ಕೆ ತಾವೆ ಅಧಿಷ್ಠಾನ ಕರ್ತೃಗಳಾಗಿಪ್ಪವು ನೋಡಾ.
ಸ್ತ್ರೀಯರೈವರ ಆವರವರ ಭಾವಕ್ಕೆ ನೆರೆದು
ಪರಮನೊಬ್ಬನೇ ಪಂಚಪುರುಷನಾಗಿಪ್ಪನು ನೋಡಾ.
ಸ್ತ್ರೀಪುರುಷರನೊಳಕೊಂಡು
ಅತಿಶಯವಾದ ಅವಿರಳಪರಬ್ರಹ್ಮವೇ ತಾನಾದುದ ಕಂಡು
ಬೆರಗಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೫ ॥

೪೮೮

ಬಿಂದುವಿನ ಕೊಡನ ಹೊತ್ತಾಡುವ ಅಂಗನೆಯವೊಂದಾಗಿ
ಹುಟ್ಟಿದರೈವವು
ಚಂದ ಚಂದದ ಮನೆಯ ರಚಿಸಿ
ಅಲ್ಲಿ ಸರ್ವರ ಒಂದುಗೂಡುವುದ ಕಂಡೆನಯ್ಯಾ.
ಬಿಂದಿನ ಕೊಡ ತುಳುಕಿ ಚಂದ್ರಾಮೃತವೊಗಲು
ಚಂದಚಂದದ ಮನೆಯಳಿದು
ಒಂದಾಗಿ ಹುಟ್ಟಿದವರೈವರು ಒಬ್ಬನ ನೆರೆದು
ನಿಬ್ಬೆರಗಾದುದ ಕಂಡು ನಾನು ಬೆರಗಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೬ ॥

೪೮೯

ಅಳಿಯಗೂಳಿಗೆ ಹೋದಾತ ಅತ್ತೆಯ ನೆರೆದರೆ
ನಾದಿನಿಯರು ನೋಡಿ ಸೋಜಿಗವ ಮಾಡುತ್ತಿದಾರೆ ನೋಡಾ.
ನಾದಿನಿಯರ ತಾಯಿ ಅತ್ತೆಯ ಕೊಂದು
ಅಳಿಯನ ನುಂಗಿ ಪರಪುರುಷನ ನೆರೆದು
ಮುತ್ತೈದೆಯಾದುದು ಸೋಜಿಗ, ಸೋಜಿಗ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೭ ॥

೪೯೦

ಮುತ್ತಿನ ದಿವಾಣದೊಳಗ ತತ್ತ್ವವೆಣ್ಣುಗಳೆಂಬ ಮುತ್ತೈದೆಯರು
ಮುತ್ತು ಮಾಣಿಕ ನವರತ್ನವ ತೊಡಿಗೆಯ ತೊಟ್ಟು
ಉತ್ತುಂಗರಾಶಿಯೆಂಬ ಅಮೃತಕಿರಣವ
ಪ್ರಜ್ವಲಿಸುತಿಪಾರೆ ನೋಡಾ.
ಆ ಕಿರಣಂಗಳ ಸೋಂಕಿದವರೆಲ್ಲ ಅಮರಗಣಂಗಳಾದುವ ಕಂಡು
ನಾನು ಶರಣನಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೮ ॥

೪೯೧

ಉರಿಯ ಗಗನದೊಳಗೆ ಶರೀರವಿಲ್ಲದ ತರುಣಿ ಉದಯವಾಗಿ
ಉರಿಯ ಮಣಿಯ ಪವಣಿಗೆಯ ಮಾಡುವುದ ಕಂಡೆನಯ್ಯ.
ಉರಿಯನುಂಡು, ಶರೀರವಿಲ್ಲದಾಕೆಯ ನೆರೆದು
ಪರಮಾಮೃತವ ಸೇವಿಸಿ
ಪರಮ ಪರಿಣಾಮದೊಳಗೋಲಾಡಿದೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೯ ॥

೪೯೨

ಇಚ್ಛಾಶಕ್ತಿ ತನ್ನ ಗರ್ಭದಲ್ಲಿ ಈರೇಳುಲೋಕವ ಹೆತ್ತಳು ನೋಡಾ.
ಆ ಲೋಕಾಧಿಲೋಕಂಗಳೊಳಗೆ ತಾನೇಕಾಕಿಯಾಗಿ
ಆ ಲೋಕದ ಉತ್ಪತ್ತಿ ಸ್ಥಿತಿ ಪ್ರಳಯಕ್ಕೊಳಗಾಗದೆ
ನಿತ್ಯಳಾಗಿಪ್ಪಳು ನೋಡಾ.
ಆ ಇಚ್ಛಾಶಕ್ತಿ ನಿಶ್ಚಿಂತನ ನೆರೆದು
ನಿರಾಳವಾದುದು ತಾನೆಂದು ಕಂಡಾತನ[ನು]
ಸರ್ವಜ್ಞ ಶರಣನೆಂಬೆನು.
ಆತನ ಅಲ್ಲಮಪ್ರಭುವೆಂಬೆನು.
ಆ ಪರಮ ನಿರಂಜನ ಪ್ರಭುವಿಗೆ
ನಮೋ ನಮೋಯೆಂದು ಬದುಕಿದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೦ ॥

೪೯೩

ಜ್ಞಾನಜ್ಯೋತಿಯ ಉದಯ,
ಭಾನು ಕೋಟಿಸೂರ್ಯರ ಬೆಳಗು ನೋಡಾ.
ತನುತ್ರಯ, ಜೀವತ್ರಯ, ಅವಸ್ಥಾತ್ರಯಾದಿಯಾದ
ಎಲ್ಲ ತೋರಿಕೆಯನೊಳಗೊಂಡು
ಜ್ಯೋತಿ ಕರ್ಪುರವ[ನು] ನೆರೆದಂತಿದೆ ನೋಡಾ.
ಷಡಾಧಾರಂಗಳಲ್ಲಿ ತೊಳಗಿ ಬೆಳಗಿ
ಬ್ರಹ್ಮರಂಧ್ರದಲ್ಲಿ ವಿಶ್ರಾಂತಿಯನೆಯ್ದಿದ
ಅಖಂಡ ಜ್ಞಾನಜ್ಯೋತಿ ನೋಡಾ.
ಆ ಮಹಾಪ್ರಕಾಶದ ಬೆಳಗಿನೊಳಗೆ ಮಹವ ಕಂಡು
ಮಹಕೆ ಮಹ, ಪರಕೆ ಪರವಾಗಿ
ಎನ್ನಿಂದನ್ಯವಾಗಿ ಮತ್ತೊಂದು ಪರವಿಲ್ಲದೆ
ನಾನೇ ಪರವಸ್ತುವಾಗಿರ್ದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೧ ॥

೪೯೪

ಹೆಣ್ಣಿನ ರೂಪು ಕಣ್ಣಿಗೆ ರಮ್ಯವಾಗಿ ತೋರುವದಿದು
ಕರಣಂಗಳ ಗುಣ ಕಾಣಿರಣ್ಣ
**ಕರಣದ ಕತ್ತಲೆಯ ಲಿಂಗದ ಬೆಳಗನುಟ್ಟು ಕಳೆದು**
**ಮುಕ್ಕಣ್ಣನೇ ಕಣ್ಣಾಗಿಪ್ಪ**
**ಶರಣ ಬಸವಣ್ಣನ** ಪಾದವ ತೋರಿಸಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೨ ॥

೪೯೫

ಕರ್ಣದ ಕೊನೆಯಲ್ಲಿ ಎರಡು ಪರ್ಣ ಹುಟ್ಟಿ
ನಿರ್ನಾಮ ಶ್ರುತವ ನೆಲೆಗೊಳಲೀಯವು ನೋಡಾ.
ಕರ್ಣದ ಕೊನೆಯ ಪರ್ಣವ ಹರಿದು
ನಿರ್ಮಲ ನಿರಾವರಣನೇ ಕರ್ಣವಾಗಿಪ್ಪ
**ಪ್ರಭುದೇವರ ಪಾದಕ್ಕೆ** ನಮೋ ನಮೋಯೆಂಬೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೩ ॥

೪೯೬

ನಾಲಗೆಯ ಕೊನೆಯಲ್ಲಿ ನಂಜಿನ ಸೋನೆ ಸುರಿವನ್ನಕ್ಕರ
ಬಾರದುವ ಬಯಸುತ್ತಿಪ್ಪುದು ನೋಡಾ.
ನಾಲಗೆಯ ಸಂಜನೆ ಕೆಡಿಸಿ, ಅಮೃತವ ಸವಿಯಬಲ್ಲವರಾಗಿ
ನಿಮ್ಮ ಶರಣರು ಅನುಪಮಸುಖಿಗಳಯ್ಯ.
ನಿಮ್ಮ ಶರಣರೆಲ್ಲರ ಪಾದಕ್ಕೆ ನಮೋ ನಮೋಯೆನುತಿರ್ದೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೪ ॥

೪೯೭

ತನುವಿಡಿದು ಕಾಬುದು ಗುರುವಿನ ಭೇದ.
ಮನವಿಡಿದು ಕಾಬುದು ಲಿಂಗದ ಭೇದ.
ಜ್ಞಾನವಿಡಿದು ಕಾಬುದು ಜಂಗಮದ ಭೇದ.
ಈ ತ್ರಿವಿಧವಿಡಿದು ಕಾಬುದು ಮಹಾ ಪ್ರಕಾಶ.
ಆ ಮಹಾ ಪ್ರಕಾಶದೊಳಗೆ ಮಹವ ಕಂಡು
ಮಹಕ್ಕೆ ಮಹನಾಗಿರ್ದೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೫ ॥

೪೯೮

ಶುದ್ಧ ಶಿವತತ್ವ ವೇದ್ಯವಾಗಿ ಶಬ್ದಮುಗ್ಧನಾದೆನಾಗಿ
ಮೂರ್ತಿ ಅಮೂರ್ತಿ ತತ್ವಾತತ್ವಂಗಳನರಿಯೆ.
ಮದ ಮೋಹಂಗಳ ಮರೆದೆ.
ಅದೇನುಕಾರಣವೆಂದರೆ:
ಮಂದೆ ಅರಿವುದಕ್ಕೆ ಕುರುಹಿಲ್ಲವಾಗಿ.
ಅರುಹು ಕುರುಹುನೊಳಕೊಂಡು
ತೆರಹಿಲ್ಲದ ಪರಿಪೂರ್ಣನಿಗೆ ಮಾಯವೆಲ್ಲಿಯದೋ?
ದೇಹಮದೆಲ್ಲಿಯದು? ದೇಹಿಯದೆಲ್ಲಿಯವನು?
ಮಾಯ ದೇಹ ದೇಹಿಯಿಲ್ಲವಾಗಿ
ಸ್ವಯವೆಲ್ಲಿಯದು ಪರವೆಲ್ಲಿಯದು?
ಪರವಸ್ತು, ತಾನಾದ ಶರಣಂಗೆ ಮುಂದೇನನು ಹೇಳಲಿಲ್ಲ ಕಾಣಾ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೬ ॥

೪೯೯

ಒಬ್ಬನಿಂದಾದವಂಗೆ ಇಬ್ಬರ ಸಂಗವನೇಕೆ ಹೇಳುವಿರಿ?
ಇಬ್ಬರ ಸಂಗದಿಂದಾದವನೆಂಬುದು
ಅಜ್ಞಾನವಲ್ಲದೆ ಅರುಪಲ್ಲ ನೋಡಾ.
ಒಬ್ಬರ ಸಂಗದಿಂದಾದ ಸ್ವಸಂಗಿಗೆ ತಂದೆಯೆಂದು ಕಲ್ಪಿಸಿ
ತಾಯೆಂದು ಹೇಳಲಿಲ್ಲ.
ತಂದೆ ತಾಯಿಗಳಿಲ್ಲದಾತಂಗೆ ಬಂಧುಗಳೆಂದೇನೋ ಭ್ರಾಂತರಿರಾ?
ಅಯೋನಿಸಂಭವನಾಗಿ ಶರಣನು ಸ್ವಯಂಭು ತಾನಾದನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೭ ॥

೫೦೦

ಆಕಾರವಿಲ್ಲದಾತಂಗೆ ಅಂಗವೆಂದೇಕೆ ಕಲ್ಪಿಸಿ ಹೇಳುವಿರಿ?
ಅದು ಲಿಂಗಾನುಭಾವಿಗಳ ದೃಷ್ಟಿಯೆ? ಅಲ್ಲ. ಬಿಡಾ ಮರುಳೆ.
ಮಮಕಾರವಿಲ್ಲದಾತಂಗೆ ಮಾನಿನಿಯರಿಬ್ಬರೆಂದೇನೋ?
ಮಾನಿನಿಯರಿಬ್ಬರಿಲ್ಲದಾತಂಗೆ
ಲೀಲಾ ಮಾಯಿಕದ ಸಂಸಾರದ ಕುರುಹೆಂದೇನೊ?
ನಾಮ ನಿರ್ನಾಮನಾದ ನಿರಾಲಂಬಿಗೆ
ನಾಮ ಸೀಮೆಯ ಕಲ್ಪಿಸಲುಂಟೆ?
ನಿಸ್ಸೀಮಂಗೆ ನಿರ್ವಿಕಲ್ಪಿತಂಗೆ ಕಲ್ಪಿತವುಂಟೆ?
ಕಲ್ಪಿತಕ್ಕೆ ತಂದು ಸತಿ ಸುತ ಸಂಸಾರವುಂಟೆಂಬ
ಹೂಸಕಗರ ಮಾತ ಕೇಳಲಾಗದು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೮ ॥

೫೦೧

ತತ್ವಾತತ್ವವೆಂಬ ಮಿಥ್ಯಾ ಛಾಯೆಯಿಲ್ಲದ
ಬಚ್ಚಬರಿಯ ಬಯಲ ಬಣ್ಣ ಶೃಂಗರಿಸಿ
ಪರತತ್ವವಾಯಿತ್ತು ನೋಡಾ.
ಆ ಪರತತ್ವ ತನ್ನ ಶಕ್ತಿಸಾಮರ್ಥ್ಯದಿಂದ ವಿಭಜಿಸಿ
ಅಂಗ ಲಿಂಗವಾಯಿತ್ತು ನೋಡಾ.
ಅಂಗವೆಂದರೆ ಶರೀರ; ಲಿಂಗವೆಂದರೆ ಪ್ರಾಣ.
ಇದು ಕಾರಣ ಶರಣ ಲಿಂಗಕ್ಕೆ ಭಿನ್ನವೆಲ್ಲಿಯದು?

ಭೇದವೆಲ್ಲಿಯದು ಬಿಡಾ ಮರುಳೆ.
ಶರಣನೇ ಲಿಂಗವೆಂಬುದು ಸತ್ಯ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೯ ॥

೫೦೨

ಒಬ್ಬನಿಗಿಬ್ಬರು ಸ್ತ್ರೀಯರು ನೋಡಾ,
ಒಬ್ಬಳು ಕಾಯದ ರೂಪೆಯಾಗಿ ಕಾಯವ ಶುದ್ಧವ ಮಾಡುವಳು;
[ಆ]ಕಾಯದ ಗುಣವ ಹೊದ್ದಳು ನೋಡಾ.
ಮತ್ತೊಬ್ಬಳು ಪ್ರಾಣದ ರೂಪೆಯಾಗಿ
ಪ್ರಾಣವ ಶುದ್ಧವ ಮಾಡುವಳು;
ಆ ಪ್ರಾಣನ ಗುಣವ ಹೊದ್ದಳು ನೋಡಾ.
ಇಬ್ಬರ ಸಂಗದಿಂದ ತಾನೊಬ್ಬ ಸಾಯಲು
ಮೂರುಲೋಕದ ತಬ್ಬಿಬ್ಬು ಬಿಟ್ಟಿತ್ತು;
ಕತ್ತಲೆ ಹರಿಯಿತ್ತು ತಲ್ಲಣವಡಗಿತ್ತು.
ಎಲ್ಲರೂ ನಿರಾಳರಾದರು.
ಅವರು ನಿಮ್ಮವರು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೦ ॥

೫೦೩

ಆಕಾಶವರ್ಣದ ಅಂಗನೆ
ಲೋಕಾಲೋಕಂಗಳ ನೋಡಿಹೆನೆಂದು ಇಳಿದು ಬರಲು
ಆ ಲೋಕದವರೆಲ್ಲರು ಕಂಡು
ನಮ್ಮ ಈ ಲೋಕದ ಸ್ತ್ರೀಯಲ್ಲ.
ಇವಳಾವಲೋಕದ ಸ್ತ್ರೀಯೋಯೆಂದು ನೋಡುತ್ತ ನೋಡುತ್ತ
ಆ ದೇವ ಸ್ತ್ರೀಯ ಸಂಗವ ಮಾಡಿ
ದೇವನಾದುದ ಕಂಡೆ.
ಭಾವಭ್ರಮೆಗೆ ಹೊರಗಾದೆನು ಕಾಣಾ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೧ ॥

೫೦೪

ಆಧಾರಶಕ್ತಿ ಅನಾದಿಪುರುಷನ ಕೂಡಲು
ತ್ರೈಜಗಮುತ್ಪತ್ತಿಯಾಯಿತ್ತು ನೋಡಾ.

ತ್ರಿಜಗಹುಟ್ಟುವುದಕ್ಕತ್ತ ಮುನ್ನ
ತಾ ಪುಟ್ಟಿದೆನೆಂದರಿಯಬಲ್ಲರೆ
ಮೂರುಲೋಕದ ಉತ್ಪತ್ತಿ ಸ್ಥಿತಿ ಪ್ರಳಯದೊಳಗಲ್ಲ.
ಆ ಪ್ರಳಯವಿರಹಿತನಾದಾತನೆ ಅಚ್ಚ ಶರಣನು.
ಆತ ನಿತ್ಯ ನಿರಂಜನನು
ಆ ಮಹಾತ್ಮನನೇನೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೨ ॥

**ಶರಣನ ಭಕ್ತಿ**

೫೦೫

ಅಂತರಂಗದಲ್ಲಿ ಅರುಹು ಪೂರ್ಣವಾಗಿ
ಬಹಿರಂಗದಲ್ಲಿ ಸತ್ಕ್ರಿಯಾಸಂಪನ್ನನಾದ ಸುಚರಿತ್ರನು
ನೋಡಾ ಭಕ್ತನು.
ತನು ಮನ ಭಾವದಲ್ಲಿ ಇಷ್ಟ ಪ್ರಾಣ ಭಾವವ ನಿಲಿಸಿ
ತನು ಮನ ಭಾವ ವಿರಹಿತನಾಗಿ ನಿರ್ದೇಹಿ ನೋಡಾ ಭಕ್ತನು.
ಕ್ರಿಯೆ ಜ್ಞಾನ ಭಾವಲಿಂಗವ ಮುಟ್ಟಿ ಹಿಮ್ಮೆಟ್ಟದ ನಿಭ್ರಾಂತನಯ್ಯಾ
ನಿಮ್ಮ ಭಕ್ತನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೩ ॥

೫೦೬

ಸತ್ಯದ ಭೂಮಿಯಲ್ಲಿ ಭಕ್ತಿಯ ಬೆಳಸು
ಕರಣದ ಕತ್ತಲೆಯೆಂಬ ಕಳೆಯ ಕಳೆದು
ಶಕ್ತಿ ಭಕ್ತಿಯನೊಳಕೊಂಡು ನಿಂದ ಮುಕ್ತ್ಯಂಗನೆ
ಸಚ್ಚಿದಾನಂದ ಸ್ವರೂಪೆ ನೋಡಾ.
ನಿತ್ಯ ನಿಜತತ್ವ ನೆರೆದು
ಉತ್ಪತ್ತಿ ಸ್ಥಿತಿ ಪ್ರಳಯವ ಮೀರಿದ ಶರಣನ
ಪರಮ ಭಕ್ತಿಯನೇನೆಂದುಪಮಿಸುವೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೪ ॥

೫೦೭

ಊಟದ ದೆಸೆಯಿಂದ ಹೆಚ್ಚಿ
ಉಡಿಗೆ ತೊಡಿಗೆಯ ಮೇಲೆ ಮೆರೆವಾತನನು ಕಂಡು

ರೂಪು ಲಾವಣ್ಯ ಸುಖಭೋಗಿಗಳೆಂಬರಯ್ಯ.
ಈ ಲೋಕದ ಮಾನವರು
ಸುಖಿಗಳಾದರೆ ತನುವ ತಾಪತ್ರಯಾದಿಗಳು ಮುಟ್ಟಬಲ್ಲವೆ?
ಮಾಯಾ ಮೋಹವೆಂಬ ಮೊಲನಾಗರು
ಹಿಡಿದು ಬಿಡದು ನೋಡಾ.
ಸುಖಿ ಸುಖಿಗಳೆಂಬ ಈ ಲೋಕದ
ಕಾಕುವಿಚಾರವನೇನೆಂಬೆನಯ್ಯ?
ಭಕ್ತಿಯೇ ರೂಪು, ನಿತ್ಯವೇ ಲಾವಣ್ಯ, ಮುಕ್ತ್ಯಂಗನೆಯ ಕೂಡಿ
ಸುಖಿಸುವುದೇ ಸುಖ.
ಲಿಂಗಭೋಗೋಪಭೋಗಿಯಾದ ಪ್ರಸಾದ ಭೋಗವೇ ಭೋಗ.
ಇಂತಪ್ಪ ನಿರಂಗಸಂಗಿಗಳು ಅವಲೋಕದಲ್ಲಿಯೂ ಇಲ್ಲ ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೫ ॥

೫೦೮

ಕಾಯಕ್ಕಾಧಾರ ಭಕ್ತ. ಜೀವಕ್ಕಾಧಾರ ಭಕ್ತ.
ಕರಣಕ್ಕಾಧಾರ ಭಕ್ತ. ಲಿಂಗಕ್ಕಾಧಾರ ಭಕ್ತ.
ಜಂಗಮಕ್ಕಾಧಾರ ಭಕ್ತ. ಪ್ರಸಾದಕ್ಕಾಧಾರ ಭಕ್ತ.
ಶಕ್ತಿಗಾಧಾರ ಭಕ್ತ. ಭಕ್ತಿಗಾಧಾರ ಭಕ್ತ.
ಎನಗಾಧಾರ ಭಕ್ತ. ನಿನಗಾಧಾರ ಭಕ್ತ.
ನಾನು ನೀನೆನ್ನದೆ ನಿರವಯ ನಿರ್ಮಾಯನಯ್ಯ ಭಕ್ತನು
ಇಂತಪ್ಪ ಭಕ್ತ ಸಂಗನಬಸವಣ್ಣನ ಶ್ರೀಪಾದಪದ್ಮದಲ್ಲಿ
ಭ್ರಮರನಾಗಿರಿಸಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೬ ॥

೫೦೯

ಅರುಹಿನ ಜ್ಯೋತಿಯೆದ್ದಿತ್ತು ; ಶರೀರವನೆಲ್ಲ ತುಂಬಿತ್ತು
ಮರವೆಯ ತಮ ಹರಿಯಿತ್ತು ; ಕರಣಂಗಳ ತುಂಡಿಸಿತ್ತು.
ವಿಷಯಂಗಳ ಶಿರವನರಿಯಿತ್ತು.
ದಶವಿಧೇಂದ್ರಿಯಂಗಳ ದಾಳಿಯ ನಿಲಿಸಿತ್ತು.
ಪಂಚಮಹಾಭೂತಂಗಳಂಗಳ ಪ್ರಪಂಚುವ ಪರಿಹರಿಸಿತ್ತು ;
ಬ್ರಹ್ಮವೇ ತಾನೆಂಬ ಕುರುಹ ಮೈಗಾಣಿಸಿತ್ತು.

ತಾನೆಂಬ ಕುರುಹನಳಿದ ಅವಿರಳ ಸಹಜನು ಭಕ್ತನು ನೋಡಾ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೭ ॥

೫೧೦

ಮಾತೆಯಿಲ್ಲದ ಅಜಾತನು; ತಂದೆಯಿಲ್ಲದ ಇಂದುಧರನು
ತಂದೆ ತಾಯಿ ಹೆಸರು ಕುಲವಿಲ್ಲದ ಪರಮನು.
ಲಿಂಗದಲ್ಲಿ ಉದಯನಾದ ಚಿನುಮಯನು ನೋಡಾ, ಭಕ್ತನು.
ನಿರ್ವಿಕಲ್ಪ ನಿರಂಜನನಾಗಿ ಮಾಯಾರಂಜನೆಯಿಲ್ಲದ
ಮಹಾಮಹಿಮನು ನೋಡಾ, ಭಕ್ತನು.
ಒಳಹೊರಗನರಿಯದ ಪರಿಪೂರ್ಣಸರ್ವಮಯವಾದ
ಜಗಭರಿತನು, ಅದ್ವಯನು ನೋಡಾ ಭಕ್ತನು.
ಇಂತಪ್ಪ ನಿರುಪಾಧಿಕ ಭಕ್ತನ, ನಿರ್ಗುಣ
ಚರಿತ್ರವನೇನೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೮ ॥

೫೧೧

ಅಜ ಹರಿ ಸುರರಿಗೆ ಶರೀರವ ತೊಡಿಸಿ
ಕರಣದೋಕುಳಿಯಾಡಿ
ವಿಷಯದ ಮಳೆಯ ಕರೆವುತ್ತಿದ್ದಾಳೆ ನೋಡಾ.
ಹರಣದ ಮಧ್ಯದಲ್ಲಿ ನಿಂದು
ಹೆಣ್ಣು ಹೊನ್ನು ಮಣ್ಣು ತೋರಿ
ಕಣ್ಣ ಕಟ್ಟಿದಳು ನೋಡಾ,
ನಿಮ್ಮ ಕಾಣಲೀಯದೆ.
ತಾನು ತಲೆ ಕೆಳಗಾಗಿ ಕಾಲು ಮೇಲಾಗಿ ನಡೆವಳು
ಕರಿಯಾಗಿ ನಿಂದು, ಹರಿಯಾಗಿ ಹರಿದು
ಉರಿಯಾಗಿ ಸುಡುತಿಪ್ಪಳು ನೋಡಾ.
ಕರಿಯ ಶಿರದಲ್ಲಿ ಉರಿ ಹುಟ್ಟಲು
ಕರಿ ಬೆಂದಿತ್ತು, ಹರಿ ನಿಂದಿತ್ತು, ಉರಿ ಕೆಟ್ಟಿತ್ತು.
ಶರೀರಗುಣವಳಿದು ಸದ್ಭಕ್ತಿಸಾಮ್ರಾಜ್ಯವನಾಳುತ್ತಿರ್ದೆನು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೯ ॥

೫೧೨

ಕರಿಯ ಕಾಮಿನಿಯ ಉದರದಲ್ಲಿ ಧರೆ ಈರೇಳಿಪ್ಪವು ನೋಡಾ.
ಹರಿ ಹತ್ತನು ಹೊತ್ತು ನಡೆವುತ್ತಿಪ್ಪಳು ನೋಡಾ.
ಆಕೆಯ ಶಿರದಲ್ಲಿ ಸಿಂಹ, ಹೃದಯದಲ್ಲಿ ಕರಿ,
ಸರ್ವಾಂಗದಲ್ಲಿ ಭಲ್ಲುಕ ನೋಡಾ.
ಶಿರದಲ್ಲಿ ಶಿವಕಳೆ, ಹೃದಯದಲ್ಲಿ ಪರಮಕಳೆ,
ಸರ್ವಾಂಗದಲ್ಲಿ ಸರ್ವಜ್ಞಾನವರ್ಮಕಳೆ ಉದಯವಾಗಲು
ಶಿರದ ಸಿಂಹ ಸತ್ತು, ಹೃದಯದ ಕರಿಯಳಿದು
ಸರ್ವಾಂಗದಲ್ಲಿ ತೊಡರಿದ ಭಲ್ಲೂಕ ಬಿಟ್ಟು
ಸರ್ವಜ್ಞ ನಿನಗೆ ನಾನು ಭಕ್ತನಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೦ ॥

೫೧೩

ತನುವಿನಲ್ಲಿ ಜ್ಞಾನಗುರು ಸಾಹಿತ್ಯವಾಗಿ
ತನುಭಾವವಿಲ್ಲ ನೋಡಾ.
ಮನದಲ್ಲಿ ಅರುಹೆಂಬ ಶಿವಲಿಂಗ ಅಚ್ಚೊತ್ತಿತ್ತಾಗಿ
ಮನ ಭಾವವಿಲ್ಲ ನೋಡಾ.
ಭಾವದಲ್ಲಿ ಮಹಾನುಭಾವವೆಂಬ ಜಂಗಮ ಸಂಬಂಧವಾಯಿತ್ತಾಗಿ
ಭಾವಾಭಾವಂಗಳಿಲ್ಲದ ಸದ್ಭಾವಿ ನೋಡಾ.
ಪ್ರಾಣದಲ್ಲಿ ಪ್ರಸಾದ ಸಾಹಿತ್ಯವಾದ ನಿಃಪ್ರಪಂಚಿಯು ನೋಡಾ.
ಆಚಾರ ಅಂಗವಾಗಿ ಅರುಹು ಹೃದಯವಾಗಿ,
ಹೃದಯ ಶುದ್ಧವಾಗಿ ಪದುಳಿಗನಾದ ಸದ್ಭಕ್ತನಲ್ಲಿ
ಮದನಹರನಿಪ್ಪನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೧ ॥

೫೧೪

ಸತ್ತುವೆಂಬ ಗುರುವಿನಲ್ಲಿ ಎನ್ನ ಸರ್ವಾಂಗವಡಗಿ
ಚಿತ್ರದ ಪ್ರತಿಮೆಯ ಅವಯವಂಗಳ ಶೃಂಗಾರದಂತೆ
ಆಕಾರವೆಂಬಂತೆ ಇರ್ದೆನಯ್ಯ.

ಚಿತ್ತೆಂಬ ಲಿಂಗದೊಳಗೆ ಮನವಡಗಿ
ನವನಾಳದ ಸುಳುಹು ಕೆಟ್ಟು
ಸುಷುಪ್ತಿಯನೆಯ್ದಿದ್ದೆನಯ್ಯ.
ಇದು ಕಾರಣ:
ಎನ್ನ ಜಾಗ್ರ ಸ್ವಪ್ನ ಸುಷುಪ್ತಿಯೆಂತಿಪ್ಪುದ
ನೀ ಬಲ್ಲೆಯಲ್ಲದೆ ಮತ್ತಾರು ಬಲ್ಲರು ಹೇಳಾ.
ಆನಂದವೆಂಬ ಜಂಗಮದಲ್ಲಿ ಅರುಹು ಏಕತ್ವವಾಗಿ
ಆತ್ಮೋಹಂಯೆಂಬುದನರಿಯೆನು ನೋಡಾ,
ನಾನು ಪರಮಾತ್ಮನಾದ ಕಾರಣ.
ನಿತ್ಯವೆಂಬ ಪ್ರಸಾದದಲ್ಲಿ ಪ್ರಾಣವಡಗಿ ನಿತ್ಯಾನಿತ್ಯವನರಿಯದೆ
ಸಚ್ಚಿದಾನಂದ ನಿತ್ಯ ಪರಿಪೂರ್ಣನಾಗಿ
ಅನಾದಿ ಭಕ್ತನಾದೆನಯ್ಯ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೨ ॥

ಶರಣನ ಮಾಹೇಶ್ವರ

೫೧೫

ಆದಿ ಪರಶಿವ ಬಿಂದುವಿನಿಂದ ಮಾದೇವಿ ಹುಟ್ಟಿ
ತ್ರೈಜಗದ ಜನನಿ ನೋಡಾ.
ಆಕೆ ಜಾತಿ ವರ್ಣಾಶ್ರಮ ಕುಲ ಗೋತ್ರ
ನಾಮ ಸೀಮೆಯ ಕೂಡಿಕೊಂಡಿಪ್ಪ ಭ್ರಾಂತು ಲಕ್ಷಣೆ ನೋಡಾ.
ಆಕೆಯ ಬಲೆಯಲ್ಲಿ ಲೋಕಾಧಿಲೋಕಂಗಳೆಲ್ಲವೂ ಸಿಕ್ಕಿ, ಕಾಕಾಗಿ,
ಆಕೆಯ ಒಡನೆ ಹುಟ್ಟಿ ಆಕೆಯ ಒಡನೆ ಬೆಳೆದು
ಆಕೆಯ ಒಡನೆ ಲಯವಾಗುತಿಪ್ಪವು.
ಆಕೆ ಉಂಟಾಗಿ ಲೋಕಾಧಿಲೋಕಂಗಳ ತೋರಿಕೆ.
ಆಕೆ ಲಯವಾದಲ್ಲಿಯೆ
ಲೋಕಾಧಿಲೋಕಂಗಳೆಲ್ಲವು ಲಯ ನೋಡಾ.
ಆಕೆಯ ಕೈ ಕಾಲ ಕಡಿದು, ಮೊಲೆ ಮೂಗನುತ್ತರಿಸಿ
ಆಕೆಯ ವಿಕಾರಸಂಗವನಳಿದು
ಆದಿ ಪರಶಿವಬಿಂದುವನೆಯ್ದಬಲ್ಲರೆ

ಆತನು ಲೋಕಾಧಿಲೋಕಂಗಳ ಪ್ರಪಂಚುವ ಗೆಲಿದ
ನಿಃಪ್ರಪಂಚಿ ಮಾಹೇಶ್ವರನು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೩ ॥

೫೧೬

ಆದಿಯಲ್ಲಿ ಹುಟ್ಟಿದಾತನು ಮೇದಿನಿಗಿಳಿದು
ತನ್ನಾದಿಯಂತುವ ಮರೆದು
ಮೇದಿನಿಯೆ ತಾನೆಂಬಂತಿಪ್ಪನು ನೋಡಾ.
ಆದಿಯಿಂದಗಲಿ ಭೇದವಾದಿಯಾಗಿ ಅವಿಚಾರಿಯಾದವನು
ನೋಡಾ.
ಮೇದಿನಿಯ ಹೃದಯದಲ್ಲಿ ನಾದಬ್ರಹ್ಮದ ಕಳೆ ಉದಯವಾಗಲು
ಮೇದಿನಿಯ ಗುಣ ಧರ್ಮ ಕರ್ಮ ವರ್ಣಾದಿ ದೇವತೆಗಳಳಿದು
ಆದಿಮಾಹೇಶ್ವರನೆಂದರಿದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೪ ॥

೫೧೭

ಆದಿಯಾಧಾರವ ಮುಟ್ಟದ ನಾದ ಬಿಂದು ಕಳಾತೀತನ ಕಂಡೆನು,
ಅದು ಆದಿ ಮಹಾಘನಲಿಂಗ ನೋಡಾ.
ಅದು ಎನ್ನಂಗ, ಪ್ರಾಣದಲ್ಲಿ ನಿಂದು
ಲಿಂಗ ಜಂಗಮವಾಯಿತ್ತು ನೋಡಾ.
ಲಿಂಗವೆ ಅಂಗವಾಗಿ, ಜಂಗಮವೆ ಪ್ರಾಣವಾಗಿ
ಪರಶಿವ ಕಳೆಯೆ ಕಾರಣವಾಗಿಪ್ಪ
ಲಿಂಗಾಂಗಿಯ ಮಾಹೇಶ್ವರನೆಂಬೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೫ ॥

೫೧೮

ಬ್ರಹ್ಮ ವಿಷ್ಣುಪದವೆಂಬುವು ಒಂದು ತೃಣ ನೋಡಾ,
ನಿಮ್ಮ ಮಾಹೇಶ್ವರಂಗೆ.

ಇಂದ್ರಾದಿ ದಿಕ್ಪಾಲಕರ ಭೋಗ ಒಂದು ತೃಣ ನೋಡಾ,
ನಿಮ್ಮ ಮಾಹೇಶ್ವರಂಗೆ,
ತ್ರಿಭುವನಸಂಪದ ಒಂದು ಕಿಂಚಿತ್ತು ನೋಡಾ, ನಿಮ್ಮ
ಮಾಹೇಶ್ವರಂಗೆ.
ದೀಕ್ಷೆಯೆಂಬುವುದಿಲ್ಲ ನೋಡಾ, ದಿವ್ಯಜ್ಞಾನಿ ತಾನಾಗಿ.
ಶಿಕ್ಷೆಯೆಂಬುವುದಿಲ್ಲ ನೋಡಾ,
ವಿಷಯಂಗಳು ತನ್ನ ವಶಗತವಾದವಾಗಿ.
ಮೋಕ್ಷವೆಂಬುವುದಿಲ್ಲ ನೋಡಾ, ನಿತ್ಯ ಮುಕ್ತ ತಾನಾಗಿ.
ಮಾಯಾ ಮೋಹ ರಹಿತ ನಿಮ್ಮ ನೆನಹೆ ಪ್ರಾಣವಾಗಿ
ನಾನು ಮಾಹೇಶ್ವರನಾದುದ ಏನ ಹೇಳುವೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೬ ॥

೫೧೯

ಕಲ್ಲ ಶರೀರವ ಧರಿಸಿ ಶಿಲಾಭೋಗಕ್ಕೆ ಬಂದವರು ಕೆಲಬರು:
ಕಾಯಕಂಥೆಯ ತೊಟ್ಟು ಕರ್ಮಭೋಗಕ್ಕೆ ಬಂದವರು ಕೆಲಬರು.
ಕಲ್ಲಕಂಥೆಯ ತೊಟ್ಟು ಲಿಂಗವೆನಿಸಿಕೊಂಡು
ಕಾಯಕಂಥೆಯ ತೊಟ್ಟು ಜಂಗಮವೆನಿಸಿಕೊಂಡು
ಲೋಗರ ಉಪಚಾರಕ್ಕೆ ಬಂದ ಭೋಗರುದ್ರರೆಲ್ಲ
ಆಗು ಹೋಗಿಂಗೆ ಗುರಿ ನೋಡಾ.
ಅದೇನು ಕಾರಣವೆಂದರೆ:
ತಮ್ಮಾದಿಯ ಶಿವತತ್ವವ ಭೇದಿಸಿ ಘನಲಿಂಗಪದಸ್ಥರು
ತಾವೆಂದರಿಯದೆ
ಶಿವಪದಕ್ಕೆ ಅನ್ಯವಾದ ಗಣೇಶ್ವರಪದವೆಂಬ ಗರ್ವಪರ್ವತವಡರಿ
ಕೆಟ್ಟರು ನೋಡ, ತಮ್ಮ ನಿಜಪದವನರಿಯದೆ.
ಇದು ಕಾರಣ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆಂಬ
ನಿಜಲಿಂಗಜಂಗಮವೊಂದಾದ ಪದವು
[ಈ]ಒಂದರ ಹಾದಿಯದಲ್ಲ ಬಿಡಾ, ಮರುಳೆ. ॥ ೭೭ ॥

೫೨೦

ಒಂದು ಪದದೊಳಗೆ ಎರಡೆಂಬತ್ತೆಂಟುಕೋಟಿ ಪದ
ಹುಟ್ಟಿದವು ನೋಡ.
ಆ ಎರಡೆಂಬತ್ತೆಂಟುಕೋಟಿ ಪದದೊಳಗೆ ಅನೇಕ ಕಾಲುಗಳು
ಹುಟ್ಟಿದವು ನೋಡ.
ಆ ಅನೇಕ ಕಾಲುಗಳ ಮುರಿದು,
ಎರಡೆಂಬತ್ತುಕೋಟಿ ಪದಗಳನಳಿದು,
ಒಂದೆ ಪದದಲಿ ನಿಲಬಲ್ಲರೆ ಆತನು ಪರಶಿವ ಪದಸ್ಥನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ! ॥ ೭೮ ॥

೫೨೧

ಅಂಗಾಲಕಣ್ಣವರ ಪದವಿ ಅವರಿಗೆ ಇರಲಿ.
ಮೇಗಾಲಕಣ್ಣವರ ಪದವಿ ಅವರಿಗೆ ಇರಲಿ.
ಮೈಯೆಲ್ಲಾ ಕಣ್ಣವರ ಪದವಿ ಅವರಿಗೆ ಇರಲಿ.
ಪಂಚಮುಖ ನೊಸಲಕಣ್ಣು ನಂದಿವಾಹನರಪ್ಪ
ಗಂಗೆವಾಳುಕ ಸಮಾರುದ್ರರ ಪದವಿ ಅವರಿಗೆ ಇರಲಿ.
ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯ
ಪದಗಳು ಅವರಿಗೆ ಇರಲಿ.
ಎನಗೆ ಆವ ಫಲವು ಬೇಡ. ಆವ ಪದವೂ ಬೇಡ.
ನಾನು ನಿಮ್ಮ ಪದದೊಳಗಡಗಿ,
ಎನಗೆ ನಿನಗೆ ಭಿನ್ನವಿಲ್ಲದಿಪ್ಪ
ಪರಮ ಭಕ್ತಿಸಂಪದವನೆ ಕೊಡಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೯ ॥

೫೨೨

ಕಾಯಶೂನ್ಯನು ಕರಣಶೂನ್ಯನು ಮಾಹೇಶ್ವರನು.
ಆತ್ಮಶೂನ್ಯನು ಸರ್ವಶೂನ್ಯ ನಿರಾಲಂಬಿ ಮಾಹೇಶ್ವರನು.
ಆದಿ ಅನಾದಿಯ ಗೆದ್ದ ಅನಾದಿ ಪರಶಿವಮೂರ್ತಿಯ
ಮನಮುಟ್ಟಿದ ಧೀರನಯ್ಯ ನಿಮ್ಮ ವೀರಮಾಹೇಶ್ವರನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೦ ॥

೫೨೩

ಕಣ್ಣಿಲ್ಲದಾತ ಕಾಣಬಲ್ಲನೆ ಅಯ್ಯ?
ಕಿವಿಯಿಲ್ಲದಾತ ಕೇಳಬಲ್ಲನೇಸಯ್ಯ?
ಮೂಗಿಲ್ಲದ ಮೂಕಾರ್ತಿ ವಾಸಿಸಬಲ್ಲನೆ ಅಯ್ಯ?
ನಾಲಿಗೆಯಿಲ್ಲದವ ರುಚಿಸಬಲ್ಲನೆ ನೋಡಯ್ಯ?
ಕೈಯಿಲ್ಲದ ಮೋಟ ಹಿಡಿಯಬಲ್ಲನೆ?
ಕಾಲಿಲ್ಲದ ಹೆಳವ ನಡೆಯಬಲ್ಲನೆ ಅಯ್ಯ?
ಹಂದೆ ಶೌರ್ಯದ ಕುರುಹ ಬಲ್ಲನೆ?
ನಪುಂಸಕ ವ್ಯವಹರಿಸಬಲ್ಲನೆ ಅಯ್ಯ?
ತಮ್ಮ ತಾವರಿಯದ ಅಜ್ಞಾನಿಗಳು
ಗುರು ಗುರುವೆಂದು ಅನ್ಯರಿಗೆ ಉಪದೇಶವ ಕೊಟ್ಟು
ಅರುಹಿನ ಆಚರಣೆಯ ಹೇಳಿ
ಸತ್ಪಥವ ಆಚರಣೆಯ ಹೇಳಿ
ಸತ್ಪಥವ ತೋರಿಹೆನೆಂಬರಯ್ಯ.
ತಮ್ಮ ಹಾದಿಯ ತಾವರಿಯರು; ತಾವಿನ್ನಾರಿಗೆ
ಹಾದಿಯ ತೋರಿಪರಯ್ಯ?
ಆ ಭೂಭಾರಿಗಳು ಗುರು ಗುರುವೆಂಬುವಕ್ಕೆ ನಾಚರು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೧ ॥

೫೨೪

ಗೇಣುದ್ದ ಒಡಲೊಳಗೆ ಬೆಟ್ಟದುದ್ದ ಮಾತು ಹುಟ್ಟಿತ್ತು ನೋಡ.
ಬೆಟ್ಟದುದ್ದ ಮಾತೆಲ್ಲ ಏತಕಯ್ಯಯೆಂದರೆ- ಗೇಣುದ್ದ ಒಡಲ
ಹೂಣುವದಕ್ಕಾಗಿ ಕಾಣ.
ವಾಚಾಳತ್ವದಿಂದ ಉದರವ ಹೊರೆವವರೆಲ್ಲಾ ಗುರುವೆ?
ಇಂದ್ರಿಯಂಗಳಿಗೊಂದೊಂದು ಮಾತಕಲಿತು
ಸದಾಶಿವನ ಸಂಧಿಸಿ ಸರ್ವರಿಗೆ ತೋರಿಹೆನೆಂಬರು,
ತಾವೇಕೆ ಕಾಣರೋ?
ತಾವು ಕಾಣದೆ, ತಮ್ಮಲ್ಲಿ ವಸ್ತು ವಿವೇಕವಿಲ್ಲದೆ
ಅನ್ಯರಿಗೆ ಪೇಳುವ ಬೋಧೆ ಅದು ಅವಿಚಾರ ಕಾಣ.
ಗುರುತತ್ವದ ಬಲ್ಲ ಗುರು ಶುದ್ಧ ಚಿದ್ರೂಪನು.
ಚಿನ್ಮಯನು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೨ ॥

೫೨೫

ಮಾತಿನಲ್ಲಿ ಮಹತ್ವವ ನುಡಿದು
ನೀತಿಯಲ್ಲಿ ಅಧಮರಾದ ಮಾನವರು
ಈಶ್ವರೋವಾಚವ ನುಡಿದುಕೊಂಡು ನಡೆದರೆ
ಬೆಟ್ಟಕ್ಕ ನಾಯಿ ಬಗುಳಿದಂತೆ.
ಕಷ್ಟರ ನುಡಿ ಕಾಮಾರಿಯ ಮುಟ್ಟದು ಕಾಣ.
ನಿಮ್ಮ ಮುಟ್ಟದ ಮನಕ್ಕೆ ಬಂದಂತೆ ನಡೆವವರ,
ಮನಕ್ಕೆ ಬಂದಂತೆ ನುಡಿವವರ ಮಚ್ಚೆನು ಕಾಣಾ,
ಅಲ್ಲಿ ನೀವಿಲ್ಲದ ಕಾರಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೩ ॥

೫೨೬

ಲೋಕಮೆಚ್ಚೆ ನಡೆವರಯ್ಯ ಲೋಕಮೆಚ್ಚೆ ನುಡಿವರಯ್ಯ.
ಲೋಕಮೆಚ್ಚೆ ನಡೆಯೆ ಹೋಯಿತ್ತೆನ್ನ ಶಿವಾಚಾರ.
ಲೋಕಮೆಚ್ಚೆ ನುಡಿಯೆ ಹೋಯಿತ್ತೆನ್ನ ಶಿವಜ್ಞಾನ.
ಲೌಕಿಕವರ್ತನ ನಾಯಕನರಕವೆಂದಿತ್ತು ಗುರುವಚನ.
ಇದು ಕಾರಣ ಲಿಂಗ ಮೆಚ್ಚೆ ನಡವೆ; ಲಿಂಗ ಮೆಚ್ಚೆ ನುಡಿವೆ
ಲಿಂಗ ಲಿಂಗವೆಂಬ ಲಿಂಗಭ್ರಾಂತನಾಗಿ ವರ್ತಿಸುವೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೪ ॥

೫೨೭

ಲೋಕದ ನಚ್ಚು ಮಚ್ಚೆಂಬ ಕಿಚ್ಚೆದ್ದು ಸುಡುತಿದೆ ನೋಡ.
ನಿಶ್ಚಿಂತ ನಿರಾಳವೆಂಬ ನೀರನೆರೆಯಲು,
ಆ ಕಿಚ್ಚು ಕೆಡುವುದು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೫ ॥

೫೨೮

ಒಸಿ ಲೋಕಾಧೀನ, ಒಸಿ ಶಿವಾಧೀನವುಂಟೆ ಲೋಕದೊಳಗೆ?
ಒಸಿ ಪುರುಷಪ್ರಯತ್ನ, ಒಸಿ ಶಿವಪ್ರಯತ್ನವುಂಟೆ
ಲೋಕದೊಳಗೆ?
ಒಸಿ ಲೋಕಾರ್ಥ, ಒಸಿ ಪರಮಾರ್ಥವುಂಟೆ ಲೋಕದೊಳಗೆ?

ಒಸಿ ಜೀವಗುಣ, ಒಸಿ ಪರಮನಗುಣವುಂಟೆ ಲೋಕದೊಳಗೆ?
ಸ್ಥಾವರ ಜಂಗಮಾತ್ಮಕಂಗಳ ಲಯ ಗಮನಂಗಳಿಗೆ
ಅಧಿಷ್ಠಾನ ಕರ್ತೃ ಶಿವನೆಂದರಿಯದವಂಗೆ ಶಿವಜ್ಞಾನವೆಲ್ಲಿಯದೋ?
ಸಮಸ್ತಾತ್ಮರಿಗೆ ಸರ್ವಪ್ರೇರಕ ಸರ್ವಚೈತನ್ಯ ಸರ್ವವ್ಯಾಪಕ
ಸರ್ವಮಯನು ಸರ್ವಜ್ಞನೊಬ್ಬನೆ ಸರ್ವಕಾರಣ.
ಹೀಗೆಂಬುದು ಪರಮಾರ್ಥವಲ್ಲದೆ
ಉಳಿದವೆಲ್ಲಾ ಜೀವಭಾವ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೬ ॥

೫೨೯

ಜೀವನ ಬುದ್ಧಿ ಪರಮನ ಬುದ್ಧಿಯಿರಬೇಕೆಂದೆಂಬರು;
ಇದು ಶಿವಶರಣರ ಗುಣವೆ?
ಲೋಕದ ಅಜ್ಞಾನಿಗಳ ಗುಣವಲ್ಲದೆ?
ಎರಡು ಚಿತ್ತವುಳ್ಳವ ಭಕ್ತನೆ?
ಎರಡು ಬುದ್ಧಿವುಳ್ಳವ ಮಹೇಶ್ವರನೆ?
ಎರಡು ಅಹಂಕಾರವುಳ್ಳವ ಪ್ರಸಾದಿಯೆ?
ಎರಡು ಮನವುಳ್ಳವ ಪ್ರಾಣಲಿಂಗಿಯೆ?
ಎರಡರಿವು ಉಳ್ಳವ ಶರಣನೆ?
ಎರಡು ಭಾವವುಳ್ಳವ ಲಿಂಗೈಕ್ಯನೆ?
ಎರಡೆರಡೆಂಬ ಜೀವಭಾವವನಳಿದು
ಶಿವಭಾವಸಂಪನ್ನನಾದ ಏಕೋಭಾವಿ ನಿಮ್ಮ ಮಾಹೇಶ್ವರನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೭ ॥

ಶರಣನ ಪ್ರಸಾದಿ

೫೩೦

ಇಷ್ಟಲಿಂಗದ ಮುಖವಾವುದು?
ಪ್ರಾಣಲಿಂಗದ ಮುಖವಾವುದು?
ಭಾವಲಿಂಗದ ಮುಖವಾವುದು ಎಂದರೆ ಹೇಳಿಹೆ ಕೇಳಿರಣ್ಣ:
ಇಷ್ಟಲಿಂಗದ ಮುಖವೈದು :
ಪ್ರಾಣ ವಾಯುಗಳ ಮುಖವನೆಯ್ದಿ ಪ್ರಾಣಲಿಂಗವೆನಿಸಿಕೊಂಡಿತ್ತು.
ಭಾವವನೆಯ್ದಿ ಭಾವಲಿಂಗವೆನಿಸಿಕೊಂಡಿತ್ತು.

ಒಂದೇ ಲಿಂಗ ತನುತ್ರಯಂಗಳಲ್ಲಿ
ಇಷ್ಟ ಪ್ರಾಣ ಭಾವ ರೂಪಕವಾಗಿಪ್ಪುದು.
ಜೀವತ್ರಯಂಗಳಲ್ಲಿ ಮಂತ್ರ ಜ್ಞಾನ ಧ್ಯಾನ ರೂಪಕವಾಗಿಪ್ಪುದು.
ಅವಸ್ಥಾನತ್ರಯಂಗಳಲ್ಲಿ ಸತ್ಕ್ರಿಯಾಚರಣೆ
ತದ್ವಾಸನೆ ತಲ್ಲೀಯ್ಯವಾಗಿಪ್ಪುದು.
ಮಲತ್ರಯಂಗಳಲ್ಲಿ ಸ್ವಯ ಚರ ಪರ ರೂಪಕವಾಗಿಪ್ಪುದು.
ಈಷಣತ್ರಯಂಗಳಲ್ಲಿ ಲಿಂಗ ಪ್ರೇಮರತಿಗೆ ಸಕಲಸಾಧನಂಗಳಾಗಿ
ಮಾಯಾಭ್ರಾಂತಿಯನು ನಿಭ್ರಾಂತಿಯೆನಿಸಿ
ಶುದ್ಧ ಪ್ರಭಾ ಪರಿಪೂರ್ಣ ಲಿಂಗ ತಾನೆ
ಪ್ರಸನ್ನ ಪ್ರಸಾದ ರೂಪಕನಾಗಿರುತಿರ್ದನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೮ ॥

೫೩೧

ಇಷ್ಟಲಿಂಗದ ಪೂಜೆಯಾವುದು,
ಪ್ರಾಣಲಿಂಗದ ಪೂಜೆಯಾವುದು,
ಭಾವಲಿಂಗದ ಪೂಜೆಯಾವುದುಯೆಂದರೆ ಹೇಳಿಹೆ ಕೇಳಿರಯ್ಯ.
ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆಯ ಮಾಡುವುದು,
ಇದು ಇಷ್ಟಲಿಂಗದ ಪೂಜೆ.
ಆ ಲಿಂಗವನು ಮನಸ್ಸಿನಲ್ಲಿ ಧ್ಯಾನಿಸಿ
ಮನೋಮಧ್ಯದಲಿಪ್ಪ ನಿಃಕಲ ಬ್ರಹ್ಮವನು
ಧ್ಯಾನವೆಂಬ ಹಸ್ತದಲ್ಲಿ ಹಿಡಿದು
ಕರಸ್ಥಲದಲ್ಲಿಪ್ಪ ಲಿಂಗದ ಗೊತ್ತಿನಲ್ಲಿ ಕಟ್ಟಿ ನೆರೆವುದೀಗ
ಪ್ರಾಣಲಿಂಗದ ಪೂಜೆಯೆಂದು ಹೇಳಲ್ಪಟ್ಟಿತ್ತಯ್ಯ.
ಮನಸು ಲಿಂಗವಲ್ಲಿ ತಲ್ಲೀಯವಾಗಿ ನಚ್ಚಿ ಮಚ್ಚಿ
ಅಚ್ಚೊತ್ತಿ ಅಪ್ಪಿ ಅಗಲದಿಪ್ಪುದೇ
ಭಾವಲಿಂಗದ ಪೂಜೆಯೆಂದು ಹೇಳಲ್ಪಟ್ಟಿತ್ತಯ್ಯ.
ಇವು ಮೂರು ಲಿಂಗದ ಅರ್ಚನೆ.
ಮೂರು ಲಿಂಗದ ಉಪಚಾರ.
ಶಿವಾರ್ಥಿಗಳಾದ ವೀರಶೈವರುಗಳು ಮಾಡುವ
ಲಿಂಗಾರ್ಚನೆಯ ಕ್ರಮವೆಂದು ಹೇಳಲ್ಪಟ್ಟಿತ್ತಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೯ ॥

೫೩೨

ಇಷ್ಟಲಿಂಗಾರ್ಪಣವಾವುದು,
ಪ್ರಾಣಲಿಂಗಾರ್ಪಣವಾವುದು,
ಭಾವಲಿಂಗಾರ್ಪಣವಾವುದುಯೆಂದರೆ ಹೇಳಿಯೆ ಕೇಳಿರಯ್ಯ.
ಇಷ್ಟಲಿಂಗಕ್ಕೆ ಶರೀರವೆ ಸಮರ್ಪಣ.
ಪ್ರಾಣಲಿಂಗಕ್ಕೆ ಮನವೆ ಸಮರ್ಪಣ.
ಭಾವಲಿಂಗಕ್ಕೆ ತೃಪ್ತಿಯೆ ಸಮರ್ಪಣ.
ಶರೀರವೆಂದರೆ ರೂಪು, ಮನವೆಂದರೆ ರುಚಿ,
ತೃಪ್ತಿಯೆಂದರೆ ಸಂತೋಷ.
ಈ ತೆರಸನರಿದು ಲಿಂಗಕ್ಕೆ ಸಮರ್ಪಿಸಿ
ಪ್ರಸಾದವ ಭೋಗಿಸಬಲ್ಲಾತನೇ
ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಿಯೆಂದು ಹೇಳಲ್ಪಟ್ಟಿತ್ತಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೦ ॥

೫೩೩

ಗುರು ಮುಖದಿಂದ ಕೊಂಬುದು ಶುದ್ಧಪ್ರಸಾದ.
ಲಿಂಗ ಮುಖದಿಂದ ಕೊಂಬುದು ಸಿದ್ಧಪ್ರಸಾದ.
ಜಂಗಮ ಮುಖದಿಂದ ಕೊಂಬುದು ಪ್ರಸಿದ್ಧಪ್ರಸಾದ.
ಜ್ಞಾನಮುಖದಿಂದ ಕೊಂಬುದು ಮಹಾಪ್ರಸಾದ.
ಈ ನಾಲ್ಕು ತೆರದಲ್ಲಿ ಕೊಂಬುವುದು ಪ್ರಸಾದವಲ್ಲದೆ
ರಣದ ಬೀರರ ಹಾಂಗೆ ಬಾಚಿಸಿಕೊಂಡು
ಕೊಂಬಷ್ಟ ಕೊಂಡು, ಬಿಡುವಷ್ಟ ಬಿಟ್ಟು
ಸೂರೆಗೂಳಾಗಿ ಚೆಲ್ಲಿಯಾಡುವುದು ಇದಾವ ಪ್ರಸಾದ ಹೇಳ?
ಅದೆಂತೆಂದೊಡೆ:
ಅಣುಮಾತ್ರ ಪ್ರಸಾದಾನ್ನಂ ತ್ಯಕ್ತ್ವಾ ಭುಕ್ತಾನ್ನ ಕಿಲ್ಬಿಷಂ।
ಸ ಪಾಪೀ ನರಕಂ ಯಾತಿ ತದ್ಗೃಹಂ ನರಕಾಲಯಂ॥
ಎಂದುದಾಗಿ
ಬಹು ಜನಂಗಳು ಕಾರಿದ ಕೂಳ ಶ್ವಾನ ಭುಂಜಿಸಿ
ತನ್ನೊಡಲ ಹೊರೆದಂತಾಯಿತ್ತು ಕಾಣಾ ವಿಶ್ವಾಸವಿಲ್ಲದ ಪ್ರಸಾದ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೧ ॥

ನೀ ಹುಟ್ಟಿದೆಯಯ್ಯ ಗುರುವಿನ ಮನಸ್ಥಲದಲ್ಲಿ.
ನಾ ಹುಟ್ಟಿದೆನಯ್ಯ ಗುರುವಿನ ಕರಸ್ಥಲದಲ್ಲಿ.
ಇದು ಕಾರಣ:
ನನ್ನ ಅಂಗವ ಮಾಡಿ ನಿನ್ನ ಪ್ರಾಣವ ಮಾಡಿ
ಪ್ರಾಣಲಿಂಗಪ್ರತಿಷ್ಠೆಯ ಮಾಡಿದನಯ್ಯ ಶ್ರೀಗುರು.
ಆ ಗುರುವಿನ ಪ್ರಸನ್ನ ಪ್ರಸಾದದಿಂದ ನಾನು ನೀನು ಹುಟ್ಟಿದೆವಾಗಿ
ಎನಗೂ ನಿನಗೂ ಗುರುಪ್ರಸಾದವೇ ಪ್ರಾಣ ನೋಡ.
ಇದುಕಾರಣ:
ಗುರುಪ್ರಸಾದವ ಎಲೆ ಲಿಂಗವೆ ನೀನು ಕೊಳಲೇಬೇಕು.
ಗುರುಪ್ರಸಾದವ ಕೊಳದಿದ್ದರೆ ನೀ ಲಿಂಗವಲ್ಲ ನೋಡ.
ಪ್ರಸಾದವಿಲ್ಲದ ಲಿಂಗಕ್ಕೆ ದೇವತ್ವವೆಲ್ಲಿಯದು?
ದೇವತ್ವವಿಲ್ಲದದು ಪೂಜೆಗೆ ಸಲುವುದೆ?
ಪೂಜೆಗೆ ಸಲ್ಲದೆಂದೆನು ಕಾಣ ಎಲೆ ಶಿವನೆ ನೀ ಸಾಕ್ಷಿಯಾಗಿ.
ಇದು ಕಾರಣ :
ಗರುಪ್ರಸಾದವ ನಾನು ಕೊಳ್ಳಲೇಬೇಕು.
ಆ ಗುರುಪ್ರಸಾದವ ಕೊಳ್ಳದಿದ್ದರೆ ನಾನು ಪ್ರಸಾದಿಯಲ್ಲ ನೋಡ.
ಇದುಕಾರಣ:
ನಾನೂ ನೀನೂ ಗುರುಪ್ರಸಾದಿಗಳು ಕಾಣ.
ಕೇಳು:
ಗುರುಮಂತ್ರೋಪದೇಶದಿಂದ ಹುಟ್ಟಿದ ಲಿಂಗಕ್ಕೆ
ಗುರುಪ್ರಸಾದವ ಕೊಡಬಾರದು ಎಂಬ ಅನಾಚಾರಿಗಳಿಗೆ
ನಾಯಕನರಕ ತಪ್ಪದು ನೋಡ.
'ಏವಂ ಭೇದ ಕಲಾದೇವಿ ಸದ್ಗುರುಶ್ಶಿಷ್ಯ ಮಸ್ತಕೇ।
ಹಸ್ತಾಬ್ಜ ಮಥನಾದ್ ಗ್ರಾಹ್ಯಾ ತಸ್ಯ ಭಾವ ಕರೋದಿತಾ
ವಪುರೇವ ಸಮುತ್ಪನ್ನಾ ತತ್ಪ್ರಾಣ ಮಿಶ್ರಿತಾ ಭವೇತ್।
ಯಥಾ ಗುರು ಕರೇ ಜಾತಂ ಲಿಂಗಂ ಭಕ್ತಿ ವಿಭೇದತಃ॥'
ಎಂಬುದಾಗಿ
ಗುರುಪ್ರಸಾದ ಎನಗೂ ನಿನಗೂ ಪ್ರಾಣಪ್ರತಿಷ್ಠೆಯೆಂದನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೨ ॥

೫೩೫

ಗುರುವಿನ ಮೂರ್ತಿ ನಿರಾಕಾರವು ನೋಡ.
ಲಿಂಗದ ಮೂರ್ತಿ ಆಕಾರವು ನೋಡ.
ಆ ನಿರಾಕಾರ ಸ್ವರೂಪವಪ್ಪ ಗುರುವಿನ ಪ್ರಸಾದವ
ಆಕಾರ ಸ್ವರೂಪವಪ್ಪ ಲಿಂಗಕ್ಕೆ ಕೊಡಬೇಕೆಂಬುವುದೇ
ಶಿವಾಚಾರ ಪಥ ನೋಡ.
ಆ ಗುರುಪ್ರಸಾದವ ಅಂಗಕ್ಕೆ ಕೊಡಬಹುದು
ಲಿಂಗಕ್ಕೆ ಕೊಡಬಾರದೆಂಬ
ಅನಾಚಾರಿಯ ಮುಖವ ನೋಡಲಾಗದು ಕಾಣ.
ಗುರುವಿನಿಂದ ಲಿಂಗವ ಪಡೆಯಬಹುದಂತೆ.
ಗುರು ಮುಖದಿಂದ ಬಂದ ಪ್ರಸಾದವ ಲಿಂಗಕ್ಕೆ ಕೊಡಬಾರದೆಂಬ
ಮರುಳು ಮಾನವರ ಮಾಯಾ ಭ್ರಾಂತಿಯ ನೋಡಿ
ನಾನು ಪೇಸಿದೆನು ಕಾಣ
ಅದೆಂತೆಂದೊಡೆ:
'ಅಶರೀರಂ ಗುರೋರ್ಭಾವಂ ಆಕಾರಂ ಲಿಂಗ ಮೂರ್ತಿಷು।
ಅನಂಗ ಸಂಗ ಸಂಯುಕ್ತಂ ಗುರೋರ್ಲಿಂಗ ಸಮಾಶ್ರಿತಂ॥'
ಇತೆಂದುದಾಗಿ
ಗುರುಪ್ರಸಾದವ ಲಿಂಗಕ್ಕೆ ಕೊಡಬೇಕು ಕಾಣಾ.
ಆ ಗುರುಪ್ರಸಾದದಿಂದ ಲಿಂಗಕ್ಕೆ ಪರಮ ಪರಿಣಾಮವಪ್ಪುದು
ತಪ್ಪದು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೩ ॥

೫೩೬

ಆ ಭಕ್ತಂಗೆ ಲಿಂಗವೇ ಪ್ರಾಣ;
ಆ ಲಿಂಗಕ್ಕೆ ಗುರುವೇ ಪ್ರಾಣ;
ಆ ಗುರುವಿಗೆ ಜಂಗಮವೇ ಪ್ರಾಣ ನೋಡ.
ಅದೇನುಕಾರಣವೆಂದರೆ:
ಆ ನಿತ್ಯ ನಿರಂಜನ ಪರವಸ್ತುವೆ ಘನ ಚೈತನ್ಯವೆಂಬ
ಜಂಗಮವು ನೋಡ.
ಆ ಪರಮ ಜಂಗಮದಿಂದ ನಿಃಕಲ ಗುರುಮೂರ್ತಿ
ಉದಯವಾದನು ನೋಡ.
ಆ ನಿಃಕಲ ಗುರುಮೂರ್ತಿಯಿಂದ

ಆದಿಮಹಾಲಿಂಗವು ಉದಯವಾಯಿತ್ತು ನೋಡಾ.
ಆ ಆದಿಮಹಾಲಿಂಗದಿಂದ ಮೂರ್ತಿಗೊಂಡನು ಭಕ್ತನು.
ಆ ಗುರುವಿಂಗೆ ಆ ಲಿಂಗಕ್ಕೆ ಆ ಭಕ್ತಂಗೆ
ಆ ಜಂಗಮ ಪ್ರಸಾದವೇ ಪ್ರಾಣ ನೋಡ.
ಇದು ಕಾರಣ:
ಭಕ್ತನಾದರೂ ಲಿಂಗವಾದರೂ ಗುರುವಾದರೂ
ಜಂಗಮ ಪ್ರಸಾದವ ಕೊಳ್ಳಲೇಬೇಕು.
ಜಂಗಮ ಪ್ರಸಾದವ ಕೊಳ್ಳದಿದ್ದರೆ
ಆತ ಗುರುವಲ್ಲ, ಅದು ಲಿಂಗವಲ್ಲ; ಆತ ಭಕ್ತನಲ್ಲ ನೋಡ.
ಆ ಶೈವ ಪಾಷಂಡಿಯ ಕೈಯ ಪಡೆದುದು ಉಪದೇಶವಲ್ಲ ;
ಆತನಿಂದ ಪಡೆದುದು ಲಿಂಗವಲ್ಲ.
ಆ ಲಿಂಗವ ಧರಿಸಿಪ್ಪಾತ ಭಕ್ತನಲ್ಲ.
ಅವ ಭೂತಪ್ರಾಣಿ ನೋಡ.
ಇದುಕಾರಣ:
ಜಂಗಮ ಪ್ರಸಾದವ ಲಿಂಗಕ್ಕೆ ಕೊಟ್ಟು ಕೊಂಬಾತನೆ ಶಿವಭಕ್ತನು.
ಆ ಜಂಗಮ ಪ್ರಸಾದವ ಲಿಂಗಕ್ಕೆ ಕೊಟ್ಟು ಕೊಳ್ಳದಿದ್ದರೆ
ಅವ ಭವಿಗಿಂದಲು ಕರಕಷ್ಟ ನೋಡ.
ಆ ಭವಭಾರಿಯ ಮುಖವ ನೋಡಲಾಗದು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೪ ॥

೫೩೭

ಬಸವಣ್ಣನ ಪ್ರಸಾದದಿಂದ ಭಕ್ತಿಜ್ಞಾನ ವೈರಾಗ್ಯ
ಸಂಪನ್ನನಾದೆನಯ್ಯ.
ಚೆನ್ನಬಸವಣ್ಣನ ಪ್ರಸಾದಿಂದ ಷಟ್‌ಸ್ಥಲಜ್ಞಾನಸಂಪನ್ನನಾದೆನಯ್ಯ.
ಪ್ರಭುದೇವರ ಪ್ರಸಾದದಿಂದ ಪರಶಿವತತ್ವಸ್ವರೂಪವೇ
ಎನ್ನ ಸ್ವರೂಪವೆಂದರಿದು
ಸಮಸ್ತ ಸಂಸಾರಪ್ರಪಂಚ ಕೊಡಹಿದೆನು ನೋಡ.
ನೀಲಲೋಚನೆಯಮ್ಮನ ಪ್ರಸಾದದಿಂದ ನಿಜಲಿಂಗೈಕ್ಯನಾದೆನಯ್ಯ.
ಮಹಾದೇವಿಯಕ್ಕಗಳ ಪ್ರಸಾದದಿಂದ
ಸುತ್ತಿದ ಮಾಯಾಪಾಶವ ಹರಿದು ನಿರ್ಮಾಯನಾಗಿ
ನಿರ್ವಾಣಪದದಲ್ಲಿ ನಿಂದೆನಯ್ಯ.
ಸಿದ್ಧರಾಮಯ್ಯನ ಪ್ರಸಾದದಿಂದ ಶುದ್ಧ ಶಿವತತ್ವವ
ಹಡೆದೆನಯ್ಯ.

ಮೋಳಿಗೆಯ ಮಾರಿತಂದೆಗಳ ಪ್ರಸಾದದಿಂದ
ಕಾಯದ ಕಳವಳವನಳಿದು ಕರ್ಮನಿರ್ಮಲನಾಗಿ
ವೀರಮಾಹೇಶ್ವರನಾದೆನು ನೋಡ.
ಇವರು ಮುಖ್ಯವಾದ ಏಳುನೂರೆಪ್ಪತ್ತಮರಗಣಂಗಳ
ಪರಮಪ್ರಸಾದದಿಂದ
ಎನ್ನ ಕರಣಂಗಳೆಲ್ಲವು ಲಿಂಗಕರಣಂಗಳಾಗಿ
ಕರಣೇಂದ್ರಿಯಂಗಳ ಕಳೆದುಳಿದು
ಇಂದ್ರಿಯಂಗಳಿಗೆ ನಿಲುಕದ ಸ್ಥಾನದಲ್ಲಿರ್ದು
ಪರಮಾನಂದ ಪ್ರಭಾಮಯನಾಗಿರ್ದೆನು ನೋಡ.
ನಿಮ್ಮ ಶರಣರ ಪ್ರಸಾದದಿಂದ ನಾನು
ಪ್ರಸಾದಿಯಾಗಿರ್ದೆನು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೫ ॥

೫೩೮

ಪಶ್ಚಿಮಚಕ್ರದಲ್ಲಿ ನಿತ್ಯ ನಿರಂಜನನ ಬೆಳಗು
ತತ್ತ್ವಬ್ರಹ್ಮಾಂಡದಿಂದತ್ತತ್ತಲಾದ ಘನ ನೋಡ.
ಅದು ಪರಂಜ್ಯೋತಿ ಪರತತ್ವ ಪರಾಪರವಸ್ತುವೇ
ಪ್ರಸಾದ ನೋಡ.
ಪ್ರತಿಯಿಲ್ಲದ ಅಪ್ರತಿಮ ಪ್ರಸಾದದಲ್ಲಿ ನಿಃಪತಿಯಾಗಿ
ಮಹಾಪ್ರಸಾದಿಯಾದೆನು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೬ ॥

೫೩೯

ಶಿಖಾಚಕ್ರದಲ್ಲಿ ಅಕಳಂಕ ಅದ್ವಯ ಅಪ್ರಮೇಯ
ಶುದ್ಧ ಸೂಕ್ಷ್ಮ ಚಿನ್ಮಯನು ನೋಡ.
ಆ ಚಿದಮೃತ ಕಳಾಪ್ರಸಾದವನೊಡಗೂಡಿ
ಶುದ್ಧ ಪ್ರಣವ ಪ್ರಸಾದಿಯಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೭ ॥

೫೪೦

ಸಹಸ್ರದಳದಲ್ಲಿ ಸಚ್ಚಿದಾನಂದ ನಿತ್ಯ ಪರಿಪೂರ್ಣ ಸರ್ವಜ್ಞನು
ಅನಂತಕೋಟಿ ಸೋಮ ಸೂರ್ಯರ ಬೆಳಗು ನೋಡ.

ಸಾವಿರದೈವತ್ತೆರಡುಯೆಸಳಿನಲ್ಲಿ ತಾನಾಗಿ ತೊಳಗಿ ಬೆಳಗುವ
ಏಕಮೇವಾದ್ವಿತೀಯನ ಪ್ರಸಾದದುದಯ ನೋಡ.
ಆ ಪರಮ ಪ್ರಸಾದಗ್ರಾಹಕನಾಗಿ
ಶುದ್ಧ ಶಿವಯೋಗಿಯಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೮ ॥

೫೪೧

ಆಜ್ಞಾಚಕ್ರದ ದ್ವಿದಳ ಪದ್ಮದಲ್ಲಿ ಅವಿರಳ ಸುಜ್ಞಾನ ಪೀಠದೊಳಗೆ
ಅಮೃತಮಯ ಲಿಂಗವ ಕಂಡೆನು ನೋಡ.
ಆ ಲಿಂಗ ಸಂಗದಿಂದ ಉತ್ಪತ್ತಿ ಸ್ಥಿತಿ ಪ್ರಳಯವ ಗೆಲಿದು
ನಿತ್ಯ ನಿರಂಜನ ಪ್ರಸಿದ್ಧ ಪ್ರಸಾದಿಯಾದೆನು ಕಾಣ.
ಆ ಪ್ರಸಿದ್ಧ ಪ್ರಸಾದವೆ ಒಂದೆರಡಾಗಿ ಎರಡು ಮೂರಾಗಿ
ಮೂರು ಆರಾಗಿ ಆರು ಮೂವತ್ತಾರಾಗಿ
ಮೂವತ್ತಾರು ಇನ್ನೂರಹದಿನಾರಾಗಿ
ಆ ಇನ್ನೂರ ಹದಿನಾರರ ಬೆಳಗು
ಪಿಂಡಾಂಡದಲ್ಲಿ ಪರಿಪೂರ್ಣವಾಗಿ
ಸದಾ ಸನ್ನಹಿತವಾಗಿಪ್ಪುದು.
ನಿಮ್ಮ ಶರಣ ಸಂಗನ ಬಸವಣ್ಣ
ಮೊದಲಾದ ಪ್ರಮಥರಿಗೆ ಸಾಧ್ಯವಲ್ಲದೆ
ಅಜ ಹರಿ ಸುರ ಮನು ಮುನಿಗಳಿಗೆ
ಅಗಮ್ಯ ಅಗೋಚರ ಅಪ್ರಮಾಣ ಅಸಾಧ್ಯ ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೯ ॥

೫೪೨

ಷೋಡಶದಳಕಮಲದಲ್ಲಿ ನೋಡಬಾರದ ವಸ್ತುವ ಕಂಡೆ;
ಅದು ಶತಕೋಟಿ ಸೋಮಸೂರ್ಯರು
ಉದಯವಾದಂತಿದೆ ನೋಡ.
ನೋಡಬಾರದ ವಸ್ತುವ ಕೂಡಿ
ಅಭಿನವ ಶಿವಪ್ರಸಾದಿಯಾಗಿರ್ದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೦ ॥

೫೪೩

ದ್ವಾದಶದಳ ಮಂಟಪದಲ್ಲಿ ರವಿ, ಶಶಿ, ಶಿಖಿಯ ಪೀಠದಲ್ಲಿ
ಶಶಿವದನೆ ವಿಶ್ವತೋ ಮುಖಿವಾಗಿದ್ದಾಳೆ ನೋಡ.
ಶಶಿಮುಖಿಯ ಸಂಗದಿಂದ ಪಶುಪತಿಯ ನೆರೆದು
ವಿಶ್ವತೋ ಮುಖ ಪ್ರಸಾದಿಯಾಗಿರ್ದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೧॥

೫೪೪

ದಶದಳ ಕಮಲದಲ್ಲಿ ಶಶಿಕಳೆ ಪಸರಿಸಲು
ಶಶಿಕಳೆಯೊಳಗೆ ರವಿಯ ಬೆಳಗು ನೋಡ.
ರವಿ ಶಶಿ ಶಿಖಿ ಏಕರಸಮಯವಾಗಿ
ಓಂಕಾರವೊಂದಾದ ನಾದ,
ಆ ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹುತ
ವಿಶುದ್ಧಿ ಆಜ್ಞೇಯದಲ್ಲಿ.
ಕಂಡು, ಕೂಡಿ ಸುಖಿಸುತಿರ್ದೆನಯ್ಯ
ಆ ನಾದ ಬೆಳಗಿನ ಕಳೆ ಶೂನ್ಯದಲ್ಲಿ ಅಡಗಲು
ನಾನು ನೀನಾದೆನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೨ ॥

**ಶರಣನ ಪ್ರಾಣಲಿಂಗಿ**

೫೪೫

ಆಕಾರ ನಿರಾಕಾರವಿಲ್ಲದಂದು
ಹಮ್ಮುಬಿಮ್ಮುಗಳಿಲ್ಲದಂದು
ಜೀವ ಪರಮರಿಲ್ಲದಂದು
ಮನ ಮನನ ಮನನೀಯವಿಲ್ಲದಂದು
ಶೂನ್ಯ ನಿಶ್ಶೂನ್ಯ ನಾಮ ನಿರ್ನಾಮ ಇವೇನೂ ಇಲ್ಲದೆ
ಬಚ್ಚಬರಿಯ ಬಯಲೆ ಸಹಜದಿಂದ ಗಟ್ಟಿಗೊಂಡು
ಘನಲಿಂಗವೆಂಬ ಪುರುಷತತ್ತ್ವವಾಯಿತ್ತಯ್ಯ.
ಆ ಘನಲಿಂಗದಿಂದ ಚಿಚ್ಛಕ್ತಿ ಜನಿಸಿದಳು.
ಚಿಚ್ಛಕ್ತಿಯಿಂದ ಪರಶಕ್ತಿ ಪುಟ್ಟಿದಳು.
ಪರಶಕ್ತಿಯಿಂದ ನಾದ ಬಿಂದು ಕಳೆಗಳಾದವು.

ಅಕಾರವೇ ನಾದ, ಉಕಾರವೇ ಬಿಂದು, ಮಕಾರವೇ ಕಳೆ.
ಇಂತೀ ತ್ರಿವಿಧಕ್ಕೆ ಪರಶಕ್ತಿಯೇ ತಾಯಿ.
ಇಂತೀ ನಾಲ್ಕು ಒಂದಾದಲ್ಲಿ ಓಂಕಾರವಾಯಿತ್ತಯ್ಯ.
ಮುಂದೀ ಪ್ರಣವ ತಾನೆ ಪಂಚಲಕ್ಷಣವಾಯಿತ್ತು.
ಆ ಘನಲಿಂಗದಿಂದಲೇ ಪಂಚಸಾದಾಖ್ಯಮೂರ್ತಿಗಳಾದುವು.
ಆ ಚಿಚ್ಛಕ್ತಿಯಿಂದಲೇ ಪಂಚಶಕ್ತಿಯರಾದರು.
ಆ ಪಂಚಶಕ್ತಿಯರಿಂದಲೇ ಪಂಚಕಲೆಗಳಾದವು.
ಆ ಪಂಚಲಕ್ಷಣವುಳ್ಳ ಮೂರ್ತಿ
ತಾನೆ ತ್ರಯವಾದ ಭೇದವ ಹೇಳಿಹೆನು.
ಅದೆಂತೆಂದಡೆ:
ಶಿವತತ್ತ್ವ ಸದಾಶಿವತತ್ತ್ವ ಮಾಹೇಶ್ವರತತ್ತ್ವವೆಂದು
ಮೂರುತೆರನಾಗಿಪ್ಪುದು.
ಬಾಹ್ಯ ನಿಃಕಲತತ್ತ್ವವಾಗಿಪ್ಪುದು.
ಒಂದು ಸಕಲನಿಃಕಲತತ್ತ್ವವಾಗಿಪ್ಪುದು.
ಒಂದು ಸಕಲತತ್ತ್ವವಾಗಿಪ್ಪುದು.
ಶಿವತತ್ತ್ವ ಏಕಮೇವ ಒಂದೆಯಾಗಿಪ್ಪುದು.
ಸದಾಶಿವತತ್ತ್ವ ಐದುತೆರನಾಗಿಪ್ಪುದು.
ಮಾಹೇಶ್ವರತತ್ವ ಇಪ್ಪತ್ತೈದು ತೆರನಾಗಿಪ್ಪುದು.
ಹೀಂಗೆ ಶಿವತತ್ತ್ವ ಮೂವತ್ತೊಂದು ತೆರನೆಂದರಿವುದು.
ಸ್ಥೂಲ, ಸೂಕ್ಷ್ಮ, ಪರತತ್ತ್ವವೆಂಬ ಈ ಮೂರು ತತ್ತ್ವವೆ
ಆರಾದ ಭೇದಮಂ ಪೇಳ್ವೆ.
ಅದೆಂತೆಂದಡೆ:
ಆ ಘನಲಿಂಗದ ಸಹಸ್ರಾಂಶದಲ್ಲಿ ಚಿತ್‌ಶಕ್ತಿ.
ಚಿತ್‌ಶಕ್ತಿಯ ಸಹಸ್ರಾಂಶದಿಂದ ಪರಮೇಶ್ವರ.
ಪರಮೇಶ್ವರನ ಸಹಸ್ರಾಂಶದಿಂದ ಪರಶಕ್ತಿ.
ಆ ಪರಶಕ್ತಿಯ ಸಹಸ್ರಾಂಶದಿಂದ ಸದಾಶಿವನು.
ಆ ಸದಾಶಿವನ ಸಹಸ್ರಾಂಶದಿಂದ ಆದಿಶಕ್ತಿ.
ಆದಿಶಕ್ತಿಯ ಸಹಸ್ರಾಂಶದಿಂದ ಈಶ್ವರ.
ಆ ಈಶ್ವರನ ಸಹಸ್ರಾಂಶದಿಂದ ಇಚ್ಛಾಶಕ್ತಿ.
ಇಚ್ಛಾಶಕ್ತಿಯ ಸಹಸ್ರಾಂಶದಿಂದ ಮಾಹೇಶ್ವರ.
ಮಾಹೇಶ್ವರನ ಸಹಸ್ರಾಂಶದಿಂದ ಜ್ಞಾನಶಕ್ತಿ.
ಆ ಜ್ಞಾನಶಕ್ತಿಯ ಸಹಸ್ರಾಂಶದಿಂದ ರುದ್ರನು.
ಆ ರುದ್ರನ ಸಹಸ್ರಾಂಶದಿಂದ ಕ್ರಿಯಾಶಕ್ತಿ.

ಆ ಕ್ರಿಯಾಶಕ್ತಿಯ ಸಹಸ್ರಾಂಶದಿಂದ ಈಶಾನ್ಯಮೂರ್ತಿಯಾದನು.
ಹೀಂಗೆ ಮೂರು ಆರು ತೆರನಾಯಿತ್ತಯ್ಯ.
ಇನ್ನೀ ಲಿಂಗಂಗಳಿಗೆ ಸರ್ವ ಲಕ್ಷಣ ಸಂಪೂರ್ಣವ ಹೇಳಿಹೆನು.
ಅದೆಂತೆಂದಡೆ:
ಒಂದು ಮೂರ್ತಿ ಸರ್ವತೋ ಮುಖ, ಸರ್ವತೋಚಕ್ಷು,
ಸರ್ವತೋ ಬಾಹು, ಸರ್ವತೋ ಪಾದ, ಸರ್ವ ಪರಿಪೂರ್ಣನಾಗಿ
ಮಾಣಿಕ್ಯವರ್ಣದ ಧಾತುವಿನಲ್ಲಿ ಭಾವಗಮ್ಯವಾಗಿ ಒಪ್ಪುತಿಪ್ಪುದು.
ಅದರಿಂದಲಾದ ಮೂರ್ತಿಗೆ
ಏಕ ಶಿರಸ್ಸು, ತ್ರಿಣೇತ್ರ, ಎರಡು ಹಸ್ತ, ಎರಡು ಪಾದ.
ಮಿಂಚಿನ ವರ್ಣದ ಧಾತುವಿನಲ್ಲಿ ಜ್ಞಾನಗಮ್ಯವಾಗಿ ಒಪ್ಪುತಿಪ್ಪುದು.
ಅದರಿಂದಲಾದ ಮೂರ್ತಿಗೆ
ಎರಡು ಶಿರಸ್ಸು, ಆರು ಕಂಗಳು, ನಾಲ್ಕು ಭುಜ, ಎರಡು ಪಾದ
ಸುವರ್ಣದ ಧಾತುವಿನಲ್ಲಿ ಮನೋಗಮ್ಯವಾಗಿ ಒಪ್ಪುತಿಪ್ಪುದು.
ಅದರಿಂದಲಾದ ಮೂರ್ತಿಗೆ
ಮೂರು ಮುಖ, ಒಂಬತ್ತು ಕಂಗಳು, ಆರು ಭುಜ,
ಎರಡು ಪಾದ.
ಶ್ವೇತವರ್ಣದ ಧಾತುವಿನಲ್ಲಿ ಅಹಂಕಾರಗಮ್ಯವಾಗಿ ಒಪ್ಪುತಿಪ್ಪುದು.
ಅದರಿಂದಲಾದ ಮೂರ್ತಿಗೆ
ನಾಲ್ಕುಮುಖ, ಹನ್ನೆರಡು ಕಂಗಳು, ಎಂಟು ಭುಜ,
ಎರಡು ಪಾದ.
ಕುಂಕುಮವರ್ಣದ ಧಾತುವಿನಲ್ಲಿ ಬುದ್ಧಿಗಮ್ಯವಾಗಿ ಒಪ್ಪುತಿಪ್ಪುದು.
ಅದರಿಂದಲಾದ ಮೂರ್ತಿಗೆ
ಪಂಚಮುಖ, ದಶಭುಜ, ದಶಪಂಚನೇತ್ರ, ದ್ವಿಪಾದ,
ತನುಯೇಕ.
ಶುದ್ಧಸ್ಫಟಿಕವರ್ಣದ ಧಾತುವಿನಲ್ಲಿ ಚಿತ್ತಗಮ್ಯವಾಗಿ ಒಪ್ಪುತಿಪ್ಪುದು.
ನಿರಾಕಾರವೇ ಸಾಕಾರವಾಗಿ ತೋರಿತ್ತು.
ಸಾಕಾರ ನಿರಾಕಾರವೇಕವೆಂಬುದನು
ಸ್ವಾನುಭಾವದಿಂದ ಅನುಭಾವಕೆ ತಂದೆನಯ್ಯ.
ಇದು ತನ್ನಿಂದ ತಾನೆ ಸ್ವಯಂಭುವಾದ ಮೂರ್ತಿಯಲ್ಲದೆ
ಮತ್ತೊಂದರಿಂದಾದುದಲ್ಲ.
ಇಂತೆಸೆವ ಶಿವನ ಮುಖದಲ್ಲಿ ಒಗೆದ ಭೂತಂಗಳಾವವೆಂದಡೆ:
ಸದ್ಯೋಜಾತ ಮುಖವಲ್ಲಿ ಪೃಥ್ವಿ.
ವಾಮದೇವ ಮುಖವಲ್ಲಿ ಅಪ್ಪು.

ಅಘೋರ ಮುಖದಲ್ಲಿ ಅಗ್ನಿ.
ತತ್ಪುರುಷ ಮುಖದಲ್ಲಿ ವಾಯು.
ಈಶಾನ್ಯ ಮುಖದಲ್ಲಿ ಆಕಾಶ.
ಇಂತುದಯವಾದ ಪಂಚಭೂತಂಗಳು ಪಂಚವಿಂಶತಿತತ್ವವಾದ
ಭೇದವ ಹೇಳಿಹೆನು.
ಆವಾವವೆಂದರೆ:
ಪೃಥ್ವಿ ಅಪ್ಪು ತೇಜ ವಾಯು ಆಕಾಶ ಇಂತಪ್ಪ
ಸ್ಥೂಲಭೂತಿಕವೈದು.
ಪ್ರಾಣ ಅಪಾನ ವ್ಯಾನ ಉದಾನ ಸಮಾನವೆಂದು ವಾಯುಗಳೈದು.
ವಾಕು ಪಾಣಿ ಪಾದ ಪಾಯು ಗುಹ್ಯವೆಂದು
ಕರ್ಮೇಂದ್ರಿಯಂಗಳೈದು.
ಶ್ರೋತ್ರ ತ್ವಕ್ಕು ನೇತ್ರ ಜಿಹ್ವೆ ಘ್ರಾಣವೆಂದು ಬುದ್ಧೀಂದ್ರಿಯಂಗಳೈದು.
ಮನ ಬುದ್ಧಿ ಚಿತ್ತ ಅಹಂಕಾರವೆಂದು ಕರಣ ಚತುಷ್ಟಯ ನಾಲ್ಕು.
ಜೀವನೊಬ್ಬನು;
ಅಂತು ಆತ್ಮತತ್ವವಿಪ್ಪತ್ತೈದು.
ವಿದ್ಯಾತತ್ವ ಹತ್ತು ತೆರನು.
ಅದೆಂತೆಂದಡೆ:
ಶಾಂತಾತೀತ, ಶಾಂತಿ, ವಿದ್ಯೆ, ಪ್ರತಿಷ್ಠೆ,
ನಿವೃತ್ತಿ ಎಂದು ಕಲಾಶಕ್ತಿಯರೈದು.
ಶಿವಸಾದಾಖ್ಯ ಅಮೂರ್ತಿಸಾದಾಖ್ಯ ಮೂರ್ತಿಸಾದಾಖ್ಯ
ಕರ್ತೃಸಾದಾಖ್ಯ ಕರ್ಮಸಾದಾಖ್ಯವೆಂದು ಶಿವಾದಿಯಾದ
ಸಾದಾಖ್ಯಮೂರ್ತಿಗಳೈದು.
ಅಂತು ವಿದ್ಯಾತತ್ವ ಹತ್ತು ತೆರನು.
ದ್ವಿತೀಯ ತತ್ವ ಮೂವತ್ತೈದು ತೆರನು
ಇವೆಲ್ಲಾ ತತ್ವಂಗಳಿಗುತ್ತರತತ್ವವಾಗಿ ಶಿವತತ್ವವೊಂದು.
ಅಂತು ತತ್ವ ಮೂವತ್ತಾರು.
ಅಂತು ಆತ್ಮತತ್ವ ವಿದ್ಯಾತತ್ವ ಶಿವತತ್ವವೆಂಬ ತ್ರೈತತ್ವ
ಮೂವತ್ತಾರು ತೆರನು.
ಈ ತತ್ವಂಗಳಲ್ಲಿಯೆ ತತ್ವಮಸ್ಯಾದಿ ವಾಕ್ಯಾರ್ಥ ಕಾಣಲಾಯಿತ್ತು.
ಅದು ಹೇಂಗೆಂದಡೆ:
ತತ್‌ಪದ ತ್ವಂಪದ ಅಸಿಪದವೆಂದು ಮೂರು ತೆರನು.
ತತ್‌ಪದವೆಂದು ತೂರ್ಯನಾಮದ ಶಿವತತ್ವವು.
ತ್ವಂ ಪದವೆಂದು ಇಪ್ಪತ್ತೈದು ತೆರನಾಗುತಂ ಇದ್ದಂಥಾ ಆತ್ಮತತ್ವವು.

ಅಸಿ ಪದವೆಂದು ಹತ್ತು ತೆರನಾಗುತಂ ಇದ್ದಂಥಾ ವಿದ್ಯಾತತ್ತ್ವವು.
ತತ್‌ಪದವೇ ಲಿಂಗ, ತ್ವಂ ಪದವೇ ಅಂಗ, ಅಸಿ ಪದವೇ
ಲಿಂಗಾಂಗ ಸಂಬಂಧ.
ಈ ತ್ರಿವಿಧ ಪದವನೊಳಕೊಂಡು ನಿಂದುದೇ ಪರತತ್ತ್ವವಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೩ ॥

೫೪೬

ತನು ಲಿಂಗವಾದ ಬಳಿಕ ವಿಕಾರವುಂಟೆ?
ಮನ ಲಿಂಗವಾದ ಬಳಿಕ ಮಾಯವುಂಟೆ ಅಯ್ಯ?
ಭಾವ ಲಿಂಗವಾದ ಬಳಿಕ ಭ್ರಮೆಯುಂಟೆ?
ಕಾಯ ಲಿಂಗವಾದ ಬಳಿಕ ಕಳವಳವೆಲ್ಲಿಯದೊ?
ಜೀವ ಲಿಂಗವಾದ ಬಳಿಕ ಉಪಾಧಿಯುಂಟೇ ಅಯ್ಯ?
ಪ್ರಾಣ ಲಿಂಗವಾದ ಬಳಿಕ ಪ್ರಳಯವಿಲ್ಲ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.

೫೪೭

ಶಿವಭಾವದಿಂದ ಆತ್ಮ ಹುಟ್ಟಿ
ಶಿವ ತಾನೆಂಬುಭಯವನಲಂಕರಿಸಿದನಾಗಿ
ಆತ್ಮಂಗೆ ಭಾವವೆಂಬ ಹೆಸರಾಯಿತ್ತು.
ಆತ್ಮನು ಆಕಾಶವ ಬಂದು ಕೂಡಿದಲ್ಲಿ
ಜ್ಞಾನವೆಂಬ ಹೆಸರಾಯಿತ್ತು.
ಆತ್ಮನು ವಾಯುವ ಬಂದು ಬೆರಸಿದಲ್ಲಿ
ಮನಸ್ಸೆಂಬ ಹೆಸರಾಯಿತ್ತು.
ಆತ್ಮನು ಅಗ್ನಿಯ ಬಂದು ಕೂಡಿದಲ್ಲಿ
ಅಹಂಕಾರವೆಂಬ ಹೆಸರಾಯಿತ್ತು.
ಆತ್ಮನು ಅಪ್ಪುವ ಬಂದು ಬೆರಸಿದಲ್ಲಿ ಬುದ್ಧಿಯೆಂಬ ಹೆಸರಾಯಿತ್ತು.
ಆತ್ಮನು ಪೃಥ್ವಿಯ ಬಂದು ಕೂಡಿದಲ್ಲಿ ಚಿತ್ತ ಪುಟ್ಟಿತ್ತಯ್ಯ.
ಚಿತ್ತವಾಚಾರಲಿಂಗವ ಧರಿಸಿಪ್ಪುದು.
ಬುದ್ಧಿ ಗುರುಲಿಂಗವ ಧರಿಸಿಪ್ಪುದು.
ಅಹಂಕಾರ ಶಿವಲಿಂಗವ ಧರಿಸಿಪ್ಪುದು.
ಮನಸ್ಸು ಜಂಗಮಲಿಂಗವ ಧರಿಸಿಪ್ಪುದು.
ಜ್ಞಾನ ಪ್ರಸಾದಲಿಂಗವ ಧರಿಸಿಪ್ಪುದು.

ಭಾವ ಮಹಾಲಿಂಗವ ಧರಿಸಿಪ್ಪುದಯ್ಯ.
ಈ ಭೇದವನರಿದು ಲಿಂಗವ ಧರಿಸಬಲ್ಲರಾಗಿ
ನಿಮ್ಮ ಶರಣರು ಸರ್ವಾಂಗಲಿಂಗಿಗಳಯ್ಯ.
ಬಸವ, ಪ್ರಭು, ಚೆನ್ನಬಸವಣ್ಣ ಮೊದಲಾದ ವೀರ ಶಿವೈಕ್ಯರ
ಬಂಟರಬಂಟನಾಗಿರಿಸಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೫ ॥

೫೪೮

ಪಂಚಭೂತಿಕತತ್ತ್ವಂಗಳೆಂಬ ಬ್ರಹ್ಮಾಂಡದೊಳಗೆ
ತನುತ್ರಯಂಗಳೆಂಬ ಅಡ್ಡ ಬೆಟ್ಟ.
ಗುಣತ್ರಯಗಳೆಂಬ ಘೋರಾರಣ್ಯ.
ಜಾಗ್ರ ಸ್ವಪ್ನ ಸುಷುಪ್ತಿಗಳೆಂಬ ತೋಹುಗಳು.
ಆಗು ಹೋಗು ದೇಗೆಗಳೆಂಬ ಕುಳಿ, ತೆವರು.
ಪ್ರಕೃತಿತ್ರಯಂಗಳೆಂಬ ಮೃಗ, ಮಲತ್ರಯಂಗಳೆಂಬ
ಮೇಹ ಮೇದು,
ವಿಷಯಂಗಳೆಂಬ ಜಲವ ಕುಡಿದು, ಪರಿಣಾಮಿಸುತ್ತಿವೆ ನೋಡ.
ಜೀವವೆಂಬ ಕಾಡಬೇಡನು
ತೋಹಿನೊಳಗಣ ಮೃಗವ ಬೇಂಟೆಗೆ ಹೋದರೆ
ತೋಹಿನೊಳಗಣ ತಳವಾರರು ಹಿಡಿದೊಯ್ದುದ ಕಂಡು
ಬೆರಗಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೬ ॥

೫೪೯

ಮೂರರ ಹೊಲಿಗೆಯ ಬಿಚ್ಚಿ ಆರ ಮಾಡಲು
ಆರೂರೊಳಗಾಡುವ ಪಕ್ಷಿ
ಐವತ್ತೆರಡು ವೃಕ್ಷಂಗಳ ಹತ್ತುತ್ತ ಇಳಿಯುತ್ತ ಇರಲಾಗಿ
ಉಲುಹು ಘನವಾಯಿತ್ತು ನೋಡ.
ಒಂಬತ್ತು ಬಾಗಿಲೊಳಗೆ ಹೋಗುತ್ತ ಬರುತ್ತಿಪ್ಪುದಯ್ಯ.
ಇದುಕಾರಣ,
ಒಂಬತ್ತು ಬಾಗಿಲ ಮುಚ್ಚಿ
ಐವತ್ತೆರಡು ವೃಕ್ಷಂಗಳ ಉಲುಹನಡಗಿಸಿ
ಏಕವೃಕ್ಷದಲ್ಲಿ ಸ್ವಸ್ಥಿರವಾಗಿ ನಿಲಿಸಿ
ಆರೂರಲಾಡುವ ಪಕ್ಷಿಯ ಪ್ರಳಯವ ತಪ್ಪಿಸಬಲ್ಲರೆ
ಪ್ರಾಣಲಿಂಗಿಯೆಂಬೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೭ ॥

೫೫೦

ಮಂಜರ ದೃಷ್ಟಿಯೊಳಗೆ ಚಂದ್ರಮನುದಯ ನೋಡ.
ಚಂದ್ರಮಂಡಲನೊಡೆದು ರವಿ ಮೂಡಲು
ಮಂಜರ ಸತ್ತಿತ್ತು ; ದೃಷ್ಟಿ ನಷ್ಟವಾಯಿತ್ತು.
ಚಿಚ್ಚಂದ್ರ ಸೂರ್ಯರೊಂದಾಗಿ ಚಿದಾತ್ಮಲಿಂಗವಾದೆನು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೮ ॥

೫೫೧

ಕನಸಿನ ಕಾಮಿನಿಯರ ರೂಪು
ಮನಸಿಗೆ ರಮ್ಯವಾಗಿ ಕಾಣುವದು.
ಅದು ಮನಸಿನ ಮಾಯ ಕಾಣಿಭೋ.
ಮನಸಿನ ಮಾಯವನಳಿಯಲು
ಕನಸಿನ ಕಾಮಿನಿಯರ ರೂಪು ಮನಸಿನಲ್ಲಿಲ್ಲ ನೋಡ.
ಆ ಭ್ರಾಂತು ಭ್ರಮೆಗಳನಳಿದಾತನಲ್ಲದೆ
ಪ್ರಾಣಲಿಂಗ ಸಂಬಂಧಿಯಲ್ಲ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ ॥ ೧೦೯ ॥

೫೫೨

ಕನಸಿನಲ್ಲಿ ಬಂದು ನೆರೆವ ಸ್ತ್ರೀಯರು
ಮನಸಿನ ಮಾಯ ಕಾಣಿಭೋ.
ಮನಸ್ಸಿನಲ್ಲಿ ಮಹವ ನಿಲಿಸಲು
ಕನಸ್ಸಿನಲ್ಲಿ ಬಂದು ನೆರೆವ ಸ್ತ್ರೀಯರು ಮನಸ್ಸಿನಲ್ಲಿಲ್ಲ ನೋಡ.
ಮನವನಳಿದಾತನೆ ಮಹಾದೇವನು ತಾನೆ ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ! ॥ ೧೧೦ ॥

೫೫೩

ನೆಲನಿಲ್ಲದ ಬಯಲಭೂಮಿಯಲ್ಲಿ ನಿರ್ಬಯಲ ಬೀಜ ನೋಡ.
ಅದರಂಕುರ ಮೂರು, ಫಲವಿಪ್ಪತ್ತೈದು ನೋಡ.
ಪ್ರಥಮಾಂಕುರ ಶಿವ, ದ್ವಿತೀಯಾಂಕುರ ಸದಾಶಿವ,
ಮೂರನೆ ಅಂಕುರ ಮಹೇಶ್ವರ.
ಫಲವಿಪ್ಪತ್ತೈದು, ಪಂಚವಿಂಶತಿ ಲೀಲಾವಿಗ್ರಹ ನೋಡ.
ಫಲವಿಪ್ಪತ್ತೈದು, ಅಂಕುರ ಮೂರನೊಳಕೊಂಡು
ನಿಂದ ನಿರ್ವಯಲ
ಪ್ರಾಣಲಿಂಗವೆಂದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೧೧ ॥

೫೫೪

ದೇಹವೇ ದೇಗುಲ, ಕಾಲೇ ಕಂಬ, ಶಿರಸ್ಸೇ ಶಿಖರ ನೋಡ.
ಹೃದಯಕಮಲಕರ್ಣಿಕಾವಾಸವೇ ಸಿಂಹಾಸನ.
ಮಹಾಘನಪರತತ್ತ್ವವೆಂಬ ಪ್ರಾಣಲಿಂಗವ ಮೂರ್ತಿಗೊಳಿಸಿ
ಪರಮಾನಂದಾಮೃತಜಲದಿಂದ ಮಜ್ಜನಕ್ಕೆರೆದು
ಮಹಾದಳಪದ್ಮದ ಪುಷ್ಪದಿಂದ ಪೂಜಿಸಿ
ಪರಮ ಪರಿಣಾಮವೆಂಬ ನೈವೇದ್ಯವ ಗಡಣಿಸಿ
ಪ್ರಾಣಲಿಂಗಕ್ಕೆ ಪ್ರಾಣಸಂಬಂಧವಾದ ಪೂಜೆಯ
ಮಾಡುತ್ತಿರ್ದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೧೨ ॥

೫೫೫

ಕಾಯವೆಂಬ ಕೆರೆಗೆ,
ತನುವೆಂಬ ಏರಿ, ಮನವೆಂಬ ಕಟ್ಟೆಯ ಕಟ್ಟಿ,
ದೃಢವೆಂಬ ತೂಬನಿಕ್ಕಬೇಕಯ್ಯ.
ಆನಂದವೆಂಬ ಜಲವ ತುಂಬಿ,
ಸ್ವಾನುಭಾವವೆಂಬ ಸೋಪಾನವ ಮಾಡಬೇಕಯ್ಯ.
ಆ ಕೆರೆಯ ಏರಿಯ ಮೇಲೆ, ಆಚಾರವೆಂಬ ವೃಕ್ಷವ ಬೆಳೆಸಿ,
ಅರುಹೆಂಬ ಹೂವ, ಅದ್ವೈತವೆಂಬ ಹಸ್ತದಿಂದ ಕುಯಿದು
ಅನುಪಮಲಿಂಗಕ್ಕೆ, ಪೂಜಿಸಬಲ್ಲರೆ ಲಿಂಗಾರ್ಚಕರೆಂಬೆ.
ಈ ಭೇದವನರಿಯದೆ, ಹುಸಿಯನೆ ಪೂಜಿಸಿ,
ಗಸಣೆಗೊಳಗಾದ ಪಿಸುಣೆಗಳ
ಲಿಂಗಪೂಜಕರೆಂತೆಂಬೆನಯ್ಯಾ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೧೩ ॥

೫೫೬

ಉದಯ ಮುಖದ ಜ್ಯೋತಿಯಿಂ
ಅಧೋಮುಖಕಮಲ ಊರ್ಧ್ವಮುಖವಾಗಿ
ಷಡುಕಮಲಾಂಬುಜಂಗಳು ಉದಯವಾಗಿ
ಆರುಕಮಲದ ಎಸಳು ಅರುವತ್ತಾಗಿ ಎಸೆವುತಿದಾವೆ ನೋಡ.

ಅಂಬುಜಕಮಲ ಆರರಿಂದ ಸ್ವಯಂಭುವ
ಪೂಜಿಸುತಿರ್ದನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೧೪ ॥

೫೫೭

ಹೊತ್ತಾರೆ ಎದ್ದು ಹೂ ಪತ್ರೆಯ ಕುಯಿ[ದು] ತಂದು
ಹೊರ ಉಪಚಾರವ ಮಾಡುವುದೆಲ್ಲ
ಬರಿಯ ಭಾವದ ಬಳಲಿಕೆ ನೋಡ.
ಅಳಲದೆ ಬಳಲದೆ ಆಯಾಸಂಬಡದೆ
ಒಳಗಣ ಜ್ಯೋತಿಯ ಬೆಳಗಿನ ಕಳೆಯ ಕಮಲವ
ಪೂಜಿಸಬಲ್ಲ ಶರಣಂಗೆ
ಬೆಳಗಾಗೆದ್ದು ಪೂಜಿಸಿಹೆನೆಂಬ ಕಳವಳವೆಂದೇನು ಹೇಳಾ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೧೫ ॥

೫೫೮

ಕೆಸರಿಲ್ಲದ ಭೂಮಿಯಲ್ಲಿ
ಎಸಳಿಲ್ಲದ ಏಕೋವರ್ಣದ ತಾವರೆ ಹುಟ್ಟಿತ್ತು ನೋಡ.
ಆ ಭಾವತಾವರೆಯಿಂದ ಪೂಜೆಯ ಮಾಡುವ ಶರಣನೇ
ದೇವನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೧೬ ॥

೫೫೯

ಹೃದಯಮಧ್ಯದಲೊಂದು ಸದಮಲದುದಯವ ಕಂಡೆ.
ಅದಕೆ ಉದಯವಿಲ್ಲ, ಮಧ್ಯಾಹ್ನವಿಲ್ಲ,
ಅಸ್ತಮಯವಿಲ್ಲ ನೋಡಾ.
ಆ ಸದಮಲದ ಎಸಳಿನಿಂದ ಪೂಜೆಯಮಾಡಬಲ್ಲ ಸರ್ವಜ್ಞಂಗೆ
ಹೊರ ಉಪಚಾರವೆಂಬ
ಬರಿಯ ಭಾವದ ಬಳಲಿಕೆಯೆಂದೇನು ಹೇಳಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೧೭ ॥

೫೬೦

ಕಂಗಳ ಕಳೆಯಲ್ಲಿ ಚೆಂಗಣೆಗಿಲ ಕಂಡೆ.
ಚೆಂಗಣೆಗಿಲ ಕಮಲವ ಕುಯಿದು
ಶಿವಲಿಂಗ ಪೂಜೆಯ ಮಾಡಬಲ್ಲ ಶರಣಂಗೆ
ಸಂಸಾರ ಸಂಗವ ಹೊದ್ದಿಗೆಯೆಂದೇನು ಹೇಳಾ ಪ್ರಾಣಲಿಂಗ ಸಂಗಿಗೆ?,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೧೮ ॥

೫೬೧

ಹರಿಯ ಹಾದಿಯಲ್ಲಿ ಕರಿಯ ಮಲ್ಲಿಗೆಯ ಕಂಡೆ.
ಕರಿಯ ಮಲ್ಲಿಗೆಯ ಕಮಲವ ಕುಯಿದು
ಕಾಮಾರಿಯ ಚರಣವನರ್ಚಿಸಬಲ್ಲ ನಿಸ್ಸೀಮ ಶರಣಂಗೆ,
ನಾಮ ಸೀಮೆಗಳೆಂದೇನು?
ಕಾಲ ಕಲ್ಪಿತವೆಂದೇನು?
ನಿರ್ವಿಕಲ್ಪಭಾವದಲ್ಲಿ ಲಿಂಗಾರ್ಚನೆಯ ಮಾಡುವ ಶರಣಂಗೆ?,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೧೯ ॥

೫೬೨

ಉದಯದ ಪೂಜೆ ಉತ್ಪತ್ತಿಗೆ ಬೀಜ.
ಮಧ್ಯಾಹ್ನದ ಪೂಜೆ ಸ್ಥಿತಿಗತಿಯ ಸಂಸಾರಕ್ಕೆ ಬೀಜ.
ಅಸ್ತಮಯದ ಪೂಜೆ ಪ್ರಳಯಕ್ಕೆ ಬೀಜ.
ಈ ಉದಯ ಮಧ್ಯಾಹ್ನ ಅಸ್ತಮಯದ ಪೂಜೆ ಕಳೆದು
ಸದಾ ಸನ್ನಹಿತವಾಗಿ ಮಾಡುವ ಪೂಜೆ
ಉತ್ಪತ್ತಿ ಸ್ಥಿತಿ ಲಯಂಗಳ ಮೀರಿದ ನಿತ್ಯ ನಿರ್ಮಲ ಪೂಜೆ ಕಾಣಾ.
ಆ ಪೂಜೆ ನಿಮ್ಮಲ್ಲಿ ಅಡಗಿತ್ತು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೨೦ ॥

೫೬೩

ಉದಯ ಮುಖದ ಜ್ಯೋತಿ ಶರೀರತ್ರಯವ ನುಂಗಿತ್ತು.
ಮಧ್ಯಾಹ್ನ ಮುಖದ ಜ್ಯೋತಿ ಮಲತ್ರಯಂಗಳ ನುಂಗಿತ್ತು.
ಅಸ್ತಮಯ ಮುಖದ ಜ್ಯೋತಿ ಅಹಂಕಾರತ್ರಯಂಗಳ ನುಂಗಿತ್ತು.

ಈ ಮೂರು ಪ್ರಕಾರದ ಜ್ಯೋತಿಯ
ಅಖಂಡ ಜ್ಞಾನಜ್ಯೋತಿ ನುಂಗಿತ್ತು.
ಅಖಂಡ ಜ್ಞಾನಜ್ಯೋತಿ ಅವಿರಳಬ್ರಹ್ಮವನೆಯಿದಿ ನುಂಗಿ
ಅಲ್ಲಿಯೆ ಅಡಗಿತ್ತು.
ಅದು ಅಡಗಿದಲ್ಲಿ ತಾನಡಗಿದಾತನೇ ಶಿವಯೋಗಿ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೨೧ ॥

೫೬೪

ನೋಟವಾಗದ ಮುನ್ನ ಬೇಟವಾಯಿತ್ತು.
ಬೇಟವಾಗದ ಮುನ್ನ ಕೂಟವಾಯಿತ್ತು.
ಕೂಟವಾಗದ ಮುನ್ನ ಬಸುರಾಯಿತ್ತಯ್ಯ.
ಬೇನೆ ತೋರದ ಮುನ್ನ ಬೆಸನಾಯಿತ್ತಯ್ಯ.
ಬೆಸಲಾದ ಶಿಶುವೆದ್ದು ತಂದೆಯನಪ್ಪಲು
ಪಶುಪತಿ ಐಕ್ಯವಾದುದು ಸೋಜಿಗವಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೨೨ ॥

೫೬೫

ವಾರಣದ ತಲೆಯನೊಡೆದು
ಉತ್ತುಂಗರಾಶಿಯೆಂಬ ಭಕ್ತಾಂಗನೆ ಉದಯವಾದಳು ನೋಡ.
ಭಕ್ತಾಂಗನೆಯ ಬಸುರಲ್ಲಾ ನಿತ್ಯ ನಿರ್ಮಲಜ್ಯೋತಿ.
ಸತ್ಯಜ್ಞಾನಮನಂತಂಬ್ರಹ್ಮವನೆಯಿದಿ ನುಂಗಿ ಉಗುಳಲಾರದೆ
ಅಲ್ಲಿಯೇ ಸತ್ತಿತ್ತು ನೋಡ.
ತಾ ಸತ್ತ ಬಳಿಕ ಇನ್ನೆತ್ತಳ ತತ್ತ್ವಾತತ್ತ್ವವಿಚಾರ ಹೇಳಾ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೨೩ ॥

೫೬೬

ಕಂಗಳನೋಟ, ಕರಸ್ಥಲದ ಲಿಂಗ ಹೃದಯದ ಜ್ಞಾನ-
ಲಿಂಗವೆಂಬ ಲಿಂಗಮುಖದಲ್ಲಿ ಮಾತನಾಡುತ್ತಿರಲಾಗಿ,
ನಡೆವ ಕಾಲು ಕೆಟ್ಟು, ಹಿಡಿವ ಕೈಯ ಕತ್ತಲೆ ಹರಿದು
ಬೆಳಗಾಯಿತ್ತಯ್ಯ.
ನೆನೆವ ಮನದ ಕತ್ತಲೆ ಹರಿದು ಬೆಳಗಾಯಿತ್ತಯ್ಯ.
ನೋಡುವ ಕಂಗಳ ಕತ್ತಲೆ ಹರಿದು ಬೆಳಗಾಯಿತ್ತಯ್ಯ.

ಬೆಳಗಿನೊಳು ಬೆಳಗಾಗಿ, ಬೆಳಗು ಸಮರಸವಾಗಿ,
ಇಂದು ಇಂದುವ ಕೂಡಿದಂತೆ, ರವಿ ರವಿಯ ಬೆರಸಿದಂತೆ,
ಮಿಂಚು ಮಿಂಚನು ಕೂಡಿದಂತೆ, ಉಭಯದ ಸಂಚವಳಿದು
ಸ್ವಯಂ ಜ್ಯೋತಿಯಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. || ೧೨೪ ||

೩೬೭

ನಾನೆಂಬುದು ಅಹಂಕಾರ; ನೀನೆಂಬುದು ಮಾಯೆ.
ನಾನು, ನೀನೆಂಬುಭಯವಳಿದರೆ,
ನಾನೆಂಬನು ನೀನೆಂಬವನು ನೀನೇ ಅಯ್ಯಾ.
ಈ ಎರಡರ ಭೇದವೆಲ್ಲಿಯದೋ?,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. || ೧೨೫ ||

೩೬೮

ನಾನು ನೀನೆಂಬ ಉಭಯ ತನು ಗುಣ ನಾಸ್ತಿಯಾಗಿ
ಅರುಹು ಮರಹೆಂಬುಭಯದ ಮರೆಹು ಅಳಿಯಿತ್ತಯ್ಯ.
ಮರೆಹು ಅಳಿಯಿತ್ತಾಗಿ,
ಮಹದರುಹಿನ ಆಚರಣೆ ಕರಿಗೊಂಡಿತ್ತಯ್ಯ.
ಮಹದರುಹಿನ ಆಚರಣೆ ಕರಿಗೊಂಡಿತ್ತಾಗಿ
ಮಹಾಲಿಂಗದ ಬೆಳಗು ಒಳಕೊಂಡಿತ್ತಯ್ಯ.
ಮಹಾಲಿಂಗದ ಬೆಳಗು ಒಳಕೊಂಡಿತ್ತಾಗಿ
ಮಂಗಳಮಯ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವಿನಲ್ಲಿ,
ಪರಮ ಪರಿಣಾಮ ನೆಲೆಗೊಂಡಿತ್ತಯ್ಯಾ. || ೧೨೬ ||

೩೬೯

ಅಂಗ ಗುಣವಳಿದು ಲಿಂಗ ಗುಣ ಉಳಿಯಿತ್ತಯ್ಯ.
ಆವರಿಸಿತ್ತಯ್ಯ ಪರಮ ಅನುಪಮ ಭಕ್ತಿಸುಖ.
ಲಿಂಗಾಂಗವೆಂಬ ಎರಡನರಿಯೆನಯ್ಯ.
ಶುದ್ಧ ಸುಜ್ಞಾನ ಜಂಗಮಲಿಂಗ ಗ್ರಾಹಕನಾಗಿ
ಪ್ರಾಣಲಿಂಗವೆಂಬ ಎರಡನರಿಯೆನಯ್ಯ.
ಎರಡೆರಡೆಂದು ಈ ಹುಸಿಯನೇಕೆ ನುಡಿವರಯ್ಯ.

ಇನ್ನೆರಡು ಒಂದಾಯಿತ್ತಾಗಿ
ಲೋಕಚಾತುರ್ಯ, ಲೋಕವ್ಯವಹರಣೆ.
ಲೋಕಭ್ರಾಂತಿಯ ಮರೆದೆನಯ್ಯ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ,
ನಿಮಲ್ಲಿ ನಿಬ್ಬೆರಗಾದೆನಯ್ಯಾ. ॥ ೧೨೭ ॥

೫೭೦

ಒಳಗೆಂದೇನು? ಹೊರಗೆಂದೇನು?
ಅರುಹೆಂದೇನು? ಮರಹೆಂದೇನು?
ತಾನೆಂದೇನು? ಇದಿರೆಂದೇನು?
ಬರಿಯ ಬಯಲುಭ್ರಮೆಗೊಳಗಾಯಿತ್ತಲ್ಲಾ ಈ ಲೋಕ.
ಒಳಗು ತಾನೆ, ಹೊರಗು ತಾನೆ.
ಅರುಹು ತಾನೆ, ಮರಹು ತಾನೆ.
ತೆರಹಿಲ್ಲದ ಪರಿಪೂರ್ಣ ಪರಾಪರವು ತಾನೆ ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೨೮ ॥

೫೭೧

ಆದಿಯೊಳಗೆ ಆಧಾರವಿಪ್ಪುದ ಕಂಡೆನಯ್ಯ.
ಆಧಾರದೊಳಗೆ ಆದಿಯಿಪ್ಪುದ ಕಂಡೆನಯ್ಯ.
ಆದಿ ಆಧಾರವ ನುಂಗಿ ಆಧಾರ ಆದಿಯ ನುಂಗಲು
ಸಾಧ್ಯಸಾಧಕ, ಪೂಜ್ಯಪೂಜಕ,
ದೇವ ದೇಹಿಕನೆಂಬವರಾರೂ ಇಲ್ಲದ
ಎರಡಿಲ್ಲದ ನಿರಾಳ ನೀನೆ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೨೯ ॥

೫೭೨

ಶಶಿವದನೆಯ ಮಸ್ತಕವನೊಡೆದು
ಅಸಮಾಕ್ಷನುದಯವಾದನು ನೋಡಿರೇ.
ಅಸಮಾಕ್ಷನುದಯಕ್ಕೆ ರವಿ ಶಶಿ ಶಿಖಿವೊಂದಾಗಿ
ಅಸಮಾಕ್ಷನ ನೆರೆದು ಸತಿ ಪತಿ ಭಾವ ಸತ್ತಿತ್ತು.
ಪರವಸ್ತುವೆಂದು ಬೇರುಂಟೆ ತಾನಲ್ಲದೆ?,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೩೦ ॥

೫೭೩

ನಾದ ಗುರುಮುಖವೆಂದೆಂಬರು.
ಬಿಂದು ಲಿಂಗಮುಖವೆಂದೆಂಬರು.
ಕಳೆ ಜಂಗಮಮುಖವೆಂದೆಂಬರು.
ನಾದವೆಲ್ಲಿಯದು ಜೀವವಿಲ್ಲದವಂಗೆ?
ಬಿಂದುವೆಲ್ಲಿಯದು ಕಾಯವಿಲ್ಲದವಂಗೆ?
ಕಳೆಯೆಲ್ಲಿಯದು ಕರಣಂಗಳಿಲ್ಲದವಂಗೆ?
ನಾದವ ಗುರುವೆಂದೆನ್ನೆ. ಬಿಂದುವ ಲಿಂಗವೆಂದೆನ್ನೆ.
ಕಳೆಯ ಜಂಗಮವೆಂದೆನ್ನೆ.
ನಾನುಳ್ಳನ್ನಕ್ಕರ ನೀನಲ್ಲದೆ, ನಾನೆಂಬುದಳಿದ ಬಳಿಕ,
ನಾನಿಲ್ಲ ನೀನಿಲ್ಲ: ಸ್ವಯವಿಲ್ಲ ಪರವಿಲ್ಲ.
ನಾದ ಬಿಂದು ಕಳಾತೀತನಾದ
ಆದಿ ಸ್ವಯಂಭೂ ತಾನಾದ ಲಿಂಗೈಕ್ಯಂಗೆ
ನನಗನ್ಯವಾಗಿ ಇನ್ನೇನನೂ ಹೇಳಲಿಲ್ಲ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೩೧ ॥

೫೭೪

ವಾರಿ ಬಲಿದು ವಾರಿಶಿಲೆಯಾದಂತೆ,
ವಾರಿಶಿಲೆ ಕರಗಿ ಉದಕವಾದಂತೆ,
ನಿನ್ನ ವಿನೋದಕ್ಕೆ ನೀನೆ ಶರಣನಾದೆ.
ನಿನ್ನ ವಿನೋದಕ್ಕೆ ನೀನೆ ಲಿಂಗವಾದೆ.
ನಿನ್ನ ವಿನೋದ ನಿಂದಲ್ಲಿ, ನೀನೆ ಶರಣ ಲಿಂಗವೆಂಬುಭಯವಳಿದು
ನಿರಾಳ ನಿರ್ಮಾಯನಾಗಿ ನಿಶ್ಶಬ್ದಮಯನಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೩೨ ॥

೫೭೫

ನಾನೊಬ್ಬನುಂಟೆಂಬವಂಗೆ ನೀನೊಬ್ಬನುಂಟಾಗಿ ತೋರುವೆ.
ನಾನು ನೀನೆಂಬುದುಂಟಾದಲ್ಲಿ ಜ್ಞಾನ ಅಜ್ಞಾನವುಂಟಾಯಿತ್ತು.
ಜ್ಞಾನ ಅಜ್ಞಾನ ಉಂಟಾದಲ್ಲಿಯೆ ನಾನಾವಿಧದ
ಪ್ರಪಂಚು ಆಯಿತ್ತು ನೋಡ.
ಮಾಯಿಕವೆಂಬುದು ಹೀಂಗಲ್ಲದೆ ಇನ್ನು ಹೇಂಗಿಹುದು ಹೇಳಾ?,
ನಾನು ನೀನೆಂಬುದೆರಡು ಸತ್ತರೆ ಜ್ಞಾನ ಅಜ್ಞಾನವರತಿತ್ತು.

ನಾನಾವಿಧವಾಗಿ ತೋರಿದ ಮಾಯಿಕವಳಿಯಿತ್ತು.
ಮಾಯಿಕವಳಿಯಿತ್ತಾಗಿ ನಿರ್ಮಾಯನಾದೆನು ಕಾಣ.
ನಿರ್ಮಾಯನಾದ ನಿಜಶರಣಂಗೆ
ಕಾಯವೆಲ್ಲಿಯದು? ಮಾಯವೆಲ್ಲಿಯದು?
ಮನವೆಲ್ಲಿಯದು? ನೆನಹೆಲ್ಲಿಯದು?
ಅರುಹೆಲ್ಲಿಯದು? ಕುರುಹೆಲ್ಲಿಯದು.
ತಾನಷ್ಟವಾದ ಸರ್ವನಷ್ಟಂಗೆ
ತನಗನ್ಯವಾಗಿ ಇನ್ನೇನು ದೃಷ್ಟವನೂ ಹೇಳಲಿಲ್ಲ.
"ಯದೃಷ್ಟಂ ತನ್ನಷ್ಟಂ" ಎಂದುದಾಗಿ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆಂಬ
ಲಿಂಗವು ನಿರಾಳವಾಗಿ,
ಇನ್ನೇನು ಎಂಬ ನುಡಿಗೆಡೆಯಿಲ್ಲ ಕಾಣಿರೋ. ॥ ೧೩೩ ॥

೫೭೬

ಏನುಯೇನೂ ಇಲ್ಲದ ಠಾವಿನಲ್ಲಿ
ನಾನೀನೆಂಬುದು ಇದೇನು ಕಾರಣವೋ?
ಇದು ನಿನ್ನ ವಿನೋದಾರ್ಥಕಾರಣವೆಂಬುದು ಮಾನವರಿಗೆ
ತಿಳಿಯಬಾರದು ನೋಡ.
ತಾ ಹುಟ್ಟಿದಲ್ಲಿಯೆ ಮೂರುಲೋಕ ಹುಟ್ಟಿತ್ತು.
ತಾನಳಿದಲ್ಲಿಯೆ ಮೂರುಲೋಕವಳಿಯಿತ್ತು.
ನಾ ನೀನೆಂಬುದಳಿದಲ್ಲಿಯೆ ನಿನ್ನ ನೆಲೆ ಸ್ವಯಂಭುವಾಯಿತ್ತು.
ಸ್ವಯಂಭುವಳಿದು ಶೂನ್ಯವಾಯಿತ್ತು.
ಮೂಲವಸ್ತುವೆಂದು ಬೇರುಂಟೆ ತಾನಲ್ಲದೆ?,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೩೪ ॥

## ಐಕ್ಯಸ್ಥಲದ ವಚನ

ಸೂತ್ರ ॥ ಇಂತು ಆನಂದಭಕ್ತಿಯನಾಚರಿಸಿದ ಶರಣನು ಶರಣಲಿಂಗವೆಂಬುಭಯವಳಿದು ಮಹಾಲಿಂಗವಲ್ಲಡಗಿ ಏಕರಸಮಯವಾದನಾಗಿ ಮುಂದೆ ಐಕ್ಯಸ್ಥಲವಾದುದು.

೫೭೭

ಕ್ಷುತ್ತು, ಪಿಪಾಸೆ, ಶೋಕ, ಮೋಹ, ಜರಾ, ಮರಣವೆಂಬ
ಷಡೂರ್ಮಿಗಳಿಲ್ಲದೆಯಿಪ್ಪನು.
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ
ಷಡುವರ್ಗಂಗಳಿಲ್ಲದೆಯಿರುತಿರ್ಪನು.
ನಾಹಂ ಕೋಹಂ ಸೋಹಂ ಎಂಬ
ಭಾವರಹಿತನಾಗಿಪ್ಪನು.
ಅಷ್ಟವಿಧಾರ್ಚನೆ, ಷೋಡಶೋಪಚಾರ ರಹಿತನಾಗಿಪ್ಪನು.
ಕರ್ಪುರ ಅಗ್ನಿ ಸಂಯೋಗವಾಗಿ
ಕರ್ಪುರದ ಗುಣವಳಿದು ಅಗ್ನಿಯಾದಂತೆ
ಲಿಂಗವ ನೆನನೆನದು ಲಿಂಗವೇ ತಾನಾಗಿಪ್ಪುದೀಗ
ನಿಜಲಿಂಗೈಕ್ಯಸ್ಥಲವಿದೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

೫೭೮

ಆತ್ಮನೇ ಅಂಗವಾದ ಐಕ್ಯನಲ್ಲಿ
ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣನಪ್ಪ
ಅಂಗಪಂಚಕವು ಗರ್ಭೀಕೃತವಾಗಿ
ಆ ಐಕ್ಯಂಗೆ ಮಂಹಾಲಿಂಗ ಸಂಬಂಧವಾಗಿ
ಆ ಮಹಾಲಿಂಗದಲ್ಲಿಯೇ ಆಚಾರಲಿಂಗ ಗುರುಲಿಂಗ
ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗವೆನಿಸುವ
ಲಿಂಗಪಂಚಕವು ಗರ್ಭೀಕೃತವಾಗಿ
ಮಹಾಲಿಂಗವೇ ಆಶ್ರಯವಾಗಿ

ಇಂತೀ ಷಡ್ವಿಧಲಿಂಗದಲ್ಲಿ ಬೆರಸಿ ಬೇರಿಲ್ಲದಿರಬಲ್ಲರೆ
ಐಕ್ಯನೆಂಬೆನಯ್ಯ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨ ॥

೫೭೯

ಹಾರುವ ಹಕ್ಕಿಗೆ ಗರಿ ಊರ್ಧ್ವವಾದುದ ಕಂಡೆನಯ್ಯ.
ಕುಳಿತರೆ ಗೇಣುದ್ದ, ಎದ್ದರೆ ಹಾರುದ್ದ.
ಹಾರುವಲ್ಲಿ ಆರುಗೇಣಾಗಿಪ್ಪುದಯ್ಯ.
ಮತ್ತರಿದನೆಂಬರೆ ಅದ ನೋಡ.
ತನ್ನ ತಿಳಿದರೆ ತಾನು ಅತಿಸೂಕ್ಷ್ಮ ನೋಡ.
ತನ್ನ ಪರಿ ವಿಪರೀತ ವಿಸ್ಮಯವಾಗಿದೆ ನೋಡ.
ಮೂರಾರು ಬಾಗಿಲಲ್ಲಿ ಹಾರಿ ಹಲುಬುವುದಯ್ಯ.
ಸರ್ವಬಾಗಿಲಲ್ಲಿ ಪಕ್ಷಿ ಪಲ್ಲಯಿಸುವದು.
ಈ ಬಾಗಿಲೆಲ್ಲವು ತನ್ನ ಹಾದಿಯೆಂದರಿಯದು ನೋಡ.
ತನ್ನ ಹಾದಿಯನರಿದು ಚೆನ್ನಾಗಿ ನಡೆದಾಡಬಲ್ಲರೆ
ಮೇಲುಗಿರಿ ಪರ್ವತದ ಓರಂತೆಯ್ದು
ನಿರ್ವಯಲ ಬೆರಸಿತ್ತೆಂಬೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩ ॥

೫೮೦

ಹಾವು ಹಿಡಿದ ಚೇಳು ತಾನೆದ್ದು ಊರಲು
ಮೂಜಗವೆಲ್ಲಾ ಬೇನೆಪತ್ತಿ ಬೇವುತ್ತಿದೆ ನೋಡ.
ಚೇಳಿನ ಮುಳ್ಳ ಮುರಿಯಲು ಬೇನೆ ಮಾಬುದು.
ಬೇನೆ ಮಾದು ತಾನೆ ತಾನಾದುದನೇನೆಂಬೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪ ॥

೫೮೧

ಕರಿಯ ಮಹಿಷನಿಗೊಂದು ಅರಿದ ತಲೆ ಹುಟ್ಟಿ
ಧರೆಯಾಕಾಶವನಾರಡಿಗೊಂಡಿತ್ತಯ್ಯ.
ಅರಿದ ತಲೆಯಲ್ಲಿ ಉರಿ ಹುಟ್ಟಲಾಗಿ
ಶಿರ ಬೆಂದು ಕರಿಯ ಮಹಿಷನಳಿದು

ಧರೆಯಾಕಾಶವ ಬೆರಸಿ ಚಿದಾಕಾಶಮಯವಾಯಿತ್ತಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫ ॥

೫೮೨

ಮುಂಡದಲ್ಲಿ ಹುಟ್ಟಿದ ತಲೆ
ಕೆಂಡವ ಕಚ್ಚಿ ಕುಣಿದಾಡುವುದ ಕಂಡೆನಯ್ಯ.
ಮುಂಡ ಬೆಂದು ತಲೆವುಳಿದು ಕೆಂಡ ಕೆದರಲಾಗಿ
ಅಖಂಡ ಪರಿಪೂರ್ಣ ಪರಕ್ಕೆ ಪರನಾದ ಲಿಂಗೈಕ್ಯನನೇನೆಂಬೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬ ॥

೫೮೩

ಹಿಕ್ಕೆಯ ನುಂಗಿದ ಹಕ್ಕಿಯ ನಿಲವು
ನಕ್ಷತ್ರದುದಯವಂತಿಪ್ಪುದಯ್ಯ.
ಹಿಕ್ಕೆಯಳಿದು ಹಕ್ಕಿವುಳಿಯದ ಮುನ್ನ
ಜಲಂಧರ ರಾಕ್ಷಸನ ಸೊಕ್ಕು ಮುರಿದು
ಮುಕ್ಕಣ್ಣ ತಾನು ತಾನಾದ ಲಿಂಗೈಕ್ಯನ ಏನೆಂದುಪಮಿಸುವೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ. ॥ ೭ ॥

೫೮೪

ಸಾಳುವನ ಹಕ್ಕಿಯನು ಪಾಳೆಯದ ನಾಯಿ ಹಿಡಿದುದ ಕಂಡೆನಯ್ಯ.
ನಾಯಿ ಹಿಡಿದಿಪ್ಪ ನಾಕಿತಿ ನಾಗರಕಾಟವಾಗಿ ಕಾಡುತ್ತಿಪ್ಪಳಯ್ಯ.
ನಾಗರಿಗೆ ಮದ್ದ ಹೇಳ ಬಂದಯ್ಯಗಳು
ನಾಕಿತಿಯ ನಟನೆಯಲ್ಲಿ ಸಿಲುಕಿದರು.
ಈ ಲೋಗರನಾಚಾರ್ಯರೆಂತೆಂಬೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮ ॥

೫೮೫

ಪರುಷದ ಗಿರಿಯಲ್ಲಿ ಚಿಂತಾಮಣಿ ರತ್ನದ ಕಂಡೆನಯ್ಯ.
ಅದು ಅನಂತಕೋಟಿ ಸೋಮಸೂರ್ಯರ ಬೆಳಗು ನೋಡ.
ಅತಿಶಯದ ಬೆಳಗಿನ ಬೆಳಗಿನೊಳು
ಆನಂದಸುಖದೊಳಗೋಲಾಡುತಿರ್ದೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯ ॥

೫೮೭

ಅಂಗದ ಕೊನೆಯಲ್ಲಿ ಅಲೆದಾಡುವ ಕಪಿಯು
ಕಂಗಳ ಕೊನೆಯ ಬಿಡುಮುಳ್ಳು ತಾಕಲು,
ಭಂಗಿತರಾದರು ಹರಿ ಬ್ರಹ್ಮರೆಲ್ಲರು.
ಅಂಗದ ಕೊನೆಯ ಮೊನೆಯ ಬಿಡುಮುಳ್ಳ ಮುರಿಯಲು,
ಮಂಗಳಮಯ ಮಹಾಲಿಂಗವಾಯಿತ್ತು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦ ॥

೫೮೭

ಕಾಲವ್ಯಾಘ್ರನ ಶಿರವನೊಡೆದು
ಜ್ವಾಲಾಮುಖ ಗಣೇಶ್ವರನುದಯವಾಗಿ
ಕಾಲ ಕಾಮ ಮಾಯಾದಿಗಳ ಮರ್ದಿಸಿ
ಲಿಂಗಲೀಲೆಯಿಂದವೋಲಾಡುತಿದಾನೆ ನೋಡ.
ಆ ಜ್ವಾಲಾಮುಖ ಗಣೇಶ್ವರನನು
ಉರಿಲಿಂಗವೆದ್ದು ನುಂಗಿದ್ದ ಕಂಡು
ನಾನು ಲಿಂಗೈಕ್ಯನಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೧ ॥

೫೮೮

ಆದಿ ಅಂಗನೆಯ ಉದರದಲೊಂದು ಅಮೃತದ ಕಿಚ್ಚು ಹುಟ್ಟಿ
ಮೂರು ಹಂಸೆಯ ನುಂಗಿ ಮುಪ್ಪುರವ ಸುಟ್ಟು
ಆರೂಢಪದದಲ್ಲಿ ನಿಂದ
ಅದ್ವಯ ಲಿಂಗೈಕ್ಯವನೇನೆಂದುಪಮಿಸುವೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೨ ॥

೫೮೯

ಜೀವ ಪವನನ ಬೆರಸಿದ ಪ್ರಾಣನ ನಿಲವು
ಹೊಗೆ ಸುತ್ತಿದ ಉರಿಯಂತಿದೆ ನೋಡ.
ಹೊಗೆಯ ಕಳೆದು ಚಿದಾಗ್ನಿಯ ಬಲೆಗೊಳಬಲ್ಲರೆ
ಜಗದೊಡೆಯ ತಾನು ತಾನಲ್ಲದೆ ಬೇರಿಲ್ಲ ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೩ ॥

### ೫೯೦

ಕಾಯದೊಳಗಣ ಜೀವ ಹೇಂಗಿಪ್ಪುದೆಂದಡೆ:
ಒಳಗೊಂದು ಬೆಳಗುವ ಜ್ಯೋತಿಯಂತಪ್ಪುದಯ್ಯ.
ಕಾಯವೇ ಶರಣ, ಜೀವವೇ ಲಿಂಗವೆಂಬ
ಉಪಾಯವನಾರೂ ತಿಳಿಯರಲ್ಲಾ.
ಜೀವನ ಬೆಳಗು ಕಾಯವ ನುಂಗಲು
ಕಾಯ ನಿರವಯವಾಯಿತ್ತಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. || ೧೪ ||

### ೫೯೧

ಕರಿಯ ದಾನವನ ಶಿರದಲ್ಲಿ ಮರುಜೆವಣಿಯ ಹಣ್ಣಿಪ್ಪುದ ಕಂಡೆ.
ಇರುಹೆ ಬಂದು ಮುತ್ತಲು ಮರುಜೆವಣಿ
ಆರಿಗೂ ಕಾಣಬಾರದಯ್ಯ.
ಇರುಹಿನ ಬಾಯ ಟೊಣೆದು
ಮರುಜೆವಣಿಯ ಹಣ್ಣ ಸವಿಯಬಲ್ಲಾತಂಗೆ
ಮರಣವಿನ್ನೆಲ್ಲಿಯದೋ?
ಮರಣವ ಗೆಲಿದಾತನನೇ ಮಹಾಲಿಂಗೈಕ್ಯನೆಂಬೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. || ೧೫ ||

### ೫೯೨

ಊರೊಳಗೆ ಆರುಮಂಟಪವ ಕಂಡೆನು.
ಐವತ್ತೆರಡು ಎಸಳಿಂದ ರಚಿಸುತ್ತಿಪ್ಪುದಯ್ಯ.
ಎಸಳೆಸಳು ತಪ್ಪದೆ ಅಕ್ಷರ ಲಿಪಿಯನೇ ಕಂಡು
ಅಕ್ಷರ ಲಿಪಿಯ ಹೆಸರ ಕಲ್ಪಿತ ಲಿಪಿಯನೇ ತೊಡೆದು
ನಿರ್ವಿಕಲ್ಪ ನಿತ್ಯಾತ್ಮಕನಾದೆನಯ್ಯ.
ಆರು ಮಂಟಪವನಳಿದು
ಮೂರು ಕೋಣೆಯ ಕೆಡಿಸಿ
ಸಾವಿರೆಸಳ ಮಂಟಪವ ಹೊಗಲಾಗಿ
ಸಾವು ತಪ್ಪುವುದೆಂಬೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. || ೧೬ ||

೫೯೩

ತಾಳಮರದ ಮೇಲೊಂದು ಹೂಳಿದ್ದ ವಸ್ತುವ ಕಂಡೆ.
ಏಳುನೂರೆಪ್ಪತ್ತು ಮನೆಯಲ್ಲಿ ತಾನಾಗಿಪ್ಪುದಯ್ಯ.
ಸರ್ವ ಸಂದುಗಳೊಳಗೆ ಅಳವಟ್ಟು ಬೆಳಗುವುದು.
ನಟ್ಟ ನಡು ಮಧ್ಯದಲ್ಲಿ ನಂದಾದೀವಿಗೆ
ನಂದದ ಬೆಳಗು ಕುಂದದು ನೋಡಿರೇ.
ಮೂರಾರು ನೆಲೆಗಳ ಮೀರಿ ಪರಿಪೂರ್ಣವಾಗಿಪ್ಪುದು.
ದಶನಾಡಿಗಳೊಳಗೆ ಎಸೆದು ಪಸರಿಸಿಪ್ಪ
ಸ್ಫಟಿಕಪ್ರದ್ಯುತ್ ಪ್ರಭಾಮಯವಾಯಿತ್ತಯ್ಯ.
ಒಳಗಿಲ್ಲ, ಹೊರಗಿಲ್ಲ, ಎಡನಿಲ್ಲ, ಬಲನಿಲ್ಲ,
ಹಿಂದಿಲ್ಲ, ಮುಂದಿಲ್ಲ, ಅಡಿಯಿಲ್ಲ, ಅಂತರವಿಲ್ಲ,
ಆಕಾಶವೆಂಬುದು ಮುನ್ನಿಲ್ಲವಯ್ಯ.
ಹಿಡಿದರೆ ಹಿಡಿಯಿಲ್ಲ, ಕರೆದರೆ ನುಡಿಯಿಲ್ಲ,
ನೋಟಕ್ಕೆ ನಿಲುಕದು.
ಇವರಾಟ ಅಗಮ್ಯವಾಗಿಪ್ಪುದು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೮ ॥

೫೯೪

ದೂರ್ವೆಯದಳನ ಮೇಯಬಂದ ಮೊಲನ
ಉರ್ವಿಯ ಕರಡಿ ತೊಡರಿಗೊಂಡಿಪ್ಪುದಯ್ಯ.
ಕರಡಿಯ ಹಿಡಿದ ಬೇಡನ ಕಯ್ಯ ಕಾಡು ನಾಯಿಗಳು
ನಾಡನೆಲ್ಲವ ಹರಿದು ತಿನುತಿಪ್ಪವು;
ಇವರ ಗಾಥವನೇನೆಂಬೆನಯ್ಯ.
ಇವರ ಗಾಥ ಗಮಕವ ಮುರಿದಾತನಲ್ಲದೆ
ಲಿಂಗೈಕ್ಯನಲ್ಲ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೯ ॥

೫೯೫

ಸತ್ತಾತ ಗುರು, ಹೊತ್ತಾತ ಲಿಂಗವು,
ಎತ್ತಿಕೊಂಡಾತ ಜಂಗಮವೆಂದೆಂಬೆನಯ್ಯ.
ಸತ್ತವನೊಬ್ಬ, ಹೊತ್ತವನೊಬ್ಬ,

ಎತ್ತಿ ಕೊಂಡವನೊಬ್ಬನೆಂಬನ್ನಕ್ಕರ ಕತ್ತಲೆ ಹರಿಯದಯ್ಯ.
ಆತ್ತವರಮರರು, ನಿತ್ಯವಾದುದು ಪ್ರಸಾದ,
ಪರಿಪೂರ್ಣವಾದುದು ಪಾದಜಲ.
ಇವರರ್ಥವ ಬಲ್ಲರೆ ಸತ್ತಹಾಗಿರಬೇಕು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೯ ॥

೫೯೬

ಹಸು ಸತ್ತು ಆರುದಿನ, ಕರು ಸತ್ತು ಮೂರು ದಿನ.
ಅಂದು ಬಿತ್ತಿದ ಬೆಳಸು ಇಂದು ಫಲಕಾತುದ ಕಂಡೆನಯ್ಯ.
ಫಲ ರಸವನುಂಡುಂಡು ಪರಮ ಪರಿಣಾಮಿಯಾದೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೦ ॥

೫೯೭

ಚಿತ್ತದೊಳಗಣ ವಸ್ತು ಮುತ್ತಿನಂತಿಪ್ಪುದಯ್ಯ.
ಚಿತ್ತೇ ಚಿಪ್ಪು, ಮುತ್ತೇ ವಸ್ತುವೆಂಬ
ಯುಕ್ತಿಯನಾರೂ ತಿಳಿಯರಲ್ಲಾ.
ಚಿಪ್ಪಳಿದು ಮುತ್ತ ಬೆರೆಸಲಾಗಿ
ನಿತ್ಯತ್ವ ಪದವಾಯಿತ್ತೆಂಬೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೧ ॥

೫೯೮

ಸೂಕ್ಷ್ಮನಾಳದಲ್ಲಿ ಶುಭ್ರಮೂರ್ತಿಯ ಕಂಡೆನಯ್ಯ.
ಲೋಕಾಧಿಲೋಕದೊಳು ಏಕೋಭರಿತನಾಗಿ
ಸರ್ವ ಸಾಕ್ಷಿಕನಾಗಿದಾನೆ ನೋಡಿರಯ್ಯ.
ಆಕಾರವಳಿದು ನಿರಾಕಾರಮಯವಾಗಲು
ಲೋಕೇಶ ತಾನು ತಾನಾದ ಲಿಂಗೈಕ್ಯನನೇನೆಂಬೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೨ ॥

೫೯೯

ಕತ್ತಲೆಯ ಮನೆಯಲ್ಲಿ ಕಾಮಿನಿ ಮುತ್ತ ಸರಗೆಯ್ವುದ ಕಂಡೆ.
ಕತ್ತಲೆ ಹರಿದು, ಮನ ಬತ್ತಲೆಯಾಗಿ

ತತ್ವಮಸಿ ವಾಕ್ಯದಿಂದತ್ತತ್ತ ತಾನಾಗಿ
ತಾ ಸತ್ತ ಬಳಿಕ ಇನ್ನೆತ್ತಳ ಯೋಗ ಹೇಳಾ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೩ ॥

೬೦೦

ಮೃತಜೀವಿಯೆಂಬ ಹೆಂಗೂಸಿನ ಶಿರದಲ್ಲಿ
ಅಮೃತದ ಸೋನೆ ಸುರಿವುತ್ತಿದೆ ನೋಡ.
ಹಾಲುಮಳೆ ಕರೆದು ಆಕೆಯ ಮೇಲೆ ಮೇರೆದಪ್ಪಿ ಹರಿಯಲು
ಆ ಬಾಲೆ ಅಳಿದು ಆ ಲೋಕದ ಪ್ರಾಣಿಗಳು ಸತ್ತು
ಸಚರಾಚರಂಗಳ ಮೀರಿ
ಸಚ್ಚಿದಾನಂದ ಶಿವೈಕ್ಯನಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೪ ॥

೬೦೧

ಅಪ್ರತಿಖಾಮಂಡಲದಲ್ಲಿ
ಅಮೃತತೃಪ್ತಿಯೆಂಬ ಅಂಗನೆಯ ಉದರದಲ್ಲಿ
ಚಿತ್‌ಶಿಖಿಯೆಂಬ ಕಿಚ್ಚು ಹುಟ್ಟಿ
ಮೃತ್ಯುಗಳ ಮೊತ್ತವ ಸಂಹರಿಸಿ
ತತ್ ತ್ವಂ ಅಸಿಯೆಂಬ ಪದವ ನುಂಗಿ
ಪರಾಪರವಾಯಿತ್ತು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೫ ॥

೬೦೨

ಪಿಂಡ ಬ್ರಹ್ಮಾಂಡವನು ಕಂಡು ನುಂಗಿದ ಆಕೆ
ಪಿಂಡ ಬ್ರಹ್ಮಾಂಡದ ಪ್ರಪಂಚ ಸೋಂಕಳು ನೋಡ.
ಪಿಂಡ ಬ್ರಹ್ಮಾಂಡದ ಒಳಹೊರಗೆ ತಾನಾಗಿ
ಅಖಂಡಿತನ ನೆರೆದು ಅಚ್ಚಲಿಂಗೈಕ್ಯಳಾದಳು ನೋಡ.
ಇದು ಶರಣಸತಿ ಲಿಂಗಪತಿಯ ಸಂಯೋಗವೆಂದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೬ ॥

೬೦೩

ಮುಪ್ಪುರದರಸಿಂಗೆ ಮುಖಿಪ್ಪೈದು,
ಬಾಯಿ ಹದಿನಾರು, ಹಲ್ಲು ಇನ್ನೂರಹದಿನಾರು ನೋಡಾ.
ಆರೂಢಸಂಗದಲ್ಲಿ ಅರ್ಭುತದ ಕಿಚ್ಚು ಹುಟ್ಟಲು
ಮೂರೂರು ಬೆಂದು, ಮುಖಿಪ್ಪೈದು ಕೆಟ್ಟು,
ಬಾಯಿ ಹದಿನಾರು ಮುಚ್ಚಿ,
ಇನ್ನೂರಹದಿನಾರು ಹಲ್ಲು ಮುರಿದವು ನೋಡ.
ಮುಪ್ಪುರದರಸ ನುಂಗಿದ್ದ ಕಿಚ್ಚು ನಿಷ್ಪತ್ತಿಯಾಗಲು
ಲಿಂಗಾಂಗ ಸಂಯೋಗವಾಯಿತ್ತು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ! ॥ ೨೭ ॥

೬೦೪

ಭೂತಗ್ರಾಮದಲ್ಲಿ ಪಾತಕದ ಕಿಚ್ಚು ಹುಟ್ಟಿ
ಪಂಚಾಗ್ನಿಯಾಗಿ ಸರ್ವರ ಘಾತಿಸುತ್ತ ಘರ್ಜಿಸುತ್ತಿದ್ದಿತ್ತು ನೋಡ.
ಪಂಚಬ್ರಹ್ಮದ ಮುಖದಲ್ಲಿ ಪರಮಶಿವ ಉದಯಿಸಲು
ಭೂತಗ್ರಾಮ ಬೆಂದು, ಪಾತಕದ ಪಂಚಾಗ್ನಿ ಕೆಟ್ಟು,
ಪಂಚಬ್ರಹ್ಮದ ಕಿಚ್ಚು ಪರಬ್ರಹ್ಮವನಪ್ಪಲು
ಪರಮ ಶಿವೈಕ್ಯವಾಯಿತ್ತು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೮ ॥

೬೦೫

ಪರಶಕ್ತಿ ಬಂದು ಪಸುಪತಿಯ ನೆರೆಯಲು
ಅತಿಶಯನೊಬ್ಬ ಉದಯವಾದನು.
ಆತ ಆದಿ ಶರಣನು.
ಪಶು ಪಾಶ, ಮಲ ಮಾಯ ಕರ್ಮವನೊಂದನೂ ಹೊದ್ದದ
ಅನಾದಿ ನಿರ್ಮಲನು ನೋಡಾ ಲಿಂಗ ಶರಣನು.
ಆದಿ ಅನಾದಿಯೆಂಬತತ್ತ್ವ ತಾನಾದ
ಪರಾಪರನು ನಿಜಲಿಂಗೈಕ್ಯನು ಕಾಣಾ,
ಮಹಾಲಿಂಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨೯ ॥

೬೦೬

ಸಿರಿಯ ಸೀರೆಯನುಟ್ಟು,
ಐವರು ತರುಣೆಯರು ಉರಿಯ ಪುರುಷನ ನೆರೆಯ ಹೋಗಿ,
ಸಿರಿಯ ಸೀರೆಯ ತೆಗೆಯದೆ ನಾಚಿದರು ನೋಡ.
ಸಿರಿಯ ಸೀರೆಯನಳಿದು, ಉರಿಯ ಪುರುಷನ ನೆರೆಯಲು,
ಅದು ಪರಮ ಶಿವಯೋಗವಾಯಿತ್ತು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೦ ॥

೬೦೭

ಆರೆಂಬ ಸಂಖ್ಯೆ ಆರೂ ಇಲ್ಲದ
ರಾಜ್ಯದಿ ಮಾರಾರಿಯೊಬ್ಬನೇ ಅರಸು ನೋಡ.
ಅರಸು ಪ್ರಧಾನಿ ಮಂತ್ರಿ ಆನೆ ಸೇನೆ
ಪ್ರಜೆ ಪರಿವಾರವೆಲ್ಲವು ಸತ್ತು
ಅರಸಿನ ಅರಸುತನ ಕೆಟ್ಟಿತ್ತು ನೋಡ.
ತನ್ನಿಂದನ್ಯವಾಗಿ ಇನ್ನಾರೂ ಆರೂ ಏನುಯೇನೂ ಇಲ್ಲದ
ನಿರಾಕಾರವ ನೆರೆದು
ಆ ನಿರಾಕಾರ ಪರವಸ್ತುವೆಯಾದನಾಗಿ,
ಅದು ಲಿಂಗಾಂಗ ಸಂಯೋಗ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೧ ॥

೬೦೮

ಬ್ರಹ್ಮಾಂಡಲೋಕ ಹುಟ್ಟದತ್ತತ್ತ ಮುನ್ನಿನ
ನಿಭ್ರಾಂತನ ನೆಮ್ಮಿ ತೋರಿದ ಲೀಲಾಸೂತ್ರ ಮಾತ್ರದಿಂದ
ನೀನು ಹಲವಾದುದ ನಾನು ಕಂಡೆನಯ್ಯ.
ಲೀಲಾಸೂತ್ರ ಮಾತ್ರದ ಕಾಲ ಕೀಲನು ಕಳೆದು
ಮುನ್ನಿನ ನಿಭ್ರಾಂತನ ನೆರೆದು
ನಿತ್ಯ ನಿರಂಜನ ಶಿವಯೋಗಿಯಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೨ ॥

೬೦೯

ಸಚ್ಚಿದಾನಂದನ ಸಂಕಲ್ಪಮಾತ್ರದಿಂದ,
ಮಿಥ್ಯಾ ಛಾಯೆ ತೋರಿತ್ತು ನೋಡ.

ತಥ್ಯವೇ ಶಿವತತ್ತ್ವ,
ಮಿಥ್ಯವೇ ಮಾಯಾಸೂತ್ರದ ಜಗಜ್ಜಾಲ ನೋಡ.
ತಥ್ಯವೇ ತನ್ನ ನಿಜವೆಂದು, ಮಿಥ್ಯವೇ ಹುಸಿಯೆಂದರಿವ
ಶಿವತತ್ತ್ವಜ್ಞಾನಿಗಳಪೂರ್ವ ನೋಡ.
ತಥ್ಯಮಿಥ್ಯವೆಂಬ ಹೊತ್ತುಹೋಕನತಿಗಳೆದ
ನಿತ್ಯ ನಿರಂಜನನು ತಾನು ತಾನೆ ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೩ ॥

೬೧೦

ನಿರ್ವಿಕಾರಿಯ ಭಾವದಲ್ಲಿ ತೋರಿದ ಗರ್ವ
ಬಿಳಿಯ ಮದಗಜವ ಕಳೆವರೆ ಅರಳವಲ್ಲ ನೋಡ.
ಬಿಳಿಯ ಮದಗಜದ ಶಿರವ ಉರಿಯ ಚರಣದಲ್ಲಿ ಮೆಟ್ಟಿ
ನಿರವಯನನೆರೆದು ನಿಜಲಿಂಗೈಕ್ಯನಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೪ ॥

೬೧೧

ಶರೀರಾವರಣವಿಲ್ಲದ ಚಿದಾವರಣನ ಕರಣಂಗಳೆಲ್ಲ
ಚಿತ್ಕರಣಂಗಳು ನೋಡ.
ಆತಂಗೆ ಶರೀರ[ಶುಚಿ]ಚಿದ್ಭೂಮಿ ಚಿಜ್ಜಲ ಚಿದಗ್ನಿ
ಚಿತ್ಪ್ರಾಣವಾಯು ಚಿದಾಕಾಶಮಯ ನೋಡ.
ಆ ಚಿದಾಭರಣಂಗೆ ಚಿಚ್ಚೈತನ್ಯ[ಕ್ಕೆ ತಾ]ನೇ ಪ್ರಾಣಲಿಂಗ ನೋಡ.
ಆ ಚಿದಾಭರಣ ಶರಣನು ಚಿದ್ಘನಲಿಂಗವ ನೆರೆದು
ಪರಾಪರನಾದ ಪರಶಿವಯೋಗಿ ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೫ ॥

೬೧೨

ಗುಣತ್ರಯಂಗಳನಳಿದ ನಿರ್ಗುಣನ ಮೇಲೆ
ನಿರ್ವಯಲು ಬಂದೆರಗಿತ್ತು ನೋಡ.
ನಿರ್ವಯಲು ಬಂದೆರಗಿದ ರಭಸಕ್ಕೆ
ವಿಶ್ವಪ್ರಪಂಚು ಎದ್ದೋಡಿದವು.
ಕರಣಂಗಳೆಂಬ ಕಳ್ಳರು ಕಾಲುಗೆಟ್ಟರು ನೋಡ.

ತನುತ್ರಯಂಗಳೆಂಬ ತ್ರಿಪುರದ ಕೀಲು ಹರಿಯಿತ್ತು.
ಕಾಮ ಕಾಲರ ಊಳಿಗದ ಉಪಟಳ ಎದ್ದೋಡಿತ್ತು ನೋಡ.
ಆತ್ಮತ್ರಯಂಗಳ ಅಹಂಕಾರದ ಬೇರು ಸಂಹಾರವಾಗಿ
ಪ್ರಕೃತಿತ್ರಯಂಗಳ ಪ್ರಪಂಚು ಕೆಟ್ಟು
ಜೀವ ಪರಮರೆಂಬ ಭಾವ ಸತ್ತಿತ್ತು.
ಜೀವ ಪರಮರೆಂಬ ಭಾವ ಸತ್ತಿತ್ತಾಗಿ
ನಿರ್ಗುಣ ಲಿಂಗೈಕ್ಯವಾಯಿತ್ತು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೬ ॥

೬೧೩

ಸದ್ಯೋಜಾತನ ಮುಟ್ಟಿ, ಪೃಥ್ವಿ ಬಯಲಾಗಿ
ಚಿತ್ತ ಪಂಚಕವು ಕೆಟ್ಟವು ನೋಡ.
ವಾಮದೇವನಿಗೂಲಿದು, ಅಪ್ಪು ಬಯಲಾಗಿ
ಬುದ್ಧಿ ಪಂಚಕವು ಕೆಟ್ಟವು ನೋಡ.
ಅಘೋರನ ನೆರೆದು, ಅಗ್ನಿ ಬಯಲಾಗಿ
ಅಹಂಕಾರ ಪಂಚಕವಳಿದು ನಿರಹಂಕಾರಿಯಾದೆನಯ್ಯ.
ತತ್ಪುರುಷನನಪ್ಪಿ, ವಾಯು ಬಯಲಾಗಿ
ಮನಪಂಚಕವಳಿದವು ನೋಡ.
ಈಶಾನ್ಯನನೊಡಗೂಡಿ, ಆಕಾಶಬಯಲಾಗಿ
ಅರುಹು ಪಂಚಕವು ನಿರ್ಮೂಲವಾದವು ನೋಡ.
ಮಹಾದೇವನ ನೆರೆದು, ಆತ್ಮ ಬಯಲಾಗಿ
ಭಾವ ಪಂಚಕವಳಿದು ನಿರ್ಭಾವಿಯಾಗಿ ನಿಜಲಿಂಗೈಕ್ಯನಾದೆನಯ್ಯ.
ಎಲ್ಲಾ ಪದಂಗಳ ಮೀರಿ
ಮಹಾಲಿಂಗ ಪದದೊಳಗೆ ಸಂಯೋಗವಾಗಿರ್ದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೭ ॥

೬೧೪

ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ
ವಿಶುದ್ಧಿ ಆಜ್ಞೇಯವೆಂಬ ಷಡುಚಕ್ರಂಗಳ
ಚತುರ್ದಳ ಚತುರಕ್ಷರ,
ಷಡುದಳ ಷಡಕ್ಷರ,

ದಶದಳ ದಶಾಕ್ಷರ,
ದ್ವಾದಶದಳ ದ್ವಾದಶಾಕ್ಷರ,
ಷೋಡಶದಳ ಷೋಡಶಾಕ್ಷರ,
ದ್ವಿದಳ ದ್ವ್ಯಯಾಕ್ಷರವೆಂಬ,
ಚಕ್ರ ದಳ, ಅಕ್ಷರಂಗಳೆಲ್ಲವು ಬಯಲಾದವು ನೋಡ.
ಪೀತ ಹರಿತ ಮಾಂಜಿಷ್ಠ ಶ್ವೇತ ಕಪೋತವರ್ಣಮುಖ್ಯವಾದ
ಸಮಸ್ತವರ್ಣಂಗಳೆಲ್ಲ ಬಯಲಾದವು ನೋಡಾ.
ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವರೆಂಬ
ಪಂಚಾಧಿದೇವತೆಗಳು ಬಯಲಾದರು ನೋಡ.
ಅದೆಂತೆಂದಡೆ:
ಬ್ರಹ್ಮ ವಿಷ್ಣುವಿನಲ್ಲಡಗಿ, ವಿಷ್ಣು ರುದ್ರನಲ್ಲಡಗಿ,
ರುದ್ರ ಈಶ್ವರನಲ್ಲಡಗಿ, ಈಶ್ವರ ಸದಾಶಿವನಲ್ಲಡಗಿ,
ಸದಾಶಿವ ಚಿತ್ತಿನಲ್ಲಡಗಿ,
ಆ ಚಿತ್ ಸ್ವರೂಪವಪ್ಪ ಆದಿಶರಣನ ಮಹಾಲಿಂಗದೊಳಡಗಿ,
ನಿರ್ವಯಲಾದುದ ಇವರೆಲ್ಲರ ಬಯಲು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೮ ॥

೬೧೫

ನಿರ್ವಯಲ ಸ್ಥಲವಲ್ಲಿ
ಬಿಳಿಯ ತಾವರೆ ಶತಸಹಸ್ರ ದಳದಿಂದ
ಪ್ರಭಾವಿಸುತ್ತಿಹುದು ನೋಡ.
ಅದು ಎಳೆ ಮಿಂಚು ಶತಕೋಟಿಗಳ ಬೆಳಗ ಕೀಳ್ವಡಿಸುವ
ಅಮಲ ಬ್ರಹ್ಮ ನೋಡ.
ಆ ಬ್ರಹ್ಮರಂಗವ ಬಗಿದು ಹೊಕ್ಕು,
ದೀಪ ದೀಪವ ಬೆರಸಿದಂತೆ, ಏಕರಸಮಯವಾದ
ಅಚ್ಚ ಲಿಂಗೈಕ್ಯನು, ಅಚಲಿತ ನಿರಾಳನು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೩೯ ॥

೬೧೬

ಸತ್ಯಲೋಕದಿಂದ ಚಿತ್‌ಸಮುದ್ರ ಉಕ್ಕಿ ಹರಿಯಲು
ಸಪ್ತಸಮುದ್ರಂಗಳೆಲ್ಲಾ ಬರತವು ನೋಡ.

ಮರ್ತ್ಯಲೋಕದ ಮಾನವರು ಚಿತ್‌ಸಮುದ್ರದೊಳಗೆ ಮುಳುಗಿ
ನಿತ್ಯ ನಿಶ್ಚಿಂತ ನಿರ್ಮಲರಾದರು ನೋಡ.
ಚಿತ್ ಸಮುದ್ರದೊಳಗೆ ಮುಳುಗಿ ಸತ್ತಾತ
ಸಾಕ್ಷಾತ್ ಪರವಸ್ತು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೦ ॥

೬೧೭

ಸದ್ಯೋಜಾತ ವಾಮದೇವ ಅಘೋರ ತತ್ಪುರುಷ ಈಶಾನ್ಯವೆಂಬ
ಐವರನೆತ್ತಿ ನುಂಗಿದ ಅವಿರಳ ಪರಬ್ರಹ್ಮ ನೋಡ.
ಆ ಪರಬ್ರಹ್ಮವ ನುಂಗಿವನು ನಿರವಯ.
ನಿರವಯವ ನುಂಗಿದ ನಿರಾಳ.
ನಿರಾಳವ ನುಂಗಿದ ನಿತ್ಯ ನಿರಂಜನ ಪರವಸ್ತು ನೋಡ.
ಇವರೆಲ್ಲರ ನುಂಗಿದ ಪರವಸ್ತು ಎನ್ನ ನುಂಗಿತ್ತಾಗಿ,
ಆ ಪರವಸ್ತುವ ನಾನು ನುಂಗಿವೆನಾಗಿ,
ನಿಃಶಬ್ದಮಯವಾಯಿತ್ತು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೧ ॥

೬೧೮

ನೋಡಿಹೆನೆಂದರೆ ನೋಟ ಸಮರಸವಾಯಿತ್ತು.
ಕೂಡಿಹೆನೆಂದರೆ ಕೂಟ ನಿಬ್ಬೆರಗಾಯಿತ್ತಯ್ಯ.
ನೋಟ ಕೂಟಗಳೆಂಬುಭಯವಳಿದು,
ನಿಜವಲ್ಲಿ ನಿರ್ವಯಲಾಯಿತ್ತಯ್ಯ.
ನೋಡಲಿಲ್ಲದ ನುಡಿಸಲಿಲ್ಲದ
ಕೂಡಲಿಲ್ಲದಪ್ರತಿಮ ತಾನು ತಾನಾದ ಪರಮಾನಂದ ಸುಖದಲ್ಲಿ
ಓಲಾಡುತ್ತಿರ್ದೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೨ ॥

೬೧೯

ಮುಗಿಲ ಮರೆಯ ಸೂರ್ಯನಂತೆ,
ನೆಲದ ಮರೆಯ ನಿಧಾನವಂತೆ,
ಒರೆಯ ಮರೆಯ ಅಲಗಿನಂತೆ,

ಹಣ್ಣಿನೊಳಗಣ ರಸದಂತೆ,
ಶರಣನ ಶರೀರವ ಮರೆಗೊಂಡು,
ಪರಮ ಪಾವನಮೂರ್ತಿಯ ಪರಾಪರ
ತಾನು ತಾನಾಗಿರ್ಪುದನೇನೆಂಬೆನಯ್ಯಾ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೩ ॥

೬೨೦

ಘೃತ ಘೃತವ ಬೆರಸಿದಂತೆ,
ಕ್ಷೀರ ಕ್ಷೀರವ ಬೆರಸಿದಂತೆ,
ತೈಲ ತೈಲವ ಬೆರಸಿದಂತೆ,
ನೀರು ನೀರ ಬೆರಸಿದಂತೆ,
ಜ್ಯೋತಿ ಜ್ಯೋತಿಯ ಕೂಡಿದಂತೆ,
ಬಯಲು ಬಯಲ ಬೆರಸಿದಂತೆ,
ಪ್ರಾಣ ಪ್ರಾಣ ಸಂಯೋಗವಾದ
ಶರಣ ಲಿಂಗ ಸಮರಸವನೇನೆಂಬೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೪ ॥

೪೨೧

ಅಟ್ಟುದನು ಅಡಲುಂಟೆ? ಸುಟ್ಟುದ ಸುಡಲುಂಟೇ ಅಯ್ಯ?
ಬೆಂದ ಮಡಕೆ ಮರಳಿ ಧರೆಯ ಕೂಡಬಲ್ಲದೇ ಅಯ್ಯ?
ಕರ್ಪುರವ ಅಗ್ನಿ ನುಂಗಿದ ಬಳಿಕ ಕರಿಯುಂಟೇ ಅಯ್ಯ?
ಶರಣನ ಲಿಂಗ ನುಂಗಿ, ಲಿಂಗವ ಶರಣ ನುಂಗಿ,
ನದಿಯೊಳಗೆ ನದಿ ಬೆರೆಸಿದಂತೆ ಬೆರೆದು,
ಶುದ್ಧ ನಿರ್ಮಲನಾದ ಲಿಂಗೈಕ್ಯಂಗೆ,
ಭಿನ್ನಾಭಿನ್ನವ ಕಲ್ಪಿಸುವ ಅಜ್ಞಾನಿಗಳ
ಎನಗೊಮ್ಮೆ ತೋರದಿರಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೫ ॥

೬೨೨

ನರರಂತೆ ನಡೆವುತ್ತಿಪ್ಪರಯ್ಯ, ನರರಂತೆ ನುಡಿವುತ್ತಿಪ್ಪಿರಿ ಅಯ್ಯ.
ನರರಂತೆ ಉಣ್ಣುತ್ತಿಪ್ಪಿರಯ್ಯ, ನರರಂತೆ ಉಡುತಿಪ್ಪಿರಿ ಅಯ್ಯ.

ನೋಡಿದರೆ ಅವರವರಂತಿಪ್ಪಿರಿ, ವಿವರಿಸಿದರೆ
ನೀವು ನಿಮ್ಮಂತೆ ಇಪ್ಪಿರಿ ಅಯ್ಯ.
ಹತ್ತರೊಳಗೆ ಹನ್ನೊಂದಾಗಿಪ್ಪಿರಿ ಅಯ್ಯ.
ಕುರುಹಿನ ನಾಮವಿಡಿದು ಕರೆದರೆ ಓ ಎಂದೆಂಬಿರಿ.
ನಾಮವಿಲ್ಲದ ಸೀಮೆಯಿಲ್ಲದ ನಿಸ್ಸೀಮ ಲಿಂಗೈಕ್ಯನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೬ ॥

೬೨೩

ಚಿನ್ನದಿಂದಲಾದ ಹಲವು ಬಂಗಾರವನಳಿದು ಕರಗಿಸಿದರೆ
ಮುನ್ನಿನ ಚಿನ್ನವೆ ಆದಂತೆ,
ಉದಕದಿಂದಾದ ವಾರಿಕಲ್ಲು ಕರಗಿ
ಮುನ್ನಿನ ಉದಕವೆ ಆದಂತೆ,
ಚಿನ್ಮಯ ವಸ್ತುವಿನಿಂದುದಯಿಸಿದ ಚಿತ್‌ಸ್ವರೂಪನಾದ ಶರಣನು
ಆ ಚಿನ್ಮಯ ಪರವಸ್ತುವನೆ ಬೆರಸಿ
ಪರಮ ಶಿವಯೋಗಿಯಾದನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೭ ॥

೬೨೪

ಚಂದ್ರನಿಂದಾದ ಕಲೆ ಚಂದ್ರನಬೆರಸಿ ಚಂದ್ರನಾದಂತೆ,
ಸೂರ್ಯನಿಂದಾದ ಕಿರಣ ಸೂರ್ಯನ ಬೆರಸಿ ಸೂರ್ಯನಾದಂತೆ,
ಅಗ್ನಿಯಿಂದಾದ ಕಾಂತಿ ಅಗ್ನಿಯನೆ ಬೆರಸಿ ಅಗ್ನಿಯಾದಂತೆ,
ದೀಪದಿಂದಾದ ಬೆಳಗು ದೀಪವನೆ ಬೆರಸಿ ದೀಪವಾದಂತೆ,
ಸಮುದ್ರದಿಂದಾದ ನದಿ ಸಮುದ್ರವನೆ ಬೆರಸಿ ಸಮುದ್ರವಾದಂತೆ,
ಪರಶಿವತತ್ತ್ವದಲ್ಲಿಯೆ ನಾನುದಯಿಸಿ
ಆ ಪರಶಿವತತ್ತ್ವದಲ್ಲಿಯೆ ಬೆರಸಿ
ಪರಶಿವಯೋಗಿಯಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೮ ॥

೬೨೫

ತನುತ್ರಯಂಗಳು ಸದ್ರೂಪವಪ್ಪ ಗುರುವಿನಲ್ಲಡಗಿ
ತನು ನಿರ್ವಯಲಾಯಿತ್ತು.

ಮನತ್ರಯಂಗಳು ಚಿದ್ರೂಪವಪ್ಪ ಲಿಂಗದಲ್ಲಿ ಅಡಗಿ
ಮನ ನಿರ್ವಯಲಾಯಿತ್ತು.
ಧನವೆಂದರೆ ಅರ್ಥ, ಅರ್ಥವೆಂದರೆ ಜೀವಾತ್ಮ
ಜೀವಾತ್ಮ ಅಂತರಾತ್ಮ ಪರಮಾತ್ಮರೆಂಬ ಆತ್ಮತ್ರಯಂಗಳು
ಪರಮಾನಂದವೆಂಬ ಜಂಗಮದಲ್ಲಡಗಿ ಏಕಾರ್ಥವಾದವಾಗಿ
ಧನ ನಿರ್ವಯಲಾಯಿತ್ತು.
ಈ ಸಚ್ಚಿದಾನಂದ ನಿತ್ಯ ಪರಿಪೂರ್ಣ ನಿರಾಕಾರ
ಪರವಸ್ತುವಿನಲ್ಲಡಗಿತ್ತಾಗಿ
ಲಿಂಗೈಕ್ಯವಾಯಿತ್ತು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪೯ ॥

೬೨೬

ತನುವ ನೀವು ಸೋಂಕಿ ತನು ನಷ್ಟವಾಯಿತ್ತಯ್ಯ.
ಮನವ ನೀವು ಸೋಂಕಿ ಮನ ನಷ್ಟವಾಯಿತ್ತಯ್ಯ.
ಭಾವವ ನೀವು ಸೋಂಕಿ ಭ್ರಮೆ ನಷ್ಟವಾಯಿತ್ತಯ್ಯ.
ಅರುಹೆ ನೀವಾದಿರಿಯಾಗಿ ಮರಹು ನಷ್ಟವಾಗಿ ಹೋಯಿತ್ತಯ್ಯ.
ಮರಹು ಅಳಿಯಿತ್ತಾಗಿ ಮಾಯೆಯಳಿದು ಹೋಯಿತ್ತಯ್ಯ.
ಮಾಯೆಯಳಿಯಿತ್ತಾಗಿ ನಿರಾಳ ನಿರ್ಮಾಯ
[ಪರಾ]ಪರವಸ್ತುವಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೦ ॥

೬೨೭

ಪ್ರವೃತ್ತಿ ನಿವೃತ್ತಿಯೆಂದು ಎರಡು ತೆರನಾಗಿಹುದೆಂಬರು.
ಪ್ರವೃತ್ತಿಯೇ ಶಕ್ತಿಮಯವೆಂದೆಂಬರು.
ನಿವೃತ್ತಿಯೇ ಭಕ್ತಿಮಯವೆಂದೆಂಬರು.
ಪ್ರವೃತ್ತಿಯೇ ಮಾಯೆಯೆಂದೆಂಬರು.
ನಿವೃತ್ತಿಯೇ ನಿರ್ಮಾಯೆಯೆಂದೆಂಬರು.
ಪ್ರವೃತ್ತಿ ನಿವೃತ್ತಿಗೆ ಪರಮ ಕಾರಣವಾಗಿ ಪರಶಿವನೆಂದೆಂಬರು.
ಇದುಕಾರಣ, ಎನಗೆ ಪ್ರವೃತ್ತಿಯೂ ಇಲ್ಲ ; ನಿವೃತ್ತಿಯೂ ಇಲ್ಲ ;
ಪರಮ ಕಾರಣನೆಂಬುದೂ ಇಲ್ಲ.
ಶಿವ ಶರಣನೆಂಬೆರಡೂ ಏಕಾರ್ಥವಾಗಿ
ನಿರಾಕಾರ ಪರವಸ್ತು ತಾನೊಂದೆಯಾಯಿತ್ತಾಗಿ

ತನ್ನಿಂದನ್ಯವಾಗಿ ಉಂಟೆಂಬುದನೇನನು ಹೇಳಲಿಲ್ಲ.
ತಾನೆ ಪರಾಪರವಸ್ತು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೧ ॥

೬೨೮

ಎಲೆಗಳೆದ ವೃಕ್ಷದಂತೆ ಉಲುಹಡರ್ಗಿದೆನಯ್ಯ.
ತೆರೆಯಳಿದ ಅಂಬುಧಿಯಂತೆ
ಪರಮ ಶಿವಸಾಗರದೊಳಗೆ ಮುಳುಗಿ
ಪರಮ ಚಿದ್ಗಂಭೀರನಾಗಿರ್ದೆನಯ್ಯ.
ಘಟವನಳಿದಾಕಾಶದಂತೆ ಬಚ್ಚಬರಿಯ ಬಯಲಾಗಿ
ನಿಶ್ಚಲನಾಗಿರ್ದೆನಯ್ಯ.
ಪಟವನಳಿದ ಚಿತ್ರದಂತೆ ನಿರ್ಮಲ ನಿರಾವರಣನಾಗಿ
ಶುದ್ಧ ಅಮಲಬ್ರಹ್ಮವಾಗಿ
ಪ್ರತಿಯಿಲ್ಲದ ಅಪ್ರತಿಮ ಅನುಪಮ ಅಪ್ರಮಾಣ
ಅನಾಮಯನು ನೋಡಾ ಶಿವೈಕ್ಯನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೨ ॥

೬೨೯

ಆರಾರರಿಂದ ಮೀರಿ ತೋರುವ [ಸೀಮೆ] ನಿಸ್ಸೀಮೆ ನೋಡ.
ಆ ಸೀಮೆಯರಸು ಅನಾಹತನು.
ಆವ ಆವರಣವೂ ಇಲ್ಲದ ನಿರಾವರಣಂಗೆ
ಮಾಯಾವರಣವಿಲ್ಲದ ನಿರ್ಮಾಯನೆ ಅಂಗವಾಗಿಪ್ಪನು.
ಈ ಲಿಂಗಾಂಗ ಸಂಯೋಗವ ತತ್ತ್ವಮಸ್ಯಾದಿ ವಾಕ್ಯಾರ್ಥವೆಂಬ
ವಾಚಾಳಿಗೆ ತಂದು ಹೇಳಲಿಲ್ಲ ವಾಚಾತೀತನಾದ ಶಿವೈಕ್ಯ[ನ]ನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೩ ॥

೬೩೦

ಉತ್ತರ ಲೋಕದಲ್ಲಿ ಸತ್ಯಜ್ಞಾನಾನಂದವೆಂಬ ಅಂಗನೆ
ಮೃತ್ಯುಲೋಕವನೆಯ್ದಲು
ಆ ಶಕ್ತಿಯರ ಕೃತ್ಯಾಕೃತ್ಯಂಗಳು ಕೆಟ್ಟು
ಆ ಲೋಕವೆಲ್ಲಾ ಭಕ್ತಿಸಾಮ್ರಾಜ್ಯವಾಯಿತ್ತು ನೋಡ.

ಶಕ್ತಿ ಭಕ್ತಿಯೆಂಬ ಸತ್ಕೃತ್ಯ ನಷ್ಟವಾಗಿ
ಮುಕ್ತ್ಯಂಗನೆಯ ಮುಖವ ನೋಡುತ್ತ ನೋಡುತ್ತ
ಸಚ್ಚಿದಾನಂದೈಕ್ಯನಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೪ ॥

೬೩೧

ಶುದ್ಧ ಸತ್ಕುಲಜಂಗೆ ಅಃಕ್ಕುಲಿಜೆಯ ಸಂಗದಿಂದ
ಸತ್ಕುಲ ಕೆಟ್ಟು ಅಃಕ್ಕುಲಜನಾಗಿ ಹುಟ್ಟುತ್ತ ಹೊಂದುತ್ತಿಪುದ-
ನಿದನಾರು ಮಾಡಿದರೋ ಎಂದು ಆರೈದು ನೋಡಿ
ಮಾರಾರಿಯ ಕೃತಕವೆಂದರಿಯಲಾ
ಸತ್ಕುಲಜನ ತಾಯಿ ಅಃಕ್ಕುಲಿಜೆಯ ಕೊಂದು
ಸುಪುತ್ರನ ನುಂಗಿ
ತತ್ತ್ವಮಸಿವಾಕ್ಯದಿಂದತತ್ತ್ವಲಾದವನ
ನೆತ್ತಿಯಲ್ಲಿ ಹೊತ್ತು ನೆರೆಯಲು
ಭಕ್ತಿ ನಿಃಪತಿಯಾಯಿತ್ತು.
ಸತ್ಯವಿಲ್ಲ, ಎನಗೊಂದು ಸಹಜವಿಲ್ಲ.
ಗುರು ಲಿಂಗ ಜಂಗಮವೆಂಬ ಮಿಥ್ಯದ ಮಾತೆಲ್ಲಿಯದೋ
ಮೂರೊಂದಾಗಿ ಬೆರೆದ ನಿರಾಳಕ್ಕೆ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆಂಬ
ನಾಮವೆಲ್ಲಿಯದೋ ನಿರ್ನಾಮಂಗೆ? ಬಿಡಾ ಮರುಳೆ. ॥ ೫೫ ॥

೬೩೨

ಮೂರೊಂದಾದ ಕಿಚ್ಚು ಧಾರಿಣಿಯೊಳಿಲ್ಲದ ಸುಷುಪ್ತವ ಕಂಡೆ.
ಧರೆಯ ಮೇಲಣ ಮನುಜರು
ಉರಿಯ ಬೀಜವ ಪಪಣೆಗೆಯ ಮಾಡಿ
ಶರೀರವನಳಿದು ಸದಾಶಿವ ಸದಾಶಿವಯೆನುತ್ತ
ಮನುಜತ್ವವಳಿದು ದೇವನಾದುವ ಕಂಡು
ಇದ ಶಿವಜೀವೈಕ್ಯವೆಂಬೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೬ ॥

೬೩೩

ಕಾಯವಿಲ್ಲದ ಭಕ್ತ, ಜೀವವಿಲ್ಲದ ಭಕ್ತ.
ಮಾಯೆಯಿಲ್ಲದ ಭಕ್ತ, ಮರಹಿಲ್ಲದ ಭಕ್ತ, ಅರುಹಿಲ್ಲದ ಭಕ್ತ.
ಒಳಗಿಲ್ಲದ ಭಕ್ತ, ಹೊರಗಿಲ್ಲದ ಭಕ್ತ.
ತಾನಿಲ್ಲದ ಭಕ್ತ, ಇದಿರಿಲ್ಲದ ಭಕ್ತ.
ತಾನಿದಿರೆಂಬುವುದೇನುಯೇನೂಯಿಲ್ಲದ ಪರಮನಲ್ಲಿ
ಬೆರಸಿ ಬೇರಿಲ್ಲದ ಪರಮ ಭಕ್ತನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೭ ॥

೬೩೪

ಗುರುವನರಿಯವ ಭಕ್ತ, ಲಿಂಗವನರಿಯದ ಭಕ್ತ.
ಜಂಗಮವನರಿಯದ ಭಕ್ತ, ಪ್ರಸಾದವನರಿಯದ ಭಕ್ತ.
ಪಾದೋದಕವನರಿಯದ ಭಕ್ತ, ತನ್ನನರಿಯದ ಭಕ್ತ.
ಇದಿರನರಿಯದ ಭಕ್ತ.
ತಾನು ತಾನಾದ ಅವಿರಳನು ಅದ್ವಯನು ನೋಡ.
ಪರಮ ಭಕ್ತನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೮ ॥

೬೩೫

ಮಾಡಿದ ಮಾಟವನರಿಯದ ಭಕ್ತ.
ಕೂಡಿದ ಕೂಟವನರಿಯದ ಭಕ್ತ.
ಮಾಟ ಕೂಟವೆಂಬ ಕೋಟಲೆಯನಳಿದ
ನಿಸ್ಸಂಗತ್ವ ನಿರಾಭಾರಿ ನಿಸ್ಸೀಮ ನಿರ್ದೇಹಿ
ನಿಜದಲ್ಲಿ ಅಡಗಿದ ನಿತ್ಯ ಮುಕ್ತನಯ್ಯಾ ಭಕ್ತನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫೯ ॥

೬೩೬

ನಿತ್ಯ ನಿರಂಜನನಾದ ಪರಶಿವನು
ಲಿಂಗ ಜಂಗಮ ಭಕ್ತನೆಂದು ಮೂರು ತೆರನಾದನು ನೋಡಿರೇ.

ಸದ್ರೂಪು ಲಿಂಗ, ಚಿದ್ರೂಪು ಭಕ್ತ,
ಆನಂದ ಸ್ವರೂಪವೇ ಜಂಗಮ ನೋಡ.
ಆ ಚಿತ್‌ಸ್ವರೂಪವಪ್ಪ ಭಕ್ತಂಗೆ ಸತ್‌ಸ್ವರೂಪವಪ್ಪ ಲಿಂಗವೇ ಅಂಗ;
ಆನಂದಸ್ವರೂಪವಪ್ಪ ಜಂಗಮವೇ ಪ್ರಾಣ.
ಇದು ಕಾರಣ,
ಲಿಂಗವೆ ಅಂಗ, ಜಂಗಮವೆ ಪ್ರಾಣಗ್ರಾಹಕನಾದ
ಚಿನ್ಮಯನಯ್ಯ ಭಕ್ತನು.
ಲಿಂಗ ಜಂಗಮ ಭಕ್ತ ಮೂರುವೊಂದಾಗಿ ಪರಶಿವತತ್ವದಲ್ಲಡಗಿದ
ಅದ್ವೈತ ಪರಬ್ರಹ್ಮವು ತಾನೇ ಪರಮಭಕ್ತ ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೦ ॥

೬೩೭

ಶಿವನ ಕಾಯವೇ ಭಕ್ತ, ಭಕ್ತನ ಕಾಯವೇ ಶಿವ.
ಶಿವನ ಚೈತನ್ಯವೇ ಭಕ್ತ, ಭಕ್ತನಚೈತನ್ಯವೇ ಶಿವನು ನೋಡ.
ಭಕ್ತನ ಮನ ಭಾವ ಕರಣಂಗಳೇ ಭಕ್ತನು ನೋಡ.
ಇದು ಕಾರಣ.
ಶಿವನೇ ಭಕ್ತನು; ಭಕ್ತನೇ ಶಿವನು.
ದೇವ ಭಕ್ತನೆಂಬ ಅಂತರವೆಲ್ಲಿಯದೋ?,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೧ ॥

೬೩೮

ಬಿಂದುಶೂನ್ಯವಾದ ಲಿಂಗವೇ ಅಂಗವಾಗಿ,
ಕಾಯಶೂನ್ಯನಯ್ಯ ಭಕ್ತನು.
ನಾದಶೂನ್ಯವಾದ ಜಂಗಮವೆ ಪ್ರಾಣವಾಗಿ,
ಪ್ರಾಣಶೂನ್ಯನಯ್ಯ ಅನಾದಿಭಕ್ತನು.
ತನ್ನಂಗಸ್ವರೂಪವಪ್ಪ ಲಿಂಗಕ್ಕೆ
ತನ್ನ ಪ್ರಾಣಸ್ವರೂಪವಪ್ಪ ಪರಮ ಚೈತನ್ಯಜಂಗಮದ
ಪ್ರಸನ್ನ ಪ್ರಸಾದವೇ ಆ ಲಿಂಗಕ್ಕೆ ಪ್ರಾಣಕಳೆ ನೋಡ.
ಆ ಲಿಂಗದ ಪ್ರಾಣಕಳೆಯ
ಆ ಜಂಗಮಕ್ಕೆ ಪದಾರ್ಥವ ಮಾಡಿ ಸಮರ್ಪಿಸಿ,
ಆ ಘನ ಚೈತನ್ಯವೆಂಬ ಪರಮ ಜಂಗಮಲಿಂಗದ
ಪರಿಣಾಮ ಪ್ರಸಾದಿಯಯ್ಯ ಭಕ್ತನು.

ಲಿಂಗ ಜಂಗಮ ಪ್ರಸಾದ ಭಕ್ತ ಇಂತೀ ಚತುರ್ವಿಧವು
ಒಂದಾಗಿ ನಿಂದ ನಿಲವು ನೀನೆ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೨ ॥

೬೩೯

ಕಾಮದಿಂದ ಕರಗನು, ಕ್ರೋಧದಿಂದ ಕೊರಗನು.
ಲೋಭ ಮೋಹಂಗಳಿಂದತಿ ನೋವನಲ್ಲ ನೋಡ, ಭಕ್ತನು.
ಮದ ಮತ್ಸರಂಗಳಿಂದ ಬೆದಬೆದನೆ ಬೇವವನಲ್ಲ ;
ಅಹಂಕಾರ ಮಮಕಾರಗಳಿಂದ ಮತಿಮಂದನಲ್ಲ ನೋಡ,
ಭಕ್ತನು
ಆಕಾರ ನಿರಾಕಾರ ಏಕವಾದ
ಏಕಮೇವ ಪರಬ್ರಹ್ಮವು ತಾನೇ ನೋಡ, ಭಕ್ತನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೩ ॥

೬೪೦

ಸತ್ಯನಲ್ಲ , ಅಸತ್ಯನಲ್ಲ.
ಕರ್ಮಿಯಲ್ಲ , ಧರ್ಮಿಯಲ್ಲ , ನಿಃಕರ್ಮಿಯಯ್ಯ ಭಕ್ತನು.
ಆಚಾರನಲ್ಲ ಅನಾಚಾರನಲ್ಲ ;
ಪುಣ್ಯ ಪಾಪ ವಿರಹಿತನಾಗಿ ನಿಷ್ಪಾಪಿಯಯ್ಯ ಭಕ್ತನು.
ವ್ರತ ನೇಮ ಮಂತ್ರ ತಂತ್ರ ಭವಿ ಭಕ್ತನೆಂಬುವುದಿಲ್ಲ ನೋಡ,
ಲಿಂಗೈಕ್ಯಂಗೆ.
ಸವಿಕಲ್ಪನಲ್ಲ. ನಿರ್ವಿಕಲ್ಪನಲ್ಲ.
ಸೀಮನಲ್ಲ. ನಿಸ್ಸೀಮನಲ್ಲ.
ಪರಮ ನಿರಂಜನನು ತಾನೆ ನೋಡಾ ಭಕ್ತನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೪ ॥

## ಐಕ್ಯನ ಮಹೇಶ್ವರ

೬೪೧

ಕಾಲದ ಗಂಡ, ಕರ್ಮದ ಗಂಡ.
ವಿಧಿಯ ಗಂಡ, ವಿಧಾತನ ಗಂಡ.
ಇಹದ ಗಂಡ, ಪರದ ಗಂಡ.

ಇಹಪರವ ಮೀರಿದ ಪರಾಪರನು ನೋಡ, ಮಾಹೇಶ್ವರನು.
ಅಂಗದ ಮೇಲೆ ಲಿಂಗವ ಧರಿಸಿ,
ಲಿಂಗಾಂಗವನೊಂದು ಮಾಡಿ,
ನಿತ್ಯನೇ ತಾನೆಂದರಿಯದೆ, ಸಾವಿಗಂಜುವ ಸಂದೇಹಿಯ ಗಂಡ.
ನಿಸ್ಸಂದೇಹಿ, ನಿರ್ಲೇಪಕನಯ್ಯ, ಮಾಹೇಶ್ವರನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೫ ॥

೬೪೨

ಮನವಿದ್ದಲ್ಲಿಯೇ ನಿಮ್ಮ ನೆನೆಯಬೇಕು.
ಬುದ್ಧಿಯಿದ್ದಲ್ಲಿಯೇ ನಿಮ್ಮ ವಿಚಾರಿಸಬೇಕಯ್ಯ.
ಚಿತ್ತವಿದ್ದಲ್ಲಿಯೇ ನಿಮ್ಮ ನಿಶ್ಚಯಿಸಬೇಕು.
ಅಹಂಕಾರವಿದ್ದಲ್ಲಿಯೇ ನಿಮ್ಮ ಮಮಕರಿಸಬೇಕಯ್ಯ.
ಕಾಯವಿದ್ದಲ್ಲಿಯೇ ಸಾಯದ ಸಂಚವನರಿದು ಎಚ್ಚತ್ತಿರಬೇಕಯ್ಯ.
ಜೀವಹಾರಿಯ ಕೆಡೆದು ಭೂಗತವಾಗಿ,
ವಾಯುಪ್ರಾಣಿಯಾಗಿ ಹೋಹಾಗ,
ಆಗ ಮುಕ್ತಿಯ ಬಯಸಿದರುಂಟೇ?.
ಚಿತ್ತ ಬುದ್ಧಿ ಅಹಂಕಾರ ಮನ ಜ್ಞಾನ ಭಾವಂಗಳ ಮೀರಿದ,
ನಿರ್ಭಾವ ಲಿಂಗೈಕ್ಯನಾದ ನಿರಾಶ್ರಯನಯ್ಯ ಮಾಹೇಶ್ವರನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೬ ॥

೬೪೩

ಸಟ್ಟುಗ ಸವಿಯಬಲ್ಲುದೇ?.
ಅಟ್ಟ ಮಡಕೆ, ಉಣಬಲ್ಲುದೇ ಅಯ್ಯ?.
ಬಟ್ಟಬಯಲು, ಕಟ್ಟುಕುಟ್ಟಿಗೊಳಗಾಗಬಲ್ಲುದೇ?
ನಿಷ್ಠೆ ಹೀನರಿಗೆ ಲಿಂಗ, ಕಟ್ಟಳೆಗೆ ಬರಬಲ್ಲುದೇ?.
ಕರ ಕಷ್ಟರಿರಾ ಸುಮ್ಮನಿರಿ ಭೋ.
ಕಟ್ಟಳೆಗೆಯ್ದದ ಮಹಾಘನವಲ್ಲಿ
ಮನಮುಟ್ಟಿ ಹಿಮ್ಮೆಟ್ಟದೆ ಅಡಗಿದಾತನೇ,
ಅಚಲಿತ ಮಾಹೇಶ್ವರನು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೭ ॥

೬೪೪

ನೀರ ಮೊಡೆಯ ಕಟ್ಟಿ,
ಬಯಲಿಗೆ ಬಲೆಯ ಬೀಸಬಹುದೇ ಅಯ್ಯ?.
ಉರಿಗೆ ಅರಗ ತೋರಿ,
ಗಾಳಿಗೆ ಸೊಡರ ಹಿಡಿಯಬಹುದೇ ಅಯ್ಯ?.
ಮಳಲಗೋಡೆಯನಿಕ್ಕಿ, ಮಂಜ ಮನೆಯ ಮಾಡಿವರೆ
ಸ್ಥಿರವಾಗಬಲ್ಲುದೇ ಅಯ್ಯ?.
ಹಲವು ಮುಖದಲ್ಲಿ ಜಿನುಗುವ ಭವಭಾರಿ ಮನದಲ್ಲಿ
ಶಿವನ ನೆನಹ ಕರಿಗೊಳಿಸಬಹುದೇ? ಬಾರದಾರಿಗೂ.
ಇದು ಕಾರಣ,
ಬಹುಮುಖದ ಮನವ,
ಶುದ್ಧ ಸುಜ್ಞಾನ ಸದ್ಬೋಧೆಯಿಂದ ಏಕಮುಖವ ಮಾಡಿ,
ಆ ಮನವ ಮಹಾಲಿಂಗ ಪದದಲ್ಲಿ ಸಂಯೋಗವ ಮಾಡಿ,
ಮನೋಭ್ರಾಂತಿಯನಳಿದ ನಿಭ್ರಾಂತನ
ಮಹೇಶ್ವರನೆಂಬೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೮ ॥

೬೪೫

ಕೊರಡು ಕೊನರಾಗಬಲ್ಲುದೆ?.
ಬರಡು ಹಯನಾಗಬಲ್ಲುದೇ ಅಯ್ಯಾ?.
ಕುರುಡಗೆ ಕನ್ನಡಿಯ ತೋರಿದಡೆ ನೋಡಬಲ್ಲನೆ?.
ಮೂಗಗೆ ರಾಗವ ಪೇಳಿದರೆ ಹಾಡಬಲ್ಲನೆ ಅಯ್ಯ?.
ಹೇಗ ಬುದ್ಧಿಯ ಬಲ್ಲನೇ ಅಯ್ಯ?.
ಲೋಗರಿಗೆ ಉಪದೇಶವ ಹೇಳಿದರೆ
ಶಿವಸತ್ಪಥವ ಹಾದಿಯ ಬಲ್ಲರೇ ಅಯ್ಯ?.
ಇದು ಕಾರಣ,
ಶಿವ ಸತ್ಪಥದ ಆಗೆಂಬುದು ಶಿವಜ್ಞಾನಸಂಪನ್ನಂಗಲ್ಲದೆ
ಸಾಧ್ಯವಲ್ಲ ಕಾಣ.
ಅಸಾಧ್ಯವಸ್ತುವಿನೊಳಗಣ ಐಕ್ಯ
ಅವಿವೇಕಿಗಳಿಗೆ ಅಳವಡುವುದೇ ನಮ್ಮವರಿಗಲ್ಲದೆ?,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬೯ ॥

೬೪೬

ಕೆರೆಯೊಡೆದ ಬಳಿಕ ತೂಬು ತಡೆಯಬಲ್ಲುದೇ?.
ಒಡೆದ ಮಡಕೆಗೆ ಒತ್ತುಮಣ್ಣಕೊಟ್ಟರೆ ನಿಲಬಲ್ಲುದೇ ಅಯ್ಯ?.
ಮುತ್ತೊಡೆದರೆ ಪತ್ತಬಲ್ಲುದೇ?.
ಸುರಚಾಪ ನಿರ್ಘರವಾಗಬಲ್ಲುದೇ ಅಯ್ಯ?.
ಚಿತ್ತವೊಡೆದರೆ ಭಕ್ತಿ ನೆಲೆಗೊಳ್ಳದು.
ಭಕ್ತಿ ಬೀಸರವಾದರೆ, ಮುಕ್ತಿಯೆಂಬುದು ಎಂದಿಗೂ ಇಲ್ಲ ಕಾಣ.
ಇದು ಕಾರಣ,
ಚಿತ್ತ ಲಿಂಗವನಪ್ಪಿ ಒಡೆಯದೆ,
ಭಕ್ತಿ ಬೀಸರವೊಗದೆ,
ನಿಮ್ಮ ಕೂಡಿ, ನಿತ್ಯ ನಿರ್ಮುಕ್ತನಾದೆನು ಕಾಣ.
ಎಲ್ಲರ ಪರಿಯಲ್ಲ , ಎನ್ನ ಪರಿ ಬೇರೆ ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೦ ॥

೬೪೭

'ಲಿಂಗಮಧ್ಯೇ ಜಗತ್‌ಸರ್ವಂ' ಎಂದುದಾಗಿ-
ಜಗವ ಹೊರಗಿರಿಸಿ, ಲಿಂಗವನೊಳಗಿರಿಸಿಕೊಂಡು
ಲಿಂಗ ಪ್ರೇಮಿಯಾದ ನಿರುತನು
ಜಗ ತೋರುವಲ್ಲಿಯೂ ಅಡಗುವಲ್ಲಿಯೂ
ತೋರಿಯಡಗದೆ ಅನುಪಮಮಹಿಮನಯ್ಯ, ಮಹೇಶ್ವರನು.
ಜಗದ ಒಳಹೊರಗೆ ಸರ್ವ ವ್ಯಾಪಕನಾದ
ಪರಿಪೂರ್ಣ ಸರ್ವಗತನಯ್ಯ ಲಿಂಗೈಕ್ಯನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೧ ॥

## ಐಕ್ಯನ ಪ್ರಸಾದಿ

೬೪೮

ಉದಯ ಮುಖದ ಪ್ರಸಾದ ಸದಮಲದ ಬೆಳಗೇ
ಸದ್ರೂಪವಾಗಿ ಸರ್ವಾಂಗವನೊಳಕೊಂಡಿತ್ತು ನೋಡ.
ಆ ಪ್ರಸಾದ ಸರ್ವಾಂಗವನೊಳಕೊಂಡು ಮೂರ್ತಿಯಾಗಿ
ಆ ಪ್ರಸಾದವೆ ತದಾಕಾರವಾಗಿ ನಿಲ್ಲಲು,
ಆ ಪ್ರಸಾದದೊಳಗೆ ಆ ಅಂಗ ಬಯಲಾಯಿತ್ತು ನೋಡ.

ಮಧ್ಯಾಹ್ನ ಮುಖದ ಪ್ರಸಾದ
ಶುದ್ಧ ಸ್ವಯಂಜ್ಯೋತಿ ಚಿದ್ರೂಪವಾಗಿ ಮನವನೊಳಕೊಂಡಿತ್ತು.
ಆ ಪ್ರಸಾದದಲ್ಲಿ ಆ ಮನ ಬಯಲಾಯಿತ್ತು ನೋಡ.
ಅಸ್ತಮಯ ಮುಖದ ಪ್ರಸಾದ ಪ್ರಸನ್ನಿಕೆ
ಶತಕೋಟಿ ಸೋಮ ಸೂರ್ಯರ ಉದಯದಂತೆ
ಆನಂದ ಸ್ವರೂಪವಾಗಿ ಪ್ರಜ್ವಲಿಸುತ್ತಿದೆ ನೋಡ.
ಆ ಪ್ರಸಾದವೆನ್ನ ಭಾವವ ನುಂಗಿತ್ತಾಗಿ,
ಭಾವ ಬಯಲಾಯಿತ್ತು ನೋಡ.
ಭಾವ ಬಯಲಾಯಿತ್ತಾಗಿ,
ಆ ಪ್ರಸಾದ ನಿರ್ಭಾವ ಪ್ರಸಾದತ್ವನೆಯ್ದಿ,
ನಿರ್ವಯಲಾಯಿತ್ತು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೨ ॥

೬೪೯

ಎಡದ ಕೈಯಲ್ಲಿ ಲಿಂಗವ ಹಿಡಿದುಕೊಂಡು,
ಬಲದ ಕೈಯಲ್ಲಿ ಮುದ್ದೆಯ ಮಾಡಿ,
ಉಣ್ಣು ಉಣ್ಣೆಂದು ಊಡಿಸಿದರೆ ಒಲ್ಲದು ಕಾಣಿರಯ್ಯ.
ದೇವರುಂಡಿತೆಂದು ಬಿಗಿಬಿಗಿದು ಕಟ್ಟಿಕೊಂಬರಯ್ಯ.
ದೇವರಿಗೆ ಹಿಪ್ಪೆಯ ತೋರಿ, ರಸವ ನೀವು ಉಂಡು,
ದೇವರನೇಕೆ ದೂರುವಿರಯ್ಯ?.
ದೇವರು ಹೀಂಗೆ ಒಲ್ಲದು.
ಉಂಬ ಕ್ರಮವ ಹೇಳಿಹೆ ಕೇಳಿರಯ್ಯ.
ಇಷ್ಟಲಿಂಗಕ್ಕೆ ರೂಪ ಕೊಟ್ಟಲ್ಲಿ , ನೋಡಿ ಪರಿಣಾಮಿಸುವದಲ್ಲದೆ
ಸವಿದು ಪರಿಣಾಮಿಸುವುದಲ್ಲ.
ಸವಿದು ಪರಿಣಾಮಿಸುವದೆಲ್ಲಿಯೆಂದರೆ;
ಜಿಹ್ವೆಯ ಕೊನೆಯ ಮೊನೆಯಲ್ಲಿ ತಟ್ಟುವ ಮುಟ್ಟುವ
ಷಡುರಸಾನ್ನದ ರುಚಿಯ
ತಾನೆನ್ನದೆ ಲಿಂಗವೇ ಸ್ವೀಕರಿಸುತ್ತದೆಯೆಂಬ ನಿಶ್ಚಯವುಳ್ಳರೆ
ಸವಿದು ಪರಿಣಾಮಿಸುವದಯ್ಯ.
ನಾಸಿಕದ ಕೊನೆಯ ಮೊನೆಯಲ್ಲಿ ವಾಸಿಸುವ
ಷಡ್ವಿಧಗಂಧಂಗಳ ಭೋಗವನರಿದು ಭೋಗಿಸುವದು ಲಿಂಗ ತಾನೆ.
ನೇತ್ರದ ಕೊನೆಯ ಮೊನೆಯಲ್ಲಿ ತಟ್ಟುವ
ಷಡ್ವಿಧರೂಪಿನ ಭೋಗಂಗಳ

ಭೋಗಿಸಿ ಸುಖಿಸುವದು ಲಿಂಗ ತಾನೆ, ನೋಡ.
ತ್ವಕ್ಕಿನ ಕೊನೆಯ ಮೊನೆಯಲ್ಲಿ ಸೋಂಕುವ
ಷಡ್ವಿಧ ಸ್ಪರ್ಶನದ ಭೋಗಂಗಳ
ಭೋಗಿಸಿ ಸುಖಿಸುವದು ಲಿಂಗ ತಾನೆ, ನೋಡ.
ಶ್ರೋತ್ರದ ಕೊನೆಯ ಮೊನೆಯಲ್ಲಿ ತಟ್ಟುವ
ಷಡ್ವಿಧ ಶಬ್ದಂಗಳ ಭೋಗಾದಿಭೋಗಂಗಳ ಭೋಗಿಸಿ ಸುಖಿಸಿ
ಪರಿಣಾಮಿಸುವದು ಲಿಂಗ ತಾನೆ ನೋಡ.
ಭಾವದ ಕೊನೆಯ ಮೊನೆಯಲ್ಲಿ ತೀವಿ ಪರಿಪೂರ್ಣವಾಗಿರ್ಪ
ಷಡ್ವಿಧತೃಪ್ತಿಯ ಭೋಗಾದಿಭೋಗಂಗಳ ಭೋಗಿಸಿ ಸುಖಿಸಿ,
ಪರಿಣಾಮಿಸುವಾತನು ಲಿಂಗದೇವನೆಂಬರಿದು,
ಸರ್ವೇಂದ್ರಿಯಮುಖದಲ್ಲಿ ಬಂದ ಸರ್ವತೋಮುಖಪದಾರ್ಥವ,
ಸರ್ವತೋಮುಖಲಿಂಗಕ್ಕೆ ಅರ್ಪಿಸಿ,
ಸರ್ವಾಂಗವೆಲ್ಲವೂ ಬಾಯಾಗಿ,
ಸರ್ವತೋಮುಖಪ್ರಸಾದವ ಕೊಂಡು,
ಆ ಸರ್ವಜ್ಞಪ್ರಸಾದದೊಳಡಗಿದೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೩ ॥

೬೫೦

ಗರ್ಭದೊಳಗಣ ಶಿಶುವಿಂಗೆ ತಾಯಿ ಉಂಡಲ್ಲಿಯೆ
ಪರಿಣಾಮವಲ್ಲದೆ,
ಬೇರೊಂದೆಡೆಮಾಡಿ ಉಣ್ಣೆಂದರೆ ಉಣ್ಣಬಲ್ಲುದೇ ಅಯ್ಯ?.
ಪ್ರಾಣದೊಳಗೆ ಪ್ರಾಣವಾಗಿಪ್ಪ ಲಿಂಗಕ್ಕೆ, ಆ ಶರಣನುಂಡಲ್ಲಿಯೆ
ತೃಪ್ತಿಯಲ್ಲದೆ,
ಬೇರೆ ಊಡಿಸಿದರೆ ಉಣಬಲ್ಲುದೇ ಅಯ್ಯ?.
ಸಂಯೋಗ ವಿಯೋಗಂಗಗಳಲ್ಲಿ, ತಟ್ಟುವ ಮುಟ್ಟುವ,
ಅಣುಬಿಂದು ಸುಖಾರ್ಥವನು,
ಅರಿವವನು, ಅರ್ಪಿಸುವವನು, ಭೋಗಿಸುವವನು, ನೀನೆಯಲ್ಲದೆ,
ನಾ[ನ]ಲ್ಲ ನೋಡ.
ಲಿಂಗದೊಳಗಿರ್ದು, ಲಿಂಗಕ್ಕೆ ಲಿಂಗವನರ್ಪಿಸಿ,
ಲಿಂಗಪ್ರಸಾದದೊಳಗೆ ಒಡಗೂಡಿ ಮಹಾಪ್ರಸಾದಿಯಾಗಿ,
ಮಹಕ್ಕೆ ಮಹವಾಗಿ, ಪರಕ್ಕೆ ಪರವಾಗಿ,
ಸಾವಧಾನ ಪ್ರಸಾದಿಯಾಗಿರ್ದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೪ ॥

೬೫೧

ತನುವಿನೊಳಗೆ ಲಿಂಗ, ಲಿಂಗದೊಳಗೆ ತನು.
ಮನದೊಳಗೆ ಲಿಂಗ, ಲಿಂಗದೊಳಗೆ ಮನ.
ಭಾವದೊಳಗೆಲಿಂಗ, ಲಿಂಗದೊಳಗೆ ಭಾವ.
ಪ್ರಾಣದೊಳಗೆ ಲಿಂಗ, ಲಿಂಗದೊಳಗೆ ಪ್ರಾಣವಾಗಿರ್ದು,
ಬೇರಿಟ್ಟು ನುಡಿವ ಭಿನ್ನಜ್ಞಾನಿಗಳಿಗೆ ಲಿಂಗವೆಲ್ಲಿಯದೊ?.
ಲಿಂಗವಿಲ್ಲವಾಗಿ ಪ್ರಸಾದವಿಲ್ಲ ;
ಪ್ರಸಾದವಿಲ್ಲವಾಗಿ ಮುಕ್ತಿಯಿಲ್ಲ ನೋಡ.
ಇದು ಕಾರಣ,
ಭಿನ್ನಾಭಿನ್ನವನಳಿದು ನಿನ್ನೊಳಗಡಗಿದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೫ ॥

೬೫೨

ವಾಸನೆಯ ಕೊಂಬುದು ಲಿಂಗದ ನಾಸಿಕ;
ರುಚಿಸುವದು ಲಿಂಗದ ಜಿಹ್ವೆ ;
ನೋಡುವದು ಲಿಂಗದ ನೇತ್ರ ;
ಕೇಳುವದು ಲಿಂಗದ ಶ್ರೋತ್ರ ;
ಸೋಂಕುವದು.ಲಿಂಗ ತ್ವಕ್ಕು ;
ನಡೆವುದು ಲಿಂಗ ತಾನೆ.
ನುಡಿವದು ಲಿಂಗ ತಾನೆ.
ಮನಬೆರಸಿ ಪರಿಣಾಮಿಸುವುದು ಲಿಂಗ ತಾನೆಯೆಂಬ ಭಾವ
ಸಹಭಾಜನವೆಂದೆನಿಸಿಕೊಂಡಿತ್ತಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೬ ॥

೬೫೩

ಅಂಗದ ಕೊನೆಯ ಮೊನೆಯಲ್ಲಿ ಸಂಗಿಸುವುದು
ಲಿಂಗ ತಾನೆಯಯ್ಯ.
ಕಂಗಳ ಕೊನೆಯ ಮೊನೆಯಲ್ಲಿ ಕಾಣುವುದು ಲಿಂಗ ತಾನೆಯಯ್ಯ.
ನಾಸಿಕದ ಕೊನೆಯ ಮೊನೆಯಲ್ಲಿ ವಾಸಿಸುವುದು
ಲಿಂಗ ತಾನೆಯಯ್ಯ.
ಜಿಹ್ವೆಯ ಕೊನೆಯ ಮೊನೆಯಲ್ಲಿ ರುಚಿಸುವುದು
ಲಿಂಗ ತಾನೆಯಯ್ಯ.

ತ್ವಕ್ಕಿನ ಕೊನೆಯ ಮೊನೆಯಲ್ಲಿ ಸೋಂಕುವುದು
ಲಿಂಗ ತಾನೆಯಯ್ಯ.
ಶ್ರೋತ್ರದ ಕೊನೆಯ ಮೊನೆಯಲ್ಲಿ ಕೇಳುವುದು
ಲಿಂಗ ತಾನೆಯಯ್ಯ.
ಭಾವದ ಕೊನೆಯ ಮೊನೆಯಲ್ಲಿ ತೃಪ್ತಿಯಿಂದ
ಪರಿಣಾಮಿಸುವುದು ಲಿಂಗ ತಾನೆಯಯ್ಯ.
ಇದುಕಾರಣ,
ಲಿಂಗ ಮುಂತಲ್ಲದೆ ಸಂಗವ ಮಾಡೆ.
ಲಿಂಗ ಮುಂತಲ್ಲದೆ ಅನ್ಯವ ನೋಡೆ.
ಲಿಂಗ ಮುಂತಲ್ಲದೆ ಅನ್ಯವ ವಾಸಿಸೆ.
ಲಿಂಗ ಮುಂತಲ್ಲದೆ ಅನ್ಯವ ರುಚಿಸೆ.
ಲಿಂಗ ಮುಂತಲ್ಲದೆ ಅನ್ಯವ ಸೋಂಕೆ.
ಲಿಂಗ ಮುಂತಲ್ಲದೆ ಅನ್ಯವ ಕೇಳೆನು.
ಲಿಂಗ ಮುಂತಲ್ಲದೆ ಅನ್ಯವ ಪರಿಣಾಮಿಸೆನು.
ಹೀಂಗೆಂಬ ನೆನಹು ನಿತ್ಯಾನಿತ್ಯ ವಿವೇಕವ್ರತವಯ್ಯಾ ಎನಗೆ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ! ॥ ೭೭ ॥

೬೫೪

ಹೀಂಗೆಂದರಿಯದೆ
ತಾ ನಡೆದೆನೆಂದು, ತಾ ನುಡಿದೆನೆಂದು,
ತಾ ವಾಸಿಸಿದೆನೆಂದು, ತಾ ರುಚಿಸಿದೆನೆಂದು,
ತಾ ಸೋಂಕಿದೆನೆಂದು, ತಾ ಕೇಳಿದೆನೆಂದು, ತಾನೆ ನೆನೆದೆನೆಂದು,
ತಾನೆಂಬುದನೆ ಮುಂದುಮಾಡಿಕೊಂಡು,
ಲಿಂಗವೆಂಬುದನೆ ಹಿಂದುಮಾಡಿಕೊಂಡು,
ಭೋಗಿಸುವ ಭೋಗವೆಲ್ಲವು, ಅಂಗಭೋಗ ಕಾಣಿರೋ.
ಅಂಗದಿಚ್ಛೆಗೆ ಉಂಡು ಲಿಂಗಕ್ಕೆಂಬ
ಅಧಮಜೀವಿಗಳೇನೆಂಬೆನಯ್ಯಾ?,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೮ ॥

೬೫೫

ತನ್ನ ಹೃದಯಕ್ಕೆ ಲಿಂಗದ ಹೃದಯ,
ತನ್ನ ಶ್ರೋತ್ರಕ್ಕೆ ಲಿಂಗದ ಶ್ರೋತ್ರ,

ತನ್ನ ನೇತ್ರಕ್ಕೆ ಲಿಂಗದ ನೇತ್ರ,
ತನ್ನ ತ್ವಕ್ಕಿಗೆ ಲಿಂಗದ ತ್ವಕ್ಕು,
ತನ್ನ ನಾಸಿಕಕ್ಕೆ ಲಿಂಗದ ನಾಸಿಕ,
ತನ್ನ ಜಿಹ್ವೆಗೆ ಲಿಂಗದ ಜಿಹ್ವೆ ಪ್ರತಿರೂಪಕವಾಗಿರ್ದ ಬಳಿಕ,
ಅಂಗವಿದೆಂದು, ಲಿಂಗವಿದೆಂದು,
ಬೇರಿಟ್ಟು ನುಡಿಯಲುಂಟೇ ಅಯ್ಯ?.
ಶರಣನೇ ಲಿಂಗ; ಲಿಂಗವೇ ಶರಣ.
ಇವೆರಡಕ್ಕೂ ಭಿನ್ನವೆಲ್ಲಿಯದೋ ಒಂದೆಯಾದ ವಸ್ತುವಿಂಗೆ?,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭೯ ॥

೬೫೬

ಕಿವಿಯಿಂದ ಕೇಳಿದುದು, ಕಣ್ಣಿಂದ ಕಂಡುದು,
ಘ್ರಾಣದಿಂದ ಘ್ರಾಣಿಸಿದುದು, ಜಿಹ್ವೆಯಿಂದ ಭುಂಜಿಸಿದುದು,
ಸ್ಪರ್ಶದಿಂದ ಮುಟ್ಟಿದುದು, ತೃಪ್ತಿಯಿಂದ ಪರಿಣಾಮಿಸಿದುದು,
ಲಿಂಗವೆಂದೆಂಬುದು ಸಹವರ್ತಿಯೆನಿಸಿಕೊಂಬುದು.
ಒಂದಕೊಂದು ಪ್ರಾಣ ಒಂದನೊಂದು ಕೂಡಿಹುದು ತಂದೆ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೦ ॥

೬೫೭

ಲಿಂಗದೇಹಿ ಶಿವಾತ್ಮಕನು ಲಿಂಗದಾಚಾರದಲ್ಲಿಯೇ ನಡೆವನಯ್ಯ;
ಲೋಕವರ್ತಕನಲ್ಲ.
ಲೋಕಚಾತುರಿಕೆ, ಲೋಕವ್ಯವಹರಣೆಯನನುಕರಿಸಿ ನಡೆವವನಲ್ಲ.
ಶಿವಜ್ಞಾನ ಶಿವಕ್ರಿಯಾಪ್ರಕಾಶವ ಸಂಬಂಧಿಸಿಕೊಂಡು
ಸರ್ವಾಂಗವೂ ಲಿಂಗರೂಪಾಗಿ ಸಮರ್ಪಿಸಿಕೊಂಡು
ಲಿಂಗದೊಡನೆ ಭುಂಜಿಸುತ್ತಿಪ್ಪನಯ್ಯ.
ಶಿವಸ್ಮರಣೆಯಿಂದ ಸ್ವೀಕರಿಸುತ್ತಿಪ್ಪುದೇ
ಸಹಭೋಜನವೆನಿಸಿಕೊಂಡಿತ್ತಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೧ ॥

೬೫೮

ಲಿಂಗಕ್ಕೆ ತನ್ನ ತನುವೇ ಭಾಜನವಾಗಿ,
ಆ ತನುವಿಂಗೆ ಲಿಂಗವೇ ಭಾಜನವಾಗಿ,

ತನುವೆಂಬ ಭಾಜನವಳಿದು ಲಿಂಗವೇ ಭಾಜನವಾಗಿರಬಲ್ಲರೆ
ಅದು ಲಿಂಗಭಾಜನವೆಂಬೆ.
ಮನಕ್ಕೆ ಲಿಂಗವೇ ಭಾಜನವಾಗಿ, ಲಿಂಗಕ್ಕೆ ಮನವೇ ಭಾಜನವಾಗಿ,
ಮನವೆಂಬ ಭಾಜನವಳಿದು, ಮನವೇ ಲಿಂಗಭಾಜನವಾಗಿರಬಲ್ಲರೆ,
ಮನಲಿಂಗಭಾಜನವೆಂಬೆ.
ಪ್ರಾಣಕ್ಕೆ ಲಿಂಗವೇ ಭಾಜನವಾಗಿ,
ಲಿಂಗಕ್ಕೆ ಪ್ರಾಣವೇ ಭಾಜನವಾಗಿ
ಪ್ರಾಣವೆಂಬ ಭಾಜನವಳಿದು,
ಪ್ರಾಣವೇ ಲಿಂಗವಾಗಿರಬಲ್ಲರೆ,
ಪ್ರಾಣಲಿಂಗಭಾಜನವೆಂಬೆ.
ತನುಭಾಜನ ಮನಭಾಜನ ಪ್ರಾಣಭಾಜನ ಇಂತೀ ತ್ರಿವಿಧವು
ಚಿದ್ಭಾಂಡೆಯಲ್ಲಿ ಅಡಗಿ ಚಿದ್ಬ್ರಹ್ಮವೇ ತಾನಾಗಿರಬಲ್ಲರೆ,
ಸಹವರ್ತಿ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೨ ॥

೬೫೯

ಕಾಯಪ್ರಸಾದವ ಎನ್ನ ಕರಸ್ಥಲದಲ್ಲಿ ಕಂಡೆ.
ಅದು ಎನ್ನ ಕಂಗಳ ನುಂಗಿ
ಸರ್ವಾಂಗವು ತಾನಾಗಿ ನಿಂದು
ಪ್ರಜ್ವಲಿಸುತ್ತಿತ್ತು ನೋಡ.
ಪ್ರಾಣಪ್ರಸಾದವ ಎನ್ನ ಮನಸ್ಥಲದಲ್ಲಿ ಕಂಡೆ.
ಅದು ಎನ್ನ ಮನವ ನುಂಗಿತ್ತು ನೋಡ.
ಅನುಭಾವ ಪ್ರಸಾದವ ಎನ್ನಾತ್ಮನ ಕೈಯಲ್ಲಿ ಕಂಡೆ.
ಅದು ಎನ್ನಾತ್ಮನ ನುಂಗಿತ್ತು ನೋಡ.
ಕಾಯಪ್ರಸಾದ ಪ್ರಾಣಪ್ರಸಾದ ಅನುಭಾವಪ್ರಸಾದವೆಂಬ
ಈ ತ್ರಿವಿಧಪ್ರಸಾದವು ಒಂದಾಗಿ,
ಎನ್ನ ಬ್ರಹ್ಮರಂಧ್ರದಲ್ಲಡಗಿ ನಿರ್ಭಾವ ಪ್ರಸಾದವಾಯಿತ್ತು ನೋಡಾ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೩ ॥

೬೬೦

ಆಚಾರಲಿಂಗದ ಪ್ರಸನ್ನತ್ವದಿಂದ ಭಕ್ತ ಬಯಲಾದನು.
ಗುರುಲಿಂಗದ ಪ್ರಸನ್ನತ್ವದಿಂದ ಮಹೇಶ್ವರ ಬಯಲಾದನು.

ಶಿವಲಿಂಗದ ಪ್ರಸನ್ನತ್ವದಿಂದ ಪ್ರಸಾದಿ ಬಯಲಾದನು.
ಜಂಗಮಲಿಂಗದ ಪ್ರಸನ್ನತ್ವದಿಂದ ಪ್ರಾಣಲಿಂಗಿ ಬಯಲಾದನು.
ಪ್ರಸಾದಲಿಂಗದ ಪ್ರಸನ್ನತ್ವದಿಂದ ಶರಣ ಬಯಲಾದನು.
ಮಹಾಲಿಂಗದ ಪ್ರಸನ್ನತ್ವದಿಂದ ಐಕ್ಯ ಬಯಲಾದನು.
ಈ ಷಡ್ವಿಧಲಿಂಗದ ಪ್ರಸನ್ನೇತಿ ಪ್ರಸಾದದಲ್ಲಿ
ಷಡಂಗವು ಸಮರಸವಾದವು.
ಈ ಷಡ್ವಿಧಲಿಂಗದ ಪ್ರಸನ್ನೇತಿ ಪ್ರಸಾದವನ್ನೇ ಪದಾರ್ಥವ ಮಾಡಿ
ಬ್ರಹ್ಮರಂಧ್ರದ ಸಹಸ್ರದಳಕಮಲಕರ್ಣಿಕಾಮಧ್ಯದಲ್ಲಿಪ್ಪ
ಸಚ್ಚಿದಾನಂದ ನಿತ್ಯ ಪರಿಪೂರ್ಣವಪ್ಪ ಘನ ಚೈತನ್ಯವೆಂಬ
ಪರಮ ಚರಲಿಂಗಕ್ಕೆ ಸಮರ್ಪಣವ ಮಾಡಿ
ಆ ಪರಮ ಚರಲಿಂಗದ ಪ್ರಸನ್ನ ಪ್ರಸಾದದೊಳಗೂಡಿ
ನಿರವಯವಾಯಿತ್ತು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೪ ॥

೬೬೧

ಸದ್ಯೋಜಾತನ ಶುದ್ಧ ಪ್ರಸಾದವೆನ್ನ ನಾಸಿಕವ ತುಂಗಿತ್ತಾಗಿ
ಗಂಧಷಡ್ವಿಧ ಬಯಲಾಗಿ
ಗಂಧ ದುರ್ಗಂಧವನರಿಯದು ನೋಡ.
ವಾಮದೇವನ ಒಲುಮೆಯ ಪ್ರಸಾದ ಎನ್ನ ಜಿಹ್ವೆಯ ತುಂಬಿತ್ತಾಗಿ
ಷಡ್ವಿಧ ರಸ ಬಯಲಾಗಿ ಮಧುರ ಆಮ್ರ ಲವಣ ತಿಕ್ತ ಕಟು
ಕಷಾಯವೆಂಬ ಷಡುರಸಾನ್ನದ ರುಚಿಯನರಿಯದು ನೋಡಾ.
ಅಘೋರನ ಅವಿರಳಪ್ರಸಾದ ಎನ್ನ ಕಂಗಳ ತುಂಬಿ
ಷಡ್ವಿಧರೂಪು ಬಯಲಾಗಿ
ಸುರೂಪು ಕುರೂಪೆಂದರಿಯದು ನೋಡ.
ತತ್ಪುರುಷನ ಒಪ್ಪುವ ಪ್ರಸಾದವೆನ್ನ ತ್ವಕ್ಕು ತುಂಬಿತ್ತಾಗಿ
ಸ್ಪರ್ಶನ ಷಡ್ವಿಧ ಬಯಲಾಗಿ ಮೃದು ಕಠಿಣ ಶೀತೋಷ್ಣವೆಂಬ
ಸೋಂಕನರಿಯದು ನೋಡ.
ಈಶಾನ್ಯನ ವಿಮಲಪ್ರಸಾದ ಎನ್ನ ಶ್ರೋತ್ರ ತುಂಬಿತ್ತಾಗಿ
ಶಬ್ದ ಷಡ್ವಿಧ ಬಯಲಾಗಿ ಸುಶಬ್ದ ದುಶ್ಯಬ್ದವನರಿಯದು ನೋಡ.
ಪರಮೇಶ್ವರನ ಪರಮ ಪ್ರಸಾದವೆನ್ನ ಪ್ರಾಣವ ತುಂಬಿ
ಪರಿಣಾಮ ಷಡ್ವಿಧ ಬಯಲಾಗಿ
ತೃಪ್ತಿ ಅತೃಪ್ತಿಯನರಿಯದು ನೋಡ

ಇವೆಲ್ಲವ ಮರೆದು ಮಹಾಘನಪ್ರಸಾದದಲ್ಲಿ ಸಮರಸವಾಯಿತ್ತಾಗಿ,
ಅರ್ಪಿತವನರಿಯದು, ಅನರ್ಪಿತನರಿಯದು.
ಭಾವವನರಿಯದು, ನಿರ್ಭಾವವನರಿಯದು.
ನಿರವಯ ಪ್ರಸಾದವನೆಯ್ದಿ ನಿರ್ವಯಲಾಯಿತ್ತು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೫ ॥

೬೬೨

ನೆಲನಿಲ್ಲದ ನಿರ್ಮಲದ ಚಿದ್ಭೂಮಿಯಲ್ಲಿ
ಸ್ವಯಂ ಜ್ಞಾನಶಿಖಿ ಉದಯವಾಯಿತ್ತು ನೋಡ.
ಆ ಸ್ವಯಂ ಜ್ಞಾನಶಿಖಿ ಊರ್ಧ್ವಲೋಕಕ್ಕೆ ಹೋಗಿ,
ವ್ಯೋಮಾಮೃತ ಪ್ರಸಾದವನುಂಡು,
ನಾಮ ರೂಪು ಕ್ರೀಗಳನಳಿದು ನಿರವಯವಾಯಿತ್ತು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೬ ॥

೬೬೩

ಸೋಮನಾಳದಲ್ಲಿ [ಶುಭ್ರ]ಕಳೆ,
ಪಿಂಗಳನಾಳದಲ್ಲಿ ಸುವರ್ಣಕಳೆ,
ಸುಷುಮ್ನನಾಳದಲ್ಲಿ ಸುಜ್ಞಾನಜ್ಯೋತಿಯ ಬೆಳಗು ನೋಡ.
ಏಳುನೂರೆಪ್ಪತ್ತು ನಾಳದಲ್ಲಿ ಹೊಳೆವುತ್ತಿಪ ಕಾಲಾಗ್ನಿಯ ಕಾಂತಿ.
ನೀಲಲೋಹಿತನ ಪ್ರಸಾದಮುದಯ ತುದಿಮೊದಲಿಲ್ಲ ನೋಡ.
ಆದಿ ಮಧ್ಯಾವಸಾನವಿಲ್ಲದಪ್ರಮಾಣ ಪ್ರಸಾದದಲ್ಲಿ ನಿಷ್ಪತಿಯಾಗಿ
ನಿಜಲಿಂಗೈಕ್ಯನಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೭ ॥

೬೬೪

ನಿತ್ಯ ನಿಜವಸ್ತುವಿನ ಪ್ರಸನ್ನತ್ವ ಸಚ್ಚಿದಾನಂದ ಚಿದ್ಬೆಳಗು
ತತ್ವಬ್ರಹ್ಮಾಂಡವ ನುಂಗಿ
ತತ್ವಬ್ರಹ್ಮಾಂಡದಿಂದತ್ತತ್ತ ತಾನಾದ
ನಿಶ್ಚಿಂತ ನಿರಾಳನ ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೮ ॥

೬೬೫

ಆಚಾರಲಿಂಗ ಸಂಬಂಧಿಯಾದ ಬಳಿಕ
ಪಂಚಭೂತದ ಪ್ರಕೃತಿಕಾಯ ಅಳಿದಿರಬೇಕಯ್ಯ.
ಗುರುಲಿಂಗ ಸಂಬಂಧಿಯಾದ ಬಳಿಕ
ಪಂಚವಿಷಯಂಗಳ ಸಂಚವಂಚನೆಯ ಕೆಡಿಸಿರಬೇಕಯ್ಯ.
ಶಿವಲಿಂಗ ಸಂಬಂಧಿಯಾದ ಬಳಿಕ
ಮಾಯಾಕರ್ಮೇಂದ್ರಿಯದ ಕುಹಕವಳಿದಿರಬೇಕಯ್ಯ.
ಜಂಗಮಲಿಂಗ ಸಂಬಂಧಿಯಾದ ಬಳಿಕ
ಬುದ್ಧೀಂದ್ರಿಯಂಗಳ ಶುದ್ಧಿಯಿಂದಿರಬೇಕಯ್ಯ.
ಪ್ರಸಾದಲಿಂಗ ಸಂಬಂಧಿಯಾದ ಬಳಿಕ
ಅಂತಃಕರಣಚತುಷ್ಟಯ, ಸತ್ವರಜತಮಂಗಳ
ಪ್ರವರ್ತನೆಯ ಮೆಟ್ಟಿ ಮುರಿದಿರಬೇಕಯ್ಯ.
ಮಹಾಲಿಂಗ ಸಂಬಂಧಿಯಾದ ಬಳಿಕ
ಷಡುವರ್ಣ ಧಾತುವನಳಿದು
ವಸ್ತು ರೂಪಾಗಿ ಶುದ್ಧ ನಿರ್ಮಲನಾಗಿ
ತನುತ್ರಯ ಜೀವತ್ರಯ ಅವಸ್ಥಾತ್ರಯ ಪ್ರಕೃತಿತ್ರಯ
ಇಂತೀ ನಾನಾವಿಧಂಗಳನೆಲ್ಲವನು ಒಂದುಮಾಡಿ
ನಾನು ನೀನೆಂಬುಭಯವಿಲ್ಲದೆ
ಜೀವ ಪರಮೈಕ್ಯವಪ್ಪ ಪರಾಪರವೆ ತಾನಾಗಿರಬೇಕಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮೯ ॥

೬೬೬

ಲೋಹವ ಅಗ್ನಿ ವೇಧಿಸಿಕೊಂಡಿಪ್ಪಂತೆ,
ಕಲ್ಲಿನಲ್ಲಿ ಕಳೆ ತುಂಬಿಪ್ಪಂತೆ,
ಸರ್ವಾಂಗವನು ಲಿಂಗಕಳೆ ತುಂಬಿ ಸರ್ವತೋಮುಖವಾಗಿ,
ಮಿಸುನಿಯ ಚಿನ್ನದ ಬೆಳಗಿನಂತೆ ಪಸರಿಸುತ್ತಿಪ್ಪ,
ಹೊಚ್ಚ ಹೊಸ ಬ್ರಹ್ಮವನೊಡಗೂಡಿದ
ಪ್ರಾಣಲಿಂಗೈಕ್ಯವನೇನ ಉಪಮಿಸುವೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೦ ॥

೬೬೭

ಉದ್ದದ ಮೇಲಣ ಕಪಿ, ಬದ್ಧರಸವ ಕರೆಯಲು,
ಬದ್ಧರಸವ ಕುಡಿದು ಸಿದ್ಧರೆಲ್ಲಾ ಪ್ರಳಯವಾದರು ನೋಡಾ.
ಉದ್ದದ ಮೇಲಣ ಕಪಿಗೆ,
ಸಿದ್ಧರಸವನುಣಿಸಬಲ್ಲಾತನಲ್ಲದೆ, ಶಿವಯೋಗಿಯಲ್ಲ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೧ ॥

೬೬೮

ಹರಿಯ ಕೈಯೊಳಗಣ ಗಿಳಿಗೆ, ಬೆಕ್ಕಿನ ಭಯ.
ಗಿಳಿಯೆದ್ದೋಡಿ ಹಾಲ ಕುಡಿಯಲು,
ಹರಿಯ ಕೈ ಮುರಿದು,
ಮಾರ್ಜಾಲಗೆ ಮರಣವಾಯಿತ್ತು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೨ ॥

೬೬೯

ಒಬ್ಬರುತ್ತಮರೆಂಬರು.
ಒಬ್ಬರು ಮಧ್ಯಮರೆಂಬರು.
ಒಬ್ಬರು ಕನಿಷ್ಠರೆಂಬರು.
ಒಬ್ಬರಧಮರೆಂಬರು.
ಒಬ್ಬರು ಕಷ್ಟ ನಿಷ್ಠೂರಿಗಳೆಂಬರು.
ಎಂದರದಕೇನು ಯೋಗಿಗೆ
ವಿನಯ ಕಂಟಕವಲ್ಲದೆ.
ಲೋಕಾರ್ಥಕ್ಕೂ ಪರಮಾರ್ಥಕ್ಕೂ ವಿರುದ್ಧ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೩ ॥

೬೭೦

ಮಳೆಮುಯ್ದರಾಕಾಶ ನೆನೆವುದೇ?.
ಬಿರುಗಾಳಿ ಬೀಸಿದರಾಕಾಶ ನೋವುದೇ?.
ಕಿತ್ತಲಗಿನಿಂದಿರಿದರೆ ಆಕಾಶ ಹರಿವುದೇ?.
ಬಚ್ಚಬರಿಯ ಬಯಲು ಕಟ್ಟು ಕುಟ್ಟಿಗೊಳಗಾಗಬಲ್ಲುದೇ?.
ನಿಶ್ಚಿಂತ ನಿರಾಳನಾದ ನಿಜೈಕ್ಯನ,

ತಥ್ಯ ಮಿಥ್ಯದಿಂದ ನುಡಿವ ತುಚ್ಛರ ನುಡಿ ತಟ್ಟಬಲ್ಲುದೇ?.
ವಸ್ತುವ ವಾಕುಶಾಸ್ತ್ರ ಖಂಡಿಸಬಲ್ಲುದೇ?,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೪ ॥

೬೭೧

ಕಂಡೊಂದ ನುಡಿವುದೀ ಲೋಕ.
ಕಾಣದೊಂದ ನುಡಿವುದೀ ಲೋಕ.
ಹಿಂದೆ ನಿಂದಿಸಿದರೆಂದು ಕುಂದಲಿಲ್ಲ.
ಮುಂದಿ ವಂದಿಸಿದರೆಂದುಬ್ಬಲಿಲ್ಲ.
ವಂದನೆ ನಿಂದನೆಯೆಂಬುದು ಉಪಜೀವಿಗಳಿಗಲ್ಲದೆ,
ಉಪಮಾತೀತನಾದ ಪ್ರಾಣಲಿಂಗೈಕ್ಯನಿಗುಂಟೇ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೫ ॥

೬೭೨

ಕಿಚ್ಚಿಗೂ ನೀರಿಗೂ ಏಕತ್ವವುಂಟೆ?.
ಗಾಳಿಗೂ ಧೂಳಿಗೂ ಏಕತ್ವವುಂಟೆ?.
ಭೂಮಿಗೂ ಆಕಾಶಕ್ಕೂ ಏಕತ್ವವುಂಟೆ?.
ನೀರಿಗೂ ನೆಳಲಿಗೂ ಏಕತ್ವವುಂಟೆ?.
ಕನ್ನಡಿಗೂ ಪ್ರತಿಬಿಂಬಕ್ಕೂ ಏಕತ್ವವುಂಟೆ?.
ತಮಕ್ಕೂ ಬೆಳಕಿಗೂ ಏಕತ್ವವುಂಟೆ?.
ಪ್ರಾಣ ಪರತತ್ವದಲ್ಲಡಗಿದ ಪ್ರಾಣಲಿಂಗೈಕ್ಯಂಗೆ,
ಪ್ರಪಂಚಿನ ಹೊದ್ದಿಗೆಯುಂಟೆ ಹೇಳಾ,?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೬ ॥

೬೭೩

ಮನ ಘನವಸ್ತುವಾದ ಬಳಿಕ,
ಮನ ವಚನ ಕಾಯವೆಂಬ ತ್ರಿಕರಣ ಶುದ್ಧಾತ್ಮನೆಂಬೆ.
ನಿತ್ಯ ಮುಕ್ತನೆಂಬೆ. ನಿರಾಲಂಬಿಯೆಂಬೆ.
ಆತನ ತನು ಶುದ್ಧವಾಗಿ ತನುವೇ ಗುರು;
ಆತನ ಮನ ಶುದ್ಧವಾಗಿ ಮನವೇ ಲಿಂಗ.

ಆತನ ಭಾವ ಶುದ್ಧವಾಗಿ
ಭಾವವೇ ಮಹಾನುಭಾವ ಚರಲಿಂಗ ನೋಡ.
ಇಂತೀ ಜ್ಞಾನವೇ ಗುರು,
ಅರುಹೇ ಶಿವಲಿಂಗ,
ಮಹಾನುಭಾವವೇ ಜಂಗಮ.
ಇಂತೀ ತ್ರಿವಿಧವು, ತನ್ನ ತ್ರಿವಿಧಾತ್ಮ ನೋಡ.
ಜ್ಞಾನ ಗುರುವೆಂದರೆ ತನ್ನ ಜೀವಾತ್ಮ
ಅರುಹೆಂಬ ಶಿವಲಿಂಗವೆಂದರೆ ತನ್ನ ಅಂತರಾತ್ಮ
ಮಹಾನುಭಾವ ಜಂಗಮವೆಂದರೆ ತನ್ನ ಪರಮಾತ್ಮ
ಇಂತೀ ತ್ರಯಾತ್ಮ ಏಕಾತ್ಮವಾದರೆ
ಸಚ್ಚಿದಾನಂದ ನಿರಂಜನ ಪರಾಪರವಸ್ತು ನೀನೇ.
ಅಲ್ಲಿ ನಾ ನೀನೆನಲಿಲ್ಲ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೭ ॥

೬೭೪

ಅಕ್ಕನ ತಮ್ಮನ ಸಂಗದಿಂದ ಹೆತ್ತವ್ವೆ ಹುಟ್ಟಿದಳು ನೋಡ.
ಹೆತ್ತವ್ವೆ ಹುಟ್ಟಲು ಅಕ್ಕನು ತಮ್ಮನು ಅಳಿದರು ನೋಡ.
ಹೆತ್ತವ್ವೆ ಮುತ್ತವ್ವೆಯ ನುಂಗಿ ಪರತತ್ತ್ವವನೆಯ್ದಿದಳು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೮ ॥

೬೭೫

ಆಜ್ಞಾಕರ್ತೃವಿನ ಅಂಗನೆಗೆ
ಮೋಹದ ಮಗಳು ಹುಟ್ಟಿದಳು ನೋಡ.
ಆಕೆಯ ವಿಲಾಸದಿಂದ ಲೋಕಾದಿಲೋಕಂಗಳೆಲ್ಲ
ಉದಯಿಸಿದವು ನೋಡ.
ಆಯಾಕೆ ನಿಂದಲ್ಲೆ ಪ್ರಳಯವಾಗುತ್ತಿಪ್ಪವು ನೋಡ.
ಆ ಲೋಕ ಲೌಕಿಕವನತಿಗಳೆದು,
ಆಕೆಯ ಸಂಗಕ್ಕೆ ಹೊರಗಾದಾತನೇ,
ಏಕಮೇವ ನ ದ್ವಿತೀಯ ಪರಬ್ರಹ್ಮವು.
ತಾನು ತಾನಾದ ಪ್ರಾಣಲಿಂಗೈಕ್ಯನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯೯ ॥

೬೭೬

ಪಿಂಡಾಕಾಶದೊಳು ಅಖಂಡ ಜ್ಞಾನಸೂರ್ಯನುದಯವಾಗಲು,
ಪಿಂಡದೊಳ ಹೊರಗೆ ತಾನಾಗಿ,
ತಂಡತಂಡದ ಭವ ತಿಮಿರವ ಖಂಡಿಸಿತ್ತು ನೋಡ.
ಆ ಅಖಂಡ ಜ್ಞಾನಜ್ಯೋತಿಯಿಂದ ಅಪ್ರಮಾಣಲಿಂಗದಲ್ಲಿ
ನಿಃಪತಿಯಾದಾತನೇ ನಿಜಶರಣನೆಂಬೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೦ ॥

೬೭೭

ಮಹದಾಕಾಶ ಘಟ ಭೇದದಿಂದ
ಘಟಾಕಾಶ ಮಹದಾಕಾಶವಾಗಿ ತೋರಿದರೆ
ಆಕಾಶವೊಂದಲ್ಲದೆರಡುಂಟೇ ಮರುಳೆ?
ಪರಶಿವ ತಾನೆ ತನ್ನ ಶಕ್ತಿಭೇದದಿಂದ ಶರಣ ಲಿಂಗವೆಂದಡೆ
ಶರಣ ಲಿಂಗಕ್ಕೆ ಭಿನ್ನವೆಲ್ಲಿಯದೋ?
ಈ ಶರಣಮತವು ಪ್ರಕೃತಿಯಿಂದಾದ
ದ್ವೈತಾದ್ವೈತ ಮತವಲ್ಲ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೧ ॥

೬೭೮

ಅಹಂ ಬ್ರಹ್ಮವೆಂದೆಂಬ ಜ್ಞಾನಹೀನನಾದ ವಾಗದ್ವೈತಿಯಲ್ಲ.
ಅಹಂ ಭಿನ್ನವೆಂದೆಂಬ ದ್ವೈತ ಪಶುಮತವಲ್ಲ.
ಸ್ವರ್ಗ ಮರ್ತ್ಯ ಪಾತಾಳದೊಳಗೆ ಶರಣ ಲಿಂಗ ಮತ ಬೇರೆ.
ಈ ಶರಣ ಲಿಂಗದ ನಿಲುಕಡೆಯನು
ಪರಶಿವಜ್ಞಾನಿಗಳು ಬಲ್ಲರಲ್ಲದೆ
ಪ್ರಪಂಚ ಜೀವಿಗಳೆಂದೂ ಅರಿಯರು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ! ॥ ೧೦೨ ॥

೬೭೯

ನಿರಾಕಾರ ಪರವಸ್ತು ತಾನೇ
ಸದ್ರೂಪು ಚಿದ್ರೂಪು ಆನಂದ ಸ್ವರೂಪವೆಂದಾಯಿತ್ತು ನೋಡ.

ಸತ್ತೇ ಶರಣಲಿಂಗವೆಂದೆ.
ಚಿತ್ತೇ ಶಕ್ತಿಭಕ್ತಿಯೆಂದೆ.
ಆನಂದವೇ ಹಸ್ತ ಮುಖಪದಾರ್ಥ ಪ್ರಸಾದವೆಂದೆ.
ಹೀಂಗೆಂಬುವದು ವೇದ ಪ್ರಮಾಣವಲ್ಲ ;
ಆಗಮ ಪ್ರಮಾಣವಲ್ಲ ; ಸ್ಮೃತಿ ಪ್ರಮಾಣವಲ್ಲ.
ಅದೇನು ಕಾರಣವೆಂದರೆ,
ಇದರಿಂದ ನಾನರಿದುದಿಲ್ಲ.
ಮತ್ತೇತರಿಂದರಿದೆನೆಂದರೆ,
ಶಿವಪ್ರಸನ್ನೇತಿಪ್ರಸಾದದಿಂದರಿದು ಕಣ್ದೆರೆದು,
ಸಚ್ಚಿದಾನಂದ ನಿತ್ಯ ಪರಿಪೂರ್ಣ
ಪರಶಿವತತ್ತ್ವ ಸ್ವರೂಪವೇ ಶರಣನೆಂಬ ವಾಕ್ಯ ಸತ್ಯ ನೋಡಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೩ ॥

೬೮೦

ಚಿತ್ತೇ ಅಂಗ, ಸತ್ತೇ ಪ್ರಾಣ,
ಆನಂದವೇ ಶರಣನ ಕರಣ ನೋಡ.
ನಿತ್ಯವೇ ಪ್ರಸಾದ.
ಪರಿಪೂರ್ಣವೇ ಸರ್ವಾಂಗದ ಪ್ರಕಾಶ.
ಪರಮಾನಂದವೇ ಪಾದಜಲ ನೋಡ.
ಇದುಕಾರಣ, ಸಚ್ಚಿದಾನಂದ ಸ್ವರೂಪನು ನಿಮ್ಮ ಶರಣನೈ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೪ ॥

೬೮೧

ನಿತ್ಯ ನಿರ್ಗುಣನು ನಿರ್ವಿಕಾರಿ ನಿರ್ವಿಕಲ್ಪ ನಿತ್ಯಾತ್ಮಕನು
'ಏಕಮೇವಾ ನ ದ್ವಿತೀಯ ಪರಾಪರವೆ'
ಶರಣ ಲಿಂಗವೆಂದು ತೋರಿತ್ತು ಕಾಣಾ.
ಎಂದರೆ, ಆ ಅಂಗ ಲಿಂಗಕ್ಕೆ ಭಿನ್ನವೆಲ್ಲಿಯದೋ?
ಅದೆಂತೆಂದಡೆ:
ಚಿನ್ನ ಬಣ್ಣದಂತೆ, ಶಿವಶಕ್ತಿಯಂತೆ,
ಶುದ್ಧ ಪರಾಪರವೆ ಶರಣನು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೫ ॥

೬೮೨

ಮಣ್ಣಿನಿಂದಾದ ಮಡಕೆ, ಚಿನ್ನದಿಂದಾದ ತೊಡಿಗೆ,
ಕಂಚಿನಿಂದಾದ ತಳಿಗೆ ಬಟ್ಟಲು,
ಕಬ್ಬುನದಿಂದಾದ ಕೊಡಲಿ ಕುಡನು
ಮೊದಲಾದವರ ಕಾರ್ಯ ಕಾರಣಕ್ಕೆ ಭಿನ್ನವುಂಟೆ? ಇಲ್ಲವೆಂಬಂತೆ.
ಮಹಾಲಿಂಗದಲ್ಲಿ
ಜ್ಯೋತಿಯಿಂದ ಜ್ಯೋತಿ ಉದಯಿಸಿದಂತೆ
ಉದಯಿಸಿದ ಶರಣಂಗೆ
ಭಿನ್ನವೆಲ್ಲಿಯದೋ ಶರಣಂಗೂ ಲಿಂಗಕ್ಕೂ?
ಅದ್ವೈತಾನಂದದಿಂದ ಸಂಪೂರ್ಣವನುಳ್ಳುದಲ್ಲದೆ
ಅಲ್ಲಿ ಮತ್ತೊಂದು ಸಂದೇಹವುಂಟೆ?
ಅಲ್ಲಿ ಸಂಶಯವ ಕಲ್ಪಿಸುವ ಮಾಯಾಭ್ರಾಂತರ ತೋರದಿರಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೬ ॥

೬೮೩

ನಿತ್ಯ ತೃಪ್ತನಿಗೆ ಹಸಿವಿನ ಭಯವುಂಟೇ?
ಸತ್ಯ ಜ್ಞಾನಿಗೆ ಅಜ್ಞಾನದ ಭಯವುಂಟೇ?
ವಾತ ಪಿತ್ತ ಶ್ಲೇಷ್ಮ ನಷ್ಟವಾದವಂಗೆ
ತಾಪತ್ರಯಾದಿಗಳ ಭಯವುಂಟೇ?
ಸ್ವಯಂಜ್ಯೋತಿಯ ಬೆಳಗನುಳ್ಳಾತನು
ಚಂದ್ರಸೂರ್ಯಾದಿಗಳ ಬೆಳಗನಾಶ್ರಯಿಸುವನೆ?.
ನಿಜದಿಂದ ತನ್ನ ತಾನರಿದು, ತಾನು ತಾನಾದತನು
ಮಾಯದ ಗಜಬಜೆಯ ಹುಸಿಗೆ ಬೆದರುವನೆ ಮಹಾಶರಣನು?,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೭ ॥

೬೮೪

ಗಾಳಿ ಗಂಧವನಪ್ಪಿದಂತೆ, ಬಯಲು ಬಯಲನಪ್ಪಿದಂತೆ,
ಬೆಳಗು ಬೆಳಗನಪ್ಪಿ ಮಹಾ ಬೆಳಗಾದಂತೆ,
ಶರಣ ಲಿಂಗವನಪ್ಪಿ, ಮಹಾಲಿಂಗವೇ ತಾನು ತಾನಾಗಿ,
ನಿರ್ವಯಲಾದನು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೮ ॥

೬೮೫

ಆಚಾರಲಿಂಗ ಗುರುಲಿಂಗ ಶಿವಲಿಂಗ
ಇವು ಮೂರು ಇಷ್ಟಲಿಂಗ.
ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗ
ಇವು ಮೂರು ಪ್ರಾಣಲಿಂಗ.
ಇಷ್ಟಲಿಂಗವು ಸತ್ಕ್ರಿಯಾ ಸ್ವರೂಪು.
ಪ್ರಾಣಲಿಂಗವು ಸುಜ್ಞಾನ ಸ್ವರೂಪು.
ಮತ್ತೆ ಕ್ರಿಯಾ ಸ್ವರೂಪವೇ ಲಿಂಗವು.
ಸುಜ್ಞಾನ ಸ್ವರೂಪವೇ ಜಂಗಮವು.
ಇದು ಕಾರಣ,
ಆಕಾರ ಸ್ವರೂಪವೇ ಲಿಂಗವು;
ನಿರಾಕಾರ ಸ್ವರೂಪವೇ ಜಂಗಮವು.
ಆದಿಯೆ ಲಿಂಗವು; ಅನಾದಿಯೇ ಜಂಗಮವು.
ಇದು ಕಾರಣ,
ಜಂಗಮ ಪ್ರಸಾದ ಲಿಂಗಕ್ಕಲ್ಲದೆ
ಲಿಂಗ ಪ್ರಸಾದ ಜಂಗಮಕ್ಕೆಂಬುದು ಅದು ಅಜ್ಞಾನ ನೋಡ.
ಆದಿಲಿಂಗ ಅನಾದಿಜಂಗಮ ಇವೆರಡು ಒಂದಾಗಿ ನಿಂದ ನಿಲುವು
ನಿರಾಕಾರ ಪರವಸ್ತು.
ಆ ನಿರಾಕಾರ ಪರಸ್ತುವನೊಡಗೂಡಿ
ನಾನು ನಿರಾಳನಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦೯ ॥

೬೮೬

ಕ್ರಿಯಾಸ್ವರೂಪವೇ ಲಿಂಗವೆಂದು,
ಜ್ಞಾನಸ್ವರೂಪವೇ ಜಂಗಮವೆಂದು,
ಜ್ಞಾನಸ್ವರೂಪವಪ್ಪ ಜಂಗಮದ ಪ್ರಸನ್ನೇತಿಪ್ರಸಾದ
ಲಿಂಗಕ್ಕೆ ಜೀವಕಳೆಯೆಂದೆ.
ಜ್ಯೋತಿ ಕರ್ಪುರವ ನೆರೆದಂತೆ, ಅಂಗ ಲಿಂಗದಲ್ಲಡಗಿತ್ತು.
ದೀಪ ದೀಪವ ಬೆರಸಿದಂತೆ, ಪ್ರಾಣ ಜಂಗಮದಲ್ಲಿ ಅಡಗಿತ್ತು.
ಈ ಕ್ರಿಯಾ ಜ್ಞಾನ ಭಾವ ನಿರವಯವಾದವಾಗಿ

ಲಿಂಗವೆನ್ನೆ, ಜಂಗಮವೆನ್ನೆ, ಪ್ರಸಾದವೆನ್ನೆ.
ಇದುಕಾರಣ,
ಕೊಟ್ಟೆನೆಂಬುದೂ ಇಲ್ಲ, ಕೊಂಡೆನೆಂಬುದೂ ಇಲ್ಲ.
ಕೊಡುವುದು ಕೊಂಬುದು ಎರಡೂ ನಿರ್ಲೇಪವಾದ ಬಳಿಕ
ನಾನೆಂಬುದೂ ನೀನೆಂಬುದೂ,
ಏನು ಏನುಯೆಂಬೂದಕ್ಕೆ ತೆರಹಿಲ್ಲದೆ,
ಪರಿಪೂರ್ಣ ಸರ್ವಮಯನಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೧೦ ॥

## ನಿರವಯಸ್ಥಲದ ವಚನ

ಸೂತ್ರ : ಇಂತು ಅಭಿನ್ನಭಾವದಿಂದ ಸಮರಸಭಕ್ತಿಯನಾಚರಿಸಿದ ಲಿಂಗೈಕ್ಯನು ಐಕ್ಯಸ್ಥಲವ ಮೀರಿ ನಿರವಯಸ್ಥಲವನೆಯ್ದಿದನಾಗಿ ಮುಂದೆ ನಿರವಯಸ್ಥಲವಾದುದು.

೬೮೭

ಒಳಗೆ ನೋಡಿದರೆ ಒಳಗೆ ಬಯಲು.
ಹೊರಗೆ ನೋಡಿದರೆ ಹೊರಗೆ ಬಯಲು ನೋಡಾ.
ನೆನೆದಿಹೆನೆಂದರೆ ಮನ ಬಯಲು,
ನೆನೆಸಿಕೊಂಡೆನೆಂದರೆ ನೀನಿಲ್ಲವಾಗಿ
ನಾನೂ ಬಯಲು, ನೀನೂ ಬಯಲು ನೋಡಾ.
ಭಾವಿಸಿಕೊಂಬ ವಸ್ತುವಿಲ್ಲವಾಗಿ
ಭಾವ ಬಯಲೆಂದೆನು ನೋಡಾ.
ಮರಹು ನಷ್ಟವಾಯಿತ್ತಾಗಿ ಅರುಹು ಶೂನ್ಯವಾಯಿತ್ತು ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧ ॥

೬೮೮

ತನುವುಳ್ಳನ್ನಕ್ಕರ ನಿನ್ನ ಸಾವಯನೆಂದೆ
ಮನಪ್ರಾಣಂಗಳುಳ್ಳನ್ನಕ್ಕರ ನಿನ್ನ ಸಾವಯ ನಿರವಯನೆಂದೆ.
ಅನುಭಾವವುಳ್ಳನ್ನಕ್ಕರ ನಿನ್ನ ನಿರವಯನೆಂದೆ.
ನಾನುಳ್ಳನ್ನಕ್ಕರ ನೀನೆಂದೆ.
ನಾ ಸತ್ತ ಬಳಿಕ ನೀನೆಲ್ಲಿಯವನು ಹೇಳ.
ಇದು ಕಾರಣ,
ಸಾವಯನೆನ್ನೆ, ಸಾವಯ ನಿರವಯನೆನ್ನೆ, ನಿರವಯನೆನ್ನೆ.
ನಿರಾಕಾರ ಬಯಲಾದ ಕಾರಣ,
ಪರಾಪರ ವಸ್ತುವೆಂದೆನಲಿಲ್ಲ ಕಾಣಾ ಎರಡಿಲ್ಲದ ನಿರಾಳನ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೨ ॥

೬೮೯

ನಿಶ್ಚಲನೆಂಬ ನಿರ್ದೇಹಿಯ ಮೇಲೆ
ಸಚ್ಚಿದಾನಂದವೆಂಬ ಪರವು ಬಂದೆರಗಿಯೆಯ್ದಿ
ಎಯ್ದೆ ನುಂಗಿತ್ತು ನೋಡ.
ಎಯ್ದಿ ನುಂಗಲಾಗಿ ಕಾರ್ಯನೆನಲಿಲ್ಲ; ಕಾರಣನೆನಲಿಲ್ಲ;
ಪರಮ ಕಾರಣನೆನಲಿಲ್ಲ;
ಜೀವ ಪರಮರೈಕ್ಯವನೊಳಕೊಂಡು ತೀವಿ

ಪರಿಪೂರ್ಣ ಪರಾಪರನೆನಲಿಲ್ಲ.
ಲಕ್ಷ್ಯನೆನಲಿಲ್ಲ; ನಿರ್ಲಕ್ಷ್ಯನೆನಲಿಲ್ಲ; ಅಲಕ್ಷ್ಯನ ಅದ್ವಯನ.
ಶೂನ್ಯನೆನಲಿಲ್ಲ; ನಿಶ್ಶೂನ್ಯನೆನಲಿಲ್ಲ; ಮಹಾಶೂನ್ಯನೆನಲಿಲ್ಲ.
ಏನು ಏನೂ ಎನಲಿಲ್ಲ.
ನಿರಾಕಾರ ಬಯಲು ನಿಶ್ಶಬ್ದಮಯವಾದ ಕಾರಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆಂಬ
ನಾಮ ರೂಪು ಕ್ರೀಗಳು ನಷ್ಟವಾದ ಕಾರಣ
ಏನೂ ಎನಲಿಲ್ಲ ನೋಡಾ. ॥ ೩ ॥

೬೯೦

ಸವಿಕಲ್ಪ ಸತ್ತಿತ್ತು,
ನಿರ್ವಿಕಲ್ಪವೆಂಬ ಗರ್ವವಳಿದು,
ತೆರಹಿಲ್ಲದ ಮಹಾಘನದೊಳಡಗಿತ್ತಾಗಿ.
ಸಾಧ್ಯವಿಲ್ಲ, ಸಾಧಕನಿಲ್ಲ;
ಪೂಜ್ಯನಿಲ್ಲ, ಪೂಜಕನಿಲ್ಲ;
ದೇವನಿಲ್ಲ, ಭಕ್ತನಿಲ್ಲ.
ಇವೇನುಯೇನೂ ಇಲ್ಲವಾಗಿ
ನಾಮನಲ್ಲ, ನಿರ್ನಾಮನಲ್ಲ;
ಸೀಮನಲ್ಲ, ನಿಸ್ಸೀಮನಲ್ಲ;
ಇವೇನುಯೇನೂ ಇಲ್ಲದ ಸರ್ವಶೂನ್ಯನಿರಾಲಂಬವು,
ನಿರ್ವಯಲು ನಿರಾಕಾರ ಪರವಸ್ತು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೪ ॥

೬೯೧

ಮೆಟ್ಟಲಿಲ್ಲದ ಭೂಮಿಯಲ್ಲಿ
ಹುಟ್ಟಲಿಲ್ಲದ ಹೆಮ್ಮರ ಹುಟ್ಟಿತ್ತು ನೋಡ.
ಮೆಟ್ಟಿ ಹತ್ತೆಹೆನೆಂದರೆ ಕೊಂಬಿಲ್ಲ;
ಮುಟ್ಟಿ ಹಿಡಿದಿಹೆನೆಂದರೆ ಮೂರ್ತಿಯಲ್ಲ.
ಅದರಲ್ಲಿ ಕಟ್ಟಣೆಗೆಯ್ದದ ಹಣ್ಣು
ರಸತುಂಬಿ, ತೊಟ್ಟು ಬಿಡದು ನೋಡ.
ತೊಟ್ಟ ಮುಟ್ಟದೆ ಕಟ್ಟಣೆಗೆಯ್ದದ ಹಣ್ಣು ಮುಟ್ಟಿ ಸವಿಯಬಲ್ಲಾತನ
ಹುಟ್ಟರತಾತನೆಂಬೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೫ ॥

೬೯೨

ಕಾಯದ ರೂಪನು ಕಂಗಳು ನುಂಗಿತ್ತು.
ಪ್ರಾಣದ ರೂಪನು ನೆನಹು ನುಂಗಿತ್ತು.
ಭಾವದ ರೂಪನು ಅರುಹು ನುಂಗಿತ್ತು.
ಇವೆಲ್ಲರ ರೂಪನು ನಿರೂಪು ನುಂಗಿತ್ತು,
ಆ ನಿರೂಪ ಸ್ವರೂಪೀಕರಿಸಿ ನಾ ನುಂಗಿದೆನು.
ಆ ನಿರೂಪು ಸ್ವರೂಪವೆರಡೂ ಬಯಲು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೬ ॥

೬೯೩

ಅಂಗವಿಲ್ಲದ ಮಂಗಳಾಂಗಿಯ ಮನದಲ್ಲಿ,
ಶಿವಲಿಂಗದುದಯವ ಕಂಗಳಿಲ್ಲದೆ ಕಂಡು,
ಅಂಗವಿಲ್ಲದೆ ಸಂಗವ ಮಾಡಿ,
ನಿಸ್ಸಂಗಿಯಾಗಿ ಸರ್ವಸಂಗಕ್ಕೆ ಹೊರಗಾಗಿ,
ನಿರ್ವಯಲ ಬೆರಸಲು
ಮಂಗಳ ಮಂಗಳವೆನುತ್ತಿಪ್ಪ
ಮಹಾಗಣಂಗಳ ಸಂಗದಲ್ಲಿ ಮೈಮರೆದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೭ ॥

೬೯೪

ಶಾಂಭವಲೋಕದ ಕುಂಭಿನಿಯುದರದ ಮೇಲೆ
ಅಂಗನೆ ಅರುದಿಂಗಳ ಹಡೆದಳು ನೋಡ.
ಅರುದಿಂಗಳ ಅದಾರನೂ ಅರಿಯದೆ
ನಿರ್ವಯಲನೆ ಅರಿವುತ್ತರಿವುತ್ತ ಬೆರಗಾಗಲು
ಕುಂಭಿನಿಯುದರದಂಗನೆ ಸತ್ತುದ ಕಂಡು
ಇಹಲೋಕ ಪರಲೋಕ ಆವ ಲೋಕವ ಹೊಗದೆ
ಲೋಕಶ್ರೇಷ್ಠವಲ್ಲವೆಂದು
ದೇಹವಿಲ್ಲದ ದೇವನ ಉದರವ ಬಗೆದು ಹೊಕ್ಕು
ಅಗಣಿತನಪ್ರಮಾಣನಾದ ಲಿಂಗೈಕ್ಯಂಗೆ
ನಮೋ ನಮೋಯೆಂದು ಬದುಕಿದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೮ ॥

೬೯೫

ಅಂಗವಿಲ್ಲದ ನಿರಂಗಿಗೆ ಅಗ್ನಿಯ ಬಳಗದ ಅವಯವಂಗಳು,
ಬ್ರಹ್ಮಕಪಾಲವೇ ಶಿರಸ್ಸಾಗಿಪ್ಪುದು ನೋಡ.

ಅಗ್ನಿಯಂಗದ ಉದರದೊಳಗೆ
ಪರಿಪರಿಯ ರಸದ ಭಾವಿ.
ಆ ರಸದ ಭಾವಿಯ ತುಳಕ ಹೋದವರೆಲ್ಲ
ಅಗ್ನಿಯನುಣ್ಣದೆ, ಆ ರಸವನೆ ಉಂಡು,
ಅಗ್ನಿಯ ಸ್ವರೂಪವಾದರು ನೋಡ.
ಅಗ್ನಿಯ ಸ್ವರೂಪಾದುದ ಕಂಡು
ಕುರುಹಳಿದು ಅರುಹಡಗಿ **ನಿರವಯಲಸಮಾಧಿಯಲ್ಲಿ**
ನಿಂದ ನಿಬ್ಬೆರಗು
ಮೃತ ಗಮನ ರಹಿತನು ನೋಡಾ ಲಿಂಗೈಕ್ಯನು,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೯ ॥

೬೯೬

ಮೂರುಲೋಕದ ಮೋಹಿನಿ
ಆರುಲೋಕದ ಅಂಗನೆಯರ ಸಂಗವ ಮಾಡಿ,
ಮೂರುಲೋಕದ ಮೋಹವ ಮರೆದು
ತಾ ಸತ್ತಳು ನೋಡ.
ಮೂರುಲೋಕದ ಮೋಹಿನಿ ಸತ್ತುದ ಕಂಡು,
ಆರುಲೋಕದ ಅಂಗನೆಯರು,
ನಾವೀ ಲೋಕದಲ್ಲಿರಲಾಗದೆಂದು ಮೀರಿದ ಲೋಕಕ್ಕೆ ಹೋಗಿ,
ಆರೂಢನ ನೋಡುತ್ತ ನೋಡುತ್ತ ಆರೂರವರೂ ಸತ್ತರು.
ಇದು ಮೀರಿದ ಲಿಂಗೈಕ್ಯ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೦ ॥

೬೯೭

ಏಳು ಕಮಲದ ಮೇಲೆ ಎಲೆಯಿಲ್ಲದ ವೃಕ್ಷದಲ್ಲಿ
ಫಲವಿಲ್ಲದ ಹಣ್ಣಿನ ರುಚಿಯ ತಲೆಯೆ ಬಾಯಾಗುಣಬಲ್ಲರೆ,
ನೆಲ ಬೆಂದಿತ್ತು, ತಲೆ ಸತ್ತಿತ್ತು.
ಇದರ ಹೊಲಬ ಬಲ್ಲಾತನೇ ಪರಶಿವಯೋಗಿ ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೧ ॥

೬೯೮

ಒಂದೆರಡಾಯಿತ್ತೆಂಬುದು ಭ್ರಮೆ.
ಎರಡು ಮೂರಾಯಿತ್ತೆಂಬುದು ತಾ ಭ್ರಮೆ.

ಮೂರು ಆರಾಯಿತ್ತೆಂಬುದು ಮುನ್ನವೆ ಭ್ರಮೆ.
ಎನಗೆ ಆರೂ ಇಲ್ಲ; ಮೂರು ಇಲ್ಲ; ಉಭಯವೂ ಇಲ್ಲ.
ಉಭಯವಳಿದುಳಿದು ಒಂದಾದೆನೆಂಬುದು ಮುನ್ನವೇ ಇಲ್ಲ.
ಮುನ್ನ ಮುನ್ನವೇ, ಪರವಸ್ತು ತಾನಾದ ಕಾರಣ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೨ ॥

೬೯೯

ಅಂಗವುಳ್ಳನ್ನಕ್ಕರ ಲಿಂಗ ಲಿಂಗವೆನುತಿರ್ದೆ.
ಲಿಂಗವುಳ್ಳನ್ನಕ್ಕರ ಅಂಗ ಅಂಗವೆನುತಿರ್ದೆ.
ಅಂಗ ಲಿಂಗವುಳ್ಳನ್ನಕ್ಕರ ಅರುಹು ಅರುಹುಯೆನುತಿರ್ದೆನು.
ಅರುಹು ಅರುಹುಯೆಂಬನ್ನಕ್ಕರ ಭಾವ ನಿರ್ಭಾವಯೆನುತಿರ್ದೆನು.
ಅಂಗ ಲಿಂಗದಲ್ಲಡಗಿ, ಲಿಂಗ ಅಂಗದಲ್ಲಡಗಿ,
ಅಂಗ ಲಿಂಗವೆಂಬುಭಯ ಭಾವವರತಲ್ಲಿ
ಅರುಹು ಅರುಹೆಂಬುವದು ಬರಿದಾಯಿತ್ತು ನೋಡ.
ಅರುಹು ಅರುಹೆಂಬುವದು ಅರಿದಾದಲ್ಲಿ,
ಭಾವ ನಿರ್ಭಾವ ಬಯಲಾಗಿ
ಬಚ್ಚಬರಿಯ ಬಯಲೆಯಾಗಿರ್ದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೩ ॥

೭೦೦

ಗಮನವುಳ್ಳನ್ನಕ್ಕರ ನಿರ್ಗಮನವುಂಟು.
ಗಮನ ನಿರ್ಗಮನವುಳ್ಳನ್ನಕ್ಕರ ಸ್ಥಲ ಕುಳವುಂಟು.
ಸ್ಥಲ ಕುಳವುಳ್ಳನ್ನಕ್ಕರ ಸೋಹ ದಾಸೋಹಮುಂಟು.
ಸೋಹ ದಾಸೋಹವುಳ್ಳನ್ನಕ್ಕರ ಜ್ಞಾನಾಚಾರವುಂಟು.
ಜ್ಞಾನಾಚಾರವುಳ್ಳನ್ನಕ್ಕರ ತಾನಿದಿರುಂಟು.
ಗಮನ ನಿರ್ಗಮನ ನಾಸ್ತಿಯಾದರೆ ಸ್ಥಲ ಕುಳನಾಸ್ತಿ.
ಸ್ಥಲ ಕುಳನಾಸ್ತಿಯಾದರೆ ಸೋಹ ದಾಸೋಹ ನಾಸ್ತಿ.
ಸೋಹದಾಸೋಹ ನಾಸ್ತಿಯಾದರೆ ಜ್ಞಾನಾಚಾರ ನಾಸ್ತಿ.
ಜ್ಞಾನಾಚಾರ ನಾಸ್ತಿಯಾದರೆ ನಾ ನೀನೆಂಬುದು ನಾಸ್ತಿ.
ನಾ ನೀನೆಂಬುದು ನಾಸ್ತಿಯಾದಲ್ಲಿ ಸವಿಕಲ್ಪ ನಿರ್ವಿಕಲ್ಪ ನಾಸ್ತಿ.
ಸವಿಕಲ್ಪ ನಿರ್ವಿಕಲ್ಪ ನಾಸ್ತಿಯಾದಲ್ಲಿ
ಆದ್ಯರೆನಲಿಲ್ಲ, ವೇದ್ಯರೆನಲಿಲ್ಲ, ಸಾಧ್ಯರೆನಲಿಲ್ಲ.
ಏನೂ ಏನೂ ಇಲ್ಲದ ಸರ್ವಶೂನ್ಯ ನಿರಾಲಂಬವು
ನಿರ್ವಯಲಪದವು;

ಆವ ಆವರಣವೂ ಹೊದ್ದದ ಪರಮಾನಂದ ಪದವು
ಇದು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ. ॥ ೧೪ ॥

೭೦೧

ಭಕ್ತಿಸ್ಥಲ ಮಾಹೇಶ್ವರಸ್ಥಲದಲ್ಲಿ ಅಡಗಿ,
ಮಾಹೇಶ್ವರಸ್ಥಲ ಪ್ರಸಾದಿಸ್ಥಲದಲ್ಲಡಗಿ,
ಪ್ರಸಾದಿಸ್ಥಲ ಪ್ರಾಣಲಿಂಗಿಸ್ಥಲದಲ್ಲಡಗಿ,
ಪ್ರಾಣಲಿಂಗಿಸ್ಥಲ ಶರಣಸ್ಥಲದಲ್ಲಡಗಿ,
ಶರಣಸ್ಥಲ ಐಕ್ಯಸ್ಥಲದಲ್ಲಡಗಿ,
ಇಂತೀಷಡಂಗಯೋಗ ಸಮರಸವಾಗಿ
ಷಡುಸ್ಥಲವ ಮೀರಿ ನಿರವಯಸ್ಥಲವನೆಯ್ದಿ,
ಆ ನಿರವಯಸ್ಥಲ ನಿರಾಳದಲ್ಲಡಗಿ,
ಆ ನಿರಾಳ ನಿತ್ಯನಿರಂಜನ ಪರವಸ್ತು ತಾನಾಯಿತ್ತಾಗಿ,
ಕ್ರಿಯಾನಿಷ್ಪತ್ತಿ ಜ್ಞಾನನಿಷ್ಪತ್ತಿ ಭಾವನಿಷ್ಪತ್ತಿ,
ಮಾಡುವ ಕ್ರೀಗಳೆಲ್ಲಾ ನಿಷ್ಪತ್ತಿಯಾಗಿ,
ಅರಿವ ಅರುಹೆಲ್ಲಾ ಅಡಗಿ,
ಭಾವಿಸುವ ಭಾವವೆಲ್ಲ ನಿರ್ಭಾವವಾಗಿ,
ನಿರ್ಲೇಪಕ ನಿರಂಜನ ವಸ್ತು ತಾನು ತಾನಾದಲ್ಲದೆ,
ಧ್ಯಾನಿಸಲಿಕೇನೂ ಇಲ್ಲ.
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭು ತಾನೆ,
ಷಟ್‌ಸ್ಥಲಜ್ಞಾನಸಾರಾಯ ಸ್ವರೂಪನೆಂದು
ಹೇಳಲ್ಪಟ್ಟನು. ॥ ೧೫ ॥

ಸ್ತೋತ್ರ ವಚನ ೯, ಸರ್ವಶೂನ್ಯನಿರಾಲಂಬಸ್ಥಲಕ್ಕೆ ಸೇರಿದ ವಚನ ೭, ಶೂನ್ಯ ಲಿಂಗಸ್ಥಲಕ್ಕೆ ಸೇರಿದ ವಚನ ೫, ನಿಃಕಲಲಿಂಗಸ್ಥಲಕ್ಕೆ ಸೇರಿದ ವಚನ ೧೧, ಮಹಾಲಿಂಗಸ್ಥಲಕ್ಕೆ ಸೇರಿದ ವಚನ ೫, ಅಂಗಲಿಂಗೋದ್ಭವಸ್ಥಲಕ್ಕೆ ಸೇರಿದ ವಚನ ೨೫, ಪಂಚಮೂರ್ತಿಲಿಂಗಸ್ಥಲಕ್ಕೆ ಸೇರಿದ ವಚನ ೧೧, ಪಿಂಡಸ್ಥಲಕ್ಕೆ ಸೇರಿದ ವಚನ ೭, ಪಿಂಡಜ್ಞಾನ ಸ್ಥಲಕ್ಕೆ ಸೇರಿದ ವಚನ ೨೫, ಸಂಸಾರಹೇಯ ಸ್ಥಲಕ್ಕೆ ಸೇರಿದ ವಚನ ೫೧, ಗುರುಕರುಣಸ್ಥಲಕ್ಕೆ ಸೇರಿದ ವಚನ೧೬, ಲಿಂಗಧಾರಣಸ್ಥಲಕ್ಕೆ ಸೇರಿದ ವಚನ ೧೨, ವಿಭೂತಿ ಸ್ಥಲಕ್ಕೆ ಸೇರಿದ ವಚನ ೯, ರುದ್ರಾಕ್ಷಿಸ್ಥಲಕ್ಕೆ ಸೇರಿದ ವಚನ ೩, ಪಂಚಾಕ್ಷರೀಸ್ಥಲಕ್ಕೆ ಸೇರಿದ ವಚನ ೧೫, ಭಕ್ತಿಸ್ಥಲಕ್ಕೆ ಸೇರಿದ ವಚನ ೫೨, ಮಾಹೇಶ್ವರಸ್ಥಲಕ್ಕೆ ಸೇರಿದ ವಚನ ೩೬, ಪ್ರಸಾದಿಸ್ಥಲಕ್ಕೆ ಸೇರಿದ ವಚನ ೩೩, ಪ್ರಾಣಲಿಂಗಿಸ್ಥಲಕ್ಕೆ ಸೇರಿದ ವಚನ ೧೧೦, ಶರಣಸ್ಥಲಕ್ಕೆ ಸೇರಿದ ವಚನ ೧೩೪, ಐಕ್ಯಸ್ಥಲಕ್ಕೆ ಸೇರಿದ ವಚನ ೧೧೦, ನಿರವಯಸ್ಥಲಕ್ಕೆ ಸೇರಿದ ವಚನ ೧೫.

**ಅಂತುಸ್ಥಲ ೨೧ಕ್ಕಂ ವಚನ ೭೦೧ಕ್ಕಂ ಮಂಗಳಂ**

# ಘನಲಿಂಗಿದೇವರ ವಚನಗಳು

ಅವ್ಯಾಜ್ಯಾತ್ಮ ಸ್ವರೂಪಾಯ
ಶಿವಭಾವ ಪ್ರದಾಯಿನೇ
ನಮಸ್ಸದ್ಗುರುನಾಥಾಯ
ಷಟ್ಸ್ಥಲಬ್ರಹ್ಮ ಮೂರ್ತಯೇ

ಇಂತಪ್ಪ ಷಟ್ಸ್ಥಲಬ್ರಹ್ಮಿಯೆನಿಸುವ **ತೋಂಟದ** ಸಿದ್ಧಲಿಂಗಪ್ರಭುವಿನ ಕರುಣಪ್ರಸಾದಮಂ ಪಡದು ಘನಲಿಂಗಿಯದೇವರು ತಮ್ಮ ಸ್ವಯಲಿಂಗಾನುಭಾವದಿಂದ ಹಾಡಿದ ವಚನ-

೭೦೨

ಮರ್ತ್ಯದ ಬೀಜವ ಬಿತ್ತಿ ಕುಡಿಯೊಡೆಯದ ಮುನ್ನ
ಕತ್ತಲೆ ಬೆಳಗು ವಿಸ್ತರಿಸಿ ತೋರ್ಪುದರತ್ತಲೆ
ನಿನ್ನ ಚಿದಂಶಿಕನಪ್ಪ ಶರಣಂಗೆ
ಭೂತಳದ ಭೋಗವನೋತು ಬಳಸೆಂದು
ಪ್ರೀತಿಯಿಂದ ಕಲ್ಪಿಸಿಕೊಡುವರೆ ಅಯ್ಯ?
ರಾಜಹಂಸನಿಗೆ ಅಮೃತಾಹಾರವನಿಕ್ಕಬೇಕಲ್ಲದೆ
ಗರುತ್ಮನ ಆಹಾರವನಿಕ್ಕುವರೆ ಅಯ್ಯ?
ಅದೆಂತೆನಲು
ಅವನಿಯ ಭೋಗಕ್ಕೆ ಅತಿಮಿಗಿಲೆನಿಸಿಕೊಂಬುದು
ಮಜ್ಜನ ಭೋಜನ ಅನುಲೇಪನ
ಆಭರಣ ವಸ್ತ್ರ ತಾಂಬೂಲವಯ್ಯ.
ಇದಕ್ಕೆ ನೂರ್ಮಡಿ ಮಿಗಿಲೆನಿಸಿಕೊಂಬುದು
ಸುದತಿಯರ ಮೃದುನುಡಿ ತೆಕ್ಕೆ ಚುಂಬನ
ಸುರತಸಂಭ್ರಮದ ಲೀಲಾವಿನೋದವಯ್ಯ.
ಆ ಸರಸ ಲೀಲಾವಿನೋದದ ಬಗೆಯ ಹೇಳಲಂಜುವೆನಯ್ಯ.
ಹೇಳುವೆ - ನೀನು ಮಾಂಕೊಳದಿರಯ್ಯ.
ಹೇಲಕುಳಿಯೊತ್ತಿನ ಉಚ್ಚೆಯ ಬಚ್ಚಲು.

ಪಡುಕುನಾರುವ ಕೀವು ತುಂಬಿದ ಹಳೆಯ ಗಾಯ.
ಕೋಲುಕುಕ್ಕುವ ತೊಗಲು ಪಡುಗ
ಆ ಪಡುಗದ ಸೊಗಸು ಮಾನವರ ತಲೆಗೇರಿ
ಮುಂದಲ ಕಾಲಿನಲಿ ಅಮರ್ದಪ್ಪಿ ಪಿಡಿದು
ಹೆಣ್ಣುನಾಯ ಬಾಯಲೋಳೆಯ
ಗಂಡುನಾಯಿ ಚಪ್ಪರಿದು ನೆಕ್ಕಿಕೊಳುತ್ತ
ಬಾಯೊಳಗೆ ಕಿಸುಕುಳದ ಬಾಯನಿಕ್ಕಿ
ಒಡೆಯನೊಂದಾಗಿ ಬಂದ ಹೊಸ ಮನುಷ್ಯರ ಕಂಡ ನಾಯಂತೆ
ಕರುಗಳ ಹಾಕುವ ಕಾಮದೈನ್ಯರ ಕರ್ಮಭೋಗಮಂ ಕಂಡು
ಹರಣ ಹಾರಿ ಮನ ನಾಚಿ ಹೇಸಿ ಹೇಡಿಗೊಂಡು
ಹೊನ್ನು ಹೆಣ್ಣು ಮಣ್ಣೆಂಬ ಮೂರು ಸಂಕಲೆಯ ಕೀಲ
ಜ್ಞಾನಚೀರಣದಿಂದ ತಡೆಗಡಿದು
ವಿರಕ್ತನಾಗಿ ನಿರ್ವಾಣ ಪದಕ್ಕೆ ಕಾಮಿತನಾಗಿ
ಸ್ವಾನುಭಾವದಲ್ಲಿ ಆಚರಿಸುವ ಆಚರಣೆಯಾವುದೆಂದರೆ
ಅಂಗದ ಮೇಲೆ ಲಿಂಗವುಳ್ಳ ಪಟ್ಟದರಾಣಿ ಅರಸುವೆಣ್ಣು
ಅನಾದಿನಾಯಕಿ ಜಾರೆ ಪತಿವ್ರತೆ ಪುಂಡುವೆಣ್ಣು
ಕೆಂಪಿ ಕರಿಕಿ ದಾಸಿ ವೇಶಿ ಮೊಂಡಿ ಮೂಕೊರತಿ ಕುಂಟಿ ಕುರುಡಿ
ಇವರೆಲ್ಲರ ಭಕ್ತಿಯಿಂ ಸಮಾನಂಗಂಡು
ಇವರೆಲ್ಲರಂ ಗುರುವಿನ ರಾಣಿವಾಸಕ್ಕೆ ಸರಿಯೆಂದು ನಿರ್ಧರಿಸಿ
ಊರ್ವಶಿ ರಂಭೆ ತಿಲೋತ್ತಮೆಯರಿಗೆ ಸರಿಯಾದ
ಶಂಖಿನಿ ಪದ್ಮಿನಿಗೆಣೆಯಾದ
ರತಿಯ ಲಾವಣ್ಯಕ್ಕೆ ಸರಿಮಿಗಿಲೆನಿಪ ಚೆಲುವೆಣ್ಣುಗಳ
ಗೋಮಾಂಸ ಸುರೆಗೆ ಸರಿಯೆಂದು-
ಭಾವಿಸಿದೆನಯ್ಯ ನೀ ಸಾಕ್ಷಿಯಾಗಿ.
ಕಬ್ಬುವಿಲ್ಲನಂ ಖಂಡಿಸಿ
ಕಾಸೆಯನಳಿದು ಸೀರೆಯನುಟ್ಟು ಗಂಡು ಹೆಣ್ಣಾಗಿ
ನಿನಗೆ ವಧುವಾದೆನಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೧ ॥

೭೦೩

ಎನ್ನಾತ್ಮನದೊಂದು ಅರಸುತನವ ಅನ್ಯಾಯವ ಕೇಳಯ್ಯ ಗುರುವೆ
ಪಂಚಭಕ್ಷ್ಯ ಪರಮಾಮೃತವ ಸದಾ ದಣಿಯಲುಂಡು
ಒಂದು ದಿನ ಸವಿಯೂಟ ತಪ್ಪಿದರೆ

ಹಲವ ಹಂಬಲಿಸಿ ಹಲುಗಿರಿದು
ಎನ್ನ ಕೊಂದು ಕೂಗುತ್ತಿದೆ ನೋಡಾ.
ಶ್ವಪಚನನುತ್ತಮನ ಕೂಡೆ ಸಂಕಲೆಯನಿಕ್ಕುವರೆ ಅಯ್ಯ?
ಕಲಸಿ ಕಲಸಿ ಕೈಬೆರಲು ಮೊಂಡಾದವು
ಅಗಿದಗಿದು ಹಲ್ಲು ಚಪ್ಪಟನಾದವು
ಉಂಡುಂಡು ಬಾಯಿ ಜಡ್ಡಾಯಿತು
ಹೇತು ಹೇತು ಮುಕುಳಿ ಮುರುಟುಗಟ್ಟಿತು
ಸ್ತ್ರೀಯರ ಕೂಡಿಕೂಡಿ ಶಿಶ್ನ ಸವೆದು ಹೋಯಿತ್ತು
ತನುಹಳದಾಗಿ ಅಲ್ಲಲ್ಲಿಗೆ ಕಣ್ಣು ಪಟ್ಟಿತು
ಮನಹೊಸತಾಗಿ ಹನ್ನೆರಡುವರ್ಷದ ರಾಜಕುಮಾರನಾದೆನು
ಇನ್ನೇವೆನಿನ್ನೇವೆನಯ್ಯ ಎನ್ನ ಕೇಡಿಂಗೆ ಕಡೆಯಿಲ್ಲ
ಕಾಯವಿಕಾರವೆಂಬ ಕತ್ತಲೆ ಕವಿಯಿತು
ಮನೋವಿಕಾರವೆಂಬ ಮಾಯೆ ಸೆರೆವಿಡಿದಳು
ಇಂದ್ರಿಯವಿಕಾರವೆಂಬ ಹುಚ್ಚುನಾಯಿಗಳು ಕಚ್ಚಿ ಕಚ್ಚಿ ಒವರುತ್ತಿವೆ
ಕಾಮ ವಿಕಾರವೆಂಬ ಕಾಳರಕ್ಕಸಿ ಅಗಿದಗಿದು ನುಂಗುತಿಹಳು
ಕಾಯಲಾಗದೆ ದೇವ?
ಸಾವನ್ನಬರ ಸರಸವುಂಟೆ ಲಿಂಗಯ್ಯ?
ಅನ್ಯಸಮಯದ **ಗುಮ್ಮಟನ** ಕೈವಿಡಿದೆತ್ತಿಕೊಂಡೆ
ನಿನ್ನ ಸಮಯದ ಶಿಶು ಬಾವಿಯಲ್ಲಿ ಬೀಳ್ವುದ ನೋಡುತ್ತಿಪ್ಪರೆ
ಕರುಣಿ?
ಮುಕ್ತಿಗಿದೇ ಪಯಣವೋ ತಂದೆ?
ನೀನಿಕ್ಕಿದ ಮಾಯಸೂತ್ರಮಂ ಹರಿದು
ದಶೇಂದ್ರಿಯಂಗಳ ಗುಣವ ನಿವೃತ್ತಿಯಂ ಮಾಡಿ
ಅಂಗಭೋಗ- ಆತ್ಮಭೋಗಂಗಳನಡಗಿಸಿ
ಲಿಂಗದೊಳು ಮನವ ನೆಲೆಗೊಳಿಸಿ
ಎನ್ನ ಪಟದೊಳಗಣ ಚಿತ್ರದಂತೆ ಮಾಡಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೨ ॥

೨೦೪

ಕಪಿ ಕಳ್ಳ ಕುಡಿದು
ಕಡಲ ದಾಂಟುವೆನೆಂದು ಲಂಘಿಸಿ ನಡುನೀರಿನಲ್ಲಿ ಬಿದ್ದು
ಮೀನು ಮೊಸಳೆಗೆ ಆಹಾರವಾದಂತಾಯಿತಯ್ಯ ಎನ್ನ ಬಾಳು.
ಆದಿಯಲ್ಲಿ ನಿನ್ನ ಗರ್ಭಾಂಬುಧಿಯಲ್ಲಿ ಜನಿಸಿ ನಿನ್ನ ನೆನಹಿಲ್ಲದೆ

ಇಷ್ಟಲಿಂಗವನರಿಯದ ಪರಮ ಕಷ್ಟಜೀವಿಗಳ
ಪ್ರಾಣಲಿಂಗವನರಿಯದ ಪರಮಪಾತಕರ
ಭಾವಲಿಂಗವನರಿಯದ ಭವಕ್ಕೊಳಗಾದ ಹುಲುಮಾನವರ
ತಂದೆ-ತಾಯಿ ಬಂಧು- ಬಳಗವೆಂದು ಭಾವಿಸಿದ
ಬಲು ಪಾತಕವೆನ್ನನಂಡಲೆದು ಅಮರ್ದಪ್ಪಿ ಅಗಲದ ಕಾರಣ
ನಿಂದ ಠಾವಿಂಗೆ ನೀರ್ದಳಿವರಯ್ಯ
ಕುಳಿತ ಠಾವಿಂಗೆ ಹೋಮವನಿಕ್ಕಿಸುವರಯ್ಯ
ನಾನು ಬಂದ ಬಟ್ಟೆಯೊಳಗೋರ್ವರು ಬಾರರಯ್ಯ.
ಕಾಲನಾಳಿಂಗೆ ಕಾಲ್ಧುಳಿಯಾದೆನಯ್ಯ.
ಶುನಕ ಸೂಕರಾದಿಗಳ ಬಸಿರಲ್ಲಿ ಬರುವಂತೆ
ಮಾಡಿತಯ್ಯ ಎನ್ನ ಮಾಯೆ.
ಒರ್ವರಿಗೆ ಹುಟ್ಟಿ ಮತ್ತೋರ್ವರಿಗೆ ಅಪ್ಪಾ ಎಂಬ
ನಾಣ್ಣುಡಿಯ ದೃಷ್ಟವೆನಗಾಯಿತಯ್ಯ ಗುರುವೆ.
ಈ ದೋಷಮಂ ಕರುಣದಿಂ ಕಳೆದು ಶುದ್ಧನಂ ಮಾಡಿ
ನಿನ್ನನೇ ಜನನೀ ಜನಕರೆಂಬ
ನಿನ್ನ ಭಕ್ತರು ಬಂಧು ಬಳಗವೆಂಬ ಸುಜ್ಞಾನಮಂ ಕೊಟ್ಟು
ಜಾಗ್ರತ್ಸ್ವಪ್ನ ಸುಷುಪ್ತಿಯಲ್ಲಿ ನಿನ್ನತ್ತಲೆನ್ನ ಮುಖವ ಮಾಡಿ
ಅಕ್ಕರಿಂದ ರಕ್ಷಿಪುದಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೩ ॥

೭೦೫

ಕುನ್ನಿಗೆ ರನ್ನದ ಹಲ್ಲಣವ ಹಾಕಿದಂತೆ
ಹಂದಿಯ ತಂದು ಅಂದಣವನೇರಿಸಿದಂತೆ
ಎನಗೊಲಿದು ಶಿವಲಾಂಛನವ ಕೊಟ್ಟ ಕಾರಣವೇನಯ್ಯ ಗುರುವೆ?
ನಾನು ಲಿಂಗದ್ರೋಹವ ಮಾಡಿ ಜಂಗಮವ ಕೆಡನುಡಿದೆನು.
ಕೈವಿಡಿದ ಸ್ತ್ರೀಯ ಕಡಿಖಂಡವಮಾಡಿದೆ
ಒಡನಾಡಿದವರ ಕಡುಕೋಪದಿನಿರಿದುಕೊಂದೆ
ನಂಬಿದ ಹಳೆಯರ ಪ್ರಾಣಕ್ಕೆ ಮುನಿದೆ
ಪಶುವಿನ ಶಿಶುವ ತಲೆಯೊಡೆಯಿಕ್ಕಿದೆ
ಗೋವ ಕೊಂದವರ ವಹಿಸಿಕೊಂಡೆ
ಪರಧನವ ಕದ್ದೆ ಪರಸ್ತ್ರೀಯರಿಗಳುಪಿದೆ
ಭವಿಹೆಣ್ಣುಗಳ ಕೂಡುಂಡ ಬಾಯಹುಳುಕನಯ್ಯ ನಾನು.
ಇಂತಪ್ಪ ಮಹಾಪಾತಕಂಗಳ ಮಾಡಿದ್ದ

ಹೊಲೆಯನಿವನೆಂದು ನೀನರಿದ ಬಳಿಕ
ಎನಗೆ ವಿರಕ್ತಿಯೆಂಬ ಲಾಂಛನ ಕೊಟ್ಟುದು
ಕೋಪದ ಕಾರಣವಲ್ಲದೆ ಕೃಪೆಯಲ್ಲವಯ್ಯ.
ಅದೇನು ಕಾರಣವೆಂದೊಡೆ
ಬಟ್ಟೆಯ ಬಡಿದ ಕಳ್ಳಬಂಟನ ಭೂಪಾಲರು ಬೇಹನಿಕ್ಕಿ ಹಿಡಿತರಿಸಿ
ನಾಳೆ ಶೂಲಕ್ಕೆ ತೆಗಸುವರೆ
ಇಂದು ಕಳ್ಳಬಂಟಂಗೆ ಪುನುಗು ಜವಾಜಿಯ ಲೇಪಿಸಿ
ಹೂವಿನ ದಂಡೆಯ ಕೊರಳು - ಮಂಡೆ-ಉರದೊಳಗೆ ಅಡ್ಡಹಾಕಿ
ಹಾಲು ತುಪ್ಪ ಹಣ್ಣುಗಳ ಉಣಕೊಟ್ಟು
ಅಡಿಗಡಿಗೆ ಅಡಕೆಲೆಯ ಮೆಲುಕೊಟ್ಟು
ವೀರವೃಂದದ ಹಲಗೆ ಕಹಳೆಯಿಂ
ಅವನ ಮುಂದೆ ಸಂಭ್ರಮಿಸುವ ಬರಿಯುಪಚಾರದಂತೆ
ನಾನು ಮಾಡಿದ ಸರ್ವ ದ್ರೋಹಕ್ಕೆ ನಿನ್ನ ಮನನೊಂದು
ಎನ್ನ ಎಕ್ಕಲನರಕಕ್ಕೆ ನೂಂಕುವುದಕ್ಕೋಸ್ಕರ ಕೊಟ್ಟ
ಸಟೆಯುಪಚಾರಕ್ಕಾದ ಲಾಂಛನವಲ್ಲದೆ
ದಿಟದೊಲವಲ್ಲವಯ್ಯ ದೇವನೆ,
ನಾನು ಮುಂದನರಿಯದಂಧಕನಯ್ಯ
ನಿನ್ನ ಬಾಗಿಲ ಕಾವ ಗೊಲ್ಲನಯ್ಯ
ನಿನ್ನ ಕುದುರೆಯ ಸಾಕುವ ಗೋವನಯ್ಯ
ನಿನ್ನ ಚಮ್ಮಾವುಗೆಯ ಹೊತ್ತು ಬರುವ ಬೋವರ ಲೆಂಕನಯ್ಯ
ನಿನ್ನ ಪಡುಗವ ಹಿಡಿವ ಪಡುಡಿಂಡಿಯಯ್ಯ
ನೀನುಗುಳ್ದ ತ ಬುಲವನುಂಬ ನಿನ್ನಾದಿಯ ಹಳೆಯನಯ್ಯ
ನಿನ್ನಂಗಳದಲ್ಲಿ ಬೊಗಳುವ ಶ್ವಾನನಯ್ಯ
ಎನ್ನ ತಪ್ಪ ಕಾಯಯ್ಯ ಶಿವಧೋ ಶಿವಧೋ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೪ ॥

೨೦೬

ಎಲೆ ಕರುಣೆ,
ಜನನಿಯ ಜಠರಕ್ಕೆ ತರಬೇಡವಯ್ಯ
ತಂದರೆ ಮುಂದೆ ತಾಪತ್ರಯಕ್ಕೊಳಗಾದ
ತರಳೆಯ ದುಃಖದ ಬಿನ್ನಪವ ಕೇಳಯ್ಯ.
ಆಚಾರಲಿಂಗಸ್ವರೂಪವಾದ ಘ್ರಾಣ
ಗುರುಲಿಂಗಸ್ವರೂಪವಾದ ಜಿಹ್ವೆ

ಶಿವಲಿಂಗಸ್ವರೂಪವಾದ ನೇತ್ರ
ಜಂಗಮಲಿಂಗಸ್ವರೂಪವಾದ ತ್ವಕ್ಕು
ಪ್ರಸಾದಲಿಂಗಸ್ವರೂಪವಾದ ಶ್ರೋತ್ರ
ಮಹಾಲಿಂಗಸ್ವರೂಪವಾದ ಪ್ರಾಣ
ಪಂಚಬ್ರಹ್ಮ ಸ್ವರೂಪವಾದ ತನು
ಇಂತಿವೆಲ್ಲವು ಕೂಡಿ ಪರಬ್ರಹ್ಮಸ್ವರೂಪ ತಾನೆಯಾಗಿ
ಆನೆಯ ರೂಪತಾಳಿ ಕೇರಿಯ ನುಸುಳುವ ಹಂದಿಯಂತೆ
ಮೆಟ್ಟುಗುಳಿಯೊತ್ತಿನ ಉಚ್ಚೆಯ ಬಚ್ಚಲೆಂಬ ಹೆಬ್ಬಾಗಿಲ ದಿಡ್ಡಿಯಲ್ಲಿ
ಎಂತು ನುಸುಳುವೆನಯ್ಯ?
ಹೇಸಿ ಹೇಡಿಗೊಂಡೆನಯ್ಯಾ ನೊಂದೆನಯ್ಯ ಬೆಂದೆನಯ್ಯ
ಬೇಗೆವರಿದು ನಿಂದುರಿದೆನಯ್ಯ
ಎನ್ನ ಮೊರೆಯ ಕೇಳಯ್ಯ ಮಹಾಲಿಂಗವೇ
ಎನ್ನ ಭವಕ್ಕೆ ನೂಂಕಬೇಡಯ್ಯ.
ನಾನು ಅನಾದಿಯಲ್ಲಿ ಭೋಗಕ್ಕಾಸೆಯ ಮಾಡಿದ ಫಲದಿಂದ
ಅಂದಿಂದ ಇಂದು ಪರಿಯಂತರ ನಾನಾ ಯೋನಿಯಲ್ಲಿ ಬಂದು
ನಾಯಿಯುಣ್ಣದ ಓಡಿನಲ್ಲಿ ಉಂಡು ನರಗೋಟಲೆಗೊಂಡೆನಯ್ಯ
ಎನಗೆ ಹೊನ್ನು ಬೇಡ ಹೆಣ್ಣು ಬೇಡ ಮಣ್ಣು ಬೇಡ
ಫಲವುಬೇಡ ಪದವುಬೇಡ ನಿಮ್ಮ
ಶ್ರೀಪಾದವನೊಡಗೂಡಲೂಬೇಡ
ಎನಗೆ ಪುರುಷಾಕಾರವೂ ಬೇಡವಯ್ಯ
ಎನ್ನ ಮನ ಒಪ್ಪಿ ಪಂಚೈವರು ಸಾಕ್ಷಿಯಾಗಿ ನುಡಿಯುತ್ತಿಪ್ಪೆನಯ್ಯಾ.
ನಿಮ್ಮಾಣೆ ಎನಗೊಂದ ಕರುಣಿಸಯ್ಯ ತಂದೆ
ಡೋಹರ ಕಕ್ಕಯ್ಯ ಮಾದಾರ ಚೆನ್ನಯ್ಯ ಅಂಬಿಗರ ಚೌಡಯ್ಯ
ಇಂತಪ್ಪ ಶಿವಶರಣರ ಮನೆಯ ಬಾಗಿಲ ಕಾವ ಶುನಕನ ಮಾಡಿ
ಎನ್ನ ನೀ ನಿಲಿಸಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೫ ॥

೭೦೭

ಕೇಳು ಕೇಳಯ್ಯ ಆತ್ಮನೇ
ಎರಡು ಪ್ರಕಾರದ ಆದಿಮಧ್ಯ ಅವಸಾನವ ತಿಳಿದು ನೋಡು
ಕೆಡಬೇಡ ಕೆಡಬೇಡ.
ತಂದೆಯ ದೆಸೆಯಿಂದ ತಾಯಿ ಯೋನಿಚಕ್ರದಲ್ಲಿ ಬಂದುದೇ
ಆದಿ.
ಹೊನ್ನು ಹೆಣ್ಣು ಮಣ್ಣು ನನ್ನದೆಂದು ಹಿಡಿದು
ಷಟ್ಕರ್ಮವನಾಚರಿಸಿ

ಸುಖದುಃಖಂಗಳಲ್ಲಿ ಮುಳುಗಿಪ್ಪುದೇ ಮಧ್ಯ.
ಆತ್ಮನ ಕೃಪೆಯಿಂದ ಅರೆದು ಸಣ್ಣಿಸಿಕೊಂಡು
ಭವಕ್ಕೆ ಸೂಂಕಿಸಿಕೊಳ್ಳುವದೇ ಅವಸಾನ.
ಇವನರಿದು ಇವಕ್ಕೆ ಹೇಹಮಂ ಮಾಡು.
ಮತ್ತೆ ಆದಿ ಮಧ್ಯ ಅವಸಾನಮಂ ತಿಳುಹುವೆನು
ನಾನು ಮಹಾಲಿಂಗದ ಗರ್ಭಾಬ್ಧಿಯಲ್ಲಿ ಬಂದನೆಂಬುದೇ ಆದಿ.
ಲೋಕದ ವ್ಯವಹಾರವ ಸಾಕುಮಾಡಿ
ಇಷ್ಟಲಿಂಗದಲ್ಲಿ ನಿಷ್ಠೆಯಾಗಿ
ಪ್ರಾಣಲಿಂಗದಲ್ಲಿ ಪರಿಣಾಮಿಯಾಗಿ
ಕ್ಷುತ್ತಿಂಗೆ ಭಿಕ್ಷೆ ಶೀತಕ್ಕೆ ರಗಟೆಯಾಗಿ
ಮೋಕ್ಷಗಾಮಿಯಪ್ಪುದೇ ಮಧ್ಯ.
ತನುವ ಬಿಡುವಲ್ಲಿ ಮನವ ಪರಬ್ರಹ್ಮಕ್ಕೆ ಸಮರ್ಪಣ ಮಾಡಿ
ಜನನ-ಮರಣ ಗೆಲುವುದೇ ಅವಸಾನ.
ಇದನರಿದು ಇದಕ್ಕೆ ಮೆಚ್ಚಿ
ಲಿಂಗವನೆ ಸಾಧಿಸು ವೇಧಿಸು.
ಕಪಿಯ ಕೈಯ ಕನ್ನಡಿಯಂತೆ ಕುಣಿದರೆ ಕುಣಿದು
ಏಡಿಸಿದರೆ ಏಡಿಸಿ ಹಲ್ಲುಕಿರಿದರೆ ಹಲ್ಲುಕಿರಿದು
ಮನವಾಡಿದಂತೆ ನೀನಾಡಬೇಡ.
ಮನವಾಡಿದಂತೆ ಆಡಿದವಂಗೆ
ಭಕ್ತಿಯೆಲ್ಲಿಯದು? ಜ್ಞಾನವೆಲ್ಲಿಯದು?
ವೈರಾಗ್ಯವೆಲ್ಲಿಯದು? ವಿರಕ್ತಿಯೆಲ್ಲಿಯದು?
ಮುಕ್ತಿಯೆಲ್ಲಿಯದಯ್ಯಾ?
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೬ ॥

೨೦೮

ಏನೆಂಬೆನೇನೆಂಬೆನಯ್ಯ?
ಮತಿಗೆಟ್ಟು ಮಾನವಲೋಕಕ್ಕೆ ಬಂದೆ.
ಬಂದ ಬರವಿನಲ್ಲಿಯೆ ಭವವೆಂಬ ಭೂಪತಿ ಎನ್ನ ಸೆರೆವಿಡಿದು
ಕಾಲ-ಕಾಮರ ವಶಕ್ಕೆ ಕೊಟ್ಟನಯ್ಯ.
ಕಾಲಂಗೆ ಕಾಯವ ದಂಡವ ತೆತ್ತುದ್ದು ಲೆಕ್ಕವಿಲ್ಲ.
ಮನಸಿಜಂಗೆ ಮನವ ದಂಡವಿತ್ತುದ್ದು ಲೆಕ್ಕವಿಲ್ಲ.
ಹೋದಹೆನೆಂದರೆ ಒಳಕಾವಲವರು ಹೊರಕಾವಲವರು
ಹೊಗಲೀಸರು.

ನನ್ನ ಸೆರೆಯಲ್ಲಿ ನಾನು ಬಿಡಿಸಿಕೊಂಡು ಹೋದಹೆನೆಂದರೆ ನಾನು
ದರಿದ್ರನಯ್ಯ.
ಎನ್ನ ಸೆರೆಯ ಬಿಡಿಸಿಕೊಳ್ಳಿರಯ್ಯ ಬಸವಾದಿ ಪ್ರಮಥರೇ.
ನಿಮ್ಮ ಸೆರಗೊಡ್ಡಿ ಬೇಡಿಕೊಂಬೆನಯ್ಯ.
ಭಕ್ತಿಗೆ ಭಂಡಾರವಾಗಿಪ್ಪ ಸಂಗನ ಬಸವಣ್ಣ.
ಎನಗೆ ಹಾಗತೂಕ ಭಕ್ತಿಯ ಕೊಡಯ್ಯ.
ಪ್ರಸಾದವೆ ಚಿತ್ಪಿಂಡಸ್ವರೂಪವಾದ ಚೆನ್ನಬಸವಣ್ಣ
ಎನಗೆ ಹಾಗತೂಕ ಜ್ಞಾನವ ಕೊಡಯ್ಯ.
ಮಾಯಾಕೋಲಾಹಲನಪ್ಪ ಅಲ್ಲಮಪ್ರಭುವೇ
ಎನಗೆ ಹಾಗತೂಕ ವೈರಾಗ್ಯವ ಕೊಡಯ್ಯ.
ಬೆಟ್ಟದ ಗುಂಡತಂದು ಇಷ್ಟಲಿಂಗದಲ್ಲಿ
ಐಕ್ಯವ ಮಾಡಿದ ಘಟ್ಟಿವಾಳಲಿಂಗವೇ
ಎನಗೆ ಹಾಗತೂಕ ಲಿಂಗವ ಕೊಡಯ್ಯ.
ಈ ನಾಲ್ಕು ಹಾಗ ಕೂಡಿದಲ್ಲಿಯೆ
ಮನಲಿಂಗದಲ್ಲಿ ಒಂದು ಹಣಮಪ್ಪುದು.
ಮನಲಿಂಗದಲ್ಲಿ ಒಂದು ಹಣವಾದಲ್ಲಿಯೇ
ಎನಗೆ ಚಂದ್ರಾಯುಧ ದೊರಕೊಂಬುದು.
ಆ ಚಂದ್ರಾಯುಧವಂ ಪಿಡಿದು
ಒಳಕಾವಲ ನಾಲ್ವರ ಕೊರಳ ಕೊಯ್ದು
ಹೊರಕಾವಲೈವರ ಪರಿಹಂಚುಮಾಡಿ
ಕೂಟದ ಕಾವಲವರ ಪಾಟಿಮಾಡದೆ
ಭವದ ಬಳ್ಳಿಯ ಕೊಯ್ದು
ಕಾಲ ಕಾಮರ ಕಣ್ಣ ಕಳೆದು
ಎಡಬಲದ ಹಾದಿಯ ಹೊದ್ದದೆ
ನಡುವಣ ಸಣ್ಣ ಬಟ್ಟೆಗೊಂಡು
ರತ್ನಾಚಲವನೇರಿ ಅಲ್ಲಿಪ್ಪ ಲಿಂಗಮಂ ಬಲಗೊಂಡು
ನೀವಿದ್ದ ಉನ್ಮನಿಯ ಪುರಕ್ಕೆ ಬಂದು
ನಿಮ್ಮ ಪಡುಗ ಪಾದರಕ್ಷೆಯಂ ಪಿಡಿದು
ನಿಮ್ಮ ಬಾಗಿಲ ಕಾಯ್ದಿಪ್ಪುದೇ ಎನಗೆ ಭಾಷೆ.
ಎನ್ನ ಬಿನ್ನಪವ ನೀವು ಮನವೊಲಿದು ಕರುಣಿಪುದಯ್ಯ
ಇದಕೆ ನೀವೇ ಸಾಕ್ಷಿಯಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಯ್ಯ. ॥ ೭ ॥

೨೦೯

ಎಲೆ ಮನ ಬುದ್ಧಿ ಚಿತ್ತ ಅಹಂಕಾರವೆಂಬ
ಎನ್ನ ಚತುರ್ವಿಧ ಮಂತ್ರಿ ಪ್ರಧಾನರು ಕೇಳಿರಯ್ಯ
ನಾನು ಕೆಟ್ಟು ಭ್ರಷ್ಟನಾಗಿ ಹೋದ ಕರ್ಮದ ಅಂಡಲೆಯ ಬಗೆಯ.
ನಾನು ಸ್ವರ್ಗ ಮರ್ತ್ಯ ಪಾತಾಳದೊಳಗುಳ್ಳ
ಭೋಗರಾಜ್ಯಕ್ಕೆ ಅರಸಾಗಿ ಅನಂತಕಾಲ ಪಟ್ಟವನಾಳಿ
ಎನ್ನ ಚತುರಂಗಬಲಕ್ಕೆ
ಬೇಡಿದ ಪಡಿ ಕಂದಾಯಮಂ ಕೊಟ್ಟುಕೊಟ್ಟು ನಷ್ಟವಾಗಿ
ಎನಗೆ ಎರಡುನಲವತ್ತೆರಡುಲಕ್ಷದಭವರಾಟಳದ ಋಣಬಿದ್ದಿತ
ಆ ಋಣಕ್ಕಂಜಿ ಭೋಗರಾಜ್ಯಮಂ ಬಿಟ್ಟು ದರಿದ್ರನಾದೆನು.
ಎನಗೆ ನೀವು ಮಾಡುವ ರಾಜಕಾರ್ಯದ ಮಣಿಹ ನಿಮಗೆ
ತೆಗೆಯಿತು.

ಎನ್ನ ನಂಬಿ ಕೆಡಬೇಡ ಕೆಡಬೇಡ.
ನಿಮ್ಮ ಪೂರ್ವಾಶ್ರಯಕ್ಕೆ ನೀವು ಹೋಗಿರೆಲೆ.
ಅಜ್ಞಾನತಮಕ್ಕೆ ಜ್ಯೋತಿಃಪ್ರಕಾಶವನುಳ್ಳ
ಸಮ್ಯಜ್ಞಾನವೇ ನೀನು ಕೇಳಯ್ಯ.
ಆತ್ಮನು ಜ್ಞಾನಸ್ವರೂಪನೆಂದು ವೇದಾಗಮಂಗಳು ಸ್ಮೃತಿ ಸಾರುತ್ತಿವೆ.
ನಾನು ಜೀವತ್ವಮಂ ಅಳಿದು ಶರಣತ್ವಮಂ ಕೈವಿಡಿದೆ.
ಎನ್ನೊಳಗೆ ನೀನು
ನನೆಯೊಳಗಣ ಪರಿಮಳದಂತೆ ಹುದುಗಿಪ್ಪೆಯಾಗಿ
ನೀನೂ ನಾನೂ
ಗೋಳಕಾಕಾರಸ್ವರೂಪವಾದ ನಿಷ್ಕಲ ಬ್ರಹ್ಮದಲ್ಲಿ
ಉದಯವಾದ ಸಹೋದರರು.
ಎಂಟುಬೀದಿಯ ಪಟ್ಟಣದ ಚೌದಾರಿಯ ಏಕಾಂತವೀಥಿಯ
ಸುವರ್ಣವರ್ಣದ ಸಿಂಹಾಸನದ ಮೇಲಿಪ್ಪ
ಮನೋನಾಥನೆನಗೆ ಕಾಣಿಸಿ
"ನಿನ್ನ ಶ್ರೀ ಚರಣಮಂ ಎಂದೆಂದೂ
ಪೂಜೆಮಾಡುವ ಭೃತ್ಯ"ನೆಂದು
ಭಯಭಕ್ತಿಯಿಂದ ಬಣ್ಣಿಸಿ
ಎನ್ನ ಮಾಯಾಪಾಶಮಂ ಸುಡುವಂತೆ ಛಲವನ್ನುಂಟುಮಾಡು.

*ಸಂಕೀರ್ಣ ವಚನಸಂಪುಟ : ಆರು / ೩೨೦*

ಚಿದಾಕಾಶದಲ್ಲಿ ಆರು ಮೂರಾಗಿ ಮೂರು ಒಂದಾಗಿ
ಎರಡುವೀಥಿಯ ಮಾಣಿಕ್ಯಪುರದ ಸಂಗಮಸ್ಥಾನವೆಂಬ
ಅರಮನೆಯಲ್ಲಿ ನೆಲೆಸಿಪ್ಪ ಮಹಾರಾಯನ ಮುಂದೆ ಎನ್ನನಿಕ್ಕಿ
"ನಿನ್ನ ಆದಿ ಅನಾದಿಯ ಹಳೆಯ" ನೆಂದು ಬಿನ್ನಪಂಗೈದು
ಕರುಣಾರಸಮಂ ಬೀರಿಸಿ
ಎನಗೆ ಮುಕ್ತಿರಾಜ್ಯಮಂ ಕೊಡುವಂತೆ ಸಂಧಾನಮಂ ಮಾಡು.
ಆ ಮುಕ್ತಿ ರಾಜ್ಯಕ್ಕೆ ಪಟ್ಟಮಂ ಕಟ್ಟಿಸಿ
ಅಭಯ ಹಸ್ತಮಂ ಕೊಡಿಸಿ
ಎನ್ನ ಎಂಬತ್ತುನಾಲ್ಕುಲಕ್ಷ ಭವರಾಟಾಳದ ಋಣವ
ತಿದ್ದುವಂತೆ ಮಾಡಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ.
॥ ೮ ॥

೭೧೦

ಆರುಬಣ್ಣದ ಹದಿನೈದು ದೇಹದ ಕೋಡಗ
ಒಂದು ರತ್ನವ ಮೆಟ್ಟಿಕೊಂಡು
ಒಂದು ರತ್ನವ ಹಿಡಿದುಕೊಂಡು
ಮತ್ತೊಂದು ರತ್ನವ ಮರೆಮಾಡಿಕೊಂಡು
ಮೇರುಪರ್ವತವ ಶಿಖರವನೇರಿತು ನೋಡ.
ಅದು ತಾನಿರ್ದ ಪಂಚವರ್ಣದ ಪಟ್ಟಣವ ಹಾಳುಮಾಡಿ
ಆ ಪಟ್ಟಣದ ಪ್ರಜೆಪರಿವಾರಂಗಳ ಕೈಕಾಲುಗಳಂ ಕೊಯ್ದು
ಮಂತ್ರಿ ನಾಲ್ವರ ಕಡಿಖಂಡವಂ ಮಾಡಿ
ಪ್ರಾಣಸ್ನೇಹಿತರಪ್ಪ ಸಂಗಾತಿಗಳೈವರ ಕಣ್ಣ ಕಳೆದು
ಒಡಹುಟ್ಟಿದಿಬ್ಬರ ತಲೆಯೊಡೆಯನಿಕ್ಕಿ
ತನ್ನಿಂದ ತಾನೇ ಸತ್ತೀತು.
ಭಕ್ತಿಯೆಂಬ ಬಿಲ್ಲ ಹಿಡಿದು
ನಿರಹಂಕಾರವೆಂಬ ತಿರುವನೇರಿಸಿ
ಉರಿಯ ಎಣ್ಣದಲೆಚ್ಚು ಮರ್ಕಟನ ಕೊಂದು
ಆ ರತ್ನಂಗಳಂ ಕೊಂಡು
ಸೂರೆಯ ಬಿಟ್ಟಾತನೀಗ ಲಿಂಗಕ್ಕೆ ಸಲೆ ಸಂದ ಶರಣನಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೯ ॥

೭೧೧

ಅರ್ಥದ ಮೇಲಣ ಆಶೆಯುಳ್ಳನ್ನಕ್ಕರ
ಮರ್ತ್ಯಲೋಕದ ಮಹಾಜಂಜರಿ ಬಿಡವಯ್ಯ.
ನಾನು ಮರ್ತ್ಯಲೋಕದ ಹಂಬಲ ಹರಿದು
ನಿನ್ನ ನಂಬಿ ನಚ್ಚಿದೆನೆಂಬುದಕ್ಕೆ ಪ್ರತ್ಯಕ್ಷಮಂ ತೋರುತಿರ್ಪೆ
ನೋಡಯ್ಯ ಲಿಂಗವೆ.
ಅನರ್ಘ್ಯವಾದ ಮುತ್ತು ರತ್ನಂಗಳು ಹೊಂಗೊಡದಲ್ಲಿ ತುಂಬಿ
ನಾನಿರ್ದ ಏಕಾಂತವಾಸಕ್ಕೆ ಉರುಳಿ ಬರಲು
ಹಾವ ಕಂಡ ಮರ್ಕಟನಂತೆ ನಾನು ಅಡ್ಡಮೊಗವನಿಕ್ಕಿದೆನೆನೆ
ನಿನಗೊಲಿದ ಶರಣನೆಂದು ಭಾವಿಸಿ
ಎನ್ನ ಮರ್ತ್ಯಲೋಕದ ಸಂಕಲೆಯಂ ತರಿದು
ನಿನ್ನ ಗಣಂಗಳ ಒಳಗುಮಾಡು.
ಅದಲ್ಲದೆ
ಅದರ ಮೇಲೆ ಕಿಂಚಿತ್ತು ಆಶೆಯಂ ಮಾಡಲೊಡನೆ
ಚಂದ್ರಸೂರ್ಯಾದಿಗಳುಳ್ಳನ್ನಕ
ಎನ್ನ ಹಂದಿ ನಾಯಿ ಬಸುರಲ್ಲಿ ಹಾಕದಿದ್ದೆಯಾದರೆ
ನಿನಗೆ ಅಲ್ಲಮಪ್ರಭುವಿನಾಣೆ
ಆಳಿನಪಮಾನ ಆಳ್ದಂಗೆ ತಪ್ಪದಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೧೦ ॥

೭೧೨

ಎಲೆ ತಂಗಿ
ಶರಣಸತಿ ಲಿಂಗಪತಿಯಾದ ಪತಿವ್ರತಾಭಾವದ ಚಿಹ್ನೆ
ನಿನ್ನ ನಡೆ ನುಡಿಯಲ್ಲಿ ಹೊಗರುದೋರುತ್ತಿದೆ,
ನಿನ್ನ ಪೂರ್ವಾಪರವಾವುದಮ್ಮ?
ಸುತ್ತೂರು ಸಿಂಹಾಸನದ ಪರ್ವತದೇವರ ಶಿಷ್ಯರು
ಭಂಡಾರಿ ಬಸವಪ್ಪೊಡೆಯ ದೇವರು.
ಆ ಭಂಡಾರಿ ಬಸವಪ್ಪೊಡೆಯದೇವರಶಿಷ್ಯರು
ಕೂಗಲೂರು ನಂಜಯ್ಯದೇವರು.
ಆ ನಂಜಯ್ಯದೇವರ ಕರಕಮಲದಲ್ಲಿ
ಉದಯವಾದ ಶರಣವೆಣ್ಣಯ್ಯಾ ನಾನು.
ಎನ್ನ ಗುರುವಿನ ಗುರು ಪರಮಗುರು

ಪರಮಾರಾಧ್ಯ ತೋಂಟದಾರ್ಯನಿಗೆ
ಗುರುಭಕ್ತಿಯಿಂದೆನ್ನ ಶರಣುಮಾಡಿದರು.
ಆ ತೋಂಟದಾರ್ಯನು
ತನ್ನ ಕೃಪೆಯೆಂಬ ತೊಟ್ಟಿಲೊಳಗೆನ್ನಂ ಮಲಗಿಸಿ
ಪ್ರಮಥಗಣಂಗಳ
ವಚನಸ್ವರೂಪತತ್ವಾರ್ಥವೆಂಬ ಹಾಲು ತುಪ್ಪಮಂ
ಸದಾ ದಣಿಯಲೆರೆದು ಅಕ್ಕರಿಂದ ರಕ್ಷಣೆಯಂ ಮಾಡಿ
"ಘನಲಿಂಗಿ" ಎಂಬ ನಾಮಕರಣಮಂ ಕೊಟ್ಟು
ಪ್ರಾಯಸಮರ್ಥೆಯಂ ಮಾಡಿ
ಸತ್ಯಸದಾಚಾರ ಜ್ಞಾನಕ್ರಿಯೆಗಳೆಂಬ ದಿವ್ಯಾಭರಣಂಗಳಂ ತೊಡಿಸಿ
ಅರುಹೆಂಬ ಬಣ್ಣವ ನಿರಿವಿಡಿದುಡಿಸಿ
ಅರ್ತಿಯ ಮಾಡುತ್ತಿಪ್ಪ ಸಮಯದಲ್ಲಿ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ
ತನಗೆ ನಾನಾಗಬೇಕೆಂದು ಬೇಡಿಕಳುಹಲು
ಎಮ್ಮವರು ಅವಂಗೆ ಮಾತನಿಕ್ಕಿದರಮ್ಮಾ. ॥ ೧೧ ॥

೭೧೩

ಅಯ್ಯ
ಪಂಚತತ್ವಂಗಳ ಪಡೆವ ತತ್ವ ಪ್ರತ್ಯಕ್ಷವಾಗದ ಮುನ್ನ
ಪದ್ಮಜಾಂಡವ ಧರಿಸಿಪ್ಪ ಕಮಠ-ದಿಕ್ಕರಿಗಳಿಲ್ಲದ ಮುನ್ನ
ನಿರ್ಮಲಾಕಾಶವೇ ಸಾಕಾರವಾಗಿ ನಿರಂಜನವೆಂಬ
ಪ್ರಣವವಾಯಿತ್ತಯ್ಯ
ಆ ನಿರಂಜನ ಪ್ರಣವವೆಂಬ ಮರುಜೇವಣಿಯ ಬೀಜ
ಹ್ರೂಂಕಾರ ಮಂಟಪದಲ್ಲಿ ಮೂರ್ತಿಗೊಂಡಿತಯ್ಯ.
ಆ ನಿರಂಜನ ಪ್ರಣವವೆಂಬ ಮರುಜೇವಣಿಯ ಬೀಜ
ತನ್ನ ನಿರಂಜನ ಶಕ್ತಿಯ ನಸುನೆನಹಿಂದ
ಹಂಕಾರ ಚಕ್ಷುವೆಂಬ ಕುಹರಿಯಲ್ಲಿ ಶುದ್ಧಪ್ರಸಾದವೆಂಬ
ಮೊಳೆದೋರಿತ್ತಯ್ಯ.
ಆ ಶುದ್ಧಪ್ರಸಾದವೆಂಬ ಮೊಳೆ
ತನ್ನ ಶೂನ್ಯಶಕ್ತಿಯ ಸೆಜ್ಜೆಯಿಂದ
ಕರ್ಣಿಕಾಪ್ರಕಾಶ ಪಂಚನಾದವನುಳ್ಳ ಷೋಡಶ
ಕಲಾಪುಂಜರಂಜಿತವಪ್ಪ
ಹನ್ನೊಂದನೂರುದಳದ ಪತ್ರದಲ್ಲಿ

ಪ್ರಣವಚಿತ್ರವೊಪ್ಪುತ್ತಿಪ್ಪ ಹ್ರೀಂಕಾರ ಸಿಂಹಾಸನದ ಮೇಲೆ
ಸಿದ್ಧಪ್ರಸಾದವೆಂಬ ಎಳವೆರೆ ತಳಿರಾಯಿತ್ತಯ್ಯ.
ಆ ಸಿದ್ಧಪ್ರಸಾದವೆಂಬ ಎಳವೆರೆ
ತನ್ನ ಶಾಂತಶಕ್ತಿಯ ಚಲನೆಯಿಂದ
ಮೂರುಬಟ್ಟೆಯ ಮೇಲಿಪ್ಪ ಎರಡುಮಂಟಪದ ಮಧ್ಯದಲ್ಲಿ
ಪ್ರಸಿದ್ಧಪ್ರಸಾದವೆಂಬ ಮಹಾವೃಕ್ಷ ಬೀಗಿ ಬೆಳೆಯಿತ್ತಯ್ಯ.
ಆ ಪ್ರಸಿದ್ಧಪ್ರಸಾದವೆಂಬ ಮಹಾವೃಕ್ಷ
ತನ್ನ ಚಿಚ್ಛಕ್ತಿಯ ಲೀಲಾವಿನೋದದಿಂದ
ಪಂಚಶಕ್ತಿಗಳೆಂಬ ನಾಲ್ಕೊಂದು ಹೂವಾಯಿತು.
ಆ ಹೂಗಳ ಮಹಾಕೂಟದಿಂದ
ಪಂಚಲಿಂಗಗಳೆಂಬ ಪಂಚಪ್ರಕಾರದ ಮೂರೆರಡು ಹಣ್ಣಾಯಿತು.
ಆ ಹಣ್ಣುಗಳ ಆದ್ಯಂತಮಂ ಪಿಡಿದು
ಸದ್ಯೋನ್ಮುಕ್ತಿಯಾಗಬೇಕೆಂದು
ಸದಾಕಾಲದಲ್ಲಿ ಬಯಸುತ್ತಿಪ್ಪ ಮಹಾಶಿವಶರಣನು
ತಿಳಿದು ನೋಡಿ ಕಂಡು
ಆರುನೆಲೆಯ ನಿಚ್ಚಣಿಗೆಯ ಆ ತರುಲತೆಗೆ ಸೇರಿಸಿ
ಜ್ಞಾನ ಕ್ರೀಗಳೆಂಬ ದೃಢದಿಂದೇರಿ
ನಾಲ್ಕೆಲೆಯ ಪೀತವರ್ಣದ ಹಣ್ಣ
ಸುಚಿತ್ತವೆಂಬ ಹಸ್ತದಲ್ಲಿ ಪಿಡಿದು
ಆರೆಲೆಯ ನೀಲವರ್ಣದ ಹಣ್ಣ
ಸುಬುದ್ಧಿಯೆಂಬ ಹಸ್ತದಲ್ಲಿ ಪಿಡಿದು
ಹತ್ತೆಲೆಯ ಸ್ಫಟಿಕವರ್ಣದ ಹಣ್ಣ
ನಿರಹಂಕಾರವೆಂಬ ಹಸ್ತದಲ್ಲಿ ಪಿಡಿದು
ಹನ್ನೆರಡೆಲೆಯ ಸುವರ್ಣವರ್ಣದ ಹಣ್ಣ
ಸುಮನವೆಂಬ ಹಸ್ತದಲ್ಲಿ ಪಿಡಿದು
ಹದಿನಾರೆಲೆಯ ಮಿಂಚುವರ್ಣದ ಹಣ್ಣ
ಸುಜ್ಞಾನವೆಂಬ ಹಸ್ತದಲ್ಲಿ ಪಿಡಿದು
ಆಸನಸ್ಥಿರವಾಗಿ ಕಣ್ಮುಚ್ಚಿ
ಜ್ಞಾನಚಕ್ಷುವಿನಿಂ ನಿಟ್ಟಿಸಿ ಕಟ್ಟಕ್ಕರಿಂ ನೋಡಿ
ರೇಚಕ ಪೂರಕ ಕುಂಭಕಂಗೈದು
ಪೆಣ್ದುಂಬಿಯ ನಾದ ವೀಣಾನಾದ ಘಂಟನಾದ
ಭೇರೀನಾದ ಮೇಘನಾದ ಪ್ರಣವನಾದ ದಿವ್ಯನಾದ
ಸಿಂಹನಾದಂಗಳಂ ಕೇಳಿ ಹರುಷಂಗೊಂಡು

ಆ ಫಲಂಗಳಂ ಮನವೆಂಬ ಹಸ್ತದಿಂ ಮಡಿಲುದುಂಬಿ
ಮಾಯಾಕೋಲಾಹಲನಾಗಿ ಪಂಚಭೂತಂಗಳ ಸಂಚವ ಕೆಡಿಸಿ
ದಶವಾಯುಗಳ ಹೆಸಗೆಡಿಸಿ
ಅಷ್ಟಮದಂಗಳ ಹಿಟ್ಟುಗುಟ್ಟಿ
ಅಂತಃಕರಣಂಗಳ ಚಿಂತೆಗೊಳಗುಮಾಡಿ
ಮೂಲಹಂಕಾರವ ಮುಂದುಗೆಡಿಸಿ
ಸಪ್ತವ್ಯಸನಂಗಳ ತೊತ್ತಳದುಳಿದು
ಜ್ಞಾನೇಂದ್ರಿಯಂಗಳ ನೆನಹುಗೆಡಿಸಿ
ಕರ್ಮೇಂದ್ರಿಯಂಗಳ ಕಾಲಮುರಿದು
ತನ್ಮಾತ್ರೆಯಂಗಳ ತೋಳಕೊಯ್ದು,
ಅರಿಷಡ್ವರ್ಗಂಗಳ ಕೊರಳನರಿದು
ಸ್ಫಟಿಕದ ಪುತ್ಥಳಿಯಂತೆ ನಿಜಸ್ವರೂಪಮಾಗಿ-
ಎರಡೆಸಳ ಕಮಲಕರ್ಣಿಕಾಗ್ರದಲ್ಲಿಪ್ಪ
ಪರಬ್ರಹ್ಮದ ಶ್ವೇತಮಾಣಿಕ್ಯವರ್ಣದ ದ್ವಿಪಾದಮಂ
ಸುಜ್ಞಾನವೆಂಬ ಹಸ್ತದಲ್ಲಿ ಪಿಡಿದು
ಓಂಕಾರವೆಂಬ ಮಂತ್ರದಿಂ ಸಂತೈಸಿ
ನೀರ ನೀರು ಕೂಡಿದಂತೆ ಪರಬ್ರಹ್ಮವನೊಡಗೂಡಿ
ಆ ಪರಬ್ರಹ್ಮವೆ ತಾನೆಯಾಗಿ
ಬ್ರಹ್ಮರಂಧ್ರವೆಂಬ ಶಾಂಭವಲೋಕದಲ್ಲಿಪ್ಪ
ನಿಷ್ಕಲ ಪರಬ್ರಹ್ಮದ ನಿರಾಕಾರಪಾದಮಂ
ನಿರ್ಭಾವವೆಂಬ ಹಸ್ತದಿಂ ಪಿಡಿದು
ಪಂಚಪ್ರಸಾದವೆಂಬ ಮಂತ್ರದಿಂ ಸಂತೈಸಿ
ಕ್ಷೀರಕ್ಷೀರವ ಕೂಡಿದಂತೆ ನಿಷ್ಕಲಬ್ರಹ್ಮವನೊಡಗೂಡಿ
ಆ ನಿಷ್ಕಲಬ್ರಹ್ಮವೇ ತಾನೆಯಾಗಿ
ಮೂರುಮಂಟಪದ ಮಧ್ಯದ ಕುಸುಮ ಪೀಠದಲ್ಲಿಪ್ಪ
ಶೂನ್ಯಬ್ರಹ್ಮದ ಶೂನ್ಯಪಾದಮಂ
ನಿಷ್ಕಲವೆಂಬ ಹಸ್ತದಿಂ ಪಿಡಿದು
ಕ್ಷಕಾರವೆಂಬ ಮಂತ್ರದಿಂ ಸಂತೈಸಿ
ಘೃತಘೃತವ ಕೂಡಿದಂತೆ
ಶೂನ್ಯಬ್ರಹ್ಮವನೊಡಗೂಡಿ
ಆ ಶೂನ್ಯಬ್ರಹ್ಮವೇ ತಾನೆಯಾಗಿ-
'ನಿಶಬ್ದಂ ಬ್ರಹ್ಮ ಉಚ್ಯತೇ' ಎಂಬ
ಒಂಬತ್ತು ನೆಲೆಯ ಮಂಟಪದೊಳಿಪ್ಪ

ನಿರಂಜನಬ್ರಹ್ಮದ ನಿರಂಜನಪಾದಮಂ
ಶೂನ್ಯವೆಂಬ ಹಸ್ತದಿಂ ಪಿಡಿದು
ಹ್ರೂಂಕಾರವೆಂಬ ಮಂತ್ರದಿಂ ಸಂತೈಸಿ
ಬಯಲ ಬಯಲು ಬೆರಸಿದಂತೆ
ನಿರಂಜನಬ್ರಹ್ಮವೇ ತಾನೆಯಾಗಿ-
ಮಹಾಗುರು ಸಿದ್ಧಲಿಂಗಪ್ರಭುವಿನ
ಗರ್ಭಾಬ್ಧಿಯಲ್ಲಿ ಜನಿಸಿದ ಬಾಲಕಿಯಯ್ಯ ನಾನು.
ಎನ್ನ ಹೃದಯಕಮಲದೆಂಟು ಮಂಟಪದ
ಚತುಷ್ಪತ್ರಿಕಾ ಮಧ್ಯದ ಪದ್ಮಪೀಠದಲ್ಲಿ
ಎನ್ನ ತಂದೆ ಸುಸ್ಥಿರವಾಗಿ
ಎನಗೆ ಷಟ್ಸ್ಥಲಮಾರ್ಗ-ಪುರಾತರ ವಚನಾನುಭಾವ-
ಭಕ್ತಿ ಜ್ಞಾನ ವೈರಾಗ್ಯವೆಂಬ
ಜೇನುಸಕ್ಕರೆ ಪರಮಾಮೃತವ ತಣಿಯಲುಣಿಸಿದನಯ್ಯ.
ಆ ಜೇನುಸಕ್ಕರೆ ಪರಮಾಮೃತವ ತಣಿಯಲುಣಿಸಲೊಡನೆ
ಎನ್ನ ಬಾಲತ್ವಂ ಕೆಟ್ಟು ಯೌವನಂ ಬಳೆದು ಬೆಡಗು ಕುಡಿವರಿದು
ಮೀಟು ಜವ್ವನೆಯಾದೆನಯ್ಯ ನಾನು.
ಎನಗೆ ನಿಜಮೋಕ್ಷವೆಂಬ ಮನ್ಮಥವಿಕಾರವು
ಎನ್ನನಂಡಲೆದು ಆಳ್ದು ನಿಂದಲ್ಲಿ ನಿಲಲೀಸದಯ್ಯ.
ಅನಂತಕೋಟಿ ಸೋಮಸೂರ್ಯ ಪ್ರಕಾಶವನುಳ್ಳ
ಪರಂಜ್ಯೋತಿಲಿಂಗವೆ
ಎನಗೆ ಶಿವಾನಂದ ಭಕ್ತಿಯೆಂಬ ತಾಲಿಬಂದಿಯ ಕಟ್ಟು.
ಸುಮಂತ್ರವಲ್ಲದೆ ಕುಮಂತ್ರವ ನುಡಿಯೆನೆಂಬ
ಕಂಠಮಾಲೆಯಂ ಧರಿಸು.
ಅರ್ಪಿತವಲ್ಲದೆ ಅನರ್ಪಿತವ ಪರಿಮಳಿಸೆನೆಂಬ
ಮೌಕ್ತಿಕದ ಕಟ್ಟಾಣಿ ಮೂಗುತಿಯನಿಕ್ಕು.
ಸುಶಬ್ದವಲ್ಲದೆ ಅಪಶಬ್ದವ ಕೇಳೆನೆಂಬ
ರತ್ನದ ಕರ್ಣಾಭರಣಂಗಳಂ ತೊಡಿಸು.
ಶರಣತ್ವವನಲ್ಲದೆ ಜೀವತ್ವವನೊಲ್ಲೆನೆಂಬ
ತ್ರಿಪುಂಡ್ರಮಂ ಧರಿಸು.
ಕ್ರೀಯಲ್ಲದೆ ನಿಷ್ಕ್ರೀಯ ಮಾಡೆನೆಂಬ
ಮೌಕ್ತಿಕದ ಬಟ್ಟನಿಕ್ಕು.

ನಿಮ್ಮವರಿಗಲ್ಲದೆ ಅನ್ಯರಿಗೆರಗೆನೆಂಬ
ಕನಕಲತೆಯ ಬಾಸಿಂಗಮಂ ಕಟ್ಟು.
ಸಮ್ಯಜ್ಞಾನವಲ್ಲದ ಅಜ್ಞಾನವ ಹೊದ್ದೆನೆಂಬ
ನವ್ಯದುಕೂಲವನುಡಿಸು.
ಲಿಂಗಾಣತಿಯಿಂದ ಬಂದುದನಲ್ಲದೆ
ಅಂಗಗತಿಯಿಂದ ಬಂದುದಂ ಮುಟ್ಟೆನೆಂಬ
ರತ್ನದ ಕಂಕಣವಂ ಕಟ್ಟು.
ಶರಣಸಂಗವಲ್ಲದೆ ಪರಸಂಗಮಂ ಮಾಡೆನೆಂಬ
ಪರಿಮಳವಂ ಲೇಪಿಸು.
ಶಿವಪದವಲ್ಲದೆ ಚತುರ್ವಿಧಪದಂಗಳ ಬಯಸೆನೆಂಬ
ಹಾಲು ತುಪ್ಪಮಂ ಕುಡಿಸು.
ಪ್ರಸಾದವಲ್ಲದೆ ಭಿನ್ನರುಚಿಯಂ ನೆನೆಯೆನೆಂಬ
ತಾಂಬೂಲವನಿತ್ತು ಸಿಂಗರಂಗೆಯ್ಯಯ್ಯಾ.
ನಿನ್ನ ಕರುಣಪ್ರಸಾದವೆಂಬ ವಸವಂತ ಚಪ್ಪರದಲ್ಲಿ
ಪ್ರಮಥಗಣಂಗಳ ಮಧ್ಯದಲ್ಲಿ
ಎನ್ನ ಮದುವೆಯಾಗಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೧೨ ॥

೭೧೪

ಇನ್ನೇವೆನಿನ್ನೇವೆನೆಲೆ ತಂದೆ
ಹೆಣ್ಣು ಬಾಲೆಯ ಮೊರೆಯ ಕೇಳಯ್ಯ.
ಮುನ್ನ ಪುಟ್ಟಿದ ಒಂಬತ್ತು ಮಕ್ಕಳ ನಗೆನುಡಿಯ ಕೇಳಲಾರೆ.
ಮನೆಯ ಗಂಡನ ಬೆಡಗು ಬಿನ್ನಾಣವ ನೋಡಲಾರೆ.
ನನ್ನ ಸಿರಿಯಲ್ಲಿ ನಾನು ಓಲಾಡಲಾರೆ
ಎನಗೊಂದು ಮಗುವ ಕೊಡಯ್ಯ ಗುರುವೆ.
ಆ ಮಗುವಿನ ಕೈಯಿಂದ ಗಂಡನ ತಲೆಯೊಡೆಯಿಕ್ಕಿಸು.
ಮಕ್ಕಳ ಕೊರಳ ಕೊಯಿಸು.
ಎನ್ನ ದಂಡವ ಕೊಳಿಸು.
ಪಟ್ಟಣಕ್ಕೆ ಹೋಗುವ ಹಾದಿ ಮೂರುಬಟ್ಟೆ ಕೂಡಿದ ಮಧ್ಯದಲ್ಲಿ
ಮಣಿಹವ ಮಾಡುತ್ತಿಪ್ಪ
ಕೈಕಾಲಿಲ್ಲದ ಮೋಟಂಗೆ ಮೆಚ್ಚಿ ಮರುಳಾದ ಪತಿವ್ರತೆಯಯ್ಯ
ನಾನು.

ಎನ್ನ ಕೊಂಡು ಹೋಗಿ ಅವನಿಗೆ ಮದುವೆಯ ಮಾಡಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೧೩ ॥

೭೧೫

ಎನ್ನ ತಂದೆಯ ಬಸುರಲ್ಲಿ ಬಂದಳೆಮ್ಮವ್ವೆ
ಎನ್ನ ತಂಗಿಯರಿಬ್ಬರೂ ಹೆಂಡಿರಾದರೆನಗೆ.
ಎನ್ನ ಸತಿಯರು ಎನ್ನ ಮದವಳಗಿತ್ತಿಯ ಮಾಡಿ
ಎಮ್ಮಪ್ಪಗೆ ಮದುವೆಯ ಮಾಡಿದರು.
ಎನ್ನ ಗಂಡನ ಮನೆಯೊಡವೆಯನೆನ್ನ ಉಗುರುಕಣ್ಣಿನಲ್ಲೆತ್ತಿ
ಒಗತನವ ಮಾಡುವೆನು.
ಎಮ್ಮಕ್ಕನ ಕೈಯಿಂದ ಎನ್ನ ಗಂಡನ ಹೆಂಡತಿಯೆನಿಸಿಕೊಂಬೆನು.
ಎನ್ನ ಗಂಡ ಆಳಲಿ ಆಳದೆ ಹೋಗಲಿ
ಪತಿಭಕ್ತಿಯ ಬಿಡೆ ಕಣಾ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೧೪ ॥

೭೧೬

ಆದಿ ಅನಾದಿಯಿಲ್ಲದತ್ತಣ ದೂರಕ್ಕೆ ದೂರದಲ್ಲಿ
ಭಾವಕ್ಕೆ ನಿರ್ಭಾವಕ್ಕೆ ಬಾರದಿರ್ದ ನಿಷ್ಕಳಂಕ ಪರಬ್ರಹ್ಮವೇ
ಮುನ್ನ ನೀನು ಶಾಖೆದೋರುವಲ್ಲಿ
ನಿನ್ನೊಳಂಕುರಿಸಿ ನಾನು
ತಾಮಸ ಮುಸುಂಕಿ ಜನನ ಮರಣಕ್ಕೊಳಗಾಗಿ
ಚೌರಾಶಿ ಎಂಬತ್ತುನಾಲ್ಕುಲಕ್ಷ ಪ್ರಾಣಿಗಳ
ಗರ್ಭದಿಂದ ಬಂದು ಬಂದು
ಒಮ್ಮೆ ಮಾನವನಪ್ಪಂದಿಗೆ
ನಾನುಂಡ ಮೊಲೆಹಾಲು ಸಪ್ತಸಮುದ್ರಕ್ಕೆ ಸರಿಯಿಲ್ಲವಯ್ಯ.
ಇಂತಪ್ಪ ಮಾನವ ಜನ್ಮದಲ್ಲಿ ಬಂದ ಬಂದುದು ಗಣಿತಕ್ಕೆ ಬಾರದಯ್ಯ.
ಈ ಜನ್ಮದಲ್ಲಿ ಪಿಂಡೋತ್ಪತ್ತಿಯಲ್ಲಿಯೇ
ಶರಣಸತಿ ಲಿಂಗಪತಿಯೆಂಬ ಜ್ಞಾನ ತಲೆದೋರಿ
ಶರಣವೆಣ್ಣಾಗಿ ಹುಟ್ಟಿದೆನಯ್ಯ.
ಎನಗೆ ನಿನ್ನ ಬಯಕೆಯೆಂಬ ಸಿಂಗಾರದ ಸಿರಿಮುಡಿಯಾಯಿತು.
ಎನಗೆ ನಿನ್ನ ನೋಡುವೆನೆಂಬ ಮುಗುಳ್ನೊಲೆ ಮೂಡಿದವು.

ಎನಗೆ ನಿನ್ನೊಳು ನುಡಿಯಬೇಕೆಂಬ
ಉರವಣೆಯ ಸಂಪದದ ಜವ್ವನ ಕುಡಿವರಿಯಿತ್ತು.
ಎನಗೆ ನಿನ್ನನೊಲಿಸಬೇಕೆಂಬ ಸಂಭ್ರಮದ
ಕಾಂಚೀಧಾಮ ಕಟಿಸೂತ್ರ ನೇವುರ ನಿಡುಗೊಂಡೆಯವೆಂಬಾಭರಣ
ಅನುಲೇಪನ ವಸ್ತ್ರಂಗಳೆನಗೆ ಅಲಂಕಾರವಾಯಿತ್ತು.
ಭಕ್ತಿಯೆಂಬ ವಿರಹಾಗ್ನಿ
ಎನ್ನ ಹೃದಯಕಮಲದಲ್ಲಿ ಬೆಳೆದು ಬೀದಿವರಿದು
ನಿಂತಲ್ಲಿ ನಿಲಲೀಸದಯ್ಯ.
ಕುಳಿತಲ್ಲಿ ಕುಳ್ಳಿರಲೀಸದಯ್ಯ.
ಮನ ನಿಂದಲ್ಲಿ ಮನೋಹರವಪ್ಪುದಯ್ಯ.
ಅಂಗ ಮನ ಪ್ರಾಣ ನೇತ್ರ ಚಿತ್ತಂಗಳೊಳು
ಪಂಚಮುಖವೆಂಬ ಪಂಚಬಾಣಂಗಳು ನೆಟ್ಟವಯ್ಯ.
ನಾನು ಧರೆಯೊಳುಳಿವುದರಿದು.
ಪ್ರೇಮದಿಂ ಬಂದು ಕಣ್ದುಂಬಿ ನೋಡಿ
ಮನವೊಲಿದು ಮಾತಾಡಿ ಕರುಣದಿಂ ಕೈವಿಡಿದು
ಅಕ್ಕರಿಂದಾಲಂಗಿಸಿ ದಿಟ್ಟಿಸಿ ಬೊಟ್ಟಾಡಿ
ಲಲ್ಲೆವಾತಿಂ ಗಲ್ಲವ ಪಿಡಿದು
ಪುಷ್ಪ ಪರಿಮಳದಂತೆ ನಾನು ನೀನುಭಯವಿಲ್ಲದಂತೆ
ಕೂಡೆನ್ನ ಪ್ರಾಣೇಶನೇ.
ಕೂಡದಿರ್ದೊಡೆ ಗಲ್ಲವ ಪಿಡಿ.
ಪಿಡಿಯದಿರ್ದೊಡೆ ಬೊಟ್ಟಾಡು.
ಬೊಟ್ಟಾಡದಿರ್ದೊಡೆ ಆಲಂಗಿಸು.
ಆಲಂಗಿಸದಿರ್ದೊಡೆ ಕೈವಿಡಿ.
ಕೈವಿಡಿಯದಿರ್ದೊಡೆ ಮಾತಾಡು.
ಮಾತಾಡದಿರ್ದೊಡೆ ನೋಡು.
ನೋಡದಿರ್ದೊಡೆ ಬಾ.
ಬಾರದಿರ್ದೊಡೆ
ಪ್ರಮಥಗಣಂಗಳೊಡನೆ ಎನ್ನವಳೆಂದು ನುಡಿ.
ನುಡಿಯದಿರ್ದೊಡೆ
ನಿನ್ನ ಮನದಲ್ಲಿ ನನ್ನವಳೆಂದು ಭಾವಿಸು.
ಭಾವಿಸದಿರ್ದೊಡೆ ಪುಣ್ಯ ಕಣ್ದೆರೆಯದು.
ಕರ್ಮ ಕಾಂತಿಯಪ್ಪುದು.
ಕಾಮ ಕೈದುಗೊಂಬ, ಕಾಲ ಕಲಿಯಪ್ಪ.

ಘಪಕ್ಕೆ ಬಲ್ಮೆ ದೊರೆವುದು.
ಇಂತೀ ಐವರು ಎನಗೆ ಅವಾಂತರದೊಳಗಾದ ಹಗೆಗಳಯ್ಯಾ.
ಇವರೆನ್ನ ತಿಂದುತೇಗಿ ಹಿಂಡಿ ಹಿಪ್ಪೆಯಮಾಡಿ
ಸುಂಗಿ ಉಗುಳ್ದು ಹಿಂದಣ ಬಟ್ಟೆಗೆ ನೂಂಕುತಿಪ್ಪರಯ್ಯಾ.
ಹೊಗಲಂಜುವೆನಯ್ಯಾ.
ಹೋದರೆ ಚಂದ್ರಸೂರ್ಯಾದಿಗಳುಳ್ಳನಕ್ಕ
ನಿನ್ನ ನೆನೆವ ಮನಕ್ಕೆ ನಿನ್ನ ಕೊಂಡಾಡುವ ಬಾಯ್ಗೆ
ನಿನ್ನ ನೋಡುವ ಕಂಗಳಿಗೆ ಸೆರೆ ಸಂಕಲೆಯಪ್ಪುದಯ್ಯಾ.
ಇಂತಿವಂ ತಿಳಿದು
ನಿನ್ನ ಮನದೊಳು ನನ್ನವಳೆಂದರೆ
ದಿವಾರಾತ್ರೆಯುಳ್ಳನ್ನಬರ
ಎನ್ನ ಮನ ಜಿಹ್ವೆ ನೇತ್ರಂಗಳಿಗೆ
ಬಂಧನಗಳೆಂಬಿವು ಮುಂಗೆಡುವುವಯ್ಯಾ.
ನಿನ್ನನು ನೆನೆನೆನೆದು ನನ್ನ ಮನ ಬೀಗಿ ಬೆಳೆದು
ತಳಿರಾಗಿ ಹೂ ಮಿಡಿಗೊಂಬುದಯ್ಯಾ.
ನಿನ್ನ ಹಾಡಿ ಹಾಡಿ ನನ್ನ ಜಿಹ್ವೆ
ಅಮೃತಸಾಗರದೊಳೋಲಾಡುತ್ತಿಪ್ಪುದಯ್ಯಾ.
ನಿನ್ನಂ ನೋಡಿ ನೋಡಿ ಕಂಗಳು ನಿಜಮೋಕ್ಷಮಂ ಪಡೆವುವಯ್ಯಾ.
ನಾನು ಈರೇಳು ಲೋಕಕ್ಕೆ ಬರುವ ಹಾದಿ ಹಾಳಾಗಿಪ್ಪುವಯ್ಯಾ.
ಶತ್ರುಗಳೆನಗೆ ಮಿತ್ರರಪ್ಪರಯ್ಯಾ.
ಭವದ ಬಳ್ಳಿ ಅಳಿವುದು. ಕಾಲಿನ ಕಲಿತನ ಕೆಡುವುದು.
ಕಾಮನ ಕೈಮು ಖಂಡಿಸುವುದು.
ಕರ್ಮದ ಕಾಂತಿ ಕರಗುವುದು.
ಪುಣ್ಯದ ಕಣ್ಣು ಬಣ್ಣಗೆಡುವುದಯ್ಯಾ.
ನಿನಗೊಲಿವವರ ನಿನ್ನಂತೆ ಮಾಡು ಕೃಪಾಕರನೆ.
ನಿನಗೆ ಮಚ್ಚಿವೆನಯ್ಯಾ.
ನಿನ್ನ ಮೆಚ್ಚಿಸಿಕೊಳ್ಳಲರಿಯದ
ಮುಗ್ಧವೆಣ್ಣಿನ ಪತಿಭಕ್ತಿಯಂ ಸಾಧಿಸು.
ಎನ್ನವಸ್ಥೆಯಂ ಲಾಲಿಸು,
ನಿನ್ನ ಶ್ರೀಪಾದಪದ್ಮದೊಳಗೆನ್ನನೊಡಗೂಡಿಸು.
ಎನ್ನ ಬಿನ್ನಪಮಂ ಲಾಲಿಸು,
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೧೫ ॥

೭೧೭

ಶರಣಸತಿ ಲಿಂಗಪತಿಯೆಂದು ಬಣ್ಣಿಸಿ
ಒಪ್ಪವಿಟ್ಟು ನುಡಿದುಕೊಂಬ ಕುಟಿಲವೆಣ್ಣಲ್ಲವಯ್ಯ ನಾನು.
ನಿನಗೆ ಮೆಚ್ಚಿ ಮರುಳಾದ ಪತಿವ್ರತೆಯೆಂಬುದಕ್ಕೆ
ದೃಷ್ಟವ ಕೊಟ್ಟು ನುಡಿವುತಿಪ್ಪೆ ಕೇಳಯ್ಯ ಗಂಡನೇ.
ಮಾನವರ ಸಂಚಲವಿಲ್ಲದ ಮಹಾ ಘೋರಾಟವಿಯಲ್ಲಿ
ನಾನು ಹೋಗುತಿಪ್ಪ ಆ ಸಮಯದಲ್ಲಿ
ಸೋರ್ಮುಡಿಯ ಸೊಬಗಿನ ನಿಡುಹುಬ್ಬಿನ ಕಡುಜಾಣೆ
ಅಲರ್ಗಣ್ಣ ಅಂಬುಜಮುಖಿ ಮುಗುಳ್ನಗೆಯ ಸೊಬಗುವೆಣ್ಣು
ಬಂದುಗೆಯ ಬಾಯ ಅಂದವುಳ್ಳವಳು
ನಳಿತೋಳ ನಾಯಕಿ ಕಕ್ಕಸ ಕುಚದ ಸೊಕ್ಕುಜವ್ವನೆ
ಸೆಳೆನಡುವಿನ ಸಿರಿವಂತೆ ಕುಂಭಸ್ಥಳದ ನಿತಂಬಿನಿ
ಪೊಂಬಾಳೆದೊಡೆಯ ಕಂಬುಕಂಧರೆ
ಕೆಂದಳಿರಚರಣದ ಮಂದಗಮನೆ
ಇಂತಪ್ಪ ಚಲುವಿನ ಕೋಮಲಾಂಗಿ
ಸರ್ವಾಭರಣಂಗಳ ತೊಟ್ಟು ನವ್ಯ ದುಕೂಲವನುಟ್ಟು
ಅನುಲೇಪನಂಗಳ ಅನುಗೈದು ನಡೆತಂದು
ಎನ್ನ ಅಮರ್ದಪ್ಪಿ ಆಲಂಗಿಸಿ ಮೋಹಿಸಿ
ಮುದ್ದುಮಾಡಿ ಕಾಮಾತುರದ ಭಕ್ತಿಯಿಂದ
ಎನ್ನ ಕರಮಂ ಪಿಡಿದು ತನ್ನ ಕೂಟಕ್ಕೆ ಒಡಂಬಡಿಸುವ ಕಾಲದಲ್ಲಿ
ನಾನು ಹುಲಿಹಿಡಿದ ಕಪಿಲೆಯಂತೆ ನಡುಗುತಿರ್ದೆನೆ
ನಿನ್ನ ಸತಿಯೆಂದು ಕೈವಿಡಿದು ಎನ್ನ ರಕ್ಷಣೆಯಂ ಮಾಡು
ನಿನಗಲ್ಲದೆ ಅನ್ಯರಿಗೆ ಕಿಂಚಿತ್ತು ಮನಸೋತೆನಾದೊಡೆ
ನೀಂ ನೂಂಕೆನ್ನ ಜನ್ಮಜನ್ಮಾಂತರ ಎಕ್ಕಲನರಕದಲ್ಲಿ
ಎನ್ನ ನೀಂ ನೂಂಕದಿರ್ದೆಯಾದಡೆ ನಿಮಗೆ ನಿಮ್ಮಾಣೆ
ನಿಮ್ಮ ಅರ್ಧಾಂಗಿಯಾಣೆ ನಿಮ್ಮ ಬಸವಾದಿ ಪ್ರಮಥರಾಣೆ
ಎನ್ನೀ ಅತಿಬಿರುದಿನ ಭಾಷೆಯೆಂಬುದು ನಿನ್ನ ಕರುಣವಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೧೬ ॥

೭೧೮

ದೇವ
ಕಂಬಳಕ್ಕೆ ಹೋಗಿ ಕನಕದಕೊಡನ ಕಂಡಂತೆ
ಮರ್ತ್ಯಲೋಕಕ್ಕೆ ಬಂದು ಮಾನವಜನ್ಮವ ಕಂಡೆ.

ಆ ಮಾನವ ಜನ್ಮಕ್ಕೆ
ಘುಣಾಕ್ಷರನ್ಯಾಯದಂತೆ ಲಿಂಗ ಬಂದುದ ಕಂಡೆ.
ಎನಗಿದು ಚೋದ್ಯವಯ್ಯ ಎನಗಿದು ವಿಪರೀತವಯ್ಯ
ಇದಕ್ಕೆ ನುಡಿದಂತೆ ನಡೆಸು ನಡೆದಂತೆ ನುಡಿಸು.
ನುಡಿ ನಡೆಗೆ ಭಿನ್ನವಾದರೆ ನಿಮ್ಮ ಶರಣರೊಪ್ಪರು.
ನಿಮ್ಮ ಶನಣರೊಪ್ಪದಲ್ಲಿಯೆ ನೀನೊಪ್ಪೆ.
ನೀನೊಪ್ಪದಲ್ಲಿಯೆ ಬಂದಿತೆನಗೆ ಭವದ ಹೆಮ್ಮಾರಿ.
ಅದಕ್ಕೆ ನಾನಂಜುವೆನಯ್ಯ ನಾನಳಕುವೆನಯ್ಯ.
ನುಡಿ- ನಡೆ ಎರಡಾಗದಂತೆ ನಡೆಸಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೧೭ ॥

೭೧೯

ಅರ್ಪಿತ ಅವಧಾನದ ಕ್ರಮವ
ವಿಸ್ತರಿಸಿ ಒಪ್ಪವಿಟ್ಟು ಹೇಳಿಹೆ ಕೇಳಿರಣ್ಣಾ
ಭಿನ್ನಭೋಜನ ಪ್ರಸಾದಭೋಜನ ಸಹಭೋಜನವೆಂದು
ಲಿಂಗಾರ್ಪಿತ ಮೂರು ಪ್ರಕಾರವಾಗಿಪ್ಪುದು.
ಮುಂದಿಟ್ಟ ಸಕಲಪದಾರ್ಥವಂ ಇಷ್ಟಲಿಂಗಕ್ಕೆ ಕೊಟ್ಟು
ಆ ಲಿಂಗಮಂ ಸೆಜ್ಜೆಯರಮನೆಗೆ ಬಿಜಯಂಗೈಸಿ
ಅಂದಂದಿಂಗೆ ಬಂದ ಪದಾರ್ಥಮಂ
ಲಿಂಗಕ್ಕೆ ಕೊಡದೆ ಕೊಂಬುದೀಗ ಭಿನ್ನಭೋಜನ.
ಮುಂದಿಟ್ಟ ಸಕಲಪದಾರ್ಥಂಗಳು ಲಿಂಗಕ್ಕೆ ಒಂದು ವೇಳೆ ಕೊಡದೆ
ಎತ್ತಿದ ಭೋಜ್ಯಮಂ ಲಿಂಗಕ್ಕೆ ಕೊಟ್ಟು
ಆ ಭೋಜ್ಯಮಂ ಇಳುಹದೆ ಕೊಂಬುದೀಗ ಪ್ರಸಾದಭೋಜನ.
ಮುಂದಿಟ್ಟ ಸಕಲಪದಾರ್ಥಂಗಳ ಲಿಂಗಕ್ಕೆ ಮೊದಲು ಕೊಟ್ಟು
ಮತ್ತೆ ಎತ್ತಿದ ಭೋಜ್ಯಮಂ ಲಿಂಗಕ್ಕೆ ಕೊಟ್ಟು
ಕೊಂಬುದೀಗ ಸಹಭೋಜನ.
ಇಂತೀ ತ್ರಿವಿಧ ಭೋಜನದ ಅಂತರಂಗದನ್ವಯವ
ನಿಮ್ಮ ಶರಣರೇ ಬಲ್ಲರಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೧೮ ॥

೭೨೦

ಪಿಂಡಬ್ರಹ್ಮಾಂಡಗಳಿಲ್ಲದಂದು
ಅಷ್ಟದಿಕ್ಪಾಲಕರ ಹುಟ್ಟಿಲ್ಲದಂದು

ನಿಷ್ಕಳ ಪರಂಜ್ಯೋತಿ ತಾನೊಂದೆ ನೋಡ.
ಅದು ತನ್ನ ಚಿತ್ಕಾಂತೆಯ ಸಂಗಸಮರಸದಿಂದ
ಮಹಾಲಿಂಗವೆನಿಸಿತು.
ಆ ಮಹಾಲಿಂಗವೇ ತನ್ನ ಪರಮಾನಂದದಿಂದ
ಪ್ರಸಾದಲಿಂಗವೆಂದು ಜಂಗಮಲಿಂಗವೆಂದು ಶಿವಲಿಂಗವೆಂದು
ಗುರುಲಿಂಗವೆಂದು ಆಚಾರಲಿಂಗವೆಂದು
ಹೀಂಗೆ ಪಂಚಲಿಂಗವೆನಿಸಿತು.
ಆ ಪಂಚಲಿಂಗಂಗಳ
ಪ್ರಾಣ ಅಂಗ ಮುಖ ಪದಾರ್ಥಂಗಳಾವುವೆಂದರೆ
ಆಚಾರಲಿಂಗಕ್ಕೆ ಗುರುಲಿಂಗವೇ ಪ್ರಾಣ.
ಆ ಪ್ರಾಣಕ್ಕೆ ಆಚಾರಲಿಂಗವೇ ಅಂಗ.
ಆ ಅಂಗಕ್ಕೆ ಆಚಾರಲಿಂಗದ
ಆಚಾರಾದಿ ಪ್ರಸಾದಲಿಂಗಂಗಳೇ ಪಂಚಮುಖ.
ಆ ಮುಖಂಗಳಿಗೆ ಪಂಚಪ್ರಕಾರದ ಗಂಧಂಗಳೇ ದ್ರವ್ಯಪದಾರ್ಥ.
ಗುರುಲಿಂಗಕ್ಕೆ ಶಿವಲಿಂಗವೇ ಪ್ರಾಣ.
ಆ ಪ್ರಾಣಕ್ಕೆ ಗುರುಲಿಂಗವೇ ಅಂಗ.
ಆ ಅಂಗಕ್ಕೆ ಗುರುಲಿಂಗದ
ಆಚಾರಾದಿ ಪ್ರಸಾದಲಿಂಗಂಗಳೇ ಪಂಚಮುಖ.
ಆ ಮುಖಂಗಳಿಗೆ ಪಂಚಪ್ರಕಾರದ ರಸಂಗಳೇ ದ್ರವ್ಯಪದಾರ್ಥ.
ಶಿವಲಿಂಗಕ್ಕೆ ಜಂಗಮಲಿಂಗವೇ ಪ್ರಾಣ.
ಆ ಪ್ರಾಣಕ್ಕೆ ಶಿವಲಿಂಗವೇ ಅಂಗ.
ಆ ಅಂಗಕ್ಕೆ ಶಿವಲಿಂಗದ
ಆಚಾರಾದಿ ಪ್ರಸಾದಲಿಂಗಂಗಳೇ ಪಂಚಮುಖ.
ಆ ಮುಖಂಗಳಿಗೆ ಪಂಚಪ್ರಕಾರದ ರೂಪಂಗಳೇ ದ್ರವ್ಯಪದಾರ್ಥ.
ಜಂಗಮಲಿಂಗಕ್ಕೆ ಪ್ರಸಾದಲಿಂಗವೇ ಪ್ರಾಣ
ಆ ಪ್ರಾಣಕ್ಕೆ ಜಂಗಮಲಿಂಗವೇ ಅಂಗ
ಆ ಅಂಗಕ್ಕೆ ಜಂಗಮಲಿಂಗದ ಆಚಾರಾದಿ
ಪ್ರಸಾದಲಿಂಗಂಗಳೇ ಪಂಚಮುಖ.
ಆ ಮುಖಂಗಳಿಗೆ ಪಂಚಪ್ರಕಾರದ ಸ್ಪರ್ಷಂಗಳೇ ದ್ರವ್ಯಪದಾರ್ಥ.
ಪ್ರಸಾದಲಿಂಗಕ್ಕೆ ಮಹಾಲಿಂಗವೇ ಪ್ರಾಣ.
ಆ ಪ್ರಾಣಕ್ಕೆ ಪ್ರಸಾದಲಿಂಗವೇ ಅಂಗ
ಆ ಅಂಗಕ್ಕೆ ಪ್ರಸಾದಲಿಂಗದ ಆಚಾರಾದಿ
ಪ್ರಸಾದಲಿಂಗಂಗಳೇ ಪಂಚಮುಖ.

ಆ ಮುಖಿಂಗಳಿಗೆ ಪಂಚಪ್ರಕಾರದ ಶಬ್ದಂಗಳೇ ದ್ರವ್ಯಪದಾರ್ಥ.
ಈ ಪ್ರಕಾರದಲ್ಲಿ ಪಂಚಲಿಂಗಂಗಳ
ಪ್ರಾಣ ಅಂಗ ಮುಖ ಪದಾರ್ಥ ಇಂತಿವರ
ನೆಲೆಯ ತಿಳಿದು ತಟ್ಟುವ ಮುಟ್ಟುವ ಸುಖಿಂಗಳ
ಆಯಾ ಮುಖಿಂಗಳಿಗೆ ಕೊಟ್ಟು
ತೃಪ್ತಿಯ ಭಾವದಿಂದ ಮಹಾಲಿಂಗಕ್ಕೆ ಸಮರ್ಪಿಸುವ ಅವಧಾನ
ನಿಮ್ಮ ಶರಣರಿಗಲ್ಲದೆ ಮಿಕ್ಕ ಜಡಜೀವಿಗಳೆತ್ತ ಬಲ್ಲರೋ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೧೯ ॥

೭೨೧

ಎನ್ನ ಮನೋಮಧ್ಯದೊಳಗೊಂದು
ಅನುಮಾನ ಅಂಕುರದೋರಿತು ಕೇಳಾ ಎಲೆ ತಂಗಿ.
ಲಿಂಗಾಣತಿಯಿಂ ಬಂದ ಪದಾರ್ಥವ
ಮನವೊಪ್ಪಿ ಲಿಂಗಕ್ಕೆ ಕೊಟ್ಟುದೇ ಪ್ರಸಾದ.
ಆ ಪ್ರಸಾದದೊಳಗಿದ್ದುದೇ ರಸ.
ಹೊರಗಿದ್ದುದೇ ಹಿಪ್ಪೆ.
ಮತ್ತಂ ಒಳಗಿದ್ದುದೇ ಮಧುರ.
ಹೊರ ಹೊರಗಿದ್ದುದೇ ಕಠಿಣ.
ಕರುಣಿಸಿಕೊಂಬುದೇ ಸುಖಿತ.
ಅದ ನುಡಿಯಲಂಜಿ ನಡುಗುತಿಪ್ಪೆನಯ್ಯ.
ಅದೇನು ಕಾರಣ ನಡುಗುತಿಪ್ಪೆನೆಂದರೆ
ಪ್ರಸಾದವೇ ಪರತತ್ವವೆಂದು ಪ್ರಮಥಗಣಂಗಳ
ಸಮ್ಯಜ್ಞಾನದ ನುಡಿ ಉಲಿಯುತ್ತಿದೆ.
ಇದು ಕಾರಣ-
ಪ್ರಸಾದವೆಂಬ ಪರತತ್ವದಲ್ಲಿ ಜ್ಞಾನ ಅಜ್ಞಾನಗಳೆರಡೂ
ಹುದುಗಿಪ್ಪವೆಂದು ನಾನು ನುಡಿಯಲಮ್ಮೆ.
ತಥಾಪಿ ನುಡಿದರೆ,
ಎನಗೆ ಮರ್ತ್ಯಲೋಕದ ಮಣಿಹವೆಂದಿಗೂ ತೀರದೆಂದು
ಕಠಿಣ ಪದಾರ್ಥವ ಲಿಂಗಕ್ಕೆ ಕೊಟ್ಟು ಕೊಳಲಮ್ಮೆನಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೨೦ ॥

೭೨೨

ಮುಂದನರಿಯದ ಮತಿಗೆಟ್ಟ ಮರುಳು ಮನವೇ
ಕಾಲ ಕಾಮರ ಗೆಲುವ ಉಪಾಯವಾವುದೆಂದು

ತಲೆಯೂರಿ ನೆಲನ ಬರೆವುತಿಪ್ಪೆ
ಮೊಲ ಜಂಬುಕಂಗಳ ಮಯ್ಯಲಿಗೆ
ಆನೆಯ ಘೌಜನಡ್ಡಮಾಡಬೇಕೇ?
ಕಾಲ ಕಾಮರ ಗೆಲುವುದಕ್ಕೆ ಆಲೋಚನೆಯೇತಕಯ್ಯ ಮನವೆ?
ಪಂಚೇಂದ್ರಿಯಂಗಳು
ಪಂಚಬ್ರಹ್ಮವನಪ್ಪಿ ಅಗಲದಿಪ್ಪುದೇ
ಪಂಚಬಾಣನ ಹರಣದ ಕೇಡು.
ನಾನು ಪರಬ್ರಹ್ಮದಲ್ಲಿಯೇ ಜನನ.
ಎನ್ನ ತನು ಮನ ಧನಂಗಳ ಪರಬ್ರಹ್ಮಕ್ಕೆ ಮಾರುಕೊಟ್ಟೆನೆಂಬ
ನಿಚ್ಚಟದ ನುಡಿಯೇ ಕಾಲನ ಗಂಟಲಗಾಣ.
ಅದು ಹೇಗೆಂದೊಡೆ
ಲಿಂಗಾಂಕಿತವಾದ ವೃಕ್ಷಂಗಳ
ಮಂಡಲಾಧಿಪತಿ ಮೊದಲಾಗಿ ಮುಟ್ಟಲಮ್ಮ.
ಆನೆಯ ತನುಜನ ಆಡು ಮುರಿದರೆ
ಹೀನವಾರಿಗಪ್ಪುದಯ್ಯ?
ಈ ಪ್ರಕಾರದ ಸಮ್ಯಜ್ಞಾನದಿಂದ
ನಿಮ್ಮ ಶರಣರು
ಕಾಲ ಕಾಮರ ಗೆಲಿದರಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೨೧ ॥

೭೨೩

ನಿತ್ಯವಾಗಿಪ್ಪ ಪರಮಾತ್ಮನು ಅನಿತ್ಯವಾಗಿಪ್ಪ ದೇಹದೊಡನಾಡಿ
ಜೀವನಾಗಿ ಹೋಗುತ್ತಿದೆ ನೋಡಾ.
ನಿತ್ಯ ಅನಿತ್ಯದ ಸಂದನಿಕ್ಕಿದ ಸಮರ್ಥರಾರಯ್ಯ?
ಇದಕ್ಕೆ ಅನುಕೂಲವಾಗಿ ಮಾಡಿದವರು ಮತ್ತೊಬ್ಬರುಂಟೆಂದು
ನಿನ್ನ ಮನದಲ್ಲಿ ತಿಳಿಯಬೇಡ.
ಅದು ತನಗೆ ತಾನೇ ಮಾಡಿಕೊಂಡಿತು.
ಅದು ಹೇಗೆಂದೊಡೆ
ಆತ್ಮನು ಭೋಗವೆಂಬ ಸೂಜಿಯಂ ಪಿಡಿದು
ಆ ಸೂಜಿಗೆ ಮೂರೊಂದು ಕರಣ
ಎರಡು ಮೂರು ಇಂದ್ರಿಯಂಗಳೆಂಬ ನವಸೂತ್ರವನೇರಿಸಿ
ತನು ಮನದಂಚ ಸೇರುವೆಯಂ ಮಾಡಿ
ಕಂಠದಾರಮಂ ಕಟ್ಟಿ

ಸಂಪರಿಯಬಾರದಂತೆ ಅದು ತನಗೆ ತಾನೆ ಹೊಲುಕೊಂಡಿತ್ತು.
ಇದು ಬಿಚ್ಚಿ ಬೇರೆ ಮಾಡುವ ಪರಿಯಾವುದಯ್ಯ?
ಭೋಗವೆಂಬ ಸೂಜಿಯಂ ಮುರಿದು
ನಾಲ್ಕು ಕರಣ ಐದಿಂದ್ರಿಯವೆಂಬ
ಒಂಬತ್ತು ದಾರಮಂ ತುಂಡತುಂಡಿಗೆ ಹರಿಯಲೊಡನೆ
ತನು ಪ್ರಕೃತಿಯಂ ಕೂಡಿತ್ತು.
ಪ್ರಾಣ ಪರಬ್ರಹ್ಮವಂ ಕೂಡಿತ್ತು ಕಾಣಾ,
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೨೨ ॥

೭೨೪

ನಿಜಮುಕ್ತಿಗೆ ಸದಾ ಸಂಧಾನದಲ್ಲಿರಬೇಕೆಂದು
ಶಿವಶರಣರು ನುಡಿಯುತ್ತಿಪ್ಪರು,
ಆ ಸಂಧಾನದ ಹೊಲಬ ನಾನರಿಯೆ ಎನಗೆ ಮುಕ್ತಿಯಿಲ್ಲ.
ಇನ್ನೇವೆನೆಂದು ಕಂಬನಿದುಂಬಿ ಕರಗುತಿಪ್ಪೆ ಮನವೇ.
ಗುರು ಕೊಟ್ಟ ಸಂಧಾನವೆ ಕರಕಮಲದಲ್ಲಿ
ಪ್ರಸನ್ನ ಪ್ರಸಾದಮಂ ಪ್ರತ್ಯಕ್ಷವಾಗಿ ತೋರುತ್ತಿದೆ.
ಗುರು ಕೊಟ್ಟ ಸಂಧಾನವೆ
ಎಂಟೆಸಳಿನ ಚೌದಳದ ಮಧ್ಯದಲ್ಲಿ
ಹೊಂಗಲಶದಂತೆ ಥಳಥಳನೆ ಹೊಳೆಯುತ್ತಿದೆ.
ಗುರುಕೊಟ್ಟ ಸಂಧಾನವೆ ಮುಪ್ಪುರದ ಮಧ್ಯದಲ್ಲಿ
ರತ್ನ ಮಿಂಚಿನಂತೆ ಕುಡಿವರಿದು ಉರಿಯುತ್ತಿದೆ.
ಗುರು ಕೊಟ್ಟ ಸಂಧಾನವೆ
ಪಂಚಪತ್ರದ ಮಧ್ಯದಲ್ಲಿ
ಬೆಳ್ದಿಂಗಳ ಲತೆಯಂತೆ ಬೀದಿವರಿದು ಬೆಳಗ ಬೀರುತ್ತಿವೆ.
ಈ ಪ್ರಕಾರದ ಬೆಳಗೆ ಮುಕ್ತಿಸಂಧಾನವಾಗಿ ಒಪ್ಪುತ್ತಿಹವು.
ಇವನೆ ಕಣ್ದುಂಬಿ ನೋಡು
ಇವನೆ ಮನದಣಿವಂತೆ ಹಾಡು
ಇವನೆ ಅಪ್ಪಿ ಅಗಲದಿಪ್ಪುದೇ ನಿಜಮುಕ್ತಿ.
ತಪ್ಪದು ನೀನಂಜಬೇಡ.
ಗುರು ಕೊಟ್ಟ ಸಂಧಾನವಂ ಮರೆದು
ಭಿನ್ನವಿಟ್ಟು ಲಕ್ಷಿಪರ ಸಂಧಾನವೆಲ್ಲಾ ಭವಸಂಧಾನವಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೨೩ ॥

೭೨೫

ಲಿಂಗಾಂಗ ಸಂಬಂಧದ ಭೇದವನರಿಯದೆ
ನಾವು ಲಿಂಗಾಗಿಸಂಬಂಧಿಗಳೆಂದು
ಅಂದಚಂದವಾಗಿ ನುಡಿದುಕೊಂಬ
ಕ್ರಿಯಾಭ್ರಾಂತರು ನೀವು ಕೇಳಿರೋ
ಲಿಂಗಾಂಗ ಸಂಬಂಧದ ಉತ್ತರೋತ್ತರದ ನಿರ್ಣಯವ.
ಹೊರಗಣ ಹೂವನ್ನೆ ತಂದು
ಸ್ಥೂಲತನುವಿನ ಮೇಲಿಪ್ಪ ಆಚಾರಲಿಂಗಮಂ ಪೂಜೆಮಾಡಿ
ತನುವ ಸಮರ್ಪಿಸಿ ಬೇಡಿಕೊಂಡು
ಹೊರಗಣ ಹೊನ್ನು ಹೆಣ್ಣು ಮಣ್ಣು ಷಟ್ಕರ್ಮಂಗಳ
ಬಿಟ್ಟುದೇ ಇಷ್ಟಲಿಂಗಪೂಜೆ.
ಒಳಗಣ ಹೂವನ್ನೆ ತಂದು
ಸೂಕ್ಷ್ಮತನುವಿನ ಮೇಲಿಪ್ಪ ಜಂಗಮಲಿಂಗಮಂ ಪೂಜೆಮಾಡಿ
ಮನವ ಸಮರ್ಪಿಸಿ ಉಪಾವಸ್ಥೆಯಂ ಮಾಡಿ
ಒಳಗಣ ಅಂತಃಕರಣಂಗಳಂ ಸುಟ್ಟುದೇ ಪ್ರಾಣಲಿಂಗಪೂಜೆ.
ಮನೋಮಧ್ಯದೊಳಿಪ್ಪ ಭಾವಪುಷ್ಪವನ್ನೆ ತಂದು
ಕಾರಣತನುವಿನ ಮೇಲಿಪ್ಪ ತೃಪ್ತಿಲಿಂಗಮಂ ಪೂಜೆ ಮಾಡಿ
ಸಂತೋಷವಂ ಸಮರ್ಪಿಸಿ ದೈನ್ಯಂಬಟ್ಟು
ಜ್ಞಾನ ಕ್ರಿಯೆಗಳಳಿದುದೇ ಭಾವಲಿಂಗಪೂಜೆ.
ಈ ಪ್ರಕಾರದ ಲಿಂಗಾಂಗ ಸಾಧಕತ್ವಮಂ
ಶಿವರಾತ್ರಿಯ ಸಂಕಣ್ಣಂಗೊಲಿದಂತೆ
ಎನಗೊಲಿದು ಕರುಣಿಸಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೨೪ ॥

೭೨೬

ನಿರ್ಗಮನಿಯಾದ ಶರಣಂಗೆ ಸಂಧಾನವಲ್ಲದೆ
ಗಮನಿಯಾದ ಶರಣಂಗೆ ಅನುಗೊಳದೆಂಬ
ಅಣ್ಣಗಳು ನೀವು ಕೇಳಿರೇ.
ಸೂರ್ಯನು ರಥವನೇರಿ ಪದಾರ್ಥಂಗಳ ಚಬುಕುಮಾಡಿ
ಮನೋವೇಗದಿಂ ಪಶ್ಚಿಮ ಸಮುದ್ರಕ್ಕೆ ದಾಳಿಯಿಡಲು
ರವಿಕಿರಣಂಗಳು ಹಿಂದುಳಿದಿಪ್ಪವೆ?
ಅದು ಕಾರಣ-

ಪುಷ್ಪವಿದ್ದಲ್ಲಿ ಪರಿಮಳವಿಪ್ಪುದು.
ಅಂಗವಿದ್ದಲ್ಲಿ ಲಿಂಗವಿಪ್ಪುದು.
ಲಿಂಗವಿದ್ದಲ್ಲಿ ಆ ಲಿಂಗದ ಮೇಲೆ ಮನವಿಪ್ಪುದು.
ಲಿಂಗದ ಮೇಲೆ ಮನವಿಪ್ಪಲ್ಲಿಯೇ ಶರಣ.
ಆ ಶರಣ ನಡೆದಲ್ಲಿಯೇ
ಉರಿವಗ್ನಿಯ ಮೇಲೆ ತಂಗಾಳಿ ಬೀಸಿದಂತೆ.
ತ್ರಿಪುಟಿಯ ಮೇಲೆ ಚಿದ್ಬೆಳಗು ಓಲಾಡುತ್ತಿದೆ.
ಆ ಶರಣ ನೋಡುವಲ್ಲಿಯೇ
ಪ್ರಣವದ ಬಳ್ಳಿ ಮನವ ಸುತ್ತುತ್ತಿದೆ.
ಆ ಶರಣ ನೋಡುವಲ್ಲಿಯೇ
ಪಂಚವರ್ಣಂಗಳ ಸ್ವರೂಪು ಲಿಂಗಾರ್ಪಿತವಾಗುತ್ತಿದೆ.
ಶರಣ ಕುಂಭಿಸುವಲ್ಲಿಯೇ
ಓಂಕಾರ ಒಡಗೂಡುವುದಯ್ಯ.
ಶರಣ ರೇಚಿಸುವಲ್ಲಿಯೇ
ಪಂಚಾಕ್ಷರಂಗಳು ಎಡೆಯಾಡುತ್ತಿವೆ.
ಶರಣ ಸುಳಿವಲ್ಲಿಯೇ
ಹಲವು ಪ್ರಕಾರದ ವಸ್ತುಗಳ ತನುಸೋಂಕು
ಲಿಂಗಮನವ ತುಂಬುತ್ತಿದೆ.
ಇದು ಕಾರಣ
**ತೋಂಟದಾರ್ಯನ** ಕರುಣಪ್ರಸಾದಮಂ ಪಡೆದು
ತತ್ವಸ್ವರೂಪ ಧ್ಯಾನ ಧಾರಣ ಅರ್ಪಿತಾವಧಾನವನರಿದ ಶರಣಂಗೆ
ಗಮನಾಗಮನವೆಂಬುಭಯವುಂಟೆ?
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. || ೨೫ ||

೭೨೭

ಆಚಾರಲಿಂಗವ ಅಂಗೈಯೊಳಗಳವಡಿಸಿ
ಮಜ್ಜನಕ್ಕೆರೆದು ತ್ರಿಪುಂಡ್ರಮಂ ಧರಿಯಿಸಿ
ಪುಷ್ಪಜಾತಿಗಳಿಂದರ್ಚಿಸಿ ಪೂಜೆಮಾಡುವ ಕರವು
ಆ ಪೂಜೆಗೆ ಮೆಚ್ಚಿ ಪಂಚಸ್ಪರ್ಶನಂಗಳಂ ಮರೆಯಲೊಡನೆ
ಆ ಕರದಲ್ಲಿ ಜಂಗಮಲಿಂಗ ನೆಲೆಗೊಂಡಿತ್ತು.
ಆ ಲಿಂಗದ ಪ್ರಕಾಶಮಂ ನೋಡುವ ನೇತ್ರಂಗಳು
ಆ ಪ್ರಕಾಶಕ್ಕೆ ಮೆಚ್ಚಿ ಪಂಚವರ್ಣಂಗಳಂ ಬೀರಯಲೊಡನೆ

ಆ ನೇತ್ರಂಗಳಲ್ಲಿ ಶಿವಲಿಂಗವೆ ನೆಲೆಗೊಂಡಿತ್ತು.
ಆ ಲಿಂಗದ ಸದ್ವಾಸನೆಯಂ ವಾಸಿಸುವ ಘ್ರಾಣ
ಆ ವಾಸನೆಗೆ ಮೆಚ್ಚಿ ಪಂಚಗಂಧಂಗಳಂ ಮರೆಯಲೊಡನೆ
ಆ ಘ್ರಾಣದಲ್ಲಿ ಆಚಾರಲಿಂಗ ನೆಲೆಗೊಂಡಿತ್ತು.
ಆ ಲಿಂಗದ ಮಂತ್ರಸ್ವರೂಪವನೆತ್ತಿ ಕೊಂಡಾಡುವ ಜಿಹ್ವೆ
ಆ ಮಂತ್ರಕ್ಕೆ ಮೆಚ್ಚಿ ಪಂಚರಸಂಗಳಂ ಮರೆಯಲೊಡನೆ
ಆ ಜಿಹ್ವೆಯಲ್ಲಿ ಗುರುಲಿಂಗ ನೆಲೆಗೊಂಡಿತ್ತು.
ಆ ಲಿಂಗಮಂ ಮನವೊಲಿದು ಹಾಡುವ ನಾದಮಂ ಕೇಳುವ
ಶ್ರೋತ್ರ
ಆ ನಾದಕ್ಕೆ ಮೆಚ್ಚಿ ಪಂಚನಾದಂಗಳಂ ಮರೆಯಲೊಡನೆ
ಆ ಶ್ರೋತ್ರದಲ್ಲಿ ಪ್ರಸಾದಲಿಂಗ ನೆಲೆಗೊಂಡಿತ್ತು.
ಆ ಲಿಂಗವ ನೆನೆವ ಮನ
ಆ ನೆನಹಿಂಗೆ ಮೆಚ್ಚಿ ಪಂಚಪರಿಣಾಮಂಗಳಂ ಮರೆಯಲೊಡನೆ
ಆ ಮನದಲ್ಲಿ ಮಹಾಲಿಂಗ ನೆಲೆಗೊಂಡಿತ್ತು.
ಈ ಷಡಿಂದ್ರಿಯಂಗಳೂ ಲಿಂಗವನಪ್ಪಿ ಅಗಲದ ಕಾರಣ
ಆ ಲಿಂಗವೊಲಿದು ಷಡಿಂದ್ರಿಯಂಗಳಲ್ಲಿ ಷಡ್ವಿಧಲಿಂಗವಾಗಿ
ನೆಲೆಗೊಂಡಿತ್ತು.
ಇಂತಪ್ಪ ಇಷ್ಟಲಿಂಗದಲ್ಲಿ ಶರಣಂ ನಿಷ್ಠೆ ನಿಬ್ಬೆರಗಾಗಿ
ಧ್ಯಾನಯೋಗಮಂ ಕೈಕೊಂಡು ಷಡುವರ್ಣಮಂ ಮರೆಯಲೊಡನೆ
ಆ ಲಿಂಗವೊಲಿದು ಅಂಗವೇಧಿಸಿ
ಜ್ಞಾನಕ್ರೀಗಳಲ್ಲಿ ಷಡ್ವಿಧ ಪ್ರಾಣಲಿಂಗವಾಗಿ ನೆಲೆಗೊಂಡಿತ್ತು.
ಆ ಪ್ರಾಣಲಿಂಗಂಗಳಂ ಶರಣ ಮಂತ್ರಮಾಲೆಯಂ
ಹೃದಯದೊಳಿಂಬಿಟ್ಟು ಮನವೆಂಬರಳ್ದ ತಾವರೆಯಲ್ಲಿ
ಜಾಗ್ರತ್ ಸ್ವಪ್ನದಲ್ಲಿ ಪೂಜಿಸುವ ಧಾರಣಯೋಗದೊಳಿರ್ದು
ಕ್ರೀಯ ಮರೆಯಲೊಡನೆ
ಆ ಲಿಂಗವೊಲಿದು ಮನವೇಧಿಸಿ ಭಾವಂಗಳಡಗಿ
ತ್ರಿವಿಧ ಭಾವಲಿಂಗವಾಗಿ ನೆಲೆಗೊಂಡಿತ್ತು.
ಆ ಭಾವಲಿಂಗಗಳ ಶರಣನೊಡವೆರೆಯಲೊಡನೆ
ಕರ್ಪೂರ ಹೋಗಿ ಉರಿಯ ಹಿಡಿದಂತಾದ
ಸಮಾಧಿಯೋಗದೊಳಿರ್ದು
ಜ್ಞಾನವ ಮರೆಯಲೊಡನೆ
ಆ ಶರಣಂಗೆ ಆ ಲಿಂಗವೊಲಿದು ಸರ್ವಾಂಗಲಿಂಗವಾಯಿತು.
ಆತನೇ ಪರಬ್ರಹ್ಮ.

ಇದನರಿಯದೆ
ಜ್ಞಾನಕ್ರೀಗಳಿಂದಾಚರಿಸಿ
ಲಿಂಗಾಂಗ ಸಂಯೋಗವಾಗದೆ
ಕೆರಹಿನಟ್ಟೆಗೆ ನಾಯಿ ತಲೆದೂಗುವಂತೆ
ತಮ್ಮ ಅರಿವಿಂಗೆ ತಾವೇ ತಲೆದೂಗಿ
'ಅಹಂ ಬ್ರಹ್ಮ'ವೆಂಬ ಚೌರಾಶಿ ಹೊಲೆಯರ ಎನಗೆ ತೋರದಿರಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೨೬ ॥

೭೨೮

ಬೆಳಗು ಕತ್ತಲೆಯೆಂಬ ಕತ್ತಲೆಯ ಬೆಳಗೆಂಬ
ಪಶುಮತದ ಪಾಷಂಡಿಗಳು ನೀವು ಕೇಳಿರೇ
ಮಲಮಾಯಾಕರ್ಮಗಳು ಆತ್ಮಂಗೆ ಕೇಡಿಲ್ಲದೆ
ಅನಾದಿಯಲ್ಲಿಯೂ ಉಂಟೆಂದು ನುಡಿಯುತ್ತಿಪ್ಪಿರಿ.
ಕಾಮಧೇನುವಿನ ಗರ್ಭದಲ್ಲಿ ಕತ್ತೆಯ ಮರಿ ಹುಟ್ಟುವುದೆ?
ಕಲ್ಪವೃಕ್ಷದಲ್ಲಿ ಕಾಗೆಮಾರಿಯ ಹಣ್ಣು ಬೆಳೆವುದೆ?
ಪರುಷದಗಿರಿಯಲ್ಲಿ ಕಬ್ಬುನ ಮೊಳೆದೋರುವುದೆ?
ಅನಂತಕೋಟಿ ಮಿಂಚುಗಳ ಪ್ರಭೆಯನೊಳಕೊಂಡ
ಪರಶಿವತತ್ವದಲ್ಲಿ ಉದಯವಾದ ಚಿದಂಶಿಕನಪ್ಪ ಪರಮಾತ್ಮಂಗೆ
ಅನಾದಿಮಲವನುಂಟುಮಾಡುವ ಸಿದ್ಧಾಂತಿಯ
ಅಡ್ಡವಸ್ತ್ರದಲ್ಲಿಪ್ಪುದು ಒಡ್ಡಗಲ್ಲ ಮುರುಕಲ್ಲದೆ ಲಿಂಗವಲ್ಲ.
ಅದೇನು ಕಾರಣವೆಂದರೆ
ಇಕ್ಕುವಾಕೆ ಮೂಗು ಮುಚ್ಚಿಕೊಂಡು ಇಕ್ಕಿದ ಬಳಿಕ
ಉಂಬಾತ ಹೇಗುಂಬನಯ್ಯ?
ಆತ್ಮನು ಅನಾದಿಮಲಾವರಣವೆಂದು ನೀನೆ ಉಸುರುತ್ತಿರ್ದ ಬಳಿಕ
ನಿನ್ನಂಗದ ಮೇಲಕ್ಕೆ ಬರುವ ಲಿಂಗಕ್ಕೆ ಮೂಗಿಲ್ಲವೆ?
ಪುಣ್ಯಕ್ಷೇತ್ರದಲ್ಲಿ ಲಿಂಗವಿಪ್ಪುದಲ್ಲದೆ
ಹಾಳುಕೇರಿಯಲ್ಲಿ ಲಿಂಗವುಂಟೇ?
ಇಲ್ಲವೆಂಬುದ ನಿನ್ನ ನೀನೇ ತಿಳಿದು ನೋಡು.
ಇದು ಕಾರಣ ದ್ವೈತಮಾರ್ಗಕ್ಕೆ

ಮುಕ್ತಿಯೆಂಬುದು ಎಂದೆಂದಿಗೂ ಸಟೆ ಹೊರಗೆಂ[ಬೆ]ನಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೨೭ ॥

೭೨೯

ಶಿವಪ್ರಸಾದವ ಬೀಸರವೋಗಬಾರದೆಂದು
ಎಚ್ಚರಿಕೆ ಅವಧಾನದಿಂದರ್ಪಿಸಿ
ಪ್ರಕ್ಷಾಳನ ಲೇಹ್ಯ ಅಂಗಲೇಪನದಿಂದ
ಅವಧಾನವ ಮಾಡುತಿಪ್ಪ ಪರಮ ವಿರಕ್ತರೇ
ಪದಾರ್ಥವಂ ತಂದು ಕರದಲ್ಲಿ ಕೊಟ್ಟರೇನ ಮಾಡುವಿರಯ್ಯ?
ಭಕ್ತರು ಕ್ರೀವಿಡಿದು ಪದಾರ್ಥವ ಪರಿಯಾಣದಲ್ಲಿ ತಂದರೆ
ಭಯ ಭಕ್ತಿಯಿಂದ ವೈಯಾರದಲ್ಲಿ
ಪ್ರಸಾದವ ಸಲಿಸುವುದೇ ಎನ್ನ ಕ್ರೀಗೆ ಸಂದಿತು.
ಅದಲ್ಲದೆ
ಎನ್ನ ಕರಪಾತ್ರೆಗೆ ತಂದು ಭಿಕ್ಷವ ನೀಡಿದರೆ
ಕೊಂಡುದೇ ಪ್ರಸಾದ ಒಕ್ಕುದೇ ಪದಾರ್ಥ.
ಅದು ಎನ್ನ ಜ್ಞಾನಕ್ಕೆ ಸಂದಿತು.
ಅದು ಹೇಗೆಂದೊಡೆ
ಹರಿಶಬ್ದವ ಕೇಳೆನೆಂದು ಭಾಷೆಯಂ ಮಾಡಿದ
ಶಿವಭಕ್ತೆ ಸತ್ಯಕ್ಕನ ಮನೆಗೆ
ಶಿವನು ಜಂಗಮವಾಗಿ ಭಿಕ್ಷಕ್ಕೆ ಬಂದು 'ಹರಿ' ಎನ್ನಲೊಡನೆ
ಹರನ ಬಾಯ ಹುಟ್ಟಿನಲ್ಲಿ ತಿವಿದಳು.
ಅದು ಅವಳ ಭಾಷೆಗೆ ಸಂದಿತು.
ಅವಳು ಶಿವದ್ರೋಹಿಯೆ ? ಅಲ್ಲ.
ನಾನು ಸಂಸಾರ ಸಾಗರದಲ್ಲಿ ಬಿದ್ದು ಏಳುತ್ತ ಮುಳುಗುತ್ತ
ಕುಟುಕುನೀರ ಕುಡಿಯುವ ಸಮಯದಲ್ಲಿ
ಶಿವನ ಕೃಪೆಯಿಂದ ನನ್ನಿಂದ ನಾನೇ ತಿಳಿದು ನೋಡಿ ಎಚ್ಚತ್ತು
ಮೂರು ಪಾಶಂಗಳ ಕುಣಿಕೆಯ ಕಳೆದು
ಭೋಗ ಭುಕ್ತ್ಯಾದಿಗಳನತಿಗಳೆದು
ಅಹಂಕಾರ ಮಮಕಾರಗಳನಳಿದು
ಉಪಾಧಿಕೆ ಒಡಲಾಶೆಯಂ ಕೆಡೆಮೆಟ್ಟಿ
ಪೊಡವಿಯ ಸ್ನೇಹಮಂ ಹುಡಿಗುಟ್ಟಿ
ಉಟ್ಟುದ ತೊರೆದು ಊರ ಹಂಗಿಲ್ಲದೆ ನಿರ್ವಾಣಿಯಾಗಿ

ನಿಜಮುಕ್ತಿ ಸೋಪಾನವಾಗಿಪ್ಪ ಕರಪಾತ್ರ ಎಂಬ ಬಿರಿದು
ಬಸವಾದಿಪ್ರಮಥರರಿಕೆಯಾಗಿ
ಶಿವನ ಮುಂದೆ ಕಡುಗಲಿಯಾಗಿ
ನಾನು ಕಟ್ಟಿದೆ ಆ ಬಿರುದಿಂಗೆ ಓಂದು ಮುಂದಾದರೆ
ಶಿವನು ಮೂಗುಕೊಯ್ದು ಕನ್ನಡಿಯ ತೋರಿ
ಅಣಕವಾಡಿ ನಗುತಿಪ್ಪನೆಂದು
ನಾನು ಕರಪಾತ್ರೆಯಲ್ಲಿ ಸಂದೇಹವಿಲ್ಲದೆ ಸಲಿಸುತ್ತಿಪ್ಪೆನು.
ಆ ಸಮಯದಲ್ಲಿ
ಕೊಂಡುದೇ ಪ್ರಸಾದ ಒಕ್ಕುದೇ ಪದಾರ್ಥ
ಇದು ಎನ್ನ ಸಮ್ಯಜ್ಞಾನದ ಬಿರುದಿಗೆ ಸಂದಿತು.
ನಾನು ಪ್ರಸಾದದ್ರೋಹಿಯೆ? ಅಲ್ಲ.
ಇಂತಲ್ಲದೆ
ನಾನು ಮನಸ್ಸಿಗೆ ಬಂದಂತೆ ಉಂಡುಟ್ಟಾಡಿ
ರೂಪ ರಸ ಗಂಧವೆಂಬ ತ್ರಿವಿಧಪ್ರಸಾದದಲ್ಲಿ
ಉದಾಸೀನವ ಮಾಡಲಮ್ಮೆನು.
ಮಾಡಿದೆನಾದಡೆ
ವರಾಹ ಕುಕ್ಕುಟನ ಬಸುರಲ್ಲಿ ಬಪ್ಪುದು ತಪ್ಪದು.
ಇದ ಕಡೆಮುಟ್ಟೆ ನಡೆಸು ನಡೆಸಯ್ಯಾ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ।। ೨೮ ।।

೭೩೦

ಭಕ್ತಿ ಜ್ಞಾನ ವೈರಾಗ್ಯವು
**ಅಲ್ಲಮಪ್ರಭುವಿನ ವರ್ಗಕ್ಕಲ್ಲದೆ** ಅಳವಡದೆಂದು
ಉತ್ತರಜ್ಞಾನಿಗಳು ನುಡಿವುತ್ತಿಪ್ಪರು.
ಪಂಚೇಂದ್ರಿಯಂಗಳ ರತಿವಿರತಿಯಾದ ಪರಮವಿರಕ್ತರೇ
ನೀವಾಚರಿಸುವ ಭಕ್ತಿ ಜ್ಞಾನ ವೈರಾಗ್ಯದ ಬಗೆಯ ಬಣ್ಣಿಸಿರಯ್ಯ.
ಗುರು ಲಿಂಗ ಜಂಗಮ ತೀರ್ಥ ಪ್ರಸಾದ
ಇಂತಿಪ್ಪ ಪಂಚಾಚಾರವೇ ಪಂಚಬ್ರಹ್ಮವೆಂದು
ಭಯ ಭಕ್ತಿಯಿಂದ ನಮಿಸಿ ಅಂಗೀಕರಿಸುವುದೇ ಎನ್ನ ಭಕ್ತಿ.
ಪೂರ್ವಾಶ್ರಯ ಬಂಧುಭ್ರಮೆ ಆತ್ಮತೇಜ ಲೋಕದ ನಚ್ಚುಮಚ್ಚು
ಇಂತಿವ ಸುಟ್ಟು ಮಲತ್ರಯಂಗಳ ಹಿಟ್ಟುಗುಟ್ಟಿ
ತೂರಿ ಬಿಡುವುದೇ ಎನ್ನ ಜ್ಞಾನ.

ಕ್ಷುತ್ತು ಮೈದೋರಿ ಭಿಕ್ಷಕ್ಕೆ ಹೋದಲ್ಲಿ
ಭಾಂಡವ ತೊಳೆದ ದ್ರವ್ಯಪದಾರ್ಥಮಂ ತರಲೊಡನೆ
ಹರುಷದಿಂದ ಲಿಂಗಾರ್ಪಿತವ ಮಾಡಿ ಸಾಕೆಂದ ಬಳಿಕ
ಮತ್ತೊಂದು ಗೃಹವನಾಶೆಮಾಡಿ ಹೋದೆನಾದರೆ
ಎನ್ನ ವೈರಾಗ್ಯಕ್ಕೆ ಕುಂದು ನೋಡಾ.
ಅದೇನು ಕಾರಣವೆಂದೊಡೆ
ಗಂಡನಿಕ್ಕಿದ ಪಡಿಯನುಂಡು ಮನೆಗಡೆಯದಿಪ್ಪವಳು
ಪತಿವ್ರತೆಯಲ್ಲದೆ
ಗಂಡನಿಕ್ಕಿದ ಪಡಿಯನೊಲ್ಲದೆ
ನೆಲ್ಲಗೂಳಿಗಾಸೆಮಾಡಿ ನೆರಮನೆಗೆ ಹೋಗುವ ಜಲ್ಲಾಳಗಿತ್ತಿಗೆ
ಪತಿಭಕ್ತಿ ಅಳವಡುವುದೇ ಅಯ್ಯ?
ಲಿಂಗಾಣತಿಯಿಂದ ಬಂದ ಪದಾರ್ಥವ
ಕೈಕೊಂಡಾತ ಶರಣಸತಿ ಲಿಂಗಪತಿಯಲ್ಲದೆ
ಲಿಂಗಾಣತಿಯಿಂದ ಬಂದ ಪದಾರ್ಥವ
ಸಟೆಗೆ ಉಂಡು ಕೊಂಡಂತೆ ಮಾಡಿ
ಸಾಕೆಂದು ನೂಕಿ ಅಂಗದಿಚ್ಛೆಗೆ ಹರಿದು
ಮತ್ತೊಂದು ಮನೆಗೆ ಆಶೆಮಾಡಿ ಹೋಗುವ ಜೀವಗಳ್ಳರಿಗೆ
'ಶರಣಸತಿ ಲಿಂಗಪತಿ' ಭಾವ ಅಳವಡುವುದೆ ಅಯ್ಯ?
ಭಕ್ತಿ ಜ್ಞಾನ ವೈರಾಗ್ಯ ವಿರಹಿತರಾಗಿ
ನಿಜಮುಕ್ತಿಯ ಅರಸುವ ಅಣ್ಣಗಳ ಇರವು
ಬಂಜೆ ಮಕ್ಕಳ ಬಯಸಿ
ಬಟ್ಟೆಯ ಬೊಮ್ಮಂಗೆ ಹರಸಿಕೊಂಡಂತಾಯಿತ್ತಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೨೯ ॥

೭೩೧

ನಾನು ನಿಮ್ಮೊಡನೆ ನುಡಿವೆ ನುಡಿಯಲಂಜುವೆನಯ್ಯ.
ಲಿಂಗದ ವಿನೋದಾರ್ಥವಾಗಿ ಗಮನವಂಕುರಿಸಿ
ಒಂದಾನೊಂದು ದೆಸೆಗೆ ಹೋಗುತ್ತಿಪ್ಪಾಗ
ಅರಣ್ಯಮಧ್ಯದಲ್ಲಿ
ಹಸಿವೆದ್ದು ತನುವನಂಡಲೆವುತ್ತಿರುವಲ್ಲಿ
ತೃಷೆಯೆದ್ದು ಮನವ ಮತಿಗೆಡಿಸಿ
ಹಲ್ಲುಹತ್ತಿ ನಾಲಿಗೆ ಕಠಿಣವಾಗಿ ಮೂರ್ಛೆಯಾಗುತ್ತಿರಲು

ಆ ಸಮಯದಲ್ಲಿ ಖರ್ಜೂರ ಮಾವು
ಜಂಬುನೇರಳೆ ಮೊದಲಾದ ಎಲ್ಲಾ ಫಲಂಗಳು
ಜೀವನ್ಮುಕ್ತಿಯೆಂಬ ಸಂಜೀವನರಸವ ತುಂಬಿಕೊಂಡು
ವೃಕ್ಷಂಗಳಡಿಯಲ್ಲಿ ಬಿದ್ದಿರಲು
ಕಣ್ಣಿನಲ್ಲಿ ನೋಡಿ ಮನದಲ್ಲಿ ಬಯಸಿ ಕೈಮುಟ್ಟಿ ಎತ್ತಿದೆನಾದರೆ
ಎನ್ನ ವಿರಕ್ತಿಯೆಂಬ ಪತಿವ್ರತಾಭಾವಕ್ಕೆ ಅದೇ ಹಾನಿ ನೋಡಾ.
ಅದೇನು ಕಾರಣವೆಂದೊಡೆ
ಅಂಗಭೋಗ ಅನರ್ಪಿತ ಲಿಂಗಭೋಗ ಪ್ರಸಾದವೆಂದು
ಆದ್ಯರ ವಚನ ಸಾರುತೈದಾವೆ ನೋಡಾ.
ಇದು ಕಾರಣ
ಅನರ್ಪಿತವ ಭುಂಜಿಸಿ ತನುವ ರಕ್ಷಣೆಯ ಮಾಡಿ
ಶ್ವಾನನ ಬಸುರಲ್ಲಿ ಬಂದು ಹೊಲೆಯರ ಬಾಗಿಲ ಕಾಯ್ದು
ಹಲವು ಆಹಾರವನುಂಡು ನರಕಕ್ಕಿಳಿಯಲಾರದೆ
ಮುಂದನರಿಯದೆ ನುಡಿದೆನಯ್ಯ.
ಸತಿಯ ಭಾಷೆ ಪತಿಗೆ ತಪ್ಪದಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೩೦ ॥

೭೩೨

ಶರಣು ಶರಣಾರ್ಥಿ ಲಿಂಗವೇ
ಹೊನ್ನು ಹೆಣ್ಣು ಮಣ್ಣು ಬಿಟ್ಟಾತನೇ ವಿರಕ್ತನೆಂದು
ವಿರಕ್ತದೇವರೆಂದು
ಬಣ್ಣವಿಟ್ಟು ಬಣ್ಣಿಸಿ ಕರೆವರಯ್ಯ.
ಆವ ಪರಿ ವಿರಕ್ತನಾದನಯ್ಯ ಗುರುವೇ?
ಹೊನ್ನೆಂಬ ರಿಪುವು ಚೋರರ ದೆಸೆಯಿಂದ
ಶಿರಚ್ಛೇದನವ ಮಾಡಿಸಿ
ನೃಪರಿಂ ಕೊಲಿಸುತಿಪ್ಪುದು.
ಹೆಣ್ಣೆಂಬ ರಕ್ಕಸಿ ಲಲ್ಲೆವಾತಿಂದ
ಗಂಡನ ಮನವನೊಳಗುಮಾಡಿಕೊಂಡು
ಸಂಸಾರಸುಖಕ್ಕೆ ಸರಿಯಿಲ್ಲವೆನಿಸಿ
ಸಿರಿವಂತರಿಗಾಳುಮಾಡಿ

ಇರುಳು ಹಗಲೆನ್ನದೆ ತಿರುಗಿಸುತಿಪ್ಪಳು.
ಮಣ್ಣೆಂಬ ಮಾಯೆ ತನ್ನಸುವ ಹೀರಿ ಹಿಪ್ಪೆಯ ಮಾಡಿದಲ್ಲದೆ
ಮುಂದಣಗುಣವ ಕೊಡದು.
ಇವ ಬಿಟ್ಟಾತ ವಿರಕ್ತನೆ? ಅಲ್ಲ.
ಕಾಯಕಕ್ಕಾರದೆ-ಜೀವಗಳ್ಳನಾಗಿ ಮಂಡೆಯ ಬೋಳಿಸಿಕೊಂಡು
ಕಂಡ ಕಂಡವರ ಮನೆಯಲ್ಲಿ ಉಂಡು
ಕುಂಡೆಯ ಬೆಳಸಿಕೊಂಡಿಪ್ಪಾತ ಆತುಮಸುಖಿಯಯ್ಯ.
ಮಾತಿನಮಾಲೆಯನಳಿದು ಕಾಯದ ಕಳವಳವನಳಿದು
ಲೋಕದ ವ್ಯವಹಾರವ ನೂಂಕಿ
ಅಂಬಿಲವ ಅಮೃತಕ್ಕೆ ಸರಿಯೆಂದು ಕಂಡು
ಏಕಾಂಗಿಯಾಗಿ ತನುವ ದಂಡಿಸಿ
ಗಿರಿಗಹ್ವರದಲ್ಲಿದ್ದರೆ ವಿರಕ್ತನೆ? ಅಲ್ಲ.
ಅದೇನು ಕಾರಣವೆಂದೊಡೆ
ತಾಯಿಯ ಗರ್ಭದಲ್ಲಿ ಶಿಶುವು
ಇಕ್ಕಿದ ಕುಕ್ಕುಟಾಸನವ ತೆಗೆಯದು
ಶೀತ ಉಷ್ಣವೆನ್ನದು ಉಪಾಧಿಕೆಯನರಿಯದು
ಮುಚ್ಚಿದ ಕಣ್ಣು ಮುಗಿದ ಕೈಯಾಗಿ ಉಗ್ರತಪಸ್ಸಿನಲ್ಲಿಪ್ಪುದು.
ಅದಕ್ಕೆ ಮುಕ್ತಿಯಾದರೆ ಇವನಿಗೆ ಮುಕ್ತಿಯುಂಟು.
ಬರಿಯ ವೈರಾಗ್ಯ ಭವಕ್ಕೆ ಬೀಜವಾಯಿತ್ತು.
ಇನ್ನು ನಿಜವಿರಕ್ತಿಯ ಪರಿಯಾವುದೆಂದೊಡೆ
ತ್ರಿವಿಧಪದಾರ್ಥದಲ್ಲಿ ಮನವಿಲ್ಲದೆ
[ಭಕ್ತರ] ಬಣ್ಣದ ನುಡಿಗೆ ಹಣ್ಣಾಗದೆ
ಅಂಗಭೋಗವ ನೂಂಕಿ ಲಿಂಗಭೋಗವ ಕೈಕೊಂಡು
ಆತ್ಮತೇಜವನಲಂಕರಿಸದೆ
ಅಸುವಿಗೆ ಭಿಕ್ಷವ ನೆಲೆಮಾಡಿ
ಸದಾಕಾಲದಲ್ಲಿ ಮಂತ್ರಮಾಲೆಯಂ ಮನದಲ್ಲಿ ಕೂಡಿ
ಆದಿ ಮಧ್ಯ ಅವಸಾನಮಂ ತಿಳಿದು
ನಿರ್ಮಲಚಿತ್ತನಾಗಿ ಏಕಾಂತವಾಸಿಯಾಗಿ
ನವಚಕ್ರಂಗಳಲ್ಲಿ ನವಬ್ರಹ್ಮಗಳ ಮೂರ್ತಿಗೊಳಿಸಿ
ಕಾಯದ ಕಣ್ಣಿಂದ ಕರತಲಾಮಲಕವ ನೋಡುವಂತೆ
ಮನದ ಕಣ್ಣಿಂದ ನವಬ್ರಹ್ಮಸ್ವರೂಪವ ಮನದಣಿವಂತೆ ನೋಡಿ
ಸುಚಿತ್ತವೇ ಮೊದಲು ನಿರವಯವೆ ಕಡೆಯಾದ ನವಹಸ್ತಂಗಳಿಂದ

ಭಾವಪುಷ್ಪಂಗಳಲ್ಲಿ ಪೂಜೆಯಂ ಮಾಡಿ ಮನದಣಿವಂತೆ
ಸುಚಿತ್ತ ಗುರುವನಪ್ಪಿ ಸುಬುದ್ಧಿ ಲಿಂಗವನಪ್ಪಿ
ನಿರಹಂಕಾರ ಜಂಗಮವನಪ್ಪಿ ಸುಮನ ಪ್ರಸಾದವನಪ್ಪಿ
ಸುಜ್ಞಾನ ಪಾದೋದಕವನಪ್ಪಿದ ಲಿಂಗಾಂಗಿಯೀಗ ವಿರಕ್ತನು.
ಇಂತಪ್ಪ ವಿರಕ್ತಿಯೆಂಬ ಪ್ರಸನ್ನತ್ವ ಪ್ರಸಾದಮಂ
ಎನಗೆ ಕರುಣಿಪುದಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೩೧ ॥

೭೩೩

ವಿರತಿ ವಿರತಿಯೆಂದು ವಿರತಿಯ ಹೊಲಬನರಿಯದೆ
ಹಂಬಲಿಸಿ ಹಲಬುತಿಪ್ಪರಣ್ಣ.
ಕಠಿಣ ಪದಾರ್ಥವ ಸವಿದೊಡೆ ವಿರತಿಯೆ?
ಕಠಿಣ ಪದಾರ್ಥವನೊಲ್ಲೆನೆಂದು ಕಳೆದೊಡೆ ವಿರತಿಯೆ?
ವೃಕ್ಷದಡಿಯ ಫಲಂಗಳನೆತ್ತಿ ಮೆದ್ದೊಡೆ ವಿರತಿಯೆ?
ಬಿದ್ದ ಫಲಂಗಳ ಮುಟ್ಟೆನೆಂದು ಭಾಷೆಯ ಮಾಡಿದೊಡೆ
ವಿರತಿಯೆ?
ಕ್ರೀಯಲ್ಲಿ ಮುಳುಗಿದೊಡೆ ವಿರತಿಯೆ?
ನಿಷ್ಕ್ರೀಯ ಮಾಡಿದೊಡೆ ವಿರತಿಯೆ?
ಮೌನಗೊಂಡಡೆ ವಿರತಿಯೆ?
ನಿರ್ಮೌನವಾದಡೆ ವಿರತಿಯೆ?
ಕ್ರೀಯನಾಚರಿಸಿ,
ಅರಿವಿನಮಾತ ಬಣ್ಣವಿಟ್ಟು ನುಡಿವರೆ ವಿರತಿಯೆ?
ಇಂತಿವೆಲ್ಲವು ವಿರತಿಯ ನೆಲೆಯನರಿಯದೆ
ತಲೆಬಾಲಗೆಟ್ಟು ಹೋದವು.
ಇನ್ನು
ಮುಕ್ತಿಪಥವ ತೋರುವ ವಿರತಿಯ ಬಗೆಯಾವುದೆಂದರೆ
ಷಟ್ಸ್ಥಲಕ್ಕೆ ಒಪ್ಪವಿಟ್ಟು ಎತ್ತಿದ ಮಾರ್ಗವನಿಳುಪದೆ
ಹಿಡಿದ ವ್ರತನೇಮಂಗಳಲ್ಲಿ ನೈಷ್ಠೆಯಾಗಿ
ಈಷಣತ್ರಯಂಗಳ ಘಾಸಿಮಾಡಿ
ಬಹಿರಂಗದಮದಂಗಳ ಬಾಯ ಸೀಳಿ
ಅಂತರಂಗದಮದಂಗಳ ಸಂತೋಷಮಂ ಕೆಡಿಸಿ
ಅಷ್ಟಮೂರ್ತಿಅಷ್ಟಮದಂಗಳ ನಷ್ಟವ ಮಾಡಿ

ಎಂಟೆರಡುದಿಕ್ಕಿನಲ್ಲಿ ಹರಿವ ದಶವಾಯುಗಳ ಗಂಟಲ ಮುರಿದು
ಸುಗುಣ ದುರ್ಗುಣಂಗಳ ನಗೆಗೊಳಗುಮಾಡಿ
ನವನಾಳಂಗಳ ಮುಂಬಾಗಿಲಲ್ಲಿ ನವಲಿಂಗಂಗಳ ಸಿಂಗರಿಸಿ
ತನು ಮನವ ಸೋಂಕಿದ
ಸಾಕಾರ ನಿರಾಕಾರವೆಂಬ ಪದಾರ್ಥಂಗಳ
ವಂಚಿಸದೆ ಆಯಾಯ ಲಿಂಗಂಗಳಿಗೆ ತೃಪ್ತಿಯಂ ಮಾಡಿ
ನಡೆವಲ್ಲಿ ನುಡಿವಲ್ಲಿ ಮಂತ್ರಂಗಳಲ್ಲಿ ಮೈಮರೆದಿರದೆ
ಆಚಾರಾದಿ ಮಹಾಲಿಂಗಗಳ ಷಡುವರ್ಣದ ಬೆಳಗಂ
ಧ್ಯಾನ ಮೌನದಲ್ಲಿಯೇ ಕಣ್ಣಿಲ್ಲದೆ ಕಂಡು
ಗಂಗೆ ಯಮುನೆ ಸರಸ್ವತಿಯೆಂಬ ಮೂರು ಗಂಗೆ ಕೂಡಿದ
ಮಧ್ಯವೀಗ ಸಂಗಮಕ್ಷೇತ್ರ.
ಆ ಸಂಗಮಕ್ಷೇತ್ರದ ರತ್ನಮಂಟಪದಲ್ಲಿ ನೆಲೆಸಿಪ್ಪ
**ತೋಂಟದ ಅಲ್ಲಮನೆಂ**ಬ ಪರಬ್ರಹ್ಮದ
ಬೆಳಗಿನ ಪ್ರಭೆಯ ಮೊತ್ತಮಂ ಕಂಡು
**ಆ ತೋಂಟದ ಅಲ್ಲಮನೆಂ**ಬ ಪರಬ್ರಹ್ಮದ ದಿವ್ಯ ಶ್ರೀಚರಣಮಂ
ಭಾವಪುಷ್ಪಂಗಳೆಂಬ ಜಾಜಿ ಮಲ್ಲಿಗೆ ಕೆಂದಾವರೆಯಲ್ಲಿ
ಪೂಜೆಯಂ ಮಾಡಿ
ಜೀವನ್ಮುಕ್ತಿಯಾದುದೀಗ ನಿಜ ವಿರಕ್ತಿ.
ಇಂತಪ್ಪ ವಿರಕ್ತಿಯನಳವಡಿಸಿಕೊಳ್ಳದೆ
ಮಾತಿಂಗೆ ಮಾತು ಕೊಟ್ಟು
ಮತಿಮರುಳಾಗಿಪ್ಪವರಿಗಂಜಿ ನಾನು ಶರಣೆಂಬೆನಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೩೨ ॥

೭೩೪

ನಿರ್ವಾಣಪದಕ್ಕೆ ಕಾಮಿತನಾಗಿ
ಸಕಲಪ್ರಪಂಚಿನ ಗರ್ವವಂ ನೆಗ್ಗಲೊತ್ತಿ
ಏಕಲಿಂಗನಿಷ್ಠಾಪರವಾಗಿ ಆಚರಿಸುವ ಪರಮ ವಿರಕ್ತರ
ಉಪಾಧಿಕೆಯಿಲ್ಲದ ಕ್ರೀಗಳಾವುವಯ್ಯ ಎಂದರೆ
ತ್ರಿಸಂಧ್ಯಾಕಾಲದಲ್ಲಿ ಲಿಂಗಪೂಜೆ
ಲಿಂಗೋದಕ ಹಲ್ಲುಕಡ್ಡಿ ಮೊದಲಾದ ಸಕಲ ಪದಾರ್ಥಂಗಳ
ಇಷ್ಟಲಿಂಗಕ್ಕೆ ಕೊಟ್ಟು ಕೊಂಬ ಎಚ್ಚರಿಕೆ

ತೀರ್ಥಪ್ರಸಾದದಲ್ಲಿ ಅವಧಾನ
ಅಚ್ಚ ಲಿಂಗೈಕ್ಯರ ಮನೆಯಲ್ಲಿ ಭಿಕ್ಷ
ಕಠಿಣ ಪದಾರ್ಥಂಗಳಂ ಹಿಡಿದರೆ ಹಿಡಿದಂತೆ
ಬಿಟ್ಟರೆ ಬಿಟ್ಟಂತೆ ಇಪ್ಪುದು.
ತದ್ದಿನವ ಕಳೆದು ಭವಿ ಭಕ್ತಿಯನೊಪ್ಪುಗೊಳ್ಳದೆ
ಬಿದ್ದ ಫಲಂಗಳ ಮುಟ್ಟದೆ
ರಾತ್ರಿಯ ಕಾಲಕ್ಕೆ ಭಿಕ್ಷ ಬಿಡಾರವೆಂದು
ಭಕ್ತರು ಬಿನ್ನಹ ಮಾಡಿದರೆ ಕೈಕೊಂಬುದು
ಅಲ್ಲದಿದ್ದರೆ ಹೋಗಲಾಗದು.
ಭಕ್ತರು ವಿಭೂತಿ ಮುಂತಾಗಿ ಪದಾರ್ಥಕ್ಕೆ ಹೇಳಿದರೆ
ಇಚ್ಛೆಯಾದರೆ ಕೈಕೊಂಬುದು ಒಲ್ಲದಿದ್ದರೆ ಬಿಡುವುದು.
ಒಪ್ಪಿ ಕೈಕೊಂಡ ಬಳಿಕ ವಿಭೂತಿಯ ಮೀರಲಾಗದು.
ವಿಭೂತಿಯ ಕಟ್ಟು ವಿರಕ್ತರಿಗೆ ಇಲ್ಲವೆಂಬುದು ಶರಣಸ್ಥಲಕ್ಕೆ ಸಲ್ಲದು.
ಇಂತಿವೆಲ್ಲವು ಗಣಂಗಳು ಒಪ್ಪವಿಟ್ಟ ಆಚರಣೆ.
ಈ ಆಚರಣೆಯ ಸಮಾಧಿಯೋಗ ಪರಿಯಂತರ
ನಡೆಸುವಾತನೀಗ ನಿರಂಗ ಶರಣ.
ಅದಲ್ಲದೆ
ಪುರಾತನರ ಗೀತವನೋದಿ ಪುರಾತನರ ಮಕ್ಕಳಾದ ಬಳಿಕ
ಕಿರಾತರ ಮಕ್ಕಳಂತೆ ಮನ ಬಂದ ಪರಿಯಲ್ಲಿ ನಡೆಯಲಾಗದು.
ಪುರಾತನರಂತೆ ನಡೆವುದು.
ಹೀಗಲ್ಲದೆ
ಹೊತ್ತಿಗೊಂದು ಬಗೆ ದಿನಕೊಂದು ಪರಿಯಾಗಿ ನಡೆಸುವಲ್ಲಿ
ಶರಣನೇನು ಮುಗಿಲಬಣ್ಣದ ಬೊಂಬೆಯೆ?
ಶರಣ ಮೊಲನಾಗರೇ? ಶರಣನಿಂದ್ರಚಾಪವೇ?
ಶರಣ ಗೋಸುಂಬೆಯೇ?
ನೋಡಿರಯ್ಯ ಕಡಿದು ಕಂಡರಿಸಿ ಒಪ್ಪವಿಟ್ಟ
ರತ್ನದಪುತ್ಥಳಿಯ ಪ್ರಕಾಶದಂತೆ ನಿಜಗುಂದದಿಪ್ಪುದೀಗ ಶರಣಸ್ಥಲ.
ಬಾಲಕನಿಲ್ಲದ ಅಂಗನೆಯ ಮೊಲೆಯಲ್ಲಿ ಹಾಲು ತೊರೆವುದೆ ಅಯ್ಯ?
ಶಿವಜ್ಞಾನವಿಲ್ಲದವನ ಮನದಲ್ಲಿ

ಕ್ರಿಯವಿಟ್ಟು ನಡೆವ ಆಚರಣೆಯೆಲ್ಲಿಯದೋ
ಮುಕ್ತಿಯ ಪಥಕ್ಕೆ ಕ್ರಿಯೆ ಸಾಧನವಲ್ಲದೆ?
ಅದು ಹೇಗೆಂದೊಡೆ
ಕ್ರೀಯೆಂಬ ಬೀಜದಲ್ಲಿ ಸಮ್ಯಜ್ಞಾನವೆಂಬ ವೃಕ್ಷ ಪಲ್ಲವಿಸಿತ್ತು.
ಆ ವೃಕ್ಷ ಭಕ್ತಿಯೆಂಬ ಹೂವಾಯಿತ್ತು.
ಆ ಹೂವು ಲಿಂಗನಿಷ್ಠೆಯೆಂಬ ಹಣ್ಣಾಯಿತ್ತು.
ಆ ಹಣ್ಣಿನ ಅಮೃತಸಾರಮಂ ನಾನು ದಣಿಯಲುಂಡು
ಬಸವಾದಿ ಪ್ರಮಥರ ಪಡುಗ ಪಾದರಕ್ಷೆಯಂ
ಹಿಡಿವುದಕ್ಕೆ ಯೋಗ್ಯನಾದೆನಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೩೩ ॥

೭೩೪

ಶಿವಶರಣಂಗೆ ನಿಜೈಕ್ಯಪದಂಗಳು ದೊರೆಕೊಂಬುವ ತೆರನ
ಶ್ರುತಿ ಗುರು ಸ್ವಾನುಭಾವದಿಂದ ನುಡಿವುತಿಪ್ಪೆ ಕೇಳಿರಯ್ಯ.
ಜನನ ಮರಣಕಂಜಿ
ತಾನಾರೆಂಬುದಂ ಸ್ವಾನುಭಾವದಿಂ ನೋಡಿ
ಎಲ್ಲಿಂದೊಗೆದೆನೆಂಬುದಂ ಬಗೆಗೊಂಡು ಅರಿವು ತಲೆದೋರಿ
ಪುಣ್ಯಪಾಪಕ್ಕೆ ಬೀಜಾಂಕುರಮಪ್ಪ ಮಲತ್ರಯಂಗಳಿಗೆ ತಲೆಗೊಡದೆ
ಭೋಗಮಂ ನೀಗಿ ಭುಕ್ತಿಯಂ ತೊತ್ತಳದುಳಿದು
ಬಂಧುವರ್ಗಮಂ ಭಂಗಿಸಿ ಉಪಾಧಿಕೆಯನುರುಹಿ
ಒಡಲಾಸೆಯಂ ತಲೆವೊಡೆಯನಿಕ್ಕಿ ಅಹಂಕಾರಂಗಳನಳಿದು
ಮಮಕಾರಂಗಳಂ ಮುಂದುಗೆಡಿಸಿ
ಲೋಕದ ನಚ್ಚುಮಚ್ಚಿಗೆ ಕಿಚ್ಚುಗುತ್ತಿ
ಜ್ಞಾನ ಕ್ರೀಗಳಲ್ಲಿ ದೃಢವ್ರತವಾಗಿ ಕರಿಗೊಂಡು ಆಸನದಲ್ಲಿ
ಮರಹ ಮುಗ್ಗಿಸಿ ಮನ ತನುವನಪ್ಪಿ
ಸರ್ವ ಕರಣಂಗಳಂ ಚರಲಿಂಗಮುಖವ ಮಾಡಿ
ಆತ್ಮವಿದ್ಯಾಲಿಂಗದಲ್ಲಿ ಮನಸಂದು
ಪಂಚಪ್ರಸಾದಾತ್ಮಕನಾದ ಘನಲಿಂಗದ ಬೆಳಗ
ಪಿಂಡಾಂಡದಲ್ಲಿ ಜ್ಞಾನದಿಕ್ಕಿನಿಂದ ಪರಿಪೂರ್ಣವಾಗಿ ಕಂಡು
ಪೆಣ್ದುಂಬಿಯನಾದವೆ ಮೊದಲಾದ ಸಿಂಹನಾದವೆ ಕಡೆಯಾದ
ಆರೆರಡು ಪ್ರಕಾರದ ನಾದಂಗಳಂ ಕೇಳಿ

ಹರುಷಂ ಹರವರಿಗೊಂಡು
ಎನಗೆ ಶಿವತತ್ವ ಸಾಧ್ಯವಾಯಿತು.
ಪರಶಿವನಲ್ಲಿ ಒಡಗೂಡಿ ಪರಬ್ರಹ್ಮವಾದೆನೆಂದು, ಅಹಂಕರಿಸಿ
ಕ್ರೀಯಂ ಬಿಟ್ಟು ಗಂಭೀರಜ್ಞಾನದೊಳಿರುವ ಶರಣಂಗೆ
ಮೂರೊಂದು ವಿಧದ ಪದಂಗಳು ಬಪ್ಪವಲ್ಲದೆ
ಶಿವನಲ್ಲಿ ನಿಜೈಕ್ಯವಿಲ್ಲ.
ಅದೇನು ಕಾರಣವೆಂದೊಡೆ
ಷಟ್ಸ್ಥಲಬ್ರಹ್ಮಿಯೆನಿಸಿಕೊಂಡು
ಆರುಸ್ಥಲವಿಡಿದು ಆಚರಿಸಿ ಮೂರುಸ್ಥಲದಲ್ಲಿ ಅವಧಾನಿಯಾಗಿ
ಎರಡೊಂದುಸ್ಥಲ ಒಂದಾದ ಸ್ಥಲದಲ್ಲಿ
ಶರಣಲಿಂಗವೆಂಬುಭಯವಳಿದು
ನೂರೊಂದುಸ್ಥಲದೊಳಗೆ ಪ್ರಭಾವಿಸಿ ಪರಿಪೂರ್ಣವಾಗಿ
ಸಿದ್ಧಪ್ರಸಾದವೆಂಬ ನಿಷ್ಕಲಬ್ರಹ್ಮದಲ್ಲಿ
ಉರಿ ಕರ್ಪೂರದಂತೆ ಬೆಳಗುದೋರಿ
ಶುದ್ಧಪ್ರಸಾದವನಂಗಂಗೊಂಡು
ನಿರಂಜನಪ್ರಸಾದವನೊಡಗೂಡಿದ
ಬಸವರಾಜದೇವರು ಉತ್ತುಂಗಲಿಂಗದಲ್ಲಿ ಐಕ್ಯವಾಗುವನ್ನಬರ
ಶಿವಲಿಂಗಪೂಜೆಯಂ ಬಿಟ್ಟ[ರೆ]?
ಜಪ ತಪ ನಿತ್ಯ ನೇಮಂಗಳ ಬಿಟ್ಟ[ರೆ]?
ಲಿಂಗಕ್ಕೆ ಕೊಟ್ಟು ಕೊಂಬ ಅರ್ಪಿತವಧಾನಂಗಳಂ ಬಿಟ್ಟ[ರೆ]?
ತೀರ್ಥಪ್ರಸಾದದಲ್ಲಿ ಒಯ್ಯಾರಮಂ ಬಿಟ್ಟ[ರೆ]?
ಮಾಡಿ ನೀಡುವ ದಾಸೋಹಮಂ ಬಿಟ್ಟ[ರೆ]?
ಗುರು ಲಿಂಗ ಜಂಗಮವ ಕಂಡು ಪೊಡಮಡುವುದಂ ಬಿಟ್ಟ[ರೆ]?
ಬಿಜ್ಜಳನ ಓಲಗದ ಸಭಾಮಧ್ಯಕ್ಕೆ ಹೋಗಿ
ತನ್ನ ದಿವ್ಯ ಶ್ರೀ ಪಾದಪದ್ಮಂಗಳಂ ಬಿಜ್ಜಳಂಗೆ ತೋರಿ
ಅವನ ಕರ್ಮಾದಿಕರ್ಮಂಗಳಂ ಸುಟ್ಟು
ಅವನ ರಕ್ಷಿಪುದಂ ಬಿಟ್ಟ[ರೆ]?
ಇಂತಿವೆಲ್ಲವು ಕ್ರೀಯೋಗಗಳು.
'ಕ್ರಿಯಾದ್ವೈತಂ ನ ಕರ್ತವ್ಯಂ ಜ್ಞಾನಾದ್ವೈತಂ ಸಮಾಚರೇತ್।
ಕ್ರಿಯಾಂ ನಿರ್ವಹತೇ ಯಸ್ತು ಭಾವ ಶುದ್ಧಾಂತು ಶಾಂಕರಿ॥'
ಇಂತೆಂದುದಾಗಿ ಇದುಕಾರಣ

ಐಕ್ಯವಾಗುವನ್ನಬರ ಕ್ರೀಯೊಳಗೊಂಡ ಶರಣಂಗೆ
ನಿಜಮುಕ್ತಿಯಲ್ಲದೆ
ಐಕ್ಯವಾಗುವುದಕ್ಕೆ ಮುನ್ನವೇ ಕ್ರೀಯಳಿದ ಶರಣನು
ಸಾಯುಜ್ಯಪದಸ್ಥಲನಪ್ಪನಲ್ಲದೆ
ಹರನಲ್ಲಿ ಸಮರಸವಿಲ್ಲವೆಂದೆನಯ್ಯ,
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೩೪ ॥

೭೩೬

'ಇಕ್ಕಿದ ಹರಿಗೆ ತೊಲಗದ ಕಂಭ'ವೆಂದು ಬಿರಿದನಿಕ್ಕಿ
ಹುಯ್ಯಲ ಕಂಡು ಓಡಿ ಬರುವಂಗೆ ಆ ಬಿರಿದೇತಕಯ್ಯ?
ಬತ್ತೀಸಾಯುಧದ ಸಾಧನೆಯ ಕಲಿತು
ಕಾಳಗದಲ್ಲಿ ಕೈಮರೆದು ಘಾಯವಡೆದಂಗೆ ಆ ಸಾಧನೆ ಏತಕಯ್ಯ?
ಕತ್ತಲೆಗಂಜಿ ಕರದಲ್ಲಿ ಜ್ಯೋತಿಯಂ ಪಿಡಿದು
ಹಾಳುಗುಳಿಯಲ್ಲಿ ಬೀಳುವಂಗೆ ಆ ಜ್ಯೋತಿಯೇತಕಯ್ಯ?
ಆದ್ಯರ ವಚನಂಗಳ ಸದಾಕಾಲದಲ್ಲಿ ಓದಿ
ಶಿವತತ್ವ ಆತ್ಮತತ್ವ ವಿದ್ಯಾತತ್ವವನರಿದು
ಆರಕ್ಕೆ ಆರ ನೆಲೆಮಾಡಿ ಮೂರಕ್ಕೆ ಮೂರ ಸಂಬಂಧಿಸಿ
ಐದಕ್ಕೆ ಇನ್ನು ಪ್ರತಿಯಿಲ್ಲವೆಂದು ಅರಿದ ವಿರಕ್ತರು
ಪುರಾತನರಂತೆ ಸಮ್ಯಜ್ಞಾನ ಕ್ರೀಯಿಂದಲೆ ಆದರಿಸುವುದು,
ಭಕ್ತ ವಿರಕ್ತರ ಆಚರಣೆಯೆಲ್ಲಾ ಒಂದೇ.
ಅದು ಹೇಗೆಂದರೆ
ಭಕ್ತಂಗೆ ಬಹಿರಂಗದ ದಾಸೋಹ.
ವಿರಕ್ತಂಗೆ ಅಂತರಂಗದ ದಾಸೋಹ.
ಈ ಆಚರಣೆಯನತಿಗಳೆದು
ಮನ ಬಂದ ಪರಿಯಲ್ಲಿ ನಡೆದು ಕೆಡುವಂಗೆ
ಆದ್ಯರ ವಚನವೇತಕಯ್ಯ?
ಆದ್ಯರ ವಚನವೆಂಬುದು ಸಂತೆಯಮಾತೆ? ಪುಂಡರ ಪುರಾಣವೆ?
ಲೋಕದ ಜನರ ಮೆಚ್ಚಿಸುವ ಬೀದಿಯ ಮಾತೆ?
ಶಿವ ಶಿವ
ನೀವು ಶಿವಶರಣರ ಕೂಡಾಡಿ ವಚನಂಗಳ ಕಲಿತು
ಆ ವಚನಂಗಳ ನಿಮ್ಮ ಊಟದ ವೆಚ್ಚಕ್ಕೆ ಈಡು
ಮಾಡಿಕೊಂಡಿರಲ್ಲದೆ

ಮುಂದಣ ಮುಕ್ತಿಯ ಪದವ ಕಾಣದೇ ಹೋದಿರಲ್ಲಾ?
ಇದು ಕಾರಣ
ಶಿವಜ್ಞಾನೋದಯವಾದ ಲಿಂಗಾಂಗಿಗಳಿಗೆ
ಎನ್ನ ನುಡಿ ಮೃಗಂದೆಯಂ ತುರಿಸಿದಂತೆ
ಹಾಲು ಸಕ್ಕರೆಯನುಂಡಂತೆ ಸವಿದೋರುತ್ತದೆ.
ವೇಷಧಾರಿ ವಿಶ್ವಾಸಘಾತುಕರಿಗೆ
ಎನ್ನ ನುಡಿ ಅಲಗಿನ ಮೊನೆಯಂತೆ ಇರಿಯುತ್ತದೆಯಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೩೫ ॥

೭೩೭

ಅಂಗದ ಮೇಲಕ್ಕೆ ಬಂದ ಆಚಾರಲಿಂಗದ ಹೊಲಬನರಿಯದೆ
ಕೈಲಾಸದ ಮೇಲಿಪ್ಪ
ಬಾಲಕೋಟಿಸೂರ್ಯಪ್ರಕಾಶವನುಳ್ಳ ಶಿವನನೊಲಿಸಬೇಕೆಂದು
ಒಂದು ವಸ್ತುವ ಎರಡಿಟ್ಟು ನುಡಿವ ಮಂದಮತಿಗಳು ನೀವು ಕೇಳಿರೇ
ಮಹಾಮೇರುಪರ್ವತವೇ ಶರಣ.
ಆ ಶರಣನ ಸ್ಥೂಲತನುವೇ ರಜತಾದ್ರಿ.
ಸೂಕ್ಷ್ಮತನುವೇ ಹೇಮಾದ್ರಿ.
ಕಾರಣತನುವೇ ಮಂದರಾದ್ರಿ.
ಈ ಮೂರುಪರ್ವತಂಗಳ ಅರಮನೆಗಳಲ್ಲಿ ನೆಲಸಿಪ್ಪ
ಶಿವನಾರೆಂದರೆ ನಿರಾಕಾರ ಶೂನ್ಯಬ್ರಹ್ಮವೇ
ಶರಣನ ಕುರಿತು ಪಂಚಸಾದಾಖ್ಯಂಗಳನೊಳಕೊಂಡು
ಸಾಕಾರವಾಗಿ ಬಂದ ಇಷ್ಟಲಿಂಗವೇ [ಆ] ಶಿವನು.
ಗ್ರಂಥ : 'ಜ್ವಲತ್ ಕಾಲಾನಲಾಭಾಸಾ ತಟಿತ್ ಕೋಟಿ ಸಮಪ್ರಭಾ।
ತಸ್ಯೋರ್ಧ್ವಾ ಚ ಶಿಖಾ ಸೂಕ್ಷ್ಮಾ ಚಿದ್ರೂಪಾ ಪರಮಾ ಕಲಾ।
ಏವಂ ವೇದ ಕಲಾ ದೇವಿ। ಸದ್ಗುರೋಶ್ಶಿಷ್ಯಮಸ್ತಕೇ
ಹಸ್ತಾಬ್ಜಮಥನಾದ್ ಗ್ರಾಹ್ಯಾ ತಸ್ಯ ಭಾವ ಕರೋದಿತಾ
ವಪುರೇವಂ ಸಮುತ್ಪನ್ನಂ ತತ್ ಪ್ರಾಣಂ ಮಿಶ್ರಿತಂ ಭವೇತ್
ಯಥಾ ಗುರುಕರೇ ಜಾತಾ ಲಿಂಗ ಭಕ್ತಿರ್ದ್ವಿಭೇದಕಾ'
ಇಂತೆಂದುದಾಗಿ ಆ ನಿರಾಕಾರಬ್ರಹ್ಮನೇ ಶಿವನು.
ಆ ಶಿವನ ಧರಿಸಿಪ್ಪ ಶರಣನ ಕಾಯವೇ ಕೈಲಾಸ.

ಇದಲ್ಲದೆ ಮತ್ತೊಂದು ಕೈಲಾಸ
ಬೇರೊಬ್ಬ ಶಿವನುಂಟೆಂದು ಭ್ರಮೆಗೊಂಡು
ಮನವನೆರಡುಮಾಡಿಕೊಂಬುದು ಅಜ್ಞಾನ ನೋಡಾ.
ಉರದ ಮಧ್ಯದಲ್ಲಿ ಒರಗಿಪ್ಪ ಗಂಡನಂ ಬಿಟ್ಟು
ಇನ್ನು ನೆರೆಮನೆಯ ಗಂಡರಿಗೆ ಮನವನಿಕ್ಕುವ
ಹಾದರಗಿತ್ತಿಗೆ ಪತಿಭಕ್ತಿಯೆಲ್ಲಿಯದೋ?
ಶ್ರೀಗುರು ಕರುಣಿಸಿಕೊಟ್ಟ ಕ್ರಿಯಾಲಿಂಗವನು
ಅರ್ಚನೆ ಪೂಜನೆಯಿಂದ ಅರ್ಪಿತಾವಧಾನದಿಂದ
ಧ್ಯಾನ ಧಾರಣದಿಂದ ಸಮತೆ ಸಮಾಧಾನದಿಂದ
ಧ್ಯಾನ ಮೌನ ಉಪಾವಸ್ಥೆಯಿಂದ
ಮುನಿಸು ಮೂದಲೆಯಿಂದ ಕಾಮಿಸಿ ಕಂಬನಿದುಂಬಿ
ಕರಸ್ಥಲದಲಿಪ್ಪ ಪ್ರಾಣೇಶ್ವರನ ಶ್ರೀ ಚರಣಕ್ಕೆ
ಲಲಾಟ ಪೂಜೆಯಂ ಮಾಡಿ
ಒಲಿಸಿ ಒಡಗೂಡಿ ನಿಜಮುಕ್ತಿವಡೆಯದೆ
ಆಕಾರವಂ ಮರೆದು ನಿರಾಕಾರವಂ ಕೂಡಿಹೆನೆಂಬ
ಲೋಕದ ಕಾಕುಮಾನವರೆಲ್ಲಾ ಕಾಲ ಕಾಮರಿಗೆ ತುತ್ತಾಗಿ
ಕಾಲಾಗ್ನಿರುದ್ರನ ಹೊಡೆಗಿಚ್ಚಿಗೊಳಗಾದರಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೩೭ ॥

೭೩೮

ನಿಜಗುಣ ಚೆಂದಿಮರಸರು ಕರಸ್ಥಲದ ನಾಗಿದೇವರೊಳಗಾದ
ಎಲ್ಲಾ ವಿರಕ್ತರು ಆವ ಕ್ರಿಯೆಯಲ್ಲಿ ಆಚರಿಸಿ ಲಿಂಗೈಕ್ಯರಾದರೆಂದು
ಕೆಟ್ಟು ನುಡಿವ ಭವಹೇತುಗಳು ನೀವು ಕೇಳಿರೆ
ಅವರು ತುಂಬಿದ ತೊರೆಯ ಸಂಭ್ರಮದಿಂದ ಹಾಯ್ದರು.
ಶಕ್ತಿಯ ಮುಂದೆ ಹಾಲು ಬೋನ ಹಣ್ಣು ಕಜ್ಜಾಯವಿಕ್ಕಿರಲು
ಆ ಶಕ್ತಿಯ ಮಾತನಾಡಿಸಿ ಉಂಡರು.
ವಿಷವ ಪದಾರ್ಥವೆಂದು ಕೊಡಲು ಉಂಡು ದಕ್ಕಿಸಿಕೊಂಡರು.
ಭಿಕ್ಷಕ್ಕೆ ಹೋದಲ್ಲಿ ಕಾಮುಕ ಸ್ತ್ರೀ ಬಂದು ಹಿಡಿದಡೆ
ಅವರಂಗಳದಲ್ಲಿ ಅವಳ ಅನುಭವಿಸುವಾಗ
ಆ ಸಮಯದಲ್ಲಿ ಮನೆಯೊಡೆಯ ಬಂದು ಕಡಿದರೆ
ಖಂಡೆಯದ ಮೊನೆಗೆ ಬಯಲಾಗಿ ತೋರಿದರು.
ಪಚ್ಚೆಯ ಕಡಗಮಂ ತಿರುಗಣೆಯ ಮಡುವಿಗಿಟ್ಟು

ತಿರುಗಿ ಕರೆದುಕೊಂಡರು.
ಕೆಂದೆಂಗಿನ ಎಳನೀರ ಭಾವಾರ್ಪಣವ ಮಾಡಿದರು.
ಪಟ್ಟವರಸಿನ ರಾಣಿಯು ಪಲ್ಲಕ್ಕಿಯಮೇಲೆ ಹೋಗುವಲ್ಲಿ
ಅವಳ ಬಟ್ಟಮೊಲೆವಿಡಿದು ಮುದ್ದಾಡಿ
ಇರಿಸಿಕೊಂಡು ಬಯಲಾದರು.
ದೇವೇಂಪ್ರಭೋಗಮಂ ಬಿಟ್ಟರು.
ತನುವ ನಿಲಿಸಿ ಪ್ರಾಣವ ಕೊಂಡೊಯ್ದರು.
ಉಂಗುಷ್ಠದಲ್ಲಿ ಧರಿಸಿದ್ದ ಲಿಂಗಮಂ ತೆಗೆಯಲು
ಆ ಲಿಂಗದ ಕೂಡೆ ಪ್ರಾಣವ ಕಳುಹಿದರು.
ಮಿಡಿವಿಲ್ಲಿನೊಳಗೆ ಲಿಂಗವನೆಚ್ಚು
ಆ ಲಿಂಗದೊಡನೆ ನಿರವಯಲಾದರು.
ಉಪಾಧಿಕೆಯೊಡಲಾಸೆಯ ಸುಟ್ಟರು.
ಚಳಿ ಮಳೆಯೆನ್ನದೆ ಅರಣ್ಯದಲ್ಲಿದ್ದರು.
ಹಸಿದರೆ ಕೆಸರ ಮೆದ್ದರು.
ಅವರು ಲಿಂಗಾಂಗರೂಢರಾಗಿ ಲಿಂಗದಲ್ಲೈಕ್ಯರಾದರು.
ನೀವು ಅವರಂತೆ ಲಿಂಗಾಂಗವ ತೋರಬೇಕು.
ಅದಿಲ್ಲದಿದ್ದರೆ ಜ್ಞಾನಕ್ರಿಯಗಳಿಂದಿರಬೇಕು.
ಅದಿಲ್ಲದಿದ್ದರೆ ಸುಮ್ಮನಿದ್ದು ಶಿವಶರಣರ ಮನಸಿಂಗೆ ಬರಬೇಕು.
ಹೀಗಲ್ಲದೆ
ಹೊಟ್ಟೆಯಕಿಚ್ಚಿನ ಬಾಯ ಬಡಕುತನವೇತಕಯ್ಯ ನಿಮಗೆ?
ಆನೆ ಮದವೆದ್ದು ಸೋಮವೀಥಿಯ ಸೂರೆಮಾಡಿತೆಂದು
ಆಡು ಮದವೆದ್ದು ಬೇಡಗೇರಿಗೆ ಹೋಗಿ
ಕೊರಳ ಮುರಿಸಿಕೊಂಬಂತೆ
ಅಂದಿನ ಕಾಲದ ಹನುಮ ಲಂಕೆಯ ದಾಂಟಿದನೆಂದು
ಇಂದಿನ ಕಾಲದ ಕಪಿ ಹಳ್ಳವ ದಾಂಟಿದಂತೆ
ಅರ್ತಿಯಿಂದ ಅರಸುವೆಣ್ಣು ಉಪ್ಪರಿಗೆಯನೇರಿದಳೆಂದು
ತೊತ್ತು ತಿಪ್ಪೆಯನೇರಿದಂತೆ
ರಾಜಕುಮಾರ ತೇಜಿಯನೇರಿದನೆಂದು
ರಜಕನ ಕುವರ ಕುನ್ನಿಯನೇರಿದಂತೆ
ಬಲಮುರಿಯ ಶಂಖ ಧಿಗಿಲು ಭುಗಿಲೆಂದು ಝುಂಕರಿಸಿತೆಂದು
ಕೆರೆಯೊಳಗಣ ಗುಳ್ಳೆ ಕೀಚು ಕೀಚೆಂದಂತೆ
ತಮ್ಮಿರವ ತಾವರಿಯದೆ

ಬಾಳುವ ಕಾಲದಲ್ಲಿ ಮರಣದ ಮದ್ದಕೊಂಬ
ಈ ಖೂಳ ಮಾನವರ ಎನಗೊಮ್ಮೆ ತೋರದಿರಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೩೨ ॥

೨೩೯

ಮಾಯೆಯ ಕಾಲು ಬಾಯಿಗೆ ಸಿಕ್ಕಿಕೊಂಡು ತೊತ್ತಳದುಳಿಸಿಕೊಂಬ
ಮರುಳುಮಾನವರ ಬಗೆಯ ನೋಡಯ್ಯ ಮನವೇ.
ಗಂಡುದೊತ್ತಿನಂತೆ ಮಂಡೆಯ ಬೋಳಿಸಿಕೊಂಡು
ಮುಂಡೆ ಹಾರುವಿತಿಯಂತೆ ಬೆಳುವಲ್ಲ ಮಾಡಿಕೊಂಡು
ತೆಂಗ ಪೋಟಾಡುವಂತೆ
ಕರಸ್ಥಳದಲ್ಲಿ ಲಿಂಗವ ಹಿಡಿದುಕೊಂಡು
ತವುಳಿಕಾರನಂತೆ ಮನವ ಕದ್ದು ಮಾತನಾಡುತ್ತ
ಮನೆಮನೆಗೆ ಹೋಗಿ
ಹೊಟ್ಟೆಯ ಕಿಚ್ಚಿಗೆ ಸಟೆಯ ಶಾಸ್ತ್ರವ ಹೇಳುವ ಡೊಂಬರಂತೆ
ಪುಸ್ತಕವ ಹಿಡಿದುಕೊಂಡು ಪುರಜನವ ಮೆಚ್ಚಿಸುವ ಕೋಡಿಗರಂತೆ
ವೇಷಮಂ ಹಲ್ಲುಣಿಸಿಕೊಂಡು
ನಿಜ ವಿರಕ್ತರಂತೆ ದೇಶಮಧ್ಯದಲ್ಲಿ ಸುಳಿದು
ವಿರಕ್ತರ ಕಂಡಲ್ಲಿ ಸಟೆಯ ಭಕ್ತಿಯ ಹೊಕ್ಕು
ಹೂಸಕದುಪಚಾರಮಂ ನುಡಿದು
ಮಾಡಿ ನೀಡುವ ಭಕ್ತರ ಮನೆಗೆ ಭಿಕ್ಷಮುಖದಿಂದ ಹೋಗಿ
ನಚ್ಚು ಮಚ್ಚ ನುಡಿದು
ಉಂಡುಕೊಂಡು ದಿನಕಾಲಮಂ ನೂಂಕಿ
ಮನೋವಿಕಾರದಿಂದ ಪರಧನ ಪರಸ್ತ್ರೀಯರಿಗಳುಪಿ
ಭವಿ ಭಕ್ತರೆನ್ನದೆ ಉಂಡುಟ್ಟಾಡಿ
ತೀರ್ಥ ಪ್ರಸಾದವೆಂಬ ಅಳುಕಿಲ್ಲದೆ ಚೆಲ್ಲಾಡಿ
ನಡೆಯಿಲ್ಲದ ನಡೆಯ ನಡೆದು
ನುಡಿಯಿಲ್ಲದ ನುಡಿಯ ನುಡಿದು
ತನ್ನ ಕಪಟವನರಿಯದೆ
ಶಿವಶರಣರ ಮೇಲೆ [ಮಿಥ್ಯವನಾಡಿ] ಹಗೆಯಂ ಸಾಧಿಸಿ
ಹಸಿಯ ಹಾದಿಗರಂತೆ ಹುಸಿಯ ನುಡಿದು
ಶಿವಶರಣರ ಮೇಲೆ ಒಂದೊಂದ ನುಡಿದು ಗಳಹುತಿಪ್ಪ
ನರಕ ಜೀವರುಗಳಿಗೆ ಮಾಡಿದ ಪರಿಭವದ ರಾಟವಾಳವು

ಗಿರುಕು ಗಿರುಕೆಂದು ತಿರುಗುತ್ತಲಿದೆಯಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೩೮ ॥

೭೪೦

ಉಚ್ಚೆಯ ಬಚ್ಚಲ ಹಲವು ಭಗದ ದೇವತೆಯ
ಮಾಯೆಯ ಹಾವಳಿಯ ನೋಡಿರಣ್ಣ.
ಕರಣಹಸುಗೆಯನೋದುವಣ್ಣಗಳ ಕಾಲ ಹಿಡಿದೆಳೆಯಿತು ಮಾಯೆ.
ಮಿಶ್ರಾರ್ಪಣಗಳನೋದುವಣ್ಣಗಳ
ಮೀಸೆಯ ಹಿಡಿದುಯ್ಯಾಲೆಯನಾಡಿತು ಮಾಯೆ.
ಆತ್ಮನ ಸ್ವರೂಪವನರಿವಣ್ಣಗಳ ತನಗಾಳು ಮಾಡಿತ್ತು ಮಾಯೆ.
ಶಿವಜ್ಞಾನವ ಕೀಳುಮಾಡಿ
ತತ್ವಸ್ವರೂಪವನರಿವಣ್ಣಗಳ ತನಗೆ ಮುದ್ದು ಮಾಡಿಸಿ ಮೋಹಿಸಿ
ಬತ್ತಲೆ ನಿಲಿಸಿತು ಮಾಯೆ.
ಮಂತ್ರಗೋಪ್ಯವನೋದುವಣ್ಣಗಳ
ಕುಟಿಲವೆಣ್ಣಿನ ಕುಮಂತ್ರಕ್ಕೆ ಸಿಕ್ಕಿಸಿ ಕಾಡಿತು ಮಾಯೆ.
ಬರಿಯ ವೈರಾಗ್ಯದ ಮಾಡುವಣ್ಣಗಳ
ಸ್ತ್ರೀಯರ ಮುಡಿಯ ಸಿಂಗರಿಸುವಂತೆ ಮಾಡಿತು ಮಾಯೆ.
ಜಪಧ್ಯಾನಗಳ ಮಾಡುವಣ್ಣಗಳ ಭಗಧ್ಯಾನವ ಮಾಡಿಸಿತು ಮಾಯೆ.
ಲಿಂಗವ ಕರಸ್ಥಳದಲ್ಲಿ ಹಿಡಿದಣ್ಣಗಳ
ಅಂಗನೆಯರ ಹಿಂದಣ ಪುಕಳಿಯ ಮುಂದಣ ಯೋನಿಚಕ್ರವ
ಮುಟ್ಟಿಸಿ ಮೂಗನರಿಯಿತು ಮಾಯೆ.
ಪ್ರಸಾದ ಲೇಹ್ಯವ ಮಾಡುವಣ್ಣಗಳ
ಪೊಸಜವ್ವನೆಯರ ತುಟಿಯ ಲೋಳೆಯ ನೆಕ್ಕಿಸಿತು ಮಾಯೆ.
ಬೆಡಗಿನ ವಚನವನೋದುವಣ್ಣಗಳ
ಸಖಿಯರ ತೊಡೆಯಲ್ಲಿ ಹಾಕಿತು ಮಾಯೆ.
ವಚನವನೋದುವಣ್ಣಗಳ ರಚನೆಗೆ ನಿಲಿಸಿತು ಮಾಯೆ.
ಇದು ಕಾರಣ,
ಇಚ್ಛೆಯ ನುಡಿದು ಕುಚ್ಛಿತನಾಗಿ
ಬರಿವಿರಕ್ತನಂತೆ ಹೊಟ್ಟೆಯ ಹೊರೆದು
ಹೊನ್ನು ಹೆಣ್ಣು ಮಣ್ಣು ದೊರೆತಲ್ಲಿ ಹಿಡಿದಿಹ

ಕರ್ಮಿಯೆಂಬ ಕಾಳಮೂಳರಿಗೆಲ್ಲಿಯದೋ ವಿರಕ್ತಿ?
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೩೯ ॥

೭೪೧

ಒಡು ಒಡಕು ಹುರುಳಿ ಹುಳುಕು
ಹುರಿವಾಕೆಯ ಕೈ ಸೊಟ್ಟು ಕಣ್ಣು ಕುರುಡು
ಮೆಲುವಾತ ಬೋಡ ಮೂಕೊರೆಗ.
ಇಂತಿವರು ತಮ್ಮ ಭೋಗಕ್ಕೆ ಸುರಪತಿಯ ಭೋಗವ ಜರಿವ
ನರಿಕುರಿಗಳ ಸಾನೇನೆಂಬೆನಯ್ಯ,
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೪೦ ॥

೭೪೨

ಎನ್ನಂತರಂಗದಲ್ಲಿ ಕುಮಂತ್ರ ಕುಡಿವರೆದ ಭೇದವ
ನಿನ್ನೊಡನೆ ಮರೆಯಿಲ್ಲದೆ ಆಡುತಿಪ್ಪೆನಯ್ಯ ಒಡೆಯನೇ.
ಜಾಗ್ರದವಸ್ಥೆಯಲ್ಲಿ ಲೋಕೋಪಚಾರ ಬಿಡದು.
ಜಿಹ್ವಾಲಂಪಟತನ ಉಡುಗದು.
ಸುಖ ದುಃಖಕ್ಕೆ ಎನ್ನ ಮನ ಮರುಗುತಿರ್ದ ಬಳಿಕ
ಎನಗೆ ಇಷ್ಟಲಿಂಗದ ಪೂಜೆಯೆಲ್ಲಿಯದೋ?
ಸ್ವಪ್ನಾವಸ್ಥೆಯಲ್ಲಿ ಬ್ರಹ್ಮಾಂಡದೊಳಗುಳ್ಳ
ಕಡೆ ಮೊದಲಿಲ್ಲದ ದುರ್ವಿಕಾರ ಸ್ವಪ್ನದಲ್ಲಿ
ಹರಿದಾಡುವ ಜೀವಂಗೆ
ಪ್ರಾಣಲಿಂಗದ ಪೂಜೆಯೆಲ್ಲಿಯದೋ?
ಸುಷುಪ್ತ್ಯವಸ್ಥೆಯಲ್ಲಿ ಲಿಂಗವ ಕೂಡಿ ಮೈಮರೆದಿರದೆ
ಕನಸಿನಲ್ಲಿ ಸ್ತ್ರೀಯ ಕೂಡಿ ಇಂದ್ರಿಯಂಗಳ ಬಿಟ್ಟು ಆನಂದಿಸುವ ಕಾಮವಿಕಾರಿಗೆ
ಭಾವಲಿಂಗದ ಪೂಜೆಯೆಲ್ಲಿಯದೋ?
ಈ ಪ್ರಕಾರದ ದುರ್ಗುಣಂಗಳ ನಾನು ಮರೆಮಾಡಿಕೊಂಡು
ಶರಣನೆಂದು **ವಚನ**ಂಗಳ ಹಾಡಿದರೆ
ತಿಂಗಳ ಬೆಳಕಿನ ಸಿರಿಯಂ ಕಂಡು ನಾಯಿ
ಹರುಷಂಗೊಂಡು ಬಳ್ಳಿಟ್ಟು ಬೊಗಳಿದಂತಾಯಿತು.
ಅದೇನು ಕಾರಣವೆಂದೊಡೆ
ನೀ ಎನ್ನ ಅಂಗದ ಮೇಲಕ್ಕೆ ಬಂದೆ ಎಂಬ ಸಂತೋಷಕ್ಕೆ

ಉಬ್ಬಿ ಕೊಬ್ಬಿ ಅಹಂಕರಿಸಿ ಹಾಡಿದೆನಲ್ಲದೆ
ನುಡಿವಂತೆ ನಡೆಯಲಿಲ್ಲ ನಡೆದಂತೆ ನುಡಿಯಲಿಲ್ಲ.
ಇದು ಕಾರಣ
ಎನ್ನ ಮನದ ಕಾಳಿಕೆಯ ಕರುಣದಿಂದ ಕಳೆದು
ಅವಸ್ಥಾತ್ರಯಂಗಳಲ್ಲಿ ನಿನ್ನನಪ್ಪಿ ಅಗಲದಿಪ್ಪಂತೆ
ಎನ್ನನು ಪರಮಕಾಷ್ಠಿಯ ಮಾಡಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೪೧ ॥

೭೪೩

ಕೆಳದಿಯರೊಡನಾಡಿ ಕಾಮಕಲಾಪ್ರೌಢಿಯನರಿದು
ಪ್ರಾಣಕಾಂತನ ಒಲಿಸಿ ಸುರತಸಂಯೋಗದೊಳಿಪ್ಪ ಕಾಮಿನಿಗೆ
ಮತ್ತೆ ಕೆಳದಿಯರ ಕೂಡಣ ವಿನೋದಕ್ಕೆ ಮನವೆಳಸುವುದೇ
ಅಯ್ಯ?
ಶರಣ ಸಂಭಾಷಣೆಯಿಂದ
**ಪುರಾತನವಚನದ** ಪರಮಾಮೃತವ ದಣಿಯಲುಂಡು
ಆ ವಚನದ ಹೆಜ್ಜೆವಿಡಿದು ಹೋಗಿ
ತ್ರಿವಿಧಲಿಂಗದ ಆದ್ಯಂತಮಂ ಅರಿದು
ಆ ಲಿಂಗಂಗಳಂ ಅರಿವಿಡಿದಾಚರಿಸಿ
ಷಡಂಗ ಷಡ್ವಿಧಲಿಂಗಂಗಳಿಗೆ ಮಾತೃಸ್ಥಾನವಾದ
ನಿಷ್ಕಳಬ್ರಹ್ಮವೆನಿಪಾ **ಸಿದ್ಧಲಿಂಗ ಪ್ರಭುವಂ** ಕಂಡು
ಆ **ಸಿದ್ಧಲಿಂಗ ಪ್ರಭುವಂ**
ಹೃದಯ ತ್ರಿಪುಟಿ ಸುಷುಮ್ನೆಯೆಂಬ
ಮೂರು ಸಿಂಹಾಸನದ ಮೇಲೆ
ಗುರು ಲಿಂಗ ಜಂಗಮವೆನಿಸಿ ಮೂರ್ತಿಗೊಳಿಸಿಕೊಂಡು
ತುಂಬಿ ತುಳುಕದ ಮಂದಮಾರುತ ಮೈ ಸೋಂಕದ
ಭಾನುವಿನಕಿರಣಕ್ಕೆ ಬಳಲದ
ಚಂದ್ರೋದಯಕ್ಕೆ ಅಂದವಾಗದ
ಜನರ ಕಣ್ಮನಕ್ಕೆ ಅಗೋಚರವಾದ
ಜಾಜಿ ಸಂಪಿಗೆ ಇರವಂತಿಗೆ ಮಲ್ಲಿಗೆ
ಕೆಂದಾವರೆ ಸೇವಂತಿಗೆ ಎಂಬ
ಭಾವಪುಷ್ಪಂಗಳಲ್ಲಿ ಪೂಜೆಯಂ ಮಾಡಿ
ಬೀಗಿ ಬೆಳವುತ್ತಿಪ್ಪ ಶರಣಂಗೆ
ಮತ್ತೆ ಅನುಭಾವದ ಸುಖ ಸವಿದೋರುವುದೇ ಅಯ್ಯ?

ಕೆನೆ ಸಾಧ್ಯವಾದ ಬಳಿಕ ಹಾಲಿನ ಹಂಗೇತಕಯ್ಯ?
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೪೨ ॥

೭೪೪

ಪರಮ ಲಿಂಗಾಂಗಿಯ ಇರವು ಎಂತಿಪ್ಪುದಯ್ಯಾ ಎಂದರೆ
ವಾಕ್ಕು ಮೂಲ ಮಂತ್ರದಲ್ಲಿ ಜೋಕೆಗುಂದದೆ
ಪಾಣಿ ಶಿವಲಿಂಗಪೂಜೆಗೆ ಮಾಣದೆ ಮನಸಂದು
ಪಾದವೇಕಾಂತವಾಸಕ್ಕೆ ಹರುಷದಿಂದ ಪದವಿಟ್ಟು
ಗುಹ್ಯ ಬ್ರಹ್ಮಚಾರಿಯಾಗಿ ಆನಂದಮಂ ಅಳಿದು
ಪಾಯುವಿನ ಗುಣ ಅದಕ್ಕದು ಸಹಜವೆಂದು ನೆಲೆಮಾಡಿ
ಕರ್ಮೇಂದ್ರಿಯಂಗಳ ಕಾಲ ಮುರಿದು
ಶಬ್ದ ಮೊದಲು ಗಂಧ ಕಡೆಯಾದ ನಾಲ್ಕೊಂದು ವಿಷಯಂಗಳು
ತನುಮನವ ಸೋಂಕುವುದಕ್ಕೆ ಮುನ್ನವೇ[ಲಿಂಗಾ]ರ್ಪಣವ ಮಾಡಿ
ಆ ವಿಷಯಂಗಳಿಗೊಳಗಾಗದೆ
ಆತ್ಮತ್ರಯಂಗಳ ತಾಳ ಕೊಯ್ದು
ಪಂಚಬ್ರಹ್ಮಂಗಳಂ ಪಂಚೇಂದ್ರಿಯಂಗಳಲ್ಲಿ ಪ್ರತಿಷ್ಠೆ ಮಾಡಿ
ಕಾಮುಕತನವ ಕಡೆಗೊತ್ತಿ
ಜ್ಞಾನೇಂದ್ರಿಯಂಗಳ ನೆನಹ ಕೆಡಿಸಿ
ಪ್ರಾಣ ಮೊದಲಾದ ಮೂರೆರಡು ವಾಯುಗಳ
ಜರಿದು ಸೆರೆವಿಡಿದು
ಮೊದಲಾ ವಾಯುವಿನ ವಶಮಾಡಿ
ಪಂಚವಾಯುವಿನ ಸಂಚಮಂ ಕೆಡಿಸಿ
ಅಂತಃಕರಣಗಳೆಂಬ ಮಾನಸಗಳ್ಳರ ಕಳೆದು
ದ್ವಾದಶಪತ್ರದ ಹೊಂದಾವರೆಯ ಲಿಂಗಕ್ಕೆ
ನಿರಂಜನ ಪೂಜೆಯಂ ಮಾಡುವ ಪೂಜಾರಿಗಳಂ ಮಾಡಿ
ಕರಣಂಗಳಂ ಗೆಲಿದು
ಅಂತಃಕರಣಂಗಳ ಚಿಂತೆಗೊಳಗುಮಾಡಿ
ಆತ್ಮಜ್ಞಾನಮಂ ಅಡಗಿಸಿ ಭೋಗಮಂ ನೀಗಿ
ಪಂಚಭೂತಂಗಳೆಂಬ ಭೂಪರಿಗೆ ಪರಿಚಾರಕರಾವ
ಇಪ್ಪತ್ತೈದುಜೀವರಿಗೆ ನಿರುದ್ಯೋಗಮಂ ಮಾಡಿ
ಫಲಪದಂಗಳನೊದೆದು
ನಿರ್ವಯಲಕೂಟಕ್ಕೆ ಮನವಿಟ್ಟು
ಇಷ್ಟಲಿಂಗಮಂ ಕರದಲ್ಲಿ ಪಿಡಿದು ಪೂಜೆಯಂ ಮಾಡಿ

ಆ ಲಿಂಗಮಂ
ಅನಿಮಿಷ ದೃಷ್ಟಿಯಿಂದ ನೋಡುವುದೀಗ ಲಿಂಗದ ನೋಟ.
ಅದು ರತ್ನಾಕರ ಜಂಬೂದ್ವೀಪದ ಸುನಾದ ಬ್ರಹ್ಮದ ಕೂಟ.
ಹೀಂಗಲ್ಲದೆ
ಪಂಚಭೂತಂಗಳ ಕುಟಿಲವ್ಯಾಪಾರಂಗಳೆಂಬ ಬಲೆಗೆ ತಾನು ಸಿಲ್ಕಿ
ಭಕ್ತಿ ಜ್ಞಾನ ವೈರಾಗ್ಯಮಂ ಸುಟ್ಟುರುಹಿ
ಉಪಾಧಿಕೆಯಲ್ಲಿ ಒಡವೆರದು
ಹೊಟ್ಟೆಯ ಕಿಚ್ಚಿಗೆ
ಇಷ್ಟಲಿಂಗಮಂ ಕರದಲ್ಲಿ ಪಿಡಿದು ಪೂಜೆಯಂ ಮಾಡಿ
ಇದಿರ ಮೆಚ್ಚಿಸುವೆನೆಂದು ಆ ಲಿಂಗವ ನೋಡುವ
ನೋಟವೆಂತಿಪ್ಪುದೆಂದೊಡೆ
ಹೊತ್ತು ಹೋಗದ ಕೋಡಗ
ತಿರುಗಾಟಕ್ಕೆ ಬಂದು ಮಾಣಿಕ್ಯಮಂ ಕಂಡು
ಆ ಮಾಣಿಕ್ಯವ ಕರದಲ್ಲಿ ಪಿಡಿದು
ಮೂಸಿ ನೆಕ್ಕಿ ನೋಡಿ ಹಲ್ಲುಗಿರಿದು ನೋಡಿ ನೋಡಿ
ಕಾಲಮಂ ಕಳೆದ ತೆರನಂತಾಯಿತಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೪೩ ॥

೭೪೫

ಲೋಕದ ನಚ್ಚಮಚ್ಚನೆ ನೀಗಿ ನಿಚ್ಚಟನಾಗಿ
ಜ್ಞಾನ ಕ್ರೀಗಳಿಂದಾಚರಿಸಿ ಅಂಗಲಿಂಗದ ಸಂಬಂಧಿಗಳಾದ
ಶಿವಲಿಂಗಮೋಹಿಗಳು ನೀವು ಕೇಳಿರಯ್ಯ.
ಶರಣರು ಮುಕ್ತಿಪುರಕ್ಕೆ ಹೋಗುವ
ಬಟ್ಟೆಯ ಬೆಡಗು ಬಿನ್ನಾಣದ ಪರಿಯ.
ಆ ಮುಕ್ತಿಪುರಕ್ಕೆ ಹೋಗುವ ಹಾದಿಯಲ್ಲಿ
ಒಂದು ಪಂಚವರ್ಣದ ಕಣ್ಣು ಮನಕ್ಕೆ ಮುಟ್ಟದ
ಮಹಾಪಟ್ಟಣವೊಂದೇ.
ಆ ಪಟ್ಟಣವ ಕಟ್ಟಿದುದು ಮೊದಲಾಗಿ ಊರು ಹಾಳಾಗಿಪ್ಪುದು.
ಆ ಪಟ್ಟಣದ ನಡುವೆ ಹೋಗುತಿಪ್ಪ ಹಾದಿಯಲ್ಲಿ
ಅಹಂಕಾರ ಮಮಕಾರಂಗಳೆಂಬ ಎರಡು
ಪಟ್ಟಣಂಗಳು ತುಂಬಿ ತುಳುಕುತ್ತಿವೆ.
ಆ ಎರಡು ಪಟ್ಟಣಕ್ಕೆ ಹೋದ ಹಾದಿ ಹೆಬ್ಬಟ್ಟೆಗಳಾಗಿಪ್ಪವು.

ಆ ಎರಡು ಪಟ್ಟಣದ ವಿದಿಕ್ಕಿನಲ್ಲಿ ಒಂದು ಭಕ್ತಿಪುರವಿದೆ.
ಆ ಭಕ್ತಿಪುರಕ್ಕೆ ಹಾದಿಯಿಲ್ಲ.
ಆ ಭಕ್ತಿಪುರಕ್ಕೆ ಹೋದಲ್ಲದೆ
ಮುಂದಣ ಮುಕ್ತಿಪುರದ ಬಟ್ಟೆಯ ಕಾಣಬಾರದು.
ಆ ಮುಂದಣ ಪಯಣಗತಿಯ ಸಂಚುವರಿಯುವ ಸಂಬಂಧಮಂ
ಶರಣ ಮನದಲ್ಲಿ ತಿಳಿದು
ಆ ಹೆಬ್ಬಟ್ಟೆಗಳಲ್ಲಿ ಹೋದರೆ
ಎಂಬತ್ತುನಾಲ್ಕುಲಕ್ಷ ಪ್ರಕಾರದ ನರಮಂಡಲದಲ್ಲಿ
ಸುಳಿವುದು ತಪ್ಪದೆಂದು ಅದಕ್ಕೆ ಹೇಹಮಂ ಮಾಡಿ
ತಮ್ಮವರು ಹೋದ ನಸುದೋಯಲ ಬೆಂಬಳಿವಿಡಿದು ಹೋಗಿ
ಭಕ್ತಿಪುರಮಂ ಕಂಡು
ಆ ಭಕ್ತಿಪುರದ ನಡುವೆ ಹೋಗುತಿಪ್ಪ ಹಾದಿಯಲ್ಲಿ
ಹೆಬ್ಬುಲಿ ಕರಡಿ ಕಳ್ಳ ರಕ್ಕಸಿ ಕರಿಘಟೆಯಿಪ್ಪ
ಮಹಾಸರೋವರದ ಅರಣ್ಯವಿದೆ.
ಆ ಸರೋವರದ ಮಧ್ಯದಲ್ಲಿ
ಎಂಟುಕಲಶದ ಚೌಕಾಮಂಟಪದ ಸುವರ್ಣದ ದೇಗುಲವಿದೆ.
ಆ ದೇಗುಲದಲ್ಲಿ
ಮುಕ್ತಿರಾಜ್ಯಕ್ಕೆ ಪಟ್ಟವ ಕಟ್ಟುವ ಸಮರ್ಥಿಕೆಯನುಳ್ಳ
ಜಂಗಮಲಿಂಗವಿದೆ.
ಆ ಜಂಗಮಲಿಂಗಮಂ ಶರಣ ಕಂಡು ಹರುಷಗೊಂಡು
ಭಾವದಲ್ಲಿಯೇ ಷೋಡಶೋಪಚಾರ ಅಷ್ಟವಿಧಾರ್ಚನೆಗಳಿಂದ
ಪೂಜೆಯಂಮಾಡಿ ತನ್ನ ಮನದಭೀಷ್ಟೆಯಂ
ನೆನೆದಂತೆ ಮನದಲ್ಲಿ ಬೇಡಿ
ದೇಹ ಮನ ಪ್ರಾಣಕುಳ್ಳ
ಸಮಸ್ತ ಕರಣಾದಿ ಗುಣಗಳೆಲ್ಲಮಂ ಸುಟ್ಟು ಬೊಟ್ಟಿಕ್ಕಿ
ನಿರ್ಮಲ ಸ್ವರೂಪನಾಗಿ ಅಲ್ಲಿಂದ ಮುಂದೆ ನಡೆವುತಿಪ್ಪಾಗ
ಊರ್ಧ್ವದಿಕ್ಕಿನ ಆಕಾಶದಲ್ಲಿ
ಅನೇಕ ಚೋದ್ಯವನೊಳಕೊಂಡಿಪ್ಪ ತ್ರಿಪುರಮಂ ಕಂಡು
ಆ ತ್ರಿಪುರದ ಮೇಲೆ ಬ್ರಹ್ಮರಂಧ್ರವೆಂಬ
ಕೈಲಾಸದ ಕಡೆಯ ಬಾಗಿಲೊಳಿಪ್ಪ ಐಕ್ಯಸ್ಥಲವೆನಿಸುವ
ಆರುನೆಲೆಯ ಮಾಣಿಕ್ಯ ವರ್ಣದ ಉಪ್ಪರಿಗೆ ತಳನುಂ ಕಂಡು
ಪತಿಯಿದ್ದ ಮನೆಯ ಬಾಗಿಲಂ ಸತಿ ಸಾರುವಂತೆ

ಆ ಶರಣ ಆ ಉಪ್ಪರಿಗೆಯ ಬಾಗಿಲಂ ಸಾರೆ
ಆ ಬಾಗಿಲಿನಲ್ಲಿ
ಡಾಕಿನಿ ಶಾಕಿನಿ ರಾಕಿನಿ ಲಾಕಿನಿ ಕಾಕಿನಿ ಹಾಕಿನಿಯರೆಂಬ
ಷಡ್ವಿಧಶಕ್ತಿಗಳಿಗೆ ಆದಿನಾಯಕಿಯಾಗಿಪ್ಪಳು,
ಊರ್ಧ್ವಕುಂಡಲಿನಿಯೆಂಬ ಜ್ಞಾನಶಕ್ತಿ.
ಆ ಶಕ್ತಿ ಆ ಬಾಗಿಲಿಗೆ ದ್ವಾರಪಾಲಕಿಯಾಗಿಪ್ಪಳು.
ಅವಳು ಅಂಗರ ತಡೆವಳು ನಿರಂಗರ ಬಿಡುವಳೆಂಬುವ
ಶರಣ ತನ್ನ ಮನದಲ್ಲಿ ತಾನೆ ತಿಳಿದು
ಅಲ್ಲಿಪ್ಪ ಮಹಾಲಿಂಗಮಂ ಶರಣ
ಮಂತ್ರಮಾಲೆಯಂ ಮಾಡಿ ಮನದಲ್ಲಿ ಧರಿಸಿ
ಸೋಮ ಸೂರ್ಯರ ಕಲಾಪಮಂ ನಿಲಿಸಿ
ಕುಂಭಮಂ ಇಂಬುಗೊಳಿಸಿ
ಝೇಂ ಝೇಂ ಎಂದು ಝೇಂಕರಿಸುತಿಪ್ಪ ಪೆಣ್ದುಂಬಿಯ ನಾದಮಂ
ಜಿಣಿಮಿಣಿ ಎಂದು ಸಣ್ಣರಾಗದಿಂದ
ಮನವ ಸೋಂಕುತಿಪ್ಪ ವೀಣಾನಾದಮಂ
ಲಿಂಗ ಲಿಂಗವೆಂದು ಕರೆವುತಿಪ್ಪ ಘಂಟಾನಾದಮಂ
ಥಮ್ಮ ಥಮ್ಮ ಎನುತಿಪ್ಪ ಪೂರಿತವಾದ ಭೇರಿನಾದಮಂ
ಚಿಟಿಲು ಪಟಿಲು ಧಿಗಿಲು ಭುಗಿಲೆನುತಿಪ್ಪ ಮೇಘನಾದಮಂ
ಓಂ ಓಂ ಎಂದು ಎಲ್ಲಿಯೂ ಎಡೆವಿಡದೆ
ಉಲಿವುತಿಪ್ಪ ಪ್ರಣವನಾದಮಂ
ಓಂ ಹ್ರಾಂ ಹ್ರೀಂ ಹ್ರೂಂ ಹ್ರೇಂ ಹ್ರೈಂ ಹ್ರೌಂ ಹ್ರಂ ಹ್ರಃ
ಎಂದು ಬೆಳಗ ಬೀರುತಿಪ್ಪ ದಿವ್ಯನಾದಮಂ
ಅರಣ್ಯ ಘೋಳಿಡುವಂತೆ ಹೂಂಕರಿಸುತಿಪ್ಪ ಸಿಂಹನಾದಮಂ
ಈ ಪ್ರಕಾರದ ನಾದಂಗಳಂ ಶರಣ ಕೇಳಿ
ಮನವಣೆದು ಹರುಷಂ ಮಿಕ್ಕು
ಆ ಬಾಗಿಲು ದಾಂಟಿ ಪಶ್ಚಿಮ ದಿಕ್ಕಿಗೆ ಮುಖವಾಗಲೊಡನೆ
ಚೌಕಮಧ್ಯದಲ್ಲಿ
ವಜ್ರ ವೈಡೂರ್ಯ ಪುಷ್ಯರಾಗ ಗೋಮೇಧಿಕ
ಇಂತಿವರೊಳಗಾದ ನವರತ್ನಂಗಳ
ಕಂಭ ಬೋದಿಗೆ ಹಲಗೆಗಳಿಂದ ಅನುಗೈದು ತೀರಿಸಿದ
ಮಹಾ ಶ್ರೀ ಗುರುವಿನ ಒಡ್ಡೋಲಗದ ಹಜಾರದ ಪ್ರಭೆಯು
ಆಕಾಶವನಲೆವುತಿಪ್ಪುದಂ ಕಂಡು
ಬಹಿರಾವರಣವ ಸೇರಿಪ್ಪ ಪ್ರಾಕಾರದ ಗೋಡೆಯ

ಎರಡು ಹದಿನಾರು ಗೊತ್ತುಗಳಲ್ಲಿ
ಈಶಾನ ಪರ್ಜನ್ಯ ಜಯಂತರೊಳಗಾದ ಮೂವತ್ತೆರಡು ತಂಡದ
ಅನಂತ [ವಾ]ಸ್ತುದೇವತೆಗಳ ಕಾವಲ ಅತ್ಯುಗ್ರಮಂ ಕಂಡು
ಶರಣರ್ಗೆ ತಡೆಹಿಲ್ಲವೆಂಬುದಂ ತನ್ನ ಮನಜ್ಞಾನದಿಂದವೇ ಅರಿದು
ಕಾವಲಾಗಿಪ್ಪ [ವಾ]ಸ್ತುದೇವತೆಗಳ ಕೃಪಾದೃಷ್ಟಿಯಿಂದ ಸಂತೈಸಿ
ಮುಕ್ತಿಪುರಕ್ಕೆ ಮೂಲ ಸೂತ್ರವಾದ ಬ್ರಹ್ಮರಂಧ್ರದ ಪೂರ್ವ ದಿಕ್ಕಿನ
ಚಂದ್ರಮಂಡಲದಲ್ಲಿಪ್ಪ ಬಾಗಿಲ ಬೀಗಮಂ ತೆಗೆದು
ಶರಣನು ಒಳಹೊಗಲೊಡನೆ
ಬಹಿರಾವರಣದ ವೀಥಿ ಓಲಗದೊಳಿಪ್ಪ
ಹರಿ ಸುರ ಬ್ರಹ್ಮಾದಿ ದೇವತೆಗಳು
ಮನು ಮುನಿ ಗರುಡ ಗಂಧರ್ವ ಇಂದ್ರ ಚಂದ್ರರೊಳಗಾದ
ಅನಂತರೆಲ್ಲರು ಚೆವರಿ ಕೆಲಸಾರೆ
ಸೋಮವೀಥಿಯೊಳಿಪ್ಪ ಅನಂತರುದ್ರರೊಳಗಾದ
ಇಪ್ಪತ್ತುನಾಲ್ಕುತಂಡದ ಅನಂತರು
ಶಿವನ ಒಡ್ಡೋಲಗದ ವೈಭವವ ನಡೆಸುವ ಪರಿಚಾರಕರು ಬಂದು
ಶರಣ ಲಿಂಗದೃಷ್ಟಿ ಸಂಧಾನವಾಗಲೆಂದು ಸಮ್ಮುಖವಂ ಮಾಡೆ
ಸೂರ್ಯವೀಥಿಯೊಳಿಪ್ಪ
ಉಮೆ ಚಂಡೇಶ್ವರ ನಂದಿಕೇಶ್ವರರೊಳಗಾದ
ಹದಿನಾರುತಂಡದ ಅನಂತರುದ್ರರು ಬಂದು
ಶರಣನ ಸನ್ಮಾನವಂ ಮಾಡೆ
ಅಗ್ನಿವೀಥಿಯೊಳಿಪ್ಪ ವಾಮೆ ಜ್ಯೇಷ್ಠೆಯರೊಳಗಾದ
ಎಂಟುತಂಡದ ಅನಂತರಶಕ್ತಿಯರು ಬಂದು
ಶರಣನ ಇದಿರ್ಗೊಳೆ
ಕರ್ನಿಕಾವೀಥಿಯೊಳಗಿಪ್ಪ ಅಂಬಿಕೆ ಗಣಾನಿಯರೊಳಗಾದ
ನಾಲ್ಕುತಂಡದ ಶಕ್ತಿಯರು ಬಂದು
ಶರಣನ ಕೈವಿಡಿದು ಕರೆತರೆ
ಈ ಸಿಂಹಾಸನಕ್ಕೆ ಮೇಲುಗದ್ದಿಗೆಯೆನಿಪ ಸಿಂಹಾಸನ
ಶುಭ್ರವರ್ಣದ ಹತ್ತುನೂರುದಳವ ಗರ್ಭೀಕರಿಸಿಕೊಂಡು
ಬೆಳಗುತಿಪ್ಪ ಒಂದು ಮಹಾಕಮಲ.
ಆ ಕಮಲದಳಂಗಳೊಳಗಿಪ್ಪ ಪ್ರಣವ.
ಆ ಪ್ರಣವ ಸ್ವರೂಪರಾದ
ಬಸವಾದಿ ಅಸಂಖ್ಯಾತ ಪ್ರಮಥಗಣಂಗಳು

ಆ ಪ್ರಮಥಗಣಂಗಳಿಗೆ ಶರಣಭಾವದಲ್ಲಿಯೇ ಸಾಷ್ಟಾಂಗವೆರಗಿ
ನಮಸ್ಕಾರವ ಮಾಡೆ
ಆ ಗಣಂಗಳು ಕೃಪಾದೃಷ್ಟಿಯಿಂದ ಶರಣನ ಮೈದಡವಿ
ಅನಂತಕೋಟಿ ಸೋಮ ಸೂರ್ಯ ಕಾಲಾಗ್ನಿ ಮಿಂಚು ನಕ್ಷತ್ರಂಗಳು
ತಮ್ಮ ತಮ್ಮ ಪ್ರಕಾಶಮಂ ಒಂದೇ ವೇಳೆ ತೋರಿದ
ಬೆಳಗಿನೊಡ್ಡವಣೆ ಪಂಚಪತ್ರಂಗಳಾವರಣಂಗಳಾಗಿ ತೋರ್ಪ
ಹದಿನಾರುದಳಂಗಳೊಳಿಪ್ಪ ಷೋಡಶಕಳಾಪುಂಜವೆನಿಸುವ
ಪದ್ಮಿನಿ ಚಂದ್ರಿಣಿಯರೊಳಗಾದ
ಷೋಡಶ ಲಾವಣ್ಯ ಶಕ್ತಿನಿಯರ ಬೆಳಗಂ ಕಂಡು
ಆ ಬೆಳಗಿನೊಡ್ಡವಣೆ ಬಯಲಾಯಿತ್ತು.
ಈ ಕರ್ಣಿಕಾಪ್ರದೇಶದ ಪಂಚಪತ್ರಂಗಳೊಳಗಿಪ್ಪ
ಪಂಚಪ್ರಣವಂಗಳ ಬೆಳಗಂ ಕಂಡು
ಆ ಲಾವಣ್ಯ ಶಕ್ತಿನಿಯರ ಬೆಳಗು ತೆಗೆದೋಡಿತ್ತು.
ಕರ್ಣಿಕಾಗ್ರದೊಳು ನಿಜನಿವಾಸವಾಗಿ ಮೂರ್ತಿಗೊಂಡಿಪ್ಪ
ನಿಷ್ಕಲಬ್ರಹ್ಮದ ಚರಣದಂಗುಲಿಯ ನಖದ ಬೆಳಗಂ ಕಂಡು
ಆ ಪ್ರಣವಂಗಳ ಬೆಳಗು ತಲೆವಾಗಿದವು.
ಇಂತಪ್ಪ ಘನಕ್ಕೆ ಘನವಾದ ಮಹಾಲಿಂಗವಂ
ಶರಣಂ ನಿಟ್ಟಿಸಿ ಕಟ್ಟಕ್ಕರಿಂ ನೋಡಿ
ಮನಂ ನಲಿದು ಆನಂದಾಶ್ರುಜಲಂ ಸುರಿದು
ಪುಳಕಂಗಳುಣ್ಮೆ ರೋಮಾಂಚನಂ ಗುಡಿಗಟ್ಟೆ
ಪ್ರಣವದ ನುಡಿ ತಡೆಬಡಿಸಿ ನಡೆ ದಟ್ಟಡಿಸುವ ಕಾಲದಲ್ಲಿ
ಕರ್ಪೂರದ ಪುತ್ಥಳಿ ಬಂದು ಉರಿಯ ಪುತ್ಥಳಿಯನಾಲಂಗಿಸಿದಂತೆ
ಶರಣಂ ಬಂದು ಆ ಘನಲಿಂಗಮಂ ಅಮರ್ದಪ್ಪಿ
ಪುಷ್ಪ ಪರಿಮಳದಂತೆ ಏಕವಾಗಿ ಘನಲಿಂಗ ತಾನೆಯಾದ,
ಮಹಾಗುರು **ಸಿದ್ಧೇಶ್ವರಪ್ರಭು**ವಿನ ಚರಣಮಂ
ನಾನು ಕರಸ್ಥಲದಲ್ಲಿ ಪಿಡಿದು ಪೂಜೆಯಂ ಮಾಡಲೊಡನೆ
ಎನ್ನ ತನುವೇ ಪಂಚಬ್ರಹ್ಮ ಪ್ರಾಣವೇ ಪರಬ್ರಹ್ಮವಾಯಿತು.
ಪ್ರವೃತ್ತಿಯ ಬಟ್ಟೆ ಹುಲ್ಲು ಹುಟ್ಟಿತು.
ನಿವೃತ್ತಿಯ ಬಟ್ಟೆ ನಿರ್ಮಲವಾಯಿತು.
ಉಯ್ಯಾಲೆಯ ಮಣೆ ನೆಲೆಗೆ ನಿಂದಂತೆ ಆದೆನಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೪೪ ॥

೭೪೬

ಮಣ್ಣು ಹಿಡಿದವರೆಲ್ಲರೂ ಬ್ರಹ್ಮನ ಸೃಷ್ಟಿಗೊಳಗಾದರು.
ಹೊನ್ನು ಹಿಡಿದವರೆಲ್ಲರೂ ವಿಷ್ಣುವಿನ ಸ್ಥಿತಿಗೊಳಗಾದರು.
ಹೆಣ್ಣು ಹಿಡಿದವರೆಲ್ಲರೂ ರುದ್ರನ ಸಂಹಾರಕ್ಕೊಳಗಾದರು.
[ಮ]ಣ್ಣು ಹೊನ್ನು [ಹೆ]ಣ್ಣ ಬಿಟ್ಟು ಲಿಂಗಾಂಗ ಸಂಯೋಗವರಿಯದೆ
ಸದಾಚಾರದಲ್ಲಿ ತಿರಿದುಂಡು ಆತ್ಮಸುಖಿಯಾದವರೆಲ್ಲರೂ
ಫಲಭೋಗಕ್ಕೊಳಗಾದರು.
ನಾನು ಮೂರ ಬಿಟ್ಟು ಆರ ಕಂಡು ಮೂದೇವರ ಗೆಲಿದೆ.
ಆರ ಬಿಟ್ಟು ಮೂರ ಕಂಡು ಮನ ಮುಳುಗಿ
ಮೂರೊಂದು ಪದವ ದಾಂಟಿ ಶಿವನೊಳಗಾದೆನಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೪೫ ॥

೭೪೭

ಕತ್ತಲೆ ಭೂತಳದ ವರ್ತಮಾನಕ್ಕೆ ಹೇಸಿ ಮನ ಓತು
ಸುಚಿತ್ತ ನಿರ್ವಾಣದಾಸೋಹಮಂ ಕೈವಿಡಿದೆನಮ್ಮಾ
ಎನ್ನ ತನುವೇ ವನಿತೆ ಕರಣಂಗಳೇ ದ್ರವ್ಯ
ಉರವಣಿಸಿದ ಭಕ್ತಿ ಇಂತೀ ತ್ರಿವಿಧ ಪದಾರ್ಥಗಳಂ ಹಿಡಿದು
ಗಣಂಗಳ ಮುಂದೆ
ಕರಪಾತ್ರೆಯೆಂಬ ಕಾಯಕಮಂ ಕಟ್ಟಿದೆ.
ಎನ್ನ ಸಮಯಾಚಾರಕ್ಕೆ ಸ್ಮಶಾನ ಮಂಟಪದಲ್ಲಿ ಗುರುವ ತಡೆದೆ
ಹೃದಯಮಂಟಪದಲ್ಲಿಹ ಜಂಗಮವ ತಡೆದೆ.
ಎನ್ನ ಸ್ವಯ ಕಾಯಕಮಂ ತಂದು
ರೂಪು ಪದಾರ್ಥಂಗಳಂ ನಿರ್ಭಾವ ಪರಿಯಾಣದಲ್ಲಿ ಗಡಣಿಸಿ
ಗುರುವಿನ ಮುಂದಿಕ್ಕಿದೆ.
ರುಚಿ ಪದಾರ್ಥಂಗಳಂ ಸುಮನ ಪರಿಯಾಣದಲ್ಲಿ ಗಡಣಿಸಿ
ಜಂಗಮದ ಮುಂದಿಕ್ಕಿದೆ.
ತೃಪ್ತಿ ಪದಾರ್ಥಂಗಳಂ ಭಾವದ ಪರಿಯಾಣದಲ್ಲಿ ಗಡಣಿಸಿ
ಲಿಂಗದ ಮುಂದಿಕ್ಕಿದೆ.
ಇಂತೀ ನಿರಂಜನ ಗುರು ಲಿಂಗ ಜಂಗಮ ಸವಿದು
ಒಕ್ಕು ಮಿಕ್ಕ ತ್ರಿವಿಧಪ್ರಸಾದವನುಂಡು
ತ್ರಿವಿಧಕರ್ಮ ನಾಸ್ತಿಯಾಗಿ ನಾನು ಬದುಕಿದೆನಮ್ಮ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೪೬ ॥

೭೪೮

ಮುಚ್ಚಿ ಮೂದಲಿಸಿ ಮೊನೆಗೆಡಿಸುವ
ಮಾಯಾಪ್ರಪಂಚಿನ ಬಲೆಗೆ ಸಿಲುಕದೆ
ನಾನು ಧ್ಯಾನ ಮೌನ ಉಪಾವಸ್ಥೆಯಿಂದ
ಷಟ್‌ಕೋಣೆಯ ಸುವರ್ಣದ್ವೀಪದ ಅರಸಿನ ಬಲವಿಡಿದು
ಪಂಚವಿಂಶತಿತತ್ವಂಗಳೆಂಬ ಮಾಯಾಸುಭಟರ ಸ[ೂ]ಡಕೊಂದು
ಪಂಚಬ್ರಹ್ಮವೇ ಪಂಚಭೂತಂಗಳಾಗಿ
ತನುವಿಡಿದು ಲಿಂಗನಿಷ್ಠೆಯಿಂದ
ಓಂಕಾರಸ್ವರೂಪವಾಗಿ ಅಹಂಕರಿಸದೆ
ದಾಸೋಹಂಭಾವದಿಂದ
ತ್ರಿಕೂಟಪರ್ವತಕ್ಕೆ ಪಶ್ಚಿಮದಿಕ್ಕಿನಲ್ಲಿ
ಅನಂತ ಕಾರ್ಮುಗಿಲ ಮಿಂಚಿನಂತೆ
[ತೋರುತ್ತಿಪ್ಪು]ದೀಗ ಶಾಂಭವದ್ವೀಪ.
ಆ ಶಾಂಭವದ್ವೀಪವಲ್ಲಿ ನೆಲಸಿರ್ಪ
ನಿರವಯಲ ಬೆಳ್ದಿಂಗಲ ಬೀಜಮಂ ನಾನು ಕಂಡು
ಕಂಬನಿದುಂಬಿ ನಮಸ್ಕಾರಮಂ ಮಾಡಿದ ಘನದಿಂದ
ಬ್ರಹ್ಮ ವಿಷ್ಣು ರುದ್ರ ಇಂತೀ ಮೂವರಂ ಕೆಡೆಮೆಟ್ಟಿ
ಜನನ ಮರಣಂಗಳಂ ಗೆಲಿದು ನಾನು ಹುಟ್ಟುಗೆಟ್ಟೆನಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೪೭ ॥

೭೪೯

ಕತ್ತಲೆ ಸತ್ತು ಬೆಳಗು ಬೀದಿವರಿಯಿತ್ತು ನೋಡಾ ಎಲೆ ಅಮ್ಮಾ.
ಪಂಚತತ್ವಂಗಳ ಮೇಲಿಪ್ಪ ಆಚಾರಲಿಂಗದ ನಿಷ್ಠೆಯ ಬಲದಿಂದ
ಆ ಖಂಡಿತ ಕರಣಂಗಳನೊಳಕೊಂಡಿಪ್ಪ
ಈಷಣತ್ರಯಂಗಳ ಬೀಯವನಿಕ್ಕಿ ತ್ಯಾಗಾಂಗಿಯಾದೆ.
ಹದಿನೇಳುತತ್ವಂಗಳ ಮೇಲಿಪ್ಪ
ಜಂಗಮಲಿಂಗದ ಎಚ್ಚರಿನ ಬಲದಿಂದ
ಅನಂತಸವಿಯನೊಳಕೊಂಡಿಪ್ಪ ಷಡುರಸಾನ್ನಂಗಳಲಿ
ಲಿಂಗಭೋಗೋಪಭೋಗಿಯಾಗಿ ಭೋಗಾಂಗಿಯಾದೆ.
ಮೂರುತತ್ವಂಗಳ ಮೇಲಿಪ್ಪ
ನಿರಾಕಾರಲಿಂಗದ ಅರುಹಿನ ಬಲದಿಂದ

ಪ್ರಣವ ಪಂಚಾಕ್ಷರಿಯ ಸ್ಮರಿಸಿ
ಮನ ಮಹಾಲಿಂಗದಲ್ಲಿ ಯೋಗವಾಗಿ ಯೋಗಾಂಗಿಯಾಗಿ
ಚಿದ್ಬ್ರಹ್ಮಾಂಡದೊಳಗಣ ಏಳುತಾವರೆಯ ಮೇಲಿಪ್ಪ
ನಿಷ್ಕಲ ಚಿದ್ಬಿಂದುಲಿಂಗಕ್ಕೆ ಪ್ರಾಣಪೂಜೆಯಂ ಮಾಡೆ
ಮಹಾಜ್ಞಾನಬಲದಿಂದ ನವದ್ವೀಪಗಳ ಲಿಂಗಂಗಳ ಬೆಳಗು
ಪಿಂಡಾಂಡದಲ್ಲಿ ಪ್ರಭಾವಿಸಿ ತೋರುತಿರ್ಪುದಾಗಿ
ನಾನು ಸರ್ವಾಂಗಲಿಂಗಿಯಾದೆನಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೪೮ ॥

೭೫೦

ಆಕಾಶದಿಂದಲಾಯಿತ್ತು ನಿರಾಕಾರ.
ಆ ನಿರಾಕಾರ ಚಿದಕಾಶದ ಮೇಲೆ ನಿಂದಿತ್ತು.
ಆ ನಿರಾಕಾರದಿಂದಲಾಯಿತ್ತು ಭಾವ.
ಆ ಭಾವ ಕರಣದ ಮೇಲೆ ನಿಂದಿತ್ತು.
ಆ ಭಾವದಿಂದಲಾಯಿತ್ತು ಮನ.
ಆ ಮನವು ಸೂಕ್ಷ್ಮದ ಮೇಲೆ ನಿಂದಿತ್ತು.
ಆ ಮನದಿಂದಲಾಯಿತ್ತು ತನು.
ಆ ತನು ಸ್ಥೂಲದ ಮೇಲೆ ನಿಂದಿತ್ತು.
ಆ ತನುವು ಮನವ ಕೂಡಿದಲ್ಲಿಯೇ ತನು ನಷ್ಟವಾಯಿತ್ತು.
ಮನುವು ಭಾವವ ಕೂಡಿದಲ್ಲಿಯೇ ಮನ ನಷ್ಟವಾಯಿತ್ತು.
ಭಾವವು ನಿರಾಕಾರವ ಕೂಡಿದಲ್ಲಿಯೇ ಭಾವ ನಷ್ಟವಾಯಿತ್ತು.
ಇಂತೀ ತ್ರಿವಿಧ ನಷ್ಟವಾದಲ್ಲಿಯೇ
ಶರಣನ ಹುಟ್ಟು ನಷ್ಟವಾಯಿತ್ತು
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೪೯ ॥

೭೫೧

ಮೂರ್ತಿದುತನುವಿಡಿದ ನರಗುರಿಗಳೆಲ್ಲಾ ಭಕ್ತರಪ್ಪರೆ? ಅಲ್ಲಲ್ಲ.
ನಮ್ಮ ಶಿವಭಕ್ತರ್ಗೆ
ಸದ್ಗೋಷ್ಠಿ ಸದಾಚಾರಂಗಳೇ ಪಾದಂಗಳು.
ಗುರುವೇ ಸ್ಥೂಲತನು.
ಲಿಂಗವೇ ಸೂಕ್ಷ್ಮತನು.
ಜಂಗಮವೇ ಕಾರಣತನು.

ಸಮ್ಯಜ್ಞಾನವೇ ಪ್ರಾಣ.
ತೀರ್ಥ ಪ್ರಸಾದವೇ ನೇತ್ರಂಗಳು.
ಇಂತಪ್ಪ ತನುವಿಡಿದು ತಾವು ತಮ್ಮ ಊರಿಗೆ ಹೋಗುವಂತೆ
ಮುಕ್ತಿಪುರಕ್ಕೆ ಹೋಗಿ
ನೊಸಲಕಣ್ಣು ಪಂಚಮುಖ ದಶಭುಜದ
ಉಮಾವಲ್ಲಭನಾದ ಪರಶಿವನ ಓಲಗದಲ್ಲಿ
ಗಣಂಗಳ ಮಧ್ಯದಲ್ಲಿ ಓಲಾಡುತ್ತಿಪ್ಪರಯ್ಯ ನಮ್ಮವರು.
ಇಂತಪ್ಪ ತನುವಿಡಿಯದ ಅಜ್ಞಾನಿಗಳು
ಕಿರುಬಟ್ಟೆಯಲ್ಲಿ ಹರಿದು ಕಂಗೆಟ್ಟು ಕಾಡ ಹೊಕ್ಕು
ಕಣ್ಣು ಕಾಣದೆ ಕಮರಿಯ ಬಿದ್ದು ಬಳಲುತ್ತಿಪ್ಪರಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೫೦ ॥

೭೫೨

ಸದಮಲಭಕ್ತಿಯಿಂದ ಭಕ್ತನು ನಮಸ್ಕರಿಸಿ
ಎನ್ನ ಕೈವಿಡಿದು ತನ್ನ ಮಠಕ್ಕೆ ಕರೆದೊಯ್ದು
ತಾನು ಪಟ್ಟಗದ್ದುಗೆಯ ಮೇಲೆ ಕುಳಿತು
ಚಿನ್ನದ ಪರಿಯಾಣದಲ್ಲಿ ಪಂಚಾಮೃತವನುಣ್ಣುತ
ಎನ್ನ ಕದವಿನ ಮರೆಯಲ್ಲಿ ಕುಳ್ಳಿರಿಸಿ
ಒಡೆದ ಓಡಿನಲ್ಲಿ ಅಂಬಲಿಯನೆರೆಯಲು
ಎಲೆ ದೇವ ಎನ್ನ ಮನದಲ್ಲಿ ನೊಂದೆನಾದೊಡೆ
ನಾನು ಕರಪಾತ್ರನಲ್ಲ ಅಪಾತ್ರನು.
ಅದೇನು ಕಾರಣವೆಂದೊಡೆ
ನಾನು ಮೂರಾರುತಿಂಗಳು
ಜನನಿಯ ಜಠರವೆಂಬ ಸೆರೆಮನೆಯಲ್ಲಿ ಸಿಕ್ಕಿರುವಾಗ
ಎನಗೆ ಸದಾಕಾಲ ಉಣಲಿಟ್ಟು
ಸಲಹಿದವ ನೀನೋ? ಅವನೋ?
ಆ ಸೆರೆಮನೆಯಿಂದ ಎನ್ನ ಕೈವಿಡಿದು ಕರೆತಂದು
ಶಿವಲಾಂಛನಮಂ ಕರುಣದಿಂದಿತ್ತು
ಮರ್ತ್ಯಲೋಕದಲ್ಲಿ ಎನ್ನಂ ಪೂಜ್ಯನ ಮಾಡಿದಾತ
ನೀನೋ? ಅವನೋ?
ಇದು ಕಾರಣ
ಇಕ್ಕುವಾತ ಅವನೆಂಬುದು ಎನ್ನಲಿಲ್ಲ.
ಎಚ್ಚವನಿದ್ದಂತೆ ಅಂಬಿಗೆ ಮುನಿವರೇ ಅಯ್ಯ?

ನಾನು ಉಂಡುಟ್ಟು ಸುಖಿಯಾದರೆ ನಿನ್ನ ಹಾಡುವೆ.
ನಾನು ಹಸಿದು ನೊಂದೆನಾದರೆ ನಿನ್ನಂ ಬೈವೆನಲ್ಲದೆ
ಮಾನವರ ಹಂಗು ಎನಗೇತಕಯ್ಯ?
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೫೧ ॥

೭೫೨

ಅಯ್ಯಾ ಬಸವಾದಿ ಪ್ರಮಥರೇ
ನಿಮ್ಮ ಕರುಣಪ್ರಸಾದವ ನಾನು ಆದಿ ಅನಾದಿಯಲ್ಲಿ
ದಣಿಯಲುಂಡ ದೆಸೆಯಿಂದಲೆನ್ನ ತನು
ಷಟ್ಸ್ಥಲವನೊಳಕೊಂಡು ಉದಯವಾಯಿತ್ತು.
ಎನ್ನ ಪಾದ ಷಟ್‌ಸ್ಥಲಕ್ಕೆ ಒಪ್ಪವಿಟ್ಟಲ್ಲದೆ ಅಡಿಯಿಡದು.
ಎನ್ನ ಹಸ್ತ ಷಟ್‌ಸ್ಥಲಪತಿಯನಲ್ಲದೆ ಪೂಜೆಯ ಮಾಡದು.
ಎನ್ನ ಘ್ರಾಣ ಮೊದಲು
ಶ್ರೋತ್ರ ಕಡೆಯಾದ ಪಂಚೇಂದ್ರಿಯಂಗಳು
ಷಟ್ಸ್ಥಲವನಲ್ಲದೆ ಆಚರಿಸವು.
ಎನ್ನ ಮನ ಷಟ್ಸ್ಥಲದ ಷಡ್ವಿಧಲಿಂಗಂಗಳ ಮೇಲಲ್ಲದೆ
ಹರುಷಂಗೊಂಡು ಹರಿದಾಡದು.
ಎನ್ನ ಪ್ರಾಣ ಷಟ್‌ಸ್ಥಲಕ್ಕೆ ಸಲೆ ಸಂದ
ಅಕ್ಕಮಹಾದೇವಿಯವರು ಹೋದ ಬಟ್ಟೆಯಲ್ಲಿ ನಡೆಯುವುದಲ್ಲದೆ
ಕಿರುಬಟ್ಟೆಯಲ್ಲಿ ನಡೆಯದು.
ಇಂತಿವೆಲ್ಲವು ಷಟ್ಸ್ಥಲವನಪ್ಪಿ ಅವಗ್ರಹಿಸಿದ
ನೀಲಾಂಬಿಕೆಯಮ್ಮನವರ ಗರ್ಭದಲ್ಲಿ ಉದಯವಾದ
ಮೋಹದಕಂದನಾದ ಕಾರಣ
ಎನಗೆ ಷಟ್ಸ್ಥಲಮಾರ್ಗದ ವಿರತಿ ನೆಲೆಗೊಂಡು ನಿಂದಿತಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೫೨ ॥

೭೫೪

ಕುಂದಣಕ್ಕೆ ಒಪ್ಪುವ ಒರೆ ಬಣ್ಣದಮಿಶ್ರವಂ
ಚಿನ್ನವರದ ಬಲ್ಲನಲ್ಲದೆ
[ಗೇ]ಯ್ದುಂಬ ಒಕ್ಕಲಮಗನೆಂತು ಬಲ್ಲನಯ್ಯ?
ವಸ್ತುವನೊಡಗೂಡುವ ಸಂಧಾನದ ನುಡಿಯಗಡಣದ
ಲಿಂಗ ಬೆಳಗ ಲಿಂಗಸಂಧಾನಿ ಬಲ್ಲನಲ್ಲದೆ

ಅರಿವು ಮರವೆಯನೊಳಕೊಂಡಿಪ್ಪ
ವೇಷಧಾರಿಗಳವರೆಂತು ಬಲ್ಲರಯ್ಯ?
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೫೩ ॥

೧೫೫

ಬಿಲ್ಲುಕೋಲವಿಡಿದು ಮನ ಬಂದ ಪರಿಯಲ್ಲಿ ಎಚ್ಚಾಡುವಾತ
ಅರ್ತಿಕಾರನಲ್ಲದೆ ಬಿಲ್ಲುಗಾರನಲ್ಲವಯ್ಯ.
ಹೊನ್ನು ಹೆಣ್ಣು ಮಣ್ಣು ಬಿಟ್ಟು
ಚೆನ್ನಾಗಿ ಮಂಡೆಯ ಬೋಳಿಸಿಕೊಂಡು
ಹಾಡಿದ **ವಚನ**ಂಗಳನೇ ಹಾಡಿಕೊಂಡು
ಮುಂದೆ ವಸ್ತುವ ಸಾಧಿಸಕೊಳ್ಳಲರಿಯದೆ
ಹಸಿದರೆ ತಿರಿದುಂಡು
ಮಾತಿನಮಾಲೆಯ ಕಲಿತಾತ
ವಿರಕ್ತನೆಂಬ ನಾಮಕ್ಕರುಹನಲ್ಲದೆ
ಸಂಧಾನಕ್ಕರುಹನಲ್ಲ.
ಅದೇನು ಕಾರಣವೆಂದೊಡೆ
ಭಕ್ತಿಯೆಂಬ ಬಿಲ್ಲ ಹಿಡಿದು
ಸಮ್ಯಜ್ಞಾನವೆಂಬ ಹೆದೆಯನೇರಿಸಿ
ಲಿಂಗನಿಷ್ಠೆಯೆಂಬ ಬಾಣವ ತೊಟ್ಟು
ಆಕಾಶದ ಮೇಲಣ ಮುಪ್ಪುರದ ಮಧ್ಯದ
ಮಾಣಿಕ್ಯದ ಕಂಭವ ಮುಳುಗಲೆಚ್ಚು
ಮಾಯೆಯ ಬಲುಹ ಗೆಲಿದ
ಶರಣನೀಗ ಲಿಂಗಸಂಧಾನಿಯಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೫೪ ॥

೧೫೬

ಶಿವನ ಕೃಪೆಯಿಂದ ಎನ್ನ ಪುಣ್ಯ ಹಣ್ಣಾದಂತೆ
ಸರ್ವಾಂಗದಲ್ಲಿ ಪ್ರಸಾದಂಗಳ ನಾನು ಎಡೆಬಿಡುವಿಲ್ಲದೆ
ಧರಿಸಿದ್ದ ಸಂಭ್ರಮವ ನೋಡಾ ಎಲೆ ಅಮ್ಮ.
ಮುಕ್ತಿಪುರವ ತೋರುವ ಪ್ರಸಾದವ ಪಂಚಸ್ಥಾನದಲ್ಲಿ ಧರಿಸಿದೆ.
ಪ್ರಸಿದ್ಧಪ್ರಸಾದ ಸಿದ್ಧಪ್ರಸಾದ ಶುದ್ಧಪ್ರಸಾದ
ಆದಿಪ್ರಸಾದ ಮಹಾಪ್ರಸಾದ

ಎಂಬ ಪಂಚಪ್ರಸಾದಂಗಳಂ ಪಂಚಸ್ಥಾನದಲ್ಲಿ ಧರಿಸಿದೆ.
ಪ್ರಸಿದ್ಧಪ್ರಸಾದವ ಆಕಾಶದಲ್ಲಿ ಧರಿಸಿದೆ.
ಸಿದ್ಧಪ್ರಸಾದವ ಬ್ರಹ್ಮರಂಧ್ರದಲ್ಲಿ ಧರಿಸಿದೆ.
ಆಚಾರಾದಿ ಪ್ರಸಾದಮಂ ತತ್ವ ಎರಡರ ಮೇಲೆ ಧರಿಸಿದೆ.
ಮಹಾಪ್ರಸಾದಮಂ ಪಶ್ಚಿಮದಲ್ಲಿ ಧರಿಸಿದೆ.
ಇಂತಪ್ಪ ಪರಬ್ರಹ್ಮವೆನಿಸುವ ಪ್ರಸಾದಂಗಳ ನಾನು
ದಿನಾರಾತ್ರಿಯೆನ್ನದೆ ಪೂಜೆಯ ಮಾಡಿದಲ್ಲಿ
ಎನಗೆ ಪರಮಾರ್ಥದರಿವು ಕೈಸಾರಿತು.
ಆ ಪರಮಾರ್ಥದರಿವು ಕೈಸಾರಿದಲ್ಲಿಯೇ
ಎನ್ನ ತನು ಮನ ಧನಂಗಳು ಪದಾರ್ಥಗಳಾದವು.
ಆ ಪದಾರ್ಥಂಗಳ ಏಕಚಿತ್ತ ಮನೋಭಾವದಲ್ಲಿ
**ತೋಂಟದ ಸಿದ್ಧಲಿಂಗ**ನೆಂಬ ನಿಷ್ಕಲಬ್ರಹ್ಮಕ್ಕೆ ಸಮರ್ಪಿಸಿದಲ್ಲಿಯೇ
ಎನಗೆ ಅನಿತ್ಯತೆ ಕೆಟ್ಟು ನಿತ್ಯವೆಂಬುದು ನಿಜವಾಯಿತಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೫೫ ॥

೭೫೭

ತೊಟ್ಟುಬಿಟ್ಟ ಹಣ್ಣಾಗಿ ಎನಗೆ ನಿಜೈಕ್ಯದ ಬಟ್ಟೆ
ನಿರುತವಾಯಿತಯ್ಯ.
ಪರಿಭವಕ್ಕೆ ತರುವ ಪಂಚಭೂತಂಗಳೆಂಬ ವಾರಕವ
ಪಂಚಬ್ರಹ್ಮಕ್ಕೊಪ್ಪಿಸಿದೆ.
ಅಗಣಿತ ಕರಣಂಗಳನೊಳಕೊಂಡು
ಸುಖವೊಂದು ದುಃಖಹದಿನಾರಕ್ಕೊಳಗು ಮಾಡುವ
ಆತ್ಮನೆಂಬ ವಾರಕವ ಪರಬ್ರಹ್ಮಕ್ಕೊಪ್ಪಿಸಿದೆ.
ಉತ್ಪತ್ತಿ ಸ್ಥಿತಿ ಪ್ರಳಯವೆಂಬ ವಾರಕವ
ಮೂದೇವರಿಗೊಪ್ಪಿಸಿದೆ.
ಇಂತಪ್ಪ ಋಣಂಗಳ ತಿದ್ದಿ ಸಿರಿವಂತನಾಗಿ
ಭವರಾಜನ ಬಲವ ಗೆದ್ದೆ.
ಭೂತಳದ ಭೋಗವ ನಚ್ಚು ಮುಚ್ಚೆಂಬ ಕೋಳಮಂ ಕಳೆದೆ.
ಹೊಕ್ಕು ಹೊರಡುವ ತ್ರಿಭುವನವೆಂಬ ತ್ರಿಪುರಮಂ ಸುಟ್ಟು
ಸಂಸಾರವೆಂಬ ಸಪ್ತಸಮುದ್ರಂಗಳಂ ದಾಂಟಿದೆ.
ಉನ್ಮನಿಯಪುರದ ಬಚ್ಚಬರಿಯ ಬೆಳಗಿನ
ಬಯಲಬ್ರಹ್ಮವ ಮರೆಹೊಕ್ಕೆನಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೫೬ ॥

೭೫೮

ತಾಪತ್ರಯಂಗಳಿಗೆನ್ನನು ಒಳಗುಮಾಡುವ
ಕರ್ಮತ್ರಯಂಗಳು ಕೆಟ್ಟಕೇಡ ನೋಡಾ ಎಲೆ ತಂಗಿ.
ಕಾಯದ ಕಳವಳಕಂಜಿ ಸಂಚಿತ ಮಡಗುವ
ಹೊನ್ನ ಬಿಟ್ಟಲ್ಲಿಯೇ ಸಂಚಿತಕರ್ಮ ನಾಸ್ತಿಯಾಯಿತು.
ಬಂದುದು ಮೊದಲಾಗಿ ಆಗಾಗಲೇ ಅನುಭವಿಸಿ
ಲಬ್ಧವನುಳಿಯಲೀಯದೆ ಭೋಗವನುಂಬ
ಹೆಣ್ಣ ಬಿಟ್ಟಲ್ಲಿಯೇ ಪ್ರಾರಬ್ಧಕರ್ಮ ನಾಸ್ತಿಯಾಯಿತು.
ಇಂದು ಬಿತ್ತಿ ಮುಂದಕ್ಕೆ ಆಗುಮಾಡುವ
ಮಣ್ಣ ಬಿಟ್ಟಲ್ಲಿಯೇ ಆಗಾಮಿಕರ್ಮ ನಾಸ್ತಿಯಾಯಿತು.
ಸಂಚಿತಕರ್ಮ ನಾಸ್ತಿಯಾದಲ್ಲಿಯೇ
ಬ್ರಹ್ಮನ ಸೃಷ್ಟಿಯೆಂಬ ಸೆರೆಮನೆ ಹಾಳಾಯಿತು.
ಪ್ರಾರಬ್ಧಕರ್ಮ ನಾಸ್ತಿಯಾದಲ್ಲಿಯೇ
ವಿಷ್ಣುವಿನ ಸ್ಥಿತಿಯೆಂಬ ಸಂಕೋಲೆ ತಡೆಗಡೆಯಿತು.
ಆಗಾಮಿಕರ್ಮ ನಾಸ್ತಿಯಾದಲ್ಲಿಯೇ
ರುದ್ರನ ಸಂಹಾರವೆಂಬ ಪ್ರಳಯಾಗ್ನಿ ಕೆಟ್ಟಿತ್ತು.
ಇಂತೀ ಮೂವರ ದಾಂಟಿದಲ್ಲಿಯೇ
ತಂದೆ ತಾಯಿಗಳೆನ್ನ ಕೈವಿಡಿದೆತ್ತಿಕೊಂಡು
ಬಸವಾದಿ ಪ್ರಮಥರ ಕೈ ವಶವ ಮಾಡಿದರಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೫೭ ॥

೭೫೯

ಕನ್ನವನ್ನಿಕ್ಕಿ ಚಿನ್ನವ ತಂದು
ಜಂಗಮಾರ್ಚನೆಯ ಮಾಡುವದಾವ ಸದಾಚಾರ?
ಹಾದರವಮಾಡಿ ಹಾಗವ ತಂದು
ಜಂಗಮಾರ್ಚನೆಯ ಮಾಡುವದಾವ ಸದಾಚಾರ?
ಗಾಣವ ಹಾಕಿ ಮೀನ ಹಿಡಿದು ತಂದು
ಜಂಗಮಾರ್ಚನೆಯ ಮಾಡುವದಾವ ಸದಾಚಾರ?
ಇಂತಿವರೆಲ್ಲರು
ಶಿವಯುಕ್ತವಾದ ಅನಾಚಾರ ಹಿಡಿದು ಬಿಡದೆ
ಸದಾಚಾರಕ್ಕೊಳಗಾಗಿ ಮುಕ್ತಿವಡೆದರು.

ಮೋಕ್ಷಾಪೇಕ್ಷಿತರಾಗಿ ಪಂಚಾಚಾರಕ್ಕೊಪ್ಪುವ
ವ್ರತನೇಮಗಳ ಹಿಡಿದು ಬಿಟ್ಟವಂಗೆ
ಮುಂದು ಹಿಂದಾಯಿತು, ಆತ ವ್ರತಗೇಡಿ.
ಅದು ಹೇಗೆಂದೊಡೆ
ಹಿಡಿದ ನೈಷ್ಠೆಯ ಬಿಟ್ಟಲ್ಲಿಯೇ
ಕರ್ಮತ್ರಯಂಗಳು ಬೆನ್ನ ಬಿಡವೆಂದು
ಶರಣರ ವಚನಂಗಳು ಸಾರುತ್ತಿವೆ.
॥ ಗ್ರಂಥ॥ 'ಸ್ಥಾವರಂ ಭಿನ್ನದೋಷೇಣ ವ್ರತಭ್ರಷ್ಟೇನ ಜಂಗಮಂ।
ಉಭಯೋರ್ಭಿನ್ನಭಾವೇನ ನಾರ್ಚನಂ ನ ಚ ವಂದನಂ॥'
ಇಂತೆಂದುದಾಗಿ
ಹಿಡಿದು ಬಿಡುವಲ್ಲಿ ಕಮ್ಮಾರನ ಕೈಯ್ಯ ಇಕ್ಕುಳವೇ ಶರಣ?
ಹಿಡಿದು ಬಿಡುವಲ್ಲಿ ಚಂದ್ರಸೂರ್ಯರುಗಳ ಗ್ರಹಣವೇ ಶರಣ?
ಹಿಡಿದು ಬಿಡುವಲ್ಲಿ ಸಲ್ಲದ ನಾಣ್ಯವೇ ಶರಣ?
ಹಿಡಿದು ಬಿಡುವಲ್ಲಿ ಬಾಲಗ್ರಹವೇ ಶರಣ? ಅಲ್ಲಲ್ಲ.
ಉರಿ ಕರ್ಪೂರವ ಹಿಡಿದಂತೆ
ಹಿಡಿದ ವ್ರತನೇಮಂಗಳ ಬಿಡದಿಪ್ಪುದೀಗ
ಶರಣಸ್ಥಲದ ಮತವಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೫೮ ॥

೭೬೦

ಸಾಧು ಗುಣಕ್ಕೆ ಸಲೆ ಸಂದ ವಾರಣ ಬಂದು
ಹುಟ್ಟು ಕಂಗಳರ ಸಭಾಮಧ್ಯದಲ್ಲಿ ನಿಲ್ಲಲು
ಕೆಲದೊಳಿಪ್ಪ ಕಣ್ಣುಳ್ಳಾತ ಆನೆ ಬಂದಿತೆಂದು ನುಡಿಯಲೊಡನೆ
ಅತಿ ಪ್ರೇಮದಿಂದ ಕಂಗಳರು
ಆ ಆನೆಯ ಅವಯವಂಗಳಂ ಮುಟ್ಟಿ ನೋಡಿ
ಆನೆ ಕೊಳಗದಾಕಾರವೆಂದು ಕಾಲ ಮುಟ್ಟಿದಾತ
ಆನೆ ಒನಕೆಯಾಕಾರವೆಂದು ಸೊಂಡಿಲ ಮುಟ್ಟಿದಾತ
ಆನೆ ಹರವಿಯಾಕಾರವೆಂದು ಕುಂಭಸ್ಥಲವ ಮುಟ್ಟಿದಾತ
ಆನೆ ಮೊರದಾಕಾರವೆಂದು ಕಿವಿಯ ಮುಟ್ಟಿದಾತ
ಆನೆ ರಜಪೂರಿಗೆಯಾಕಾರವೆಂದು ಬಾಲವ ಮುಟ್ಟಿದಾತ
ಇಂತಿವರೆಲ್ಲರೂ ಆನೆಯ ನೆಲೆಯನರಿಯದೆ

ತಮ್ಮೊಳಗೆ ತಾವು ಕೊಂಡಾಡುತ್ತಿಪ್ಪರು.
ಆನೆಯ ನೆಲೆಯ ಆನೆಯನೇರುವ ಪಟ್ಟದರಸು ಬಲ್ಲನಲ್ಲದೆ
ಹುಟ್ಟು ಕುರುಡರದೇನು ಬಲ್ಲರಯ್ಯ?
ಈ ಪ್ರಕಾರದಲ್ಲಿಪ್ಪ ಪಶುಪ್ರಾಣಿಗಳು
ನಿಜೈಕ್ಯರ ಆಚರಣೆಯನರಿಯದೆ
ಮೂಗಿನಾಭರಣವ ಮೂಗಿಗಿಕ್ಕುವಂತೆ
ನುಡಿದು ನಡೆಯ ತಪ್ಪುವರು.
ಅದು ಶಿವಜ್ಞಾನಿಗಳ ಮತವಲ್ಲ.
ಅದು ಹೇಗೆಂದೊಡೆ
ಪ್ರತ್ಯಕ್ಷ ಜ್ಞಾನವ ಪ್ರಮಾಣಿಸಿ ಅಪರೋಕ್ಷಜ್ಞಾನವನಾಲೋಚಿಸಿ
ಸಹಜಜ್ಞಾನವ ಸಂಪಾದಿಸಿ
ಈ ಜ್ಞಾನತ್ರಯವನೊಂದುಮಾಡಿ
ಬಿಡುವ ಹಿಡಿವ ಆಚರಣೆಯಂ ನೆಲೆಗೊಳಿಸಿಕೊಂಡು
ಹಿಡಿದಾಚರಣೆಯಲ್ಲಿ ಪರಾಕ್ರಮಿಯಾಗಿ
ಆದಿ ಅನಾದಿಯ ಮೇಲಣ
ಜ್ಯೋತಿರ್ಮಯವಪ್ಪ ಶೂನ್ಯಲಿಂಗಮಂ
ಬೆರಸಿ ಭಿನ್ನವಿಲ್ಲದಿರ್ಪ ಆಚರಣೆಯ
ವೀರಮಾಹೇಶ್ವರ ಬಲ್ಲನಲ್ಲದೆ
ಅಜ್ಞಾನಿ ಬಾಯಿಬಡಿಕರವರೆತ್ತ ಬಲ್ಲರಯ್ಯ?
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೫೯ ॥

೭೬೧

ಕೋಗಿಲೆ ಸ್ವರಗೈದಿತೆಂದು
ಕಾಗೆ ಅದಕ್ಕೆ ಇದಿರಾಗಿ ಕುಳಿತು ಕರ್ರೆಂದು ಕಟಕಿಯನಾಡಿದರೆ
ಆ ಕೋಗಿಲೆಗಾದ ಕೊರತೆಯೇನಯ್ಯ?
ಸೂರ್ಯ ಪ್ರಕಾಶವನುಳ್ಳವನಲ್ಲಿ ಕತ್ತಲೆ ಮೈಯವನೆಂದು
ಹಗಲು ಕಣ್ಣು ಕಾಣದ ಗೂಗೆ ಕೆಟ್ಟು ನುಡಿದರೆ
ಸೂರ್ಯನಿಗಾದ ಕೊರತೆಯೇನಯ್ಯ?
ಕನ್ನಡಿಗೆ ಮೂಗಿಲ್ಲವೆಂದು ಮೂಕೊರೆಯ ಹಳಿದರೆ
ಆ ಕನ್ನಡಿಗಾದ ಕೊರತೆಯೇನಯ್ಯ?
ದ್ವೈತ ಅದ್ವೈತವ ನೂಂಕಿ

ಅಂಗ ಲಿಂಗದ ಹೊಲಬನರಿದು ಸ್ವಯಂಲಿಂಗಿಯಾದ ಶರಣನ
ಅಂಗವಿಕಾರದ ಪಂಗುಳ ಮಾನವರು
ಜರಿದು ಝುಂಕಿಸಿ ನುಡಿದರೆ
ಆ ಲಿಂಗಾನುಭಾವಿಗಾದ ಕೊರತೆಯೇನಯ್ಯ?
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೬೦ ॥

೭೬೧

ಭಕ್ತಿ ಜ್ಞಾನ ವೈರಾಗ್ಯ ತಪ್ಪದೆ
ಷಟ್‌ಸ್ಥಲಮಾರ್ಗದಿರವು ತಪ್ಪದೆ
ಜ್ಞಾನ ಕ್ರೀಗಳಲ್ಲಿ ಪ್ರೇಮ ತಪ್ಪದೆ
ಶರಣಸತಿ ಲಿಂಗಪತಿಯಾದ ಭಾವ ತಪ್ಪದೆ
ಇಷ್ಟ ಪ್ರಾಣ ಭಾವಲಿಂಗದ ಪೂಜೆ ತಪ್ಪದೆ
ಷಡ್ವಿಧಲಿಂಗಂಗಳಲ್ಲಿ ಅರ್ಪಿತಾವಧಾನ ತಪ್ಪದೆ
ತೀರ್ಥಪ್ರಸಾದದಲ್ಲಿ ಒಯ್ಯಾರ ತಪ್ಪದೆ
ಮಂತ್ರಗಳಂ ಒಡವರೆದು ಲಿಂಗಸಂಧಾನ ತಪ್ಪದೆ
ಹಿಡಿದ ವ್ರತಂಗಳಲ್ಲಿ ನಿಷ್ಠೆ ತಪ್ಪದೆ
ನಡೆದಂತೆ ನುಡಿದು ನುಡಿದಂತೆ ನಡೆವ ಭಾವ ತಪ್ಪದೆ
ದ್ವೈತ ಅದ್ವೈತವ ನೂಂಕಿ
ಬರಿಯ ವೈರಾಗ್ಯವನೊಪ್ಪುಗೊಳ್ಳದೆ
ನಿಜವಿರಕ್ತಿಯ ಹೊಲಬುದಪ್ಪದೆ
ಪಂಚೈವರೊಂದಾಗಿ ಸದ್ಯೋನ್ಮುಕ್ತಿಗೆ ಮನವನಿಟ್ಟು
ಆರ್ತಿಯಿಂದಾಚರಿಸುವರಯ್ಯ ನಿಮ್ಮ ಶರಣರು,
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೬೧ ॥

೭೬೨

ಕಾಮಧೇನುವಿನಲ್ಲಿ ಕಲ್ಪಿಸಿದ ಸವಿಯಿಪ್ಪುದಲ್ಲದೆ
ಮರ್ತ್ಯದ ಪಸುವಿನಲ್ಲಿ ಉಂಟೇನಯ್ಯ?
ಮಹಾಶೇಷನಲ್ಲಿ ಮಾಣಿಕ್ಯ ಪ್ರಭಾವಿಸುತಿಪ್ಪುದಲ್ಲದೆ
ಕೆರೆಯೊಳಗಣ ಒಳ್ಳೆಯೊಳಗುಂಟೇನಯ್ಯ?
ವಾರಣದ ಕುಂಭಸ್ಥಲದಲ್ಲಿ ಮೌಕ್ತಿಕ ಬೆಳಗುತಿಪ್ಪುದಲ್ಲದೆ

ಊರ ಹಂದಿಯಲ್ಲಿ ಉಂಟೇನಯ್ಯ?
ಶರಣರ ಮನೋಮಧ್ಯದಲ್ಲಿ ಆ ಶಿವನು ಮೂರ್ತಿಗೊಂಡು
ಆ ಶರಣರ ಜಿಹ್ವೆಯ ಕೊನೆಯ ಮೇಲೆ
ವಚನವೆಂಬ ಪರಮಾಮೃತವ ಕರೆದು
ಕೆಲಬಲದ ಗಣಂಗಳಿಗೆ ಸವಿದೋರಿ
ಆ ಶರಣರಲ್ಲಿ ಪರಿಪೂರ್ಣನಾಗಿಪ್ಪನಲ್ಲದೆ
ದ್ವೈತ ಅದ್ವೈತಗಳೆಂಬ ಮನೆ ಶುನಕ ಸೂಕರರಲ್ಲಿ ಉಂಟೇನಯ್ಯ?
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೬೨ ॥

೭೬೪

ಭಕ್ತಿಯಿಂದ ವಿರಕ್ತರೆಂದು
ಬಾಯತುಂಬ ಕರೆಯಿಸಿಕೊಂಬ ವಿರಕ್ತರೆಲ್ಲ ವಿರಕ್ತರೇ ಅಯ್ಯ?
ವಿರಕ್ತರದೊಂದು ಸಾಮರ್ಥ್ಯ ಸುಗುಣ
ಸಮುದ್ರೆಯನೊರೆವುತಿಪ್ಪೆ ಕೇಳಿರಣ್ಣ.
ಕಾಯದ ಕಣ್ಣ ಜಾಗ್ರದಲ್ಲಿ ಇಷ್ಟಲಿಂಗಕ್ಕೆ ಸಮರ್ಪಿಸಿ
ಕಾಯಗುಣಂಗಳ ಕೆಲಕ್ಕೆ ತೊಲಗಿಸಿ ತತ್‌ಪದನಾಗಿ
ಮನದಕಣ್ಣ ಸ್ವಪ್ನದಲ್ಲಿ ಪ್ರಾಣಲಿಂಗಕ್ಕೆ ಸಮರ್ಪಿಸಿ
ಮನೋವಿಕಾರಮಂ ಹಸಗೆಡಿಸಿ ತ್ವಂಪದನಾಗಿ
ಭಾವದಕಣ್ಣ ಸುಷುಪ್ತಿಯಲ್ಲಿ ಭಾವಲಿಂಗಕ್ಕೆ ಸಮರ್ಪಿಸಿ
ಭಾವದಿಚ್ಛೆಯ ತಪ್ಪಿಸಿ ಅಸಿಪದವಾಗಿ
ಜ್ಞಾತೃ ಜ್ಞಾನ ಜ್ಞೇಯವೆಂಬ ತ್ರಿಪುಟಿಯನೊಂದುಮಾಡಿ
ಪರಬ್ರಹ್ಮಸ್ವರೂಪವಾಗಿ
ಜಾಗ್ರತ್ ಸ್ವಪ್ನ ಸುಷುಪ್ತಿಯೆಂಬರಿವರಿತು
ಹಸಿವು ತೃಷೆ ವಿಷಯ ವ್ಯಾಪಾರಂಗಳಂ ಸುಟ್ಟುರುಹಿದ
**ತೋಂಟದ ಸಿದ್ಧಲಿಂಗ ಅಲ್ಲಮಪ್ರಭು ಅನಿಮಿಷದೇವರು**
ಇಂತಿವರು ವಿರಕ್ತರಲ್ಲದೆ
ಮತ್ತೆ ವಿರಕ್ತರೆಂಬ ನುಡಿ ನಿಮ್ಮ ಹಡಪದಲ್ಲಿರಲಿ.
ಅದೇನು ಕಾರಣವೆಂದೊಡೆ
॥ ಗ್ರಂಥ ॥ 'ವಿಕಾರಂ ವಿಷಯಾದ್ದೂರಂ ರಕಾರಂ ರಾಗವರ್ಜಿತಂ।
ಕ್ತಕಾರಂ ತ್ರಿಗುಣಂ ನಾಸ್ತಿ ವಿರಕ್ತಸ್ಯಾರ್ಥಮುಚ್ಯತೇ' ॥

ಇಂತೆಂದುದಾಗಿ
ಹಗಲಾದರೆ ಹಸಿವು ತೃಷೆಗೆ ಬಾಯಿಬಿಟ್ಟು
ಇರುಳಾದರೆ ವಿಷಯಾತುರನಾಗಿ
ಕಳವಳಿಸಿ ಕನಸ ಕಂಡು ಬೆದರಿ
ಶಿವಶಿವ ಎಂದು ಕುಳಿತು
ಸುಷುಪ್ತಿಯಲ್ಲಿ ಮೈಮರೆದು
ಮುಟ್ಟಿ ತಟ್ಟಿದ ಸವುಜ್ಞೆಯನರಿಯದಿಪ್ಪವರೆಲ್ಲ
ವಿರಕ್ತರೆ ? ಅಲ್ಲಲ್ಲ.
ಅವರು ತ್ರಿವಿಧ ಪದಾರ್ಥವನತಿಗಳೆದು
ಗುರು ಲಿಂಗ ಜಂಗಮವನಂತರಂಗದಲ್ಲಿ
ಪೂಜೆಯ ಮಾಡುವ ದಾಸೋಹಿಗಳಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೬೩ ॥

**ಪರಿಶಿಷ್ಟ**

೭೬೫

ಎನ್ನ ಕಾಯ ಪ್ರಸಾದವಾಯಿತ್ತು.
ಎನ್ನ ಜೀವ ಪ್ರಸಾದವಾಯಿತ್ತು.
ಎನ್ನ ಪ್ರಾಣ ಪ್ರಸಾದವಾಯಿತ್ತು.
ಎನ್ನ ಕರಣೇಂದ್ರಿಯಂಗಳೆಲ್ಲವು ಪ್ರಸಾದವಾದುವು ನೋಡಾ.
ನೀವೆನ್ನ ಕರಸ್ಥಲದಲ್ಲಿ ಪ್ರಸಾದ ರೂಪಾದಿರಾಗಿ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೬೪ ॥

೭೬೬

ಅಗ್ನಿ ಅಗ್ನಿಯ ಕೂಡಿ ಬೆಳಗು ಮುಂಬರಿವುದಲ್ಲದೆ
ಅಗ್ನಿ ತೃಣವು ಕೂಡಿದಲ್ಲಿ ಹೊಗೆದೋರ್ವುದಲ್ಲದೆ
ಬೆಳಗು ನಿಜವಹುದೆ ಅಯ್ಯ?
ಆ ಪರಮಾರ್ಥವ ತಿಳಿದ ಪರಮಜ್ಞಾನಿಯ ಕೂಡೆ
ಸಮ್ಯಜ್ಞಾನಿ ಅನುಭವ ಬಾಯಿದೆಗೆದೊಡೆ
ಉಭಯದ ತನು ಕರಣ ಮನಂಗಳು
ಸ್ಫಟಿಕದ ಪುತ್ಥಳಿಯಂತೆ

ನಿರ್ಮಲ ಸ್ವರೂಪವಪ್ಪವಲ್ಲದೆ
ಕಾಳಿಕೆವೆರವುದೆ ಅಯ್ಯ?
ಜ್ಞಾನಿಯು ಅಜ್ಞಾನಿಯ ಕೂಡೆ ಸಂಭಾಷಣೆಯ ಮಾಡಿದರೆ
ಚಿಲುಪಾಲಿನೊಳಗೆ ಹುಳಿಯು ಬೆರದಂತಾಯಿತಯ್ಯಾ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ. ॥ ೬೫ ॥

೭೬೭

ಮೋಹ ಮದ ರಾಗ ವಿಷಾದ ತಾಪ ಶೋಕ ವೈಚಿಂತೆ
ಎಂಬ ಸಪ್ತಮಲ ವ್ಯಸನ ಮದಂಗಳೆನ್ನನಾವರಿಸಿ
ಕಾಡುತ್ತಿವೆಯಯ್ಯಾ
ನಿಮ್ಮುವ ನಾನೆಂತರಿವೆನಯ್ಯಾ?
ನಿಮ್ಮುವ ನಾನೆಂತು ನೆನೆವೆನಯ್ಯಾ?
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಯ್ಯ
ಇಂತಿವ ಕಳೆದು
ಎನಗೆ ನಿಮ್ಮ ಪರಮಭಕ್ತಿಯ ಪಾಲಿಸಯ್ಯಾ ನಿಮ್ಮ ಧರ್ಮ.
॥ ೬೬ ॥

# ಗುಮ್ಮಳಾಪುರದ ಸಿದ್ಧಲಿಂಗದೇವರ ವಚನಗಳು

೭೬೮

ಪ್ರಥಮದಲ್ಲಿ ನಾಮ ರೂಪು ಕ್ರೀ
ಏನೂ ಏನೂ ಇಲ್ಲದ ಮಹಾಘನ ಶೂನ್ಯಬ್ರಹ್ಮವು.
ಆ ಶೂನ್ಯಬ್ರಹ್ಮದಿಂದ ಶುದ್ಧ ಪ್ರಣವ.
ಆ ಶುದ್ಧ ಪ್ರಣವದಿಂದ ಚಿತ್ತು ಭಾವದಕ್ಷರ.
ಆ ಚಿತ್ತು ಭಾವದಕ್ಷರದಿಂದ ಪರಾಶಕ್ತಿ.
ಆ ಪರಾಶಕ್ತಿಯಿಂದ ಅಕ್ಷರತ್ರಯಂಗಳು.
ಆ ಅಕ್ಷರತ್ರಯಂಗಳಿಂದ ಓಂಕಾರ.
ಆ ಓಂಕಾರವೆ ಬಸವಣ್ಣನು. ಆ ಬಸವಣ್ಣನೆ
ಎನ್ನ ವದನಕ್ಕೆ ಓಂಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಬಲದ ಭುಜಕ್ಕೆ ನಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಎಡದ ಭುಜಕ್ಕೆ ಮಃಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ದೇಹಮಧ್ಯಕ್ಕೆ ಶಿಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಬಲದ ತೊಡೆಗೆ ವಾಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಎಡದ ತೊಡೆಗೆ ಯಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಸ್ಥೂಲತನುವಿಂಗೆ ಉಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಸೂಕ್ಷ್ಮತನುವಿಂಗೆ ಮಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಕಾರಣತನುವಿಂಗೆ ಅಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಆಯತಕ್ಕೆ ಬಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಸ್ವಾಯತಕ್ಕೆ ಸಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಸನ್ನಹಿತಕ್ಕೆ ನಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಕ್ರೀಗೆ ಅವಾಚ್ಯ ಸ್ವರೂಪಾಗಿ ಬಂದನಯ್ಯ ಬಸವಣ್ಣ.
ಎನ್ನ ಜ್ಞಾನಕ್ಕೆ ಮಹಾಶೂನ್ಯ ಸ್ವರೂಪನಾಗಿ ಬಂದನಯ್ಯ ಬಸವಣ್ಣ.
ಎನ್ನ ರುಧಿರಕ್ಕೆ ನಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಮಾಂಸಕ್ಕೆ ಮಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಮೇಧಸ್ಸಿಂಗೆ ಶಿಕಾರವಾಗಿ ಬಂದನಯ್ಯ ಬಸವಣ್ಣ.

ಎನ್ನ ಅಸ್ಥಿಗೆ ವಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಮಜ್ಜೆಗೆ ಯಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ತ್ವಗಮಯಕ್ಕೆ ಓಂಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ದೇಹಭಾವವ ಕೊಂದಹೆನೆಂದು ಬಕಾರವಾಗಿ ಬಂದನಯ್ಯ
ಬಸವಣ್ಣ.
ಎನ್ನ ಹೊನ್ನು ಹೆಣ್ಣು ಮಣ್ಣೆಂಬ ಸಕಲಾಸೆಯ ಕೊಂದಹೆನೆಂದು
ಸಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಇಂದ್ರಿಯ ವಿಷಯಂಗಳ ಕೊಂದಹೆನೆಂದು
ವಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ನಾದಕ್ಕೆ ಅಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಬಿಂದುವಿಂಗೆ ಉಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಕಳೆಗೆ ಮಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಪ್ರಾಣಕ್ಕೆ ಓಂಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ವಿಶ್ವಂಗೆ ಇಷ್ಟಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ತೈಜಸಿಂಗೆ ಪ್ರಾಣಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ಪ್ರಜ್ಞೆಗೆ ತೃಪ್ತಿಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ಸತ್ವಕ್ಕೆ ಶುದ್ಧಪ್ರಸಾದವಾಗಿ ಬಂದನಯ್ಯ ಬಸವಣ್ಣ.
ಎನ್ನ ರಜಕ್ಕೆ ಸಿದ್ಧಪ್ರಸಾದವಾಗಿ ಬಂದನಯ್ಯ ಬಸವಣ್ಣ.
ಎನ್ನ ತಮಕ್ಕೆ ಪ್ರಸಿದ್ಧಪ್ರಸಾದವಾಗಿ ಬಂದನಯ್ಯ ಬಸವಣ್ಣ.
ಎನಗೆ ಬಕಾರವೆ ಗುರುವಾಗಿ ಬಂದನಯ್ಯ ಬಸವಣ್ಣ.
ಎನಗೆ ಸಕಾರವೆ ಲಿಂಗವಾಗಿ ಬಂದನಯ್ಯ ಬಸವಣ್ಣ.
ಎನಗೆ ವಕಾರವೆ ಜಂಗಮವಾಗಿ ಬಂದನಯ್ಯ ಬಸವಣ್ಣ.
ಎನ್ನ ಸ್ಥೂಲತನುವಿಂಗೆ ಇಷ್ಟಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ಸೂಕ್ಷ್ಮತನುವಿಂಗೆ ಪ್ರಾಣಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ಕಾರಣತನುವಿಂಗೆ ಭಾವಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ಶಿವ ಕ್ಷೇತ್ರಜ್ಞ ಕರ್ತಾರ ಭಾವ ಚೈತನ್ಯ ಅಂತರ್ಯಾಮಿಯೆಂಬ
ಷಡುಮೂರ್ತಿಗಳಿಗೆ
ನಕಾರ ಮಃಕಾರ ಶಿಕಾರ ವಾಕಾರ ಯಕಾರ ಓಂಕಾರವಾಗಿ
ಬಂದನಯ್ಯ ಬಸವಣ್ಣ.
ಎನ್ನ ಚಿತ್ತಕ್ಕೆ ಆಚಾರಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ಬುದ್ಧಿಗೆ ಗುರುಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ಅಹಂಕಾರಕ್ಕೆ ಶಿವಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ಮನಸ್ಸಿಂಗೆ ಜಂಗಮಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ಜ್ಞಾನಕ್ಕೆ ಪ್ರಸಾದಲಿಂಗವಾಗಿ ಬಂದನಯ್ಯ ಬಸವಣ್ಣ.

ಎನ್ನ ಭಾವಕ್ಕೆ ಮಹಾಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ಬ್ರಹ್ಮತತ್ವಕ್ಕೆ ನಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ವಿಷ್ಣುತತ್ವಕ್ಕೆ ಮಃಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ರುದ್ರತತ್ವಕ್ಕೆ ಶಿಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಈಶ್ವರತತ್ವಕ್ಕೆ ವಾಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಸದಾಶಿವತತ್ವಕ್ಕೆ ಯಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಮಹಾಶ್ರೀಗುರುತತ್ವಕ್ಕೆ ಓಂಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಪೃಥ್ವಿಗೆ ನಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಅಪ್ಪುವಿಂಗೆ ಮಃಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಅಗ್ನಿತತ್ವಕ್ಕೆ ಶಿಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ವಾಯುವಿಂಗೆ ವಾಕಾರವಾಗಿ ಬಂದನಯ್ಯ ಬಸವಮ್ಣ.
ಎನ್ನ ಆಕಾಶಕ್ಕೆ ಯಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಆತ್ಮಂಗೆ ಓಂಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಪ್ರಾಣವಾಯುವಿಂಗೆ ನಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಅಪಾನವಾಯುವಿಂಗೆ ಮಃಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ವ್ಯಾನವಾಯುವಿಂಗೆ ಶಿಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಉದಾನವಾಯುವಿಂಗೆ ವಾಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಸಮಾನವಾಯುವಿಂಗೆ ಯಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಪಂಚವಾಯುವಿಂಗೆ ಓಂಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಆಧಾರಚಕ್ರಕ್ಕೆ ಆಚಾರಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ಸ್ವಾಧಿಷ್ಠಾನಚಕ್ರಕ್ಕೆ ಗುರುಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ಮಣಿಪೂರ ಚಕ್ರಕ್ಕೆ ಶಿವಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ಅನಾಹತಚಕ್ರಕ್ಕೆ ಜಂಗಮಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ವಿಶುದ್ಧಿಚಕ್ರಕ್ಕೆ ಪ್ರಸಾದಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ಆಜ್ಞಾಚಕ್ರಕ್ಕೆ ಮಹಾಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ಚತುರ್ದಳಕ್ಕೆ ನಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಷಡುದಳಕ್ಕೆ ಮಃಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ದಶದಳಕ್ಕೆ ಶಿಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ದ್ವಾದಶದಳಕ್ಕೆ ವಾಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಷೋಡಶದಳಕ್ಕೆ ಯಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ದ್ವಿದಳಕ್ಕೆ ಓಂಕಾರವಾಗಿ ಬಂದನಯ್ಯ ಬಸವಣ್ಣ.

ಎನ್ನ ಚತುರಾಕ್ಷರಕ್ಕೆ ನಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಷಡಾಕ್ಷರಕ್ಕೆ ಮಃಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ದಶಾಕ್ಷರಕ್ಕೆ ಶಿಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ದ್ವಾದಶಾಕ್ಷರಕ್ಕೆ ವಾಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಷೋಡಶಾಕ್ಷರಕ್ಕೆ ಯಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ದ್ವಿಯಾಕ್ಷರಕ್ಕೆ ಓಂಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಕೆಂಪುವರ್ಣಕ್ಕೆ ನಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ನೀಲವರ್ಣಕ್ಕೆ ಮಃಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಕುಂಕುಮವರ್ಣಕ್ಕೆ ಶಿಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಪೀತವರ್ಣಕ್ಕೆ ವಾಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಶ್ವೇತವರ್ಣಕ್ಕೆ ಯಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಮಾಣಿಕ್ಯವರ್ಣಕ್ಕೆ ಓಂಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಜಾಗ್ರಾವಸ್ಥೆಗೆ ನಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಸ್ವಪ್ನಾವಸ್ಥೆಗೆ ಮಃಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಸುಷುಪ್ತಾವಸ್ಥೆಗೆ ಶಿಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ತೂರ್ಯಾವಸ್ಥೆಗೆ ವಾಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಅತೀತಾವಸ್ಥೆಗೆ ಯಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ನಿರಾವಸ್ಥೆಗೆ ಓಂಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಅಂತಃಕರಣಂಗಳಿಗೆ ಚತುರ್ವಿಧ ಬಿಂದು
ಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ಅರಿಷಡ್ವರ್ಗಂಗಳಿಗೆ ಷಡ್ವಿಧಧಾತು ಲಿಂಗವಾಗಿ
ಬಂದನಯ್ಯ ಬಸವಣ್ಣ.
ಎನ್ನ ದಶವಾಯುಗಳಿಗೆ ದಶವಿಧ ಕ್ಷೇತ್ರಲಿಂಗವಾಗಿ
ಬಂದನಯ್ಯ ಬಸವಣ್ಣ.
ಎನ್ನ ದ್ವಾದಶ ಇಂದ್ರಿಯಂಗಳಿಗೆ ದ್ವಾದಶ ವಿಕೃತಿಲಿಂಗವಾಗಿ
ಬಂದನಯ್ಯ ಬಸವಣ್ಣ.
ಎನ್ನ ಷೋಡಶಕಲೆಗೆ ಷೋಡಶಕಲಾಲಿಂಗವಾಗಿ
ಬಂದನಯ್ಯ ಬಸವಣ್ಣ.
ಎನ್ನ ಅಹಂಕಾರ ಮಮಕಾರಗಳಿಗೆ ವಿದ್ಯಾಲಿಂಗವಾಗಿ
ಬಂದನಯ್ಯ ಬಸವಣ್ಣ.
ಎನ್ನ ಭಕ್ತಿಸ್ಥಲಕ್ಕೆ ಆಚಾರಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ಮಾಹೇಶ್ವರಸ್ಥಲಕ್ಕೆ ಗುರುಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ಪ್ರಸಾದಿಸ್ಥಲಕ್ಕೆ ಶಿವಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ಪ್ರಾಣಲಿಂಗಿಸ್ಥಳಕ್ಕೆ ಜಂಗಮಲಿಂಗವಾಗಿ ಬಂದನಯ್ಯ
ಬಸವಣ್ಣ.

ಎನ್ನ ಶರಣಸ್ಥಲಕ್ಕೆ ಪ್ರಸಾದಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ಐಕ್ಯಸ್ಥಲಕ್ಕೆ ಮಹಾಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ಚಿತ್ತಕ್ಕೆ ನಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಬುದ್ಧಿಗೆ ಮಃಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಅಹಂಕಾರಕ್ಕೆ ಶಿಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಮನಕ್ಕೆ ವಾಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಜ್ಞಾನಕ್ಕೆ ಯಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಭಾವಕ್ಕೆ ಓಂಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಕ್ರಿಯಾಶಕ್ತಿಗೆ ನಕಾರವಾಗಿ ಬಂದನಯ್ಯ ಬಸವಣ್ಣ
ಎನ್ನ ಜ್ಞಾನಶಕ್ತಿಗೆ ಮಃಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಇಚ್ಛಾಶಕ್ತಿಗೆ ಶಿಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಆದಿಶಕ್ತಿಗೆ ವಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಪರಾಶಕ್ತಿಗೆ ಯಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಚಿತ್ರಕ್ತಿಗೆ ಓಂಕಾರವಾಗಿ ಬಂದನಯ್ಯ ಬಸವಣ್ಣ..
ಎನ್ನ ಶ್ರದ್ಧೆಗೆ ನಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ನಿಷ್ಠೆಗೆ ಮಃಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಅವಧಾನಕ್ಕೆ ಶಿಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಅನುಭಾವಕ್ಕೆ ವಾಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಆನಂದಕ್ಕೆ ಯಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಸಮರಸಕ್ಕೆ ಓಂಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಶಬ್ದಕ್ಕೆ ಗುರುವಾಗಿ ಬಂದನಯ್ಯ ಬಸವಣ್ಣ.
ಎನ ಸ್ಪರುಶನಕ್ಕೆ ಲಿಂಗವಾಗಿ ಬಂದನಯ್ಯ ಬಸವಣ್ಣ.
ಎನ್ನ ರೂಪಿಂಗೆ ಶಿವಲಾಂಛನವಾಗಿ ಬಂದನಯ್ಯ ಬಸವಣ್ಣ.
ಎನ್ನ ರಸಕ್ಕೆ ಶಿವಪ್ರಸಾದವಾಗಿ ಬಂದನಯ್ಯ ಬಸವಣ್ಣ.
ಎನ್ನ ಗಂಧಕ್ಕೆ ಶಿವಾನುಭಾವವಾಗಿ ಬಂದನಯ್ಯ ಬಸವಣ್ಣ.
ಎನ್ನ ನಾಸಿಕಕ್ಕೆ ನಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಜಿಹ್ವೆಗೆ ಮಃಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ನೇತ್ರಕ್ಕೆ ಶಿಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ತ್ವಕ್ಕಿಂಗೆ ವಾಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಶ್ರೋತ್ರಕ್ಕೆ ಯಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಹೃದಯಕ್ಕೆ ಓಂಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ವಾಕ್ಕಿಂಗೆ ಯಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಪಾಣಿಗೆ ವಾಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಪಾದಕ್ಕೆ ಶಿಕಾರವಾಗಿ ಬಂದನಯ್ಯ ಬಸವಣ್ಣ.

ಎನ್ನ ಗುಹ್ಯಕ್ಕೆ ಮಃಕಾರವಾಗಿ ಬಂದನಯ್ಯ ಬಸವಣ್ಣ.
ಎನ್ನ ಪಾಯುವಿಂಗೆ ನಕಾರವಾಗಿ ಬಂದನಯ್ಯ ಬಸವಣ್ಣ.
ಇಂತೀ ಪಂಚೇಂದ್ರಿಯಂಗಳೆ ಪಂಚಮಹಾಯಜ್ಞ.
ಆ ಪಂಚಮಹಾಯಜ್ಞದಲ್ಲಿ
ಎನ್ನ ಮನ ಹಾರೈಸಿ ಪೂರೈಸಿ ಒಲಿದು
ಕೇಳಿತ್ತು ಮುಟ್ಟಿತ್ತು ನೋಡಿತ್ತು ರುಚಿಸಿತ್ತು ವಾಸಿಸಿತ್ತು.
ಎನ್ನ ಮಾನಸ ವಾಚಕ ಕಾಯಕ ಕರಣಂಗಳೆಲ್ಲವು
ಪಂಚಮಹಾಯಜ್ಞ ಸೋಂಕಿ ಪಂಚಮಹಾಯಜ್ಞವಪ್ಪುದು ತಪ್ಪದು.
ಅದೆಂತೆಂದಡೆ
ಮಹಾಜ್ಯೋತಿಯ ಸೋಂಕಿಪ
ಉತ್ತಮ ಅಧಮ ತೃಣ ಮೊದಲಾದವಲ್ಲವು
ಮಹಾ ಅಗ್ನಿಯ ಸೋಂಕೆ ಮಹಾ ಅಗ್ನಿಯಪ್ಪುದು ತಪ್ಪದು.
ಇಂತಪ್ಪ ಮಹಾಯಜ್ಞವನೊಳಕೊಂಡಿಪ್ಪ
ಮೂಲಾಗ್ನಿಯೇ ಬಸವಣ್ಣ.
ಆ ಬಸವಣ್ಣನೆ ಗುರು ಲಿಂಗ ಜಂಗಮ ಪ್ರಸಾದ ಪಾದೋದಕ
ವಿಭೂತಿ ರುದ್ರಾಕ್ಷಿ ಪಂಚಾಕ್ಷರಿಯೇ ಚಿದ್ಬ್ರಹ್ಮ.
ಆ ಚಿದ್ಬ್ರಹ್ಮವೇ ಬಸವಣ್ಣ. ಆ ಬಸವಣ್ಣನೇ ಎನಗೆ ಅಷ್ಟಾವರಣ
ಸ್ವರೂಪನಾದ ಸಚ್ಚಿದಾನಂದ ಬಸವಣ್ಣ.
ನಿತ್ಯಪರಿಪೂರ್ಣ ಬಸವಣ್ಣ. ಅಖಂಡಾದ್ವಯ ಬಸವಣ್ಣ.
ನಿರಂಜನ ಬಸವಣ್ಣ.
ನಿರ್ಮಾಯ ಬಸವಣ್ಣ, ನಿರಾಚರಣ ಬಸವಣ್ಣ.
ನಿರ್ಜನಿತ ಬಸವಣ್ಣ.
ನಿರ್ಲೇಪ ಬಸವಣ್ಣ ನಿಃಕಪಟಿ ಬಸವಣ್ಣ.
ಅಸಾಧ್ಯ ಸಾಧಕ ಬಸವಣ್ಣ.
ಅಭೇದ್ಯ ಭೇದಕ ಬಸವಣ್ಣ ಚಿತ್ಪ್ರಕಾಶ ಬಸವಣ್ಣ.
ಇಂತಪ್ಪ ಬಸವಣ್ಣನ ಅಂಗವೆ ಚಿದಾಕಾಶ.
ಆ ಚಿದಾಕಾಶದ ಮಧ್ಯದಲ್ಲಿ ಚಿತ್ಪ್ರಾಣವಾಯು.
ಆ ಚಿತ್ಪ್ರಾಣವಾಯುವಿನ ಮಧ್ಯದಲ್ಲಿ ಚಿದಾಗ್ನಿ.
ಆ ಚಿದಾಗ್ನಿಯ ಮಧ್ಯದಲ್ಲಿ ಚಿಜ್ಜಲ.
ಆ ಚಿಜ್ಜಲದ ಮಧ್ಯದಲ್ಲಿ ಚಿದ್ಭೂಮಿ.
ಆ ಚಿದ್ಭೂಮಿಯ ಮಧ್ಯದಲ್ಲಿ ಹೃದಯ.
ಆ ಹೃದಯದ ಮಧ್ಯದಲ್ಲಿ
ಅಕಾರ ಉಕಾರ ಮಕಾರ ಪ್ರಣಮಪೀಠ.
ಆ ಪ್ರಣವಪೀಠದ ಮಧ್ಯದಲ್ಲಿ ಜಂಗಮ

ಆ ಜಂಗಮದ ಮಕುಟದಲ್ಲಿ ಶೂನ್ಯಲಿಂಗ.
ಆ ಶೂನ್ಯಲಿಂಗದಲ್ಲಿ ಚಿದಂಬರ, ಆ ಚಿದಂಬರದಲ್ಲಿ ಶಿವಶಕ್ತಿ.
ಆ ಶಿವಶಕ್ತಿಯಲ್ಲಿ ಪಂಚಶಕ್ತಿ ಆ ಪಂಚಶಕ್ತಿಯಲ್ಲಿ ಪಂಚನಾದ.
ಆ ಪಂಚನಾದದಲ್ಲಿ ಪಂಚಸಾದಾಖ್ಯ
ಆ ಪಂಚಸಾದಾಖ್ಯದಲ್ಲಿ ಈಶ್ವರ.
ಆ ಈಶ್ವರನಲ್ಲಿ ಮಾಹೇಶ್ವರ ಆ ಮಾಹೇಶ್ವರನಲ್ಲಿ ರುದ್ರ.
ಆ ರುದ್ರನಲ್ಲಿ ತ್ರಯಪಯ ಹಿರಣ್ಯಗರ್ಭ ವಿರಾಟ್‌ಮೂರ್ತಿ.
ಇಂತೀ ಎಂಬತ್ತುಮೂರು ಮೂರ್ತಿಗಳೊಳಗೆ
ಎಂಬತ್ತೆರಡೆ ಬಸವಣ್ಣನಂಗವೊಂದೆ ಪ್ರಾಣ.
ಆ ಪ್ರಾಣ ಚೈತನ್ಯ ಶೂನ್ಯವೆ
ಗೋಳಕ ಗೋಮುಖ ವೃತ್ತಾಕಾರವಾಗಿ
ಕರಸ್ಥಲದಲ್ಲಿ ಪಿಡಿದು
ಆ ಲಿಂಗದ ಆದಿಪ್ರಣಮವೆ ಪೀಠ,
ಅಕಾರವೆ ಕಂಠ,
ಉಕಾರವೆ ಗೋಮುಖ
ಮಕಾರವೆ ವರ್ತುಳನಾಳ ಬಿಂದು ಮಹಾತೇಜ.
ನಾದವೆ ಅಖಂಡಲಿಂಗ.
ಇಂತಪ್ಪ ಬಸವಣ್ಣನ ನಿತ್ಯತ್ವವೆ ಲಿಂಗ; ಪೂರ್ಣತ್ವವೆ ಗುರು.
ಚಿತ್ತಕಾಶವೆ ಜಂಗಮ.
ಆನಂದವೆ ಪ್ರಸಾದ, ಚಿದ್ರಸದ ಪ್ರವಾಹವೆ ಪಾದತೀರ್ಥ.
ಇಂತಪ್ಪ ಬಸವಣ್ಣ ಅನಂತಕೋಟಿ ಬ್ರಹ್ಮಾಂಡಗಳ
ರೋಮಕೂಪದಲ್ಲಿ ಸಂಕಲ್ಪಿಸಿ
ಅಲ್ಲಿದ್ದಾತ್ಮಂಗೆ ಸುಜ್ಞಾನ ಕ್ರೀಯನಿತ್ತು ತದ್ ಭೃತ್ಯ ಕರ್ತೃ ತಾನಾಗಿ
ಇಷ್ಟಾರ್ಥಸಿದ್ಧಿಯನೀವುತಿಪ್ಪ ಬಸವಣ್ಣನ
ಭೃತ್ಯರ ಭೃತ್ಯರ ತದ್‌ಭೃತ್ಯನಾಗಿರಿಸಿ
ಬಸವಣ್ಣನ ಪಡುಗ ಪಾದರಕ್ಷೆಯ ಹಿಡಿವ
ಭಾಗ್ಯವಯೆನಗೀವುದಯ್ಯ,
ಪರಂಜ್ಯೋತಿ ಮಹಾಲಿಂಗಗುರು **ಸಿದ್ಧಲಿಂಗ ಪ್ರಭು**ವಿನಲ್ಲಿ
ಬಸವಣ್ಣನ ಅರುಹಿಕೊಟ್ಟ
ಸಿದ್ಧೇಶ್ವರನ ಶ್ರೀಪಾದಪದ್ಮದಲ್ಲಿ ಭೃಂಗನಾಗಿರ್ದೆನಯ್ಯ
ಬೋಳಬಸವೇಶ್ವರ ನಿಮ್ಮ ಧರ್ಮ ನಿಮ್ಮ ಧರ್ಮ. ॥ ೧ ॥

೭೬೯

ಶ್ರೀಗುರುಸ್ವಾಮಿ ಕರುಣಿಸಿಕೊಟ್ಟ ಇಷ್ಟಬ್ರಹ್ಮವೇ ಬಸವಣ್ಣನೆನಗೆ.
ಆ ಬಸವಣ್ಣನೆ ನವಲಿಂಗಸ್ವರೂಪವಾಗಿಪ್ಪನಯ್ಯ.
ಅದು ಹೇಗೆಂದಡೆ

ತನುತ್ರಯಂಗಳಲ್ಲಿ ಇಷ್ಟ ಪ್ರಾಣ ಭಾವವೆಂದು
ಇಂದ್ರಿಯಂಗಳಲ್ಲಿ ಆಚಾರಲಿಂಗ ಗುರುಲಿಂಗ ಶಿವಲಿಂಗ
ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗವೆನಿಸಿಪ್ಪನಯ್ಯ.
ಅದು ಹೇಗೆಂದಡೆ
ನಾಸಿಕದಲ್ಲಿ ಅಂಗಲಿಂಗಸಂಗ ಚತುರ್ವಿಂಶತಿ ಸ್ವರೂಪನೊಳಕೊಂಡು
ಆಚಾರಲಿಂಗವಾಗಿ ಎನ್ನ ನಾಸಿಕದಲ್ಲಿ
ಇಂಬುಗೊಂಡನಯ್ಯ ಬಸವಣ್ಣ.
ಜಿಹ್ವೆಯಲ್ಲಿ ಅಂಗಲಿಂಗಸಂಗ ಅಷ್ಟಾದಶ ಸ್ವರೂಪನೊಳಕೊಂಡು
ಗುರುಲಿಂಗವಾಗಿ ಎನ್ನ ಜಿಹ್ವೆಯಲ್ಲಿ
ಇಂಬುಗೊಂಡನಯ್ಯ ಬಸವಣ್ಣ.
ನೇತ್ರದಲ್ಲಿ ಅಂಗಲಿಂಗಸಂಗ ಷೋಡಶ ಸ್ವರೂಪನೊಳಕೊಂಡು
ಶಿವಲಿಂಗವಾಗಿ ಎನ್ನ ನೇತ್ರದಲ್ಲಿ
ಇಂಬುಗೊಂಡನಯ್ಯ ಬಸವಣ್ಣ.
ತ್ವಕ್ಕಿನಲ್ಲಿ ಅಂಗಲಿಂಗಸಂಗ ಸಪ್ತಾದಶ ಸ್ವರೂಪನೊಳಕೊಂಡು
ಜಂಗಮಲಿಂಗವಾಗಿ ಎನ್ನ ತ್ವಕ್ಕಿನಲ್ಲಿ
ಇಂಬುಗೊಂಡನಯ್ಯ ಬಸವಣ್ಣ.
ಶ್ರೋತ್ರದಲ್ಲಿ ಅಂಗಲಿಂಗಸಂಗ ತ್ರೈದಶ ಸ್ವರೂಪನೊಳಕೊಂಡು
ಪ್ರಸಾದಲಿಂಗವಾಗಿ ಎನ್ನ ಶ್ರೋತ್ರದಲ್ಲಿ
ಇಂಬುಗೊಂಡನಯ್ಯ ಬಸವಣ್ಣ.
ಹೃದಯದಲ್ಲಿ ಅಂಗಲಿಂಗಸಂಗ
ತ್ರಯೋದಶ ಸ್ವರೂಪವನೊಳಕೊಂಡು
ಮಹಾಲಿಂಗವಾಗಿ ಎನ್ನ ಹೃದಯದಲ್ಲಿ
ಇಂಬುಗೊಂಡನಯ್ಯ ಬಸವಣ್ಣ.
ಇಂತೀ ಬಸವಣ್ಣನೆ ಅಂಗ ಲಿಂಗ ಹಸ್ತ ಮುಖ ಶಕ್ತಿ ಭಕ್ತಿ
ಪದಾರ್ಥ ಪ್ರಸಾದ.
ಇಂತಿವನರಿದು ಅರ್ಪಿಸಿದೆನಾಗಿ
ಎನ್ನ ತನುವಿನಲ್ಲಿ ಶುದ್ಧಪ್ರಸಾದವಾಗಿ
ಇಂಬುಗೊಂಡನಯ್ಯ ಬಸವಣ್ಣ.
ಎನ್ನ ಮನದಲ್ಲಿ ಸಿದ್ಧಪ್ರಸಾದವಾಗಿ
ಇಂಬುಗೊಂಡನಯ್ಯ ಬಸವಣ್ಣ.
ಎನ್ನ ಪ್ರಾಣದಲ್ಲಿ ಪ್ರಸಿದ್ಧಪ್ರಸಾದವಾಗಿ
ಇಂಬುಗೊಂಡನಯ್ಯ ಬಸವಣ್ಣ.
ಇಂತೀ ಶುದ್ಧಸಿದ್ಧಪ್ರಸಿದ್ಧ ಪ್ರಸಾದದೊಳಗೆ
ಮುಳುಗಿದ್ದ ಭೇದವನರಿದು
ಬೋಳಬಸವೇಶ್ವರನ ಅನುಭಾವ ಸಂಪರ್ಕದಿಂದ

ಸಿದ್ಧೇಶ್ವರನ ಘನಪ್ರಕಾಶ ಸಾಧ್ಯವಾಯಿತ್ತಾಗಿ
ಪರಂಜ್ಯೋತಿ ಮಹಾಲಿಂಗಗುರು ಸಿದ್ಧಲಿಂಗ ಪ್ರಭುವಿನಲ್ಲಿ
ಎರಡರಿಯದಿರ್ದೆನಯ್ಯ ನಿಮ್ಮ ಧರ್ಮ ನಿಮ್ಮ ಧರ್ಮ. ॥ ೨ ॥

೭೭೦

ಅಣವಮಲ ಮಾಯಾಮಲ ಕಾರ್ಮಿಕಮಲವೆಂಬ
ಮಲತ್ರಯಂಗಳ ಕಳದು
ಎನ್ನ ಅಂತರಂಗ ಬಹಿರಂಗ ಶುದ್ಧಾತ್ಮನ ಮಾಡಿದ ಮಡಿವಾಳಯ್ಯ.
[ಎನ್ನ] ಸಾಕಾರ ಮೂರು ಮೂರು ಹದಿನೆಂಟು
ಪ್ರಕಾರವನೊಳಕೊಂಡು,
ಎನ್ನ ಬಹಿರಂಗದಲ್ಲಿ ಆಯತವಾದನಯ್ಯ ಬಸವಣ್ಣ.
ಎನ್ನ ಅಂತರಂಗದಲ್ಲಿ ಸ್ವಾಯತವಾದನಯ್ಯ ಚೆನ್ನಬಸವಣ್ಣ.
ನಿರಾಳ ನಿರ್ಮಾಯ ನಿಶ್ಶೂನ್ಯ ಬ್ರಹ್ಮವೆ ಉಭಯಸಂಗದಲ್ಲಿ
ಸನ್ನಿಹಿತವಾದನಯ್ಯ ಪ್ರಭುದೇವರು.
ಇಂತೀ ಅಂತರಂಗ ಬಹಿರಂಗ ಆತ್ಮಸಂಗವನರುಹಿ
ಚೋಳಬಸವೇಶ್ವರನು ಸಿದ್ಧೇಶ್ವರನ ನಿಜಪದವನೊರೆದೊರೆದು
ತೋರಿದ ಕಾರಣ
ಎನ್ನ ತನು ಬಯಲಾಯಿತ್ತು, ಎನ್ನ ಮನ ಬಯಲಾಯಿತ್ತು,
ಪ್ರಾಣ ಬಯಲಾಯಿತ್ತು, ಇಂದ್ರಿಯ ಬಯಲಾಯಿತ್ತು,
ವಿಷಯ ಬಯಲಾಯಿತ್ತು,
ಇಂತಿವರೊಳಗೆ ನಾನು ಬಯಲಾದೆನು.
ಪರಂಜ್ಯೋತಿ ಮಹಾಲಿಂಗಗುರು ಸಿದ್ಧಲಿಂಗ ಪ್ರಭುವಿನಲ್ಲಿ
ಹಿಂದು ಮುಂದು ಎಡ ಬಲ ಅಡಿ ಆಕಾಶವೆಂಬ
ಭೇದವನರಿಯದೆ ಮುಳುಗಿ
'ನಿಶ್ಶಬ್ದ ಬ್ರಹ್ಮಮುಚ್ಯತೆ' ಎಂಬ ನುಡಿಯಡಗಿತ್ತಯ್ಯ
ನಿಮ್ಮ ಧರ್ಮ ನಿಮ್ಮ ಧರ್ಮ. ॥ ೩ ॥

೭೭೧

ಸದ್ಗುರುಸ್ವಾಮಿ ಕೃಪೆ ಮಾಡಿ ಕೊಟ್ಟ
ಪಂಚಾಕ್ಷರ ಷಡಾಕ್ಷರ ಏಕಾಕ್ಷರವೆ
ಎನಗೆ ಇಷ್ಟ ಪ್ರಾಣ ಭಾವ.
ಇಷ್ಟವೆ ಬಸವಣ್ಣ. ಪ್ರಾಣವೆ ಚೆನ್ನಬಸವಣ್ಣ.
ಭಾವವೆ ಪ್ರಭುದೇವರು.
ಅದು ಹೇಗೆಂದಡೆ:

ಸಾಕಾರ ಮೂರು ಮೂವತ್ತೊಂದು ಪ್ರಕಾರವನೊಳಕೊಂಡು
ಎನ್ನ ಕಾಯದಲ್ಲಿ ಸಂಗವಾದನಯ್ಯ ಚೆನ್ನಬಸವಣ್ಣ.
ನಿರಾಕಾರ ಮೂರು ಹದಿಮೂರು ಪ್ರಕಾರವನೊಳಕೊಂಡು
ಎನ್ನ ಪ್ರಾಣದಲ್ಲಿ ಸಂಗವಾದನಯ್ಯ ಚೆನ್ನಬಸವಣ್ಣ.
ನಿಃಕಲ ನಿರವಯ ಚಿದದ್ವಯ ಜಂಗಮವೆ
ಎನ್ನ ಇಂದ್ರಿಯಂಗಳಲ್ಲಿ ಸಂಗವಾದನಯ್ಯ ಪ್ರಭುದೇವರು.
ಅದು ಹೇಗೆಂದಡೆ:
ಅಂಗ ಪ್ರಾಣ ಇಂದ್ರಿಯಂಗಳೆ ಗುರು ಲಿಂಗ ಜಂಗಮ.
ಆ ಗುರು ಲಿಂಗ ಜಂಗಮವೆ ಗೋಳಕ ಗೋಮುಖ ವೃತ್ತಾಕಾರ.
ಅದು ಹೇಗೆಂದಡೆ:
ಗುರುಲಿಂಗ ತ್ರಿವಿಧವನೊಳಕೊಂಡು
ಎನ್ನ ಅಂಗದಲ್ಲಿ ಸಂಗವಾದನಯ್ಯ ಬಸವಣ್ಣ.
ಶಿವಲಿಂಗ ತ್ರಿವಿಧವನೊಳಕೊಂಡು
ಎನ್ನ ಪ್ರಾಣದಲ್ಲಿ ಸಂಗವಾದನಯ್ಯ ಚೆನ್ನಬಸವಣ್ಣ.
ಜಂಗಮಲಿಂಗ ತ್ರಿವಿಧವನೊಳಕೊಂಡು
ಎನ್ನ ಇಂದ್ರಿಯಂಗಳಲ್ಲಿ ಸಂಗವಾದನಯ್ಯ ಪ್ರಭುದೇವರು,
ಆಗಮಲಿಂಗ ತ್ರಿವಿಧವನೊಳಕೊಂಡು
ಎನ್ನ ಪ್ರಾಣದಲ್ಲಿ ಸಂಗವಾದನಯ್ಯ ಚೆನ್ನಬಸವಣ್ಣ.
ಕಾಯಲಿಂಗ ತ್ರಿವಿಧವನೊಳಕೊಂಡು
ಎನ್ನ ಅಂಗದಲ್ಲಿ ಸಂಗವಾದನಯ್ಯ ಬಸವಣ್ಣ.
ಆಚಾರಲಿಂಗ ತ್ರಿವಿಧವನೊಳಕೊಂಡು
ಎನ್ನ ಇಂದ್ರಿಯಂಗಳಲ್ಲಿ ಸಂಗವಾದನಯ್ಯ ಪ್ರಭುದೇವರು.
ಅನುಗ್ರಹಲಿಂಗ ತ್ರಿವಿಧವನೊಳಕೊಂಡು
ಎನ್ನ ಅಂಗದಲ್ಲಿ ಸಂಗವಾದನಯ್ಯ ಬಸವಣ್ಣ.
ಅರ್ಪಿತಲಿಂಗ ತ್ರಿವಿಧವನೊಳಕೊಂಡು
ಎನ್ನ ಪ್ರಾಣದಲ್ಲಿ ಸಂಗವಾದನಯ್ಯ ಚೆನ್ನಬಸವಣ್ಣ.
ತನುಗುಣಲಿಂಗ ತ್ರಿವಿಧವನೊಳಕೊಂಡು
ಎನ್ನ ಇಂದ್ರಿಯಂಗಳಲ್ಲಿ ಸಂಗವಾದನಯ್ಯ ಪ್ರಭುದೇವರು.
ಒಲವುಲಿಂಗ ತ್ರಿವಿಧವನೊಳಕೊಂಡು
ಎನ್ನ ಪ್ರಾಣದಲ್ಲಿ ಸಂಗವಾದನಯ್ಯ ಚೆನ್ನಬಸವಣ್ಣ.
ನಿರೂಪುಲಿಂಗ ತ್ರಿವಿಧವನೊಳಕೊಂಡು
ಎನ್ನ ಪ್ರಾಣದಲ್ಲಿ ಸಂಗವಾದನಯ್ಯ ಚೆನ್ನಬಸವಣ್ಣ.
ಪ್ರಸಾದಲಿಂಗ ತ್ರಿವಿಧವನೊಳಕೊಂಡು

ಎನ್ನ ಇಂದ್ರಿಯಂಗಳಲ್ಲಿ ಸಂಗವಾದೆನಯ್ಯ ಪ್ರಭುದೇವರು.
ಪಾದೋದಕಲಿಂಗ ತ್ರಿವಿಧವನೊಳಕೊಂಡು
ಎನ್ನ ಪ್ರಾಣದಲ್ಲಿ ಸಂಗವಾದನಯ್ಯ ಚೆನ್ನಬಸವಣ್ಣ.
ನಿಃಪತಿಲಿಂಗ ತ್ರಿವಿಧನೊಳಕೊಂಡು
ಎನ್ನ ಅಂಗದಲ್ಲಿ ಸಂಗವಾದನಯ್ಯ ಬಸವಣ್ಣ.
ಆಕಾಶಲಿಂಗ ತ್ರಿವಿಧವನೊಳಕೊಂಡು ಎನ್ನ ಇಂದ್ರಿಯಂಗಳಲ್ಲಿ
ಸಂಗವಾದನಯ್ಯ ಪ್ರಭುದೇವರು.
ಪ್ರಕಾಶಲಿಂಗ ತ್ರಿವಿಧವನೊಳಕೊಂಡು
ಎನ್ನ ಇಂದ್ರಿಯಂಗಳಲ್ಲಿ ಸಂಗವಾದನಯ್ಯ ಪ್ರಭುದೇವರು.
ಕೊಂಡುದು ಪ್ರಸಾದ, ನಿಂದುದೋಗರ, ಚರಾಚರ ನಾಸ್ತಿ ಎಂಬ
ತ್ರಿವಿಧವನೊಳಕೊಂಡು
ಎನ್ನ ಪ್ರಾಣದಲ್ಲಿ ಸಂಗವಾದನಯ್ಯ ಚೆನ್ನಬಸವಣ್ಣ.
ಭಾಂಡ ಭಾಜನ ಅಂಗಲೇಪನವೆಂಬ ತ್ರಿವಿಧವನೊಳಕೊಂಡು
ಎನ್ನ ಅಂಗದಲ್ಲಿ ಸಂಗವಾದನಯ್ಯ ಬಸವಣ್ಣ.
ಈ ಗುರು ಲಿಂಗ ಜಂಗಮದೇಕಾರ್ಥ ಸಚ್ಚಿದಾನಂದ ಬ್ರಹ್ಮವು
ಆ ಸಚ್ಚಿದಾನಂದ ಬ್ರಹ್ಮವೇ ಸಿದ್ಧೇಶ್ವರನು.
ಆ ಸಿದ್ಧೇಶ್ವರನೆ ಪಿಂಡಬ್ರಹ್ಮಾಂಡದೊಳಹೊರಗೆ
ಪರಿಪೂರ್ಣವಾಗಿ ತೋರುವ ಭೇದವನು
ಬೋಳಬಸವೇಶ್ವರನು ಎನ್ನ ಅಂತರಂಗ ಬಹಿರಂಗ ಎಡಬಲ
ಹಿಂದು ಮುಂದು ಅಡಿ ಆಕಾಶ
ತತ್ಪರಿಪೂರ್ಣ ಸಮರಸೈಕ್ಯ ಏಕಾರ್ಥವ ಮಾಡಿಕೊಟ್ಟ ಕಾರಣ
ಪರಂಜ್ಯೋತಿ ಮಹಾಲಿಂಗಗುರು ಸಿದ್ಧಲಿಂಗ ಪ್ರಭುವಿನಲ್ಲಿ
ವಾಯುವನಪ್ಪಿದ ಪರಿಮಳದಂತೆ
ಅಂಬುಧಿಯೊಳಗೆ ಬಿದ್ದ ವಾರಿಕಲ್ಲಿನಂತೆ
ಉರಿಯುಂಡ ಕರ್ಪುರದಂತಾದೆನಯ್ಯ
ನಿಮ್ಮ ಧರ್ಮ ನಿಮ್ಮ ಧರ್ಮ. ॥ ೪ ॥

೭೭೨

ಎನ್ನ ತನುವೆ ಬಸವಣ್ಣ, ಎನ್ನಾತ್ಮವೆ ಮಡಿವಾಳಯ್ಯ,
ಎನ್ನ ಪ್ರಾಣವೆ ಚೆನ್ನಬಸವಣ್ಣ,
ಎನ್ನ ಇಂದ್ರಿಯಂಗಳೆ ಪ್ರಭುದೇವರು,

ಎನ್ನ ವಿಷಯಂಗಳೆ ಮೋಳಿಗೆ ಮಾರಿತಂದೆ.
ಎನ್ನ ಪ್ರಕೃತಿಯೆ ಅಜಗಣ್ಣದೇವರು.
ಎನ್ನ ಅಂಗಕರಣಂಗಳೆ ಅಸಂಖ್ಯಾತ ಮಹಾಗಣಂಗಳು.
ಎನ್ನ ಮನವೆ ಮಹದೇವಿಯಕ್ಕ,
ಎನ್ನ ಬುದ್ಧಿಯೆ ಮೋಳಿಗಯ್ಯನ ರಾಣಿ,
ಎನ್ನ ಚಿತ್ತವೆ ನೀಲಲೋಚನೆಯಮ್ಮ,
ಎನ್ನ ಅಹಂಕಾರವೆ ತಂಗಟೂರ ಮಾರಯ್ಯನ ರಾಣಿ.
ಎನ್ನ ಅರುಹೆ ಅಕ್ಕನಾಗಾಯಕ್ಕ.
ಎನ್ನ ಅರುಹಿನ ವಿಶ್ರಾಂತಿಯೆ ಮುಕ್ತಾಯಕ್ಕ.
ಎನ್ನ ನೇತ್ರದ ದೃಕ್ಕೆ ಸೊಡ್ಡಳ ಬಾಚರಸರು.
ಎನ್ನ ಪುಣ್ಯದ ಪುಂಜವೆ ಹಡಪದಪ್ಪಣ್ಣ.
ಎನ್ನ ಕ್ಷುತ್ತು ಪಿಪಾಂಸೆಯೆ ಘಟ್ಟಿವಾಳಯ್ಯ.
ಎನ್ನ ಶೋಕ ಮೋಹವೆ ಚಂದಿಮರಸರು.
ಎನ್ನ ಜನನ ಮರಣವೆ ನಿಜಗುಣದೇವರು.
ಎನ್ನ ಯೋಗದ ನಿಲುಕಡೆಯೆ ಸಿದ್ಧರಾಮೇಶ್ವರ[ರು].
ಎನ್ನ ಅಂಗಕರಣವೆ ಏಳ್ನೂರೆಪ್ಪತ್ತಮರಗಣಂಗಳು.
ಇಂತಿವನರಿದೆನಾಗಿ ಬೋಳಬಸವೇಶ್ವರನ ಕೃಪೆಯಿಂದ
ಸಿದ್ಧೇಶ್ವರನೆಂಬ ಪರುಷ ಸಾಧ್ಯವಾಯಿತ್ತಯ್ಯ.
ಪರಂಜ್ಯೋತಿ ಮಹಾಲಿಂಗಗುರು ಸಿದ್ಧಲಿಂಗ ಪ್ರಭುವಿನಲ್ಲಿ
ಅಂಗ ಮಿಥ್ಯಭಾವವನರಿಯದೆ
ನಿಮ್ಮ ಕೃಪಾನಂದದೊಳಗೆ ಮುಳುಗಿರ್ದೆನಯ್ಯ,
ನಿಮ್ಮ ಧರ್ಮ ನಿಮ್ಮ ಧರ್ಮ. ॥ ೫ ॥

೭೭೩

ಎನ್ನ ಉನ್ಮನಿಯ ತತ್ವದ ಮೇಲೆ ತಳತಳನೆ ಹೊಳೆವುತ್ತಿಹ
ಚಿತ್ಪೂರ್ಣ ಚಿತ್ಪ್ರಕಾಶ ಚಿತ್ಪರಮಲಿಂಗವನು
ಮೆಲ್ಲ ಮೆಲ್ಲನೆ ಎನ್ನ ಭಾವಸ್ಥಲದಲ್ಲಿತಂದು
ಇಂಬಿಟ್ಟನಯ್ಯ ಶ್ರೀಗುರು.
ಎನ್ನ ಭಾವಸ್ಥಲದಲ್ಲಿ ತಳತಳನೆ ಹೊಳವುತ್ತಿಹ
ಚಿತ್ಪೂರ್ಣ ಚಿತ್ಪ್ರಕಾಶ ಚಿತ್ಕಲಾಲಿಂಗವನು
ಎನ್ನ ಆತ್ಮಸ್ಥಲದಲ್ಲಿ ಮೆಲ್ಲನೆ ತಂದು
ನ್ಯಸ್ತವ ಮಾಡಿದನಯ್ಯ ಶ್ರೀಗುರು.

ಎನ್ನ ಆತ್ಮಸ್ಥಲದಲ್ಲಿ ತಳತಳನೆ ಹೊಳವುತ್ತಿಹ
ಚಿತ್ಪೂರ್ಣ ಚಿತ್ಪ್ರಕಾಶ ಚಿದಾನಂದಲಿಂಗವನು
ಮೆಲ್ಲಮೆಲ್ಲನೆ ಎನ್ನ ಆಕಾಶತತ್ವದಲ್ಲಿ
ಸ್ಥಾಪ್ಯವ ಮಾಡಿದನಯ್ಯ ಶ್ರೀಗುರು.
ಎನ್ನ ಆಕಾಶತತ್ವದಲ್ಲಿ ತಳತಳನೆ ಹೊಳವುತ್ತಿಹ
ಚಿತ್ಪೂರ್ಣ ಚಿತ್ಪ್ರಕಾಶ ಚಿನ್ಮಯಲಿಂಗವನು
ಮೆಲ್ಲಮೆಲ್ಲನೆ ಎನ್ನ ವಾಯುತತ್ವದಲ್ಲಿ
ನ್ಯಸ್ತವ ಮಾಡಿದನಯ್ಯ ಶ್ರೀಗುರು.
ಎನ್ನ ವಾಯುತತ್ವದಲ್ಲಿ ತಳತಳನೆ ಹೊಳವುತ್ತಿಹ
ಚಿತ್ಪೂರ್ಣ ಚಿತ್ಪ್ರಕಾಶ ಚಿನ್ಮೂರ್ತಿಲಿಂಗವನು
ಮೆಲ್ಲಮೆಲ್ಲನೆ ಎನ್ನ ಅಗ್ನಿತತ್ವದಲ್ಲಿ ಅನುಗೊಳಿಸಿದನಯ್ಯ ಶ್ರೀಗುರು.
ಎನ್ನ ಅಗ್ನಿತತ್ವದಲ್ಲಿ ತಳತಳನೆ ಹೊಳವುತ್ತಿಹ
ಚಿತ್ಪೂರ್ಣ ಚಿತ್ಪ್ರಕಾಶ ಚಿಲ್ಲಿಂಗವನು
ಮೆಲ್ಲಮೆಲ್ಲನೆ ಎನ್ನ ಅಪ್ಪುತತ್ವದಲ್ಲಿ ನೆಲೆಗೊಳಿಸಿದನಯ್ಯ ಶ್ರೀಗುರು.
ಎನ್ನ ಅಪ್ಪುತತ್ವದಲ್ಲಿ ತಳತಳನೆ ಹೊಳವುತ್ತಿಹ
ಚಿತ್ಪೂರ್ಣ ಚಿತ್ಪ್ರಕಾಶ ಚಿದ್ರೂಪಲಿಂಗವನು
ಮೆಲ್ಲಮೆಲ್ಲನೆ ಎನ್ನ ಪೃಥ್ವಿತತ್ವದಲ್ಲಿ
ಹುದುಗೊಳಿಸಿದನಯ್ಯ ಶ್ರೀಗುರು.
ಎನ್ನ ಪೃಥ್ವಿತತ್ವದಲ್ಲಿ ತಳತಳನೆ ಹೊಳವುತ್ತಿಹ
ಚಿತ್ಪೂರ್ಣ ಚಿತ್ಪ್ರಕಾಶ ಚಿದದ್ವಯಲಿಂಗವನು
ಎನ್ನ ಭಾವ ಮನ ದೃಕ್ಕಿಗೆ ಕರತಳಾಮಳಕವಾಗಿ
ಎನ್ನ ಕರಸ್ಥಲದಲ್ಲಿ ಮೂರ್ತಗೊಳಿಸಿದನಯ್ಯ ಶ್ರೀಗುರು.
ಎನ್ನ ಕರಸ್ಥಲದಲ್ಲಿ ಮೂರ್ತಿಗೊಂಡ ಇಷ್ಟಬ್ರಹ್ಮವೆ ಬಸವಣ್ಣನೆನಗೆ.
ಆ ಬಸವಣ್ಣನೆ ಎನ್ನ ಆಧಾರಚಕ್ರದಲ್ಲಿ
ಆಚಾರಲಿಂಗವಾಗಿ ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ಸ್ವಾಧಿಷ್ಠಾನಚಕ್ರದಲ್ಲಿ ಗುರುಲಿಂಗವಾಗಿ
ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ಮಣಿಪೂರಕಚಕ್ರದಲ್ಲಿ ಶಿವಲಿಂಗವಾಗಿ
ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ಅನಾಹತಚಕ್ರದಲ್ಲಿ ಜಂಗಮಲಿಂಗವಾಗಿ
ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ವಿಶುದ್ಧಿಚಕ್ರದಲ್ಲಿ ಪ್ರಸಾದಲಿಂಗವಾಗಿ
ಮೂರ್ತಿಗೊಂಡನಯ್ಯ ಬಸವಣ್ಣ.

ಎನ್ನ ಆಜ್ಞಾಚಕ್ರದಲ್ಲಿ ಮಹಾಲಿಂಗವಾಗಿ
ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ಬ್ರಹ್ಮರಂಧ್ರದಲ್ಲಿ ನಿಃಕಲಿಲಿಂಗವಾಗಿ
ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ಶಿಖಾಚಕ್ರದಲ್ಲಿ ಶೂನ್ಯಲಿಂಗವಾಗಿ
ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ಪಶ್ಚಿಮಚಕ್ರದಲ್ಲಿ ನಿರಂಜನಲಿಂಗವಾಗಿ
ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ಸ್ಥೂಲಾಂಗದಲ್ಲಿ ಇಷ್ಟಲಿಂಗವಾಗಿ
ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ಸೂಕ್ಷ್ಮಾಂಗದಲ್ಲಿ ಪ್ರಾಣಲಿಂಗವಾಗಿ
ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ಕಾರಣಾಂಗದಲ್ಲಿ ಭಾವಲಿಂಗವಾಗಿ
ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ನಾಸಿಕದಲ್ಲಿ ಆಚಾರಲಿಂಗವಾಗಿ
ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ಜಿಹ್ವೆಯಲ್ಲಿ ಗುರುಲಿಂಗವಾಗಿ
ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ದೃಕ್ಕಿನಲ್ಲಿ ಶಿವಲಿಂಗವಾಗಿ
ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ತ್ವಕ್ಕಿನಲ್ಲಿ ಜಂಗಮಲಿಂಗವಾಗಿ
ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ಶ್ರೋತ್ರದಲ್ಲಿ ಪ್ರಸಾದಲಿಂಗವಾಗಿ
ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ಹೃದಯದಲ್ಲಿ ಮಹಾಲಿಂಗವಾಗಿ
ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ಪೃಥ್ವಿಸಂಬಂಧವಾದ ಅಷ್ಟಾದಶ ಪದಾರ್ಥಂಗಳ ಕೈಕೊಂಡು
ಆಚಾರಲಿಂಗವಾಗಿ ಎನ್ನ ಭಕ್ತಸ್ಥಲದಲ್ಲಿ
ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ಅಪ್ಪುಸಂಬಂಧವಾದ ಅಷ್ಟಾದಶ ಪದಾರ್ಥಂಗಳ ಕೈಕೊಂಡು
ಗುರುಲಿಂಗವಾಗಿ ಎನ್ನ ಮಾಹೇಶ್ವರಸ್ಥಲದಲ್ಲಿ
ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ಅಗ್ನಿಸಂಬಂಧವಾದ ಅಷ್ಟಾದಶಪದಾರ್ಥಂಗಳ ಕೈಕೊಂಡು
ಶಿವಲಿಂಗವಾಗಿ ಎನ್ನ ಪ್ರಸಾದಿಸ್ಥಲದಲ್ಲಿ

ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ವಾಯುಸಂಬಂಧವಾದ ಅಷ್ಟಾದಶಪದಾರ್ಥಂಗಳ ಕೈಕೊಂಡು
ಜಂಗಮಲಿಂಗವಾಗಿ ಎನ್ನ ಪ್ರಾಣಲಿಂಗಿಸ್ಥಲದಲ್ಲಿ
ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ಆಕಾಶಸಂಬಂಧವಾದ ಅಷ್ಟಾದಶಪದಾರ್ಥಂಗಳ ಕೈಕೊಂಡು
ಪ್ರಸಾದಲಿಂಗವಾಗಿ ಎನ್ನ ಶರಣಸ್ಥಲದಲ್ಲಿ
ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ಆತ್ಮಸಂಬಂಧವಾದ ಅಷ್ಟಾದಶಪದಾರ್ಥಂಗಳ ಕೈಕೊಂಡು
ಮಹಾಲಿಂಗವಾಗಿ ಎನ್ನ ಐಕ್ಯದಲ್ಲಿ
ಮೂರ್ತಿಗೊಂಡನಯ್ಯ ಬಸವಣ್ಣ.
ಇಂತೀ ನಾನಾವಿಧ ಪ್ರಕಾರವನೊಳಕೊಂಡು ಬಸವಣ್ಣನೆ
ಇಷ್ಟಬ್ರಹ್ಮವೆನಗೆ.
ಆ ಇಷ್ಟಬ್ರಹ್ಮವೆ
ಎನ್ನ ಅಂಗ ಮನ ಪ್ರಾಣ ಇಂದ್ರಿಯ ಸಕಲ ಕರಣಂಗಳ
ಕೊನೆಯ ಮೊನೆಯ ಮೇಲೆ ತಳತಳನೆ ಬೆಳಗುತ್ತಿಪ್ಪ
ಭೇದವನು ಸಿದ್ಧೇಶ್ವರನೆನಗೆ ಅರುಹಿದ ಕಾರಣ
ಪರಂಜ್ಯೋತಿ ಮಹಾಲಿಂಗಗುರು ಸಿದ್ಧಲಿಂಗ ಪ್ರಭುವಿನಲ್ಲಿ
ಉರಿಯುಂಡ ಕರ್ಪುರದಂತಾದೆನಯ್ಯ
ಬೋಳಬಸವೇಶ್ವರ ನಿಮ್ಮ ಧರ್ಮ ನಿಮ್ಮ ಧರ್ಮ. ॥ ೬ ॥

೭೭೪

ಪ್ರಥಮದಲ್ಲಿ ವಾಙ್ಮನಕ್ಕೆ ಬಾರದ ಸಚ್ಚಿದಾನಂದ ನಿತ್ಯಪರಿಪೂರ್ಣ
ಲಕ್ಷಣವನುಳ್ಳ ನಿಃಕಲದೇವರು.
ದ್ವಿತೀಯದಲ್ಲಿ
'ಪರಂ ಗೂಢಂ ಶರೀರಸ್ಥಂ ಲಿಂಗಕ್ಷೇತ್ರಮನಾದಿವತ್'
ಎಂಬ ಪಂಚಸಂಜ್ಞೆಯನ್ನುಳ್ಳ ಮಹಾಲಿಂಗದೇವರು.
ತೃತೀಯದಲ್ಲಿ ಕರ್ಮಕರ್ತೃಮೂರ್ತಿ ಅಮೂರ್ತಿ
ಶಿವಸಾದಾಖ್ಯವನುಳ್ಳ ಸದಾಶಿವದೇವರು.
ಚತುರ್ಥದಲ್ಲಿ ಭವ ಶರ್ವ ರುದ್ರ ಭೀಮ ಸದಾಶಿವ ಉಗ್ರ
ಸೋಮ ಪಶುಪತಿ ಎಂಬ
ಎಂಟು ಪ್ರಕಾರವನುಳ್ಳ ಈಶ್ವರದೇವರು.
ಪಂಚಮದಲ್ಲಿ ಶರ್ವ ಶಿವ ಮಹಾದೇವರು ನೀಲಕಂಠ

ವೃಷಭಧ್ವಜ ಈಶಾನ ಶಂಕರ ಭೀಮ ಪಿನಾಕಿ ಚಂದ್ರಶೇಖರ
ಕಪರ್ದಿ ವಿರೂಪಾಕ್ಷ ವಾಮದೇವ ಮೃಡ ಭೂತೇಶ ಶೂಲಿ
ಸರ್ವಜ್ಞ ಸ್ಥಾಣು ಪಾರ್ವತಿಪ್ರಿಯ ಮಹಾಂಕಾಳ ಮಹಾದೀರ್ಘ
ಮಹಾತಾಂಡವ ಗಂಗಾಧರ ಗಣೇಶ್ವರ ಗಜಧ್ವಂಸಿ ಎಂಬ
ಇಪ್ಪತ್ತೈದು ಪ್ರಕಾರವನುಳ್ಳ ಮಾಹೇಶ್ವರದೇವರು.
ಷಷ್ಠಮದಲ್ಲಿ ಶಿವ ಮಾಹೇಶ್ವರ ರುದ್ರ ಶ್ರೀಕಂಠ ಶಂಭು ಈಶ್ವರ
ಮಹಾದೇವರು ಪಶುಪತಿ ನೀಲಕಂಠ ವೃಷಭಧ್ವಜ
ಪರಮೇಶ್ವರನೆಂಬ
ಹನ್ನೊಂದು ಪ್ರಕಾರವನುಳ್ಳ ರುದ್ರದೇವರು.
ಸಪ್ತಮದಲ್ಲಿ ಭವ ಮೃಡ ಹರನೆಂಬ ಮೂರು ಪ್ರಕಾರವನುಳ್ಳ
ತ್ರಯಾವಯದೇವರು.
ಅಷ್ಟಮದಲ್ಲಿ ಭಯಂಕರವನುಳ್ಳ ವಿರಾಟಮೂರ್ತಿದೇವರು.
ನವಮದಲ್ಲಿ ಸರ್ವಚೈತನ್ಯಾತ್ಮಕವನುಳ್ಳ ಹಿರಣ್ಯದೇವರು.
ದಶಮದಲ್ಲಿ ಸುಷುಪ್ತಾವಸ್ಥೆಯನುಳ್ಳ ಪ್ರಾಜ್ಞದೇವರು.
ಏಕಾದಶದಲ್ಲಿ ಸ್ವಪ್ನಾವಸ್ಥೆಯನುಳ್ಳ ತೈಜಸದೇವರು.
ದ್ವಾದಶದಲ್ಲಿ ಜಾಗ್ರಾವಸ್ಥೆಯನುಳ್ಳ ವಿಶ್ವೇಶ್ವರದೇವರು
ಇಂತೀ ನಾಮ ಪರಿಯಾಯಂಗಳನೆಲ್ಲವನು
ಬಸವೇಶ್ವರನೆ ಅಲಂಕರಿಸಿ
'ಏಕಮೂರ್ತಿಸ್ತ್ರಯೋರ್ಭಾಗಂ' ಎಂಬ ಶ್ರುತಿ ಪ್ರಮಾಣದಿಂದ
ಎನ್ನ ಸಾಕಾರ ಮೂರು ಮೂರು ನವವಿಂಶತಿ ನವವಿಂಶತಿ
ಸ್ವರೂಪವನೊಳಕೊಂಡು
ಎನ್ನ ಬಹಿರಂಗದಲ್ಲಿ ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ನಿರಾಕಾರ ಮೂರು ಮೂರು ವಿಂಶತಿ ವಿಂಶತಿ
ಸ್ವರೂಪವನೊಳಕೊಂಡು
ಎನ್ನ ಅಂತರಂಗದಲ್ಲಿ ಮೂರ್ತಿಗೊಂಡನಯ್ಯ ಚೆನ್ನಬಸವಣ್ಣ.
ನಾಮ ರೂಪು ಕ್ರೀ ಏನೂ ಏನೂ ಇಲ್ಲದ ಸಚ್ಚಿದಾನಂದ
ಲಕ್ಷಣವನುಳ್ಳ ಬ್ರಹ್ಮವೇ
ಉಭಯಸಂಗದಲ್ಲಿ ಸನ್ನಹಿತವಾದನಯ್ಯ ಪ್ರಭುದೇವರು.
ಇಂತೀ ಪಿಂಡಾದಿ ಜ್ಞಾನಶೂನ್ಯಾಂತ ಸ್ಥಲ ಕುಳ ಭೇದವನು
ಸಿದ್ಧೇಶ್ವರನೆನಗೆ ಅರುಹಿ
ತನ್ನ ನಿಜಪದದೊಳಗೆ ಇಂಬಿಟ್ಟುಕೊಂಡ ಕಾರಣ
ಪರಂಜ್ಯೋತಿ ಮಹಾಲಿಂಗಗುರು ಸಿದ್ಧಲಿಂಗ ಪ್ರಭುವಿನಲ್ಲಿ

ಸಿದ್ಧೇಶ್ವರನ ಘನವು ಎನಗೆ
ವಾರಿಕಲ್ಲ ಪುತ್ಥಳಿಯನಪ್ಪಿಕೊಂಡಂತಾಯಿತ್ತಯ್ಯ
ಬೋಳಬಸವೇಶ್ವರ ನಿಮ್ಮ ಧರ್ಮ ನಿಮ್ಮ ಧರ್ಮ. ॥ ೭ ॥

೭೭೫

ಎನ್ನ ಮೂವತ್ತಕ್ಷರಸ್ವರೂಪವನೊಳಕೊಂಡು ಆಚಾರಲಿಂಗವಾಗಿ
ಎನ್ನ ಭಕ್ತಿಸ್ಥಲದಲ್ಲಿ ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ಇಪ್ಪತ್ತೈದಕ್ಷರಸ್ವರೂಪವನೊಳಕೊಂಡು ಗುರುಲಿಂಗ ಸ್ವರೂಪಾಗಿ
ಎನ್ನ ಮಾಹೇಶ್ವರಸ್ಥಲದಲ್ಲಿ ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ಇಪ್ಪತ್ತಕ್ಷರಸ್ವರೂಪವನೊಳಕೊಂಡು ಶಿವಲಿಂಗ ಸ್ವರೂಪಾಗಿ
ಎನ್ನ ಪ್ರಸಾದಿಸ್ಥಲದಲ್ಲಿ ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ಹದಿನೈದಕ್ಷರಸ್ವರೂಪವನೊಳಕೊಂಡು
ಜಂಗಮಲಿಂಗ ಸ್ವರೂಪಾಗಿ
ಎನ್ನ ಪ್ರಾಣಲಿಂಗಿಸ್ಥಳದಲ್ಲಿ ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ದಶಾಕ್ಷರಸ್ವರೂಪವನೊಳಕೊಂಡು ಪ್ರಸಾದಲಿಂಗ ಸ್ವರೂಪಾಗಿ
ಎನ್ನ ಶರಣಸ್ಥಲದಲ್ಲಿ ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ಏಕಾಕ್ಷರಸ್ವರೂಪವನೊಳಕೊಂಡು ಮಹಾಲಿಂಗ ಸ್ವರೂಪಾಗಿ
ಎನ್ನ ಐಕ್ಯಸ್ಥಲದಲ್ಲಿ ಮೂರ್ತಿಗೊಂಡನಯ್ಯ ಬಸವಣ್ಣ.
ಇಂತೀ ನಾನಾವಿಧ ಪ್ರಕಾರವನೊಳಕೊಂಡ
ಬಸವಣ್ಣನೆ ಇಷ್ಟಬ್ರಹ್ಮವೆನಗೆ.
ಈ ಇಷ್ಟಬ್ರಹ್ಮವೆ ಎನ್ನ ಭಾವ ಮನ ದೃಕ್ಕಿನಲ್ಲಿ ತೊಳಗಿ ಬೆಳಗುತ್ತಿರ್ದ
ಭೇದವನು
ಸಿದ್ಧೇಶ್ವರನು ಅರುಹಿ ಕೊಟ್ಟ ಕಾರಣ
ಪರಂಜ್ಯೋತಿ ಮಹಾಲಿಂಗಗುರು ಸಿದ್ಧಲಿಂಗ ಪ್ರಭುವಿನಲ್ಲಿ
ಸಿದ್ಧೇಶ್ವರನ ಕೃಪೆ ಎನಗೆ ಸಾಧ್ಯವಾಯಿತ್ತಯ್ಯ ಬೋಳಬಸವೇಶ್ವರ
ನಿಮ್ಮ ಧರ್ಮ ನಿಮ್ಮ ಧರ್ಮ. ॥ ೮ ॥

೭೭೬

ಎನ್ನ ಅಷ್ಟಾಕ್ಷರಸ್ವರೂಪವನೊಳಕೊಂಡು ಎನ್ನ ತನುವಿನಲ್ಲಿ
ಸಂಗವಾದನಯ್ಯ ಬಸವಣ್ಣ.
ಎನ್ನ ಷಡಾಕ್ಷರಸ್ವರೂಪವನೊಳಕೊಂಡು ಎನ್ನ ನಯನದಲ್ಲಿ

ಸಂಗವಾದನಯ್ಯ ಚೆನ್ನಬಸವಣ್ಣ.
ಎನ್ನ ಪಂಚಾಕ್ಷರಸ್ವರೂಪವನೊಳಕೊಂಡು ಎನ್ನ ಪ್ರಾಣದಲ್ಲಿ
ಸಂಗವಾದನಯ್ಯ ಪ್ರಭುದೇವರು.
ಇಂತೀ ತನು ಮನ ಪ್ರಾಣವೆ ಸಚ್ಚಿದಾನಂದ ಬ್ರಹ್ಮವು.
ಆ ಸಚ್ಚಿದಾನಂದ ಬ್ರಹ್ಮವೆ ಎನ್ನ ಭಾವ ಮನ ಕರಣಂಗಳೊಳಗೆ
ತಳತಳನೆ ಹೊಳಹುತ್ತಿಪ್ಪ ಭೇದವನು
ಸಿದ್ಧೇಶ್ವರನೆನಗೆ ಅರುಹಿದ ಕಾರಣ
ಪರಂಜ್ಯೋತಿ ಮಹಾಲಿಂಗಗುರು ಸಿದ್ಧಲಿಂಗ ಪ್ರಭುವಿನಲ್ಲಿ
ಸಮುದ್ರದೊಳಗೆ ಮುಳುಗಿದ ವಾರಿಕಲ್ಲಿನಂತಾದೆನಯ್ಯ
ಬೋಳಬಸವೇಶ್ವರ ನಿಮ್ಮ ಧರ್ಮ ನಿಮ್ಮ ಧರ್ಮ. ॥ ೬ ॥

೭೭೭

ಆಚಾರಭಕ್ತ ಎಪ್ಪತ್ತೆರಡು ಪ್ರಕಾರವನೊಳಕೊಂಡು
ಆಚಾರಲಿಂಗವಾಗಿ ಎನ್ನ ಶ್ರದ್ಧೆಯಲ್ಲಿ ಸಂಗವಾದನಯ್ಯ ಬಸವಣ್ಣ.
ಗೌರವಮಾಹೇಶ್ವರನು ಎಪ್ಪತ್ತೆರಡು ಪ್ರಕಾರವನೊಳಕೊಂಡು
ಗುರುಲಿಂಗವಾಗಿ ಎನ್ನ ನೈಷ್ಠೆಯಲ್ಲಿ ಸಂಗವಾದನಯ್ಯ ಬಸವಣ್ಣ.
ಲೈಂಗಿಪ್ರಸಾದಿ ಎಪ್ಪತ್ತೆರಡು ಪ್ರಕಾರವನೊಳಕೊಂಡು
ಶಿವಲಿಂಗವಾಗಿ ಎನ್ನ ಸಾವಧಾನದಲ್ಲಿ ಸಂಗವಾದನಯ್ಯ ಬಸವಣ್ಣ.
ಚರಪ್ರಾಣಲಿಂಗಿ ಎಪ್ಪತ್ತೆರಡು ಪ್ರಕಾರವನೊಳಕೊಂಡು
ಜಂಗಮಲಿಂಗವಾಗಿ ಎನ್ನನುಭಾವದಲ್ಲಿ
ಸಂಗವಾದನಯ್ಯ ಬಸವಣ್ಣ.
ಪ್ರಸಾದಶರಣ ಎಪ್ಪತ್ತೆರಡು ಪ್ರಕಾರವನೊಳಕೊಂಡು
ಪ್ರಸಾದಲಿಂಗವಾಗಿ ಎನ್ನಾನಂದದಲ್ಲಿ ಸಂಗವಾದನಯ್ಯ ಬಸವಣ್ಣ.
ಮಹಾಘನಐಕ್ಯ ಎಪ್ಪತ್ತೆರಡು ಪ್ರಕಾರವನೊಳಕೊಂಡು
ಮಹಾಲಿಂಗವಾಗಿ ಎನ್ನ ಸಮರಸದಲ್ಲಿ ಸಂಗವಾದನಯ್ಯ ಬಸವಣ್ಣ.
ಆಚಾರ ಗೌರವ ಶ್ರದ್ಧೆ ನೈಷ್ಠೆ ಲಿಂಗದ ಪೀಠ.
ಲೈಂಗಿ ಸಾವಧಾನ ಲಿಂಗದ ಮಧ್ಯಚರ.
ಅನುಭಾವ ಲಿಂಗದ ಗೋಮುಖ.
ಪ್ರಸಾದ ಆನಂದ ಲಿಂಗದ ವರ್ತುಳ.
ಮಹಾಘನ ಸಮರಸಲಿಂಗದ ಗೋಳಕ.
ಇಂತೀ ನಾನಾ ಪ್ರಕಾರವ
ಸಿದ್ಧೇಶ್ವರ ಇಷ್ಟಲಿಂಗದಲ್ಲಿ ಅರುಹಿದನಾಗಿ

ತತ್ವಮಸಿ ವಾಕ್ಯವೆಲ್ಲವೂ ನುಗ್ಗು ನುಸಿಯಾಗಿ ಹೋದವು.
ಸಚ್ಚಿದಾನಂದಬ್ರಹ್ಮ ತಾನಾಗಿ
ಪರಂಜ್ಯೋತಿ ಮಹಾಲಿಂಗಗುರು ಸಿದ್ಧಲಿಂಗ ಪ್ರಭುವಿನಲ್ಲಿ
ನಾನು ಕೆಟ್ಟು ಬಟ್ಟಬಯಲಾಗಿ ಹೋದೆನಯ್ಯ ಬೋಳಬಸವೇಶ್ವರ
ನಿಮ್ಮ ಧರ್ಮ ನಿಮ್ಮ ಧರ್ಮ. ॥೧೦॥

೭೭೮

ಆಚಾರಭಕ್ತ ಮೂವತ್ತಾರುಭೇದವನೊಳಕೊಂಡು
ನಕಾರವಾಗಿ ಲಿಂಗದ ಪೀಠವಲ್ಲಿ
ಸಂಬಂಧವಾದನಯ್ಯ ಬಸವಣ್ಣ.
ಗೌರವಮಾಹೇಶ್ವರ ಮೂವತ್ತಾರು ಭೇದವನೊಳಕೊಂಡು
ಮಃಕಾರವಾಗಿ ಲಿಂಗದ ಮಧ್ಯದಲ್ಲಿ
ಸಂಬಂಧವಾದನಯ್ಯ ಮಡಿವಾಳಯ್ಯ.
ಲೈಂಗಿಪ್ರಸಾದಿ ಮೂವತ್ತಾರು ಭೇದವನೊಳಕೊಂಡು
ಶಿಕಾರವಾಗಿ ಲಿಂಗದ ವರ್ತುಳದಲ್ಲಿ
ಸಂಬಂಧವಾದನಯ್ಯ ಚೆನ್ನಬಸವಣ್ಣ.
ಚರಪ್ರಾಣಲಿಂಗಿ ಮೂವತ್ತಾರು ಭೇದವನೊಳಕೊಂಡು
ವಾಕಾರವಾಗಿ ಲಿಂಗದ ಗೋಮುಖದಲ್ಲಿ
ಸಂಬಂಧವಾದನಯ್ಯಾ ಪ್ರಭುದೇವರು.
ಪ್ರಸಾದಶರಣ ಮೂವತ್ತಾರು ಭೇದವನೊಳಕೊಂಡು
ಯಕಾರವಾಗಿ ಲಿಂಗದ ನಾಳದಲ್ಲಿ
ಸಂಬಂಧವಾದನಯ್ಯ ಉರಿಲಿಂಗಯ್ಯಗಳು.
ಮಹಾಘನ ಐಕ್ಯ ಮೂವತ್ತಾರು ಭೇದವನೊಳಕೊಂಡು
ಓಂಕಾರವಾಗಿ ಲಿಂಗದ ಗೋಳಕದಲ್ಲಿ
ಸಂಬಂಧವಾದನಯ್ಯ ಅಜಗಣ್ಣ.
ಇಂತಪ್ಪ ಇಷ್ಟಬ್ರಹ್ಮವೆ ಎನ್ನ ನವದ್ವಾರ ನವಚಕ್ರ
ಅಂಗ ಮನ ಪ್ರಾಣ ಸರ್ವೇಂದ್ರಿಯವಲ್ಲಿ ಪ್ರಭಾವಿಸಿದ ಭೇದವನು
ಸಿದ್ಧೇಶ್ವರನು ಶ್ರುತ ಗುರು ಸ್ವಾನುಭಾವದಿಂದ ಅರುಹಿದನಾಗಿ
ಪರಂಜ್ಯೋತಿ ಮಹಾಲಿಂಗಗುರು ಸಿದ್ಧಲಿಂಗ ಪ್ರಭುವಿನಲ್ಲಿ
ಎರಡರಿಯದೆ ಇದ್ದೆನಯ್ಯ,
ಬೋಳಬಸವೇಶ್ವರ ನಿಮ್ಮ ಧರ್ಮ ನಿಮ್ಮ ಧರ್ಮ. ॥೧೧॥

ಆಚಾರಭಕ್ತ ಹನ್ನೆರಡು ಪ್ರಕಾರವನೊಳಕೊಂಡು
ಆಚಾರಲಿಂಗವಾಗಿ
ಲಿಂಗದ ಪೀಠದಲ್ಲಿ ಸಂಯೋಗವಾದನಯ್ಯ ಬಸವಣ್ಣ.
ಗೌರವಮಾಹೇಶ್ವರ ಹನ್ನೆರಡು ಪ್ರಕಾರವನೊಳಕೊಂಡು
ಗುರುಲಿಂಗವಾಗಿ
ಲಿಂಗದ ಮಧ್ಯದಲ್ಲಿ ಸಂಯೋಗವಾದನಯ್ಯ ಬಸವಣ್ಣ.
ಲೈಂಗಿಪ್ರಸಾದಿ ಹನ್ನೆರಡು ಪ್ರಕಾರವನೊಳಕೊಂಡು
ಶಿವಲಿಂಗವಾಗಿ ಲಿಂಗದ ವರ್ತುಳದಲ್ಲಿ ಸಂಯೋಗವಾದನಯ್ಯ
ಬಸವಣ್ಣ.
ಚರಪ್ರಾಣಲಿಂಗಿ ಹನ್ನೆರಡು ಪ್ರಕಾರವನೊಳಕೊಂಡು
ಜಂಗಮಲಿಂಗವಾಗಿ
ಲಿಂಗದ ಗೋಮುಖದಲ್ಲಿ ಸಂಯೋಗವಾದನಯ್ಯ ಬಸವಣ್ಣ.
ಪ್ರಸಾದಶರಣ ಹನ್ನೆರಡು ಪ್ರಕಾರವನೊಳಕೊಂಡು
ಪ್ರಸಾದಲಿಂಗವಾಗಿ
ಲಿಂಗದ ನಾಳದಲ್ಲಿ ಸಂಯೋಗವಾದನಯ್ಯ ಬಸವಣ್ಣ.
ಮಹಾಘನಐಕ್ಯ ಹನ್ನೆರಡು ಪ್ರಕಾರವನೊಳಕೊಂಡು
ಮಹಾಲಿಂಗವಾಗಿ
ಲಿಂಗದ ಗೋಳಕದಲ್ಲಿ ಸಂಯೋಗವಾದನಯ್ಯ ಬಸವಣ್ಣ.
ಇಂತಪ್ಪ ಬಸವಣ್ಣನೆ ಸಚ್ಚಿದಾನಂದ ಬ್ರಹ್ಮವು.
ಆ ಸಚ್ಚಿದಾನಂದ ಬ್ರಹ್ಮವೆ ತನ್ನ ಲೀಲೆದೋರಿ ಒಂದು ಎರಡು
ಮೂರು ಆರು ಒಂಬತ್ತು ಹದಿನೆಂಟು ಮೂವತ್ತಾರು
ನೂರೊಂದು ನೂರೆಂಟು ಇನ್ನೂರಹದಿನಾರು
ಮಿಗೆ ಮಿಗೆ ತೋರುವ ಬ್ರಹ್ಮವೆ ಬಸವಣ್ಣನು.
ಈ ಬಸವಣ್ಣನೆ ಎನಗೆ ಇಷ್ಟಬ್ರಹ್ಮ.
ಆ ಇಷ್ಟಬ್ರಹ್ಮವಲ್ಲಿ
ಷೋಡಶ ದ್ವಿಶತ ಅಷ್ಟಾಶತ ಏಕಶತ ಛತ್ತೀಸ ಅಷ್ಟಾದಶ ನವ
ಇಂತಿವೆಲ್ಲವು ಆರರೊಳಗಡಗಿ ಆರು ಮೂರರೊಳಗಡಗಿ
ಆ ಮೂರು ಲಿಂಗದ ಗೋಳಕ ಗೋಮುಖ ವೃತ್ತಾಕಾರದಲ್ಲಿ
ಅಡಗಿದ ಭೇದವನು ಸಿದ್ಧೇಶ್ವರನು ಎನಗರುಹಿದ ಕಾರಣ

ದ್ವೈತಾದ್ವೈತವೆಲ್ಲವು ಸಂಹಾರವಾಗಿ ಹೋದವು.
ನಾನು ದ್ವೈತಾದ್ವೈತವ ಮೀರಿ
ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದದೊಳಗೆ ಸತ್ತು
ಪರಂಜ್ಯೋತಿ ಮಹಾಲಿಂಗಗುರು ಸಿದ್ಧ[ಲಿಂಗ]ಪ್ರಭುವಿನಲ್ಲಿ
ಕೆಟ್ಟು ಬಟ್ಟಬಯಲಾದೆನಯ್ಯ
ಬೋಳಬಸವೇಶ್ವರ ನಿಮ್ಮಧರ್ಮ ನಿಮ್ಮ ಧರ್ಮ. ॥ ೧೨ ॥

೭೮೦

ಭಕ್ತ ಮಾಹೇಶ್ವರ ಆಚಾರಲಿಂಗ ಗುರುಲಿಂಗ
ಈ ಇಪ್ಪತ್ತುನಾಲ್ಕನೊಳಕೊಂಡು
ಎನ್ನ ಇಷ್ಟಲಿಂಗದ ವೃತ್ತದಲ್ಲಿ ಸಂಬಂಧವಾದನಯ್ಯ ಬಸವಣ್ಣ.
ಪ್ರಸಾದಿ ಪ್ರಾಣಲಿಂಗಿ ಶಿವಲಿಂಗ ಜಂಗಮಲಿಂಗ
ಈ ಇಪ್ಪತ್ತುನಾಲ್ಕನೊಳಕೊಂಡು
ಎನ್ನ ಇಷ್ಟಲಿಂಗದ ಗೋಳಕದಲ್ಲಿ ಸಂಬಂಧವಾದನಯ್ಯ
ಚೆನ್ನಬಸವಣ್ಣ.
ಶರಣ ಐಕ್ಯ ಪ್ರಸಾದಲಿಂಗ ಮಹಾಲಿಂಗ ಈ
ಇಪ್ಪತ್ತನಾಲ್ಕನೊಳಕೊಂಡು
ಎನ್ನ ಇಷ್ಟಲಿಂಗದ ಗೋಮುಖದಲ್ಲಿ ಸಂಬಂಧವಾದನಯ್ಯ
ಪ್ರಭುದೇವರು.
ಉಳಿದ ಶೇಷವೆರಡೆರಡು ಈ ಇಪ್ಪತ್ತುನಾಲ್ಕನೊಳಕೊಂಡು
ಎನ್ನ ಇಷ್ಟಲಿಂಗದ ನಾಳದಲ್ಲಿ ಸಂಬಂಧವಾದನಯ್ಯ
ಮರುಳಶಂಕರದೇವರು.
ಇಂತೀ ನಾದ ಬಿಂದು ಕಲೆ ಪ್ರಕೃತಿ ಒಂದಾದ ನಿಃಕಲಬ್ರಹ್ಮವೆ ತಾನಾಗಿ
ಪರಂಜ್ಯೋತಿ ಮಹಾಲಿಂಗಗುರು ಸಿದ್ಧಲಿಂಗ ಪ್ರಭುವಿನಲ್ಲಿ
ಜ್ಯೋತಿಯೊಳಗೆ ಬೆರದ ಕರ್ಪುರದಂತೆ
ಅಂಗಸಕೀಲ ಲಿಂಗಸಕೀಲವನೊಳಕೊಂಡು
ಸಿದ್ಧೇಶ್ವರನ ಬಯಲ ಬೆರಸಿ ನಿರ್ವಯಲಾದೆನಯ್ಯ
ಬೋಳಬಸವೇಶ್ವರ ನಿಮ್ಮ ಧರ್ಮ ನಿಮ್ಮ ಧರ್ಮ. ॥ ೧೩ ॥

೭೮೧

ಎನ್ನ ಕಂಗಳ ವೃಕ್ಕಿನಲ್ಲಿ ಅಂಗ ಲಿಂಗ ಸಂಗ
ನಾಲ್ವತ್ತೆರಡು ಭೇದವನೊಳಕೊಂಡು
ಎನ್ನ ಕಾಯದ ಕರಸ್ಥಲದಲ್ಲಿ ಮೂರ್ತಿಗೊಂಡನಯ್ಯ ಬಸವಣ್ಣನು.
ಎನ್ನ ಮನೋವೃಕ್ಕಿನಲ್ಲಿ ಅಂಗ ಲಿಂಗ ಸಂಗ
ಮೂವತ್ತಮೂರು ಭೇದವನೊಳಕೊಂಡು
ಎನ್ನ ಮನದ ಕರಸ್ಥಲದಲ್ಲಿ ಮೂರ್ತಿಗೊಂಡನಯ್ಯ ಬಸವಣ್ಣನು.
ಎನ್ನ ಭಾವದ ವೃಕ್ಕಿನಲ್ಲಿ ಅಂಗ ಲಿಂಗ ಸಂಗ
ಷಡುವಿಂಶತಿ ಸ್ವರೂಪವನೊಳಕೊಂಡು
ಎನ್ನ ಭಾವದ ಕರಸ್ಥಲದಲ್ಲಿ ಮೂರ್ತಿಗೊಂಡನಯ್ಯ
ಪ್ರಭುದೇವರು.
ಇಂತೀ ಮೂವರು ಒಂದೊಂದನಳವಡಿಸಿಕೊಂಡ ಕಾರಣ
ಎನಗೇನೂಯಿಲ್ಲದೆ ಪರಂಜ್ಯೋತಿ
ಮಹಾಲಿಂಗ ಗುರು ಸಿದ್ಧಲಿಂಗ ಪ್ರಭುವಿನಲ್ಲಿ
ಸಿದ್ಧೇಶ್ವರನ ನಿಜಪದವ ಬೆರಸಿ ಮನಮಗ್ನವಾಗಿರ್ದೆನಯ್ಯ
ಬೋಳಬಸವೇಶ್ವರ ನಿಮ್ಮ ಧರ್ಮ ನಿಮ್ಮ ಧರ್ಮ. ॥ ೧೪ ॥

೭೮೨

ಎನ್ನ ಇಪ್ಪತ್ತೈದಕ್ಷರ ಸ್ವರೂಪವನೊಳಕೊಂಡು
ಎನ್ನ ಜ್ಞಾತೃವಿನಲ್ಲಿ ಸಂಗವಾದನಯ್ಯ ಬಸವಣ್ಣ.
ಎನ್ನ ದಶಾಕ್ಷರ ಸ್ವರೂಪವನೊಳಕೊಂಡು
ಎನ್ನ ಜ್ಞಾನದಲ್ಲಿ ಸಂಗವಾದನಯ್ಯ ಚೆನ್ನಬಸವಣ್ಣ.
ಎನ್ನ ಏಕಾಕ್ಷರ ಸ್ವರೂಪವನೊಳಕೊಂಡು
ಎನ್ನ ಜ್ಞೇಯದಲ್ಲಿ ಸಂಗವಾದನಯ್ಯ ಪ್ರಭುದೇವರು.
ಇಂತೀ ತ್ರಿವಿಧವನು ಸಿದ್ಧೇಶ್ವರನು
ಇಷ್ಟಲಿಂಗದಲ್ಲಿ ಸಂಬಂಧಿಸಿಕೊಟ್ಟ ಕಾರಣ
ಎನ್ನ ಜ್ಞಾತೃ ಜ್ಞಾನ ಜ್ಞೇಯವೆಂಬ ತ್ರಿವಿಧವರತು,
ಪರಂಜ್ಯೋತಿ ಮಹಾಲಿಂಗಗುರು ಸಿದ್ಧಲಿಂಗ ಪ್ರಭುವಿನಲ್ಲಿ

ಮೀರೆದಪ್ಪಿದ ಸಮುದ್ರದಲ್ಲಿ ಅದ್ದಿದಂತಾದೆನಯ್ಯ,
ಬೋಳಬಸವೇಶ್ವರ ನಿಮ್ಮ ಧರ್ಮ ನಿಮ್ಮ ಧರ್ಮ. ॥ ೧೫ ॥

೭೮೩

ಅಯ್ಯಾ ತತ್ವ ವಿತತ್ವ ಶೂನ್ಯ ಮಹಾಶೂನ್ಯವಿಲ್ಲದಂದು,
ಬ್ರಹ್ಮ ವಿಷ್ಣು ರುದ್ರ ಇನ ಶಶಿ ವ್ಯೋಮ ಸಮೀರ ಅಗ್ನಿ ಅಂಬು
ಪೃಥ್ವಿ ನವಗ್ರಹ ದಶದಿಕ್ಕು ಛತ್ತೀಸ ತತ್ವಂಗಳೇನೂ ಇಲ್ಲದಂದು,
ತಾರಜ ತಂಡಜ ಬಿಂದುಜ ಭಿನ್ನಾಯುಕ್ತ ಅವ್ಯಕ್ತ [ಅಮದಾಯುಕ್ತ
ಮಣಿರಣ ಮಾನ್ಯರಣ] ವಿಶ್ವರಣ ವಿಶ್ವಾವಸು
ಅಲಂಕೃತ ಕೃತಯುಗ ತ್ರೇತಾಯುಗ ದ್ವಾಪರ ಕಲಿಯುಗ
ಇಂತಿವು ಯಾವವೂ ಇಲ್ಲದಂದು,
ನಾದ ಬಿಂದು ಕಳೆಗಳಿಲ್ಲದಂದು,
ಪಶು ಪಾಶ ಪತಿ ಕುಂಡಲಿ ಕಾರಕ ಇವೇನೂ ಇಲ್ಲದಂದು,
ವಿಜ್ಞಾನಾಕಲರು ಸಕಲಾಕಲರು ಪ್ರಳಯಾಕಲರು
ಇವೇನೂ ಇಲ್ಲದಂದು,
ದನುಜ ಮನುಜ ದಿವಿಜ ಮನು ಮುನಿ ನಕ್ಷತ್ರಮಂಡಲ
ಇವೇನೂ ಇಲ್ಲದಂದು,
ಅಂದು ನೀನು ನಿಷ್ಕಲ ನಿರವಯ
ನಿಃಶೂನ್ಯವಾಗಿರ್ದೆಯಯ್ಯ ಬಸವಣ್ಣ.
ನೀವೊಂದು ಅನಂತಕಾಲ ಅನಂತಯುಗ ನಿಮ್ಮ ಲೀಲಾ ವಿಚಿಂತನೆ
ನೆನೆದ ನೆನಹೇ ಸುನಾದ.
ಆ ಸುನಾದದ ಪ್ರಕಾಶ ತೇಜೋಪುಂಜವೇ ಬಿಂದು.
ನಾದವೇ ನಿರಂಜನ.
ಬಿಂದುವೇ ನಿರಾಲಂಬ...... ಕೂಟವೇ ನಿರಾಮಯ.
ಇಂತೀ ನಾದ ಬಿಂದು ಕಳೆ ಮೂರು ಕೂಡೆ
ಅಖಂಡ ತೇಜೋಮಯವಾಗಿ
ಷಡ್‌ಬ್ರಹ್ಮಸ್ವರೂಪವನೈದಿದೆಯಲ್ಲ ಬಸವಣ್ಣ.
ನಿನ್ನ ವಿನೋದದಿಂದ ಆ ಷಡ್‌ಬ್ರಹ್ಮದಿಂದ
ಷಡ್ವಿಧ ಭೂತಂಗಳು ಪುಟ್ಟಿ
ಆ ಷಡ್ವಿಧಭೂತಂಗಳೇ ಎನಗಂಗವಾದಲ್ಲಿ
ಆ ಷಡ್‌ಬ್ರಹ್ಮವೇ ಷಡಕ್ಷರಿಮಯವಾಗಿ
ಆ ಷಡ್ವಿಧಭೂತಂಗಳೊಳಗೆ ಸಮೇತವಾಗಿ ಕೂಡಿ
ಛತ್ತೀಸತತ್ವ ಮಂತ್ರಸ್ವರೂಪವಾದ ಭೇದ ಹೇಗೆಂದಡೆ

ಅದಕ್ಕೆ ವಿವರ:
ಓಂಕಾರವೇ ಆತ್ಮನು.
ಓಂಕಾರ ಯಕಾರ ಸಂಯೋಗವಾದಲ್ಲಿ ಆಕಾಶ ಪುಟ್ಟಿತ್ತು.
ಓಂಕಾರ ವಾಕಾರ ಸಂಯೋಗವಾದಲ್ಲಿ ವಾಯು ಪುಟ್ಟಿತ್ತು.
ಓಂಕಾರ ಶಿಕಾರ ಸಂಯೋಗದಲ್ಲಿ ಅಗ್ನಿ ಪುಟ್ಟಿತ್ತು.
ಓಂಕಾರ ಮಃಕಾರ ಸಂಯೋಗದಲ್ಲಿ ಅಪ್ಪು ಪುಟ್ಟಿತ್ತು.
ಓಂಕಾರ ನಕಾರ ಸಂಯೋಗವಾದಲ್ಲಿ ಪೃಥ್ವಿ ಪುಟ್ಟಿತ್ತು.
ಇನ್ನು ಯಕಾರ ಓಂಕಾರ ಸಂಯೋಗವಾದಲ್ಲಿ ಭಾವ ಪುಟ್ಟಿತ್ತು.
ಯಕಾರವೇ ಜ್ಞಾನ.
ಯಕಾರ ವಾಕಾರ ಸಂಯೋಗವಾದಲ್ಲಿ ಮನ ಪುಟ್ಟಿತ್ತು.
ಯಕಾರ ಶಿಕಾರ ಸಂಯೋಗವಾದಲ್ಲಿ ಅಹಂಕಾರ ಪುಟ್ಟಿತ್ತು.
ಯಕಾರ ಮಃಕಾರ ಸಂಯೋಗವಾದಲ್ಲಿ ಬುದ್ಧಿ ಪುಟ್ಟಿತ್ತು.
ಯಕಾರ ನಕಾರ ಸಂಯೋಗವಾದಲ್ಲಿ ಚಿತ್ತು ಪುಟ್ಟಿತ್ತು.
ಇನ್ನು ವಕಾರ ಓಂಕಾರ ಸಂಯೋಗವಾದಲ್ಲಿ
ಪಂಚವಾಯು ಪುಟ್ಟಿದವು.
ವಕಾರ ಯಕಾರ ಸಂಯೋಗವಾದಲ್ಲಿ ಸಮಾನವಾಯು ಪುಟ್ಟಿತ್ತು.
ವಾಕಾರ ತಾನೇ ಉದಾನವಾಯು.
ವಕಾರ ಶಿಕಾರ ಸಂಯೋಗವಾದಲ್ಲಿ ವ್ಯಾನವಾಯು ಪುಟ್ಟಿತ್ತು.
ವಕಾರ ಮಃಕಾರ ಸಂಯೋಗವಾದಲ್ಲಿ ಅಪಾನವಾಯು ಪುಟ್ಟಿತ್ತು.
ವಕಾರ ನಕಾರ ಸಂಯೋಗವಾದಲ್ಲಿ  ಪ್ರಾಣವಾಯು ಪುಟ್ಟಿತ್ತು.
ಇನ್ನು ಶಿಕಾರ ಓಂಕಾರ ಸಂಯೋಗವಾದಲ್ಲಿ ಹೃದಯ ಪುಟ್ಟಿತ್ತು.
ಶಿಕಾರ ಯಕಾರ ಸಂಯೋಗವಾದಲ್ಲಿ ಶ್ರೋತ್ರ ಪುಟ್ಟಿತ್ತು.
ಶಿಕಾರ ವಾಕಾರ ಸಂಯೋಗವಾದಲ್ಲಿ ತ್ವಕ್ಕು ಪುಟ್ಟಿತ್ತು.
ಶಿಕಾರ ತಾನೇ ನೇತ್ರ
ಶಿಕಾರ ಮಃಕಾರ ಸಂಯೋಗವಾದಲ್ಲಿ ಜಿಹ್ವೆ ಪುಟ್ಟಿತ್ತು.
ಶಿಕಾರ ನಕಾರ ಸಂಯೋಗವಾದಲ್ಲಿ ಘ್ರಾಣ ಪುಟ್ಟಿತ್ತು.
ಇನ್ನು ಮಃಕಾರ ಓಂಕಾರ ಸಂಯೋಗವಾದಲ್ಲಿ ತೃಪ್ತಿ ಪುಟ್ಟಿತ್ತು.
ಮಕಾರ ಯಕಾರ ಸಂಯೋಗವಾದಲ್ಲಿ ಶಬ್ದ ಪುಟ್ಟಿತ್ತು.
ಮಕಾರ ವಾಕಾರ ಸಂಯೋಗವಾದಲ್ಲಿ ಸ್ಪರ್ಶನ ಪುಟ್ಟಿತ್ತು.
ಮಕಾರ ಶಿಕಾರ ಸಂಯೋಗವಾದಲ್ಲಿ ರೂಪು ಪುಟ್ಟಿತ್ತು.
ಮಃಕಾರ ತಾನೇ ರಸ.
ಮಕಾರ ನಕಾರ ಸಂಯೋಗವಾದಲ್ಲಿ ಗಂಧ ಪುಟ್ಟಿತ್ತು.

ಇನ್ನು ನಕಾರ ಓಂಕಾರ ಸಂಯೋಗವಾದಲ್ಲಿ ಅಂತರ್ವಾಕ್ಕು ಪುಟ್ಟಿತ್ತು.
ನಕಾರ ಯಕಾರ ಸಂಯೋಗವಾದಲ್ಲಿ ವಾಕ್ಕು ಪುಟ್ಟಿತ್ತು.
ನಕಾರ ವಾಕಾರ ಸಂಯೋಗವಾದಲ್ಲಿ ಪಾಣಿ ಪುಟ್ಟಿತ್ತು.
ನಕಾರ ಶಿಕಾರ ಸಂಯೋಗವಾದಲ್ಲಿ ಪಾದ ಪುಟ್ಟಿತ್ತು.
ನಕಾರ ಮಃಕಾರ ಸಂಯೋಗವಾದಲ್ಲಿ ಗುಹ್ಯ ಪುಟ್ಟಿತ್ತು.
ನಕಾರ ತಾನೇ ವಾಯು.
ಇಂತೀ ಛತ್ತೀಸತತ್ತ್ವವೆಲ್ಲ ಮಂತ್ರಸ್ವರೂಪವಾದ ಬಸವಣ್ಣನೇ
ಎನಗೆ ಅಂಗ ಲಿಂಗ ಹಸ್ತ ಮುಖ ಶಕ್ತಿ ಭಕ್ತಿ ಪದಾರ್ಥ ಪ್ರಸಾದ
ಇಂತಿವೆಲ್ಲವನರಿದು ಅರ್ಪಿಸುವ ಭೇದ ಹೇಗೆಂದಡೆ
ಪ್ರಮಥದಲ್ಲಿ ಷಟ್‌ಸ್ಥಲದ ವಿವರ:
ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ.
ಇನ್ನು **ಭಕ್ತನ** ಷಡ್ವಿಧಲಿಂಗದ ವಿವರ:
ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗ
ಪ್ರಸಾದಲಿಂಗ ಮಹಾಲಿಂಗ.
ಇನ್ನು ಭಕ್ತನ ಷಡ್ವಿಧಹಸ್ತದ ವಿವರ:
ಸುಚಿತ್ತ ಸುಬುದ್ಧಿ ನಿರಹಂಕಾರ ಸುಮನ ಸುಜ್ಞಾನ ಸದ್ಭಾವ.
ಇನ್ನು ಭಕ್ತನ ಷಡ್ವಿಧಮುಖದ ವಿವರ:
ಘ್ರಾಣ ಜಿಹ್ವೆ ನೇತ್ರ ತ್ವಕ್ಕು ಶ್ರೋತ್ರ ಹೃದಯ.
ಇನ್ನು ಭಕ್ತನ ಷಡ್ವಿಧಶಕ್ತಿಯ ವಿವರ:
ಶ್ರದ್ಧೆ ನೈಷ್ಠೆ ಸಾವಧಾನ ಅನುಭಾವ ಆನಂದ ಸಮರಸ.
ಇನ್ನು ಭಕ್ತನ ಷಡ್ವಿಧಪದಾರ್ಥದ ವಿವರ:
ಗಂಧ ರಸ ರೂಪು ಸ್ಪರ್ಶನ ಶಬ್ದ ಪರಿಣಾಮ.
ಇನ್ನು ಭಕ್ತನ ಷಡ್ವಿಧಪ್ರಸಾದದ ವಿವರ:
ಗಂಧಪ್ರಸಾದ ರಸಪ್ರಸಾದ ರೂಪುಪ್ರಸಾದ ಸ್ಪರ್ಶಪ್ರಸಾದ
ಶಬ್ದಪ್ರಸಾದ ಪರಿಣಾಮಪ್ರಸಾದ.
ಇನ್ನು ದ್ವಿತೀಯದಲ್ಲಿ **ಮಾಹೇಶ್ವರನ ಷಟ್‌ಸ್ಥಲ** ವಿವರ:
ಮಾಹೇಶ್ವರ ಭಕ್ತ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ.
ಇನ್ನು ಮಾಹೇಶ್ವರನ ಷಡ್ವಿಧಲಿಂಗದ ವಿವರ:
ಗುರುಲಿಂಗ ಆಚಾರಲಿಂಗ ಶಿವಲಿಂಗ ಜಂಗಮಲಿಂಗ
ಪ್ರಸಾದಲಿಂಗ ಮಹಾಲಿಂಗ.
ಇನ್ನು ಮಾಹೇಶ್ವರನ ಷಡ್ವಿಧಹಸ್ತದ ವಿವರ:
ಸುಬುದ್ಧಿ ಸುಚಿತ್ತ ನಿರಹಂಕಾರ ಸುಮನ ಸುಜ್ಞಾನ ಸದ್ಭಾವ.

ಇನ್ನು ಮಾಹೇಶ್ವರನ ಷಡ್ವಿಧಮುಖದ ವಿವರ:
ಜಿಹ್ವೆ ಘ್ರಾಣ ನೇತ್ರ ತ್ವಕ್ಕು ಶ್ರೋತ್ರ ಹೃದಯ.
ಇನ್ನು ಮಾಹೇಶ್ವರನ ಷಡ್ವಿಧಶಕ್ತಿಯ ವಿವರ:
ಜ್ಞಾನಶಕ್ತಿ ಕ್ರಿಯಾಶಕ್ತಿ ಇಚ್ಛಾಶಕ್ತಿ ಆದಿಶಕ್ತಿ ಪರಾಶಕ್ತಿ ಚಿತ್ಶಕ್ತಿ.
ಇನ್ನು ಮಾಹೇಶ್ವರನ ಷಡ್ವಿಧಭಕ್ತಿಯ ವಿವರ:
ನೈಷ್ಠೆ ಶ್ರದ್ಧೆ ಸಾವಧಾನ ಅನುಭಾವ ಆನಂದ ಸಮರಸ.
ಇನ್ನು ಮಾಹೇಶ್ವರನ ಷಡ್ವಿಧಪದಾರ್ಥದ ವಿವರ:
ರಸ ಗಂಧ ರೂಪು ಸ್ಪರುಶನ ಶಬ್ದ ಪರಿಣಾಮ
ಇನ್ನು ಮಾಹೇಶ್ವರನ ಷಡ್ವಿಧಪ್ರಸಾದದ ವಿವರ:
ರಸಪ್ರಸಾದ ಗಂಧಪ್ರಸಾದ ರೂಪುಪ್ರಸಾದ ಸ್ಪರುಶನಪ್ರಸಾದ
ಶಬ್ದಪ್ರಸಾದ ಪರಿಣಾಮಪ್ರಸಾದ.
ಇನ್ನು ತೃತೀಯದಲ್ಲಿ **ಪ್ರಸಾದಿಯ** ಷಟ್‌ಸ್ಥಲದ ವಿವರ:
ಪ್ರಸಾದಿ ಭಕ್ತ ಮಾಹೇಶ್ವರ ಪ್ರಾಣಲಿಂಗಿ ಶರಣ ಐಕ್ಯ.
ಇನ್ನು ಪ್ರಸಾದಿಯ ಷಡ್ವಿಧಲಿಂಗದ ವಿವರ:
ಶಿವಲಿಂಗ ಆಚಾರಲಿಂಗ ಗುರುಲಿಂಗ ಜಂಗಮಲಿಂಗ
ಪ್ರಸಾದಲಿಂಗ ಮಹಾಲಿಂಗ.
ಇನ್ನು ಪ್ರಸಾದಿಯ ಷಡ್ವಿಧಹಸ್ತದ ವಿವರ:
ನಿರಹಂಕಾರ ಸುಚಿತ್ತ ಸುಬುದ್ಧಿ ಸುಮನ ಸುಜ್ಞಾನ ಸದ್ಭಾವ.
ಇನ್ನು ಪ್ರಸಾದಿಯ ಷಡ್ವಿಧಮುಖದ ವಿವರ:
ನೇತ್ರ ಘ್ರಾಣ ಜಿಹ್ವೆ ತ್ವಕ್ಕು ಶ್ರೋತ್ರ ಹೃದಯ.
ಇನ್ನು ಪ್ರಸಾದಿಯ ಷಡ್ವಿಧಶಕ್ತಿಯ ವಿವರ:
ಇಚ್ಛಾಶಕ್ತಿ ಕ್ರಿಯಾಶಕ್ತಿ ಜ್ಞಾನಶಕ್ತಿ ಆದಿಶಕ್ತಿ ಪರಾಶಕ್ತಿ ಚಿತ್ಶಕ್ತಿ.
ಇನ್ನು ಪ್ರಸಾದಿಯ ಷಡ್ವಿಧಭಕ್ತಿಯ ವಿವರ:
ಸಾವಧಾನ ಶ್ರದ್ಧೆ ನೈಷ್ಠೆ ಅನುಭಾವ ಆನಂದ ಸಮರಸ.
ಇನ್ನು ಪ್ರಸಾದಿಯ ಷಡ್ವಿಧಪದಾರ್ಥದ ವಿವರ:
ರೂಪು ಗಂಧ ರಸ ಸ್ಪರುಶನ ಶಬ್ದ ಪರಿಣಾಮ.
ಇನ್ನು ಪ್ರಸಾದಿಯ ಷಡ್ವಿಧಪ್ರಸಾದದ ವಿವರ:
ರೂಪುಪ್ರಸಾದ ಗಂಧಪ್ರಸಾದ ರಸಪ್ರಸಾದ ಸ್ಪರುಶನಪ್ರಸಾದ
ಶಬ್ದಪ್ರಸಾದ ಪರಿಣಾಮಪ್ರಸಾದ.
ಇಂತೀ ಮಾರ್ಗಕ್ರಿ ಅಂಗ ಲಿಂಗವಾದಲ್ಲಿ
ಮುಂದೆ ಮೀರಿದ ಕ್ರೀಯೆ ಅಂಗ ಲಿಂಗ ತೃತೀಯ ಸ್ಥಲ.
ಇನ್ನು ಚತುರ್ಥದಲ್ಲಿ **ಪ್ರಾಣಲಿಂಗಿಯ** ಷಡ್ವಿಧ ವಿವರ:
ಪ್ರಾಣಲಿಂಗಿ ಭಕ್ತ ಮಾಹೇಶ್ವರ ಪ್ರಸಾದಿ ಶರಣ ಐಕ್ಯ.

ಇನ್ನು ಪ್ರಾಣಲಿಂಗಿಯ ಷಡ್ವಿಧಲಿಂಗದ ವಿವರ:
ಜಂಗಮಲಿಂಗ ಆಚಾರಲಿಂಗ ಗುರುಲಿಂಗ ಶಿವಲಿಂಗ
ಪ್ರಸಾದಲಿಂಗ ಮಹಾಲಿಂಗ.
ಇನ್ನು ಪ್ರಾಣಲಿಂಗಿಯ ಷಡ್ವಿಧಹಸ್ತದ ವಿವರ:
ಸುಮನ ಸುಚಿತ್ತ ಸುಬುದ್ಧಿ ನಿರಹಂಕಾರ ಸುಜ್ಞಾನ ಸದ್ಭಾವ.
ಇನ್ನು ಪ್ರಾಣಲಿಂಗಿಯ ಷಡ್ವಿಧಶಕ್ತಿಯ ವಿವರ:
ಆದಿಶಕ್ತಿ ಕ್ರಿಯಾಶಕ್ತಿ ಜ್ಞಾನಶಕ್ತಿ ಇಚ್ಛಾಶಕ್ತಿ ಪರಾಶಕ್ತಿ ಚಿತ್ಶಕ್ತಿ.
ಇನ್ನು ಪ್ರಾಣಲಿಂಗಿಯ ಷಡ್ವಿಧಭಕ್ತಿಯ ವಿವರ:
ಅನುಭಾವ ಶ್ರದ್ಧೆ ನೈಷ್ಠೆ ಸಾವಧಾನ ಆನಂದ ಸಮರಸ.
ಇನ್ನು ಪ್ರಾಣಲಿಂಗಿಯ ಷಡ್ವಿಧಪದಾರ್ಥದ ವಿವರ:
ಸ್ಪರುಶನ ಗಂಧ ರಸ ರೂಪು ಶಬ್ದ ಪರಿಣಾಮ.
ಇನ್ನು ಪ್ರಾಣಲಿಂಗಿಯ ಷಡ್ವಿಧಪ್ರಸಾದದ ವಿವರ:
ಸ್ಪರುಶನಪ್ರಸಾದ ಗಂಧಪ್ರಸಾದ ರಸಪ್ರಸಾದ ರೂಪುಪ್ರಸಾದ
ಶಬ್ದಪ್ರಸಾದ ಪರಿಣಾಮಪ್ರಸಾದ.
ಇನ್ನು ಪಂಚಮದಲ್ಲಿ **ಶರಣನ** ಷಟ್‌ಸ್ಥಲದ ವಿವರ:
ಶರಣ ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಐಕ್ಯ.
ಇನ್ನು ಶರಣನ ಷಡ್ವಿಧಲಿಂಗದ ವಿವರ:
ಪ್ರಸಾದಲಿಂಗ ಆಚಾರಲಿಂಗ ಗುರುಲಿಂಗ ಶಿವಲಿಂಗ
ಜಂಗಮಲಿಂಗ ಮಹಾಲಿಂಗ.
ಶರಣನ ಷಡ್ವಿಧಹಸ್ತದ ವಿವರ:
ಸುಜ್ಞಾನ ಸುಚಿತ್ತ ಸುಬುದ್ಧಿ ನಿರಂಕಾರ ಸುಮನ ಸದ್ಭಾವ.
ಇನ್ನು ಶರಣನ ಷಡ್ವಿಧಮುಖದ ವಿವರ:
ಶ್ರೋತ್ರ ಘ್ರಾಣ ಜಿಹ್ವೆ ನೇತ್ರ ತ್ವಕ್ಕು ಹೃದಯ.
ಇನ್ನು ಶರಣನ ಷಡ್ವಿಧಶಕ್ತಿಯ ವಿವರ:
ಪರಾಶಕ್ತಿ ಕ್ರಿಯಾಶಕ್ತಿ ಜ್ಞಾನಶಕ್ತಿ ಇಚ್ಛಾಶಕ್ತಿ ಆದಿಶಕ್ತಿ ಚಿತ್ಶಕ್ತಿ.
ಇನ್ನು ಶರಣನ ಷಡ್ವಿಧಭಕ್ತಿಯ ವಿವರ:
ಆನಂದ ಶ್ರದ್ಧೆ ನೈಷ್ಠೆ ಸಾವಧಾನ ಅನುಭಾವ ಸಮರಸ.
ಇನ್ನು ಶರಣನ ಷಡ್ವಿಧಪ್ರಸಾದದ ವಿವರ:
ಶಬ್ದಪ್ರಸಾದ ಗಂಧಪ್ರಸಾದ ರಸಪ್ರಸಾದ ರೂಪುಪ್ರಸಾದ
ಸ್ಪರುಶನಪ್ರಸಾದ ಪರಿಣಾಮಪ್ರಸಾದ.
ಇನ್ನು ಷಷ್ಠಮದಲ್ಲಿ ಆ **ಐಕ್ಯನ** ಷಟ್‌ಸ್ಥಲದ ವಿವರ:
ಐಕ್ಯ ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ.
ಇನ್ನು ಐಕ್ಯನ ಷಡ್ವಿಧಲಿಂಗದ ವಿವರ:
ಮಹಾಲಿಂಗ ಆಚಾರಲಿಂಗ ಗುರುಲಿಂಗ ಶಿವಲಿಂಗ

ಜಂಗಮಲಿಂಗ ಪ್ರಸಾದಲಿಂಗ.
ಇನ್ನು ಐಕ್ಯನ ಷಡ್ವಿಧಹಸ್ತದ ವಿವರ:
ಸದ್ಭಾವ ಸುಚಿತ್ತ ಸುಬುದ್ಧಿ ನಿರಹಂಕಾರ ಸುಮನ ಸುಜ್ಞಾನ.
ಇನ್ನು ಐಕ್ಯನ ಷಡ್ವಿಧಮುಖದ ವಿವರ:
ಹೃದಯ ಪ್ರಾಣ ಜಿಹ್ವೆ ನೇತ್ರ ತ್ವಕ್ಕು ಶ್ರೋತ್ರ.
ಇನ್ನು ಐಕ್ಯನ ಷಡ್ವಿಧಶಕ್ತಿಯ ವಿವರ:
ಚಿತ್ಶಕ್ತಿ ಕ್ರಿಯಾಶಕ್ತಿ ಜ್ಞಾನಶಕ್ತಿ ಇಚ್ಛಾಶಕ್ತಿ ಆದಿಶಕ್ತಿ ಪರಾಶಕ್ತಿ.
ಇನ್ನು ಐಕ್ಯನ ಷಡ್ವಿಧಭಕ್ತಿಯ ವಿವರ:
ಸಮರಸ ಶ್ರದ್ಧೆ ನೈಷ್ಠೆ ಸಾವಧಾನ ಅನುಭಾವ ಆನಂದ.
ಇನ್ನು ಐಕ್ಯನ ಷಡ್ವಿಧಪದಾರ್ಥದ ವಿವರ:
ಪರಿಣಾಮ ಗಂಧ ರಸ ರೂಪು ಸ್ಪರುಶನ ಶಬ್ದ.
ಇನ್ನು ಐಕ್ಯನ ಷಡ್ವಿಧಪ್ರಸಾದದ ವಿವರ:
ಪರಿಣಾಮಪ್ರಸಾದ ಗಂಧಪ್ರಸಾದ ರಸಪ್ರಸಾದ ರೂಪುಪ್ರಸಾದ
ಸ್ಪರುಶನಪ್ರಸಾದ ಶಬ್ದಪ್ರಸಾದ.
ಇಂತಿವೆಲ್ಲವೂ ಅರ್ಪಿತವಾಗಲೊಡನೆ ಏಕಮೇವ ಪರಬ್ರಹ್ಮ
ತಾನೆಯಾಗಿ ಉಳಿದ ಉಳುಮೆಯೇ ಬಸವಣ್ಣ.
ಆ ಬಸವಣ್ಣನೇ ಎನಗೆ ಇಷ್ಟಬ್ರಹ್ಮವು.
ಆ ಇಷ್ಟಬ್ರಹ್ಮದಲ್ಲಿ ಎನ್ನ ಅಂಗ ಮನ ಪ್ರಾಣ ಇಂದ್ರಿಯ
ಕರಣಂಗಳೆಲ್ಲವು ನಿರವಯಲಾದ ಭೇದ ಹೇಗೆಂದಡೆ
ವಾರಿ[ಬಲಿ]ದು ವಾರಿಕಲ್ಲಾಗಿ ವಾರಿಯಾದ ಹಾಗೆ
ಉಪ್ಪಿನ ಪೊಟ್ಟಣವಪ್ಪುವಿನೊಳು ಬಯಚಿಟ್ಟ ಹಾಗೆ
ಉರಿ ಕರ್ಪುರ ಸಂಯೋಗವಾದ ಹಾಗೆ
ಎನ್ನ ಅಂಗ ಮನ ಅಂಗ ಏಕರಸವಾದ ಭೇದವನು
ಸಿದ್ಧೇಶ್ವರನು ತೋರಿ[ದ ಕಾ]ರಣ ಪರಂಜ್ಯೋತಿ
ಮಹಾಲಿಂಗಗುರು ಸಿದ್ಧಲಿಂಗ ಪ್ರಭುವಿನಲ್ಲಿ
ಬಸವೇಶ್ವರನ ಶ್ರೀಪಾದದಲ್ಲಿ ಮನಮಗ್ನ ಯೋಗವೆನಗಾಯಿತಯ್ಯ
ಬೋಳಬಸವೇಶ್ವರ ನಿಮ್ಮ ಧರ್ಮ ನಿಮ್ಮ ಧರ್ಮ. ॥ ೧೬ ॥

೭೮೪

ಎನ್ನ ಪಂಚಾಕ್ಷರವ ಇಷ್ಟಲಿಂಗ ಸ್ವರೂಪಾಗಿ ಬಂದು
ಒಳಕೊಂಡನಯ್ಯ ಬಸವಣ್ಣ.
ಎನ್ನ ಸಪ್ತದಶಾಕ್ಷರವ ಪ್ರಾಣಲಿಂಗ ಸ್ವರೂಪಾಗಿ ಬಂದು
ಒಳಕೊಂಡನಯ್ಯ ಬಸವಣ್ಣ.

ಎನ್ನ ತ್ರಿವಿಧಾಕ್ಷರವ ಭಾವಲಿಂಗ ಸ್ವರೂಪಾಗಿ ಬಂದು
ಒಳಕೊಂಡನಯ್ಯ ಬಸವಣ್ಣ.
ಎನ್ನ ಷಡಿಂದ್ರಿಯಂಗಳ ಷಡ್ವಿಧಲಿಂಗ ಸ್ವರೂಪಾಗಿ ಬಂದು
ಒಳಕೊಂಡನಯ್ಯ ಬಸವಣ್ಣ.
ಎನ್ನ ನವಚಕ್ರಂಗಳ ನವವಿಧಲಿಂಗಕ್ಷೇತ್ರ ಸ್ವರೂಪಾಗಿ ಬಂದು
ಒಳಕೊಂಡನಯ್ಯ ಬಸವಣ್ಣ.
ಎನ್ನ ಅನ್ನಮಯವ ಪ್ರಸಾದ ಸ್ವರೂಪಾಗಿ ಬಂದು
ಒಳಕೊಂಡನಯ್ಯ ಬಸವಣ್ಣ.
ಎನ್ನ ಪ್ರಾಣಮಯವ ಲಿಂಗ ಸ್ವರೂಪಾಗಿ ಬಂದು
ಒಳಕೊಂಡನಯ್ಯ ಬಸವಣ್ಣ.
ಎನ್ನ ಮನೋಮಯವ ಶಿವಧ್ಯಾನ ಸ್ವರೂಪಾಗಿ ಬಂದು
ಒಳಕೊಂಡನಯ್ಯ ಬಸವಣ್ಣ.
ಎನ್ನ ವಿಜ್ಞಾನಮಯವ ಜ್ಞಾನ ಸ್ವರೂಪಾಗಿ ಬಂದು
ಒಳಕೊಂಡನಯ್ಯ ಬಸವಣ್ಣ.
ಎನ್ನ ಆನಂದಮಯವ ಶಿವಾನಂದಮಯವಾಗಿ ಬಂದು
ಒಳಕೊಂಡನಯ್ಯ ಬಸವಣ್ಣ.
ಎನ್ನ ಷಡ್‌ಧಾತುಗಳ ಷಡಕ್ಷರ ಸ್ವರೂಪಾಗಿ ಬಂದು
ಒಳಕೊಂಡನಯ್ಯ ಬಸವಣ್ಣ.
ಇಂತೀ ಬಸವಣ್ಣನೇ
ಎನ್ನ ಅಂಗ ಮನ ಪ್ರಾಣೇಂದ್ರಿಯಂಗಳಲ್ಲಿ ಪರಿಪೂರ್ಣನಾಗಿ
ಬಸವಣ್ಣನೇ ಇಷ್ಟವಾಗಿ ತೊಳಗಿ ಬೆಳಗುತ್ತಿಪ್ಪ ಭೇದವನು
ಬೋಳಬಸವೇಶ್ವರನೆನಗೆ ಅರುಹಿಕೊಟ್ಟು
ಸಿದ್ಧೇಶ್ವರನೆಂಬ ಚಿದಬ್ಧಿಯೊಳಗೆ ಮುಳುಗಿಸಿದ ಕಾರಣ
ಪರಂಜ್ಯೋತಿ ಮಹಾಲಿಂಗಗುರು ಸಿದ್ಧಲಿಂಗ ಪ್ರಭುವಿನಲ್ಲಿ
ಉಭಯಭಾವವನರಿಯದೆ ಶಿವಶಿವ ಎನುತಿರ್ದೆನಯ್ಯ
ನಿಮ್ಮ ಧರ್ಮ ನಿಮ್ಮ ಧರ್ಮ. ॥ ೧೭ ॥

೭೮೫

ಎನ್ನ ದ್ವಿವಿಧಾಕ್ಷರದಲ್ಲಿ ಲಿಂಗ ಸ್ವರೂಪಾಗಿ ಬಂದು
ಮೂರ್ತಿಗೊಂಡನಯ್ಯ ಬಸವಣ್ಣ.
ಎನ್ನ ತ್ರಿವಿಧಾಕ್ಷರವಲ್ಲಿ ಜಂಗಮಲಿಂಗ ಸ್ವರೂಪಾಗಿ ಬಂದು
ಮೂರ್ತಿಗೊಂಡನಯ್ಯ ಬಸವಣ್ಣ.

ಇಂತೀ ದ್ವಿವಿಧಾಕ್ಷರ ತ್ರಿವಿಧಾಕ್ಷರವೇ ಅಂಗ ಪ್ರಾಣ.
ಆ ಅಂಗ ಪ್ರಾಣವೇ ಉಭಯಸ್ಥಲ.
ಆ ಉಭಯಸ್ಥಲದ ಭೇದವನು ದ್ವೈತಾದ್ವೈತಿಗಳೆತ್ತ ಬಲ್ಲರಯ್ಯ?
ಇದನರಿದು ಸಿದ್ಧೇಶ್ವರನು ಅಂಗ ಪ್ರಾಣದಲ್ಲಿ ಲಿಂಗ ಜಂಗಮವ
ಏಕಾರ್ಥವ ಮಾಡಿ ತೋರಿಸಿಕೊಟ್ಟ ಕಾರಣ,
ಪರಂಜ್ಯೋತಿ ಮಹಾಲಿಂಗಗುರು ಸಿದ್ಧಲಿಂಗ ಪ್ರಭುವಿನಲ್ಲಿ
ಅರ್ಕನ ಪ್ರಭೆಯೊಳಕೊಂಡ ಅರಿಸಿನದಂತಾದೆನಯ್ಯ,
ಬೋಳಬಸವೇಶ್ವರ ನಿಮ್ಮ ಧರ್ಮ ನಿಮ್ಮ ಧರ್ಮ. ॥ ೧೮ ॥

॥ ಷಟ್‌ಸ್ಥಲ ಲಿಂಗಾಂಗ ಸಂಬಂಧದ ನಿರ್ವಚನ ಸಮಾಪ್ತ ಮಂಗಳ ಮಹಾ॥

# ಸ್ವತಂತ್ರ ಸಿದ್ಧಲಿಂಗೇಶ್ವರರ ವಚನಗಳು

## ಪಿಂಡಸ್ಥಲ

೭೮೬

ಶೂನ್ಯ ಮಹಾಶೂನ್ಯವಿಲ್ಲದಲ್ಲಿಂದತ್ತತ್ತ,
ನಾದ ಬಿಂದು ಕಳೆಗಳಿಲ್ಲದಲ್ಲಿಂದತ್ತತ್ತ,
ಸದಾಶಿವ ಈಶ್ವರ ವಿದ್ಯೇಶ್ವರರೆಂಬ ಗಣೇಶ್ವರರಿಲ್ಲದಲ್ಲಿಂದತ್ತತ್ತ,
ಗಂಗಾವಾಲುಕಸಮಾರುದ್ರರುಗಳಿಲ್ಲದಲ್ಲಿಂದತ್ತತ್ತ,
ಬ್ರಹ್ಮ ವಿಷ್ಣು ಇಂದ್ರಾದಿ ದಿಕ್ಪಾಲಕರಿಲ್ಲದಲ್ಲಿಂದತ್ತತ್ತ,
ಕಾಲ ಕರ್ಮ ಪ್ರಳಯಂಗಳಿಲ್ಲದಲ್ಲಿಂದತ್ತತ್ತ ಅತ್ತತ್ತ,
ಮುನ್ನ ನಿಮ್ಮ ನಿಜದಲ್ಲಿ ನೀವೇ ಇರ್ದಿರಯ್ಯ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧ ॥

೭೮೭

ಅಯ್ಯಾ ಏನೂ ಏನೂ ಇಲ್ಲದಂದು,
ಆದಿಕುಳಮುತ್ಪತ್ಯವಾಗದಂದು,
ಚಂದ್ರಧರ ವೃಷಭವಾಹನರಿಲ್ಲದಂದು,
ಕಾಲಸಂಹರ ತ್ರಿಪುರಸಂಹರರಿಲ್ಲದಂದು,
ಕಾಮನ ಭಸ್ಮವ ಪೂಸದಂದು ದೇವಿಯರಿಬ್ಬರಿಲ್ಲದಂದು,
ಹರಿಯ ಹತ್ತವತಾರದಲ್ಲಿ ತಾರದಂದು,
ಬ್ರಹ್ಮನ ಶಿರವ ಹರಿಯದಂದು,
ಇವಾವ ಲೀಲೆಯದೋರದಂದು,
ನಿಮಗನಂತ ನಾಮಂಗಳಿಲ್ಲದಂದು,
ಅಂದು ನಿಮ್ಮ ಹೆಸರೇನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ? ॥ ೨ ॥

೭೮೮

ಧರೆ ಜಲ ಅಗ್ನಿ ವಾಯು ಅಂಬರವಿಲ್ಲದಂದು,
ಅಂತರಂತರ ಪದಿನಾಲ್ಕುಭುವನ ನೆಲೆಗೊಳ್ಳದಂದು,
ದಿವಾ ರಾತ್ರಿ ಚಂದ್ರ ಸೂರ್ಯ ನಕ್ಷತ್ರ ಗ್ರಹರಾಶಿಗಳಿಲ್ಲದಂದು,
ಅಷ್ಟದಿಕ್ಕು ಅಷ್ಟಕುಲಪರ್ವತಗಳಿಲ್ಲದಂದು,
ಸಪ್ತಸಮುದ್ರಂಗಳು ಸಪ್ತದ್ವೀಪಂಗಳಿಲ್ಲದಂದು,
ಮಹಾಮೇರುವ ನವಖಂಡಪೃಥ್ವಿಯ ಮಧ್ಯದಲ್ಲಿ ಸ್ಥಾಪಿಸದಂದು,
ಸಿಡಿಲು ಮಿಂಚು ಚಳಿ ಮಳೆಗಳಿಲ್ಲದಂದು,
ನರ ಸುರ ತಿರ್ಯಗ್ಜಾತಿಗಳು ಸ್ಥಾವರ ಜಂಗಮಾತ್ಮಕವಾದ
ಸಮಸ್ತ ಪ್ರಪಂಚ ಪಸರಿಸದಂದು,
ನೀನೊಬ್ಬನೆ ಇರ್ದೆಯಲ್ಲ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೩ ॥

೭೮೯

ಹುಟ್ಟು ಹೊಂದೆಂಬುದಿಲ್ಲದ ದೇವಾ, ನಿಮ್ಮಿಂದ ನೀವೆ
ಶೂನ್ಯದಲ್ಲಿ ನಿಂದು ಸ್ವಯಂಭುವಾದಿರಲ್ಲ.
ಬೀಜ ವೃಕ್ಷದಂತೆ ಸಾಕಾರ ನಿರಾಕಾರವು ನೀವೆಯಾದಿರಲ್ಲ.
ಸಕಲವೆಲ್ಲಕ್ಕೆ ಮೂಲಿಗರಾದಿರೆಲ್ಲ.
ನಿಮ್ಮ ನಿಜವ ನೀವೇ ಅರಿವುತ್ತಿರ್ದಿರಲ್ಲ.
ನಿಮ್ಮ ಮಹಿಮೆಯ ನೀವೇ ಬಲ್ಲಿರಿ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೪ ॥

೭೯೦

ಎಲೆ ಅಯ್ಯಾ ನೀವು ನಿರಾಕಾರವಾಗಿರ್ದಿರಾಗಿ,
ಆ ನಿರಾಕಾರವೆ ಪಂಚಮದಲ್ಲಿ ನಿಂದಡೆ ನಾದ ತೋರಿತ್ತು.
ಆ ನಾದದಲ್ಲಿ ಬಿಂದು ತೋರಿತ್ತು.
ಆ ನಾದ ಬಿಂದುಗಳನೊಡೆದು ಮೂಡಿ,
ನಿರುಪಾಧಿಕ ಜ್ಯೋತಿಯಂತೆ ಸಕಲ ನಿಃಕಲ ರೂಪಾದಿರಯ್ಯ.
ರವಿಕೋಟಿ ತೇಜ ಪರಿಪೂರ್ಣ ಮೂಲಚೈತನ್ಯ ರೂಪು
ನೀವು ಕಂಡಯ್ಯ
ಭೇದಿಸಬಾರದಭೇದ್ಯ ಸಾಧಿಸಬಾರದಸಾಧ್ಯ ನೀವು ಕಂಡಯ್ಯ.

ನಿಮ್ಮ ಸಹಜದ ನಿಲವನಾರು ಬಲ್ಲರು?
ನಿಮ್ಮಿಂದ ನೀವೇ ರೂಪಾದಿರಯ್ಯ.
ನಿಮ್ಮ ಪರಿಣಾಮಪದದಲ್ಲೊಂದನಂತಕಾಲವಿರ್ದಿರಯ್ಯ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೫ ॥

೭೯೧

ಮಾತಾಪಿತರುಗಳಿಲ್ಲದ ಸಹೋದರ ಬಂಧುಗಳಿಲ್ಲದ,
ಕುಲಗೋತ್ರಗಳಿಲ್ಲದ ಅಜಾತನು ನೀವು ಕಂಡಯ್ಯ.
ಉಪಮಿಸಬಾರದ ಉಪಮಾತೀತನು,
ನಿಮ್ಮ ಹೆಸರುಗೊಂಬವರಾರು ಇಲ್ಲ ಕಂಡಯ್ಯ.
ಅಸಮಾಕ್ಷ ಅಪ್ರತಿಮ ಶಿವನೆ, ನೀವು ನೆನೆಯಲಾಗಿ,
ನಾದಬಿಂದುಕಳೆಗಳಂಕುರಿತವಾದವು ಕಂಡಯ್ಯ.
ನಿಮ್ಮ ಚಾರಿತ್ರ ನಿಮಗೆ ಸಹಜವಾಗಿದೆ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೬ ॥

೭೯೨

ಚಿತ್ತೆಂಬಿತ್ತು ಬಲಿದು ಕಲೆಯಂಕುರಿಸಿದಲ್ಲಿ, ನಿಮಗೆ
ತ್ರಿವಿಧನಾಮ ಸೂಚನೆಯಾಯಿತ್ತು.
ನಿಮ್ಮ ನಾಮದ ಬೆಂಬಳಿಯಲ್ಲಿ ನಿಮ್ಮ ಶಕ್ತಿ.
ಇಚ್ಛಾ ಜ್ಞಾನ ಕ್ರಿಯಾಶಕ್ತಿ ರೂಪಾದ ನಾನಾಶಕ್ತಿ ಭೇದವಾಗಿ,
ಅಂದು ನಿಮಗೆ ಚಂದ್ರಧರಾದಿ ಸ್ಥಾಣು ಕಡೆಯಾದ
ನಾನಾ ಲೀಲೆಗಳಾದವು.
ಆ ನಿಮ್ಮಿಬ್ಬರಿಂದ ರುದ್ರಾವತಾರಗಳಾದವು.
ನಿಮ್ಮ ಬೆರಗಿನ ಲೀಲೆಯ ಬಲ್ಲವರಾರಯ್ಯ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ? ॥ ೭ ॥

೭೯೩

ಮಹಾಕರ್ತನು ತನ್ನ ಶಕ್ತಿಯ ವಿನೋದಕ್ಕೀ ಜಗವ ನಿರ್ಮಿಸಿದ.
ಅನಂತ ಲೋಕಂಗಳನು.
ಚಂದ್ರಸೂರ್ಯ ನಕ್ಷತ್ರ ಸಿಡಿಲು ಮಿಂಚುಗಳನು.

ತತ್ವ ವಿತತ್ವ ಕಾಲ ಕರ್ಮಪ್ರಳಯಂಗಳನು.
ಹೆಣ್ಣು ಗಂಡು ಜಾತಿ ವಿಜಾತಿಗಳಾದ ನರ ಸುರ ತಿರ್ಯಗ್ಜಾತಿ
ಸ್ಥಲ ಭೋಗಾಯುಷ್ಯ ನಿದ್ರೆ ಮೊದಲಾದ ಸಮಸ್ತ ಪ್ರಪಂಚುಗಳನು.
ಎಂಬತ್ತುನಾಲ್ಕುಲಕ್ಷ ಜೀವರಾಶಿಗಳನು
ಹುಟ್ಟಿಸಿದ ತನ್ನ ವಿನೋದಕ್ಕೆ
ಮಂತ್ರವಾಹಕನು ಮಾಡಿದ ಕಟ್ಟಳೆ
ಯಾರಿಗೂ ತಿಳಿಯಬಾರದು ನೋಡಾ
ಸರ್ವಾತ್ಮರು ಮಲಪಾಶದಿಂದ ಬಂಧಿಸಿಕೊಂಬ ಪಶುಗಳಾದರು
ತಾ ಪಶುಪತಿಯಾದ,
ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೮ ॥

೭೯೪

ಚಂದ್ರಕಾಂತದ ಶಿಲೆಯಲ್ಲಿ ಉದಕವೊಸರದಿಪ್ಪಂತೆ,
ಸೂರ್ಯಕಾಂತದ ಶಿಲೆಯಲ್ಲಿ ಅಗ್ನಿ ಸ್ಫುರಿಸದಿಪ್ಪಂತೆ,
ಬೀಜದೊಳಗಣ ವೃಕ್ಷ ಅಂಕುರಿಸದಿಪ್ಪಂತೆ,
ಇಪ್ಪನಯ್ಯ ಶಿವನು ಪಿಂಡದೊಳಗೆ ಪಿಂಡರೂಪಾಗಿ.
ಈ ಪರಿಯಲ್ಲಿ ಗೋಪ್ಯವಾಗಿರ್ದೆನ್ನಲ್ಲಿ ಕಾಣಿಸಿಕೊಳ್ಳದಿರ್ದ್ದಿರಿ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೯ ॥

## ಪಿಂಡಜ್ಞಾನಸ್ಥಲ

೭೯೫

ಪಿಂಡ ಪಿಂಡವೆಂದೇನು?
ತನು ಪಿಂಡವೆ? ಮನ ಪಿಂಡವೆ? ವಾಯು ಪಿಂಡವೆ ? ಅಲ್ಲ:
ಆದಿ ಪಿಂಡವಿಡಿದು ಬಂದ ಜ್ಞಾನಪಿಂಡವೆ ಪಿಂಡ.
ಅದನರಿಯಲಿಲ್ಲ.
ಅದು ಕ್ಷೀರದೊಳಗಣ ಆಜ್ಯದಂತೆ.
ಪಾಷಾಣದೊಳಗಣ ಪಾವಕದಂತೆ ಅಡಗಿರ್ಪುದಾಗಿ.
ಅಂತಪ್ಪ ನಿರ್ಮಲ ಪಿಂಡ ನಿಮ್ಮ ಶರಣಂಗಾಯಿತ್ತು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೦ ॥

೭೯೬

ಕರಣದ ಕಲ್ಮಷ ಹರಿಯಿತ್ತಾಗಿ ನಿರ್ಮಲತನುವಾಯಿತ್ತು.
ಆ ನಿರ್ಮಲತನುವಿನಲ್ಲಿ, ಶಿವಪ್ರಸಾದವೆಡೆಗೊಂಡಿತ್ತಾಗಿ
ಭಕ್ತಿಪಿಂಡವಾಯಿತ್ತು.
ಆ ಭಕ್ತಿಪಿಂಡದಲ್ಲಿ ನೀವಿಪ್ಪಿರಾಗಿ ಶರಣಂಗೆ ಪಿಂಡನಾಮವಾಯಿತ್ತು.
ಅದು ಕಾರಣ ಶರಣಂಗೂ ನಮಗೂ
ಒಂದೆ ಭಕ್ತಿಪಿಂಡವಾಯಿತ್ತು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೧ ॥

೭೯೭

ಆದಿಯಲ್ಲಿ ನಾನು ಲಿಂಗದಲ್ಲಿ ಉದಯವಾದ ಕಾರಣ
ಎನ್ನಾದಿ ಪಿಂಡವ ತಿಳಿದೆನು.
ಆದಿ ಪಿಂಡ ಅನಾದಿ ಪಿಂಡವ ಕೂಡಿದ ಕಾರಣ
ಬಿಂದು ಪಿಂಡ ಉದಯವಾಯಿತ್ತು.
ಆ ಬಿಂದು ಪಿಂಡದಾದಿವಿಡಿದು ನೋಡಲು
ಅನಾದಿ ಶಿವತತ್ವ ದ್ವಾರದಿಂದ ಬಂದೆನೆಂದರಿದೆನು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೨ ॥

೭೯೮

ಬಳ್ಳಿಯಲಡಗಿ ಕೋಟರದಲ್ಲಿ ತೋರುವ ತಾವರೆಯ ಬೀಜದಂತೆ,
ನೀನು ಎನ್ನಂತರಂಗದಲ್ಲಡಗಿರ್ದ ಕಾರಣ,
ಅಲ್ಲೆ ತೋರುವೆ ಎಲೆ ಅಯ್ಯ.
ರನ್ನದ ಕಾಂತಿಯಂತೆ, ಎನ್ನೊಳಗಡಗಿರ್ದು ಮೈದೋರದ ಭೇದವ,
ನಿಮ್ಮಲ್ಲಿ ಕಂಡೆನು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೩ ॥

೭೯೯

ಪಕ್ವ ಫಲದಲ್ಲಿಹ ಸ್ವಾದುವಿನಂತೆ,
ತುಪ್ಪದಲ್ಲಿಹ ಕಂಪಿನಂತೆ, ಚಿನ್ನದಲ್ಲಿಹ ಬಣ್ಣದಂತೆ,
ಅಲ್ಲಿಯೆ ಹುಟ್ಟಿ, ಅಲ್ಲಿಯೆ ತೋರುವಂತೆ,
ಎನ್ನಂತರಂಗದಲ್ಲಿರ್ದು ತೋರುತ್ತಿಹ ನಿಮ್ಮ ನಿಜವನು,

ನಿಮ್ಮಿಂದರಿದೆನು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೪ ॥

೬೦೦

ನನ್ನಿಂದರಿದೆನೆಂಬೆನೆ ನನ್ನಿಂದರಿದವನಲ್ಲ.
ನಿನ್ನಿಂದರಿದೆನೆಂಬೆನೆ ನಿನ್ನಿಂದರಿದವನಲ್ಲ.
ಅದೇನು ಕಾರಣವೆಂದಡೆ,
ಕಣ್ಣ ಬೆಳಗು ಸೂರ್ಯನ ಬೆಳಗು ಕೂಡಿ ಕಾಂಬಂತೆ,
ನನ್ನ ನಿನ್ನರಿವಿನ ಸಂಬಂಧವ ಬೆಂಬಳಿಯಲ್ಲಿ ಅರಿದೆನು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೫ ॥

೬೦೧

ಅಯ್ಯಾ, ನಾನೀಜಗ ಹುಟ್ಟುವಂದು ಹುಟ್ಟಿದವನಲ್ಲ.
ನಾನೀಜಗ ಬೆಳೆವಲ್ಲಿ ಬೆಳೆದವನಲ್ಲ.
ನಾನೀಜಗವಳಿವಲ್ಲಿ ಅಳಿವವನಲ್ಲ.
ಆಗು ಹೋಗಿನ ಜಗಕ್ಕೆ ಸಾಕ್ಷಿ ಚೈತನ್ಯನು,
ನನ್ನಾಧಾರದಲ್ಲಿ ಜಗವಿದೆ.
ಈ ಜಗಮುತ್ಪತ್ತಿ ಸ್ಥಿತಿಲಯಕ್ಕೆ ನಾನಾಶ್ರಯನು.
ಅಯ್ಯಾ, ನನಗೂ ನಿನಗೂ ಸಂಬಂಧವಲ್ಲದೆ
ಜಗಕ್ಕೂ ಎನಗೂ ಸಂಬಂಧವಿಲ್ಲ.
ನಾ ನಿಮ್ಮಲ್ಲಿ ಹುಟ್ಟಿದ ಕಾರಣ, ನಾ ನಿಮ್ಮಂತೆ ತೋರುವೆನು.
ಜಗ ಮಾಯೆಯಲ್ಲಿ ಹುಟ್ಟಿದ ಕಾರಣ,
ಜಗ ಮಾಯೆಯಂತೆ ತೋರುವುದು.
ಅದು ಕಾರಣ ಈ ದೇಹೇಂದ್ರಿಯಾದಿಗಳು ನನ್ನವಲ್ಲ.
ನಿನ್ನವಲ್ಲವೆಂದರಿದ ಕಾರಣ ಬೇರಾದವು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೬ ॥

೬೦೨

ಅಂದು ಆದಿಯ ಬಿಂದುವಿಲ್ಲದಂದು, ನಿಮಗೂ ನನಗೂ
ಲಿಂಗಾಂಗವೆಂಬ ಹೆಸರಿಲ್ಲದೆ ಇರ್ದವೆಂದು,
ಆದಿಬಿಂದು ರೂಹಿಸಿದಲ್ಲಿ ಲಿಂಗಾಂಗವೆಂಬ ಹೆಸರು ಬಂದಿತ್ತೆಂದು,

ಅಂದು ಆದಿಯಾಗಿ ನೀವಾವಾವ ಲೀಲೆಯ ಧರಿಸಿದಡೆ,
ಆ ಲೀಲೆಗೆ ನಾನಾಧಾರವಾದೆ.
ನಿಮಗೂ ನನಗೂ ಎಂದೆಂದೂ ಹೆರೆಹಿಂಗದ ಯೋಗ.
ಅದು ನೀವು ಬಲ್ಲಿರಿ, ನಾ ಬಲ್ಲೆನು, ನುಡಿದು ತೋರಲೇಕಿನ್ನು?
ಇಂದೆನಗೆ ತನು ಯೋಗವಾದಲ್ಲಿ ನಿಜ ಹೊರತೆ?
"ಶಿವಯೋಗಿ ಶರೀರೇ ಚ ಸದಾ ಸನ್ನಿಹಿತಶ್ಶಿವಃ"
ಎಂದುದಾಗಿ, ನಿಮಗೆ ಬೇರೆ ದೇಹವಿಲ್ಲ.
ನನ್ನ ದೇಹವೆ ನಿಮ್ಮ ದೇಹವೆಂಬುದಕ್ಕೆ ನೀವೆ ಸಾಕ್ಷಿ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೭ ॥

೮೦೩

ಆದಿ ಮಧ್ಯಾವಸಾನಂಗಳಿಂದತ್ತತ್ತಲಾದ
ಶಿವಾಂಗರೂಪ ತಾನೆಂದರಿಯದೆ,
ನಿತ್ಯ ನಿರ್ಗುಣ ನಿರವಯ ಅಗಣಿತ ಅಕ್ಷಯ ತಾನೆಂದರಿಯದೆ,
ನಿತ್ಯೋದಿತ ಸ್ವಯಂಪ್ರಕಾಶ ತಾನೆಂದರಿಯದೆ,
ಸರ್ವಗತ ಸರ್ವಜ್ಞ ಸರ್ವಶಕ್ತಿಯನುಳ್ಳ
ಪರಮಾತ್ಮ ತಾನೆಂದರಿಯದೆ,
ಮಹದಾದಿ ತತ್ವಂಗಳ ಮೇಲಿಹ
ಸಚ್ಚಿದಾನಂದರೂಪ ತಾನೆಂದರಿಯದೆ,
ಅಜ್ಞಾನದ ಬಲದಿಂದ ಅಹಂಕಾರವಶನಾಗಿ,
ನಾನು ಕರ್ತನು, ನಾನು ಭೋಕ್ತನೆಂದು ಬಗೆದು,
ಇಲ್ಲದ ಮಾಯಾ ಮೋಹರೂಪಾದ ಕರ್ಮಜನ್ಯ-
ಸಂಸಾರವ ಹೊಂದಿಸಿಕೊಂಡು, ತನ್ನ ನಿಜಸ್ವರೂಪವನರಿಯದೆ,
ಶಿವ ಪ್ರಸಾದವ ಪಡೆದು, ಶಿವನೊಳಗಾಗದವರು
ಎಂದೆಂದೂ ಭವದಲ್ಲಿ ಬಳಲುತ್ತಿಹರು ಕಾಣಾ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೮ ॥

**ಸಂಸಾರಹೇಯಸ್ಥಲ**

೮೦೪

ದೇಹವೆಂಬುದೊಂದು ನಡುಮನೆಗೆ,
ಕಾಲುಗಳೆರಡು ಕಂಭ ಕಂಡಯ್ಯ.

ಬೆನ್ನೆಲು ಬೆಮ್ಮರ ಎಲುಗಳು.
ನರದ ಕಟ್ಟು ಚರ್ಮದ ಹೊದಕೆ.
ಒಂದು ಮಠಕ್ಕೆ ಒಂಭತ್ತು ಬಾಗಿಲು.
ಆದಾರಿಯಾಗೆ ಹೋಹ ಬಾಹರಿಗೆ ಲೆಕ್ಕವಿಲ್ಲ.
ಒಡೆಯರಿಲ್ಲದ ಮನೆಯಂತೆ
ಆವಾಗ ಕೆಡುವದೆಂದರಿಯಬಾರದು.
ಬಿಡು ಮನೆಯಾಸೆಯ. ಬೇಗ ವಿರಕ್ತನಾಗು ಮರುಳೆ.
ಪಡೆವೆ ಮುಂದೆ ಮುಕ್ತಿಯ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ಒಂದಾಹ ಸೌಖ್ಯವನು.
॥ ೧೯ ॥

೮೦೫

ತೋರಿಯಡಗುವ ಮೇಘಾಡಂಬರದಂತೆ, ತನುವಿನ ತೋರಿಕೆ.
ಹೀಗೆಂದರಿದು ನಿತ್ಯತ್ವವ ಪಡೆದಹಂಗೆ,
ಮತ್ತೇಕೆ ಈ ದೇಹವ ಮಮಕರಿಸುವೆ?
ಆವಾಗ ಬಿಟ್ಟು ಹೋಹುದೆಂದರಿಯಬಾರದು.
ದೇವ ದಾನವ ಮಾನವರೊಳಗಾದವರೆಲ್ಲ ಅಳಿದು,
ಹೋಹುದ ಕಂಡು ಕೇಳಿ,
ಮತ್ತೆ ತನುವಿನಾಸೆಯೇಕೆ ಬಿಡು. ವಿರಕ್ತನಾಗು ಮರುಳೆ.
ಕಾಯಜವೈರಿಯ ಪಾದವ ಬಿಡದಿರು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು
ನಿನ್ನ, ತನ್ನತ್ತಲೊಯ್ವನು. ॥ ೨೦ ॥

೮೦೬

ಸಂಸಾರವೆಂಬ ವಿಷವೃಕ್ಷಕ್ಕೆ ಪಂಚೇಂದ್ರಿಯಂಗಳೆ ಶಾಖೆಗಳು.
ಪಂಚಕ್ಲೇಶಂಗಳೆ ಫಲಂಗಳು. ಪಂಚವಿಷಯಂಗಳೆ ರಸವು.
ಈ ಫಲವ ಬಯಸಿ, ಮೆದ್ದವರೆಲ್ಲಾ ಮರಣಕ್ಕೊಳಗಾದರು.
ಅದನರಿದು ಆ ಫಲವ ನಾನು ಮುಟ್ಟೆನು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೧ ॥

೮೦೭

ಅರ್ಥದಲ್ಲೇನೂ ಸುಖವಿಲ್ಲ.
ಅರ್ಥವಗಳಿಸಿ ಆತ್ಮಪುತ್ರರ್ಗಿರಿಸಬೇಡ.

ಆರಿಗಾರೂ ಇಲ್ಲ.
ಶಿವನಲ್ಲದೆ ಹಿತವರಿಲ್ಲವೆಂದರಿದು,
ಶಿವನೊಡವೆಯ ಶಿವನವರಿಗೆ ಕೊಡು ಮರುಳೆ.
ಅರ್ಥವಲ್ಲೇನೂ ಸುಖವಿಲ್ಲ.
ಅರ್ಥವನಾರ್ಜಿಸುವಲ್ಲಿ ದುಃಖ.
ಅರ್ಜಿಸಿದ ಧನವ ರಕ್ಷಿಸುವಲ್ಲಿ ದುಃಖ.
ನಾಶವಾದಡೆ ದುಃಖ. ವೆಚ್ಚವಾದಡೆ ದುಃಖ.
ಈ ಪರಿಯಲ್ಲಿ ಅರ್ಥದಿಂದ ಸದಾ ದುಃಖವಡೆವವರಿಗೆ
ಸುಖವಿಲ್ಲೆಂದರಿಯದೆ,
ಧನವರ್ಥದ ಮರವೆಯಲ್ಲಿ ಬಳಲುತ್ತಿಹ,
ಮನುಜರಿಗಿನ್ನಾವ ಗತಿಯು ಇಲ್ಲವಯ್ಯ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೨ ॥

೮೦೮

ಮೋಹ ಮದ ರಾಗ ವಿಷಾದ ತಾಪ ಶೋಕ ವೈಚಿಂತ್ಯವೆಂಬ
ಸಪ್ತಮಲವಾವರಿಸೆ ಮತ್ತರಾಗಿ, ತಮ್ಮ ತಾವರಿಯದೆ,
ಕಣ್ಣಿಗಜ್ಞಾನತಿಮಿರ ಕವಿದು, ಮುಂದುಗಾಣದವರು
ಶಿವನನವರೆತ್ತ ಬಲ್ಲರು?.
ಗೃಹ ಕ್ಷೇತ್ರ ಸತಿ ಸುತಾದಿ ಪಾಶಂಗಳಲ್ಲಿ ಬಿಗಿವಡೆದ ಪಶುಗಳು
ಶಿವನನವರೆತ್ತ ಬಲ್ಲರು?.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು,
ತಾನವರನೆತ್ತಲೆಂದರಿಯನು. ॥ ೨೩ ॥

೮೦೯

ಸಂಸಾರವೆಂಬ ಮಹಾಘೋರಾರಣ್ಯದಲ್ಲಿ
ಹೊಲಬುಗೆಟ್ಟು, ನೆಲೆಯ ಕಾಣದೆ ಹೋದರು.
ನಿಜದ ಹೊಲಬುದಪ್ಪಿ ಬಳಲುತ್ತಿದ್ದಾರೆ ನೋಡಯ್ಯ.
ಇರುಳುಹಗಲೆನ್ನದೆ ಸಂಸಾರದಲ್ಲಿ ಸಾವುತ್ತಿದ್ದಾರೆ ನೋಡಯ್ಯ.
ಇಂತಪ್ಪ ಸಂಸಾರಾರಣ್ಯದಲ್ಲಿ, ಹೊಲಬುಗೆಟ್ಟು
ನೆಲೆಯ ಕಾಣದೆ ಹೋದರು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ನಿಮ್ಮನರಿಯದೆ. ॥ ೨೪ ॥

೬೧೦

ಅರಿದಿಹೆನೆಂಬ ಅವಸ್ಥೆಯಿದ್ದಡೇನು? ಮತ್ತೆ
ಮರವೆಗೆ ಕಾರಣವಾದ ಸಂಸಾರದ ಕಾಯ
ಕಳವಳಕ್ಕೊಳಗಾದಡೆ ಮಾಯೆ ಮನವನೆಡೆಗೊಂಡಿತ್ತು.
ಮಾಯೆ ಮನವನೆಡೆಗೊಂಡಲ್ಲಿ ಅರಿವು ಜಾರಿತ್ತು.
ಮರಹು ಘನವಾಯಿತ್ತು. ಅರಿವುದಿನ್ನೇನು ಹೇಳಾ?.
ಕೈಯ ತುತ್ತು ಬಾಯ್ಗೆ ಬಾರದಂತಾಯ್ತು.
ಇನ್ನೆಲ್ಲಿಯದು ಲಿಂಗ? ಇನ್ನೆಲ್ಲಿಯದು ಜಂಗಮ?
ಇನ್ನೆಲ್ಲಿಯದು ಪ್ರಸಾದ?.
ಅಕಟಕಟಾ ಹಾನಿಯ ಹಿಡಿದು ಹೀನವಾದರು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೫ ॥

೬೧೧

ಹೊನ್ನು ಹೆಣ್ಣು ಮಣ್ಣೆಂಬ ಸೊಕ್ಕನಿಕ್ಕಿ ಸಿಕ್ಕಿಸಿ
ಕೆಡಹಿದನಯ್ಯಾ ಜೀವರ, ಮುಕ್ಕಣ್ಣ ಶಿವನು.
ಕಾಲನಿಗೊಪ್ಪಿಸಿ ಜಗವ ಠಕ್ಕಿಸಿ ಮಿಕ್ಕು ಮೀರಿ ಹೋದನಯ್ಯ,
ಶಿವನು, ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೨೬ ॥

೬೧೨

ಜಗವಗಲದ ಮಾಯಾಜಾಲವ ಹಿಡಿದು
ಕಾಲನೆಂಬ ಜಾಲಗಾರ ಜಾಲವ ಬೀಸಿದ ನೋಡಯ್ಯ.
ಆ ಜಾಲಕ್ಕೆ ಹೊರಗಾದವರನೊಬ್ಬರನೂ ಕಾಣೆ.
ಬಲ್ಲಬಲ್ಲಿದರೆಂಬವರೆಲ್ಲರ ಬಲೆಯ ಕಲ್ಲಿಯೊಳಗೆ ತುಂಬಿದ ಕಾಲ.
ಆ ಕಾಲನ ಬಲೆಯೊಳಗೆ ಸಿಕ್ಕಿ ಬೀಳುವೆಗೊಳುತಿದೆ ಜಗವೆಲ್ಲ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು,
ತನ್ನವರಿಗೆ ತಾ ಮೇಲಾರೈಕೆಯಾಗಿಹನು. ॥ ೨೭ ॥

೬೧೩

ಸಂಸಾರ ವಿಷಯರಸವೆಂಬ ಕಾಳಕೂಟ ಹಾಲಹಲವಿಷವ
ಕೊಂಡವರಾರಾದರೂ ಜೀವಿಸಿದವರುಂಟೇ? ಇಲ್ಲವಾಗಿ.
ಎಲ್ಲರೂ ಸಂಸಾರ ವಿಷಯರಸವಲ್ಲಿ ಸಾವುತ್ತೈದಾರೆ.

ಆ ವಿಷಯದ ಗಾಳಿ ಸೋಂಕಿ ಬಳಲುತ್ತಿದ್ದೇನಯ್ಯ.
ನಿಮ್ಮ ಕೃಪಾಪ್ರಸಾದವೆಂಬ ನಿರ್ವಿಷವ ಕೊಟ್ಟು ರಕ್ಷಿಸಯ್ಯ ಎನ್ನ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೮ ॥

೮೧೪

ತರಗೆಲೆಯ ಮೆದ್ದು ತಪವಿದ್ದರೂ ಬಿಡದು ಮಾಯೆ.
ಗಾಳಿಯನಾಹಾರವ ಕೊಂಡು,
ಗುಹೆಯ ಹೊಕ್ಕಡೆಯೂ ಬಿಡದು ಮಾಯೆ.
ತನುವಿನಲ್ಲಿ ವ್ಯಾಪಾರ, ಮನದಲ್ಲಿ ವ್ಯಾಕುಳವಾಗಿ
ಕಾಡಿತ್ತು ಮಾಯೆ.
ಆವಾವ ಪರಿಯಲ್ಲಿಯೂ ಘಾತಿಸಿ ಕೊಲುತ್ತಿದೆ ಮಾಯೆ.
ಈ ಪರಿಯ ಬಾಧೆಯಲ್ಲಿ ಬಳಲುತ್ತಿದೆ ಜಗವೆಲ್ಲ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ
ನಿನ್ನವರನು ಈ ಮಾಯಾಸಂಸಾರದ ಬಾಧೆಯಲ್ಲಿ,
ಬಳಲದಂತೆ ಮಾಡಯ್ಯ ನಿಮ್ಮ ಧರ್ಮ. ॥ ೨೯ ॥

೮೧೫

ಪಂಚೇಂದ್ರಿಯವೆಂಬ ಹೆಡೆಯನುಳ್ಳ ಸಂಸಾರಸರ್ಪ ದಷ್ಟವಾಗಲು,
ಪಂಚವಿಷಯವೆಂಬ ವಿಷ ಹತ್ತಿ, ಮೂರ್ಛಾಗತರಾದರೆಲ್ಲ
ಸಮಸ್ತ ಲೋಕದವರೆಲ್ಲ.
ಸರ್ವರ ಕಚ್ಚಿ ಕೂಡಿಯಾಡುವ ಸರ್ಪನ ಬಾಯ,
ಕಟ್ಟಲರಿಯದೆ ಮರಣವಾದರಲ್ಲ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನರಿಯದವರೆಲ್ಲ. ॥ ೩೦ ॥

೮೧೬

ಆವಾವ ಲೋಕದಲ್ಲಿರ್ದರೂ, ಆವಾವ ಪ್ರಕಾರದಲ್ಲಿ
ಅವರವರಿಗೆ ತಕ್ಕ ಸಂಸಾರ ಬಿಡದು.
ಹಿರಿದಿಂಗೆ ಹಿರಿದಾಗಿ, ಕಿರಿದಿಂಗೆ ಕಿರಿದಾಗಿ, ಕಾಡಿತ್ತು ಮಾಯೆ.
ಘಟಸಂಸಾರಿಗಳಿಗೆಲ್ಲ ಘಟಭಾರವ ಹೊರಿಸಿ ಕಾಡಿತ್ತು ಮಾಯೆ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ,
ನಿಮ್ಮ ಮಾಯೆಯ ಬಲುಹಿಂಗೆ ನಾನು ಬೆರಗಾದೆನು. ॥ ೩೧ ॥

೮೧೭

ಸಂಸಾರ ಸೌಖ್ಯವಲ್ಲ, ಸಂಸಾರ ಸೌಖ್ಯವಲ್ಲ.
ಇಹಲೋಕ ಪರಲೋಕ ಸೌಖ್ಯವಲ್ಲ, ಸ್ಥಿರವಲ್ಲ.
ಗೃಹಪಾಶ, ಕ್ಷೇತ್ರಭ್ರಮೆ ಬಳಸಿ ಬಳಸಿ ಬರುತ್ತಿದೆ,
ಬಿಡು ಬಿಡು ವಾಂಛೆಯ, ಆಗ ಹುಟ್ಟಿ ಬೇಗ ಸಾವವರ ಕಂಡು
ಮತ್ತೇಕೆ ಸಂಸಾರದಾಸೆ?
ನಿನ್ನ ದೇಹ ಸ್ಥಿರವಲ್ಲ. ನೀ ಬಂದುದನರಿದು
ಹೋಹ ಗತಿಪಥವ ತೆರಹುಮಾಡು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ಒಂದಹರೆ. ॥ ೩೨ ॥

೮೧೮

ಗಂಡಿಂಗೆ ಹೆಣ್ಣುರೂಪಾಗಿ ಕಾಡಿತ್ತು ಮಾಯೆ.
ಹೆಣ್ಣಿಂಗೆ ಗಂಡುರೂಪಾಗಿ ಕಾಡಿತ್ತು ಮಾಯೆ.
ಆ ಹೆಣ್ಣು ಗಂಡಿಗೆ ಸುತರೂಪಾಗಿ ಕಾಡಿತ್ತು ಮಾಯೆ.
ಮಣ್ಣು ಹೆಣ್ಣು ಹೊನ್ನಾಗಿ ಕಾಡಿತ್ತು ಮಾಯೆ.
ಈ ತೂಳದ ಮೇಳದ ಜಗವನಾಳಿಗೊಂಡಿತ್ತು ಮಾಯೆ.
ಈ ಮಾಯೆ ಎಲ್ಲರ ಮೋಹಿಸಿ ಹಲ್ಲು ಕಿತ್ತು ತರಕಟ ಕಾಡಿತ್ತು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನಿಮ್ಮ ಶರಣರಲ್ಲದವರ ಹುಲ್ಲಿಂದ ಕಡೆ ಮಾಡಿತ್ತು ಮಾಯೆ.
॥ ೩೩ ॥

೮೧೯

ಆವಾವ ದೇಹ ತೊಟ್ಟರೂ ದೇಹಕ್ಕೆ ತಕ್ಕ ಸಂಸಾರ ಬಿಡದು.
ಅಧ್ಯಾತ್ಮಿಕ ಅಧಿದೈವಿಕ, ಅಧಿಭೌತಿಕವೆಂಬ, ತಾಪತ್ರಯಾಗ್ನಿಯಲ್ಲಿ
ಬೇಯದೆ ಮಾಬರೆ?
ಹಿಂದೆ ಮಾಡಿದ ಕರ್ಮ ಪೀಡಿಸದೆ ಬಿಡುವುದೆ?
ಸುಖಲೇಶವ ಕಾಣದೆ ಬಳಲುತ್ತಿದೆ ಜಗವೆಲ್ಲ.
ಇದನರಿದು ಮಲಕೋಶ ಶರೀರ ಸಂಸಾರವ
ಹೇಸಿ ಬಿಡು ಮರುಳೆ.
ಮುಂದೆ ನಿನಗೆ ನಿಜಪದವಹುದು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ಸುಖಿಯಪ್ಪೆ ಮರುಳೆ.
॥ ೩೪ ॥

೪೨೦

ಕನ್ನವ ಸವೆವ ಕನ್ನಗತ್ತಿಗೆ ಕನ್ನ ಸವೆಯಿತ್ತೆ ಕೈ ತಟ್ಟಿತೆಂಬಂತೆ,
ಹೊನ್ನೆನ್ನದು ಹೆಣ್ಣೆನ್ನದು ಮಣ್ಣೆನ್ನದು ಎಂದು,
ಬಳಲುವಣ್ಣಗಳ ಬಾಯ ಟೊಣೆದು,
ಇವು ಮೂರು ತನ್ನಿಂದ ಬಲ್ಲಿದರಲ್ಲಿಗೆ ಹೋಗದೆ ಮಾಣವು.
ಇವರಲ್ಲಿ ಬನ್ನಬಟ್ಟು ಬಳಲುವ
ಕರ್ಮಿಗಳಿಗಿನ್ನೆಲ್ಲಿಯ ಮುಕ್ತಿಯಯ್ಯ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೩೫ ॥

೪೨೧

ಹಲವು ಕಾಲದಿಂದಗಿದಗಿದು ತಿಂದು, ಸವಿಗಲಿತ
ಮಾಯಾರಕ್ಕಸಿ ಬಿಡೆಂದರೆ ಬಿಡುವಳೆ?
ಇವಳ ಬಾಧೆಯ ಗೆಲಿವರೊಂದುಪಾಯವ
ಕಾಬುದು ಕಾಣೆರಯ್ಯ.
ಎಲ್ಲ ದೇವರಿಗೆ ಬಲ್ಲಿದ ಪರಶಿವನ ಮರೆಯ ಹೊಕ್ಕು
ಇವಳ ಬಾಯ ಟೊಣೆವುದಯ್ಯ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಬೆರಸಬೇಕಾದಡೆ. ॥ ೩೬ ॥

೪೨೨

ಮನವಿದೊಮ್ಮೆ ಪ್ರಪಂಚದತ್ತ ಹರಿವುದು.
ಒಮ್ಮೆ ಪರಮಾರ್ಥದತ್ತ ತಿರುಗುವುದು.
ಒಂದ ಹಿಡಿಸಿ, ಒಂದ ಬಿಡಿಸುವುದು.
ಇಂತೀ ಸಂದೇಹವನಿಕ್ಕಿ ದಂದುಗಗೊಳಿಸಿ
ಮುಂದುಗೆಡಿಸಿ ಕಾಡುತ್ತಿದೆ.
ಈ ಮನದ ಮರುಳತನವ ಬಿಡಿಸಿ, ನಿಮ್ಮ ಶ್ರೀಪಾದದಲ್ಲಿರಿಸೆನ್ನ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೩೭ ॥

೪೨೩

ಏನ ಮಾಡುವೆನಯ್ಯ?
ಈ ಮನವೆಂಬ ಮರ್ಕಟನ ಸಂಗದಿಂದ,
ಮರ್ಕಟವಿಧಿಯಾಯಿತ್ತಯ್ಯ.

ತನುವೆಂಬ ವೃಕ್ಷದಲ್ಲಿ ಇಂದ್ರಿಯಂಗಳೆಂಬ ಶಾಖೋಪಶಾಖೆಗಳಿಗೆ
ಲಂಘಿಸುತ್ತಿದೆ ನೋಡಯ್ಯ.
ಸಜ್ಜನರಿಗೆ ದುರ್ಜನರ ಸಂಗದಿಂದ
ದುರ್ಜನಿಕೆ ಬಂದಂತಾಯಿತ್ತಯ್ಯ.
ಈ ಮನದ ಮರ್ಕಟತನವ ಮಾಣಿಸಿ
ನಿಮ್ಮಲ್ಲಿ ಕಟ್ಟಿ ಬಂಧವಾಗಿರಿಸೀಮನವ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೩೮ ॥

೮೨೪

ತನ್ನಲ್ಲಿ ಸುಗುಣವ ಸಂಪಾದಿಸ ಹೋಹುದೀ ಮನವು.
ಇ[ತರ]ದುರ್ಗುಣವ ಸಂಪಾದಿಸ ಹೋಹುದೀ ಮನವು.
ಇಂತೀ ಮನವಿದು ನಗೆಗೆಡೆಯ ಮಾಡಿ ಕಾಡಿತ್ತು.
ಈ ಮನವ ನಿಲಿಸುವರೆನ್ನಳವಲ್ಲ.
ಅಗಡೆತ್ತು ಹಗ್ಗವ ಹರಿದುಕೊಂಡಂತಾಯಿತ್ತು.
ಸದ್ಬೋಧೆಯೆಂಬ ಮೇವ ಕೊಟ್ಟು
ಈ ಮನವ ತಿದ್ದಯ್ಯಾ ನಿಮ್ಮ ಧರ್ಮ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೩೯ ॥

೮೨೫

ಮನವಿದು ಕ್ಷಣದೊಳಗೆ
ಹೋಗದ ಠಾವಿಗೆ ಹೋದಂತೆ ನೆನೆವುತ್ತಿದೆ.
ಬಾರದ ಠಾವಿಂಗೆ ಬಂದಂತೆ ನೆನೆವುತ್ತಿದೆ.
ಕಾಣದುದ ಕಂಡಂತೆ ನೆನೆವುತ್ತಿದೆ.
ಕೇಳದುದ ಕೇಳಿದಂತೆ ನೆನೆವುತ್ತಿದೆ.
ಕ್ಷಣದೊಳಗೆ ದಶದಿಕ್ಕಿಗೈಯ್ಯುತ್ತಿದೆ.
ಶತಮರ್ಕಟವಿಧಿ ಬಂದು ಮನಕ್ಕಾದರೆ
ಇದನೆಂತು ತಾಳಬಹುದಯ್ಯ?
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ,
ಈ ಮನವ ಸೆರೆಯಿಟ್ಟಾಳಯ್ಯಾ ನಿಮ್ಮ ಧರ್ಮ ಬೇಡಿಕೊಂಬೆ.
॥ ೪೦ ॥

೮೨೬

ಹೇಡಿಮನದ ಸಖಿತ್ವದಿಂದೇನಾಗದಯ್ಯ?
ಇಹಪರದ ವೈರಾಗ್ಯವ ಕೆಡಿಸಿ ಹೇಡಿಗೊಳಿಸಿತ್ತು.
ಮುಂದಕ್ಕೊಂದಡಿಯಿಡಲೀಯದೆ ಹಿಂದಕ್ಕೆ ಹಿಡಿದೆಳೆವುತ್ತಿದೆ.
ಈ ಮನಕ್ಕೆ ಜ್ಞಾನಶಸ್ತ್ರವ ಕೊಟ್ಟು ಕಲಿಮಾಡಿ
ಸನ್ನಿಧಿಯಲ್ಲಿ ನಿಮ್ಮಾಳಾಗಿರಿಸಿಕೊಳ್ಳಯ್ಯಾ ಈ ಮನವನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೪೧ ॥

೮೨೭

ಕತ್ತಲೆಯ ಮನೆಯ ಹೊಕ್ಕು ತೊಳಲುವ ವ್ಯರ್ಥ
ಜೀವರನೇನೆಂಬೆ ನೋಡ.
ಅರ್ತಿಕಾರಿಕೆಗೆ ಬಲುಗುಂಡ ಹೊತ್ತು ಬಳಲುವಂತೆ
ಬಳಲುತ್ತೈದಾರೆ ನೋಡ.
ಶಿವಜ್ಞಾನವಿಲ್ಲದೆ ದೇಹಭಾರವ ಹೊತ್ತು ಗತಿಗೆಡುತ್ತೈದಾರೆ.
ಮುನ್ನ ಮಾಡಿದ ಕರ್ಮ ಬೆನ್ನಲ್ಲಿ ಮನೆಯ ಹೊರುವಂತಾಯಿತ್ತು.
ಇನ್ನಾದರೂ ಅರಿದು ನಡೆಯಲು,
ಬೆನ್ನ ಹತ್ತಿದ ಮನೆಯ ತೊ[ಲ]ಗೆ ನೂಂಕಿ ತನ್ನತ್ತ ತೆಗೆದುಕೊಂಬನು
ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೪೨ ॥

೮೨೮

ಬಡಕಲ ಪಶುವಿಂಗೆ ಬಲುದಂಡಿಯ ಕಟ್ಟಿದರೆ
ಎಳೆದೆಳೆದು ಸಾವಂತೆ,
ಸಾವುತ್ತಿದೆ ನೋಡ.
ಅಜ್ಞಾನ ಜಡಜೀವರು ದೇಹವೆಂಬ ದಂಡಿಯ ಕಟ್ಟಿಸಿಕೊಂಡು,
ಬಿಡಲುಪಾಯುವ ಕಾಣದೆ, ಹೊತ್ತು ತೊಳಲುತ್ತಿದ್ದರಲ್ಲ,
ಜನ್ಮಜನ್ಮಾಂತರದಲ್ಲಿ.
ಶಿವಭಕ್ತಿಯೆಂಬ ಸಜ್ಜನಿಕೆ ಬಂದರೀದೇಹವೆಂಬ
ದಂಡಿಯ ಬಿಡಿಸುವ[ನ]ಯ್ಯಾ
ಕರುಣಿ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೪೩ ॥

೬೨೯

ದೇಹವೆಂಬ ಹುತ್ತಿನೊಳಗೆ, ನಿದ್ರೆಯೆಂಬ ಕಾಳೋರಗನೆದ್ದು
ಕಡಿಯಲು ಮೂರ್ಛಿತರಾದರಯ್ಯ,
ದೇವದಾನವ ಮಾನವರೊಳಗಾದೆಲ್ಲಾ ಜೀವರು.
ಆವಾಗ ಬಂದು ಕಡಿದೀತೆಂದು ಕಾಣಬಾರದು.
ದಿವಾ ರಾತ್ರಿಯೆನ್ನದೆ ಬಂದು ಕಡಿಯಲೊಡನೆ
ವಿಷ ಹತ್ತಿ ಸತ್ತವರಿಗೆಣೆಯೆಂಬಂತೆ
ಜೀವನ್ಮೃತರಾದರಯ್ಯ.
ಶಿವಜ್ಞಾನವೆಂಬ ನಿರ್ವಿಷವ ಕಾಣದೆ
ನಿದ್ರಾಸರ್ಪನ ಬಾಯಿಗೀಡಾದರು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೪೪ ॥

೬೩೦

ಮರಹೆಂಬ ಕತ್ತಲೆಯೊಳಗೆ ತ್ರಿಜಗದ ಪ್ರಾಣಿಗಳೆಲ್ಲ
ಹಿಂದುಗಾಣದೆ ಮುಂದುಗಾಣದೆ ಗೊಂದಣಗೊಳುತ್ತಿರ್ದರಲ್ಲ.
ತಂದಿಕ್ಕಿದೆ ಬಲು ಮರವೆಯ ಶಿವನೇ, ನಿನ್ನ ಕಾಣದಂತೆ.
ಈ ಅಂಧಕಾರದಲ್ಲಿರ್ದ ಪ್ರಾಣಿಗಳಿಗಿನ್ನೆಂದಿಂಗೆ
ಮುಕ್ತಿಯಹುದೊ, ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ?.॥ ೪೫ ॥

೬೩೧

ಆಸೆಯೆಂಬ ವೇಶಿ ಆರನಾದರೂ ತನ್ನತ್ತ ಕರೆವಳು.
ಈ ಆಸೆಯೆಂಬವಳು ಆರನಾದರೆಯೂ ಘಾಸಿಮಾಡಿ,
ತನು ಮನವ ವ್ರಯವ ಮಾಡುವಳು.
ಈ ಆಸೆಯೆಂಬ ವೇಶ್ಯೆಗೆ ಒತ್ತೆಯ ಕೊಡದ
ನಿರಾಶಿಗಳೆಂಬುವರನಾರನೂ ಕಾಣೆ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೪೬ ॥

೬೩೨

ಆಸೆಯೆಂಬ ಸ್ತ್ರೀಗೆ ಮನಸೋತವರೆಲ್ಲಾ
ಕೆಟ್ಟ ಕೇಡನೇನೆಂಬೆನಯ್ಯ?

ಯತಿಗಳಾಗಲಿ ವೇದಾಧ್ಯಾಯಿಗಳಾಗಲಿ ವ್ರತಿಗಳಾಗಲಿ
ಸರ್ವವಿದ್ಯಾಕಲಾವಂತರಾಗಲಿ ನರರೊಳಗಾಗಲಿ ಸುರರೊಳಗಾಗಲಿ
ಇವರೆಲ್ಲರ, ಧನವುಳ್ಳವರ ಬಾಗಿಲ ಕಾಯಿಸಿದಳು ನೋಡ.
ಇವಳಿಗಾರಾರು ಮರುಳಾಗದಿರರು?
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣರಲ್ಲದವರ,
ಕಿವಿಯ ಹಿ[ಂಡಿ] ಕುಣಿಸಿದಳು ನೋಡ. ॥ ೪೭ ॥

೮೩೩

ಬಂದುದ ಕಿರಿದು ಮಾಡಿ ಬಾರದುದ ಹಿರಿದು ಮಾಡಿ
ಆವಾಗ ಚಿಂತಿಸಿ ಬಳಲುತ್ತಿ[ಹಿ]ರೇಕೆ?
ಇರುಹೆ ಅರುದಿಂಗಳ ದವಸವ ಕೂಡಹಾಕುವಂತೆ
ತಾ ಕಿರಿದಾದರೂ ಆಸೆ ಹಿರಿದಾಯಿತ್ತು.
ಸ್ಥೂಲಕಾಯವಾದ ಮದಗಜಕ್ಕೇನು,
ಮುಂದಕ್ಕೆ ಬೇಕೆಂಬ ಆಸೆಯುಂಟೆ? ಇಲ್ಲ.
ಇರುಹೆಯ ಆನೆಯ ಅಂತರವ ನೋಡಿರಣ್ಣ.
ಅರಿದು ಸಲಹುವ ಶಿವನಿದ್ದ ಹಾಗೆ
ಬರಿದೆ ಆಸೆಯಿಂದಲೇಕೆ ಸಾವಿರಿ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಾಧೀನವವನರಿಯದೆ?.॥ ೪೮ ॥

೮೩೪

ಮುನ್ನಲುಳ್ಳ ಕರ್ಮ ಬೆನ್ನ ಬಿಡದು ನೋಡ.
ಜಾತಿ ವಿಜಾತಿಗಳಲ್ಲಿ ತೀವಿ
ಭೋಗಕ್ಕೆ ಸಾಧನವಾದ ಪರಿಯ ನೋಡ.
ಅಲ್ಲಿಯೆ ಮತ್ತೆ ಮತ್ತೆ ಪುಣ್ಯ ಪಾಪವ ಮಾಡಿ,
ಸ್ವರ್ಗನರಕವನೈದುವ ಕರ್ಮಿಗಳು, ಕಣ್ಣುಗೆಟ್ಟು ಮುಂದುಗಾಣದೆ
ಪುಣ್ಯ ಪಾಪವ ಬೆನ್ನಲ್ಲಿ ಕಟ್ಟಿ,
ರಾಟಾಳದಂತೆ ತನುವ ತೊಡುತ್ತ ಬಿಡುತ್ತ ತಿರುಗುತ್ತಿಹರಲ್ಲ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನನರಿಯದ
ಕರ್ಮಿಗಳ ನೋಡಾ. ॥ ೪೯ ॥

೮೩೫

ಸಂಚಿತ ಪ್ರಾರಬ್ಧ ಆಗಾಮಿ ಎಂಬ ಕರ್ಮಂಗಳು ಬೆನ್ನ
ಬಿಡವು ನೋಡ.
ಆರನಾದರೂ ಮೂಗರಮಾಡಿ ಕಾಡಿ ಕೊಲುತ್ತಿಹವು ನೋಡ.
ಹಿಂದೆ ಮಾಡಿದ ಕರ್ಮ ಬಿಡೆಂದಡೆ ಬಿಡುವುದೆ?
ಮುಂದೆ ಉಂಡಲ್ಲದೆ ತೀರದು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ,
ಕಡೆಗಣ್ಣಲ್ಲಿ ನೋಡುವನ್ನಕ್ಕ, ಕರ್ಮ ಉಂಡು ತೀರುವುದು.
॥ ೫೦ ॥

೮೩೬

ಮನೋವಾಕ್ಕಾಯದಿಂದ ಹುಟ್ಟಿದ ಕರ್ಮ
ತೊಟ್ಟನೆ ತೊಳಲಿಸಿ ಬಳಲಿಸಿದಲ್ಲದೆ ಬಿಡದು.
ಕರ್ಮವ ಮೀರಿ ನಡೆವ ಬಲ್ಲಿದರನಾರನೂ ಕಾಣೆ.
ಬೊಮ್ಮಾದಿಗಳೆಲ್ಲ ಕರ್ಮಕ್ಕೀಡಾದರು.
ಕರ್ಮವು ಅಜ ಹರಿಗಳ ಬಾರದ ಭವದಲ್ಲಿ ಬರಿಸಿತ್ತು.
ಕಾಣದ ದುಃಖವ ಕಾಣಿಸಿತ್ತು. ಇನ್ನುಳಿದವರ ಹೇಳಲೇನುಂಟು?.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಆಧೀನವಿಡಿದು
ಕಾಡುವ ಕರ್ಮದ ಬಲುಹ ನೋಡಾ. ॥ ೫೧ ॥

೮೩೭

ಪೂರ್ವಜನ್ಮದಲ್ಲಿ ಮಾಡಿದ ಕರ್ಮ,
ಈಗಿನ ಜನ್ಮದಲ್ಲಿ ಭೋಗಿಸಲಿಕ್ಕೀಡಾಯಿತ್ತು.
ಈಗ ಮಾಡಿದ ಕರ್ಮ,
ಮುಂದಕ್ಕೆ ಬಿತ್ತಿದ ಬೆಳೆಯನುಂಬಂತೆ ಬರ್ಪುದು ತಪ್ಪದು.
ಈ ಕರ್ಮವುಳ್ಳನ್ನಕ್ಕ ಆರಿಗಾದರೂ ಬಳಲಿಕೆ ಬಿಡದು.
ಈ ಕರ್ಮ ಹರಿವಂದಿಗೆ ನಿಮ್ಮ ಕಾಂಬರು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೫೨ ॥

೬೩೮

ಅಜ್ಞಾನವೆಂಬ ಕತ್ತಲೆ ಆವರಿಸಿತ್ತಯ್ಯ ಜಗವೆಲ್ಲವ.
ಅಂಧಕಾರದ ಗುಹೆಯೊಳಗಿರ್ದವರಂತಿರ್ದರಯ್ಯ ಜೀವರೆಲ್ಲ.
ಹೊಲಬುದಪ್ಪಿ ತಿಳಿವಿಲ್ಲದೆ ಕಳವಳಗೊಳುತ್ತಿರ್ದರಯ್ಯ.
ಅಡವಿಯ ಹೊಕ್ಕ ಶಿಶುವಿನಂತೆ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ,
ನಿಮ್ಮ ಕರುಣವಾಗುವನ್ನಕ್ಕ,
ಬಳಲುತ್ತಿರ್ದರಯ್ಯ ಹೊಲಬರಿಯದೆ. ॥ ೫೩ ॥

೬೩೯

ತತ್ತಿಯೊಳಗಣ ಪಕ್ಷಿಯಂತೆ, ಎತ್ತಲೆಂದರಿಯದೆ
ಅಜ್ಞಾನದ ಕತ್ತಲೆಯೊಳಗೆ ಸಿಕ್ಕಿ ದುಃಖಗೊಳುತ್ತಿಹರೆಲ್ಲರು.
ದಿವಾ ರಾತ್ರಿ ಇಂತು ದುಃಖವನನುಭವಿಸುತ್ತ,
ಕಾಯುವ ಹೊತ್ತು ಬಳಲುವ ಜೀವರುಗಳು,
ತಾವಾರೆಂದರಿಯದೆ ನೋವುತ್ತ ಬೇವುತ್ತ
ಸಾವುತ್ತಿರ್ಪರವರಿಗಿನ್ನೆಂದಿಂಗೆ ಮುಕ್ತಿಯಹುದು
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ?. ॥ ೫೪ ॥

೬೪೦

ಮರಹೆಂಬುದಾವರಿಸಿದವರಾರಾದಡಾಗಲಿ,
ದೇವ ದಾನವ ಮಾನವರೊಳಗಾದವರಾರಾದರೂ,
ಮಾಡಬಾರದ ಕರ್ಮವ ಮಾಡಿ, ಬಾರದ ಭವದಲಿ ಬಂದು
ಉಣ್ಣದ ಅಪೇಯವ ಉಂಡು, ಕುಡಿದು
ಕಾಣದ ದುಃಖವ ಕಂಡು
ಸಾಯದ ನಾಯ ಸಾವ ಸತ್ತು ಹೋಹರಿಗೆ ಕಡೆಯಿಲ್ಲ.
ಶಿವ ಶಿವ ಮಹಾದೇವ,
ನೀನು ಮಾಡಿದ ಬಿನ್ನಾಣದ ಮರವೆಯ ಕಂಡು
ನಾನು ಬೆರಗಾದೆನು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೫೫ ॥

೮೪೧

ಸಂಸಾರದ ಸುಖವೆತ್ತ ನಿಮ್ಮ ನಿಜ ಸುಖವೆತ್ತ?.
ಕತ್ತಲೆಯೆತ್ತ ಬೆಳಗೆತ್ತ?.
ಎನ್ನಂತರಂಗದೊಳಗಿರ್ದು ತೋರುವೆ ಅಡಗುವೆ
ಇದೇನು ಗಾರುಡಿಗತನ ನಿನಗೆ?.
ಸವಿವಾಲು ಸಕ್ಕರೆಯನುಣ ಕಲಸಿ, ಬೇವನುಣಿಸಿಹೆನೆಂದಡೆ
ಅದು ಹಿತವಹುದೆ?.
ನಿನ್ನ ನಿಜಸುಖದ ಸವಿಗಲಿಸಿ,
ಸಂಸಾರಸುಖವನುಣಿಸಿಹೆನೆಂದರದು ಮನಕೊಂಬುದೆ?.
ಎನ್ನೊಡನೆ ವಿನೋದವೆ ನಿನಗೆ? ಬೇಡ ಬೇಡ.
ಎನ್ನ ನೀನರಿದು ಸಲಹು,
ನಿನಗೆ ಎನ್ನಾಣೆಯಯ್ಯಾ, ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ.
॥ ೫೬ ॥

೮೪೨

ಎರವಿನ ಬದುಕು ಸ್ಥಿರವಲ್ಲ.
ಅಭ್ರಛಾಯದಂತೆ ನಿಮಿಷದಲ್ಲಿ ತೋರಿಯಡಗಲು,
ಈ ಸಂಸಾರದಲ್ಲೇನು ಲೇಸು ಕಂಡು ನಚ್ಚುವೆ? ನಚ್ಚದಿರು.
ನಚ್ಚಿದವರ ಕೆಟ್ಟ ಕೇಡಿಂಗೆ ಕಡೆಯಿಲ್ಲ.
ಬರಿಯ ಬಯಲ ಭ್ರಮೆ ಸಟೆಯ ಸಂಸಾರ.
ಇದರಲ್ಲೇನೂ ಲೇಸಿಲ್ಲವೆಂದರಿದು ದೃಢವಿಡಿ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶ್ರೀಚರಣವನು.
॥ ೫೭ ॥

೮೪೩

ಸಂಸಾರವೆಂಬ ಮಹಾವ್ಯಾಧಿ ಬಾಧಿಸಿ, ನಡೆವೆಣನ ಮಾಡಿ
ಕಾಡುತ್ತಿದೆ ನೋಡಯ್ಯ.
ಮುಂದೆ ಸತ್ಪಥದಲ್ಲಡಿಯಿಡಲು ಶಕ್ತಿಯಿಲ್ಲದವನ ಮಾಡಿ,
ಕಾಡುತ್ತಿದೆ ನೋಡಯ್ಯ.
ಶಿವನೆ, ನಿನ್ನ ನಾ ಬೇಡಿಕೊಂಬೆನು.
ನೀನೇ ಶ್ರೀಗುರುವೆಂಬ ವೈದ್ಯನಾಗಿ ಬಂದು,

ಕೃಪಾಪ್ರಸಾದವೆಂಬ ಮದ್ದ ಕೊಟ್ಟು,
ಪಂಚಾಕ್ಷರಿಯೆಂಬ ಪಥ್ಯವನೆರೆದು,
ಸಂಸಾರವೆಂಬ ವ್ಯಾಧಿಯ ಮಾಣಿಸಯ್ಯ ನಿಮ್ಮ ಧರ್ಮ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೫೮ ॥

೮೪೪

ತಟಿದಂಕುರದಂತೆ ಕ್ಷಣದಲ್ಲಿ ತೋರಿಯಡಗುವ ಸಂಸಾರ.
ಇದರಲ್ಲೇನು ಲೇಸಕಂಡು,
ನಿತ್ಯಾನಂದ ಚಿದಾತ್ಮಸುಖವ ಬಿಡುವೆ?
ಈ ಸಂಸಾರ ಸ್ಥಿರವಲ್ಲ.
ಬೇಗ ಗುರು ಚರಣವ ದೃಢವಿಡಿ.
ಕಾಬೆ, ಮುಂದೆ ನೀನು ಕೈವಲ್ಯವ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲೊಂದಾಹ ಸೌಖ್ಯವನು.
॥ ೫೯ ॥

**ಗುರುಕರುಣಸ್ಥಲ.**

೮೪೫

ಸಂಸಾರಕ್ಕೆ ಹೇಸಿ,
ಗುರುವನರಸಿಕೊಂಡು ಬಂದ ಶಿಷ್ಯನ ಕಣ್ಣ ಮುಂದೆ,
ಪರಶಿವನು ಗುರುವಾಗಿ ಪ್ರತ್ಯಕ್ಷನಾದನಯ್ಯ.
ಆ ಗುರುವ ಕಂಡು, ಸಾಷ್ಟಾಂಗವೆರಗಿ ಬಿನ್ನೈಸಲು,
ಶ್ರೀಗುರು ಶಿಷ್ಯನಾದಿಯನರಿದು, ಈತ ನನ್ನವನೆಂದು ಕರುಣ ಹುಟ್ಟಿ,
ಆಣವಾದಿ ಮಲತ್ರಯಂಗಳ ದೋಷವ ಕಳೆದು,
ಶುದ್ಧಾತ್ಮನ ಮಾಡಿ, ವಿಭೂತಿಯ ಪಟ್ಟವ ಕಟ್ಟಿ,
ಪಂಚಕಳಶೋದಕದಿಂದಭಿಷೇಕವ ಮಾಡಿ,
ಪಂಚಾಕ್ಷರಿಯನುಪದೇಶಿಸಿ,
ಅಂಗದ ಮೇಲೆ ಲಿಂಗವ ಧರಿಸಿದನಯ್ಯ.
ಇಂತಾದ ಬಳಿಕ,
ಕಾಯವೇ ಶಿವಕಾಯವಾಗಿ, ಪ್ರಾಣವೇ ಪರಶಿವನಾಯಿತ್ತು.
ಇಂತು, ಶ್ರೀಗುರುವಿನುಪದೇಶದಿಂದ ಸದ್ಯೋನ್ಮುಕ್ತನಾದೆನಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೬೦ ॥

೮೪೬

ಶ್ರೀಗುರುಕರುಣವ ಪಡೆಯಲೆಂದು ಹೋದಡೆ,
ಗುರುವೆನ್ನ ಕಾಯವ ಶುದ್ಧವ ಮಾಡಿ,
ಕಾಯದಲ್ಲಿ ಮಂತ್ರವನಿರಿಸಿ, ಮಂತ್ರಕಾಯನ ಮಾಡಿದನು.
ಜೀವವ ಶುದ್ಧವ ಮಾಡಿ, ಜೀವದಲ್ಲಿ ಲಿಂಗವನಿರಿಸಿ,
ಲಿಂಗಪ್ರಾಣಿಯ ಮಾಡಿದನು.
ಶಿವಮಂತ್ರ ವಾಚ್ಯ ವಾಚಕ ಸಂಬಂಧವಾದ ಕಾರಣ,
ಕಾಯವೇ ಜ್ಞಾನಕಾಯವಾಯಿತ್ತು, ಜೀವ ಶಿವನಾಯಿತ್ತು.
ಇಂತು ಶ್ರೀಗುರುವಿನ ಕಾರುಣ್ಯದಿಂದೆ ನಾನು ಬದುಕಿದೆನಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೬೧ ॥

೮೪೭

ಎನ್ನ ಶ್ರೀಗುರು ಮಾಡಿದ ಕರುಣಕಿನ್ನಾವುದು ಕಡೆ,
ಏನೆಂದುಪಮಿಸುವೆನಯ್ಯ?
ಕಾಣಬಾರದ ಲಿಂಗವ ಕಾಣಿಸಿ ಕೊಟ್ಟನೆನ್ನ ಕರದಲ್ಲಿ.
ತಿಳಿಯಬಾರದ ಜ್ಞಾನವ ತಿಳಿಸಿ, ಮನದಲ್ಲಿ ನೆಲೆಗೊಳಿಸಿದ.
ಒಳಹೊರಗೆ ತಳವೆಳಗು ಮಾಡಿ,
ಆಚಾರವನನುಗೊಳಿಸಿ ಅಂಗದಲ್ಲಿ ಸ್ಥಾಪಿಸಿ
ಹಿಂದ ಮರೆಸಿ, ಮುಂದ ತೋರಿದನಯ್ಯಾ.
ಶ್ರೀಗುರು, ಕರುಣೆ, ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೬೨ ॥

೮೪೮

ಶಿವನೆ ತಾನೆನಗೆ ಗುರುವಾಗಿ ಬಂದು,
ಎನ್ನ ಸಂಸಾರಸಾಗರವ ದಾಂಟಿಸಿ,
ಅಖಂಡ ಪರಮ ಚೈತನ್ಯ ಶಿವಲಿಂಗವ
ವಿಶ್ವದೊಳಗೆಲ್ಲಿಯೂ ಕಾಬಂತೆ ತೋರಿಸಿ,
ವಿಶ್ವವ ಲಿಂಗದೊಳಗೆ ತೋರಿ,
ಲಿಂಗವೆನ್ನಂಗದೊಳಹೊರಗೆ ತೋರಿ,
ಅಂಗವ ಲಿಂಗದೊಳಗಿರಿಸಿ, ರಕ್ಷಿಸಿದನಯ್ಯ ಎನ್ನ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೬೩ ॥

*ಸಂಕೀರ್ಣ ವಚನಸಂಪುಟ : ಆರು / ೪೩೦*

೭೪೯

ಗುರುವ ಬೆಸಗೊಳಹೋದಡೆ,
ಗುರುವೆನ್ನಂತರಂಗವನರಿದು,
ಜೀವ ಪರಮರ ಏಕವ ಮಾಡಿ ತೋರಿ,
ಕಾಯದ ಕಂಗಳಲ್ಲಿರಿಸಿ,
ಮನವ ಕೊನೆಯಲ್ಲಿ ನೆಲೆಗೊಳಿಸಿ,
ಸರ್ವಾಂಗದಲ್ಲಿಯೂ, ಲಿಂಗಸಂಬಂಧವ ಮಾಡಿ ತೋರಿದನಯ್ಯಾ,
ಎನ್ನ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೬೪ ॥

೭೫೦

ಗುರುಹಸ್ತಸರೋಜಗರ್ಭ ಮಧ್ಯದಲ್ಲಿ ಹುಟ್ಟಿದ
ಶಿಷ್ಯನೆಂಬ ಸತಿಯು,
ಗುರುವಿನ ಸದ್ಭಾವಗರ್ಭ ಮಧ್ಯದಲ್ಲಿ ಹುಟ್ಟಿದ
ಲಿಂಗವೆಂಬ ಪತಿಯು,
ಸಹೋದರ ಸಂಬಂಧದಿಂದಿರ್ದರಾಗಿ,
ಶರಣಸತಿ, ಲಿಂಗಪತಿಯಾದ ಪರಿಹೊಸತು.
ಇದು ವಿಪರೀತ ನೋಡ.
ಸತಿಪತಿಗಳಿಬ್ಬರೂ ಹೆತ್ತವರ ಕೊಂದು, ತಾವು ಸತ್ತರು.
ಇವರು ಮೂವರು ಸತ್ತ ಠಾವನರಿದೆನೆಂದಡೆ ಆರಿಗೂ ಅಸದಳ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ,
ಅವರು ಸತ್ತ ಠಾವ ನೀವೇ ಬಲ್ಲಿರಿ. ॥ ೬೫ ॥

೭೫೧

ಹುಸಿಯಿಲ್ಲದ ಶಿಷ್ಯನು,
ಮರಹಿಲ್ಲದ ಗುರುವಿನ ಪಾದವ ಹಿಡಿದಡೆ,
ಕುರುಹಿಲ್ಲದ ಲಿಂಗವ ಕೊಡಲಿಕ್ಕಾಗಿ,
ತೆರಹಿಲ್ಲದಪ್ಪಲೊಡನೆ ಬರಿದಾದವು ತನುಮನಪ್ರಾಣಂಗಳೆಲ್ಲವು.
ಈ ಬೆಡಗಿನುಪದೇಶವ ಪಡೆದ ಶಿಷ್ಯನಲ್ಲಿ, ಗುರುವಡಗಿ
ಗುರು ಶಿಷ್ಯನಾಗಿ, ಎರಡೂ ಒಂದಾದ
ಪರಿಯನೇನೆಂದುಪಮಿಸುವೆನಯ್ಯ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲೊಂದಾದ ಗುರುಶಿಷ್ಯರ?.
॥ ೬೬ ॥

೮೫೨

ಚೌಪೀತದ ಮಂಟಪದಲ್ಲಿ ಗುರು ಕುಳ್ಳಿರ್ದು,
ದ್ವಿದಳಮಂಟಪದಲ್ಲಿರ್ದ ಶಿಷ್ಯಂಗೆ,
ತ್ರಿಕೂಟಸ್ಥಾನದ ಲಿಂಗವನುಪದೇಶಿಸಿ ತೋರಿ,
ಗುರುಲಿಂಗದೊಳಗಾದನು.
ಇದು ಕರಚೋದ್ಯ ನೋಡ.
ಶಿಷ್ಯ ಲಿಂಗವ ಗ್ರಹಿಸಿ ಲಿಂಗವಾದ ಪರಿಯನು
ಇತರರ್ಗರಿಯಬಹುದೇ?.
ಜ್ಞಾನೋಪದೇಶದ ಬಗೆಯನು,
ನಿಜಗುರು ಸಿದ್ಧಲಿಂಗೇಶ್ವರ ನಿಮ್ಮ ಶರಣ ಬಲ್ಲನು. ॥ ೬೭ ॥

೮೫೩

ಗುರುವೇ ನಮೋ ನಮೋ.
ಶರಣಾಗತರಕ್ಷಕ ಗುರುವೇ ನಮೋ ನಮೋ.
ಕೀಡಿ ಕುಂಡಲಿಯ ಉಪದೇಶದಂತೆ, ಎನ್ನ
ನಿಮ್ಮಂತೆ ಮಾಡಿದ ಗುರುವೇ ನಮೋ ನಮೋ.
ನಿತ್ಯ ಪರಮೈಶ್ವರ್ಯದ ಮುಕ್ತಿರಾಜ್ಯವ
ಕೊಟ್ಟ ಗುರುವೇ ನಮೋ ನಮೋ.
ಸಕಲವನೆನ್ನೊಳಗಿರಿಸಿ, ಸಕಲದೊಳಹೊರಗೆ
ಎನ್ನ ವ್ಯಾಪಕವ ಮಾಡಿ ತೋರಿದ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ಗುರುವೇ ನಮೋ ನಮೋ.
॥ ೬೮ ॥

೮೫೪

ಗುರು ಶಿಷ್ಯ ಭಾವದಿಂದ, ಪ್ರಶ್ನೋತ್ತರವಾಗಿ ಕೇಳುವಾತ ಶಿಷ್ಯನು,
ಜ್ಞಾನದ್ವಾರದಿಂದ ಹೇಳುವಾತ ಗುರು.
ಪೂರ್ವಪಕ್ಷಭೇದದಿಂದ ಶರೀರಾದಿ ಸಮಸ್ತಲೋಕವನು ತೋರಿಸಿ,
ಉತ್ತರಪಕ್ಷದರಿವಿನ ಭೇದದಿಂದ
ಶರೀರಾದಿ ವಿಶ್ವರು ಲಿಂಗದಲ್ಲಿ ಲೀಯವಾದ ನಿಲವ
ತೋರಿದ ಗುರು
ಸರ್ವಾಚಾರಜ್ಞಾನಸಾರ ಪರಾಯಣ ಶಿವನು ಭೂತಸಂಯುಕ್ತನು.

ಶಿಷ್ಯನ ಸಂಶಯವ ಛೇದಿಸಿ, ನಿಜವ ತೋರಿದ
ಆ ಗುರುವಿನ ಶ್ರೀಪಾದಕ್ಕೆ,
ನಮೋ ನಮೋ ಎಂಬೆನು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೬೯ ॥

೮೫೫

ಕಕ್ಷೆಯಲ್ಲಿ ಲಿಂಗವ ಧರಿಸಿಕೊಂಡಾತ ಭಕ್ತನು.
ಕರಸ್ಥಲದಲ್ಲಿ ಲಿಂಗವ ಧರಿಸಿಕೊಂಡಾತ ಮಾಹೇಶ್ವರನು.
ಉತ್ತಮಾಂಗದಲ್ಲಿ ಲಿಂಗವ ಧರಿಸಿಕೊಂಡಾತ ಪ್ರಸಾದಿ.
ಉರಸೆಜ್ಜೆಯಲ್ಲಿ ಲಿಂಗವ ಧರಿಸಿಕೊಂಡಾತ ಪ್ರಾಣಲಿಂಗಿ.
ಕಂಠಸೆಜ್ಜೆಯಲ್ಲಿ ಲಿಂಗವ ಧರಿಸಿಕೊಂಡಾತ ಶರಣ.
ಅಮಳೋಕ್ಯದಲ್ಲಿ ಲಿಂಗವ ಧರಿಸಿಕೊಂಡಾತ ಐಕ್ಯ.
ಇಂತೀ ಷಡುಸ್ಥಲದವರೆಲ್ಲ ಲಿಂಗವ ಧರಿಸಿ,
ನಿತ್ಯ ಲಿಂಗಾಂಗ ಸಂಬಂಧಿಗಳಾಗಿ,
ಲಿಂಗಾವಧಾನಿಗಳಾಗಿರ್ದರಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ನಿಮ್ಮ ಶರಣರು. ॥ ೭೦ ॥

೮೫೬

ಘ್ರಾಣಕ್ಕೂ ಗುದಕ್ಕೂ ಪೃಥ್ವಿ ಎಂಬ ಮಹಾಭೂತ.
ಅಲ್ಲಿ ನಿವೃತ್ತಿ ಎಂಬ ಕಲೆ ಇಹುದು.
ಆ ಕಲೆಯಲ್ಲಿ, ಕ್ರಿಯಾಶಕ್ತಿಯುಕ್ತವಾದ
ಆಚಾರಲಿಂಗವ ಧರಿಸಿದಾತ ಭಕ್ತನು.
ಜಿಹ್ವೆಗೂ ಗುಹ್ಯಕ್ಕೂ ಅಪ್ಪು ಎಂಬ ಮಹಾಭೂತ.
ಅಲ್ಲಿ ಪ್ರತಿಷ್ಠೆ ಎಂಬ ಕಲೆ ಇಹುದು.
ಆ ಕಲೆಯಲ್ಲಿ, ಜ್ಞಾನಶಕ್ತಿಯುಕ್ತವಾದ
ಗುರುಲಿಂಗವ ಧರಿಸಿದಾತ ಮಾಹೇಶ್ವರನು.
ನೇತ್ರಕ್ಕೂ ಪಾದಕ್ಕೂ ಅಗ್ನಿ ಎಂಬ ಮಹಾಭೂತ.
ಅಲ್ಲಿ ವಿದ್ಯೆ ಎಂಬ ಕಲೆ ಇಹುದು.
ಆ ಕಲೆಯಲ್ಲಿ, ಇಚ್ಛಾಶಕ್ತಿಯುಕ್ತವಾದ
ಶಿವಲಿಂಗವ ಧರಿಸಿಕೊಂಡಾತ ಪ್ರಸಾದಿ.
ತ್ವಕ್ಕಿಗೂ ಪಾಣಿಗೂ ವಾಯುವೆಂಬ ಮಹಾಭೂತ.
ಅಲ್ಲಿ ಶಾಂತಿ ಎಂಬ ಕಲೆ ಇಹುದು.

ಆ ಕಲೆಯಲ್ಲಿ, ಆದಿಶಕ್ತಿಯುಕ್ತವಾದ
ಜಂಗಮಲಿಂಗವ ಧರಿಸಿಕೊಂಡಾತ ಪ್ರಾಣಲಿಂಗಿ.
ಶ್ರೋತ್ರಕ್ಕೂ ವಾಕ್ಕಿಗೂ ಆಕಾಶ ಎಂಬ ಮಹಾಭೂತ.
ಅಲ್ಲಿ ಶಾಂತ್ಯತೀತ ಎಂಬ ಕಲೆ ಇಹುದು.
ಆ ಕಲೆಯಲ್ಲಿ, ಪರಾಶಕ್ತಿಯುಕ್ತವಾದ
ಪ್ರಸಾದಲಿಂಗವ ಧರಿಸಿಕೊಂಡಾತ ಶರಣನು.
ಆತ್ಮಾಂಗಕ್ಕೆ ಮನ ಎಂಬ ಮಹಾಭೂತ.
ಅಲ್ಲಿ ಶಾಂತ್ಯತೀತೋತ್ತರ ಎಂಬ ಕಲೆ ಇಹುದು.
ಆ ಕಲೆಯಲ್ಲಿ, ಚಿಚ್ಛಕ್ತಿಯುಕ್ತವಾದ
ಮಹಾಲಿಂಗವ ಧರಿಸಿಕೊಂಡಾತ ಐಕ್ಯನು.
ಇಂತೀ ಷಡುಸ್ಥಲಭಕ್ತರು ಷಡ್ವಿಧಲಿಂಗವ ಧರಿಸಿ
ನಿರಾಳಲಿಂಗಾರ್ಚನೆಯ ಮಾಡುತ್ತಿಹರು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ನಿಮ್ಮ ಶರಣರು. ॥ ೭೧ ॥

೮೫೭

ಆಧಾರದಲ್ಲಿ ಆಚಾರಲಿಂಗವ ಧರಿಸಿದನಾಗಿ
ಆಚಾರಲಿಂಗ ಭಕ್ತನಾದನಯ್ಯ ನಿಮ್ಮ ಶರಣ.
ಸ್ವಾಧಿಷ್ಠಾನದಲ್ಲಿ ಗುರುಲಿಂಗವ ಧರಿಸಿದನಾಗಿ
ಗುರುಲಿಂಗ ಭಕ್ತನಾದನಯ್ಯ ನಿಮ್ಮ ಶರಣ.
ಮಣಿಪೂರಕದಲ್ಲಿ ಶಿವಲಿಂಗವ ಧರಿಸಿದನಾಗಿ
ಶಿವಲಿಂಗ ಭಕ್ತನಾದನಯ್ಯ ನಿಮ್ಮ ಶರಣ.
ಅನಾಹತದಲ್ಲಿ ಜಂಗಮಲಿಂಗವ ಧರಿಸಿದನಾಗಿ
ಜಂಗಮಲಿಂಗ ಭಕ್ತನಾದನಯ್ಯ ನಿಮ್ಮ ಶರಣ.
ವಿಶುದ್ಧಿಯಲ್ಲಿ ಪ್ರಸಾದಲಿಂಗವ ಧರಿಸಿದನಾಗಿ
ಪ್ರಸಾದಲಿಂಗ ಭಕ್ತನಾದನಯ್ಯ ನಿಮ್ಮ ಶರಣ.
ಆಜ್ಞೇಯದಲ್ಲಿ ಮಹಾಲಿಂಗವ ಧರಿಸಿದನಾಗಿ
ಮಹಾಲಿಂಗ ಭಕ್ತನಾದನಯ್ಯ ನಿಮ್ಮ ಶರಣ.
ಇಂತು ಷಡಾಧಾರದಲ್ಲಿ ಷಡ್ವಿಧಲಿಂಗವ
ಧರಿಸಿ ಷಡುಸ್ಥಲ ಭಕ್ತನಾದನಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ನಿಮ್ಮ ಶರಣ. ॥ ೭೨ ॥

೮೫೮

ಅಂಗೇಂದ್ರಿಯ ಕರಣ ಪರಣದಲ್ಲಿ ಲಿಂಗವ ಧರಿಸಿ
ಲಿಂಗಾಂಗಿಯಾದನಯ್ಯ ನಿಮ್ಮ ಶರಣ.
ಅದೆಂತೆಂದಡೆ:
ಘ್ರಾಣದಲ್ಲಿ ಲಿಂಗವ ಧರಿಸಿದನಾಗಿ,
ಘ್ರಾಣ ಲಿಂಗದ ಘ್ರಾಣವಾಯಿತ್ತು.
ಜಿಹ್ವೆಯಲ್ಲಿ ಲಿಂಗವ ಧರಿಸಿದನಾಗಿ,
ಜಿಹ್ವೆ ಲಿಂಗದ ಜಿಹ್ವೆಯಾಯಿತ್ತು.
ನೇತ್ರದಲ್ಲಿ ಲಿಂಗವ ಧರಿಸಿದನಾಗಿ,
ನೇತ್ರ ಲಿಂಗದ ನೇತ್ರವಾಯಿತ್ತು.
ತ್ವಕ್ಕಿನಲ್ಲಿ ಲಿಂಗವ ಧರಿಸಿದನಾಗಿ,
ತ್ವಕ್ಕು ಲಿಂಗದ ತ್ವಕ್ಕಾಯಿತ್ತು.
ಶ್ರೋತ್ರದಲ್ಲಿ ಲಿಂಗವ ಧರಿಸಿದನಾಗಿ,
ಶ್ರೋತ್ರ ಲಿಂಗದ ಶ್ರೋತ್ರವಾಯಿತ್ತು.
ಮನದಲ್ಲಿ ಲಿಂಗವ ಧರಿಸಿದನಾಗಿ,
ಮನ ಲಿಂಗದ ಮನವಾಯಿತ್ತು.
ಸರ್ವಾಂಗದಲ್ಲಿ ಲಿಂಗವ ಧರಿಸಿದನಾಗಿ,
ಸರ್ವಾಂಗಲಿಂಗವಾಯಿತ್ತು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ನಿಮ್ಮ ಶರಣಂಗೆ. ॥ ೭೩ ॥

೮೫೯

ಶ್ರೀಗುರು ಕರುಣಿಸಿ, ಅಂಗದ ಮೇಲೆ
ಲಿಂಗವ ಧರಿಸಿದ ಕಾರಣ,
ಸರ್ವಾಂಗವು ಲಿಂಗವಾಯಿತ್ತು.
ಅದೆಂತೆಂದಡೆ:
ಅಗ್ನಿಯಿಂದ ತಪ್ತವಾದ ಲೋಹದ ಪುತ್ಥಳಿಯಂತೆ,
ಒಳಗೂ ಹೊರಗೂ ಏಕವಾಗಿ ಲಿಂಗವೆ ಬೆಳಗುತಿರ್ದ ಕಾರಣ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ,
ನಿಮ್ಮ ಶರಣ ಸರ್ವಾಂಗಲಿಂಗಿಯಾದನು. ॥ ೭೪ ॥

೮೬೦

ಅಯ್ಯಾ ನಿಮ್ಮ ಶರಣರು ಕರ್ಮಕಾಯರಲ್ಲ,
ಜ್ಞಾನಕಾಯರು ನೋಡಯ್ಯ.
ಅದೇನು ಕಾರಣವೆಂದಡೆ:
ಭಕ್ತಿಕಾರಣ ಅವತರಿಸಿದರಾಗಿ.
‘ಭಕ್ತಕಾಯ ಮಮಕಾಯ’ ವೆಂದುದು ಗುರುವಚನ.
ದೇವಗೂ ಭಕ್ತಗೂ ಕಾಯ ಒಂದಾದ ಕಾರಣ,
ಕರ್ಮರಹಿತರು ನಿಮ್ಮ ಶರಣರು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೭೫ ॥

೮೬೧

ಅಯ್ಯಾ ಜಡೆಯೆಡೆಯಲ್ಲಿ ಗಂಗೆಯನೇಕೆ ಧರಿಸಿದೆ?.
ಕೆಲದಲ್ಲಿ ಚಂದ್ರಕಲೆಯನೇಕೆ ಸೂಡಿದೆ?.
ತ್ರಿಶೂಲ ಡಮರುಗವನೇಕೆ ಹಿಡಿದೆ?.
ವೃಷಭವಾಹನವೇಕೆ ಹೇಳ?.
ಉಮೆಯ ತೊಡೆಯ ಮೇಲೇಕೇರಿಸಿದೆ?.
ನಡು ನೊಸಲಲ್ಲಿ ಕಿಡಿಗಣ್ಣನೇಕೆ ತಾಳಿದೆ?.
ವರದಾಭಯ ಹಸ್ತದಿಂದ ಮೃಡನೆಂಬ ಹೆಸರು ಬಂದಿತೆಂದು,
ನಿನ್ನ ಬೆಡಗಿನ ಲೀಲೆಯ ಕಂಡು,
ಭಕ್ತಿ ಕಂಪಿತನೆಂದರಿದೆನು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೭೬ ॥

೮೬೨

ನಿರಾಳದಿಂದ ಸಹಜವಾಯಿತ್ತು.
ಸಹಜದಿಂದ ಸೃಷ್ಟಿಯಾಯಿತ್ತು.
ಸೃಷ್ಟಿಯಿಂದ ಸಂಸಾರವಾಯಿತ್ತು.
ಸಂಸಾರದಿಂದ ಅಜ್ಞಾನವಾಯಿತ್ತು.
ಅಜ್ಞಾನದಿಂದ ಬಳಲುವ ಜೀವರ,
ಬಳಲಿಕೆಯ ತೊಲಗಿಸಲು ಜ್ಞಾನವಾಯಿತ್ತು.
ಜ್ಞಾನದಿಂದಲಾಯಿತ್ತು ಗುರುಕರುಣ.
ಗುರುಕರುಣದಿಂದಲಾಯಿತ್ತು ಸುಮನ.
ಸುಮನದಿಂದಲಾಯಿತ್ತು ಶಿವಧ್ಯಾನ.

ಶಿವಧ್ಯಾನದಿಂದಲಾಯಿತ್ತು ನಿರ್ದೇಹ.
ನಿರ್ದೇಹದಿಂದಲಾಯಿತ್ತು ಸಾಯುಜ್ಯ.
ಸಾಯುಜ್ಯದಿಂದಲಾಯಿತ್ತು ಸರ್ವಶೂನ್ಯ.
ಆ ಸರ್ವಶೂನ್ಯದಲ್ಲೊಡಗೂಡಿ ನಿಂದಾತಂಗೆ,
ಮರಳಿ ಜನ್ಮ ಉಂಟೆ ಹೇಳಾ?
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೭೭ ॥

## ವಿಭೂತಿಸ್ಥಲ

೮೬೩

ಏಳುಜನ್ಮದಲ್ಲಿ ಮಾಡಿದ ಪಾಪ,
ಎಂತು ಕೆಡುವುದೆಂದು ಚಿಂತಿಸಬೇಡ.
ಭಾಳದಲ್ಲಿ ಭಸಿತವನಿಟ್ಟು,
ಲಾಲನೆಯಿಂದ ಭಾಳಲೋಚನನ ನೋಡಿದಾಕ್ಷಣ,
ಏಳುಜನ್ಮದ ಪಾಪಂಗಳು ಹರಿದು ಹೋಹವು ನೋಡಿರಣ್ಣ.
ಕೀಳು ಮೇಲಹನು. ಮೇಲೆ ಶಿವಲೋಕವಹುದು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಸನ್ನಿಧಿಯಲ್ಲಿ
ಸುಖವಹುದು ಕೇಳಿರಣ್ಣಾ. ॥ ೭೮ ॥

೮೬೪

ಶ್ರೀ ವಿಭೂತಿಯನೊಲಿದು ಧರಿಸಲು,
ಸಕಲದುರಿತವ ನಿವಾರಣವ ಮಾಡಿ,
ಘನಸುಖವ ಕೊಡುವುದು ನೋಡ.
ಪ್ರಣವದ ಬೆಳಗು, ಪಂಚಾಕ್ಷರಿಯ ಕಳೆ,
ಪರಮಸಂಗಚ್ಛವಿ ಶ್ರೀವಿಭೂತಿ ನೋಡ.
ಶಾಂತಿಯ ನೆಲೆವನೆ, ಸರ್ವರಕ್ಷೆಯ ತವರೆನಿಸಿ,
ಸಮಸ್ತ ಕಾಮಿತ ಸುಖವೀವುದು ಶ್ರೀವಿಭೂತಿ ನೋಡ.
ಭೂತ ಪ್ರೇತ ಪಿಶಾಚ ಬ್ರಹ್ಮರಾಕ್ಷಸ ಅಪಸ್ಮಾರ ಬಾಧೆಯ ಬಿಡಿಸಿ
ನಿಜಸುಖವಿತ್ತು ಸಲಹುವುದು ಶ್ರೀ ವಿಭೂತಿ ನೋಡ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೇ
ತಾನಾದ ವಿಭೂತಿ ನೋಡ. ॥ ೭೯ ॥

೮೬೫

ಮರುಳು ಮಾಯೆಯ ಹುರುಳಗೆಡಿಸಿ,
ಅಂತಕನ ಹಲ್ಲ ಕಿತ್ತು,
ವಿಧಿಲಿಖಿತವ ತೊಡೆವುದು ವಿಭೂತಿ.
ಪರಮಜ್ಞಾನದ ಸಿರಿಯನಿತ್ತು,
ಭವವ ಪರಿವುದು ವಿಭೂತಿ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ
ನಿಜಪದದಲ್ಲಿರಿಸುವುದು, ವಿಭೂತಿಯಯ್ಯ. ॥ ೮೦ ॥

೮೬೬

ಮೂರ್ಖನಾಗಲಿ, ಪಂಡಿತನಾಗಲಿ,
ಬ್ರಹ್ಮಚಾರಿಯಾಗಲಿ, ಗೃಹಸ್ಥನಾಗಲಿ,
ವಾನಪ್ರಸ್ಥನಾಗಲಿ, ಯತಿಯಾಗಲಿ,
ಶ್ರೀ ವಿಭೂತಿಯನೊಲಿದು ಧರಿಸಿದಾತನೆ ಧನ್ಯನು.
ಆತನೇ ಸರ್ವಾಪತ್ತುಗಳ ತೊಲಗ ನೂಂಕಿ,
ಸಮಸ್ತ ಪಾತಕೋಪಪಾತಕಂಗಳು ತೊಲಗಿ,
ಶುದ್ಧಾತ್ಮನಹನಯ್ಯ.
"ತ್ರಿಪುಂಡ್ರಂ ಭಸ್ಮನಾ ಕರೋತಿ ಯೋ ವಿದ್ವಾನ್
ಬ್ರಹ್ಮಚಾರೀ ಗೃಹಸ್ಥೋ ವಾನಪ್ರಸ್ಥೋ ವಿದ್ವಾನ್
ಬ್ರಹ್ಮಚಾರೀ ಗೃಹಸ್ಥೋ ವಾನಪ್ರಸ್ಥೋ ಯತಿರ್ವಾ
ಸಮಸ್ತಪಾತಕೋಪಾತಕೇಭ್ಯಃ ಪೂತೋ ಭವತಿ"
ಎಂದು ಶ್ರುತಿ ಸಾರುತ್ತಿರೆ
ಇಂತಪ್ಪ ಶ್ರೀ ವಿಭೂತಿಯನರಿದು ಧರಿಸಿ,
ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ
ಕೂಡಿರಣ್ಣಾ. ॥ ೮೧ ॥

೮೬೭

ಭೂಮಿ ಜಲ ಅಗ್ನಿ ಮರುತ ಆಕಾಶವೆಂಬವೆಲ್ಲ,
ಶ್ರೀವಿಭೂತಿಮಯವಾಗಿ ತೋರುತ್ತಿವೆ, ಶಿವ ಶಿವಾ.
ಮನ ಚಕ್ಷುರಾದಿ ಇಂದ್ರಿಯಂಗಳೆಲ್ಲವು

ಶ್ರೀ ವಿಭೂತಿಮಯವಾಗಿ ತೋರುತ್ತಿವೆ, ಶಿವ ಶಿವಾ.
ಚಂದ್ರ ಆದಿತ್ಯ ಸರ್ವದೇವತಾರೂಪವೆಲ್ಲ
ಶ್ರೀ ವಿಭೂತಿಮಯವಾಗಿ ತೋರುತ್ತಿವೆ, ಶಿವ ಶಿವಾ.
ಈ ಪರಿಯಿಂದ ತೋರಿ, ವ್ಯಾಪಕವಾಗಿ ಬೆಳಗುವ,
ಪರಂಜ್ಯೋತಿ ಸ್ವರೂಪ ವಿಭೂತಿಯೆಂದು,
ಒಲಿದು ಧರಿಸಿದವನೇ ಜೀವನ್ಮುಕ್ತನಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೮೨ ॥

೮೬೮

ಅಖಿಳಾಗಮ ಶ್ರುತಿ ಪುರಾಣಂಗಳು
ವಿಭೂತಿಯನೊಲಿದು ಧರಿಸೆಂದು ಹೇಳುತ್ತಿವೆ ನೋಡ.
ಇದನರಿದರಿದು ಧರಿಸದಿಹ ನರನೆ ಪತಿತನೆಂದು
ಸಾರುತ್ತಿವೆ ವೇದಾಗಮಂಗಳು ನೋಡ.
ಪಂಚಾಕ್ಷರಿಯ ಮಂತ್ರ ಸಹಿತ
ವಿಭೂತಿಯನು, ಲಲಾಟಾದಿ ಸಮಸ್ತ
ಸ್ಥಾನಂಗಳಲ್ಲಿ ಅಲಂಕರಿಸಲು,
ಆತನ ಲಲಾಟದ ದುರ್ಲಿಖಿತವ ತೊಡೆದು,
ನಿಜಸುಖವೀವುದೆಂದು ಹೇಳುತ್ತಿವೆ ಸಕಲ ಸಂಹಿತೆಗಳು.
ಇಂತಪ್ಪ ವಿಭೂತಿಯ ಧಾರಣವನುಳಿದು,
ಮೋಕ್ಷವನೆಯ್ದಿಹೆನೆಂಬುವನ ಬುದ್ಧಿ,
ವಿಷಪಾನವ ಮಾಡಿ,
ಶರೀರಕ್ಕೆ ನಿತ್ಯತ್ವವ ಪಡೆದೆಹೆನೆಂಬವನಂತೆ.
ಇದು ಕಾರಣ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ನಿಜವ ಬೆರಸುವಡೆ,
ಶ್ರೀವಿಭೂತಿಯ ಧಾರಣವೇ ಮುಖ್ಯವಯ್ಯ. ॥ ೮೩ ॥

೮೬೯

ಆದ್ಯರ ವಚನವ ಕೇಳಿ, ವೇದಾಗಮಂಗಳ ತಿಳಿದು,
ಶ್ರೀವಿಭೂತಿಯ ಧಾರಣವೆ ಮುಖ್ಯವೆಂದರಿದು ಧರಿಸಿರಣ್ಣ.
ಇಂತಿದನರಿಯದೆ,
ಶಿವದೀಕ್ಷೆಯ ಮಾಡಿದರೂ ದೀಕ್ಷೆಯ ಪಡೆದರೂ ಫಲವಿಲ್ಲ.

ಶಿವಮಂತ್ರಸ್ಮರಣೆ ತಪಯಜ್ಞಂಗಳ ಮಾಡಿದಲ್ಲಿಯೂ ಫಲವಿಲ್ಲ.
ಆತಂಗೆ ವಿದ್ಯೆಯು ದೇವತೆಗಳು ಆಗಮಜ್ಞಾನವು ಇಲ್ಲ.
'ನ ದೀಕ್ಷಾ ನ ತಪೋ ಮಂತ್ರಂ ನ ಯಜ್ಞೋ ದೇವತಾ ನ ಚ
ವಿದ್ಯಾ ನೈವಾಗಮಜ್ಞಾನಂ ಭಸ್ಮಮಾಹಾತ್ಮವರ್ಜಿತೇ'
ಎಂದುದಾಗಿ:
ಇದು ಕಾರಣ, ಶ್ರೀವಿಭೂತಿಯ ಮಹಾತ್ಮೆಯನರಿದು ಧರಿಸಲು,
ಸರ್ವಸಿದ್ಧಿಯಪ್ಪುದು.
ಬಳಿಕ ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೊಳಗಿಪ್ಪನು.
|| ೮೪ ||

೮೭೦

ಪರಮೇಶ್ವರನ ಪರಮೈಶ್ವರ್ಯವೆನಿಪ, ನಿತ್ಯ ನಿಜವಾದ
ವಿಭೂತಿಯನು, ಭಕ್ತಿಯಿಂದೊಲಿದು ಧರಿಸಲು,
ನಿತ್ಯರಪ್ಪರು ನೋಡಿರೇ.
ಮುನ್ನ ಜಮದಗ್ನಿ ಕಶ್ಯಪ ಅಗಸ್ತ್ಯ ಮೊದಲಾದ ಋಷಿಗಳು,
ಸಮಸ್ತ ದೇವತೆಗಳು, ಮೂರು ಮೂರು ಬಾರಿ,
ಆಯುಷ್ಯವ ಪಡದೆರೆಂದು ವೇದಗಳು ಸಾರುತ್ತಿವೆ.
'ತ್ರಿಯಾಯುಷಂ ಜಮದಗ್ನೇ : ಕಶ್ಯಪಸ್ಯ ತ್ರಿಯಾಯುಷಂ
ಅಗಸ್ತ್ಯಸ್ಯ ತ್ರಿಯಾಯುಷಂ ಯುದ್ದೇವಾನಾಂ ತ್ರಿಯಾಯುಷಂ
ತನ್ಮೇ ಅಸ್ತು ತ್ರಿಯಾಯುಷಂ' ಎಂದುವು ಶ್ರುತಿಗಳು.
ಇದನರಿದು ಧರಿಸಿರೇ,
ನಿಜಗುರುಸ್ವತಂತ್ರಸಿದ್ಧಲಿಂಗೇಶ್ವರನೆನೊಲಿಸಬಲ್ಲಡೆ. || ೮೫ ||

## ರುದ್ರಾಕ್ಷಿ ಸ್ಥಲ

೮೭೧

ಸತ್ಯಸದಾಚಾರವಂತರು, ಮುನ್ನ ರುದ್ರಾಕ್ಷಿಯ
ಧರಿಸಿ, ಮುಕ್ತಿಯನೈದಿದರು ನೋಡಯ್ಯ.
ಇದನರಿದು,
ಮುಕ್ತಿಯಬೀಜವೆನಿಪ ರುದ್ರಾಕ್ಷಿಯ ಧರಿಸಿದರಯ್ಯ.
ದರ್ಶನ ಸ್ಪರ್ಷನದಿಂದ ಪಾಪನಾಶನ ಕಾಣೆರಯ್ಯ.
ರುದ್ರನ ಐದುಮುಖವಾದ ರುದ್ರಾಕ್ಷಿ,
ರುದ್ರನ ಮುದ್ರೆಯೆಂದರಿದು ಧರಿಸಿದರಯ್ಯ.

ರುದ್ರಾಕ್ಷಿಯ ಧರಿಸಿದವರು ರುದ್ರರಪ್ಪರು, ತಪ್ಪದು ಕಾಣಿರಯ್ಯ.
ಇಂತಿದನರಿದು,
ಶಿಖೆ ಮಸ್ತಕ ಕಂಠ ಕರ್ಣ ಹೃದಯ ಬಾಹು ಮಣಿಬಂಧ[ಗಳಲ್ಲಿ]
ಅಕ್ಷಮಾಲೆಯಾಗಿ ಧರಿಸಿದವರೆ ರುದ್ರರು.
ಆ ರುದ್ರಾಕ್ಷಿಯ ಧರಿಸಿಹ ರುದ್ರರ,
ದರ್ಶನ ಸ್ಪರ್ಶನ ಸಂಭಾಷಣೆಯಿಂದ ಸರ್ವಪಾಪಕ್ಷಯವಾಗಿ,
ಕೇವಲ ಮುಕ್ತಿಯಪ್ಪುದು ತಪ್ಪದಯ್ಯ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಬೆರಸಬೇಕಾದಡೆ,
ಶ್ರೀರುದ್ರಾಕ್ಷಿಯನೊಲಿದು ಧರಿಸಿರಯ್ಯ. || ೮[illegible] ||

೮೭೨

ಬ್ರಹ್ಮಕಲ್ಪಿತವಾದ ತ್ರಿಪುರನುರುಹಬೇಕೆಂದು,
ಪರಮೇಶ್ವರನು ತ್ರಿಯಕ್ಷಿಯಿಂದ ನೋಡುತ್ತಿರಲು,
ಆ ಮೂರು ನೇತ್ರಂಗಳಿಂದ ಉದಕದ ಬಿಂದುಗಳು,
ಭೂಮಿಯ ಮೇಲೆ ಪತನವಾಗಲು,
ಸರ್ವಾನುಗ್ರಹಾರ್ಥವಾಗಿ, ರುದ್ರಾಕ್ಷಿಯ ವೃಕ್ಷಂಗಳು
ಹುಟ್ಟಿದವಂದು ನೋಡ.
ಆ ರುದ್ರಾಕ್ಷಿಯ ವೃಕ್ಷದ ಬೀಜಂಗಳ ಧರಿಸಿದವರು, ಸ್ಮರಿಸಿದವರು,
ಕೊಂಡಾಡಿದವರು, ರುದ್ರಾಕ್ಷಿಯಲ್ಲಿ ಜಪವ ಮಾಡಿದವರು,
ಕೈವಲ್ಯವನಿತೆಗೆ ವಲ್ಲಭರಾಗಿ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ
ಕೂಡಿ ಸುಖದಿಹರು ನೋಡಾ. || ೮೭ ||

೮೭೩

ಬ್ರಾಹ್ಮಣ ಮೂರ್ಖ ಪಂಡಿತ ಬ್ರಹ್ಮಚಾರಿ ಗೃಹಸ್ಥ
ವಾನಪ್ರಸ್ಥ ಯತಿಯಾದಡಾಗಲಿ,
ಶ್ರೀರುದ್ರಾಕ್ಷಿಯನೊಲಿದು ಧರಿಸುವುದು ಕಾಣಿರಣ್ಣ.
ಮತ್ತೆ, ಜಪಕಾಲದಲ್ಲಿ, ತಪಕಾಲದಲ್ಲಿ, ದೇವಪೂಜೆಯಲ್ಲಿ,
ಶ್ರೀರುದ್ರಾಕ್ಷಿಯನೊಲಿದು ಧರಿಸುವುದು ಕಾಣಿರಣ್ಣ.
ಈ ಶ್ರೀಮಹಾ ರುದ್ರಾಕ್ಷಿಯನೊಲಿದು ಧರಿಸಿದ ಮಹಾತ್ಮನು,
ಹೆಜ್ಜೆ ಹೆಜ್ಜೆಗೆ ಅಶ್ವಮೇಧಶತಯಾಗದ ಫಲವ ಪಡೆದು,

ಬಳಿಕ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಕೂಡಿ,
ಸುಖದಿಹನು ಕಾಣಿರಣ್ಣ. ॥ ೭೮ ॥

## ಭಕ್ತಸ್ಥಲ

೮೭೪

ಆಚಾರವೆ ಭಕ್ತಂಗೆ ಅಲಂಕಾರವು.
ಆಚಾರವೆ ಭಕ್ತಂಗೆ ಸರ್ವಪೂಜ್ಯವು.
ಇಂತೀ ಆಚಾರವುಳ್ಳವನೆ ಭಕ್ತನು.
ಆಚಾರವುಳ್ಳವನೆ ಯುಕ್ತನು. ಆಚಾರವುಳ್ಳವನೆ ಮುಕ್ತನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೭೯ ॥

೮೭೫

ಸದಾಚಾರವನಾಚರಿಸುವ ಸತ್ಕ್ರಿಯಾಚಾರ ಸಂಪನ್ನಂಗೆ,
ಸಮ್ಯಗ್‍ಜ್ಞಾನ ಉದಯವಹುದು.
ಆ ಸಮ್ಯಗ್‍ಜ್ಞಾನೋದಯದಿಂದ, ತನ್ನ ತಾನರಿದು,
ತಾನೆ ಶಿವನಲ್ಲದೆ, ಸ್ವತಂತ್ರಸಿದ್ಧಲಿಂಗೇಶ್ವರನ ನಿಜವನೆಯ್ದುವದೆ,
ಸದಾಚಾರವೇ ಮುಖ್ಯವಯ್ಯ. ॥ ೮೦ ॥

೮೭೬

ಜ್ಞಾನವಿಲ್ಲದವಂಗೆ ಆಚಾರವಿಲ್ಲ.
ಆಚಾರವಿಲ್ಲದವಂಗೆ ಭಕ್ತಿಯಿಲ್ಲ.
ಭಕ್ತಿಯಿಲ್ಲದವಂಗೆ ವಿರಕ್ತಿಯಿಲ್ಲ.
ವಿರಕ್ತಿಯಿಲ್ಲದವಂಗೆ ಮುಕ್ತಿಯಿಲ್ಲ.
ಇದು ಕಾರಣ,
ಜ್ಞಾನ ವಿಚಾರ ಭಕ್ತಿ ವಿರಕ್ತಿ ಉಳ್ಳವಂಗೆ ಮುಕ್ತಿಯುಂಟು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೮೧ ॥

೮೭೭

ಕಣ್ಣು ಕಾಲು ಎರಡುಳ್ಳವ ದೂರ ಎಯ್ದುವನಲ್ಲದೆ,
ಕಣ್ಣು ಕಾಲೆರಡರೊಳಗೊಂದಿಲ್ಲದವನು,

ದೂರವೈಯ್ದಲರಿಯನೆಂಬಂತೆ,
ಜ್ಞಾನರಹಿತನಾಗಿ ಕ್ರೀಯನೆಷ್ಟು ಮಾಡಿವಡೇನು?
ಅದು ಕಣ್ಣಿಲ್ಲದವನ ನಡೆಯಂತೆ.
ಕ್ರೀರಹಿತವಾಗಿ ಜ್ಞಾನಿಯಾದಡೇನು?
ಅದು ಕಾಲಿಲ್ಲದವನ ಇರವಿನಂತೆ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ
ನಿಜವ ಬೆರಸುವಡೆ,
ಜ್ಞಾನವೂ ಕ್ರೀಯೂ ಎರಡೂ ಬೇಕು. ॥ ೯೨ ॥

೮೭೮

ಆಚಾರವಿಲ್ಲದವರಿಗೆ ಜ್ಞಾನವಿಲ್ಲ.
ಜ್ಞಾನವಿಲ್ಲದವರಿಗೆ ಭಾವಶುದ್ಧವಿಲ್ಲ.
ಭಾವಶುದ್ಧವಿಲ್ಲದವರಿಗೆ ಧ್ಯಾನವಿಲ್ಲ.
ಧ್ಯಾನಶುದ್ಧವಿಲ್ಲದವರಿಗೆ ಪ್ರಸಾದವಿಲ್ಲ.
ಪ್ರಸಾದವಿಲ್ಲದವರಿಗೆ ಮುಕ್ತಿಯಿಲ್ಲ.
ಇದು ಕಾರಣ,
ಆಚಾರ ಜ್ಞಾನ ಭಾವ ಧ್ಯಾನ ಉಳ್ಳವರಿಗೆ ಪ್ರಸಾದವುಂಟು.
ಪ್ರಸಾದ ಉಳ್ಳವರಿಗೆ ಮುಕ್ತಿಯುಂಟು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೯೩ ॥

೮೭೯

ಭಕ್ತಿಯ ಭಾವನಿಷ್ಠೆ ನಿಬ್ಬೆರಸಲಾಗಿ
ಶಿವನ ತನ್ನ ವಶವ ಮಾಡಿತ್ತು ಭಕ್ತಿ.
ಶಿವನ ನಡೆಸಿತ್ತು ಭಕ್ತಿ. ನುಡಿಸಿತ್ತು ಭಕ್ತಿ.
ಶಿವನನುಣಿಸಿ ಉಡಿಸಿ ತೊಡಿಸಿತ್ತು ಭಕ್ತಿ.
ಶಿವನ ಹಾಡಿಸಿ, ಕುಣಿದಾಡಿಸಿತ್ತು ಭಕ್ತಿ.
ಇಂತಲ್ಲದೆ ವಿರಕ್ತಿಯಿಲ್ಲ. ಜ್ಞಾನವಿಲ್ಲ.
ಇದು ಕಾರಣ,
ಭಕ್ತಿಯೇ ಮುಕ್ತಿಯ ಜನನಿ, ತಾನೆ ಬೇರಿಲ್ಲ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ನಿಜವನೆಯ್ದುವಡೆ,
ಭಕ್ತಿಯಿಂದಲ್ಲದಾಗದು. ॥ ೯೪ ॥

೮೮೦

ರೂಪು ಕುರೂಪು ವಿಕಾರಂಗಳು
ಮುಕುರವ ನೋಡುವರ ಗುಣವಲ್ಲದೆ
ಮುಕುರಕ್ಕೆ ವಿಕಾರಗುಣವುಂಟೆ?.
ಪಾಪಿಗಳು ಕೋಪಿಗಳು ಪರಿಭ್ರಷ್ಟರು
ಅಸತ್ಯರು ಅಜ್ಞಾನಿಗಳು
ಸಂಸಾರಿಗಳು ದುರ್ವಿಕಾರಿಗಳು ಲಂಡರು ಕೊಂಡೆಯರು
ಕುಚಿತ್ತರು ಅನ್ಯಾಯಕಾರಿಗಳು
ತಮ್ಮ ತಮ್ಮ ಗುಣದಂತೆ ತಿಳಿದು ನೋಡಿ ಮಾಡಿದರು
ಬಿತ್ತಿದ ಬೆಳೆಯನುಂಬಂತೆ.
ನಿಂದಿಸಿದವರು ಪಾಪದ ಫಲವನನುಭವಿಸುವರು.
ಸ್ತುತಿಸಿದವರು ಪುಣ್ಯದ ಫಲವನನುಭವಿಸುವರು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ, ನಿಮ್ಮ ಸತ್ಯಶರಣ
ನಿತ್ಯಮುಕ್ತಂಗೆ, ನಿಂದೆ ಸ್ತುತಿಯೆಂಬೆರಡೂ ಇಲ್ಲ. ॥ ೯೫ ॥

೮೮೧

ಗುರುವ ನಿಂದಿಸಿದವನು ಲಿಂಗವ ನಿಂದಿಸಿದವ.
ಲಿಂಗವ ನಿಂದಿಸಿದವನು ಜಂಗಮವ ನಿಂದಿಸಿದವ.
ಜಂಗಮವ ನಿಂದಿಸಿದವನು ಲಿಂಗವ ನಿಂದಿಸಿದವ.
ಗುರುವ ನಿಂದಿಸಿದವನು ಜಂಗಮವ ನಿಂದಿಸಿದವ.
ಜಂಗಮವ ನಿಂದಿಸಿವನು ಲಿಂಗವ ನಿಂದಿಸಿದವ.
ಗುರುವ ನಿಂದಿಸಿದವ.
ಪರವಸ್ತುವೊಂದೇ ಗುರು ಲಿಂಗ ಜಂಗಮವೆಂಬ
ನಾಮ ಪಡೆಯಿತ್ತೆಂದಡೆ ಬೇರಾಗಬಲ್ಲುದೆ?
ಈ ಮರ್ಮವನರಿಯದವಂಗೆ ಗುರು ಲಿಂಗ ಜಂಗಮವಿಲ್ಲವಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೯೬ ॥

೮೮೨

ಭಕ್ತಿ ಜ್ಞಾನ ವೈರಾಗ್ಯದಿಂದಲ್ಲದೆ ಮುಕ್ತಿಯನೈದಬಾರದು.
ಭಕ್ತಿ ಜ್ಞಾನ ವೈರಾಗ್ಯವೇ ಮುಕ್ತಿಮಾರ್ಗಕ್ಕೆ ತ್ರಿವಿಧ ಸೋಪಾನ.
ಭಕ್ತಿ ಜ್ಞಾನ ವೈರಾಗ್ಯವಿಲ್ಲದೆ ತ್ರಿಪದವ ದಾಂಟಬಾರದು.

ಭಕ್ತಿ ಜ್ಞಾನ ವೈರಾಗ್ಯವಾವುದೆಂದಡೆ:
ಗುರು ಲಿಂಗ ಜಂಗಮದಲ್ಲಿ
ತನುವಂಚನೆ ಮನವಂಚನೆ ಧನವಂಚನೆಯಿಲ್ಲದೆ,
ತ್ರಿವಿಧವನೂ ವಿಶ್ವಾಸದೊಡಗೂಡಿ ಕೊಡುವುದೇ ಭಕ್ತಿ.
ತನ್ನ ಸ್ವರೂಪವನರಿದು ಶಿವಸ್ವರೂಪವನರಿದು
ಶಿವನ ತನ್ನ ಐಕ್ಯವನರಿವುದೇ ಜ್ಞಾನ.
ಮಾಯಾಪ್ರಪಂಚು ಮಿಥ್ಯವೆಂದರಿದು ಇಹಪರದ
ಭೋಗಂಗಳ ಹೇಯೋಪಾಯದಿಂದ ತೊಲಗಿಸುವುದೇ ವೈರಾಗ್ಯ.
ಇದು ಕಾರಣ,
ಭಕ್ತಿ ಜ್ಞಾನ ವೈರಾಗ್ಯ ಉಳ್ಳವನೇ ಸದ್ಯೋನ್ಮುಕ್ತನಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೯೭ ॥

೮೮೩

ಭಕ್ತಂಗೆ ವ್ರತವಾರರಲ್ಲಿ ತದ್ಗತವಾಗಿಹುದೆ ಭಕ್ತಿ.
ಅದೆಂತೆಂದಡೆ
ಗುರುವೇ ಶಿವನೆಂದರಿದು, ಗುರುವಾಜ್ಞೆಯ
ಪಾಲಿಸುವುದೇ ಗುರುವ್ರತ.
ಗುರುಮುಖದಲ್ಲಿ ಬಂದ ಲಿಂಗದ ಪೂಜೆಯಲ್ಲಿ, ನಿಯತಾತ್ಮನಾಗಿ
ಭಾವ ಸಮೇತವಾದುದು ಲಿಂಗವ್ರತ.
ಜಂಗಮವೇ ಮಹಾಲಿಂಗವೆಂದರಿದು, ಪೂಜಾದಿ ಕ್ರಿಯೆಯಿಂದ
ಧನವನರ್ಪಿಸುವುದೇ ಚರವ್ರತ.
ಗುರು ಲಿಂಗ ಜಂಗಮದ ಪ್ರಸಾದ ಸೇವನಾನುಭವವೇ
ಪ್ರಸಾದವ್ರತ.
ಲೋಕಪಾವನವಾದ ಶ್ರೀಗುರುಪಾದಾಂಬು[ಜ]ವ,
ಸ್ನಾನಪಾನಾದಿಗಳಿಂದಾಚರಿಸುವುದೇ ಪಾದೋದಕವ್ರತ.
ಗುರು ಲಿಂಗ ಜಂಗಮ ಪಾದೋದಕ ಪ್ರಸಾದದಲ್ಲಿ
ತಲ್ಲೀನವಾದ ಭಕ್ತಿಯೇ ಭಾಕ್ತಿಕವ್ರತ.
ಇಂತೀ ಷಡ್ವಿಧ ವ್ರತವನರಿದಾಚರಿಸುತ್ತಿರ್ಪಾತನೇ ಸದ್ಭಕ್ತನಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೯೮ ॥

೮೮೪

ಗುರುವನರಿದು ಗುರುಭಕ್ತಿಯ ಮಾಡಿ,
ಲಿಂಗವನರಿದು ಲಿಂಗಭಕ್ತಿಯ ಮಾಡಿ,

ಜಂಗಮವನರಿದು ಜಂಗಮಭಕ್ತಿಯ ಮಾಡಿ,
ತ್ರಿವಿಧವನು ಒಂದೆಂದು ಕಂಡು,
ತ್ರಿವಿಧ ಭಕ್ತಿಸಂಪನ್ನರಾದವರ ಭಕ್ತರೆಂಬೆನು.
ಅಲ್ಲದವರ ಉದರ ಪೋಷಕರೆಂಬೆನು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೯೯ ॥

೭೭೫

ವಾಹನವನೇರುವಾಗ ದಾರವ ಹಿಡಿದು ನಡೆಸಲು
ವಾಹಕನಿಚ್ಛೆಯಲ್ಲಿ ನಡೆವುದು ವಾಹನ.
ಹಾಗೆ ದೇಹಧರ್ಮದಿಚ್ಛೆಯಲ್ಲಿ ಹೋಗದೆ
ತನ್ನ ವಶಕ್ಕೆ ತಂದು ನಡೆಸಬೇಕು ಭಕ್ತನಾದಡೆ.
ಅಂತಲ್ಲದೆ
ದೇಹಧರ್ಮ ತನ್ನಿಚ್ಛೆಗೆ ಬಾರದೆಂಬವ,
ದೇಹಭಾರವ ಹೊತ್ತು ತೊಳಲುವ ಭೂಭಾರಕನಲ್ಲದೆ,
ಆತ ಭಕ್ತನಲ್ಲ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೦೦ ॥

೭೭೬

ಎಲುವಿಲ್ಲದ ನಾಲಗೆಯ ಪಡೆದೆವೆಂದು,
ಹಲವು ಪರಿಯಲುಲಿವರಯ್ಯ ಮಾಯಾಮಲಿನ ದೇಹಿಗಳು.
ಜಗದೀಶನವರ ಕೆಡಹದೆ ಮಾಣ್ಬನೆ
ಅಘೋರ ಸಂಸಾರ ಕಗ್ಗೆಸರೊಳಗೆ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು, ತನ್ನಲ್ಲಿ ಭಕ್ತಿಯಿಲ್ಲದವರ?.
॥ ೧೦೧ ॥

೭೭೭

ಮಾತಿನ ಪಸರದ ವ್ಯವಹಾರದೊಳಗೆ ಸಿಕ್ಕಿ,
ನೂಕು ತಾಕುಗೊಳುತ್ತಿರ್ಪವಂಗೆ ಮಹದ ಮಾತೇಕೆ?
ಕೊರಳುದ್ದಕ್ಕೆ ಹೂಳಿಸಿಕೊಂಡು, ಮುಗಿಲುದ್ದಕ್ಕೆ
ನೆಗೆದೆಹೆನೆಂಬವನ ಹಾಗೆ.
ಶಿವನ ಜೋಕೆಯನರಿಯದೇ ಮಾತನಾಡುವ ಮಾತೆಲ್ಲವು,

ಮಾತಿನಮಾಲೆಯಲ್ಲದೆ, ಅಲ್ಲಿ ನಿಜವಿಲ್ಲ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ಅವರೆಲ್ಲ ಭೂಭಾರಕರಾದರು.

॥ ೧೦೨ ॥

೮೮೮

ಗುರುವೆಂದರಿಯರು, ಲಿಂಗವೆಂದರಿಯರು, ಜಂಗಮವೆಂದರಿಯರು.
ಹಿಂದೊಂದನಾಡುವರು, ಮುಂದೊಂದನಾಡುವರು.
ಮತ್ತೆ,
ಸಂಬದೆ, ಭಕ್ತರಂತೆ, ಪಾದೋದಕ ಪ್ರಸಾದಕ್ಕೆ ಕೈಯ್ಯನಾನುವರು.
ಈಶ ವೇಷವ ತೊಟ್ಟ, ವೇಷಧಾರಕರು, ತಾವೆ, ಭಕ್ತರೆಂಬರು.
ಇವರು, ಮಾಯಾಪಾಶದಲ್ಲಿ, ಫಾಸಿಯಾಗದೆ ಮಾಣ್ಬರೇ?
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನನರಿಯದ ಜಾತ್ಯಂಧಕರು.

॥ ೧೦೩ ॥

೮೮೯

ಆವ ವೇಷವ ಧರಿಸಿದಡೇನು?
ದೇಹವೆಂಬ ಹುತ್ತಿನಲ್ಲಿ, ಹುಸಿ ಎಂಬ ಸರ್ಪ,
ಸಜ್ಜನರನಟ್ಟಿ ಕಡಿದಡೆ,
ವಿಷದ ಮೂರ್ಛೆಯಿಂದ ಬಳಲುತ್ತಿರ್ದರಯ್ಯ ಸಜ್ಜನರು.
ಶಿವಜ್ಞಾನವೆಂಬ ನಿರ್ವಿಷವ ಕೊಂಡು,
ಓಂನಮಃಶಿವಾಯ ಎಂಬ ಮಂತ್ರವ ಜಪಿಸಿ,
ವಿಷವಂ ಪರಿಹರಿಸಿಕೊಂಡರಯ್ಯ.
ಸರ್ಪ ಕಚ್ಚಿ ಏರಿ ಬಾಯಲ್ಲಿ ಹೋಯಿತೆಂಬಂತೆ,
ನಿಂದಕರಿಗೆ ನಿಂದಿಸಿತೆ ಬಂದಿತ್ತಲ್ಲದೆ,
ಅಲ್ಲಿ ತಮಗೊಂದಾಗಿಲ್ಲ.
ಸಜ್ಜನರು ನೊಂದ ನೋವು ಸುಮ್ಮನೆ ಹೋಪುದೆ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ, ಅವರಲ್ಲಿ ನೀವಿಪ್ಪಿರಾಗಿ?.

॥ ೧೦೪ ॥

೮೯೦

ತಪವೆತ್ತ? ಹೆರರ ಕೇಡಿಂಗೆ ಬಗೆವುದೆತ್ತ?
ಜಪವೆತ್ತ? ಶರಣರ ಮೇಲೆ ಅನೃತವ ನುಡಿವುದೆತ್ತ?

ಪಂಚಾಚಾರವೆತ್ತ? ಪಾತಕಕ್ಕೆ ಮನಬಗೆವುದೆತ್ತ?
ಇಂತೀ ಹೊರಬಳಕೆಯ,
ಲೋಕರಂಜನೆಯಲ್ಲಿರ್ಪವರಿಗೆ ನಾನಂಜುವೆ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ, ನೀನಂಜಿ, ದೂರದಲೋಡುವೆ.
॥ ೧೦೫ ॥

೮೯೧

ಆಚಾರವನನಾಚಾರವ ಮಾಡಿ ನುಡಿವರು.
ಅನಾಚಾರವನಾಚಾರವ ಮಾಡಿ ನುಡಿವರು.
ಸತ್ಯವನಸತ್ಯವ ಮಾಡಿ ನುಡಿವರು.
ಅಸತ್ಯವ ಸತ್ಯವ ಮಾಡಿ ನುಡಿವರು.
ವಿಷವ ಅಮೃತವೆಂಬರು. ಅಮೃತವ ವಿಷವೆಂಬರು.
ಸಹಜವನರಿಯದ ಅಸಹಜರಿಗೆ,
ಶಿವನೊಲಿಯೆಂದಡೆ ಎಂತೊಲಿವನಯ್ಯ?
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನೀ ಮಾಡಿದ ಮಾಯವ ನೋಡಿ, ನಾನು ಬೆರಗಾದೆನು.
॥ ೧೦೬ ॥

೮೯೨

ಹಲವು ಮಾತಕಲಿತ ಉಲಿಗಿತಿ ಸೂಳೆಯ ಹಾಂಗೆ,
ಉಲಿವರ ಕಂಡಡೆ ನಿಃಕಪಟಿ ಒಳ್ಳಿದನೆಂಬರು.
ಪಾಪಕ್ಕಂಜಿ ಸತ್ಯವನ್ನಾಡಿದಡೆ ಈತನ
ಒಳಗೆಣಿಸರು ಅತಿ ಕಪಟಿಯೆಂಬರು.
ದುರ್ಜನರ ಮುಂದೆ ಸಜ್ಜನಿಕೆ ಮೆರವುದೆ?.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನೀ ಮಾಡಿದ ಮಾಹೇಂದ್ರಜಾಲದ ಮಾಯಕೆ
ನಾನು ಬೆರಗಾದೆನು. ॥ ೧೦೭ ॥

೮೯೩

ನಿಚ್ಚ ನಿಚ್ಚ ಲಿಂಗಪೂಜೆಯ ಮಾಡಿ,
ನಿಚ್ಚ ನಿಚ್ಚ ಜಂಗಮಕ್ಕೆ ಶರಣೆಂದು, ಜಂಗಮ ಪೂಜೆಯ ಮಾಡಿ,

ನಿಚ್ಚ ನಿಚ್ಚ ಪಾದೋದಕ ಪ್ರಸಾದವ ಕೊಂಡು,
ಮತ್ತೆ, ಆ ಜಂಗಮವ ಧಿಕ್ಕರಿಸಿ ನುಡಿದು,
ಹುಸಿಯಟಮಟವನಾರೋಪಿಸಿ,
ಜಂಗಮವ ಕೈಗೆ, ನಾಲಗೆಗೆ ಶಿಕ್ಷೆಯ ಮಾಡಬೇಕೆಂಬವರಿಗೆ
ಗುರುವುಂಟೆ? ಲಿಂಗವುಂಟೆ? ಜಂಗಮವುಂಟೆ?
ಪಾದೋದಕ ಪ್ರಸಾದವುಂಟೆ? ಇಲ್ಲವಾಗಿ.
ಅವರಿಗೆ ಪೂಜಾಫಲ ಮುನ್ನವೆ ಇಲ್ಲವಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೦೮ ॥

೮೯೪

ನಿಚ್ಚ ಸಾವಿರ ನೋಂಪಿಯ ನೋಂತು,
ಒಂದು ದಿನ ಹಾದರವನಾಡಿದರೆ,
ಆ ನೋಂಪಿಯು ತನಗೆ ಫಲಿಸುವುದೇ ಅಯ್ಯ?.
ಹಲವು ಕಾಲ ಗುರು ಲಿಂಗ ಜಂಗಮವನರ್ಚಿಸಿ ಆರಾಧಿಸುತ್ತ,
ಒಮ್ಮೆಯಾದರು ದೂಷಣೆಯ ಮಾಡಿದಡೆ,
ಆ ಪೂಜಾಫಲ ತಮಗೆ ಸಿದ್ಧಿಸುವುದೆ? ಸಿದ್ಧಿಸದಾಗಿ.
ಅನೇಕ ಆಯಾಸದಲ್ಲಿ ಗಳಿಸಿದ ಧನವ,
ನಿಮಿಷದಲ್ಲಿ ಅರಸು ದಂಡವ ಕೊಂಡಂತಾಯಿತ್ತು ಇವರ ಭಕ್ತಿ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ನಿಮ್ಮ ಒಲವಿಲ್ಲದ ಕಾರಣ.
॥ ೧೦೯ ॥

೮೯೫

ಆರಾದರು ಆಗಲಿ,
ತಮ್ಮ ಕುಲ ಗೋತ್ರ ಜಾತಿ ಧರ್ಮ ಆಚಾರ ತಪ್ಪಿನಡೆದಡೆ,
ಅವರು ಅನಾಚಾರಿಗಳೆಂದು ಮುಖವ ನೋಡಲೊಲ್ಲರು ನೋಡ.
ಇವರಿಂದಾ ಕಡೆಯೆ ಶಿವಭಕ್ತರಾದವರು?.
ಭಕ್ತರಿಗೆ ನಡೆ ನುಡಿ ಸತ್ಯ ಶುದ್ಧ ಆಚಾರವಿರಬೇಕು.
ಅಂತಲ್ಲದೆ:
ಆಚಾರ ತಪ್ಪಿ ನಡೆದಡೆ, ನೀ ಮೆಚ್ಚೆಯೆಂದು ಅತಿಗಳೆವೆ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೧೦ ॥

೪೯೬

ಕಾಡೊಳಗಣ ಹುಲುಗಿಣಿಯ ಹಿಡಿತಂದು,
ಓಂ ನಮಃಶಿವಾಯ, ಹರಹರ ಶಿವಶಿವ
ಎಂದು ಓದಿಸಿದಡೆ ಓದದೆ?.
ನಿಚ್ಚ ನಿಚ್ಚ ನರಾರಣ್ಯದೊಳಗಿದ್ದ ಮನುಷ್ಯರ ಹಿಡಿತಂದು,
ಹಿರಿದು ಪರಿಯಲ್ಲಿ ಉಪದೇಶವ ಮಾಡಿ,
ಶಿವಮಂತ್ರೋಪದೇಶವ ಹೇಳಿದಡೆ,
ಅದ ಮರೆದು, ಕಾಳ್ನುಡಿಯ ನುಡಿವವರು,
ಹುಲುಗಿಣಿಯಿಂದ ಕಷ್ಟ ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೧೧ ॥

೪೯೭

ಜಗದ ಪ್ರಾಣಿಗಳಂತೆ ಉಲಿವವರಿಗೆ,
ಜಗದೀಶನ ಮಂತ್ರವೆಂತು ನೆಲಗೊಂಬುದಯ್ಯ?.
"ಯಥಾ ಮನಸ್ತಥಾವಚನಂ" ಎಂದುದಾಗಿ.
ಹೇಗೆ ಮನ ಹಾಗೆ ವಚನ ತಪ್ಪದು.
ಅದು ಕಾರಣ,
ಮನದಲ್ಲಿ ನಿಮ್ಮ ನೆನಹು ನೆಲೆಗೊಂಡವಂಗೆ,
ನುಡಿಯೊಡನೆ ಮಂತ್ರ ನೆಲೆಸಿಪ್ಪುದು ಸತ್ಯ. ನೀನೆ ಬಲ್ಲೆ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೧೨ ॥

೪೯೮

ಜಾಳು ಮಾತೆಂದಡೆ ನಲಿದು ನಲಿದು ನುಡಿವರು.
ಕಾಳುಗೆಲಸವೆಂದಡೆ ನಲಿದು ನಲಿದು ಮಾಡುವರು.
ಶ್ರೀಗುರು ಸೇವೆಯೆಂದಡೆ, ನಿತ್ಯ ಲಿಂಗಾರ್ಚನೆಯೆಂದಡೆ,
ಮತ್ತೆ ಪಂಚಾಕ್ಷರಿಜಪವೆಂದಡೆ, ಅಳಲುವರು, ಬಳಲುವರು.
ಇಂತಪ್ಪ ದುರುಳರಿಗೆ, ದುಃಖವೆ ಪ್ರಾಪ್ತಿಯಲ್ಲದೆ,
ನಿಜಸುಖವೆಂಬುದಿಲ್ಲ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು,
ಅವರ ಬಾರದ ಭವದಲ್ಲಿ ಬರಿಸದೆ ಮಾಣ್ಬನೆ? ॥ ೧೧೩ ॥

೮೯೯

ನಾನೆಲ್ಲಿಂದ ಬಂದೆ?
ಎನಗೆ ಈ ದೇಹ ಬಂದ ಪರಿಯಾವುದು?
ಇನ್ನು ಮುಂದೆ ಎಯ್ದುವ ಗತಿಯಾವುದು?
ಎಂಬ ನಿತ್ಯಾನಿತ್ಯವಿಚಾರ ಹುಟ್ಟದವರಿಗೆ ಎಂದೆಂದಿಗು
ಬಳಲಿಕೆ ಬಿಡದು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ,
ನೀವು ಬರಿಸಿದ ಭವಾಂತರದಲ್ಲಿ ಬರುತಿಹರಾಗಿ,
ನಾನು ಕಂಡು ಮರಗುತಿದ್ದೆನು. ॥ ೧೧೪ ॥

೯೦೦

ಕಾಯದ ಕಳವಳವ ಗೆಲಲರಿಯದವರು,
ಮಾಯಾಪಾಶದಲ್ಲಿ ಬಂಧವಡೆದ ಸಂಸಾರಿಗಳಹರಲ್ಲದೆ
ಅವರು ಜ್ಞಾನಿಗಳಾಗಲರಿಯರು.
ಅವರಿಗಿನ್ನೆಂದಿಂಗೆ ಮುಕ್ತಿಯಹುದೊ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ?. ॥ ೧೧೫ ॥

೯೦೧

ಹಾವಾಡಿಗ ಹಾವನಾಡಿಸುವಲ್ಲಿ, ತನ್ನ ಕಾಯ್ದುಕೊಂಡು,
ಹಾವನಾಡಿಸುವಂತೆ,
ಆವ ಮಾತನಾಡಿದಡೂ, ತನ್ನ ಕಾಯ್ದು ಆಡಬೇಕು.
ಅದೆಂತೆಂದಡೆ,
ತನ್ನ ವಚನವೆ ತನಗೆ ಹಗೆಯಹುದಾಗಿ.
ಅನ್ನಿಗರಿಂದ ಬಂದಿತ್ತೆನ್ನಬೇಡ.
ಅಳಿವುದು ಉಳಿವುದು ತನ್ನ ವಚನದಲ್ಲಿಯೆ ಅದೆ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ,
ಹಗೆಯು ಕೆಳೆಯು ತನ್ನ ವಚನವೇ, ಬೇರಿಲ್ಲ. ॥ ೧೧೬ ॥

೯೦೨

ಇಂದಿಗೆಂತು ನಾಳಿಂಗೆಂತೆಂದು, ಬೆಂದ ಒಡಲಿಗೆ ಚಿಂತಿಸಿ,
ಭ್ರಮೆಗೊಂಡು ಬಳಲಬೇಡ ಮರುಳೇ.

ಎಂಬತ್ತುನಾಲ್ಕುಲಕ್ಷ ಯೋನಿಯೊಳಗಾದ ಸಮಸ್ತ ಜೀವರಿಗೆ,
ಭೋಗವನೂ, ಭೋಗವಿಷಯಜ್ಞಾನವನೂ, ಕೊಟ್ಟು ಸಲಹುವ
ದೇವನು, ತನ್ನ ಸಲಹಲಾರನೆ?.
ಇದನರಿದು ಮತ್ತೇಕೆ ಚಿಂತಿಸುವೆ ಮರುಳೇ?.
ಹುಟ್ಟಿಸಿದ ದೇವನು ರಕ್ಷಿಸುವನಲ್ಲದೆ ಮಾಣನೆಂಬುದನರಿಯ?.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು,
ಕರುಣಿ ಕೃಪಾಳುವೆಂಬುದನರಿಯ ಮರುಳೇ. ॥ ೧೧೭ ॥

೬೦೩

ಸುಖ ದುಃಖ ಮೋಹದೊಡಲುಗೊಂಡು ಹುಟ್ಟಿತ್ತೀ ಜಗವೆಲ್ಲ.
ಆ ಜಗದಂತೆ ಶಿವಭಕ್ತನಾದಡೆ,
ಅದರ ಕುಂದೇನು? ತನ್ನ ಹೆಚ್ಚೇನು?.
ಜಗವು ಮಾಯೆಯಂತೆ: ಅದ ಬೇರೆ ಮಾಡೆ.
ತಾ ಶಿವನಂತೆ ಇದ್ದವನ ಇರವು ಶುದ್ಧ.
ಜಗದೀಶನವರೊಳಗೆ ತೆರಹಿಲ್ಲದಿಪ್ಪ: ಇದು ಸತ್ಯ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೧೮ ॥

೬೦೪

ಕ್ಷುತ್ತು ಪಿಪಾಸೆ ಶೋಕ ಮೋಹ ಜರೆ ಮರಣ
ಈ ಷಡೂರ್ಮಿಗಳು,
ಕೆಡುವುದಕೊಂದು ವಿವರವ ಹೇಳಿಹೆ ಕೇಳಿರಯ್ಯ.
ಅಂಗದಾಪ್ಯಾಯನವಳಿದು, ಲಿಂಗದಾಪ್ಯಾಯನ ಉಳಿದಡೆ
ಕ್ಷುತ್ತು ಕೆಟ್ಟುದು.
ಪಾದೋದಕವೆಂಬ ಪರಮಾನಂದಜಲವನೀಂಟಿದಲ್ಲಿ
ಪಿಪಾಸೆ ಕೆಟ್ಟುದು.
ಲಿಂಗಪೂಜಾಪರದಲ್ಲಿ ಗದ್ಗದುಕೆಗಳು ಪುಟ್ಟಿ
ಆನಂದಾಶ್ರುಗಳು ಸೂಸಿದಲ್ಲಿ
ಶೋಕ ಕೆಟ್ಟುದು.
ಲಿಂಗ ಮೋಹಿಯಾಗಿ, ದೇಹ ಮೋಹವ ಮರೆದಲ್ಲಿ,
ಮೋಹ ಕೆಟ್ಟುದು.
ಶಿವಲಿಂಗದಲ್ಲಿ ಕರಗಿ ಕೊರಗಿ, ಸರ್ವ ಕರಣೇಂದ್ರಿಯಂಗಳು
ಲಿಂಗದಲ್ಲಿ ಲೀಯ್ಯವಾಗಿ, ಶಿಥಿಲತ್ವವನೆಯ್ದಿದಲ್ಲಿ,

ಜರೆ ಕೆಟ್ಟುದು.
ಮಹಾಲಿಂಗದಲ್ಲಿ ತಾನೆಂಬುದಳಿದು ಲಿಂಗೈಕ್ಯವಾದಲ್ಲಿ,
ಮರಣ ಕೆಟ್ಟುದು.
ಇಂತೀ ಷಡೂರ್ಮಿಗಳನು ಈ ಪರಿ
ಲಿಂಗಾವಧಾನದಲ್ಲಿ ಕೆಡಿಪಸಿದಾತನೆ, ಭಕ್ತನು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೧೯ ॥

೯೦೫

ಶಿವಕಥಸಂಗಳ ಕೇಳಿ ಕೇಳಿ ಸಂತೋಷಿಸಿ,
ಶಿವಕೀರ್ತನೆಗಳ ಮಾಡಿ ಮಾಡಿ,
ದಣಿವಿಲ್ಲದೆ ಶಿವನ ನೆನೆನೆನೆದು,
ಶಿವಸೇವೆಯ ಮಾಡುತ್ತ,
ಶಿವಪೂಜೆಯನೋಜೆಯಲ್ಲಿ ವಿಸ್ತರಿಸಿ,
ಶಿವಶರಣೆಂದು ಶಿವನೊಡವೆಯ ಶಿವನವರಿಗರ್ಪಿಸಿ,
ಶಿವನೆ ತಾನಾದ, ಭವರಹಿತ ಭಕ್ತನ ನೋಡ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೨೦ ॥

೯೦೬

ಅಂಗೈಯ ಲಿಂಗದಲ್ಲಿ ಕಂಗಳು ನಟ್ಟು,
ಎವೆಹಳಚದೆ, ಮನ ಕವಲಿಡದೆ,
ಚಿತ್ರದ ರೂಹಿನ ತೆರನಂತೆ, ಲಿಂಗವ ನೋಡಿ ನೋಡಿ,
ಕಂಗಳಲಜ್ಯೋತ್ತಿ, ಮನದಲ್ಲಿ ನೆನೆನೆನೆದು
ನೆರೆವ ಲಿಂಗಸುಖ ಸಂಪನ್ನರನೆ, ಲಿಂಗವೆಂಬೆನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೨೧ ॥

೯೦೭

ಹೊತ್ತುಳ್ಳಲ್ಲಿ ಅಗ್ಘವಣಿ ಪತ್ರೆ ಪುಷ್ಪವ ತಂದು,
ಅರ್ಥಿಯಲ್ಲಿ ಶಿವಲಿಂಗಪೂಜೆಯ ಮಾಡಲು,
ಎತ್ತಿದ ಮಣಿಮಕುಟದ ಮೊತ್ತದ ಗಣಂಗಳ ನಡುವೆ,
ಮೃತ್ಯುಂಜಯನೊಯ್ದಿರಿಸುವನವರ,
ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೨೨ ॥

೯೦೮

ಜಾವ ಘಳಿಗೆಯನೇಮದ ಪೂಜೆಯ ನೇಮಕರೆಲ್ಲ,
ಫಲದಾಯಕರಾಗಿ ಹೋದರು.
ಲಿಂಗಭಕ್ತ ಕಾಲ ನೇಮದ ಪೂಜಾ ಫಲದಾಯಕನೆ ಅಲ್ಲಲ್ಲ.
ಲಿಂಗಭಕ್ತ ಮಾಡುವ ಪೂಜೆ ನಿರ್ಮಾಲ್ಯವಾಗದು,
ತಾ ಸಹಿತ ಲಿಂಗಕ್ಕೆ ಪೂಜೆಯಹನಾಗಿ.
ನಿಜಗುರು  ಸ್ವತಂತ್ರಸಿದ್ಧಲಿಂಗೇಶ್ವರಾ,
ನಿಮ್ಮ ನಿಜಭಕ್ತ ಮಾಡುವ ಪೂಜೆಯ ಕ್ರಮವಿದು. ॥ ೧೨೩ ॥

೯೦೯

ಶಿವಭಕ್ತರಾದವರು, ಅಂಗದ ಮೇಲಣ ಲಿಂಗಕ್ಕೆ,
ಅನ್ನ ಉದಕ ಗಂಧ ಪುಷ್ಪ ತಾಂಬೂಲ ವಸ್ತ್ರ
ಮೊದಲಾದವ ಕೊಟ್ಟು ಕೊಳಲೇಬೇಕು.
'ರುದ್ರಭುಕ್ತಾನ್ನಂ ಭಕ್ಷಯೇತ್ ರುದ್ರಪೀತಂ ಜಲಂ ಪಿಬೇತ್
ರುದ್ರಾಘ್ರಾತಂ ಸದಾ ಜಿಘ್ರೇತ್'' - ಎಂದುದಾಗಿ,
ಶಿವಂಗೆ ಕೊಡದೆ ಕೊಂಡದೆ ಅದು ಭಕ್ತಿಪಥವಲ್ಲ.
ಆತಂಗೆ ಪ್ರಸಾದವಿಲ್ಲ.
ವಿಶ್ವಾಸವಿಲ್ಲದವರ ಶಿವನೊಲ್ಲನಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೨೪ ॥

೯೧೦

ಶಿವಪ್ರಸಾದವನಲ್ಲದೆ ಕೊಳ್ಳನಾ ಭಕ್ತನು.
ಶಿವನಿರ್ಮಾಲ್ಯವನಲ್ಲದೆ ಗ್ರಹಿಸನಾ ಭಕ್ತನು.
ಶಿವನನಲ್ಲದೆ ನೆನೆಯನಾ ಭಕ್ತನು.
ಶಿವಕಾರ್ಯವನಲ್ಲದೆ ಮಾಡನಾ ಭಕ್ತನು.
ಶಿವನವರನಲ್ಲದೆ ನಂಬನಾ ಭಕ್ತನು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನಿಮ್ಮ ಭಕ್ತನ ಚಾರಿತ್ರವಿದು. ॥ ೧೨೫ ॥

೬೧೧

ಅಸ್ತಿ ಜಾಯತೇ ವಿಪರಿಣಮತೇ ವಿವರ್ಧತೇ
ಅಪಕ್ಷೀಯತೇ ವಿನಶ್ಯತಿ ಎಂಬ ಷಡ್ಭಾವವಿಕಾರಂಗಳು
ಕೆಡುವುದಕ್ಕೆ ವಿವರವೆಂತೆಂದಡೆ;
ಶ್ರೀಗುರುವಿನ ಕೃಪಾಗರ್ಭದ ಮಧ್ಯದಲ್ಲಿರ್ದವ
ನಾನಹುದೆಂದರಿದಾಗವೆ
ಅಸ್ತಿ ಎಂಬ ವಿಕಾರ ಕೆಟ್ಟಿತ್ತು.
ಗುರುಕರದಲ್ಲಿ ಜನಿಸಿದೆನಾಗಿ
ನಾ ಮಾಯಾಯೋನಿಜನವಲ್ಲವೆಂದು ಅರಿದಾಗವೆ
ಜಾಯತೇ ಎಂಬ ವಿಕಾರ ಕೆಟ್ಟಿತ್ತು.
ಗುರುವಿನ ಸದ್ಭಾವಜಾತಲಿಂಗವನಂಗದಲ್ಲಿ ಧರಿಸಿ
ಪರಮಪರಿಣಾಮದಲ್ಲಿ ಪರಿಣಮಿಸುತ್ತಿರ್ದ ಕಾರಣ
ವಿಪರಿಣಮತೇ ಎಂಬ ವಿಕಾರ ಕೆಟ್ಟಿತ್ತು.
ಗುರುವಿನ ಆಚಾರ ಜ್ಞಾನಮಾರ್ಗದಲ್ಲಿ
ಆಚರಿಸಿ ಬೆಳೆವುತ್ತಿದ್ದ ಕಾರಣ
ವಿವರ್ಧತೇ ಎಂಬ ವಿಕಾರ ಕೆಟ್ಟಿತ್ತು.
ದೇಹೇಂದ್ರಿಯಾದಿಗಳೆಲ್ಲ ಲಿಂಗದಲ್ಲಿ ಅಡಗಿ ಶಿಥಿಲವಾಗಲು
ಅಪಕ್ಷೀಯತೇ ಎಂಬ ವಿಕಾರ ಕೆಟ್ಟಿತ್ತು.
ಲಿಂಗಾಂಗದ ಐಕ್ಯವನರಿದು ಲಿಂಗದಲ್ಲಿ ಲೀಯವಾಗಲು
ವಿನಶ್ಯತಿ ಎಂಬ ವಿಕಾರ ಕೆಟ್ಟಿತ್ತು.
ಇಂತೀ ಲಿಂಗಸಂಗದಿಂದ ಷಡ್ಭಾವವಿಕಾರಂಗಳಳಿದು
ನಿಮ್ಮವಿಕಾರವೆಡೆಗೊಂಡಿತ್ತು
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ, ನಿಮ್ಮ ಭಕ್ತಂಗೆ. ॥ ೧೨೬ ॥

೬೧೨

ಷಡಧ್ವಾಶ್ರಯವಾವ ಪರಬಿಂದುಸ್ಥಾನದ ಮೇಲಿರ್ದ
ಷಡುಸ್ಥಲಮೂಲವಾದ ಪರಶಿವತತ್ವದೊಳು,
ಷಡುಸ್ಥಲಲಿಂಗಾಂಗ ಜನಿಸಿ ತೋರಿತೆಂದಡೆ
ಅಂಗ ಲಿಂಗಕ್ಕೆ ಭೇದವುಂಟೆ? ಇಲ್ಲದಾಗಿ.
ಬೀಜಾಂಕುರದಂತೆ ಒಂದ ಬಿಟ್ಟು ಒಂದು ತೋರದು.

ಇಂತಪ್ಪ ಲಿಂಗಾಂಗ ಸಂಬಂಧ ಸಕೀಲವನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ, ನಿಮ್ಮ ಶರಣ ಬಲ್ಲನು.
॥ ೧೨೭ ॥

೯೧೩

ಊರ್ಧ್ವಮುಖವಾದ, ಅನಂತೇಶನೆಂಬ ವಾಸುಕಿಯ
ಶಿರದ ಮೇಲಿಹ ಅಷ್ಟದಳಾಬ್ಜಮಧ್ಯದಲ್ಲಿ,
ಒಪ್ಪುತ್ತಿಹ ಶುದ್ಧವಿದ್ಯೆಯೇ ಪೀಠವಾದ
ಶಿವಲಿಂಗವೊಂದರಲ್ಲಿ, ದೃಢಭಕ್ತಿಯುಳ್ಳಾತನ ದೇಹವೇ
ಲಿಂಗದೇಹವು.
ಆ ಚಿದ್ರೂಪನಾದ ಪರಮ ಸ್ವರೂಪನ ಮೂರ್ತಿ
ತಾನೇ ಇಷ್ಟಲಿಂಗವು.
ಆ ಇಷ್ಟಲಿಂಗದಲ್ಲಿ ದೇಹವನಡಗಿಸಿದ ಮಹಾತ್ಮನ
ಮನ ಬುದ್ಧಿ ಅಹಂಕಾರ ಇಂದ್ರಿಯಾದಿ ಗುಣಂಗಳು
ಜನನಾದಿ ವಿಕಾರಂಗಳ ಹೊದ್ದವಾಗಿ, ಆತ ನಿರ್ದೇಹಿ,
ನಿಜಗುರು ಸ್ವತಂತ್ರಲಿಂಗೇಶ್ವರನ ಶರಣನುಪಮಾತೀತನು.
॥ ೧೨೮ ॥

೯೧೪

ಅನ್ನಮಯ ಪ್ರಾಣಮಯ ಮನೋಮಯ
ವಿಜ್ಞಾನಮಯ ಆನಂದಮಯ
ಎಂಬ ಪಂಚಕೋಶ ಕೆಡುವುದಕ್ಕೆ ವಿವರ:
ಸರ್ವಪದಾರ್ಥವನು ಸಾವಧಾನಮುಖದಲ್ಲಿ
ಲಿಂಗಾರ್ಪಿತ ಮಾಡಿ
ಲಿಂಗಭೋಗೋಪಭೋಗಿಯಾದಲ್ಲಿ ಅನ್ನಮಯಕೋಶ ಕೆಟ್ಟಿತ್ತು.
ಪ್ರಾಣಮಯ ಲಿಂಗಾಂಗವಾಗಿ ಲಿಂಗಪ್ರಾಣಿಯಾದಲ್ಲಿ
ಪ್ರಾಣಮಯಕೋಶ ಕೆಟ್ಟಿತ್ತು.
ಮನೋಮಧ್ಯದಲ್ಲಿ ಲಿಂಗದ ನೆನಹು ನೆಲೆಗೊಂಡು
ಮನವೆ ಲಿಂಗವಾದಲ್ಲಿ ಮನೋಮಯಕೋಶ ಕೆಟ್ಟಿತ್ತು.
ಸುಜ್ಞಾನ ಪರಿಪೂರ್ಣವಾಗಿ ಜ್ಞಾನ ಜ್ಞೇಯಂಗಳೆರಡೂ ಒಂದಾದಲ್ಲಿ

ವಿಜ್ಞಾನಮಯಕೋಶ ಕೆಟ್ಟಿತ್ತು.
ಪರಮಾನಂದ ಪದದಲ್ಲಿ ಓಲಾಡುತ್ತ ಆ ಶಿವಾನಂದದಲ್ಲಿ
ಇರಲಿಕ್ಕಾಗಿ ಆನಂದಮಯಕೋಶ ಕೆಟ್ಟಿತ್ತು.
ಇಂತೀ ಪಂಚಕೋಶ ಪ್ರಕೃತಿಗುಣ ಕೆಟ್ಟು ಲಿಂಗಗುಣ ನಿಂದುದು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ನಿಮ್ಮ ಶರಣಂಗೆ. ॥ ೧೨೯ ॥

೯೧೫

ಶ್ರೀ ವಿಭೂತಿಯ, ರುದ್ರಾಕ್ಷಿಯ ಧರಿಸಿ,
ಲಿಂಗನಿಷ್ಠಾಪರನಾಗಿ ಲಿಂಗಾರ್ಚನೆಯ ಮಾಡಿ,
ಸಕಲಪದಾರ್ಥವ ಲಿಂಗಕ್ಕೆ ಕೊಟ್ಟು, ಲಿಂಗಪ್ರಸಾದವ ಕೊಂಡು,
ಲಿಂಗಸುಖ ಸಂಪನ್ನರಾದ ಲಿಂಗಭೋಗೋಪಭೋಗಿಗಳಲ್ಲಿ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು ಸದಾ ಸನ್ನಿಹಿತನು.
॥ ೧೩೦ ॥

೯೧೬

ನಾನು ಭಕ್ತನಪ್ಪೆನಯ್ಯ ನಿಮ್ಮ ಶ್ರೀ ಚರಣಸೇವಕನಾಗಿ.
ನಾನು ಯುಕ್ತನಪ್ಪೆನಯ್ಯ 'ಯತ್ರ ಮಾಹೇಶ್ವರಸ್ತತ್ರ ಶಿವಃ' ಎಂಬ
ವಿಶ್ವಾಸದನುಭಾವಿಯಾಗಿ.
ನಾನು ಮುಕ್ತನಪ್ಪೆನಯ್ಯ ಮನ ಪ್ರಾಣ ನಿಮ್ಮಲ್ಲಿ ನಿಂದು
ನಾನೆಂಬುದಿಲ್ಲವಾಗಿ.
ಇಂತು ತನುವಿನಲ್ಲಿ ಹೊರೆಯಿಲ್ಲದೆ, ಮನದಲ್ಲಿ ವ್ಯಾಕುಲವಿಲ್ಲದೆ,
ಪ್ರಾಣದಲ್ಲಿ ಹಮ್ಮಿಲ್ಲದೆ, ತನು ಮನ ಪ್ರಾಣ ನಿಮ್ಮಲ್ಲಿ ಸಂದಿಪ್ಪ
ನಿಚ್ಚಟ ಭಕ್ತನಾಗಿಪ್ಪೆನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ನಿಮ್ಮಲ್ಲಿ. ॥ ೧೩೧ ॥

೯೧೭

ಎಲೆ ಶಿವನೆ, ನಾ ನಿಮ್ಮನೊಂದೆ ಬೇಡಿಕೊಂಬೆನು:
ನಿಮ್ಮ ಶರಣರ ಮೂರ್ತಿಯ ಕಂಡಡೆ,
ನೀವೆಂದೆ ಕಾಬಂತೆ ಮಾಡಯ್ಯ.
ನಿಮ್ಮ ಶರಣರ ನುಡಿಯ ಕೇಳಿದಡೆ,
ನಿಮ್ಮ ನುಡಿಯೆಂದು ನಂಬುವಂತೆ ಮಾಡಯ್ಯ.

ನಿಮ್ಮ ಶರಣರ ಸುಖವೆಲ್ಲ,
ನಿಮ್ಮ ಸುಖವೆಂದು ತಿಳಿವಂತೆ ಮಾಡಯ್ಯ.
ನಿಮ್ಮ ಶರಣರಾಡಿತೆಲ್ಲ,
ನಿಮ್ಮ ಲೀಲೆಯೆಂದರಿವಂತೆ ಮಾಡಯ್ಯಾ ಎನಗೆ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೩೨ ॥

೯೧೮

ಭಕ್ತನ ಕಾಯವೆ ಶಿವನ ಕಾಯ, ಶಿವನ ಕಾಯವೆ ಭಕ್ತನ ಕಾಯ.
ಶಿವ ಶಿವ, ಭಕ್ತ ಬೇರೆಯೆ? ಶಿವ ಬೇರೆಯೆ? ಒಂದೆ ಕಾಣಿರಯ್ಯ.
ಅದೆಂತೆಂದಡೆ,
'ಭಕ್ತ ದೇಹಿಕ ದೇವ, ದೇವ ದೇಹಿಕ ಭಕ್ತ'
ಎಂದು ಶ್ರುತಿ ಹೊಗಳುವ ಕಾರಣ,
ಭಕ್ತಂಗೂ ದೇವಂಗೂ ಕಾಯವೊಂದೆ, ಪ್ರಾಣವೊಂದೇ.
ಎರಡೆಂಬ ಪರಿಭಾಷೆಯ ನುಡಿಯಲಾಗದು ಭಕ್ತರಾದವರು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೩೩ ॥

೯೧೯

ಶಿವಭಕ್ತರ ನಡೆ ಶುದ್ಧ. ನುಡಿ ಶುದ್ಧ.
ಶಿವಭಕ್ತರ ನೋಟ ಶುದ್ಧ. ಮಾಟ ಶುದ್ಧ.
ಶಿವಭಕ್ತರ ನೆನಹು ಶುದ್ಧ. ಪ್ರಾಣ ಶುದ್ಧ.
ಇದು ಕಾರಣ,
ಶಿವಭಕ್ತರನೆ ಶಿವನೆಂದು ನಂಬುವುದು.
ನಂಬಿದವರು ಶಿವನಪ್ಪುದು ತಪ್ಪದು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೩೪ ॥

೯೨೦

ಗುರುವೆನೆ ಲಿಂಗವೆಂದರಿದ ಕಾರಣ, ಗುರುವ ಲಿಂಗದಲ್ಲಿ ಕಂಡೆ.
ಲಿಂಗವನೆ ಜಂಗಮವೆಂದರಿದ ಕಾರಣ
ಲಿಂಗವ ಜಂಗಮದಲ್ಲಿ ಕಂಡೆ.
ಜಂಗಮವನೆ ನಾನೆಂದರಿದ ಕಾರಣ, ಜಂಗಮವ ನನ್ನಲ್ಲಿ ಕಂಡೆ.
ನನ್ನನೆ ನಿನ್ನಲ್ಲಿ ಅರಿದ ಕಾರಣ, ನನ್ನ ನಿನ್ನಲ್ಲಿ ಕಂಡೆ.

ಈ ಪರಿಯಿಂದ ಗುರು ಲಿಂಗ ಜಂಗಮ ಸಹಿತ,
ನಾ ನಿನ್ನೊಳಗಾದೆ, ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೩೫ ॥

೬೨೧

ಶ್ರೀಗುರುಕರುಣ ಕಟಾಕ್ಷಮಾತ್ರದಿಂದ ಶಿವಲಿಂಗದ ಒಲುಮೆ.
ಆ ಶಿವಲಿಂಗದ ಒಲುಮೆಗೆ ಗುರುಕರುಣವೇ ಮುಖ್ಯ.
ಅದು ಕಾರಣ, ಗುರುಪೂಜೆಯ ಮಾಡಿ,
ಗುರು ಕೃಪೆಯನೆ ಪಡೆದಿಹುದಯ್ಯ.
ಉಪಮಿಸಬಾರದ ಮಹಾದೇವನು,
ಪ್ರತ್ಯಕ್ಷವಾಗಿ, ಗುರುರೂಪಿಂದ ಇಹನೆಂದರಿದು,
ಗುರುಭಕ್ತಿಯನೆ ಮಾಡುವುದು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೩೬ ॥

೬೨೨

ಗುರುವ ನರಭಾವದಲ್ಲಿ ಕಂಡಡೆ, ನರಕ ತಪ್ಪದು ನೋಡಯ್ಯಾ.
ಗುರುವ ಹರಭಾವದಲ್ಲಿ ಕಂಡಡೆ, ಮೋಕ್ಷ ತಪ್ಪದು ನೋಡಯ್ಯಾ.
ಗುರುಪೂಜೆಯೆ ಹರಪೂಜೆಯೆಂದರಿದು,
ಗುರುಪೂಜೆಯ ಮಾಡಿದಡೆ,
ಹರಪೂಜೆ ತಪ್ಪದು ನೋಡಯ್ಯ.
ಗುರುವಿನ ಒಲುಮೆಯೇ ಹರನ ಒಲುಮೆ.
ಇದು ಸತ್ಯ. ನೀನೇ ಬಲ್ಲೆ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ,
ನಿಮ್ಮ ಭಕ್ತನ, ಗುರುಭಕ್ತಿಯಿದು. ॥ ೧೩೭ ॥

೬೨೩

ಗುರುದೇವನೆ ಮಹಾದೇವನು. ಗುರುದೇವನೇ ಪರಶಿವನು.
ನಿಃಕಲಪರವಸ್ತು ಗುರುವಾಗಿ, ಸಕಲರೂಪಾದ ನೋಡಯ್ಯ.
ಮಹಾಜ್ಞಾನನಿಧಿ, ಶಿಷ್ಯಾನುಗ್ರಹ ಕಾರಣವಾಗಿ.
"ಯಶ್ಶಿವಸ್ಸಗುರುರ್ಜ್ಞೇಯೋ ಯೋಗ ಗುರುಸ್ಸಶ್ಶಿವಃ ಸ್ಮೃತಃ"
ಎಂದುದಾಗಿ
ಪರಶಿವ ತಾನೆ ಗುರುರೂಪಾಗಿ ವರ್ತಿಸುತ್ತಿದ್ದ ನೋಡಯ್ಯ,
ಮಹಾಕರುಣಾಮೂರ್ತಿ, ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು.
॥ ೧೩೮ ॥

೯೨೪

ತನು ಮುಂತಾದ ಕ್ರೀಯಿಂದ ಗುರುಭಕ್ತನಹುದಯ್ಯ.
ಮನ ಮುಂತಾದ ಕ್ರೀಯಿಂದ ಲಿಂಗಭಕ್ತನಹುದಯ್ಯ.
ಧನ ಮುಂತಾದ ಕ್ರೀಯಿಂದ ಜಂಗಮಭಕ್ತನಹುದಯ್ಯ.
ಇಂತು ತನು ಮನ ಧನವ, ಗುರು ಲಿಂಗ ಜಂಗಮಕ್ಕೆ ಕೊಟ್ಟು
ತಾ ನಿರ್ಲೇಪಿಯಾದನಯ್ಯ ನಿಮ್ಮ ಭಕ್ತನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೩೯ ॥

೯೨೫

ಪ್ರಸಾದವ ಬಯಸಿ ಪರವನರಿದೆನೆಂಬವಂಗೆ,
ಬೇರೆ ಮತ್ತೆ ಸಾಧಿಸಿ ಅರಿದೆನೆಂಬ ಬಳಲಿಕೆಯದೇಕೆ?.
ಜಂಗಮವೆ ಲಿಂಗವೆಂದು ನಂಬಿ ಪೂಜೆಯ ಮಾಡಲು,
ಅದು ತಾನೆ, ಲಿಂಗಪೂಜೆ ನೋಡ.
ಆ ಜಂಗಮ ಭಕ್ತಿಯಿಂದ
ಪ್ರಸಾದ ಸಾಧ್ಯವಹುದು. ಮುಂದೆ ಪರವನರಿವ.
ಇದು ಕಾರಣ,
ಜಂಗಮಭಕ್ತಿಯೇ ವಿಶೇಷ, ಇದು ತಪ್ಪದು.
ನಿಜಗುರು ಸ್ವತಂತ್ರಲಿಂಗೇಶ್ವರನ ನಂಬಿ ನಿಜವನೈದುವಂಗೆ.
॥ ೧೪೦ ॥

೯೨೬

ಕೊಡುವಾತ ನಾನಲ್ಲ.
ಕೊಡುವಾತನೂ ಕೊಂಬಾತನೂ ಶಿವನೆಂದರಿದು.
ಜಂಗಮಮುಖದಲ್ಲಿ ಲಿಂಗಾರ್ಪಿತವಹುದೆಂದು,
ಕೊಟ್ಟ ಭಕ್ತನೊಳಗೆ ಜಂಗಮವಡಗಿ,
ಭಕ್ತಜಂಗಮ ಒಂದಾದ ಮಾಟ
ಭವದೋಟ ಲಿಂಗದ ಕೂಟ.
ಈ ತೆರನನರಿದು ಮಾಡುವ ಭಕ್ತನೇ ದೇವನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೪೧ ॥

೯೨೭

ಶಿವಭಕ್ತಿಯುಳ್ಳವರಿಗೆ, ಪುಣ್ಯವಿಲ್ಲ. ಪಾಪವಿಲ್ಲ.
ಸ್ವರ್ಗವಿಲ್ಲ. ನರಕವಿಲ್ಲ.
ಅದೆಂತೆಂದಡೆ,
ಚಂಡೇಶ ಶಿವಭಕ್ತ ತಂದೆಯ ಕೊಂದರೆ ಬಂದಿತ್ತೆ ಪಾಪ,
ಎಯ್ದಿದನೆ ನರಕ?. ಇಲ್ಲವಾಗಿ.
ಚಂಡೇಶ ಸಿದ್ಧರಾಮ[ರಿ]ಗೊಲಿದು, ಶಿವ ತನ್ನೊಳಗಿರಿಸನೆ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು? ॥ ೧೪೨ ॥

೯೨೮

ಬಿಸಜತಂತುವಿನ ಶೃಂಖಲದಿಂದ,
ಮದಗಜ ಬಂಧವಡೆಯಬಲ್ಲುದೆ?
ತರಗೆಲೆ ಮುಸುಕಿದಡೆ, ದಾವಾನಲ ಕೆಡಬಲ್ಲುದೆ?.
ಮಂಜಿನ ಪೌಜು ಸೂರ್ಯನ ಮುತ್ತಬಲ್ಲುದೆ?.
ನಿಮ್ಮನರಿದಾತಂಗೆ, ಪುಣ್ಯ ಪಾಪ ಕರ್ಮ ಲೇಪಿಸಬಲ್ಲವೆ?,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೪೩ ॥

೯೨೯

ಅಗ್ನಿ ರಜ್ಜುವಿನಿಂದ ಕಟ್ಟುವಡೆವುದೆ?.
ಸೂರ್ಯನ ಕತ್ತಲೆ, ಬಾಧಿಸಲಾಪುದೆ ಅಯ್ಯ?.
ಆಕಾಶವು ರಜ ಧೂಮಗಳಿಂದ, ಮಲಿನವಹುದೆ ಅಯ್ಯ?.
ನಿಮ್ಮನರಿದ ಶಿವಯೋಗಿಗೆ, ಸಂಸಾರ ಬಂಧಿಸಬಲ್ಲುದೆ ಹೇಳಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ?. ॥ ೧೪೪ ॥

೯೩೦

ಆದಿಬಿಂದು ಬೀಜವನರಿದು,
ಬಿಂದೋಪರಿ ಅನಾಹತನಾದವನರಿದು,
ಆ ಪ್ರಣವ ಸೂತ್ರವಿಡಿದು ಶಿವಧ್ಯಾನವ ಮಾಡಲು,
ಆ ಧ್ಯಾನಾಗ್ನಿಯಿಂದ, ಯೋಜನಾಂತರಶೈಲಸಮಾನಪಾಪ,
ಬೆಂದು ಪೋಹುದು ನೋಡಯ್ಯ.

ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆಂಬ,
ನಿಜಪದವಿಯನೈದುವುದು ಬಳಿಕ ನೋಡಯ್ಯ. ॥ ೧೪೫ ॥

೬೩೧

ತಪ ಸತ್ಕ್ರೀ ಜಪ ಧ್ಯಾನ ಜ್ಞಾನಂಗಳಿಂದ ಮಾಡುವ ಭಕ್ತಿಗೆ
ಶಿವನೊಲಿವ. ಶಿವಶರಣರೊಲಿವರಯ್ಯ.
ಹಿಂದೆ ಭವನಾಶ, ಮುಂದೆ ಕೈವಲ್ಯವಯ್ಯ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೪೬ ॥

೬೩೨

ಧ್ಯಾತೃ, ಧ್ಯಾನ ಧ್ಯೇಯವೆಂಬ ತ್ರಿವಿಧದ ಭೇದವನರಿದು,
ಪದಮಂತ್ರವಾಕ್ಯ ಪಿಂಡಸ್ವಾತ್ಮ ಚಿಂತನರೂಪ
ಸರ್ವ ಚಿದ್ರೂಪ ರೂಪಾತೀತ ನಿರಂಜನ ಧ್ಯಾನ
ಚತುರ್ವಿಧವನರಿದೊಂದುಮಾಡೆ,
ಧ್ಯಾತೃ ಧ್ಯಾನದೊಳಗಡಗಿ, ಧ್ಯಾನ ಧ್ಯೇಯದೊಳಗಡಗಿ,
ಧ್ಯೇಯವು ತನ್ನಲ್ಲಿ ತಾನೇ ವಿಶ್ರಮಿಸಿ ನಿಂದಿತ್ತಯ್ಯ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೪೭ ॥

೬೩೩

ಅಂತರಂಗ ಶುದ್ಧವಿಲ್ಲದವರು,
ಬಹಿರಂಗದಲ್ಲಿ ಸದಾಚಾರ ಸತ್ಕ್ರೀಯೆಯ,
ಸರ್ವಜನ ಮೆಚ್ಚುವಂತೆ ಮಾಡುತಿರ್ದರೇನು?
ಅದು ಲೋಕರಂಜನೆಯಲ್ಲದೆ ಶಿವ ಮೆಚ್ಚ.
ಶಿವಶರಣರು ಮೆಚ್ಚರು.
ಬಿತ್ತಿದ ಬೆಳೆಯನುಂಬಂತೆ, ಮಾಡಿದ ಸತ್ಕರ್ಮಫಲವನುಂಬ,
ಕೈಕೂಲಿಕಾರಂಗೆ ಮುಕ್ತಿಯುಂಟೆ?
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೪೮ ॥

೬೩೪

ಏನೆಂದರಿಯರು, ಎಂತೆಂದರಿಯರು,
ಹಗರಣದ ಹಬ್ಬಕ್ಕೆ ಜಗದ ಜನರೆಲ್ಲ ನೆರೆದು,

ಗೊಂದಣಗೊಳುತ್ತಿದ್ದರಲ್ಲ.
ತ್ರಿಭಂಗಿಯ ತಿಂದು, ಅದು ತಲೆಗೇರಿ
ಗುರುವೆಂದರಿಯರು, ಲಿಂಗವೆಂದರಿಯರು,
ಜಂಗಮವೆಂದರಿಯರು.
ಶಿವ ಶಿವಾ, ಮಾಯಾಜಾಲದಲ್ಲಿ ಸಿಕ್ಕಿದ ಮರುಳು ಜನರು,
ಮುಕ್ಕಣ್ಣನಿಕ್ಕಿದ ಛತ್ರದಲುಂಡು ಸೊಕ್ಕಿ,
ಸಲಹುವ ಕರ್ತನನರಿಯದವರಿಗೆನ್ನೆತ್ತಣ ಮುಕ್ತಿ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ?. ॥ ೧೪೯ ॥

೯೩೫

ಶಮೆ ದಮೆ ವಿವೇಕ ವೈರಾಗ್ಯ ಪರಿಪೂರ್ಣಭಾವ ಶಾಂತಿ
ಕಾರುಣ್ಯ ಶ್ರದ್ಧೆ ಸತ್ಯ ಸದ್ಭಕ್ತಿ ಶಿವಜ್ಞಾನ ಶಿವಾನಂದ
ಉದಯವಾದ ಮಹಾಭಕ್ತನ ಹೃದಯದಲ್ಲಿ ಶಿವನಿಪ್ಪ.
ಆತನ ದರ್ಶನ ಸ್ಪರ್ಶನ ಸಂಭಾಷಣೆಯಿಂದ
ಕೇವಲ ಮುಕ್ತಿಯಪ್ಪುದು ತಪ್ಪದಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೫೦ ॥

೯೩೬

ಚಂದ್ರನಿಲ್ಲದ ರಾತ್ರಿ, ಸೂರ್ಯನಿಲ್ಲದ ದಿವಸವೇತಕ್ಕೆ ಬಾತೆ?
ಅಂತರಂಗ ಸನ್ನಿಹಿತವಾದ ಪರಶಿವನೆಂಬ ಗುರುವಿಲ್ಲದವನ,
ಅರಿವು ಆಚಾರ ಕ್ರಿಯೆ ಭಕ್ತಿ ವಿರಕ್ತಿ ಏತಕ್ಕೆ ಬಾತೆ?
ಇದು ಕಾರಣ,
ಸ್ವಾನುಭಾವಿ ಗುರುವಿನ ಅನುವಿನಲ್ಲಿದ್ದು ಆಚರಿಸುವ, ಭಕ್ತನ
ಆಚಾರ ಶುದ್ಧ, ಆತನ ಭಕ್ತಿ ಜ್ಞಾನ ವೈರಾಗ್ಯ ಶುದ್ಧ.
ಆತನೇ ಮುಕ್ತನಯ್ಯ, ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ.
॥ ೧೫೧ ॥

೯೩೭

ಸಂಸಾರವೆಂಬ ಘೋರಾರಣ್ಯದೊಳಗೊಬ್ಬಳು,
ಜಗವ ನುಂಗಿ ಉಗುಳುವ ಬಲು ರಕ್ಕಸಿಯಿದ್ದಾಳೆ.
ಗಜ ವ್ಯಾಘ್ರ ಕ್ರೂರ ಮೃಗಂಗಳ ಭಯ ಘನ.

ಹುಲ್ಲ ಬಿಲ್ಲಿಸವ, ಕೈಯ ಹಗ್ಗದವ ಇವರಿಬ್ಬರು ಬಲುವ್ಯಾಧರು
ಕಣುವೆಯ ಕಟ್ಟಿ ಐದಾರೆ ಆ ಕಡೆಗಡಿಯಿಡದಿರಣ್ಣ.
ಭಕ್ತಿಗ್ರಾಮದತ್ತ ನಡೆಯಿರಣ್ಣ. ಎಡರಾಪತ್ತುಗಳಿಲ್ಲ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ, ಭಕ್ತಿಗ್ರಾಮದಲ್ಲಿ
ಸುಖವಿಹಿರಣ್ಣ. ॥ ೧೫೨ ॥

೯೩೮

ಭಕ್ತಸ್ಥಲ ಬಸವಣ್ಣಂಗಾಯಿತ್ತು.
ಮಾಹೇಶ್ವರಸ್ಥಲ ಮಡಿವಾಳಂಗಾಯಿತ್ತು.
ಪ್ರಸಾದಿಸ್ಥಲ ಚೆನ್ನಬಸವಣ್ಣಂಗಾಯಿತ್ತು.
ಪ್ರಾಣಲಿಂಗಿಸ್ಥಲ ಸಿದ್ಧರಾಮಯ್ಯಂಗಾಯಿತ್ತು.
ಶರಣಸ್ಥಲ ಪ್ರಭುದೇವರಿಗಾಯಿತ್ತು.
ಐಕ್ಯಸ್ಥಲ ಅಜಗಣ್ಣಂಗಾಯಿತ್ತು.
ಎನಗಿನ್ನಾವ ಸ್ಥಲವೂ ಇಲ್ಲವೆಂದು ನಾನಿರಲು,
ಇಂತಿವರೆಲ್ಲಾ ಷಡುಸ್ಥಲ ಪ್ರಸಾದವನಿತ್ತರಾಗಿ,
ನಾನು ಮುಕ್ತನಾದೆನು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೫೩ ॥

೯೩೯

ಶಿವಭಕ್ತಿತತ್ಪರನಾದ ಮಹಿಮನು
ವಿಷಯಭ್ರಮೆ ಪುರುಷ ಪ್ರಯತ್ನವನು ಬಿಟ್ಟಾಗವೆ,
ಆಗಾಮಿಕರ್ಮ ನಾಶವಾಯಿತ್ತು.
ಸಂಚಿತಕರ್ಮ ವಿಷಯಾಸಕ್ತಂಗೆ ಪ್ರಾರಬ್ಧವೆನಿಸುವುದು.
ಶಿವಧ್ಯಾನೈಕ ಚಿತ್ತಂಗೆ ಸಂಚಿತಕರ್ಮವಿಲ್ಲ.
ಅದೇನು ಕಾರಣವೆಂದಡೆ:
ಶಿವಜ್ಞಾನಾಗ್ನಿಯಿಂದ ಅದು ಬೆಂದು ಹೋಹುದಾಗಿ.
ಇಚ್ಛಾಪ್ರಾರಬ್ಧ ಅನಿಚ್ಛಾಪ್ರಾರಬ್ಧವೆಂದು ಪ್ರಾರಬ್ಧವೆರಡಾಗಿಹುದು.
“ಪ್ರಾರಬ್ಧಕರ್ಮಣಾಂ ಭೋಗಾದೇವ ಕ್ಷಯಃ” ಎಂದುದಾಗಿ,
ಅದು ಭೋಗಿಸಿದಲ್ಲದೆ ತೀರದು.
ಅನಿಚ್ಛಾಪ್ರಾರಬ್ಧದಿಂದ ಮುಂದೆ ಸುಖವಹುದು.
ಇಚ್ಛಾಪ್ರಾರಬ್ಧದಿಂದ ದುಃಖವಹುದಾಗಿ,
ಆ ದುಃಖದಿಂದ ಸಂಸಾರವೃಕ್ಷ ಬೇರುವರಿವುದು.

ಸಂಸಾರ, ವಿರಕ್ತಂಗೆ ಹುರಿದ ಬೀಜದಂತೆ
ಅಂಕುರ ನಷ್ಟವಾಗಿಹುದು.
ಆತ ಶಿವನೊಡನೆ ಕೂಡಿ ಭೋಗಿಸುವನಾಗಿ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆಂಬ ನಿಜವನೆಯ್ದುವನು.
॥ ೧೫೪ ॥

೬೪೦

ನಿಜವನರಿದು ನಿರ್ಮಲಜ್ಞಾನಿಯಾದ ಕರ್ಮರಹಿತ ಶಿವಯೋಗಿ
ಕರ್ಮಕಾಯನಲ್ಲ. ಕರ್ಮಭೋಗಿಯಲ್ಲ.
ಕರ್ಮಾಧೀನನು ತಾ ಮುನ್ನವೆ ಅಲ್ಲ.
ಅದೆಂತೆಂದಡೆ,
ಪರಿಪಕ್ವವಾದ ಹಣ್ಣು ರಸ ತುಂಬಿ ತೊಟ್ಟು ಕಳೆದ ಬಳಿಕ,
ಮರಳಿ ವೃಕ್ಷವನಡರಿ, ತೊಟ್ಟು ಹತ್ತುವುದೇ ಹೇಳ?
ಆಗಾಮಿ ಪರಿಪಕ್ವವಾಗಿ ಸಂಚಿತ್ತವಾಯಿತ್ತು.
ಸಂಚಿತ ಪರಿಪಕ್ವವಾಗಿ ಪ್ರಾರಬ್ಧವಾಯಿತ್ತು.
ಪ್ರಾರಬ್ಧ ಪರಿಪಕ್ವವಾಗಲು ತ್ರಿವಿಧ ಕರ್ಮನಾಸ್ತಿಯಾಯಿತ್ತು.
ಇದ್ದು ಕರ್ಮವುಂಟೆ? ಇಲ್ಲವಾಗಿ.
“ಯಥಾ ವೃಕ್ಷಫಲಂ ವೃಕ್ಷಾತ್ ಪತನಂ ಲಭತೇ ಸ್ವತಃ।
ತಥಾ ಸರ್ವಾಣಿ ಕರ್ಮಾಣಿ ಪತಂತಿ ಶಿವಯೋಗಿನಾಂ”
ಎಂದುದಾಗಿ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣರು ಕರ್ಮರಹಿತರು.
॥ ೧೫೫ ॥

೬೪೧

ಜಪ ತಪ ನಿತ್ಯ ನೇಮ ವ್ರತ ಶೀಲಂಗಳೆಂಬ
ಸರ್ವೋಪಾಯಂಗಳಿಂದ
ಶಿವನ ಸಾಧಿಸಿ ಭೇದಿಸಿ ಕಂಡೆಹೆವೆಂಬ
ಉಪಾಯಸಾಧಕರು ನೀವು ಕೇಳಿ.
ಆ ಉಪಾಯಂಗಳನೂ ಶಿವಪ್ರಸನ್ನಿಕೆಯಿಂದ ಪಡೆದು
ಶುದ್ಧ ಸಂಸಾರಿಗಳಾದ ಜ್ಞಾನಿಗಳು ಸ್ವಯಂಪ್ರಕಾಶವಾಗಿಯು
ವಿಶ್ವಪ್ರಕಾಶನಾದ ‘ಸತ್ಯಜ್ಞಾನಮನಂತಂ ಬ್ರಹ್ಮ’ ವೆಂಬ
ಲಕ್ಷಣವುಳ್ಳ ಪರಿಪೂರ್ಣ ಪರಶಿವನ

ಜ್ಞೇಯಸ್ವರೂಪದಿಂದರಿದವರು
ಜೀವನ್ಮುಕ್ತರಾಗಿ ವರ್ತಿಸುತ್ತಿಹರು ಕಾಣಾ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೫೬ ॥

೯೪೨

ಶಿವಲಿಂಗ ಪೂಜೆಯಿಂದ ಭಕ್ತಿ ದೊರಕೊಂಬುದು,
ಮುಕ್ತಿ ದೊರಕೊಂಬುದು.
ಶಿವಲಿಂಗಪೂಜೆಗೆ ಸರಿಯೊಂದಿಲ್ಲವೆಂದು,
ಪುರಾತನರು ಶಿವಲಿಂಗಪೂಜೆಯ ಮಾಡಿ ಶಿವನೊಳಗಾದರು.
ಇದನರಿದು ಮತ್ತೇಕೆ ಮರೆವಿರಿ, ಮರುಳು ಮಾನವರುಗಳಿರ?.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ
ಪೂಜೆಯ ಮಾಡಿ ಬದುಕಿರಣ್ಣಾ. ॥ ೧೫೭ ॥

೯೪೩

ಗುರು ಲಿಂಗ ಜಂಗಮ ಪ್ರಸಾದವೆಂಬ
ಚತುರ್ವಿಧದ ಏಕರಸವೇ ಪಾದೋದಕವೆನಿಸುವುದು.
ಆ ಪಾದೋದಕ ರೂಪಾದಾತನೇ ಭಕ್ತನು.
ಆ ಭಕ್ತನೊಳಗೆ ಅಡಗಿ ತೋರುವ
ಗುರುಲಿಂಗ ಜಂಗಮ ಪ್ರಸಾದಕ್ಕೆ ಆ ಭಕ್ತನೆ ಆಧಾರ.
ಆ ಭಕ್ತಂಗೆ ಚತುರ್ವಿಧವೊಂದಾದ ಲಿಂಗವೇ ಆಧಾರ.
ಇಂತು ಒಂದನೊಂದು ಬಿಡದೆ
ಒಂದಕೊಂದಾಧಾರ ಆಧೇಯವಾಗಿಹುದೆ
ಲಿಂಗಭಕ್ತನ ಇರವು ತಾನೆ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೫೮ ॥

೯೪೪

ಅತ್ತಲಿತ್ತ ಹರಿವ ಮನವ ನಿಲಿಸಿ ಸ್ವಸ್ಥಾನಂಗೊಳಿಸಿ,
ತತ್ವಾನುಭಾವರಹಸ್ಯದ ಕೀಲನರಿದು,
ತತ್ವಮಸಿ ವಾಕ್ಯದ ಮೇಲಣ ಷಡುಸ್ಥಲ ಲಿಂಗವ ತಿಳಿದು,
ಆ ಲಿಂಗಕ್ಕೆ ಷಡುಸ್ಥಲಾಂಗವನಾದಿ ಮಾಡಿ,
ಆ ಲಿಂಗವನು ಲಿಂಗಮುಖವ ಮಾಡಿದುದೇ,

ಸರ್ವಾಂಗಲಿಂಗಿಯ ಮತವು.
ಈ ಗುಣವುಳ್ಳ ಷಡುಸ್ಥಲ ಲಿಂಗಾಂಗಿಯೇ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು ತಾನೆ ಬೇರಿಲ್ಲ.॥ ೧೫೯ ॥

೯೪೫

ಏನನೋದಿ ಏನ ಕೇಳಿ ಏನ ಹೇಳಿದಡೆ ಏನು ಫಲ
ತನ್ನಲ್ಲಿದ್ದ ವಸ್ತುವ ತಾನರಿಯದನ್ನಕ್ಕ?
ಚಿನ್ನದ ತೊಡಹದ ತಾಮ್ರದಂತೆ ಒಳಗೆ ಕಾಳಿಕೆ ಬಿಡದು.
ನುಣ್ಣಗೆ ಬಣ್ಣಗೆ ನುಡಿವ ಅಣ್ಣಗಳೆಲ್ಲರು
ಕಣ್ಣು ಕಾಣದೇ ಕಾಡಬಿದ್ದರು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ,
ನಿಮ್ಮನರಿಯದ ಅಂಧಕರೆಲ್ಲರು. ॥ ೧೬೦ ॥

೯೪೬

ಲಿಂಗವ ನೆರೆಯರಿದು ನಿಷ್ಠೆ ನಿಬ್ಬೆರಸಿದ ಬಳಿಕ
ಅಹಂಕಾರ ಮಮಕಾರಂಗಳುಂಟೆ?.
ಪಂಚಕ್ಲೇಶಂಗಳು ಮದ ಮತ್ಸರಗಳುಂಟೆ?.
ಕ್ರಾಮ ಕ್ರೋಧಂಗಳು ತಾಮಸಗುಣಂಗಳುಂಟೆ?.
ಲಿಂಗದಂಗವೆ ಅಂಗವಾದ ಲಿಂಗದೇಹಿಗೆ?,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೬೧ ॥

೯೪೭

ಲಿಂಗದ ಕಲೆಯನರಿದಲ್ಲದೆ ಭಕ್ತಿ ವಿರಕ್ತಿಯೆಂಬವು
ದೊರಕೊಳ್ಳವು ನೋಡ.
ಲಿಂಗದ ಕಲೆಯನರಿದಲ್ಲದೆ ಜ್ಞಾನ ಆನಂದವು
ದೊರಕೊಳ್ಳವು ನೋಡ.
ಲಿಂಗದ ಕಲೆಯನರಿದಲ್ಲದೆ ಕ್ಷಮೆ ದಮೆ
ಸಮತೆ ಸದಾಚಾರಂಗಳು
ದೊರಕೊಳ್ಳವು ನೋಡ.
ಲಿಂಗದ ಕಲೆಯನರಿದಲ್ಲದೆ ಸದ್ಗುಣಗಣ ವಿನಯ ಮೃದುವಚನ
ದೊರಕೊಳ್ಳವು ನೋಡ.

ಇಂತನಂತ ಗುಣವಿಲ್ಲದಡೆ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಲಿಂಗವನರಿದುದಕ್ಕೆ,
ಚಿಹ್ನವಲ್ಲ ನೋಡ. ॥ ೧೬೨ ॥

೯೪೮

ಕುರುಡ ಕನ್ನಡಿಯ ಹಿಡಿದಡೇನು?
ತನ್ನ ಮುಖವ ತಾ ಕಾಣಲರಿಯದಂತೆ.
ಜ್ಞಾನವಿಲ್ಲದವನ ಕೈಯಲ್ಲಿ ಲಿಂಗವಿದ್ದಡೇನು?
ಆ ಲಿಂಗದಲ್ಲಿ ತನ್ನ ನಿಜವ ತಾ ಕಾಣಲರಿಯ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಅರಿಯದವರು
ಲಿಂಗವ ಹಿಡಿದಡೇನು ವ್ಯರ್ಥ ಕಾಣಿರಣ್ಣ. ॥ ೧೬೩ ॥

೯೪೯

ಗಿರಿ ತರು ಗುಹೆ ಮಹಾವಿಪಿನ ಸರೋವರದಲ್ಲಿ
ಹಿರಿದುಗ್ರತಪವ ಮಾಡುತ್ತ
ಪವನಾಹಾರ, ಪರ್ಣಾಹಾರ, ಜಲಾಹಾರ, ಫಳಾಹಾರ
ನಿರಾಹಾರದಲ್ಲಿದ್ದಡೇನು?
ತನು ಮನ ರೂಪವಾದ ಮಾಯೆ ಕಾಡದೆ ಬಿಡುವಳೆ?
ತನುವಿನಲ್ಲಿ ವ್ಯಾಪಾರ ಮನದಲ್ಲಿ ವ್ಯಾಕುಲವಾಗಿ
ಕಾಡದೆ ಬಿಡುವಳೆ?
ಈ ಮಾಯೆಯ ಗೆಲುವುದಕ್ಕೊಂದುಪಾಯವ ಕಾಬುದು.
ಅದೆಂತೆಂದಡೆ,
ಕಂಗಳ ಕೊನೆಯಲ್ಲಿ ಲಿಂಗದ ನೋಟ.
ಮನದ ಕೊನೆಯಲ್ಲಿ ಲಿಂಗದ ನೆನಹು.
ಜಿಹ್ವೆಯ ಕೊನೆಯಲ್ಲಿ ಶಿವಮಂತ್ರ.
ಭಾವದ ಕೊನೆಯಲ್ಲಿ ಶಿವಾನುಭಾವ ನೆಲೆಗೊಂಡಡೆ,
ಅಂಗದ ಅವಯವಂಗಳೆಲ್ಲ ಲಿಂಗದ ಅವಯವಂಗಳಾಗಿ,
ಕೀಟಭ್ರಮರನಂತೆ ತಾನೇ ಶಿವನಹನು.
ಇಂತಪ್ಪ ಲಿಂಗಾನುಭಾವಿ ಲಿಂಗಸಂಗಿಗೆ ಅಂಗವಿಲ್ಲ.
ಅಂಗವಿಲ್ಲದ ನಿತ್ಯ ನಿರ್ಮಲಂಗೆ,
ಮಾಯಾಮಲಿನ ಮುನ್ನವೆ ಹೊದ್ದದಯ್ಯ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೬೪ ॥

೯೫೦

ಇಬ್ಬರು ಮೂವರು ದೇವರೆಂದು ತಬ್ಬಿಬ್ಬುಗೊಂಡು ನುಡಿಯಬೇಡ.
ಒಬ್ಬನೇ ದೇವ ಕಾಣಿರಣ್ಣ.
"ಸರ್ವಸ್ಮಾದಧಿಕೋರುದ್ರಃ ಪರಮಾತ್ಮಾ ಸದಾಶಿವಃ
ಇತಿ ಯತ್ರ ನಿಶ್ಚಿತಾ ಧೀಃ ಸ ವೈ ಮಾಹೇಶ್ವರಃ ಸ್ಮೃತಃ॥"
ಎಂದವಾಗಮಂಗಳು.
'ಶಿವನೇಕೋ ದೇವ'ನೆಂದು ಸಾರುತ್ತಿವೆ ಶ್ರುತಿ ಪುರಾಣಂಗಳು.
ಇದು ಕಾರಣ,
ಶಿವನಲ್ಲದೆ ದೈವವಿಲ್ಲೆಂದರಿದ ಮಾಹೇಶ್ವರನ ಹೃದಯ
ನಿವಾಸವಾಗಿಪ್ಪ, ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು.
॥ ೧೬೫ ॥

೯೫೧

ಅಂಧಕನ ಮುಂದೆ ನೃತ್ಯ ಬಹುರೂಪವನಾಡಿದಡೇನು
ಕಂಡು ಪರಿಣಾಮಿಸಬಲ್ಲನೆ ಹೇಳ?.
ಬಧಿರನ ಮುಂದೆ ಸಂಗೀತ ಸಾಹಿತ್ಯವನೋದಿದಡೇನು
ಕೇಳಿ ತಿಳಿದು ಪರಿಣಾಮಿಸಬಲ್ಲನೆ ಹೇಳ?.
ಜ್ಞಾನಾನುಭಾವವಿಲ್ಲದವರು ಏನನೋದಿ ಏನ ಕೇಳಿ ಏನು?.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನನರಿಯದವರ ಓದು ಕೇಳಿಕೆ,
ಬಧಿರಾಂಧಕರ ಕೇಳಿಕೆ ನೋಟದಂತಾಗಿತ್ತು. ॥ ೧೬೬ ॥

೯೫೨

ಹಲವು ದೇವರುಗಳ ಭಜಿಸಿ ಹೊಲಬುದಪ್ಪಿ ಹೋದರೆಲ್ಲ.
ದೇವರು ದೇವರೆಂದರೇನು? ಒಮ್ಮರ ದೇವರೇ?.
ವಿಶ್ವಾಧಿಪತಿ ಶಿವನೊಬ್ಬನೆ ದೇವನಲ್ಲದೆ, ಉಳಿದವರೆಲ್ಲ
ದೇವರೆ?.
ಬ್ರಹ್ಮ ದೇವರೆಂಬಿರೆ? ಬ್ರಹ್ಮನ ಶಿರವ ಹರ ಚಿವುಟಿದ.
ವಿಷ್ಣು ದೇವರೆಂಬಿರೆ? ಹತ್ತವತಾರದಲ್ಲಿ ಹರನಿಂದ ಹತಿಸಿಕೊಂಡ.
ಇಂದ್ರ ದೇವರೆಂಬಿರೆ? ಇಂದ್ರನ ಮೈಯೆಲ್ಲಾ ಭಗವಾಗಿ
ನಿಂದೆಗೊಳಗಾದ.
ಚಂದ್ರ ದೇವರೆಂಬಿರೆ? ಕುಂದ ಹೆಚ್ಚ ತಾಳಿ ಕ್ಷಣಿಕನಾದ.

ಸೂರ್ಯ ದೇವರೆಂಬಿರೆ? ಸೂರ್ಯ ಕುಷ್ಠರೋಗದಿಂದ ಭ್ರಷ್ಟಾದ.
ಇನ್ನುಳಿದ ದೇವತೆಗಳು ಭಂಗಬಟ್ಟುದಕ್ಕೆ ಕಡೆಯಿಲ್ಲ.
"ಸರ್ವದೇವ ಪಿತಾ ಶಂಭುಃ ಭರ್ಗೋಃ ದೇವಸ್ಯ ಧೀಮಹಿ"
ಎಂದುದಾಗಿ,
ಸರ್ವದೇವರುಗಳ ಉತ್ಪತ್ಯ ಸ್ಥಿತಿ ಲಯಂಗಳ ಮಾಡುವ ಕರ್ತ
ಶಿವನೊಬ್ಬನೇ ದೇವನೆಂದು ನುಡಿದೆನು ನಡೆದೆನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲದೆ ಇಲ್ಲವೆಂದು.
|| ೧೬೭ ||

೯೫೩

ಬ್ರಹ್ಮಾದಿ ದೇವತೆಗಳೇನು ಮುಕ್ತಿ ದಾನಶೀಲರೇ? ಅಲ್ಲ.
ಮಾಯಾಪಾಶದಲ್ಲಿ ಬದ್ಧರಾದವರೆಲ್ಲ ಮುಕ್ತಿ ದಾನಶೀಲರಹರೆ?
ಮುಕ್ತಿ ದಾನಶೀಲ ಶಿವನೊಬ್ಬನಲ್ಲದಿಲ್ಲವೆಂದು
ನಂಬಿ ದೃಢವಿಡಿವುದು
ಹಲವ ಹಂಬಲಿಸಿ ಬಳಲಲೇಕೆ?
ಶ್ರೀಗುರುವಚನವ ತಿಳಿದು ನೋಡಿ ನೆನೆದು ಸುಖಿಯಹುದು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆಂಬ ಮುಕ್ತಿ ದಾನಶೀಲನ.
|| ೧೬೮ ||

೯೫೪

ಬ್ರಹ್ಮ ವಿಷ್ಣು ಇಂದ್ರಾದಿ ದಿಕ್ಪಾಲಕರ ಪದವೆಲ್ಲ
ತೃಣವತ್ತಾಯಿತ್ತು ಲಿಂಗಪದದ ಮುಂದೆ.
ಯಕ್ಷ ಗಂಧರ್ವಾದಿಗಳ ಪದವೆಲ್ಲ
ತೃಣವತ್ತಾಯಿತ್ತು ಲಿಂಗಪದದ ಮುಂದೆ.
ಇನ್ನುಳಿದ ಪದವಂತಿರಲಿ,
ರುದ್ರಪದ ಪ್ರಮಥಪದ ಘನವೆಂಬೆನೆ?
ಕ್ಷಣಿಕವಾದವು ಲಿಂಗಪದದ ಮುಂದೆ.
ಇದು ಕಾರಣ
ಲಿಂಗಪದಕ್ಕಿಂಥ ಇನ್ನಾವುದೂ ಘನವಿಲ್ಲೆಂದರಿದು
ಲಿಂಗಪದದಲ್ಲಿದ್ದ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ, ನಿಮ್ಮ ಶರಣನು. || ೧೬೯ ||

೯೫೫

ಲಿಂಗವ ಸ್ಥೂಲವೆಂಬರು ಕೆಲವರು, ಲಿಂಗ ಸ್ಥೂಲವಲ್ಲ.
ಲಿಂಗವ ಸೂಕ್ಷ್ಮವೆಂಬರು ಕೆಲವರು, ಲಿಂಗ ಸೂಕ್ಷ್ಮವಲ್ಲ.
ಸ್ಥೂಲ ಸೂಕ್ಷ್ಮದ ಮೇಲಣ ಜ್ಞಾನ ರೂಪು
ಪರಮಾನಂದ ಪರಬ್ರಹ್ಮವೇ ಲಿಂಗವೆಂದರಿದ ಅರಿವು
ಅಖಂಡ ರೂಪು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ನಿಲವು, ತಾನೇ ಬೇರಿಲ್ಲ.
॥ ೧೭೦ ॥

೯೫೬

ಲಿಂಗವೆಂಬುದು ಸರ್ವಕಾರಣ ಪರಮ ನಿರ್ಮಲ.
ಲಿಂಗವೆಂಬುದು ಸಚ್ಚಿದಾನಂದ ನಿತ್ಯಪರಿಪೂರ್ಣ.
ಲಿಂಗವೆಂಬುದು ಸರ್ವಲೋಕೋತ್ಪತ್ತಿಗೆ ಮೂಲಕಾರಣ.
ಲಿಂಗವೆಂಬುದು ಜನ್ಮವಾರಿಧಿಯ ದಾಂಟಿಸುವ ಭೈತ್ರವು.
ಲಿಂಗವೆಂಬುದು ಶರಣರ ಹೃದಯದಲ್ಲಿ ಬೆಳಗುವ
ಜ್ಯೋತಿರ್ಮಯ ಲಿಂಗವು.
ಇಂತೀ ಲಿಂಗದ ಮರ್ಮವನರಿಧವನೇ ಅರಿದವನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೭೧ ॥

೯೫೭

ಅನಲ ಸಂಗದಿಂದ ಕಾಷ್ಠ ಅನಲವಾದಂತೆ,
ಶಿವಸಂಸ್ಕಾರ ಸಂಪನ್ನನಾದ ಶಿವಭಕ್ತನು,
ಶಿವನಹಲ್ಲದೆ ಮಾನವನಾಗಲರಿಯನಯ್ಯ.
ಅದು ಕಾರಣ,
ಶಿವಭಕ್ತಂಗೆ ಜಾತಿಯಿಲ್ಲ ಸೂತಕವಿಲ್ಲ.
ಶಿವನೆಂತಿಹನಂತೆ ಇಹನು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ನಿಜಭಕ್ತನು. ॥ ೧೭೨ ॥

೯೫೮

ಹುರಿದ ಬೀಜದಂತೆ, ಬೆಂದ ನುಲಿಯಂತೆ,
ಹಿಂದಣಂಗ ಉಂಟೆ ಹೇಳ?.

ಸಮ್ಯಗ್‌ಜ್ಞಾನಾಗ್ನಿಯಲ್ಲಿ ದಗ್ಧವಾದ ಜನ್ಮ ಬೀಜವನುಳ್ಳ ಶರಣನು,
ಶಿವಕಾಯವನಾಶ್ರಯಿಸಿ ಶಿವ ತಾನಾಗಿಹನಲ್ಲದೆ,
ತನಗೆ ಬೇರೆ ಕಾಯವಿಲ್ಲ. ತಾನೆಂಬುದು ಮುನ್ನವೇ ಇಲ್ಲ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆಂಬ ಲಿಂಗವೇ ಅಂಗವಾದಂಗೆ.
|| ೧೭೩ ||

೬೫೯

ಕರ್ಮರಹಿತನಾದ ನಿರ್ಮಲ ನಿತ್ಯಂಗೆ ಮಾಯಾ ಭ್ರಮೆಯಿಲ್ಲ.
ಮಾಯಾಭ್ರಮೆಯಿಲ್ಲವಾಗಿ ಮನದ ಸಂಕಲ್ಪ ವಿಕಲ್ಪವಿಲ್ಲ.
ಮನದ ಸಂಕಲ್ಪ ವಿಕಲ್ಪವಿಲ್ಲವಾಗಿ ವಿಷಯಾಭಿಮಾನವಿಲ್ಲ.
ವಿಷಯಾಭಿಮಾನವಿಲ್ಲವಾಗಿ
ಪಂಚೇಂದ್ರೀಯಂಗಳ ವ್ಯಾಪಾರವಿಲ್ಲ.
ಪಂಚೇಂದ್ರಿಯಂಗಳ ವ್ಯಾಪಾರವಿಲ್ಲವಾಗಿ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣ ನಿರ್ದೇಹಿ.
|| ೧೭೪ ||

೬೬೦

ಶರಣ ಸಕಾಯನೆಂಬೆನೆ ಸಕಾಯನಲ್ಲ.
ಅಕಾಯನೆಂಬೆನೆ ಅಕಾಯನಲ್ಲ.
ಅದೇನು ಕಾರಣವೆಂದಡೆ:
ಶಿವಕಾಯವಾದ ನಿಜಬೋಧವೆ ಕಾಯವಾದ ಕಾರಣ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣನು,
ಪರಕಾಯರೂಪನು. || ೧೭೫ ||

೬೬೧

ಸೂರ್ಯೋದಯವಾಗೆ ತಿಮಿರ ಉಂಟೆ ಹೇಳ?.
ಪರುಷವೇಧಿಯ ಸಾಧಿಸಿದವಂಗೆ ದಾರಿದ್ರ್ಯ ಉಂಟೆ ಹೇಳ?.
ಶಿವಜ್ಞಾನಸಂಪನ್ನನಾದ ಜ್ಯೋತಿರ್ಮಯಲಿಂಗಿಗೆ ಅಂಗವುಂಟೇ?.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೇ ತಾನಾದವಂಗೆ.|| ೧೭೬ ||

೬೬೨

ತಾನೆಂಬುದನರಿಯೆ, ಪರವೆಂಬುದನರಿಯ,
ಸ್ವಯ ಪರ ತನ್ನೊಳಗಡಗಿ ತಾನೆ ಪರಿಪೂರ್ಣನಾಗಿ,

ವಿಶ್ವಾಧಿಪತಿಯಾದ ಅಖಂಡ ಸಂವಿಧಾಕರ
ಪರಬ್ರಹ್ಮವು ತಾನಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ನಿಮ್ಮ ಶರಣನು. ॥ ೧೭೭ ॥

೯೭೩

ಅರುಣೋದಯಕ್ಕೆ ಕತ್ತಲೆ ಹರಿದು ಬೆಳಗು ಪಸರಿಸಿದಂತೆ,
ಸಮ್ಯಗ್‌ಜ್ಞಾನೋದಯವಾಗಿ,
ಅಜ್ಞಾನ ಬೀಜ ಮಲಸಂಸಾರ ತೊಲಗಿ,
ಪರಮಾತ್ಮ ತಾನೆಂದರಿದು,
ಆ ಅರಿದರಿವು ಕರಿಗೊಂಡು,
ಪರಶಿವನೊಡನೆ ಸಮರಸಭಾವಿಯಾದವನೆ ಮುಕ್ತನಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೭೮ ॥

೯೭೪

ಅನುಭಾವವಿಲ್ಲದ[ವನ] ಭಕ್ತಿ ಆಯುಧವಿಲ್ಲದ ವೀರನಂತೆ.
ಅನುಭಾವವಿಲ್ಲದ[ವನ] ಆಚಾರ ಕಾಲಿಲ್ಲದ ಹೆಳವನಂತೆ.
ಅನುಭಾವವಿಲ್ಲದವನ ವಿಚಾರ ಕಣ್ಣಿಲ್ಲದ ಕುರುಡನಂತೆ.
ಅನುಭಾವವಿಲ್ಲದವನ ಯೋಗ
ಬರಿಕೈಯಲ್ಲಿ ಹುಡಿಯ ಹೊಯ್ದುಕೊಂಬ. ಗಜಸ್ನಾನದಂತೆ.
ಭಕ್ತಿ ವಿರಕ್ತಿ ಮುಕ್ತಿಗೆ ಅನುಭಾವವೆ ಬೇಕು.
ಅನುಭಾವವಿಲ್ಲದಾತಂಗೆ ಮುಕ್ತಿಯಿಲ್ಲ ಇದು ಸತ್ಯ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ಸಾಕ್ಷಿಯಾಗಿ. ॥ ೧೭೯ ॥

೯೭೫

ಆವಾವ ಜಾತಿ ಯೋನಿಗಳಲ್ಲಿ ಹುಟ್ಟಿದ ಪ್ರಾಣಿಗಳು
ಆ ಜಾತಿಯಂತಹವಲ್ಲದೆ ಮತ್ತೊಂದು ಜಾತಿಯಹವೆ ಹೇಳ.
“ಯಥಾ ಬೀಜಸ್ತಥಾ ವೃಕ್ಷಃ” ಎಂಬ ನ್ಯಾಯದಂತೆ,
ಲಿಂಗದಿಂದೊಗೆದ ಶರಣ ಲಿಂಗವಹನಲ್ಲದೆ,
ಮಾನವನಾಗಲರಿಯನೆಂಬುದಕ್ಕೆ ಗುರುವಚನವೇ ಪ್ರಮಾಣು.
ಇಂತಿದನರಿಯದೆ,
ನಾನು ಮಾನವನು ದೇಹಿ ಸಂಸಾರಬದ್ಧನು ಎಂಬವಂಗೆ,

ಎಂದೆಂದು ಮುಕ್ತಿಯಿಲ್ಲ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣ ಮಾನವನಲ್ಲ.
॥ ೧೮೦ ॥

೯೬೬

ಎತ್ತನೇರಿ ನಡೆಸುವ ಅಣ್ಣಗಳಿರ,
ಎತ್ತಿನವರೆಡು ಹಿಂಗಾಲು ಮುರಿದು,
ಮುಂಗಾಲಲ್ಲಿ ನಡೆಸಬೇಕು.
ಕೋಡೆರಡ ಕಿತ್ತುಹಾಕಿ ಬೋಳುಮಾಡಿ,
ಹುಲ್ಲು ನೀರಿಲ್ಲದ ಮೇಹ ಹಾಕಿ ಸಲಹಬೇಕು.
ಎತ್ತಿನಿಚ್ಛೆಯಲ್ಲಿ ಹೋಗದೆ, ಕಿರುವಟ್ಟೆಯ ಬಿಟ್ಟು,
ಹೆಬ್ಬಟ್ಟೆಯಲ್ಲಿ ನಡೆಸಬೇಕು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನತ್ತ,
ಅಭಿಮುಖವಾಗಿ ನಡೆಸಬೇಕು ಕೇಳಿರಣ್ಣ. ॥ ೧೮೧ ॥

೯೬೭

ಅಂಡಜ ಸ್ವೇದಜ ಉದ್ಭಿಜ ಜರಾಯುಜವೆಂಬ,
ಜೀವರಾಶಿಯ ಕಂಡಿಯಲ್ಲಿ ಹೊಕ್ಕು ಹೊರಡುವ,
ಜೀವನ ತಿಳಿಯಲರಿಯದನ್ನಕ್ಕ,
ಕಾಯದ ಜೀವದ ಸಂದ ಬಿಚ್ಚಲರಿಯದನ್ನಕ್ಕ,
ಮತ್ತೇನ ಮಾಡಿದಡೇನು ಫಲ ?.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನನರಿಯದವನ
ಬಾಳುವೆ, ಮೃತಶರೀರದಂತೆ. ॥ ೧೮೨ ॥

೯೬೮

ಮೂರುಮುಖದಗ್ನಿಯೆದ್ದು ಮೂರುಲೋಕವ ಸುಡುತ್ತಿರಲು
ಅಗ್ನಿಯ ಕೆಡಿಸಬಲ್ಲ ಬಲ್ಲಿದನಾರನು ಕಾಣೆ.
ಆ ಅಗ್ನಿಯ ಸ್ತಂಭನವ ಮಾಡಲರಿಯದೆ,
ಬಲ್ಲಿದರೆಲ್ಲ ದಳ್ಳುರಿಗೊಳಗಾದರು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣ,
ಅಕ್ಷರ ಪಂಚಕಮಂತ್ರವ ಜಪಿಸಿ,
ಅಗ್ನಿಸ್ತಂಭನವ ಮಾಡಿದನು. ॥ ೧೮೩ ॥

೯೬೯

ನಿತ್ಯಾನಿತ್ಯವಿಚಾರವಿಡಿದು ನೋಡಿದಡೆ,
ಭೂಮಿ ಜಲ ಅನಲ ಮರುತ ಆಕಾಶವೆಂಬ ಭೌತಿಕಂಗಳು
ತಾನಲ್ಲವೆಂದರಿದು,
ಕರಣೇಂದ್ರಿಯ ವಿಷಯಂಗಳ ಹೊತ್ತಾಡುವ ಜಡದೇಹ
ಮೃತ್ತಿಕೆಯ ಪುತ್ಥಳಿಯಂತೆ ಇಹಕಾರಣ
ಆ ದೇಹ ತಾನಲ್ಲವೆಂದರಿದು,
ಭವಭೀತಿ ಆಮಯ ಅರಿಗಳಾರ ಕೂಡಿಹ ಜೀವನು
ತಾನಲ್ಲವೆಂದರಿದು, ಇಹಪರವೆಂಬ ಇದ್ದೆಸೆಯ ಹೊದ್ದದೆ,
ತನುಗುಣವಳಿದು ಮನೋವಿಕಾರ ಮಾಣ್ದು,
ಮಾಯೋಪಾಧಿಕನಲ್ಲದ ನಿತ್ಯ ಸದೋದಿತ
ಚಿದ್ಘನ ಪರಿಪೂರ್ಣ ಬೋಧಪ್ರಭು ಜಗದಾದಿಮೂರ್ತಿ,
ವಾಙ್ಮನಕ್ಕಭೇದ್ಯ ಶಿವಾಂಶಿಕ ಪರಮಾತ್ಮ ತಾನೆಂದರಿದು,
ಆ ಮಹಾಘನ ಶಿವಲಿಂಗದೊಳವಿರಳನಾಗಿ
ಶಿವಜ್ಞಾನಾನುಭಾವದಿಂದ ಶಿವನೊಳಗೆ
ಅನನ್ಯನುಭಾವಿಯಾಗಿಹಾತನೆ ಮುಕ್ತನಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೮೪ ॥

೯೭೦

ತನ್ನಲ್ಲಿ ತಾನು ಪ್ರತ್ಯಕ್ಷಾನುಭಾವದಿಂದ ತಿಳಿದುನೋಡಿ,
ಆ ತಿಳಿದ ತಿಳಿವಿನೊಳಗೆ, ಲಿಂಗದ ನಿಜವ ಕಂಡು
ಕಾಂಬ ಜ್ಞಾನ ತಾನೆಂದರಿದು,
ಕಾಂಬುದು ಕಾಣಿಸಿಕೊಂಬು[ದು] ಎರಡೊಂದಾದ ನಿಲವು ತಾನೆ
ನಿಮ್ಮ ನಿಲುವು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೮೫ ॥

೯೭೧

ಅದ್ವೈತವ ಸಾಧಿಸಿ ಸರ್ವವೂ ಶಿವನೆಂಬರು ಎನಲಾಗದು.
ಸರ್ವಕ್ಕೂ ಲಯ ಗಮನವುಂಟು ಶಿವಂಗಿಲ್ಲವಾಗಿ.
ಯಂತ್ರವಾಹಕನೆಲ್ಲಿಯೂ ಪರಿಪೂರ್ಣವಾಗಿಹನೆಂದಡೆ
ಎಲ್ಲವೂ ಶಿವನಾಗಬಲ್ಲವೆ? ಆಗಲರಿಯವು.

ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು,
ಪದ್ಮಪತ್ರಜಲದಂತೆ ಹೊದ್ದಿಯು ಹೊದ್ದದಂತಿಹನು.
॥ ೧೮೬ ॥

೯೭೨

ಶಿವನು ಸರ್ವಗತನಾಗಿ ಎಲ್ಲಿಯು ಇಹನೆಂದಡೆ
ಎಲ್ಲವು ಶಿವನೇ? ಅಲ್ಲ.
ಮತ್ತೆಲ್ಲಿಹೆನೆಂದಡೆ:
ನಿರ್ಮಲಚಿತ್ತರಾದ ಸದ್ವಿವೇಕಿಗಳಲ್ಲಿ,
ನಿತ್ಯ ಸಂತೋಷಿಗಳಾದ ನಿರಾಶಾಭರಿತರಲ್ಲಿ.
"ಯಾ ತೇ ರುದ್ರ ಶಿವಾತನೂರಘೋರಾಪಾಪಕಾಶಿನೀ....."
ಎಂದುದಾಗಿ,
ನಿರ್ಮಲ ಪರಮ ಮಾಹೇಶ್ವರರ ಹೃದಯದಲ್ಲಿ
ಅತಿಪ್ರೇಮದಿಂದಿಹನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೧೮೭ ॥

೯೭೩

ಶ್ರೀಗುರುಸದ್ಭಾವಜಾತಲಿಂಗವು
ಶಿವಕಲೆ ಸಂಪೂರ್ಣವಾಗಿ ಕರಸ್ಥಲದಲ್ಲಿ ಮೂರ್ತಿಗೊಂಡಿರಲು,
ಕಂಗಳಲ್ಲಿ ನೋಡಿ, ಮನದಲ್ಲಿ ನೆನೆದು,
ಸುಖಿಯಹುದಲ್ಲದೆ ಬೇರೆ ಆಹ್ವಾನಿಸಲುಂಟೇ ಬರುಕಾಯನಂತೆ?.
ಹಾಲಹಳ್ಳ ಹರಿವುತ್ತಿರಲು ಅದ ಬಿಟ್ಟು,
ಓರೆಯಾವಿನ ಬೆನ್ನ ಬಳಿಯಲಿ ಹರಿಯಲುಂಟೆ?.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು ತನ್ನಲ್ಲಿದ್ದುದನರಿಯದೆ
ಬೇರರಸಿ ಬಳಲುವರೆಲ್ಲರು ಭ್ರಮಿತರು. ॥ ೧೮೮ ॥

೯೭೪

ತನುವಿಂಗೆ ತನುವಾಗಿ, ಮನಕ್ಕೆ ಮನವಾಗಿ,
ಅರಿವಿಂಗೆ ಅರಿವಾಗಿ, ತೆರಹಿಲ್ಲದಿರ್ದ ಘನವ,
ಒಮ್ಮೆ ಆಹ್ವಾನಿಸಿ ನೆನೆದು, ಒಮ್ಮೆ ವಿಸರ್ಜಿಸಿ
ಬಿಟ್ಟಿಹೆನೆಂದಡೆ ತನ್ನಳವೆ?

ಪರಿಪೂರ್ಣ ಪರಶಿವನು, ಆರಾರ ಭಾವಕಲ್ಪನೆ
ಹೇಗೆ ಹೇಗೆ ತೋರಿತೆಂದಡೆ
ತೋರಿದಂತೆ, ಖಂಡಿತನಪನೇ ಆಗಲರಿಯನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೧೮೯ ॥

೯೭೫

ಪೃಥ್ವಿ ಅಪ್ಪು ತೇಜ ವಾಯು ಆಕಾಶ ಚಂದ್ರ ಸೂರ್ಯ ಆತ್ಮನೆಂಬ
ಅಷ್ಟತನುಗಳಲ್ಲಿ, ಶಿವನಧಿಷ್ಠಾತೃವಾದನೆಂದಡೆ
ಅಷ್ಟತನುಗಳು ಶಿವನಾಗಲರಿಯವು.
ಮತ್ತೆ, ಶಿವನ ಬಿಟ್ಟು ಬೇರೆ ತೋರಲರಿಯವು.
ಅಷ್ಟತನುಗಳೆಲ್ಲ ಸೋಪಾಧಿಕವಲ್ಲದೆ ನಿಜತನುವಲ್ಲ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಂಗೆ,
ಅಷ್ಟತನುಮೂರ್ತಿಯೆಂಬುದುಪಚಾರವು. ॥ ೧೯೦ ॥

೯೭೬

ಆದಿಮುಕ್ತನ, ಅನಾದಿಮುಕ್ತನ, ನಾದಬಿಂದು ಕಳಾತೀತನ,
ಭೇದಿಸಬಾರದಭೇದ್ಯನ, ಅಪ್ರಮಾಣನ, ವೇದ ಶಾಸ್ತ್ರ
ಆಗಮ ಪುರಾಣಾದಿಗಳರಸಿ ಕಾಣದನಾದಿಪುರುಷನ,
ಸ್ವಯಂಪ್ರಕಾಶ ಸ್ವತಃ ಸಿದ್ಧನನೆಂತು ಅರಿವರಯ್ಯ
ಸ್ವಾನುಭಾವಸಿದ್ಧರಲ್ಲದವರು?.
ಹಲವನೋದಿ ಹೇಳಿ ಕೇಳಿ ಹಲಬರೆಲ್ಲ ಹೊಲಬುಗೆಟ್ಟರು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ,
ಪ್ರಸಾದವಿಲ್ಲದವರೆಲ್ಲರು ಭ್ರಾಂತರಾದರು. ॥ ೧೯೧ ॥

೯೭೭

ಕಾದಬಲ್ಲೆವೆಂಬವರೆಲ್ಲ ಕಲಿವೀರಭಟರಹರೆ?.
ಇರಿಯದ ವೀರತ್ವ ಮೆರೆಯಬಲ್ಲುದೆ ಹೇಳ?.
ನಿಜವನರಿಯದೆ ಬರಿಮಾತನಾಡುವರೆಲ್ಲ ಜ್ಞಾನಿಗಳಹರೆ?.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನನರಿದು,
ಮಾಯೆಯ ಗೆಲಬಲ್ಲಾತನೆ ಕಲಿವೀರನು. ॥ ೧೯೨ ॥

೯೭೮

ಹಣೆಗಣ್ಣು ಕೊರಳಕಪ್ಪು ಫಣಿಕುಂಡಲ ದಶಭುಜ ಉಡುಪತಿಯ
ಜಡೆಯ ನಡುವಿಹ ಗಂಗೆಯ ಉಡಿಯ ಪುಲಿಚರ್ಮವ
ತೊಡಿಗೆಯ ಕರೋಟಿಮಾಲೆಯ ಹಿಡಿದ ಕಂಕಾಳದಂಡವ-
ನಿವನಡಗಿಸಿ ಮೃಡ ಶರಣನಾಮವಿಡಿದು ಚರಿಸಿದನೆಂಬ
ದೃಢಭಕ್ತಿಯಿಲ್ಲದವರಿಗೆ ಶಿವನೊಲಿಯೆಂದರೆಂತೊಲಿವ
ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. || ೧೯೩ ||

೯೭೯

ಆವಾವ ಘಟವ ಧರಿಸಿ ಜೀವಿಸುವ ಜೀವರಿಗೆ,
ಬೇರೆ ಬೇರೆ ಅವಕವಕೆ ತಕ್ಕ ವಿಷಯಜ್ಞಾನವ ಕೊಟ್ಟು
ಸಲಹುವ ದೇವನ ಮರೆದು,
ಹುಲುದೈವವ ಹಿಡಿದು ಹುಲ್ಲಿಂದ ಕಡೆಯಾದರು ಅಕಟಕಟ!
ಹೆತ್ತು ಮೊಲೆಯೂಡಿ ಸಲಹುವ ತಾಯ ಮರೆದು,
ತೊತ್ತಿನ ಕಾಲಿಗೆ ಬೀಳುವ ವ್ಯರ್ಥಜೀವರ ನೋಡಾ. ನಿತ್ಯ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆಂಬ ಕರ್ತನನರಿಯದೆ
ಅನ್ಯದೈವವ ಭಜಿಸುವ ಕುನ್ನಿಗಳನೇನೆಂಬೆನು?. || ೧೯೪ ||

೯೮೦

ಬೀಜದಿಂದ ಅಂಕುರ ತೋರಿದ ಬಳಿಕ
ಬೀಜ ನಾಶವಪ್ಪುದು ನೋಡಯ್ಯ.
ಪುಷ್ಪದಿಂದ ಫಲ ತೋರಿದ ಬಳಿಕ
ಪುಷ್ಪ ನಾಶವಪ್ಪುದು ನೋಡಯ್ಯ.
ಸತ್ಕರ್ಮದಿಂದ ತತ್ತ್ವ ವ್ಯಕ್ತವಾದ ಬಳಿಕ
ಕರ್ಮ ನಾಶವಪ್ಪುದು ನೋಡಯ್ಯ.
ಈ ಪರಿಯಿಂದ ಅಂಕುರ ಫಲದಂತೆ,
ತಮ್ಮಲ್ಲಿ ತನ್ಮಯವಾಗಿರ್ದ ತತ್ತ್ವವ ತಾವರಿಯದೆ,
ಹಲವು ಶಾಸ್ತ್ರವನೋದಿ ತಿಳಿವಿಲ್ಲದ ಮೂಢರೆಲ್ಲ
ಹೊಲಬುಗೆಟ್ಟು ಹೋದರಲ್ಲ.
ಅದೆಂತೆಂದಡೆ :
ಗೋಪ ಕಕ್ಷೆಯಲ್ಲಿ ಛಾಗದ ಮರಿಯನಿಟ್ಟು

ಮರಿಯ ಕಾಣೆನೆಂದು ಬಾವಿಯ ನಿಲಿಕಿ ನೋಡೆ
ಬಾವಿಯ ನೀರೊಳಗೆ ಮರಿಯ ಬಿಂಬವ ಕಂಡು
ಬಾವಿಯ ಬೀಳುವ ಗೋಪನಂತೆ,
ಉಭಯಕುಚಮಧ್ಯಕೋಟರದಲ್ಲಿ ನಿದ್ರೆಗೆಯ್ಯುತಿರ್ದ
ಸುತನ ಮರೆದು, ಸುತನ ಕಾಣೆನೆಂದು ರೋದನವ
ಮಾಡುವ ಮೂಢಸ್ತ್ರೀಯಂತೆ,
ತಮ್ಮಲ್ಲಿದ್ದ ನಿಜತತ್ತ್ವವ ತಾವರಿಯದವರು
ಆತ್ಮಾರ್ಥವಾಗಿ ಕೆಟ್ಟು ವ್ಯರ್ಥರಾದರೆಲ್ಲಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೯೫ ॥

೯೮೧

ಇಂದು ಭಾನುವನೊಂದುಗೂಡಿಸಿ,
ಬಿಂದು ನಾದವನೊಂದುಮಾಡಿ,
ಅವರಲ್ಲಿ ತಂದಿರಿಸಿದ ಜೀವ ಪ್ರಾಣಂಗಳನು.
ಅವರೊಳಗೆ ಕರಣೇಂದ್ರಿಯಗಳ ಹುರಿಗೊಳಿಸಿ,
ನಾಡಿ ಚಕ್ರಂಗಳಿಂದ ಜಂತ್ರವ ಹೂಡಿ ನಿಲಿಸಿ,
ತಾಯಿ ಉಂಡ ಅನ್ನರಸವ ನಾಭಿಸೂತ್ರದಲ್ಲಿ ಶಿಶುವಿಗೆ ಊಡಿಸಿ,
ಜೀವಿಸಿದ ಶಿಶುವ ಯೋನಿಮುಖದಿಂ ಹೊರವಡಿಸಿ,
ತಾಯಿಯ ಸ್ತನದಲ್ಲಿ ಅಮೃತವ ತುಂಬಿ ಊಡಿಸಿ,
ಸಲಹುವ ದೇವನ ಮರೆವ ಜೀವರಿಗೆ ಇನ್ನಾವಗತಿಯೂ ಇಲ್ಲಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೯೬ ॥

೯೮೨

ಸುವಿಚಾರದರಿವು ಕಣ್ದೆರೆದು,
ನಿರ್ಮಲತ್ವ ನಿರಹಂಕಾರ, ಅನಪೇಕ್ಷೆ ಅಕಾಮ ಮತಿಯಾಗಿ,
ನಿರ್ಮಲಾಚಾರದಿಂದ ಶಿವನ ಭಜಿಸಿ,
ಪರಮಾನಂದರೂಪನಾಗಿ ಶಿವಪದವ ನೆಮ್ಮಿ
ಇತರವನರಿಯದ ಶಿವನಿಷ್ಠನ ನೋಡಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೯೭ ॥

೯೮೩

ಶಿವಜ್ಞಾನೋದಯವಾದ ಭಕ್ತನ ಪೂರ್ವಾಶ್ರಯವಳಿದು
ಭಕ್ತನಾಗಬೇಕೆಂಬಿರಿ.
ಭವಿಗೆ ಪೂರ್ವಾಶ್ರಯವಲ್ಲದೆ ಭಕ್ತಂಗೆ ಪೂರ್ವಾಶ್ರಯವುಂಟೇ?.
ಇಲ್ಲವಾಗಿ.
"ಅಜ್ಞಾನಂ ಪೂರ್ವಮಿತ್ಯಾಹುರ್ಭವೋಽನಾದಿಸ್ಥಲಾಶ್ರಯಃ।
ಸರ್ವಂ ನಿರಸಿತವ್ಯಂ ಚ ಪ್ರಯತ್ನೇನ ವಿಪಶ್ಚಿತಾ"
ಎಂದುದಾಗಿ,
ಮಲ ಮಾಯಾ ಸಂಸಾರದಲ್ಲಿ ಮರಳಿ ಮರಳಿ ಬಪ್ಪಾತನೆ ಭವಿ.
ಸಂಸಾರವಳಿದು, ನಿಜವುಳಿದು
ಗುರು ಲಿಂಗ ಜಂಗಮಕ್ಕೆ ಮಾಡುವ ಭಕ್ತಂಗೆ ಭವವಿಲ್ಲ.
ಆತನು ಜೀವನ್ಮುಕ್ತನಾಗಿಹನು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೧೯೮ ॥

೯೮೪

ಪರಿಶುದ್ಧ ಮನದಿಂದ ಲಿಂಗವ ಧರಿಸಿ,
ನಿಯಮ ವ್ರತ ಶೀಲ ಧರ್ಮದಲ್ಲಿ ನಿರತನಾದ ಭಕ್ತನ,
ಅಂಗವೆಂಬ ಅರಮನೆಯಲ್ಲಿಹ ಲಿಂಗಕ್ಕೆ
ಮನವೆ ಮಂಚ, ನೆನಹೆ ಹಾಸುಗೆ,
ಅನುಭಾವವೆ ಒರಗು, ಶಾಂತಿಯೆ ಆಲವಟ್ಟವು,
ಸಮತೆಯೆ ಸಂತೋಷವಾಗಿ,
ಸದ್ಭಕ್ತನ ಹೃದಯ ಸಿಂಹಾಸನದಲ್ಲಿ ಮೂರ್ತಿಗೊಂಡಿಪ್ಪನಯ್ಯಾ,
ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೧೯೯ ॥

೯೮೫

ನಾ ಬಲ್ಲೆ ತಾಬಲ್ಲೆನೆಂಬುವರೆಲ್ಲ
ಅಲ್ಲ ಅಹುದೆಂಬ ಗೆಲ್ಲ ಸೋಲದ ಮಾತ ಕಲಿತು ಆಡುವರಲ್ಲದೆ
ಅದನಾರು ಮೆಚ್ಚುವರು?.
ಕಾಲೂರಿ ಒಂದೆರಡು ಯೋಜನ ನಡೆಯಬಹುದಲ್ಲದೆ
ತಲೆಯೂರಿ ನಡೆಯಬಹುದೆ?.
ನೆಲೆಯರಿಯದ ಮಾತ ಹಲವ ನುಡಿದಡೇನು ಫಲ?,

ನೆಲಯರಿವ ಮಾತೊಂದೆ ಸಾಲದೆ?.
ಹಲವು ದೇವರೆಂದು ಹೊಲಬುಗೆಟ್ಟು ನುಡಿವರು.
ಕುಲಸ್ವಾಮಿ ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೊಬ್ಬನೆ
ದೇವರೆಂದರಿದೆಡೆ ಸಾಲದೆ?. ॥ ೨೦೦ ॥

೯೮೬

ಲಿಂಗನಿಷ್ಠಾಭರಿತನಾದ ಕಾರಣ ಅಂಗಗುಣವಳಿದು
ಕಂಗಳು ಲಿಂಗದಲ್ಲಿ ಲೀಯವಾದವಾಗಿ
ಅಂಗಜನ ಭಯವಿಲ್ಲ.
ಲಿಂಗವೆಂಬಂತೆ ಇಹನಾಗಿ, ಕಾಲನ ಭಯವಿಲ್ಲ.
ಇಹಪರವೆಂಬೆರಡರ ದೆಸೆಯ ಹೊದ್ದನಾಗಿ
ಮಾಯಾಭಯವಿಲ್ಲ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನಿಮ್ಮ ಶರಣನ ಚಾರಿತ್ರ ಆವ ಲೋಕದೊಳಗೂ ಇಲ್ಲ.
॥ ೨೦೧ ॥

೯೮೭

ಸ್ವರ್ಗ ಮರ್ತ್ಯ ಪಾತಾಳವೆಂಬ ಮೂರುಲೋಕವ
ಒಳಗೂ ಹೊರಗೂ ಶಿವನು ಭರಿತನಾಗಿರ್ದನೆಂದಡೆ,
ಆ ಮೂರುಲೋಕದ ಪ್ರಾಣಿಗಳೆಲ್ಲಾ ಶಿವಪದವನೆಯ್ದೆ ಬಲ್ಲರೇ?
ಎಯ್ದಲರಿಯರಾಗಿ.
ಅದೇನು ಕಾರಣವೆಂದಡೆ,
ಶ್ರೀಗುರುದರ್ಶನದಿಂದಲ್ಲದೆ ಎಯ್ದಬಾರದಾಗಿ.
ಅದು ಕಾರಣ ಗುರುಕೃಪಾ ನಿರೀಕ್ಷಣೆಯಿಂದವೆ
ಪರಮಮುಕ್ತಿಯಪ್ಪುದು ತಪ್ಪದಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೦೨ ॥

೯೮೮

ಶಿವ ತನ್ನ ಶಕ್ತಿಯಿಂದ ಜಗವನಧಿಷ್ಠಿಸಿ ತೊಲಗದೆ,
ಅಚಲವಾಗಿ ಜಗವ ಸೋಂಕಿದ್ದು ತಾನಾ ಜಗದಂತಲ್ಲದೆ,
ತನ್ನ ಶಕ್ತಿಯಿಂದ ಪರಮನಿರ್ಮಲನಾಗಿ,

ಜಗದಂತರ್ಯಾಮಿಯಾದ
ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೨೦೩ ॥

೯೮೯

ಹಲವು ತೃಣ ಕಾಷ್ಠಗಳಲ್ಲಿ ಅಗ್ನಿ ಬೆರದಿರ್ದಂತೆ,
ಹಲವು ಘಟಜಲದಲ್ಲಿ ಸೂರ್ಯ ಬಿಂಬಿಸುತ್ತಿರ್ದಂತೆ,
ಇಪ್ಪನಯ್ಯ ಶಿವನು ಸಕಲ ಜೀವರ ಹೃದಯದಲ್ಲಿ.
ಬೆರಸಿಯೂ ಬೆರಸದಂತಿಪ್ಪನಯ್ಯಾ,
ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೨೦೪ ॥

೯೯೦

ಸುಜ್ಞಾನವೆಂಬ ಹಡಗನೇರಿದ ಗುರು
ತನ್ನನಾಶ್ರಯಿಸಿದ ಶಿಷ್ಯನ
ಸಂಸಾರವೆಂಬ ಮಹಾಪಾಪಸಮುದ್ರವ ದಾಂಟಿಸಿ, ತಡಿಗೆ ಸೇರಿಸಿ
ಮುಕ್ತಿಯೆಂಬ ಗ್ರಾಮಕ್ಕೆ ಎಯ್ದುವ
ಭಕ್ತಿಮಾರ್ಗವ ತೋರಿಸುವನಲ್ಲದೆ,
ಸುಜ್ಞಾನಿಯಲ್ಲದ ಗುರು, ತನ್ನನಾಶ್ರಯಿಸಿದ ಶಿಷ್ಯನ
ಸಂಸಾರ ಸಮುದ್ರದ ದಾಂಟಿಸಲರಿಯ.
ಅದೆಂತೆಂದಡೆ:
ಅರೆಗಲ್ಲು ಅರೆಗಲ್ಲ ನದಿಯ ದಾಂಟಿಸಲರಿಯದಂತೆ.
ಇದು ಕಾರಣ,
ಸುಜ್ಞಾನಗುರುವಿನ ಪಾದವ ಹಿಡಿದು
ಸಂಸಾರಸಮುದ್ರವ ದಾಂಟಿಸಬಲ್ಲಡಾತನೇ ಧನ್ಯನು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೦೫ ॥

೯೯೧

ವೇಷವ ಧರಿಸಿ, ಭಾಷೆಯ ಕಲಿತು, ದೇಶವ ಸುತ್ತಿ ಬಳಲಬೇಡ.
ಜಗದೀಶನ ಪಾದವನೊಲಿದು ಪೂಜಿಸಿರಣ್ಣಾ.
ಸವಿಯೂಟದಾಸೆಗೆ ಮನವೆಳಸಬೇಡ.
ಪರಮೇಶನ ಪಾದವ ನೆನೆದು ಸುಖಿಸಿರಣ್ಣಾ.
ತರ್ಕಶಾಸ್ತ್ರ ಆಗಮ ಮಾಯಾಜಾಲದ ಹರಟೆಗೆ ಹೊಗದೆ,

ಮೂಲಮಂತ್ರ[ವ] ಮರೆಯದೆ ಸ್ಮರಿಸಿರಣ್ಣ.
ಸಂಸಾರಿಗಳ ಸಂಗದೊಳಗೆ ಇರಬೇಡ.
ಸದ್ಭಾವರ ಸಂಗದೊಳಗಿರ್ದು ನಿತ್ಯವ ಸಾಧಿಸಿಕೊಳ್ಳಿರಣ್ಣ.
ಪರರ ಯಾಚಿಸಿ ತನುವ ಪೊರೆಯಬೇಡ.
ಶಿವನಿಕ್ಕಿದ ಭಿಕ್ಷೆಯೊಳಗಿದ್ದು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನನೊಲಿಸಿರಣ್ಣ.॥ ೨೦೬ ॥

ಪ್ರಸಾದಿಸ್ಥಲ

೯೯೨

ಶಿರ ಮುಖ ಹೃದಯ ಪಾದ ಬಾಹುಗಳೆಲ್ಲ
ಶಿವನ ಅವಯವಂಗಳಾದವು.
ಶ್ರೋತ್ರ ತ್ವಕ್ ನೇತ್ರ ಜಿಹ್ವೆ ಘ್ರಾಣವೆಂಬವೆಲ್ಲ
ಶಿವನ ಇಂದ್ರಿಯಂಗಳಾದವು.
ಮನ ಬುದ್ಧಿ ಚಿತ್ತ ಅಹಂಕಾರಗಳೆಲ್ಲಾ ಶಿವನ ಕರಣಂಗಳಾದವು.
ಪ್ರಾಣ ಅಪಾನ ವ್ಯಾನ ಉದಾನ ಸಮಾನ ಎಂಬವುಗಳಲ್ಲಿ
ಶಿವನ ಚೈತನ್ಯವಿದ್ದುದಾಗಿ
ಒಳಗಿದ್ದ ಚೇತನವು ನೀವೇ.
ಒಳಗೆ ನೀವು, ಹೊರಗೆ ನೀವು : ನಾನೆಂಬುದಿಲ್ಲ.
ನಾನೇನ ಮಾಡಿತ್ತೆಲ್ಲಾ ನಿಮ್ಮ ವಿನೋದ.
ಎನ್ನ ಸರ್ವ ಭೋಗವೆಲ್ಲ ನಿಮ್ಮ ಭೋಗವಯ್ಯ.
ಕರ್ತೃತ್ವ ನಿಮ್ಮದಾಗಿ, ಎನಗೆ ಕರ್ತೃತ್ವವಿಲ್ಲ.
ನಾ ನಿಮ್ಮೊಳಗು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೦೭ ॥

೯೯೩

ಸರ್ವೇಂದ್ರಿಯಂಗಳಲ್ಲಿ ಸರ್ವಮುಖವಾಗಿ ಬಂದ ಪದಾರ್ಥದ
ಪೂರ್ವಾಶ್ರಯವ ಕಳೆದು, ಅವಧಾನದಿಂದ ಕೊಂಬಾತ
ನೀನಾದ ಕಾರಣ,
ನಾನು ಅರಿದುಕೊಡಬೇಕೆಂಬ ಅವಧಾನವೆನಗಿಲ್ಲಯ್ಯ.
ಅದೇನು ಕಾರಣವೆಂದಡೆ:
ಎನ್ನಂಗ ಮನ ಪ್ರಾಣ ಇಂದ್ರಿಯಂಗಳು ನಿನ್ನವಾಗಿ.

ಅಲ್ಲಿ ಅರಿದು ಭೋಗಿಸುವ ಭೋಗಮೂರ್ತಿ ನೀನೆಯಯ್ಯ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೦೮ ॥

೯೯೪

ಘ್ರಾಣ ಮುಟ್ಟದ ಮುನ್ನ ನಿಮಗರ್ಪಿತವಾಯಿತ್ತು.
ಜಿಹ್ವೆ ಮುಟ್ಟದ ಮುನ್ನ ನಿಮಗರ್ಪಿತವಾಯಿತ್ತು.
ನೇತ್ರ ಮುಟ್ಟದ ಮುನ್ನ ನಿಮಗರ್ಪಿತವಾಯಿತ್ತು.
ತ್ವಕ್ಕು ಮುಟ್ಟದ ಮುನ್ನ ನಿಮಗರ್ಪಿತವಾಯಿತ್ತು.
ಶ್ರೋತ್ರ ಮುಟ್ಟದ ಮುನ್ನ ನಿಮಗರ್ಪಿತವಾಯಿತ್ತು.
ಮನ ಮುಟ್ಟದ ಮುನ್ನ ನಿಮಗರ್ಪಿತವಾಯಿತ್ತು.
ಇಂತು ಸರ್ವೇಂದ್ರಿಯಂಗಳು ಮುಟ್ಟದ ಮುನ್ನ
ನಿಮಗರ್ಪಿತವಾಯಿತ್ತು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೦೯ ॥

೯೯೫

ಅಯ್ಯಾ ಘ್ರಾಣದಲ್ಲಿ ನಿಂದು ಗಂಧವ ಗ್ರಹಿಸಿ
ಗಂಧಪ್ರಸಾದವನೀವುತ್ತಿರ್ಪಿರಯ್ಯ.
ಜಿಹ್ವೆಯಲ್ಲಿ ನಿಂದು ರಸವ ಗ್ರಹಿಸಿ
ರಸಪ್ರಸಾದವನೀವುತ್ತಿರ್ಪಿರಯ್ಯ.
ನೇತ್ರದಲ್ಲಿ ನಿಂದು ರೂಪವ ಗ್ರಹಿಸಿ
ರೂಪಪ್ರಸಾದವ ನೀವುತ್ತಿರ್ಪಿರಯ್ಯ.
ತ್ವಕ್ಕಿನಲ್ಲಿ ನಿಂದು ಸ್ಪರ್ಶನವ ಗ್ರಹಿಸಿ
ಸ್ಪರ್ಶನಪ್ರಸಾದವನೀವುತ್ತಿರ್ಪಿರಯ್ಯ.
ಶ್ರೋತ್ರದಲ್ಲಿ ನಿಂದು ಶಬ್ದವ ಗ್ರಹಿಸಿ
ಶಬ್ದಪ್ರಸಾದವನೀವುತ್ತಿರ್ಪಿರಯ್ಯ.
ಮನದಲ್ಲಿ ನಿಂದು ಪರಿಣಾಮವ ಗ್ರಹಿಸಿ
ಪರಿಣಾಮಪ್ರಸಾದವ ನೀವುತ್ತಿರ್ಪಿರಯ್ಯ.
ಇಂತು ಸರ್ವೇಂದ್ರಿಯಂಗಳಲ್ಲಿ ನಿಂದು, ಸರ್ವಪದಾರ್ಥವ ಗ್ರಹಿಸಿ
ಎನಗೆ ಪ್ರಸಾದವ ಕರುಣಿಸುತ್ತಿರ್ಪಿರಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೧೦ ॥

೬೬೬

ಅಯ್ಯಾ, ನಿಮಗೆ ಪತ್ರೆ ಪುಷ್ಪದಿಂದ ಪೂಜೆಯ ಮಾಡುತಿರ್ದಡೇನು
ಸರ್ವೇಂದ್ರಿಯಂಗಳು ಸೋಂಕಿದವೆಲ್ಲ
ನಿಮ್ಮ ಪೂಜೆಯಾಗಿ ಮಾಡದನ್ನಕ್ಕ?.
ಅಯ್ಯಾ, ನಿಮ್ಮ ನೆನೆವುತ್ತಿರ್ದಡೇನು
ನೆನೆವ ಮನದಲ್ಲಿ ನಿಮ್ಮ ನೆಲೆಗೊಳಿಸಿ
ಮನ ನಿಮ್ಮಲ್ಲಿ ಲೀಯವಾಗದನ್ನಕ್ಕ?.
ಅಯ್ಯಾ ನಿಮಗೆ ಸಕಲ ಸುಯಿಧಾನವನರ್ಪಿಸುತ್ತಿರ್ದಡೇನು
ಅರ್ಪಣದೊಳಗೆ ತನ್ನ ನಿಮ್ಮಲ್ಲಿ ಅರ್ಪಿಸಿ ನಿಮ್ಮೊಳಗಾಗದನ್ನಕ್ಕ?.
ಅದು ಕಾರಣ,
ತನುಗುಣವಿಡಿದು ಲಿಂಗವ ಮುಟ್ಟಿ ಪೂಜೆಯ ಮಾಡಿದವರೆಲ್ಲ,
ನಿಮಗೆ ಮುನ್ನವೇ ದೂರವಾದರು.
ನಾನಿದನರಿದು ಅವಿರಳ ಲಿಂಗಾರ್ಚನೆಯ ಮಾಡಿ
ನಿಮ್ಮೊಳಗಾದೆನಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೧೧ ॥

೬೬೭

ಕಾಯದ ಕರದಲ್ಲಿ ಲಿಂಗವ ಧರಿಸಿ,
ಲಿಂಗಾರ್ಚನೆಯ ಮನಮುಟ್ಟಿ ಮಾಡುತ್ತಿದ್ದಡೆ,
ಮನ ಲಿಂಗದಲ್ಲಿ ತರಪರವಾಯಿತ್ತು.
ಮತ್ತೆ, ಮನದ ಮೇಲೆ ಲಿಂಗ ನೆಲೆಗೊಂಡಿತ್ತು.
ಮನದ ಮೇಲಣ ಲಿಂಗವ, ಭಾವ ಭಾವಿಸಿ, ಭಾವ ಬಲಿದಲ್ಲಿ,
ಭಾವದ ಕೊನೆಯಲ್ಲಿ ನಿಂದಿತ್ತಾಗಿ,
ಭಾವ ಬಯಲಾಗಿ ನಿರ್ಭಾವವಾಯಿತ್ತು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ ನಿಮ್ಮ ಶರಣಂಗೆ.
॥ ೨೧೨ ॥

೬೬೮

ಮನ ಮನವ ಬೆರೆಸಿ, ಸ್ನೇಹ ಬಲಿದ ಬಳಿಕ,
ನಿನ್ನ ನೆನವುತ್ತಿಪ್ಪೆ ನಾನು, ನನ್ನ ನೆನೆವುತ್ತಿಪ್ಪೆ ನೀನು.
ನನಗೂ ನಿನಗೂ ಏನೂ ಹೊರೆಯಿಲ್ಲ.

ಇದ ನೀ ಬಲ್ಲೆ, ನಾ ಬಲ್ಲೆ.
ನಿನ್ನನಗಲದಿಪ್ಪೆ ನಾನು, ನನ್ನನಗಲದಿಪ್ಪೆ ನೀನು,
ಚಿನ್ನ ಬಣ್ಣದಂತೆ ಇಪ್ಪೆವಾಗಿ ಇನ್ನು ಭಿನ್ನವುಂಟೇ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೧೩ ॥

೯೯೯

ಪ್ರಕಾಶದ್ವಾರ ಗಂಧದ್ವಾರ ಶಬ್ದದ್ವಾರವೆಂಬ
ಅರುದ್ವಾರ ಕೂಡಿದ ಠಾವಿನಲ್ಲಿ,
ನಾದ ಬಿಂದು ಕಲೆಯೆಂಬ ಸಿಂಹಾಸನದ ಮೇಲೆ
ಮೂರ್ತಿಗೊಂಡು,
ಶಬ್ದ ರೂಪು ಗಂಧಂಗಳ ಗ್ರಹಿಸುವಾತ
ನೀನಲ್ಲದೆ ಮತ್ತಾರು ಹೇಳ?.
ಗಳದಲ್ಲಿ ನಿಂದು ಷಡುರಸ್ನಾನದ ರುಚಿಯ
ಜಿಹ್ವೆಯಲ್ಲಿ ಸ್ವಾದಿಸುವಾತ ನೀನಲ್ಲದೆ ಮತ್ತಾರು ಹೇಳ?.
ಸರ್ವಾಂಗದಲ್ಲಿ ನಿಂದು, ತ್ವಗಿಂದ್ರಿಯ ಮುಖದಲ್ಲಿ
ಸ್ಪರ್ಶನವ ತಳೆದುಕೊಂಬಾತ ನೀನಲ್ಲದೆ ಮತ್ತಾರು ಹೇಳ?.
ಮನವೆಂಬ ಮುಖದಲ್ಲಿ ನಿಂದು ಪರಿಣಾಮವನನುಭವಿಸುವಾತ
ನೀನಲ್ಲದೆ ಮತ್ತಾರು ಹೇಳ?.
ಸರ್ವಾವಯವಂಗಳಲ್ಲಿ ಸರ್ವಮುಖವಾಗಿ ಭೋಗಿಸಿ
ಪ್ರಸಾದವ ಕರುಣಿಸಿದ ಕೃಪಾಮೂರ್ತಿ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ನೀನಲ್ಲದೆ ಮತ್ತಾರು ಹೇಳ?.
॥ ೨೧೪ ॥

೧೦೦೦

ನಡೆವ ಗತಿಗಳಲ್ಲಿ ನಿಮ್ಮ ಕೂಡಿ ನಡೆವೆನಯ್ಯ.
ಹಿಡಿವಲ್ಲಿ ಬಿಡುವಲ್ಲಿ ನಿಮ್ಮ ಕೂಡಿ ಹಿಡಿವೆನು ಬಿಡುವೆನಯ್ಯ.
ನುಡಿವಲ್ಲಿ ನಿಮ್ಮ ಕೂಡಿ ನುಡಿವೆನು.
ಒಡಲಿಂದ್ರಿಯಂಗಳೆಲ್ಲ ನಿಮ್ಮವಾಗಿ ಎನಗೊಂದೊಡೆತನವಿಲ್ಲ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ನಾನು ನಿಮ್ಮೊಳಗಾಗಿ.
॥ ೨೧೫ ॥

೧೦೦೧

ಊರ್ಧ್ವಮುಖಮೂಲ ಅಧೋಶಾಖೆಯಾದ
ವೃಕ್ಷದ ಮೂಲದಲ್ಲಿ ಒಬ್ಬ ಯೋಗಿಯಿದಾನೆ.
ಆ ಯೋಗಿಯ ಕೈಯಲ್ಲೊಂದು ಅಮೃತದ ಫಲವ ನೋಡ.
ಆ ಫಲವ ಮೆದ್ದವರೆಲ್ಲ ಅಮರರಾದುದ ಕಂಡು
ನಾನು ಬೆರಗಾದೆ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೧೬ ॥

೧೦೦೨

ಸಿತ ಕೆಂಪು ಕೃಷ್ಣವೆಂಬ ಮೂರರ ಮೇಲೆ,
ಅತಿಶಯವಾಗಿ ಬೆಳಗುವ ಶಿವಲಿಂಗವ,
ಅನುದಿನ ಮನವಿಲ್ಲದ ಮನದಲ್ಲಿ ನೆನೆದು ಸುಖಿಯಾದೆನು,
ಎನ್ನ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ. ॥ ೨೧೭ ॥

೧೦೦೩

ಅರಳಿದ ಪುಷ್ಪ ಪರಿಮಳಿಸಿದಲ್ಲದೆ ಮಾಣದು.
ಗುರುವಿನಿಂದ ಪಡೆದ ಶಿವಲಿಂಗವ ಹರುಷದಿಂದ
ನೋಡಿ ನೆನೆದಡೆ,
ಆ ಲಿಂಗ, ಕಣ್ಮನವ ವೇಧಿಸಿದಲ್ಲದೆ ಮಾಣದು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಕೂಡುವಡೆ,
ನೋಟ ಬೇಟವೆರಡು ಅಳಿದಲ್ಲದಾಗದು. ॥ ೨೧೮ ॥

೧೦೦೪

ಶರಣನ ಶರೀರವ ಸೋಂಕಿದ
ರವಿ ತನ್ನ ಮಂಡಲವ ಬಿಟ್ಟು
ಶಿವಸಾಮೀಪ್ಯವ ಪಡೆಯದಿಪ್ಪನೆ ಅಯ್ಯ?.
ನರಜನ್ಮದಲ್ಲಿ ಹುಟ್ಟಿದವನು ಗುರುಹಸ್ತ ಸೋಂಕಿದ ಬಳಿಕ,
ಹರನಾಗದಿಪ್ಪನೆ ಅಯ್ಯ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ?. ॥ ೨೧೯ ॥

೧೦೦೫

ಪದಾರ್ಥವನರ್ಪಿಸಿ ಪ್ರಸಾದವ ಪಡೆದೆವೆಂದೆಂಬರು
ನಾವಿದನರಿಯೆವು.
ಪದಾರ್ಥವಾವುದು ಪ್ರಸಾದವಾವುದೆಂದರಿಯರು.
ಪದಾರ್ಥವೆ ಆತ್ಮನು. ಪ್ರಸಾದವೇ ಪರವಸ್ತುವು.
ಪದಾರ್ಥವ ಪರವಸ್ತುವಿನಲ್ಲಿ ಅರ್ಪಿಸಿ,
ಪಧಾರ್ಥಭಾವವಿಲ್ಲದೆ ಪ್ರಸಾದಭಾವವಾದುದೆ,
ಪ್ರಸಾದವ ಪಡೆದುದು.
ಈ ಭೇದವನರಿಯದೆ,
ಪರದ್ರವ್ಯವಾದ ಸಕಲ ಪದಾರ್ಥವನರ್ಪಿಸಿ,
ಪ್ರಸಾದವ ಪಡೆದೆವೆಂಬ
ಭ್ರಾಂತಬಾಲಕರಿಂದ ಬಿಟ್ಟು ಬಾಲಕರುಂಟೇ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ?. ॥ ೨೨೦ ॥

೧೦೦೬

ಶ್ರೋತ್ರೇಂದ್ರಿಯವನು ಆ ಇಂದ್ರಿಯದೊಡನೆ
ಕೂಡಿದ ಆಕಾಶವನು,
ತ್ವಗಿಂದ್ರಿಯವನು ಆ ಇಂದ್ರಿಯದೊಡನೆ ಕೂಡಿದ ವಾಯುವನು,
ನೇತ್ರೇಂದ್ರಿಯವನು ಈ ಇಂದ್ರಿಯದೊಡನೆ ಕೂಡಿದ ಅಗ್ನಿಯನು,
ಜಿಹ್ವೇಂದ್ರಿಯವನು ಆ ಇಂದ್ರಿಯದೊಡನೆ ಕೂಡಿಹ ಅಪ್ಪುವನು,
ನಾಸಿಕೇಂದ್ರಿಯವನು ಆ ಇಂದ್ರಿಯದೊಡನೆ ಕೂಡಿಹ ಪೃಥ್ವಿಯನು,
ಈ ಭೂತಂಗಳು ಕೂಡಿ, ಸಕಲೇಂದ್ರಿಯ ಶಬ್ದಾದಿ
ವಿಷಯಾರ್ಪಣವ ಮಾಡಿ, ಪ್ರಸಾದವ ಪಡೆದರು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ನಿಮ್ಮ ಪ್ರಸಾದಿಗಳು.
॥ ೨೨೧ ॥

೧೦೦೭

ಶುದ್ಧಾನ್ನಪಾನಾದಿಗಳನು ಮಂತ್ರಭಸ್ಮದಿಂದ ಪವಿತ್ರವ ಮಾಡಿ,
ಪತಿಭಕ್ತಿಯಿಂದ ಲಿಂಗಮುಖಕ್ಕೆ ಸಮರ್ಪಿಸಿ, ತಾ ಸ್ವಾದಿಸುವದು.
ತನ್ನ ರಸನೆಯ ಲಿಂಗದ ರಸನೆಯೆಂದು ಸವಿದು,

ಪ್ರಸಾದತೃಪ್ತಿಯ ಪಡೆದಾತನೆ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ನಿತ್ಯಸುಖಿಯಾದಾತನು.
॥ ೨೨೨ ॥

೧೦೦೮

ಪದಾರ್ಥದ ಪೂರ್ವವ ಕಳೆದಲ್ಲದೆ ಹಿಡಿಯಬಾರದು.
ಮುಟ್ಟಿ ಕೊಡಬಾರದು. ಮುಟ್ಟದೆ ಕೊಡಬಾರದು.
ಅದೆಂತೆಂದಡೆ:
ತನ್ನ ಹಸ್ತದೊಳಗೆ ಲಿಂಗದ ಹಸ್ತವ ಕೂಡಿ
ಮುಟ್ಟದೆ ಮುಟ್ಟಿಸುವ ಕ್ರಮವನರಿದು ಕೊಡಬೇಕು.
ರುಚಿಗಳ ತಾನರಿದು ಕೊಡಬಾರದು.
ತಾನರಿಯದೆ ಕೊಡಬಾರದು.
ಅದೆಂತೆಂದಡೆ:
ತನ್ನ ಜಿಹ್ವೆಯಲ್ಲಿ ಲಿಂಗದ ಜಿಹ್ವೆಯ ಕೂಡಿ ರುಚಿಗಳನರ್ಪಿಸುವ
ಕ್ರಮವನರಿದು ಕೊಡಬೇಕು.
ಅನರ್ಪಿತವ ಸೋಂಕಬಾರದು.
ಅರ್ಪಿತಕ್ಕೆ ಬಂದುದ ನೂಕಬಾರದು.
ಇಂತಿವರ ವಿಚಾರವನರಿದು ಅರ್ಪಿಸಿ
ಪ್ರಸಾದವ ಭೋಗಿಸುವಾತನೆ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ಸರ್ವ ಸುಯಿಧಾನಿ.
॥ ೨೨೩ ॥

೧೦೦೯

ಕರ್ಣಂಗಳು ಕೇಳಿದ ಶಬ್ದದಿಂದಾದ ಸುಖವನು,
ನೇತ್ರಂಗಳು ನೋಡಿದ ರೂಪಿನಿಂದಾದ ಸುಖವನು,
ರಸನೆ ಸವಿದ ರಸದಿಂದಾದ ಸುಖವನು,
ವಾಸಿಸುವ ಘ್ರಾಣದಿಂದರಿವ ಗಂಧಸುಖವನು,
ಮುಟ್ಟುವ ತ್ವಕ್ಕಿನಿಂದಾದ ಸ್ಪರ್ಶಸುಖವನು,
ಅರ್ಪಿತವ ಮಾಡಿ ಅನುಭವಿಸುವನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಪ್ರಸಾದಿಯು. ॥ ೨೨೪ ॥

೧೦೧೦

ದೇವಾ, ನಿನ್ನ ಭಕ್ತನು ಶ್ರೋತ್ರಮುಖದಲ್ಲಿ
ಶಬ್ದ ಪದಾರ್ಥವ ನಿನಗೆ ಕೊಡುವನು.
ಆತಂಗೆ ನೀನು ಶಬ್ದಪ್ರಸಾದವ ಕೊಡುವೆ.
ತನ್ನ ತ್ವಕ್ಕಿನ ಮುಖದಲ್ಲಿ ಸ್ಪರ್ಶನಪದಾರ್ಥವ ನಿನಗೆ ಕೊಡುವನು.
ಆತಂಗೆ ನೀನು ಸ್ಪರ್ಶನ ಪ್ರಸಾದವ ಕೊಡುವೆ.
ನೇತ್ರಮುಖದಲ್ಲಿ ರೂಪುಪದಾರ್ಥವ ನಿನಗೆ ಕೊಡುವನು.
ಆತಂಗೆ ನೀನು ರೂಪುಪ್ರಸಾದವ  ಕೊಡುವೆ.
ಜಿಹ್ವೆಯ ಮುಖದಲ್ಲಿ ರಸಪದಾರ್ಥವ ನಿನಗೆ ಕೊಡುವನು.
ಆತಂಗೆ ನೀನು ರುಚಿಪ್ರಸಾದವ ಕೊಡುವೆ.
ಘ್ರಾಣಮುಖದಲ್ಲಿ ಗಂಧಪದಾರ್ಥವ ನಿನಗೆ ಕೊಡುವನು.
ಆತಂಗೆ ನೀನು ಗಂಧಪ್ರಸಾದವ ಕೊಡುವೆ.
ಇಂತು ಭಕ್ತ ನಿನಗೆ ಸರ್ವಪದಾರ್ಥವ ಕೊಟ್ಟರೆ
ನೀನು ಪ್ರಸಾದವ ಕೊಡುವೆ.
"ಭಕ್ತಕಾಯ:ಮಮ ಕಾಯ:" ವೆಂಬ ನಿನ್ನ ವಚನ ದಿಟವಾಗೆ,
ನೀನು ಪ್ರಸಾದಿಯಸರಿದು ಸಲಹುತ್ತಿಪ್ಪೆ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೨೫ ॥

೧೦೧೧

ಅಯ್ಯಾ ನಿನ್ನ ಭಕ್ತನು ನಿನ್ನನಲ್ಲದೆ ಕೇಳನಾಗಿ,
ಆತನ ಶ್ರೋತ್ರದಲ್ಲಿ ನಿನ್ನ ಶ್ರೋತ್ರಪ್ರಸಾದವ ತುಂಬುವೆ.
ನಿನ್ನ ಭಕ್ತನು ನಿನ್ನನಲ್ಲದೆ ಸೋಂಕನಾಗಿ, ಆತನ ಕಾಯದಲ್ಲಿ
ನಿನ್ನ ಕಾಯಪ್ರಸಾದವ ತುಂಬುವೆ.
ನಿನ್ನ ಭಕ್ತನು ನಿನ್ನನಲ್ಲದೆ ಕಾಣನಾಗಿ, ಆತನ ನೇತ್ರದಲ್ಲಿ
ನಿನ್ನ ನೇತ್ರಪ್ರಸಾದವ ತುಂಬುವೆ.
ನಿನ್ನ ಭಕ್ತನು ನಿನ್ನನಲ್ಲದೆ ನುತಿಸನಾಗಿ, ಆತನ ಜಿಹ್ವೆಯಲ್ಲಿ
ನಿನ್ನ ಜಿಹ್ವಾಪ್ರಸಾದವ ತುಂಬುವೆ.
ನಿನ್ನ ಭಕ್ತನು ನಿನ್ನ ಸದ್ವಾಸನೆಯನಲ್ಲದೆ ಅರಿಯನಾಗಿ,
ಆತನ ಘ್ರಾಣದಲ್ಲಿ ನಿನ್ನ ಘ್ರಾಣಪ್ರಸಾದವ ತುಂಬುವೆ.

ಈ ಪರಿಯಲ್ಲಿ ಪ್ರಸಾದಿಗೆ ನಿನ್ನ ಪ್ರಸಾದವನಿತ್ತು ಸಲಹಿದೆಯಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೨೬ ॥

೧೦೧೨

ದೇವಂಗೂ ಭಕ್ತಂಗೂ ದೇಹವೊಂದೇ ಪ್ರಾಣವೊಂದೇ
ಕರಣವೊಂದೇ ಇಂದ್ರಿಯಂಗಳೊಂದೇ ಆಗಿ
ಬಿಡದೆ ಕೂಡಿ ಸಮಭೋಗವಾಗಿ ಭೋಗಿಸಿ
ಸಮರಸ ಸುಖದಲ್ಲಿರ್ಪುದನಂತಿಂತೆಂದುಪಮಿಸಬಹುದೇ?.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ,
ದೇವ ಭಕ್ತನ ಸಮ ಭೋಗವನು. ॥ ೨೨೭ ॥

೧೦೧೩

ಅಂಗದಲ್ಲಿ ಲಿಂಗ ಬೆರೆದು, ಲಿಂಗದಲ್ಲಿ ಅಂಗ ಬೆರೆದು
ಅಂಗ ಲಿಂಗ ಸಂಗದಿಂದ ಸಹವರ್ತಿಯಾದ
ಲಿಂಗಪ್ರಸಾದಿಯ ಇಂಗಿತವನೇನೆಂದು ಹೇಳಬಹುದು?
ಲಿಂಗ ನಡೆಯಲು ಒಡನೆ ಪ್ರಸಾದಿ ನಡೆವ
ಲಿಂಗ ನೋಡಲು ಒಡನೆ ಪ್ರಸಾದಿ ನೋಡುವ
ಲಿಂಗ ಕೇಳಲು ಒಡನೆ ಪ್ರಸಾದಿ ಕೇಳುವ
ಲಿಂಗ ಮುಟ್ಟಲು ಒಡನೆ ಪ್ರಸಾದಿ ಮುಟ್ಟುವ
ಲಿಂಗ ರುಚಿಸಲು ಒಡನೆ ಪ್ರಸಾದಿ ರುಚಿಸುವ.
ಲಿಂಗ ಘ್ರಾಣಿಸಲು ಒಡನೆ ಪ್ರಸಾದಿ ಘ್ರಾಣಿಸುವ.
ಇಂತು ಸರ್ವಭೋಗವ ಲಿಂಗದೊಡನೆ ಕೂಡಿ ಭೋಗಿಸಬಲ್ಲ
ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ಚೆನ್ನಬಸವಣ್ಣನು.
॥ ೨೨೮ ॥

೧೦೧೪

ಶಿವನ ಶಿವಪ್ರಸಾದಿಯ ಉಭಯಸಂಬಂಧ
ಸಹಭೋಗವೆಂತೆಂದೊಡೆ:
ಶಿವ ತನ್ನ ನೇತ್ರಂಗಳನು ಪ್ರಸಾದಿಯ ನೇತ್ರದಲ್ಲಿ ಕೂಡಿ
ರೂಪವನರಿವನು.

ಶಿವ ತನ್ನ ಶ್ರೋತ್ರಂಗಳನು ಪ್ರಸಾದಿಯ ಶ್ರೋತ್ರದಲ್ಲಿ ಕೂಡಿ
ಶಬ್ದವನರಿವನು.
ಶಿವ ತನ್ನ ಘ್ರಾಣವನು ಪ್ರಸಾದಿಯ ಘ್ರಾಣದಲ್ಲಿ ಕೂಡಿ
ಗಂಧವನರಿವನು.
ಶಿವ ತನ್ನ ಜಿಹ್ವೆಯನು ಪ್ರಸಾದಿಯ ಜಿಹ್ವೆಯಲ್ಲಿ ಕೂಡಿ
ರಸವನರಿವನು.
ಶಿವ ತನ್ನ ಅಂಗವನು ಪ್ರಸಾದಿಯ ಅಂಗದಲ್ಲಿ ಕೂಡಿ
ಸ್ಪರ್ಶವನರಿವನು.
ಶಿವ ತಾನು ಬೇರೆ ಭೋಗಿಸಲೊಲ್ಲದೆ, ಪ್ರಸಾದಿಯ ಹೊಕ್ಕು
ಭೋಗಿಸುವನಾಗಿ,
ಸೋಹಂ ಎನ್ನದೆ ದ್ವೈತಾದ್ವೈತವ ಮೀರಿದ
ಪ್ರಸಾದಿ ಸಂಗನಬಸವಣ್ಣನ
ಸುಖಾತಿಶಯವನೇನೆಂದುಪಮಿಸುವೆನಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೨೯ ॥

೧೦೧೫

ಶಬ್ದವನು ಕಿವಿಗಳು ಬಲ್ಲವೆ? ಅರಿಯವು.
ಅಲ್ಲಿದ್ದ ಆಕಾಶ ತಾ ಬಲ್ಲುದೆ ? ಅರಿಯದು.
ಸ್ಪರ್ಶನವ ತ್ವಕ್ಕು ಬಲ್ಲುದೆ? ಅರಿಯದು.
ಅಲ್ಲಿದ್ದ ವಾಯು ತಾ ಬಲ್ಲುದೆ? ಅರಿಯದು.
ರೂಪನು ಕಣ್ಣು ಬಲ್ಲುದೆ? ಅರಿಯದು.
ಅಲ್ಲಿದ್ದ ಅಗ್ನಿ ತಾ ಬಲ್ಲುದೆ? ಅರಿಯದು.
ಸ್ವಾದವನು ನಾಲಿಗೆ ಬಲ್ಲುದೆ? ಅರಿಯದು.
ಅಲ್ಲಿದ್ದ ಅಪ್ಪು ತಾ ಬಲ್ಲುದೆ? ಅರಿಯದು.
ಗಂಧವನು ಘ್ರಾಣ ಬಲ್ಲುದೆ? ಅರಿಯದು.
ಅವರಲ್ಲಿ ನಿಂದು, ವಿಷಯಂಗಳನು
ಭಕ್ತನ ಇಂದ್ರಿಯಂಗಳೊಡನೆ ಕೂಡಿ ಅರಿವಾತ ನೀನೇ.
ನೀನೆ ಭಕ್ತವತ್ಸಲ, ದಯಾನಿಧಿ,
ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೨೩೦ ॥

೧೦೧೬

ಲಿಂಗಭಕ್ತನ ಇಂದ್ರಿಯಂಗಳು, ಲಿಂಗ ಸನ್ನಿಹಿತವಾಗಿ
ಲಿಂಗಾರ್ಚನೆಯ ಮಾಡಿ ಲಿಂಗಾವಧಾನಿಗಳಾಗಿ

ಲಿಂಗಗರ್ಭಸದನವಲ್ಲಿ ಅಡಗಿ, ಮತ್ತಲ್ಲಿಯೆ ಉದಿಸಿ
ಲಿಂಗಸೇವೆಯ ಮಾಡಿ, ಪ್ರಸಾದವ ಪಡೆದು
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಬಿಡದೆ ವರ್ತಿಸುತ್ತಿಹವು.
॥ ೨೩೧ ॥

೧೦೧೭

ರೂಪಾರ್ಪಣಕ್ಕೆ ಅಂಗವೇ ಆದಿ.
ಆ ಪ್ರಸಾದಾಂಗಕ್ಕೆ ಪ್ರಾಣವೇ ಆದಿ.
ಆ ಪ್ರಾಣಾಂಗವೇ ರುಚಿಯರ್ಪಣಕ್ಕಾದಿ.
ರೂಪು ರುಚಿ ಉಭಯಾರ್ಪಣದ ಸುಖವೇ ಭಾವಾರ್ಪಣವು.
ಅಂಗ ಪ್ರಾಣ ಭಾವಂಗಳಲ್ಲಿ, ರೂಪ ರುಚಿ ತೃಪ್ತಿಯನರಿದು
ಕೊಟ್ಟು ಕೊಂಬಾತಂಗೆ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ
ನಿತ್ಯ ಪ್ರಸಾದ ದೊರೆಕೊಂಬುದು. ॥ ೨೩೨ ॥

೧೦೧೮

ಗುರುಲಿಂಗ ಪ್ರಸಾದವನು ಸೇವಿಸುವಲ್ಲಿ ಏಕರತಿಯಾಗಿರಬೇಕು.
ಇಷ್ಟಲಿಂಗ ಪ್ರಸಾದವನು ಸೇವಿಸುವಲ್ಲಿ ಏಕರತಿಯಾಗಿರಬೇಕು.
ಜಂಗಮಲಿಂಗ ಪ್ರಸಾದವನು ಸೇವಿಸುವಲ್ಲಿ ಏಕರತಿಯಾಗಿರಬೇಕು.
ಗುರು ಲಿಂಗ ಜಂಗಮದ ಈ ತ್ರಿವಿಧಪ್ರಸಾದವ ಸೇವಿಸುವಲ್ಲಿ
ಏಕರತಿಯಾಗಿರಬೇಕು.
ಅಂತಲ್ಲದೆ, ಅನ್ಯಲಿಂಗ ಪ್ರಸಾದವ ಕೊಳಲಾಗದು.
ಅದೇನು ಕಾರಣವೆಂದಡೆ:
ವೀರಶೈವ ತನ್ನ ಇಷ್ಟಲಿಂಗಕ್ಕೆ ಕೊಟ್ಟು ಕೊಂಬ
ಕ್ರಿಯೆಗೆ ಬಾರದಾಗಿ.
ಭಕ್ತಾಂಗಕೋಟಿಗಳಲ್ಲಿ ಬೇರೆ ಬೇರೆ ಲಿಂಗ ತೋರಿತ್ತೆಂದಡೆ
ಅದು ಬೇರಾಗಬಲ್ಲುದೆ?.
ಹಲವು ಘಟ ಜಲಗಳಲ್ಲಿ ಚಂದ್ರನೊಬ್ಬ ತೋರಿದಂತೆ
ಇಂತೀ ಪರಿಯಲ್ಲಿ ಎಸೆವುದು.
ಬಹುಲಿಂಗಭಾವಂಗಳೆಂದಡೆ ಬೇರಾಗಬಲ್ಲುದೆ?
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಅಂಗ ಹಲವಾದಡೇನು
ಅಲ್ಲಿ ತೋರುವುದೊಂದೇ ವಸ್ತು. ॥ ೨೩೩ ॥

೧೦೧೯

ಕಾಲೋಚಿತವಾಗಿ ಅರ್ಪಿತಕ್ಕೆ ಬಂದ ಭೂತಜಾತಪದಾರ್ಥಂಗಳನು,
ಕಾಯದ ಕರದಲ್ಲಿ ಮುಟ್ಟಿ, ಅರ್ಪಿಸುವ ಅರ್ಪಣವನರಿದು,
ಇಂದ್ರಿಯಂಗಳ ಮುಖದಲ್ಲಿ ಮುಟ್ಟದೆ,
ಅರ್ಪಿಸುವ ಅರ್ಪಣವರಿದು,
ಇಷ್ಟಲಿಂಗಕ್ಕೆ ರೂಪು, ಪ್ರಾಣಲಿಂಗಕ್ಕೆ ರುಚಿಯನಿತ್ತು ಕೊಂಬ,
ಅನುಪಮ ಪ್ರಸಾದಿಯನುಪಮಿಸಬಹುದೆ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ? ॥ ೨೩೪ ॥

೧೦೨೦

ಪರಮಾತ್ಮಲಿಂಗದಲ್ಲಿ ಅರ್ಪಿತವಾಗಿ
ಉಚ್ಚರಿಸಿ ಕೊಂಬುದೊಂದಕ್ಷರದ ನೆಲೆಯನರಿದು
ಪ್ರಾಣವ ಲಿಂಗಕ್ಕೆ ಅರ್ಪಿತವ ಮಾಡಿ
ಅಂಗವ ಲಿಂಗಕ್ಕೆ ಅರ್ಪಿತವ ಮಾಡಿವಡೆ
ಆತಂಗೆ ರುಜೆ ಕರ್ಮ ಮರಣಂಗಳಿಲ್ಲ.
ಆತನು ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ,
ಸರ್ವಾರ್ಪಿತ ಸಾವಧಾನ ಪ್ರಸಾದಭೋಗಿಯೆನಿಸುವನು.
॥ ೨೩೫ ॥

೧೦೨೧

ತಾನು ಲಿಂಗಾವಧಾನಿಯಾಗಿ,
ಪದಾರ್ಥ ತನ್ನಂಗವ ಸೋಂಕದ ಮುನ್ನ,
ಪದಾರ್ಥದ ಪೂರ್ವಾಶ್ರಯವ ಕಳೆದು, ಲಿಂಗಮುಖವ ಮಾಡಿ,
ತನು ಮನ ಪ್ರಾಣ ಪ್ರಸಾದ ಸಂತೃಪ್ತಿಯನೆಯ್ದಿ,
ಪ್ರಸಾದ ಸುಖಾಬ್ಧಿಯೊಳೋಲಾಡುತ್ತ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಪ್ರಸಾದ ಸಂಪತ್ತಿನಲ್ಲಿಹನು.
॥ ೨೩೬ ॥

೧೦೨೨

ಭಕ್ತನಾದಡೆ ಇಂದ್ರಿಯಂಗಳ ಭಕ್ತರ ಮಾಡಿ,
ತನುಗುಣಂಗಳ ಭಕ್ತರ ಮಾಡಿ,
ಅಂತಃಕರಣಂಗಳ ಭಕ್ತರ ಮಾಡಿ,

ಅವಸ್ಥಾತ್ರಯಂಗಳನು ಅರ್ಪಿತವ ಮಾಡಿ,
ತಾನು ಲಿಂಗಾರ್ಪಿತನಾಗಿ, ಪ್ರಸಾದಗರ್ಭದಲ್ಲಿ
ಭರಿತನಾದ ಪ್ರಸಾದಿಗೆ ಬೇರಾಶ್ರಯವಿಲ್ಲ.
ತಾನೇ ಚಿದ್ರೂಪನು, ಭಾವಸುಖ ಸ್ವರೂಪನು,
ತಾನೇ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೨೩೭ ॥

೧೦೨೩

ಶ್ರೀ ಗುರುವಿನ ಮಂತ್ರೋಪದೇಶವು
ಶಬ್ದ ಪ್ರಸಾದಕ್ಕಾಶ್ರಯವಾಯಿತ್ತು.
ಶ್ರೀ ಗುರುವಿನ ಹಸ್ತ ಮಸ್ತಕ ಸಂಯೋಗವು
ಸ್ಪರ್ಶನಪ್ರಸಾದಕ್ಕಾಶ್ರಯವಾಯಿತ್ತು.
ಶ್ರೀ ಗುರುವಿನ ಕೃಪಾವಲೋಕನವು
ಅವಲೋಕನಪ್ರಸಾದಕ್ಕಾಶ್ರಯವಾಯಿತ್ತು.
ಶ್ರೀಗುರುವಿನ ನಿರ್ಮಾಲ್ಯ ಗಂಧವು
ಸದ್ಗುಣಗಂಧಪ್ರಸಾದಕ್ಕಾಶ್ರಯವಾಯಿತ್ತು.
ಇಂತಪ್ಪ ಶ್ರೀಗುರುವಿನ ಪ್ರಸಾದವ ಪಡೆದಾತಂಗೆ
ಭವಮಾಲೆಯುಂಟೆ?,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ? ॥ ೨೩೮ ॥

೧೦೨೪

ತ್ರಾಸಿನ ತೂಕವಂತೆ, ಅಂಗ ಲಿಂಗ ಸಮವಾಗಿ,
ಬಿಲುಗಾರನೆಸುಗೆಯ ಬಾಣದ ಕೂಡೆ ಕಾಣಿಸುವ ಛಾಯದಂತೆ,
ಪೂಣಿಸಿದರ್ಪಿತಸಂಧಾನವೆಸವುತ್ತ,
ಅಕ್ಷರದೊಡನೆ ತೋರುವ ಶಬ್ದದಂತೆ,
ಅಂಗ ಲಿಂಗೈಕ್ಯವನರಿದಾಂತಗೆ ಅನರ್ಪಿತವೆಂಬುದುಂಟೇ? ಇಲ್ಲ.
ಆತ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೊಳಗೆ,
ಅಡಗಿ ಅರ್ಪಿಸುವ ಸುಯಿಧಾನಿ ತಾನು. ॥ ೨೩೯ ॥

೧೦೨೫

ರೂಪು ಕುರೂಪುಗಳನು,
ಲಿಂಗ ನೋಡಿದಡೆ ನೋಡುವನು,
ಲಿಂಗ ನೂಕಿದಡೆ ತಾ ನೂಕುವನು.

ಶಬ್ದಾಪಶಬ್ದಂಗಳನು
ಲಿಂಗ ಕೇಳಿದಡೆ ಕೇಳುವನು, ಲಿಂಗ ತಾ ನೂಕಿದಡೆ ನೂಕುವನು.
ಸುರಸ ಕುರಸಂಗಳನು
ಲಿಂಗ ಸವಿದಡೆ ಸವಿವನು, ಲಿಂಗ ನೂಕಿದಡೆ ತಾ ನೂಕುವನು.
ಗಂಧ ದುರ್ಗಂಧಗಳನು
ಲಿಂಗ ವಾಸಿಸಿದಡೆ ವಾಸಿಸುವ,
ಲಿಂಗ ನೂಕಿದಡೆ ತಾ ನೂಕುವನು.
ಮೃದು ಕಠಿಣ ಶೀತೋಷ್ಣಂಗಳನು
ಲಿಂಗ ಸೋಂಕಿದಡೆ ಸೋಂಕುವನು,
ಲಿಂಗ ನೂಕಿದಡೆ ತಾ ನೂಕುವನು.
ಲಿಂಗಮಧ್ಯಪ್ರಸಾದಿಯಾದ ಕಾರಣ
ಲಿಂಗದೊಡನೆ ಕೂಡಿ ಅರಿದು ಭೋಗಿಸಿ ಸುಖಿಸುವನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ನಿಮ್ಮ ಪ್ರಸಾದಿ. ॥ ೨೪೦ ॥

೧೦೨೬

ಲಿಂಗಕ್ಷೇತ್ರವೆಂಬ ಪವಿತ್ರಸ್ಥಲದಲ್ಲಿ,
ಪ್ರಸಾದಿ ಭಕ್ತಿ ಬೀಜವ ಬಿತ್ತಿ
ಶುದ್ಧ ಪದಾರ್ಥವ ಬೆಳೆದು,
ಆ ಪದಾರ್ಥವ ಲಿಂಗಾರ್ಪಿತವ ಮಾಡಿ
ಆ ಪ್ರಸಾದವ ತಾನಿಲ್ಲದೆ ಭೋಗಿಸಿ ನಿತ್ಯಸುಖಿಯಾದನು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ನಿಮ್ಮ ಪ್ರಸಾದಿ. ॥ ೨೪೧ ॥

೧೦೨೭

ಪ್ರಸಾದವನು ಪ್ರಸಾದಿಯನು ಪದಾರ್ಥದ ಭೇದವನು
ಅರಿವುದರಿದು ನೋಡ.
ಮುನ್ನಾದಿಯ ಪ್ರಸಾದವು ಅರ್ಪಣಕ್ಕೆ ಬಂದಲ್ಲಿ
ಉಪಚಾರದಿಂದ ಪದಾರ್ಥವೆನಿಸಿತ್ತು.
ಅರ್ಪಣದ ಮೇಲೆ ಪ್ರಸಾದವೆನಿಸಿತ್ತು.
ಈ ಪ್ರಸಾದದಾದಿ ಕುಳವ ಬಲ್ಲಡೆ, ಆತ ಪ್ರಸಾದಿ.
ಪ್ರಸಾದಿಯ ಬಿಟ್ಟು ಪ್ರಸಾದವಿಲ್ಲ, ಪ್ರಸಾದ ಬಿಟ್ಟು ಪ್ರಸಾದಿಯಿಲ್ಲ.
ಪ್ರಸಾದವೂ ಪ್ರಸಾದಿಯೂ ಕೂಡಿ ಸೋಂಕದ ಪದಾರ್ಥವಿಲ್ಲ.
ಇದು ಕಾರಣ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಪ್ರಸಾದಿಯ ಪ್ರಸಾದದಿಂದ,

ಮೂರು ಲೋಕವೆಲ್ಲಾ ಜೀವಿಸಿತ್ತಾಗಿ,
ಅಂತಪ್ಪ ಪ್ರಸಾದಿಗೆ ನಮೋ ನಮೋ ಎನುತ್ತಿರ್ದೆನು.॥ ೨೪೨ ॥

ಪ್ರಾಣಲಿಂಗಿಸ್ಥಲ

೧೧೨೮

ಅನುಭಾವ ನೆಲೆಗೊಂಡಲ್ಲದೆ,
ಅಂಗ ಲಿಂಗದ ಹೊಲಬನರಿಯಬಾರದು.
ಅನುಭಾವ ನೆಲೆಗೊಂಡಲ್ಲದೆ, ಭಕ್ತಿ ವಿರಕ್ತಿ ನೆಲೆಗೊಳ್ಳದು.
ಅನುಭಾವ ನೆಲೆಗೊಂಡಲ್ಲದೆ, ಜ್ಞಾನ ಸುಜ್ಞಾನದ ನೆಲೆಯ
ಕಾಣಬಾರದು.
ಅನುಭಾವ ನೆಲೆಗೊಂಡಲ್ಲದೆ, ತಾನು ಇದಿರೆಂಬುದ ತಿಳಿದು
ತಾನು ತಾನಾಗಬಾರದು.
ಇದು ಕಾರಣ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನಿಮ್ಮ ಅನುಭಾವದ ಅನುವಿನಲ್ಲಿಪ್ಪವ ನೀವೆಂದೆ ಕಾಂಬೆನು.
॥ ೨೪೩ ॥

೧೧೨೯

ಅನುಭಾವವ ನುಡಿವ ಅಣ್ಣಗಳಿರಾ,
ಅನುಭಾವವೆತ್ತ ನೀವೆತ್ತ ಹೋಗಿರಣ್ಣ.
ಅನುಭಾವವೆಂಬುದು ಆತ್ಮವಿದ್ಯೆ.
ಅನುಭಾವವೆಂಬುದು ತಾನಾರೆಂಬುದ ತೋರುವುದು.
ಅನುಭಾವವೆಂಬುದು ನಿಜನಿವಾಸದಲ್ಲಿರಿಸುವುದು.
ಇಂತಪ್ಪ ಅನುಭಾವದನುವನರಿಯದೆ ಶಾಸ್ತ್ರಜಾಲದ ಪಸರವನಿಕ್ಕಿ
ಕೊಳ್ಳದೆ ಕೊಡದೆ ವ್ಯವಹಾರವ ಮಾಡುವ ಅಣ್ಣಗಳಿರಾ,
ನೀವೆತ್ತ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಅನುಭಾವವೆತ್ತ?
॥ ೨೪೪ ॥

೧೧೩೦

ನಡೆವ ಬಟ್ಟೆಯ ಬಿಡಿಸಿ,
ನಡೆಯದೆ ಬಟ್ಟೆಯಲ್ಲಿ ನಡೆವಂತೆ ಮಾಡಿದನಯ್ಯ.

ನೋಡುವ ನೋಟವ ಬಿಡಿಸಿ,
ನೋಡುದುವ ನೋಡುವಂತೆ ಮಾಡಿದನಯ್ಯ.
ಕೇಳುವುದ ಕೇಳಲೀಯದೆ ಬಿಡಿಸಿ,
ಕೇಳುವದ ಕೇಳುವಂತೆ ಮಾಡಿದನಯ್ಯ.
ಕೂಡಬಾರದ ಘನವ ಕೂಡುವಂತೆ ಮಾಡಿ
ಪರಮಸುಖದೊಳಗಿರಿಸಿದನಯ್ಯಾ, ಎನ್ನ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೨೪೫ ॥

೧೦೩೧

ಆರಾಧಾರದ ಆರು ಕಮಲಂಗಳಲ್ಲಿ,
ಐವತ್ತೊಂದಕ್ಷರದ ಲಿಪಿಯ ನೋಡಿ ನೋಡಿ,
ಆರಾಧಾರವ ಮೂರಾಧಾರದಲ್ಲಿ ಕಂಡು,
ಆ ಮೂರಾಧಾರದ ಮೂಲದಲ್ಲಿ ಕೂಡಿಕೊಂಡೆನು,
ಮೂಲಕ್ಕೆ ಮೂಲಿಗನಾದ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ.
॥ ೨೪೬ ॥

೧೦೩೨

ನಾಲ್ಕು ಬಾಗಿಲು ಕೂಡಿದ ಠಾವಿನಲ್ಲಿ
ತ್ರಿಮಂಡಲದ ಮಧ್ಯದ ಚತುರ್ದಳದ ನಡುವಣ
ಚತುರ್ಪೀಠಸಿಂಹಾಸನದ ಮೇಲೆ ಮೂರ್ತಿಗೊಂಡು
ನೋಡುವ ಬೆಡಗಿನ ಪುರುಷನ ತುಡುಕಿ ಹಿಡಿದು ನೆರೆಯಬಲ್ಲರೆ,
ಆತ ಸರ್ವನಿರ್ವಾಣಿ, ಸಕಲ ನಿಃಕಲಾತ್ಮಕನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು ತಾನೆ ಬೇರಿಲ್ಲ.
॥ ೨೪೭ ॥

೧೦೩೩

ಅಂತರಂಗದಲ್ಲಿದ್ದ ನಿರ್ಮಲ ಪರಂಜ್ಯೋತಿ
ಪ್ರಾಣಲಿಂಗವನರಿಯದೆ
ಬಹಿರಂಗದಲ್ಲಿ ಬಳಲುತ್ತಿದ್ದರಲ್ಲ!
ಒಳಗೆ ತೊಳಗಿ ಬೆಳಗಿ ತೋರುವ ಚಿದಾಕಾರ ಪರಬ್ರಹ್ಮ
ಪ್ರಾಣಲಿಂಗವನವರೆತ್ತ ಬಲ್ಲರು?

ಮಹಾನುಭಾವದಿಂದ ತಿಳಿದು ನೋಡಲು ತನ್ನಲ್ಲಿಯೇ
ತೋರುತ್ತಿದೆ.
ಹೇಳಿಹೆ ಕೇಳಿಹೆನೆಂದಡೆ ನುಡಿಗೊಳಗಾಗದು.
ತಿಳಿದುನೋಡಲು ತಾನಲ್ಲದೆ ಮತ್ತೇನೂ ಇಲ್ಲ.
ಅದೇ ಆದಿಪ್ರಾಣಮಯಲಿಂಗ
ತಾನೇ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೨೪೮ ॥

೧೦೩೪

ಮೂಲಾಧಾರ ಮಧ್ಯದಲ್ಲಿ ಹುಟ್ಟಿದ ಪ್ರಾಣಾಪಾನಂಗಳು
ಆವಲ್ಲಿ ಮನ ಸಹಿತ ಲಯವಾದವೊ
ಆ ಲಯ ಕಾರಣವಾದುದು ಪ್ರಾಣಲಿಂಗ.
ಆ ಪ್ರಾಣಲಿಂಗದ ನೆಲೆಯನರಿಯದೆ ಏನ ಮಾಡಿದಡೂ
ಫಲದಾಯಕ ಭಕ್ತಿಯಲ್ಲದೆ ಮುಕ್ತಿಯಿಲ್ಲ.
ಇದು ಕಾರಣ,
ಪ್ರಾಣಲಿಂಗವನರಿದು, ಮನ ಶಕ್ತಿ ಸಂಯೋಗವ ಮಾಡಿ
ಮುಕ್ತರಹುದಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೪೯ ॥

೧೦೩೫

ಲಿಂಗದಲ್ಲಿ ಪ್ರಾಣವನಿರಿಸಿ, ಪ್ರಾಣದಲ್ಲಿ ಲಿಂಗವನಿರಿಸಿ
ನೆನೆವುತ್ತಿದ್ದ ಕಾರಣ, ಪ್ರಾಣ ಲಿಂಗವಾಯಿತ್ತು.
ಆ ಲಿಂಗ ಸರ್ವಕರಣಂಗಳ ವೇಧಿಸಿ, ಕರಣಂಗಳು
ಲಿಂಗ ಕಿರಣಂಗಳಾದ ಕಾರಣ
ಒಳಗೆ ಕರತಳಾಮಳಕದಂತೆ ಲಿಂಗ ನೆಲೆಗೊಂಡಿತ್ತಾಗಿ
ಹೊರಗೇನೆಂದೂ ಅರಿಯನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ, ನೀವು ಪ್ರಾಣಲಿಂಗವಾಗಿ.
॥ ೨೫೦ ॥

೧೦೩೬

ತಿರುಳು ಕರಗಿದ ಬೀಜ ಮರಳಿ ಹುಟ್ಟಬಲ್ಲುದೆ ಅಯ್ಯ?
ತೊಟ್ಟ ಬಿಟ್ಟ ಹಣ್ಣು ಮರಳಿ ತೊಟ್ಟ ಹತ್ತುವುದೆ ಅಯ್ಯ?

ನೆಟ್ಟನೆ ಪ್ರಾಣಲಿಂಗದ ನಿಜವನರಿದವ ಮರಳಿ ಹುಟ್ಟಬಲ್ಲನೆ
ಹೇಳಾ, ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ? ॥ ೨೫೧ ॥

೧೦೩೭

ತನುವಿಂಗೆ ತನುರೂಪಾಗಿ ತನುವಿಂಗಾಧಾರವಾದೆ.
ಮನಕ್ಕೆ ಮನರೂಪಾಗಿ ಮನಕ್ಕೆ ನೆನಹಿನ ಶಕ್ತಿಯನಿತ್ತು
ಮನಕ್ಕಾಧಾರವಾದೆ.
ಪ್ರಾಣಕ್ಕೆ ಪ್ರಾಣರೂಪಾಗಿ, ಪ್ರಾಣಕ್ಕಾಧಾರವಾದೆ.
ಎನ್ನಂಗೆ ಮನ ಪ್ರಾಣದಲ್ಲಿ ನೀವೆ ನಿಂದು,
ಸರ್ವಕರಣಂಗಳ ನಿಮ್ಮವ ಮಾಡಿಕೊಂಡ ಕಾರಣ
ಎನ್ನ ಪ್ರಾಣ ನಿಮ್ಮಲ್ಲಿ ಅಡಗಿತ್ತು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೫೨ ॥

೧೦೩೮

ಖಂಡಿತವಿಲ್ಲದ ಅಖಂಡಿತರೂಪ ನೀನು ಕಂಡಾ ಎಲೆ ಅಯ್ಯ.
ಮಂಡಲತ್ರಯದ ಮಧ್ಯದಲ್ಲಿ ನಿಂದು ಖಂಡಿತನೆಂಬ ಹಾಂಗೆ
ತೋರುತ್ತಿದ್ದೆಯಯ್ಯ.
ನಿನ್ನ ಬೆಡಗ ನಾ ಬಲ್ಲೆ.
ಖಂಡಪತ್ರದಲ್ಲಿ ತೋರುವ ಚಂಡಕಿರಣದಂತೆ ತೋರಿದೆಯಾಗಿ
ಎನ್ನ ಕಂಗಳ ಕೊನೆಯಲ್ಲಿ ನಿಂದು ನೋಡುವಾತ ನೀನೇ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೫೩ ॥

೧೦೩೯

ಕಾಯದ ಸ್ಥಿತಿಗತಿಯನರಿದು, ಕಾಯವ ಶೋಧಿಸಿ
ಮುಂದೆ ಸಾಧಿಸಿಕೊಳ್ಳಿರಣ್ಣ.
ದೇಹಮಧ್ಯದಾಧಾರಪರ ಪ್ರಕೃತಿಯಲ್ಲಿ
ಪ್ರಾಣವಾಯು ಹುಟ್ಟಿ, ಅಲ್ಲಿಂದ
ಲಂಬಿಕಾಸ್ಥಾನವ ತಾಗಿ, ಸಕಾರಾಂತವಾಗಿ
ನಿವೃತ್ತಿ ಪ್ರವೃತ್ತಿಯಾಗಿ ಚರಿಸುವುದು.
ಅಲ್ಲಿ ಇಪ್ಪತ್ತೊಂದುಸಾವಿರದ ಆರುನೂರು ಜೀವಜಪವ
ಜಪಿಸುವುದು. ಗುರೂಪದೇಶದಿಂದರಿದಡೆ

ಅಂತ್ಯವಾದಿಯಾಗಿ ಆದಿಯಂತ್ಯವಾಗಿ
ಆ ಜಪವು ದಹರಾಕಾಶದ ನಾದಾತ್ಮಲಿಂಗದಲ್ಲಿ ಕೂಡುವುದೇ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ಮಂತ್ರಯೋಗವು.
॥ ೨೫೪ ॥

೧೦೪೦

ವೇದ ಶಾಸ್ತ್ರ ಆಗಮ ವಿಜ್ಞಾನ ತರ್ಕ ವ್ಯಾಕರಣಾದಿಗಳ ಕಲಿತು
ಬಲ್ಲವರೆನಿಸಿಕೊಂಡರೇನು?
ಪ್ರಾಣಲಿಂಗದ ನೆಲೆಯನರಿದ ಯೋಗಿಯ ಮುಂದೆ
ಇವರೆಲ್ಲ ಮೂಢರಲ್ಲದೆ ಬಲ್ಲವರಲ್ಲ.
ಅದೇನು ಕಾರಣವೆಂದಡೆ:
ಅವರು ಸ್ವಾನುಭಾವಜ್ಞಾನಾನುಭಾವಿಗಳಲ್ಲವಾದ ಕಾರಣ.
ಇಂತಿವರು ಒಂದು ಕೋಟಿ ಶಾಸ್ತ್ರಜ್ಞರಾದರೂ
ಸಮ್ಯಜ್ಞಾನಿಯಾದ ಒಬ್ಬ ಶರಣಂಗೆ ಸರಿಯಲ್ಲ.
ಇದು ಕಾರಣ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣನೇ ಶಿವನೆನಬೇಕು.
॥ ೨೫೫ ॥

೧೦೪೧

ಅಂತರಂಗ ಸನ್ನಿಹಿತ ಪ್ರಾಣಲಿಂಗಕ್ಕೆ
ಕ್ಷಮೆ ಎಂಬ ಸತ್ಯೋದಕದಿಂದ ಅಭಿಷೇಕವ ಮಾಡುವೆನಯ್ಯ.
ಮನವ ನಿಲಿಸಿ ಗಂಧವನರ್ಪಿಸುವೆ.
ನಿರಹಂಕಾರವೆಂಬ ಅಕ್ಷತೆಯನಿಡುವೆ.
ವೈರಾಗ್ಯವೆಂಬ ಪುಷ್ಪವನರ್ಪಿಸಿ,
ಸತ್ಯವೆಂಬ ಆಭರಣವ ತೊಡಿಸುವೆ.
ವಿವೇಕವೆಂಬ ವಸ್ತ್ರವ ಹೊದಿಸಿ,
ಶ್ರದ್ಧೆಯೆಂಬ ಧೂಪವ ಬೀಸುವೆ.
ಮಹಾಜ್ಞಾನವೆಂಬ ದೀಪವ ಬೆಳಗಿ,
ಪ್ರಪಂಚು ಭ್ರಾಂತಳಿದ ನೈವೇದ್ಯವನೀವೆ.
ವಿಷಯಾರ್ಪಣವೆಂಬ ತಾಂಬೂಲವ ಕೊಟ್ಟು
ಈ ಪರಿಯಲ್ಲಿ ಮಾಡುವೆನಯ್ಯ.

ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆಂಬ ಪ್ರಾಣಲಿಂಗ ಪೂಜೆಯನು.
॥ ೨೫೬ ॥

೧೦೪೨

ಪೂರ್ವದ್ವಾರಮಂ ಬಂಧಿಸಿ ಅಧೋದ್ವಾರವ ಬಲಿದು
ಊರ್ಧ್ವದ್ವಾರವ ತೆಗೆದು ಎವೆ ಹಳಚದೆ ಒಳಗೆ
ನಿಮ್ಮ ನೋಡುತ್ತಿದ್ದೆನಯ್ಯ.
ಬಂದುದ ಹೋದುದನರಿಯದೆ ನಿಮ್ಮ ನೋಡುತ್ತಿದ್ದೆನಯ್ಯ.
ಮನ ನಿಂದುದು ನಿಮ್ಮಲ್ಲಿ.
ಹೆರೆಹಿಂಗದ ಪರಮ ಸುಖ ದೊರೆಕೊಂಡಿತ್ತು.
ಇನ್ನಂಜೆನಂಜೆ ಜನನ ಮರಣವೆರಡೂ ಹೊರಗಾದವು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ
ನಿಜಸುಖ ಸಮನಿಸಿತ್ತಾಗಿ. ॥ ೨೫೭ ॥

೧೦೪೩

ಬಿಂದು ನಾದವನೊಂದು ರೂಪು ಮಾಡಿ
ಮನವ ಸಂಧಿಸಿ ಬಂಧಿಸಿ ನಿಲಿಸಿ
ಇಂದ್ರಿಯಂಗಳನೇಕಮುಖವ ಮಾಡಿ
ಚಂದ್ರ ಸೂರ್ಯರನೊಂದು ಮಾರ್ಗದಲ್ಲಿ ನಡೆಸಿ
ಚೌದಳಮಧ್ಯದ ಜ್ಞಾನಪೀಠದಲ್ಲಿರ್ದ ಅಮೃತಲಿಂಗವ ಕಂಡು
ಕೂಡುವ ಬೆಡಗಿನ ಯೋಗವ ನಿಮ್ಮ ಶರಣರಲ್ಲದೆ
ಉಳಿದ ಭವರೋಗಿಗಳೆತ್ತ ಬಲ್ಲರಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ? ॥ ೨೫೮ ॥

೧೦೪೪

ಒಳಗೆ ಹೊರಗಾಯಿತ್ತು, ಹೊರಗೆ ಒಳಗಾಯಿತ್ತು.
ತಿಳಿದು ನೋಡಲು ಒಳಹೊರಗೆಂಬುದಿಲ್ಲ ನೋಡಾ.
ಒಳ ಹೊರಗು ಕೂಡಿದ ತ್ರಿಮಂಡಲದ
ಬೆಡಗಿನ ತಾವರೆಯ ಒಳಗೆ
ಥಳಥಳಿಸುವ ದಿವ್ಯಪೀಠದ ಮೇಲೆ ಹೊಳೆವ ಲಿಂಗವದು.
ಒಳ ಹೊರಗು ಬೆಳಗುತಿಪ್ಪ ಶುದ್ಧ ಜ್ಯೋತಿ ನೋಡಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ನಿಲುವು ತಾನೆ ನೋಡ.
॥ ೨೫೯ ॥

೧೦೪೫

ಅರ್ಕನ ಉದಯಕ್ಕೆ ಕತ್ತಲೆ ಹರಿದು, ಚಕ್ಕನೆ ಬೆಳಗಾಯಿತ್ತು.
ಬೆಳಗು ಪಸರಿಸಲಾಗಿ ನಿದ್ರೆ ಹರಿದು ಎದ್ದು ಕುಳ್ಳಿರ್ದು
ಇದೆತ್ತಣ ಬೆಳಗೆಂದು ಹಿಂಬಾಗಿಲ ತೆಗೆದು ನೋಡಲು
ಒಳ ಹೊರಗೆಲ್ಲಾ ತಾನೆ ಬೆಳಗುತ್ತಿರಲು
ಆ ಬೆಳಗಿನೊಳಗೆ ನಿಂದು ಬೆಳಗುತ್ತಿದ್ದರಯ್ಯ.
ಬೆಳಗನ ಬೆಳಗು ಒಬ್ಬುಳಿಯಾದಂತೆ
ಬೆಳಗು ಬೆಳಗು ಹಳಚಿದಂತೆ ಬೆಳಗುತ್ತಿದ್ದರಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ನಿಮ್ಮ ಶರಣರು. ॥ ೨೬೦ ॥

೧೦೪೬

ಒಡಲೆಂಬ ಗುಡಿಯೊಳಗೆ
ಒಡೆದು ಮೂಡಿದ ಲಿಂಗವಿರ್ದಡೆಯ
ನೋಡಲೆಂದು ಹೋದವನೆ
ನೋಡುವ ನೋಟವೆಲ್ಲ ತಾನೆಯಾಗಿತ್ತು.
ಈ ಬೆಡಗು ಬಿನ್ನಾಣದ ಲಿಂಗವ ತುಡುಕಿ ಹಿಡಿದು ಕೊಳಬಲ್ಲಾತ
ಮೃಡನಲ್ಲದೆ ಮಾನವನಲ್ಲ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ತಾನೇ ಬೇರಿಲ್ಲ. ॥ ೨೬೧ ॥

೧೦೪೭

ಏಳುನೆಲೆಯಲ್ಲಿ ಹೂಳಿದ ನಿಧಾನವ ಸಾಧಿಸಹೋದರೆ
ಸಾಧಕನನದು ನುಂಗಿತ್ತು ನೋಡ.
ಸಾಧಿಸಹೋದ ಕಲಿಗಳೆಲ್ಲಾ ನಿಧಾನವ ಸಾಧಿಸಹೋಗಿ
ತಾವೆ ನಿಧಾನಕ್ಕೆ ಬಲಿಯಾದರು.
ಬಲ್ಲಿದರೆಲ್ಲರ ನುಂಗಿ, ಬಡವರನುಳುಹಿತ್ತು.
ಇಂತಪ್ಪ ನಿಧಾನವ ಕಂಡರಿಯೆವು, ಕೇಳಿ ಅರಿಯೆವು ಎಂದು
ಸಾಧಕನೊಡನಿದ್ದ ಸಾಹಸಿಗಳೆಲ್ಲಾ ಬೆರಗಾಗಿ ನಿಂದರು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆಂಬ ನಿಧಾನವ ಸಾಧಿಸಿ
ನಾನು ಬದುಕಿದೆನು. ॥ ೨೬೨ ॥

೧೦೪೮

ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ
ವಿಶುದ್ಧಿ ಅಜ್ಞೇಯವೆಂಬ

ಷಡಾಧಾರ ಚಕ್ರಂಗಳಲ್ಲಿ
ವರ್ಣ ದಳ ಅಕ್ಷರ ಅಧಿದೇವತೆಯರಲ್ಲಿ ಕೂಡಿ ತೋರುವ ವಸ್ತು
ಒಂದಲ್ಲದೆ ಹಲವುಂಟೆ?
ಚಕ್ರಚಕ್ರದಲ್ಲಿ ಲೆಕ್ಕಕ್ಕೆ ಒಳಗಾಗಿ, ನಾಮರೂಪಿಗೆ ಬಂದು
ಸಿಕ್ಕಿದೆಯಲ್ಲ!
ಯೋಗಿಗಳ ಮನವಲ್ಲಿ ಲಕ್ಷವಿಲ್ಲದ ನಿರ್ಲಕ್ಷ ನೀನು
ಲಕ್ಷಕ್ಕೆ ಬಂದ ಪರಿಯೇನು ಹೇಳ?
ಕಾಣಬಾರದ ವಸ್ತುವ ಕಾಣಿಸಿ ಹಿಡಿದರು ಶರಣರು.
ಭೇದಿಸಬಾರದ ವಸ್ತುವ ಭೇದಿಸಿ ಕಂಡರು,
ಸಾಧಿಸಬಾರದ ವಸ್ತುವ ಸಾಧಿಸಿ ಕಂಡರು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ ನಿಮ್ಮ ಶರಣರು. ॥ ೨೬೩ ॥

೧೦೪೯

ಬ್ರಹ್ಮಸ್ಥಾನದ ಬಳಿಯ ಸಹಸ್ರದಳಕಮಲ ಮಧ್ಯದಲ್ಲಿ
ಸೂಕ್ಷ್ಮರಂಧ್ರವೆಂಬ ಒಂದು ಕೈಲಾಸದ್ವಾರವುಂಟು.
ಆ ದ್ವಾರಕವಾಟವ ತೆಗೆದು ನೋಡಲು
ಕೋಟಿ ಚಂದ್ರಪ್ರಕಾಶದ ದಿವ್ಯಪೀಠದ ಮೇಲೆ
ಮೂರ್ತಿಗೊಂಡಿದ್ದ ಶಿವನ ಕಂಡು
ಆ ನೋಡಿದ ನೋಟವಲ್ಲಿಯೆ ಸಿಕ್ಕಿ
ಭಾವವಚ್ಚೊತ್ತಿ, ಸರ್ವಕರಣಂಗಳು ನಿವೃತ್ತಿಯಾಗಿ
ಮನ ಉನ್ಮನಿಯಲ್ಲಿ ನಿಂದು
ಸಮರಸ ಸಮಾಧಿಯಲ್ಲಿ ಇದ್ದನಯ್ಯಾ ನಿಮ್ಮ ಶರಣ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೬೪ ॥

೧೦೫೦

ತನುವೆಂಬ ಭೂಮಿಯ ಮೇಲೆ,
ಶೃಂಗಾರದ ಇಂದ್ರಕೂಟಗಿರಿಯೆಂಬ ಕೈಲಾಸದಲ್ಲಿ
ಉತ್ತರ ದಕ್ಷಿಣ ಪಶ್ಚಿಮದಳದ
ಆತ್ಮ ಶಕ್ತಿ ಬಿಂದು ನಾದಗಳ ಮಧ್ಯದಲ್ಲಿ
ಶೂನ್ಯಸಿಂಹಾಸನವೆಂಬ ಸುಜ್ಞಾನಪೀಠದ ಮೇಲೆ
ನೀವು ಮೂರ್ತಿಗೊಂಡಿಹಿರಾಗಿ ಕಂಡು ಹರುಷಿತನಾದೆನು.
ಸೂರ್ಯಮಂಡಲದ ದ್ವಾತ್ರಿಂಶದಳದ ರುದ್ರರು ರುದ್ರಶಕ್ತಿಯರು

ನಿಮ್ಮನೋಲೈಸುತ್ತಿಹರು.
ಚಂದ್ರಮಂಡಲದ ಷೋಡಶದಳದ ರುದ್ರರು ರುದ್ರಶಕ್ತಿಯರು
ನಿಮ್ಮನೋಲೈಸುತ್ತಿಹರು.
ಅಗ್ನಿಮಂಡಲದ ಅಷ್ಟದಳದ ರುದ್ರರು ರುದ್ರ ಶಕ್ತಿಯರು
ನಿಮ್ಮನೋಲೈಸುತ್ತಿಹರು.
ಈ ಪರಿಯಿಂದ ದೇವರದೇವನ
ಓಲಗವನೇನೆಂದು ಹೇಳುವೆನು.
ಮತ್ತೆ ಭೇರಿ ಮೃದಂಗ ನಾಗಸರ ಕೊಳಲು ವೀಣೆ ಕಹಳೆ ಘಂಟೆ
ಶಂಖನಾದ ನಾನಾ ಬಹುವಿಧದ ಕೇಳಿಕೆಯ ಅವಸರದಲ್ಲಿ
ರಾಜಿಸುವ ರಾಜಯೋಗವ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನಿಮ್ಮ ಶರಣರಾದ ರಾಜಯೋಗಿಗಳೇ ಬಲ್ಲರು. ॥ ೨೬೫ ॥

೧೦೫೧

ಹುಲ್ಲಹೊರೆಯೊಳಗೊಂದು ಕಿಚ್ಚು ಹುಟ್ಟಿ ಸುಡುವುದ ಕಂಡೆ.
ಹುಲ್ಲ ಮೇವ ಎರಳೆಯ ಕೋಡು ಮುರಿದು
ಅಡವಿಯಲಿ ಬಿಟ್ಟುದ ಕಂಡೆ.
ಬಲ್ಲಿದ ಬಲೆಗಾರನ ಬಲೆಯ ನೇಣು ಹರಿದು,
ಬಲೆಯ ಬಿಟ್ಟುಹೋದುದ ಕಂಡೆ.
ಅಟ್ಟೆಯ ಬಿಟ್ಟು ತಲೆ ಆಕಾಶವನಡರಿತ್ತ ಕಂಡೆ.
ದೂರ ದಾರಿ ಸಾರೆಯಾದುದ ಕಂಡೆ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ ನಿಮ್ಮ ಶರಣ,
ಹುಟ್ಟು ಮುರಿದು ಬಟ್ಟಬಯಲಾದುದ ಕಂಡೆ. ॥ ೨೬೬ ॥

೧೦೫೨

ಆಸನ ಬಂಧವ ಮಾಡಿ,
ನಾಸಿಕಾಗ್ರದಲ್ಲಿ ದೃಷ್ಟಿಯನಿರಿಸಿ
ಸೂಸಲೀಯದೆ ಮನವ, ಬೀಸರ ಹೋಗದೆ ಪವನ[ನ]
ಓಸರಿಸಲೀಯದೆ ಬಿಂದುವ, ಊರ್ಧ್ವಕ್ಕೆತ್ತಿ
ಇಂತೀ ತ್ರಿವಿಧವನೊಂದೇ ಠಾವಿನಲ್ಲಿ ಬಲಿದು ನಿಲಿಸಿ
ಸಾಸಿರದಳಕಮಲದ ನಾದಾತ್ಮಲಿಂಗದಲ್ಲಿ ಮನ ಲೀಯವಾದಡೆ
ಅದೇ ಪರಮ ರಾಜಯೋಗವಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ನಿಜವನೈದುವಡೆ.
॥ ೨೬೭ ॥

೧೦೫೩

ಯೋಗದ ನೆಲೆಯನರಿದೆನೆಂಬವರಿಗೆ ಹೇಳಿಹೆವು ಕೇಳಿರೇ.
ಪೃಥ್ವಿ, ಅಪ್ಪುಗಳೆರಡ ಆಧಾರಗೊಳಿಸಿ,
ಅಗ್ನಿ ವಾಯುಗಳೆರಡ ಅಂಬರಸ್ಥಾನಕ್ಕೊಯ್ದು,
ಆತ್ಮ ಆಕಾಶವೆರಡ ಅನುಭಾವ ಮುಖಕ್ಕೆ ತಂದು,
ಮನದ ಅನುಮಾನವಳಿದು, ನೆನಹು ನಿಶ್ಚಲವಾಗಿ,
ಒಳಗೆ ಜ್ಯೋತಿರ್ಲಿಂಗವ ನೋಡುತ್ತ,
ಹೊರಗೆ ಎರಡು ಹುಬ್ಬಿನ ನಡುವೆ ಉಭಯ ಲೋಚನವಿರಿಸಿ,
ಹಿಂದು ಮುಂದನೆಣಿಸದೆ ಸಂದೇಹವಿಲ್ಲದೆ
ಖೇಚರಿಯನಾಚರಿಸಲು,
ಲೋಚನ ಮೂರುಳ್ಳ ಶಿವ ತಾನಹನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ಆತನೇ ಶಿವಯೋಗಿ.
॥ ೨೬೮ ॥

೧೦೫೪

ಇಂಬಾದ ಬ್ರಹ್ಮದಲ್ಲಿ ತುಂಬಿದ ಜಗವೆಲ್ಲಾ ಸಂಭ್ರಮಿಸುತ್ತದೆ
ಸಂಸಾರದಲ್ಲಿ.
ಕುಂಭದೊಳಗಣ ಸುಧೆಯನುಂಬ ಭೇದವನರಿಯದೆ
ಸುಂಬಳಗುರಿಯಂತಾದವು ಜಗವೆಲ್ಲವು.
ಒಂಭತ್ತುನಾಳದೊಳಗಣ ಮಧ್ಯನಾಳದ ಬೆಂಬಳಿಯಲ್ಲಿ
ಎಯ್ದಿದಾತಗೆ ಸುಧೆ ಸಾಧ್ಯವು.
ತೊಂಬತ್ತಾರು ಅಂಗುಲ ದೇಹವೆಲ್ಲವನೂ ತುಂಬುವುದು.
ಮತ್ತಂತು ಆ ಸುಧೆಯನು ಹಂಬಲಿಸಲೇಕೆ?
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಹಂಬಲವನು
ಬಿಡದಿರ್ದಡಾತ ಯೋಗಿ. ॥ ೨೬೯ ॥

೧೦೫೫

ಏಳುನೆಲೆಯ ಮಣಿಯ ಮಾಡದ ಮಾಣಿಕ್ಯದ ಮಂಟಪದಲ್ಲಿ
ಲೀಲೆಯಿಂದ ಶಿವ ಮೂರ್ತಿಗೊಂಡಿದ್ದನಯ್ಯ.
ಓಲಗಗೊಡುತ್ತಿದ್ದರಯ್ಯ ಸಕಲಗಣಂಗಳು.
ಸೋಹಂ ಸೋಹಂ ಎನ್ನುತ್ತ
ದಿವಾರಾತ್ರಿಗಳಿಲ್ಲದ ಪೂಜೆಯ ಮಾಡುತ್ತಿದ್ದರಯ್ಯ ಶಿವಗಣಂಗಳು.

ಪೂಜೆ ನಿರ್ಮಾಲ್ಯವಾಗದೆ, ಕೇಳಿಕೆ ನಿಶ್ಶೂನ್ಯವಾಗದ ಮುನ್ನ
ಆನಂದ ಬಿಂದು ತುಳುಕದೆ, ನಂದಿ ಮುಂದುಗೆಡದೆ
ಅಂದವಳಿಯದೆ ಕೂಡಬೇಕು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ. ॥ ೨೭೦ ॥

೧೦೫೬

ಪ್ರಾಣಾಪಾನಸಂಘಟದಿಂದ ಪ್ರಾಣನ ಗುಣವಳಿದು
ಪ್ರಾಣಮಯಲಿಂಗವಾದ ಪ್ರಾಣಲಿಂಗಕ್ಕೆ ಸಮತೆಯೇ ಸ್ನಾನೋದಕ.
ಪರಿಪೂರ್ಣಭಾವವೇ ವಸ್ತ್ರ. ಶಕ್ತಿಗಳೇ ಯಜ್ಞಸೂತ್ರ.
ವಿದ್ಯೆಯೇ ಸುಗಂಧ. ಭೂತದಯೆಯೇ ಅಕ್ಷತೆ.
ಪಂಚ ವಿಷಯಂಗಳೇ ಪುಷ್ಪ. ಅಂತಕರಣಂಗಳೇ ಧೂಪ.
ಪಂಚೇಂದ್ರಿಯಂಗಳೇ ದೀಪ.
ಸುಖದುಃಖಶೂನ್ಯವಾದ ಆತ್ಮಕಳೆಯೇ ನೈವೇದ್ಯ.
ಗುಣತ್ರಯಂಗಳೇ ತಾಂಬೂಲ.
ಪ್ರಾಣಸಮರ್ಪಣವೇ ನಮಸ್ಕಾರವು.
ಶಾಂತಿಯೇ ಪುಷ್ಪಾಂಜಲಿಯಾಗಿ,
ಈ ಪರಿಯಿಂದ,
ಪ್ರಾಣಲಿಂಗಪೂಜೆಯ ಮಾಡಬಲ್ಲಾತನೇ ಪ್ರಾಣಲಿಂಗಿ.
ಆತನೇ ನಿಜಾನುಭಾವಿ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ಆತನೇ ನಿರ್ಮಳ ಜ್ಞಾನಿ.
॥ ೨೭೧ ॥

೧೦೫೭

ಸ್ವಸ್ಥ ಸಿದ್ಧಾಸನದಲ್ಲಿ ಕುಳ್ಳಿರ್ದು ಅತ್ತಿತ್ತ ಕಂಪಿಸದೆ
ನೆಟ್ಟೆಲುವ ನೆಟ್ಟನೆ ಮಾಡಿ
ಅಧೋಮುಖಗಮನವಾಯುವ ಊರ್ಧ್ವಮುಖವ ಮಾಡಿ,
ಆಧಾರವಂ ಬಲಿದು ಪ್ರಾಣವಾಯುವ ಪಾನವ ಮಾಡಿ
ಅರುವೆರಳಿನಿಂ ಆರುದ್ವಾರವನೊತ್ತಲು
ಶಶಿ ರವಿ ಬಿಂಬಗಳ ಮಸುಳಿಪ
ನಾದ ಬಿಂದು ತೇಜವು ಕೂಡಿ ಮೂರ್ತಿಯಾಗಿ
ಥಳಥಳಿಸಿ ಹೊಳೆವ ಲಿಂಗದ ಬೆಳಗಿನೊಳಗೆ ಮನವಳಿದಾತನೆ

ಉನ್ಮನಿವನಿತೆಗೆ ವಲ್ಲಭನೆನಿಸುವ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ಆತನೇ ಪರಮಯೋಗಿ.
॥ ೨೭೨ ॥

೧೦೫೮

ಊರ ಮೇಗಡೆಯಲೊಂದು ನರಿ ಕೂಗಿಡಲು
ಹರಡಿದ್ದವರೆಲ್ಲ ನೆರೆದು,
ಇದೆಲ್ಲಿಯ ಕೂಗೆಂದು ವಿಚಾರಿಸಹೋದರೆ,
ನೆರದವರನೆಲ್ಲರ ನರಿ ನುಂಗಲು, ಊರು ಹಾಳಾಯಿತ್ತು.
ಹಾಳೂರೊಳಗಿದ್ದರಸು, ಪರಿವಾರವನರಸಲೆಂದು ಹೋದರೆ,
ಆ ಅರಸನ ನುಂಗಿತ್ತು.
ಆ ಅರಸನ ವಾಹನವ ನುಂಗಿ, ತನಗಾರೂ ಸರಿಯಿಲ್ಲವೆಂದು
ಮೂರು ಮೊನೆಯ ಗಿರಿಯನೇರಿ ಬಟ್ಟಬಯಲಾಯಿತ್ತು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೭೩ ॥

೧೦೫೯

ಮಿಂಚಿನ ರವೆಯಂತೆ ಎನ್ನಂತರಂಗದಲ್ಲಿ ತೋರುವೆ, ಅಡಗುವೆ,
ಇದೇನು ವಿಗಡ ಚರಿತ್ರೆ?.
ಒಳಗೆ ತೊಳಗಿ, ಬೆಳಗಿ ಬೆಳಗದಂತಿಹೆ.
ಸದೋದಿತನೆಂದು ಶ್ರುತಿ ಸಾರುತ್ತಿರಲು,
ತೋರಿಯಡಗುವುದು ನಿನಗೆ ಸಹಜವಲ್ಲಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೭೪ ॥

೧೦೬೦

ಕೋಳಿ ಕೂಗಿದಡೆ ಹಾವು ಹೆಡೆ ಎತ್ತಿತ್ತು.
ಊರೊಳಗಣವರ ಉಲುಹು ಅಡಗಿತ್ತು.
ಮೇರು ಮಂದಿರದ ಆವು ಕರೆಯಿತ್ತು.
ಅಮರಗಣಂಗಳೆಲ್ಲಾ ಅಮೃತವನುಂಡು ತೃಪ್ತರಾದರು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ನಿಮ್ಮ ಶರಣಂಗೆ,
ಪರಮ ಪರಿಣಾಮ ಪದವಿ ದೊರಕೊಂಡಿತ್ತು. ॥ ೨೭೫ ॥

೧೦೬೧

ಭೂಮಿಯ ಮೇಲಣ ಅಗ್ನಿ, ಆಕಾಶವನಡರಿದಡೆ
ಆಕಾಶದ ಜಲ ಉಕ್ಕಿ ಭೂಮಿಯೆಲ್ಲ ಜಲಮಯವಾಗಿತ್ತು.
ಅಲ್ಲಿದ್ದವರೆಲ್ಲ ಅಮೃತಮಯವಾಗಿ
ಮಹಾಲಿಂಗ ಸೇವೆಯ ಮಾಡಿ ಪ್ರಸಾದವ ಪಡೆದು
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೊಡನೆ ಲಿಂಗಲೀಯವಾದರು.
॥ ೨೭೬ ॥

೧೦೬೨

ಗರುಡನ ಗರಿಯ ಮುರಿದು, ಉರಗನ ಸಪ್ತ ಡೊಂಕ ತಿದ್ದಿ,
ಅಷ್ಟಪ್ರಕೃತಿ ಗುಣವ ನಷ್ಟವ ಮಾಡಿ,
ಕುಂಡಲಿಯಸಂಡಲೆದು, ಬಲಿದೆತ್ತಿ ಮಧ್ಯಮಾರ್ಗದಲ್ಲಿ ನಡೆಸಿ,
ಊರ್ಧ್ವಸ್ಥಾನದಲ್ಲಿ ನಿಲಿಸಿದಡೆ, ಒಂದು ಮಾತು ಕೇಳಬಹುದು.
ಆ ಮಾತಿನ ಬೆಂಬಳಿಯಲ್ಲಿ, ಜ್ಯೋತಿರ್ಲಿಂಗವ ಕಂಡು ಕೂಡಿದರು
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣರು. ॥ ೨೭೭ ॥

೧೦೬೩

ಸ್ವಯಂ ಜ್ಯೋತಿರ್ಲಿಂಗ ಸಂಗದಿಂದ
ಆತ್ಮನು ಜ್ಯೋತಿರ್ಲಿಂಗ ಸ್ವರೂಪವಾದನು.
ಮನವು ಜ್ಯೋತಿರ್ಲಿಂಗ ಸಂಗದಿಂದ
ಜ್ಯೋತಿ ಸ್ವರೂಪವಾಗಿ ಶಿವನ ನೆನವುತ್ತಿಹುದು.
ಜ್ಯೋತಿರ್ಲಿಂಗ ಸಂಗದಿಂದ ಚಕ್ಷು
ಜ್ಯೋತಿ ಸ್ವರೂಪವಾಗಿ ಶಿವಲಿಂಗವ ಕಾಣುತ್ತಿಹುದು.
ಇಂದ್ರಿಯಂಗಳು ಜ್ಯೋತಿರ್ಲಿಂಗ ಸಂಗದಿಂದ
ಜ್ಯೋತಿ ಸ್ವರೂಪವಾಗಿ ಲಿಂಗದೊಡನೆ ವರ್ತಿಸುತ್ತಿಹವು.
ಶರಣನೊಳಹೊರಗೊಡಗೂಡಿ ತೋರುವ
ಜ್ಯೋತಿರ್ಲಿಂಗ ಸ್ವರೂಪ
ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೨೭೮ ॥

೧೦೬೪

ರೂಪು ಲಿಂಗವೋ ನಿರೂಪು ಲಿಂಗವೋ ಎಂಬುದ
ವಿವರಿಸಿ ತಿಳಿದು ನೋಡೆ,

ರೂಪು ಲಿಂಗದಲ್ಲಿ ತ್ರಿಭುವನಾಧಾರವಾದ
ಶಿವ ಕಲಾ ರೂಪ ಚೈತನ್ಯ.
ನಿರೂಪಲಿಂಗವ ಭಾವಿಸಿ, ಧ್ಯಾನಪೂಜೆಯ ಮಾಡಿ;
ಕೋಟಿ ಸೂರ್ಯ ಪ್ರಕಾಶ ಚಿದ್ರೂಪ ಶಿವಲಿಂಗವ
ನೆನಹಿನ ಕೊನೆಯ ಮೇಲಿರಿಸಿ ನೆನೆದು ನಿತ್ಯ ತೃಪ್ತನಾದ
ಪರಾನಂದರೂಪ ಶಿವಯೋಗಿಯ ಯೋಗನಿದ್ರಾಮುದ್ರೆಯಲ್ಲಿ
ತಾನಿದಿರೆಂಬುದ ಮರೆದು ಭಿನ್ನವಿಲ್ಲದೆ ಶಿವಸುಖದೊಳಗಿಹನು
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ನಿಮ್ಮ ಶರಣನು.॥ ೨೭೯ ॥

೧೦೬೫

ಶಿರದೊಳಗೆ ಶಿರ, ಕರದೊಳಗೆ ಕರ,
ಕರಣದೊಳಗೆ ಕರಣ, ಕಂಗಳೊಳಗೆ ಕಂಗಳು,
ಕರ್ಣದೊಳಗೆ ಕರ್ಣ, ಘ್ರಾಣದೊಳಗೆ ಘ್ರಾಣ,
ಜಿಹ್ವೆಯೊಳಗೆ ಜಿಹ್ವೆ, ದೇಹದೊಳಗೆ ದೇಹ,
ಪಾದದೊಳಗೆ ಪಾದ ಕೂಡಿ, ಶರಣರೊಡನಾಡುವ
ನಿಮ್ಮ ಬೆಡಗಿನ ಲೀಲೆಯನಾರು ಬಲ್ಲರು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ನಿಮ್ಮ ಶರಣರಲ್ಲದೆ?.
॥ ೨೮೦ ॥

೧೦೬೬

ಸತ್ವ ರಜ ತಮದ ಮೇಲೆ ನಿಂದು ಬೆಳಗುವ ಜ್ಯೋತಿಯ ಬೆಳಗು
ಕತ್ತಲೆಯ ಗೃಹಮೊಳಹೊರಗೆ ತಾನೆ ಬೆಳಗುತಿದೆ ನೋಡ.
ಆ ಬೆಳಗಿನ ಬೆಂಬಳಿಯ ತಿಳಿವಿಂದ ತಿಳಿದು ನೋಡಲು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಬೆಳಗಲ್ಲದೆ,
ಮತ್ತೊಂದು ಬೆಳಗಿಲ್ಲ ನೋಡಾ. ॥ ೨೮೧ ॥

೧೦೬೭

ಮೂರು ಮಂಡಲದಲ್ಲಿ ತೋರುವ ಜ್ಯೋತಿಯದು
ಆರು ದ್ವಾರಂಗಳಲ್ಲಿ ಬೆಳಗುತ್ತಿಹುದು.
ಆರು ಸ್ಥಾನದ ಆರು ಪೀಠಂಗಳಲ್ಲಿ ತೋರಿ ಮೀರಿಹುದು.
ಬ್ರಹ್ಮರಂಧ್ರದೊಳಗೆ ಆರಕ್ಕೆ ಆರಾಗಿ ಮೀರಿದುದ

ಕೂಡಿದವನಾರೂಢಯೋಗಿ ತಾನೇ
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲಿ
ಬೇರಿಲ್ಲದಿಪ್ಪ ಪರಮಯೋಗಿ. ॥ ೨೮೨ ॥

೧೦೬೮

ಹರಿವ ಮನ ವಾಯುವನೊಂದು ಹುರಿಯ ಮಾಡಿ
ಮನವ ಸ್ಥಿರಗೊಳಿಸಿ,
ಸಗುಣ ಧ್ಯಾನದಲ್ಲಿ ಮನ ಸವೆದು, ನಿರ್ಗುಣದಲ್ಲಿ ನಿಂದು,
ಆ ನಿರ್ಗುಣ ಧ್ಯಾನ ಬಲಿದು, ಸಗುಣ ನಿರ್ಗುಣದಲ್ಲಿ ಅಡಗಿ
ಆ ನಿರ್ಗುಣವಾದ ನಿಜದಲ್ಲಿ ಮನೋಲಯವಾದುದೇ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಲ್ಲಿ ಪರಮ ರಾಜಯೋಗವು.
॥ ೨೮೩ ॥

೧೦೬೯

ಮರ ಮೊದಲಿಗೆ ಬೀಳಲು
ಕೊನೆ ಎಲೆ ಹೂವು ಕಾಯಿಗಳನಿರಿಸಿ ತಾ ಬೀಳದು ನೋಡ.
ಯೋಗಿಯ ಮನವಳಿಯಲು ಮನವಿಡಿದಿಹ ಇಂದ್ರಿಯ ವಿಷಯ
ಪ್ರಾಣಂಗಳು ಮನದೊಡನೆ ಅಳಿವವಲ್ಲದೆ ಉಳಿಯವು ನೋಡ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಕೂಡುವರೆ
ಮನವಳಿದು ಕೂಡುವುದು ನೋಡಾ. ॥ ೨೮೪ ॥

೧೦೭೦

ಯೋಗತಾಣವನರಿದು ಯೋಗಿಸಿಹೆನೆಂಬ ಯೋಗಿಗಳಿಗೆ
ಯೋಗದ ಕ್ರಮವ ಹೇಳಿಹೆವು ಕೇಳಿರಯ್ಯ.
ಸುಷುಮ್ನೆಯ ನಾಲ್ದೆಸೆಯಲ್ಲಿ , ಆತ್ಮಕಲೆ ವಿದ್ಯಾಕಲೆ ನಾದಕಲೆ
ಬಿಂದುಕಲೆಗಳನರಿಯಬೇಕು.
ಆ ಕಲೆ ನಾಲ್ಕು ಸುತ್ತಿ, ಅಗ್ನಿಕಲೆಗಳ ಹತ್ತನರಿವುದು.
ಪಿಂಗಳೆಯಲ್ಲಿ ಭಾನುಕಲೆಗಳ ಹನ್ನೆರಡನರಿವುದು.
ಇಡೆಯಲ್ಲಿ ಚಂದ್ರಕಲೆಗಳು ಹದಿನಾರು
ಕ್ಷಯ ವೃದ್ಧಿಯಾಗಿ ನಡೆವುದನರಿವುದು.
ಈ ಮೂವತ್ತೆಂಟು ಕಲೆಗಳ ಕೂಡಿಹ ಚಂದ್ರಸೂರ್ಯಾಗ್ನಿಗಳ
ಮಧ್ಯದಲ್ಲಿ ತತ್ವಮೂರು ಕೂಡೆ ಬೆಳಗುವ

ಪರಜ್ಯೋತಿರ್ಲಿಂಗವನರಿದು ಯೋಗಿಸಿ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಬಳಿಕ
ಕೂಡುವುದು ಕಾಣಿರಣ್ಣಾ. ॥ ೨೮೫ ॥

೧೦೭೧

ಶುದ್ಧ ಸಿದ್ಧಾಸನದಲ್ಲಿ ಕುಳ್ಳಿರ್ದು ಅರ್ಧಾವಲೋಕನದಿಂದ
ನಾಸಿಕಾಗ್ರದಲ್ಲಿ ಪ್ರಸಾದವ ಕಂಡುಂಡು,
ಮುಕ್ತಿವನಿತೆಗೆ ಬೇಟವ ಮಾಡಿದಡೆ
ಬೇಟಕ್ಕೆ ಮರುಳಾಗಿ ಕೂಡಿದಳಯ್ಯ.
ಆರು ವನಿತೆಯರ ವಂಚಿಸಿ ಕೂಡಿದಳು, ಆರು ಒಗೆತನ ಕೆಟ್ಟಿತ್ತು.
ಪುರುಷ ಸ್ತ್ರೀಯೊಳಗಡಗಿ, ಸ್ತ್ರೀ ಪುರುಷನೊಳಗಡಗಿ
ಇಬ್ಬರೆನಿಸದೆ ಒಬ್ಬರಾದುದನು ಏನೆಂದುಪಮಿಸಬಹುದು
ನಿರ್ವಿಕಲ್ಪಯೋಗವನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆ ತಾನಾದ ಘನವನು?.
॥ ೨೮೬ ॥

೧೦೭೨

ಯೋಗದ ಲಾಗವರಿದು ಯೋಗಿಸಿಹೆನೆಂಬ
ಯೋಗಿಗಳು ನೀವು ಕೇಳಿ.
ನೆಲವಾಗಿಲ ಮುಚ್ಚಿ, ಜಲವಾಗಿಲ ಮುಚ್ಚಿ, ತಲೆವಾಗಿಲ ತೆಗೆದು
ಗಗನಗಿರಿಯ ಪೂರ್ವಪಶ್ಚಿಮ ಉತ್ತರ ದಕ್ಷಿಣದ ನಡುವೆ
ಉರಿವ ಅಗ್ನಿಯ ಕಂಡು,
ಆ ಅಗ್ನಿಯ ಮೇಲೆ ಸ್ವರನಾಲ್ಕರ
ಕೀಲುಕೂಟದ ಸಂಚಯವ ಕಂಡು,
ಆ ಸಂಚಯದಲ್ಲಿ ಅಮೃತಸ್ವರವ ಹಿಡಿದು ಕೂಡುವುದೇ
ಪರಮಶಿವಯೋಗ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ಅದೇ ಪರಮನಿರ್ವಾಣ.
॥ ೨೮೭ ॥

೧೦೭೩

ಅಂತರಂಗದಲ್ಲಿ ಬೆಳಗುವ ಜ್ಯೋತಿರ್ಲಿಂಗವು,
ಸರ್ವಜ್ಯೋತಿವಸ್ತುಗಳಿಗೆ ಪರಮಾಶ್ರಯ ತಾನಾಗಿ,

ಒಳಹೊರಗೆ ತೆರಹಿಲ್ಲದೆ ವ್ಯಾಪಿಸಿ,
ಮನದ ನೆನಹಿನ ವಿಶ್ರಾಮಕ್ಕೆ ಸ್ಥಾನವಾದ ಜ್ಯೋತಿರ್ಲಿಂಗವ
ನೆನೆದು ಸುಖಿಯಾದೆ,
ಎನ್ನ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ. ॥ ೨೮೮ ॥

೧೦೭೪

ನುಡಿಯೊಳಗೆ ಸತ್ಯ, ಹೃದಯದಲ್ಲಿ ಯುಕ್ತಿ,
ಅರುವಿನಲ್ಲಿ ವಿರಕ್ತಿ ದೊರಕೊಂಡರೆ,
ಅಂತವರಲ್ಲಿಯೇ ಭಕ್ತಿ ದೊರಕೊಂಬುದು.
ಆ ಭಕ್ತಿ, ತಾನೆ ಮುಕ್ತಿ ಮಾತೆಯಾದ ಕಾರಣ
ಭಕ್ತಿಯಿಂದ ಶಿವನಲ್ಲಿ ನಿರ್ಮಲ ಚಿತ್ತವನಿರಿಸಿ ನೆನೆವುದು,
ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ. ॥ ೨೮೯ ॥

೧೦೭೫

ತಾಲು ಮೂಲ ದ್ವಾದಶಾಂತದ ಮೇಲಣ ಚಿತ್ಕಲಾ ಸೂರ್ಯನು
ನೆತ್ತಿಯ ಮಧ್ಯಮಂಡಲದಲ್ಲಿ ನಿಂದು,
ಉದಯಾಸ್ತಮಯವಿಲ್ಲದೆ ಬೆಳಗಲು,
ಮೂರು ಲೋಕದ ಕತ್ತಲೆ ಹರಿದು ಹೋಯಿತ್ತು ನೋಡ.
ಆ ಮೂರು ಲೋಕದ ಕಳ್ಳರೆಲ್ಲಾ ಬೆಳ್ಳರಾಗಿ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣನ
ಬೆಂಬಳಿಯಲ್ಲಿಯೆ ಲಿಂಗವನಾರಾಧಿಸುತ್ತಿರ್ದರು. ॥ ೨೯೦ ॥

೧೦೭೬

ಆಜ್ಞಾಚಕ್ರದ ಮಧ್ಯಹೃದಯದಲ್ಲಿ ಭರಿತವಾಗಿ
ನಾದ ಬಿಂದು ಕಲೆಯೆಂಬ ದಿವ್ಯಪೀಠದ ಮೇಲೆ ತೋರುತ್ತ
ತನ್ನ ಕಲೆಯನೆಲ್ಲಾ ದ್ವಾರಂಗಳಲ್ಲಿ ಬೀರುತ್ತ
ಮತ್ತೆಲ್ಲವ ಮೀರಿದ ನಿರ್ಮಲ ಶಿವಲಿಂಗರೂಪು
ತಾನೆ ಪರಮ ಪದವು.
ಆ ಪರಮ ಪದವನರಿದ ನಿರ್ಮಲ ಜ್ಞಾನಿಯೇ
ನಿಜಮುಕ್ತನಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೯೧ ॥

೧೦೭೭

ಆತ್ಮ ಪರಮಾತ್ಮ ಯೋಗವನರಿದೆನೆಂಬ
ಮಾತಿನ ಮೊದಲ ಜ್ಯೋತಿಯೊಳಗೆ ಆತ್ಮಜ್ಯೋತಿಯನರಿದು,
ಮಾತಿನೊಳಗಣ ಪರಮಾತ್ಮನನರಿವಂಗಲ್ಲದೆ,
ಆತ್ಮಪರಮಾತ್ಮ ಯೋಗವನರಿಯಬಾರದು.
ಆತ್ಮಪರಮಾತ್ಮ ಯೋಗವನರಿವಂಗಲ್ಲದೆ,
ಅರಿವು ಮರವೆಗಳು ನಷ್ಟವಾಗದು.
ಹಮ್ಮು ನಷ್ಟವಾ[ದುದೇ],
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ಜೀವ ಪರಮರೈಕ್ಯವು.
॥ ೨೯೨ ॥

೧೦೭೮

ಅರಿದರಿದೆವೆ[ಯಿಕ್ಕದೆ] ದೃಷ್ಟಿಯ ನಾಸಿಕಾಗ್ರದಲ್ಲಿರಿಸಿ ನೋಡುತ್ತ,
ಹೃದಯಕಮಲದಲ್ಲಿದ್ದ ಅಚಲಲಿಂಗವ
ಒಳಗೆ ಜ್ಞಾನಲೋಚನದಿಂದ ನೋಡುತ್ತ,
ತನುಮನೇಂದ್ರಿಯ ತರಹರವಾಗಿ,
ಮನ ನಿವಾತಜ್ಯೋತಿಯಂತೆ ನಿಂದು ನಿಜವ ಕೂಡಬಲ್ಲಾತನೆ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ಸಹಜ ಯೋಗಿ.
॥ ೨೯೩ ॥

೧೦೭೯

ಜಂಬೂದ್ವೀಪದ ಮಧ್ಯದಲ್ಲಿ ಹುಟ್ಟಿ ಬೆಳೆದ ವಂಶದ
ಏಕವಿಂಶತಿಗ್ರಂಥಿಯ ಕೊರೆದು
ಮೇಲಕ್ಕೆ ಹೋದ ಅಗ್ನಿಯ ಒಡಲೊಳಗೆ
ಈರೇಳು ಲೋಕವ ನುಂಗಿದ ತುಂಬಿಯ ಅಂಗಕ್ಕಳಿವಿಲ್ಲದೆ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಕೂಡಿ ಬಯಲಾಯಿತ್ತು.
॥ ೨೯೪ ॥

೧೦೮೦

ಪ್ರಾಣಲಿಂಗೈಕ್ಯವಾದ ಬಳಿಕ ವಿಧಿ ನಿಷೇಧ, ಪುಣ್ಯ ಪಾಪ
ಮಾನ ಅಪಮಾನ, ಹೆಚ್ಚು ಕುಂದುಗಳೆಂಬವೇನೂ ಇಲ್ಲ.

ಆತನಿರವು ಬೆಂದ ಪಟದಂತೆ, ಬಯಲ ಚಿತ್ರಿಸಿದ ರೂಹಿನಂತೆ,
ತನ್ನ ತೋರದೆ ತಾನೇ ಶಿವನಾಗಿ ನಿಂದ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ನಿಮ್ಮ ಶರಣನು. ॥ ೨೯೫ ॥

೧೦೮೧

ಲಿಂಗವ ನೋಡಲೆಂದು ಅಂಗವಿಸಹೋದರೆ
ಆ ಲಿಂಗ ತನ್ನತ್ತ ಪಶ್ಚಿಮಮುಖವಾಗಿ ನೋಡುತ್ತಿರೆ
ತಾ ಪೂರ್ವಮುಖವಾಗಿ ನೋಡಲು
ಮಹಾಶ್ಚರ್ಯದ ರೂಪಾಗಿ ಕಾಣಿಸುತ್ತದೆ ನೋಡ.
ಉದಕದೊಳಗಣ ಜ್ಯೋತಿಯದು ಉದಯಬಿಂದು
ರತ್ನದಂತೆ ತೋರುತ್ತದೆ ನೋಡ.
ಪೂರ್ಣಚಂದ್ರನಂತೆ ಅಮೃತಮಯ ಮಂಗಲಸ್ವರೂಪ
ಪರಮಾನಂದ ನೋಡ.
"ಯಥಾಪೋ ಜ್ಯೋತಿರಾಕಾರಂ ಬ್ರಹ್ಮಾಮೃತ ಶಿವಾತ್ಮಕಂ"
ಎಂದುದಾಗಿ
ಎನ್ನ ಲೋಚನಾಗ್ರದಲ್ಲಿ ಬೆಳಗುವ
ಪರಬ್ರಹ್ಮವನು ನೆನೆದು ಸುಖಿಯಾದೆನು,
ಎನ್ನ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ. ॥ ೨೯೬ ॥

೧೦೮೨

ಸ್ಥೂಲ ಸೂಕ್ಷ್ಮ ಕಾರಣವೆಂಬ ತನುತ್ರಯವ ವಿಭಾಗಿಸಿ ಕಳೆದು
ಆ ತನುತ್ರಯದಿಂದ ಜೀವತ್ರಯವನು ಹಿಂಗಿಸಿ ಒಂದು ಮಾಡಿ
ನಿಜಾಂಗರೂಪನಾದ ಪರಮಾತ್ಮನಲ್ಲಿ ಕೂಡಿ
ಅಂಗ ಲಿಂಗ ಸಂಗರೂಪಾದ ಪರಮಾತ್ಮನೆ ಪರವೆಂದರಿದು
ಪರಮಾತ್ಮನೆ ಘನವೆಂದರಿದು, ಪರಮಾತ್ಮನೆ ತಾನೆಂದರಿದು
ಲಿಂಗಾಂಗಸಂಗವಾದ ಷಡುಸ್ಥಲವನಂಗೀಕರಿಸಿ
ಅನುದಿನ ಎಡೆಬಿಡುವಿಲ್ಲದೆ ಶಿವಾನುಭಾವಿಯಾಗಿ
ಶಿವಲಿಂಗವ ಭಜಿಸುವವನೆ ಮುಕ್ತನು.
ಉಳಿದವರೆಲ್ಲಾ ಬದ್ಧರಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೯೭ ॥

೧೦೮೩

ಭೂತಪಂಚಕಕಾಯವ ಕಳೆದು
ಗುರು ಶಿವಮಂತ್ರಕಾಯವ ಮಾಡಿ ಶಿವಜಾತನಾದ ಬಳಿಕ
ಜಾತಿಸೂಚಕ ವರ್ಣಾಶ್ರಮವಿಲ್ಲವಾಗಿ, ದೇಹಾಭಿಮಾನವಿಲ್ಲ.
ದೇಹಾಭಿಮಾನವಿಲ್ಲವಾಗಿ ಜಂಗಮದಲ್ಲೈಕ್ಯನು.
ಆ ಸಮ್ಯಜ್ಞಾನ ಜಂಗಮ ಲಿಂಗೈಕ್ಯಂಗೆ
ಲಿಂಗಾಚಾರವಲ್ಲದೆ ಲೋಕಾಚಾರವಿಲ್ಲ.
ಆತಂಗೆ ಸರ್ವವೂ ಲಿಂಗಮಯವಾಗಿ ತೋರುತ್ತಿಹುದಾಗಿ
ಆ ಮಹಾತ್ಮನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಕೂಡಿ ವರ್ತಿಸುತ್ತಿಹನು.
॥ ೨೯೮ ॥

೧೦೮೪

ಆಚಾರದನುಭಾವವಿಡಿದು, ವಿಚಾರವಂತರಾಗಿ,
ಸುಜ್ಞಾನಾಚಾರದಿಂದ ಹೃದಯದ ಕಲ್ಮಷವ ಕಳೆದು,
ನಿರ್ಮಲ ಹೃದಯರಾದ ನಿತ್ಯಾನಂದಿಗಳು
ತಾವೆ ಶಿವರಹುದರಿಂದ
ಜ್ಞಾನಶೂನ್ಯವ ಭಜಿಸಿ ನಿಜಲಿಂಗೈಕ್ಯರಾಗಿಹರು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣರು. ॥ ೨೯೯ ॥

೧೦೮೫

ಮೂಲಮಂತ್ರಾತ್ಮಸ್ವರೂಪದಿಂದ ಸಹಸ್ರಾದಿತ್ಯ-
ತೇಜೋರೂಪಾಗಿ ಬೆಳಗುತ್ತಿಹ
ದೇವರದೇವನಾದ ಮಹಾದೇವನ, ಅನಂತ ಶಕ್ತಿವಂತನ,
ವಿಶ್ವಾತ್ಮನಾದ ಸಾದಾತ್ಮ ಶಿವನ,
ಸದಾ ಸರ್ವಾಂಗವು ಕರ್ಣಂಗಳಾಗಿ ಕೇಳಿ ಕೇಳಿ, ಮನ ಮಚ್ಚಿ
ಆ ಪರಮಜ್ಞಾನಾನಂದರೂಪನ ನೆನೆನೆನೆದು,
ಮರಳಿ ಮರಳಿ ಸರ್ವಾಂಗದಲ್ಲಿ ಸೋಂಕಿ ಸೋಂಕಿ,
ಎನ್ನ ಕರಣೇಂದ್ರಿಯಗಳೆಲ್ಲವು ಲಿಂಗಾಕಾರವಾಗಿ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೊಳಗಡಗಿದವು. ॥ ೩೦೦ ॥

೧೦೮೬

ಕಾಷ್ಠದ ಮೇಲೊಂದು ಕಾಷ್ಠವನಿರಿಸಿ
ಹಿಡಿದು ಮಥನವ ಮಾಡಲು
ಆ ಮಥನದಿಂದುದ್ಭವಿಸಿದಗ್ನಿ ಆ ಕಾಷ್ಠವ ವೇಷ್ಟಿಸಿ,
ತನ್ನ ಸ್ಫುರಣೆಯಿಂದ ಉಷ್ಣಿಸುವಂತೆ
ಶಿವಶರಣರ ಅನುಭಾವಮಥನದಿಂದ ಮಹಾಜ್ಞಾನೋದಯವಾಗಿ
ಕರ್ಪುರದ ಗಿರಿಯನುರಿಕೊಂಡು ನಿರಂಶಕವಾಗಿ
ಉಭಯ ನಿರ್ವಯಲಾದಂತೆ ಲಿಂಗಾಂಗದೈಕ್ಯವಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೩೦೧ ॥

೧೦೮೭

ಕರ್ಮವ ನುಂಗಿತ್ತು ಹಾಹೆ, ಹಾಹೆಯ ನುಂಗಿತ್ತು ರಜ್ಜು,
ರಜ್ಜುವ ನುಂಗಿತ್ತು ವಿದ್ಯೆ, ವಿದ್ಯೆಯ ನುಂಗಿತ್ತು ಕಳೆ,
ಕಳೆಯ ನುಂಗಿತ್ತು ಬೆಳಗು, ಬೆಳಗ ನುಂಗಿತ್ತು ನಾದ,
ನಾದವ ನುಂಗಿತ್ತು ಶೂನ್ಯ, ಶೂನ್ಯವ ನುಂಗಿತ್ತು ಮಹಾಶೂನ್ಯ,
ಮಹಾಶೂನ್ಯವ ನುಂಗಿತ್ತು ನಿರಾಳ.
ಆ ನಿರಾಳದಲ್ಲಿ ನಿಂದು ನಿಶ್ಚಿಂತವಾಸಿಯಾಗಿದ್ದೆನಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ, ನಿಮ್ಮಲ್ಲಿ ಅವಿರಳನಾಗಿ.
॥ ೩೦೨ ॥

೧೦೮೮

ಚಂದ್ರಸೂರ್ಯರ ಹಿಡಿದೆಳೆತಂದು
ಒಂದೇ ಠಾವಿನಲ್ಲಿ ಬಂಧಿಸಿ, ನಿಲಿಸಿದೆ
ಸಂದಿಗೊಂದಿಯ ಹೋಗಲೀಯದೆ
ಒಂದೇ ಠಾವಿನಲ್ಲಿ ನಿಲಿಸಿದೆನು.
ಚಂದ್ರಸೂರ್ಯರು ಒಂದಾಗಿ ಮಹಾ ಮಾರ್ಗದಲ್ಲಿ ನಡೆವರಯ್ಯ
ಬಂಧಿಸಿದ ಮೇಲಣ ಕದಹು ತೆರಹಿತ್ತು.
ಇಂದ್ರನ ವಾಹನವಳಿಯಿತ್ತು.
ಮುಂದೆ ಹೋಗಿ ಹೊಕ್ಕೆನು ಕೈಲಾಸವ.
ಅಲ್ಲಿರ್ದ ಅಮರಗಣಂಗಳು, ಉಘೇ ಎನಲು ಕೇಳಿ
ತ್ರಿಬಂಧದ ಕೀಲು ಕಳೆಯಿತ್ತು.

ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು,
ತನ್ನೊಳಗೆನ್ನನು ಇಂಬಿಟ್ಟುಕೊಂಡನು. ॥ ೩೦೩ ॥

**ಶರಣಸ್ಥಲ**

೧೦೮೯

ಕಾಲ ಕೈಯೊಳಗಿರಿಸಿ ನಡೆವಾತನ ನಡೆ ಶುದ್ಧ.
ಕೈಯ ಕಣ್ಣೊಳಗಿರಿಸಿ ನೋಡುತ್ತಿಪ್ಪಾತನ ನೋಟ ಶುದ್ಧ.
ಆ ಕಣ್ಣ ಮನದೊಳಗಿರಿಸಿ ನೆನೆವುತ್ತಿಪ್ಪಾತನ ಮನ ಶುದ್ಧ.
ಆ ಮನವ ಭಾವದೊಳಗಿರಿಸಿ ಭಾವಿಸುತ್ತಿಪ್ಪಾತನ ಭಾವ ಶುದ್ಧ.
ಆ ಭಾವವು ನಿರ್ಭಾವವನೆಯ್ದಿ ನಿರವಯಲಾದರೆ,
ಆತ ಸ್ವತಂತ್ರ ಶರಣ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ
ಒಂದಾದ ಲಿಂಗೈಕ್ಯನು. ॥ ೩೦೪ ॥

೧೦೯೦

ಸ್ಫಟಿಕದ ಘಟದಂತೆ ಒಳಹೊರಗೆ ಒಂದೆ ಪರಿ ನೋಡ.
ಶರಣಂಗೆ ಅಂತರಂಗ ಬಹಿರಂಗವೆಂದೆನಲುಂಟೆ?
ಕಾದ ಕಬ್ಬುನದ ಘಟ್ಟಿಯಂತೆ ಶರಣನ ಸರ್ವಾಂಗವೆಲ್ಲ
ಲಿಂಗವಾವರಿಸಿ ಲಿಂಗವಾಯಿತ್ತಾಗಿ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ ನಿಮ್ಮ ಶರಣ
ಲಿಂಗಸಂಗಿಯೇ ಅಂಗಸಂಗಿಯೆಂದು ತಿಳಿಯಬಾರದು.॥ ೩೦೫ ॥

೧೦೯೧

ಅಂತರಂಗದಲ್ಲಿ ಆಡುವ ಪಕ್ಷಿಯ
ಅಂತುವನಾರು ಬಲ್ಲರು ಹೇಳ?
ಅಂತರ ಮಹದಂತರವನೊಡಗೂಡಿ
ಸ್ವತಂತ್ರನಾಗಿ ನಿಂದ ನಿಲವನು
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನಿಮ್ಮ ಶರಣರಾದ ಮಹಾಂತರೇ ಬಲ್ಲರು. ॥ ೩೦೬ ॥

೧೦೯೨

ನಿಮ್ಮ ಪೂಜೆಯ ಮಾಡುವೆನೆಂತಯ್ಯ
ಪೂಜಾದ್ರವ್ಯ ಸತ್ಕ್ರೀಯೆಯೊಳಗೆ ನೀವಿಪ್ಪಿರೆಂದರಿದು.
ನಿಮ್ಮ ಸ್ತೋತ್ರವ ಮಾಡುವೆನೆಂತಯ್ಯ
ನೀವು ಅಕ್ಷರಾತ್ಮಕರೆಂದರಿದು.
ನಿಮ್ಮ ಜಪಿಸುವೆನೆಂತಯ್ಯ
ನೀವು ಅನಾಹತಮೂಲಮಂತ್ರ ಸ್ವರೂಪರೆಂದರಿದು.
ನಿಮ್ಮ ಧ್ಯಾನಿಸುವೆನೆಂತಯ್ಯ
ನೆನೆವ ಮನದ ಕೊನೆಯ ಮೇಲೆ ನೀವಿಪ್ಪಿರೆಂದರಿದು.
ನಿಮ್ಮ ಅರಿವುತಿಪ್ಪೆನೆಂತಯ್ಯ
ಅರಿವಿಂಗೆ ಅರಿವಾಗಿ ನೀವಿಪ್ಪಿರೆಂದೆರದರಿದು.
ಇಂತು ಎನ್ನ ನಾನರಿದ ಬಳಿಕ
ಪೂಜಾಸ್ತೋತ್ರ ಜಪ ಧ್ಯಾನ ಅರಿವೆಲ್ಲವು ನೀವೆಯಾದ ಮತ್ತೆ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನಿಮಗೆ ಮಾಡುವ ಸತ್ಕ್ರಿಯೆಯೊಂದೂ ಇಲ್ಲ. ॥ ೩೦೭ ॥

೧೦೯೩

ಗುರುವ ತಲೆಯಲಿ ಹೊತ್ತು ನಡೆವ ಶಿಷ್ಯನಲ್ಲಿ ಗುರುವಡಗಿ
ಶಿಷ್ಯ ಗುರುವಾದ ಪರಿಯ ಬಲ್ಲವರಾರಯ್ಯ?.
ಗುರುವಿನ ಗುರುತ್ವ ಶಿಷ್ಯಂಗಾಯಿತ್ತು,
ಶಿಷ್ಯನ ಶಿಷ್ಯತ್ವ ಎಲ್ಲಿ ಹೋಯಿತ್ತೆಂದರಿಯಬಾರದು.
ಗುರುವಿಲ್ಲದ ಶಿಷ್ಯಂಗೆ ಪರವಿಲ್ಲ.
ಪರವಿಲ್ಲದ ಶಿಷ್ಯ ಸ್ವಯವಾಗನೆಂಬುವ
ನಿಮ್ಮ ಶರಣರ ಅನುಭಾವದಲ್ಲಿ ಕಂಡೆನು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೩೦೮ ॥

೧೦೯೪

ಗುರು ಶಿಷ್ಯನ ಕೊಂದು ಶಿಷ್ಯನಾದನು.
ಶಿಷ್ಯ ಹೋಗಿ ಮರಳಿ ಗುರುವ ಕೊಂದು ಗುರುವಾದನು.
ಗುರು ಶಿಷ್ಯರೊಬ್ಬರನೊಬ್ಬರು ಕೊಂದು ಇಬ್ಬರೂ ಸತ್ತರು.
ಇವರಿಬ್ಬರೂ ಸತ್ತ ಠಾವದೊಬ್ಬರಿಗೂ ಕಾಣಬಾರದು.

ಸತ್ತ ಸಾವ ಕಂಡೆಹೆನೆಂದು ಉಟ್ಟುದನಳಿದು ಬತ್ತಲೆ ಹೋಗಿ
ತಲೆವಾಗಿಲ ತೆಗೆದು ನೋಡಲು
ಇವರಿಬ್ಬರೂ ಒಬ್ಬನೊಳಗಳಿದು ಒಬ್ಬನೈದಾನೆ.
ಇಂತಿವರಿಬ್ಬರೂ ಸತ್ತ ಸಾವನಾರಿಗೂ ಅರಿಯಬಾರದು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ, ನಿಮ್ಮ ಕರುಣವುಳ್ಳವರಿಗಲ್ಲದೆ.
॥ ೩೦೯ ॥

೧೦೯೫

ಆಚಾರವೆಂಬ ಭಿತ್ತಿಯ ಮೇಲೆ, ವಿಚಾರವೆಂಬ ಚಿತ್ರವ ಚಿತ್ರಿಸಿ,
ಜ್ಞಾನವೆಂಬ ಕಳೆಯ ನೆಲೆಗೊಳಿಸಿ,
ಅನುಭಾವವೆಂಬ ಮಂಟಪದಲ್ಲಿ ಶರಣ ಕುಳ್ಳಿರ್ದು,
ನೆತ್ತಿಯ ನಯನವ ತೆರೆದು ನೋಡಲು,
ಆಚಾರ ವಿಚಾರದೊಳಗಡಗಿತ್ತು.
ವಿಚಾರ ಸುವಿಚಾರದೊಳಗಡಗಿತ್ತು.
ಸುವಿಚಾರ ಸುಜ್ಞಾನದೊಳಗಡಗಿತ್ತು.
ಮಹಾನುಭಾವ ಶರಣನೊಳಗಡಗಿತ್ತು.
ಶರಣನಿರ್ದ ತನ್ನ ತಾ ಆಚಾರವನುಂಗಿ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೩೧೦ ॥

೧೦೯೬

ಶಿವಯೋಗಿ ಸುಳಿದ ಸುಳುಹು ಜಗತ್ಪಾವನ.
ಮೆಟ್ಟಿದ ಧರೆಯೆಲ್ಲ ಪವಿತ್ರ.
ನಿಮಿಷವಿರ್ದಾಸ್ಥಲವೆಲ್ಲ ಅವಿಮುಕ್ತಿಕ್ಷೇತ್ರ.
ಹೊಕ್ಕ ಜಲವೆಲ್ಲ ಪುಣ್ಯತೀರ್ಥಂಗಳು.
ಏರಿದ ಬೆಟ್ಟವೆಲ್ಲ ಶ್ರೀ ಪರ್ವತ.
ಕೃಪೆಯಿಂದ ನೋಡಿದ ಜನರೆಲ್ಲ ಸಾಲೋಕ್ಯರು.
ಒಡನೆ ಸಂಭಾಷಣೆಯ ಮಾಡಿದವರೆಲ್ಲ ಸದ್ಯೋನ್ಮುಕ್ತರು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನಿಮ್ಮ ಸುಳುಹಿನ ಘನತೆಯನುಪಮಿಸಬಾರದು. ॥ ೩೧೧ ॥

೧೦೯೭

ಲಿಂಗದಲ್ಲಿ ಲೀಯವಾದ ಪರಮಾನಂದ ಸ್ವರೂಪಂಗೆ ಕಾಯವಿಲ್ಲ,
ಕಾಯವಿಲ್ಲಾಗಿ ಕರ್ಮವಿಲ್ಲ.
ಅದೆಂತೆಂದಡೆ:
ಕಾರ್ಯವಿಲ್ಲದ ಕುಲಾಲಚಕ್ರಭ್ರಮಣದಂತೆ,
ದೇಹವಿಡಿದು ಚರಿಸಿದನೆಂದಡೆ ದೇಹಿಯೆನಬಹುದೇ ಶರಣನ?
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ನಿಲವು ತಾನೆ ಬೇರಿಲ್ಲಾ.
॥ ೩೧೨ ॥

೧೦೯೮

ನರ ಸುರ ಮುನಿಗಳೊಳಗಲ್ಲ ಶರಣ.
ಜಾತಿ ಕುಲ ಗೋತ್ರವೆಂಬವರೊಳಗಲ್ಲ ಶರಣ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ,
ನಿಮ್ಮ ಶರಣನ ಪರಿ ಅವಲೋಕದೊಳಗೂ ಇಲ್ಲ. ॥ ೩೧೩ ॥

೧೦೯೯

ಲಿಂಗ ಬೇರೆ ಶರಣ ಬೇರೆಂದು ಹಂಗಿಸಿ ನುಡಿಯಲಾಗದು.
ಲಿಂಗ ಬೇರೆ ಶರಣ ಬೇರೆಯೆ? ಶಿವಶಿವ ಒಂದೇ ಕಾಣಿರಣ್ಣಾ.
ಸುವರ್ಣ ಆಭರಣವಾಯಿತ್ತೆಂದಡೆ, ಅದು ನಾಮ-
ರೂಪಭೇದವಲ್ಲದೆ ವಸ್ತುಭೇದವಲ್ಲ.
ಭಕ್ತಿಯ ವೈಭವದಿಂದ ಶರಣ ಸಕಾಯನಾಗಿ ಅವತರಿಸಿದೆನೆಂದಡೆ
ಬೇರಾಗಬಲ್ಲನೇ?
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆಂಬ ಲಿಂಗವೆಂದಡೂ
ಶರಣನೆಂದಡೂ ಒಂದೇ ಕಾಣಿರಣ್ಣಾ. ॥ ೩೧೪ ॥

೧೧೦೦

ಜ್ಞಾನಿಯ ನಡೆ ನುಡಿ ಅಜ್ಞಾನಿಗೆ ಸೊಗಸದು.
ಅಜ್ಞಾನಿಯ ನಡೆ ನುಡಿ ಜ್ಞಾನಿಗೆ ಸೊಗಸದು.
ದಿವಾ ರಾತ್ರಿಗಳಂತೆ ಒಂದಕ್ಕೊಂದಾಗದು.
ಅರಿವಿನಿಂದ ಉದಯಿಸಿದ ಶರಣನು ಮೆರೆಯಬೇಕೆಂದು
ಮರಹಿಂದ ಹುಟ್ಟಿದ ಮಾನವರ ಇದಿರ ಮಾಡಿದೆಯಲ್ಲಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೩೧೫ ॥

೧೧೦೧

ಊರೊಂದೆಸೆ, ಕಾಡೊಂದೆಸೆ.
ನರರೊಂದೆಸೆ, ಸುರರೊಂದೆಸೆ.
ಹಗಲೊಂದೆಸೆ, ಇರುಳೊಂದೆಸೆ.
ಪುಣ್ಯವೊಂದೆಸೆ, ಪಾಪವೊಂದೆಸೆ.
ಜ್ಞಾನವೊಂದೆಸೆ, ಅಜ್ಞಾನವೊಂದೆಸೆ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನಿಮ್ಮ ಶರಣರೊಂದೆಸೆ, ಲೋಕವೊಂದೆಸೆ. ॥ ೩೧೬ ॥

೧೧೦೨

ಅಂತರಂಗ ಶುದ್ಧವಿಲ್ಲದವರೊಳಗೆ
ಅತ್ತಿಯ ಹಣ್ಣಿನಂತೆ ಕ್ಷುದ್ರ ಬಿಡದು ನೋಡಯ್ಯ.
ಅಂತರಂಗ ಶುದ್ಧವುಳ್ಳವರೊಳಗೆ
ಬಾಳೆಯ ಹಣ್ಣಿನಂತೆ ಸುಗುಣ ತೋರುವುದು ನೋಡಯ್ಯ.
ಇದು ಕಾರಣ,
ಅಂತರಂಗ ಶುದ್ಧವಿಲ್ಲದವರ ಸಂಗದಲ್ಲಿ ಇರಬಾರದು ಶರಣರು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೩೧೭ ॥

೧೧೦೩

ಕೆಲರೊಳ್ಳಿದನೆಂಬರು, ಕೆಲರು ಹೊಲ್ಲನೆಂಬರು
ಆರಾರು ತಿಳಿವ ಭ್ರಾಂತಿಯನಾರು ತಿಳಿಯಬಹುದಯ್ಯ?
ಇದು ಕಾರಣ,
ಹಲವು ಸುಕರ್ಮ ದುಃಕರ್ಮಂಗಳ ಬುದ್ಧಿಭೇದದಿಂದ
ನುಡಿದರೆಂದರೆ, ತಾನವರಂತಹನೆ ಜ್ಞಾನಿಯಾದ ಶರಣನು?
ತನ್ನ ಪರಿಯನಾರಿಗೂ ತೋರದೆ ಜಗದ ಕಣ್ಣಿಂಗೆ
ಮರೆಯಾಗಿ ಸುಳಿವನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ನಿಮ್ಮ ಶರಣನು.
॥ ೩೧೮ ॥

೧೧೦೪

ಸರ್ವ ಕ್ರೀಯ ಲಯಸ್ಥಾನವಾದ ಭಾವಭರಿತ ಲಿಂಗವ
ಭಾವ ಭಾವಿಸುತ, ಭಾವ ಲಯವಾಯಿತ್ತು ನೋಡ.

ಇನ್ನು ಭಾವಿಸಲುಂಟೆ ಹೇಳ ಮಹಾಘನವ?.
ಭಾವ ನಿರ್ಭಾವದ ನಿಜವು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ನಿಲವು. ॥ ೨೧೯ ॥

೧೧೦೫

ಮೃತ್ ಕಾಷ್ಠ ಪಾಷಾಣಂಗಳಿಂದಲಾದವೆಲ್ಲ ಲಿಂಗವೇ?
ಲೋಹ ಬೆಳ್ಳಿ ತಾಮ್ರ ಸುವರ್ಣದಿಂದಲಾದವೆಲ್ಲ ಲಿಂಗವೇ?
ಅಲ್ಲಲ್ಲ.
ಅಲ್ಲಿ ಭಾವಿಸುವ ಮನದ ಕೊನೆಯ ಮೊನೆಯಮೇಲೆ ಬೆಳಗುವ
ನಿಜ ಬೋಧಾರೂಪು ಲಿಂಗವಲ್ಲದೆ, ಇವೆಲ್ಲ ಲಿಂಗವೇ?
ತಿಳಿದು ನೋಡಲು ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು
ತಾನೇ ಲಿಂಗವು. ॥ ೩೨೦ ॥

೧೧೦೬

ಜ್ಞಾನಾನಂದ ಪರಬ್ರಹ್ಮವೆ ಲಿಂಗವೆಂದು ಅರಿದ ಅರಿವು
ತಾನೇ ತನ್ನಲ್ಲಿ ವಿಶ್ರಮಿಸಿ,
ತೆರಹಿಲ್ಲದೆ ಅವಿರಳ ಸಂಬಂಧವಾದ ಲಿಂಗವ ಭಾವಿಸಲುಂಟೆ?,
ಅರಿಯಲುಂಟೆ?.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆಂಬ
ನಿತ್ಯ ನಿರಾಳದ ಕುರುಹಿಡಿಯಲುಂಟೆ ಹೇಳಾ?. ॥ ೩೨೧ ॥

೧೧೦೭

ನಡುರಂಗದ ಜ್ಯೋತಿ ಕವಲುವಟ್ಟೆಯಲ್ಲಿ ಕುಡಿವರಿದು
ಎಡಬಲದಲ್ಲಿ ಬೆಳಗುವ ಪರಿಯ ನೋಡ.
ಒಳ ಹೊರಗೆ ತಾನೊಂದೆಯಾಗಿ ಪರಿಪೂರ್ಣಬೆಳಗು ಪಸರಿಸಿ
ಬೆಳಗುವ ಪರಿಯ ನೋಡ.
ಅಖಂಡಾದ್ವಯ ವಿಶ್ವತೋಚಕ್ಷುಮಯವಾಗಿ ಬೆಳಗುವ
ಪರಿಯ ನೋಡ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆಂಬ ಪರಂಜ್ಯೋತಿ
ಬೆಳಗುವ ಪರಿಯ ನೋಡಾ. ॥ ೩೨೨ ॥

೧೧೦೮

ತುದಿ ಮೊದಲಾಯಿತ್ತು. ಮೊದಲೇ ತುದಿಯಾಯಿತ್ತು.
ತುದಿ ಮೊದಲೆಂಬವೆರಡಿಲ್ಲದೆ ಹೋಯಿತ್ತು.
ಮುನ್ನೆಂತಿದ್ದುದಂತೆ ಆಯಿತ್ತು. ಸಹಜದ ನಿಲವು ಉದಯಿಸಿತ್ತು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ನಿಮ್ಮ ಶರಣಂಗೆ.
॥ ೩೨೩ ॥

೧೧೦೯

ನೆಲವಿಲ್ಲದಲ್ಲಿಯ ಉದಕವ ತಂದು,
ಗಿಡವಿಲ್ಲದಲ್ಲಿಯ ಪುಷ್ಪವ ತಂದು,
ಒಡಲಿಲ್ಲದ ಲಿಂಗಕ್ಕೆ, ಕಡೆಮೊದಲಿಲ್ಲದೆ ಪೂಜೆಯ ಮಾಡುವೆನು,
ಎನ್ನ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಂಗೆ. ॥ ೩೨೪ ॥

೧೧೧೦

ಆಶೆಯೆಂಬ ಶೃಂಖಲೆಯಿಂದ
ಬಂಧವಡೆದವರು ಆರಾದರೂ ಆಗಲಿ
ತೊಳಲಿ ಬಳಲುತ್ತಿಹರು ನೋಡ.
ಆಶೆಯೆಂಬ ಶೃಂಖಲವ ಮುರಿದ ನಿರಾಶಕರು
ಆವ ಧಾವತಿಯಿಂದಲೂ ಬಳಲದೆ ಸುಖವಿಹರು ನೋಡ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ಆಶೆಯುಳ್ಳಾತನೆ ಮಾಯೆಯುಳ್ಳವನು.
ನಿರಾಶೆಯುಳ್ಳವನೆ ನಿಮ್ಮವನು. ॥ ೩೨೫॥

೧೧೧೧

ಕಾಶಿಯಲ್ಲಿ ಗೋವಧೆಯ ಮಾಡಿ ಗುರುಕರುಣವ ಪಡೆದು
ಪರವನರಿಯಬಲ್ಲಾತನೇ ಯೋಗಿ.
ತ್ರಿವೇಣಿಸಂಗಮದಲ್ಲಿ ಮಂಡೋದರಿಯ ಕೊಂದು,
ಮನನ ತ್ರಾಣಮಂತ್ರವನನುಸಂಧಾನಿಸಬಲ್ಲಾತನೇ ಯೋಗಿ.
ಶ್ರೀಶೈಲದಲ್ಲಿ ಶಿವಸ್ತುತಿಯ ಕೇಳಿ, ಪಯವ ಪತಮಾಡಿ,
ಮನವಳಿದಿರಬಲ್ಲಾತನೇ ಯೋಗಿ.
ಪ್ರಯಾಗದಲ್ಲಿ ಉರಗನ ಕೊಂದು,

ಫಣಾಮಣಿಯ ಸೆಳೆದುಕೊಂಡು,
ಆ ಮಣಿಯ ಬೆಳಗಿನೊಳಗೆ ಸುಳಿದಾಡಬಲ್ಲಾತನೇ ಯೋಗಿ.
ಕೇದಾರದಲ್ಲಿ ಮತ್ಸ್ಯವ ಕೊಂದು, ಮರಣವ ಗೆಲಿದು,
ಪರಮ ಪದದಲ್ಲಿರಬಲ್ಲಾತನೇ ಯೋಗಿ.
ಇಂತೀ ಪುಣ್ಯಕ್ಷೇತ್ರಂಗಳಲ್ಲಿ ಮಾಡಬಾರದುದ ಮಾಡಿ,
ನೋಡಬಾರದುದ ನೋಡಿ, ಕೇಳಬಾರದುದ ಕೇಳಿ,
ಶಿವನೊಲಿಸಿ ಶಿವನೊಳಗಾದರು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ ನಿಮ್ಮ ಶರಣರು. ॥ ೩೨೬ ॥

೧೧೧೨

ಆನೆಯು ಕೋಣನೂ ಕೂಡಿ ಅಡವಿಯಲ್ಲಿ ಆಡುತ್ತಿರಲು
ಕೇಸರಿ ಬಂದು ಬೆದರಿಸಿತ್ತು.
ಕೇಸರಿಯ ಕಂಡು ಆನೆ ಅಳಿಯಿತ್ತು.
ಕೋಣ ಕೇಸರಿಯ ನುಂಗಿ ಕೇಸರಿಯಾಯಿತ್ತು.
ಉಡು ಸರ್ಪನ ಹಿಡಿದು ನುಂಗಲು
ಉಡುವಿಂಗೆ ಹೆಡೆಯಾಯಿತ್ತು.
ಆ ಉಡುವಿನ ಹೆಡೆಯ ಮಾಣಿಕವ ಕಂಡು
ಅಡಗಿದ್ದ ಹದ್ದು ಹಾಯ್ದು ಆಕಾಶಕ್ಕೊಯ್ಯಿತ್ತು.
ಆ ಆಕಾಶದಲ್ಲಿ ಮಾಣಿಕದ ಬೆಳಗು ತುಂಬಲು
ಆ ಬೆಳಗ ಕಂಡು ಓರಿದೊಂದು ನರಿ ಕೂಗಿತ್ತು.
ಆ ಮಾಣಿಕ ನರಿಯ ನುಂಗಿ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ನಿರವಯಲಾಯಿತ್ತು.
॥ ೩೨೭ ॥

೧೧೧೩

ಹರಿವ ಹರಿಯ ನಿಲಿಸಿ, ಉರಗನ ನಿದ್ರೆಯ ಕೆಡಿಸಿ,
ಸರೋವರದ ಕಮಲದೊಳಗಣ
ಉದಕವ ಕುಡಿಯಬಲ್ಲರೆ ಯೋಗ.
ಅರಮನೆಯೊಳಗಣ ಅರಗಿಳಿಯ
ಪರಮಂತ್ರವನೋದಿಸಬಲ್ಲರೆ ಯೋಗ.
ಅರಸು ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ
ಹೊರೆಯಿಲ್ಲದೆ ಕೂಡಬಲ್ಲರೆ ಅದು ಪರಮಯೋಗ. ॥ ೩೨೮ ॥

೧೧೧೪

ಉರಗನ ಫಣಾಮಣಿಯ ಬೆಳಗನರಿ ಕಂಡ.
ಉರವಣಿಸಿ ಮೇಲಕ್ಕೆ ಹಾರುವ ಹದ್ದಿನ ಹಾರವನರಿ ಕಂಡ.
ಸರಸ್ವತಿ ಸಿರಿಯೊಡನೇಕಾಂತದಲ್ಲಿಹ ಪರಿಯನರಿ ಕಂಡ.
ಹರಿಯಜರುದ್ರರ ಕರ್ಮವನಳಿವ ಪರಿಯನರಿ ಕಂಡ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ, ತಾನೆಂದರಿ ಕಂಡಾ.
॥ ೩೨೯ ॥

೧೧೧೫

ಸಪ್ತದ್ರವ್ಯಂಗಳು ಎಡೆಯಿಲ್ಲದೆ ಹೋದುವು.
ಅಷ್ಟಮದಂಗಳು ನಷ್ಟವಾದುವು.
ಅರಿಷಡ್ವರ್ಗದುರವಣೆ ತರಹರಿಸಲಾರದೆ ಹೋದವು.
ಪಂಚೇಂದ್ರಿಯಂಗಳ ವಂಚನೆ ಬರತವು.
ಕರ್ಮೇಂದ್ರಿಯಂಗಳ ವ್ಯಾಪಾರ ನಿಂದವು.
ಕಾಮನ ಬಾಣ ಬತ್ತಳಿಕೆಯಲ್ಲಿ ಹಾಯ್ದುವು.
ಕಾಲನ ಅಧಿಕಾರ ನಿಂದಿತ್ತು.
ಮಾಯೆ ಮುಂದುಗೆಟ್ಟು ಮುಖವಿಡಲಮ್ಮದೆ ಹೋಯಿತ್ತು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ, ನಿಮ್ಮ ಶರಣರ ಮುಂದೆ.
॥ ೩೩೦ ॥

೧೧೧೬

ಅಂಬರದಲಾಡುವ ಪಕ್ಷಿ ಕೊಂಬಿನ ಮೇಲಣ ಕೋಡಗವ ನುಂಗಿ
ತುಂಬಿಯ ಒಡಲೊಳಡಗಿತ್ತು.
ತುಂಬಿಯೆಂಬರದಲಡಗಿ, ಅಂಬರ ತುಂಬಿಯಲಡಗಿ
ಎರಡು ಒಂದಾಗಿ ತುಂಬಿಯಂಬರವಿಲ್ಲದೆ ಹೋಯಿತ್ತು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ನಿಮ್ಮಲ್ಲಿ. ॥ ೩೩೧ ॥

೧೧೧೭

ತಾಳಮರದ ಮೇಲಣ ಕೋಡಗ, ತಾಳರಸವ ಕೊಂಡು
ದೆಸೆದೆಸೆಯ ಶಾಖೆಗಳಿಗೆ ಲಂಘಿಸಿ, ಹರಿದಾಡುತ್ತಿದ್ದಿತು ನೋಡ.
ಹರಿದಾಡುವ ಕೋಡಗವ ಹಿಡಿದು ಕಂಬದಲ್ಲಿ ಕಟ್ಟಿದರೆ

ಕಂಬದ ತುದಿಯ ಮಣಿಯನೇರಿ
ನಿಂದು ನೋಡುತ್ತಿದ್ದಿತ್ತು ನೋಡ.
ಕಂಬ ಮುರಿದು ಮಣಿ ಬಯಲಾಯಿತ್ತು, ಕೋಡಗವಳಿಯಿತ್ತು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನಿಮ್ಮ ಶರಣನ ಮುಂದೆ. ॥ ೩೩೨ ॥

೧೧೧೮

ಕಿಚ್ಚಿನೊಳಗೆ ಕಿಚ್ಚು ಹುಟ್ಟಿ ಉರಿವುತ್ತಿದ್ದಿತ್ತು.
ಕಿಚ್ಚ ಕಾಯ ಹೋದವರ ಹಚ್ಚಡ ಬೆಂದು ಬತ್ತಲೆಯಾದರು.
ಆ ಕಿಚ್ಚು ಗ್ರಾಮವ ಸುತ್ತಿ ದಳ್ಳುರಿಗೊಳಲು
ಗ್ರಾಮದವರು ಗ್ರಾಮದಾಸೆಯ ಬಿಟ್ಟು ಹೋದರು.
ಗ್ರಾಮಕ್ಕಿನ್ನು ಮರಳಿ ಬಾರವೆಂದು ನೇಮವ ಮಾಡಿಕೊಂಡರು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಗ್ರಾಮಕ್ಕಾಗಿ
ಬೇಗ ಹೋದರು. ॥ ೩೩೩ ॥

೧೧೧೯

ಆವಾವ ಭಾಷಾಂಗವ ತೊಟ್ಟರೂ
ಆ ಭಾಷಾಂಗಕ್ಕೆ ತಕ್ಕ ಗತಿ ಭಾಷೆಯಿರಬೇಕು.
ಶಿವಲಾಂಛನಧಾರಿಯಾದಡೆ,
ಆ ಲಾಂಛನಕ್ಕೆ ತಕ್ಕ ನಡೆ ನುಡಿ ಇರಬೇಕು.
ಅದೆಂತೆಂದಡೆ:
ಕಾಯದ ಕಳವಳವ ಗೆಲಿದು,
ಮಾಯಾಪ್ರಪಂಚ ಮಿಥ್ಯವೆಂದರಿದು,
ಕ್ಷಮೆ ದಮೆ ಶಾಂತಿ ದಯೆ ಜ್ಞಾನ ವೈರಾಗ್ಯ
ಮುಂತಾಗಿ ಸುಳಿಯಬೇಕು.
ಲಿಂಗಮೋಹಿಯಾಗಿದ್ದಲ್ಲದೆ, ಉಳಿದ ಉದ್ದೇಶದ ಸುಳುಹೆಲ್ಲಾ
ಬಿರುಗಾಳಿಯ ಸುಳುಹಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೩೩೪ ॥

೧೧೨೦

ನಾನು ಹಿರಿಯ ತಾನು ಹಿರಿಯರೆಂಬವರೆಲ್ಲ ಹಿರಿಯರೆ?
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ-

ದೊಳಗಿಪ್ಪವರೆಲ್ಲಾ ಹಿರಿಯರೆ?
ಆಟಮಟ ಕುಟಿಲ ಕುಹಕ ಪಿಸುಣತನದಲ್ಲಿಪ್ಪವರೆಲ್ಲಾ ಹಿರಿಯರೆ?
ಸರ್ಪ ಸಾವಿರ ಕಾಲ ಇರ್ದಡೇನು, ವಿಷಬಿಡುವುದೇ?
ಹಾವುಮೆಕ್ಕೆಯು ಹಣ್ಣಾದಡೇನು, ಮಧುರವಪ್ಪುದೆ?
ಅರಿಷಡ್ವರ್ಗದುರವಣೆಗೊಳಗಾದಡಾತ ಹಿರಿಯನೆ?
ಸಮತೆ ಸಮಾಧಾನ ತುಂಬಿ ತುಳುಕದೆ,
ಸುಜ್ಞಾನಭರಿತವಾದಡಾತ ಹಿರಿಯನು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ನಿಮ್ಮನರಿಯದೆ
ಬರುಮಾತಿನಲ್ಲಿ ಹಿರಿಯನೆಂದಡೆ
ನಾಚಿತ್ತೆನ್ನ ಮನವು. ॥ ೩೩೫ ॥

೧೧೨೧

ಈಶವೇಷವ ಧರಿಸಿದಡೇನು ವೇಷಕ್ಕೆ ಈಶನಂಜಿ ಒಲಿವನೆ?
ಹೊರವೇಷ ಚೆನ್ನಾಗಿತ್ತಲ್ಲದೆ ಒಳಗೆ ಅರಿವಿಲ್ಲದ ವೇಷವೇನು?
ಗ್ರಾಸಕ್ಕೆ ಭಾಜನವಾಯಿತ್ತಲ್ಲದೆ ಲಿಂಗಕ್ಕೆ ಭಾಜನವಾದುದಿಲ್ಲ.
ಮತ್ತೆಂತೆಂದಡೆ:
ಅರಿವು ಆಚಾರ ಅನುಭಾವ ಭಕ್ತಿ ವಿರಕ್ತಿ
ನೆಲೆಗೊಂಡಿಪ್ಪ ರೂಪಿನಲ್ಲಿ ಶಿವನೊಲಿದಿರ್ಪನು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೩೩೬ ॥

೧೧೨೨

ಅಶನಕ್ಕಾಗಿ ವಸನಕ್ಕಾಗಿ ದೆಸೆ ದೆಸೆಯಲ್ಲಿರ್ದವರೆಲ್ಲ
ನೆರೆದ ಪರಿಯ ನೋಡ.
ಒಬ್ಬರ ನುಡಿ ಒಬ್ಬರಿಗೆ ಸೊಗಸದ ಕಾರಣ
ಮಥನಕರ್ಕಶದಲ್ಲಿರ್ಪ ಪರಿಯ ನೋಡ.
ಅಯ್ಯಾ ಜೀಯಾ ದೇವರು ಎಂಬರು
ಮತ್ತೊಂದು ಮಾತ ಸೈರಿಸದೆ.
ಎಲವೊ ಎಲವೊ ಎಂದು ಕುಲವೆತ್ತಿ ನುಡಿವರು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನೀ ಮಾಡಿದ ಮಾಯದ ಬಿನ್ನಾಣದ ಮರೆಯಲ್ಲಿದ್ದವರ ಕಂಡು
ನಾ ಬೆರಗಾದೆನು. ॥ ೩೩೭ ॥

೧೧೨೩

ಪರಗಣಂಗಳೆಲ್ಲ ನರಗಣಂಗಳಾಗಿ
ಒಬ್ಬರ ಆಗಿಂಗೆ ನೆರೆದು ಒಬ್ಬರ ಚೇಗಿಂಗೆ ನೆರೆದು ನುಡಿವರು.
ಒಬ್ಬರು ಒಳ್ಳಿಹರು, ಒಬ್ಬರು ಹೊಲ್ಲಹರು ಎಂದು ತಮತಮಗೆಲ್ಲ
ನುಡಿವರು, ಇದೇನು ಪಂಚಾಕ್ಷರಿ ಮಂತ್ರವೆ?
ಇದೇನು ಮಹಾನುಭಾವದ ನುಡಿಯೆ?
ಹೊತ್ತು ಹೋಕಿನ ಮಾತ ಕಲಿತವರೆಲ್ಲ,
ಮೃತ್ಯುವಿನ ಬಾಯತುತ್ತಾಮುದ ಕಂಡು
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನಮ್ಮ ಶರಣ ನೋಡಿ ನಗುತಿರ್ದನು. ॥ ೩೩೮ ॥

೧೧೨೪

ಅಂಗದ ಮೇಲೆ ಲಿಂಗ ಬರಲಾಗಿ, ಕಾಯದ ಗುಣವಳಿದು
ಪ್ರಸಾದಕಾಯವಾಯಿತ್ತು.
ಲಿಂಗದ ನೆನಹು ನೆಲೆಗೊಂಡು ಮನ ಹಿಂಗದಿರಲು
ಮನದ ಮೇಲೆ ಪ್ರಸಾದ ನೆಲೆಗೊಂಡಿತ್ತು.
ಲಿಂಗದಲ್ಲಿ ಪ್ರಾಣರತಿಸುಖವಾವರಿಸಿತ್ತಾಗಿ
ಪ್ರಾಣದಲ್ಲಿ ಪ್ರಸಾದ ನೆಲೆಗೊಂಡಿತ್ತು.
ಸರ್ವೇಂದ್ರಿಯಂಗಳು ಲಿಂಗದಲ್ಲಿ ಸಾವಧಾನಿಗಳಾದ ಕಾರಣ
ಇಂದ್ರಿಯಂಗಳಲ್ಲಿಯೂ ಪ್ರಸಾದವೇ ನೆಲೆಗೊಂಡಿತ್ತು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ನಿಮ್ಮ ಶರಣಂಗೆ.
॥ ೩೩೯ ॥

೧೧೨೫

ಪ್ರಸಾದ ಪ್ರಸಾದವೆಂದೆಂಬರು,
ಪ್ರಸಾದದಾದಿಕುಳವನಾರು ಬಲ್ಲರು?
ಪ್ರಸಾದವೆಂಬುದು ಅತರ್ಕ್ಯ ಅಪ್ರಮಾಣವು.
ಗುರುವಿನಲ್ಲಿ ಶುದ್ಧಪ್ರಸಾದವೆನಿಸಿತ್ತು.
ಲಿಂಗದಲ್ಲಿ ಸಿದ್ಧಪ್ರಸಾದವೆನಿಸಿತ್ತು.
ಜಂಗಮದಲ್ಲಿ ಪ್ರಸಿದ್ಧಪ್ರಸಾದವೆನಿಸಿತ್ತು.
ಇಂತೀ ತ್ರಿವಿಧಮುಖವೊಂದೇ ಪ್ರಸಾದವಾಗಿ ತೋರಿ ಮತ್ತೆ

ವಿಶ್ವದೊಳಗೆ ವಿಶ್ವತೋಮುಖವಾಗಿ ಪ್ರಕಾಶಿಸುತ್ತ,
ಎನ್ನಂತರಂಗದಲ್ಲಿ ಬೆಳಗುವ ಮಹಾಪ್ರಸಾದವು
ಎನ್ನ ಸರ್ವಾಂಗಮಯವಾಗಿ ತೋರುತ್ತಿದೆ.
ಶಿವಾ!ಶಿವಾ!!ನಿಮ್ಮ ಪ್ರಸಾದದ
ಮಹಿಮೆಯನೇನೆಂದುಪಮಿಸುವೆನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ. ॥ ೩೪೦ ॥

೧೧೨೬

ಬ್ರಹ್ಮ ವಿಷ್ಣುಗಳಿಗಗೋಚರ ಪ್ರಸಾದವು
ಸಿದ್ಧ ಗಂಧರ್ವರಿಗಸಾಧ್ಯ ಪ್ರಸಾದವು
ನರಸುರ ಮನುಮುನಿಗಳಿಗಭೇದ್ಯ ಪ್ರಸಾದವು
ವಿಶ್ವದೊಳು ಪರಿಪೂರ್ಣವಾಗಿ,
ವಿಶ್ವಕ್ಕತೀತವೆನಿಸಿದ ಪರಮ ಪ್ರಸಾದವು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನಿಮ್ಮ ಶರಣಂಗೆ ಸಾಧ್ಯ, ಉಳಿದವರಿಗಸಾಧ್ಯವು. ॥ ೩೪೧॥

೧೧೨೭

ಅಂಗದೊಳಗೆ ಲಿಂಗವಿದೆ, ಲಿಂಗದೊಳಗೆ ಅಂಗವಿದೆ.
ಅಂಗ ಲಿಂಗ ಸಂಗದೊಳಗೆ ಪರಮ ಸುಖವಿದೆ.
ಪರಮ ಸುಖದೊಳಗೆ ಪ್ರಸಾದವಿದೆ.
ಪ್ರಸಾದದೊಳಗೆ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನಿಮ್ಮ ಶರಣನ ನಿಲವಿದೆ. ॥ ೩೪೨ ॥

೧೧೨೮

ಸಮತೆಯೆಂಬ ಕಂಥೆಯ ಧರಿಸಿ
ಕ್ಷಮೆಯೆಂಬ ಭಸ್ಮಧಾರಣವನಳವಡಿಸಿ
ಸರ್ವಜೀವದಯಾಪರವೆಂಬ ಕಮಂಡಲವ ತಳೆದುಕೊಂಡು
ಸುಜ್ಞಾನವೆಂಬ ದಂಡವ ಹಿಡಿದು
ವೈರಾಗ್ಯವೆಂಬ ಭಿಕ್ಷಾಪಾತ್ರೆ ಸಹಿತ,
ಭಕ್ತಿ ಭಿಕ್ಷವ ಬೇಡ ಬಂದೆನಯ್ಯ.
ಸತ್ಯ ಶರಣರಾದ ಭಕ್ತರನರಸುತ್ತ,

ಭಕ್ತಿ ಭಿಕ್ಷವ ಬೇಡ ಬಂದನಯ್ಯ.
ಕಾಯದ ಕಳವಳವ ಕಳೆದು,
ಜೀವನೋಪಾಯವಿಲ್ಲದೆ, ಸುಳಿವನಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣ ಭಕ್ತಿ ಕಾರಣವಾಗಿ.
॥ ೩೪೩ ॥

೧೧೨೯

ಹರ ಹರ ಶಿವ ಶಿವ ಪ್ರಸಾದದ ಘನವ,
ಪ್ರಸಾದಿಯ ಘನವನೇನೆಂದುಪಮಿಸುವೆನು?
ಪ್ರಸಾದವಿಲ್ಲದೆ ಪ್ರಸಾದಿಯಿಲ್ಲ. ಪ್ರಸಾದಿಯಿಲ್ಲದೆ ಪ್ರಸಾದವಿಲ್ಲ.
ಶಿವ ಶಿವ ಒಂದನೊಂದು ಬಿಡದೆ ಎರಡೊಂದಾಗಿ ಕೂಡಿ
ಬೆಳಗುವ ಪರಿಯ ನೋಡ!
ಪ್ರಸಾದವು ಪ್ರಸಾದಿಯ ಗ್ರಹಿಸಿ ಪ್ರಸಾದಿಯಾಯಿತ್ತು
ಪ್ರಸಾದಿಯೂ ಪ್ರಸಾದವ ಗ್ರಹಿಸಿ ಪ್ರಸಾದವಾ-
ದಿರವನೇನೆಂಬೆನು?
ಇಂತು ಒಂದರೊಳಗೊಂದು ಕೂಡಿ ಎರಡೊಂದಾದ-
ಘನವನುಪಮಿಸಬಾರದು.
ವಾಙ್ಮನಕ್ಕತೀತವಾದ ನಿಲವನು ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ
ತಾನೆ ಬಲ್ಲಾ. ॥ ೩೪೪ ॥

೧೧೩೦

ಭಾವಿಸಬಾರದ ಪ್ರಸಾದವ ರೂಹಿಸಬಾರದು.
ರೂಹಿಸಬಾರದ ಪ್ರಸಾದವ ಸಾಧಿಸಬಾರದು.
ಸಾಧಿಸಬಾರದ ಪ್ರಸಾದವ ಸಾಧಿಸಿ ಕಂಡೆಹೆನೆಂದು
ನರ ಸುರ ಮನು ಮುನಿಗಳು, ಜಪ ತಪ
ಹೋಮ ನಿತ್ಯನೇಮಂಗಳಿಂದರಸಿ
ತೊಳಲಿ ಬಳಲುತ್ತಿದ್ದರಲ್ಲ!
ಕಾಯವಂತರೆಲ್ಲರೂ ಕಳವಳಿಸುತ್ತಿದ್ದರು.
ಆ ಮಹಾಪ್ರಸಾದವು ಮುನ್ನಾದಿಯ-
ಶರಣಂಗಲ್ಲದೆ ಸಾಧ್ಯವಾಗದು.

ಇದು ಕಾರಣ, ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆಂಬ
ಮಹಾಪ್ರಸಾದವು,
ಮಹಾಪ್ರಸಾದಿಗೆ ಸಾಧ್ಯ, ಉಳಿದವರಿಗಸಾಧ್ಯವು. ॥ ೩೪೫ ॥

೧೧೩೧

ಆದಿಯ ಪ್ರಸಾದವ ಸಾಧಿಸಬಾರದು, ಬೇಧಿಸಬಾರದು.
ನಿಮ್ಮ ಪ್ರಸಾದಿಗಲ್ಲದೆ ನೆಲೆಗೊಳಗಾಗದು.
ಚರಾಚರದಲ್ಲಿ ಅನುಶ್ರುತ ಸುಖ ಪ್ರಸಾದವ
ಭಕ್ತಿಪದಾರ್ಥವೆಂದು ರೂಹಿಸಿದ ಪರಿಯ ನೋಡ.
ಅರ್ಚನಮುಖದಲ್ಲಿ ಪದಾರ್ಥವೆಂದು, ಅರ್ಪಣಮುಖದಲ್ಲಿ
ಪ್ರಸಾದವೆಂದು ಕಲ್ಪಿಸಿದ ಪರಿಯ ನೋಡ.
ಆದಿಯಲ್ಲಿ ಪ್ರಸಾದ, ಅಂತ್ಯದಲ್ಲಿ ಪ್ರಸಾದ,
ಮಧ್ಯದಲ್ಲಿ ಒಂದು ಕ್ಷಣ
ಪದಾರ್ಥವೆಂದು ಮಾಡಿದ ಪರಿಯ ನೋಡ.
ಕಡೆ ಮೊದಲಿಲ್ಲದ ಪ್ರಸಾದವು
ಭಕ್ತಿಗೆ ಸಾಧ್ಯವಾದ ಪರಿಯ ನೋಡ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು ಭಕ್ತಿಪ್ರಿಯನಾದ ಕಾರಣ,
ಭಕ್ತಿಪ್ರಸಾದವ ಪಡೆದೆನಾಗಿ ಎನಗೆ ಪ್ರಸಾದ ಸಾಧ್ಯವಾಯಿತ್ತು.
॥ ೩೪೬ ॥

೧೧೩೨

ಅಣುವಿಂಗೆ ಅಣುವಾಗಿ, ಮಹತ್ತಿಂಗೆ ಮಹತ್ತಾಗಿ
ಪರಿಪೂರ್ಣವಾದ
ಪರವೆಂಬ ಪ್ರಸಾದಮೂರ್ತಿಯ ಇರವ
ಹೇಳಿಹೆನು ಕೇಳಿರಣ್ಣ.
ಮುಂದೆ ತಾರಾ ಬೀಜ, ಹಿಂದೆ ಸುನಾದ ಬೀಜ,
ಬಲದಲ್ಲಿ ಆತ್ಮ ಬೀಜ, ಎಡದಲ್ಲಿ ವಿದ್ಯಾ ಬೀಜ,
ಎಂಟರಲ್ಲಿ ಅಷ್ಟೈಶ್ವರ್ಯ, ಅಷ್ಟಶಕ್ತಿ ಬೀಜ,
ಹದಿನಾರರಲ್ಲಿ ಕಲೆ, ಕಲಾಪತಿಗಳು
ಮೂವತ್ತೆರಡರಲ್ಲಿ ವಿಕಲೆ ವಿಃಕಲಾಪತಿಗಳು.
ಇಂತೀ ತ್ರಿಮಂಡಲ ಮಧ್ಯದ ಸೂಕ್ಷ್ಮಕರ್ಣಿಕೆಯಲ್ಲಿಯೆ
ಶುದ್ಧ ಪ್ರಸಾದವನು ಮಹಾನುಭಾವರ ಸಂಗದಲ್ಲಿದ್ದರಿದೆನು ಕಾಣಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೩೪೭ ॥

೧೧೩೩

ಆರಾಧಾರದ ನಿಚ್ಚಣಿಗೆಯನೇರಿ ನೋಡಲು
ಸೂಕ್ಷ್ಮ ಮಂದರಗಿರಿಯೆಂಬ ಮಹಾಪರ್ವತವ ಕಾಣಬಹುದು.
ಆ ಪರ್ವತವ ತುಟ್ಟ ತುದಿಯನೇರಿ ನೋಡಲು
ಮಹದಾಕಾಶ ಮಂಟಪವುಂಟು.
ಆ ಮಂಟಪವ ಹೊಕ್ಕಿಹೆನೆಂದು ವಿಚಾರಿಸಿ ನೋಡಲು
ಅಲ್ಲೊಂದು ಸೂಕ್ಷ್ಮದ್ವಾರವುಂಟು.
ಆ ಸೂಕ್ಷ್ಮದ್ವಾರ ಕವಾಟವ ತೆರೆದು ನೋಡಲು
ಅಲ್ಲಿ ನಿರುಪಾಧಿಕ ಜ್ಯೋತಿ ಬೆಳಗುತ್ತಿಪ್ಪುದು.
ಆ ಬೆಳಗಿನೊಳಗೆ ಅಚಲವಾಗಿ ನಿಂದು,
ಪರಿಪೂರ್ಣ ಪೂಜೆಯಾಗಿ
ತನ್ನನೆ ನಿರಾಳಲಿಂಗಕ್ಕೆ ಪೂಜೆ ಮಾಡುವಾತನೆ
ಪರಮ ನಿರ್ವಾಣಿಯಯ್ಯಾ, ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ.
॥ ೩೪೮ ॥

೧೧೩೪

ಹಲವು ಬಣ್ಣದ ಮೃಗದ ನೆಲೆಯನರಿದೆವೆಂದು
ಹಲಬರು ತಲೆವಾಲಗೆಟ್ಟರು ನೋಡ.
ಬಣ್ಣವ ಬೇರುಮಾಡಿದವಂಗಲ್ಲದೆ,
ಮೃಗದ ನೆಲೆಯ ಕಾಣಬಾರದು.
ಮೃಗದ ನೆಲೆಯ ಕಂಡರೇನು,
ಆ ಮರ್ಕಟನ ಕಾಟ ಬೆನ್ನ ಬಿಡದು.
ಆ ಮರ್ಕಟನ ಹಿಡಿದು
ಶೂಲಕ್ಕೆ ಹಾಕಿದ ಬಳಿಕ ನಿಶ್ಚಿಂತೆಯಹುದು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ನಿಜ ಪದವನೆಯ್ದುವಂಗೆ.
॥ ೩೪೯ ॥

೧೧೩೫

ಆಯುಧವೈನೂರಿದ್ದರೇನು,
ರಣರಂಗದಲ್ಲಿ ಹಗೆಯ ಗೆಲುವುದು ಒಂದೇ ಅಲಗು.
ಏನನೋದಿ ಏನಕೇಳಿದರೇನು, ತಾನಾರೆಂಬುದನರಿಯದನ್ನಕ್ಕ?.
ತಾನಾರೆಂಬುದನರಿದ ಬಳಿಕ ನೀನಾನೆಂಬುದಿಲ್ಲ.

ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು ತಾನೆಯಾಗಿಹನು.
॥ ೩೫೦ ॥

೧೧೩೬

ಕಾಯವೆಂಬ ಪಟ್ಟಣಕ್ಕೆ ಅಕಾಯನಿತ್ಯನೆಂಬರಸು
ಕ್ಷಮೆ ದಮೆ ತಿತಿಕ್ಷೆ ಶಾಂತಿ ಉಪರತಿ ಸುಮನ
ನಿರಹಂಕಾರಗಳೆಂಬ ಪರಿವಾರ.
ಆ ಪಟ್ಟಣದ ಹೊರ ಒಳಯಕ್ಕೆ ಒಂಬತ್ತು ಬಾಗಿಲು.
ಮಧ್ಯ ಒಳಯಕ್ಕೆ ನಾಲ್ಕು ಬಾಗಿಲು.
ಆ ಅರಸಿನರಮನೆಯ ಸ್ವಯಂಭುನಾಥನ
ಗರ್ಭಗೃಹಕ್ಕೆ ಎರಡು ಬಾಗಿಲು.
ಮೇಲುಶಿಖರದಲೊಂದು ಬಾಗಿಲು ಉರಿಯನುಗುಳುವದು.
ಆ ಪಟ್ಟಣದ ಅರಸು ಸ್ವಯಂಭುನಾಥನಿಗೆ
ನಿತ್ಯ ನೇಮವ ಮಾಡಲೆಂದು ಗರ್ಭಗೃಹವ ಹೊಗಲೊಡನೆ
ಆತನ ಕೈವಿಡಿದು ಉಭಯ ಬಾಗಿಲ ಹೊಕ್ಕು ಹೋಗಿ
ಉಭಯ ನಿರ್ವಯಲಾದ ನಿಲವನುಪಮಿಸಬಹುದೇ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ
ಒಂದಾದ ಲಿಂಗೈಕ್ಯವನು?. ॥ ೩೫೧ ॥

೧೧೩೭

ಆಡಿನ ಕೋಡಗದ ಕೂಟದ ಸಂಚದ ಕೀಲ ಕಳೆದು
ಆಡಿನ ಕೋಡ ಮುರಿದಡೆ ಕೋಡಗ ಕೊಂಬನೇರಿತ್ತು.
ಆ ಕೊಂಬಿನ ಕೋಡಗದ ಕೈಯಲ್ಲಿ ಮಾಣಿಕವ ಕೊಟ್ಟರೆ
ಮಾಣಿಕ ಕೋಡಗವ ನುಂಗಿತ್ತು.
ಬಳಿಕ ಆಡು ಮಾಣಿಕವ ನುಂಗಿ, ತಾನೊಂದೆಯಾಯಿತ್ತು.
ಈ ಪರಿ ಆಡು ಕೋಡಗದ ಸಂಗವ ಹಿಂಗಿಸಿ,
ನಿಜವ ಕೂಡಬಲ್ಲಾತನೆ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ಸಹಜಯೋಗಿ.
॥ ೩೫೨ ॥

೧೧೩೮

ಕಮಲನಾಳದ ಸೂತ್ರ ಸಮವಾಗಿ ನಿಂದಲ್ಲಿ
ಒಂದಾಶ್ಚರ್ಯದ ರೂಪದೆ.
ಅದ ನೋಡಿ ಘನವ ಕೂಡುವ ಪರಿಯೆಂತೋ?
ಅದ ಕೂಡಿಹೆನೆಂದಡೆ, ತಾನಿಲ್ಲದೆ ಕೂಡಬೇಕು
ಕೂಡದ ಕೂಟವನುಸುರಲೆಡದೆರಹುಂಟೆ?
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಕೂಡಿ[ದ]
ಬಳಿಕ ತಾನು ತಾನಾಗಿರಬೇಕು. ॥ ೩೫೩ ॥

೧೧೩೯

ಭಾವಿಸಿಹೆನೆಂಬ ಭಾವಕರಿಗೆ ಭಾವಭೇದವುಂಟು.
ಆವಾವ ಪರಿಯಲ್ಲಿ ಭಾವಿಸಿವಡೇನು?
ಶಿವಭಾವ ನೆಲೆಗೊಂಡುದೆ ಭಾವ.
ಗುರುಬೋಧೆಯಿಂದ ಪರವನರಿದೆನೆಂಬವರಿಗೆ
ಆತ್ಮಸ್ವರೂಪವನರಿದಲ್ಲದಾಗದು.
ಆತ್ಮಸ್ವರೂಪವೆಂಬುವದು ಅಖಂಡ ಬ್ರಹ್ಮ
ಸರ್ವಭೂತಾಂತಃಕರಣಾಶ್ರಿತ, ನಿಸ್ಸಂಗಕರ್ಮ ನಿಯಂತ್ರಿತ
ಸರ್ವವ್ಯಾಪಿ, ನಿತ್ಯನಿರಂಜನ ಸಂವಿತ್ಸ್ವರೂಪ,
ಇಂತಪ್ಪ ಆತ್ಮನ ನೆಲೆಯನರಿದಾತನೇ ಮುಕ್ತನು.
ಅರಿಯದಾತನೇ ಬದ್ಧನಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೩೫೪ ॥

೧೧೪೦

ಮೇಘ ಮರೆಯಾಗಿ ಚಂದ್ರನಿದ್ದನೆಂದಡೆ
ಆ ಚಂದ್ರಂಗೆ ಕಳೆ ಕುಂದುವುದೇ ಅಯ್ಯ?
ದೇಹದ ಮರೆವಿಡಿದು ಶರಣನಿದ್ದನೆಂದಡೆ
ಆತನ ಮಹಿಮಾಗುಣ ಕೆಡುವುದೇ ಅಯ್ಯ?
ಗಿಡದ ಮೇಲಣ ಪಕ್ಷಿಯಂತೆ, ಪದ್ಮಪತ್ರದ ಜಲದಂತೆ,
ದೇಹಸಂಗವಲ್ಲಿದ್ದೂ ಇಲ್ಲದಿಹನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣನ
ಇರವಿನ ಪರಿ ಇಂತುಟು. ॥ ೩೫೫ ॥

೧೦೪೧

ಬ್ರಹ್ಮನಾಳಾಗ್ರಹದ ಸಹಸ್ರದಳಕಮಲ ಕರ್ಣಿಕಾಮಧ್ಯದೊಳು,
ದ್ಯುಮಣಿ ಶಶಿ ಶಿಖಿಕೋಟಿ ಬೆಳಗ ಮೀರಿ ತೋರುವ
ಪರಂಜ್ಯೋತಿಯನು,
ಸುಮನ ಸುಜ್ಞಾನ ಸದ್ಭಾವನೆಗಳಿಂದ ನೆನೆನೆನೆದು,
ಅರಿದರಿದು ಭಾವಿಸಿ ಭಾವಿಸಿ,
ಶಿವಸುಖಾನಂದದೊಳಗೋಲಾಡುತ್ತ,
ಶಿವಸುಖ ಸಹಸ್ರಮಡಿಯಾಗಿ ಮುಸುಕಿ,
ತಾನಲ್ಲದೆ ನಾನೆಂಬುದಕ್ಕೆ ತೆರಹುಗೊಡದೆ ನಿಂದಿತ್ತು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ,
ತಾನು ತಾನಾದ ಶರಣನ ಏನ ಹೇಳಬಹುದು?. ॥ ೩೫೬ ॥

೧೦೪೨

ಜಗಭರಿತ ಶಿವನೆಂದು ನೆಗಳಿ ಹೊಗಳುತಿವೆ ವೇದಂಗಳೆಲ್ಲ.
'ಏಕಮೇವಾದ್ವಿತೀಯ' ಎಂದು ಹೊಗಳುತಿವೆ ವೇದಂಗಳೆಲ್ಲ.
'ವಿಶ್ವತಃ ಪಾದ ಪಾಣಿ, ವಿಶ್ವತೋಮುಖ
ವಿಶ್ವತಃ ಶ್ರೋತ್ರ' ಎಂದು ಹೊಗಳುತಿವೆ ವೇದಂಗಳೆಲ್ಲ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ,
ಶರಣಭರಿತ ಲಿಂಗ ಲಿಂಗಭರಿತ ಶರಣನೆಂದು
ಹೊಗಳಲರಿಯದೆ ನಿಂದುವು ವೇದಂಗಳೆಲ್ಲ. ॥ ೩೫೭ ॥

೧೧೪೩

ಆದಿ ಅನಾದಿಯೆಂಬವಕ್ಕೆ ತಾನಾದಿಯಾದ ಕಾರಣ,
ಆದಿಪ್ರಸಾದವೆನಿಸಿತ್ತು.
ಆ ಪ್ರಸಾದವು ಭೇದಿಸಬಲ್ಲ ಪ್ರಸಾದಿಗಲ್ಲದೆ ಸಾಧ್ಯವಾಗದು.
ಸರ್ವಾಧಿಷ್ಠಾತೃ ಶಂಭುಪ್ರಸಾದದಿಂದಲ್ಲದೆ
ಸಂಸಾರ ಕೆಡದು, ಮೋಹಗ್ರಂಥಿ ಬಿಡದು.
ಅದೆಂತೆಂದಡೆ:
ಸೂರ್ಯೋದಯವಾಗೆ ತಮ ಹರಿವಂತೆ
ಪ್ರಸಾದದಿಂದ ಅನೇಕ ಜನ್ಮಶುದ್ಧ,
ನಿರಹಂಕಾರ ಭಾವಸಿದ್ದಿಯೆಂದರಿದು

ಪುರಾತನರು ಪ್ರಸಾದವ ಪಡೆದು ಮುಕ್ತರಾದರು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣರು. ॥ ೩೫೮ ॥

೧೧೪೪

ಶಿವಪ್ರಸಾದಸಂಪತ್ತು ದೊರಕೊಂಡಾತಂಗೆ
ಶಿವಭಾವವಲ್ಲದೆ ಅನ್ಯಭಾವ ಉಂಟೆ ಹೇಳ?.
ವಿಶ್ವನೊಳಡಗಿ ತೋರುವ ವಿಶ್ವ ಜಗಜ್ಜಾಲವು
ಒಮ್ಮೆ ತೋರುವದು, ಒಮ್ಮೆ ಅಡಗುವದು.
ಅದರಂತೆ ತೋರದೆ ಅಡಗದೆ ಉಳುಮೆಯಾದ
ಅಂಥ ಪ್ರಸಾದವನು ಅನುಭವಿಸಿದ ಶಿವಪ್ರಸಾದಿಗೆ
ಭೇದದ ಅರಿವು ನಿಃಪತಿಯಾಗಿ ಅಭೇದಜ್ಞಾನ ಸಿದ್ಧವಾಯಿತ್ತು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣಂಗೆ. ॥ ೩೫೯ ॥

೧೧೪೫

ಸತ್ತು ಚಿತ್ತು ಆನಂದ ನಿತ್ಯಪರಿಪೂರ್ಣ ಪರಂಜ್ಯೋತಿಯೊಡಗೂಡಿ
ಅರಿದಿರ್ದಾತಂಗೆ,
ಸರ್ವ ವಿಷಯಜ್ಞಾನವಿಲ್ಲ, ದೇವತಿರ್ಯಙ್ಮನುಷ್ಯಾದಿ
ವ್ಯವಹಾರ ವಿಕಲ್ಪವಿಲ್ಲ ,
ಮಾಯಾಭ್ರಾಂತಿ ಲಯವಾಯಿತ್ತಾಗಿ.
ಸುಜ್ಞಾನ ಸುಷುಪ್ತಿಯನೆಯ್ದಿ ಶಿವ ತಾನಾದ ಅವಿರಳ ಪ್ರಸಾದಿಗೆ
ಇಹಪರವೆಂಬುದಿಲ್ಲ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೇ ತಾನಾಗಿಹನು. ॥ ೩೬೦ ॥

೧೧೪೬

ಸೇವ್ಯಗುರುವಿನ ಮಹಾಪ್ರಸಾದವನನುಭವಿಸಿ,
ತಾನೇ ಗುರುತತ್ವವಾದ ಮಹಾಪ್ರಸಾದಿಗೆ,
ಬೇರೆ ಜ್ಞಾನವುಂಟೇ?.
ಅಪರಿಚ್ಛಿನ್ನ ವಾಙ್ಮನಕ್ಕಗೋಚರ ಪರಾನಂದರೂಪ
ನಿತ್ಯ ತೃಪ್ತ ನಿಜಮುಕ್ತನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ನಿಮ್ಮ ಶರಣನು.॥ ೩೬೧ ॥

೧೧೪೭

ಗುರುತತ್ವವನರಿದು ಆ ಶ್ರೀಗುರುವಿನಿಂದ ಶಿವದೀಕ್ಷೆಯಾದ
ಪರಮಾದ್ವೈತಶಿಷ್ಯನು
ಆ ಜ್ಞಾನಗುರುವಿನ ಆನಂದೈಕ್ಯ ಪಾದೋದಕವ ಕೊಂಡು
ಪಾದೋದಕ ರೂಪವಾದ ಶಿಷ್ಯನಲ್ಲಿ ಗುರುವಡಗಿ,
ಗುರುವಿನಲ್ಲಿ ಶಿಷ್ಯನಡಗಿ, ಗುರುಶಿಷ್ಯರೊಂದಾದ
ಘನವನುಪಮಿಸಬಹುದೆ?,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ಏಕರಸವಾದುದನು.
|| ೩೬೨ ||

೧೧೪೮

ಅರಿವಿನಿಂದ ಅರಿದೆನೆಂಬ ಶಿಷ್ಯನಿಲ್ಲ,
ಅರುಹಿಸುವ ಗುರು ಮುನ್ನಿಲ್ಲ.
ಅರಿವುದಿನ್ನೇನ, ಅರುಹಿಸುವುದಿನ್ನೇನ ಹೇಳ?
ಶ್ರೀಗುರುವಿನ ಪ್ರಸನ್ನ ಪಾದೋದಕವಲ್ಲಿ ಮುಳುಗಿ,
ಸಮರಸ ಸಂಬಂಧವಾದ ಬಳಿಕ,
ಇನ್ನು ಭೇದಭಾವವುಂಟೇ ಹೇಳ?.
ಸೀಮೆಯಳಿದ ನಿಸ್ಸೀಮಂಗೆ ಕಾಯವಿಲ್ಲ.
ಕಾಯವಿಲ್ಲವಾಗಿ ಮಾಯವಿಲ್ಲ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣನೇ ಬಲ್ಲಾ.
|| ೩೬೩ ||

೧೧೪೯

ಆವ ಕ್ರೀಯ ಮಾಡಿವಡೇನು?
ಉಪಾಧಿರಹಿತ ನಿರುಪಾಧಿಕ ಚಿದ್ರೂಪ
ಪರಮಾನಂದಾತ್ಮ ಶರಣನು.
ಕ್ರೀಯ ಮರೆಯಮಾಡಿಕೊಂಡಿಪನೆಂದಡೆ,
ಅದು ಪರಮಾರ್ಥವೆ?.
ಚಂದ್ರಂಗೆ ಮೇಘಸಂಬಂಧವೆಂಬುದು ಕಲ್ಪನೆಯಲ್ಲದೆ,
ಅದು ಸಹಜಸಂಬಂಧವೇ? ಅಲ್ಲಲ್ಲ.
ಶರಣಂಗೆ ಕಲ್ಪನಾದೇಹವಿದ್ದು, ನಿಃಕ್ರಿಯಾವಂತನಾದ ಮಹಾತ್ಮನು
ಚಿತ್ರದೀಪದಂತೆ ತೋರುತ್ತಿಹನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣನು. || ೩೬೪ ||

೧೧೫೦

ಶರಣನ ಸರ್ವಾಂಗವು ಲಿಂಗದಂಗವು.
ಶರಣ ನಡೆವ ಗತಿ ಲಿಂಗದ ಗತಿ.
ಶರಣ ನುಡಿವ ನುಡಿ ಲಿಂಗದ ನುಡಿ.
ಶರಣನಿದ್ದ ಸ್ವಭಾವದಿರವೆ ಲಿಂಗದಿರವು.
ಶರಣನಲ್ಲಿ ತೋರುವ ಜಾಗ್ರತ್‌ಸ್ವಪ್ನಂಗಳೆಲ್ಲ
ಲಿಂಗವಿಡಿದು ತೋರುವುವು.
ಇದು ಕಾರಣ, ಜ್ಞಾನಿಯಲ್ಲಿ ತೋರುವ ಕ್ರಿಯೆಗಳು
ಫಲದಾಯಕ ಕ್ರಿಯೆಗಳಲ್ಲ.
ಅದೆಂತೆಂದಡೆ,
ಘೃತ ಸೋಂಕಿದ ರಸನೆಗೆ ಘೃತ ಲೇಪವಿಲ್ಲದಂತೆ,
ಶರಣಂಗೆ ಕರ್ಮಲೇಪವಿಲ್ಲ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣ ಸ್ವತಂತ್ರ. ॥ ೩೬೫ ॥

೧೧೫೧

ತಾನೇ ಲಿಂಗವೆಂದರಿದು, ಮತ್ತೆ ಬೇರೆ ಲಿಂಗವಿದೆಂದು
ಕಲ್ಪಿಸಿ ರೂಹಿಸಿ ಭಾವಿಸಿ ನೋಡಲು
ಅದು ಭಾವಸಂಕಲ್ಪವಲ್ಲದೆ ನಿಜವಲ್ಲ.
ಶುಕ್ತಿಯಲ್ಲಿ ರಜತಭಾವ ತೋರಿತ್ತೆಂದಡೆ, ಅದು ಸಹಜವೆ?
ಇದು ಭಾವಸಂಕಲ್ಪವೆಂದರಿದಾಗವೆ ಭಾವ ನಿಃಪನ್ನವಾಗಿ
ಪರಿಪೂರ್ಣ ಬೋಧಪರಾನಂದರೂಪ ತಾನೆ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣನೆ
ಲಿಂಗವಲ್ಲದೆ ಬೇರೆ ಲಿಂಗವಿಲ್ಲ. ॥ ೩೬೬ ॥

೧೧೫೨

ಕಾಷ್ಠದಲ್ಲಿ ಹುಟ್ಟಿದ ಅಗ್ನಿ, ಕಾಷ್ಠವ ದಹಿಸಿ,
ತಾನೊಡನೆ ಲೀಯವಾದಂತೆ,
ಭಾವದಲ್ಲಿ ಶಿವಾನಂದಭಾವ ಹುಟ್ಟಿ ಭಾವ ನಿಃಪತಿಯಾಯಿತ್ತು.
ಭಾವ ನಿಃಪತಿಯಾಗಲು, ಭಾವ್ಯ ಭಾವ ಭಾವಕವೆಂಬುದಿಲ್ಲದೆ
ತಮ್ಮಲ್ಲಿ ತಾವೆ ಲೀಯವಾದವು.
ಇಂತಾದ ಬಳಿಕ ಭಾವಿಸಲೇನುಂಟು ಹೇಳ?.

ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ,
ಭಾವಾತೀತನೆಂದು ಶ್ರುತಿ ಸಾರುತ್ತಿರಲು, ಇನ್ನು
ಭಾವಿಸಲೇನುಂಟು ಹೇಳಾ?. ॥ ೩೬೭ ॥

೧೧೫೩

ನಿತ್ಯಾನಂದ ನಿಜದಾಕಾರದ
ಪರಮ ನಿರ್ಮಲ ಲಿಂಗತೇಜದೊಳಗೆ
ಮನವಳಿದು ಲೀಯವಾದ ಮತ್ತೆ ತಾನೆಂಬುದಿಲ್ಲ.
ಅನಾದಿ ಅವಿದ್ಯವ ಮೀರಿ ನಿಂದ
ಪರಮಾನಂದ ಜ್ಞಾನಪಾದೋದಕ ರೂಪು
ತಾನೆಯಲ್ಲದೆ ಅನ್ಯವಿಲ್ಲ.
ಇದು ಕಾರಣ, ಅರಿವುದೊಂದಿಲ್ಲ ಅರುಹಿಸಿಕೊಂಬುದೊಂದಿಲ್ಲ.
ಅರಿವ ಅರುಹಿಸಿಕೊಂಬುವ ಈ ಉಭಯ ಒಂದಾದ ನಿಲವೆ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆಂಬೆನು. ॥ ೩೬೮ ॥

೧೧೫೪

ಕಾಬುದೊಂದು ಜ್ಞಾನ, ಕಾಣಿಸಿಕೊಂಬುದೊಂದು ಜ್ಞೇಯವೆಂದು
ವಿವರಿಸಿ ನುಡಿಯಬಹುದೆ?
ಇಂದು ಭಾನು ದೀಪಂಗಳು
ತಮ್ಮ ಬೆಳಗಿನಿಂದ ತಮ್ಮನರುಹಿಸಿಕೊಂಬಂತೆ
ಜ್ಞಾನ ಜ್ಞೇಯಂಗಳ ಪರಿಯೆಂದರಿದಾತನರಿವು.
"ನಿಜ ಅಖಂಡಾನಂದ ಸಂವಿತ್ ಸ್ವರೂಪಂ ಬ್ರಹ್ಮ ಕೇವಲಂ"
ಎಂದುದಾಗಿ,
ಲಿಂಗಾಂಗ ಸಂಬಂಧ ಸಕೀಲವನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣ ಬಲ್ಲ. ॥ ೩೬೯ ॥

೧೧೫೫

ಘಟಮಠೋಪಾಧಿಯೊಡನೆ ಕೂಡಿ, ಆಕಾಶವಿದ್ದಿತ್ತೆಂದೊಡೆ
ಆ ಘಟಮಠದಂತೆ ಖಂಡಿತವಹುದೆ ಅಖಂಡಬಯಲು?
ಪಿಂಡದೊಳಗಾತ್ಮನಿದ್ದನೆಂದೊಡೆ,
ಆ ಪಿಂಡದಂತೆ ಖಂಡಿತನಹನೆ?

ಪರಿಪೂರ್ಣ ಪರಂಜ್ಯೋತಿ ಪರಮಾತ್ಮನು
ಷಟ್ತ್ರಿಂಶತ್ ತತ್ತ್ವಂಗಳಿಂದ ಕೂಡಿದ
ಜ್ಞಾನಪಿಂಡದೊಳಗೆ, ಹೃದಯಕಮಲಸಿಂಹಾಸನದ ಮೇಲೆ
ಮೂರ್ತಿಗೊಂಡಿದ್ದನಯ್ಯ.
ಜಲದೊಳಗೆ ಹೊಳೆವಾಗಸದಂತೆ, ಮನದೊಳಗೆ ಮನರೂಪನಾಗಿ
ಬೆಳಗುತ್ತಿದ್ದನಯ್ಯ ಪರಶಿವನು.
ಇಂತಾದ ಕಾರಣ, ಸಪ್ತಧಾತು ಸಮೇತವಾದ ಶರಣನ
**ಕಾಯವೇ ಕೈಲಾಸವಾಯಿತ್ತು**, ಮನ ಸಿಂಹಾಸನವಾಯಿತ್ತು.
ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಂಗೆ. ॥ ೩೭೦ ॥

೧೧೫೭

ಅಣುವಿಂಗೆ ಅಣು, ಮಹತ್ತಿಂಗೆ ಮಹತ್ತಾಗಿ
ಎಣಿಸಬಾರದ ಬಹಳ ಬ್ರಹ್ಮಕ್ಕೆ ಎಣೆಯಾವುದು ಹೇಳಾ?
ಅಗಣಿತನಕ್ಷಯ ಸರ್ವಜೀವ ಮನಃಪ್ರೇರಕ ಸರ್ವಗತ ಸರ್ವಜ್ಞ
ಏಕೋದೇವ ಸಂವಿತ್ ಪ್ರಕಾಶ ಪರಮೇಶ್ವರನು
ಮನವೆಂಬ ದರ್ಪಣದೊಳಗೆ, ಬಿಂದ್ವಾಕಾಶರೂಪನಾಗಿ
ಬೆಳಗಿ ತೋರುವ
ಶಿವನ ಅಂದವ ತಿಳಿದು ನೋಡಿ ಕೂಡಬಲ್ಲಾತನೆ
ಪರಮಶಿವಯೋಗಿ.
ಆತನೇ ಜನನ ಮರಣ ರಹಿತ, ಆತನೇ ಸರ್ವಜ್ಞನು,
ಆತನೇ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು ತಾನೆ. ॥ ೩೭೧ ॥

೧೧೫೮

ಎಲೆಯುದುರಿದ ವೃಕ್ಷ ಉಲಿಯಬಲ್ಲುದೆ?.
ಜಲವರತ ತಟಾಕ ಗೊರೆಗೊಳಬಲ್ಲುದೆ?.
ಸಲೆ ಶಿವನನರಿದು ತಾ ಶಿವನೊಳು ಕೂಡಿ ಮಾಡುವ ಕ್ರೀ
ಫಲವ ಕೊಡಬಲ್ಲುದೆ?.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣ
ಮಾಡುವ ಕ್ರೀ, ಹುರಿದ ಬೀಜದಂತೆ. ॥ ೩೭೨ ॥

೧೦೫೮

ಎಲ್ಲೆಲ್ಲಿ ನೋಡಿದಡಲ್ಲಲ್ಲಿ ನೀನೆ ದೇವ.
ಪಿಂಡಾಂಡಂಗಳೊಳಗೆಲ್ಲ ನೀನೆ ದೇವ.
ಮಹದಾಕಾಶರೂಪ ನಿರುಪಾಧಿಕ ಪರಂಜ್ಯೋತಿ ನೀನೆ ದೇವ.
ಉಪಮಾತೀತ ವಾಙ್ಮನಕ್ಕಗೋಚರ ನೀನೆ ದೇವ.
ಸ್ವಾನುಭೂತಿ ಸ್ವರೂಪ ಶರಣಜನ ಮನೋವಲ್ಲಭ ನೀನೇ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೨೭೨ ॥

೧೦೫೯

ಖೇಚರದ ಗಮನವ ಖೇಚರರಲ್ಲದೆ
ಭೂಚರರು ಬಲ್ಲರೆ ಅಯ್ಯ?
ಸವಿವಾಲು ಸಕ್ಕರೆಯ ಸವಿಯ ಸವಿದ ಭೋಗಿಯಲ್ಲದೆ
ರೋಗಿ ಬಲ್ಲನೆ ಅಯ್ಯ?
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನಿಮ್ಮ ಲಿಂಗಾಂಗದ ಲಿಂಗ ಸಹಗಮನಿಯ ಹೃದಯವ
ಲಿಂಗಾಂಗಿಯಲ್ಲದೆ ಅಂಗಜೀವಿಗಳು ಬಲ್ಲರೆ ಅಯ್ಯಾ?
॥ ೨೭೪ ॥

೧೦೬೦

ತನು ಮನ ಪ್ರಾಣವ ಲಿಂಗಕ್ಕರ್ಪಿಸಿ ತಾನೆ
ಲಿಂಗದೊಳಗಡಗಿದ ಪ್ರಸಾದಿ.
ಪ್ರಸಾದಿಯೊಳಗೆ ಲಿಂಗವಡಗಿ, ಪ್ರಸಾದವೇ ತಾನಾದ ಪ್ರಸಾದಿಗೆ
ಪರಮಪ್ರಸಾದಿಯೆಂಬುದು ಕರತಳಾಮಳಕದಂತೆ
ತೋರುತ್ತಿಹುದಾಗಿ
ಶಿವ ಶಿವಾ, ಪ್ರಸಾದಿಯ ಘನವನೇನೆಂದುಪಮಿಸಬಹುದು?
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ನೀನೆ ಬಲ್ಲೆ, ನಾನರಿಯೆನು.
॥ ೨೭೫ ॥

೧೦೬೧

ತತ್ತ್ವ ಮೂವತ್ತಾರರಿಂದತ್ತತ್ತ ಪರಕ್ಕೆ ಪರವಾದ
ಗುರುವಿನ ಅಂಗ ತಾನೆ

ಸಕಲ ನಿಃಕಲರೂಪಾದ ಲಿಂಗವು.
ಅದು ತಾನೆ ಮತ್ತೆ ಸಕಲಾಂಗವೆನಿಸುವ ಜಂಗಮವು.
ಆ ಜಂಗಮವು ತಾನೆ ಗುರುವಿನ ನಿಃಕಲಾಂಗವು.
ಆ ಶ್ರೀಗುರುವಿನ ಕಳೆಯಿಂದ ಹುಟ್ಟಿದ
ನಿಜಸುಖವೇ ಪ್ರಸಾದಲಿಂಗವು.
ಇಂತು ಗುರು ಲಿಂಗ ಜಂಗಮವೆನಿಸುವ
ಶುದ್ಧ ಸಿದ್ಧ ಪ್ರಸಿದ್ಧ ಲಿಂಗಕಳೆಗಳಿಂದತಿಶಯವಾಗಿ ಬೆಳಗುವ
ಶರಣ ತಾನೇ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೩೭೬ ॥

೧೧೬೨

ಸರ್ವಾಂಗವು ಲಿಂಗಸಂಗವಾಗಿ, ಲಿಂಗ ಸರ್ವಾಂಗಸಂಗವಾಗಿ,
ಪ್ರಾಣ ಲಿಂಗದಲ್ಲಿ ಸಂಗವಾಗಿ, ಲಿಂಗ ಪ್ರಾಣದಲ್ಲಿ ಸಂಗವಾಗಿ,
ಸಕಲೇಂದ್ರಿಯಂಗಳು ಲಿಂಗಸಂಗವಾಗಿ,
ಲಿಂಗ ಸಕಲೇಂದ್ರಿಯಂಗಳಲ್ಲಿ ಸಂಗವಾಗಿ,
ಮನ ಲಿಂಗಸನ್ನಿಹಿತವಾಗಿ, ಲಿಂಗ ಮನಸನ್ನಿಹಿತವಾಗಿ,
ಸಮರಸ ಸದ್ಭಾವಿಯಾದ ಶರಣನೆ ಲಿಂಗವು
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ. ॥ ೩೭೭ ॥

೧೧೬೩

ಇದ ಮಾಡಬಹುದೆಂಬ, ಇದ ಮಾಡಬಾರದೆಂಬ
ಪುಣ್ಯ ಪಾಪ ರೂಪಾದ, ವಿಧಿ ನಿಷೇಧಂಗಳಿಂದಾದ,
ಶುಭಾಶುಭಂಗಳನು ಮೀರಿದ,
ಭಕ್ತಿ ಮುಕ್ತಿಗಳೆರಡೂ ಲಿಂಗಾರ್ಪಿತವಾಗಿ,
ತಾ ಲಿಂಗದೊಳಗಡಗಿದ ಬಳಿಕ,
ಪುಣ್ಯ ಪಾಪದ ಫಲಭೋಗಂಗಳು ತನಗೆ ಮುನ್ನವೇ ಇಲ್ಲ,
ಇಂತಪ್ಪ ಸ್ವತಂತ್ರ ಶರಣನೇ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು ತಾನೇ. ॥ ೩೭೮ ॥

೧೧೬೪

ಜಾಗ್ರತ್ ಸ್ವಪ್ನ ಸುಷುಪ್ತಿ ಎಂಬ ತ್ರಿವಿಧಾವಸ್ಥೆಯೊಳಗೆ,
ತುರ್ಯ ತುರ್ಯಾತೀತ ಸಹಜಾವಸ್ಥೆ ಎಂಬ
ಮೂರು ಕೂಡಿ ಯೋಗಿಸುವ ಯೋಗಿಗೆ,

ಸಾಲಂಬ ನಿರಾಲಂಬದೊಳಗೆ ಅಡಗಿ
ಆ ನಿರಾಲಂಬದ ನಿಶ್ಚಿಂತ ನಿವಾಸದಲ್ಲಿ
ಆತ್ಮ ಪರಮಾತ್ಮರೊಂದಾದ ಬಳಿಕ
ಅನಂತ ಸಚರಾಚರ ಒಂದು ಕಿಂಚಿತ್ತು.
ಚತುರ್ಮುಖ ಇಂದ್ರ ವಿಷ್ಣುವೆಂಬವರ ಪದ ಒಂದು ಕಿಂಚಿತ್ತು.
ಇನ್ನುಳಿದವರ ಹೇಳಲಿಲ್ಲ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣಂಗೆ ಹಿರಿದೊಂದಿಲ್ಲ.

॥ ೩೭೯ ॥

೧೧೬೫

ಜ್ಞಾತೃ ಜ್ಞಾನ ಜ್ಞೇಯ ಮೂರೊಂದಾದುದೇ
ಜೀವ ಪರಮರೈಕ್ಯವಯ್ಯ.
ಆ ಜೀವ ಪರಮರೈಕ್ಯವಾದುದೆ ಮನ ಲೀಯ.
ಮನ ಲೀಯವಾದ ಬಳಿಕ ಇನ್ನು ಧ್ಯಾನಿಸಲುಂಟೆ?,
ಅರಿಯಲುಂಟೆ ಹೇಳ?.
ಬಾಹ್ಯಾಭ್ಯಂತರ ಇಂದ್ರಿಯದ ಮನದ ವಿಕಾರವಳಿದು
ಅವಿದ್ಯಾವಾಸನೆಯಡಗಿ, ಅಹಂಕಾರ ಉಡುಗಿದ
ಜೀವನ್ಮುಕ್ತಂಗೆ ಸರ್ವಶೂನ್ಯವಾಗಿ,
ಸಮುದ್ರಮಧ್ಯದ ತುಂಬಿದಕೊಡದಂತೆ ಇದ್ದನಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ, ನಿಮ್ಮ ಶರಣನು. ॥ ೩೮೦ ॥

೧೧೬೬

ಲಿಂಗವೇದಿಯಾದ ಶರಣಂಗೆ,
ಕಂಗಳ ಕೊನೆಯಿಂದ ನೋಡಿದ ಸರ್ವಲೋಕವೆಲ್ಲ
ಚಿದಾಕಾಶಮಯವಾಗಿ ತೋರುವುದಲ್ಲದೆ,
ಮತ್ತೊಂದು ಪರಿಯಾಗಿ ತೋರದು ನೋಡ.
ಆ ಶರಣನು ಬ್ರಹ್ಮಜ್ಞಾನವೇ ಜೋಡಾಗಿ ದುಃಖರಹಿತನು.
ಆ ಅಜಡರೂಪ ನಿಜಯೋಗಿಯ
ಜ್ಞಾನವು ಸುಷುಪ್ತಿಯನೈದಿತ್ತಾಗಿ,
ಆಕಾಶದ ಕುಸುಮದಂತೆ, ತನುವಿಲ್ಲದ ಘನರೂಪನು.
ಮನವೆಂಬ ಅಣುವ ನುಂಗಿ,

ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಪದದಲ್ಲಿ
ಪ್ರವೇಶವಾಗಿಹನು. ॥ ೩೮೧ ॥

೧೧೬೭

ಶಿವಶರಣನ ಶಿರ ಮೊದಲು ಪಾದ ಕಡೆಯಾದವೆಲ್ಲವು
ಅಮೃತಮಯವಾಗಿಪವು ನೋಡ.
ನರಚರ್ಮಾಂಬರವ ಹೊದ್ದಿಹ ಶರಣನ
ಒಳಗು ಹೊರಗೆಂಬವೆಲ್ಲ ಮೋಕ್ಷರೂಪವಾಗಿಪವು ನೋಡ.
ಆ ಶರಣನ ಮರ್ತ್ಯರೂಪನೆಂದು ತಿಳಿಯಬಾರದು.
ಆತ ಚಿದ್ರೂಪಾಕಾರ ಪರಮಾತ್ಮನು ತಾನೇ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆಂದೇ ತಿಳಿವುದು. ॥ ೩೮೨ ॥

೧೧೬೮

ಶರಣನ ಸುಜ್ಞಾನಾಗ್ನಿಯಿಂದ, ಸಂಸಾರಬೀಜ ರೂಪವಾದ
ಅಹಂಕಾರಾಂಕುರವು ಸುಟ್ಟು, ಮಾಯಾವಾಸನೆಯಳಿದು,
ಮಾನಸೇಂದ್ರಿಯ ಜೀವಶಕ್ತಿಗಳಿಲ್ಲದ ಮೂರ್ತಿಯೇ
ಚಿಲ್ಲಿಂಗಕ್ಕಾಶ್ರಯವಾದುದಾಗಿ,
ಚಿನ್ಮೂರ್ತಿಯಾದ ಶರಣನ ಜ್ಞಾನದಲ್ಲಿ,
ಸಕಲ ಪ್ರಪಂಚುಗಳೆಲ್ಲ ಅಡಗಿದವಾಗಿ,
ಆ ಶರಣನು, ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು
ತಾನೇ ಆಗಿಹನು. ॥ ೩೮೩ ॥

೧೧೬೯

ಅನಂತಕಾಲ ಅಗಲಿದ ನಲ್ಲನ ಕೂಡಿಹೆನೆಂಬ ಸತಿಗೆ
ಕೂಡಿದ ಬಳಿಕ ಕೂಡಿಹೆನೆಂಬ ಅವಸ್ಥೆಯುಂಟೆ ಹೇಳ?.
ಕ್ಷುಧೆಯಡಿಸಿದವ ಭೋಜನವ ಮಾಡಿದ ಬಳಿಕ
ಮತ್ತೆ ಭೋಜನವ ಮಾಡಿಹೆನೆಂಬ ಅವಸ್ಥೆಯುಂಟೇ ಹೇಳ?.
ಝಳ ಹತ್ತಿದವ ಉದಕದಲ್ಲಿ ಮುಳುಗಿದ ಬಳಿಕ
ಮತ್ತೆ ಉದಕದಲ್ಲಿ ಮುಳುಗಿಹೆನೆಂಬ ಅವಸ್ಥೆಯುಂಟೆ ಹೇಳ?.
ಶಿವನ ನೆನೆನೆನೆದು ಮನ ಶಿವನಲ್ಲಿ ಲೀಯವಾದ ಬಳಿಕ
ಮತ್ತೆ ನೆನೆದಿಹೆನೆಂಬ ಅವಸ್ಥೆಯುಂಟೆ ಹೇಳ?.

ಅನುಪಮ ನಿಜಾನುಭವ ಸಂಧಾನ ನಿಂದ ನಿಜವು ತಾನೇ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ನಿಲವು. ॥ ೩೮೪ ॥

೧೧೭೦

ಶಿವಜ್ಞಾನಸಂಪನ್ನನಾದ ಶರಣಂಗೆ ಹಿರಿದೊಂದಾಶ್ಚರ್ಯವು
ತೋರದಾಗಿ, ಅದೇನು ಕಾರಣವೆಂದಡೆ:
ಆತನ ಮನ ಲಿಂಗದಲ್ಲಿ ಲೀಯವಾದ ಕಾರಣ.
ಸೂರ್ಯಂಗೆ ಶೀತರುಚಿಗಳು ತೋರಿದರೂ,
ಚಂದ್ರನಿಗೆ ಉಷ್ಣರುಚಿಗಳು ತೋರಿದರೂ,
ಅಗ್ನಿ ತಲೆಕೆಳಕಾಗಿ ಉರಿದಡೆಯೂ,
ತೋರುವ ನಾನಾ ಆಶ್ಚರ್ಯಂಗಳೆಲ್ಲ
ಮಾಯಾವಿಲಾಸವೆಂದರಿದ ಶರಣಂಗೆ
ಒಂದಾಶ್ಚರ್ಯವೂ ತೋರದಾಗಿ
ಆತ, ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ
ಅರಿವಿನೊಳಗಡಗಿದನು. ॥ ೩೮೫ ॥

೧೧೭೧

ಹದಿನಾಲ್ಕು ಭುವನದಲ್ಲಿ ಮನೋವೇದ್ಯವಾಗಿ,
ಅಲ್ಲಿಂದತ್ತತ್ತ ಮೀರಿದ ಘನದಲ್ಲಿ ಕೂಡಿದ ಶಿವಯೋಗಿಗೆ
ಪ್ರಳಯವಿಲ್ಲ.
ಅದೇನು ಕಾರಣವೆಂದಡೆ:
ಆತನರಿವು ಅಖಂಡವಾಗಿ ಬೆಳಗುತ್ತಿರುವ ಕಾರಣ.
ಜಲಾಗ್ನಿ ಪ್ರಳಯಂಗಳಾದಡೂ
ಮರುತಾದಿತ್ಯರ ಪ್ರಳಯಂಗಳಾದಡೂ
ಶಿವನ ನೆನಹಿಂದ ಮನವು ಶಿವಮಯವಾಗಿ
ಮನವಿಲ್ಲದ ಮುಕ್ತಂಗೆ ಕೇಡು ಮುನ್ನಿಲ್ಲ.
ಆತ, ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಕೂಡಿ,
ನಿತ್ಯನಾಗಿಹನು. ॥ ೩೮೬ ॥

೧೧೭೨

ಅನುವನರಿದು ಅನುಭಾವಿಯಾದ ಕಾರಣ
ಸಮ್ಯಗ್‌ಜ್ಞಾನದಿಂದ ತನ್ನನರಿದು, ತನ್ನನೆ ಶಿವಭಾವವಾಗಿ ಕಂಡು

ಆ ಶಿವಭಾವದಲ್ಲಿ ತನ್ನ ಹೃದಯವ
ಸಮ್ಮೇಳವ ಮಾಡಿದ ಶರಣನು.
ತಾನೆ ಶಿವನ ಪರಮೈಶ್ವರ್ಯಕ್ಕೆ ಭಾಜನವಾಗಿ
ಸರ್ವಲೋಕವನು ಶಿವನೊಳಗಡಗಿಸಿದನಾಗಿ,
ಆ ಶಿವನ ತನ್ನೊಳಗಡಗಿಸಿ,
ಆ ಶಿವನಲ್ಲಿ ಮನವ ನಿಲಿಸಿ ನೆನೆವುತ್ತಿರಲು
ಆ ನೆನೆವ ಮನಸಿನ ಲಯಕ್ಕೆ ಭಾಜನವಾದಾತ
ಶಿವನೆಂದರಿದನು ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣನು.
॥ ೩೮೭ ॥

೧೧೭೩

ಅಂತರಂಗ ಸನ್ನಿಹಿತ ಪರಂಜ್ಯೋತಿರ್ಲಿಂಗದಲ್ಲಿ
ಧ್ಯಾನನಿಷ್ಠನಾದ ಯೋಗಿ ಎಲ್ಲಾ ಕಡೆಯಲ್ಲಿ
ಪರಿಪೂರ್ಣ ಜ್ಞಾನದೃಷ್ಟಿಯಿಂದ ನೋಡಲು
ಪಶ್ಚಿಮಮುಖವಾದ ಪರತತ್ವವೆಂಬ ನಿರ್ಮಲ ದರ್ಪಣದೊಳಗೆ
ತನ್ನ ಕಂಡು, ಕಂಡೆನೆಂಬ ಚಿದಹಂಭಾವವಳಿದು ನಿಂದ ನಿಲವೇ
ನಿಜ ನಿರ್ವಾಣವಯ್ಯಾ, ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ.
॥ ೩೮೮ ॥

೧೧೭೪

ಸರ್ವ ಶಾಸ್ತ್ರೋಪಾಧಿಯಿಂದ ಬೇರೊಂದನಾಶ್ರೈಸಿ
ಅರಿದಿಹೆನೆಂಬ ಉಪಮೆಯಳಿದು,
ಸ್ವಾನುಭವಸಿದ್ಧಿಯಿಂದ ತನ್ನ ಸ್ವರೂಪವ ತಾನರಿದು
ಅರಿದೆನೆಂಬ ಅರಿವಿನ ಮರವೆಯ ಕಳೆದು,
ವರ್ಣಾಶ್ರಮಂಗಳಾಚಾರಂಗಳ ಮೀರಿದ ಶಿವಯೋಗಿಯೇ
ವೇದವಿತ್ತಮನು, ವೇದವಿತ್ತಮನು.
ಆತನೆಲ್ಲರ ಅಜ್ಞಾತವ ತೊಳೆದು ನಿಜಮುಕ್ತರ ಮಾಡುವ
ಕರುಣಾಕರನು.
ಆ ಮಹಾತ್ಮನೇ ಸರ್ವಪ್ರಪಂಚಿನ
ಉತ್ಪತ್ತಿ ಸ್ಥಿತಿ ಲಯಂಗಳಿಗೆ ಕಾರಣನಾದಾತನು.

ಆ ಯೋಗಿ ಶರಣನೇ ಸಚ್ಚಿದಾನಂದ
ಪರಮ ಸಾಯುಜ್ಯರೂಪನು.
ಆ ಮಹಾಪುರುಷನೇ ಸಾಲೋಕ್ಯಾದಿ ಸಮಸ್ತ ಮುಕ್ತಿಯ
ಕೊಡುವಾತನೂ ಆಗಿ,
ಪರಿಪೂರ್ಣ ಭಾವದಿಂದ
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಾಗಿ ತೋರುತ್ತಿಹನು.
॥ ೩೮೯ ॥

೧೧೭೫

ನಿತ್ಯಾನಂದ ಸಂವಿದಾಕಾರ ಜ್ಯೋತಿರ್ಲಿಂಗ
ಮೂರ್ತಿಯಾದ ಶಿವನು
ಜಲ ಗಂಧ ಅಕ್ಷತೆ ಪತ್ರೆ ಪುಷ್ಪ ಧೂಪ ದೀಪ
ನೈವೇದ್ಯ ತಾಂಬೂಲಂಗಳಿಂದ
ಪೂಜೆ ಮಾಡುವ ಪೂಜಕರ ಭಾವಕ್ಕೆ ಸಿಲುಕವನಲ್ಲ ನೋಡ.
ಮತ್ತೆಂತೆಂದಡೆ:
ಭಾವವ ಬಲಿದು ನೆನಹ ನೇತಿಗೊಳಿಸಿ,
ಜ್ಞಾನಪೂಜೆಯ ಮಾಡುವ ಮಹಂತರಿಗೆ ಸಿಲ್ಕುವ,
ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೩೯೦ ॥

೧೧೭೬

ಸ್ಥಾವರ ಜಂಗಮಾತ್ಮಕವಾದ ಸಮಸ್ತ ಲೋಕವನು
ಸುಜ್ಞಾನವಿಚಾರವಿಡಿದು ಗ್ರಹಿಸಿ,
ತಾನು ಗ್ರಹಿಸಿದ ಲೋಕವು, ಸೂತ್ರದಲ್ಲಿಯೆ ಮಣಿಗಣದಂತೆ
ಶಿವನಾಧಾರವಾಗಿಹೆನೆಂದರಿದು,
ಅಂಥಾ ಲೋಕಾಧಾರವಾದ ಶಿವನ ನಿರ್ಮಲ ಸಾತ್ವಿಕಗುಣಗಳಾದ
ಶಿವಜ್ಞಾನಿಗಳು ಕಂಡು ಸಮಾಧಿನಿಷ್ಠರಾಗಿಪರು,
ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣರು.॥ ೩೯೧ ॥

೧೧೭೭

ಶಾಂತ ಸೂಕ್ಷ್ಮ ಸರ್ವಜೀವ ಮನಃಪ್ರೇರಕ [ಸ್ವ]ನಾಥ
ನಿತ್ಯ ಚಿನ್ಮಾತ್ರನಾದ ಶಿವಂಗೆ
ಒಂದೂ ಸದೃಶವಿಲ್ಲದೆ ಹಸರಿಡಬಾರದಂಥ

ಕುರುಹಿಲ್ಲದ, ಮರಹಿಲ್ಲದ, ಬಹಳ ಬ್ರಹ್ಮವೆನಿಸುವ ಶಿವನು
ತನ್ನ ಶರಣರ ಸರ್ವಾಂಗಭರಿತನಾಗಿಹನು,
ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೩೯೨ ॥

೧೧೨೮

ಆವಾವ ಕಾಲದಲ್ಲಿ ಆವಾವ ಪರಿಯಲ್ಲಿ ಒಂದೊಂದು ವಸ್ತುವನು
ಜ್ಞಾನಿ ಮನದಲ್ಲಿ ಭಾವಿಸದಿಹನು.
ಆತನು ಹೃದಯಾಕಾಶ ಶೂನ್ಯವಾಗಿ ನಿಸ್ತರಂಗ
ಸಹಜಾನಂದಾಂಬುಧಿಯಾದ
ಪರಮಾತ್ಮನಲ್ಲಿ ಮುಳುಗಿ ಪರಮಾತ್ಮ ತಾನಾದ ಮತ್ತೆ
ಭೇದಭಾವ ಭ್ರಮೆಯ ಸೂತಕವಳಿದು,
ಶರಣ ಸಚರಾಚರದಲ್ಲಿ ವ್ಯಾಪಕವಾಗಿಹನು.
ಅದೆಂತೆಂದಡೆ:
ಗಂಗೆಯ ಉದಕದಲ್ಲಿ ಬಿಂಬಿಸಿದ ಸೂರ್ಯನು
ಮೃತ್ಕಾಂಚನ ಘಟಂಗಳ ಉದಕಮಧ್ಯದಲ್ಲಿಯೂ ಬಿಂಬಿಸುವಂತೆ
ಹಿರಿದು ಕಿರಿದು ಉತ್ತಮ ಮಧ್ಯಮಾಧಮವೆನ್ನದೆ
ಸರ್ವಾಂತರ್ಯಾಮಿಯಾಗಿಹನು
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆ ತಾನಾಗಿ. ॥ ೩೯೩ ॥

೧೧೨೯

ಶಿವಧ್ಯಾನದ ಕಡೆಯಲ್ಲಿ ಒಪ್ಪಿ ತೋರುವ ಸಂವಿತ್ತಿನ ತೃಪ್ತಿಯಿಂದ
ತನ್ನ ಮರೆವ ಶರಣನು
ಪರಮ ಪ್ರಕಾಶರೂಪನಾದ ಶಿವನ ಕೂಡಿ
ಸರ್ವಜೀವರ ಹೃದಯದಲ್ಲಿದ್ದು,
ಅವಕ್ಕೆ ಅರಿವ ಅರುಹಿಸಿ ಕೊಡುತ್ತ
ಎಲ್ಲ ಕಡೆಯಲ್ಲಿ ಸುಖರಾಶಿಯಾದ ಚೈತನ್ಯ ಸ್ವರೂಪ
ಪರಬ್ರಹ್ಮವೇ ತಾನಾಗಿಹನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣನು. ॥ ೩೯೪ ॥

೧೧೩೦

ಖಂಡಿತಜ್ಞಾನವಳಿದು, ಅಖಂಡಿತಜ್ಞಾನಸ್ವರೂಪವಾದುದೇ ತೃಪ್ತಿ.
ಅಂಥ ತೃಪ್ತಿಯ ಅಮೃತಸೇವನೆಯಿಂದ ತೃಪ್ತನಾದ ಪ್ರಸಾದಿ.
ಶರಣಂಗೆ ಅಂತರಂಗ ಬಹಿರಂಗವೆಂಬುಭಯಾಂಗವಿಲ್ಲವ

ಮಹಾನಂದರೂಪಪ್ರಸಾದಿ ದಶದಿಗ್ಭರಿತನಾಗಿ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಕೂಡಿ, ಬೆಳಗುತ್ತಿಹನು.
॥ ೩೯೫ ॥

ಐಕ್ಯಸ್ಥಲ

೧೧೮೧

ಉದಯಾಸ್ತಮಯವೆಂಬೆರಡಿಲ್ಲದ ಚಿದಾದಿತ್ಯನ ಬೆಳಗು
ಮೂರುಲೋಕವ ಬೆಳಗಲು
ಅಜ್ಞಾನವೆಂಬ ಕತ್ತಲೆ ಹರಿದು, ಬೆಳಗೇ ಆವರಿಸಿತ್ತು.
ಆ ಬೆಳಗಿನೊಳಗಣ ಬೆಳಗು ತಾನೆಂದರಿದ ಕಾರಣ
ಬೆಳಗು ಬೆಳಗ ಹಳಚಿ ಎರಡೊಂದಾದ
ಘನವನೇನೆಂದುಪಮಿಸುವೆನು?
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ಅವಿರಳ ಲಿಂಗೈಕ್ಯವನು.
॥ ೩೯೬ ॥

೧೧೮೨

ಹಗಲಿರುಳ ನುಂಗಿದರೆ ಉದಯಾಸ್ತಮಾನ ನಿಂದಿತ್ತು.
ಸಾಕಾರವ ನಿರಾಕಾರ ನುಂಗಿ ಏಕವಾಯಿತ್ತು.
ಲೋಕಲೌಕಿಕವೆಂಬುದಿಲ್ಲದೆ ಏಕವಾಯಿತ್ತು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆನ್ನಲಿಲ್ಲದೆ ಏಕವಾಯಿತ್ತು.
॥ ೩೯೭ ॥

೧೧೮೩

ಅಂಗದಲ್ಲಿ ಆಯತವಾಯಿತ್ತು.
ಮನದಲ್ಲಿ ಸ್ವಾಯತವಾಯಿತ್ತು.
ಭಾವದಲ್ಲಿ ಸನ್ನಿಹಿತವಾಯಿತ್ತು.
ಆಯತವಾದುದೇ ಸ್ವಾಯತವಾಗಿ,
ಸ್ವಾಯತವಾದುದೇ ಸನ್ನಿಹಿತವಾಗಿ,
ಸನ್ನಿಹಿತ ಸಮಾಧಾನವಾಗಿ ನಿಂದುದು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆ ತಾನಾಗಿ. ॥ ೩೯೮ ॥

೧೧೮೪

ಆರನರಿದು, ಮೂರತಿಳಿದು, ಎರಡರೊಳು ನಿಲಿಸಿ
ಎರಡನೊಂದುಮಾಡಿ ಕೂಡಿಹೆನೆಂಬುಪಮೆಯುಳ್ಳನ್ನಕ್ಕ
ಕಾಡುವುದು ಲಿಂಗೈಕ್ಯವು.
ಈ ಉಪಮೆಯಳಿದು ಅನುಪಮೆಯಾದರೆ
ಅದೇ ಮಹಾಲಿಂಗೈಕ್ಯವು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ ತಾನಾದ ನಿಲವು.॥ ೩೯೯ ॥

೧೧೮೫

ಬೆಳಗು ಬರಲು ಕತ್ತಲೆ ಹರಿಯಿತ್ತು.
ಸುಳಿಗಾಳಿ ಸುಸರವಾಯಿತ್ತು.
ಇಳೆ ಜಲ ವಹ್ನಿಯೊಳಗಡಗಿತ್ತು.
ಮೇಲೆ ಮಳೆಗಾಲ ಘನವಾಯಿತ್ತು.
ಅರಳಿದ ಪುಷ್ಪದೊಳಗೆ ಥಳಿಲನೆ ಮೂರ್ತಿಗೊಂಡನೊಬ್ಬ ಶರಣ.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆಂಬ
ಲಿಂಗದೊಳಗಾದನು ಶರಣನು. ॥ ೪೦೦ ॥

೧೧೮೬

ಜಗದಗಲದಲ್ಲಿ ಮುಸುಕಿದ ಕತ್ತಲೆ, ದೀವಿಗೆಯ ಬೆಳಗಿಂಗೆ
ಹರಿವುದೆ ಸೂರ್ಯನ ಬೆಳಗಿಂಗಲ್ಲದೆ?.
ಇದು ಕಾರಣ,
ಕಾಯವಂತರೆಲ್ಲ ಮಾಯಾಭ್ರಮೆಗೊಳಗಾದರು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನಿಮ್ಮನರಿದಾತ ನಿಮ್ಮೊಳಗಾದನು. ॥ ೪೦೧ ॥

೧೧೮೭

ತುಂಬಿ, ಇಂಬಿನ ತುಂಬಿ, ಕಾಯ ತುಂಬಿ, ಕರಣ ತುಂಬಿ,
ಈರೇಳು ಭುವನವ ತುಂಬಿ,
ತುಂಬಿ ಪರಿಮಳವನುಂಡು ಅಂಬರದಲ್ಲಿ ನಿಂದಿತ್ತು.

ಸಂಭ್ರಮ ನಿಂದಿತ್ತು.
ಮಹಾಘನ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ
ತುಂಬಿ ತುಳುಕದಂತೆ ಇದ್ದಿತ್ತು. ॥ ೪೦೨ ॥

೧೧೮೮

ಆವಾವ ಪರಿಯಲ್ಲಿ ಭಾವಿಸುತ್ತಿಹ ಕರಣದ ವ್ಯಾಕುಲವಡಗಿ
ಮನವು ಏಕಾಂತವಾಗಿ ನಿಂದ ಯೋಗಿ,
ಜ್ಞಾನಸತಿಯ ಸಂಗದಲ್ಲಿರಲು
ಆತಂಗೆ ಸರ್ವಲೋಕವು
ಆ ಲೋಕದ ಭೋಗಂಗಳೆಲ್ಲಾ ತಡೆದಿಹವಾಗಿ
ಆ ಯೋಗಿ ತನಗೆ ಪ್ರಿಯಳಾದ ಚಿತ್ಕಾಂತೆಯನು ತನ್ನನು ಕಾಣದೆ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ತಾನು ತಾನಾಗಿಹನು.
॥ ೪೦೩ ॥

೧೧೮೯

ಅಂಗ ಲಿಂಗ ಸಂಗವರಿದ ಲಿಂಗದೇಹಿ, ತನ್ನಿಂದ
ಹಿರಿದೊಂದೂ ಇಲ್ಲವೆಂದು ತಿಳಿದು
ಆ ತಿಳಿವಿನೊಳಗಣ ತಿಳಿವು ತಾನೆ
ವಿಶ್ವಾತ್ಮಪತಿಯಾದ ಶಿವನಜ್ಞಾನವೆಂದರಿದು
ಆ ಸರ್ವಜ್ಞನಾದ ಶಿವನು
ನಿರ್ಮಲದರ್ಪಣದೊಳಗಣ ಪ್ರತಿಬಿಂಬದಂತೆ
ಯೋಗಿಯ ಮನವೆಂಬ ದರ್ಪಣದಲ್ಲಿ ತೋರುವ
ಚಿದಾಕಾಶರೂಪ ಶಿವನ
ಶರಣಜ್ಞಾನಲೋಚನದಿಂದ ಕಂಡು ಕೂಡಿ
ಎರಡಳಿದು ನಿಂದನು ನಮ್ಮ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣನು. ॥ ೪೦೪ ॥

೧೧೯೦

ಅಂಡ ಪಿಂಡೋಪಾಧಿಗಳಿಲ್ಲದ ಅಖಂಡ ಬಯಲು,
ಖಂಡಿತವಾದ ನೆನಹಿಗೆ ನಿಲುಕದ

ಚಿದ್ರೂಪ ಪರಮಾನಂದ ಪರತತ್ವವು
ತಾನೆ ವಿಚಾರಿಸಿ ಕರಸ್ಥಲವಾಗಿ,
ಅಂಡ ಪಿಂಡಂಗಳಿಗೆ ತೆರಹ ಕೊಟ್ಟ ಮಹದಾಕಾಶರೂಪ
ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೪೦೫ ॥

೧೧೯೧

ಮನದಲ್ಲಿ ತೋರುವ ನಾನಾ ತೋರಿಕೆಯ ಚಿಂತೆಯಳಿದು
ನಿಶ್ಚಿಂತನಾದ ಶಿವಯೋಗಿ,
ಏನೊಂದನೂ ಮನದಲ್ಲಿ ಚಿಂತಿಸದೆ ಉದಾಸೀನಪರವಾಗಿ
ಶಿವಶಕ್ತ್ಯಾತ್ಮಕವಾದ ಈ ವಿಶ್ವವನು
ಜ್ಞಾನಸ್ಥಾನದಲ್ಲಿ ಲಯವನೈದಿಸಿ
ಆ ನಿರಾಲಂಬಜ್ಞಾನದಲ್ಲಿ ಮನೋಲಯವಾದ ಶರಣಂಗೆ
ಹೊರಗೊಳಗು ಊರ್ಧ್ವಾಧೋಮಧ್ಯವೆಂಬವೇನೂ ತೋರದೆ
ಎಲ್ಲವೂ ತನ್ನಾಕಾರವಾಗಿ
ನಿರಾಕಾರ ಸ್ವಸಂವೇದ್ಯ ಪರತತ್ತ್ವ ತಾನೆಯಾಗಿಹನು
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣನು. ॥ ೪೦೬ ॥

೧೧೯೨

ಶರಣನ ಸರ್ವಭಾವಂಗಳು
ಶಿವಜ್ಞಾನದಲ್ಲಿ ಅಡಗಿ, ಶಿವರೂಪದಿಂದ ತೋರುತ್ತಿಹವಾಗಿ,
ಸಂಕಲ್ಪ ವಿಕಲ್ಪವಳಿದು ತೃಪ್ತಿ ಸಂಕೋಚಗಳಡಗಿ,
ಘನಕ್ಕೆ ಘನ ತಾನಾದ ಶಿವ ತಾನಾಗಿ,
ಶಿವ ತಾನಾದನೆಂಬ ಭಾವವಿಲ್ಲದ ಸಹಜ ಸ್ವರೂಪನೇ ತೃಪ್ತನು.
ಅಂಥ ತೃಪ್ತಂಗೆ ಅರಿಯಲು ಮರೆಯಲು ಒಂದಿಲ್ಲದೆ
ಘನಪರಿಣಾಮಿಯಾಗಿಹನು
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣನು. ॥ ೪೦೭ ॥

೧೧೯೩

ಸೂರ್ಯನ ಕರಜಾಲಂಗಳು ಸೂರ್ಯೋದಯವಾದಲ್ಲಿ ಹುಟ್ಟಿ,
ಸೂರ್ಯನು ಅಸ್ತಮಿಸಲು ಕೂಡ ಅಡಗುವಂತೆ,
ಮನೋವಿಕಾರದಿಂದ ಲೋಕವೆಲ್ಲವೂ ತೋರಿ,

ಮನ ಲಯವಾದೊಡನೆ ಆ ಲೋಕವೆಲ್ಲವೂ ಅಡಗಿ,
ಜ್ಞಾನತತ್ತ್ವವೊಂದೇ ತನ್ನ ಸ್ವರೂಪವಾಗಿ ಉಳಿದಿಹ ಯೋಗಿಗೆ
ಮುಂದೆ ಅರಿಯಬೇಕಾದುದೊಂದೂ ಇಲ್ಲವಯ್ಯ.
ಉಳಿದ ಉಳುಮೆ ಜ್ಞಾನರೂಪಾಗಿ ನಿಂದಿತಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣಂಗೇ. ॥ ೪೦೮ ॥

೧೧೯೪

ಅಜ ಹರಿಗಳರಿತಕ್ಕೆ ಅಗೋಚರವಾದ ನಿಜವನರಿದು
ಸಹಜಾತ್ಮನಾದ ಶರಣಂಗೆ,
ಏಕವೆಂಬುದು ಅನೇಕವೆಂಬುದು ತೋರದೆ,
ಸ್ಥೂಲವೆಂಬುದು ಸೂಕ್ಷ್ಮವೆಂಬುದು ತೋರದೆ,
ಚರಾಚರವು ನಾಸ್ತಿಯಾಗಿ,
ಸಮಸ್ತ ಭುವನಂಗಳು
ಶೂನ್ಯವಾಗಿ ತೋರದೆ, ನಿಶೂನ್ಯವಾಗಿ ತೋರದೆ,
ಜ್ಞಾನರೂಪಾಗಿ ತೋರದೆ,
ಮತ್ತೊಂದು ರೂಪಾಗಿಯೂ ತೋರದೆ,
ಭೂಮಿ ಜಲ ಅಗ್ನಿ ಮರುದಾಕಾಶ ಚಂದ್ರ
ಸೂರ್ಯರೆಂಬವೇನೂ ತೋರದೆ,
ಸರ್ವಸಾಕ್ಷಿಯಾದ ಸಮ್ಯಗ್‌ಜ್ಞಾನವೊಂದೇ ಪರಿಪೂರ್ಣವಾಗಿ
ತನ್ನ ಸ್ವರೂಪಿನಿಂದ ತೋರುತ್ತಿಹುದು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣಂಗೆ. ॥ ೪೦೯ ॥

೧೧೯೫

ಅವನಿಯ ಪಿಂಡವ ನುಂಗಿ, ಉದಕವ ಪಾನವ ಮಾಡಿ,
ಅಗ್ನಿಯ ಮೆಟ್ಟಿ, ವಾಯುವ ಹಿಡಿದು, ಆಕಾಶವನಡರಿ,
ಮಹಾದಾಕಾಶದ ಬಯಲೊಳಗೆ ನಿಂದು ನೋಡಲು,
ಸರ್ವಶೂನ್ಯನಿರಾಕಾರವೆಂಬ ಬಯಲು ಕಾಣಬಂದಿತ್ತು.
ಆ ಬಯಲ ಬೆರಸಿಹೆನೆಂದು ಬಸವ ಪ್ರಭು ಮೊದಲಾದ
ಗಣಂಗಳ **ಮಹಾನುಭಾವ ಸಂಪಾದನೆಯ**ನರಿದು
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆಂಬ ಬಯಲ ಬೆರಸಿದೆನು.
॥ ೪೧೦ ॥

೧೧೯೬

ಅಂಗ ಲಿಂಗವೆಂಬ ಸಂದು ಸಂಶಯವಳಿದು
ಲಿಂಗಾಂಗದೈಕ್ಯವನರಿದು ಕೂಡಿದ ಶಿವಯೋಗಿಗೆ
ನಿಶ್ಚಿಂತತ್ವವೇ ಶಿವಧ್ಯಾನ;
ಸಕಲ ಕ್ರೀಗಳು ಲಯವಾದ ಇರವೇ ಶಿವಪೂಜೆ;
ಚರಾಚರವನು ವ್ಯಾಪಿಸಿ ನಿಂದ ನಿಶ್ಚಲವೇ ಪ್ರದಕ್ಷಿಣ;
ಸೋಹಂ ದಾಸೋಹಂ ಭಾವವಳಿದು
ಆ ಶಿವೋಹಂ ಭಾವ ತನ್ನಲ್ಲಿ ನಿಂದುದೇ ನಮಸ್ಕಾರ;
ಸ್ವಯ ಪರವೆಂಬ ವಿವೇಕದನುಭಾವವಡಗಿ
ನಿಂದ ಮೌನವೇ ಸ್ತೋತ್ರ;
ಬಿಂದುನಾದಾದಿ ಉಪಾಧಿಯ ತೊಲಗಿದ ಪರಿಪೂರ್ಣ ಶಿವನಾಗಿ
ತಾ ಶಿವನಾದೆನೆಂಬ ಚಿದಹಂಭಾವವಡಗಿ
ವಿಧಿ ನಿಷೇಧಂಗಳನರಿಯದುದೇ ಮಹಾಶೀಲ;
ಸರ್ವಜ್ಞತ್ವ ನಿತ್ಯತೃಪ್ತಿ ಅನಾದಿಪ್ರಬೋಧ
ಸ್ವತಂತ್ರ ನಿತ್ಯ ಶಕ್ತಿ ಎಂಬ
ಷಡ್ಗುಣೈಶ್ವರ್ಯ ತನಗೂ ಶಿವಂಗೂ ಸಮವಾಗಿ
ಶಿವನೊಳಗೆ ತಾನು, ತನ್ನೊಳಗೆ ಶಿವನು
ಅಡಗಿ ಸಮರಸವಾದುದೇ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ
ಪರಮನಿರ್ವಾಣವೆನಿಸುವುದು. ॥ ೪೧೧ ॥

೧೧೯೭

ಹಿಂದು ಮುಂದಣ ಮನದ ಸಂಕಲ್ಪ ವಿಕಲ್ಪವಳಿದು,
ರೂಪಜ್ಞಾನ ನಿರೂಪಜ್ಞಾನವೆಂಬುವೇನೂ ತೋರದೆ,
ಜ್ಞಾನ ಜ್ಞೇಯ ಧ್ಯಾನ ಧ್ಯೇಯ ಲಕ್ಷ್ಯಾಲಕ್ಷ್ಯ ದೃಗ್ ದೃಶ್ಯಗಳೆಂಬ
ವಿಚಾರವಳಿದ ಜೀವನ್ಮುಕ್ತಂಗೆ
ಅರಿಯಲೊಂದಿಲ್ಲ, ಮರೆಯಲೊಂದಿಲ್ಲ,
ತೆರೆಯಡಗಿದ ಅಂಬುನಿಧಿಯಂತೆ ನಿಶ್ಚಿಂತನಾಗಿದ್ದನು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೇ ತಾನಾಗಿ. ॥ ೪೧೨ ॥

೧೧೯೮

ಭಾವಲಯವಾದ ಮತ್ತೆ, ಇನ್ನು ಭಾವಿಸಲೇನುಂಟು ಹೇಳ
ಸಮ್ಯಗ್ಜ್ಞಾನಿಯಾದ ಮಹಾತ್ಮ ನಿರ್ಲೇಪಕಂಗೆ?

ಕಾರ್ಯ ಕಾರಣವೆಂಬವೆಲ್ಲ ಶೂನ್ಯವಾದವು
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಲಿಂಗೈಕ್ಯಂಗೆ. ॥ ೪೧೩ ॥

೧೧೯೯

ಕಾರ್ಯಕಾರಣವಾದ ತತ್ತ್ವವಿತತ್ವಂಗಳೆಲ್ಲ
ತೋರಿಯಡಗುವ ಇಂದ್ರಜಾಪದಂತೆ,
ಸಾವಯ ನಿರವಯವಾಗಿ,
ಉಂಟಿಲ್ಲವೆಂಬ ರೂಪು ನಿರೂಪುಗಳೆಲ್ಲ
ಅಜ್ಞಾನವಶದಿಂದ ತೋರುತ್ತಿಹವಾಗಿ
ಅಂತಪ್ಪ ಅಜ್ಞಾನದ ಬಲುಹಿಂದ,
ನಾನು ನನ್ನದೆಂಬ ಅಹಂಕಾರ ಮಮಕಾರ
ಮೊದಲಾದವೆಲ್ಲವೂ ತೋರುತ್ತಿಹವು.
ಇಂತಪ್ಪ ಅಹಂಕಾರ ಮಮಕಾರ ಮೊದಲಾದವೆಲ್ಲವ
ನೀತಿಗಳೆವುದೇ ಬ್ರಹ್ಮಜ್ಞಾನವು.
ಅಂತಪ್ಪ ಬ್ರಹ್ಮಜ್ಞಾನಿಯಾದ ಶರಣನಲ್ಲಿ
ಏನೂ ತೋರಿಕೆಯಿಲ್ಲದೆ ಜ್ಞಾನ ಜ್ಞೇಯಂಗಳೇಕವಾಗಿ,
ಜ್ಞಾನ ನಿಃಪತಿಯಾದುದೇ ಲಿಂಗೈಕ್ಯವಯ್ಯಾ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ. ॥ ೪೧೪ ॥

೧೨೦೦

ದಶದಿಕ್ಕುಗಳಿಂದ ರೂಹಿಸಬಾರದಾಗಿ,
ಕಾಲಂಗಳಿಂದ ಕಲ್ಪಿಸಬಾರದು.
ಕಾಲಂಗಳಿಂದ ಕಲ್ಪಿಸಬಾರದಂಥ
ಅಖಂಡ ಚಿನ್ಮಾತ್ರ ಸ್ವರೂಪನಾದ ಶಿವನ
ಸ್ವಾನುಭಾವಜ್ಞಾನದಿಂ ಸಾಧಿಸಿ ಕಂಡ
ಶಾಂತ ಸ್ವಯಂಜ್ಯೋತಿ ಸ್ವರೂಪನಾದ ಶರಣ.
ಅಂಗಸಂಗವಿಲ್ಲದೆ ನಿಸ್ಸಂಗಿಯಾದ ಕಾರಣ ಉಪಮಿಸಬಾರದು.
ಕಡೆಮೊದಲಿಲ್ಲದಾಕಾಶವು ಖೇಚರಾದಿಗಳಿಂದ ಲೇಪವಿಲ್ಲದಂತೆ
ನಿತ್ಯ ನಿಜ ಚೈತನ್ಯಾಕಾರ ರೂಪನಾಗಿಹನು,
ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣನು.॥ ೪೧೫ ॥

೧೨೦೧

ಭಾವಿಸುವ ಭಾವದ ವಿಕಾರವಳಿದು, ನಿರ್ಭಾವ ನೆಲೆಗೊಂಡು
ಚಿದಾಕಾಶರೂಪನಾದ ಶರಣಂಗೆ ಭಾವವಿಲ್ಲ.
ಭಾವವಿಲ್ಲವಾಗಿ ಮನವಿಲ್ಲ.
ಮನವಿಲ್ಲವಾಗಿ ನೆನೆಯಲಿಲ್ಲ.
ನೆನೆಯಲಿಲ್ಲದನುಪಮ ಸುಖಸಾರಾಯ ಶರಣ
ಸರಿತ್ ಸಮುದ್ರವ ಕೂಡಿ ತೆರೆಯಡಗಿ ನಿಂದಂತೆ
ಭಾವವಳಿದು ನಿಂದುದೇ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ಲಿಂಗೈಕ್ಯವು. ॥ ೪೧೬ ॥

೧೨೦೨

ಬಯಲಲ್ಲಿ ಹುಟ್ಟಿದ ಶಿಶುವಿಂಗೆ,
ಬಯಲ ತಾಯಿ ಬಂದು ಮೊಲೆಯ ಕೊಟ್ಟರೆ,
ಬಯಲಮೃತವನುಂಡು ತೃಪ್ತಿಯಾಗೆ,
ಬಯಲು ಸ್ವಯಂವೆಂದರಿದು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆಂಬ ಬಯಲೊಳಗೆ
ಬಯಲಾಯಿತ್ತು ಶಿಶು ನೋಡಾ. ॥ ೪೧೭ ॥

೧೨೦೩

ಪೃಥ್ವಿಯ ಬೀಜ ಅಪ್ಪುವ ಕೂಡಿ, ಅಗ್ನಿಯಲ್ಲಿ ಮೊಳೆದೋರಿತ್ತು.
ವಾಯುವಿನಲ್ಲಿ ಶಾಖೆದೋರಿ, ಆಕಾಶದಲ್ಲಿ ಪಲ್ಲವಿಸಿತ್ತು.
ಮಹದಾಕಾಶದಲ್ಲಿ ಫಲದೋರಿ, ಶೂನ್ಯದಲ್ಲಿ ಹಣ್ಣಾಯಿತ್ತು.
ಅದು ನಿರಾಳದಲ್ಲಿ ರಸತುಂಬಿ, ನಿರ್ವಯಲಲ್ಲಿ ತೊಟ್ಟು ಬಿಟ್ಟಿತ್ತು.
ಆ ಹಣ್ಣ ಪ್ರಭುದೇವರಾರೋಗಿಸಿದರಾಗಿ ನಿರ್ವಯಲಾದರು.
ಆ ಪ್ರಭುದೇವರಾರೋಗಿಸಿ ಮಿಕ್ಕ ಪ್ರಸಾದವ
ಬಸವಣ್ಣ ಮೊದಲಾದ ಸಂಖ್ಯಾತ ಮಹಾಗಣಂಗಳು
ಸ್ವೀಕರಿಸಿದರಾಗಿ ಶಿವನೊಳಗಾದರು.
ನಾನು ಮಹಾಗಣಂಗಳ ಪ್ರಸಾದವನಾರೋಗಿಸಿದೆನಾಗಿ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು
ತನ್ನೊಳಗೆನ್ನನಿಂಬಿಟ್ಟುಕೊಂಡನು. ॥ ೪೧೮ ॥

೧೨೦೪

ಕುಂಭಿನಿಯ ಘಟಪುರುಷನು ಅಂಬರದ ರಂಭೆಗೆ
ಬೇಟವ ಮಾಡಿದಡೆ ಕುಂಭಿನಿಯ ಘಟ ಬಯಲಾಯಿತ್ತು.
ಪುರುಷ ರಂಭೆಯ ಕೂಡಿದ ಕಾರಣ ಸಂಭ್ರಮವಳಿಯಿತ್ತು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ
ಬಳಿಕ ಲಿಂಗೈಕ್ಯಂಗೆ ಇಂಬಾಯಿತ್ತು. ॥ ೪೧೯ ॥

೧೨೦೫

ಶ್ರೀಗುರುವಿನ ಉಪದೇಶದಿಂದ ಲಿಂಗವನರಿದು,
ಆ ಲಿಂಗವನೆ ನೋಡುತ್ತಿರಲು,
ಆ ಲಿಂಗದೊಳಗೆ ತನ್ನ ಕಂಡು, ನೋಡುವ ನೋಟವ ಬಿಟ್ಟು
ತನ್ನ ಸಮ್ಯಗ್‌ಜ್ಞಾನದಲ್ಲಿ ಸುಖಿವಿದ್ದು,
ಆ ಸಮ್ಯಗ್‌ಜ್ಞಾನವೊಂದೇ ತನ್ನ ರೂಪಾಗಿ ಉಳ್ಳ ಮತ್ತೆ
ಅರಿಯಲು ಮರೆಯಲಿಲ್ಲದೆ ತೆರಹಿಲ್ಲದಿಹನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ಒಂದಾದ ಲಿಂಗೈಕ್ಯನು.
॥ ೪೨೦ ॥

೧೨೦೬

ತೆರಹಿಲ್ಲದ ಕುರುಹಿಲ್ಲದ ಅರಿವಿಗಗೋಚರವಾದ
ಮಹಾಪ್ರಸಾದವ ಕೊಂಡು, ತಾ ಪ್ರಸಾದವರೂಪನಾದ ಬಳಿಕ,
ಮುಖ್ಯಲಕ್ಷ್ಯಾರ್ಥ ಮೊದಲಾದ ಸರ್ವಾಲಂಬನ ಉಂಟೇ?
ಇಲ್ಲವಾಗಿ.
ಮನವಾತ್ಮಜ್ಯೋತಿಯಲಡಗಿ, ಜ್ಞಾನ ಜ್ಞೇಯಂಗಳೇಕವಾದ ಬಳಿಕ,
ಮಾತೃಮೇಯ ಪ್ರಮಾಣಾದಿ ವ್ಯವಹಾರಗಳುಂಟೇ? ಇಲ್ಲವಾಗಿ.
ಇದು ಕಾರಣ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ
ಶರಣ ನಿಶ್ಚಿಂತ ನಿವಾಸಿ. ॥ ೪೨೧ ॥

೧೨೦೭

ಲಿಂಗವೇ ತಾನಾಗಿ, ತಾನೇ ಲಿಂಗವಾಗಿ
ಲಿಂಗಲೀಯವಾದ ಲಿಂಗೈಕ್ಯಂಗೆ

ವಿಶ್ವಮೋಹಿನಿ ಶಕ್ತಿ ಮೋಹಕವಿಲ್ಲದೆ ಹೋಯಿತ್ತು.
ಇನ್ನು ಶಬ್ದಾದಿ ವಿಷಯೇಂದ್ರಿಯಂಗಳು
ವಿಷಯಭೋಗಂಗಳು ಇಲ್ಲದೆ ಹೋದವು.
ಭಾನುತೇಜೋಜಾಲ ಭಾನುವಿನೊಳಡಗಿದಂತೆ
ಸರ್ವ ಕರಣಂಗಳು ತನ್ನೊಳಗಡಗಿ
ತಾನೆ ಉಳಿದ ಉಳುಮೆ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ನಿಲವು ತಾನೆ ಮತ್ತಿಲ್ಲ.
॥ ೪೨೨ ॥

೧೨೦೮

ಶಿವ ತಾನೆಂಬ ವಿವೇಕವಿಲ್ಲದೆ, ಶಿವನಲ್ಲಿ ತಾನಡಗಿ,
ತನ್ನಲ್ಲಿ ಶಿವನಡಗಿ, ತಾನು ತಾನೇಕವಾದಾತಂಗೆ
ಸಂದು ಸಂಶಯಂಗಳುಂಟೆ?
ತೃಪ್ತಿ ಸಂಕೋಚವೆಂಬವಡಗಿದ ಬಳಿಕ
ಮತ್ತೆ ಘನಕ್ಕೆ ಘನವಾದೆನೆಂಬ ನೆನಹುಂಟೆ?
ನಿಜವೆಂತಿಪ್ಪುದಂತಿಪ್ಪನು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ ಲಿಂಗೈಕ್ಯನು. ॥ ೪೨೩ ॥

೧೨೦೯

ನಾನು ನಾನೆಂಬ ಅಹಂಭಾವವಳಿದು,
ಜ್ಞಾನಾನಂದಮಯ ತಾನಾದಬಳಿಕ,
ತನ್ನಿಂದನ್ಯವಾದುದೊಂದಿಲ್ಲವಾಗಿ,
ಕಾಣಲೊಂದಿಲ್ಲ, ಕೇಳಲೊಂದಿಲ್ಲ, ಅರಿಯಲೊಂದಿಲ್ಲ.
ಅನಾದಿ ಅವಿದ್ಯಾಮೂಲ ಮಾಯಾಜಾಲ
ಚರಾಚರ ನಾಸ್ತಿಯಾಯಿತ್ತು.
ಇನ್ನೇನ ಹೇಳಲುಂಟು ನಿಜಲಿಂಗೈಕ್ಯಂಗೆ?
ವಿಷಯಾವಿಷಯಂಗಳೆಂಬ ಉಭಯಭಾವವಡಗಿ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೇ ತಾನಾಗಿಹನು. ॥ ೪೨೪ ॥

೧೨೧೦

ತನ್ನೊಳಡಗಿಹ ಅನಂತಕೋಟಿ ಬ್ರಹ್ಮಾಂಡಗಳಿಗೆ
ಉತ್ಪತ್ತಿ ಸ್ಥಿತಿ ಲಯಾಶ್ರಯವಾದ

ಮಹಾ ಚಿದ್ಭಾಂಡವೇ ತನ್ನಿರವೆಂದರಿದ ಕಾರಣ
ಸರ್ವತತ್ತ್ವ ಸಾಕ್ಷಿಣಿ ವಿಶ್ವಪ್ರಕಾಶ ಪರಾಶಕ್ತಿರೂಪ ವಿಶ್ವತೋಮುಖಿ
ಚಿದಾತ್ಮಕ ಪರಮಾನಂದಮಯ ತಾನೇ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ನಿಲವು. ॥ ೪೨೫ ॥

೧೨೧೧

ಶಿವನೆಂದರಿದವಂಗೆ ತಾನೆಂಬುದಿಲ್ಲಾಗಿ
ತನಗೊಂದನ್ಯವಿಲ್ಲ.
ಘನದಿರವು ಇಂಬಾಗಿ ಚರಾಚರವು ತನ್ನಲ್ಲಿ ಅಡಗಿದಕಾರಣ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣ ಲಿಂಗವಾಗಿರ್ದನು.
॥ ೪೨೬ ॥

೧೨೧೨

ಚಂದ್ರ ಚಂದ್ರಿಕೆಯಂತೆ, ಅಗ್ನಿ ಉಷ್ಣದಂತೆ,
ರತ್ನ ಕಾಂತಿಯಂತೆ,
ಬ್ರಹ್ಮವ ಬಿಡದೆ ತೋರುವ ಬ್ರಹ್ಮಶಕ್ತಿ
ಬ್ರಹ್ಮದ ಅಂತಃಕರಣವಾದ ಕಾರಣ
ವಿಶ್ವಭಾಜನವೆನಿಸಿತ್ತು.
ಬೀಜದಲ್ಲಿ ವೃಕ್ಷ ಪತ್ರೆ ಫಲಂಗಳು ತೋರುವಂತೆ,
ಬ್ರಹ್ಮದ ಹೃದಯಬೀಜದಲ್ಲಿ ವಿಶ್ವವು ತೋರುವುದಾಗಿ,
ಆ ವಿಶ್ವಭಾಜನವಾದ ಚಿತ್ತೇ ತನ್ನ ಸ್ವರೂಪವೆಂದು
ಕಂಡ ಜೀವನ್ಮುಕ್ತಂಗೆ
ವಿಧಿ - ನಿಷೇಧ, ಸಂಕಲ್ಪ-ವಿಕಲ್ಪ, ಪ್ರಕೃತಿ-ವಿಕೃತಿ ಮೊದಲಾದ
ಜಗದ್ವ್ಯಾಪಾರವೆಂಬುದೇನೂ ಇಲ್ಲ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ನಿಮ್ಮ ಶರಣ ನಿಮ್ಮ ಕೂಡಿ ನಿಮ್ಮಂತಿಹನು. ॥ ೪೨೭ ॥

೧೨೧೩

ಅರಿಯಬಾರದು ಕುರುಹಿಲ್ಲವಾಗಿ,
ಕುರುಹಿಡಿವ ಪರಿ ಇನ್ನೆಂತೊ?.
ದೇಶ ಕಾಲಂಗಳಿಂದ ಹವಣಿಸಬಾರದುದ,

ಉಪಮಿಸುವ ಪರಿ ಇನ್ನೆಂತೊ?.
ಶಿವ ಶರಣನೆಂಬೆರಡು ನಾಮವಳಿದೊಂದಾದ ಬಳಿಕ,
ಸ್ವಯ ಪರವೆಂಬುದನರಿಯದ ಅಪ್ರಮೇಯ ಬ್ರಹ್ಮಾದ್ವೈತಂಗೆ
ಯೋಗ ವಿಯೋಗ ಜ್ಞಾತೃ ಜ್ಞಾನ ಜ್ಞೇಯವೆಂಬ
ವ್ಯವಹಾರವುಂಟೆ?
ಬಂಧ ಮುಕ್ತಿ, ಮಾನಾಪಮಾನ, ಸುಖ ದುಃಖ,
ಜ್ಞಾನಾಜ್ಞಾನ, ಹೆಚ್ಚು ಕುಂದುಗಳುಂಟೆ?
ಸರ್ವಾಕಾರ ನಿರಾಕಾರ ನಿರ್ಮಲ ಪರಬ್ರಹ್ಮವು ತಾನೆ
ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು. ॥ ೪೨೮ ॥

೧೨೧೪

ಶರಣಮಧ್ಯಲಿಂಗ, ಲಿಂಗ ಮಧ್ಯಶರಣನಾದ ಮತ್ತೆ,
ಇನ್ನು ಪರವೆಂದು ಅಪರವೆಂದು
ಪ್ರತಿಯಿಡುವ ಜ್ಞಾನವುಂಟೇ ಹೇಳ?
ಅಹಂಭಾವ ಶೂನ್ಯವಾಗಿ ಭಾವಾಭಾವಲಯವಾದ ಮತ್ತೆ
ಇನ್ನು ಭಾವಿಸಲೇನುಂಟು ಹೇಳ,
ಸಮ್ಯಗ್‌ಜ್ಞಾನಿಯಾದ ಮಹಾತ್ಮ ನಿರ್ಲೇಪಕಂಗೆ?
ಕಾಯ ಕಾರಣವೆಂಬುವೆಲ್ಲ ಶೂನ್ಯವಾದವು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಲಿಂಗೈಕ್ಯಂಗೆ. ॥ ೪೨೯ ॥

೧೨೧೫

ನೀರು ನೀರ ಕೂಡಿ, ಕ್ಷೀರ ಕ್ಷೀರವ ಕೂಡಿ,
ಅಗ್ನಿ ಅಗ್ನಿಯ ಕೂಡಿದಂತೆ.
ತನ್ನೊಳಗೆ ಶಿವನು, ಶಿವನೊಳಗೆ ತಾನು ಅಡಗಿ ಏಕವಾದ ಮತ್ತೆ,
ತಾ ಶಿವನಾದೆನೆಂಬ ಅಹಂಭಾವವಿಲ್ಲ ನೋಡಯ್ಯ.
ಸರ್ವಾತ್ಮರೆಂಬ ಪರತತ್ವ ತಾನಾದ ಮತ್ತೆ,
ಭೇದಾಭೇದ ಶಂಕೆಯೆಂಬುದು ಏನೂ ಇಲ್ಲ ನೋಡಯ್ಯ.
ನಿತ್ಯ ನಿರ್ವಿಕಾರ ನಿಸ್ಸೀಮ ವ್ಯೋಮಾತೀತ
ನಿರ್ವಿಕಲ್ಪ ನಿಜ ತಾನಾದ ಮತ್ತೆ,
ಭೂಮ್ಯಾದಿ ಭೂತ ಗ್ರಹ ನಕ್ಷತ್ರ ದೇವ ಮನುಷ್ಯ
ತಿರ್ಯಗ್ಜಾತಿಗಳೆಂಬವೇನೂ ಇಲ್ಲ ನೋಡಾ.
ಸತ್ತು ಚಿತ್ತು ಆನಂದಲಕ್ಷಣವಿದೆಂಬ ಜ್ಞಾನಶೂನ್ಯವಾಗಿ

ಶಬ್ದಮುಗ್ಧವಾದ ಮತ್ತೆ
ಪರಬ್ರಹ್ಮ ಅಪರಬ್ರಹ್ಮವೆಂಬ ನಾಮವು ಇಲ್ಲ.
ತಾನಲ್ಲದೆ ಮತ್ತೇನೂ ಇಲ್ಲ ನೋಡ.
"ಜಲೇ ಜಲಮಿವ ನ್ಯಸ್ತಂ ವಹ್ನೌ ವಹ್ನಿರಿವಾರ್ಪಿತಃ
ಪರಬ್ರಹ್ಮಣಿ ಲೀನಾತ್ಮನ ವಿಭಾಗೇನ ದೃಶ್ಯತೇ"
ಇಂತೆಂದುದಾಗಿ,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನಲ್ಲಿ
ಒಂದಾದ ಲಿಂಗೈಕ್ಯನಿರವು. ॥ ೪೩೦ ॥

## ಹೆಚ್ಚಿನ ವಚನಗಳು

೧೨೧೬

ಆರು ನೆಲೆ ಮಂಟಪದ ಕೋಣೆಯಲ್ಲಿ
ಆರು ಜ್ಯೋತಿಯ ಮುಟ್ಟಿಸಿ
ಆ ಜ್ಯೋತಿಯ ಬೆಳಗಿನಲ್ಲಿ ಆರು ಲಿಂಗವ ನಿರ್ಮಿಸಿ
ಆರು ಲಿಂಗದ ಪ್ರತುಮೆಯಲ್ಲಿ
ಆರು ಹಂತದ ಸೋಪಾನದಲ್ಲಿ
ಮಹಾ ನಿರ್ಮಳವೆಂಬ ದುರ್ಗಮಂ ನಿರ್ಮಿಸಿ
ಆ ದುರ್ಗದಲ್ಲಿ ಅರಸಂಗೆ
ಕಾಲಿಲ್ಲದಾಕೆಯ ಮದುವೆಯ ಮಾಡಿ
ತೂತಿಲ್ಲದ ಭೋಗಕ್ಕೆ ಕೂಡಿ
ಬಿಂದುವಿಲ್ಲದೆ ಮಕ್ಕಳಾದ ಪರಿಯ ನೋಡ.
ತೊಟ್ಟಿಲಿಲ್ಲದೆ ಹಾಸಿ ಮಲಗಿಸಿ ನಿದ್ರೆಗೆಯ್ಸಿದ
ಶರಣನಾಚರಣೆಯನೆಂತೆಂಬೆನು.
ಇದ ಕಂಡು ನಡೆಯಲರಿಯದೆ,
ತಮ್ಮ ಮನ ಬಂದಂತೆ ನಡೆವರು.
ಶಿವಯೋಗಕ್ಕೆ ದೂರವಾದರು ನೋಡ.
ಹೊನ್ನ ಕಟ್ಟಿ ವಿರಕ್ತನು ಭಿಕ್ಷೆಯೆನಲಾಗದು.
ಭಕ್ತನ ಗೃಹವೆಂದು ಜಂಗಮವು ಹೋದಲ್ಲಿ
ಆ ಭಕ್ತನು ಎದ್ದು ನಮಸ್ಕರಿಸಿ
ತನ್ನಲ್ಲಿರ್ದ ಪದಾರ್ಥವಂ ತಾನು ಸಹವಾಗಿ
ಶಿವಾರ್ಪಣವ ಮಾಡ[ಬ]ಹುದಲ್ಲದೆ.
ಇದಲ್ಲದೆ,

ಜಂಗಮವ ಬೇರೆ ಕುಳ್ಳಿರಿಸಿ ಉಂಡನಾದರೆ
ಅವನಿಗೆ ದೀಕ್ಷೆಯ ಕೊಟ್ಟ ಗುರುವಿಗೆ
ತನ್ನ ಮಾರ್ಗವ ಬಿಟ್ಟು ಶಿವಭಕ್ತನಾದರೆ ಮೋಕ್ಷವಿಲ್ಲವಾಗಿ.
ಕೋಳಿ ಒಂದು ಕುಟುಕ ಕಂಡರೆ
ತನ್ನ ಮರಿಗೆ ತೋರದುಳಿವುದೆ?
ಕಾಗೆ ಒಂದಗುಳ ಕಂಡರೆ
ತನ್ನ ಬಳಗವ ಕರೆಯದುಳಿವುದೆ?
ಶಿವಭಕ್ತನಾಗಿ ತನ್ನ ಲಿಂಗವ ಪೂಜಿಸಿ
ಜಂಗಮವ ಮರೆದವನಾದರೆ
ಸತ್ತ ದನವಿಗೆ ನರಿ ಹೋದಂತಾಯಿತ್ತು.
ಆ ನರಿ ಹೋದ ನೆನಹಿನಲ್ಲಿ ನಾಯಿ ಹೋದಂತಾಯಿತ್ತು.
ಇಷ್ಟಕ್ಕಿಂದ ಕರಕಷ್ಟವೆ ಶಿವಭಕ್ತರು?
ಷಟ್ಚಕ್ರದ ಭಾವದಲ್ಲಿಪ್ಪೊಪ್ಪಿರುವ ಶಿವಶರಣರು
ತಮ್ಮ ನಡೆ ನುಡಿಗಳ ಬಿಡದೆ ನಡೆವುದು.
ಅದ ಕಂಡು ಕಣ್ದೆರೆದು ನೋಡಿದೆನಯ್ಯ.
ಆವ ವರ್ತನೆಯಲ್ಲಿ ತಾನಿದ್ದರೇನು?
ಆವ ಭಾವ ಹೇಂಗಿದ್ದರೇನು?
ಸಮ್ಯಾಚರಣೆ ನಮಗೆ ಶುದ್ಧ.
ಗುರು ಕಲ್ಪಿತನಾದರು ಅವನು ಹಿಂದೆ ಸಂಬಂಧವಾದ ಕಾರಣ,
ಅವನಿಗೆ ಬಂಧ ದೊರಕುವದಲ್ಲದೆ
ನನಗೆ ದೊರಕದೆಂದು ತಾನು ನಿಶ್ಚೈಸಿದರೆ
ತನಗೆ ದೊರಕಬಲ್ಲದೆ?
ತಾನು ಪೂರ್ವದಲ್ಲಿ ತಾ ಪಡದುದು ತನಗೆ ತಪ್ಪುವದೆ?
ಪ್ರಾಣಿಹಿಂಸೆಯ ಮಾಡುವಾತನಾದರೆಯು
ಅವನಿಗೆ ಕಲ್ಪಿತವೇತಕ್ಕೆ?
ಹಿಂದೆ ಅವನು ಶಿವನಪ್ಪಣೆವಿಡಿದು ಬಂದ ಕಾರಣ
ಅವನಿಗೆ ಬಂದಿತಲ್ಲದೆ
ಗಗನದ ಮಂಟಪದ ಮೇಲೆ ಊರ್ಧ್ವಮುಖದ
ಗದ್ದುಗೆಯ ಮಾಡಿ
ಮಹಾಪ್ರಕಾಶವೆಂಬ ಬೆಳಗಂ ತೋರಿ
ಓಂಕಾರವೆಂಬ ಲಿಂಗವ ಮೂರ್ತಮಾಡಿಸಿ
ಅದಕ್ಕೆ ಸದ್ಭಾವವೆಂಬ ಪುಷ್ಪವ ತಂದು
ಜ್ಞಾನಪ್ರಕಾಶವೆಂಬ ಜ್ಯೋತಿಯಂ ಪೊತ್ತಿಸಿ
ಸದ್ಭಕ್ತಿಯೆಂಬ ನೈವೇದ್ಯಮಂ ಮಾಡಿ

ನಿರ್ಮಳವೆಂಬ ಪೂಜಾರಿಯಾಗಿರ್ಪನು.
ಇದನರಿಯದೆ
ತಮ್ಮ ಮನ ಬಂದಂತೆ ಇಪ್ಪವರ
ಲಿಂಗಹೋದವನಾದರು ಅವನ ಕಣ್ಣಲ್ಲಿ ಕಂಡು
ಅವನಷ್ಟಕ್ಕಲ್ಲದೆ ಅನ್ಯರ ಗೃಹವ ಬಿಡಲೇತಕ್ಕೆ?
ಪಾಪವ ಮಾಡಿದನಾದರು ಅವನ ಗೃಹಕ್ಕಲ್ಲದೆ
ಅವನೊಂದಿಗೆ ಬೆರಸಿದವನಾದರು
ಅವನಿಗೆ ಪಾಪ ಸಂಭವಿಸುವುದುಂಟೇ?.
ಇದ ಸಂಕಲ್ಪವ ಮಾಡಿ ಬಿಡಲೇತಕ್ಕೆ?.
ಒರ್ವಾನೊಬ್ಬನು ಭವಿಯ ಒಡನಾಡಲು
ಅವನ ಪಾಪವು ಅವನಲ್ಲಿಪ್ಪುದಲ್ಲದೆ
ಮಿಕ್ಕಿನ ಗೃಹಕ್ಕೆ ಸಂಬಂಧವೇನು?
'ಮಾಡಿದವರನಲ್ಲದೆ ಮಿಕ್ಕಿನವರ ಸಂಕಲ್ಪವ
ಮಾಡಲಾಗದು' ಯೆಂಬುದು ಗುರುವಚನ.
ಹೆಣ್ಣು ಬಿಂದು ಸಂಬಂಧವಾಗಲು ಆ ಭೋಗಕ್ಕೆ
ಶರಣನು ಅದನು ಮನದಲ್ಲಿ ಕಂಡು ಸಂತೋಷವಾಗಿಪ್ಪ.
ಇಂತೀ ಭಾವಶುದ್ಧವುಳ್ಳಾತನು
ಮರ್ತ್ಯಲೋಕಕ್ಕೆ ಮರಳಿ ಬಾರನೆಂಬುದು.
ಶರಣ ಸಕಲವಿದ್ಯವ ಕಲಿತು ಫಲವೇನು?.
ನಿಂದ್ಯನೆ ದೊರಕೊಂಡಮೇಲೆ?.
ಹುಣ್ಣು ಹುಗಳು ಕೋಷ್ಟವಾಗಿರಲು,
ಅವರ ಕಂಡು ಜರಿಯಲಾರದೆಂಬುದೆನ್ನ ಭಾಷೆ.
ಇಂದ್ರಿಯಸುಖಕ್ಕೆ ಹೋಗಿ ಬಿದ್ದು
ಶಿವಮಾಡಿದರಾಯಿತ್ತೆಂಬ ಅವಿಚಾರದ ನುಡಿಯ ಕೇಳಲಾಗದು.
ತನ್ನ ಮನವು ಶುದ್ಧವಾದ ಮೇಲೆ,
ಸಕಲ ಸುಖಂಗಳು ತನಗುಂಟಲ್ಲದೆ,
ಜ್ಞಾನಿಗೆ ಕತ್ತಲೆಯಿಲ್ಲ. ಅಜ್ಞಾನಿಗೆ ಪಾಪವಿಲ್ಲ.
ಇದನರಿದು, ಮುಂದುಗೊಂಡು ತಿರುಗುವ,
ಅಣ್ಣಗಳ ಕಂಡು, ನಗುತಿರ್ಪರು ನಿಮ್ಮ ಶರಣರು,
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ. ॥ ೧ ॥

೧೨೧೭

ಗುರುಮುಖವಿಲ್ಲದೆ ತಾನೆ ಆಯಿತ್ತೆಂಬರು.
ಆ ಗುರುವು ಹಿಡಿದಲ್ಲದೆ ಆವುದು ಇಲ್ಲ ನೋಡ.

ಶಿವನಿಂದಲಾಯಿತ್ತು ಎಂಬ ನುಡಿಯನಾಲಿಸಲಾಗದು,
ತಾ ಮಾಡಿದ ದೋಷವನು.
ತನ್ನ ಮನವಿಕಾರಕ್ಕೆ ತಾ ಹೋಗಿ
ಶಿವನ ಹಳಿವುದಕ್ಕೆ ಸಂಬಂಧವೇನು?
ಮಹಾಜ್ಞಾನಿಯಾಗಿ ಪೂರ್ವದಲ್ಲಿ ತಾ ಪಡೆದುದು
ತನಗೆ ತಪ್ಪುವದೆ?
ಭಾವ ಕರದಲ್ಲಿ ಮನ ಹುಟ್ಟಿದ ಮೇಲೆ
ಗುರುವೆಯಾಗಿ ಚರಿಸುವಲ್ಲಿ
ಆತಂಗೆ ಕೊರತೆ ಬರಲು
ಆತನ ಅಂತು ಇಂತು ಎಂದು ಜರೆಯಲೇತಕ್ಕೆ?
ಸಂಬಂಧವನು ಆರೂ ಮೀರಲಾಗದು ನೋಡಾ
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ. ॥ ೨ ॥

೧೨೧೮

ದಯದಿಂದ ನೋಡಿ ಬಹು ವಿಚಾರವುಂಟು.
ಷಟ್ಸ್ಥಲಬ್ರಹ್ಮಚಾರಿ ತಾನು ಸಂಕಲ್ಪವನೇತಕ್ಕೆ ಮಾಡುವದು?.
ಗುರುವು ಹಿಡಿದು ಲಿಂಗವಾಯಿತ್ತು.
ಲಿಂಗ ಹಿಡಿದು ಜಂಗಮವಾಯಿತ್ತು.
ಜಂಗಮವು ಹಿಡಿದು ಪಾದೋದಕ ಪ್ರಸಾದವಾಯಿತ್ತು.
ಇವನರಿಯದೆ ಭಿನ್ನಭೇದವ ಮಾಡಲಾಗದು.
ಜಂಗಮನ ಕೊಂದವನಾದರು,
ಲಿಂಗವ ಭಿನ್ನವ ಮಾಡಿದವನಾದರು,
ಅವನ ಕಂಡು ಮನಸ್ಸಿನಲ್ಲಿ ನಿಂದಿಸಿದರೆ ವಿರಕ್ತನೆಂಬ
ಭಾವನೆಯಿಲ್ಲ.
ಭಕ್ತನ ಮಠವೆಂದು ಹೋದಲ್ಲಿ,
ಆ ಭಕ್ತನು ಎದ್ದು ನಮಸ್ಕರಿಸಿ,
ತನ್ನ ದಾಸಿಯರ ಕರದು 'ಪಾದಾರ್ಚನೆಯ ಮಾಡು' ಎಂದರೆ
ಆ ಪಾದಾರ್ಚನೆಯ ಮಾಡಿದ ಫಲವು
ಅರಿಗೆ ಮೋಕ್ಷವಾಗುವದು?
ಆ ತೊತ್ತಿನ ಬಸುರಲ್ಲಿ ಬಪ್ಪುದು ತಪ್ಪದು.
ತಾನು ವಿರಕ್ತನಾದ ಮೇಲೆ,
ಲಿಂಗವಿದ್ದವರಲ್ಲಿ ಲಿಂಗಾರ್ಪಿತವ ಬೇಡಲೇತಕ್ಕೆ?.

ತಾ ಬಿರಿದ ಕಟ್ಟಿ ಆಚರಿಸುವ ಶರಣನು
ತನಗೆ ಸಮಾಚಾರ ಸಮನಾಗವಲ್ಲಿ
ಹೊನ್ನ ಹಿಡಿದು ಬಡ್ಡಿ ವ್ಯವಹಾರವ ಮಾಡಿದ
ಜಂಗಮದಲ್ಲಿ ತೆಗೆದುಕೊಳ್ಳಲಾಗದು.
ಆ ಜಂಗಮವು ತ್ರಿವಿಧ ಪದಾರ್ಥದಲ್ಲಿದ್ದರೇನು?
ವಂಚನೆಯಿಲ್ಲದೆ ಸವದರೆ ಆತ ಮುಟ್ಟಿದ್ದರೊಳಗಿಲ್ಲ.
ಆತನ ಅಂತು ಇಂತು ಎನ್ನಲಾಗದು ಶರಣರಾಚರಣೆ.
ಶರಣ ತಾ ಬಿರಿದ ಕಟ್ಟಿ ಆಚರಿಸಿದಲ್ಲಿ
ತನ್ನಾಚರಣೆಗೆ ಕೊರತೆ ಬಂದರೆ
ಬಂದಿತ್ತೆಂಬ ಹೇಹ ಬೇಡ.
ಬಂದಾಗ ನರಳಿ,
ಬಾರದಾಗ ಸದಾಚಾರದಲ್ಲಿರ್ಪುದೆ ಶರಣನಾಚರಣೆ.
ಗುರು ಮೋಕ್ಷವಾಗಿಯಿಪ್ಪಾತನು
ಪಾಪಕ್ಕೆ ಸಂಬಂಧವಾಗಲು
ಆತನ ಕಂಡು ಮನದಲ್ಲಿ ಯಿವ ದ್ರೋಹಿಯೆಂದರೆ
ನನ್ನ ಬಿರಿದಿಂಗೆ ಕೊರತೆಯದಾಗುವುದಲ್ಲದೆ
ವಿರಕ್ತನೆಂಬ ಭಾವವೆನಗಿಲ್ಲ ನೋಡ.
ಮುಂದೆ ಕ್ರಿಯಾಚರಣೆ:
ವಿರಕ್ತನ ನಡೆಯೆಂತೆಂದೊಡೆ-
ಭಕ್ತಿಸ್ಥಲ ಸಂಬಂಧವಾದ ಭಕ್ತಂಗೆ
ಕ್ರೀಯವ ಕೊಡುವ ಆಚರಣೆಯೆಂತೆಂದೊಡೆ
ಆತ ತೆಗೆದು ಕೊಂಬ ಆಚರಣೆಯೆಂತೆಂದೊಡೆ
ಪಾದಾರ್ಚನೆಯ ಮಾಡಿದಲ್ಲಿ ಪಾದತೀರ್ಥ ಕೊಡುವರು.
ಅನ್ನವ ನೀಡಿದ ಹಂಗಿನಲ್ಲಿ ಪ್ರಸಾದವಂ ಕೊಡುವವರು
ಮುಯ್ಯಿಂಗೆ ಮುಯ್ಯನಿತ್ತುವಲ್ಲದೆ
ಮುಕ್ತಿಯೆಂಬುದು ಆವುದು ಹೇಳ?
ಭಕ್ತನಾಚರಣೆಯೆಂತೆಂದೊಡೆ-
ಆ ಗೃಹಕ್ಕೆ ಹೋದಲ್ಲಿ ತಾ ಲಿಂಗಪೂಜೆಯ ಮಾಡುತ್ತಿರ್ದರಾದರು
ತಾಯೆದ್ದು ಬಂದು ನಮಸ್ಕರಿಸುವದೆ ಭಕ್ತನ ಮಾರ್ಗ.
ಎನ್ನೊಳಗೆ ಲಿಂಗವು ಜಂಗಮವು ಉಂಟೆಂಬ
ಅವಿಚಾರದ ನುಡಿಯ ಕೇಳಲಾಗದು.
ಮುಂದೆ ಭಕ್ತನು ಜಂಗಮದ ಪಾದವ ಹಿಡಿದಲ್ಲಿ
ಪುಷ್ಪ ವಿಭೂತಿಯಿರಲು ಅಗ್ಘಣಿಯಿಲ್ಲದಿರಲು ಮರೆ[ದು]

ವ್ರತಸ್ಥಪಾದವ ಬಿಡಲಾಗದು
ಬಿಟ್ಟನಾದರೆ ಪಾದತೀರ್ಥಕ್ಕೆ ದೂರವಾಯಿತ್ತು.
ಲೋಕಾಚಾರದ ಭಕ್ತರು ಪಾದವ ಹಿಡಿಯಲು,
ಪುಷ್ಪ ವಿಭೂತಿಯಿರಲು ಅರ್ಘ್ಯಣೆಯಿಲ್ಲದಿರಲು
ಆ ಪಾದಕ್ಕೆ ನಮಸ್ಕಾರವ ಮಾಡಿ
ಪಾದವಂ ಬಿಟ್ಟು ಮತ್ತೆ ಹೋಗಿ
ಅರ್ಘ್ಯಣೆಯಂ ತಂದು ಪಾದತೀರ್ಥವಂ ಪಡೆದು
ಸವಿಸುವುದು ಭಕ್ತನಾಚರಣೆ.
ಜಂಗಮದೇವರ ಕರತಂದು
ವ್ರತಸ್ಥನ ಪಾದ ತೀರ್ಥವಂ ಪಡೆದಲ್ಲಿ
ಆ ಆ ದೇವರ ಸೆಜ್ಜೆಯಲ್ಲಿ ಲಿಂಗವಿಲ್ಲದಿರಲು
ಆ ದೇವರು ಮಜ್ಜನವ ನೀಡಿದ ಸ್ಥಾನ
ಅವರು ಮೂರ್ತಿಮಾಡಿರ್ದ ಸ್ಥಾನವ ನೋಡಿ
ಆ ವ್ರತಸ್ಥನು ಪ್ರಾಣವ ಕೊಡುವುದು.
ಭಕ್ತನು ಜಂಗಮವ ಕರಕೊಂಡು ಬಂದು
ಪಾದತೀರ್ಥಮಂ ಪಡೆದು
ಆ ಜಂಗಮದೇವನ ಸೆಜ್ಜೆಯಲ್ಲಿ ಲಿಂಗವಿಲ್ಲದಿರಲು
ಅವರು ಮಜ್ಜನವ ನೀಡಿದ ಸ್ಥಾನದಲ್ಲಿ
ಮೂರ್ತಿಗೊಂಡಿರ್ದ ಸ್ಥಾನದಲ್ಲಿ ಪರಾಂಬರಿಸಿ
ಆ ಲಿಂಗವು ಸಿಕ್ಕಿದರೆ ಕ್ರೀಯವ
ಜಂಗಮವು ಭಕ್ತರು ಸಲಿಸುವುದು
ಇಲ್ಲದಿದ್ದರೆ ಆ ಭಕ್ತರು ತೆಗೆದು ಕೊಂಬುದು.
ಆ ಜಂಗಮವು ತೆಗೆದು ಕೊಳಲಾಗದು.
ಇದು ಸಕಲ ಶರಣರಿಗೆ ಸನ್ಮತ.
ಸಂಕಲ್ಪವ ಮಾಡಲಾಗದು.
ಮುಂದೆ ಮಾರ್ಗಕ್ಕೆ ತಾನು ನಡೆದಲ್ಲಿ
ತನಗೆ ಮಾರ್ಗ ತಪ್ಪದು.
ತನಗೆ ವೊ[ಂ]ದು ವೇಳೆ ಲಿಂಗವು ಭಿನ್ನ ಭಿನ್ನವಾಗಲು
ಅದನು ಸಕಲ ಸಮಸ್ತ ಮೂರ್ತಿಗಳು ತಿಳಿದು ನೋಡಲು
ಅದರಲ್ಲಿ ಭಿನ್ನ ಭಿನ್ನವಾಗದೆಯಿರಲು
ಪರಾಂಬರಿಸಿ ಎಲ್ಲಾ ಮಾಹೇಶ್ವರರು ಎದ್ದು ಬಂದು
ಅದರೊಳಗೆ ಸಂಕಲ್ಪವಿಲ್ಲವೆಂದು
ನಮಸ್ಕಾರವ ಮಾಡುವುದು.

ಲಿಂಗವು ಭಿನ್ನವಾಗಲು
'ನಿಮ್ಮ ಗುರುಮಠಪೂರ್ವಕ್ಕೆ ಹೋಗಿ'ಯೆಂದು ಹೇಳಲು,
'ನಾನೊಲ್ಲೆ, ನಿಮ್ಮ ಪಾದದಲ್ಲಿಯೇಕಾರ್ಥವ
ಮಾಡಿಕೊಳ್ಳಿ'ಯೆಂದು ಹೇಳಲು,
ಆ ದೇವರ ಅಡ್ಡಬೀಳಿಸಿಕೊಂಡು
ವಸ್ತು ಹೋಗುವ ಪರಿಯಂತರವಲ್ಲಿ ಕಾದಿರುವುದು.
ಅಥ[ವ] ಒಂದು ವೇಳೆ ಮೋಸ ಬಂದರೆ
ಅಲ್ಲಿರ್ಪ ಭಕ್ತ ಮಾಹೇಶ್ವರರ ಬಿಡುವುದು.
ಧರ್ಮಾಧರ್ಮದಲ್ಲಿ ವಿಚಾರಿಸದೆ
ಆ ಭಕ್ತನು ಜಂಗಮ ಮುಟ್ಟಿದ ಗದ್ದುಗೆಯಲ್ಲಿ ಮೂರ್ತಿಮಾಡಿ
'ಪ್ರಸಾದಕ್ಕೆ ಶರಣಾರ್ಥಿ'ಯೆನಲು
ನೀಡಲಾಗದೆಂಬುದು ಆಚರಣೆ.
ಆದ ನೀಡಿಯಿಟ್ಟರು ಮುಗಿವಲ್ಲಿ ಭಕ್ತನ ಪ್ರಸಾದ ಹೆಚ್ಚಾದರೆ
'ಅಯ್ಯೋ ನನ್ನ ಪ್ರಸಾದ ಹೆಚ್ಚಾಯಿ'ತೆಂದು ಹೇಳಿದರೆ
ಆ ಪ್ರಸಾದವನು ನೀಡಿಸಿ ಕೊಂಬ ಜಂಗಮಕ್ಕೆ ಆಚರಣೆ ಸಲ್ಲದು.
ವ್ಯಾಪಾರವ ಕೊಟ್ಟು ವ್ಯಾಪಾರವನೊಪ್ಪಿಸಿಕೊಂಡರೆ
ನಾವು ಪ್ರಸಾದವ ತೆಗೆದುಕೊಂಬುದು ಆಚರಣೆ.
ಹೊನ್ನು ಹೆಣ್ಣು ಮಣ್ಣು ತ್ರಿವಿಧದಲ್ಲಿ ವಂಚನೆಯಿಲ್ಲದಿರ್ಪಡೆ
ಅವನ ಪ್ರಸಾದವನು ತೆಗೆದುಕೊಂಬುದು
ಇದು ಜಂಗಮದಾಚರಣೆ.
ಗುರುದೀಕ್ಷೆಯಿಲ್ಲದವನು
ಲಿಂಗಪೂಜೆಯ ಮಾಡಿದರೆ
ಪಾದೋದಕ ಪ್ರಸಾದವ ಕೊಂಡರೆ
ಸಹಜವಲ್ಲದೆ ಸಾಧ್ಯವಾಗದು.
ಬಿಟ್ಟರಾದರೆ ಅವರಿಗೆ ಮೋಕ್ಷವಿಲ್ಲವು.
ಜಂಗಮವು ಆವ ವರ್ತನೆಯಲ್ಲಿ ನಡಕೊಂಡರು
[ಅಸ]ತ್ತು 'ಬೇಡ ಹೋಗಿ'ಯೆಂದರೆ
'ನಾನು ಅರಿಯದೆ ಮಾಡಿದೆ'ನೆಂದರೆ
ಅವನನೊಪ್ಪಿಕೊಂಬುದು.
ಇದಕ್ಕೆ ಕಲ್ಪಿತ ಪಾಪಪುಣ್ಯಕ್ಕೆ ಒಳಗಾದವರು
ಷಟ್ಸ್ಥಲಕ್ಕೆ ಮಾತ್ರ ಆಗದು.
ಭಕ್ತಂಗೆ ಪ್ರಸಾದವ ಕೊಡುವ ಆಚರಣೆಯೆಂತೆಂದೊಡೆ
ದೀಕ್ಷೆಯಿಲ್ಲದೆ ಶಿವಭಕ್ತನ ಗೃಹಕ್ಕೆ ಹೋಗಿ

'ಭಿಕ್ಷೆ'ಯೆಂದೆನಾದರೆ ಜಿಹ್ವೆಯ ಮುಕ್ಕುಳಿಸಿದರೆ ಪಾತಕ ನೋಡ.
ಗುರುವಚನ ಪ್ರಮಾಣದಲ್ಲಿ
ನಾನು ಗುರುಮುಖವ ಹಿಡಿದಲ್ಲಿ
ಶಿವಮಂತ್ರಸ್ಮರಣೆಯನು ಶಿವಾನುಭಾವಿಗಳ ಸ್ಥಾನದಲ್ಲಿ
ಬೆಸಗೊಂಬುದೆ ಶುದ್ಧವಾಯಿತ್ತು.
ಇಲ್ಲದಿದ್ದರೆ ಶುದ್ಧವಿಲ್ಲವು.
ಶಿವಶರಣನ ಜ್ಞಾನವೆಂತೆಂದೊಡೆ-
ನೀರಮೇಲಣ ತೆಪ್ಪದಂತಿರಬೇಕು,
ಕ್ಷೀರದೊಳಗಣ ಘೃತದಂತಿರಬೇಕು,
ಕೆಸರಿನೊಳಗಣ ತಾವರೆ ಪ್ರಜ್ವಲಿಸಿದಂತಿರಬೇಕು.
ಲಿಂಗದೊಳಗೊಡವೆರದರೆ
ಆರು ಆರಿಗೆಯು ಕಾಣದಂತೆ ನೋಡ.
ಅಂದಳದೊಳಗೆ ಹೋಗುವವನ ಹಜ್ಜೆಯ ಕಂಡವರಾರು ಹೇಳ?.
ಮಾತಿನಲ್ಲಿ ಮಹಾಜ್ಞಾನಿಗಳೆಂದರೊಪ್ಪುವರೆ?
ಮಹಾಲಿಂಗದ ಬೆಳಗಿನಲ್ಲಿ,
ತನ್ನ ನಡೆಯನೊಡವೆರದಿಪ್ಪ ಮಹಿಮಂಗೆ
ದುಃಖವಿಲ್ಲ ನೋಡ ಭಕ್ತಿಸ್ಥಲವಾದುದು.
ಭಕ್ತನ ಮಾರ್ಗವೆಂತೆಂದೊಡೆ-
ತನ್ನ ಗೃಹಕ್ಕೆ ಜಂಗಮವು ಹೋದಲ್ಲಿ ಶುದ್ಧವಲ್ಲದೆ
ಇದನರಿಯದೆ ಕಾಡದೈವಕ್ಕೆಲ್ಲ ಹರಕೆಯ ಮಾಡಿ
ಆ ದೈವದ ಹೆಸರಿನಲ್ಲಿ ಜಂಗಮವ ಕರೆತಂದು
ಉಣಲಿಕ್ಕಿದೆನಾದರೆ ಕಾರಿದ ಕೂಳಿಗಿಂದ ಕನಿಷ್ಟ ಕಾಣ.
ಅನ್ಯ ದೈವದ ಪೂಜೆಯಿಲ್ಲದಾತನೆ ಶಿವಭಕ್ತ ನೋಡ.
ತನ್ನ ಗುರುವು ಹಸ್ತಕ ಮಸ್ತಕ ಸಂಯೋಗವ ಮಾಡಿ,
ಲಿಂಗವ ಧರಿಸಿದ ಬಳಿಕ ಲಿಂಗವಲ್ಲದೆ ಅನ್ಯಪೂಜೆಯೇತಕ್ಕೆ?.
ಇದನ[ರಿ]ದರಿದು ಮಾಡಿದನಾದರೆ
ಪಾತಕವಲ್ಲದೆ ಮತ್ತಿಲ್ಲ ನೋಡ.
ಮೋಕ್ಷವೆಂಬುದೆಂದಿಗೂ ಇಲ್ಲ ನೋಡ.
ಹುಟ್ಟುಗೆಟ್ಟು ಬಟ್ಟಬಯಲಾದವನಿಗೆ ದುಃಖವುಂಟೆ?.
ಲಿಂಗದಲ್ಲಿ ನಿರ್ಭಯಲಾದವಂಗೆ ಸಂಕಲ್ಪವುಂಟೆ?.
ಮಹಾಜ್ಞಾನಿಗೆ ಕತ್ತಲೆಯುಂಟೆ?.
ಮಹಾಪ್ರಸಾದಿಗೆ ಸಂಕಲ್ಪಮುಂಟೆ?.
ಜ್ಞಾನಿಗಳಿಗೆನ್ನವರು ತನ್ನವರೆಂಬ ಭೇದಮುಂಟೆ?.

ಸದ್ಭಕ್ತಿಯುಳ್ಳಾತನು ತನ್ನ ಲಿಂಗವ ಪೂಜಿಸಿ
ಅನ್ಯರಮನೆಯಲ್ಲಿ ಭೋಗದಲ್ಲಿದ್ದನಾದರೆ
ಶ್ವಾನನ ಬಸುರಲ್ಲಿ ಬರುವು[ದು] ತಪ್ಪದು.
ಅರೆಭಕ್ತರಾದವರ ಗೃಹದಲ್ಲಿ ಹೋಗಿ ಅನ್ನವ ಮುಟ್ಟಿದರಾದರೆ,
ಅವನಿಗೆ ಗುರುವಿಲ್ಲ.
ಮುಕ್ತಿಯೆಂಬುದು ಎಂದೆಂದಿಗೂ ಇಲ್ಲ ನೋಡ,
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ. ॥ ೩ ॥

೧೨೧೯

ನೀರು ನೇಣಾದಿ ದುರ್ಮರಣದಲ್ಲಿ ಹೋದರುಯೆಂಬ,
ನುಡಿಗಳನು ಮಾನವರುಯೆಂದರೆ,
ಅವರ ಸೊಲ್ಲ ಕೇಳಲಾಗದು.
ಶಿವ ಕಳುಹಿಸಿದೊಡೆ ಬಹುದಲ್ಲದೆ ತನ್ನಿಚ್ಛೆಯಲ್ಲಿ ಬರುವದುಂಟೆ?.
ಇದ ಕಿವಿಗೊಟ್ಟು ಕೇಳುವ ಪಾತಕರ ನುಡಿಯ ಕೇಳಲಾಗದು.
ಆ ಶಿವನು ಕಳುಹಿಸಿದರೆ ಬಹುದಲ್ಲದೆ,
ತನ್ನಿಚ್ಛೆಯಲ್ಲಿಪೊಂ[ದಿ] ಬರುವುದುಂಟೆ?,
ಇದ ಕೇಳಲಾಗದು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.॥ ೪ ॥

೧೨೨೦

ಹೊನ್ನು ಹೆಣ್ಣು ಮಣ್ಣು ತನಗೆ ಸಂಬಂಧವೆಂದು ಹೇಳಿಕೊಂಬರು
ತನಗೆ ಸಂಬಂಧವೇನು?.
ಬ್ರಹ್ಮಚಾರಿಯಾದ ಮೇಲೆ [ಬಿ]ಡದಾಚರಿಸಿದರೆ.
ಮುಕ್ತಿಸ್ಥಲ ದೂರವಾಯಿತ್ತು.
ಅದು ಇದ್ದರೇನು? ಪರೋಪಕಾರವಿರಬೇಕು.
ಜಂಗಮಕ್ಕೆ ಹೆಣ್ಣಿನಲ್ಲಿ ಸಿಕ್ಕಿದರೆ
ಅವರಿಗೆ ಹಿಂದಣ ಸಂಬಂಧವಿದ್ದ ಕಾರಣ ದೊರಕಿತ್ತು.
ಆವ ನಡೆಯಲ್ಲಿ ನಡೆದರೇನು?
ಕಂಡು ಮನದಲ್ಲಿ ಜರಿದೆನಾದರೆ ಜಂಗಮವೆನಗಿಲ್ಲ.
ಪಾದೋದಕ ಪ್ರಸಾದಕ್ಕೆ ದೂರವಾಯಿತ್ತು.
ನಿಮ್ಮನರಿದು ನಡೆದಾತಂಗೆ ಸಾಧನೆಯಾಗುವುದಲ್ಲದೆ,

ಬೆಳಗಿನ ಕತ್ತಲೆಯ ಕಂಡು ಕತ್ತಲೆಯಾಯಿತ್ತೆಂದು,
ದೀಪವ ಮುಟ್ಟಿಸಲೆಂದು,
ತನ್ನೊಳಗಿರ್ದ ಜ್ಯೋತಿಯ ಬೆಳಗಮಾಡಿ,
ಜ್ಞಾನವನುದ್ಧರಿಸಿರ್ಪ ಶರಣನ ಹೆಜ್ಜೆಯ ತಿಳಿವರೆ?
ನೋಡಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ. ॥ ೫ ॥

# ಇಮ್ಮಡಿ ಗುರುಸಿದ್ಧಸ್ವಾಮಿಗಳ ಶೂನ್ಯಮಂತ್ರಗೋಪ್ಯ

೧೨೨೧

ಶ್ರೀಮತ್ಸ್ವಸ್ತಿ ಸಮಸ್ತ ಭುವನಭವನಾರಂಭ
ಮೂಲಸ್ತಂಭಾಯಮಾನ
ಸಕಲ ಜಗದುಪಾದಾನಕಾರಣ ಮಾಯಾತರಂಗ
ಸಮುದ್ರಾಯಮಾನ
ಮಾಹನೀಯ ಮುಖ್ಯ ಹಂ ಪ್ರಕಾಶ ಶರೀರ
ಭೂತಜಗನ್ನಿಚಯ ಲೀಲಾಸೂತ್ರಧಾರಿ ಶರಣಭವ
ಶಾಶ್ವತ ಕೃಪಾಕರ ಶಂಕರ ಶಿವಲಿಂಗ ಲಿಂಗತ್ರಯಾಂತರಂಗ. ॥ ೧ ॥

೧೨೨೨

ಭೇದಾಭೇದಂಗಳೇನುವಿಲ್ಲದಂದು ಶುದ್ಧಾದ್ವೈತ
ಪ್ರಭಾಪುಂಜ ರಂಜಿತ ನಿರಂಜನ ಶೂನ್ಯ
ನಿಷ್ಕಳ ಸಕಳ ಸಕಳನಿಷ್ಕಳ ಕಳಾವಿಶಿಷ್ಟ ಸಗುಣ ನಿರ್ಗುಣಾತ್ಮಕ
ಪರಮ ಶಿವಲಿಂಗ ಸೂರ್ಯೇಂದು ಪಾವಕ ಮಂಡಲತ್ರಯ
ಮಧ್ಯಸ್ಥಿತ ದಹರಾಕಾಶಸ್ಥ ಶುದ್ಧ ಮನು ವಿಭ್ರಾಜಿತಾಂಗ. ॥ ೨ ॥

೧೨೨೩

ಅಂಗಾತ್ಮ ಪ್ರಾಣೇಂದ್ರಿಯ ವಿಷಯ ತೃಪ್ತಿಗಳು
ಲಿಂಗಾತ್ಮಕವೆಂದು ನಿರೂಪಿಸಿದೆಯಯ್ಯ.
ನೀನವಿರಳ ಪರಂಜ್ಯೋತಿ ಸ್ವರೂಪನಾದುದರಿಂ
ನಿರುಪಾಧಿಕ ನಿರಾವರಣ ನಿರಂಜನನೆನಿಸಿರ್ಪೆಯಯ್ಯ,
ಪರಮ ಶಿವಲಿಂಗ ಪರಾಪರ ವೈಭವೋತ್ತುಂಗ. ॥ ೩ ॥

೧೨೨೪

ಸ್ಥೂಲ ಸೂಕ್ಷ್ಮ ಕಾರಣಾಂಗತ್ರಯದಲ್ಲಿ
ಸ್ಥೂಲ ಸೂಕ್ಷ್ಮ ಕಾರಣ ಲಿಂಗವಾಗಿ ನಿಂದೆಯಯ್ಯ.
ಮಹೇಶ್ವರ ಸದಾಶಿವ ಪರಮ ಶಿವಲಿಂಗ ದಿವ್ಯನಾಮ
ಷಟ್ಸ್ಥಲಬ್ರಹ್ಮ ಹೃನ್ಮಂಡಲ ವಿರಾಜಿತ
ಶುದ್ಧ ಪ್ರಸಾದರೂಪ ಶಿವಲಿಂಗ ನಿರಂತರಾಂತರಂಗ. ॥ ೪ ॥

೧೨೨೫

ಅಮರ್ದುಗ್ಗೆಯನನವಗ್ರಹಿಸಿದ ಸೂರ್ಯನಗ್ನಿಯಲ್ಲಿಯಡಗಲಾ-
ಯಗಿನಿಯ ಕಟ್ಟಿರುಹೆ ನುಂಗಿ
ಮಹೇಂದ್ರನ ವಾಹನವಾದುದದನೇನೆಂದುಸಿರ್ವೆನಯ್ಯ,
ಪರಮ ಶಿವಲಿಂಗಫಲಿತ ದಿವ್ಯಪ್ರಸಂಗ. ॥ ೫ ॥

೧೨೨೬

ಸ್ವಸ್ತಿ ಶ್ರೀಮನ್ನಿರಂಜನಶೂನ್ಯ ನಿಷ್ಕಳ ಸಕಳ ಸದಾಶಿವ
ಪಂಚಬ್ರಹ್ಮ ಪರಿಸ್ಫುಟ
ಪರತರ ಪರಂಜ್ಯೋತಿರಾಕಾರ
ಪಾಹಿಮಾಂ ಪ್ರಣವೋತ್ತಮಾಂಗ
ಪರಮ ಶಿವಲಿಂಗ ಕೃಪಾರಸತರಂಗ
ಪಾರ್ವತೀ ಪ್ರಾಣಲಿಂಗ ಪಾವನಾಕಾರ
ಫಣೇಶ್ವರ ಭೂಷಣ ಸತ್ಯವೇದಾಂತ ಭಾಷಣ. ॥ ೬ ॥

೧೨೨೭

ಗುಣ ರೂಪಂಗಳ ಮೀರಿ
ಶಿಷ್ಯಜನ ಮನೋಜ್ಞಾನಾಂಧಕಾರಕ್ಕೆ ಸೂರ್ಯೋದಯನಾಗಿ,
ಲಲಾಟಲೋಚನ ಚಂದ್ರಕಳಾ ದಶಭುಜಂಗಳಂ
ಜ್ಞಾನ ಶಾಂತಿ ಬಾಹುದ್ವಯಂಗಳಲ್ಲಿ ಪುದುಂಗೊಳಿಸಿ,
ಭುವನ ಹಿತಾರ್ಥಮಾಗಿ ದೇಶಿಕಸ್ವರೂಪಮಂ ತಾಳ್ದು,
ದೀಕ್ಷಾ ಶಿಕ್ಷಾ ಸ್ವಾನುಭಾವಾತ್ಮಕನಾಗಿ ಚರಿಪ
ಷಟ್ಸ್ಥಲಬ್ರಹ್ಮ ಪ್ರಬೋಧಕ ಪ್ರಭು ಪ್ರಸನ್ನಮೂರ್ತಿ
ಪರಮ ಶಿವಲಿಂಗ ಭಕ್ತಜನಾಂತರಂಗ

ಮನ್ಮಾನಸಾಂಭೋಜ ಭೃಂಗ
ತವ ಪಾದ ಪಲ್ಲವಂಗಳೆ
ಮನೋವಚನಕಾಯಂಗಳಿಂ ತ್ರಿವಾರಂ ಶರಣು ಶರಣು. ॥ ೭ ॥

೧೨೨೮

ಸಚ್ಚಿದಾನಂದ ಲಕ್ಷಣಮಾದುದೊಂದೆ ಬ್ರಹ್ಮವು
ಮಹದಾದಿ ತತ್ವಂಗಳ್ಗೀ ಸ್ಥಾನಮಾದುವರಿಂ
ಸ್ಥಲಮನಕೆ ಲಯಭೂತವಹುದರಿಂ-
ಮಿದೆಸ್ಥಲಂ ತದೇವ ನೀನೆ ಗಡ
ಪರಮ ಶಿವಲಿಂಗ ಪ್ರಣವಾಂತರಂಗ
ನಿಗಮೋತ್ತಮಾಂಗ ಸಂಸ್ತವೋತ್ತುಂಗ. ॥ ೮ ॥

೧೨೨೯

ಮತ್ತಂ,
ಸ್ಥಲಮೊಂದೆ ತನ್ನ ಶಕ್ತಿಯ ಮಿಸುಕಿನಂಗಸ್ಥಲ
ಲಿಂಗಸ್ಥಲಂಗಳೆಂದೆರಡಾಯ್ತಾ-
ಯಂಗಸ್ಥಲಮೆ ತ್ಯಾಗಾಂಗ ಭೋಗಾಂಗ ಯೋಗಾಂಗಮೆಂದು
ಮೂದೆರನಾಗಲೊಡನಾ
ಲಿಂಗಸ್ಥಲಮೆ ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗಮೆಂದು
ಮೂದೆರನಾಗಲೊಡನಾ
ಅಂಗ ಲಿಂಗೈಕಮಯಂ ನೀನೆಯಲಾ
ಪರಮ ಶಿವಲಿಂಗ ಪರಂಜ್ಯೋತಿರಂಗ
ಪಾವನ ಕೃಪಾರಸತರಂಗ ಚಿದಂಗಸಂಗ. ॥ ೯ ॥

೧೨೩೦

ಮತ್ತಮಾಯಂಗಸ್ಥಲತ್ರಯದಲ್ಲೀ ತರದಿಂ
ತ್ಯಾಗಾಂಗಮೆ ಭಕ್ತ ಮಾಹೇಶ್ವರರೆಂದೆರಳ್ತೆರಂ.
ಭೋಗಾಂಗಮೆ ಪ್ರಸಾದಿ ಪ್ರಾಣಲಿಂಗಿಯೆಂದೆರಳ್ತೆರಂ.
ಯೋಗಾಂಗಮೆ ಶರಣೈಕ್ಯರೆಂದೆರಳ್ತೆರಂ.
ಇವಂ ಲೆಕ್ಕಿಸಲಾರೊಡಲಾಯ್ತದೆ ತದೀಯ ಮೂರ್ತಿಯಯ್ಯ,

ಪರಮ ಶಿವಲಿಂಗ ಪರಾಪರೋತ್ತುಂಗ
ಪಯೋಧಿವರ ನಿಷಂಗ. ॥ ೧೦ ॥

೧೨೩೧

ಬಳಿಕಮಾ ಲಿಂಗಸ್ಥಲತ್ರಯದಲ್ಲಿ
ಇಷ್ಟಲಿಂಗಮೆ ಆಚಾರಲಿಂಗ ಗುರುಲಿಂಗಮೆಂದುಭಯಂ.
ಪ್ರಾಣಲಿಂಗಮೆ ಶಿವಲಿಂಗ ಜಂಗಮಲಿಂಗಮೆಂದುಭಯಂ.
ಭಾವಲಿಂಗಮೆ ಪ್ರಸಾದಲಿಂಗ ಮಹಾಲಿಂಗಮೆಂದುಭಯಮಿವಂ
ಗಣಿಸಲರುವೆಸರಲಿಂಗಮಾಗಲದು ನೀನೆಯಯ್ಯ,
ನಿಗಮಾಂತ ಭಾಸ್ವರ ನೀಲರುಚಿ ಕಂಧರ
ಪರಮ ಶಿವಲಿಂಗೇಶ್ವರಾ. ॥ ೧೧ ॥

೧೨೩೨

ಮತ್ತಂ,
ಮೊದಲಂಗ ಷಟ್ಸ್ಥಲದಲ್ಲಿ ಭಕ್ತಸ್ಥಲವೊಂದೆ
ಪಿಂಡ ಪಿಂಡಜ್ಞಾನ ಸಂಸಾರಹೇಯ
ಗುರುಕರುಣ ಲಿಂಗಧಾರಣ ವಿಭೂತಿ ರುದ್ರಾಕ್ಷಿ ಪಂಚಾಕ್ಷರಿ
ಭಕ್ತೋಭಯ ತ್ರಿವಿಧಸಂಪಚ್ಚತುರ್ವಿಧಸಾರಸೋಪಾಧಿ
ನಿರುಪಾಧಿ ಸಹಜದಾನಂಗಳೆಂದು ಪದಿನೈದು ತೆರನಲ್ಲಿ
ನೀನೆ ಆಚಾರಲಿಂಗಮಾಗಿ ನೆಲಸಿರ್ಪೆಯಯ್ಯ,
ಚಿದ್ಗಗನಚಂದ್ರ ಚಿರಂತನ ಪ್ರಮಥೇಂದ್ರ
ಚಿತ್ತಜಗಜ ಮೃಗೇಂದ್ರ
ಚಿರಾಯುರ್ದಾಯಿ ಪರಮ ಶಿವಲಿಂಗೇಂದ್ರಾ. ॥ ೧೨ ॥

೧೨೩೩

ಮತ್ತಮಾ
ಮಾಹೇಶ್ವರಸ್ಥಲಮೆ,
ಮಾಹೇಶ್ವರ ಲಿಂಗನಿಷ್ಠಾ ಪೂರ್ವಾಶ್ರಯನಿರಸನ
ವಾಗದ್ವೈತನಿರಸನಾಹ್ವಾನನಿರಸನ
ಅಷ್ಟ [ತನು] ಮೂರ್ತಿನಿರಸನ ಸರ್ವಗತನಿರಸನ
ಶಿವಜಗನ್ಮಯ ಭಕ್ತದೇಹಿಕಲಿಂಗಂಗಳೆಂದೊಂಬತ್ತಯ್ಯಾ

ಸ್ಥಲಮೆ ಭವದೀಯಾಂಗಮಯ್ಯ,
ಭಕ್ತವತ್ಸಲ ಭವಾನೀವಲ್ಲಭ
ಪರಮ ಶಿವಲಿಂಗೇಶ್ವರಾ. ॥ ೧೩ ॥

೧೨೩೪

ಬಳಿಕ್ಕಂ
ಪ್ರಸಾದಿಸ್ಥಲಮೆ,
ಪ್ರಸಾದಿಸ್ಥಲ ಗುರುಮಹಾತ್ಮೆಸ್ಥಲ
ಲಿಂಗಮಹಾತ್ಮೆಸ್ಥಲ ಜಂಗಮಮಹಾತ್ಮೆಸ್ಥಲ
ಭಕ್ತಮಹಾತ್ಮೆಸ್ಥಲ ಶರಣಮಹಾತ್ಮೆಸ್ಥಲ
ಪ್ರಸಾದಮಹಾತ್ಮೆಸ್ಥಲಂಗಳೆಂದೇಳ್ತೆರನಾಗಿರ್ಪುದದಮುಂ
ನಿನ್ನೊಡಲಾದಪುದಯ್ಯ,
ಷಟ್ತ್ರಿಂಶ ತತ್ವಸಾರ ಸದ್ಭಕ್ತ ಹೃದಯಾಬ್ಜಸೂರ
ಪರಮ ಶಿವಲಿಂಗೇಶ್ವರಾ. ॥ ೧೪ ॥

೧೨೩೫

ಇನ್ನು
ಪ್ರಾಣಲಿಂಗಿಸ್ಥಲಮೆ,
ಪ್ರಾಣಲಿಂಗಿಸ್ಥಲ ಪ್ರಾಣಲಿಂಗಾರ್ಚನೆಸ್ಥಲ
ಶಿವಯೋಗಸಮಾಧಿಸ್ಥಲ ಲಿಂಗನಿಜಸ್ಥಲಾಂಗ-
ಲಿಂಗಸ್ಥಲಂಗಳೆಂದೈದೆರನದುಂ
ಸ್ವಕೀಯ ಕಾಯಮಾಮುದಯ್ಯ,
ಯೋಗೀಂದ್ರ ಮನೋಂಬುಜಶಯ್ಯಾ
ನಿರ್ಮಾಯ ನಿರಂಜನ ಪರಮ ಶಿವಲಿಂಗೇಶ್ವರಾ. ॥ ೧೫ ॥

೧೨೩೬

ಮತ್ತೆಯುಂ
ಶರಣಸ್ಥಲಮೆ,
ಶರಣಸ್ಥಲ ತಾಮಸನಿರಸನಸ್ಥಲ
ನಿರ್ದೇಶಸ್ಥಲ ಶೀಲಸಂಪಾದನೆಸ್ಥಲಂಗಳೆಂದು ನಾಲ್ದೆರನಾದುದಮುಂ
ನಿಜತನುವೆನಿಸಿತ್ತು ಪರಮ ಶಿವಲಿಂಗ, ಪುಂಗವ
ತುರಂಗ ಕಾರುಣ್ಯಾಮೃತಪೂರಿತಾಪಾಂಗ. ॥ ೧೬ ॥

೧೨೩೭

ಪುನರಪಿ
ಐಕ್ಯಸ್ಥಲಮೆ,
ಐಕ್ಯಸ್ಥಲ ಸರ್ವಾಚಾರಸಂಪತ್ತುಸ್ಥಲೇಕಭಾಜನಸ್ಥಲ
ಸಹಭೋಜನಸ್ಥಲಂಗಳೆಂದು ನಾಲ್ಕೆರನಾಯಿತು
ನಿರಂಜನ ಪರಂಜ್ಯೋತಿಸ್ವರೂಪ,
ಪರಮ ಶಿವಲಿಂಗೇಶ್ವರ ಸದ್ಗುಣಕಲಾಪ. ॥ ೧೭ ॥

೧೨೩೮

ಇಂತು
ಭಕ್ತನ ಪದಿನೈದುಂ
ಮಾಹೇಶ್ವರನೊಂಬತ್ತುಂ
ಪ್ರಸಾದಿ ಏಳುಂ
ಪ್ರಾಣಲಿಂಗಿಯೈದುಂ
ಶರಣನ ನಾಲ್ಕುಮೈಕ್ಯನ ನಾಲ್ಕುಮಿದುಂ
ನಿನ್ನ ತೂರ್ಯಕಳೇವರಮಯ್ಯ. ಸಮಷ್ಟಿ
ಯಿಂತೀಯಂಗಸ್ಥಲಂಗಳು ನಾಲ್ವತ್ತನಾಲ್ಕುಂ ಕೂಡಿ
ನಿನ್ನ ಪೂರ್ಣಾಂಗಮಾದುದಯ್ಯಾ,
ನಿರಂತರ ಪರಬ್ರಹ್ಮ ಪರಮ ಶಿವಲಿಂಗೇಶ್ವರಾ. ॥ ೧೮ ॥

೧೨೩೯

ಇದಕ್ಕೆ ತತ್ತ್ವಮಸಿ ಎಂಬ ಮಹಾವಾಕ್ಯಮಿಲ್ಲಿ
ತ್ವಮೆನಲಾರಂಗಂ ತತ್ ಎನಲಾರ್ಲಿಂಗಮಸಿ
ಯೆನಲಾರ್ಬಕುತಿ,
ಈ ಮೂದೆರನೊಂದಾಲಗದು ನೀನೆ
ಅಪ್ರತರ್ಕ್ಯ ಪ್ರಣವಾತ್ಮಕ ಪರಮ ಶಿವಲಿಂಗ
ಮಲ್ಲಿಕಾ ಕರ್ಪೂರ ಧವಲಾಂಗ. ॥ ೧೯ ॥

ಇತ್ಯಂಗಸ್ಥಲಮುಕ್ತಂ

೧೨೪೦

ಮತ್ತಮಾ
ಇಷ್ಟಲಿಂಗಮೆ, ಆಚಾರಲಿಂಗ ಗುರುಲಿಂಗಮೆಂದೆರಳ್ತೆರನಾ
ಪ್ರಾಣಲಿಂಗಮೆ, ಶಿವಲಿಂಗ ಜಂಗಮಲಿಂಗಮೆಂದೆರಳ್ತೆರನಾ
ಭಾವಲಿಂಗಮೆ, ಪ್ರಸಾದಲಿಂಗ ಮಹಾಲಿಂಗಮೆಂದೆರಳ್ತೆರನೀ
ಮೂರೊಂದುಗೂಡಲೆಂದಿನಂತದ್ವೈತರೂಪ ನೀನೇ ಅಯ್ಯಾ,
ಪರಮ ಶಿವಲಿಂಗ ಪ್ರಕಟಿತ ಭಕ್ತ ಸುಖಾನುಸಂಗ. ॥ ೨೦ ॥

೧೨೪೧

ಮತ್ತೆಯುಮಾಚಾರಲಿಂಗಮೆ,
ದೀಕ್ಷಾಗುರು ಶಿಕ್ಷಾಗುರು ಜ್ಞಾನಗುರು
ಕ್ರಿಯಾಲಿಂಗ ಭಾವಲಿಂಗ ಜ್ಞಾನಲಿಂಗ
ಸ್ವಯ ಚರ ಪರಂಗಳೆಂದೊಂಬತ್ತಾಗಿರ್ಪುದಮು ನೀನೇ ಅಯ್ಯಾ,
ನಿರುಪಮಚರಿತ್ರ ತತ್ವಮಣಿಸೂತ್ರ
ಪರಮ ಶಿವಲಿಂಗೇಶ್ವರಾ. ॥ ೨೧ ॥

೧೨೪೨

ಬಳಿಕ್ಕಂ
ಗುರುಲಿಂಗಮೆ,
ಕ್ರಿಯಾಗಮ ಭಾವಾಗಮ ಜ್ಞಾನಾಗಮ
ಸಕಾಯ ಅಕಾಯ ಪರಕಾಯ
ಧರ್ಮಾಚಾರ ಭಾವಾಚಾರ ಜ್ಞಾನಾಚಾರಗಳೆಂ-
ದೊಂಬತ್ತಾಗಿರ್ಪುದಮುಂ
ನೀನೆ ಅಯ್ಯಾ
ನಿಶ್ಯಂಕ ನಿಷ್ಕಳಂಕ ಶಂಕರ ಪರಮ ಶಿವಲಿಂಗೇಶ್ವರಾ. ॥ ೨೨ ॥

೧೨೪೩

ಬಳಿಕ್ಕಂ
ಶಿವಲಿಂಗಸ್ಥಲಮೆ,
ಕಾಯಾನುಗ್ರಹ ಇಂದ್ರಿಯಾನುಗ್ರಹ ಪ್ರಾಣಾನುಗ್ರಹ
ಕಾಯಾರ್ಪಿತ ಕರಣಾರ್ಪಿತ ಭಾವಾರ್ಪಿತ

ಶಿಷ್ಯ ಶುಶ್ರೂಷಾ ಸೇವ್ಯಂಗಳೆಂದೊಂಬತ್ತಾಮುದದ
ತ್ವದೀಯ ರೂಪವಯ್ಯಾ,
ಪರಮ ಶಿವಲಿಂಗ ಪರಾಪರ ಪಾಣಿಕುರಂಗ. ॥ ೨೩ ॥

೧೨೪೪

ಬಳಿಕ್ಕಂ
ಜಂಗಮಲಿಂಗಮೆ,
ಜೀವಾತ್ಮಾಂತರಾತ್ಮ ಪರಮಾತ್ಮ ನಿರ್ದೇಹಾಗಮ
ನಿರ್ಭಾವಾಗಮ ನಷ್ಟಾಗಮಾದಿಪ್ರಸಾದಂತ್ಯ ಪ್ರಸಾದಿ
ಸೇವ್ಯಪ್ರಸಾದಿಗಳೆಂಬೊಂಬತ್ತು ನಿಜಸ್ವರೂಪಯ್ಯ,
ಪರಮ ಶಿವಲಿಂಗ ಪಾವನಚರಿತ್ರ,
ಜಿತ ಸೂರ್ಪಕ ಭಾವಜಭಂಗ. ॥ ೨೪ ॥

೧೨೪೫

ಮರಲ್ದು
ಪ್ರಸಾದಲಿಂಗಮೆ,
ದೀಕ್ಷಾ ಪಾದೋದಕ
ಶಿಕ್ಷಾ ಪಾದೋದಕ
ಜ್ಞಾನ ಪಾದೋದಕ
ಕ್ರಿಯಾನಿಃಷ್ಪತ್ತಿ ಭಾವನಿಃಷ್ಪತ್ತಿ ಜ್ಞಾನನಿಃಷ್ಪತ್ತಿ
ಪಿಂಡಾಕಾಶ ಬಿಂದ್ವಾಕಾಶ ಮಹದಾಕಾಶ
ಕ್ರಿಯಾಪ್ರಕಾಶ ಭಾವಪ್ರಕಾಶ ಜ್ಞಾನಪ್ರಕಾಶಂಗಳೆಂಬೀ ಪನ್ನೆರಡುಂ
ನಿನ್ನ ಸ್ವರೂಪಮಾಮುದಯ್ಯಾ,
ಪರಮ ಶಿವಲಿಂಗ ಪ್ರಣವಾಂತರಂಗ. ॥ ೨೫ ॥

೧೨೪೬

ಮತ್ತಂ
ಮಹಾಲಿಂಗಮೆ,
ಸ್ವೀಕೃತಪ್ರಸಾದ ಶಿಷ್ಟೋದನ ಚರಾಚರಲಯ
ಭಾಂಡ ಭಾಜನಾಂಗಲೇಪ
ಸ್ವಪರಾಜ್ಞಾನ ಭಾವಾಭಾವವಿನಾಶನ

ಜ್ಞಾನಶೂನ್ಯಂಗಳೆಂಬೀಯೊಂಬತ್ತು
ತ್ವದೀಯ ಪ್ರಭಾವಮಾದುದವಯ್ಯಾ,
ಪರಮಶಿವಲಿಂಗ ಪರಾಪರೋತ್ತುಂಗ. ॥ ೨೬ ॥

೧೨೪೭

ಇಂತಾಚಾರಲಿಂಗಸ್ಥಲಮೊಂಬತ್ತುಂ
ಗುರುಲಿಂಗಸ್ಥಲಮೊಂಬತ್ತುಂ
ಶಿವಲಿಂಗಸ್ಥಲಮೊಂಬತ್ತುಂ
ಜಂಗಮಲಿಂಗಸ್ಥಲಮೊಂಬತ್ತುಂ
ಪ್ರಸಾದಿಲಿಂಗಸ್ಥಲಂ ಪನ್ನೆರಡುಂ
ಮಹಾಲಿಂಗಸ್ಥಲಮೊಂಬತ್ತು ಮಿಂತೀ ಯ್ಯೆ [ವ] ತ್ತೇಳುಂ
ನಿನ್ನ ಸ್ವಯಂ ಪ್ರಭಾಮಯಮಯ್ಯಾ,
ಪರಮ ಶಿವಲಿಂಗ ಪತಂಗಜ ವಿಭಂಗ. ॥ ೨೭ ॥

೧೨೪೮

ಇಂತು ತತ್ವಮಸಿ ಎಂಬ ಮಹಾವಾಕ್ಯಾರ್ಥಂಗಳೊಳ್ತತ್ತೆನೆ ಲಿಂಗಂ.
ತ್ವಮೆನೆಯಂಗಮಸಿಯೆನೆಲಿಂಗಾಂಗೈಕ್ಯಂ.
ಮತ್ತಂ, ಪೂರ್ವೋಕ್ತಮಾದ ತ್ವಂ ತದಸಿ ತತ್ವಮಸಿ
ಇವರ ಶಬ್ದವಾಚ್ಯಮಾದಂಗಲಿಂಗೈಕ್ಯ ಪ್ರತಿಪಾದಿತ
ಮಹಾವಾಕ್ಯ ಸೂತ್ರಾಂತರ್ಗತಮಾದಂಗಸ್ಥಲಂಗಳ ನಾಲ್ವತ್ತನಾಲ್ಕಕ್ಕಂ
ಲಿಂಗಸ್ಥಲಂಗಳೈವತ್ತೇಳಕ್ಕಂ
ನೂರೊಂದು ಸ್ಥಲ ಗಣನೆಯಾದುದಾಯುಭಯಾತ್ಮಕ್ರಂ
ನೀನೆ ಗಡ,
ಪರಮ ಶಿವಲಿಂಗ ಪ್ರಚುರಾನುಕಂಪ ತರಂಗ. ॥ ೨೮ ॥

೧೨೪೯

ಮತ್ತಮೀ ಮಹಾವಾಕ್ಯಾರ್ಥಕ್ಕೆ ವೇದದೊಳ್ ಶಿವ ಜೀವೈಕ್ಯಮೆಂದು
ತದನುಸಾರಾಗಮದೊಳ್ ಶಿವ ಶವ ಶಕ್ತ್ಯೈಕ್ಯಮೆಂದು-
ಮುಳಿದೆಡೆಯೊಳಾ ಪುರುಷ ಪ್ರಕೃತ್ಯೈಕ್ಯಮೆಂದು
ಪರ್ಯಾಯಮಾಗಿರಲದೆಲ್ಲಮುಂ

ನೀನಲ್ಲದನ್ಯಥ ಭಾವಮಿಲ್ಲವಯ್ಯಾ,
ಪರಮ ಶಿವಲಿಂಗೇಶ್ವರ,
ಭಾಸ್ವರ ಕಲ್ಯಾಣ ಗುಣೋತ್ಕರ. ॥ ೨೯ ॥

೧೨೫೦

ಮತ್ತೆಯುಂ
ಸರ್ವಜ್ಞಶಕ್ತಿ ತೃಪ್ತಿಶಕ್ತಿಯನಾದಿಪ್ರಬೋಧಶಕ್ತಿ
ಸ್ವತಂತ್ರಶಕ್ತಿಯಲುಪ್ತಶಕ್ತಿಯನಂತಶಕ್ತಿಗಳೆಂಬಿವೆ
ನಿನ್ನ ಕಾರಣ ಷಡಂಗಂ.
ಬಳಿಕ್ಕಂ, ಭಕ್ತಿ ಕರ್ಮಕ್ಷಯ
ಬುದ್ಧಿ ವಿಚಾರ ದರ್ಪ ಸಂಕ್ಷಯ
ಸಮ್ಯಜ್ಞಾನಂಗಳೆಂಬಿವೆ ನಿನ್ನ ಸೂಕ್ಷ್ಮ ಷಡಂಗಮಿನ್ನುಂ
ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣೈಕ್ಯರೆಂಬಿವೆ
ನಿನ್ನ ಸ್ಥೂಲ ಷಡಂಗವಯ್ಯಾ,
ಪರಮ ಶಿವಲಿಂಗೇಶ್ವರಾ, ಪವಿತ್ರ ಕೈವಲ್ಯಾಧೀಶ್ವರ. ॥ ೩೦ ॥

೧೨೫೧

ಬಳಿಕ್ಕಮೀ ಕಾರಣ ಸೂಕ್ಷ್ಮ ಷಡಂಗಂಗಳ್
ಸ್ಥೂಲ ಷಡಂಗಕ್ಕೆ ತರದಿಂದೇಕೈಕಮಾಗನುಕೂಲಮಾಗಿರ್ಪವಮು-
ಮಲ್ಲದೆಯುಂ ಬ್ರಹ್ಮ ವಿಷ್ಣು ರುದ್ರೇಶ್ವರ ಸದಾಶಿವ
ಪರಶಿವವರ್ಕಳೆಂಬಿವರಾ
ಸ್ಥೂಲಷಡಂಗ ಪರ್ಯಾಯವಯ್ಯಾ,
ಪರಮ ಶಿವಲಿಂಗೇಶ್ವರ, ಪಾರ್ವತೀ ಪ್ರಾಣೇಶ್ವರಾ. ॥ ೩೧ ॥

೧೨೫೨

ಮತ್ತಮೀ ಷಡಂಗಕ್ಕೈಶ್ವರ್ಯ ಸಮಗ್ರ ವೀರ್ಯಶ್ರೀ
ಯಶೋಜ್ಞಾನ ವೈರಾಗ್ಯಂಗಳೆ
ಭಗ ಶಬ್ದವಾಚ್ಯಮಾದ ಷಡ್ಗುಣಂಗಳ್ತರದಿಂದೀ
ಷಡಂಗಗುಣಂಗಳಯ್ಯ,
ಭಗವಚ್ಛಬ್ದ ವಾಚ್ಯ ಭಕ್ತಜನ ಸೂಚ್ಯ
ಪರಮ ಶಿವಲಿಂಗ ಪರಿಪೃತ ಷಡ್ಭಂಗ. ॥ ೩೨ ॥

೧೨೫೩

ಮತ್ತಮಂಗ ಲಿಂಗ ಶಕ್ತಿ ಭಕ್ತಿ ಹಸ್ತ ಮುಖ [ಪದಾರ್ಥ]
ಪ್ರಸಾದಂಗಳಿವಕ್ಕೆ
ವಿವರಮಂ ತರದಿಂದುಸಿರ್ವೆನಂಗಮೆನೆ,
ತ್ವಂ ಪದ ವಾಚ್ಯ ಕಾರಣ ಸೂಕ್ಷ್ಮ ಸ್ಥೂಲಾತ್ಮಕ
ಭಕ್ತ ಮಾಹೇಶ್ವರ ಪ್ರಸಾದ ಪ್ರಾಣಲಿಂಗಿ ಶರಣೈಕ್ಯರ್ಲಿಂಗಮೆನೆ,
ತತ್ವದ ವಾಚ್ಯಮಾದಾಚಾರಲಿಂಗ ಗುರು[ಲಿಂಗ] ಶಿವಲಿಂಗ
ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗಂಗಳ್
ಭಕ್ತಿಯನಲಸಿ ಪದವಾಚ್ಯಮಾದ
ಶ್ರದ್ಧೆ ನಿಷ್ಠೆ ಸಾವಧಾನಮನುಭಾವಮಾನಂದ
ಸಮರಸವೀಯುಭಯಂಗೂಡಿ
ಅಂಗ ಲಿಂಗ ಸಮರಸಮಾದುದಯ್ಯಾ.
ಷಡಧ್ವಾತೀತ ಪರಮ ಶಿವಲಿಂಗೇಶ್ವರ,
ಪಟೀರದಳ- ಭಾಸ್ಕರ. ॥ ೩೩ ॥

೧೨೫೪

ಶಕ್ತಿ ಎನಲಾ ಮಹಾಲಿಂಗದೊಳಗ್ಯುಷ್ಣವಂತವಿರಳಮಾದ
ಕ್ರಿಯಾಶಕ್ತಿ ಜ್ಞಾನಶಕ್ತಿ ಇಚ್ಛಾಶಕ್ತಿ ಆದಿಶಕ್ತಿ
ಪರಾಶಕ್ತಿ ಚಿಚ್ಛಕ್ತಿಗಳೆಂಬಿವು ಮುಖಮೆನೆ
ಘ್ರಾಣ ಜಿಹ್ವೆ ನೇತ್ರ ತ್ವಕ್ಕು ಶ್ರೋತ್ರ
ಹೃದಯಮೆಂಬೀ ಮುಖಂಗಳಲ್ಲಿ
ಪೂರ್ವೋಕ್ತ ಷಡ್ಲಿಂಗಾಕಾರದಿಂದಿರ್ಪೆಯಯ್ಯಾ,
ಪರಮ ಶಿವಲಿಂಗ ಷಟ್ಟಾಮ್ನಾಯ ಪ್ರಸಂಗ. ॥ ೩೪ ॥

೧೨೫೫

ಮತ್ತಂ
ಹಸ್ತಮೆನೆ,
ಚಿತ್ತಂ ಬುದ್ಧಿಯಹಂಕಾರಂ ಮನಂ ಜ್ಞಾನಂ ಭಾವಮೆಂಬೀ
ಷಡ್ವಿಧಕರಣ ಕರಂಗಳಿಂ ಪಿಡಿಮು
ಪೂರ್ವೋಕ್ತ ಮುಖಲಿಂಗಂಗಳ್ಗಾ ಷಡ್ವಿಧ ಭಕ್ತ[ರ]ರಿಯಲದನಾ
ಲಿಂಗಮುಖದಲ್ಲಿ ನೀನೇ ಉಣ್ಬೆಯಯ್ಯಾ,
ಪರಮ ಶಿವಲಿಂಗೇಶ್ವರ ಚಿದ್ಗಗನ ಭಾಸ್ಕರ. ॥ ೩೫ ॥

೧೨೫೬

ಈ ಲಿಂಗಾರ್ಪಿತ ಷಡ್ವಿಧ ಪ್ರಸಾದಂಗಳಂ
ಯಥಾಕ್ರಮದಿಂ ಪೂರ್ತಿಗೊಳಿಸಿ,
ತತ್ಪ್ರಸಾದ ಸ್ವರೂಪನಾಗಿರ್ಪಂ ನೀನೆಯಯ್ಯಾ,
ಪರಮ ಶಿವಲಿಂಗಯ್ಯ,
ಪರಮುಕ್ತ ಹೃದಯಾಬ್ಜ ಶಯ್ಯಾ. || ೩೬ ||

೧೨೫೭

ಇಲ್ಲಿಯಷ್ಟವಿಧ ಸಕೀಲಂಗಳ್ವ್ಯತ್ಯಾಸಮಾದೊಡಂ,
ತತ್ವಮಸ್ಯಾರ್ಥಮನುಕೂಲಮಾಗಲೊಡಂ,
ಸಂದೆಯಮಿಲ್ಲಮೆಂದು ತಿಳಿಯಲುಚಿತಮಿೂಯಷ್ಟವಿಧ
ಸಕೀಲಂಗಳೊಳಗೆ
ತರದಿಂದೊಂದೊಂದಾರಾಗಲೆಂಟಾರ್ಗಳ್ನಾಲ್ವತ್ತೆಂಟಾಯ್ತಯ್ಯಾ,
ಪರಮ ಶಿವಲಿಂಗ ಪಶುಪಾಶ ವಿಭಂಗಾ. || ೩೭ ||

೧೨೫೮

ಮತ್ತೆಯು
ಪೃಥ್ವ್ಯಪ್ತೇಜೋ ವಾಯ್ವಾಕಾಶಾತ್ಮಂಗಳೆ ತತ್ವಂ.
ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣೈಕ್ಯರೆಂಬಿವೆ ಅಂಗಂ.
ಸುಚಿತ್ತ ಸುಬುದ್ಧಿ ನಿರಹಂಕಾರ ಸುಮನ
ಸುಜ್ಞಾನ ಸದ್ಭಾವಂಗಳೆ ಹಸ್ತಂ.
ಕರ್ಮಸಾದಾಖ್ಯ ಕರ್ತೃಸಾದಾಖ್ಯ ಮೂರ್ತಿಸಾದಾಖ್ಯಾ-
ಮೂರ್ತಿಸಾದಾಖ್ಯ
ಶಿವಸಾದಾಖ್ಯ ಮಹಾಸಾದಾಖ್ಯಂಗಳೆಂಬಿವೆ ಸಾದಾಖ್ಯಂ.
ಕ್ರಿಯಾಶಕ್ತಿ ಜ್ಞಾನಶಕ್ತಿ ಇಚ್ಛಾಶಕ್ತಿಯಾದಿಶಕ್ತಿ
ಪರಾಶಕ್ತಿ ಚಿಚ್ಛಕ್ತಿಗಳೆಂಬಿವೆ ಶಕ್ತಿ.
ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗ
ಪ್ರಸಾದಲಿಂಗ ಮಹಾಲಿಂಗಂಗಳೆಂಬಿವೆ ಲಿಂಗ.
ನಿವೃತ್ತಿ ಪ್ರತಿಷ್ಠೆ ವಿದ್ಯೆ ಶಾಂತಿ ಶಾಂತ್ಯಾತೀತೆ
ಶಾಂತ್ಯಾತೀತೋತ್ತರೆಗಳೆಂಬಿವೆ ಕಲೆ.

ಸದ್ಯಾದಿ ಪರ್ಯಾಯಮಾದ ಘ್ರಾಣಂ ಜಿಹ್ವೆ ನೇತ್ರ
ತ್ವಕ್ಕು ಶ್ರೋತ್ರ ಹೃದಯವೆಂಬಿವೆ ಮುಖಂ.
ಗಂಧ ರಸ ರೂಪ ಸ್ಪರ್ಶ ಶಬ್ದ ತೃಪ್ತಿಗಳೆಂಬಿವೆ ದ್ರವ್ಯಂ.
ಶ್ರದ್ಧೆ ನಿಷ್ಠೆ ಸಾವಧಾನಮನುಭಾವಮಾನಂದ
ಸಮರಸವೆಂಬಿವೆ ಭಕ್ತಿ.
ನಕಾರ ಮಃಕಾರ ಶಿಕಾರ [ವಾಕಾರ] ಯಕಾರೋಕಾರಂಗಳೆಂಬಿವೆ
ಮಂತ್ರ ಮಿಂತೇಕಾದಶ ಸಕೀಲಮಿದೆಲ್ಲಂ
ತ್ವದೀಯ ವಿಮರ್ಶನ ಸ್ವರೂಪಮಯ್ಯಾ,
ಪರಮ ಶಿವಲಿಂಗ ಪರೋಕ್ಷಜ್ಞಾನತಾಲಿಂಗ. ॥ ೩೮ ॥

೧೨೫೯

ತತ್ವಾಂಗ ಕರ ಸಾದಾಖ್ಯ ಶಕ್ತಿ ಲಿಂಗ ಕಲಾ ಮುಖ ದ್ರವ್ಯ
ಭಕ್ತಿ ಮಂತ್ರಂಗಳೆಂಬಿವೊಂದೊಂದಾರಾಗಲೊಡನರುವತ್ತಾರುದೆರ-
ದರ್ಪಣಮಾದುದೆಲ್ಲಂ ನಿನ್ನ ಚಿತ್ಕಿರಣ ಕೀರ್ಣಮಯಮಯ್ಯಾ,
ಪರಮ ಶಿವಲಿಂಗ ಪಯೋನಿಧಿ ನಿಷಂಗ. ॥ ೩೯ ॥

೧೨೬೦

ಗಂಧ ರಸ ರೂಪ ಸ್ಪರ್ಶ ಶಬ್ದ ತೃಪ್ತಿಗಳೆಂಬಿವಕ್ಕೆ ವಿವರಂ-
ಗಂಧರೂಪರುಚಿ ತೃಪ್ತಿ.
ರಸರೂಪರುಚಿ ತೃಪ್ತಿ.
ರೂಪರೂಪರುಚಿ ತೃಪ್ತಿ.
ಸ್ಪರ್ಶರೂಪರುಚಿ ತೃಪ್ತಿ.
ಶಬ್ದರೂಪರುಚಿ ತೃಪ್ತಿ.
ತೃಪ್ತಿರೂಪರುಚಿ ತೃಪ್ತಿ.
ಇಂತೀಯಷ್ಟಾದಶ ಸಕೀಲಂಗಳೆಯೊಂದೊಂದು
ಲಿಂಗದೊಳಾರಾರುಲಿಂಗಗಳ್ಕೆಸಲೊಂದೊಂದರೊಳು
ಪದಿನೆಂಟು ಕೂಡಿ ನೂರೆಂಟು ತೆರದರ್ಪಣಮಾಗಲದೆಲ್ಲಂ
ನಿಜ ವಿಲಾಸವಯ್ಯಾ, ಪರಮ ಶಿವಲಿಂಗ
ಪ್ರಪಂಚ ಸಾರ ನಿಸ್ಸಂಗ. ॥ ೪೦ ॥

೧೨೬೧

ಮತ್ತಮಂಗ ಹಸ್ತ ಶಕ್ತಿ ಲಿಂಗಮುಖಂಗಳೆಂಬಿವೊಂದೊಂದಾ-
ರಾರಾಗಲೊಡಂ
ಮೂವತ್ತಾರುದೆರದರ್ಪಣಮಾಗಲದೇಂ
ಸ್ವಕೀಯ ಪ್ರಕಾಶಮಯವಯ್ಯಾ,
ಪರಮ ಶಿವಲಿಂಗ ಪ್ರಮಥಾಂತರಂಗ. ॥ ೪೧ ॥

೧೨೬೨

ಮುರಲ್ದುಮಾ ಮೂವತ್ತಾರುವೊಂದೊಂದರೊಳೊಂದಿ ಬರೆ
ಇನ್ನೂರ ಪದಿನಾರ್ತೆರದರ್ಪಣಮಾಮುದರೊಳಗಣರ್ಪಣಮಂ
ವಿಭಾಗಿಸಲೊಂದೊಂದಕ್ಕಿನ್ನೂರಪದಿನಾ[ರಾ]ರಾಗಲೊಡನಮು
ಸಾವಿರದಿನ್ನೂರ ತೊಂಬತ್ತಾರುದೆರದರ್ಪಣಮಾಗಲದೆಲ್ಲಂ
ನಿನ್ನ ಪೂರ್ಣಾಹಂತಾ ಪ್ರಭೆಗಳಯ್ಯಾ,
ಪರಮ ಶಿವಲಿಂಗೇಶ್ವರ ಪವಿತ್ರ ಕಳೇವರ. ॥ ೪೨ ॥

೧೨೬೩

ಆಯಷ್ಟವಿಧದೊಳಗಾರಾರ್ಕೂಡಿ ಮೂವತ್ತಾರಾಗಲ್
ಅರ್ಪಿತದಾಪ್ರಸಾದದಾರಿಂತಿರಾರ್ಕೂಡೆ ಪದಿನೆರಡಾಗಲೊಡಂ
ಎಂದಿನಂತೆ ನಾಲ್ವತ್ತೆಂಟಾಯ್ತಯ್ಯಾ,
ಪರಮ ಶಿವಲಿಂಗೇಶ್ವರ ಸಕಲ ಭುವನೇಶ್ವರ. ॥ ೪೩ ॥

೧೨೬೪

ಇನ್ನುಮಷ್ಟವಿಧ ಸಕೀಲದೊಳಳಿದರ್ಪಿತ
ಪ್ರಸಾದಂಗಳೊಂದರೊಳಾರಾರಾಗಲವಂ
ಕೂಡಲೆಪ್ಪತ್ತೆರಡಾಗಲಾ ಪಿಂದಣರುವೆರಕ್ಕೆಗಳಂ ಕೂಡಿ ಗಣಿಸಲ್
ಸಾವಿರದೇಳ್ನೂರಿಪ್ಪತ್ತೆಂಟಾಮುದೆಲ್ಲಂ ನೀನೆಯಯ್ಯಾ,
ಪರಮ ಶಿವಲಿಂಗೇಶ್ವರ. ॥ ೪೪ ॥

೧೨೬೫

ತತ್ಪ್ರಾಂಗ ಹಸ್ತ ಸಾದಾಖ್ಯ ಶಕ್ತಿ ಲಿಂಗ ಕಲಾ ಮುಖ
ದ್ರವ್ಯ ಮಂತ್ರ ಭಕ್ತಿಗಳೆಂಬೀ
ಏಕಾದಶ ಸಕೀಲಂಗಳಂ ಗಣಿಸಲೊಡನಱುವತ್ತಾಱಾದವವ
ನೊಂದೊಂದಱೊಳಂ ಬೆರಸೆ
ಮುನ್ನೂಱ [ತೊಂಬ]ತ್ತಾಱಾದುದೆಲ್ಲಂ
ಸ್ವಪ್ರಕಾಶ ರೂಪವಯ್ಯಾ,
ಪರಮ ಶಿವಲಿಂಗೇಶ್ವರ. ॥ ೪೫ ॥

೧೨೬೬

ಮಱಲ್ದೇಕಾದಶ ಸಕೀಲ-
[ಮಾ]ಱಕ್ಕಱುವತ್ತಾಱಾಯಿತ್ತದನೊಂದೊಂದಱೊಳೊಂದಂ ಬೆರಸೆ
ಯಾಱಱುವತ್ತಾಱಾಗಲೊಡನವಂ
ತರದಿಂ ಗಣಿಸಲವಱ ರೂಪ ರುಚಿ ತೃಪ್ತಿಗಳ ಸಹಪರಿವಿಡಿಯಂ
ನಾನೂಱಱುವತ್ತೆಂಟು ತೆಱದರ್ಪಣಮೊಂದೊಂದಱೊಳೆ ಆಯಿತ್ತಿನ್ನು-
ಮುಳಿದವನೀ ತೆಱದಿಂ ಲೆಕ್ಕಿಸ[ಲಂ]ತೆ
ಸ್ತೋಮಂಗೂಡಿ ಎರಡು ಸಾವಿರದೆಂಟುನೂಱೆಂಟು
ತೆಱದರ್ಪಣಮಾದುದೆಲ್ಲ
ನಿನ್ನ ನಿಜವಿಲಾಸವಯ್ಯಾ,
ಪರಮ ಶಿವಲಿಂಗ ಪ್ರಣವಾಂತರಂಗ. ॥ ೪೬ ॥

೧೨೬೭

ಮತ್ತೆಯುಂ
ರೂಪ ದ್ರವ್ಯ ಪದಾರ್ಥ ಸ್ನಾನ ಮಂತ್ರ ತೃಪ್ತಿಗಳೆಂಬಿವೆ
ಷಡ್ವಿಧ ಕ್ರಿಯಾರ್ಪಣಂಗಳಿವಕ್ಕೆ ವಿವರಂ-
ರೂಪಮೆನೆ ಭೋಜ್ಯ ಪಾನೀಯ ಭಕ್ಷ್ಯ
ಚೋಷ್ಯ ಲೇಹ್ಯಂಗಳಿವಱ ತೃಪ್ತಿ ಸಹ
ನಿನ್ನ ಪೀಠಾದಿ ಮಸ್ತಕಾಂತ ಸಂಬಂಧ
ಲಿಂಗಾರ್ಪಿತಮಾದುದಯ್ಯಾ,
ಪರಮ ಶಿವಲಿಂಗ ನಿರ್ಜಿತ ಷಟ್ತರಂಗ. ॥ ೪೭ ॥

೧೨೬೮

ಬಳಿಕ್ಕಂ
ಕಠಿಣ ಮೃದೂಷ್ಣ ಶೈತ್ಯಮಿಶ್ರ ತೃಪ್ತಿಗಳೆಂಬಿವೆ ದ್ರವ್ಯಂಗಳು
ಮತ್ತೆಯರ್ಪಿತಂಗಳಿಂ ಸುಗಂಧ ರಸ ರೂಪ ಸ್ಪರ್ಶ ಶಬ್ದ
ತೃಪ್ತಿಗಳೆಂಬಿವೆ ಪದಾರ್ಥಂಗಳಿವೆಲ್ಲಂ
ಮೊದಲಂತೆ ನಿನ್ನೊಳರ್ಪಿತಂಗಳಾದವಯ್ಯಾ,
ಪರಮ ಶಿವಲಿಂಗೇಶ್ವರ ನಿರಾಳತರ ಗಂಭೀರ. ॥ ೪೮ ॥

೧೨೬೯

ಮತ್ತಂ
ಮಗ್ಧ ದಧಿ ಘೃತೇಕ್ಷುರಸ ನಾರಿಕೇಳ
ಸ್ವಾದೋದಕಂಗಳೆಂಬಿವೆ ಸ್ನಾನಂಗಳು
ಮತ್ತೆ ಬಳಿಕ್ಕಮೋಂ ಹ್ರಾಂ ನಮಃಶ್ಶಿವಾಯೋಂ
ಹ್ರೀಂ ನಮಶ್ಶಿವಾಯೋಂ
ಹ್ರೂಂ ನಮಶ್ಶಿವಾಯೋಂ ಹ್ರೈಂ ನಮಶ್ಶಿವಾಯೋಂ
ಹ್ರೌಂ ನಮಶ್ಶಿವಾಯೋಂ ಹ್ರಂಃ ನಮಶ್ಶಿವಾಯಂಗಳೆಂಬೀ
ಮಂತ್ರಂಗಳ್ಸಧೀಯ ಮೂರ್ತಿಲಿಂಗಜಪಂಗಳಯ್ಯಾ,
ಪರಮ ಶಿವಲಿಂಗ ಚಿದ್ಗಗನ ಪತಂಗ.
-ಇತ್ಯಂಗಲಿಂಗ ಸ್ಥಲಮುಕ್ತಂ. ॥ ೪೯ ॥

೧೨೭೦

ಮತ್ತಂ
ತಮ್ಮ ತಮ್ಮ ಹಸ್ತದ ತೊಂಬತ್ತಾರಂಗುಲ ಪ್ರಮಾಣದ ದೇಹದ
ಗುದದಿಂ ಮೇಲೆರಡಂಗುಲ ವೃಷಣದಿಂ ಕೆಳಗೆರಡಂಗುಲ-
ಮುಭಯ ಮಧ್ಯದ ಚತುರಸ್ರದ ಭೂಮಿಯ
ನಡುವಣ ತ್ರಿಕೋಣೆಯಂತರಾಳದ ಮಂಡಲತ್ರಯ ಧರಣಿಯ
ಪೀತವರ್ಣದ ವಾದಿಸಾಂತಯುಕ್ತಮಾದ
ಚೌದಳ ಕಮಲಕರ್ಣಿಕೆಯ
ಸೂಕ್ಷ್ಮರಂಧ್ರಗತ ಪ್ರಣವ ತಾರಕಾಕೃತಿಯ
ನಕಾರಮೆ ಆಚಾರಲಿಂಗಮದು
ನಿನ್ನ ಸದ್ಯೋಜಾತ ಸ್ವರೂಪಮಾದುವಯ್ಯಾ,
ಪರಮ ಶಿವಲಿಂಗ ಪಟುತರ ಕೃಪಾರಸ ತರಂಗ. ॥ ೫೦ ॥

೧೨೭೧

ಮತ್ತೆಯುಂ,
ಧನುರ್ಗತಿವಿಡಿದುದಕದಂತರಾಳದ,
ಮಂಡಲತ್ರಯದುದಕದ, ಶ್ವೇತವರ್ಣದ
ಬಾದಿಲಾಂತ ಮುಕ್ತಮಾದರುದಳದ
ನಳಿನಕರ್ಣಿಕೆಯ, ಸೂಕ್ಷ್ಮರಂಧ್ರಗತ
ಪ್ರಣವದ ದಂಡಾಕೃತಿಯ, ಮಕಾರಮೆ ಗುರುಲಿಂಗಮದು,
ನಿನ್ನ ವಾಮದೇವ ಸ್ವರೂಪಮಾದುದಯ್ಯಾ,
ಪರಮ ಶಿವಲಿಂಗ ಪ್ರಚುರತರ ಚಿದಂಗ. ॥ ೫೧ ॥

೧೨೭೨

ಮತ್ತಮಗ್ನಿಯ ಮೂಲೆಯ ನಡುವಣ ಮಂಡಲತ್ರಯದ,
ತದಗ್ನಿಯ ರಕ್ತವರ್ಣದ, ಡಾಡಿಫಾಂತ ಸಹಿತ
ದಶದಳದಂಬುಜದ ಕರ್ಣಿಕೆಯ, ಸೂಕ್ಷ್ಮರಂಧ್ರಗತ ಪ್ರಣವದ
ಕುಂಡಲಾಕೃತಿಯಾದ, ಶಿಕಾರಮೆ ಶಿವಲಿಂಗಮದು
ನಿನ್ನಘೋರ ಸ್ವರೂಪಮಾದುದಯ್ಯಾ
ಪರಮ ಶಿವಲಿಂಗ ನಿರಂತರಾಂತರಂಗ. ॥ ೫೨ ॥

೧೨೭೩

ಬಳಿಕ್ಕಮೆಲರುಗೊಂಟುಗಳ ನಡುವಣ ಮಂಡಲಾಶ್ರಯದ,
ತನ್ನಾರು ತನು ಪಸಿರ್ವಣ್ಣದ, [ಕ]ಕಾ[ರಾ]ದಿ ಠಾಂತಾನ್ವಿತದ
ಪನ್ನೆರಡೆಸಳ ತಾವರೆಯ ಕರ್ಣಿಕೆಯ,
ಸೂಕ್ಷ್ಮರಂಧ್ರಗತ ಪ್ರಣವದರೆವೆರೆಯಾದ,
ವಕಾರವೆ ಜಂಗಮಲಿಂಗಮದು,
ನಿನ್ನ ತತ್ಪುರುಷ ಸ್ವರೂಪಮಾದುದಯ್ಯಾ,
ಪರಮ ಶಿವಲಿಂಗ ಪ್ರಥಿತ ಪ್ರಸಂಗ. ॥ ೫೩ ॥

೧೨೭೪

ಇನ್ನುಂ,
ಸೋವರಿಜಮಾದಾಗಸದ ಮಂಡಲತ್ರಯದ,
ತದ್ಗಗನ ಧೂಮವರ್ಣದ ಷೋಡಶ ಸ್ವರಾನ್ವಿತದ,

ಪದಿನಾರೆಸಳ ನಿ[ೀ]ರಲ ಕರ್ಣಿಕೆಯ,
ಸೂಕ್ಷ್ಮರಂಧ್ರಗತ ಪ್ರಣವದ ದರ್ಪಣಾಕೃತಿಯಾದ,
ಯಕಾರವೆ ನಿನ್ನೀಶಾನ ಸ್ವರೂಪಮಾದುದಯ್ಯಾ,
ಪರಮ ಶಿವಲಿಂಗ ಪ್ರಮಥಗಣಾಂತರಂಗ. ॥ ೫೪ ॥

೧೨೭೫

ಮತ್ತಂ,
ಸಚಿತ್ರ ತಮಂಧಾಕಾರಮಾದ ಪುರುಷತತ್ವದ,
ಮಂಡಲತ್ರಯದ ತತ್ತಮಂಧರುಚಿಯಂತರ್ಗತ ಮಾಣಿಕ್ಯವರ್ಣದ,
ಹಂಸಾಂಕಿತದೆರಡೆಸಳ ನೀರೇಜದ ಕರ್ಣಿಕೆಯ,
ಸೂಕ್ಷ್ಮರಂಧ್ರಗತ ಪ್ರಣವದ ಜ್ಯೋತಿರಾಕೃತಿಯಾದ,
ಗುಹ್ಯ ಪ್ರಣವವೆ [ಮ]ಹಾಲಿಂಗಮುದು,
ನಿನ್ನ ಗೋಪ್ಯ ಸ್ವರೂಪಮಾದುದಯ್ಯಾ,
ಪರಮ ಶಿವಲಿಂಗ ಪರಿಪೂರ್ಣ ಷಡಂಗ. ॥ ೫೫ ॥

ಇಂತೀ ದಳಚಕ್ರನ್ಯಾಸಮುಕ್ತಂ

೧೨೭೬

ಮರಲ್ದುಮಾಜ್ಞೆಯಿಂ ಮೇಲೆ ಸಹಸ್ರದಳ ಸಮ್ಮಿತ್ರಮಾದ
ಕಮಲಾಂಕಿತದ ವಿಶುದ್ಧಿಯಿಂ ತೊಡಗಿ,
ತನ್ನಂಗುಲಿ ಪರಿಮಿತದಿಂ,
ದ್ವಾದಶಾಂತ ಸಂಜ್ಞೆಯನುಳ್ಳ,
ಬ್ರಹ್ಮಚಕ್ರ ಸಮುದ್ಧರಣ ಕ್ಷೇತ್ರಮೆಂತೆನಲಾ
ಚಕ್ರಕ್ಷೇತ್ರಂ, ಪೂರ್ವಪಶ್ಚಿಮಕ್ಕೆ ರಕ್ತವರ್ಣದ
ದ್ವಾದಶಾಂಗುಲ ಪ್ರಣವದಿಂ
ದ್ವಿಸೂತ್ರಮಂ ಮಿಡಿಯಲಂತೆಯೆ ದಕ್ಷಿಣೋತ್ತರಕ್ಕೆಸಗಲಾ
ಚಕ್ರಕ್ಷೇತ್ರಂ, ಚೌಮೂಲೆಯಾಗಲೊಡನವರ
ದೀರ್ಘಾಯತದ ಗಣನೆ
ಸೂರನಾಲ್ವತ್ತನಾಲ್ಕಂಗುಲ ಪ್ರಮಾಣಮಾದುದೆಂದು
ನಿರೂಪಿಸಿದೆಯಯ್ಯಾ,
ಪರಮ ಶಿವಲಿಂಗೇಶ್ವರ ವಿಮರ್ಶನವ್ಯೋಮ ಪ್ರಭಾಕರ.॥ ೫೬ ॥

೧೨೭೭

ಮತ್ತಮಾ ಚೌಕದ ನಡುವೆ,
ಪೂರ್ವಪರ ದಕ್ಷಿಣೋತ್ತರಂಗಳಾಗುತಮಾವಾವ ಕಡೆಗೆಯುಂ,
ಪವಣಿಸಲಾರಾರಂಗುಲಮಾಗೆ,
ಕವೆಯಾರಮನೆರಳ್ಬೆರಲ ಪಾಳತದಿಂ
ತಿರುಪುತ್ತಮದರಾಚೆಯೊಂದೊಂದು ಬೆರಲಂ
ಪೆರ್ಚಿಸಲರುವೆರಲಾಯಿತ್ತೆಂದುಸಿರ್ದೆಯಯ್ಯಾ,
ಪರಮ ಶಿವಲಿಂಗೇಶ್ವರ ಪರಾಪರ ಮುಕ್ತಿಕೋಶ. ॥ ೫೭ ॥

೧೨೭೮

ಬಳಿಕಲುಂ ದ್ವ್ಯಂಗುಲದ ಬಟುವೆ ಕರ್ಣಿಕೆಯಾ
ಕವಯಾರಮನೂರಿದ ನೆಲೆಯೆ ಬ್ರಹ್ಮರಂಧ್ರವೆನಿಪ
ಸೂಕ್ಷ್ಮಕರ್ಣಿಕೆಯಾ
ದ್ವ್ಯಂಗುಲ ವೃತ್ತವೆ ಸ ಕೇಸರ ಚತುರ್ದಳಾನ್ವಿತ ಸ್ಥೂಲಕರ್ಣಿಕೆ-
ಯದರಾಚೆಯ ಬಟುವೆ ಅಗ್ನಿಮಂಡಲ-
ಮದರಾಚೆಯ ಬಟುವೆ ಚಂದ್ರಮಂಡಲ-
ಮದರಾಚೆಯ ಬಟುವೆ ಸೂರ್ಯಮಂಡಲಮೆಂದು
ನಿರವಿಸಿದೆಯಯ್ಯಾ,
ಪರಮ ಶಿವಲಿಂಗ ಪಟುತರ ವೃಷತುರಂಗ. ॥ ೫೮ ॥

೧೨೭೯

ಮರಲ್ಲುಂ,
ರಕ್ತವರ್ಣಮಾದ ರಜೋಗುಣದಿಂ, ಸೂತ್ರಮಂ ರಚಿಪುದಾ
ಶ್ವೇತಮಾದ ಸತ್ವಗುಣದಿಂ ದಳಂಗಳಂ ನಿಮಿರ್ಚುವುದು.
ಕಪ್ಪುವಣ್ಣದ ತಮೋಗುಣದಿಂದಕ್ಕರಂಗಳ ಬರೆವುದು.
ಪಳದಿವಣ್ಣದಿಂ ಕರ್ಣಿಕೆಯನೆಸಗುವದೆಂದು ಬೋಧಿಸಿದೆಯಯ್ಯಾ,
ಪರಮ ಶಿವಲಿಂಗ ಪಾರ್ವತಿಯಂತರಂಗ. ॥ ೫೯ ॥

೧೨೮೦

ಮತ್ತೆಯುಂ,
ರಕ್ತವರ್ಣದಿಂ ಮೊದಲಂತೆ ಬಾಹ್ಯರೇಖೆಯಂ ಲಿಖಿಪುದು.
ಕೃಷ್ಣವರ್ಣದಿಂ ಮಧ್ಯರೇಖೆಯಂ ಬರೆವುದು.

ಧವಳವರ್ಣದಿಂ ಕಡೆಯರೇಖೆಯಂ ತಿರ್ದು[ವು]ದು.
ಬಾಹ್ಯಮಂಡಲ ದಳಂಗಳಂ ರಕ್ತವರ್ಣದಿಂದವೆ ಬರೆವುದು.
ಉಳಿದ ಮಂಡಲದಳಂಗಳೊಮ್ಮದಲಂತೆಯೆಂದೆಯಯ್ಯಾ,
ಪರಮ ಶಿವಲಿಂಗ ಮಾಯಾಕಾರ್ಯ ವಿಭಂಗ. ॥ ೬೦ ॥

೧೨೮೧

ಬಳಿಕ್ಕಮಾ ಬಾಹ್ಯದ ಸೂರ್ಯಮಂಡಲದ ಬಹಿರ್ವಳಯದಲ್ಲಿ
ಮೊದಲ ವರ್ಣದಿಂ ತರವಿಡಿದೆರಳ್ವದಿನಾರಕ್ಕೆ
ಮೂವತ್ತೆರಡೆಸಳ್ಗಳಂ ಬರೆವವರ ಮುಂದಣ ಚಂದ್ರಮಂಡಲದಲ್ಲಿ
ಮೊದಲ ಮಂಡಲದೊಳೊಂ[ದೊಂ]ದು
ಪಾಲಾದೊಳ್ದಳೋಪದಳಂ-
ಗಳಾದ ಪದಿನಾರೆಸಳ್ಗಳಂ ಬರೆದಂತೆಯೆ
ಅಗ್ನಿಮಂಡಲದೊಳೆಂಟೆಸಳ್ಗಳಂ ಲಿಖಿಸುತ್ತಂತೆಯೆ
ಸೂಕ್ಷ್ಮ ಕರ್ಣಿಕೆಯಂ ಬಳಸಿ
ಚೌದಳದ ನ್ಯಾಸಮಂ ತಿಳಿಯೆಂದೆಯಯ್ಯಾ,
ಪರಮ ಶಿವಲಿಂಗ ಪ್ರಕಟಿತ ಸುಜ್ಞಾನಪ್ರಸಂಗ. ॥ ೬೧ ॥

೧೨೮೨

ಮೇಣ್ಚಕ್ರನ್ಯಾಸದ ತರುವಾಯ ದೇವತಾನ್ಯಾಸವೆಂತೆನೆ,
ಕರ್ಣಿಕಾಮಧ್ಯದಲ್ಲಿ ಸರ್ವಾಧಾರೆಯಾದ ಪರಾಶಕ್ತಿಯಂ,
ತತ್ಕರ್ಣಿಕೆಯಂ ಬಳಸಿದ ಚೌದಳಂಗಳಲ್ಲಿ ಪ್ರದಕ್ಷಿಣಮಾಗಿ-
ಯಂಬಿಕೆ ಗಣಾನಿ ಈಶ್ವರಿ ಮನೋನ್ಮನಿಯರೆಂಬ
ಚತುಶ್ಶಕ್ತಿಯರಂ ಭಜಿಸೆಂದುಸಿರ್ದೆಯಯ್ಯಾ,
ಪರಮ ಶಿವಲಿಂಗ ಪಾಶೋತ್ಕರ ವಿಭಂಗ. ॥ ೬೨ ॥

೧೨೮೩

ಮತ್ತಂ,
ಪ್ರಥಮಮದಗ್ನಿಮಂಡಲದಷ್ಟದಳಂಗಳಲ್ಲಿ
ಪೂರ್ವಾದಿಯೊಳ್ ಪರಿವಿಡಿದು ನ್ಯಾಸಮಾದ
ವಾಮೆ ಜೇಷ್ಠೆ ರೌದ್ರಿ ಕಾಳಿ ಬಲೆ ಬಲಪ್ರಮಥನಿ
ಸರ್ವಭೂತದಮನಿ ಮನೋನ್ಮನಿಯರೆಂಬಷ್ಟಶಕ್ತಿಯರಂ
ಅರ್ಚಿಪುದೆಂದೆಯಯ್ಯಾ,
ಪರಮಗುರು ಪರಾತ್ಪರ ಪರಮ ಶಿವಲಿಂಗೇಶ್ವರ. ॥ ೬೩ ॥

೧೨೮೪

ಮತ್ತೆ,
ಎರಡನೆಯ ಚಂದ್ರಮಂಡಲದ ಪದಿನಾರೆಸಳ್ಗಳಲ್ಲಿ,
ಉಮೇಶ್ವರ ಚಂಡೇಶ್ವರ ನಂದಿಕೇಶ್ವರ ಮಹಾಕಾಳ
ಭೃಂಗಿರಿಟಿ ಗಣೇಶ್ವರ ವೃಷಭೇಶ್ವರ ಷಣ್ಮುಖರೆಂಬಷ್ಟ
ಗಣೇಶ್ವರರನುತ್ತರಂ ಮೊದಲಾದಷ್ಟದಳಂಗಳಲ್ಲಿ
ಪೂಜಿಪುದುಳಿದಷ್ಟದಳಂಗಳಲ್ಲಿ
ಭವ ಶರ್ವ ರುದ್ರ ಮಹಾದೇವ ಸೋಮ ಭೀಮೋಗ್ರ
ಪಶುಪತಿಗಳೆಂಬಷ್ಟಮೂರ್ತಿಗಳನಾರಾಧಿಪುದೆಂದು
ನಿರವಿಸಿದೆಯಯ್ಯಾ,
ಪರಮ ಶಿವಲಿಂಗೇಶ್ವರ [ಪ್ರ]ತಿಪದಾರ್ಥ ಭಾಸ್ವರ. ॥ ೬೪ ॥

೧೨೮೫

ಮರಲ್ದುಂ,
ಮೂರನೆಯ ಸೂರ್ಯಮಂಡಲದ ಮೂವತ್ತೆರಡೆಸಳ್ಗಳಲ್ಲಿ-
ಯನಂತ ಸೂಕ್ಷ್ಮ ಶಿವೋತ್ತಮೈಕ ನೇತ್ರೈಕರುದ್ರ
ತ್ರಿಮೂರ್ತಿ ಶ್ರೀಕಂಠ ಶಿಖಂಡಿಗಳೆಂಬಷ್ಟ ವಿದ್ಯೇಶ್ವರರುದ್ರರ
ಇಂದ್ರಾಗ್ನಿ ಯಮ ನಿಋುತಿ ವರುಣ ವಾಯು
ಕುಬೇರೀಶಾನರೆಂಬಷ್ಟ ಲೋಕಪಾಲರಂ
ಧವ ಧ್ರುವಂ ಸೋಮನಪ[ನ]ನಿಲಂ
ಅನಲ ಪ್ರತ್ಯೂಷ ಪ್ರಭಾಸನೆಂಬೀಯಷ್ಟವಸುಗಳ
ಇಂದ್ರ ಸತ್ಯಂ ಭೃಂಗಿಯಂತರ್ಲಕ್ಷಣನೆಂಬೀಯಿಂದ್ರದಿಕ್ಕಿನ
ಚೌದಳ ವಾಸ್ತವ ದೇವತೆಗಳ-,
ನಗ್ನಿ ಪೂಷ ವಿಧಿ ದಮರೆಂಬಗ್ನಿದಿಕ್ಕಿನ ಚೌವಳದ
ವಾಸ್ತವ ದೇವತೆಗಳು,
ಯಮ ಭಾಸ್ಕರ ಪುಷ್ಪವತ್ತ ಬಲಾಷ್ಪರೆಂಬೀ ಯಮದಿಕ್ಕಿನ
ಚೌದಳದ ವಾಸ್ತವ ದೇವತೆಗಳನುಂ,
ನೈರುತ್ಯ ದೌವಾರಿಕ ಸುಗ್ರೀವಾರುಣರೆಂಬೀ ನೈಋುತ್ಯದಿಕ್ಕಿನ
ಚೌದಳದ ವಾಸ್ತವ ದೇವತೆಗಳನುಂ,
ವರುಣಾಸುರ ಗಷ್ವರ ವೇದರೆಂಬೀ ವರುಣದಿಕ್ಕಿನ
ಚೌದಳದ ವಾಸ್ತವ ದೇವತೆಗಳನುಂ,
ವಾಯು ನಾಗ ಮುಖ್ಯ ಸೋಮರೆಂಬೀ ವಾಯುದಿಕ್ಕಿನ
ಚೌವಳದ ವಾಸ್ತವ ದೇವತೆಗಳನುಂ,

ಕುಬೇರಾಘ್ರಾದಿತ್ಯದಿಂತಿಗಳೆಂಬ ಕುಬೇರದಿಕ್ಕಿನ
ಚೌದಳದ ವಾಸ್ತವ ದೇವತೆಗಳನು-,
ಮೀಶಾನ ಪರ್ಜನ್ಯ ಜಯಂತ ಸಂಕ್ರಂದರೆಂಬೀ ಈಶಾನ್ಯದಿಕ್ಕಿನ
ಚೌದಳದ ವಾಸ್ತವ ದೇವತೆಗಳನುಮೀ
ಪ್ರಕಾರಮಾದ ಮೂವತ್ತೆರಡು ದಳಂಗಳಲ್ಲಿ ಭಾವಿಪುದೆಂದು
ನಿರವಿಸಿದೆಯಯ್ಯಾ,
ಪರಮ ಶಿವಲಿಂಗೇಶ್ವರ ಚಿದ್ವ್ಯೋಮ ಪ್ರಭಾಕರ. ॥ ೬೫ ॥

೧೨೮೬

ದೇವತಾನ್ಯಾಸಾನಂತರವಲ್ಲಿ ಮಂತ್ರನ್ಯಾಸಮಂ ಪೇಳ್ವೆನೆಂತೆನೆ-
ಈ ಚಕ್ರದ ಕರ್ಣಿಕಾವೃತ್ತದ ಚೌದಳದ ನಡುವೆ
ಶಿವಬೀಜವಾದ ಹಕಾರವನಂಕಿಪುದು.
ಮೂಡಣೆಸಳಲ್ಲಿ ಬಿಂದು ಸಂಜ್ಞಿತವಾದ ಸಕಾರವಂ ಲಿಖಿಪು
ದಾತ್ಮಬೀಜವಾದಕಾರಮಂ ತೆಂಕಣೆಸಳಲ್ಲಿ ಬರೆವುದು.
ಪಡುವಣೆಸಳಲ್ಲಿ ಸೂಕ್ಷ್ಮನಾದವೆನಿಸಿದೈಕಾರವನುದ್ಧರಿಪುದು.
ಬಡಗಣೆಸಳಲ್ಲಿ ವಿದ್ಯಾಬೀಜವಾದ ಕ್ಷಕಾರವನಿರಿಸುವದಿಂತು
ಕರ್ಣಿಕಾಪೂರ್ವದಕಷಿಣಪಶ್ಚಿಮೋತ್ತರಂಗಳೆಂಬಿವೈದರಲ್ಲಿ
ಹ ಸ ಅ ಐ ಕ್ಷ ಎಂಬೈದಕ್ಕರಂಗಳಂ ಭಾವಿಪುದೆಂದೆಯಯ್ಯಾ,
ಪರಮಗುರು ಪರಮ ಶಿವಲಿಂಗೇಶ್ವರ. ॥ ೬೬ ॥

೧೨೮೭

ಮತ್ತೆಯುಂ,
ಕರ್ಣಿಕೆಯಂ ಬಳಸಿದಗ್ನಿಮಂಡಲ
ಚಂದ್ರಮಂಡಲ ಸೂರ್ಯಮಂಡಲ ಸಂಜ್ಞಿತವಾದ
ವೃತ್ತತ್ರಯದಲ್ಲಿ ತರದಿ
ವ್ಯಾಪಕಾಕ್ಷರ ಸ್ವರಾಕ್ಷರ ಸ್ಪರ್ಶಾಕ್ಷರಂಗಳೆಂಬೀ
ವರ್ಗತ್ರಯಮಂ ಪುದುಗೊಳಿಪುದಾ
ತ್ರಿವರ್ಗಪದಕ್ಷರಗಣನೆ ನಾಲ್ವತ್ತೆಂಟಾಯಿತ್ತೆಂದು ನಿರವಿಸಿದೆಯಯ್ಯಾ,
ಪ್ರಪಂಚಾತೀತ ಪರಮ ಶಿವಲಿಂಗೇಶ್ವರ. ॥ ೬೭ ॥

೧೨೮೮

ಇನ್ನುಮಾ ವ್ಯಾಪಕ ಸ್ವರ ಸ್ಪರ್ಶ ವರ್ಗತ್ರಯಾಂತರದಿಂ
ಮಂಡಲತ್ರಯದೊಳ್ನ್ಯಾಸಮಾಗಿರ್ಪುದೆಂತೆನೆ
ವ್ಯಾಪಕದೊಳೊಂದೊಂದು ಸ್ವರದೊಳೆರಡೆರಡು
ಸ್ಪರ್ಶದೊಳ್ಮೂರಿಂತಕ್ಕರಂಗಳನಿಂದ್ರಾದಿ ದಿಕ್ಕುಗಳಲ್ಲಿಟ್ಟು
ಭಾವಿಪುದೆಂದೆಯಯ್ಯಾ,
ಪರಮ ಶಿವಲಿಂಗ ಪರಿ[ಪೂರ್ಣ]ತಾಂಗ. ॥ ೬೮ ॥

೧೨೮೯

ಮರಲ್ದುಮಿಂದ್ರಾಗ್ನಿ ಯಮ ನಿಋತಿ ವರುಣ
ವಾಯು ಕುಬೇರೀಶಾನರೆಂಬಷ್ಟ ದಿಗ್ದಳಂಗಳ
ನಾಲ್ಕರಲ್ಲಿ ಮೊದಲೊಂದೊಂದು ದಳಂಗಳಂ ಬಿಟ್ಟುಳಿದಿಂದ್ರಾದಿ
ದಿಶಾಪದಿಶಾ ದಳತ್ರಯದಲ್ಲಿ
ಭಾವ ಸಂಜ್ಞಿಕಮಾದ ವ್ಯಂಜನಂಗಳಂ ಸ್ವರಂಗಳನುಮದರಲ್ಲಿ
ಸಮೂರ್ತಿ ಸಂಜ್ಞಿಕಮಾದ ದೀರ್ಘಂಗಳ ನ್ಯಾಸಮಂ ಮಾಡಿ
ಕ್ರಮದಿಂ ಭಜಿಪುದೆಂದೆಯಯ್ಯಾ,
ಪರಮ ಶಿವಲಿಂಗೇಶ್ವರ ಪ್ರಮಥಪದ್ಮ ದಿವಾಕರ. ॥ ೬೯ ॥

೧೨೯೦

ಮತ್ತಮಾಯಗ್ನಿಂದು ಸೂರ್ಯ ಸಂಜ್ಞಿಕ
ಮಂಡಲತ್ರಯದ ದಳಂಗಳಲ್ಲಿ,
ತರದಿಂ ಪ್ರದಕ್ಷಿಣದಿಂ ಮೂಡಂತೊಡಗಿಯಗ್ನಿ
ಮಂಡಲದ ಪೂರ್ವದಳದಲ್ಲಿ,
ಬಿಂದು ಸಂಜ್ಞಿಕವಾದ ಸಕಾರಮನವರಾಚೆಯ
ಚಂದ್ರಮಂಡಲದ ಪೂರ್ವದಳದಲ್ಲಿ
ತತ್ವಬೀಜ ಸಂಜ್ಞಿಕವಾದಕಾರಮಂ
ಮೂರ್ತಿಬೀಜ ಸಂಜ್ಞಿಕಮಾದಾಕಾರಮುಮನಿಂದ್ರಾಗ್ನಿಗಳಪ
ದಿಕ್ಕಿನೊಳ್ಬರೆವುದು.
ಸೂರ್ಯಮಂಡಲದ ಪೂರ್ವದಳದೊಳುಮಾ ಇಂದ್ರಾಗ್ನಿಗಳಪದಿಕ್ಕಿನ
ದಳಂಗಳಲ್ಲಿಯುಂ,
ಭಾವ ಸಂಜ್ಞಿಕಂಗಳಾದ ಕಕಾರಂ ಖಕಾರಂ ಗಕಾರಂಗಳಂ

ಪರಿವಿಡಿಯಿಂ ನ್ಯಾಸಮಂ ಮಾಡಿ ಭಾವಿಪುದೆಂದೆಯಯ್ಯಾ,
ತ್ರಿಪುರಾಪಹಾರ ಪರಮ ಶಿವಲಿಂಗೇಶ್ವರ. ॥ ೭೦ ॥

೧೨೯೧

ಮತ್ತಮಗ್ನಿಮಂಡಲದಗ್ನಿದಿಕ್ಕಿನೇಕದಳದಲ್ಲಿ ಷಕಾರಮ-
ನದರಾಚೆಯ ಚಂದ್ರಮಂಡಲದ
ದಳದ್ವಯದಗ್ನಿದಳದಲ್ಲಿ ಇಕಾರಮ-
ನಗ್ನಿಯಮರಪದಿಕ್ಕಿನೊಳಿಕಾರಮುಮ-
ನದರಾಚೆಯ ಸೂರ್ಯಮಂಡಲದ
ದಳತ್ರಯದಲ್ಲಿಯಗ್ನಿದಳ- ದೊಳ್ಘಕಾರಮಂ-
ನಗ್ನಿಯಮರಪದೆಶೆಯ ದಳಂಗಳಲ್ಲಿ ಔಕಾರ ಚಕಾರಂಗಳಂ
ನ್ಯಾಸೀಕರಿಸಿ ಭಾವಿಪುದೆಂದೆಯಯ್ಯಾ,
ಪರಮ ಶಿವಲಿಂಗ ಪರ್ವತಾತ್ಮಭವೋತ್ಸಂಗ. ॥ ೭೧ ॥

೧೨೯೨

ಮೇಣ್,
ಅಗ್ನಿಮಂಡಲದ ಯಮದಿಕ್ಕಿನೇಕದಳದಲ್ಲಿ ಶಕಾರಮನದರಾಚೆಯ
ಚಂದ್ರಮಂಡಲದ ದಳದ್ವಯದೊಳಗೆ
ಯಮದಿಕ್ಕಿನ ದಳದಲ್ಲಿ ಉಕಾರಮಂ,
ಯಮ ನೈಋುತ್ಯರಪದಿಕ್ಕಿನ ದಳದಲ್ಲಿ ಊಕಾರಮುಮನದರಾಚೆಯ
ಸೂರ್ಯಮಂಡಲದ ಯಮದಿಕ್ಕಿನ ದಳತ್ರಯದೊಳಗೆ
ಯಮದಳದಲ್ಲಿ ಛಕಾರಮಂ,
ಯಮ ನೈಋುತ್ಯರಪದಿಕ್ಕಿನ ದಳದ್ವಯದಲ್ಲಿ ಜಕಾರ
ಝಕಾರಂಗಳನಿಟ್ಟು
ಭಾವಿಪುದೆಂದುಪದೇಶಿಸಿದೆಯಯ್ಯಾ,
ಪರಮ ಶಿವಲಿಂಗೇಶ್ವರ. ॥ ೭೨ ॥

೧೨೯೩

ಮರಲ್ದುಮಗ್ನಿಮಂಡಲದ ನೈಋುತ್ಯದಿಕ್ಕಿನೇಕದಳದಲ್ಲಿ ವಕಾರ-
ಮನದರಾಚೆಯ ಚಂದ್ರಮಂಡಲದ ನೈರುತ್ಯದಿಕ್ಕಿನ ದಳದ್ವಯದ
ನೈಋುತ್ಯದಳದಲ್ಲಿ ಋಕಾರಮಂ,

ನೈಋುತ್ಯ ವರುಣರಪದಿಕ್ಕಿನ ದಳದಲ್ಲಿ ಋಕಾರಮಂ
ಅದರಾಚೆಯ ಸೂರ್ಯಮಂಡಲದ ದಳತ್ರಯವಲ್ಲಿ
ನೈಋುತ್ಯ ದಳದೊಳಗೆ ಇಕಾರಮಂ
ನೈಋುತ್ಯ ವರುಣರಪದಿಕ್ಕಿನ ದಳದ್ವಯದಲ್ಲಿ ಟಕಾರ ಠಕಾರಂಗಳಂ
ನ್ಯಸ್ತಂಗೆಯ್ದು ಭಾವಿಪುದೆಂದೆಯಯ್ಯಾ,
ಪರಿಪೂರ್ಣ ಪರಮ ಶಿವಲಿಂಗೇಶ್ವರ. ॥ ೭೩ ॥

೧೨೯೪

ಬಳಿಕ್ಕಮಗ್ನಿಮಂಡಲದ ವರುಣದಿಕ್ಕಿನೇಕದಳದಲ್ಲಿ ಲಕಾರಮ-
ನದರಾಚೆಯ ಚಂದ್ರಮಂಡಲದ ದಳದ್ವಯದಲ್ಲಿ
ವರುಣದಳದೊಳಗೆ ಈಕಾರಮಂ
ವರುಣ ವಾಯುಗಳಪದಿಕ್ಕಿನ ದಳದಲ್ಲಿ ಐಕಾರಮಂ
ಅದರಾಚೆಯ ಸೂರ್ಯಮಂಡಲದ ದಳತ್ರಯವಲ್ಲಿ
ವರುಣ[ದಳ]ದೊಳಗೆ ಡಕಾರಮಂ
ವರುಣ ವಾಯುಗಳಪದಿಕ್ಕಿನ ದಳದ್ವಯದಲ್ಲಿ ಢಕಾರ ಣಕಾರಂಗಳ-
ನನುಗೊಳಿಸಿ ಭಾವಿಪುದೆಂದೆಯಯ್ಯಾ,
ಪರಮ ಶಿವಲಿಂಗ ಫಣೇಶ್ವರ ಭೂಷಿತಾಂಗ. ॥ ೭೪ ॥

೧೨೯೫

ಬಳಿಕ್ಕೆಯುಮಗ್ನಿಮಂಡಲದ ವಾಯುದಿಕ್ಕಿನೇಕದಳದಲ್ಲಿ ರಕಾರಮ-
ನದರಾಚೆಯ ಚಂದ್ರಮಂಡಲದ ವಾಯುದಿಕ್ಕಿನ ದಳದ್ವಯವಲ್ಲಿ
ವಾಯುದಳದೊಳಗೆ ಎಕಾರಮಂ,
ವಾಯು ಕುಬೇರರಪದಿಕ್ಕಿನ ದಳದ್ವಯದಲ್ಲಿ ಐಕಾರಮ-
ನದರಾಚೆಯ ಸೂರ್ಯಮಂಡಲವ ದಳತ್ರಯದಲ್ಲಿ
ವಾಯುದಳದೊಳಗೆಕಾರಮಂ,
ವಾಯು ಕುಬೇರರಪದಿಕ್ಕಿನ ದಳದ್ವಯದಲ್ಲಿ ಥಕಾರ ದಕಾರಂಗಳಂ
ಬರೆದು ಭಾವಿಪುದೆಂದೆಯಯ್ಯಾ,
ಪರಮ ಶಿವಲಿಂಗೇಶ್ವರ ಪ್ರಚುರ ಕಲ್ಯಾಣ ಗುಣಾಕರ. ॥ ೭೫ ॥

೧೨೯೬

ಮತ್ತೆಯುಮಗ್ನಿಮಂಡಲದ ಕುಬೇರದಿಕ್ಕಿನೇಕದಳದಲ್ಲಿ ಯಕಾರಮ-
ನದರಾಚೆಯ ಚಂದ್ರಮಂಡಲ ದಳದ್ವಯದಲ್ಲಿ

ಕುಬೇರದಳದೊಳಗೆ ಬಕಾರಮಂ,
ಕುಬೇರಿಶಾನರಪದಿಕ್ಕಿನ ದಳದಲ್ಲಿ ಔಕಾರಮ-
ನಪರಾಚೆಯ ಸೂರ್ಯಮಂಡಲದ ದಳತ್ರಯದಲ್ಲಿ
ಕುಬೇರದಳದೊಳಗೆ ಫಕಾರಮಂ,
ಕುಬೇರೀಶಾನರಪದಿಕ್ಕಿನ ದಳದ್ವಯದಲ್ಲಿ
ನಕಾರಂಗಳನುದ್ಧರಿಪುದೆಂದು
ನಿರವಿಸಿದೆಯಯ್ಯಾ, ಪರಮ ಶಿವಲಿಂಗಯ್ಯ. ॥ ೭೬ ॥

೧೨೯೭

ಬಳಿಕ್ಕೆಯುಮಗ್ನಿ ಮಂಡಲದೀಶಾನದಿಕ್ಕಿನೇಕದಳದಲ್ಲಿ ಮಕಾರಮ-
ನಪರಾಚೆಯ ಚಂದ್ರಮಂಡಲದಳದ್ವಯದಲ್ಲಿ
ಈಶಾನ್ಯದಳದೊಳಗೆ ಅಕಾರಮ-
ನೀಶಾನೇಂದ್ರರಪದಿಕ್ಕಿನ ದಳದಲ್ಲಿ ಅಃಕಾರಮಂ,
ಅಪರಾಚೆಯ ಸೂರ್ಯಮಂಡಲದ ದಳತ್ರಯದಲ್ಲಿ
ಈಶಾನ್ಯದಳದೊಳಗೆ ಫಕಾರಮ-
ನೀಶಾನೇಂದ್ರಪದಿಕ್ಕಿನ ದಳದ್ವಯದಲ್ಲಿ ಬಕಾರಂಗಳನಿಟ್ಟು
ಭಾವಿಪುದೆಂದೆಯಯ್ಯಾ,
ಪರಮ ಶಿವಲಿಂಗೇಶ್ವರ ತ್ರಿಭುವನಾಧೀಶ್ವರ. ॥ ೭೭ ॥

೧೨೯೮

ಇಂತು ಭ್ರೂಮಧ್ಯ ಸಂಜ್ಞಿಕ ಮೇರುಗಿರಿಯುಪರಿಯ
ಕೈಲಾಸನಾಮ ದ್ವಾದಶಾಂತ ವಿಶ್ರುತ ಬ್ರಹ್ಮನಾಡಿ
ಮೂಲಸೂತ್ರಾಯಮಾನತ್ವಗತ ಬ್ರಹ್ಮರಂಧ್ರಾಖ್ಯ
ಪರಿಸ್ಫುಟ ಮಂಡಲತ್ರಯ ವಿಳಸಿತ
ಶಾಂಭವಚಕ್ರ ಮಧ್ಯಸ್ಥಿತ ದೇವತಾ ಮಂತ್ರಾಕ್ಷರಂಗಳಂ
ನಿರೂಪಿಸಿದೆಯಾ
ಮಂತ್ರಾತ್ಮಕದಿಂ ನ್ಯಸ್ತವಾದಕ್ಷರ ಸಂಖ್ಯೆಗಳ್ವೆಂತು
ಬಹುದಯಾಪಾಂಗದಿಂ ನೋಡಿ ಸಂಜ್ಞೆಗೈದು ನಿರೂಪಿಸಯ್ಯಾ,
ಪರಮ ಶಿವಲಿಂಗೇಶ್ವರ ಪ್ರಕಾಶಿತಾಗಮೋತ್ಕರ. ॥ ೭೮ ॥

೧೨೯೯

ಪೂರ್ವಿವಾದಿಯಾಗಿ ಮಂಡಲತ್ರಯದೊಳ್ಮೊದಲಗ್ನಿ
ಮಂಡಲದೀಶಾನಂ ತೊಡಗಿ

ಸ ಷ ಶ ವ ಲ ರ ಯ ಮ ಗಳೆಂಬ
ವ್ಯಾಪಕಾಕ್ಷರಂಗಳೆಂಟೆ ಸಳಳೊಳಿರ್ಪವಾ
ಹಕಾರವೆ ಶಿವಬೀಜವಾದಕಾರಣವಾ ಚಕ್ರದ ಕರ್ಣಿಕಾಕ್ಷರವೆನಿಸಿತ್ತು.
ಳಕಾರಮೆ 'ಲಳಯೋರ್ಭೇದಃ' ಎಂದು ಲಳಂಗಳ್ಗೆ
ಭೇದಮಿಲ್ಲಮದರಿಂ
ಳಕಾರಂ ಲಕಾರದೊಳಂತರ್ಭಾವಮಾದುದುಮಲ್ಲದೆಯು-
ಮಾತ್ಮಬೀಜವಾದ ಳಕಾರಂ ಕರ್ಣಿಕಾದಳಂ
ನ್ಯಸ್ತಾತ್ಮಬೀಜವಾದ ಕಾರಣದೊಳ್ಪುದಿದಿರ್ಪುದಿಂತು
ಕರ್ಣಿಕಾಗ್ನಿಮಂಡಲನ್ಯಸ್ತ ದಶವ್ಯಾಪಕಾಕ್ಷರಂಗಳಂ ಪೇಳ್ದೆಯಯ್ಯಾ,
ಪರಮ ಶಿವಲಿಂಗೇಶ್ವರ ಪಟುವೇದಾಂತ ಭಾಸ್ವರ. ॥ ೭೯ ॥

೧೩೦೦

ಕ್ಷಕಾರಂ ವಿದ್ಯಾತತ್ವಾತ್ಮಕ ಜ್ಞಾನಶಕ್ತಿಸ್ವರೂಪಮಾದ ಕಾರಣ
ಕರ್ಣಿಕಾಸ್ಥ ಹಕಾರಸಮೀಪ ದಳದಲ್ಲಿ ನ್ಯಸ್ತವಾಯಿತ್ತು.
ಮಧ್ಯದ ಚಂದ್ರಮಂಡಲದ ಪೂರ್ವದಳಾದಿಯಾಗಿ
ಅ ಆ ಇ ಈ ಉ ಊ ಋ ೠ ಌ ೡ ಏ ಐ ಓ ಔ ಅಂ ಅಃ
ಎಂಬೀತರದಿಂ ತತ್ವಾಖ್ಯ ಮೂರ್ತ್ಯಾಖ್ಯಂಗಳೆನಿಪ
ಹ್ರಸ್ವ ದೀರ್ಘಂಗಳಾದ ಷೋಡಶ ಸ್ವರಂಗಳಿರ್ಪುವೆಂದು
ನಿರವಿಸಿದೆಯಯ್ಯಾ,
ನಿರಾಳಮೂರ್ತಿ ನಿಸ್ತುಳ ಪರಮ ಶಿವಲಿಂಗೇಶ್ವರ. ॥ ೮೦ ॥

೧೩೦೧

ಇಂತು ಮಧ್ಯವೃತ್ತದ ದಳಾಪದಳಂಗಳಲ್ಲಿ ನ್ಯಾಸಮಾದ
ಪದಿನಾರಕ್ಕರಂಗಳ ಎಸಳುಗಳಲ್ಲಿ ಪೂರ್ವದಳಾದಿಯಾಗಿ
ಕಖಗಘಙ ಚಛಜಝಞ ಟಠಡಢಣ
ತಥದಧನ ಪಫಬಭ ಎಂಬಿಪ್ಪತ್ತುನಾಲ್ಕು
ದಳಾಕ್ಷರನ್ಯಾಸಮಾದುದು.
ಮಕಾರವೆ ಯಕಾರ ಸಮೀಪವರ್ತಿಯಾದಕಾರಣ-
ಮಗ್ನಿಮಂಡಲದಳನ್ಯಸ್ತವಾಯಿತ್ತಮು ಗೂಡಿ
ಸ್ಪರ್ಶಾಕ್ಷರಂಗಳಿರ್ಪತ್ತೈದಾಯಿತ್ತೆಂದೆಯಯ್ಯಾ,
ಪರಮ ಶಿವಲಿಂಗೇಶ್ವರ. ॥ ೮೧ ॥

೧೩೦೨

ಇಂತು ಕರ್ಣಿಕಾಗ್ನಿಂದು ಸೂರ್ಯಮಂಡಲದಳಸ್ಥಂಗಳಾವಕ್ಷರಂಗಳ
ಗಣನೆಯೈವತ್ತೊಂದಾಯಿತ್ತು
ಮತ್ತಮೀ ಚಕ್ರಕರ್ಣಿಕಾದಿ ಮಂಡಲತ್ರಯಾನ್ವಿತ
ವಾಚಕರೂಪ ಪಕಾರಾದಿ ವರ್ಣ ವಾಚ್ಯ ನಿರೂಪಣಾನಂತರದಲ್ಲಿ,
ಕಡೆಯ ಸೂರ್ಯಮಂಡಲದುಪದಳಂಗಳಂ ಬಿಟ್ಟುಳಿದ
ಪರಶಿವಾದ್ಯಧಿದೇವತೆಗಳಂ ತಿಳಿದು ಭಾವಿಸಿ
ಪೂಜಿಪುದೆಂದೆಯಯ್ಯಾ,
ಪರಮ ಮಹಿಮ ಪರಶಿವಲಿಂಗೇಶ್ವರ. ॥ ೮೨ ॥

೧೩೦೩

ಇಂತಪ್ಪ ದಿವ್ಯಚಕ್ರಮಂಬುಜ ಪತ್ರೆ ಚಿನ್ನ ಬೆಳ್ಳಿ ತಾಮ್ರ
ಮೊದಲಾದವರ ತಗಡುಗಳೊಳಗರು ಚಂದನ ಕುಂಕುಮ
ಕರ್ಪೂರ ಗೋರೋಚನಾದಿ ದ್ರವ ದ್ರವ್ಯಂಗಳಿಂ ಬರೆದು
ಕಂಡಿಕೆಯಂ ಮಾಡಿ ಶಿರದೊಳ್ತಳೆಯೆ
ಸಮಸ್ತ ವಶ್ಯ ರೋಗಾಪಹರಣ
ಭೋಗ ಮೋಕ್ಷಾದಿಗಳಪ್ಪವೆಂದುಸಿರ್ದೆಯಯ್ಯಾ,
ಪರಮ ಶಿವಲಿಂಗೇಶ್ವರ ಫಣೀಶ್ವರ ಕಂಕಣ ಕರ. ॥ ೮೩ ॥

೧೩೦೪

ಬಳಿಕ್ಕಮೀ ಚಕ್ರಸ್ಥ ವರ್ಣಂಗಳ್ಗೆ ವರ್ಗಭೇದಮುಂಟದೆಂತೆನೆ
ಸ್ಥಿತಿವರ್ಗ ಸೃಷ್ಟಿವರ್ಗ ಸಂಹಾರವರ್ಗಂಗಳೆಂಬೀ ವರ್ಗಂಗಳವರಲ್ಲಿ
ಮೊದಲ ಸ್ಥಿತಿವರ್ಗವೊಂದರೊಳಗೆ
ಸಾತ್ವಿಕವರ್ಗ ರಾಜಸವರ್ಗ ತಾಮಸವರ್ಗಂಗಳಕ್ಕುಮಿವಕ್ಕೆ ವಿವರಂ-
ಪೂರ್ವಾದೀಶಾನಾಂತಮಾಗಿ ಅಗ್ನಿ ಚಂದ್ರ ಸೂರ್ಯಮಂಡಲದಳ
ನ್ಯಸ್ತಾಕ್ಷರಗಳೆಲ್ಲಂ ಸ್ಥಿತಿವರ್ಗ-
ವಿವರೊಳ್ಸಾತ್ವಿಕವರ್ಗ ರಾಜಸವರ್ಗ ತಾಮಸವರ್ಗಗಳೆಂದು
ತ್ರಿವಿಧಮಪ್ಪವರಲ್ಲಿ
ಮೊದಲಗ್ನಿಮಂಡಲದೆಂಟು ದಳಂಗಳಲ್ಲಿಯ
ಸ ಷ ಶ ವ ಲ ರ ಯ ಮ
ಗಳೆಂಬಿವೆಂಟು ಸಾತ್ವಿಕಂಗಳೆನಿಪ-
ವದರಾಚೆಯ ಚಂದ್ರಮಂಡಲದ ದಳೋಪದಳಂಗಳಲ್ಲಿ

ಪೂರ್ವಾದೀಶಾನಾಂತಮಾಗಿ ನ್ಯಸ್ತವಾದ
ಅ ಆ ಇ ಈ ಉ ಊ ೠ ೡ ಏ ಐ ಓ ಔ ಅಂ ಅಃ
ಎಂಬೀ ಪದಿನಾರೆ ರಾಜಸಂಗಳೆನಿಪ-
ವವರಾಚೆಯ ಸೂರ್ಯಮಂಡಲದ ಮೂವತ್ತೆರಡು ದಳಂಗಳೊಳಗ-
ಣೆಂಟಕ್ಕರಂಗಳಗ್ನಿಮಂಡಲದೆಂಟುದಳಂಗಳಲ್ಲಿ
ನ್ಯಸ್ತವಾಗಿರ್ದಪವವರ,
ಶೂನ್ಯದಳಂಗಳೆಂಟಂ ಬಿಟ್ಟುಳಿದಿರ್ಪತ್ತು ನಾಲ್ಕು ದಳಂಗಳಲಿ
ನ್ಯಸ್ತವಾದ
ಕಖಗಘಙ ಚಛಜಝಞ ಟಠಡಢಣ
ತಥದಧನ ಪಫಬಭಂಗಳೆಂಬಿರ್ಪತ್ತನಾಲ್ಕೆ ತಾಮಸಂಗಳೆನಿಪವೀ
ವರ್ಗತ್ರಯಂ ಸ್ಥಿತಿವರ್ಗಗತವಾದುದೀ
ಮೂರ್ಮೂರ್ವರ್ಗಾಕ್ಷರಂಗಳ ಸಂಜ್ಞೆಯಿಂದೆ ಮಂತ್ರಗಳನುದ್ಧರಿಪು-
ದಿನ್ನುಂ ಶುದ್ಧಪ್ರಸಾದ ಮೂಲಪ್ರಸಾದ ತತ್ವಪ್ರಸಾದ ಆದಿಪ್ರಸಾದ
ಆತ್ಮಪ್ರಸಾದಂಗಳೆಂಬ
ಪಂಚಪ್ರಸಾದ ಮಂತ್ರಗಳನೀ ಚಕ್ರಸ್ಥಾಕ್ಷರ ಸ್ಥಿತಿವರ್ಗದಿಂದುದ್ಧರಿಸಿ
ಭಾವಿಪುದೆಂದೆಯಯ್ಯಾ,
ಪರಮ ಶಿವಲಿಂಗೇಶ್ವರ ಸುಧಾಕರ ಶೇಖರ. ॥ ೮೪ ॥

೧೩೦೫

ಮತ್ತೆಯುಂ ಚಕ್ರದ ಪೂರ್ವಾದೀಶಾನಾಂತವಾಗಿ
ದಳನ್ಯಸ್ತವಾದಕಾರಾದಿ ಕ್ಷಕಾರಾಂತಮಾದಕ್ಷರಮಾಲಿಕೆಯೆ
ಸೃಷ್ಟಿವರ್ಗವೆನಿಪುದದರೊಳಷ್ಟ ವರ್ಗಂಗಳುಂಟವೆಂತೆನೆ-
ಅಕಾರಾದ್ಯಃಕಾರಂತಮಾದ ಷೋಡಶ ಸ್ವರೋತ್ಕರವೆ
ಅವರ್ಗಮೆನಿಕ್ಕುಂ.
ಕಕಾರದಿ ಙಕಾರಾಂತವಾದೈದಕ್ಕರವೆ ಕವರ್ಗಮೆನಿಕುಂ.
ಚಕಾರಾದಿ ಞಕಾರಾಂತವಾದೈದಕ್ಕರವೆ ಚವರ್ಗಮೆನಿಕುಂ.
ಟಕಾರಾದಿ ಣಕಾರಾಂತವಾದೈದಕ್ಕರವೆ ಟವರ್ಗಮೆನಿಕುಂ.
ತಕಾರಾದಿ ನಕಾರಾಂತಮಾದೈದಕ್ಕರವೆ ತವರ್ಗಮೆನಿಕುಂ.
ಪಕಾರಾದಿ ಮಕಾರಾಂತಮಾದೈದಕ್ಕರವೆ ಪವರ್ಗಮೆನಿಕುಂ.
ಯಕಾರಾದಿ ವಕಾರಾಂತಮಾದ ನಾಲ್ಕಕ್ಕರವೆ ಯವರ್ಗಮೆನಿಕುಂ.
ಶಕಾರಾದಿ ಕ್ಷಕಾರಾಂತವಾದಾರಕ್ಕರವೆ ಶವರ್ಗಮೆನಿಕುಂ.
ಮಿಂತಕಚಟತಪಯಶಂಗಳೆಂಬಿವೆ ಅಷ್ಟವರ್ಗಂಗಳಿವಕ್ಕೆ

ತರದಿಂದಷ್ಟ ದಿಕ್ಪತಿಗಳಂ ಪೇಳ್ವೆನೆಂತೆನೆ-
ಅವರ್ಗಮಿಂದ್ರ ಕವರ್ಗಮಗ್ನಿ ಚವರ್ಗ ಯಮ
ಟವರ್ಗ ನಿಯತಿ ತವರ್ಗ ವರುಣ ಪವರ್ಗ ವಾಯು
ಯವರ್ಗ ಕುಬೇರ ಶವರ್ಗಮೀಶಾನಮಿಂತಿದು ಸೃಷ್ಟಿವರ್ಗಂ.
ಸದಾಶಿವಮಂತ್ರಂಗಳ್ಪಂಚ ಬ್ರಹ್ಮಮಂತ್ರಂಗಳ್.
ಷಡಂಗಮಂತ್ರಂಗಳ್ಸಕಲ ಸೌಮ್ಯಮಂತ್ರಗಳಾಪವುಂಟವನೆಲ್ಲಮಂ
ಸೃಷ್ಟಿವರ್ಗದಲ್ಲಿಯೆ ತಿಳಿವುದೆಂದು ನಿರವಿಸಿದೆಯಯ್ಯಾ,
ಪರಿಪೂರ್ಣ ಪರಂಜ್ಯೋತಿ ಸ್ವರೂಪ
ಪರಮ ಶಿವಲಿಂಗೇಶ್ವರ. ॥ ೮೫ ॥

೧೩೦೬

ಇನ್ನು ಸೃಷ್ಟಿವರ್ಗನಿರೂಪಣಾನಂತರದಲ್ಲಿ
ಸಂಹಾರವರ್ಗಮಂ ಪೇಳ್ವೆನೆಂತೆನೆ-
ಕ್ಷಕಾರಾದ್ಯಕಾರಾಂತಮಾದಕ್ಷರಮಾಲಿಕೆಯೆ ಸಂಹಾರವರ್ಗಮೆನಿಕುಂ.
ಅದರಲ್ಲಿ ಕ್ಷ ಳ ಹ ಸ ಷ ಶ ವ ಲ ರ ಗಳೆಂಬೀ ಪತ್ತೆ
ಸಂಹಾರವರ್ಗದಲ್ಲಿ ಮೊದಲವರ್ಗಮಿದು ಪೃಥ್ವಿ.
ಮ ಭ ಬ ಫ ಪ ನ ಧ ದ ಥ ತಂಗಳೆಂಬೀ ಪತ್ತೆ
ಸಂಹಾರಿವರ್ಗದೊಳೆರಡನೆಯ ವರ್ಗಮಿದಪ್ಪು.
ಣ ಢ ಡ ಠ ಟ ಞ ಝ ಜ ಛ ಚಂಗಳೆಂಬೀ ಪತ್ತೆ
ಸಂಹಾರವರ್ಗದಲ್ಲಿ ಮೂರನೆಯ ವರ್ಗಮಿದಗ್ನಿ.
ಙ ಘ ಗ ಖ ಕಂಗಳೆಂಬೀವೈದುಂ
ಸಂಹಾರವರ್ಗದಲ್ಲಿ ನಾಲ್ಕನೆಯ ವರ್ಗಮಿದು ವಾಯು.
ಅಃ ಅಂ ಔ ಓ ಐ ಏ ೡ ಌ ೠ ಋ ಊ ಉ ಈ ಇ ಆ ಅ
ಎಂಬೀ ಪದಿನಾರೆ
ಸಂಹಾರವರ್ಗದಲ್ಲಿಯೈದನೆಯ ವರ್ಗಮಿದಾಕಾಶ-
ಮಿವೈದು ವರ್ಗಂಗಳನೊಳಕೊಂಡು ಸಂಹಾರವರ್ಗ-
ಮಿರ್ಪುದಿದಲ್ಲಿಯೆ
ಸಮಸ್ತವಾದ ರುದ್ರಮಂತ್ರಗಳನುದ್ಧರಿಪುದಿದೀಗ ಸಂಹಾರವರ್ಗಂ.
ಇಂತು ಸ್ಥಿತಿ ಸಂಹಾರ ತಾಮಸವರ್ಗ ವರ್ಗತ್ರಯಂಗಳಂ
ನಿರವಿಸಿದೆಯಯ್ಯಾ,
ನಿರಾಳ ನಿಶ್ಚಿಂತ ಪರಮ ಶಿವಲಿಂಗೇಶ್ವರ. ॥ ೮೬ ॥

೧೩೦೭

ಇಂತು ವರ್ಗತ್ರಯ ನಿರೂಪಣಾನಂತರವಲ್ಲಿ,
ಚಕ್ರಕಮಲಕರ್ಣಿಕಾದಿ ಮಂಡಲತ್ರಯದೊಳಗೆ
ನ್ಯಸ್ತವರ್ಗಂಗಳಲ್ಲಿ, ಮೊದಲ ಸೂಕ್ಷ್ಮಕರ್ಣಿಕಾ ನ್ಯಸ್ತವರ್ಗಮಂ
ನಿರೂಪಿಸುವೆನೆಂತೆನೆ-
ನಾದವೆಂದು ಗುಹ್ಯವೆಂದು ಪರವೆಂದು ಜೀವವೆಂದು
ದೇಹಿಯೆಂದು ಭೂತವೆಂದು ಪಂಚಮವೆಂದು
ಸಾಂತವೆಂದು ತತ್ಸಾಂತವೆಂದು
ಭೂತಾಂತವೆಂದು ಶಿವಾರ್ಣವೆಂದು
ಶೂನ್ಯವೆಂದವ್ಯಯವೆಂದೀ
ಪದಿಮೂರ್ಪೆಸರ್ಕರ್ಣಿಕಾನ್ಯಸ್ತ ಹಕಾರಕ್ಕೆಂದು
ನಿರೂಪಿಸಿಸಿದೆಯಯ್ಯಾ,
ಪರಾತ್ಪರ ಪರಮ ಶಿವಲಿಂಗೇಶ್ವರ. ॥ ೮೭ ॥

೧೩೦೮

ತ್ರಯೋದಶ ನಾಮಕ್ಕೆ ವಿವರವೆಂತೆನೆ
ಸೂಕ್ಷ್ಮವಾಗಿ ಘೋಷಮಮಯವಾದುದರಿಂ ನಾದಂ.
ಚರಾಚರಾದಿ ಜೀವ ಹೃದಯಸ್ಥ ಚೈತನ್ಯಮಪ್ಪುದರಿಂ ಗುಪ್ಯ.
ಮೂರ್ತಿ[ಯ]ದತ್ತಣೆನುತ್ತೀರ್ಣಮಾದುದರಿಂದ ಪರ-
ಮಿನ್ನೊಂದು ತೆರದಿಂ ಸ್ಥೂಲ ಸೂಕ್ಷ್ಮ ಪರಮೆಂದು ಮೂದೆರ-
ನದರೊಳ್ವ ಎಂಬ ಶಬ್ದಂ ಸ್ಥೂಲಂ ಚಿಂತಾಮಯಂ
ಸೂಕ್ಷ್ಮಂ ಶಬ್ದಂ ಚಿಂತಾರಹಿತತೆಯೆ ಪರಂ ಜೀವವೆಂದು ಕಲ್ಪಿತ
ಚಿತ್ತಾದ್ವೈತನಾದ ಶಿವಂ ಜೀವತ್ವವನಂಗೀಕರಿಸದಿರ್ದೊಡೆ
ಪ್ರಪಂಚವೇನುವಿಲ್ಲವೆಂದು ನಿರವಿಸಿದೆಯಯ್ಯಾ,
ಪರಮ ಶಿವಲಿಂಗೇಶ್ವರ ಪ್ರಭಾಮಯ ಕಳೇವರ. ॥ ೮೮ ॥

೧೩೦೯

ಮತ್ತಂ, ಶಿವನೆ ಜೀವನಾದೊಡೆ ಜೀವಂಗುಂಟಾದ ಜನನಾದಿ
ದೋಷಂಗಳಿವಂಗುಂಟಾದಪುವಲಾಯೆನೆ
ಸಾಗರ ತರಂಗ ನ್ಯಾಯವಂತಭೇದಂ.

ಕಡಲುದಕಂ ತೃಣ ಕಣ ಜಲಮುಮೇಕಮಾದೊಡಂ
ಕಡಲ ಗಂಭೀರತೆ ತೃಣ ಕಣ ಜಲಕ್ಕಿಲ್ಲಮಂತೆ
ಶಿವಂಗುಂಟಾದ ಗಂಭೀರ ಮಹತ್ವಂಗಳ್ಬ್ರಹ್ಮಾದಿ
ಸ್ತಂಭಪರ್ಯಂತಮಾದ ಕಲ್ಪಿತಜೀವಜಾಲಕ್ಕಿಲ್ಲಮೆಂಬುದೆ
ನಿಶ್ಚಿತಾರ್ಥಮಕ್ಕು-
ಮದಾದೊಡಂ ಶಿವಂ ಪರಿಪೂರ್ಣನಪ್ಪುದರಿಂ
ಮುನ್ನಿನಂತೆ ಸಾಗರ ತರಂಗ ನ್ಯಾಯದಿಂ ಜೀವನಾದನದು
ಕಾರಣದಿಂ ಸದಾಶಿವಾದ್ಯವನಿಪರ್ಯಂತಮಾದ ಜಗತ್ತೇ
ದೇಹವನುಳ್ಳ ಕಾರಣಂ ದೇಹಿಯಾ ಫೇನೂರ್ಮಿಕಣಗಳ್ತನ
ಗಿರ್ದೊಡುಲುಹಿಲ್ಲದ ಸಮುದ್ರದಂತೆ,
ಶಿವಂ ದೇಹವಿರ್ದೊಡಂ ದೇಹವಿಲ್ಲದವನೆಂದೇ
ಬೋಧಿಸಿದೆಯಯ್ಯಾ,
ಪರಮ ಶಿವಲಿಂಗ ಸ್ಫಟಿಕರುಚಿ ಸನ್ನಿಭಾಂಗ. ॥ ೮೯ ॥

೧೩೧೦

ಬಳಿಕ್ಕಮಾ ಶಿವಸದಸದ್ವಸ್ತು ಸ್ವರೂಪಮುಂ ತಾನೆಯಾಗಿ
ಶುದ್ಧ ಸದ್ರೂಪನಾದ ಕಾರಣಂ,
ಭೂತಮೆನಿಪಾನಾಕಾಶದ್ವಾಯು ರೀತ್ಯಾದಿ
ಶ್ರುತ್ಯುಕ್ತ ಕ್ರಮಸೃಷ್ಟಿಯ ಪಂಚಭೂತದ ಮೊದಲಾಕಾಶಮಯವಾದ.
ಮತ್ತೆಯುಂ ಪಂಚಬ್ರಹ್ಮಮಯವಾದ.
ಸದಾಶಿವನಪ್ಪುದರಿಂದೆಯುಂ ಪಂಚಮವಾದ.
ಬಳಿಕ್ಕಂ, ಸೃಷ್ಟಿವರ್ಗಕ್ರಮದ ಶಕ್ತಿ ಬೀಜವಾದ.
ಬಿಂದುಸ್ವರೂಪ ಸಕಾರಮುಪರಿಯಲ್ಲಿರುತ್ತಿರ್ದ ಕಾರಣಂ
ಶಿವಂ ಸಾಂತವೆನಿಪಂ.
ಮತ್ತಂ, ನಿವೃತ್ತಿ ಕಲಾದಿ ಶಿವತತ್ವಾಂತವಾದ,
ತತ್ವಾಶ್ರಯವಾದ ಕಾರಣಂ ಶಿವಂ ತತ್ವಾಂತನೆನಿಪನೆಂದು
ನಿರವಿಸಿದೆಯಯ್ಯಾ,
ಪರಮ ಶಿವಲಿಂಗೇಶ್ವರ ಪ್ರಸಿದ್ಧ ಮಹಿಮಾಕರ. ॥ ೯೦ ॥

೧೩೧೧

ಮತ್ತಮಾ ಶುದ್ಧಪ್ರಸಾದಂ ಪೃಥ್ವೀಲಯಮುದಕದಲ್ಲಿ
ಉದಕದ ಲಯಮಗ್ನಿಯಲ್ಲಿ
ಅಗ್ನಿಯ ಲಯ ವಾಯುವಿನಲ್ಲಿ

ವಾಯು ಲಯಮಾಕಾಶವಲ್ಲಿಯಪ್ಪುದರಿಂದಾಕಾಶಂ
ಸರ್ವಾಶ್ರಯಮುಮಪ್ಪುದಮು ಕಾರಣದಿಂ
ಭೂತಾಂತವೆನಿಪುದಿನ್ನು
ಸಮಸ್ತ ವರ್ಣಂಗಳಂ ಮುಸುಂಕಿಕೊಂಡು
ಪ್ರಭಾವಾನ್ವಿತದಿಂ ಶಿವಾರ್ಣಮೆನಿಕುಂ.
ಮತ್ತಂ
ವಾಙ್ಮನೋತೀತ ಭಾವತ್ವದಿಂ ಶೂನ್ಯವೆನಿಪುದು.
ಬಳಿಕ್ಕಂ, ಜಗತ್ತು ತನ್ನಿಂದುದಿಸಿರ್ದು ಲಯವನೆಯ್ದಿದೊಡಂ
ಸಾಗರ ತರಂಗ ನ್ಯಾಯದಿಂ
ಕ್ಷಯಾಭಿವೃದ್ಧಿಗಳ್ತನಗಿಲ್ಲದೆ ಸರ್ವತೋಭದ್ರಮಾಗಿ
ಕೇಡಿಲ್ಲದಿರ್ಪುದರಿಂದವ್ಯಯಮಾದುದಿಂತು
ನಾದ ಗುಹ್ಯ ಪರ ಜೀವ ದೇಹಿ ಭೂತ ಪಂಚಮ
ಸಾಂತ ತತ್ವಾಂತ ಶಿವಾರ್ಣ ಶೂನ್ಯ ವ್ಯಯಂಗಳೆಂಬೀ
ತ್ರಯೋದಶವಿಧಾಭಿಧಾನ ಪರ್ಯಾಯವನುಳ್ಳ ಕರ್ಣಿಕಾಬೀಜವಾದ
ಶುದ್ಧಪ್ರಸಾದಮಂ ನಿರವಿಸಿದೆಯಯ್ಯಾ,
ನಿರಂತರ ಪರಮಶಿವಲಿಂಗೇಶ್ವರ, ॥ ೯೧ ॥

೧೩೧೨

ಬಳಿಕ್ಕಮೀ ಚಕ್ರದ ಕರ್ಣಿಕಾಕ್ಷರಮಂ ನಿರವಿಸಿ,
ಮತ್ತಂ, ಕೇಸರಾಕ್ಷರಗಳಂ ಪೇಳ್ವೆನೆಂತೆನೆ-
ಕರ್ಣಿಕೆಯ ಪೂರ್ವ ದಕ್ಷಿಣ ಪಶ್ಚಿಮೋತ್ತರಂಗಳಲ್ಲಿ
ನ್ಯಸ್ತವಾದ ಚತುರ್ದಳಾಕ್ಷರಂಗಳೊಳಗೆ
ಮೊದಲ ಪೂರ್ವದಳದ ಬಿಂದುಮಯ ಸಕಾರಕ್ಕೆ
ಆಧಾರವೆಂದು ಶಕ್ತಿಯೆಂದು ಕಾರ್ಯವೆಂದು ಪರವೆಂದು
ಬಿಂದುವೆಂದೈದು ಪರ್ಯಾಯನಾಮಂಗಳ್.
ಬಳಿಕ್ಕಂ, ದಕ್ಷಿಣದಳದಕಾರಕ್ಕೆ
ಅಕಾರವೆಂದು ಆತ್ಮಬೀಜವೆಂದು ದೇಹಿಯೆಂದು ಕ್ಷೇತ್ರಜ್ಞನೆಂದು
ಭೋಗಿಯೆಂದೈದು ಪರ್ಯಾಯನಾಮಂಗಳ್.
ಮತ್ತಂ, ಪಶ್ಚಿಮದಳದ ನಾದಮಯವಾದೈಕಾರಕ್ಕೆ
ಐಕಾರವೆಂದು ಶಿವಬೀಜವೆಂದಾಧೇಯವೆಂದು ಪರವೆಂದು
ನಾದಾಂತವೆಂದೈದು ಪರ್ಯಾಯನಾಮಂಗಳ್.
ಮರಲ್ದುಂ, ಬಡಗಣದಳದ ಕ್ಷಕಾರಕ್ಕೆ
ವಿದ್ಯಾಬೀಜವೆಂದು ಕ್ಷಕಾರವೆಂದು ಕೂಟಾರ್ಣವೆಂದು

ವರ್ಗಾಂತವೆಂದು ದ್ರವ್ಯವೆಂದೈದು ಪರ್ಯಾಯನಾಮಂಗಳ್.
ಇತ್ತೆರದಿಂ ಕೇಸರಾಕ್ಷರದ ಚತುರ್ದಳಾಕ್ಷರಂಗಳಂ
ನಿರವಿಸಿದೆಯಯ್ಯಾ,
ಪರಮ ಶಿವಲಿಂಗೇಶ್ವರ ಕಲ್ಯಾಣಗುಣಾಕರ. ॥ ೬೨ ॥

೧೩೧೩

ಮತ್ತಂ, ಸಕೇಸರ ಕರ್ಣಿಕಾಕ್ಷರ ನಿರೂಪಣಾನಂತರದಲ್ಲಿ-
ಯಗ್ನಿಮಂಡಲದ ಪೂರ್ವಾದೀಶಾನಾಂತವಾಗಿ ನ್ಯಸ್ತವಾದ
ಸಕಾರಾದಿ ಮಕಾರಾಂತವಾದಷ್ಟದಳಾಕ್ಷರಂಗಳೊಳಗೆ
ಮೊದಲ ಸಕಾರವೇ ಶಿವಮಂತ್ರೋದ್ಧರಣಕ್ಕೆ ಕಾರಣವಾದ
ಶುಕ್ಲಧಾತುವೆಂದು ಪೆಸರನುಳ್ಳದು.
ಮತ್ತಂ ಸ್ಥಿತಿಮಾರ್ಗದಿಂ ಶಿವಮಂತ್ರೋದ್ಧಾರಣಕ್ಕೆರಡನೆಯದಾದ
ಷಕಾರವೆ ಸೂರ್ಯಪರ್ಯಾಯನಾಮದಿಂ
ಮಜ್ಜಾಧಾತುವೆಸರನುಳ್ಳದು.
ಮತ್ತಂ, ಮೂರನೆಯ ಯಥಾಕ್ರಮದ ಶಕಾರವೆ
ಶ್ರೀಪರ್ಯಾಯ ನಾಮದಿಂದಸ್ಥಿ ಧಾತುವೆಸರನುಳ್ಳುದು.
ಬಳಿಕ್ಕಂ, ನಾಲ್ಕನೆಯ ಕ್ರಮದ ವಕಾರವೆ
ಸವರುಣಜಲ ಪರ್ಯಾಯನಾಮದಿಂದೆ,
ಮೇಧೋಧಾತುವೆಸರನುಳ್ಳುದು.
ಬಳಿಕ್ಕಂ, ಮೊದಲಂತೈದನೆಯದಾದ ಲಕಾರವೆ
ಇಂದ್ರಿಯಬೀಜವಾಗಿ
ಪೃಥ್ವಿಪರ್ಯಾಯನಾಮದಿಂ ಮಾಂಸಧಾತುವೆಸರನುಳ್ಳುದು.
ಮರಲ್ದುಂ, ಪೂರ್ವದಂತಾರನೆಯ ಕ್ರೋಧಾಭಿಧರಕಾರವೆ.
ಯಗ್ನಿ ಪರ್ಯಾಯನಾಮದಿಂ ರಕ್ತ ಧಾತುವೆಸರನುಳ್ಳುದು.
ಮತ್ತೆಯುಂ, ಮುನ್ನಿನಂತೇಳನೆಯ ಯಕಾರವೆ
ವಾಯುಬೀಜವೆನಿಸಿ
ವಾಯುಪರ್ಯಾಯನಾಮದಿಂ ಸ್ನಾಯುಧಾತುವೆಸರನುಳ್ಳುದು.
ಮೇಣಾದಿಯಂತೆಂಟನೆಯ ಮಕಾರವೆ ಕಾಲಮೃತ್ಯುವೆನಿಸಿ
ಮೃತ್ಯುಕಾರಕವೆಂಬ ನಾಮವನುಳ್ಳುದಿಂತು
ಸ್ಥಿತಿವರ್ಗದ ತ್ರಿಭೇದವನುಳ್ಳಗ್ನಿಮಂಡಲದ ನಿಲುಕಡೆಯಂ
ನಿರೂಪಿಸಿದೆಯಯ್ಯಾ,
ಪರಮ ಶಿವಲಿಂಗ ಸುರಗಂಗೋತ್ತಮಾಂಗ. ॥ ೬೩ ॥

೧೩೧೪

ಮರಲ್ದುಮೆರಡನೆಯ ಚಂದ್ರಮಂಡಲವಳೋಪವಳ
ಷೋಡಶಂಗಳಲ್ಲಿ
ಪೂರ್ವಾದೀಶಾನಾಂತ ದಳನ್ಯಸ್ತ ಷೋಡಶ
ಸ್ವರಂಗಳೊಳ್ಮೊದಲಕಾರ
ನಾಮಂಗಳಂ ಪೇಳ್ವೆನೆಂತೆನೆ-
ಆದಿಬೀಜವೆಂದು ವರ್ಣಾದಿಯೆಂದು
ವರ್ಗಾದಿಯೆಂದಕಲಾದಿಯೆಂದು
ಸ್ವರಾದಿಯೆಂದು ಮಾತ್ರಾದಿಯೆಂದು
ಪ್ರಕೃತಿಯೆಂದು ಜೀವಾದಿಯೆಂದು
ಕಲೆಯೆಂದು ಮಾತ್ರೆಯೆಂದು
ಆದಿಯೆಂದು ಸ್ವರವೆಂದೀ
ಯಕಾರ ಪರ್ಯಾಯನಾಮಂಗಳು ಪೇಳ್ದಿನ್ನುಳಿದ
ಸ್ವ ಪರ್ಯಾಯ ನಾಮಂಗಳ
ಬಾಹುಲ್ಯ ಭಾರದಿಂ ಪೇಳ್ವುದಿಲ್ಲಂಮಂತೆಯೆ
ಸೂರ್ಯಮಂಡಲ ದಳ ಲಿಪಿ ನಾಮ ಪರ್ಯಾಯಂಗಳುಮಂ
ನಿರವಿಸಲಿಲ್ಲಮಿವೆಲ್ಲಮಂ
ಮಂತ್ರಾಗಮಂಗಳಲ್ಲಿ ನೋಡಿಕೊಂಬುದಿಲ್ಲಿಯದು
ಪ್ರಾಪಂಚಿಕವೆಂದುಳಿದತಿ ಸೂಕ್ಷ್ಮವನೆ ಬೋಧಿಸಿದೆಯಯ್ಯಾ.
ಪರಾತ್ಪರ ಪರಮ ಶಿವಲಿಂಗೇಶ್ವರ. ॥ ೯೪ ॥

೧೩೧೫

ಮತ್ತೆಯುಂ
ಸಮಸ್ತ ಕಾರ್ಯ ವಿಸ್ತಾರಮಯ ತ್ರಿಪುಟಿರೂಪ ವಿಶ್ವವೆಲ್ಲಂ
ಮಂತ್ರಾಧಾರದೊಳಿರ್ದ ಕಾರಣಮಿದೆಲ್ಲಂ
ಮಂತ್ರಾತ್ಮಕಮಾಗಿಯೆ ತಿಳಿವುದಾ
ಮಂತ್ರ ಸ್ವರೂಪಮಾದೊಡೆ
ಪರಾರ್ಧಕೋಟಿ ಸಂಖ್ಯೆಯಿಂದೆ ಕೂಡಿ
ನಾದಬ್ರಹ್ಮಸ್ವರೂಪ ಪರಮಶಿವ ವದನಾರವಿಂದದತ್ತಣಿಂ
ನಿರ್ಗತಮಾದುದರಿಂವಿನಾಯಾವ ಕ್ರಿಯೆಯುಮಿಲ್ಲಂ.

ಸರ್ವವುಂ ಮಂತ್ರಮಯವೆಂದೆ ನಿರವಿಸಿದೆಯಯ್ಯಾ,
ಶರಣಾಂತರಂಗ ಶಯ್ಯ ಪರಮ ಶಿವಲಿಂಗಯ್ಯ. ॥ ೯೫ ॥

೧೩೧೬

ಮತ್ತ, ನಾಡ ಜನವು ತಮ್ಮತಮ್ಮ ಪೆಸರ ಸ್ತುತಿ
ಕ್ಷೇಮಾಭಿಮಾನನಿಗಳಾಗಿರ್ದ ಕಾರಣಂ
ನಂಬುಗೆಯಿಂ ಪೆಸರ್ಗೊಂಡವರ್ಗೆ ಸಮಸ್ತಮನಿತ್ತು
ಮನ್ನಿಪುದೆಂತಂತೆ
ಜೀವಂ ತನ್ನ ದಿವ್ಯನಾಮಮಂ ನೆನೆದವರ್ಗೆ
'ಮನನಾ ತ್ರಾಯತ ಇತಿ ಮಂತ್ರ'ಯೆಂಬ ವಿಗ್ರಹೋಕ್ತಿಯಿಂ
ವಾಚಕದೊಳ್ವಾಚ್ಯನಾಗಿರ್ದೋಮೆಂದು ದನಿಗೊಟ್ಟು
ಸನ್ನಿಧಿಸ್ಥನಾಗಿ ಬೇಡಿಮುದನಿತ್ತಪನೆಂದು ನಿರವಿಸಿದೆಯಯ್ಯಾ,
ಪರಮ ಶಿವಲಿಂಗೇಶ್ವರ ಪರಾಪರರೂಪ. ॥ ೯೬ ॥

೧೩೧೭

ಬಳಿಕಂ
ಪೂರ್ವೋಕ್ತ ಚಕ್ರಪ್ರಸಿದ್ಧ ಪ್ರಸಾದಮಂತ್ರವಾದೊಡೆ
ಪ್ರಯೆನಲೊಡಂ ಶಿವಂ ಸಾಯೆನಲೊಡಂ ಶಕ್ತಿ,
ದಯೆನಲೊಡಂ ಶಿವಶಕ್ತಿಗಳೈಕ್ಯಂ.
ಮತ್ತೆಯುಂ, ಪ್ರಸಾದ ಎಂದೊಡೆ ತರದಿಂ ಶಿವಶಕ್ತ್ಯಾತ್ಮಕವಾದ
ಮುಕ್ತಿ ಭುಕ್ತಿಗಳಂ ಕೊಟ್ಟಪುದೆಂದವಯವಾರ್ಥಂ.
ಮರಲ್ದುಮಜ್ಞಾನ ಜ್ಞಾನ [ಜ್ಞೇಯ]ಗಳೆಂದು ಮೂದೆರನಿವಕ್ಕೆ
ತರದಿಂ ವಿವರಮದೆಂತೆನೆ-
ಕಳ್ತಲೆಯಂತಿರ್ಪುದೆ ಅಜ್ಞಾನಂ.
ಬೆಳಗಿನಂತಿರ್ಪುದೆ ಜ್ಞಾನಮಾ-
ಬೆಳಗಿನಿಂ ತಿಳಯಲ್ಕಕ್ಕ ಸೂರ್ಯನಂತಿರ್ಪುದೆ ಜ್ಞೇಯ
ಮಿಂತು ಕನಸಿನಂತೆ ಕಲ್ಪಿತಮದಜ್ಞಾನಾಪಹಾರಿಯಾದ
ಸಮ್ಯಜ್ಞಾನದೀಪ್ತಿ ದೀಪ್ತವಾಗಿ-,
ಯಗ್ನ್ಯುಷ್ಣದಂತವಿನಾಭಾವವಾದ ಶಿವಶಕ್ತ್ಯಾತ್ಮಕವಾದ ಪರವಸ್ತುವೆ
ಬೆಳಗಿಂ ಸೂರ್ಯನೆಂತಂತೆ
ಸ್ವಕೀಯ ಚಿಚ್ಛಕ್ತಿಯಿಂ ಪ್ರಕಟಿತಮಾದಪುದಂತೆ
'ಜ್ಞಾನಾದೇವ ತು ಕೈವಲ್ಯಂ' ವೆಂಬುದರಿಂದೆ

ಕೇವಲಜ್ಞಾನ ಸದ್ರೂಪಮೆ ಶುದ್ಧಪ್ರಸಾದವೆಂದು
ನಿರವಿಸಿದೆಯಯ್ಯಾ, ಶಿವಾಂತರಂಗ ಪರಶಿವಲಿಂಗ. ॥ ೯೭ ॥

೧೩೧೮

ಮತ್ತಮಾ ಶಿವಾತ್ಮಕ ಪ್ರಸಾದಮಂತ್ರವಾದೊಡೈದು ತೆರದಿಂ
ಪೇಳಲ್ಪಟ್ಟುದೆಂತೆನೆ-
ಮೊದಲ್ತಾನೆ ಶುದ್ಧಪ್ರಸಾದವೆರಡನೆಯದೆ ಮೂಲಪ್ರಸಾದಂ.
ಮೂರನೆಯದೆ ತತ್ವಪ್ರಸಾದಂ. ನಾಲ್ಕನೆಯದೆ ಆದಿಪ್ರಸಾದ-
ಮೈದನೆಯದೆ ಆತ್ಮಪ್ರಸಾದಮಿಂತಿವರೊಳ್ಮೊದಲ
ಶುದ್ಧಪ್ರಸಾದಮೆಂತೆನೆ-
ನಿರ್ದೋಷಮಾಗಿ ಶಿವನೆಂದುಕ್ತಮಾದ
ನಾದ ಗುಹ್ಯ ಪರ ಜೀವ ದೇಹಿ
ಭೂತ ಪಂಚಮ ಸಾಂತ ತತ್ವಾಂತ ಭೂತತಾಂತ ಶಿವಾರ್ಣ
ಶೂನ್ಯಾವ್ಯಯಂಗಳೆಂಬ
ತ್ರಯೋದಶ ನಾಮಪರ್ಯಾಯಾಂಕಿತವಾಗಿ
ಸಮಸ್ತ ಪ್ರಾಣಿಗಳಂತಸ್ಥಿತಮಾದ ಶಿವಬೀಜವೆ
ಸರ್ವ ಕಾರಣ ಕಾರಣವೆನಿಸಿದ ಶುದ್ಧಪ್ರಸಾದವೆನಿಸುಗು-
ಮದೆ ಗುರುಮುಖದಿಂ ತನ್ನನರಿದಾತಂಗೆ
ಭೋಗ ಮೋಕ್ಷಾದಿ ಸಕಲೈಶ್ವರ್ಯ ಸಿದ್ಧಿಗಳನೀವುದೆಂದೆಯಯ್ಯಾ,
ಪರಮ ಶಿವಲಿಂಗ ನಿರಂತರ ಕೃಪಾಪಾಂಗ. ॥ ೯೮ ॥

೧೩೧೯

ಮತ್ತಮೆರಡನೆಯ ಮೂಲಪ್ರಸಾದಮೆಂತೆನೆ-
ಯಗ್ನಿಮಂಡಲ ಸ್ಥಿತಿಮಾರ್ಗದೊಳಗಣ
ಮೊದಲ ಸಾತ್ವಿಕವರ್ಗದಲ್ಲಿ ಪ್ರದಕ್ಷಿಣೆಯಿಂ
ಪೂರ್ವಾದಿ ದಳನ್ಯಸ್ತ ಲಿಪಿಗಳಾರನೆಯಕ್ಕರಮಂ
ಚಂದ್ರಮಂಡಲದ ಸ್ಥಿತಿಮಾರ್ಗದೆರಡನೆಯ
ರಾಜಸರ್ವನ್ಯಸ್ತ ಸ್ವರಾಕ್ಷರಂಗಳ
ಪದಿಮೂರನೆಯದರ ಕಡೆಯಕ್ಕರಮುಮಂ
ಪಂಚಮಮಾದ ಸಾಂತದಲ್ಲಿ ಬೆರಸಿ ಹ್ರೌವೆನಿಸಿತ್ತಾ
ಹ್ರೌಗೆ ಆಧಾರ ಶಕ್ತಿ ಕಾರ್ಯ ಪರ ಬಿಂದುಗಳೆಂದೈವೆಸರಾಮುದು.

ಸಕಾರಮಾ ಬಿಂದುವೆ ಶೂನ್ಯಮದೆ ಸೊನ್ನೆಯು.
ಆ ಸೊನ್ನೆಯನೊಂದಿ ಹ್ರಾಮೆನಲೊಡಂ
ಮತ್ತೊಂದು ತೆರದಿನಾಧಾರಾಧೇಯ
ಶಿವಶಕ್ತಿ ಕಾರ್ಯಕಾರಣ ಪರಾಪರ ನಾದಬಿಂದುಗಳೆಂದು
ಜೋಡು ಜೋಡುವೆಸರಪ್ಪುದರಿಂದೆಯುಂ
ಶಕ್ತಿಯೆನೆ ಬಿಂದು, ಬಿಂದುವೆನೆ ಸೊನ್ನೆಯು.
ಸೊನ್ನೆವೆರೆದು ಹ್ರಾವೆಂಬಕ್ಕರವೆ ಹ್ರಾಮೆಂದು
ಶಿವಮಂತ್ರವಾಯಿತ್ತದೆ
ಮೂಲಪ್ರಸಾದವೆಂದು ನಿರವಿಸಿದೆಯಯ್ಯಾ,
ಪರಾತ್ಪರ ಶಿವಲಿಂಗೇಶ್ವರ. ॥ ೯೯ ॥

೧೩೨೦

ಮತ್ತಮೀ ಮೂಲಪ್ರಸಾದಮಂತ್ರವೆ,
ವೈದಿಕ ತಾಂತ್ರಿಕವೆಂದೆರಳ್ತೆರ
ಮಿದರೊಳ್ಮೊದಲುಕ್ತಮಾದುದೆ ವೈದಿಕಮಂತ್ರ
ಮೆರಡನೆಯದೆ ತಾಂತ್ರಿಕವದೆಂತೆನೆ
ಸಾಂತಮಗ್ನಿಸಂಜ್ಞಿತ ಷಷ್ಠಮನುಳಿದು ಸದ್ಯೋಜಾತ ಸಂಜ್ಞಿತವಾದ
ಸ್ವರತ್ರಯೋದಶಾಂತದೊಡನೆ ಕೂಡಿ
ಮೊದಲಂತೆ ಬಿಂದುವೆರಸಿ ಹೌಮೆಂದಾಯಿತ್ತೆಂದು
ನಿರೂಪಿಸಿದೆಯಯ್ಯಾ,
ಪರಶಿವಲಿಂಗ ಪ್ರಚುರವಿಮರ್ಶನಾಂಗ. ॥ ೧೦೦ ॥

೧೩೨೧

ಬಳಿಕ್ಕಮೀ ಮೂಲಪ್ರಸಾದವೆ ಶಿವನೀ
ವೈದಿಕ ಪ್ರಸಾದಮಂತ್ರ ಮೂರ್ತಿಯೆಂತೆನೆ,
ಹಕಾರವೆ ದೇಹ, ಬಿಂದುವೆ ಮುಖಮೆಂಬಲ್ಲಿ
ಆ ಪರಶಿವನ ನಿಷ್ಕಲಶಕ್ತಿಯೆನಿಪ ಷಾಂತವೆ ಬಿಂದು
ತದಂಶಗಳಾದ ವ್ಯಂಜನಂಗಳುಮಂತೆಯೆ.
ಬಳಿಕಲಾ ಶಾಂತ್ಯತೀತ ಕಳಾಮಯಿಯಾದ
ನಿಷ್ಕಳ ಪರಾಶಕ್ತಿಯ ಭೋಗಾಧಿಕಾರಿಗಳಾದ
ಶಿವ ಸದಾಶಿವ ಮಾಹೇಶ್ವರರ ವ್ಯಾಪಾರಕ್ಕೆ
ಶುದ್ಧ ಮಾರ್ಗೋಪಾಧಿಯಾಗಿ ಪ್ರಕಾಶ ಬ್ರಹ್ಮಾಧಿಷ್ಠಾನ

ರೂಪಿಣಿಯಾದ ಕುಂಡಲಿನಿಯೆನಿಸಲಾ
ಕುಂಡಲಿನಿಯೆ ಬಿಂದುವದೆ ಶೂನ್ಯವದೆ ಸೊನ್ನೆಯದೆ
ಪರಶಿವನ ಲೀಲಾವ್ಯಾಪಾರಂಗಳ್ಗ ಮುಖ್ಯ[ವ]ಪ್ಪುದರಿಂ
ಬಟ್ಟಿತ್ತಾದ ಸೊನ್ನೆಯಮುವೆ ಓಂಗೆ ಮೇಲಿರುತಿರ್ದ ಕಾರಣವದೆ
ಮೂಲಪ್ರಸಾದಮಂತ್ರಮೂರ್ತಿಯ
ಮುಖವೆಂದುಪದೇಶಿಸಿದೆಯಯ್ಯಾ,
ಪರಶಿವಲಿಂಗೇಶ್ವರ ಚಿದ್ಗಗನ ಪ್ರಭಾಕರ. ॥ ೧೦೧ ॥

೧೩೨೨

ಮೇಣಾ ಮಂತ್ರಮೂರ್ತಿಗೆ ನಾದವೆ ಕಿರೀಟಮದೆಂತೆನೆ
ಯಾ ಪರಶಿವನ ನಿಷ್ಕಳಶಕ್ತಿಯದೆ ನಾದವದೆಯಾದಿಶಕ್ತಿಯದೆ
ಓಂಕಾರವದರುತ್ಪತ್ತಿಯೆಂತೆನೆ
ಅಕಾರವೆ ನಾದ ಉಕಾರವೆ ಬಿಂದುವುಭಯಂಗೂಡಿ
ಅವು 'ಓ ಭವತಿ'ಯೆಂದೊಂದೆಯಾಗಿ ಓ ಎನಿಸಿತ್ತದರಂತೆ
ಆ ಓ ಕೂಡಿ ಔಯೆನಿಸಿತ್ತು
ಹಾಂಗೆಯೆ ಅ ಇ ಕೂಡಿ ಎ ಎನಿಸಿತ್ತವರಂತೆ
ಅ ಏ ಕೂಡಿ ಐ ಏ ಓ ಔ ಯೆಂಬೀ
ಚತುರಕ್ಷರಂಗಳ್ರೂಪಾಂತರದಿಂ
ಸಂಧ್ಯಕ್ಷರಂಗಳೆನಿಸುಗುಮವರೋಳ್
ಓಕಾರವೆ ಆದಿಶಕ್ತಿಯ ಧ್ವಜಾಕಾರ ರೇಖೆಗಳೆ,
ಈ ಮೂಲಪ್ರಸಾದ ಮಂತ್ರಮೂರ್ತಿಯ ಕಿರೀಟವೆಂದು
ನಿರವಿಸಿದೆಯಯ್ಯಾ,
ಪರಶಿವಲಿಂಗೇಶ್ವರ. ॥ ೧೦೨ ॥

೧೩೨೩

ಈ ಮಂತ್ರೋದ್ಧರಣಕ್ಕೆ ನಾಗರಲಿಪಿಯೆ ಸ್ಪಷ್ಟಮದೆಂತೆನೆ
॥ ॥
ತ-ರಾ ಯಿದು ಸ್ವರಂ शां ಇದು ವ್ಯಂಜನವಿಶಿಷ್ಟ
ಮೂಲಪ್ರಸಾದ ಮಂತ್ರಮೂರ್ತಿ.
ಮರಲ್ದುಮಾ ಶಿವಾತ್ಮಕ ಮೂಲಪ್ರಸಾದಮಂತ್ರಮೂರ್ತಿಗೆ
ಶಾಂಭವೀರೇಖೆಯೆನಿಪಡ್ಡಗೆರೆಗಳ ಶೃಂಗಂಗಳೆ ತೋಳ್ಗ-
ಳ್ಬಳಿಕ್ಕಮಗ್ನಿ ಸಂಜ್ಞಿತವಾದಘೋರೇಖೆಗಳೆ ಆ ಶಿವಬೀಜಮೂರ್ತಿಗೆ

ಚರಣಂಗಳಿಂತೀ
ಮೂಲಪ್ರಸಾದಮಂತ್ರವೆ ಶಿವಮೂರ್ತ್ಯಾಕಾರವೆಂದು
ನಿರವಿಸಿದೆಯಯ್ಯಾ,
ಮಹಾಗುರು ಶಿವಲಿಂಗೇಶ್ವರ. ॥ ೧೦೩ ॥

೧೩೨೪

ಮತ್ತೆಯುಮೀ ಶಿವಬೀಜಂ ಸ್ಥೂಲ ಸೂಕ್ಷ್ಮ ಪರಂಗಳೆಂದು
ಮೂದೆರನಾಗಿರ್ಪುದಿದಕ್ಕೆ ವಿವರಂ-
ಸ್ಥೂಲಮೆನೆಯಕ್ಕರಂ.
ಸೂಕ್ಷ್ಮಮೆನೆಯಾಯಕ್ಷರದ ದನಿ.
ಪರಮೆನೆ ಅಕಾರಾದಿ ಕ್ಷಕಾರಾಂತವಾದೈವತ್ತಕ್ಕರಂಗಳೊಳಗೆ
ಪತ್ತು ಪತ್ತುಗಳು ವಿಭಾಗಿಸಿ,
ಭೂಮ್ಯಾದಿ ಪಂಚಭೂತಂಗಳೊಡನೆ ಕಲಸುವದೆಂತೆನೆ-
ತರದಿಂ ಅ ಆ ಇ ಈ ಉ ಊ ಋ ೠ ಌ ೡ ಈ ಹತ್ತು ಪೃಥ್ವಿ.
ಏ ಐ ಓ ಔ ಅಂ ಅಃ ಕ ಖ ಗ ಘ ಈ ಹತ್ತು ಅಪ್ಪು.
ಙ ಚ ಛ ಜ ಝ ಞ ಟ ಠ ಡ ಢ ಈ ಹತ್ತು ತೇಜಸ್ಸು.
ಣ ತ ಥ ದ ಧ ನ ಪ ಫ ಬ ಭ ಈ ಹತ್ತು ವಾಯು.
ಮ ಯ ರ ಲ ವ ಶ ಷ ಸ ಹ ಳ ಯೀ ಹತ್ತು ಆಕಾಶಂ.
ಇಂತೈವತ್ತಕ್ಕರಂಗಳೈದು ಪೃಥ್ವ್ಯಪ್ತೇಜೋವಾಯ್ವಾಕಾಶಂಗಳಲ್ಲಿ
ನ್ಯಸ್ತಂಗಳಾದವಿನ್ನುಳಿದೈದನೆಯ ಭೂತಸಂಜ್ಞಿತದಿಂ
ಪಂಚಮವೆನಿಸಿದ ಪರಿಪೂರ್ಣವಾದ ಸಾಂತವೆ ಪರಮಿಂತು
ಸ್ಥೂಲ ಸೂಕ್ಷ್ಮ ಪರ ಸಂಜ್ಞೆಯ ನಿರೂಪಿಸಿದೆಯಯ್ಯಾ,
ಪರಮ ಶಿವಲಿಂಗ ಪಾರ್ವತೀ ಸಮುತ್ಸಂಗ. ॥ ೧೦೪ ॥

೧೩೨೫

ಇಂತು, ಪಂಚಭೌತಿಕವಾದೈವತ್ತಕ್ಕರವೆ
ಜೀವಸಂಜ್ಞಿತಮಪ್ಪ ಸಾಂತಕ್ಕೆ ಪುರಾಷ್ಟಕಮೆನಿಸಿತ್ತು.
ಮತ್ತಮೀ ಮೂಲಪ್ರಸಾದವೆ ಜೀವಪ್ರಸಾದವಾದುದು.
ಬಳಿಕಂ, ಬ್ರಹ್ಮಾದಿ ತೃಣಂ ಕಡೆಯಾಗಿ ಚರಾಚರರೂಪವಾದ
ಜತ್ಕಾರಣಮೆನಿಸಿ ಭೂತಭವಿಷ್ಯದ್ವರ್ತಮಾ[ನಾ]ತ್ಮಕವೆಲ್ಲವುಂ
ಮೂಲಪ್ರಸಾದದಲ್ಲಿಯೆ ಸಾಗರ ತರಂಗ ನ್ಯಾಯದಿಂದಂತ-

ರ್ಗತವಾದುದೆಂದು ನಿರೂಪಿಸಿದೆಯ್ಯಾ,
ಪರಶಿವಲಿಂಗೇಶ್ವರ ಗಿರಿಜೋತ್ಸವಾಬ್ಧಿ ನಿಶಾಕರ. ॥ ೧೦೫ ॥

೧೩೨೬

ಇಂತು, ಮೂಲಪ್ರಸಾದ ನಿರೂಪಣಾನಂತರದಲ್ಲಿ
ತತ್ವಪ್ರಸಾದಮಂ ಪೇಳ್ವೆನೆಂತೆನೆ-
ತತ್ವಾಂತವೆನಿಸುವ ವ್ಯಂಜನರೂಪವಾದ ಹ್ ಎಂಬಕ್ಕರದಲ್ಲಿ
ಆದಿಬೀಜವೆನಿಪಕಾರಮಂ ಕೂಡಿಸಿ ಹ ಎಂದಾಯಿತ್ತದಂ
ಕಾರ್ಯಕಾರಣ ಸಂಜ್ಞಿತ ಬಿಂದುವಿನೊಡನೆ ಕೂಡಿಸೆ ಹಂ
ಎಂದಾಯಿತ್ತೀ
ಹಂ ಎಂಬಕ್ಷರವೆ ಸರ್ವ ತತ್ವಾತ್ಮಕವಾದ
ತತ್ವಪ್ರಸಾದವಾದುದೆಂದು ನಿರವಿಸಿದೆಯಯ್ಯಾ,
ಪರಮ ಶಿವಲಿಂಗೇಶ್ವರ. ॥ ೧೦೬ ॥

೧೩೨೭

ಈ ತೆರದಿಂ ತತ್ವಪ್ರಸಾದನಿರೂಪಣಾನಂತರದಲ್ಲಿ
ಆದಿಪ್ರಸಾದಮಂ ಪೇಳ್ವೆನೆಂತೆನೆ-
ಮೊದಲ ರಾಜಸವರ್ಗವೆನಿಸುವ ಚಂದ್ರಮಂಡಲದಿಂದ್ರವಳದಲ್ಲಿ
ನ್ಯಸ್ತವಾದಕಾರಕ್ಕೆ ಹಕಾರದಲ್ಲಿ ಕೂಡಿಸೆ ಹೌ
ಎಂದಾಯಿತ್ತದನಾಧಾರಾಧೇಯ
ಸಂಜ್ಞಿತನಾದ ಬಿಂದುವಿನೊಡನೆ ಕೂಡಿಸೆ
ಪೂರ್ವೋಕ್ತ ತಾಂತ್ರಿಕ ಮೂಲಪ್ರಸಾದಮಾದೊಡಂ
ತನ್ನ ಔಯೆಂದಾದಿಶಕ್ತಿಯೊಡನೆ ಕೂಡಿಸೆ ಹೌಂ ಎಂದೆನಿಸಿ
ಶಿವಮಯವಾದಾದಿಪ್ರಸಾದವಾದುದೆಂದು ನಿರವಿಸಿದೆಯಯ್ಯಾ,
ಪರಶಿವಲಿಂಗ ಪರಿಪೂರ್ಣ ಪ್ರಭಾಂಗ. ॥ ೧೦೭ ॥

೧೩೨೮

ಬಳಿಕ್ಕಾದಿಪ್ರಸಾದ ನಿರೂಪಣಾನಂತರದಲ್ಲಿ-
ಯಾತ್ಮಪ್ರಸಾದಮಂ ಪೇಳ್ವೆನೆಂತೆನೆ-
ಭೂತಾಂತ ಸಂಜ್ಞೆಯನುಳ್ಳ ಹ್ ಎಂಬಕ್ಕರಕ್ಕದೇ
ಪ್ರಕೃತಿಸಂಜ್ಞೆಯನುಳ್ಳ ಅಕಾರಮಂ ಪತ್ತಿಸೆ ಹ ಎಂಬುದಾಯ್ತು.

ಮತ್ತಮಗ್ನಿಮಂಡಲದ ಸಾತ್ವಿಕವರ್ಗದಿಂದ್ರದಳದ ಸ್ ಎಂಬ
ವ್ಯಂಜನಕ್ಕಾದಿ ಪ್ರಕೃತಿಯಂ ಕೂಡಿಸೆ
ಸ ಎನಿಸಲೊ[ಡಿನ್ನ]ವರ ಮಧ್ಯದೊಳ್ಯಕ್ತಿ ಸಂಜ್ಞಿತವಾದ
ಸೊನ್ನೆಯನುದ್ಧರಿಸೆ
ಹಂಸ ಎಂದಾಯ್ತುದೆ ಆತ್ಮಪ್ರಸಾದವೆನಿಸಿತ್ತದೆ
ಸರ್ವರ ಹೃದ್ಗತವಾಗಿ
ಜೀವಪ್ರಸಾದವಾದುದೆಂದು ತಿಳಿಪಿದೆಯಯ್ಯಾ,
ಪರಮಗುರು ಪರಾತ್ಪರ ಪರಶಿವಲಿಂಗೇಶ್ವರ. ॥ ೧೦೮ ॥

೧೩೨೯

ಇಂತೀ ಸ್ಥಿತಮಾರ್ಗದ್ಯೆದು ಪ್ರಸಾದಮಂತ್ರಂಗಳಿವು
ಬೀಜವಾದ ಕಾರಣ ಶಿವಮಂತ್ರಂಗಳನ್ನು
ಸೃಷ್ಟಿವರ್ಗದಿಂದುದ್ಧರಿಪ ಸಾದಾಖ್ಯ ಸಂಜ್ಞಿತ
ಸದಾಶಿವ ಮಂತ್ರಗಳೆಂತೆನೆ-
ಮೋಕ್ಷದವೆಂದಭಿವೃದ್ಧಿಯೆಂದು ಕಾಮ್ಯವೆಂದು ಶಾಂತಿಕವೆಂದು
ಪೌಷ್ಠಿಕವೆಂದ್ಯೆದೆರಂಗಳಾಗಿರ್ಪುವಿವಕ್ಕೆ ವಿವರಂ-
ಮೋಕ್ಷದವೆ ಪಂಚಾಕ್ಷರಮಭಿವೃದ್ಧಿಯೆ ಷಡಕ್ಷರಂ.
ಕಾಮ್ಯವೆ ಅಷ್ಟಾಕ್ಷರಂ ಶಾಂತಿಕವೆ ನವಾಕ್ಷರಂ.
ಪೌಷ್ಠಿಕವೆ ದಶಾಕ್ಷರಮಿವಕ್ಕೆ ವಿವರ-
ವಗ್ನಿಮಂಡಲದ ಸೃಷ್ಟಿಮಾರ್ಗದಿ ಶವರ್ಗದ ಶಕಾರದ
ನಾಲ್ಕನೆಯಕ್ಕರವನುದ್ಧರಿಸಿಮದಕ್ಕೆ
ಚಂದ್ರಮಂಡಲದಿಂದ್ರವರ್ಗದ
ತ್ರಯೋದಶಾಂತಮಾದಕ್ಕರಮಂ ಪತ್ತಿಸಿ
ಪರಾಪರದೊಡನೊಂದಿಸಲ್ಕೊದಲಂತೆ ಮೂಲಪ್ರಸಾದವಾಯಿತ್ತೀ
ಮೂಲಪ್ರಸಾದವೆ ಸದಾಶಿವಮಂತ್ರಗಳ್ಯೆದಕ್ಕೆಯು-
ಮಾಧ್ಯಕ್ಷರ ಮಾದುದೆಂದು ನಿರವಿಸಿದೆಯಯ್ಯಾ,
ಪರಮ ಶಿವಲಿಂಗೇಶ್ವರ. ॥ ೧೦೯ ॥

೧೩೩೦

ಮತ್ತಂ, ಶಕ್ತಿಸಂಜ್ಞಿತವಾದ ಸ್ ಎಂಬ ವ್ಯಂಜನ
ಸಕಾರಮಾದಿಕಲೆಯೊಡನೆ ಕೂಡಿ ಸ ಎಂದಾಯ್ತು.
ಬಳಿಕ್ಕಂ, ಸೋಮಸಂಜ್ಞಿತವಾದ ಕುಬೇರವರ್ಗದ ಕಡೆಗಳಾದ

ವಕಾರ ಶಕಾರದ್ವಯವಂ ದ್ವಿಕಲಸಂಜ್ಞಿಕವಾದಕಾರಮುಂ
ತ್ರಿಕಲಸಂಜ್ಞಿತವಾದಿಕಾರಮುಂ
ತರದಿಂ ಕೂಡಿಸೆ ವಾಶಿಯೆಂದಾಯಿತ್ತಾ
ವರ್ಣಂಗಳೆರಡರೊಳ್ಪೂರ್ವವಂ ಪರಕ್ಕೆ
ಪರವಂ ಪೂರ್ವಕ್ಕೆ ಪ್ರಯೋಗಿಸೆ ಶಿವಾಯೆಂದಾಯ್ತು.
ಮರಲ್ದುಂ, ಕುಬೇರವರ್ಗದ ಮೊದಲ
ಯ್ ಎಂಬ ವರ್ಣಮನಾದಿ
ಕಲೆಯೊಡನೆ ಕೂಡೆ ಯ ಎನಿಸಿತೀ
ಪೇಳ್ದ ಹೌಂ ಸ ಶಿವಾಯ ಎಂಬೀ ಪಂಚಾಕ್ಷರೀಮಂತ್ರವು
ಮುಕ್ತಿದ ಯಂತ್ರವೆಂದು ನಿರವಿಸಿದೆಯಯ್ಯಾ,
ಪರಮ ಶಿವಲಿಂಗೇಶ್ವರ ಪರಿಪೂರ್ಣ ಭಕ್ತಿ ಭಾಸ್ವರ. ॥ ೧೧೦ ॥

೧೩೩೧

ಬಳಿಕ್ಕ
ಭೂತಾಂತಮನುದ್ಧರಿಸಿ ತ್ರಯೋದಶಾಂತ ಸ್ವರದೊಳದಂ ಬೆರಸಿ
ಕಾರ್ಯಕಾರಣಮನೊಂದಿಸೆ ಹೌಂ ಎಂಬ
ಮೊದಲ ಬೀಜವಾಯ್ತು.
ಮತ್ತಮೀ ಶವರ್ಗದ ಮೊದಲಕ್ಕರಮಾದ
ಶಕಾರವ್ಯಂಜನದೊಳ್ತ್ರಿ ಕಲೆ-
ಯೆನಿಪಿಕಾರಮುಂ ಕೂಡೆ ಶಿ ಯೆನಿಸಲ್
ಸೋಮಸಂಜ್ಞ ಕುಬೇರವರ್ಗದ ಕಡೆಯ ವಕಾರಮುಂ
ದ್ವಿಕಲೆವೆಸರ ಅಕಾರದೊಡವೆರಸೆ ವಾಯೆಂದಾಯ್ತು.
ಮತ್ತಂ, ಸೋಮವರ್ಗದಾದಿಯ ಯ್‌ಕಾರ ವ್ಯಂಜನಮನಾದಿ
ಸ್ವರದೊಳ್ಕೂಡೆ ಯ ಎಂದೆನಿಸಿತ್ತು.
ವರುಣವರ್ಗದ ಕಡೆಯ ನ್ ಎಂಬ
ವ್ಯಂಜನಮನಾದಿ ಸ್ವರದೊಳ್ಕೂಡೆ ನ ಎಂದೆನಿಸಿತ್ತು.
ವಾಯುವರ್ಗದ ಕಡೆಯ ಮ್ ಎಂಬ ವ್ಯಂಜನದೊಳ್
ಸ್ವರಾದಿಯಂ ಕೂಡೆ ಮ ಎಂದೆನಿಸಿತ್ತು.
ಈ ಹೌಂ ಸ ಶಿವಾಯ ನಮಃ ಎಂಬೀ ಷಡಕ್ಷರವೆ
ಅಭಿವೃದ್ಧಿಯೆಂಬ ಮಂತ್ರವೆಂದರಿಪಿದೆಯಯ್ಯಾ,
ಪರಮಶಿವಲಿಂಗ ಪ್ರಮಥಾಂತರಂಗ. ॥ ೧೧೧ ॥

೧೩೩೨

ಮತ್ತಂ, ಗುಪ್ಯಮಂ ತ್ರಯೋದಶಾಂತದೊಳ್ಬೆರಸಿ
ಪರಾಪರದೊಳೊಂದಿಸೆ **ಹೌಂ** ಎಂಬಾದಿಬೀಜಮಾಯ್ತು.
ಮರಲ್ದುಂ, ಹ್ ಎಂಬ ಜೀವಮಂ
ವರ್ಗಾದಿಯಾದಕಾರದೊಳ್ಮೇಳ್ಮೇಳಿಸಿ
ಶಕ್ತಿಸಂಜ್ಞಿತ ಬಿಂದುವಂ ಬೆರಸೆ **ಹಂ** ಎನಿಸಿತ್ತು.
ಬಳಿಕ್ಕಂ, ಶಕ್ತಿಸಂಜ್ಞಿತವಾದ ಸ್ ಎಂಬ ವ್ಯಂಜನಮಂ
ಕಲಾಸಂಜ್ಞಿತವಾದ ಕಾರಣದೊಳ್ಪುದುಗೆ **ಸ** ಎನಿಸಿತ್ತು.
ಮತ್ತೆಯುಂ, ವ್ಯಂಜನಶಕ್ತಿ ಬೀಜವಾದ ಸ್ ಎಂಬುದು
ಮಾತ್ರಾದಿ ಸಂಜ್ಞಿತಕಾರಮನೊಂದೆ ಎಂದಿನಂತೆ **ಸ** ಎನಿ[ಸಿ]ತ್ತು.
ಬಳಿಕಂ, ವರುಣವರ್ಗದ ನಾಲ್ಕನೆ ಯ ಎಂಬಕ್ಕರವುಂ
ಮೂರನೆಯ ಸ್ವರಮನಸ್ಥಿ ಸಂಜ್ಞಿತಮಾದ
ಶ್ ಎಂಬಕ್ಕರದೊಡನೆ ಕೂಡಿಸೆ ಶಿ ಎನಿಸಿತ್ತು.
ಸೋಮಾಂತ ಸಂಜ್ಞಿತವಾದ ವಕಾರಮಂ
ದ್ವಿಕಲಾಸಂಜ್ಞಿತವಾದಾಕಾರಮ ನೊಂದಿಸೆ **ವಾ** ಎನಿಸಿತ್ತು.
ವಾಯುಬೀಜವಾದ ಯ್ ಎಂಬಕ್ಕರವನಾದಿಕಲಾಸಂಜ್ಞಿತ-
ಮಾದಕಾರದೊಡನೆ ಕೂಡಿಸೆ **ಯ** ಎನಿಸಿತ್ತಿಂತು
ಹೌಂ ಹಂ ಸ ಸದಾಶಿವಾಯ ಎಂಬಷ್ಟಾಕ್ಷರಮಂತ್ರಮಂ
ನಿರವಿಸಿದೆಯಯ್ಯಾ,
ಪರಮ ಶಿವಲಿಂಗೇಶ್ವರ. ॥ ೧೧೨ ॥

೧೩೩೩

ಇಂತಷ್ಟಾಕ್ಷರಮಂತ್ರ ನಿರೂಪಣಾನಂತರವಲ್ಲಿ
ನವಾಕ್ಷರ ಮಂತ್ರಮಂ ಪೇಳ್ವೆನೆಂತೆನೆ-
ಭೂತಾಂತ ಸಂಜ್ಞಿತ ಹಕಾರಮನುದ್ಧರಿಸಿ
ಸ್ವರ ತ್ರಯೋದಶಾಂತದೊಡನೆ ಕೂಡಲ್ ಹೌ ಎನಿಸಿತ್ತು.
ಸಂಜ್ಞಿತವಾದಕಾರದೊಡನೆ ಕೂಡೆ ಹ ಎನಿಸಿತ್ತು.
ಹೌ ಹ ಎಂಬಿವೆರಡು ಶಕ್ತಿ ಸಂಜ್ಞಿತವಾದ ಬಿಂದುವಂ ಬೆರಸೆ
ಹೌಂ ಹಂ ಎಂದೆನಿಸಿದವು.
ಶಕ್ತಿ ಸಂಜ್ಞಿತವಾದ ಸ್ ಎಂಬ ವ್ಯಂಜನಂ ಮಾತ್ರಾಸಂಜ್ಞಿತವಾದ-
ಕಾರಮನೊಂದೆ ಸ ಎನಿಸಿ-
ತೇಳನೆಯ ವರ್ಗಾಂತ್ಯಾಕ್ಷರವಾದ ವ್ ಎಂಬುದಂ

ಪೀಂದೇಳ್ದ ಸಕಾರದ ಪೂರ್ವದೊಳಿಡೆ ಸ್ವ ಎನಿಸಿತು,
ವಾಯುವರ್ಗದ ಕಡೆಯ ಮ್ ಎಂಬುದನಾದಿಭೂತ
ಸಂಜ್ಞಿತಮಾದಾಕಾಶ
ವರ್ಗಾಂತ್ಯವಾದಕಾರದೊಡನೆ ಕೂಡೆ ಮ ಎನಿಸಿತ್ತು.
ಲಯ ವರ್ಗದಾದಿಯ ಕ್ಷಕಾರಮಂ ವರುಣವರ್ಗದಾದಿಯ
ತಕಾರಮುಮನುದ್ಧರಿಸಿ-
ಯವೆರಡರ ನಡುವೆ ಯಾಂತವಾದಾ ರ್ ಎಂಬ ಎಂಬ
ವ್ಯಂಜನಮನಾದಿಬೀಜ ಸಂಜ್ಞಿತವಾದಕಾರದೊಡನೆ ಕೂಡೆ
ರ ಎನಿಸಿತಿಂತು ಕ್ಷ ರ ತ ಎನಿಸಿದವು.
ಸಪ್ತಮವರ್ಗದಾದಿಯಾದ ಯ್ ಎಂಬಕ್ಕರವನಾದಿಸಂಜ್ಞಿತವಾದ
ಕಾರದೊಡನೆ ಕೂಡೆ ಯ ಎನಿಸಿತ್ತಾರನೆಯ
ವಾಯುವರ್ಗಾಂತವಾದ ಮ್ ಎಂಬಕ್ಕರ-
ಮನಾದಿಸಂಜ್ಞಿತವಾದ-
ಕಾರದೊಡನೆ ಬೆರಸೆ ಮ ಎನಿಸಿ,
ಒಂಬತುಮುಮಂ ಬಿಂದು ನಾದಸಂಜ್ಞಿತವಾದ
ಸೊನ್ನೆಯಂ ಕೂಡಿಸೆ,
ಹೌಂ ಹಂ ಸ್ವಂ ಮಂ ಕ್ಷಂ ರಂ ತಂ ಯಂ ಮಂ ಎಂಬೀ
ನವಾಕ್ಷರ ಮಂತ್ರ ಸರ್ವಸಿದ್ಧಿಪ್ರದ ಶಾಂತಿಕಮಂತ್ರವೆಂದು
ನಿರೂಪಿಸಿದೆಯಯ್ಯಾ,
ಪರಶಿವಲಿಂಗೇಶ್ವರ ನವಲಿಂಗ ಭಾಸ್ವರ. ॥ ೧೧೩ ॥

೧೩೩೪

ಬಳಿಕ್ಕಂ, ಶಾಂತಿಕಮಂತ್ರ ನಿರೂಪಣಾನಂತರವಲ್ಲಿ
ಪೌಷ್ಠಿಕಮಂತ್ರಮಂ ಪೇಳ್ವೆನೆಂತೆನೆ-
ಪರಾತ್ಪರಸಂಜ್ಞಿತವಾದ ಹಕಾರವನುದ್ಧರಿಸಿ,
ಇಂದ್ರವರ್ಗ ಸ್ವರತ್ರಯೋದಶಮಂ ಬೆರಸಿ,
ಕಾರ್ಯಕಾರಣ ಸಂಜ್ಞಿತವಾದ ಸೊನ್ನೆಯಂ ಕೂಡೆ ಹೌಂ
ಎಂಬಕ್ಕರವಾಯ್ತು.
ಶಕ್ತಿಬೀಜಸಂಜ್ಞಿತವಾದ ಸ್ ಎಂಬ ವ್ಯಂಜನಮಂ
ಜೀವಸಂಜ್ಞಿತವಾದಕಾರದೊಡನೆ ಕೂಡೆ ಸ ಎನಿಸಿತು.
ಅವರ ಮುಂದೆ ಮತ್ತೊಂದೀಶವರ್ಗದ ಮೂರನೆಯಕ್ಕರವೆನಿಸುವ
ಸ್ ಎಂಬಕ್ಕರಕ್ಕಂ,
ಮತ್ತೆಯುಮದೇ ವರ್ಗದೆರಡನೆಯ ಷ್ ಎಂಬುದಕ್ಕೆಯುಂ

ಜೀವಸಂಜ್ಞಿತವಾದಕಾರವಂ ಪತ್ತಿಸೆ ಸ ಷ ಎನಿಸಿದ-
ವೇಳನೆಯ ವರ್ಗದ ಕಡೆಯಕ್ಕರವಾದ ವ್ ಎಂಬಕ್ಕರವ
ನದೇ ವರ್ಗದೆರಡನೆಯ ಷಕಾರದೊಳೊಂದಿಸೆ ಷ್ವ ಎನಿಸಿ
ತ್ತಾರನೆಯ ಸ್ವರದೊಳ್ಕೀಳಿಸೆ ಮೂ ಎನಿಸಿತು.
ಭೂತಾಂತ ಸಂಜ್ಞಿತವಾದ ಹಕಾರವನುದ್ಧರಿಸಿ
ಯದರ ಮೇಲೆ ಅಗ್ನಿ ಸಂಜ್ಞಿತವಾದಾಕರಮಂ ಪತ್ತಿಸೆ ಹ್ರ ಎನಿಸಿ
ತ್ತದರ ಮೇಲೆ ಆರನೆಯ ಸ್ವರಮಂ ಪತ್ತಿಸೆ ಹ್ರೂ ಎನಿಸಿತ್ತು.
ಭಕಾರದ ಕಡೆಯ ವ್ಯಂಜನಮಂ
ದಶಸ್ವರಾಂತರದೊಳ್ಬೆರಸೆ ಮೆ ಎನಿಸಿತ್ತು.
ಪಂಚವರ್ಗಂಗಳೈದನೆಯದಾದ
ನ್ ಎಂಬುದನದರಾರನೆಯ ಮ್ ಎಂಬುದಂ
ಅದರೇಳನೆಯ ಯ್ ಎಂಬುದು
ಸ್ವರಾದಿಯಾದ ಕಾರಣದೊಳ್ಕೂಡಿಸೆ
ತರದಿಂ ನ ಮ ಎನಿಸಿದವಿವಂ ಪರತರ ಸಂಜ್ಞಿತವಾದ
ಸೊನ್ನೆಯೊಳ್ಬೆರಸಿ
ತರದಿಂದೀ ಪತ್ತಕ್ಕರಮಂ ಕೂಡಿ ಹೌಂ ಸಂ ಸ್ವಂ ಷ್ವಂ ಮೂಂ
ಹ್ರೂಂ ಮೇಂ ಸಂ ಮಂ ಯಂ ಯೆಂಬೀ
ದಶಾಕ್ಷರ ಮಂತ್ರವೇ ಪೌಷ್ಠಿಕಮಂತ್ರವೆನಿಸಿತ್ತೀ
ಪೂರ್ವೋಕ್ತ ಪಂಚಾಕ್ಷರ ಷಡಕ್ಷರಷ್ಟಾಕ್ಷರ
ನವಾಕ್ಷರ ದಶಾಕ್ಷರಂಗಳನುಳ್ಳ ತರದಿಂ
ಮೋಕ್ಷದಾಭಿವೃದ್ಧಿ ಕಾಮ್ಯ ಶಾಂತಿಕ ಪೌಷ್ಠಿಕಂಗಳೆಂದೀ
ಐದೆರನಾದುದೆ ಸದಾಶಿವಮಂತ್ರವೆಂದೊರೆದೆಯಯ್ಯಾ,
ಪರಮಗುರು ಪರಶಿವಲಿಂಗೇಶ್ವರ. ॥ ೧೧೪ ॥

ಶ್ರೀ ಶ್ರೀ ಶ್ರೀ

೧೩೩೫

ಇಂತು, ಸದಾಶಿವಮಂತ್ರ ನಿರೂಪಣಾನಂತರದಲ್ಲಿ
ಮಹೇಶ್ವರಮಂತ್ರಮಂ ಪೇಳ್ವೆನೆಂತೆನೆ-
ಮಹೇಶ್ವರನೆನೆ ರುದ್ರನಾತನೆ ಸಂಹಾರಕಾರಣನಾತನ
ಮಂತ್ರಮಂ ಸಂಹಾರವರ್ಗಕ್ರಮದಿಂದುದ್ಧರಿಪುದೆನಲದು
ಸೃಷ್ಟಿ ಸ್ಥಿತಿ ಲಯಂಗಳೆಂದು ಮೂದೆರನಾಗಿರ್ಪು-

ವವರ ಮೊದಲ ಸೃಷ್ಟಿವರ್ಗಮದೆಂತೆನೆ,
ಭೂವರ್ಗದ ಮೂರನೆಯಕ್ಕರಮಾದ ಹಕಾರಮನುದ್ಧರಿಸಿ,
ಜಲವರ್ಗದ ಮೊದಲಾದ ಮಕಾರಮನವರೊತ್ತಿನೊಳಿರಿಸಿ,
ಭೂವರ್ಗದೊಂಬತ್ತನೆಯ ದಕಾರಮನವೆರಡರ ಮುಂದಿ-
ಟ್ಟಾಕಾಶವರ್ಗದಾರನೆಯದಾದೆಕಾರಮನವರಿದಿರೊಳ್ಮಡಂಗಿ-
ಯಾಧಾರಾಧೇಯಸಂಜ್ಞಿತವಾದ ಸೊನ್ನೆಯಿಂ ಕೂಡಿಸೆ
ಯಿಾ ನಾಲ್ಕಕ್ಕರಂಗಳ್
ಹಂ ಮಂ ದಂ ಎಂ ಎಂಬೀ ಚತುರಕ್ಷರಮಂತ್ರವು
ಸೃಷ್ಟಿಮಂತ್ರವೆಂದರುಪಿದೆಯಯ್ಯಾ,
ಪರಮ ಶಿವಲಿಂಗದೇವ ಪರಿಪೂರ್ಣ ಭಾವ. ॥ ೧೧೫ ॥

೧೩೩೬.

ಭೂವರ್ಗದ ಮೂರನೆಯ ಹ್ ಎಂಬ ವ್ಯಂಜನಮಂ
ವ್ಯೋಮವರ್ಗದಂತ್ಯದಕಾರದೊಳ್ಕೂಡಿಸೆ ಹ ಎನಿಸಿತ್ತದರ ಮೇಲೆ
ಶಕ್ತಿ ಸಂಜ್ಞಿತವಾದ ಸೊನ್ನೆಯನಿಡೆ ಹಂ ಎನಿಸಿತ್ತಾ
ಭೂವರ್ಗದ ತುರ್ಯಗಣನೆಯಾದ ನಾಲ್ಕನೆಯ ಸ್ ಎಂಬುದಕ್ಕೆ
ವ್ಯೋಮವರ್ಗದ ಕಡೆಯಕಾರಮಂ ಪತ್ತಿಸೆ ಸ ಎನಿಸಿತ್ತು.
ಲಯವರ್ಗದ ಮೊದಲ ಕ್ಷ್ ಎಂಬುದಕ್ಕೆ ವ್ಯೋಮಾಂತಮಂ
ಪತ್ತಿಸೆ ಕ್ಷ ಎನಿಸಿತ್ತಗ್ನಿಬೀಜ
ಸಂಜ್ಞಿತವಾದ ರ್ ಎಂಬುದಕ್ಕವರಂತೆ
ವ್ಯೋಮಾಂತಮಂ ಪತ್ತಿಸೆ ರ ಎನಿಸಿತ್ತು.
ಭೂವರ್ಗದ ಕಡೆಯಕ್ಕರವಾದ ಯ್ ಎಂಬುದಕ್ಕೆ
ವ್ಯೋಮಾಂತಮಂ ಪತ್ತಿಸೆ ಯ ಎನಿಸಿ-
ತ್ತಾಕಾಶವರ್ಗದಾರನೆಯ ಎ ಎಂಬ ಸ್ವರಮುಮಿವೆಲ್ಲಕ್ಕಂ
ತರದಿಂ ಶಕ್ತಿ ಸಂಜ್ಞಿತವಾದ ಸೊನ್ನೆಯುಂ ಕೂಡಿಸೆ
ಹಂ ಕ್ಷಂ ಮಂ ರಂ ಯಂ ಎಂ ಎಂಬೀ ಷಡಕ್ಷರಂ
ಹಾರಮಂತ್ರಬೀಜವೆನಿಪುದೀ
ಮಹೇಶ್ವರನ ಸೃಷ್ಟಿಸ್ಥಿತಿಲಯಾಭಿಧಾನಮಂತ್ರತ್ರಯಮಂ
ನಿರವಿಸಿದೆಯಯ್ಯ,
ಪರಶಿವಲಿಂಗದೇವ ಮಹಾನುಭಾವ. ॥ ೧೧೬ ॥

ಶ್ರೀ ಶ್ರೀ ಶ್ರೀ

೧೩೩೭

ಇಂತು ಶಿವ ಸದಾಶಿವ ಮಹೇಶ್ವರ ನಿರೂಪಣಾನಂತರದಲ್ಲಿ
ಪಂಚಶಕ್ತಿ ಮಂತ್ರಬೀಜಂಗಳಂ ಪೇಳ್ವೆನೆಂತೆನೆ-
ಶಕ್ತಿಸಂಜ್ಞಿತವಾದ ಸ್ ಎಂಬುದನ್ನುದ್ಧರಿಸಿ,
ವಿಕೃತಿಸಂಜ್ಞಿತವಾದಾಕಾರವಂ ಪತ್ತಿಸಿ-
ಯಗ್ನಿಸಂಜ್ಞಿತವಾದ ರ್ ಎಂಬುದಂ ಬೆರಸೆ
ಸ್ರಾಯೆನಿಸಿತ್ತದಂ ಬಿಂದು ನಾದ ಸಂಜ್ಞಿತವಾದ ಸೊನ್ನೆಯೊಳ್ಕೂಡೆ
ಸ್ರಾಂ ಯೆನಿಸಿತ್ತೀ ಶಕ್ತಿಬೀಜಂ ಸಮಸ್ತ ಶಕ್ತ್ಯಾಶ್ರಯವಾದ
ಪ್ರಥಮಶಕ್ತಿಯೆಂದು ನಿರೂಪಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೧೭ ॥

೧೩೩೮

ನಾದಸಂಜ್ಞಿತವಾದ ಹಕಾರದ ಮೊದಲಹ ಸ್ ಎಂಬುದನುದ್ಧರಿಸಿ
ಸಂಜ್ಞಿತವಾದ ರ್ ಎಂಬುದಂ ಕೂಡಿಸೆ ಸ್ರ ಎನಿಸಿತದಂ
ಮಾಯಾಸಂಜ್ಞಿತವಾದಿಕಾರದೊಳ್ಮೇಳಸಂಗೆಯ್ದು,
ಬಿಂದು ನಾದ ಸಂಜ್ಞಿತವಾದ ಸೊನ್ನೆಯೊಳ್ಕೂಡೆ ಸ್ರಿಂ ಎಂಬ
ದ್ವಿತಿಯ ಶಕ್ತಿಬೀಜವೆನಿಸಿತ್ತು.
ಮತ್ತಂ, ತತ್ವಾಂತಸಂಜ್ಞಿತವಾದ ಹಕಾರದ ಮುಂದಣ ಸ್
ಎಂಬುದನುದ್ಧರಿಸಿ,
ಧರಾಸಂಜ್ಞಿತವಾದೂಕಾರವಂ
ವಹ್ನಿ ಸಂಜ್ಞಿತವಾದ ರ್ ಎಂಬುದನುಂ,
ಬಿಂದು ನಾದ ಸಂಜ್ಞಿತವಾದ ಸೊನ್ನೆಯುಮಂ ಮಿಶ್ರಿಸೆ
ಸ್ರೂಂ ಎಂಬ ಮೂರನೆಯ ಶಕ್ತಿಬೀಜವೆನಿಸಿತ್ತು.
ಜೀವ ಸಂಜ್ಞಿತವಾದ ಹಕಾರದ ಮುಂದಣ ಸ್ ಎಂಬುದಂ
ವಹ್ನಿ ಸಂಜ್ಞಿತವಾದ ರ್ ಎಂಬುದಂ ಕೂಡಿಸೆ ಸ್ರ ಎನಿಸಿತ್ತದಂ
ದ್ವಾದಶ ಸಂಜ್ಞಿತವಾದೈಕಾರದೊಳ್ಬೆರಸಿ
ಬಿಂದು ನಾದ ಸಂಜ್ಞಿತವಾದ ಸೊನ್ನೆಯೊಳೊಂದಿಸೆ
ಸ್ರೈಂ ಎಂಬ ನಾಲ್ಕನೆಯ ಶಕ್ತಿಬೀಜಂ.
ಭೂತ ಸಂಜ್ಞಿತವಾದ ಹಕಾರದ ಮುಂದಣ ಸ್ ಎಂಬುದು
ವಹ್ನಿ ಸಂಜ್ಞಿತವಾದ ರ್ ಎಂಬುದರೊಡನೆ ಕೂಡೆ ಸ್ರ ಎನ್ನಿಸಿತ್ತದು
ಸ್ವರತ್ರಯೋದಶದೊಡನೆ ಕೂಡೆ ಸ್ರೌ ಎನಿಸಿ

ಬಿಂದು ನಾದ ಸಂಜ್ಞಿತವಾದ ಸೊನ್ನೆಯೊಡವೆರೆಯೆ
ಸ್ರೌಂ ಎಂಬ ಬೀಜವೈದನೆಯ ಶಕ್ತಿ.
ಈ ಶಕ್ತಿಬೀಜವಂ ಶಿವಾಂಗ ಬೀಜವಹ ಹಾಂಗುದ್ಧರಿಸೂದೀ
ಪಂಚಶಕ್ತಿಗಳಲ್ಲಿಯುಮಾ ಶಕ್ತಿಯೆ ಮೊದಲಶಕ್ತಿ.
ಇವರ ಬೀಜಶಕ್ತಿಗಳವೆಂತೆನೆ-
ತರದಿಂದೆ ಸ್ರಾಂ ಉಮೆ ಸ್ತ್ರೀಂ ಅಂಬಿಕೆ ಸ್ರೂಂ ಗಣಾನಿ
ಸ್ರೈಂ ಈಶ್ವರಿ ಸ್ರೌಂ ಮನೋನ್ಮನಿ
ಇಂತೈದು ಶಕ್ತಿಗಳ್ಶಿವಾಂಗಂಗಳ್ಮನೋನ್ಮನ್ಯಗಳೊಂದೊಂದರ
ದಶಾಂಗಳೊಂದೊಂದೆಂದರುಪಿದೆಯಯ್ಯಾ,
ಮುನಿಹೃದಯ ಶಯ್ಯ ಮಹಾ ಗುರು ಪರಶಿವಲಿಂಗಯ್ಯ.
॥ ೧೧೮ ॥

೧೩೩೯

ಮತ್ತಂ, ಗಣಸಂಜ್ಞಿತವಾದ ಗ್ ಎಂಬುದನುದ್ಧರಿಸಿ
ವಹ್ನಿ ಸಂಜ್ಞಿತವಾದ ರ್ ಎಂಬುದಂ ಬೆರಸೆ
ಗ್ರ ಎನಿಸಿತ್ತದಂ ಮಾಯಾ ಸಂಜ್ಞಿತವಾದಿಕಾರದೊಳ್ಬೆರಸೆ ಗ್ರಿ ಯೆನಿಸಿ
ತ್ತದಂ ಬಿಂದು ನಾದ ಸಂಜ್ಞಿತವಾದ
ಸೊನ್ನೆಯೊಳ್ಬೆರಸೆ ಗ್ರಿಂ ಯೆನಿಸಿ
ಗೌರೀ ಬೀಜವಾಯಿತ್ತಿದೆ ಪ್ರಕಾರದಲ್ಲಿ
ಮಿಕ್ಕ ಶಕ್ತಿಗಳ್ಗೆಯುಮವರವರ ನಾಮಂಗಳ
ಮೊದಲಕ್ಕರಂಗಳಲ್ಲಿ ಬೀಜಮಂತ್ರಗಳನರಿವುದೆಂದು
ನಿರೂಪಿಸಿದೆಯಯ್ಯಾ,
ಪರಮಗುರು ಪರಶಿವಲಿಂಗಯ್ಯ. ॥ ೧೧೯ ॥

೧೩೪೦

ಮಂತ್ರೋತ್ಪತ್ತಿ ನಿರೂಪಣಾನಂತರದೊಳ್ತತ್ತ್ವಂಗಳಂ ಮಂತ್ರಂಗಳಂ
ಲಿಂಗದಲ್ಲಿ ನ್ಯಾಸಮಂ ಮಾಳ್ಪುದಂ ಪೇಳ್ವೆನೆಂತೆನೆ-
ಲಿಂಗಸ್ಥಾಪನ ಕಾಲದೊಳ್ಕಳಶಂಗಳಂ ಸ್ಥಾಪಿಸುತ್ತವರಲ್ಲಿ
ಪೊರಗಣಂ ಲಿಂಗದೊಳೆಂತಂತಾ ಕಳಶಾಂತರ್ಗತವಾಗಿ
ನಾದಮನುಂಟುಮಾಡಿ ಮಂತ್ರಂಗಳಂ ನ್ಯಾಸಂಗೆಯ್ವುದಾ
ಲಿಂಗಸ್ಥಾಪನ ಕಳಶಸ್ಥಾಪನಂಗಳುಭಯದ ಕೂಟ ಕ್ರಿಯಾವಸ್ಥೆಯೆ
ಪ್ರತಿಷ್ಠೆಯೆನಿಕುಮಾ

ಪ್ರತಿಷ್ಠೆ ಪ್ರಾಣಮೆಂದು ಪ್ರಕೃತಿಯೆಂದಿರ್ತರವಾಯ್ತು.
ಉಭಯದ ಯೋಗಮಂ ತಿಳಿದು ಸ್ಥಾನಮನೆಸಗುವುದು.
ಮತ್ತಮಾ ಪ್ರಾಣಮೆನೆ ಮಂತ್ರಂ ಪ್ರಕೃತಿಯೆನೆ ಮೂರ್ತಿ
ಈಯುಭಯದ ಯೋಗವೆ ಶಿವಸಾನ್ನಿಧ್ಯ ಕಾರಣಮದರತ್ತಣಿಂ
ಮಂತ್ರಂಗಳಂ ಮೂರ್ತಿಗಳನುಂ ಲಿಂಗದಲ್ಲಿಯೆ
ನ್ಯಾಸಂಗೆಯ್ವುದೆಂದು ತಿಳಿಪಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೨೦ ॥

೧೩೪೧

ಬಳಿಕ್ಕಂ,
ಶಿವಲಿಂಗದಲ್ಲಿ ಪಂಚಪ್ರಸಾದಮಂತ್ರ ನ್ಯಾಸಮಂ ಪೇಳ್ವೆನೆಂತೆನೆ-
ಶಿವಲಿಂಗದ ಮಸ್ತಕದ ಮೇಲೆ ಹ ಎಂಬ
ಶುದ್ಧ ಪ್ರಸಾದಮಂತ್ರಮಂ ನ್ಯಾಸಂಗೆಯ್ವುದು.
ಸೂತ್ರ ಮಧ್ಯದಲ್ಲಿ ಹ್ರಾಂ ಎಂಬ
ಮೂಲಪ್ರಸಾದಮಂತ್ರಮಂ ನ್ಯಾಸಂಗೆಯ್ವುದು.
ಬಲದಭಾಗದಲ್ಲಿ ಹಂ ಎಂಬ ತತ್ವಪ್ರಸಾದಮಂ ನ್ಯಾಸಂಗೆಯ್ವು-
ದೆಡದಭಾಗದಲ್ಲಿ ಹೌಂ ಎಂಬಾದಿಪ್ರಸಾದಮಂ ನ್ಯಾಸಂಗೆಯ್ವುದು.
ಮಧ್ಯಸೂತ್ರದ ಬುಡದಲ್ಲಿ ಹಂಸ ಎಂಬಾತ್ಮಪ್ರಸಾದಮಂತ್ರಮಂ
ನ್ಯಾಸಂಗೆಯ್ವುದಿಂತು
ಹ ಹ್ರಾಂ ಹಂ ಹೌಂ [ಹಂ]ಸ ಎಂಬ ಪಂಚಪ್ರಸಾದಮಂತ್ರಂಗಳ
ನ್ಯಾಸಂಗಳಂ
ಶಿವಲಿಂಗದ ಪಂಚಸ್ಥಾನಂಗಳಲ್ಲಿ ನ್ಯಾಸೀಕರಿಸಿದೆಯಯ್ಯಾ,
ಪರಮಗುರು ಪರಶಿವಲಿಂಗೇಶ್ವರ. ॥ ೧೨೧ ॥

೧೩೪೨

ಮತ್ತಂ, ಕ್ರಮದಿಂ ಹ್ರಾಂ ಎಂಬ ಮೂಲಪ್ರಸಾದವಾಚಕದಲ್ಲಿ
ಕರ್ಮಸಾದಾಖ್ಯ ವಾಚ್ಯಮಂ ನ್ಯಾಸಂಗೆಯ್ವುದು.
ಹಂ ಎಂಬ ತತ್ವಪ್ರಸಾದವಾಚಕದಲ್ಲಿ ಕರ್ತೃಸಾದಾಖ್ಯವಾಚ್ಯಮಂ
ನ್ಯಾಸಂಗೆಯ್ವುದು.
ಹೌಂ ಎಂಬಾದಿಪ್ರಸಾದವಾಚಕದಲ್ಲಿ ಮೂರ್ತಿಸಾದಾಖ್ಯವಾಚ್ಯಮಂ
ನ್ಯಾಸಂಗೆಯ್ವುದು.

ಹಂಸ ಎಂಬಾತ್ಮಪ್ರಸಾದವಾಚಕದಲ್ಲಿ
ಅಮೂರ್ತಿ ಸಾದಾಖ್ಯವಾಚ್ಯಮಂ ನ್ಯಾಸಂಗೆಯ್ವುದು.
ಹ ಎಂಬ ಶುದ್ಧಪ್ರಸಾದವಾಚಕದಲ್ಲಿ ಶಿವಸಾದಾಖ್ಯವಾಚ್ಯಮಂ
ನ್ಯಾಸಂಗೆಯ್ವುದಿಂತು
ಪಂಚಪ್ರಸಾದದಲ್ಲಿ ಪಂಚಸಾದಾಖ್ಯ ತತ್ವಮಂ
ನ್ಯಾಸೀಕರಿಸಿದೆಯಯ್ಯಾ, ಪರಶಿವಲಿಂಗಯ್ಯ. ॥ ೧೨೨ ॥

೧೩೪೩

ಮತ್ತೆಯುಮಾ, ಮಂತ್ರಮೂರ್ತಿಯಂ ಧ್ಯಾನಿಸಿ
ಪೂಜನಂಗೆಯ್ವುದಂ ಪೇಳ್ವೆನೆಂತೆನೆ-
ಪೂರ್ವೋಕ್ತ ಪಂಚಾಕ್ಷರ ಷಡಕ್ಷರಷ್ಟಾಕ್ಷರ ನವಾಕ್ಷರ ದಶಾಕ್ಷರಂಗಳಿಂ
ತರದಿಂದಾ ಮಂತ್ರಮೂರ್ತಿಯಂ ಕರೆವುದು, ಮೂರ್ತಿಗೊಳಿಪುದು,
ಪ್ರತ್ಯಕ್ಷೀಕರಿಪುದು, ಮಾನಸಾದ್ಯಂತಃಕರಣಮಂ ನಿವೇದಿಪುದು
ಪೂಜಿಪುದಿಂತು
ಹೃತ್ಕಮಲ ಕರ್ಣಿಕಾಮಧ್ಯದಲ್ಲಿರ್ದ ಮಂತ್ರಮೂರ್ತಿಗೆ
ಬ್ರಹ್ಮಮಂತ್ರಂಗಳಿನಂಗಮಂತ್ರಂಗಳಿಂದೆಯುಂ
ಪಾದ್ಯ ಗಂಧಾದಿಗಳನೀವುದು-
ಮಾದಿಶಕ್ತಿಗಳಂ ಸ್ಥಾಪಿಸುವ ಕಾಲದಲ್ಲಿಯಾಯಾಯ
ಶಕ್ತಿ ಬೀಜಂಗಳ-
ನಂತಾಯಾಯ ಶಕ್ತಿಗಳ ಹೃದಯಂಗಳಲ್ಲಿ ನ್ಯಾಸಂಗೆಯ್ವುದೆಲ್ಲ
ಕ್ರಿಯಾಶರೀರವೆಂದುಪದೇಶಿಸಿದೆಯಯ್ಯಾ,
ಪರಾತ್ಪರ ಪರಶಿವಲಿಂಗೇಶ್ವರ. ॥ ೧೨೩ ॥

೧೩೪೪

ಮತ್ತೆಯುಂ, ಕ್ರಿಯೆಯೆ ಶರೀರಂ ಮಂತ್ರವೆ ಜೀವಮಿವೆರಡರ
ಯೋಗವೆ ದೇಹ ಪ್ರಾಣ ಸಂಬಂಧವದೆ ಶಿವಸಾನ್ನಿಧ್ಯ ಕಾರಣ-
ಮದರಿಂದೆ ಕ್ರಿಯಾಮಂತ್ರಂಗಳುಭಯಂಗೂಡಿ
ದೇಹ ಪ್ರಾಣಮಯವೆಂದರಿದಾಚರಿಪುದೆಂದು ನಿರವಿಸಿದೆಯಯ್ಯಾ,
ವಿಶ್ವಮಯ ವಿಶ್ವೇಶ್ವರ ಪರಶಿವಲಿಂಗೇಶ್ವರ. ॥ ೧೨೪ ॥

ಶ್ರೀ ಶ್ರೀ ಶ್ರೀ

೧೩೪೫

ಮತ್ತಮಿಂತು ಮಂತ್ರಭೇದ ನಿರೂಪಣಾನಂತರದಲ್ಲಿ
ಪ್ರಣವಭೇದಮಂ ಪೇಳ್ವೆನೆಂತೆನೆ-
ಯಾ ಪ್ರಣವಂ ಶಿವಾಕ್ಷರಂ ನಡುವೆಯುಳ್ಳುದರಿಂ
ತನ್ನಂಗರ್ತವಾದ ಸಮಸ್ತಾಕ್ಷರಂಗಳಂ ಸಕಲದೇವತಾ ಸ್ವರೂಪಂಗಳಾ-
ದೇವತಾಸ್ವರೂಪಂಗಳೆಲ್ಲಂ ತನ್ನ ಸ್ವರೂಪಂಗಳಾ
ದೇವತಾಮಂತ್ರಂಗಳ್ಗೆ ತಾನೆ ಪ್ರಾಣಮಾ
ಪ್ರಾಣಮೆನಿಸಿ ಸದಾಶಿವೋಮೆಂಬ ಶ್ರುತಿಪ್ರಮಾಣದಿಂದಾ
ಪ್ರಣವವೆ ಪರಿಪೂರ್ಣ ಪರಂಜ್ಯೋತಿಯೆಂದು
ಬೋಧಿಸಿದೆಯಯ್ಯಾ, ಪರಶಿವಲಿಂಗಯ್ಯ. ॥ ೧೨೫ ॥

೧೩೪೬

ಮರಲ್ದುಮಾ ಪ್ರಣವಂ ಪಂಚಪ್ರಕಾರಮಾದಪುದೆಂತೆನೆ
ಸಾಕಲ್ಯಪ್ರಣವವೆಂದು, ಶಾಂಭವಪ್ರಣವವೆಂದು,
ಸೌಖ್ಯಪ್ರಣವವೆಂದು, ಸಾವಶ್ಯಪ್ರಣವವೆಂದು,
ಸಾಯುಜ್ಯಪ್ರಣವವೆಂದು
ಸದಾಶಿವನ ಪಂಚಮುಖಂಗಳಲ್ಲಿ
ಪೊರಪೊಣ್ಮದವಿವರೊಳ್ಮೊದಲ ಸಾಕಲ್ಯಪ್ರಣವಕ್ಕೆ ವಿವರಂ-
ಅಕಾರಂ ಉಕಾರಂ ಮಕಾರಂ ಎಂದು ತ್ರಿವಿಧಂ.
ಈ ತ್ರಿಮಾತ್ರಾಂತರ್ಗತವಾಗಿರ್ಪುದು ಶುದ್ಧ ಶಿವ ಶಬ್ದ
ವಾಚ್ಯವಾದದಾಖ್ಯವೆನಿಪ ಹಕಾರಂ.
ಅಕಾರಂ ಉಕಾರಂ ಈ ಎರಡುಂ ಕೂಡಿಮದೆ ಒಕಾರಂ.
ಈ ಮಂತ್ರಮೂರ್ತಿಗೆ
ಅಕಾರವೆ ಬಲಂ ಉಕಾರವೆ ಎಡಂ.
ಮಕಾರವೆ ಮಧ್ಯದೇಹಂ.
ಈ ಮೂರು ಕೂಡಿ ಓಂ ಎಂದು ಮೂರ್ತಿಯಾಯಿತ್ತೀ
ತ್ರಿವಿಧಾತ್ಮಕ ಶರೀರಕ್ಕೆ ಹಕಾರವೆ ಶುದ್ಧ ಚೈತನ್ಯಬ್ರಹ್ಮವೆನಿಸಿತ್ತು.
ಅಕಾರಕ್ಕೆ ಬ್ರಹ್ಮನಧಿದೇವತೆ.
ಉಕಾರಕ್ಕೆ ವಿಷ್ಣುವಧಿದೇವತೆ.
ಮಕಾರಕ್ಕೆ ರುದ್ರನಧಿದೇವತೆ.
ಒಕಾರಕ್ಕೆ ಸದಾಶಿವನಧಿದೇವತೆ.
ನಾದಾತ್ಮಕಮಾದ ಹಕಾರವೆ ಪರಶಿವಸ್ವರೂಪಂ.

ಈ ತೆರನಾದ ಅ ಉ ಮ ಒ ಹ ಎಂಬೀ
ಪಂಚಾಕ್ಷರಂಗಳ್ಪಂಚ ದೇವತಾಸ್ವರೂಪಂಗಳೀ
ಸಕಲಂಗೂಡಿ ಓಂ ಎಂಬುದೆ ಸಾಕಲ್ಯಪ್ರಣವಂ.
ಇದೊಂದೆ ಬ್ರಹ್ಮಂ.
ಮತ್ತಂ, ಪಂಚಮ ಸಂಜ್ಞಿತವಾದ ಉಕಾರಂ
ಪ್ರಥಮಸಂಜ್ಞಿತವಾದ ಅಕಾರಮಂ ಕೂಡೆ ಒ ಎಂದಾಯಿತ್ತದೆ
ತೃತೀಯಸಂಜ್ಞಿತಮಕಾರಾಂತರ್ಗತವನುಳ್ಳ ಹಕಾರವೆನಿಸಿತ್ತಿಂತು
ಅ ಉ ಮ ಒ ಎಂಬ ಚತುರಕ್ಷರಂಗೂಡಿದ
ಹ ಎಂಬ ಶಿವಬೀಜವೆ ಸಾಕಲ್ಯಪ್ರಣವವೆನಿಸಿತ್ತೀ
ಸಾಕಲ್ಯಪ್ರಣವವೆ ಸದಾಶಿವನ ಪೂರ್ವಮುಖದಲ್ಲಿ
ಉದ್ಧೃತವಾಯಿತ್ತೀ
ಪ್ರಣವಬ್ರಹ್ಮಕ್ಕೆ ಮತ್ತೊಂದು ಸಾಕಲ್ಯಾಭಿಧಾನಮನುಂಟು
ಮಾಳ್ಪುದೆಂತೆನೆ-
ಶಿವತತ್ವಬೀಜಕ್ಕೆ ಸದಾಶಿವತತ್ವ ಭೇದವಾದ
ಮತ್ತೊಂದು ಶುದ್ಧಾಭಿಧಾನವಾದುದೆಂದು ನಿರೂಪಿಸಿದೆಯಯ್ಯಾ,
ಪರಮ ಶಿವಲಿಂಗಯ್ಯ. ॥ ೧೨೬ ॥

೧೩೪೭

ಮತ್ತಂ, ಸಾಕಲ್ಯಪ್ರಣವ ನಿರೂಪಣಾನಂತರದಲ್ಲಿ
ಪಂಚಮಾತ್ರಾಸಮನ್ವಿತಮಾದ ಶಾಂಭವಪ್ರಣವಮಂ ಪೇಳ್ದನೀ
ಪಂಚಪ್ರಣವಂಗಳ್ಗೆಯುಂ ಹ ಎಂಬಕ್ಕರಂ ಪ್ರಸಿದ್ಧಂ.
ತದನಂತರದೊಳ್ಸೌಖ್ಯಪ್ರಣವ ಭೇದಮಂ ಪೇಳ್ವೆನೆಂತೆನೆ
ವರ್ಗಾದಿ ಸಂಜ್ಞಿತವಾದ ಅಕಾರಂ
ಪಂಚಮಸ್ವರ ಸಂಜ್ಞಿತವಾದ ಉಕಾರಂ
ಷಷ್ಠವರ್ಗಾಂತ ಸಂಜ್ಞಿತವಾದ ಮಕಾರಂ
ಬೀಜ ಸಂಜ್ಞಿತವಾದ ಹಕಾರಂ
ತೃತೀಯ ಸ್ವರ ಸಂಜ್ಞಿತವಾದ ಇಕಾರಂ
ಇಂತು ಅ ಉ ಮ ಹ ಇ ಈ ಐದಕ್ಕರಂಗೂಡಿದ
ಸೌಖ್ಯಪ್ರಣವಂ
ಸದಾಶಿವನ ಪಶ್ಚಿಮವದನದೊಳುಣ್ಮಿದುದು.
ಮತ್ತಂ, ಸಾವಶ್ಯಪ್ರಣವವೆಂತೆನೆ-
ಅಕಾರಂ ಸ್ವರಪಂಚಮಾಂತ ಸಂಜ್ಞಿತವಾದ ಉಕಾರಂ.
ಪವರ್ಗಾಂತರವಾದ ಮಕಾರಂ ತತ್ವ ಬೀಜ ಸಂಜ್ಞಿತವಾದ

ಹಕಾರಂ,
ಏಕಾದಶಕಲಾ ಸಂಜ್ಞಿತವಾದ ಎಕಾರಂ,
ಇಂತು ಆ ಉ ಮ ಹ ಎ ಯೆಂಬೀಯೈದಕ್ಕರಂಗೂಡಿದ
ಸಾವಶ್ಯಪ್ರಣವಂ,
ಸದಾಶಿವನ ಸೌಮ್ಯಮುಖದೊಳಾವಿರ್ಭಾವವಾಯಿತ್ತು.
ಮತ್ತಂ, ಸಾಯುಜ್ಯಪ್ರಣವವೆಂತೆನೆ-
ಆದಿಪ್ರಕೃತಿ ಸಂಜ್ಞಿತಮಾದ ಅಕಾರಂ
ಸ್ವರಪಂಚಮಾಂತಮಾದ ಉಕಾರಂ
ಷಡ್ವರ್ಗಾಂತವಾದ ಮಕಾರಂ
ಗುಹ್ಯ ಸಂಜ್ಞಿತವಾದ ಹಕಾರಂ
ಚತುರ್ದಶಕಲಾ ಸಂಜ್ಞಿತವಾದ ಔಕಾರಂ.
ಇಂತು ಆ ಉ ಮ ಹ ಔ ಯೆಂಬೀಯೈದಕ್ಕರಂಗೂಡಿದ
ಸಾಯುಜ್ಯಪ್ರಣವವೆ,
ಸದಾಶಿವನೂರ್ಧ್ವಮುಖದೊಳುದಿಸಿತ್ತೀ
ತೆರದಿಂ ಪಂಚಪ್ರಣವಂಗಳಕ್ಕರಂಗಳ್ಸಂಖ್ಯಾಯುಕ್ತಂಗಳಾಗಿರ್ಪುಮಾ
ಸಕಲಮಾತ್ರಾಂತಸ್ಥಮಾಗಿ ಹ ಎಂಬಕ್ಕರಮಗಣ್ಯಮಾಗಿರ್ಪುದೆಂದು
ಪಂಚಪ್ರಣವಭೇದಮಂ ನಿರೂಪಿಸಿದೆಯಯ್ಯಾ,
ಪರಮ ಶಿವಲಿಂಗಯ್ಯ. ॥ ೧೨೭ ॥

೧೩೪೮

ಇಂತು,
ಪಂಚಪ್ರಣವ ನಿರೂಪಣಾನಂತರವಲ್ಲಿಯಾ ಪಂಚಪ್ರಣವಂಗಳ್ಗೆ
ವರ್ಣಂ ಛಂದಂ ರಿಸಿ ಭೂತಂ ತತ್ವ ಅಧಿದೈವಂ
ಮಾತ್ರೆಗಳೆಂಬಿವರ ವಿವರಮಂ ಪೇಳ್ವೆನೆಂತೆನೆ-
ಮೊದಲಲ್ಲಿ ಸಾಕಲ್ಯಪ್ರಣವಕ್ಕೆ ರಕ್ತವರ್ಣಂ, ಅನುಷ್ಟಪ್ ಛಂದಂ,
ರಿಸಿ ಸನತ್ಕುಮಾರಂ, ಪೃಥ್ವಿ ಭೂತಂ, ಕರ್ಮಸಾದಾಖ್ಯ ತತ್ವಂ.
ಈಶಾನನಧಿದೈವಂ, ಚತುರ್ಮಾತೆಗಳುಕ್ತಂಗಳಿನ್ನುಂ
ಶಾಂಭವಪ್ರಣವಕ್ಕೆ ಅಂಜನ ವರ್ಣಂ, ತ್ರಿಷ್ಟಪ್ ಛಂದಂ,
ರಿಸಿ ಭಾರದ್ವಾಜಂ, ಅಪ್ಪು ಭೂತಂ, ಕರ್ತೃಸಾದಾಖ್ಯ ತತ್ವಂ-
ಈಶಾನನಧಿದೈವತಂ, ಪಂಚಮಾತ್ರೆಗಳುಕ್ತಂಗಳತ್ತಂ
ಸೌಖ್ಯಪ್ರಣವಕ್ಕೆ ಗೋಕ್ಷೀರವರ್ಣಂ, ಬೃಹತಿ ಛಂದಂ,
ರಿಸಿ ವಿಶ್ವಾಮಿತ್ರಂ, ತೇಜ ಭೂತಂ, ಮೂರ್ತಸಾದಾಖ್ಯ ತತ್ವಂ,
ಬ್ರಹ್ಮೇಶನಧಿದೈವತಂ, ಚತುರ್ಮಾತ್ರೆಗಳುಕ್ತಂಗಳಿನ್ನುಂ

ಸಾವಶ್ಯಪ್ರಣವಕ್ಕೆ ಕುಂಕುಮವರ್ಣಂ, ಜಗತಿ ಛಂದಂ,
ರಿಸಿ ಗೌತಮಂ, ವಾಯುಭೂತಂ, ಅಮೂರ್ತಸಾದಾಖ್ಯ ತತ್ವಂ,
ಈಶ್ವರನಧಿದೈವತಂ, ಪಂಚಮಾತ್ರೆಗಳುಕ್ತಂಗಳಿನ್ನುಂ
ಸಾಯುಜ್ಯಪ್ರಣವಕ್ಕಿದೇ ತೆರದಿಂ ಗ್ರಂಥಾಂತರದೊ
ಳ್ನೋಡಿಕೊಳ್ವುದೀ
ಪೂರ್ವೋಕ್ತವಾದ ಪ್ರಣವಾಂಗ ಮಾತ್ರೆಗಳಲ್ಲಿ
ಸಮಸ್ತ ಮಾತ್ರೆಗಳ್ಗೆಯುಂ
ಪ್ರಣವನಾಮದಿಂ ಪ್ರಾಣಸ್ವರೂಪವಾದ
ಶಿವಬೀಜ ಸಂಜ್ಞಿತವೆನಿಪ ಹಕಾರವೆ ನಾದಂ,
ಮಿಕ್ಕಕ್ಕರಂಗಳಾ ನಾದಬ್ರಹ್ಮಕ್ಕೆ ಬಿಂದು ಸಂಜ್ಞಿತ ಶಕ್ತಿಗಳೆನಿಪವಾ
ಶಿವಶಕ್ತ್ಯಾತ್ಮಕವಪ್ಪ ಹ ಎಂಬ ನಾದಬ್ರಹ್ಮವೆ
ಶರೀರಾದಿಗಳ ಸೃಷ್ಟಿ ಸ್ಥಿತಿ ನಿಮಿತ್ತಕ್ಕೆ
ತತ್ಪ್ರಾಣಿಗಳ ಹೃದಯಾಂತರವ-
ನೆಯ್ದಲೆಲ್ಲಾ ಮುಮುಕ್ಷುಗಳಾ
ನಾದಬ್ರಹ್ಮವಪ್ಪ ಪ್ರಣವೋಚ್ಚರಣೆಯಂ ಮಾಳ್ಪುದೀ
ಪಂಚಪ್ರಣವಂಗಳೆಲ್ಲಕ್ಕೆಯುಂ ಹಕಾರವೆ
ಕಾರಣವೆಂದು ನಿರೂಪಿಸಿದೆಯಯ್ಯಾ,
ಪರಮ ಶಿವಲಿಂಗಯ್ಯ. ॥ ೧೨೮ ॥

ಶ್ರೀ ಶ್ರೀ ಶ್ರೀ

೧೩೪೯

ಇಂತು ಪಂಚಪ್ರಣವ ನಿರೂಪಣಾನಂತರವಲ್ಲಿ
ಬ್ರಹ್ಮಭೇದವಿಧಿಯಂ ಪೇಳ್ವೆನೆಂತೆನೆ-
ಬ್ರಹ್ಮವೆಂದೊಡೆ ದೊಡ್ಡಿತ್ತಪತನದಿಂದೆಯುಂ
ಪೂರ್ಣವಹಣದಿಂದೆಯುಂ
'ಸರ್ವಂ ಖಲ್ವಿದಂ ಬ್ರಹ್ಮ'ವೆಂಬ ವಚನಾರ್ಥ ಸಾರ್ಥಕವಾಗಿಯಾ
ಅದ್ವಿತೀಯ ಶಿವತತ್ವ ಬ್ರಹ್ಮವೆ ಪಂಚಪ್ರಕಾರವಾದವಾ-
ಪಂಚಬ್ರಹ್ಮವೊಂದೊಂದೈದೈದಾಗುತ್ತಿರ್ಪತ್ತೈದಾಮದೆಂತೆನೆ
ಮೂರ್ತಿಬ್ರಹ್ಮ, ತತ್ವಬ್ರಹ್ಮ, ಭೂತಬ್ರಹ್ಮ, ಪಿಂಡಬ್ರಹ್ಮ,
ಕಲಾಬ್ರಹ್ಮಗಳೆಂಬೀವೈದುಂ ಪಂಚಬ್ರಹ್ಮಂಗಳಿವಕ್ಕೆ ವಿವರವೆಂತೆನೆ-
ಅಕಾರೋಕಾರಮಕಾರಾಧಿದೇವತೆಗಳಾದ
ಸೃಷ್ಟಿಸ್ಥಿತ್ಯಂತ್ಯಕಾರಿಗಳಾದ ಬ್ರಹ್ಮ ವಿಷ್ಣು ರುದ್ರರುಂ

ಸಾಕಲ್ಯಾದಿ ಪಂಚಪ್ರಣವಾಂಗರೂಪ ಸಮಸ್ತಾಕ್ಷರಂಗಳು-
ಮಿವೆಲ್ಲವಾದ ಬ್ರಹ್ಮ ಸಂಜ್ಞಿತವಾದ ಹಕಾರಾಂತಸ್ಥವಾದುದರಿಂದೀ
ಸರ್ವವುಂ ಮೂರ್ತಿಬ್ರಹ್ಮವೆನಿಕುಂ.
ಮತ್ತಮೀ ತ್ರಿವರ್ಣಸಂಭೂತವಾದ ಸಮಸ್ತ ವರ್ಣತತ್ವಂಗಳ್ಗೆಯು
ಶಿವತತ್ವವೆ ಪ್ರಭುವಾದುದರಿಂ ಶಿವಬೀಜ ಸಂಜ್ಞಿತವಾದ ಹ ಎಂಬ
ಶುದ್ಧ ಪ್ರಸಾದಾಧ್ಯಾತ್ಮಪ್ರಸಾದಾಂತವಾದ ಪಂಚಪ್ರಸಾದಮಂತ್ರವೆ
ತತ್ವಬ್ರಹ್ಮವೆನಿಕುಂ.
ಬಳಿಕ್ಕಂ ಮಾಂಸ ಸಂಜ್ಞಿತವಾದ ಲಕಾರವೆ ಪೃಥ್ವೀಭೂತ ಬೀಜಂ.
ಮೇದಸ್ಸಂಜ್ಞಿತವಾದ ವಕಾರವೆ ಜಲಭೂತ ಬೀಜಂ.
ಷಷ್ಠ ಸಂಜ್ಞಿತವಾದ ರಕಾರವೆ ತೇಜೋಭೂತ ಬೀಜಂ.
ಸಪ್ತಮ ಸಂಜ್ಞಿತವಾದ ಯಕಾರವೆ ವಾಯುಭೂತ ಬೀಜಂ.
ಪಂಚಮ ಸಂಜ್ಞಿತವಾದ ಹಕಾರವೆ ಆಕಾಶಭೂತ ಬೀಜವೀ
ಪ್ರಕಾರದಿಂ ಪಂಚಭೂತಾತ್ಮಕವಾದುದೆ ಭೂತಬ್ರಹ್ಮವೆನಿಕುಂ.
ಮರಲ್ದುಂ, ಪ್ರಕೃತಿ ಸಂಜ್ಞಿತವಾದ ಅ ಇ ಉ ಋ ಌ ಎ ಒಯೆಂಬೀ
ಪ್ರಕೃತಿಗಳಲ್ಲಿ
ಋ ಌ ದ್ವಯಮಂ ಬಿಟ್ಟುಳಿದ ಅ ಇ ಉ ಎ ಒ
ಯೆಂಬೀಯೈದಕ್ಕರಮಂ
ಪಂಚ ಸಂಜ್ಞಿತವಾದ ಹಕಾರದೊಡನೆ ಕೂಡೆ,
ಬಿಂದು ನಾದ ಸೌಂಜ್ಞಿತವಾದ ಸೊನ್ನೆಯೊಳ್ಪಸಸೆ,
ಹ್ರಂ ಹ್ರೀಂ ಹ್ರುಂ ಹ್ರೇಂ ಹ್ರೌಂ ಎಂಬೀ
ಬ್ರಹ್ಮಬೀಜಂಗಳೈದಂ ಪೇಳ್ದು,
ಮತ್ತಮೀ ಬೀಜಗಳೊಳ್ವಾಚಕವಾದ
ಪಂಚಬ್ರಹ್ಮಂಗಳಂ ಪೇಳ್ವನೆಂತೆನೆ-
ಸದ್ಯೋಜಾತ ವಾಮದೇವಾಘೋರ ತತ್ಪುರುಷೇಶಾನಂಗಳೆಂಬಿವೆ
ಪಂಚಬ್ರಹ್ಮಂಗಳಿವಕ್ಕೆ
ಪ್ರಣವವಾದಿಯಾಗಿ ನಮಃ ಪದಂ ಕಡೆಯಾಗಿ
ಚತುರ್ಥ್ಯಂತಮಂ ಪ್ರಯೋಗಿಸೆ
ಆ ಪಂಚಬ್ರಹ್ಮ ಮಂತ್ರೋದ್ಧರಣೆಯಾದುದೆಂತನೆ-
ಓಂ ಹ್ರಂ ಸದ್ಯೋಜಾತಾಯ ನಮಃ
ಓಂ ಹ್ರೀಂ ವಾಮದೇವಾಯ ನಮಃ
ಓಂ ಹ್ರುಂ ಅಘೋರಾಯ ನಮಃ
ಓಂ ಹ್ರೇಂ ತತ್ಪುರುಷಾಯ ನಮಃ
ಓಂ ಹ್ರೌಂ ಈಶಾನಾಯ ನಮಃ
ಎಂದು ಶಿವಬೀಜದೊಳ್ಜೀವ ಪ್ರಕೃತಿ ಪಂಚಾಕ್ಷರಂಗಳಂ ಕೂಡಿಸಿ

ಸಬಿಂಮುವಾಗುಚ್ಚರಿಸೆ,
ಪಂಚಬ್ರಹ್ಮವೆನಿಸಿದ ಕರ್ಮಸಾದಾಖ್ಯ
ಸ್ವರೂಪಮೆ ಪಿಂಡಬ್ರಹ್ಮವೆನಿಕುಂ.
ಮತ್ತಂ, ಪಿಂಡಬ್ರಹ್ಮವೆಂಬ ಪಂಚಬ್ರಹ್ಮ
ನಿರೂಪಣಾನಂತರದಲ್ಲಿಯಾ
ಪಂಚಬ್ರಹ್ಮಮಂತ್ರಕ್ಕೆ ಮೂವತ್ತೆಂಟು ಕಳೆಗಳುಂಟದೆಂತೆನೆ-
ಈಶಾನ ತತ್ಪುರುಷಾಘೋರ ವಾಮದೇವ
ಸದ್ಯೋಜಾತಂಗಳಿವಕ್ಕೆ ವಿವರಂ-
ಈಶಾನಕ್ಕೈದು ಕಲೆ. ತತ್ಪುರುಷಕ್ಕೆ ನಾಲ್ಕು ಕಲೆ.
ಅಘೋರಕ್ಕೆಂಟು ಕಲೆ. ವಾಮದೇವಕ್ಕೆ ಪದಿಮೂರ್ಕಲೆ.
ಸದ್ಯೋಜಾತಕ್ಕೆಂಟು ಕಲೆ.
ಅಂತು, ಮೂವತ್ತೆಂಟು ಕಲೆ.
ಇವಕ್ಕೆ ವಿವರಂ, ಮೊದಲೀಶಾನಕ್ಕೆ-
'ಈಶಾನಸ್ಸರ್ವ ವಿದ್ಯಾನಾಂ' ಇದು ಮೊದಲ ಕಲೆ.
'ಈಶಾನಾಸ್ಸರ್ವ ಭೂತಾನಾಂ' ಇದೆರಡನೆಯ ಕಲೆ.
'ಬ್ರಹ್ಮಣಾಧಿಪತಿ ಬ್ರಹ್ಮಣಾಧಿಪತಿ ಬ್ರಹ್ಮ' ಇದು ಮೂರನೆಯ ಕಲೆ.
'ಶಿವೋಮೇಸ್ತು' ಇದು ನಾಲ್ಕನೆಯ ಕಲೆ.
'ಸದಾ ಶಿವೋಂ' ಇದು ಐದನೆಯ ಕಲೆ.
ತತ್ಪುರುಷಕ್ಕೆ-
'ತತ್ಪುರುಷಾಯ ವಿದ್ಮಹೆ' ಇದು ಮೊದಲ ಕಲೆ.
'ಮಹಾದೇವಾಯ ಧೀಮಹಿತನ್ನೋ' ಇದೆರಡನೆಯ ಕಲೆ.
'ರುದ್ರಃ' ಇದು ಮೂರನೆಯ ಕಲೆ.
'ಪ್ರಚೋದಯಾತ್' ಇದು ನಾಲ್ಕನೆಯ ಕಲೆ.
ಅಘೋರಕ್ಕೆ-
'ಅಘೋರೇಭ್ಯಃ' ಇದು ಮೊದಲ ಕಲೆ.
'ಘೋರೇಭ್ಯಃ' ಇದು ಎರಡನೆಯ ಕಲೆ.
'ಘೋರಘೋರ' ಇದು ಮೂರನೆಯ ಕಲೆ.
'ತರೇಭ್ಯ' ಇದು ನಾಲ್ಕನೆಯ ಕಲೆ.
'ಸರ್ವತಃ' ಇದೈದನೆಯ ಕಲೆ.
'ಸರ್ವ' ಇದಾರನೆಯ ಕಲೆ.
'ಸರ್ವೇಭ್ಯೋ ನಮಸ್ತೇಸ್ತು' ಇದೇಳನೆಯ ಕಲೆ.
'ರುದ್ರ ರೂಪೇಭ್ಯಃ' ಇದೆಂಟನೆಯ ಕಲೆ.
ವಾಮದೇವಕ್ಕೆ-
'ವಾಮದೇವಾಯ' ಇದು ಮೊದಲ ಕಲೆ.

'ಜೇಷ್ಠಾಯ' ಇದೆರಡನೆಯ ಕಲೆ.
'ರುದ್ರಾಯ ನಮಃ' ಇದು ಮೂರನೆಯ ಕಲೆ.
'ಕಲಾಯ' ಇದು ನಾಲ್ಕನೆಯ ಕಲೆ.
'ಕಾಲ' ಇದೈದನೆಯ ಕಲೆ.
'ವಿಕರಣಾಯ ನಮಃ' ಇದಾರನೆಯ ಕಲೆ.
'ಬಲಂ' ಇದೇಳನೆಯ ಕಲೆ.
'ವಿಕರಣಾಯ' ಇದೆಂಟನೆಯ ಕಲೆ.
'ಬಲಂ' ಇದೊಂಬತ್ತನೆಯ ಕಲೆ.
'ಪ್ರಮಥನಾಥಾಯ' ಇದು ಪತ್ತನೆಯ ಕಲೆ.
'ಸರ್ವಭೂತ ದಮನಾಯ ನಮಃ' ಇದು ಪನ್ನೊಂದನೆಯ ಕಲೆ
'ಮನ' ಇದು ಪನ್ನೆರಡನೆಯ ಕಲೆ.
'ಉನ್ಮನಾಯ' ಇದು ಪದಿಮೂರನೆಯ ಕಲೆ.
ಸದ್ಯೋಜಾತಕ್ಕೆ-
'ಸದ್ಯೋಜಾತಂ ಪ್ರಪದ್ಯಾಮಿ' ಇದು ಮೊದಲ ಕಲೆ.
'ಸದ್ಯೋಜಾತಾಯವ್ವೈ ನಮಃ' ಇದೆರಡನೆಯ ಕಲೆ.
'ಭವೆ' ಇದು ಮೂರನೆಯ ಕಲೆ.
'ಭವೇ' ಇದು ನಾಲ್ಕನೆಯ ಕಲೆ.
'ನಾತಿಭವೆ' ಇದೈದನೆಯ ಕಲೆ.
'ಭವಸ್ವ ಮಾಂ' ಇದಾರನೆಯ ಕಲೆ.
'ಭವ' ಇದೇಳನೆಯ ಕಲೆ.
'ಉದ್ಭವ' ಇದೆಂಟನೆಯ ಕಲೆ.
ಇದು ಕಲಾಬ್ರಹ್ಮವಿಂತು ಮೂರ್ತಿಬ್ರಹ್ಮ ತತ್ವಬ್ರಹ್ಮ ಭೂತಬ್ರಹ್ಮ
ಪಿಂಡಬ್ರಹ್ಮ ಕಲಾಬ್ರಹ್ಮಗಳೆಂಬ
ಪಂಚಬ್ರಹ್ಮಗಳಂ ನಿರವಿಸಿದೆಯಯ್ಯಾ,
ಪರಮ ಶಿವಲಿಂಗಯ್ಯ. ॥ ೧೨೯ ॥

೧೩೫೦

ಇಂತು, ಪೂರ್ವೋಕ್ತ ಪಂಚಬ್ರಹ್ಮವಪ್ಪ ಶಿವಬೀಜವೆ
ಸಾಕಲ್ಯಾದಿ ಸಾಯುಜ್ಯಾಂತವಾದ ಪ್ರಣವ ಸ್ವರೂಪವಾದ ಕಾರಣ
ಮೂರ್ತಿವೆತ್ತಿಹುದಾಗಿಯಾ ಪಂಚ ಪ್ರಣವವೆ ಮೂರ್ತಿಬ್ರಹ್ಮಂ.
ಶುದ್ಧಾಧ್ಯಾತ್ಮಾಂತವಾದ ಪಂಚಪ್ರಸಾದ ಬೀಜವೆ
ಸಕಲ ನಿಷ್ಕಲ ಸ್ವರೂಪದಿಂದೆ ಭೋಗ್ಯಪಂಚಕೋತ್ಪತ್ತಿ
ಕಾರಣವೆನಿಸಿತ್ತಾಗಿಯಾ
ಪ್ರಸಾದಪಂಚಕವೆ ತತ್ವಬ್ರಹ್ಮಂ.

ಭೂಮ್ಯಾದ್ಯಾಕಾಶಾಂತವಾದ ಪಂಚಭೌತಿಕ ಬೀಜಂಗಳೊಳ್ತಾಂ
ಶೂನ್ಯಬೀಜವ್ವಾದುದರಿಂ ತನ್ನ ಭೋಗವಕ್ತ್ರಪಂಚಕ
ಸಾಧನಾರ್ಥ ಭೂತವತ್ತೆನಿಸಿತ್ತಾಗಿಯಾ
ಲಕಾರಾದಿ ಹಕಾರಾಂತ ಭೂತವರ್ಣ ಪಂಚಕವೆ ಭೂತಬ್ರಹ್ಮಂ
ಸದ್ಯಾದೀಶಾನಾಂತವಾದ ಪಂಚವಕ್ತ್ರಬೀಜಪಂಚಕವೆ
ಪಿಂಡಬ್ರಹ್ಮವದು.
ಕರ್ಮಸಾದಾಖ್ಯ ಭೌತಿಕಸ್ತವಾದಾತ್ಮತತ್ವದಲ್ಲಿ ತೋರಿಪ್ಪ ಕಾರಣಂ,
'ಹ್ರಸ್ವಂಸ್ಯಾದ್ವ್ಪಹ್ಮನಿಚಯ'ಮೆಂಬುದರಿಂ,
ಹ್ರಸ್ವಸ್ವರ ಪಂಚಕವ[ದೆ]ನಿಸಿತ್ತಾಗಿ
ಸದ್ಯಾದಿ ವಕ್ತ್ರಪಂಚಕವೆ ಪಿಂಡಬ್ರಹ್ಮ ಪಂಚಕಂ.
ಕರ್ಮಸಾದಾಖ್ಯವೆಂದು ದಿವ್ಯಲಿಂಗವೆಂದಾತ್ಮತತ್ವವೆಂದು
ಪಂಚವಕ್ತ್ರವೆಂದು ಪಿಂಡವೆಂದಿಲ್ಲವೊಂದರ
ಪರ್ಯಾಯನಾಮವಲ್ಲದೆ ಪೆರತಲ್ಲವೀ
ಪಂಚಬ್ರಹ್ಮಬೀಜಂಗಳಾರಾಧಕರ ಜಪನಿಮಿತ್ತವಾಗಿ
ಪಂಚಬ್ರಹ್ಮಮಂತ್ರ ವಿಭಾಗೆವಡೆದವು.
ಕರ್ತೃಸಾದಾಖ್ಯವೆಂದು ದಿವ್ಯಲಿಂಗವೆಂದಾತ್ಮತತ್ವವೆಂದು
ಪಂಚವಕ್ತ್ರವೆಂದು ಪಿಂಡಬ್ರಹ್ಮವೆಂದು
ನಾಮಪರ್ಯಾಯವಲ್ಲದೆ ಪೆರತಲ್ಲವೀ
ಪಂಚಬ್ರಹ್ಮಬೀಜಂಗಳಾರಾಧಕರ ಜಪನಿಮಿತ್ತವಾಗಿಯಾ
ಪಂಚಬ್ರಹ್ಮಮಂತ್ರಗಳೆ ವಿಭಾಗೆವಡೆದವು.
ಸ್ವ ಪರಾಶಕ್ತಿ ಸಂಭೂತವಾಗಿ ಜ್ಯೋತಿರ್ದೇವತಾಧಿಪತಿಗಳಾದ
ಸಕಲ ವರ್ಣ ಕಲೆಗಳಿಗೆ ತಾನೆ ಆಶ್ರಯವಾದ ಕಾರಣಂ
ಪಿಂಡಬ್ರಹ್ಮ ಮಂತ್ರಪಂಚಕವೆ ಕಲಾಬ್ರಹ್ಮ ಪಂಚಕವೆಂದುಕ್ತ-
ಮಾದುದಿಂತು ಪಂಚಬ್ರಹ್ಮವಿಭಾಗವಾದ
ಪಂಚವಿಂಶತಿ ಬ್ರಹ್ಮಭೇದಮಂ ನಿರೂಪಿಸಿದೆಯಯ್ಯಾ,
ಪರಮ ಶಿವಲಿಂಗಯ್ಯ. ॥ ೧೩೦ ॥

೧೩೫೧

ಬಳಿಕಮೀ ಪಂಚವಿಂಶತಿ ಬ್ರಹ್ಮಂಗಳ ಲಕ್ಷಣಮಂ ಪೇಳ್ವೆನೆಂತೆನೆ-
ಈಶಾನಾಮೀಶ್ವರಂ ಬ್ರಹ್ಮಂ ಶಿವಂ ಸದಾಶಿವಗೀ
ಪಂಚಮೂರ್ತ್ಯಾಕೃತಿಗಳಾವಾವವುಂಟವೆ
ಪಂಚ ಪ್ರಣವಾಕೃತಿಗಳಿವೆ ಸದ್ಯಾದಿ ಪಂಚಬ್ರಹ್ಮಂಗಳವರ

ಲಕ್ಷಣಮೆಂತೆನೆ ಪೇಳ್ವೆಂ-
ಕರ್ತೃಸಾದಾಖ್ಯ, ಕರ್ಮಸಾದಾಖ್ಯ, ಮೂರ್ತಿಸಾದಾಖ್ಯ,
ಅಮೂರ್ತಿಸಾದಾಖ್ಯ, ಶಿವಸಾದಾಖ್ಯಂಗಳವರ ಭಾವಮಂ
ತರದಿಂ ಸದ್ಯಾದಿಗಳಲ್ಲಿ ತಿಳಿವುದು.
ಇಂತು ತಿಳಿದೊಡೆ ಪರಿಪಿಡಿಯಿಂ ಪಂಚಪ್ರಸಾದಂಗಳ
ಕುರುಪುಗಳುಂಟಾದಪವೆಂದು ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೩೧ ॥

೧೩೫೨

ಮತ್ತಮಾ, ಸದ್ಯಾದಿಗಳಿಂದೊಗೆದ ಪೃಥ್ವ್ಯಾದಿ ಪಂಚಭೂತಂಗಳ
ವರ್ಣಂಗಳಂ ಪೇಳ್ವೆನೆಂತೆನೆ-
ಪೃಥ್ವಿ ಪಳದಿ, ಅಪ್ಪು ಬಿಳ್ಪುವಗ್ನಿ ಕೆಂಪು, ವಾಯು ಕರ್ಪುವಾಕಾಶ ಪೊಗೆ
ಯೀ ತೆರದಿಂ ಪಂಚಭೂತಾಕಾರಂಗಳಾದವೆಂದು
ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೩೨ ॥

೧೩೫೩

ಮತ್ತಮಾ, ಪೃಥ್ವ್ಯಾದಿಭೂತಂಗಳಂ ಪೆತ್ತ
ಸದ್ಯಾದಿ ಪಂಚಬ್ರಹ್ಮಮೂರ್ತಿಗಳ
ಲಕ್ಷಣಂಗಳಂ ಬೇರೆ ಬೇರೆ ವಿವರಿಸಿದಪೆನೆಂತೆನೆ-
ಗೋಕ್ಷೀರ ಶಂಖವರ್ಣದಿಂದೆ, ಜಟಾಮಕುಟದಿಂದೆ,
ಚತುರ್ಮುಖದಿಂದೆ, ಚತುರ್ಭುಜದಿಂದೆ,
ದ್ವಾದಶನೇತ್ರದಿಂದೆ, ಸರ್ವಾಭರಣಂಗಳಿಂದೆ,
ಸದ್ಯೋಜಾತಬ್ರಹ್ಮ ವಿರಾಜಿಕುಂ.
ಜಪಾಕುಸುಮವರ್ಣದಿಂದೆ, ಜಟಾಮಕುಟದಿಂದೆ,
ಚತುರ್ಮುಖದಿಂದೆ, ಚತುರ್ಭುಜದಿಂದೆ,
ದ್ವಾದಶನೇತ್ರದಿಂದೆ, ಸರ್ವಾವಯ ಸಂಪತ್ತಿಯಿಂದೆ,
ರಕ್ತವಸ್ತ್ರದಿಂದೆ, ರಕ್ತ[ಪ]ಸ್ರೋತ್ತರೀಯದಿಂದೆ,,
ದಕ್ಷಿಣಭುಜದ್ವಯ ವಿಲಸಿತಾಭಯ ಟಂಕಂಗಳಿಂದೆ,
ವಾಮಭುಜದ್ವಯ ವಿಲಸಿತ ವರಶೂಲಂಗಳಿಂದೆ,
ರಕ್ತಗಂಧಾನುಲೇಪದಿಂದೆ, ರಕ್ತಮಾಲ್ಯಂಗಳಿಂದೆ
ಸರ್ವಲಕ್ಷಣದಿಂದೆ, ಸರ್ವಾಭರಣದಿಂದೆ,

ಸರ್ವವಶ್ಯಕರಮಾದ ವಾಮದೇವಬ್ರಹ್ಮಂ ವಿರಾಜಿಕುಂ.
ಪುಡಿಗರ್ಪಿನ ಕಾಂತಿಯಿಂದೀ, ಚತುರ್ಮುಖದಿಂ, ಚತುರ್ಭುಜದಿಂ,
ರೌದ್ರರೂಪದಿಂ, ಜಟಾಮಕುಟದಿಂ, ದ್ವಾದಶನೇತ್ರದಿಂ,
ದುಷ್ಟ ಕರಾಳವದನದಿಂ, ವ್ಯಾಘ್ರಚರ್ಮಾಂಬರದಿಂ,
ವ್ಯಾಘ್ರಚರ್ಮೋತ್ತರೀಯದೀ, ನೂಪುರಾಂಚಿತ ಚರಣದಿಂ,
ಸರ್ವಾಭರಣದಿಂ, ದಿವ್ಯಗಂಧಮಾಲ್ಯಾದಿಗಳಿಂ,
ಟಂಕ ಶೂಲ ವರದಭಯಂಗಳಿಂ, ಸರ್ವಾವಯವ ಸಂಯುಕ್ತದಿಂ,
ಸರ್ವಲಕ್ಷಣ ಸಂಪತ್ತಿಯಿಂ ಕೂಡಿ
ಸರ್ವ ಶತ್ರು ಜಯಕರವಾದಘೋರಬ್ರಹ್ಮಂ ವಿರಾಜಿಕುಂ.
ಕುಂಕುಮವರ್ಣ ಚತುರ್ಮುಖದಿಂ,
ಚತುರ್ಭುಜದಿಂ, ಜಟಾಮಕುಟದಿಂ,
ದ್ವಾದಶನೇತ್ರದಿಂ, ಸರ್ವಾವಯವ ಸಂಯುಕ್ತದಿಂ,
ಪೀತಾಂಬರದಿಂ, ಪೀತವಸ್ತ್ರೋತ್ತರೀಯದಿಂ,
ಸರ್ವಾಭರಣದಿಂ, ಟಂಕಾಭಯಯುತ ವಾಮಕರಂಗಳಿಂ,
ಶೂಲಭಯಾನ್ವಿತ ದಕ್ಷಿಣಹಸ್ತಂಗಳಿಂ,
ದಿವ್ಯಗಂಧಾನುಲಿಪ್ತಾಂಗದಿಂ, ದಿವ್ಯಕುಸುಮಂಗಳಿಂ
ಸರ್ವಸಿದ್ಧಿಪ್ರದವಾದ ತತ್ಪುರುಷಬ್ರಹ್ಮಂ ವಿರಾಜಿಕುಂ.
ಸ್ಫಟಿಕವರ್ಣದಿಂ, ಜಟಾಮಕುಟದಿಂ,
ಚತುರ್ಮುಖದಿಂ, ದ್ವಾದಶನೇತ್ರದಿಂ, ಚತುರ್ಭುಜದಿಂ,
ಸರ್ವಲಕ್ಷಣದಿಂ, ಶುಕ್ಲಾಂಬರದಿಂ, ಶುಕ್ಲವಸ್ತ್ರೋತ್ತರೀಯದಿಂ,
ಟಂಕಾಭಯ ಶೂಲವರಾನ್ವಿತ ಕರಚತುಷ್ಟಯದಿಂ,
ಸರ್ವಾವಯವ ಸಂಯುತದಿಂ, ಸರ್ವಾಭರಣದಿಂ,
ದಿವ್ಯ ಗಂಧ ಮಾಲ್ಯಾದಿಗಳಿಂ ಕೂಡಿ
ಸದ್ಯೋಮುಕ್ತಿಪ್ರದಮಾದೀಶಾನಬ್ರಹ್ಮಂ ವಿರಾಜಿಕುಂ.
ಇಂತು, ಪಂಚಬ್ರಹ್ಮಾತ್ಮಕಮಾದುದೆ ಸದಾಶಿವತತ್ವವೆಂದು
ನಿರೂಪಿಸಿದೆಯಯ್ಯಾ,
ಪರಮ ಶಿವಲಿಂಗಯ್ಯ. || ೧೩೩ ||

೧೩೫೪

ಮತ್ತಂತರದಿಂ
ಪಂಚಬ್ರಹ್ಮಮೂರ್ತಿ ಧ್ಯಾನದ ನಿರೂಪಣಾನಂತರದಲ್ಲಿ
ಪಿಂಡಸಾದಾಖ್ಯಮಂ ಪೇಳ್ವೆನೆಂತೆನೆ-
ಸದ್ಯೋಜಾತಮುಖವೆ ಮೂರ್ತಿಸಾದಾಖ್ಯ ಪಿಂಡಬ್ರಹ್ಮಂ.

ವಾಮದೇವಮುಖವೆ ಅಮೂರ್ತಿಸಾದಾಖ್ಯ ಪಿಂಡಬ್ರಹ್ಮಂ.
ಅಘೋರಮುಖವೆ ಕರ್ತೃಸಾದಾಖ್ಯ ಪಿಂಡಬ್ರಹ್ಮಂ.
ತತ್ಪುರುಷಮುಖವೆ ಕರ್ಮಸಾದಾಖ್ಯ ಪಿಂಡಬ್ರಹ್ಮಂ.
ಈಶಾನಮುಖವೆ ಶಿವಸಾದಾಖ್ಯ ಪಿಂಡಬ್ರಹ್ಮ-
ಮಿಂತನ್ಯೋನ್ಯ ಭೇದದಿಂ ಪಂಚಮುಖವೆ ಪಂಚಸಾದಾಖ್ಯ
ಪಿಂಡಬ್ರಹ್ಮವೆಂದು ನಿರವಿಸಿದೆಯಯ್ಯಾ
ಪರಶಿವಲಿಂಗಯ್ಯ. ॥ ೧೩೪ ॥

೧೩೫

ಬಳಿಕ್ಕೆಯುಮಾ,
ಪಿಂಡಬ್ರಹ್ಮಗಳ ಕಳಾಸ್ವರೂಪಮಂ ಪೇಳ್ವೆನೆಂತೆನೆ-
ಶಂಖ ಕುಂದ ಚಂದ್ರ ಸ್ಫಟಿಕ ಕ್ಷೀರಗಳೆಂಬೀ
ಪಂಚವರ್ಣಾತ್ಮಕವಾದುದೆ ಈಶಾನಮುಖದ ಕಲೆ.
ಶೋಣ ಕೃಷ್ಣ ಶ್ವೇತ ಪೀತಂಗಳೆಂಬೀ
ಚತುರ್ವ[ರ್ಣಾ]ತ್ಮಕವಾದುದೆ ತತ್ಪುರುಷಮುಖದ ಕಲೆ.
ಅಂಜನಾರುಣ ಪೀತ ಶ್ಯಾಮ ನೀಲ
ಸಿತಾರುಣ ಕಾಂಚನಂಗಳೆಂಬೀವೆಂಟು
ವರ್ಣಾತ್ಮಕವಾದುದೆ ಅಘೋರಮುಖದ ಕಲೆ.
ಜಪಾ ಪೀತಾಂಜನ ಶ್ಯಾಮ ಶುಕ್ಲ ಶಾಮಾಂಜನಾರುಣಾಂಜನ
ಸ್ಫಟಿಕ ರಕ್ತನೀಲ ಮರಕತಂಗಳೆಂಬೀ
ಪದಿಮೂರು ವರ್ಣಾತ್ಮಕವಾದುದೆ ವಾಮದೇವಮುಖದ ಕಲೆ.
ರಕ್ತ ಕೃಷ್ಣ ನೀಲ ಕೃಷ್ಣ ಪೀತ ಕುಂಕುಮ ಭಿನ್ನಾಂಜನಾರುಣಂ
ಗಳೆಂಬೀಯಷ್ಟಾ
ತ್ಮಕವಾದುದೆ ಸದ್ಯೋಜಾತಮುಖದ ಕಲೆ.
ಇಂತೀ ಮೂವತ್ತೆಂಟು ಕಲಾಮಯವಾದ ವರ್ಣಂಗಳೆ
ತ್ರಿನೇತ್ರಂಗಳಿಂ, ಚತುರ್ಭುಜಗಳಿನಭಯ ವರದ ಶೂಲ
ಪರಶು ಕರಂಗಳಿಂ,
ಸರ್ವಲಕ್ಷಣ ಸಂಯುತಂಗಳಿಂ, ಸರ್ವಾಭರಣಂಗಳಿಂ,
ದಿವ್ಯಗಂಧ ಮಾಲ್ಯಂಗಳಿಂದಲಂಕೃತರಾದ ಶಿವಮೂರ್ತಿಗಳೆಂದು
ನಿರವಿಸಿದೆಯಯ್ಯಾ, ಪರಶಿವಲಿಂಗಯ್ಯ. ॥ ೧೩೫ ॥

೧೩೫೬

ಮತ್ತೆಯುಂ,
ಸಮಸ್ತಕಲೆಗಳಲ್ಲಿಯುಂ ವಾಮಾದಿ ಸಮಸ್ತ ಶಕ್ತಿಗಳಿರ್ಕುಮಾ
ಮೂವತ್ತೆಂಟು ಕಲೆಗಳಲ್ಲಿ ಮೂವತ್ತೆಂಟು ಶಕ್ತಿಗಳಿರ್ಕುಮಾ
ವಾಮಾದಿ ಶಕ್ತಿಗಳಿಂದೆಯುಮಕಾರಾದಿಗಳಿಂದೆಯುಂ
ಚಂದ್ರ ಸೂರ್ಯಾಗ್ನಿ ಸಂಜ್ಞಿತ ಷೋಡಶ ದ್ವಾದಶದಶಸಂಖ್ಯಾತ
ಗಣನೆಗಳೊಡನೆ ಕೂಡಿ ಕಲಾಬ್ರಹ್ಮಮಿರ್ಕು
ಮಿಂತು ಮೂರ್ತಿಬ್ರಹ್ಮ ತತ್ವಬ್ರಹ್ಮ ಭೂತಬ್ರಹ್ಮ ಪಿಂಡಬ್ರಹ್ಮ
[ಕಲಾಬ್ರಹ್ಮ]ಗಳೆಂಬೀ ಪಂಚಬ್ರಹ್ಮಂಗಳಂ
ನ್ಯಾಸಪೂರ್ವಕವಾಗಿ
ಸಕಲ ಕಾರ್ಯಂಗಳಲ್ಲಿಯುಂ
ಪ್ರಯೋಗಿಪುದೆಂದು ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೩೬ ॥

ಶ್ರೀ ಶ್ರೀ ಶ್ರೀ

೧೩೫೭

ಮತ್ತಂ, ಪ್ರಣವಭೇದ ನಿರೂಪಣಾನಂತರದಲ್ಲಿ
ಅಂಗಭೇದಮಂ ಪೇಳ್ವೆನೆಂತೆನೆ-
ಶಿವಾಂಗ ಭೂತಾಂಗ ವಿದ್ಯಾಂಗ ಕೂಪಾಂಗ ಶಕ್ತ್ಯಂಗ
ಸಾಮಾನ್ಯಂಗಂಗಳೆಂದಾರು ತೆರನೀ
ಷಡಂಗಾಕ್ಷರಂಗಳಲ್ಲಿ ನಾದಬ್ರಹ್ಮಂ ಪರಿಪೂರ್ಣವಾಗಿಪುದಾ
ಷಡಂಗಂಗಳಲ್ಲಿ ಮೊದಲ ಶಿವಾಂಗಕ್ಕೆ ವಿವರಂ-
ಆ ಈ ಊ ೠ ೡ ಐ ಔ ಅಂ ಅಃ ಎಂಬಿಯೊಂಬತ್ತು
ವಿಕೃತಾಕ್ಷರಂಗಳಲ್ಲಿ
ನಾಲ್ಕನೆಯ ೠಕಾರಮಂ ಐದನೆಯ ೡ ಕಾರಮಂ ಎಂಟನೆಯ ಅಂ
ಎಂಬ ಈ ಮೂರಕ್ಕರಮಂ ಬಿಟ್ಟು
ಉಳಿದಾರಕ್ಕರಮಂ ಶಿವ ಸಂಜ್ಞಿತವಾದ ಹಕಾರದೊಡನೆ ಕೂಡಿಸೆ
ಹಾಂ ಹೀಂ ಹೂಂ ಹೈಂ ಹೌಂ ಹಃ ಎಂಬೀ
ಶಿವಷಡಂಗಮಂತ್ರವೆ ರಕಾರದಿಂ ಪೊರಗಪ್ಪುದರಿಂ ತಾಂತ್ರಿಕ
ಶಿವಷಡಂಗವೆನಿಕುಂ.
ರಕಾರದೊಡನೆ ಕೂಡಿ ಹ್ರಾಂ ಹ್ರೀಂ ಹ್ರೂಂ ಹ್ರೈಂ ಹ್ರೌಂ ಹ್ರಃ ಎಂಬ

ವೈದಿಕ ಶಿವಷಡಂಗಮಂತ್ರವೆನಿಸುಗು-
ಮೀಯುಭಯ ಮಂತ್ರಕ್ಕಂ ಭೇದವಿಲ್ಲವೆಂದು
ನಿರೂಪಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೩೭ ॥

೧೩೮

ಮತ್ತಮೀ ಷಡಂಗಮಂತ್ರಗಳೆ
ಬೇರೆ ಬೇರೆಯೊಂದೊಂದರೊಳಾರಾರು
ತೆರನುಂಟುವಾವಾವವೆನೆ ಪೇಳ್ವೆಂ-
ಹ್ರಾಂ ಎಂಬುದು ಹೃದಯಮಂತ್ರಂ.
ಹ್ರೀಂ ಎಂಬುದು ಶಿರೋಮಂತ್ರಂ.
ಹ್ರೂಂ ಎಂಬುದು ಶಿಖಾಮಂತ್ರಂ.
ಹ್ರೈಂ ಎಂಬುದು ಕವಚಮಂತ್ರಂ.
ಹ್ರೌಂ ಎಂಬುದು ನೇತ್ರಮಂತ್ರಂ.
ಹ್ರಃ ಎಂಬುದಸ್ತ್ರಮಂತ್ರಂ.
ಇವಾರುಂ ಶಿವಾಂಗ ಮಂತ್ರಂ.
ಹೃದಯಾದ್ಯಸ್ತ್ರಾಂತಮಾದ ಷಡಂಗಮಂತ್ರಗಳ
ಚತುರ್ಥ್ಯಾಂತಮಾಗಿಯುಂ ನಮಸ್ಕಾರಾದಿ
ಷಟ್ಪಲ್ಲವುಚ್ಚರಿಪಂದವೆಂತೆನೆ
ನಮಃ ಸ್ವಾಹಾ ವಷಟ್ ಹುಂ ವೌಷಟ್ ಫಟ್
ಎಂಬಿವು ಷಟ್ಪಲ್ಲವಂಗಳ್.
ಇವರುದಾಹರಣಂ ಓಹ ಹ್ರಾಂ ಹೃದಯಾಯ ನಮಃ
ಓಂ ಹ್ರೀಂ ಶಿರಸೆ ಸ್ವಾಹಾ, ಓಂ ಹ್ರೂಂ ಶಿಖಾಯೈ ವಷಟ್
ಓಂ ಹ್ರೈಂ ಕವಚಾಯ ಹುಂ, ಓಂ ಹ್ರೌಂ ನೇತ್ರತ್ರಯಾಯ ವೌಷಟ್
ಓಂ ಹ್ರಃ ಅಸ್ತ್ರಾಯ ಫಟ್
ಎಂಬ ಷಟ್ಪಲ್ಲವಂಗೂಡಿದುದೇ ಶಿವಾಂಗಮಂತ್ರವೆಂದು ನಿರವಿಸಿದೆಯಯ್ಯಾ
ಪರಶಿವಲಿಂಗಯ್ಯ. ॥ ೧೩೮ ॥

೧೩೯

ಮತ್ತಂ, ಶಿವಾಂಗಮಂತ್ರ ನಿರೂಪಣಾನಂತರದಲ್ಲಿ,
ಭೂತಾಂಗಮಂತ್ರಮಂ ಪೇಳ್ವೆನೆಂತೆನೆ-

ಪೃಥ್ವೀಬೀಜವಾದ ಲಕಾರಮಂ
ಜೀವಬೀಜವಾದ ಹಕಾರದೊಡನೆ ಕೂಡಿ
ಅದನೆರಡನೆಯ ಸ್ವರದೊಡನೆ ಸಂಯೋಗಿಸಿದ ಬಿಂದು ನಾದ
ಸಂಜ್ಞಿತನಾದ ಸೊನ್ನೆಯಂ ಬೆರಸೆ ಹ್ರಾಂ ಎಂದಾಯಿತ್ತು.
ಶಿವ ಸಂಜ್ಞಿತವಾದ ಹಕಾರದೊಡನೆ ಜಲಬೀಜವಾದ ವಕಾರಮಂ
ನಾಲ್ಕನೆಯ ಸ್ವರವಾದೀಕಾರದೊಡನೆ ಕೂಡಿ ಶಿವಶಕ್ತಿ ಸಂಜ್ಞಿತವಾದ
ಸೊನ್ನೆಯಂ ಬೆರಸಿ ಹ್ರೀಂ ಎಂದಾಯಿತ್ತು.
ಷಷ್ಠ ಸಂಜ್ಞಿತ ರಕಾರಮಂ ಪಂಚಮ ಸಂಜ್ಞಿತ ಹಕಾರದೊಳ್ವೆರಸಿ
ಸ್ವರಪಂಚಮಾಂತವಾದೂಕಾರದೊಳಾ ಹಕಾರಮಂ ಕೂಡಿ
ಯಾಧಾರಾಧೇಯ ಸಂಜ್ಞಿತ ಬಿಂದುವಿನೊಡವೆರಸೆ
ಹ್ರೂಂ ಎಂದಾಯಿತ್ತು.
ವಾಯುಬೀಜವಾದ ಯಕಾರದೊಡನೆ ಕೂಡಿದ
ಭೂತಾಂತ ಸಂಜ್ಞಿತವಾದ ಹಕಾರಮಂ
ಸ್ವರೈಕಾದಶಾಂತವಾದೈಕಾರದೊಡನೆ ಕೂಡಿಸಿ
ಪರಾಪರ ಸಂಜ್ಞಿತವಾದ ಸೊನ್ನೆಯಾಳ್ವೆರಸೆ ಹ್ಯೈಂ ಎಂದಾಯಿತ್ತು.
ತತ್ವಾಂತ ಸಂಜ್ಞಿತವಾದ ಹಕಾರಮಂ ತತ್ವಾಂತವಾದ ದ್ವಯಕ್ಕರಮಂ
ಕಲಾ ಸಂಜ್ಞಿತವಾದೌಕಾರದೊಡನೆ ಕೂಡಿಸಿ
ಕಾರ್ಯಕಾರಣಸಂಜ್ಞಿತವಾದ ಸೊನ್ನೆಯೆಂ ಕೂಡಿಸೆ
ಹ್ರೌಂ ಎಂದಾಯಿತ್ತು.
ಶಕ್ತಿ ಸಂಜ್ಞಿತವಾದ ಸಕಾರದ ಕಡೆಯ ಹ್ ಎಂಬ ಹಕಾರಂ
ಮತ್ತೆಯುಂ ಶಿವನ ಸಂಜ್ಞಿತವಾದ ಹ್ ಎಂಬ
ಹಕಾರಮಿವೆರಡರೊಳ್
ಮೊದಲ ಹ್‌ಕಾರಂ ಆದಿಬೀಜ ಸಂಜ್ಞಿತವಾದಕಾರದೊಡನೆ
ಕೂಡಿ ಎಂದಾಯಿತ್ತಿ-
ವೆರಡರ ಮಧ್ಯದೊಳ್ಬಿಂದು ಬರೆ ಹಂಹ್ ಎಂದಾಯಿತ್ತು.
ಇಮು ಭೇದ್ಯಸಂಜ್ಞಿತವಾದಸ್ತ್ರಮಂತ್ರದೊಡನೆ ಕೂಡಿ
ಐದು ಭೂತಗ್ರಂಥಿಯೊಡನೆ ಕೂಡಿಪ
ಭೂತಾಂಗಬೀಜಮಾತ್ರನಲ್ಲಿರುತ್ತಿಪುದೀ
ತೆರದಿಂ ಹ್ರಾಂ ಹ್ರೀಂ ಹ್ರೂಂ ಹ್ಯೈಂ ಹ್ರೌಂ ಹಂಹ್ ಎಂದಾರು
ಭೇದಮಾದ ಭೂತಾಂಗಮಂ ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೩೯ ॥

೧೩೬೦

ಬಳಿಕ್ಕಂ, ಭೂತಾಂಗ ನಿರೂಪಣಾನಂತರದಲ್ಲಿ
ಕೂಟಾಂಗಮಂ ಪೇಳ್ವೆನೆಂತೆನೆ-
ಕೂಟಾಕ್ಷರ ಸಂಜ್ಞಿತವಾದ ಕ್ಷ್ ಎಂಬಕ್ಕರಮಂ
ಸ್ವರ ದ್ವಿತೀಯಮಂ ಸ್ವರ ಚತುರ್ಥಮಂ
ಸ್ವರ ಷಷ್ಠಮಂ ಸ್ವರೈಕಾದಶಾಂತಮಂ
ಸ್ವರ ತ್ರಯೋದಶಾಂತಮಂ ಸ್ವರ ಪಂಚದಶಾಂತಮಂ
ತರದಿಂ ಕೂಡಿಸಿ ಬಿಂದು ನಾದ ಸಂಜ್ಞಿತವಾದ
ಸೊನ್ನೆಯೊಡನೆ ಬೆರಸೆ,
ಕ್ಷಾಂ ಕ್ಷೀಂ ಕ್ಷೂಂ ಕ್ಷೈಂ ಕ್ಷೌಂ ಕ್ಷಃ ಎಂದು
ಷಡ್ವರ್ಣಯುಕ್ತವಾದ ಕೂಟಾಂಗವಾಯಿತ್ತೆಂದು ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೪೦ ॥

೧೩೬೧

ಕೂಟಾಂಗ ನಿರೂಪಣಾನಂತರದಲ್ಲಿ ವಿದ್ಯಾಂಗಮಂ ಪೇಳ್ವೆನೆಂತೆನೆ-
ಅಘೋರಾಸ್ತ್ರಪರ್ಯಂತವಾದ ಶೋಕಾಂತರ್ಗತ ವರ್ಣಂಗಳ್ಸ-
ವಿಸ್ತರಂಗಳಾರ್ಪವವಂ
ಮಂತ್ರಾಗಮಂಗಳಲ್ಲಿಯಘೋರಾಸ್ತ್ರಮಂತ್ರಾಂತವಾಗಿ
ನೋಡಿಕೊಂಬುದೆಂದು ನಿರವಿಸಿದೆಯಯ್ಯಾ,
ಪರಮ ಶಿವಲಿಂಗ ಶರಣಾಂತರಂಗಶಯ್ಯ. ॥ ೧೪೧ ॥

೧೩೬೨

ಈ ವಿದ್ಯಾಂಗ ನಿರೂಪಣಾನಂತರದಲ್ಲಿ
ಶಕ್ತ್ಯಂಗಮಂ ಪೇಳ್ವೆನೆಂತೆನೆ-
ಆಧಾರ ಸಂಜ್ಞಿತವಾದ ಸಕಾರಂ
ಶಕ್ತಿ ಬೀಜವಾದಕಾರವೇ ಸ್ತ್ರೀತ್ವವಿಷಯವಾಗಿಯಾಕಾರಮಾಗ
ಲದರೊಡನೆ
ನಾದ ಬಿಂದು ಸಂಜ್ಞಿತವಾದ ಸೊನ್ನೆ ಬಂದು ಕೂಡಲದು
ಸಾಂ ಎಂಬ ಪ್ರಥಮ ಶಕ್ತಿಬೀಜವೆಂದು ನಿರವಿಸಿದೆಯಯ್ಯಾ,
ಪರಮ ಶಿವಲಿಂಗ ಕಾರುಣ್ಯಸಾಗರಾಪಾಂಗ. ॥ ೧೪೨ ॥

೧೩೬೩

ಮತ್ತಮಾ ಶಕ್ತಿಬೀಜವಾದ ಸಕಾರವೆ ಚತುರ್ಥಸ್ವರದೊಡನೆ ಕೂಡಿ
ನಾದ ಬಿಂದು ಸಂಜ್ಞಿತವಾದ ಸೊನ್ನೆಯೊಡಗಲಸೆ
ಸೀಂ ಎಂಬ ವರ್ಣವಾದುದೀ ವರ್ಣವೆ
ಎರಡನೆಯ ಶಕ್ತಿಬೀಜವೆಂದು ನಿರವಿಸಿದೆಯಯ್ಯಾ,
ಪರಮ ಶಿವಲಿಂಗ ಪವಿತ್ರಾಂತರಂಗ. ॥ ೧೪೩ ॥

೧೩೬೪

ಮರಲ್ದುಂ, ಪೂರ್ವೋಕ್ತ ಸಕಾರಮಂ ಷಷ್ಠಸ್ವರದೊಡನೆ ಕೂಡೆ
ಪಿಂದೆ ಪೇಳ್ದ ಸೊನ್ನೆಯೊಳ್ಕೂಡೆ
ಸೂಂ [ಎಂ]ಬ ಮೂರನೆಯ ಶಕ್ತಿಬೀಜವಾದುದೆಂದು
ನಿರವಿಸಿದೆಯಯ್ಯಾ,
ಪರಮ ಶಿವಲಿಂಗಯ್ಯ. ॥ ೧೪೪ ॥

೧೩೬೫

ಮೊದಲಾಧಾರ ಶಕ್ತಿಸಂಜ್ಞಿತ ಸಕಾರವೆ
ಸ್ವರ ದ್ವಾದಶದೊಡನೆ ಕೂಡಿ
ಕಾರಣ ಸಂಜ್ಞಿತ ಬಿಂದುವಿನೊಳ್ಬೆರೆಯೆ
ಸೈಂಯೆಂಬ ನಾಲ್ಕನೆಯ ಶಕ್ತಿಬೀಜವಾಯ್ತೆಂದರುಪಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೪೫ ॥

೧೩೬೬

ಬಳಿಕ್ಕಾಧಾರಶಕ್ತಿ ಸಂಜ್ಞಿತ ಸಕಾರವು ಚತುರ್ದಶ ಸ್ವರದಿಂ ಕೂಡಿ
ಕಾರ್ಯ ಕಾರಣಮಂ ಬೆರೆಯೆ
ಸೌಂಮೆಂಬೈದನೆಯ ಶಕ್ತಿಬೀಜವಾಯಿತ್ತೆಂದೆಯಯ್ಯಾ,
ಪರಶಿವಲಿಂಗಯ್ಯ. ॥ ೧೪೬ ॥

೧೩೬೭

ಪೂರ್ವೋಕ್ತ ಸಕಾರವುಂ ಸ್ವರಾಂತ ವಿಸರ್ಗದೊಡನೆ ಕೂಡಿಸೆ
ಸಃ ಎಂಬಾರನೆಯ ಶಕ್ತಿಬೀಜವಾದುದಿಂತು
ಸಾಂ ಸೀಂ ಸೂಂ ಸೈಂ ಸೌಂ ಸಃ ಎಂಬೀ ಶಕ್ತಿಬೀಜಂ

ವೇದವಲ್ಲಿ ಶಿವಾಂಗದಂತೆ ಸ್ರಾಂ ಸ್ರೀಂ ಸ್ರೂಂ ಸ್ರೈಂ ಸ್ರೌಂ ಸ್ರಃ
ಎಂದಾಮುದೆಂದು ನಿರವಿಸಿದೆಯಯ್ಯಾ,
ಪರಮ ಶಿವಲಿಂಗಯ್ಯ. ॥ ೧೪೭ ॥

೧೩೬೮

ಮತ್ತಂ, ಶಕ್ತ್ಯಂಗನಿರೂಪಣಾನಂತರದೊಳ್ಸಾಮಾನ್ಯಾಂಗಮಂ
ಪೇಳ್ವೆನೆಂತೆನೆ
ಅಶ್ವಿನಿವೆರಸವಿಸ್ವರಾಂತಂಗಳೆಂಬೀ
ವಿಕೃತಿಸ್ವರಂಗಳಾರುಂ ಸಾಮಾನ್ಯಾಂಗಂಗಳಿವು,
ಸರ್ವದೇವತಾಮಂತ್ರಂಗಳ್ಗೆಯುಂ ಸಮಾನಮೆಂದರುಪಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೪೮ ॥

೧೩೬೯

ಬಳಿಕ್ಕಮೀ ಸಾಮಾನ್ಯಾಂಗ ಮಂತ್ರದೇವತೆಗಳಂ
ಸೂಚನಮಂತ್ರದಿಂ ಸೂಚಿಸುವೆನೆಂತೆನೆ-
ವಿಧಿ ವಿಷ್ಣು ಪುರಂದರ ರವಿ ಶಶಿ ಗುಹ ಭೈರವ
ವಿಘ್ನೇಶಾಷ್ಟಮೂರ್ತಿ ವಸು ವಿದ್ಯೇಶ ಗಣೇಶ
ಲೋಕಪಾಲ ವಜ್ರಾದ್ಯಾಯುಧ ಸಿದ್ಧರ ಗಂಧರ್ವಾಪ್ಸರೋ
ಯಕ್ಷ ಕಿನ್ನರ ಭೂತ ಮುನಿ ಖೇಚರರೆಂಬಿವ-
ರಿನ್ನುಳಿದ ಸಕಲ ದೇವತೆಗಳಾದ ನಾಮಂಗಳಂ
ವರ್ಣಪಟದಲ್ಲಿ ಪೇಳ್ದೇಕೈಕಬೀಜಾಕ್ಷರಂಗಳ ಮೇಲೆ
ಪಿಂದೆ ಪೇಳ್ದ ಷಟ್‌ಸ್ವರಂಗಳಂ ಪತ್ತಿಸಿ
ಕಾರ್ಯ ಕಾರಣದೊಡವೆರಸಿ
ಮೊದಲಂತೆ ಕಾಂ ಕೀಂ ಕೂಂ ಕೈಂ ಕೌಂ ಕಃ ಎಂದಾಯಿತ್ತಿದು
ವಿಧಿವೆಸರಿದರಂತೆಲ್ಲಮಂ ನೋಡಿಕೊಂಬುದಿದು
ಸಾಮಾನ್ಯಾಂಗವೆಂದು ನಿರವಿಸಿದೆಯಯ್ಯಾ,
ಪರಮ ಶಿವಲಿಂಗಯ್ಯ. ॥ ೧೪೯ ॥

೧೩೭೦

ಮತ್ತಮಾ, ಮೂವತ್ತಾರಂಗಗಳೆಂತೆನೆ-
ಹೃದಯಾಂಗಂ ಶುಕ್ಲವರ್ಣಂ.

ಶಿರದೊಳಗಂ ಪೀತವರ್ಣಂ.
ಶಿಖಾಂಗಂ ರಕ್ತವರ್ಣಂ.
ಕವಚಾಂಗಂ ಸ್ಫಟಿಕವರ್ಣಂ.
ನೇತ್ರಾಂಗಂ ಶ್ಯಾಮವರ್ಣಂ.
ಅಸ್ತ್ರಾಂಗಂ ಕೃಷ್ಣವರ್ಣಂ
ಇಂತು ಶಿವಾಂಗದ ವರ್ಣಮಂ ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೫೦ ॥

೧೩೭೧

ಮತ್ತಂ, ಪೃಥ್ವೀ ಪೀತವರ್ಣ.
ಉದಕಂ ಶ್ವೇತವರ್ಣ.
ಅಗ್ನಿಯರುಣವರ್ಣ.
ವಾಯು ಕೃಷ್ಣವರ್ಣ.
ಆಕಾಶ ಧೂಮವರ್ಣ.
ಉಳಿದುದೆ ಪಾವಕವರ್ಣ ಮಿಂತೀ
ಷಡ್ವರ್ಣವೆ ಭೂತಾಂಗವರ್ಣವೆಂದು ನಿರೂಪಿಸಿದೆಯ್ಯಾ,
ಪರಶಿವಲಿಂಗಯ್ಯ. ॥ ೧೫೧ ॥

೧೩೭೨

ಶ್ವೇತಂ ರಕ್ತಂ, ನೀಲಂ ಕುಂಕುಮಂ.
ಪೀತಂ ಅಂಜನಮಿಂತಿವು ತರದಿಂ
ಕೂಟಾಂಗವರ್ಣವೆಂದು ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೫೨ ॥

೧೩೭೩

ಬಳಿಕ್ಕಂ, ಜಪಾಕುಸುಮ ಕುಂದಪಾವಕ ಸುರೇಂದ್ರ
ನೀಲ ಸಿಂಧೂರ ಹರಿತಾಳಗಳೆಂಬೀ
ಷಡ್ವರ್ಣಗಳ್ದಿವ್ಯಾಂಗವರ್ಣವೆಂದರುಪಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೫೩ ॥

೧೩೭೪

ಮತ್ತಂ,
ತರದಿಂ ವ್ಯೋಮವರ್ಣಂ ಪೀತವರ್ಣಂ

ಶ್ಯಾಮವರ್ಣಂ ರಕ್ತವರ್ಣಂ ಕೃಷ್ಣವರ್ಣಂ ಮರಕತವರ್ಣಮೆಂಬೀ
ಷಡ್ವಿಧವರ್ಣವೆ ಶಕ್ತ್ಯಂಗವರ್ಣವೆಂದು ತಿಳಿಪಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೫೪ ॥

೧೩೭೫

ಮತ್ತಂ, ಪರಿವಿಡಿಯಿಂ ಸ್ಫಟಿಕವರ್ಣಂ ರಕ್ತವರ್ಣಂ ಪೀತವರ್ಣಂ
ಶ್ಯಾಮವರ್ಣಂ ಕಾಂಚನವರ್ಣಮರುಣವರ್ಣಂ
ಮಿಂತೀ ವರ್ಣವೆಲ್ಲಂ ಸಾಮಾನ್ಯಾಂಗ ವರ್ಣವೆಂದು
ನಿರವಿಸಿದೆಯಯ್ಯಾ, ಪರಶಿವಲಿಂಗಯ್ಯ. ॥ ೧೫೫ ॥

೧೩೭೬

ಬಳಿಕ್ಕಂ, ಚತುರ್ಭುಜ, ತ್ರಿನೇತ್ರ, ಜಟಾಮಕುಟ,
ಸರ್ವಲಕ್ಷಣಸಂಯುಕ್ತ, ಸರ್ವಾಭರಣಭೂಷಿತ,
ತ್ರಿಶೂಲಾಭಯ ಕಪಾಲ ವರದಾನ್ವಿತ, ದಕ್ಷಿಣ ಮಕರವಾ ಚತುಷ್ಟಯ,
ಹಾರ ಕೇಯೂರ ಕಟಕ ಕುಂಡಲಾದಿಗಳಿಂವಲಂಕೃತವಾದ
ಸರ್ವಾವಯವಂಗಳನುಳ್ಳುದೆ ಸೌಮ್ಯರೂಪ-
ಮುಳಿದುದೆಲ್ಲಂ ರುದ್ರರೂಪಮೆಂದು ನಿರವಿಸಿಯಾ
ಶಿವಾಂಗಂಗಳಿಂದವೆ ಶಿವಾರ್ಚನೆಯನೆಸಗುವದೆಂದೆಯಯ್ಯಾ,
ಪರಶಿವಲಿಂಗಯ್ಯ. ॥ ೧೫೬ ॥

೧೩೭೭

ಮರಲ್ದುಂ, ಪಾದಾದಿ ಮಸ್ತಕ ಪರ್ಯಂತಂ ಪಂಚಭೂತಶುದ್ಧಿಯಂ
ಮಾಳ್ಪುದೆಂತೆನೆ
ಭೂತಾಂಗಂಗಳಲ್ಲಿಯೂ ಭೂತಶುದ್ಧಿಯಂ ಮಾಳ್ಪ
ಮಂತ್ರಂಗಳಂ ಪಂಚಭೂತ ನಾಮಂಗಳಂ ಕೂಡಿಸಿ
ಮಂತ್ರೋಚ್ಚರಣೆಯಂ ಮಾಳ್ಪುದೆಂದು ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೫೭ ॥

೧೩೭೮

ಮತ್ತೆಯುಂ, ಕೂಟಾಂಗ ವಿದ್ಯಾಂಗ[ಗ]ಳಿಂದೆ ಶೈವಾಚಾರ್ಯಂ
ತನ್ನ ಶೈವವ್ರತಕ್ಕೆಯುಂ ಶಿಷ್ಯವ್ರತಕ್ಕೆಯುಂ ಹಾನಿಯಾಗಲೊಡಂ

ಪ್ರಾಯಶ್ಚಿತ್ತಂಗಳನೆಸಗುವದೆಂದು ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೫೮ ॥

೧೩೭೯

ಮತ್ತಮುಮಾದಿಶಕ್ತಿ ಸ್ಥಾಪನಾಕಾಲದಲ್ಲಿ ಶಕ್ತ್ಯಂಗಗಳಿಂದವೆ
ಸಕಲ ಕ್ರಿಯೆಗಳನಾಚರಿಪುದು-
ಶಿವ ದೇವತಾಪ್ರತಿಷ್ಠಾದಿಗಳಂ ಸಾಮಾನ್ಯಂಗಗಳಿಂದವೆ ಮಾಳ್ಪುದೀ
ಷಡಂಗಗಳಲ್ಲಿ ಹೃದಯಾಂಗವೆ ವಿಶೇಷವೆಂದು
ನಿರವಿಸಿದೆಯಯ್ಯಾ, ಪರಶಿವಲಿಂಗಯ್ಯ. ॥ ೧೫೯ ॥

೧೩೮೦

ಬಳಿಕ್ಕಂ
ಕೇವಲಂ ಜ್ಞಾನಜಂ ಯೋಗಜಂ ಭೂತಜಂ ಕಾಮದವೆಂದು
ಹೃದಯಾಂಗಮೊಂದೆಯ್ದು ತೆರನಿವಕ್ಕೆ ವಿವರಂ-
ಶಿವಾಂಗವಾದ ಹೃದಯವೆ ಕೇವಲಹೃದಯವೆನಿಕುಂ.
ಸಾಂತಂ ಯಾಂತದೊಡನೆ ಕೂಡಿ ಆದಿವರ್ಗಾಂತ
ಸಂಜ್ಞಿತವಾದೌಕಾರದೊಡನೊಂದಿ
ಕಾರ್ಯಕಾರಣದೊಳ್ಬೆರೆಯೆ ಹ್ರಾಂ ಯೆಂದಾಯಿತ್ತಿದೆ
ಜ್ಞಾನಜಹೃದಯವೆನಿಕುಂ.
ಮತ್ತಂ, ಸಾಂತಮಂಮಾಂತದೊಡಗಲಸಿ ಬಿಂದುವಂ ಬೆರಸೆ
ಹ್ಯಂ ಎಂದಾಯಿತ್ತು.
ಪುನಸ್ತತ್ವಾಂತಮಂ ಅಕಾರದೊಳ್ಕೂಡಿ ಶಿವಶಕ್ತಿ ಸಂಜ್ಞಿತ
ಬಿಂದುವಿನೊಳ್ಮಿಶ್ರಿಸೆ ಹಂ ಎಂದಾಯಿತ್ತೀ
ಯುಭಯಂಗೂಡಿ ಯೋಗಜಹೃದಯವೆಂದು ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೬೦ ॥

೧೩೮೧

ಮತ್ತಂ, ಭೂತಜಹೃದಯಮಂ ಗ್ರಂಥವಿರ್ದಲ್ಲಿ ನೋಡಿಕೊಂಬುದು.
ಬಳಿಕ್ಕಂ, ತತ್ವಾಂತಮಂಮಾಂತದೊಡನೆ ಕೂಡಿ
ಸ್ವರ ದಶಮಾಂತ ಸಂಜ್ಞಿತವಾದೈಕಾರದೊಡನೆ ಬೆರಸಿ
ಬಿಂದು ನಾದ ಸಂಜ್ಞಿತವಾದ ಸೊನ್ನೆಯನೊಂದಿಸೆ ಹ್ಯೆಂ ಎಂದು

ಕಾಮದಹೃದಯಮೆನಿಕುಮೆಂದು ನಿರೂಪಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೬೧ ॥

೧೩೮೨

ಮತ್ತೆಯುಮೀಯ್ಯೆದು ಹೃದಯಮಂತ್ರಕ್ಕೆಯುಂ ತರದಿಂ
ನಮೋಂತವಾಗುಚ್ಚರಿಸಲ್
'ಓಂ ಹ್ರಾಂ ಕೇವಲ ಹೃದಯಾಯ ನಮಃ'
ಎಂದೀತೆರದೈದಕ್ಕೆಯುಚ್ಚರಿಪುದೆಂದು ಬೋಧಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೬೨ ॥

೧೩೮೩

ಬಳಿಕ್ಕಂ
ಶುಕ್ಲವರ್ಣವಾದೊಂದನೆಯ ಕೇವಲಹೃದಯವೆ ಈಶಾನನೆನಿಕುಂ.
ತಪ್ತ ಕಾಂಚನವರ್ಣವಾದೆರಡನೆಯ
ಜ್ಞಾನಹೃದಯವೆ ಈಶ್ವರನೆನಿಕುಂ.
ಪೀತವರ್ಣವಾದ ಮೂರನೆಯ
ಯೋಗಜಹೃದಯವೆ ಬ್ರಹ್ಮವೆನಿಕುಂ.
ರತ್ನವರ್ಣವಾದ ನಾಲ್ಕನೆಯ
ಭೂತಜಹೃದಯವೆ ಮತ್ತೆಯುಮೀಶ್ವರನೆನಿಕುಂ.
ಶುದ್ಧ ಸ್ಫಟಿಕವರ್ಣವಾದ ಕಾಮದಹೃದಯವೆ
ಸಾದಾಖ್ಯತತ್ವವೆನಿಕುಮೆಂದು, ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೬೩ ॥

೧೩೮೪

ಮರಲ್ದುಂ, ಕೇವಲಹೃದಯದಿಂ ಯಜನಂ
ಜ್ಞಾನಜಹೃದಯದಿಂ ಸ್ಥಾಪನಂ
ಯೋಗಜಹೃದಯದಿಂ ಪ್ರೋಕ್ಷಣಂ
ಭೂತಜಹೃದಯದಿಂ ದೀಕ್ಷೆ
ಕಾಮದಹೃದಯದಿಂ ಸರ್ವಕರ್ಮ ವಿಶೇಷವು
ಮಾಡಲ್ಪಡುಗುಮೆಂದು ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೬೪ ॥

೧೩೮೫

ಬಳಿಕ್ಕಂ, ಶಿವಾಸ್ತ್ರಮಂತ್ರಂ, ಕ್ಷುರಿಕಾಸ್ತ್ರಮಂತ್ರಂ
ಪಾಶುಪತಾಸ್ತ್ರಮಂತ್ರಂ, ವ್ಯೋಮಾಸ್ತ್ರಮಂತ್ರಂ
ಅಘೋರಾಸ್ತ್ರಮಂತ್ರಂ
ಇಂತಿವು ಪಂಚಾಸ್ತ್ರಮಂತ್ರಂಗಳಿವಕ್ಕೆ ವಿವರಂ-
ಒಂದನೆಯ ಶಿವಾಸ್ತ್ರಮಂತ್ರವೆ ಷಡಕ್ಷರಮೆನಿಕುಂ.
ಎರಡನೆಯ ಕ್ಷುರಿಕಾಸ್ತ್ರಮಂತ್ರವೆ ಅಷ್ಟಾಕ್ಷರಮೆನಿಕುಂ.
ಮೂರನೆಯ ಪಾಶುಪತಾಸ್ತ್ರ ಮಂತ್ರವೆ ಪಂಚಾಕ್ಷರಮೆನಿಕುಂ.
ನಾಲ್ಕನೆಯ ವ್ಯೋಮಾಸ್ತ್ರವೆ ದಶಾಕ್ಷರಮೆನಿಕುಂ.
ಐದನೆಯಘೋರಾಸ್ತ್ರವೆ ಚತ್ವಾರಿಂಶದ್ಗಣನೆಯೆನಿಕುಮೆಂದು
ನಿರವಿಸಿದೆಯಯ್ಯಾ, ಪರಶಿವಲಿಂಗಯ್ಯ. ॥ ೧೬೫ ॥

೧೩೮೬

ಮತ್ತಂ, ಪೂಜಕನಾದ ಸುಶೈವಂ
ಸಮಸ್ತ ತತ್ವಮಂತ್ರಜನಸ್ಥಲವಾದ ಮಹಾಲಿಂಗಮಂ
ಪೀಠದೊಳಿಟ್ಟು ಪೂಜಿಪನವನೀ ಪಂಚಾಸ್ತ್ರಮಂತ್ರದಿಂ
ತಾನೆಸಗುವ ಸಕಲ ಬಾಹ್ಯ ಕ್ರಿಯಾಕಲಾಪಮಂ
ಮಾಡಲುಚಿತವೆಂದಿಂತು
ಶಿವಾಂಗಾದಿ ಷಡಂಗಂಗಳಂ ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೬೬ ॥

೧೩೮೭

ಮತ್ತೆಯುಮಂಗಭೇದ ನಿರೂಪಣಾನಂತರದೊಳ್ಮಂತ್ರಜಾತಮಂ
ಪೇಳ್ವೆನೆಂತೆನೆ-
ಸಾಗರ ತರಂಗ ನ್ಯಾಯದಿಂ ಜಗದಾಧಾರವಾದ ಪರತತ್ವದಲ್ಲಿ
ಪರಾರ್ಧಕೋಟಿ ಮಂತ್ರಂಗಳೊಗೆಯಲಾ ಶಿವಲಿಂಗೋದ್ಧರಣೆಯಂ
ಜಗದ್ಧಿತಾರ್ಥಂ ಸಕಲ ಮಂತ್ರ ಸಿದ್ಧ್ಯರ್ಥಂ ಭೋಗಮೋಕ್ಷಾರ್ಥಂ
ನಿರೂಪಿಸಲುದ್ಯುಕ್ತನಾದೆಯಯ್ಯಾ,
ಪರಮ ಶಿವಲಿಂಗಯ್ಯ ಪಟೀರ ಧವಳಕಾಯ. ॥ ೧೬೭ ॥

೧೩೮೮

ಮರಲ್ದುಂ
ಗುಳಿ ತೆವರಿಲ್ಲದ ಗೋಮಯಾನುಲೇಪಿತ ಶುದ್ಧಭೂಮಿಯಲ್ಲಿ
ರಾಜಾನ್ನದ ಹಿಟ್ಟಿನಿಂದಳ್ದಿದ ದಾರದಿಂ
ಪೂರ್ವ ಪಶ್ಚಿಮಮಕ್ಕೆಯುಂ ದಕ್ಷಿಣೋತ್ತರಕ್ಕೆಯುಂ
ತರದಿಂ ಪದಿನೇಳು ಪದಿನೇಳು ಗೆರೆಗಳಪ್ಪಂತೆ ಮಿಡಿಯ
ಪದಿನಾರುಪಂತಿಗಳಹವಾವಕಡೆಗೆಯುಮಿವಂ ಗಣಿಸೆ
ಇನ್ನೂರೈವತ್ತಾರು ಮನೆಗಳಹವೆಂದು ನಿರೂಪಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೬೮ ॥

೧೩೮೯

ಮತ್ತಂ, ಪಡುವ ತೊಡಗಿ ಮೂಡಲತನಕಲಿ
ಲಿಂಗಕ್ಕೋಸುಗರಂ, ಬೀದಿಗಳಂ ಬಿಡುವುದಾ ಮೇಲೆ
ಮಧ್ಯದಲೆರಡೆರಡು ಬೀದಿಗಳ ನಾಲ್ಕು ನಾಲ್ಕು ಮನೆಗಳನುಳುಹಿ-
ಯಾ ಮೇಲೆ ಇಕ್ಕೆಲಗಳಲ್ಲಾರಾರು ಮನೆಗಳಂ ತೊಡೆವುದದರಿಂ
ಮೇಲಣ ಪಂತಿಯಂ ಬಿಟ್ಟುವದರಿಂ ಮುಂದಣಪಂತಿಯಾಚೀಚೆ
ಎರಡೆರಡು ಮನೆಗಳಂ ತೊಡೆದು
ನಡುವಣ ಪನ್ನೆರಡು ಮನೆಗಳನುಳುಹುವದದರೀಚೆ
ಪಂತಿಯಾಚೀಚೆಯ ಮೂರುಮೂರು ಮನೆಗಳಂ ತೊಡೆದು
ನಡುವಣ ಪತ್ತುಮನೆಗಳನುಳುವದದರೀಚೆ
ಪಂತಿಯಾಚೀಚೆಯ್ಯೈದೈದು ಮನೆಗಳಂ ತೊಡೆದು
ನಡುವಣಾರಾರು ಮನೆಗಳನುಳುಹುವದದರೀಚೆ
ಪಂತಿಯಾಚೀಚೆಯಾರಾರು ಮನೆಗಳಂ ತೊಡೆದು
ನಡುವಣ ನಾಲ್ಕು ಮನೆಗಳನುಳುಹವದದರೀಚೆ
ಪಂತಿಯಾಚೀಚೆಯಾರಾರು ಮನೆಗಳಂ ತೊಡೆದು
ಮತ್ತೆಯುಂ, ನಡುವಣ ನಾಲ್ಕುಮನೆಗಳನುಳುಹುವದದರೀಚೆ
ಪಂತಿಯಾಚೀಚೆಯ ಐದೈದು ಮನೆಗಳಂ ತೊಡೆದು
ನಡುವಣಾರು ಮನೆಗಳನುಳುಹುವದದರೀಚೆ ಪಂತಿಯಾಚೀಚೆ
ಮೂರು ಮೂರು ಮನೆಗಳಂ ತೊಡೆದು
ಪತ್ತು ಪಂತಿಯನುಳುಹುವದದರೀಚೆ ಪಂತಿಯಾಚೀಚೆಯಾರಾರು

ಮನೆಗಳಂ ತೊಡೆದು
ನಾಲ್ಕು ಪಂತಿಗಳನುಳುಹುವದಿದುಂ ಲಿಂಗಾಕಾರವಹುದೀ
ಈ ಮಹಾಲಿಂಗಂ ಬ್ರಹ್ಮ ವಿಷ್ಣು ಕಾಲರುದ್ರ ಸಂಜ್ಞೆಯನುಳ್ಳ
ರಾಜಸಿ ಸಾತ್ವಿಕಿ ರೌದ್ರಿ ಶಕ್ತಿ ಸಂಜ್ಞೆ ಪೀಠವನುಳ್ಳ
ಲಿಂಗವೆ ಬ್ರಹ್ಮವೆಂದು, ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೬೯ ॥

೧೩೯೦

ಮತ್ತಂ
ಅಧಃಪಟ್ಟಿಕೆಯೆಂದುಂ ಅಧಃಕಂಜವೆಂದುಂ ಕಂಠವೆಂದುಂ
ಊರ್ಧ್ವಾಬ್ಜವೆಂದುಂ ಊರ್ಧ್ವಪಟ್ಟಿಕೆಯೆಂದುಂ
ಆ[ಜ್ಯ]ಪ್ರಧಾರಿಕೆಯೆಂದೀ
ಆರಂ ಶಿವಲಿಂಗದ ಪೀಠದ ನಾಲ್ಕು ಕೋಷ್ಟಂಗಳಾದಿಯಾಗಿ
ಲಿಂಗತನಕಂ ತಿಳುವುದಂತೆಯೆ
ಗಣಚತುಃಕೋಷ್ಠವಾದಿಯಾಗಿ ಅಧೋಲಿಂಗತನಕಲಿ
ಷಡಂಗ [ಷ]ಟ್ಸ್ಥಾನಂಗಳಂತರದಿಂದರಿಯಬೇಕೆಂದು
ನಿರವಿಸಿದೆಯಯ್ಯಾ, ಪರಶಿವಲಿಂಗಯ್ಯ. ॥ ೧೭೦ ॥

೧೩೯೧

ಬಳಿಕ್ಕಂ, ಷಡಂಗಮಂತ್ರನ್ಯಾಸಮಂ ಪೇಳ್ವೆನೆಂತೆನೆ-
ಅಧಃಪಟ್ಟಿಕೆಯಲ್ಲಿ ಹ್ರಾಂ ಎಂಬ ಹೃದಯಮಂತ್ರಮಂ,
ಅಧಃಕಂಜದಲ್ಲಿ ಹ್ರೀಂ ಎಂಬ ಶಿರೋಮಂತ್ರಮಂ,
ಕಂಠವಲ್ಲಿ ಹ್ರೂಂ ಎಂಬ ಶಿಖಾಮಂತ್ರಮಂ,
ಊರ್ಧ್ವಕಂಜದಲ್ಲಿ ಹ್ರೈಂ ಎಂಬ ಕವಚಮಂತ್ರಮಂ,
ಊರ್ಧ್ವಪಟ್ಟಿಕೆಯಲ್ಲಿ ಹ್ರೌಂ ಎಂಬ ನೇತ್ರಮಂತ್ರಮಂ,
ಆಜ್ಯಪ್ರಧಾರಿಕೆಯಲ್ಲಿ ಹ್ರಃ ಎಂಬ ಅಸ್ತ್ರಮಂತ್ರಮಂ,
ಲಿಂಗದಲ್ಲಿ ನ್ಯಾಸಂಗೆಯ್ವುದೆಂದು ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೭೧ ॥

೧೩೯೨

ಮತ್ತಮಾ, ಮಹಾಲಿಂಗದ ಶಿವಷಟ್ಸ್ಥಾನದಲ್ಲಿ-
ಯಾಧಾರಾದಿ ಸ್ಥಾನಂಗಳಲ್ಲಿ ಷಡ್ವಿಧ ಚಕ್ರಂಗಳಂ ಪೇಳ್ವೆನೆಂತೆನೆ-

ಆ ಶಿವಲಿಂಗದಧಃಪಟ್ಟಿಕೆಯೆ ಆಧಾರಚಕ್ರಮದರ
ಚತುಃಕೋಷ್ಠಂಗಳೆ ಚತುರ್ದಳಂಗಳವರಲ್ಲಿ
ವ ಶ ಷ ಸ ಎಂಬ ನಾಲ್ಕಕ್ಕರಂ ನ್ಯಸ್ತವಾಗಿರ್ಪುದೆಂದು
ನಿರವಿಸಿದೆಯಯ್ಯಾ, ಪರಶಿವಲಿಂಗಯ್ಯ. ॥ ೧೭೨ ॥

೧೭೩

ಬಳಿಕ್ಕಮಾ, ಲಿಂಗದಧಃಕಂಜಮೆ ಸ್ವಾಧಿಷ್ಠಾನ ಚಕ್ರಮೆನಿಸುಗು-
ಮದರ ಷಟ್ಕೋಷ್ಠಂಗಳೆ ಷಡ್ದಳಂಗಳವರಲ್ಲಿ,
ಬ ಭ ಮ ಯ ರ ಲ ಎಂಬಾರಕ್ಕರಂಗಳ್ನ್ಯಸ್ತಮಾಗಿರ್ಕುಮೆಂದು
ನಿರವಿಸಿದೆಯಯ್ಯ, ಪರಶಿವಲಿಂಗಯ್ಯ. ॥ ೧೭೩ ॥

೧೭೪

ಮರಲ್ದುಮಾ, ಲಿಂಗದ ಕಂಠ, ಸಂಜ್ಞಿತವಾದ ವೃತ್ತಸ್ಥಾನಮೆ
ಮಣಿಪೂರಕಚಕ್ರಮೆನಿಸುಗುಮಲ್ಲಿಯ
ದಶಕೋಷ್ಠಂಗಳೆ ದಶದಳಂಗಳವರಲ್ಲಿ
ಡ ಢ ಣ ತ ಥ ದ ಧ ನ ಪ ಫ ಎಂಬ
ಪತ್ತಕ್ಕರಗಳ್ನ್ಯಸ್ತಮಾಗಿರ್ಕುಮೆಂದು ನಿರವಿಸಿದೆಯಯ್ಯ,
ಪರಶಿವಲಿಂಗಯ್ಯಾ. ॥ ೧೭೪ ॥

೧೭೫

ಬಳಿಕ್ಕಮೂರ್ಧ್ವಾಬ್ಜವೆಂಬ ಪೆಸರ ಹೃದಯಸ್ಥಾನದೆ
ಅನಾಹತಚಕ್ರಮೆನಿಸುಗು ಮಲ್ಲಿಯ
ದ್ವಾದಶ ಕೋಷ್ಠಂಗಳೆ ದ್ವಾದಶದಳಂಗಳವರಲ್ಲಿ
ಕ ಖ ಗ ಘ ಙ ಚ ಛ ಜ ಝ ಞ ಟ ಠ ಎಂಬ
ಪನ್ನೆರಡಕ್ಕರಂಗಳ್ನೆಲಸಿರ್ಕುಮೆಂದು ನಿರವಿಸಿದೆಯಯ್ಯಾ,
ಪರಮ ಶಿವಲಿಂಗಯ್ಯ. ॥ ೧೭೫ ॥

೧೭೬

ಮತ್ತೆಯುಮೂರ್ಧ್ವಪಟ್ಟಿಕೆಯೆಂಬ ಕಂಠವೆ ವಿಶುದ್ಧಿಚಕ್ರಮೆನಿಸುಗು-
ಮಲ್ಲಿಯ ಷೋಡಶ ಕೋಷ್ಠಂಗಳೆ ಷೋಡಶ ದಳಂಗಳೆನಿಕ್ಕು.

ಮವರಲ್ಲಿ ಅ ಆ ಇ ಈ ಉ ಊ ಋ ೠ ಌ ೡ ಏ ಐ ಓ
ಔ ಅಂ ಅಃ ಎಂಬ
ಪದಿನಾರಕ್ಕರಂಗಳ್ನೆಲಸಿರ್ಕುಮೆಂದು ಬೋಧಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೭೬ ॥

೧೩೯೭

ಬಳಿಕ್ಕಮಾಜ್ಯಪ್ರಧಾರಿಕೆಯ ಆಜ್ಞಾಚಕ್ರಮೆನಿಕು
ಮಲ್ಲಿಯ ದ್ವಿಕೋಷ್ಠಂಗಳೆ ದ್ವಿದಳಂಗಳವರಲ್ಲಿ
ಳ ಕ್ಷ ಎಂಬೆರಡಕ್ಕರಂಗಳ್ನೆಲಸಿರ್ಕುಮೆಂದು
ನಿರವಿಸಿದೆಯಯ್ಯಾ, ಪರಶಿವಲಿಂಗಯ್ಯ. ॥ ೧೭೭ ॥

೧೩೯೮

ಬಳಿಕ್ಕಮೀಯೂರ್ಧ್ವದ ಶಿವ ಷಟ್ಚಕ್ರ ಕೋಷ್ಠದಳನ್ಯಸ್ತವಾದೇಕ
ಪಂಚಾಶದ್ವರ್ಣಂಗಳೆಲ್ಲವುಂ ರುದ್ರಬೀಜಂಗಳಿವರ
ವಾಚ್ಯ ವಾಚಕತ್ವದಲ್ಲಿರ್ಪ ರುದ್ರಮೂರ್ತಿಗಳಂ ಪೇಳ್ವೆನೆಂತೆನೆ-
ಯಾ ಮಹಾಲಿಂಗದೂರ್ಧ್ವಪಟ್ಟಿಕೆಯೊಳಿರ್ದ
ಷೋಡಶಸ್ವರಾಕ್ಷರ ವಾಚ್ಯರುದ್ರರಂ ತರದಿಂ
ನಿರವಿಸುತಿರ್ದೆಯಯ್ಯಾ, ಪರಶಿವಲಿಂಗಯ್ಯ. ॥ ೧೭೮ ॥

೧೩೯೯

ಮತ್ತಮೀ ಷೋಡಶ ಸ್ವರಮೂರ್ತಿ ವಿವರಮೆಂ[ತೆ]ನೆ-
ಅ ಶ್ರೀಕಂಠಂ, ಆ ಅನಂತಂ, [ಇ]ಸೂಕ್ಷ್ಮಂ, ಈ ತ್ರಿಮೂರ್ತಿ,
ಉ ಅಮರೇಶ್ವರಂ, ಊ ದೀರ್ಘೇಶಂ,
ಋ ಭಾರಭೂತಿ, ೠ ಅತಿದೀಶಂ
ಌ ಸ್ಥಾಣುಕಂ, ೡ ಹರಂ, ಏ ಝುಂಟೇಶ, ಐ ಜಾತುಕಂ,
ಓ ಸದ್ಯೋಜಾತಂ, ಔ ಅನುಗ್ರಹೇಶ್ವರಂ,
ಅಂ ಅಕ್ರೂರಂ, ಅಃ ಮಹಾಸೇನಂ.
ಇಂತೀ ಮಹಾಲಿಂಗಮೂರ್ಧ್ವಪಟ್ಟಿಕಾಖ್ಯ
ವಿಶುದ್ಧಿ ಚಕ್ರಕೋಷ್ಠದಳನ್ಯಸ್ತ
ಷೋಡಶಸ್ವರ ವಾಚ್ಯರಾದ ರುದ್ರರಿವರೆಂದು ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೭೯ ॥

೧೪೦೦

ಮತ್ತಮಾ ಮಹಾಲಿಂಗದಧಃಕಂಜಾಖ್ಯವಾದನಾಹತಚಕ್ರದ
ರುದ್ರಸ್ವರೂಪವೆಂತೆನೆ-
ಕ ಕ್ರೋಧೀಶಂ, ಖ ಚಂಡೇಶಂ,
ಗ ಪಂಚಾಂತಕಂ, ಘ ಶಿವೋತ್ತಮಂ,
ಙ ಏಕರುದ್ರಂ,
[ಚ(?)], ಛ ಏಕನೇತ್ರರುದ್ರಂ,
ಜ ಚತುರಾನನರುದ್ರಂ, ಝ ಅಜೇಶರುದ್ರಂ,
ಞ ಶರ್ವರುದ್ರಂ,
ಟ ಸೋಮೇಶರುದ್ರಂ, ಠ ಲಾಂಗುಲಿರುದ್ರಂ.
ಇಂತೀ ದ್ವಾದಶರುದ್ರರೀ ಮಹಾಲಿಂಗದನಾಹತಚಕ್ರದ
ದ್ವಾದಶಕೋಷ್ಠದಳನ್ಯಸ್ತಕಾದಿಠಾಂತ
ದ್ವಾದಶ ವಿಕಲಾಕ್ಷರ ವಾಚ್ಯರೆಂದು
ನಿರವಿಸಿದೆಯಯ್ಯಾ, ಪರಶಿವಲಿಂಗಯ್ಯ. ॥ ೧೮೦ ॥

೧೪೦೧

ಬಳಿಕ್ಕಮಾ ಮಹಾಲಿಂಗದ ಕಂಠಸಂಜ್ಞಿತವಾದ
ಮಣಿಪೂರಕಚಕ್ರ ರುದ್ರರೂಪಮೆಂತೆನೆ
[ಡ...... (?)], ಢ ಅರ್ಧನಾರೀಶ್ವರಂ,
ಣ ಉಮಾಕಾಂತಂ. ತ ಆಷಾಡಿ,
ಥ ದಂಡಿ, ದ ಅತ್ರಿ, ಧ ಮಾಸಂ, ನ ಮೇಷಂ,
ಪ ಲೋಹಿತಂ, ಫ ಶಿಖಿ,
ಇಂತೀ ದಶರುದ್ರರೀ ಮಹಾಲಿಂಗದ ಮಣಿಪೂರಕಚಕ್ರ
ದಶಕೋಷ್ಠಗದಳನ್ಯಸ್ತ ದಶಾಕ್ಷರ ವಾಚ್ಯರೆಂದು ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೮೧ ॥

೧೪೦೨

ಮರಲ್ದುಮಾ ಮಹಾಲಿಂಗದೂರ್ಧ್ವಾಬ್ಜ ಸಂಜ್ಞೆಯನುಳ್ಳ
ಸ್ವಾಧಿಷ್ಠಾನಚಕ್ರದ ರುದ್ರರೂಪಮೆಂತೆನೆ
ಬ ಸಕಲಂಡಂ, ಭ ದ್ವಿಲಂಡಂ,
ಮ ಮಹಾಕಾಲಂ, ಯ ಭುಜಂಗೇಶಂ,
ರ ಪಿನಾಕೀಶಂ, ಲ ಖಡ್ಗೀಶಂ.

ಇಂತೀ ಷಡ್ವಿಧ ರುದ್ರರೆ ಮಹಾಲಿಂಗದ ಸ್ವಾಧಿಷ್ಠಾನಚಕ್ರದ
ಷಟ್ಕೋಷ್ಠದಳನ್ಯಸ್ತ ಷಡಕ್ಷರ ವಾಚ್ಯರೆಂದು ನಿರವಿಸಿದೆಯಯ್ಯಾ.
ಪರಶಿವಲಿಂಗಯ್ಯ. ॥ ೧೮೨ ॥

೧೪೦೩

ಮತ್ತೆಯುಮೀ ಮಹಾಲಿಂಗದೂರ್ಧ್ವಪಟ್ಟಿಕಾಸಂಜ್ಞೆ-
ಯನುಳ್ಳಾಧಾರಚಕ್ರದ
ರುದ್ರಸ್ವರೂಪಮೆಂತೆನೆ-
ವ ಬಕಂ, ಶ ಶ್ವೇತಂ, ಷ ಭೃಗ್ವೀಶಂ,
ಸ ಲಕುಲಿ, ಳ ಶಿವಂ, ಕ್ಷ ಸಂವರ್ತಕಂ.
ಈ ಷಡ್ವಿಧರುದ್ರರೊಳಗೆ ಮೊದಲ ನಾಲ್ವರೆ
ಆಧಾರಚಕ್ರದ ಚತುಃಕೋಷ್ಠದಳನ್ಯಸ್ತ ರುದ್ರರು.
ಉಳಿದಿರ್ವರೆ ಪೂರ್ವೋಕ್ತ ಮಹಾಲಿಂಗದಾಜ್ಞಪ್ರಧಾರಿಕಾ
ದ್ವಿಕೋಷ್ಠದಳನ್ಯಸ್ತ ದ್ವಿರುದ್ರರೆಂದು ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೮೩ ॥

೧೪೦೪

ಇಂತು ಷೋಡಶರುದ್ರ ವಾಚ್ಯವಾದ ಹದಿನಾರು ಸ್ವರಾಕ್ಷರಂಗಳುಂ
ಮೂವತ್ತೈದು ರುದ್ರವಾಚ್ಯವಾದ ಮೂವತ್ತೈದು
ವ್ಯಂಜನಾಕ್ಷರಂಗಳುಂ
ಕೂಡಿ ಐವತ್ತೊಂದಕ್ಕರ ಗಣನೆಯಾದುದೆಂದು ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೮೪ ॥

೧೪೦೫

ಮತ್ತಂ ಶಿವಷಟ್ಚಕ್ರನಿರೂಪಣಾನಂತರದಲ್ಲಿ ಶಕ್ತಿ ಷಟ್ಚಕ್ರಗಳೆಂತನೆ-
ಪಿಂದಣೈವತ್ತೊಂದು ರುದ್ರವಾಚ್ಯಬೀಜಂಗಳೆ
ಶಕ್ತಿ ಬೀಜಂಗಳಿವಕ್ಕೆ ವಿವರಂ.
ಅ ಪೂರ್ಣೋದರಿ ಆ ವಿರಜೆ
ಇ ಶಾಲ್ಮಲಿ ಈ ಲೋಲಾಕ್ಷಿ
ಉ ವರ್ತುಲಾಕ್ಷಿ ಊ ದೀರ್ಘಘೋಣೆ

ಋ ದೀರ್ಘಮುಖಿ ೠ ಗೋಮುಖಿ
ಌ ದೀರ್ಘಜಿಹ್ವಾ ೡ ಕುಂಡೋದರಿ
ಏ ಊರ್ಧ್ವಕೇಶಿ ಐ ವಿಕೃತಮುಖಿ
ಓ ಜ್ವಾಲಾಮುಖಿ ಔ ಉಲ್ಕಮುಖಿ
ಅಂ ಶ್ರೀಮುಖಿ ಅಃ ವಿದ್ಯಾಮುಖಿ
ಇಂತೀ ಮಹಾಲಿಂಗದ ಶಕ್ತಿಯೂರ್ಧ್ವಪಟ್ಟಿಕಾಖ್ಯ ವಿಶುದ್ಧಿಚಕ್ರದ ಷೋಡಶ ಕೋಷ್ಠದಳನ್ಯಸ್ತ ಷೋಡಶ ರುದ್ರಶಕ್ತಿಯರಂ ನಿರವಿಸಿದೆಯಯ್ಯಾ, ಪರಶಿವಲಿಂಗಯ್ಯ. ॥ ೧೮೫ ॥

೧೮೦೬

ಮತ್ತೆಯುಂ
ಕ ಮಹಾಕಾಳಿ ಖ ಸರಸ್ವತಿ
ಗ ಗೌರಿ ಘ ಮಂತ್ರಶಕ್ತಿ
ಙ ಆತ್ಮಶಕ್ತಿ ಚ ಭೂತಮಾತೆ
ಛ ಲಂಬೋದರಿ ಜ ದ್ರಾವಿಣಿ
ಝ ನಗರಿ ಞ ಖೇಚರಿ
ಟ ಮಂಜರಿ ಠ ರೂಪಿಣಿ
ಇಂತೀ ಮಹಾಲಿಂಗದ ಶಕ್ತಿಯೂರ್ಧ್ವಾಬ್ಜಾಖ್ಯದನಾಹತಚಕ್ರದ ದ್ವಾದಶಕೋಷ್ಠದಳನ್ಯಸ್ತ ದ್ವಾದಶರುದ್ರಶಕ್ತಿಯರಂ ನಿರವಿಸಿದೆಯಯ್ಯಾ, ಪರಶಿವಲಿಂಗಯ್ಯ. ॥ ೧೮೬ ॥

೧೮೦೭

ಬಳಿಕ್ಕಂ
ಡ ವಿರಜೆ, ಢ ಕಾಲೋದರಿ
ಣ ಪೂತನೆ, ತ ಭದ್ರಕಾಳಿ
ಥ ಯೋಗಿನಿ ದ ಶಂಖಿನಿ
ಧ ಗರ್ಜಿನಿ ನ ಕಾಳರಾತ್ರಿ
ಪ ಕುರ್ದನಿ ಫ ಕಪರ್ದಿನಿ
ಇಂತೀ ಮಹಾಲಿಂಗದ ಶಕ್ತಿಯ ಕಂಠಸಂಜ್ಞಿತ ಮಣಿಪೂರಕಚಕ್ರದ ದಶಕೋಷ್ಠದಳನ್ಯಸ್ತ ದಶರುದ್ರಶಕ್ತಿಯರಂ ನಿರವಿಸಿದೆಯಯ್ಯಾ, ಪರಶಿವಲಿಂಗಯ್ಯ. ॥ ೧೮೭ ॥

೧೪೦೮

ಮರಲ್ದುಂ

| | |
|---|---|
| ಬ ವಾಙ್ಮಯೀ | ಭ ಜಯೆ |
| ಮ ಸುಮುಖಿ | ಯ ಈಶ್ವರಿ |
| ರ ರೇವತಿ | ಲ ಮಾಧವಿ |

ಇಂತೀ ಮಹಾಲಿಂಗದ ಶಕ್ತಿಯಧಃಕಂಜಸಂಜ್ಞಿತವಾದ
ಸ್ವಾಧಿಷ್ಠಾನಚಕ್ರದ ಷಟ್ಕೋಷ್ಠದಳನ್ಯಸ್ತ
ಷಡ್ರುದ್ರಶಕ್ತಿಯರಂ ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೮೮ ॥

೧೪೦೯

ಮತ್ತೆಯುಂ
ವ ವಾರುಣಿ, ಶ ವಾಯುವಿ
ಷ ರಕ್ಷೋವಧಾರಿಣಿ, ಸ ಸಹಜೆ
ಇಂತೀ ಮಹಾಲಿಂಗದಧಃಪಟ್ಟಿಕಾ ಸಂಜ್ಞಿತವಾದಾಧಾರಚಕ್ರದ
ಚತುಷ್ಕೋಷ್ಠದಳನ್ಯಸ್ತ ಚತೂರುದ್ರಶಕ್ತಿಯ-
ರಿನ್ನುಳಿದ ಹ ಲಕ್ಷ್ಮಿ ಳ ಸೃಷ್ಟಿನಿಯರೆಂಬೀಯಿರ್ವರ್ಶಕ್ತಿಗಳೆ
ಮಹಾಲಿಂಗದ ಶಕ್ತಿಯ್ಯಾಜ್ಯಪ್ರಧಾರಿಕಾಸಂಜ್ಞಿತವಾದಾಜ್ಞಾಚಕ್ರದ
ದ್ವಿಕೋಷ್ಠದಳನ್ಯಸ್ತರೆಂದು ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೮೯ ॥

೧೪೧೦

ಇಂತೀ ಮಹಾಲಿಂಗದ ಪೂರ್ವೋಕ್ತ ಷಟ್ಚಕ್ರಂಗಳೆಲ್ಲ
ಶಿವಚಕ್ರಂಗಳಲ್ಲಿ ನ್ಯಸ್ತವಾದ ಮುವತ್ತೈದು ವ್ಯಂಜನ.
ಭಿಕ್ಷಾರವಾಚ್ಯರಾದ ಮುವತ್ತೈದು ರುದ್ರರೆ
ತ್ರಿಶೂಲ ಕಪಾಲ ವರದಾಭಯಯುಕ್ತ ಕರಚತುಷ್ಟಯದಿಂ,
ಕಟಕ ಮಕುಟಾದಿ ಭೂಷಣಂಗಳಿಂ,
ದಿವ್ಯಗಂಧ ಮಾಲ್ಯ ದುಕೂಲಂಗಳಿಂ,
ಶೋಭೆವಡೆದು ರಕ್ತಕಾಂತಿಯ ಕಾಯದ ಲಾವಣ್ಯವಂತರಾಗಿರ್ಪು-
ಮಂತೆಯೆ ಷೋಡಶ ಸ್ವರಾಕ್ಷರವಾಚ್ಯರಾದರುಮಿದೆ ತೆರದಿಂ

ತಂತಮ್ಮ ನಿಜ ಲಾಂಛನ ಯುಕ್ತರಾಗಿರ್ದಪರೆಂದು
ನಿರವಿಸಿದೆಯಯ್ಯಾ, ಪರಶಿವಲಿಂಗಯ್ಯ. ॥ ೧೯೦ ॥

೧೪೧೧

ಈ ತೆರದಿಂದೀ ಮಹಾಲಿಂಗದ ಪೂರ್ವೋಕ್ತವಾದಧಶ್ಚಕ್ರಂಗಳೆಲ್ಲ
ಶಕ್ತಿ ಷಟ್ಚಕ್ರಂಗಳಲ್ಲಿ ನ್ಯಸ್ತವಾದ ಮೂವತ್ತೈದು ವ್ಯಂಜನ
ಭಿಕ್ಷಾರವಾಚ್ಯರಾದ ಮೂವತ್ತೈದು ರುದ್ರಶಕ್ತಿಯರೆ,
ನೀಲೋತ್ಪಲಾದಿಗಳಿಂದಲಂಕೃತ ಹಸ್ತಂಗಳಿಂ,
ದಿವ್ಯದುಕೂಲ ಗಂಧಮಾಲ್ಯಾಭರಣಾದಿಗಳಿಂ,
ಶೋಭೆವಡೆದು ವಿರಾಜಿಪರಾ
ಷೋಡಶ ಸ್ವರಾಕ್ಷರ ವಾಚ್ಯಶಕ್ತಿಯರೆಲ್ಲರುಮಂತೆಯೆ
ತಂತಮ್ಮ ನಿಜಲಾಂಛನಧಾರಿಣಿಯರಾಗಿರ್ಪರೀಯುಭಯ
ಸ್ವರವ್ಯಂಜನಂಗಳೈದಶಕ್ತಿ ಬೀಜಂಗಳಾದ ಕಾರಣವಗ್ಯುಷ್ಣದಂತೇಕವಾಗಿ
ಐವತ್ತೊಂದಕ್ಕರಂಗಳ ಗಣನೆಯಾದುದೆಂದು ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೯೧ ॥

೧೪೧೨

ಮತ್ತಂ, ಪಿಂದಣ ಚಕ್ರೋದ್ಧರಣಮೆ ಈ ಲಿಂಗೋದ್ಧರಣ
ವದೇಂಕಾರಣವೆಂದೊಡೆ,
ಸಕಲಾತ್ಮರ ದ್ವಾದಶಾಂತದಲ್ಲಿ ಮಂಡಲತ್ರಯ ಮಧ್ಯದ
ಸ್ಥೂಲ ಕರ್ಣಿಕಾಂತಸ್ಥಿತ ಸೂಕ್ಷ್ಮರಂಧ್ರಗತವಾದ
ಮೂಲಾಧಾರಂ ತೊಡಗಿ ಬ್ರಹ್ಮರಂಧ್ರಸಂಜ್ಞಿತ
ಬ್ರಹ್ಮನಾಡಿ ಪರ್ಯಂತಂ ವ್ಯಾಪಕವಾಗಿ
ನಾದಬ್ರಹ್ಮವೆನಿಪ ಪರಮ ಚೈತನ್ಯಕ ಪರಮಾತ್ಮನೆನಿಕುಮದೆ
ನವನೀತದೊಳ್ ಘೃತವಿರ್ದಂತೆಲ್ಲರೆಳಿರ್ದೊಡೆಯು
ಅಗ್ನಿಮುಖದೊಳ್ತುಪ್ಪವೆಂತು ಸಾಕ್ಷಾತ್ಕರಿಪುದಂತೆ
ಜ್ಞಾನಗುರುಮುಖದಿಂ ಪ್ರತ್ಯಕ್ಷವಾಗಿ ಲಿಂಗಾಕಾರವಾಗಿರ್ಪುದಾ
ಚಕ್ರೋದ್ಧರಣ ಕೋಷ್ಠದಳನ್ಯಸ್ತ
ವಾಚಕ ವಾಚ್ಯರುದ್ರರುಂ ರುದ್ರಶಕ್ತಿಯರುಮೊಂದೆಯೆಂದು
ನಿರವಿಸಿದೆಯಯ್ಯಾ, ಶಿವಲಿಂಗಯ್ಯ. ॥ ೧೯೨ ॥

೧೪೧೩

ಇಂತೀ ಮಹಾಲಿಂಗದ ಶಿವಶಕ್ತ್ಯಾತ್ಮಕ ಚಕ್ರನ್ಯಾಸ
ನಿರೂಪಣಾನಂತರದಲ್ಲಿ,
ಮೂರ್ತಮಂತ್ರಮಂ ಪೇಳ್ವೆನೆಂತೆನೆ-
ನಾದ ಸಂಜ್ಞಿತವಾದ ಹಕಾರಮನಾಜ್ಯಪ್ರಧಾರಿಕೆ
ಮೇಲಣ ಪಂತಿಯ ಮೇಲೆ
ಚತುಷ್ಕೋಷ್ಠ ಮಧ್ಯದಲ್ಲಿ ನ್ಯಾಸಂಗೆಯ್ವುದು.
ಬಿಂದು ಸಂಜ್ಞಿತವಾದೋಕಾರಮನಾಜ್ಯಪ್ರಧಾರಿಕೆಯಲ್ಲಿರಿಸೂದು.
ಮಕಾರಮಂ ಊರ್ಧ್ವಪಟ್ಟಿಕಾದಿಯಾಗಿ ಊರ್ಧ್ವಕಂಜಪರ್ಯಂತದಲ್ಲಿ
ಮಡಗುವುದು.
ವೃತ್ತದಲ್ಲಿ ಉಕಾರಮನಿರಿಸೂದು.
ಅಕಾರಮನಧಃಕಂಜಾಧಃ ಪಟ್ಟಿಕೆಗಳಲ್ಲಿಡುವುದಿಂತು
ಹ ಓ ಮ ಉ ಅ ಎಂಬೀ ಸೂಕ್ಷ್ಮ ಪಂಚಾಕ್ಷರ ನ್ಯಾಸಮಂ
ನಿರವಿಸಿದೆಯಯ್ಯಾ, ಪರಶಿವಲಿಂಗಯ್ಯ. ॥ ೧೯೩ ॥

೧೪೧೪

ಬಳಿಕ್ಕಮೀ ಸೂಕ್ಷ್ಮ ಪಂಚಾಕ್ಷರ ನ್ಯಾಸಾನಂತರದಲ್ಲಿ
ಸ್ಥೂಲಪಂಚಾಕ್ಷರ ನ್ಯಾಸಮಂ ಪೇಳ್ವೆನೆಂತೆನೆ-
ನಕಾರಾದಿಯಕಾರಾಂತವಾದೈದಕ್ಕರಂಗಳನಾಧಾರಾದಿ
ವಿಶುದ್ಧ್ಯಂತವಾದೈದುಚಕ್ರಂಗಳಲ್ಲಿರಿಸೂದೆಂದು
ನಿರವಿಸಿದೆಯಯ್ಯಾ ಪರಶಿವಲಿಂಗಯ್ಯ. ॥ ೧೯೪ ॥

೧೪೧೫

ಮರಲ್ದು, ಷಡಕ್ಷರನ್ಯಾಸಮಂ ಪೇಳ್ವೆನೆಂತನೆ
ಓಂಕಾರಮಂ ಲಿಂಗದಲ್ಲಿಡುವುದು.
ನಕಾರಮಂ ಶಕ್ತಿಪೀಠಮೂರ್ಧ್ವಪಟ್ಟಿಕೆಯಲ್ಲಿರಿಸೂದು.
ಮಕಾರಮನೂರ್ಧ್ವಕಂಜದಲ್ಲಿ ಮಡಗುವಮು.
ಶಿಕಾರಮಂ ವೃತ್ತದಲ್ಲಿ ಸಂಬಂಧಿಪುದು.
ವಕಾರಮಂ ಅಧಃಕಂಜದಲ್ಲಿ ನ್ಯಾಸೀಕರಿಸುವುದು.
ಯಕಾರಮನಧಃಪಟ್ಟಿಕೆಯಲ್ಲಿ ನೆಲೆಗೊಳಿಪುದೆಂದೀ

ಷಡಕ್ಷರನ್ಯಾಸಮಂ ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೯೫ ॥

೧೪೧೬

ಮತ್ತೆಯುಂ, ಸ್ಥೂಲ ಪಂಚಾಕ್ಷರ ಮಂತ್ರಕ್ಕೈದಕ್ಕರಮದೋಂಕಾರ
ಪೂರ್ವಕಮಾಗೆ
ಷಡಕ್ಷರವೀಯುಭಯ ಮಂತ್ರದ ನಮಃ ಎಂಬುದೇ
ಹೃದಯ ಮಂತ್ರ ಪಲ್ಲವವಿದೆಲ್ಲಿರ್ದೊಡಂ
ಹೃದಯಪಲ್ಲವವೆಯೆಂದರಿವುದೆಂದು ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೧೯೬ ॥

೧೪೧೭

ಬಳಿಕ್ಕೆಯುಂ,ವಾಂತವೆ ಸೂಕ್ಷ್ಮ ರುದ್ರಸಂಜ್ಞಿತವಾದಿಕಾರದೊಳ್ಬೆರೆಯೆ
ಶಿ ಯೆನಿಸಿತ್ತು.
ಲಾಂತವೆ ಅನಂತಾಖ್ಯ ರುದ್ರಸಂಜ್ಞಿತವಾದಾಕಾರದೋಳ್ಕೂಡೆ
ವಾ ಯೆನಿಸಿತ್ತು.
ಮರುದ್ವಾಚ್ಯವಾದ ಮಾಂತವೆ ಯ ಯೆನಿಸಿತ್ತೀ
ಮೂರಕ್ಕಾದಿಯಾದ ನಮಃ ಎಂಬ ಹೃದಯಪಲ್ಲವಂಗೂಡಿ
ಪಂಚಾಕ್ಷರಮೆನಿಸಲದು 'ತಾರಾಧ್ಯೇಯಂ ಷಡಕ್ಷರಂ' ಎಂದು
ನಿರ್ವಚಿಸಿದೆಯಯ್ಯಾ, ಪರಶಿವಲಿಂಗಯ್ಯ. ॥ ೧೯೭ ॥

೧೪೧೮

ಮತ್ತಂ, ಷಡಧ್ವನ್ಯಾಸಮೆಂತೆನೆ-
ಪೃಥ್ವೀಸ್ಥಾನಮಪ್ಪಧಃಪಟ್ಟಿಕಾ ಸಂಜ್ಞಿತವಾದಾಧಾರಸ್ಥಾನದಲ್ಲಿ,
ಭುವನಾಧ್ವಮನುದಕಸ್ಥಾನವಪ್ಪಧಃಕಂಜಸಂಜ್ಞಿತ ಸ್ವಾಧಿಷ್ಠಾನದಲ್ಲಿ,
ಪದಾಧ್ವಮನಗ್ನಿಸ್ಥಾನವಪ್ಪ ಕಂಠಸಂಜ್ಞಿತ ಸ್ವಾಧಿಷ್ಠಾನದಲ್ಲಿ,
ಪದಾಧ್ವಮನಗ್ನಿಸ್ಥಾನವಪ್ಪ ಕಂಠಸಂಜ್ಞಿತವೃತ್ತವೆನಿಪ
ಮಣಿಪೂರಕದಲ್ಲಿ,
ವರ್ಣಾಧ್ವಮನೂರ್ಧ್ವಾಬ್ಜ ಸಂಜ್ಞಿತ್ತವಪ್ಪನಾಹತದಲ್ಲಿ,
ಕಲಾಧ್ವಮನೂರ್ಧ್ವ ಪಟ್ಟಿಕಾಂಸಂಜ್ಞಿತವಪ್ಪ ವಿಶುದ್ಧಿಯಲ್ಲಿ,
ತತ್ವಾಧ್ವಮನಾಜ್ಯಪ್ರಧಾರಿಕಾಸಂಜ್ಞಿತವಪ್ಪಾಜ್ಞೇಯದಲ್ಲಿ,

ಮಂತ್ರಾರ್ಥಮಮಂ ನ್ಯಾಸಂಗೆಯ್ವುದಿಂತು
ಸಪ್ತಕೋಟಿ ಮಹಾಮಂತ್ರಾತ್ಮವಾದೀ ಮಹಾಲಿಂಗಮಂ
ಪೊರಗೊಳಗೊಂದೆಯೆಂದೇಕಭಾವದಲ್ಲಿಯರ್ಚಿಪುದೆಂದು
ನಿರವಿಸಿದೆಯಯ್ಯಾ, ಪರಶಿವಲಿಂಗಯ್ಯ. ॥ ೧೯೮ ॥

೧೪೧೯

ಇಂತು, ಕಾಮಿಕಾದಿ ವಾತೂಲಾಂತವಾಗಿಪ್ಪತ್ತೆಂಟು
ದಿವ್ಯಾಗಮ ಪ್ರಣೀತ
ಸರ್ವಥಾ ಮಂತ್ರಜಾತಮೆ ಮಹಾಲಿಂಗವೆಂದರಿದು
ಪೂಜಿಪುದಲ್ಲದೆ ಮತ್ತೊಂದು ತೆರದಿಂದರ್ಚಿಸಲಾಗ-
ದರ್ಚಿಸಿದ ಪಕ್ಷದಲ್ಲಾ ಪೂಜೆ ನಿಷ್ಫಲವೆಂದು
ನಿರವಿಸಿದೆಯಯ್ಯಾ, ಪರಶಿವಲಿಂಗಯ್ಯ. ॥ ೧೯೯ ॥

೧೪೨೦

ಮತ್ತಮೀ ಮಂತ್ರಜಾತಮೆಂತೆನೆ-
ಆದಿವಾಲವೊಂದು, ಸವಾಲವೆರಡು,
ಕೌಮಾರಂ ಮೂರು, ಯೌವನಂ ನಾಲ್ಕು,
ಬ್ರಹ್ಮಣನೈದು, ಕ್ಷತ್ರಿಯನಾರು,
ವೈಶ್ಯನೇಳು, ಶೂದ್ರನೆಂಟು,
ಸ್ತ್ರೀಯೊಂಬತ್ತು, ಪುರುಷಂ ಪತ್ತು,
ನಪುಂಸಕಂ ಪನ್ನೊಂದು, ಮಂತ್ರಜಾತಂ ಪನ್ನೆರಡು,
ಶುದ್ಧಂ ಪದಿಮೂರು, ಮಿಶ್ರಂ ಪದಿನಾಲ್ಕು,
ಸಂಕೀರ್ಣಂ ಪದಿನೈದು, ಮಂತ್ರರೂಪಂ ಪದಿನಾರು,
ಪ್ರಕೃತಿ ಪದಿನೇಳು, ವಿಕೃತಿ ಪದಿನೆಂಟು-
ವಿವೆಲ್ಲಕ್ಕುವಾದಿಯಾದ ಪೂರ್ಣ ಚಿದ್ರೂಪ ಪತ್ತೊಂಬತ್ತಿಂತೀ
ಪತ್ತೊಂಬತ್ತರಿಂ ಮಂತ್ರನಿರ್ಣಯಮೆಂದು ನಿರವಿಸಿದೆಯ್ಯಾ,
ಪರಶಿವಲಿಂಗಯ್ಯ. ॥ ೨೦೦ ॥

೧೪೨೧

ಮತ್ತಮೀ, ಪತ್ತೊಂಬತ್ತಕ್ಕೆ ತರದಿಂದೊಂದಕ್ಕೆ
ವಿಭಾಗೆಯಂ ಪೇಳ್ವೆನೆಂತೆನೆ-

ಅಕಾರಾನ್ವಿತವಾದ ಶುದ್ಧ ಮಂತ್ರವೆ ಆದಿವಾಲವೆನಿಕು-
ಮಷ್ಟಬೀಜಾನ್ವಿತ ಮಂತ್ರವೆ ಸವಾಲವೆನಿಕುಂ.
ಪಂಚಸ್ವರಾನ್ವಿತ ಮಂತ್ರವೆ ಕೌಮಾರವೆನಿಕುಂ.
ಸರ್ವದೇವತಾ ಮಂತ್ರಜಾತವೆ ಯೌವನಮೆನಿಕುಂ.
ಶಿವಾಕ್ಷರವೆ ಬ್ರಹ್ಮಣನೆನಿಕುಂ.
ಪಂಚಾಕ್ಷರವೆ ಕ್ಷತ್ರಿಯನೆನಿಕುಂ.
ಷಡಕ್ಷರವೆ ವೈಶ್ಯನೆನಿಕುಂ.
ಮತ್ತೆಯುಮದೆ ಶೂದ್ರನೆನಿಕುಂ.
ಸ್ವಾಹಾ ಪಲ್ಲವಾಂತವೆ ಸ್ತ್ರೀಯೆನಿಕುಂ.
ನಮಃ ಪಲ್ಲವಾಂತವೆ ಪುರುಷನೆನಿಕುಂ.
ಷಟ್ಕಾರವಷಟ್ಕಾರ ಪಲ್ಲವಾಂತಗಳೆ ನಪುಂಸಕವೆನಿಕುಂ.
ಮತ್ತಂ, ಸ್ವಾಹಾ ಪಲ್ಲವಾಂತವಾದೀ ಕ್ಷತ್ರಿಯ ವೈಶ್ಯ ಶೂದ್ರ ಸಹಿತ
ವಿಪ್ರಮಂತ್ರವು
ಇಂದ್ರಾದಿ ಶಯನಸ್ಥಾ[ನ]ಮುಂ ಕೂಡಿ ಮಂತ್ರಜಾತವೆನಿಕು-
ಮೇಕಾಕ್ಷರ ಮಂತ್ರವೆ ಶುದ್ಧಮೆನಿಕುಂ.
ಚತುರಕ್ಷರ ಮಂತ್ರವೆ ಮಿಶ್ರಮೆನಿಕುಂ.
ಬಪಿದಾಕ್ಷರಮಂತ್ರವೆ ಸಂಕೀರ್ಣವೆನಿಕುಂ.
ಇಂತೀಯಾದಿವಾಲವೊಂದು, ಸವಾಲವೆರಡು, ಕೌಮಾರಂ
ಮೂರು, ಯೌವನಂ ನಾಲ್ಕು, ಬ್ರಹ್ಮಣನೈದು, ಕ್ಷತ್ರಿಯನಾರು,
ವೈಶ್ಯನೇಳು, ಶೂದ್ರನೆಂಟು, ಸ್ತ್ರೀಯೊಂಬತ್ತು, ಪುರುಷಂ ಪತ್ತು,
ನಪುಂಸಕಂ ಪನ್ನೊಂದು, ಮಂತ್ರಜಾತಂ ಪನ್ನೆರಡು,
ಶುದ್ಧಂ ಪದಿಮೂರು, ಮಿಶ್ರಂ ಪದಿನಾಲ್ಕು,
ಸಂಕೀರ್ಣಂ ಪದಿನೈದುಮಿವರ ವಿವರಮಂ ನಿರೂಪಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೨೦೧ ॥

೧೪೨೨

ಮತ್ತಂ ಮಂತ್ರರೂಪಮೆಂತೆನೆ,
ಮಂತ್ರದಾದಿಯೆ ಶಿರಸ್ಸು.
ಮಂತ್ರದುಪರಿಯೆ ಮುಖ.
ಮಂತ್ರ ಬಾಹ್ಯಂಗಳೆ ಉಭಯ ಪಾರ್ಶ್ವಂಗಳಾ-
ಮಂತ್ರದಧೋಭಾಗವೆ ಆಸನಂ.
ಮಂತ್ರದುಪರಿಯಲ್ಲಿಯ ವಾಮದಕ್ಷಿಣಚತುಃಪಾರ್ಶ್ವಂಗಳೆ

ಚಕ್ಷು ಶ್ರೋತ್ರಂಗಳ್.
ತನ್ಮಧ್ಯವೆ ನಾಸಿಕೆ. ತದೂರ್ಧ್ವವೆ ನೊಸಲ್ಬಿಂದುವೆ ಮಸ್ತಕಂ.
ನಾದವೆ ಜಿಹ್ವೆ. ನಾಬ್ದವೆ ಶಬ್ದಮಾ
ಶಬ್ದ ಸ್ಪಂದ ನಾ[ದ]ವದುದರವೆ ಓಷ್ಠವದು
ಶಬ್ದದಿಂ ಭಿನ್ನವಾದ ಮುಖಾಂತರಯುತಮೆನಿಕುಂ.
ಪ್ರಣವಾಂತದಲ್ಲಿಯುಂ, ಮಂತ್ರಪಲ್ಲವಾಂತದಲ್ಲಿಯು
ಹಿಂಭಾಗದಲ್ಲಿಯು ಕೂಡಿರ್ಪುದೆ ಮಂತ್ರರೂಪವೆಂದು
ನಿರವಿಸಿದೆಯಯ್ಯಾ, ಪರಶಿವಲಿಂಗಯ್ಯ. ॥ ೨೦೨ ॥

೧೪೨೩

ಬಳಿಕ್ಕಮಾ ಮಂತ್ರಂಗಳ ಪ್ರಕೃತಿಯೆಂತೆನೆಯಾ
ಮಂತ್ರಂಗಳ ವಾಸವೆ ಪ್ರಕೃತಿಯೆನಿಕುಮಾ
ಮಂತ್ರಂಗಳ ಕೃಹದವೆ ವಿಕೃತಿಯೆನಿಕುವೀ-
ಯುಭಯಕ್ಕೀ ತೆರದಿಂ ವಿವರಂ-
ಪ್ರಕೃತಿಯೆನಲೊಡನಕ್ಷರ ಸ್ವರೂಪಂ.
ವಿಕೃತಿಯೆನಲೊಡನಕ್ಷರದ ಭಾವಾಕ್ಷರವದು ಜಿಹ್ವಾವಾಸವೆನಿಕುಮಾ
ಜಿಹ್ವಾ ಮುಖವಾಸಾಕ್ಷರವೆನಿಕುಮಾ
ಮುಖವಾಸಾಕ್ಷರವೆ ಬುದ್ಧಿವಾಸವೆನಿಕುಮಾ
ಬುದ್ಧಿವಾಸಾಕ್ಷರವೆ ಹೃದಯವಾಸವೆನಿಕುಮಾ
ಹೃದಯವಾಸಾಕ್ಷರವೆ ಪಿಂಡವಾಸವೆನಿಕುಮಾ
ಪಿಂಡವಾಸಾಕ್ಷರವೆ ನಾಡಿವಾಸವೆನಿಕುಮಾ
ನಾಡಿವಾಸಾಕ್ಷರವೆ ಶಕ್ತಿವಾಸವೆನಿಕುಮಾ
ಶಕ್ತಿವಾಸಾಕ್ಷರವೆ ಶಿವವಾಸವೆನಿಕುಮಾ
ಶಿವನೆ ಸರ್ವಾಕ್ಷರವಾಸವೆನಿಕುಮೀ
ಶಿವವಾಸವೆ ಮಂತ್ರಪ್ರಕೃತಿಯೆಂದು ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೨೦೩ ॥

೧೪೨೪

ಮತ್ತಂ ವಾಹನಮೆಂತನೆ-
ಲಿಂಗದಲ್ಲಿಯುಂ, ಸ್ಥಂಡಿಲೋದ್ಧರಣ ಲಿಂಗದಲ್ಲಿಯುಂ,
ರುದ್ರಮೂರ್ತಿ ಪ್ರತಿಮೆಗಳಲ್ಲಿಯುಂ,

ಪ್ರತಿಷ್ಠಾ ಕಾಲದಲ್ಲಿ ಸ್ಥಾಪಿತ ಕುಂಭಗಳಲ್ಲಿಯುಂ, ವಸ್ತುವಿನಲ್ಲಿಯುಂ,
ಕುಂಡಾಗ್ನಿಯಲ್ಲಿಯುಂ ಮೂಲಸ್ಥಾನದಲ್ಲಿಯುಂ,
ದೀಕ್ಷಾ ಕಾಲಂಗಳಲ್ಲಿ ಸ್ಥಾಪಿತ ಮಂತ್ರಾವಾಸ ಪ್ರೋಕ್ಷಣ
ಜಲಕಲಶಂಗಳಲ್ಲಿಯುಂ,
ಪ್ರಯೋಗಿಸಲ್ಪಟ್ಟುದೆ ಮಂತ್ರವಾಹನವೆಂದು ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೨೦೪ ॥

೧೪೨೫

ಬಳಿಕ್ಕಂ, ಪಶಮನ್ಯಾಯದಂತೆ ಪೂರ್ಣಚಿತಿಯೆಂತೆನೆ-
ಆದಿವಾಲಾದಿ ಮಂತ್ರವಾಹನಾಂತವಾದ ಪದಿನೆಂಟು
ಕುರುಹುಗಳನೊಳಕೊಂಡು
ಮಯೂರಾಂಡಕುಂಡಲ ಹಿರಣ್ಯ ಸಾಗರೋರ್ಮಿಗಳೆಂತಭೇದವಂತ-
ಭಿನ್ನ ಪ್ರಕಾಶವೆ ಪೂರ್ಣ ಚಿದ್ಗುಹ್ಯಮೆನಿಕುಮೆಂದೀ
ಮಂತ್ರಜಾತದ ಪತ್ತೊಂಬತ್ತು ಲಕ್ಕಣಮಂ ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ, ಪರಾತ್ಪರ ಶರಣಾಂತರಂಗ ಶಯ್ಯಾ. ॥೨೦೫॥

ಶ್ರೀ ಶ್ರೀ ಶ್ರೀ

೧೪೨೬

ಮತ್ತಂ,
ಆ ಶಾಂಭವಚಕ್ರಮೆ ಪೀಠ ಕಟ್ಯಾತ್ಮಕ ಸೂರ್ಯಮಂಡಲ,
ವರ್ತುಳ ಗೋಮುಖಾತ್ಮಕ ಚಂದ್ರಮಂಡಲ,
ನಾಳಗೋಳಕಾತ್ಮಕ ಪಾವಕಮಂಢಲಂಗಳೆಂದು ತ್ರಿಸ್ಥಾನಂಗಳ್.
ಅವರಲ್ಲಿ ಪೂರ್ವೋಕ್ತ ಸಂಬಂಧಿತ ಸಕೀಲ ನಿಕರ ಸಮನ್ವಿತ
ಷಟ್ಥಲಾತ್ಮಕವಾದ ಸೋಹಮೆಂಬಾತ್ಮಪ್ರಸಾದ.
ಮನುವಿನ ವ್ಯಂಜನ ಸ್ ಹ್ ಎಂಬಕ್ಷರದ್ವಯಮಂ
ಕುಂಭಕದೊಳ್ಳೋಪಿಸಲುಳಿಜಾಮೆಂಬೇಕಾಕ್ಷರಮಯವಾದ
ಮಹಾಲಿಂಗವೆನಿಸಿತ್ತಾ ಮಹಾಲಿಂಗವೆ ಮಹಾಚಕ್ರವೆನಿಸಿತ್ತಾ
ಮಹಾಚಕ್ರವೆ ಸಹಸ್ರಕಮಲವೆನಿಸಿತ್ತೆಂದು ನಿರವಿಸಿದೆಯಯ್ಯಾ,
ಪರಶಿವಲಿಂಗಯ್ಯ. ॥ ೨೦೬ ॥

೧೪೨೭

ಮತ್ತಮಾ, ಸಹಸ್ರಕಮಲದ ವಿಭಾಗೆಯಂ
ಋಗ್ವೇದದಲ್ಲಿ ತೋರ್ದಪೆನೆಂತೆನೆ-
'ಆತ್ಮಾನಂ ತೀರ್ಥಂ ಕ ಇಹ ಪ್ರಾಚದ್ಯೇನಪಥಾ ಪ್ರಪಿಬಂತಿ ಸು ತಸ್ಯ
ಸಹಸ್ರಧಾ ಪಂಚದಶಾನ್ಯುಕ್ಥಾ ಯಾವದ್ದ್ಯಾವಾಪೃಥಿವೀ ತಾವದಿತ್ತತ್
ಸಹಸ್ರಧಾ ಮಹಿಮಾನಃ ಸಹಸ್ರಃ ಯಾವದ್ಬ್ರಹ್ಮಾಧಿಷ್ಠಿತಂ
ತಾವತೀವಾಕ್'

ಟೀಕೆ॥
ಸಹಸ್ರಧಾ। ಸಾವಿರ ಪ್ರಕಾರವಾದ
ಮಹಿಮಾನಃ। ಮಹಿಮರೂಪರಾದ ಚಿದಾನಂದಾತ್ಮರುಗಳು
ಬ್ರಹ್ಮಾಧಿಷ್ಠಿತಂ। 'ಬ್ರಹ್ಮಾತ್ಮನಾಂ ಬ್ರಹ್ಮಮಹದ್ಯೋನಿರಹಂ
ಬೀಜಪ್ರದಃ ಪಿತಾ' ಎಂದುಂಟಾಗಿ,
ಬ್ರಹ್ಮವೆಂದು ಪ್ರಕೃತಿ। ಆ ಪ್ರಕೃತಿಯಿಂದೆ
ಅಧಿಷ್ಠಿತಂ। ಅಧಿಷ್ಠಿಸಲ್ಪಟ್ಟುದಾಗಿ
ಸಹಸ್ರಂ। ಸಾವಿರ ಗಣನೆಯನುಳ್ಳುದಾಗಿ
ಇತ್। ಲಯಾಧಿಷ್ಠಾನ ರೂಪವಾದ
ತತ್। ಆ ಬ್ರಹ್ಮವು ಯಾವತ್। ಎಷ್ಟು ಪ್ರಮಾಣವುಳ್ಳುದು
ತಾವತ್। ಅಷ್ಟು ಪ್ರಮಾಣವಾಗಿ
ಆಪ್ಯಾನಂ। ಪಾದೋದಕ ರೂಪವಾದ ತೀರ್ಥಂ। ತೀರ್ಥವನು
ಯೇನ ಪಥಾ। ಆವ ಮಾರ್ಗದಿಂದೆ ಸು। ಚೆನ್ನಾಗಿ
ಪ್ರ ಪಿಬಂತಿ। ಪಾನವ ಮಾಡುವರು
ತಸ್ಯ। ಆ ಮಾರ್ಗದ, ಉಕ್ಥಾ। ನಿಲುಕಡೆಯಾದ
ವಾಕ್। ಶಬ್ದಬ್ರಹ್ಮವು
ಸಹಸ್ರಥಾ। ಸಾವಿರ ಪ್ರಕಾರವುಳ್ಳದಾಗಿ
ದ್ಯಾವಾ ಪೃಥಿವೀ। ದ್ಯಾವಾಪೃಥುಗಳ ವ್ಯಾಪಿಸಿಕೊಂಡುದಾಗಿ
ಪಂಚ ದಶಾನಿ। ಐವತ್ತು ವರ್ಣಂಗಳಾಕಾರವುಳ್ಳುದಾಗಿ
ತಾವತಿ। ಅಷ್ಟಾಗಿಹುದೆಂದು, ಕಃ। ಚತುರ್ಮುಖದ ಬ್ರಹ್ಮನು
ಇಹ। ಈರ್ಣಾರ್ಧ್ವದಲ್ಲಿ
ಪ್ರಾವೋಚತ್। ನುಡಿದನೆಂದು-
ನಿರವಿಸಿದೆಯಯ್ಯಾ ಪರಶಿವಲಿಂಗಯ್ಯ. ॥ ೨೦೭ ॥

೧೪೨೮

ಮತ್ತಮಿಲ್ಲಿ ಕಕಾರಾದಿ ಕ್ಷಕಾರಾಂತವಾದ ಮೂವತ್ತೈದಕ್ಕರಂಗಳಲ್ಲಿ
ಪ್ರತ್ಯೇಕವಾಗಿ ಒಂದೊಂದಕ್ಕೆ ಪದಿನಾರು ಸ್ವರಾಕ್ಷರಂಗಳಂ
ಕೂಡಲಾಗಿವೈನೂರರುವತ್ತಕ್ಷರಂಗಳಾದವು.
'ಕ್ಷಿತೌ ಷಟ್ಪಂಚಾಶತ್' ಎಂದು
ಪೃಥ್ವೀತತ್ವದಲ್ಲಿ ಐ[ವತ್ತಾ]ರಕ್ಕರವು,
'ದ್ವಿಚತುರಧಿಕ ಪಂಚಾಶದುದಕೇ'ಯೆಂದು
ಅಪ್ತತ್ವದಲ್ಲಿ ಐವತ್ತೆರಡು,
'ಹುತಾಶೆ ದ್ವಾಷಷ್ಠಿ'ಯೆಂದು, ಅಗ್ನಿತತ್ವದಲ್ಲಿ ಅರುವತ್ತೆರಡು,
'ಚತುರಧಿಕ ಪಂಚಾಶದನಿಲೇ'ಯೆಂದು
ವಾಯುತತ್ವದಲ್ಲಿ ಐವತ್ತನಾಲ್ಕು,
'ದಿವಿ ದ್ವಿಷಟ್ತ್ರಿಂಶತ್' ಎಂದು ಆಕಾಶತತ್ವದಲ್ಲಿ ಎಪ್ಪತ್ತೆರಡು,
'ಮನಸಿ ಚತುಷ್ಷಷ್ಠಿ' ಎಂದು ಮನಸ್ತತ್ವದಲ್ಲಿ ಅರುವತ್ತನಾಲ್ಕು,
ಅಂತು ಮುನ್ನೂರರುವತ್ತು
ಚೌಷಷ್ಠಿಕಲಾತತ್ವವ[ರುವ]ತ್ತನಾಲ್ಕು,
ಕ ಎ ಇ ಲ ಹ್ರೀಂ ಹ ಸ ಕ ಹ ಲ ಹ್ರೀಂ ಸ ಕ ಲ ಹ್ರೀ ಶ್ರೀ
ಯೆಂದು ಪದಿನಾರು,
ಅಂತು ಬ್ರಹ್ಮರಂಧ್ರದ ಸಹಸ್ರದಳದಲ್ಲಿ ಸಹಸ್ರಾಕ್ಷರವೆಂದು
ತಿಳಿಪಿದೆಯಯ್ಯಾ, ಪರಶಿವಲಿಂಗಯ್ಯ. ॥ ೨೦೮ ॥

೧೪೨೯

ಮತ್ತಂ, ಭವಿಗಳ ಪ್ರಾಕೃತ ದೃಷ್ಟಿ ಪತಿತವಾದ
ಶುದ್ಧ ಪದಾರ್ಥಂಗಳಂ ಕಳೆದು, ನಿವೃತ್ತಿಯಂ ಮಾಡಿ,
ವಿಶುದ್ಧಾದ್ವೈತ ದೃಗ್ವಿಲೀನ ಶುದ್ಧಪ್ರಸಾದಮಯ ವಸ್ತುವಂ,
ಸ್ವೀಕರಿಪನಾವನವನೆ ವಿಶೇಷ ವೀರಶೈವನೆಂದು
ನಿರವಿಸಿದೆಯಯ್ಯಾ, ಪರಶಿವಲಿಂಗಯ್ಯ. ॥ ೨೦೯ ॥

ಸಮಾಪ್ತಂ ಶ್ರೀ

# ಅನುಬಂಧ

# ಕಠಿಣ ಪದಕೋಶ

ಅಗಡೆತ್ತು-ಪೊಂಡ ಎತ್ತು ೮೯೪
ಅಗ್ಘವಣಿ-ನೀರು ೧೨೬
ಅಚ್ಚುಗ-ಆಶ್ಚರ್ಯ ೧೪೧
ಅಜಾತ-ಜನನವಿಲ್ಲದ ೭೯೧
ಅಟಮಟ-ಮೋಸ ೮೪
ಅಡರು-ಏರು, ಹತ್ತು ೧೧೯೫
ಅಣಲು-ದವಡೆ ೧೦೪
ಅತ್ತಳ-ಆ ಕಡೆಯ ೧೪೩
ಅತಿಗಳೆ-ಬಿಡು ೪೭೬
ಅನಂಗ-ಕಾಮ ೨೮೯
ಅನುವು-ಆಶ್ರಯ ೯೩೬
ಅಪಸ್ಮಾರ-ಮಲರೋಗ ೭೯
ಅಭಂಗ-ಸತ್ಯ ೨೮೯
ಅಭ್ರ-ಮೋಡ ೭೨
ಅಭೀಷ್ಟೆ-ಬಯಕೆ ೪೯
ಅಮರ್ದುಗೈಯ್ಯ-ಚಂದ್ರ ೫
ಅಮೇಧ್ಯ-ಮಲ ೧೪೨
ಅರತ-ಬತ್ತಿದ ೧೧೫೭
ಅರಸು-ಹುಡುಕು ೧೧೪
ಅರಿ-ಕತ್ತರಿಸು ೨೬೬
ಅರುಹು-ಜ್ಞಾನ ೭೪೯
ಅರೆ-ಬಂಡೆಗಲ್ಲು ೪೦೨
ಅವಗವಿಸು-ಆವರಿಸು ೩೪೪
ಅವಧಾನ-ಎಚ್ಚರ ೯೯೩
ಅವಸ್ಥೆ-ಹಸಿವು ೧೩೮
ಅವ್ಯಯ-ಚ್ಯುತಿಯಿಲ್ಲದ ೨೩
ಅವಿರಳ-ದಟ್ಟ ೪೮೫
ಅಶನ-ಆಹಾರ ೧೪೧
ಅಶುದ್ಧ-ಮಲ ೧೧೪
ಅಸದಳ-ಅಸಾಧ್ಯ ೮೫೦
ಅಸಿ-ಎಳೆಯ ೧೧೧
ಅಳವಡು-ಸಾಧ್ಯವಾಗು ೧ (ಸೂತ್ರ)
ಅಳಿಯಗೂಳು-ಅಳಿಯತನದ ಕೂಳು ೪೮೯
ಅಳುಪು-ಆಶೆಪಡು ೭೦೫
ಅಂಕುರ-ಚಿಗುರು ೭೯೧
ಅಂಡಜ-ತತ್ತಿ ೯೬೭
ಅಂಡಲೆ-ತೊಂದರೆ ೧೨೯
ಅಂದಣ-ಪಲ್ಲಕ್ಕಿ ೭೦೫
ಅಂಬರ-ಬಟ್ಟೆ ೫೯
ಆಕುಳ-ಚಿಂತೆ ೧
ಆಗರ-ಸಮೂಹ ೧೩೭
ಆಗೌಮಿ-ಬರಲಿರುವ ೧೯೧
ಆಜ್ಯ-ತುಪ್ಪ ೭೯೫
ಅರ್ಣವ-ಸಮುದ್ರ ೪೭೮
ಆದ್ಯ-ಹಿಂದಿನ ೭೩೧
ಆಮಯ-ರೋಗ ೧
ಆಲೆ-ಕಣ್ಣುಗುಡ್ಡೆ ೩೮೭
ಆಪುಚಿತ್ತ-ಅಲ್ಪಮನಸ್ಸು ೩೬೪
ಆಸಕ-ಆಸಕ್ತ ೪೬೩
ಆಹನ್ನಕ್ಕ-ಆಗುವವರೆಗೆ ೨೩೦
ಇದಿರ-ಪರರನ್ನು ೭೪೪
ಇಳೆ-ಭೂಮಿ ೧೧೮೫
ಇಂಗಿತ-ರಹಸ್ಯ ೧೦೧೩
ಈರುದಾರು-ಕಕ್ಕಾವಿಕ್ಕಿ ೩೭೧

| | | | |
|---|---|---|---|
| ಈಂಟು-ಕುದಿ | ೯೦೪ | ಒಬ್ಬುಳಿ-ಗುಂಪು | ೧೦೪೫ |
| ಉಕ್ಕು-ಹೆಚ್ಚುವಿಕೆ | ೩೧೧ | ಒಯ್ಯಾರ-ಪ್ರೀತಿ | ೭೩೫ |
| ಉಗಿ-ಉಗುಳು | ೧೨೩ | ಒರಗು-ಮಲಗು | ೧೪೦ |
| ಉಡುಗು-ಸಣ್ಣದಾಗು | ೪೨೫ | ಒಸರು-ಸೋರು | ೩೭೮ |
| ಉದ್ದ-ಎತ್ತರ | ೬೬೭ | ಓಗರ-ಅನ್ನ | ೧೪೦ |
| ಉದ್ಧೂಳನ-ಲೇಪ | ೧೯೨ | ಓಜ-ಹಿರಿಯ | ೩೪೭ |
| ಉನ್ಮನಿ-ಶಿವಸ್ಥಾನ | ೧೦೪೯ | ಓಜೆ-ಕ್ರಮ | ೯೦೫ |
| ಉಪಾಧಿ-ಆವರಣ | ೨೯೨ | ಓಡು-ಹುರಿಯುವ ಹೆಂಚು | ೭೦೬ |
| ಉಪಾವಸ್ಥೆ-ಪೂಜೆ | ೭೩೭ | ಓಲೈಸು-ಸೇವಿಸು | ೧೦೫೦ |
| ಉಪಾಸ್ತೆ-ಉಪಾಸನೆ | ೧ (ಸೂತ್ರ) | ಕಕ್ಷೆ-ಬಗಲು | ೯೮೦ |
| ಉರಗ-ಹಾವು | ೧೧೧೪ | ಕಟಕಿ-ನಿಂದೆ | ೭೬೧ |
| ಉರುಹು-ಸುಡು | ೭೩೫ | ಕಟ್ಟಣೆ-ನಿಯಮ | ೬೯೧ |
| ಉಲಿ-ಶಬ್ದ | ೧೧೫೭ | ಕಟು-ಕಹಿ | ೬೬೧ |
| ಉಲುಗಿರಿ-ವಿಲಾಸ ಸ್ತ್ರೀ | ೧೪೯ | ಕನಲು-ಚಂಚಲ | ೪೭೩ |
| ಉಲುಹು-ಸದ್ದು | ೪೪೫ | ಕಪ್ಪರ-ಭಿಕ್ಷಾಪಾತ್ರೆ | ೪೬೫ |
| ಊರ್ಧ್ವಮುಖಿ-ಮೇಲ್ಮುಖಿ | ೬೧ | ಕಪಿಲೆ-ಹಸು | ೭೧೭ |
| ಊರು-ಕಡಿ | ೪೫೦ | ಕಬ್ಬಿಲ-ಜೇಡ | ೩೧೭ |
| ಋತಪಾತಕ-ಋಣಗೇಡಿ | ೩೦೩ | ಕರ್ಕಸ-ಕರಗಸ | ೪೮೨ |
| ಎಟುವ-ಎಡುವಟ್ಟು | ೪೭೨ | ಕರ್ಕಸ-ಯಮ | ೨೮೪ |
| ಎಡೆಕಡೆ-ಕೊನೆ | ೧೦೫ | ಕರ್ಣಿಕಾ-ದೇಟು | ೮೪ |
| ಎಡೆಗೊಳ್-ಆಕ್ರಮಿಸು | ೪೦೫ | ಕರಣ-ಇಂದ್ರಿಯ | ೭೬೯ |
| ಎಣಿಸು-ಯೋಚಿಸು | ೧೦೯ | ಕರಿ-ಆನೆ | ೫೧೧ |
| ಎಣಿಸು-ಇಚ್ಛಿಸು | ೨೮೧ | ಕರಿಗೊಳಿಸು-ಘಟ್ಟಿಮಾಡು | ೬೪೪ |
| ಎಬ್ಬಟ್ಟು-ಓಡಿಸು | ೧೪೫ | ಕರೋಟಿಮಾಲೆ-ರುಂಡಮಾಲೆ | ೯೭೮ |
| ಎಯ್ದ್-ಬರು | ೬೯೧ | ಕಷಾಯ-ಒಗರು | ೬೬೧ |
| ಎರಡಾಗು-ಭಿನ್ನವಾಗು | ೭೧೮ | ಕಳ್ಳು-ಹೆಂಡ | ೭೦೪ |
| ಎರವು-ಕೈಗಡ | ೮೪೨ | ಕಳೆ-ಕಸ | ೫೦೬ |
| ಏಕರಸ-ಸಮರಸ | ೧೧೪೭ | ಕಂಕಾಳ-ಬೆನ್ನೆಲುಬು | ೯೭೮ |
| ಏಡಿಸು-ಅಣಕಿಸು | ೩೪೩ | ಕಂಡರಿಸು-ಕೆತ್ತು | ೭೩೪ |
| ಒಗು-ಹೊರಚೆಲ್ಲು | ೩೮೦ | ಕಂಥೆ-ಕಪನಿ | ೧೩೭ |
| ಒಗೆ-ಹುಟ್ಟು | ೭೩೫ | ಕಂಬಳ-ಕೂಲಿ | ೭೧೮ |
| ಒಚ್ಚತಪ್ಪೋಗು-ಸಮರಸವಾಗು | ೧೪೮ | ಕಂಬು-ಶಂಖ | ೭೧೭ |

ಕಾಕು-ಕೆಟ್ಟ ೭೩೭
ಕಾಟಿ-ಗಂಜಿ, ಅಂಬಲಿ ೩೯೬
ಕಾಡುಗಟ್ಟಿ-ಅಡವಿಯಲ್ಲಿನ ಸಣ್ಣ ೧೧೪
ಕಾಮಾಕ್ಷಿ-ಒಂದು ಮುದ್ರೆ ೪೬೪
ಕಾಷ್ಠ-ಕಟ್ಟಿಗೆ ೧೦೮೬
ಕಾಸ-ಕೆಮ್ಮು ೩೬೦
ಕಾಸೆ-ಗೋಸಿ ೭೦೨
ಕಾಳಿಕೆ-ಕತ್ತಲೆ ೪೨೧
ಕಾಳ್ವಿಚಾರ-ಕೆಟ್ಟ ವಿಚಾರ ೩೦೩
ಕಿತ್ತಲಗು-ಚೂರಿ ೬೭೦
ಕಿನಿಕೆ-ಕೀವು ೧೪೨
ಕಿರಾತ-ಬೇಡ ೪೬೭
ಕಿಂಕುರ್ವಾಣ-ಸೇವಕತ್ವ ೧೬೨
ಕೀಲ-ಸಂಬಂಧ ೯೪೪
ಕುಕ್ಷಿ-ಹೊಟ್ಟೆ ೪
ಕುಟಿಲ-ವಕ್ರ ೮೪
ಕುತ್ತ-ಸಂಕಟ ೧೭೧
ಕುಂಡಲಿ-ಶರೀರವಲ್ಲಿನ ಸರ್ಪಾಕಾರದ ನಾಡಿ ೩೭೦
ಕುಂಭ-ಕೊಡ ೨೪೪
ಕುರುಪಿಡು-ಗುರುತು ಹೇಳು ೧೪
ಕುಸಿ-ಕುಗ್ಗು ೧೧೧
ಕುಹಕ-ನಿಂದೆ ೮೪
ಕುಳ-ಭೇದ ೪೭೬
ಕುಳಿ-ತಗ್ಗು ೧೧೨
ಕೂಪ-ಬಾವಿ ೧೧೭
ಕೆಚ್ಚಾನ-ಕೆಂಪಾದ ೧೪೧
ಕೆಂಜೆಡೆ-ಕೆಂಪು ಜಡೆ ೪
ಕೆಂಬೋತ-ಕೋಳಿ ೨೧೯
ಕೈದಂಡೆ-ಕೈಯೊಳಗಿನ ಹಾರ ೧೧೩
ಕೈದು-ಅಸ್ತ್ರ ೭೧೬
ಕೈಯಾನು-ಭಿಕ್ಷೆ ಬೇಡು ೪೬೭
ಕೊಟ್ಟ-ಸಂಗ್ರಹ ೩೧೭
ಕೊನರು-ಚಿಗುರು ೬೪೫
ಕೊರಡು-ಒಣಮರ ೬೪೫
ಕೋಟರ-ಗೂಡು ೯೮೦
ಕೋಟಲೆ-ಕಷ್ಟ ೧೧೦
ಕೋಡಿಗ-ನಾಚಿಕೆ ಇಲ್ಲದವ ೭೩೯
ಕೋಡಿವರಿ-ತುಂಬಿಹರಿ ೪೬೭
ಕೋಣೆ ಕೋಣೆ-ಮೂಲೆ ಮೂಲೆ ೩೭೫
ಕೋಳ-ಬೇಡಿ ೩೦೩
ಖಟ್ವಾಂಗ-ಶಿವನ ಒಂದು ಆಯುಧ ೪೬೪
ಖಂಡೆಯ-ಕತ್ತಿ ೭೩೮
ಖೇಚರ-ಆಕಾಶಗಾಮಿ ೧೧೫೯
ಗಡಣ-ಸಮೂಹ ೪೨೫
ಗಸಣೆ-ತೊಂದರೆ ೫೫೫
ಗಳಪು-ಬಾಯಿಗೆ ಬಂದಂತೆ ಆಡು ೭೩೯
ಗಂಗೆವಾಳುಕ-ಗಂಗೆಯ ಮಳಲು ೫೨೧
ಗಾಜುಗೋಜಾಗು-ತೊಂದರೆಪಡು ೩೪೭
ಗಾರುಮಾಡು-ಹಾಳುಮಾಡು ೩೦೬
ಗಾವಿಲ-ಹಳ್ಳಿಮನುಷ್ಯ ೨೨೪
ಗುಡುಗು-ಒಂದು ವಿಧದ ಆಟ ೨೭೬
ಗುಂಡಿಗಪ್ಪರ-ತಗ್ಗಾದ ಭಿಕ್ಷಾಪಾತ್ರೆ ೪೬೪
ಗೆಜಲ-ಗೆದ್ದಲ ಹುಳು ೪೦೬
ಗೊಟ್ಟು-ಮಲಾಶಯ ೧೧೭
ಗೊತ್ತು-ಗುರಿ ೨೪೬
ಗೊತ್ತು-ಸ್ಥಾನ ೫೩೧
ಗೊರೆಗೊಳು-ನಾದಮಾಡು ೧೧೫೭
ಗ್ರಹಿಸು-ತಿಳಿ ೩೬೫
ಚಿತ್-ಜ್ಞಾನ ೧೫
ಚಿದ್ಭಾಂಡ-ಜ್ಞಾನಪಾತ್ರೆ ೭೯
ಚಿನ್ನವರದ-ಅಕ್ಕಸಾಲಿಗ ೭೫೪
ಚೇಗು-ಹಾನಿ ೧೧೨೩
ಚೋಹ-ವೇಷ ೪೦೨

ಭಾಗ-ಪೋತ ೯೮೦
ಜಾತಿಸ್ಮರತ್ವ-ಪೂರ್ವ ಜನ್ಮ ಸ್ಮರಣೆ ೮೮
ಜಾರು-ಪಿಚ್ಚು ೧೪೨
ಜಾಲಗಾರ-ಬಲೆಗಾರ ೮೧೨
ತವುಳಿಗಾರ-ಮೋಸಗಾರ ೭೩೯
ದಂಬು-ಬೂಟಾಟಿಕೆ ೨೮೬
ತಗೆ-ಅಡ್ಡಿಯಾಗು ೭೦೯
ತಟ-ಪ್ರದೇಶ ೧೧೦
ತಟಾಕ-ಕೆರೆ ೧೧೫೭
ತದ್ದಿನ-ಶ್ರಾದ್ಧ ೭೩೪
ತಬ್ಬಿಬ್ಬು-ದಿಙ್ಮೂಢತನ ೫೦೨
ತಮಂಧ-ಕತ್ತಲೆ ೧೧೦
ತರ್ಕಮರ್ಕಟ-ತರ್ಕದ ಮಂಗ ೨೧೮
ತಲ್ಲಣ-ವ್ಯಸನ ೫೦೨
ತಳಿಗೂಳು-ಅಳತೆಯ ಕೂಳು ೩೦೨
ತಂಡುಮುಂಡುಕಾತಿ-ಮಾಯೆ ೩೭೦
ತಿಕ್ತ-ಹುಳಿ ೬೬೧
ತಿತಿಕ್ಷೆ-ಸಹನಶೀಲತೆ ೧೧೩೬
ತಿಮಿರ-ಅಂಧಕಾರ ೧೫೭
ತಿಂಗಳ-ಚಂದ್ರ ೩೬೭
ತಿಂಥಿಣಿ-ಸಮೂಹ ೩೭೯
ತುರಿ-ಖಜ್ಜಿ ೧೧೭
ತುರಿಸು-ಕೆರಿ ೭೩೬
ತುಚ್ಛ-ಹೀನ ೬೭೦
ತೂಬು-ತುಂಬು ೫೫೫
ತೂಳ-ಅರಳೆ ೮೧೮
ತೊಡಹು-ಒಡವೆ ೯೪೫
ತೋರ-ದೊಡ್ಡ ೩೭೭
ತ್ರಾಹಿ-ರಕ್ಷಿಸು ೧
ತ್ರಿಣಯ-ಶಿವ ೩೨೩
ತ್ವಗು-ಚರ್ಮ ೨೦೩
ದಗ್ಧ-ಸುಟ್ಟ ೯೫೮
ದಧಿ-ಮೊಸರು ೨೪೯
ದಶಪಂಚ-ಹದಿನೈದು ೫
ದಾಡೆ-ಹಲ್ಲು ೧೦೪
ದಾವತಿ-ಕಷ್ಟ ೧೧೧೦
ದಿಟಪುಟ-ನಿಶ್ಚಯ ೮೪
ದಿನಮಣಿ-ಸೂರ್ಯ ೫೮
ದುಮ್ಮಾನ-ದುಃಖ ೧೦೫
ದೂರ್ವಿ-ಕರಿಕೆ ೫೯೪
ದೃಕ್-ಕಣ್ಣು ೮೮
ಧರೆ-ಭೂಮಿ ೪೮೩
ನಗ-ಪರ್ವತ ೬
ನನೆ-ಮೊಗ್ಗು ೭೦೯
ನಯ-ಹದನವಾದ ೧೦೬
ನವನೀತ-ಬೆಣ್ಣೆ ೨೪೯
ನಂಜು-ವಿಷ ೪
ನಾಮನಷ್ಟ-ನಿರ್ನಾಮ ೨೧೭
ನಿಟಿಲ-ಹಣೆ ೮೪
ನಿಬ್ಬೆರಗು-ತನ್ಮಯ ೪೪೩
ನಿರವಯ-ಅವಯವರಹಿತ ೧
ನಿರಂಗಸಂಗಿ-ನಿರ್ದೇಹಿ ೫೦೭
ನಿರಾವರಣ-ಮಾಯಾರಹಿತ ೧
ನಿರಾಳ-ದೋಷರಹಿತ ೬೬
ನಿರಾಳಕ-ಪ್ರಕೃತಿಗುಣರಹಿತ ೧
ನಿರ್ಭಾವ-ಸಂಸಾರ ಭಾವನಾರಹಿತ ೧
ನಿವಾಟ-ಮುಕ್ತ ೯೯
ನಿರ್ವಾಣ-ಮೋಕ್ಷ ೫೦೭
ನಿಷ್ಪತ್ತಿಯಾಗು-ಇಲ್ಲವಾಗು ೫೩೮
ನೀರಜ-ಕಮಲ ೯೦
ನೋಂಪಿ-ವ್ರತ ೮೯೪
ಪಡುಗ-ಪಾತ್ರೆ ೭೦೮
ಪಡುವ-ಹೊಲಸು ೧೧೮
ಪರ-ಶ್ರೇಷ್ಠ ೨

ಪರಮಾರ್ಥ-ಸತ್ಯ ೫೬
ಪರಿಯಾಣ-ಉಂಬ ಬಟ್ಟಲು ೭೨೯
ಪರೆ-ಸಣ್ಣ ಹಲಗ ೧೨೩
ಪವಣಿಗೆ-ಪೋಣಿಸುವಿಕೆ ೪೯೧
ಪಂಗುಳ-ಹೆಳವ ೭೬೧
ಪಂಚಾಶತ್-ಐವತ್ತು ೨೧
ಪಾವಡ-ವಸ್ತ್ರ ೩೦೬
ಪಾಷಂಡಿ-ನಾಸ್ತಿಕ ೫೩೬
ಪಾಳೆಯ-ದಂಡಿನಬೀಡು ೧೨೦
ಪಿಪಾಸೆ-ಬಾಯಾರಿಕೆ ೯೦೪
ಪಿಸುಣಿಗ-ಚಾಡಿಖೋರ ೫೫೫
ಪೋಟಾಡು-ಸಿಪ್ಪೆಯನ್ನು ಸುಲಿ ೬೩೯
ಪ್ರಾಜ್ಞ-ಪಂಡಿತ ೨
ಪ್ರಾರಬ್ಧ-ಈಗಿನ ೧೯೧
ಪ್ರಿಯ-ಪ್ರೇಮಿ ೬
ಫೇನ-ಬುರುಗು ೭೧
ಬಗದೇವಿ-ಸಂಸಾರ ಮಾಯಾದೇವಿ ೩೪೯
ಬಟ್ಟಪಾವಡ-ದುಂಡುವಸ್ತ್ರ ೪೬೫
ಬಟ್ಟೆ-ದಾರಿ ೭೧೬
ಬಣಗ-ಸಾಮಾನ್ಯ ೨೫೫
ಬಣ್ಣ-ಸೀರೆ ೭೧೨
ಬಣಿತೆ-ಹೇಳುವಿಕೆ ೨೫
ಬದ್ಧರಸ-ವಿಷಯರಸ ೬೬೭
ಬಧಿರ-ಕಿವುಡ ೯೫೧
ಬರಿಕ್ಕೈ-ಆನೆಯ ಸೊಂಡಿಲು ೪೩೩
ಬರುದೊರೆವೋಗು-ವ್ಯರ್ಥವಾಗು ೧೦೬
ಬಲ್ಲತನ-ಗಟ್ಟಿಗತನ ೧೦೬
ಬಲ್ಲುಕ-ಕರಡಿ ೫೦೨
ಬಳ್ಳ-ಧಾನ್ಯದ ಅಳತೆಯ ಮಾಪು ೨೩೩
ಬಳ್ಳಿಡು-ಕೂಗು ೭೪೨
ಬಂದಿಕಾನೆ-ಸೆರೆಮನೆ ೧೦೭
ಬಿನ್ನಾಣ-ಚಾತುರ್ಯ ೧೦೩
ಬೀಗಿ-ದಪ್ಪವಾಗಿ ೭೪೩
ಬೀದಿವರಿ-ವ್ಯಾಪಿಸು ೭೧೬
ಬೀಸರವಾಗು-ಕೆಡು ೬೪೬
ಬುದ್ಬುದ-ಗುಳ್ಳೆ ೭೧
ಬೆಳಸು-ಪೈರು ೫೦೬
ಬೇಟ-ಬಯಕೆ ೧೦೦೩
ಬೋಡ-ಹಲ್ಲಿಲ್ಲದವ ೭೪೧
ಬೋವ-ಅಸ್ಪೃಶ್ಯ ೭೦೫
ಭಗ-ಯೋನಿ ೧೦೭
ಭವ-ಪರಮಾತ್ಮ ೩
ಭವಭಾರಿ-ಸಂಸಾರಜೀವಿ ೬೪೪
ಭಸ್ಮಘಂಟಿಕೆ-ವಿಭೂತಿಘಟ್ಟಿ ೪೬೫
ಭಂಗಿ-ಗಾಂಜ ೩೪೨
ಭಾಜನ-ಪಾತ್ರೆ ೬೫೮
ಭಾಳ-ಹಣೆ ೪
ಭೂತಭಾರಿ-ನಿರುಪಯುಕ್ತ ೪೬೨
ಮಗ್ಗಿಸು-ತಗ್ಗಿಸು ೭೩೫
ಮಚ್ಚರ್ಯ-ಹೊಟ್ಟೆಕಿಚ್ಚು ೨೮೬
ಮಚ್ಚು-ಮೆಚ್ಚು ೩೦೫
ಮಡಮ-ಮಂದ ೨೧೭
ಮಧುರ-ಆರು ರುಚಿಗಳಲ್ಲೊಂದು ೫೮
ಮಯ-ತುಂಬಿದ ೬
ಮಯ್ಯಾನು-ಮೈಪೊಡ್ಡು ೧೨೮
ಮರಿವಾಲ-? ೩೭೫
ಮಲಸಂಬಂಧ-ಜನ್ಮಸಂಬಂಧ ೧೬೮
ಮಸಕ-ಶಿಕ್ಕಾಟ ೩೭೫
ಮಹಃ-ಪರಮಾತ್ಮ ೧೧೯
ಮಂಜರದೃಷ್ಟಿ-ಬೆಕ್ಕಿನಕಣ್ಣು ೩೩೮
ಮಂಡೆವಾಲು-ಸಹಸ್ರದಳದಲ್ಲಿಯ
ಅಮೃತ ೩೭೦
ಮಾಗಿ-ಚಳಿಗಾಲ ೨೧೮
ಮಾರ್ಜಾಲ-ಬೆಕ್ಕು ೧೪೭

ಮಾಣ್-ಬಿಡು ೬೮
ಮಾನಸಿಕೆ-ಅಭಿಮಾನ ೧೧೩
ಮಾಯಿಕ-ಮಾಯಾ ಸಂಬಂಧ ೧೦೮
ಮಾರ-ಕಾಮ ೧೦೨
ಮಾರಿ-ಮಾರಿದೇವಿ ೧೩೮
ಮುಕುರ-ಕನ್ನಡಿ ೮೮೦
ಮುನಿಸಾಗಿರಿಸು-ಮೂಕನನ್ನಾಗಿ ಮಾಡು ೨೧೮
ಮುರುಗು-ತೇಕು ೪೭೫
ಮೂಡೆ-ಗಂಟು ೬೪೪
ಮೇಯ-ವಿಷಯ ೧೨೦೬
ಮೈಗಾಣಿಸು-ತೋರಿಸು ೫೦೯
ರತಿ-ಪ್ರೀತಿ ೧೧೯
ರೂಹಿಸು-ರೂಪುಗೊಳ್ಳು ೧೫
ರೇಣು-ಧೂಳೀಕಣ ೧೯೨
ಲಲ್ಲೆನುಡಿ-ಪ್ರೇಮದ ಮಾತು ೧೦೬
ಲಂಡರು-ಹೀನರು ೮೮೦
ಲಾಂಛನ-ವೇಷ ೨೧೨
ಲಿಂಗಗ್ರಾಹಕ-ಲಿಂಗಾಂಗಿ ೨೨೨
ಲೋಚನ-ಕಣ್ಣು ೮೪
ವಕ್ತ್ರ-ಮುಖ ೫
ವಚ್ಚೆ-ಸ್ವಲ್ಪ ೪೦೦
ಫಚ್ಚೆ-ಒಂದು ೪೦೦
ವಡಬ-ವಡಬಾಗ್ನಿ ೭
ವಸ್ತು-ಪರಬ್ರಹ್ಮ ೬೪
ವಾರಕ-ಒಡವೆ ೭೫೭
ವಾರಣ-ಆನೆ ೫೬೫
ವಾರಿಶಿಲೆ-ಆಲಿಕಲ್ಲು ೨೬೩
ವಿಕಳತೆ-ಅಶಾಂತಿ ೧೫೦
ವಿಗಡ-ವಿಚಿತ್ರ ೧೦೫೯
ವಿಧಿ-ರೀತಿ ೪೮೨
ವಿಶ್ವತೋಪಥ-ಆಕಾಶಮಾರ್ಗ ೧೩೮
ವೇದವಿದ್-ವೇದಬಲ್ಲವ ೬
ವ್ಯೋಮ-ಆಕಾಶ ೬೬೩
ಶಶಿ-ಚಂದ್ರ ೩೧೯
ಶಿವಾಣಿ-ಗಿರಿಜೆ ೩೮೧
ಶೀಕರ-ತುಂತುರು ೭೧
ಸಟ್ಟುಗ-ಸವುಟು ೬೪೩
ಸರ್ಪದಷ್ಟ-ಹಾವುಕಚ್ಚಿದ ೨೧೭
ಸರಳು-ಬಾಣ ೧೪೦
ಸಲಿಲ-ನೀರು ೩೭೬
ಸಲಿಸು-ಊಟಮಾಡು ೭೨೯
ಸರ್ವ-ಶಿವ ೩೯೨
ಸಂಕಲ್ಪ-ದೃಢ ನಿರ್ಧಾರ ೫೮
ಸಂಚ-ರಹಸ್ಯ ೮೫
ಸಂಚ-ಸಂಗ್ರಹ ೧೦೪
ಸಂಚಿತ-ಪೂರ್ವಾರ್ಜಿತ ೯೧
ಸಂದರಿಯ-ಬೇರ್ಪಡಿಸು ೭೨೩
ಸಂದು-ಬಿಡುಗಡೆ ೪೩೨
ಸಂಸೃತಿ-ಸಂಸಾರ ೨೧೭
ಸಾರಾಯ-ಸಾರ ೧೨೦೧
ಸಾವಧಾನ-ಏಕಚಿತ್ತ ೨೭೮
ಸಿತ-ಬಿಳಿ ೧೦೦೨
ಸಿಂಬೆ-ಕೀಳು ಹೆಣ್ಣು ೩೯೬
ಸುಧೆ-ಅಮೃತ ೫೮
ಸುರಚಾಪ-ಕಾಮನಬಿಲ್ಲು ೧೩೧
ಸುರಾಳ-ಸಾಕಾರ ೬೬
ಸೂಡು-ಧರಿಸು ೩೬೭
ಸೊಡರು-ದೀಪ ೬೪೪
ಸೊಣಗ-ನಾಯಿ ೧೪೮
ಸೊಮ್ಮು-ಆಸ್ತಿ ೧೬೫
ಸೋಂಗೆ-ಗರಿ ೪೬೬
ಸೋನೆ-ಹನಿ ೪೬೭
ಸೋರೆ-ಕುಂಬಳಕಾಯಿ ೩೦೬

ಹಡಿಕೆ-ಹೊಲಸು ೧೨೮
ಹಡೆ-ಪಡೆ ೫೩೭
ಹದಿರು-ಒಯ್ಯಾರ ೩೩೯
ಹಮುಳಿಗ-ಸಂತೋಷಿ ೫೧೩
ಹಪೆ-ಪ್ರೀತಿಸು ೨೧೭
ಹಮ್ಮು-ಅಹಂಕಾರ ೧೦೭೭
ಹರಿ-ನುಗ್ಗು ೭೩೦
ಹರಿ-ಪ್ರಾಣವಾಯು ೬೬೮
ಹರಿ-ಸಿಂಹ ೫೧೧
ಹರಿ-ಹಾವು ೪೩೫
ಹರಿಯ ಬೀದಿ-ಸೂರ್ಯಬೀದಿ ೫೬೧
ಹಲ್ಲಣ-ಜೀನು ೭೦೫
ಹಲ್ಲಣಿಸು-ಕಟ್ಟಿಕೊ ೪೬೬
ಹವಣಿಸು-ಜೋಡಿಸು ೩೬೪
ಹಳೆಯರು-ಪುರಾತನರು ೨೮೩
ಹಂದೆ-ಹೇಡಿ ೫೨೩
ಹಾತೆ-ಹುಳ ೪೦೦
ಹಾಳೆ-ಪೊಕ್ಕೆ ೩೮೭
ಹಿಟ್ಟುಗಟ್ಟು-ಪುಡಿಮಾಡು ೪೬೯
ಹೂಣೆ-ಛಲದಿಂದ ೩೭೫
ಹೂಸಕ-ಧರಿಸುವವ ೪೭೪
ಹೇಗ-ಪೆದ್ದ ೬೪೫
ಹೇಳಿಗೆ-ಬುಟ್ಟಿ ೩೯೦
ಹೊತ್ತಾರೆ-ನಸುಕು ೫೫೭
ಹೊದ್ದಿಗೆ-ಹೊಂದಿಕೆ ೫೬೦
ಹೊಲಬು-ದಾರಿ ೭೬೨
ಹೊಲ್ಲಹ-ದುಷ್ಟ ೧೧೦೩
ಹೊಂದು-ಸಾವು ೭೮೯
ಹೋರು-ಕಾದಾಡು ೨೧೮

# ತೋಂಟದ ಸಿದ್ಧಲಿಂಗ ಶಿವಯೋಗಿಗಳ ವಚನಗಳ ಅಕಾರಾದಿ


| ವಚನಗಳ ಆರಂಭ | ವಚನ ಸಂಖ್ಯೆ | ವಚನಗಳ ಆರಂಭ | ವಚನ ಸಂಖ್ಯೆ |
|---|---|---|---|
| ಅಕ್ಕನ ತಮ್ಮನ ಸಂಗದಿಂದ | ೬೭೪ | ಅಂಗ ಹಲವರ ಮೇಲೆ | ೧೦೩ |
| ಅಕ್ಷರವೆಂಬುದು ಲೆಕ್ಕದೊಳಗು | ೩೩೦ | ಅಂಗಾಲ ಕಣ್ಣವರ ಪದವಿ | ೫೨೧ |
| ಅಗ್ನಿಯ ಸಂಪುಟದ ದೆಸೆಯಿಂದ | ೨೪೬ | ಅಜ ಹರಿ ಸುರ ಮನು ಮುನಿಗಳ | ೧೨೩ |
| ಅಗ್ನಿಯೆ ಅಂಗವಾದ ಪ್ರಸಾದಿಯಲ್ಲಿ | ೩೦೧ | ಅಜ ಹರಿ ಸುರರಿಗೆ ಶರೀರವ | ೫೧೧ |
| ಅಂಗಕ್ಕೆ ಆಚಾರವೇ ಆಶ್ರಯ | ೨೧೪ | ಅಟ್ಟಪದಾರ್ಥವೆಲ್ಲವ ಮೆಟ್ಟಿ | ೨೩೬ |
| ಅಂಗಗುಣಮುಂಟೆ ಲಿಂಗವ | ೩೧೪ | ಅಟ್ಟುವ ಅಡಲುಂಟೆ? | ೬೨೧ |
| ಅಂಗಗುಣವಳಿದು ಲಿಂಗಗುಣ | ೫೬೯ | ಅಡವಿಯ ಹುಲ್ಲ ಮೇದ ಪಶು | ೧೩೬ |
| ಅಂಗಡಿಯ ಬೀದಿಯಲ್ಲಿ | ೩೪೨ | ಅಡಿಗಡಿಗೆ ಭವಹರನ | ೧೮೯ |
| ಅಂಗದ ಕಂಗಳ ಕಳೆಯೊಳಗೊಂದು | ೪೮೫ | ಅಣಿಮಾ ಗರಿಮಾ ಲಘಿಮಾ | ೪೫೫ |
| ಅಂಗದ ಕಳೆ ಲಿಂಗದಲ್ಲಿ | ೪೫೮ | ಅಂಡಜ ಪಿಂಡಜ ಬಿಂದುಜ | ೨೦ |
| ಅಂಗದ ಕೊನೆಯಲ್ಲಿ ಅಲೆದಾಡುವ | ೫೮೬ | ಅದ್ಭುತದಾಕಾಶದಲ್ಲಿ ಶುಭ್ರ | ೩೩೨ |
| ಅಂಗದ ಕೊನೆಯಲ್ಲಿ ದೊನೆಯಲ್ಲಿ | ೬೫೩ | ಅದ್ವೈತವ ನುಡಿವ ಬದ್ಧ ಭವಿ | ೪೨೫ |
| ಅಂಗದ ಭಂಗವ ಲಿಂಗಸಂಗದಿಂದ | ೪೭೭ | ಅನಾದಿ ಕರ್ಮಿಗಳಾಗಿ ಅವಾಂತರ | ೪೯ |
| ಅಂಗದ ಮೇಲೆ ಲಿಂಗಕಾಣಲ್ಪಡು | ೨೪೩ | ಅನಾದಿಗಣೇಶ್ವರನ ಶಿಷ್ಯ | ೮ |
| ಅಂಗದ ಮೇಲೊಂದು ಲಿಂಗವ | ೩೨೦ | ಅನಾದಿ ಪರಶಿವತತ್ವದಿಂದ | ೫೩ |
| ಅಂಗನೆಯ ಚಿತ್ತ ರಮಣನ | ೨೮೨ | ಅನಾದಿ ಭವಿಗಳಾಗಿ ಅವಾಂತರ | ೫೦ |
| ಅಂಗಭಾವದಿಂದ ಲಿಂಗಮುಖವನು | ೨೫೮ | ಅನಾದಿ ಮಲಿನರಾಗಿ ಆದಿನಿರ್ಮಲ | ೫೧ |
| ಅಂಗ ಲಿಂಗ ಲಿಂಗ ಅಂಗವೆಂಬಿರಿ | ೨೩೯ | ಅನಾದಿಯಾಗಿ ಪಶುಪಾಶ | ೭೧ |
| ಅಂಗ ಲಿಂಗ ಸಂಬಂಧದ ನಿಲುಕಡೆ | ೩೬೩ | ಅನಾದಿಯಾಗಿ ಶಿವನುಂಟು | ೭೬ |
| ಅಂಗವಾದು ಲಿಂಗವಾದು | ೩೨ | ಅನಾದಿ ಶಾಶ್ವತಂ ನಿತ್ಯಂ | ೧೯೦ |
| ಅಂಗವಿಲ್ಲದ ಅನಾಮಯನ | ೩೯೩ | ಅಸ್ಪೃತ ಅನಾಚಾರ | ೨೬೪ |
| ಅಂಗವಿಲ್ಲದ ನಿರಂಗಿಗೆ | ೬೯೫ | ಅಂತರಂಗದಲ್ಲಿ ಅರುಹು | ೫೦೫ |
| ಅಂಗವಿಲ್ಲದ ಮಂಗಳಾಂಗಿಯ | ೬೯೩ | ಅಂತರಂಗದಲ್ಲಿ ಜ್ಞಾನ | ೨೪೫ |
| ಅಂಗವುಳ್ಳನಕ್ಕರ ಲಿಂಗ | ೬೯೯ | ಅಂತರವಿಲ್ಲದಂದು ಬಾಹ್ಯವಿಲ್ಲ | ೧೩ |

| ವ. ಆರಂಭ | ವ. ಸಂ. | ವ. ಆರಂಭ | ವ. ಸಂ. |
|---|---|---|---|
| ಅನಾದಿ ಬಿಂದು ಉಪಯಿಸದಂದು | ೧೫ | ಆಚಾರವಿಲ್ಲದ ಗುರು | ೨೭೧ |
| ಅಪ್ರ ಶಿಖಾಮಂಡಲದಲ್ಲಿ | ೬೦೧ | ಆಜ್ಞಾ ಕರ್ತೃವಿನ ಅಂಗನೆಗೆ | ೬೭೫ |
| ಅಮೇಧ್ಯವ ಭುಂಜಿಸುವ ಸೂಕರ | ೪೦೬ | ಆಜ್ಞಾಚಕ್ರದ ದ್ವಿದಳಪದ್ಮ | ೫೪೧ |
| ಅಂಬರದ ಮಂಡಲದಲ್ಲಿ | ೩೭೯ | ಆಡಿನ ಶಿರದ ಮೇಲೆ | ೧೫೪ |
| ಅಯಿವರ ಮುಖದಲ್ಲಿ | ೧೫೬ | ಅಣವಮಲ ಮಾಯಾಮಲ | ೧೧೭ |
| ಅಯ್ಯಾವಾಕ್ಯನೂ ಮೀರಿ | ೧೦೫ | ಆತ್ಮಪ್ರಕೃಂದ ಈಶ್ವರನ | ೮೮ |
| ಅರಳೆಯೆಲೆಯ ಮೇಯಬಂದ | ೩೪೦ | ಆತ್ಮನೂ ಉಂಟು ಮಲಮಾಯಾ | ೭೦ |
| ಅರಿವಿನ ಕುರುಹನರಿಯದೆ | ೩೫೦ | ಆತ್ಮನೇ ಅಂಗವಾದ ಐಕ್ಯ | ೫೭೮ |
| ಅರುಹಿನ ಜ್ಯೋತಿಯೆದ್ದಿತ್ತು | ೫೦೯ | ಆದಿ ಅಂಗನೆಯ ಉದರ | ೫೮೮ |
| ಅರುಹು ತಲೆದೋರಿತೆಂದು | ೧೬೫ | ಆದಿ ಅನಾದಿಗಳಿಲ್ಲದಂದು | ೧೮ |
| ಅರ್ಥಪ್ರಾಣಾಭಿಮಾನವನು | ೨೧೩ | ಆದಿ ಅನಾದಿಗಳೇನೂ ಇಲ್ಲದ | ೪೮ |
| ಅಷ್ಟದಳ ಕಮಲವ ಮೆಟ್ಟಿ | ೩೫೨ | ಆದಿ ಆಧಾರದಲ್ಲಿ ವೇಧಿಸಿದ | ೧೮೫ |
| ಅಷ್ಟವಿಧಾರ್ಚನೆಯ ಮಾಡಿದರೇನೋ | ೨೨೦ | ಆದಿ ಪರಮೇಶ್ವರನು | ೪೬ |
| ಅಷ್ಟಷಷ್ಟಿ ಕೋಟಿ ತೀರ್ಥವ | ೨೫೪ | ಆದಿ ಪರಶಿವಬಿಂದುವಿನಿಂದ | ೫೧೫ |
| ಅಸುವಳಿದ ಕಾಯದಂತೆ | ೨೭೨ | ಆದಿಪಿಂಡ ಮಧ್ಯಪಿಂಡ | ೭೯ |
| ಅಹಂಕಾರಭಾವ ಅವಿದ್ಯಾಭಾವ | ೧೩೨ | ಆದಿ ಮಧ್ಯಾವಸಾನ | ೧೦ |
| ಅಹಂ ಬ್ರಹ್ಮವೆಂದೆಂಬ | ೬೭೮ | ಆದಿಯಲ್ಲಿ ಈಶ್ವರನು ಕೂಗಿದ | ೩೫೩ |
| ಅಳಿಯಗೂಳಿಗೆ ಹೋದಾತ | ೪೮೯ | ಆದಿಯಲ್ಲಿ ನಾ ಹುಟ್ಟುವಂದು | ೨೬೧ |
| ಆಕಾರ ನಿರಾಕಾರವಿಲ್ಲದಂದು | ೫೪೫ | ಆದಿಯಲ್ಲಿ ಶಿವತತ್ವದಲ್ಲಿ | ೬೧ |
| ಆಕಾರವಿಲ್ಲದಾತಂಗೆ | ೫೦೦ | ಆದಿಯಲ್ಲಿ ಶಿವಬೀಜ | ೪೩ |
| ಆಕಾಶದೊಳಗಣ ಆಕಾಶ | ೩೩೫ | ಆದಿಯಲ್ಲಿ ಹುಟ್ಟಿದಾತನು | ೫೧೬ |
| ಆಕಾಶವರ್ಣದ ಅಂಗನೆ | ೫೦೩ | ಆದಿಯ ಸಂಗಲಾದವನ | ೨೩ |
| ಆಕಾಶವೇ ಅಂಗವಾದ ಶರಣ | ೪೪೪ | ಆದಿಯಾಧಾರದಲ್ಲಿ ಆದಿಲಿಂಗವ | ೩೭೩ |
| ಆಗಮವ ಬಲ್ಲೆ ಆಗಮವ ಬಲ್ಲೆ | ೩೫೫ | ಆದಿಯಾಧಾರವ ಮುಟ್ಟದ | ೫೧೭ |
| ಆಗಮಮೂರ್ತಿ ಅಂತರಾತ್ಮನೊಳ್ | ೩೫೭ | ಆದಿಯೊಳಗೆ ಆಧಾರವಿಪ್ಪದ | ೫೭೧ |
| ಆಚಾರ ಅನಾಚಾರವೆಂಬುದು ಇಲ್ಲ | ೩೨೭ | ಆಧಾರಚಕ್ರದಲ್ಲಿ ನಕಾರ | ೨೦೨ |
| ಆಚಾರಲಿಂಗಕ್ಕೆ ಗುರುಲಿಂಗವೇ | ೪೨೯ | ಆಧಾರದೊಳಗಣ ಜ್ಯೋತಿ | ೩೬೮ |
| ಆಚಾರಲಿಂಗಕ್ಕೆ ಪೃಥ್ವಿಯೆ | ೪೧೨ | ಆಧಾರಶಕ್ತಿ ಅನಾದಿಪುರುಷನ | ೫೦೪ |
| ಆಚಾರಲಿಂಗ ಗುರುಲಿಂಗ | ೬೮ | ಆಧಾರ ಸ್ವಾಧಿಷ್ಠಾನ | ೬೧೪ |
| ಆಚಾರಲಿಂಗದ ಪ್ರಸನ್ನತ್ವ | ೬೬೦ | ಆ ಭಕ್ತಂಗೆ ಲಿಂಗವೇ ಪ್ರಾಣ | ೫೩೬ |
| ಆಚಾರಲಿಂಗಸಂಬಂಧಿಯಾದ ಬಳಿಕ | ೬೬೫ | ಆಯತಲಿಂಗದಲ್ಲಿ ಅಂಗಗುಣ | ೨೨೧ |
| ಆಚಾರಲಿಂಗಾನುಭಾವದಿಂದ | ೨೨೫ | ಆಯತಲಿಂಗ ಸಂಬಂಧ | ೧೮೧ |

| ವ. ಆರಂಭ | ವ. ಸಂ. | ವ. ಆರಂಭ | ವ. ಸಂ. |
|---|---|---|---|
| ಆರಾರರಿಂದ ಮೀರಿ | ೬೨೯ | ಉತ್ತರ ಲೋಕದಲಿ ಸತ್ಯಜ್ಞಾನಾನಂದ | ೬೩೦ |
| ಆರೆಂಬ ಸಂಖ್ಯೆ ಆರೂ ಇಲ್ಲದ | ೬೦೭ | ಉದಯಪೂಜೆ ಉತ್ಪತ್ತಿಗೆ ಬೀಜ | ೫೬೨ |
| ಆಲಿಯ ಕೊನೆಯಲ್ಲಿ | ೩೮೭ | ಉದಯಮುಖದ ಜ್ಯೋತಿ | ೫೬೩ |
| ಅವುದಾನೊಂದು ಪದಾರ್ಥವ | ೨೪೨ | ಉದಯಮುಖದ ಜ್ಯೋತಿಯಿಂ | ೫೫೬ |
| ಆಶಾಪಾಶವೆಂಬ ಆದಿವ್ಯಾಧಿ | ೩೬೧ | ಉದಯಮುಖದ ಪ್ರಸಾದ | ೬೪೮ |
| ಆ ಸತ್ತು ಆ ಚಿತ್ತು | ೩೧ | ಉದ್ಧವ ಮೇಲಣ ಕಪಿ | ೬೬೭ |
| ಇಚ್ಛಾಶಕ್ತಿ ತನ್ನಗರ್ಭದಲ್ಲಿ | ೪೯೨ | ಉರಿಗೆ ತೋರಿದ ಬೆಣ್ಣೆ | ೧೧೧ |
| ಇದು ಕಾರಣ ಎನ್ನ ಮಾನಸ | ೨೧೧ | ಉರಿಯ ಗಗನದೊಳಗೆ | ೪೯೧ |
| ಇದು ಕಾರಣ ದೇವಗುರು | ೧೯೯ | ಊಟದ ದೆಸೆಯಿಂದ ಹೆಚ್ಚಿ | ೫೦೭ |
| ಇದು ಕಾರಣ ಸರ್ವಾಂಗೋದ್ಧೂಳನ | ೧೮೭ | ಊರನಾಶ್ರಯಿಸುವನೆ | ೩೬೦ |
| ಇಂತೀ ಹಿಂದೆ ಹೇಳಿದ | ೭೮ | ಊರ ಮಧ್ಯದಲ್ಲಿ ಹುಟ್ಟಿದ ಕಿಚ್ಚು | ೯೬ |
| ಇಂತು ಅಂತರಂಗದಲ್ಲಿ | ೧೭೬ | ಊರ ಹೊರಗಣ ಮನೆಯೊಳಗಣ | ೧೦೨ |
| ಇಂತು ಕ್ರಿಯೆಯಿಲ್ಲದ ಜ್ಞಾನ | ೨೪೮ | ಊರ ಹೊಲನ ಮೇದ ಬಸವ | ೧೧೪ |
| ಇಂದ್ರಿಯಂಗಳಿಗೊಂದೊಂದು | ೩೫೬ | ಊರಿಗೆ ಹೋಗುವ | ೧೪೯ |
| ಇಂದ್ರಿಯಂಗಳುಳ್ಳನ್ನಕ್ಕರ | ೨೮೩ | ಊರಿಗೆ ಹೋಹ ದಾರಿಯಲ್ಲಿ | ೩೪೩ |
| ಇನ್ನಿವಕ್ಕೆ ಅರ್ಪಿತ ಮುಖಂಗಳ | ೪೧೩ | ಊರೊಳಗೆ ಅನೇಕ ಜ್ಯೋತಿಯ | ೩೬೬ |
| ಇನ್ನೀ ಲಿಂಗಮುಖಕ್ಕೆ ಅರ್ಪಿಸುವ | ೪೧೪ | ಊರೊಳಗೆ ಆರು ಮಂಟಪವ | ೫೯೨ |
| ಇಪ್ಪತ್ತೈದು ಧರೆಯೊಳಗೆ | ೪೮೩ | ಊರೊಳಗೆ ಉದಕ ತುಂಬಿ | ೧೨೬ |
| ಇಬ್ಬರಿಗೊಬ್ಬ ಮಗ ಹುಟ್ಟಿ | ೩೯೨ | ಎಡದ ಕೈಯಲ್ಲಿ ಲಿಂಗವ ಹಿಡಿದು | ೬೪೯ |
| ಇವು ಮೂರೂ ನಿತ್ಯವಾದಡೆ | ೬೯ | ಎಡನಿಲ್ಲ ಬಲನಿಲ್ಲ | ೨೭ |
| ಇಷ್ಟಲಿಂಗಕ್ಕೆ ಕೊಡದೆ | ೨೨೮ | ಎನಗೆ ಕಾಯವುಂಟೆಂಬರು | ೨೫೯ |
| ಇಷ್ಟಲಿಂಗದ ಪೂಜೆಯಾವುದು | ೫೩೧ | ಎನ್ನ ಕಾಯ ಕಾಮಾರಿಯಲ್ಲಿ | ೨೭೮ |
| ಇಷ್ಟಲಿಂಗದ ಮುಖವಾವುದು | ೫೩೦ | ಎನ್ನ ತನುವಿಕಾರದ ಭಯ | ೧೨೮ |
| ಇಷ್ಟಲಿಂಗ ಪ್ರಾಣಲಿಂಗವೆನುತಿಪ್ಪರು | ೩೬೨ | ಎನ್ನಂತರಂಗದ ಆತ್ಮನೊಳಗೆ | ೩೧೮ |
| ಇಷ್ಟಲಿಂಗವ ತೋರಿ ನಾವು | ೨೬೯ | ಎನ್ನಂತರಂಗದೊಳಗಣ ಆತ್ಮಲಿಂಗ | ೩೬೭ |
| ಇಷ್ಟಲಿಂಗಾರ್ಪಣವಾವುದು | ೫೩೨ | ಎನ್ನ ಪ್ರಾಣನೊಳಗೆ ಹೂಳಿರ್ದ | ೧೭೭ |
| ಇಹಲೋಕದಲ್ಲಿ ಲಿಂಗವ | ೨೨೩ | ಎನ್ನ ಭವಿತನವ ಕಳೆದು ಭಕ್ತನ | ೧೫೭ |
| ಈಚಲ ತಿಂದ ನರಿ | ೩೫೪ | ಎನ್ನ ಮನಸ್ಸು ಹೊನ್ನು ಹೆಣ್ಣು | ೧೩೧ |
| ಈ ಪ್ರಕಾರದಲ್ಲಿ ಗುರುವಿನ | ೧೭೫ | ಎನ್ನರೂಹೆ ನಿನ್ನರೂಹಯ್ಯ | ೪೩೨ |
| ಈ ಪಿಂಡಜ್ಞಾನದ ಕಳೆ | ೮೩ | ಎನ್ನ ರೇಚಕ ಪೂರಕ | ೨೦೮ |
| ಈ ಲೋಕದಲ್ಲಿ ಸತ್ಕ್ರಿಯನೆ | ೨೪೯ | ಎಮ್ಮೆಯನ್ನೇರಿದ ಎತ್ತು | ೧೪೬ |
| ಉಂಗುಷ್ಠದಲ್ಲಿ ಸರ್ಪದಷ್ಟವಾಗಲು | ೨೮೯ | ಎರಡೆಂಬನ್ನಕ್ಕರ ನೆರಡಾಯಿತ್ತು | ೩೩೧ |

| ವ. ಆರಂಭ | ವ. ಸಂ. | ವ. ಆರಂಭ | ವ. ಸಂ. |
|---|---|---|---|
| ಎಲೆಗಳೆದ ವೃಕ್ಷದಂತೆ | ೬೨೮ | ಕಟ್ಟರಸಿಲ್ಲದ ರಾಜ್ಯದಂತೆ | ೪೦೮ |
| ಎಲ್ಲರು ಅಪುದೆಂಬುದು | ೩೨೪ | ಕಡೆಯಲ್ಲಿ ಮೊದಲಲ್ಲಿ | ೨೬೦ |
| ಏನನೋದಿದರೇನಯ್ಯ | ೨೧೮ | ಕಂಡೊಂದ ನುಡಿವುದೀಲೋಕ | ೬೭೧ |
| ಏನೂಯೇನೂ ಇಲ್ಲದ ಠಾವಿನಲ್ಲಿ | ೫೭೬ | ಕಣ್ಣಿನಲ್ಲಿ ಕಂಡು ಮನದಲ್ಲಿ | ೪೬೯ |
| ಏಳು ಕಮಲದ ಮೇಲೆ | ೬೯೭ | ಕಣ್ಣಿನಲ್ಲಿ ಕಾಮ ಮನದಲ್ಲಿ | ೨೬೫ |
| ಏಳು ಪೀಠದೊಳಗೆ | ೪೩೧ | ಕಣ್ಣಿಲ್ಲದಾತ ಕಾಣಬಲ್ಲನೆ | ೫೨೩ |
| ಐದು ಬಣ್ಣದ ಊರಿಂಗೆ | ೩೫೧ | ಕತ್ತಲೆಯನೊಳಕೊಂಡ ಬೆಳಗಿ | ೨೬೨ |
| ಐದು ಬಣ್ಣದ ಗಿಡುವಿಂಗೆ | ೪೪೨ | ಕತ್ತಲೆಯ ಪುರವ ಕಳ್ಳರು | ೧೪೩ |
| ಐದೂರ ಹೊಲದಲ್ಲಿ ಕೆಟ್ಟ | ೩೭೧ | ಕತ್ತಲೆಯ ಮನೆಯಲ್ಲಿ ಕಾಮಿನಿ | ೫೯೯ |
| ಒಡಲು ಉಮಾಪತಿಯಲ್ಲ ನಿಂದು | ೩೧೨ | ಕತ್ತಗೇಕಯ್ಯಾ ಕಡಿವಾಣ | ೪೦೨ |
| ಒಂಟೆಯ ತಲೆಯಲ್ಲಿ ಎಂಟಾನೆ | ೩೮೯ | ಕನಕಗಿರಿ ನಿವಾಸಂ | ೩ |
| ಒಂದು ಪದದೊಳಗೆ | ೫೨೦ | ಕನಸಿನ ಕಾಮಿನಿಯರ ರೂಪ | ೫೫೧ |
| ಒಂದೆರಡಾಯಿತ್ತೆಂಬುವದು ಭ್ರಮೆ | ೬೯೮ | ಕನಸಿನಲಿ ಬಂದು ನೆರೆವ | ೫೫೨ |
| ಒಂದೇ ವೇಳೆ ಪುರುಷಾಹಾರ | ೨೪೧ | ಕಂಥೆ ಖಟ್ವಾಂಗ ದಂಡ | ೪೬೪ |
| ಒಬ್ಬನಿಗಿಬ್ಬರು ಸ್ತ್ರೀಯರು ನೋಡಾ | ೫೦೨ | ಕಬ್ಬಿನ ಹೊರಗಣ ಸೋಗೆಯ | ೪೬೬ |
| ಒಬ್ಬನಿಂದಾದವಂಗೆ ಇಬ್ಬರ | ೪೯೯ | ಕರಣಂಗಳೆಂಬ ಕತ್ತಲೆಗವಿದು | ೧೨೪ |
| ಒಬ್ಬರುತ್ತಮರೆಂಬರು | ೬೯೯ | ಕರಿಯ ಕರದಲ್ಲಿ | ೩೯೪ |
| ಒಸಿ ಲೋಕಾಧೀನ | ೫೨೮ | ಕರಿಯ ಕಾಮಿನಿ ಉದರದಲ್ಲಿ | ೫೧೨ |
| ಒಳಗಿಟ್ಟುಕೊಂಡು ನಡೆದರೂ | ೨೯೩ | ಕರಿಯದಾನವನ ಶಿರದಲ್ಲಿ | ೫೯೧ |
| ಒಳಗಿಪ್ಪಾತನ ಹೊರಗೆ ನೋಡಿ | ೨೯೮ | ಕರಿಯ ಮಹಿಸನಿಗೊಂದು | ೫೮೧ |
| ಒಳಗೆ ನೋಡಿದರೆ ಒಳಗೆ | ೬೮೭ | ಕರಿಯ ಶಿರದಲ್ಲಿ ಬರಿಕ್ಕೆ ಹುಟ್ಟಿ | ೪೩೩ |
| ಒಳಗೆಂದೇನು ಹೊರಗೆಂದೇನು | ೫೭೦ | ಕರ್ಕಸನ ಕಂಗಳೊಳಗೆ | ೨೮೪ |
| ಒಳಗೆಂಬವನೊಬ್ಬ ಹೊರ | ೪೫೧ | ಕರ್ಣದ ಕೊನೆಯಲ್ಲಿ | ೪೯೫ |
| ಒಳಹೊರಗೆ ಭರಿತನಾಗಿ | ೮೧ | ಕರ್ಮಿಬಲ್ಲನೆ ಭಕ್ತಿಯಮರ್ಮವ | ೧೪೮ |
| ಒಳಹೊರಗೆಂಬಿ ಉಭಯ | ೧೬೪ | ಕರ್ಮೇಂದ್ರಿಯಂಗಳ ನಿರ್ಮೂಲ್ಯವ | ೩೨೩ |
| ಓಂಕಾರವೆ ಶಿವ | ೨೦೦ | ಕಲ್ಲ ಶರೀರವ ಧರಿಸಿ ಶಿಲಾ | ೫೧೯ |
| ಓಂಕಾರವೆ ನಾದಮಯ | ೨೦೬ | ಕಸನೀರ ತರುವ ದಾಸಿಗೆ | ೧೩೦ |
| ಓಂಕಾರವೆ ಪಂಚಭೂತಾತ್ಮಮಯ | ೨೦೩ | ಕಾಮದಿಂದ ಕರಗನು ಕ್ರೋಧ | ೬೩೯ |
| ಕಂಗಳ ಕಲೆಯಲ್ಲಿ | ೫೬೦ | ಕಾಮದಿಂದ ಕರಗಿದೆನಯ್ಯಾ | ೧೨೭ |
| ಕಂಗಳನೋಟ ಕರಸ್ಥಲದ | ೫೬೬ | ಕಾಯಕ್ಕಾಧಾರ ಭಕ್ತ | ೫೦೮ |
| ಕಟ್ಟರಸ[ನ] ಬಂದು | ೧೨೫ | ಕಾಯಕ್ಕೆ ಇಷ್ಟಲಿಂಗವೆಂದೆಂಬಿರಿ | ೨೨೯ |
| ಕಟ್ಟರಸಿಲ್ಲದ ರಾಜ್ಯ | ೪೮೨ | ಕಾಯಗೊಂಡು ಹುಟ್ಟಿಸಿ | ೧೩೯ |

| ವ. ಆರಂಭ | ವ. ಸಂ. | ವ. ಆರಂಭ | ವ. ಸಂ. |
|---|---|---|---|
| ಕಾಯದ ಮೇಲೆ ಲಿಂಗವ | ೨೨೪ | ಕ್ಷುತ್ತು ಪಿಪಾಸೆ ಶೋಕ ಮೋಹ | ೫೭೭ |
| ಕಾಯದ ರೂಪನ ಕಂಗಳು | ೬೯೨ | ಗಗನಮಂಡಲದಲ್ಲಿ ಹುಟ್ಟಿದ | ೯೭ |
| ಕಾಯದೊಳಗಣ ಜೀವ | ೫೯೦ | ಗಂಗಾಸ್ನಾನ ಕೋಟಾನುಕೋಟಿಗಿಂದ | ೧೯೨ |
| ಕಾಯಪ್ರಸಾದವ ಎನ್ನ ಕರಸ್ಥಲ | ೬೫೯ | ಗಂಡಗಿಂದ ಹೆಂಡತಿ ಮೊದಲೇ | ೧೬೨ |
| ಕಾಯ ಬತ್ತಲೆಯುದ್ದರೇನೊ | ೪೭೪ | ಗಂಡಂಗೆ ನಾಚಿದ ಹೆಂಡತಿ | ೨೫೧ |
| ಕಾಯ ಲಿಂಗಾರ್ಪಿತವಾಗಿ | ೪೧೯ | ಗಂಡಿಂಗೆ ಹೆಣ್ಣಿಲ್ಲದೆ | ೨೮೮ |
| ಕಾಯ ಲಿಂಗಾರ್ಪಿತವಾದ ಬಳಿಕ | ೨೮೦ | ಗಮನವುಳ್ಳನ್ನಕ್ಕರ ನಿರ್ಗಮನ | ೭೦೦ |
| ಕಾಯವಿಲ್ಲದ ಭಕ್ತ ಜೀವವಿಲ್ಲದ | ೬೩೩ | ಗರ್ಭದೊಳಗಣ ಶಿಶುವಿಂಗೆ | ೬೫೦ |
| ಕಾಯವೆಂಬ ಕೆರೆಗೆ | ೫೫೫ | ಗಾಜಿನ ಮನೆಯ ಮಾಡಿಕೊಂಡು | ೩೪೭ |
| ಕಾಯವೆಂಬ ವನಿತೆಗೆ ಆತ್ಮನೆಂಬವ | ೪೭೨ | ಗಾಳಿ ಗಂಧವನಪ್ಪಿದಂತೆ | ೬೮೪ |
| ಕಾಯಶೂನ್ಯನು ಕರಣಶೂನ್ಯನು | ೫೨೨ | ಗಾಳಿ ಬೀಸುವನ್ನಕ್ಕರ ಮರನು | ೪೨೩ |
| ಕಾರ್ಯನಲ್ಲಿ ಕಾರಣನಲ್ಲ | ೨೫ | ಗಿರಿಯ ಮೇಲಣ ಕೋಡಗ | ೧೩೮ |
| ಕಾಲದ ಗಂಡ, ಕರ್ಮದ ಗಂಡ | ೬೪೧ | ಗುಣತ್ರಯಂಗಳನಳಿದಾ | ೬೧೨ |
| ಕಾಲನ ಸುಟ್ಟ ಭಸ್ಮವ | ೧೯೧ | ಗುರು ಅಳಿವನು ಉಳಿವನು | ೧೭೧ |
| ಕಾಲವ್ಯಾಘ್ರ ಶಿರವನೊಡೆದು | ೫೮೭ | ಗುರುದೇವನೇ ಮಹಾದೇವನು | ೧೭೩ |
| ಕಾಲಾಗ್ನಿರುದ್ರನ ಲೋಕದಿಂದ | ೪೩೯ | ಗುರುಪ್ರಸಾದಕ್ಕೆ ಹೇಸುವರು | ೨೩೧ |
| ಕಾವಿಯ ಸೀರೆಯ ಒಡೆಯರು | ೩೪೯ | ಗುರುಪ್ರಸಾದಿಯಾದ ಬಳಿಕ | ೩೦೪ |
| ಕಾಳರಾತ್ರೆಯ ಮನೆಯ | ೩೭೫ | ಗುರುಮುಖದಿಂದ ಕೊಂಬುದು | ೨೩೫ |
| ಕಿಚ್ಚಿಗೂ ನೀರಿಗೂ | ೬೭೨ | ಗುರುಮುಖದಿಂದ ಕೊಂಬುದು | ೫೩೩ |
| ಕಿವಿಯಿಂದ ಕೇಳಿದ್ದು | ೬೫೬ | ಗುರುಮುಖದಿಂದ ಪರಮಲಿಂಗ | ೨೨೨ |
| ಕುಂಡಲಿಯ ಒಲೆಯ ಭಾಂಡ | ೩೭೦ | ಗುರುಲಿಂಗ ಜಂಗಮದ ಭಕ್ತರೆಂದು | ೩೦೬ |
| ಕೆಂಜೆಡೆಯ ಭಾಳನೇತ್ರಂ | ೪ | ಗುರುವನರಿಯದ ಭಕ್ತ | ೬೩೪ |
| ಕೆರೆಯೊಡೆದ ಬಳಿಕ ತೂಬು | ೬೭೬ | ಗುರುವನು ಮಹಾದೇವನನು | ೧೬೬ |
| ಕೆಸರಿಲ್ಲದ ಭೂಮಿಯಲ್ಲಿ | ೫೫೮ | ಗುರುವ ಮುಟ್ಟಿ ಬಂದಲ್ಲಿ | ೨೩೨ |
| ಕೇಡಿಲ್ಲದ ಗುರುವಿಂಗೆ | ೧೭೦ | ಗುರುವಿನ ಮೂರ್ತಿ ನಿರಾಕಾರವು | ೫೩೫ |
| ಕೈಮರೆದು ಕಾದುವ ಕಾಳಗ | ೨೭೭ | ಗುರುವಿನಿಂದ ಉಪದೇಶವ ಪಡೆದು | ೧೬೮ |
| ಕೈಯಲ್ಲಿ ಕುರುಹು ಬಾಯಲ್ಲಿ | ೩೩೭ | ಗುರುವಿನಿಂದ ಉಪದೇಶವ ಪಡೆದ | ೧೬೯ |
| ಕೈಯಲ್ಲಿ ಹಣ್ಣಿದ್ದಂತೆ ಮರನ | ೨೬೮ | ಗೇಣುದ್ದ ಒಡಲೊಳಗೆ | ೫೨೪ |
| ಕೊತ್ತಿಗೆ ಕೊಂಬು ಹುಟ್ಟಬಲ್ಲುದೆ | ೬೪೫ | ಘೃತ ಘೃತವ ಬೆರಸಿದಂತೆ | ೬೨೦ |
| ಕೊರಡು ಕೊನರಾಗಬಲ್ಲುದೆ | ೪೦೩ | ಚಂದ್ರನಿಂದಾದ ಕಲೆ ಚಂದ್ರನ | ೬೨೪ |
| ಕೋಡಗನ ಆಣಲ ಸಂಚಲದಲ್ಲಿ | ೧೦೪ | ಚಂದ್ರಮಂಡಲದಲ್ಲಿ ರವಿ | ೪೩೬ |
| ಕ್ರಿಯಾಸ್ವರೂಪವೆ ಲಿಂಗವೆಂದು | ೬೮೬ | ಚಂದ್ರಮನ ರಾಹು ಎಡೆಗೊಳಲು | ೩೭೬ |

| ವ. ಆರಂಭ | ವ. ಸಂ. | ವ. ಆರಂಭ | ವ. ಸಂ. |
|---|---|---|---|
| ಚಂದ್ರಮಸೊಳಗಣ ಕಳಹಂಸೆ | ೩೪೪ | ತನು ಉಳ್ಳನ್ನಕ್ಕರ ನಿನ್ನ | ೬೮೮ |
| ಚಾಳುವನ ಪಕ್ಕಿಯ | ೫೮೪ | ತನುತ್ರಯಂಗಳು ಸದ್ರೂಪವಪ್ಪ | ೬೨೫ |
| ಚಿತ್ತವ ಕಳೆಯಲ್ಲಿ ಸದ್ವಿವೇಕ | ೩೬೫ | ತನು ನಿನಗನ್ಯವೆಂದರಿಯದೆ | ೧೩೩ |
| ಚಿತ್ತವ ಬೊಂಬೆ ರೂಪಾಗಿರ್ದ | ೩೨೫ | ತನು ಲಿಂಗವಾದ ಬಳಿಕ | ೫೪೬ |
| ಚಿತ್ತದೊಳಗಣ ವಸ್ತು ಮುತ್ತಿನಂತೆ | ೫೯೭ | ತನುವ ಗುರುವಿಂಗೆ ಸವೆವುದು | ೩೧೦ |
| ಚಿತ್ತ ಬುದ್ಧಿ ಅಹಂಕಾರ | ೨೬ | ತನುವ ನೀವು ಸೋಂಕಿ ತನು | ೬೨೬ |
| ಚಿತ್ತಿನ ಮನೆಯಲ್ಲಿ ಸತ್ತಿಪ್ಪವ | ೯೩ | ತನುವನು ಶ್ರೀಗುರು ಕ್ರಿಯಾದೀಕ್ಷೆ | ೧೭೨ |
| ಚಿತ್ತೇ ಅಂಗ ಸತ್ತೇ ಪ್ರಾಣ | ೬೮೦ | ತನುವ ಮುಟ್ಟಿಪ ಮನ | ೨೭೬ |
| ಚಿದಾನಂದ ಸುಖಮಯವಪ್ಪ | ೧೫೧ | ತನುವಿಡಿದು ಕಾಬುದು | ೪೯೭ |
| ಚಿದ್ವಿಲಾಸವ ಮುಂದೆ ಇದಿರಿಟ್ಟು | ೧೫೨ | ತನುವಿನಲ್ಲಿ ಗುರು ಭರಿತ | ೨೩೮ |
| ಚಿನ್ನದ ಗಿರಿಯಲ್ಲಿ ಚಿನ್ಮಯ | ೯೨ | ತನುವಿನಲ್ಲಿ ಜ್ಞಾನಗುರುಸಾಹಿತ್ಯ | ೫೧೩ |
| ಚಿನ್ನದಿಂದಾದ ಬಂಗಾರ ಚಿನ್ನವ | ೫೨ | ತನುವಿನೊಳಗೆ ತನುವಾಗಿಪ್ಪಿರಯ್ಯಾ | ೨೫೭ |
| ಚಿನ್ನದಿಂದಲಾದ ಹಲವು | ೬೨೩ | ತನುವಿನೊಳಗೆ ಲಿಂಗ | ೬೫೧ |
| ಚಿನ್ಮಯವಸ್ತುವಿನಿಂದ | ೪೭ | ತನುವಿಲ್ಲದಂದಿನ | ೧೭ |
| ಚಿಲುಮೆಯ ಅರ್ಘ್ಯವಣೆಯ | ೩೧೧ | ತನುವೆಂಬುದೊಂದು ಹುತ್ತಕ್ಕೆ | ೧೨೨ |
| ಜಂಗಮಕೊಂದನಿಕ್ಕಿ ತಾನೊಂದ | ೩೦೨ | ತನು ಶುದ್ಧವಿಲ್ಲಾ ಎಂಬಾತ | ೧೮೩ |
| ಜಂಗಮ ಜಂಗಮವೆಂದರೇನೊ | ೪೬೩ | ತಂದೆ ತಾಯಿಗಳ ವಿಕಾರವ | ೧೩೪ |
| ಜಂಗಮದ ಗುಣವನು | ೪೬೦ | ತಂದೆಯ ವಧುವ ತಂದು | ೯೫ |
| ಜಂಗಮವೇನು ಕಾಮಿಯೆ? | ೪೬೧ | ತಂದೆಯ ಸಾಮರ್ಥ್ಯದಿಂದ | ೧೬೩ |
| ಜಂಗಮವೇನು ಸಂಗಿಯೆ? | ೪೬೨ | ತಂದೆಯಿಲ್ಲದ ತಾಯಿಯಿಲ್ಲದ | ೨೨ |
| ಜಲವೇ ಅಂಗವಾದ ಮಾಹೇಶ್ವರ | ೨೬೫ | ತನ್ನಂಗದ ಮೇಲೆ ಶಿವಲಿಂಗ | ೨೨೭ |
| ಜೀವನ ಬುದ್ಧಿ ಪರಮನ ಬುದ್ಧಿ | ೫೨೯ | ತನ್ನ ಸತಿ ತನ್ನ ಧನ | ೨೯೧ |
| ಜೀವ ಪವನನ ಬೆರಸಿದ | ೫೮೯ | ತನ್ನ ಹೃದಯಕ್ಕೆ ಲಿಂಗದ ಹೃದಯ | ೬೫೫ |
| ಜೇನುತುಪ್ಪದಲ್ಲಿ ಬಿದ್ದು ಸಾವ | ೩೯೯ | ತಲೆಯಲ್ಲಿ ಹುಟ್ಟಿದ ಕಣ್ಣು | ೪೪೧ |
| ಜ್ಞಾನಗಮ್ಯಂ ವೃಥಪ್ರಾಜ್ಞಂ | ೨ | ತಲೆವಾಲೊಸರಲು ನೆಲಬೆಂದು | ೩೭೮ |
| ಜ್ಞಾನಜ್ಯೋತಿಯ ಉದಯ | ೪೯೩ | ತಾನೆ ಬ್ರಹ್ಮವೆಂದು ಕರ್ತೃಹೀನನಾದ | ೪೫೨ |
| ಜ್ಯೋತಿಯ ತಮ ಎಡೆಗೊಂಡಂತೆ | ೪೦೫ | ತಾನೊಬ್ಬನು ಕೊಲುವರು ಹಲಬರು | ೩೮೫ |
| ಜ್ಯೋತಿಯಿದ್ದ ಮನೆಯಲ್ಲಿ ಕತ್ತಲೆ | ೨೮೧ | ತಾಪತ್ರಯಾದಿಗಳಳಿಯುವು | ೨೬೬ |
| ಡಂಬು ಮಚ್ಚರ್ಯಕ್ಕೆ | ೨೮೬ | ತಾಳಮರನ ಮೇಲೊಂದು | ೫೯೩ |
| ತತ್ವಚಿಂತಾಮಣಿಗಳೆಂಬ | ೧೯೪ | ತಾಳಮರನ ಹಿಡಿದು | ೩೮೬ |
| ತತ್ವಾತತ್ವವೆಂಬ ಮಿಥ್ಯಾಛಾಯೆ | ೫೦೧ | ತುಂಟಬಂಟಂಗೆ ನಂಟರು | ೩೪೮ |
| ತತ್ವಾರ್ಥವ ಬಲ್ಲೆವೆಂಬರಯ್ಯಾ | ೨೯೬ | ತುರಿಯ ಮೇಲೆ ಉಗುರ | ೧೧೨ |

| ವ. ಆರಂಭ | ವ. ಸಂ. |
|---|---|
| ತೈಲ ಬತ್ತಿ ಜ್ಯೋತಿಯ ಮುಟ್ಟಿ | ೩೧೫ |
| ದನುಜ ಮನುಜ ದಿವಿಜಲೋಕ | ೭ |
| ದನುಜ ಮನುಜ ದಿವಿಜರ | ೪೫೬ |
| ದಶದಳ ಕಮಲದಲ್ಲಿ ಶಶಿಕಳೆ | ೫೪೪ |
| ದೂರ್ವೆಯ ದಳವ | ೫೯೪ |
| ದೇವರ ಪೂಜಿಸಿ ಕಾಯ | ೧೩೭ |
| ದೇವಸಾಲೆಯಲ್ಲಿ ದಿವ್ಯಮೂರ್ತಿ | ೩೨೨ |
| ದೇವಸ್ತ್ರೀಯರ ಸಂಗಕ್ಕೆ | ೧೦೮ |
| ದೇಹದೊಡನೆ ಪ್ರಾಣ ಹುಟ್ಟಿತ್ತಯ್ಯಾ | ೧೭೪ |
| ದೇಹವ ಮರೆಗೊಂಡಿಪ್ಪ ಆತ್ಮ | ೮೦ |
| ದೇಹವೇ ದೇಗುಲ | ೫೫೪ |
| ದೇಹಾದಿ ಗುಣವಿಲ್ಲದ | ೪೫೪ |
| ದ್ವಾದಶದಳ ಮಂಟಪದಲ್ಲಿ | ೫೪೩ |
| ದ್ವೈತಿಯಲ್ಲ ಅದ್ವೈತಿಯಲ್ಲ | ೬೨ |
| ಧರೆಯ ಮೇಲಣ ಅರೆಯಲ್ಲಿ | ೪೪೭ |
| ಧರೆಯಾಕಾಶದ ಮಧ್ಯದಲ್ಲಿ | ೪೮೬ |
| ನಕಾರವೇ ಪೃಥ್ವಿ | ೨೦೧ |
| ನಡುಮನೆಯೊಳಾಡುವ | ೧೩೫ |
| ನಡುವಳ ಮಂಟಪದಲ್ಲಿ | ೪೨೫ |
| ನದಿವಾಸಿಗಳು ವನವಾಸಿಗಳು | ೩೫೯ |
| ನಂದೀಶ್ವರ ಭೃಂಗೀಶ್ವರ | ೫೫ |
| ನರರಂತೆ ನಡೆವುತ್ತಿಪ್ಪಿರಿ | ೬೨೨ |
| ನವಿಲಾಡಿತೆಂದು ಕೆಂಬೋತ | ೨೧೯ |
| ನಾದ ಗುರುಮುಖವೆಂದೆಂಬರು | ೫೭೩ |
| ನಾದಪ್ರಿಯಂ ನಾದಮಯಂ | ೬ |
| ನಾದಬಿಂದು ಕಳಾಭೇದವ | ೩೭೨ |
| ನಾನು ನೀನೆಂಬ ಉಭಯ | ೬೬೮ |
| ನಾನೆಂಬುದು ಅಹಂಕಾರ | ೫೬೭ |
| ನಾನೊಬ್ಬನುಂಟೆಂಬವಂಗೆ | ೫೭೫ |
| ನಾಮ ರೂಪು ಕ್ರಿಯೆಗಳೇನು | ೧೯೮ |
| ನಾಲಗೆಯ ಕೊನೆಯಲ್ಲಿ | ೪೯೬ |
| ನಿತ್ಯ ತೃಪ್ತನಿಗೆ ಹಸಿವಿನ | ೬೮೩ |
| ನಿತ್ಯ ನಿರ್ಗುಣನು ನಿರ್ವಿಕಾರಿ | ೬೮೧ |
| ನಿತ್ಯ ನಿಜವಸ್ತುವಿನ | ೬೬೪ |
| ನಿತ್ಯ ನಿರಂಜನನು ಪರಶಿವ | ೬೩೬ |
| ನಿರವಯ ನಿರಾಮಯಂ | ೧ |
| ನಿರಾಕಾರ ಪರವಸ್ತು ತನ್ನ | ೪೫೩ |
| ನಿರಾಕಾರ ಪರವಸ್ತು ತಾನೆ | ೬೭೯ |
| ನಿರಾಕಾರ ಬಯಲು ಮೂರ್ತಿ | ೪೭೯ |
| ನಿರಾಕಾರವೇ ಸಾಕಾರವಾಗಿ | ೮೬ |
| ನಿರಾಧಾರ ನಿರಾಲಂಬ | ೨೮ |
| ನಿರೂಪ ರೂಪು ಮಾಡಬಲ್ಲಡೆ | ೨೯೭ |
| ನಿರ್ವಯ ಸ್ಥಳದಲ್ಲಿ ಬಿಳಿಯ | ೬೧೫ |
| ನಿರ್ವಿಕಾರಿಯ ಭಾವದಲ್ಲಿ | ೬೦೦ |
| ನಿಶ್ಚಲವೆಂಬ ನಿರ್ದೇಹಿಯ | ೬೮೯ |
| ನಿಃಕಲ ಶಿವತತ್ವದಲ್ಲಿ | ೩೩ |
| ನಿಃಕಲ ಶಿವನ ಮಧ್ಯದಲ್ಲಿ | ೬೩ |
| ನೀರಜದೊಳಗೆ ಹುಟ್ಟಿದ | ೯೦ |
| ನೀರಮೂಡೆಯ ಕಟ್ಟಿ | ೬೪೪ |
| ನೀರೊಳಗಣ ಪಾವಕನೆದ್ದು | ೪೪೫ |
| ನೀ ಹುಟ್ಟಿದೆಯಯ್ಯಾ | ೫೩೪ |
| ನೂಲೆಳೆಯ ತೋರದ | ೪೪೯ |
| ನೂಲೆಳೆಯ ತೋರದ ಪರುವಿಂಗೆ | ೩೭೭ |
| ನೆನಹಿಲ್ಲದ ಘನವಸ್ತು | ೭೩ |
| ನೆಲನಿಲ್ಲದ ನಿರ್ಮಲದ | ೬೬೨ |
| ನೆಲನಿಲ್ಲದ ಬಯಲು ಭೂಮಿಯಲ್ಲಿ | ೫೫೩ |
| ನೆಲನಿಲ್ಲದ ಭೂಮಿಯಲ್ಲಿ | ೩೮೨ |
| ನೆಲ ನೀರು ಕಿಚ್ಚು ಗಾಳಿ | ೨೮೭ |
| ನೆಲ್ಲುದ್ದ ಮರನನೇರಿ | ೧೨೧ |
| ನೇಮ ನೆಲಗತವಾಯಿತ್ತು | ೨೯೯ |
| ನೋಟವಾಗದ ಮುನ್ನ | ೫೬೪ |
| ನೋಡಿಹೆನೆಂದರೆ ನೋಟ | ೬೧೮ |
| ಪಂಚಭೂತಂಗಳುತ್ಪತ್ತಿ | ೨೧ |
| ಪಂಚಭೂತೇಂದ್ರಿಯಂಗಳ | ೪೭೬ |

| ವ. ಆರಂಭ | ವ. ಸಂ. |
|---|---|
| ಪಂಚಭೌತಿಕ ತತ್ವಂಗಳೆಂಬ | ೫೪೮ |
| ಪಂಚಮುದ್ರೆ ಪಂಚಮುದ್ರೆ | ೪೬೫ |
| ಪಂಚವಕ್ತ್ರಂ ದಶಭುಜಂ | ೫ |
| ಪಂಚವಿಂಶತಿ ತತ್ವಾಶ್ರಯ | ೩೩೬ |
| ಪಂಚಶಕ್ತಿಯನು ಪಂಚಸಾದಾಖ್ಯ | ೩೬ |
| ಪಂಚಾಕ್ಷರವೆ ಪಂಚಮುಖವಾಗಿ | ೨೦೭ |
| ಪಂಚೇಂದ್ರಿಯ ಸಪ್ತಧಾತುಗಳ | ೨೭೪ |
| ಪಟ್ಟಣ ಪಾಳೆಯದೊಳಗೆ | ೧೨೦ |
| ಪಟ್ಟಸಾಲೆಯ ಗದ್ದುಗೆಯೊಳಗೆ | ೩೪೬ |
| ಪಡುವ ಕಚ್ಚಿದ ನಾಯಿ | ೧೧೮ |
| ಪತಿಭಕ್ತೆಯಾದರೆ ತನ್ನ ಪತಿಗೆ | ೨೨೬ |
| ಪರಮಾರ್ಥವ ನುಡಿದು | ೪೬೭ |
| ಪರಶಕ್ತಿ ಬಂದು ಪಶುಪತಿಯ | ೬೦೫ |
| ಪರಶಕ್ತಿ ಶಾಂತಿಯೆನಲೂ | ೩೪ |
| ಪರಶಿವನ ಜ್ಞಾನಚಕ್ಷುವಿನಲ್ಲಿ | ೧೯೫ |
| ಪರಶಿವನಿಂದೆ ಚಿಚ್ಛಕ್ತಿ | ೬೫ |
| ಪರುಷದ ಗಿರಿಯಲ್ಲಿ | ೫೮೫ |
| ಪರುಷ ಸೋಂಕಲು | ೨೩೪ |
| ಪರುಷ ಸೋಂಕಿಯೂ | ೪೫೯ |
| ಪವನನ ವೆರಸಿದ | ೫೮೯ |
| ಪಶುಪಾಶ ಮಲಮಾಯಾ | ೭೨ |
| ಪಶುವನೇರಿದ ಕೋಣ | ೧೪೫ |
| ಪಶುವಿನ ಉದರದೊಳಗಿಪ್ಪ | ೯೮ |
| ಪಶ್ಚಿಮಚಕ್ರದಲ್ಲಿ ನಿತ್ಯ | ೫೩೮ |
| ಪಿಂಡ ಬ್ರಹ್ಮಾಂಡವನು ಕಂಡು | ೬೦೨ |
| ಪಿಂಡಾಕಾಶದೊಳು ಅಖಂಡ | ೬೭೬ |
| ಪಿಂಡಾಂಡದ ಮೇಲೊಂದು | ೩೮೦ |
| ಪುರಜನಂಗಳ ಮಚ್ಚಿಸುವಾಗ | ೩೨೬ |
| ಪುರುಷಾಮೃಗದ ಕೈಯಲ್ಲಿ | ೯೪ |
| ಪೃಥ್ವಿ ಅಪ್ಪು ತೇಜ ವಾಯು | ೧೧ |
| ಪೃಥ್ವಿಯ ಮೇಲಣ ಕಲ್ಲತಂದು | ೨೭೦ |

| ವ. ಆರಂಭ | ವ. ಸಂ. |
|---|---|
| ಪೃಥ್ವಿ ಸುಚಿತ್ತ ಘ್ರಾಣ ಗಂಧ | ೪೧೮ |
| ಪ್ರಣಮವೆ ಪರಬ್ರಹ್ಮವು | ೨೦೯ |
| ಪ್ರಥಮದಲ್ಲಿ ನಿರಾಕಾರ ಪರವಸ್ತು | ೩೮ |
| ಪ್ರಥಮದಲ್ಲಿ ಭಕ್ತನಾದೆನೆಂಬರು | ೨೧೫ |
| ಪ್ರವೃತ್ತಿ ನಿವೃತ್ತಿಯೆಂದು | ೬೨೭ |
| ಪ್ರಸಾದ ಪದಾರ್ಥ ಉಚ್ಚಿಷ್ಟ | ೪೧೭ |
| ಪ್ರಸಾದಿಗೆ ಲಕ್ಷಣವಾವುದೆಂದರೆ | ೩೦೩ |
| ಪ್ರಾಣನ ಪೂರ್ವಾಶ್ರಯವಳಿದು | ೨೪೭ |
| ಪ್ರಾಣಲಿಂಗವಲ್ಲಿ ಅಪಿಸ್ವಾಸಕಂಡು | ೨೫೫ |
| ಬಣ್ಣದ ಮಡಕೆಯ ಹೊತ್ತಾಡು | ೪೮೪ |
| ಬಯಲ ಮೂರ್ತಿಯ ಮಾಡಿ | ೧೭೮ |
| ಬಸವಣ್ಣನ ಪ್ರಸಾದದಿಂದ | ೫೩೭ |
| ಬಹುಜನಂಗಳು ಹೇತ | ೩೯೭ |
| ಬಿಂದು ಮಾಯಿಕವಿಲ್ಲದಂದು | ೧೬ |
| ಬಿಂದುವಿನ ಕೊಡನ ಹೊತ್ತಾಡು | ೪೮೮ |
| ಬಿಂದು ಶೂನ್ಯವಾದ ಲಿಂಗವೆ | ೬೩೮ |
| ಬೂದಿಯಲ್ಲಿ ಹೊರಳುವ ಕತ್ತೆ | ೪೦೦ |
| ಬ್ರಹ್ಮಪದವ ಪಡೆದೆನೆಂಬುದು | ೪೫೭ |
| ಬ್ರಹ್ಮರಂಧ್ರವಲ್ಲಿ ಅನಾದಿ | ೧೮೮ |
| ಬ್ರಹ್ಮರಂಧ್ರವೆಂಬ ಉತ್ತರೋತ್ತರ | ೩೧೬ |
| ಬ್ರಹ್ಮ ವಿಷ್ಣು ಪದವೆಂಬವು | ೫೧೮ |
| ಬ್ರಹ್ಮ ವಿಷ್ಣು ರುದ್ರ ಈಶ್ವರ | ೧೯ |
| ಬ್ರಹ್ಮವನಲು ಪರಬ್ರಹ್ಮವೆನಲು | ೪೨೮ |
| ಬ್ರಹ್ಮಾಂಡಲೋಕ ಹುಟ್ಟದತ್ತತ್ತ | ೬೦೮ |
| ಭಕ್ತಂಗೆ ಲಿಂಗವಾವುದು | ೪೧೧ |
| ಭಕ್ತಂಗೆ ಹಸ್ತವಾವುದು | ೪೧೦ |
| ಭಕ್ತನಂಗವಾವುದು | ೪೦೯ |
| ಭಕ್ತ ಮಾಹೇಶ್ವರ ಪ್ರಸಾದಿ | ೨೫೦ |
| ಭಕ್ತಾದ್ಯೈಕ್ಯಾಂತ | ೨೧೬ |
| ಭಕ್ತಿಸ್ಥಲ ಮಾಹೇಶ್ವರ ಸ್ಥಲದಲ್ಲಿ | ೭೦೧ |
| ಭಗಧ್ಯಾನವೆಂಬುವ ಬಂದಿ | ೧೦೭ |
| ಭರಿತಪೋನ ಭರಿತಪೋನ | ೨೩೭ |

| ವ. ಆರಂಭ | ವ. ಸಂ. |
|---|---|
| ಭವತಿಮಿರವೆಂಬ ಅಜ್ಞಾನ | ೧೫೮ |
| ಭವನಾಶಿನಿಯೆಂಬ ಶಿವಾಣಿಯ | ೩೮೧ |
| ಭವವೆಂಬ ಅರಣ್ಯವಲ್ಲಿ | ೧೫೯ |
| ಭಾವಮನಕ್ಕೆ ಲಿಂಗವ ಧರಿಸಿ | ೧೮೨ |
| ಭೂತಗ್ರಾಮದಲ್ಲಿ ಪಾತಕವ | ೬೦೪ |
| ಭೂಮಿಗೆ ಹುಟ್ಟಿದ ಕಲ್ಲು | ೪೦೭ |
| ಭೂಮಿಯ ಮೇಲೆ ಹುಟ್ಟಿದ ಕಲ್ಲು | ೪೧೬ |
| ಭೂಲೋಕದಲ್ಲಿ ಕುಳ್ಳಿರ್ದು | ೨೯೫ |
| ಭೋಜನ ಸಾಲೆಯ ಆಧಾರವ | ೩೨೮ |
| ಮಂಜರ ವೃಷ್ಟಿಯಲ್ಲಿ ತೋರುವ | ೩೩೮ |
| ಮಂಜರ ವೃಷ್ಟಿಯೊಳಗೆ ಚಂದ್ರಮ | ೫೫೦ |
| ಮಡಕೆಯ ತುಂಬಿ ಪಾವಡವ | ೩೦೭ |
| ಮಂಡೆ ಬೋಳಾಗಿ ಮೈ ಬತ್ತಲೆ | ೪೭೦ |
| ಮಣ್ಣ ಮಚ್ಚಿ ಮನೆಯ ಮಚ್ಚಿವ | ೩೦೫ |
| ಮಣ್ಣಿನಿಂದಾದ ಮಡಕೆ | ೬೮೨ |
| ಮದಗಜವ ಹೃದಯದಲ್ಲಿ | ೪೪೮ |
| ಮನ ಘನವಸ್ತುವಾದ ಬಳಿಕ | ೬೭೩ |
| ಮನವಿದ್ದಲ್ಲಿಯೆ ನಿಮ್ಮ | ೬೪೨ |
| ಮನಸಿನ ಸಂಶಯ ಕನಸಿನ | ೩೮೮ |
| ಮನೋಮಧ್ಯದಲ್ಲಿ ಒಂದು | ೩೧೯ |
| ಮರಕ್ಕೂ ಕೊಂಬಿಗೂ ಭೇದವುಂಟೇ | ೪೧೫ |
| ಮರವೆಯ ತಮವ ಕಳೆ | ೧೦೧ |
| ಮರ್ಕಟನ ತಲೆಯಲ್ಲಿ ಮಾಣಿಕ್ಯ | ೧೪೪ |
| ಮರ್ತ್ಯಲೋಕಮುದರದೊಳಗೆ | ೪೩೭ |
| ಮಲದ ಕುಳಿವೊಂದು ಮುಖ | ೧೪೨ |
| ಮಲದೊಡನೆ ಕೈದಂಡೆಯ | ೧೧೩ |
| ಮಲವೊತ್ತಿವರೆ ಹಾಳುಗೇರಿಯ | ೧೧೬ |
| ಮಸಿ ಕಪ್ಪಾಯಿತ್ತೆಂದು | ೨೯೪ |
| ಮಹಾದಾಕಾಶ ಘಟಭೇದದಿಂದ | ೬೭೭ |
| ಮಹಾಲಿಂಗವೆಂದುಂಟು | ೩೭ |
| ಮಳೆಮಯ್ಯುದ್ದರಾಕಾಶ ಸನೆವುದೇ | ೬೭೦ |
| ಮಾಡಿದ ಮಾಟವನರಿಯದ | ೬೩೫ |
| ಮಾತಿನಲ್ಲಿ ಛವಿಯ ಬಿಟ್ಟರೇನೋ | ೩೦೯ |
| ಮಾತಿನಲ್ಲಿ ಮಹತ್ವವ ನುಡಿದು | ೫೨೫ |
| ಮಾತೆಯಿಲ್ಲದ ಜಾತನು | ೫೧೦ |
| ಮಾನಸ ವಾಚಕ ಉಪಾಂಶಿಕ | ೨೦೦ |
| ಮಾರುತನ ಮುಖದ ಮಾನಿನಿ | ೧೫೫ |
| ಮಾಳಿಗೆಯ ಮನೆಯ ಕಾಳಿಕ | ೪೨೧ |
| ಮಿಂಚಿನ ಪ್ರಭೆಯಲ್ಲಿ | ೮೫ |
| ಮುಖದಲ್ಲಿ ಮಂತ್ರ | ೨೫೩ |
| ಮುಗಿಲ ಮರೆಯ ಸೂರ್ಯನಂತೆ | ೬೧೯ |
| ಮುಚ್ಚಿದ ಕಣ್ಣು ತೆರೆದುದ | ೧೦೦ |
| ಮುಂದವಲ್ಲಿ ಹುಟ್ಟಿದ ತಲೆ | ೫೮೨ |
| ಮುತ್ತಿನ ದಿವಾಣದೊಳಗೆ | ೪೯೦ |
| ಮುಂದಳ ಮನೆಯಲ್ಲಿ | ೪೨೬ |
| ಮುಂದಳ ಮುಖಸಾಲೆಯೊಳಗೆ | ೪೨೪ |
| ಮುಪ್ಪುರದರಸಿಂಗೆ ಮುಖವೈದು | ೬೦೩ |
| ಮೂಡಣಗಿರಿಯಲ್ಲಿ ಸೂರ್ಯ | ೪೩೮ |
| ಮೂರರ ಹೂಲಿಗೆಯ ಬಿಚ್ಚಿ | ೫೪೯ |
| ಮೂರುಮಂಡಲ ತಿರುಗುವಲ್ಲಿ | ೪೩೪ |
| ಮೂರುಲೋಕವ ಮೋಹಿನಿ | ೬೯೬ |
| ಮೂರೊಂದಾದ ಕಿಚ್ಚು | ೬೩೨ |
| ಮೂರೊಂದುಗೂಡಿದ ಬಟ್ಟೆ | ೩೯೦ |
| ಮೃತಜೀವಿಯೆಂಬ ಹೆಂಗೂಸಿನ | ೬೦೦ |
| ಮೆಟ್ಟಲಿಲ್ಲದ ಭೂಮಿಯಲ್ಲಿ | ೬೯೧ |
| ಮೆತ್ತಾನ ಅಶನವನುಂಡು | ೧೪೧ |
| ಮೊಲನ ಕಂಡ ನಾಯಂತೆ | ೩೯೮ |
| ಮೊಸಳೆಯ ಹಿಡಿದ | ೩೭೪ |
| ಮೋಹನ ಮೊಲೆಯ | ೧೦೬ |
| ಯಮ ನಿಯಮ ಆಸನ | ೩೬೪ |
| ಯುವತಿಯರ ವ್ಯವಹಾರ | ೧೫೦ |
| ಯೋಗಿಯಲ್ಲ ಜೋಗಿಯಲ್ಲ | ೯ |
| ರಕ್ಕಸಿಯ [ಹೊಳಲ]ಲ್ಲಿ ಒಂದು | ೩೪೧ |
| ರಂಜನೆಯ ಕೊಡದಲ್ಲಿ | ೩೯೫ |

| ವ. ಆರಂಭ | ವ. ಸಂ. | ವ. ಆರಂಭ | ವ. ಸಂ. |
|---|---|---|---|
| ರವಿಯ ಮಂಡಲವಲ್ಲಿ ಶಶಿಯ | ೪೪೦ | ವಾಸನೆಯ ಕೊಂಬುವುದು | ೬೫೨ |
| ರೂಪಲ್ಲದೆ ನಿರೂಪಲ್ಲದೆ | ೨೪ | ವಿಶ್ವಾಸದಿಂದ ಅಂಗನೆಯ | ೨೩೩ |
| ರೂಪಾಗಿ ಬಂದ ಪದಾರ್ಥವ | ೨೩೦ | ವಿಷಯ ರತಿಯುಳ್ಳವಂಗೆ | ೧೧೯ |
| ಲಂಬಿಕಾಯೋಗಿಗಳ ಡೊಂಬರಿಗೆ | ೩೫೮ | ವೇದಶಾಸ್ತ್ರಪುರಾಣಾಗಮ | ೩೦ |
| ಲಲನೆಯರ ನಟನೆಯೆಂಬ | ೧೧೦ | ವೇದಾಂತ ಸಿದ್ಧಾಂತವಪ್ಪ | ೪೫ |
| ಲಲಾಟದಲ್ಲಿ ವಿಭೂತಿ | ೧೯೬ | ವೇಧಾದೀಕ್ಷೆ ಮಂತ್ರದೀಕ್ಷೆ | ೧೭೯ |
| ಲಿಂಗಕ್ಕೂ ಪ್ರಾಣಕ್ಕೂ ಭೇದ | ೪೩೦ | ಶರಣಸಂಗ ಲಿಂಗವನಪ್ಪಿತ್ತಾಗಿ | ೨೯೦ |
| ಲಿಂಗಕ್ಕೆ ತನ್ನ ತನುವೇ ಭಾಜನ | ೬೫೮ | ಶರಣನೇ ಲಿಂಗ; ಲಿಂಗವೇ ಶರಣ | ೪೮೧ |
| ಲಿಂಗಕ್ಕೆ ನಾದವಿಲ್ಲ ಅದೇನು | ೪೮೦ | ಶರನಿಧಿ ರತ್ನವ ಧರಿಸಿರ್ದರೆ | ೨೫೨ |
| ಲಿಂಗ ಜಂಗಮ ಭಕ್ತನೆಂದು | ೫೪ | ಶರೀರವಿಲ್ಲದಂಗನಗೆ ಐವರು | ೪೮೭ |
| ಲಿಂಗದಿಂದ ಶರಣರುದಯ | ೬೦ | ಶರೀರಾವರಣವಿಲ್ಲದ | ೬೧೧ |
| ಲಿಂಗದೇಹಿ ಶಿವಾತ್ಮಕನು | ೬೫೭ | ಶಶಿಮುಖಿಯರ ಸಂಗಕ್ಕೆ | ೧೦೯ |
| ಲಿಂಗಮಧ್ಯೇ ಜಗತ್‌ಸರ್ವಂ | ೬೪೭ | ಶಶಿವದನೆಯ ಮಸ್ತಕವನೊಡೆದು | ೫೭೨ |
| ಲಿಂಗವ ಹಿಡಿದ ಹಸ್ತವೆ | ೧೮೪ | ಶಾಂಭವಲೋಕದ ಕುಂಭಿನಿ | ೬೯೪ |
| ಲಿಂಗವಿದ್ದ ಹಸ್ತಲಿಂಗಕ್ಕೆ ಪೀಠ | ೨೪೦ | ಶಿಖಾಚಕ್ರದಲ್ಲಿ ಅಕಳಂಕ | ೫೩೯ |
| ಲಿಂಗವೆ ಪತಿಯಾಗಿ ತಾನೇ ಸತಿ | ೪೪೩ | ಶಿವತತ್ವದ ಆದಿಮಧ್ಯಾವಸಾನ | ೩೧೩ |
| ಲಿಂಗಸ್ಥಲದಲ್ಲಿ ಲಿಂಗಕಳೆ | ೭೫ | ಶಿವನಕಾಯವೆ ಭಕ್ತ | ೬೩೭ |
| ಲೋಕದ ನಚ್ಚು ಮಚ್ಚೆಂಬ | ೫೨೭ | ಶಿವನಲ್ಲದೆ ಬೇರೆ ದೈವವಿಲ್ಲ | ೨೦೪ |
| ಲೋಕ ಮೆಚ್ಚಿ ನಡೆವರಯ್ಯಾ | ೫೨೬ | ಶಿವನೂ ಉಂಟು ಆತ್ಮನೂ ಉಂಟು | ೬೮ |
| ಲೋಕಾದಿ ಲೋಕಂಗಳೇನು | ೩೯ | ಶಿವನೇ ಶರಣ; ಶರಣನೇ ಶಿವ | ೫೬ |
| ಲೋಹದ ಅಗ್ನಿ ವೇದಿಸಿ | ೬೬೬ | ಶಿವಭಾವದಿಂದ ಆತ್ಮ ಹುಟ್ಟಿ | ೫೪೭ |
| ವಂದಿಸಿ ನಿಂದಿಸುವ ಸಂದೇಹಿಯ | ೨೯೨ | ಶಿವ ಶಿವಾಯೆಂಬುದು | ೨೦೫ |
| ವಸ್ತುವಿನ ಸ್ವರೂಪ ಹೇಳಿಹೆ | ೮೨ | ಶಿವಾಶ್ರಯದಲ್ಲಿ ಹುಟ್ಟಿ | ೧೬೭ |
| ವಸ್ತುವೆಂದಡೆ ಪರಬ್ರಹ್ಮದನಾಮ | ೭೪ | ಶಿಶು ತಾಯ ಮರೆವುದೆ | ೨೭೬ |
| ವಸ್ತುವೆಂದಡೆ ಹೇಗಾಯಿತ್ತಯ್ಯಾ | ೭೭ | ಶುದ್ಧ ಶಿವತತ್ವ ವೇದ್ಯವಾಗಿ | ೪೯೮ |
| ವಸ್ತುವೆಂದರೆ ಪರಬ್ರಹ್ಮದ ನಾಮ | ೬೪ | ಶುದ್ಧ ಸತ್ಕುಲಜರಿಗೆ | ೬೩೧ |
| ವಸ್ತುವೆಂದೊಡೆ ಹೇಗಾಯಿತ್ತಯ್ಯಾ | ೭೬ | ಶೈವರು ಕಟ್ಟಿದ ಗುಡಿಯ | ೨೬೭ |
| ವಾಚಾತೀತ ಮನೋತೀತ | ೨೫೬ | ಶ್ರೀಗುರು ಈ ವಿಭೂತಿಯ | ೧೯೩ |
| ವಾಚ್ಯಾ ವಾಚ್ಯಂಗಳಿಲ್ಲದಂದು | ೧೨ | ಶ್ರೀಗುರು ಶಿವಗಣಂಗಳ | ೧೮೦ |
| ವಾಯುವೇ ಅಂಗವಾದ ಪ್ರಾಣಲಿಂಗಿ | ೩೩೪ | ಶ್ವಾನಂಗೆ ಪೃಷ್ಠದಲ್ಲಿ ಬಾಲ | ೪೭೫ |
| ವಾರಣದ ತಲೆಯನೊಡೆದು | ೫೬೫ | ಷಡಕ್ಷರ ಶಕ್ತಿಯುಕ್ತವಾಗಿ | ೪೯೭ |
| ವಾರಣಮದರದಲ್ಲಿ ಮಾರಿ | ೯೯ | ಷೋಡಶದಳ ಕಮಲದಲ್ಲಿ | ೫೪೨ |
| ವಾರಿ ಬಲಿದು ವಾರಿಶಿಲೆ | ೫೭೪ | ಸಕಲ ಕರಣಂಗಳನು | ೧೮೬ |

| ವ. ಆರಂಭ | ವ. ಸಂ. |
|---|---|
| ಸಕಲ ಗುರು ಸಕಲ ನಿಃಕಲ | ೨೭೩ |
| ಸಂಗ್ರಹದ ಮನೆಯಲ್ಲಿ | ೪೨೦ |
| ಸಚ್ಚಿದಾನಂದನ ಸಂಕಲ್ಪ | ೬೦೯ |
| ಸಚ್ಚಿದಾನಂದ ನಿತ್ಯ | ೬೭ |
| ಸಟ್ಟುಗ ಸವಿಯಬಲ್ಲುದೆ | ೬೪೩ |
| ಸಣ್ಣನ ನೂಲುವ ಚಿಣ್ಣಂಗೆ | ೩೪೫ |
| ಸತ್ತಾತ ಗುರು; ಹೊತ್ತಾತ | ೫೯೫ |
| ಸತ್ತುವೆಂಬ ಗುರುವಿನಲ್ಲಿ | ೫೧೪ |
| ಸತ್ಯಜ್ಞಾನಮನಂತ ಬ್ರಹ್ಮ | ೪೪ |
| ಸತ್ಯದ ಭೂಮಿಯಲ್ಲಿ ಭಕ್ತಿಯ | ೫೦೬ |
| ಸತ್ಯದಲ್ಲಿ ನಡೆವುದು ಶೀಲ | ೩೦೮ |
| ಸತ್ಯನಲ್ಲ ಅಸತ್ಯನಲ್ಲ | ೬೪೦ |
| ಸತ್ಯಲೋಕದಿಂದ ಚಿತ್ | ೬೧೬ |
| ಸದಾಚಾರದಲ್ಲಿ ನಡೆವವನ | ೨೧೨ |
| ಸದ್ಗುರುವಿನ ದೆಸೆಯಿಂದ | ೧೯೭ |
| ಸದ್ರೂಪವೇ ಸಂಗನಬಸವಣ್ಣ | ೪೧ |
| ಸದ್ರೂಪ ಶರಣನಲ್ಲದೆ | ೪೦ |
| ಸದ್ಯೋಜಾತನ ಮುಟ್ಟಿ | ೬೧೩ |
| ಸದ್ಯೋಜಾತನ ಶುದ್ಧಪ್ರಸಾದ | ೬೬೧ |
| ಸದ್ಯೋಜಾತ ವಾಮದೇವ | ೬೧೭ |
| ಸಪ್ತಕಮಲದ ಮಧ್ಯದಲ್ಲಿ | ೪೭೮ |
| ಸಪ್ತದ್ವೀಪದ ಮಧ್ಯದಲ್ಲಿ | ೪೪೬ |
| ಸಮಸ್ತ ಲೋಕಾದಿಲೋಕ | ೮೭ |
| ಸರ್ವಾಂಗವನು ಲಿಂಗನಿಷ್ಠೆಯಿಂದ | ೩೦೦ |
| ಸವಿಕಲ್ಪ ಸತ್ತಿತ್ತು | ೬೯೦ |
| ಸಹಸ್ರದಳದಲ್ಲಿ ಸಚ್ಚಿದಾನಂದ | ೫೪೦ |
| ಸಾಧ್ಯಸಾಧಕರಿಲ್ಲದಂದು | ೨೯ |
| ಸಿರಿಯ ಸೀರೆಯನುಟ್ಟು | ೬೦೬ |
| ಸುಗುಣವೆ ಲಿಂಗಪ್ರಾಣೆಯಯ್ಯಾ | ೩೩೩ |
| ಸುಡುವಗ್ನಿ ಕಾಷ್ಠದಿರದ | ೪೦೧ |
| ಸುದತಿ ಪುತ್ರ ಮಿತ್ರ | ೨೧೭ |
| ಸುಧೆಯೊಳಗೆ ವಿಷವುಂಟೆ | ೫೮ |
| ಸುರತರುವ ಬಿಟ್ಟು | ೩೯೬ |
| ಸುರತರು ವೃಕ್ಷದೊಳಗಲ್ಲ | ೧೬೧ |
| ಸೂಕ್ಷ್ಮನಾಳದಲ್ಲಿ ಶುಭ್ರ | ೫೯೮ |
| ಸೂರ್ಯನ ಬೆಳಗಿಂಗೆ | ೫೭ |
| ಸೂರ್ಯನಿಂದ ತೋರಿದ | ೪೨ |
| ಸೋಮನಾಳದಲ್ಲಿ ಸೂತ್ರಕಳೆ | ೬೬೩ |
| ಸ್ಥಾವರ ಜಂಗಮಾತ್ಮಕಂಗಳ | ೩೫ |
| ಸ್ಥೂಲ ಸೂಕ್ಷ್ಮ ಪರತತ್ವವೆಂಬ | ೧೪ |
| ಸ್ಫಟಿಕದ ಘಟದೊಳಗೆತ್ತಿದ | ೮೯ |
| ಸ್ವಯಾಧೀನ ಮುಕ್ತನೆಂಬವ | ೫೯ |
| ಸ್ವಾನುಭಾವ ವಿವೇಕ ಅಂತರ್ಗತ | ೩೨೧ |
| ಹಜಾರದ ಪೀಠದ ಮನೆಯಲ್ಲಿ | ೩೨೯ |
| ಹಜ್ಜೆಯುಳ್ಳ ಮೃಗ ಇಬ್ಬರ | ೩೮೪ |
| ಹದ್ದ ಸುಂಗಿದ ಕಾಗೆ | ೧೨೯ |
| ಹರಿಯ ಕೈಯೊಳಗಣ ಗಿಳಿಗೆ | ೬೬೮ |
| ಹರಿಯ ಹಾದಿಯಲ್ಲಿ | ೫೬೧ |
| ಹರಿಯ ಹೇಳಿಗೆಯಲ್ಲಿ | ೪೩೫ |
| ಹರಿವ ನೀರ ಮಧ್ಯದಲ್ಲಿ | ೯೧ |
| ಹಲವು ಜನ್ಮಂಗಳಲ್ಲಿ | ೧೬೦ |
| ಹಲವು ಬಣ್ಣದ ಊರೊಳಗೆ | ೩೯೧ |
| ಹಸು ಸತ್ತು ಆರು ದಿನ | ೫೯೬ |
| ಹಾರುವರ ಮನೆಯ ದೇವಿಯ | ೩೩೯ |
| ಹಾರುವ ಹಕ್ಕಿಗೆ ಗರಿಯಿಲ್ಲ | ೩೬೯ |
| ಹಾರುವ ಹಕ್ಕಿಗೆ ಗರಿಯೀರೈವಾಮುವ | ೫೭೯ |
| ಹಾಲೋಗರವನುಂಡು | ೧೪೦ |
| ಹಾವ ಹಿಡಿದ ಚೇಳು | ೪೫೦ |
| ಹಾವಿನೊಳಗಣ ಸಂಗ | ೪೦೪ |
| ಹಾವು ಹಿಡಿದ ಚೇಳು | ೫೮೦ |
| ಹಾಳು ಕೇರಿಯಲೊಂದು | ೧೪೭ |
| ಹಿಂದಳ ಅಂಗ ಮುಂದಳ | ೩೮೩ |
| ಹಿಕ್ಕೆಯ ಸುಂಗಿದ ಹಕ್ಕಿಯ | ೫೮೩ |
| ಹಿರಿಯ ಕದಲನೊಂದು | ೩೧೭ |

| ವ. ಆರಂಭ | ವ. ಸಂ. | ವ. ಆರಂಭ | ವ. ಸಂ. |
|---|---|---|---|
| ಹೀಗೆಂದರಿಯದೆ ತಾ | ೬೫೪ | ಹೆಣ್ಣಿನ ರೂಪು ಕಣ್ಣಿಗೆ ರಮ್ಯ | ೪೯೪ |
| ಹೃದಯ ಕಮಲ ಕರ್ಣಿಕಾ | ೮೪ | ಹೆಣ್ಣು ಪ್ರಾಣವೆ? ಪ್ರಾಣವಾಗಿಪ್ಪ | ೨೮೫ |
| ಹೃದಯಮಧ್ಯದಲೊಂದು | ೫೫೯ | ಹೇಳಿಗೆಯೊಳಗಣ ಸರ್ಪ | ೧೫೩ |
| ಹೆಂಗಳೊಲವೆಂಬುದು | ೧೧೫ | ಹೊತ್ತಾರೆ ಎದ್ದು ಹೂಪತ್ರೆಯ | ೫೫೭ |
| ಹೆಣನ ಕಂಡರೆ ನಾಯಿ ಕಚ್ಚದೆ | ೪೭೩ | ಹೊನ್ನು ತನ್ನ ಬಣ್ಣದ ಲೇಸುವ | ೨೬೩ |
| ಹೆಣ್ಣ ಬಿಟ್ಟೆ ಮಣ್ಣ ಬಿಟ್ಟೆ | ೪೭೧ | ಹೊರಗೆ ಅಗ್ನಿ ಉರಿವುತ್ತಿಪ್ಪುದು | ೨೪೪ |
| | | ಹೊರಗೆ ವೇಷದ ಸೊಂಪು | ೪೬೮ |

# ಘನಲಿಂಗಿದೇವರ ವಚನಗಳ ಅಕಾರಾದಿ


| ವ. ಆರಂಭ | ವ. ಸಂ. | ವ. ಆರಂಭ | ವ. ಸಂ. |
|---|---|---|---|
| ಅಗ್ನಿ ಅಗ್ನಿಯ ಕೂಡಿ | ೬೫ | ಕನ್ನವನ್ನಿಕ್ಕಿ ಚಿನ್ನವ ತಂದು | ೫೮ |
| ಅರ್ಥದ ಮೇಲಣ ಆಶೆ | ೧೦ | ಕಪಿ ಕಳ್ಳಿ ಕುಡಿದು ಕಡಲ | ೩ |
| ಅರ್ಪಿತ ಅವಧಾನದ | ೧೮ | ಕಾಮಧೇನುವಿನಲ್ಲಿ ಕಲ್ಪಿಸಿದ | ೬೨ |
| ಅಯ್ಯ ಪಂಚತತ್ವಂಗಳ | ೧೨ | ಕುನ್ನಿಗೆ ರನ್ನದ ಪಲ್ಲಣವ | ೪ |
| ಅಯ್ಯಾ ಬಸವಾದಿ ಪ್ರಮಥ | ೫೨ | ಕುಂಪಣಕ್ಕೆ ಒಪ್ಪ ಒರೆ | ೫೩ |
| ಅಂಗವ ಮೇಲಕ್ಕೆ ಬಂದ | ೩೬ | ಕೆಳದಿಯರೊಡನಾಡಿ | ೪೨ |
| ಆಕಾಶದಿಂದಲಾಯಿತ್ತು | ೪೯ | ಕೇಳು ಕೇಳಯ್ಯ ಆತ್ಮನೆ | ೬ |
| ಆಚಾರಲಿಂಗವ ಅಂಗೈಯೊಳ | ೨೬ | ಕೋಗಿಲೆ ಸ್ವರಗೈದಿತೆಂದು | ೬೦ |
| ಆದಿ ಅನಾದಿಯಿಲ್ಲದತ್ತಣ | ೧೫ | ತಾಪತ್ರಯಂಗಳಿಗೆನ್ನನು | ೫೭ |
| ಆರು ಬಣ್ಣದ ಹದಿನೈದು | ೯ | ತೊಟ್ಟು ಬಿಟ್ಟ ಹಣ್ಣಾಗಿ | ೫೬ |
| ಇಕ್ಕಿದ ಹರಿಗೆ ತೊಲಗದ | ೩೫ | ದೇವ ಕಂಬಳಕ್ಕೆ ಹೋಗಿ | ೭ |
| ಇನ್ನೇವೆನಿನ್ನೇವೆನೆಲೆ ತಂದೆ | ೧೩ | ನಾನು ನಿಮ್ಮೊಡನೆ ನುಡಿವೆ | ೩೦ |
| ಉಚ್ಚೆಯ ಬಚ್ಚಲ | ೩೯ | ನಿರ್ಗಮನಿಯಾದ ಶರಣಂಗೆ | ೨೫ |
| ಎನ್ನ ಕಾಯ ಪ್ರಸಾದವಾಯಿತ್ತು | ೬೪ | ನಿಜಗುಣ ಚೆಂದಿಮರಸರು | ೩೭ |
| ಎನ್ನ ತಂದೆಯ ಬಸುರಲ್ಲಿ | ೧೪ | ನಿಜಮುಕ್ತಿಗೆ ಸದಾ ಸಂಧಾನವಲ್ಲಿ | ೨೩ |
| ಎನ್ನಂತರಂಗವಲ್ಲಿ ಕುಮಂತ್ರ | ೪೧ | ನಿತ್ಯವಾಗಿಪ್ಪ ಪರಮಾತ್ಮನು | ೨೨ |
| ಎನ್ನ ಮನೋಮಧ್ಯದೊಳಗೊಂದು | ೨೦ | ನಿರ್ವಾಣ ಪದಕ್ಕೆ ಕಾಮಿತನಾಗಿ | ೩೩ |
| ಎನ್ನಾತ್ಮನದೊಂದು ಅರಸುತನದ | ೨ | ಪರಮ ಲಿಂಗಾಂಗಿಯ ಇರವು | ೪೩ |
| ಎಲೆ ಕರುಣೆ ಜನನಿಯ ಜಠರಕ್ಕೆ | ೫ | ಪಿಂಡ ಬ್ರಹ್ಮಾಂಡಗಳಿಲ್ಲದಂದು | ೧ |
| ಎಲೆ ತಂಗಿ ಶರಣಸತಿ ಲಿಂಗಪತಿ | ೧೧ | ಬಿಲ್ಲು ಕೋಲವಿಡಿದು | ೪ |
| ಎಲೆ ಮನ ಬುದ್ಧಿ ಚಿತ್ತ ಅಹಂಕಾರ | ೮ | ಬೆಳಗು ಕತ್ತಲೆಯೆಂಬ | ೭ |
| ಏನೆಂಬೆನೇನೆಂಬೆನಯ್ಯ | ೭ | ಭಕ್ತಿ ಜ್ಞಾನ ವೈರಾಗ್ಯ ತಪ್ಪದೆ | ೬೧ |
| ಓಡು ಒಡಕು ಹುರುಳಿ ಹುಳುಕು | ೪೦ | ಭಕ್ತಿ ಜ್ಞಾನ ವೈರಾಗ್ಯವು | ೨೯ |
| ಕತ್ತಲೆ ಭೂತಳದ ವರ್ತಮಾನಕ್ಕೆ | ೪೬ | ಭಕ್ತಿಯಿಂದ ವಿರಕ್ತರೆಂದು | ೬೩ |
| ಕತ್ತಲೆ ಸತ್ತು ಬೆಳಗು ಬೀದಿ | ೪೮ | ಮಣ್ಣು ಹಿಡಿದವರೆಲ್ಲರೂ | ೪೫ |

| ವ. ಆರಂಭ | ವ. ಸಂ. | ವ. ಆರಂಭ | ವ. ಸಂ. |
|---|---|---|---|
| ಮರ್ತ್ಯವ ಬೀಜವ ಬಿತ್ತಿ | ೧ | ವಿರತಿ ವಿರತಿಯೆಂದು | ೩೨ |
| ಮಾಯೆಯು ಕಾಲು ಛಾಯಿಗೆ | ೩೮ | ಶರಣಸತಿ ಲಿಂಗಪತಿಯೆಂದು | ೧೬ |
| ಮುಚ್ಚಿ ಮೂದಲಿಸಿ ಮೊನೆಗೆಡಿಸುವ | ೪೭ | ಶರಣು ಶರಣಾರ್ಥಿ ಲಿಂಗವೇ | ೩೧ |
| ಮುಂದನರಿಯದ ಮತಿಗೆಟ್ಟ | ೨೧ | ಶಿವನ ಕೃಪೆಯಿಂದ ಎನ್ನ ಪುಣ್ಯ | ೫೫ |
| ಮೂರ್ಕೈದು ತನುವಿಡಿದ | ೫೦ | ಶಿವಪ್ರಸಾದವ ಬೀಸರ | ೨೮ |
| ಮೋಹ ಮದ ರಾಗ ವಿಷಾದ | ೬೬ | ಶಿವಶರಣಂಗೆ ನಿಜೈಕ್ಯ | ೩೪ |
| ಲಿಂಗಾಂಗ ಸಂಬಂಧವ | ೨೪ | ಸದಮಲ ಭಕ್ತಿಯಿಂದ | ೫೧ |
| ಲೋಕದ ನಚ್ಚು ಮಚ್ಚನೆ | ೪೪ | ಸಾಧು ಗುಣಕ್ಕೆ ಸಲೆ ಸಂದ | ೫೯ |

# ಗುಮ್ಮಳಾಪುರದ ಸಿದ್ಧಲಿಂಗದೇವರ ವಚನಗಳ ಅಕಾರಾದಿ


| ವ. ಆರಂಭ | ವ. ಸಂ. |
|---|---|
| ಅಯ್ಯಾ ತತ್ವ ವಿತತ್ವ ಶೂನ್ಯ | ೧೬ |
| ಆಚಾರಭಕ್ತ ಎಪ್ಪತ್ತೆರಡು ಪ್ರಕಾರವ | ೧೦ |
| ಆಚಾರಭಕ್ತ ಮೂವತ್ತಾರು ಭೇದವ | ೧೧ |
| ಆಚಾರಭಕ್ತ ಹನ್ನೆರಡು ಪ್ರಕಾರವ | ೧೨ |
| ಆಣವಮಲ ಮಾಯಾಮಲ ಕಾರ್ಮಿಕ ಕಮಲ | ೩ |
| ಎನ್ನ ಅಷ್ಟಾಕ್ಷರ ಸ್ವರೂಪವ | ೯ |
| ಎನ್ನ ಇಪ್ಪತ್ತೈದಕ್ಷರ ಸ್ವರೂಪವ | ೧೫ |
| ಎನ್ನ ಉನ್ಮನಿಯ ತತ್ವದ ಮೇಲೆ | ೬ |
| ಎನ್ನ ಕಂಗಳ ದೃಕ್ಕಿನಲ್ಲಿ | ೧೪ |
| ಎನ್ನ ತನುವೆ ಬಸವಣ್ಣ | ೫ |
| ಎನ್ನ ದ್ವಿವಿಧಾಕ್ಷರದಲ್ಲಿ | ೧೮ |
| ಎನ್ನ ಪಂಚಾಕ್ಷರದ ಇಷ್ಟಲಿಂಗ | ೧೭ |
| ಎನ್ನ ಮೂವತ್ತಕ್ಷರ ಸ್ವರೂಪವ | ೮ |
| ಪ್ರಥಮದಲ್ಲಿ ನಾಮ ರೂಪು ಕ್ರೀ | ೧ |
| ಪ್ರಥಮದಲ್ಲಿ ವಾಙ್ಮನಕ್ಕೆ ಬಾರದ | ೭ |
| ಭಕ್ತಮಾಹೇಶ್ವರ ಆಚಾರಲಿಂಗ | ೧೩ |
| ಶ್ರೀಗುರುಸ್ವಾಮಿ ಕರುಣಿಸಿ ಕೊಟ್ಟ | ೨ |
| ಸದ್ಗುರುಸ್ವಾಮಿ ಕೃಪೆಮಾಡಿ ಕೊಟ್ಟ | ೪ |

# ಸ್ವತಂತ್ರ ಸಿದ್ಧಲಿಂಗೇಶ್ವರರ ವಚನಗಳ ಅಕಾರಾದಿ


| ವ. ಆರಂಭ | ವ. ಸಂ. |
|---|---|
| ಅಖಿಳಾಗಮ ಶ್ರುತಿ ಪುರಾಣಂಗಳು | ೮೩ |
| ಅಗ್ನಿ ರಜ್ಜುವಿನಿಂದ ಕಟ್ಟುವಡೆವುದೆ? | ೧೪೪ |
| ಅಂಗದ ಮೇಲೆ ಲಿಂಗ ಬರಲಾಗಿ | ೩೩೯ |
| ಅಂಗದಲ್ಲಿ ಆಯತವಾಯಿತ್ತು | ೩೯೮ |
| ಅಂಗದಲ್ಲಿ ಲಿಂಗ ವೆರೆದು | ೨೨೮ |
| ಅಂಗದೊಳಗೆ ಲಿಂಗವಿದೆ | ೩೪೨ |
| ಅಂಗಲಿಂಗವೆಂಬ ಸಂದು ಸಂಶಯ | ೪೧೧ |
| ಅಂಗ ಲಿಂಗ ಸಂಗವರಿದ | ೪೦೪ |
| ಅಂಗೇಂದ್ರಿಯ ಕರಣ ಹರಣದಲ್ಲಿ | ೭೩ |
| ಅಂಗೈಯ ಲಿಂಗದಲ್ಲಿ ಕಂಗಳು | ೧೨೧ |
| ಅಜ ಹರಿಗಳರಿತಕ್ಕೆ ಅಗೋಚರ | ೪೦೯ |
| ಅಜ್ಞಾನವೆಂಬ ಕತ್ತಲೆ ಆವರಿಸಿತ್ತಯ್ಯಾ | ೫೩ |
| ಅತ್ತಲಿತ್ತ ಹರಿವ ಮನವ ನಿಲಿಸಿ | ೧೫೯ |
| ಅದ್ವೈತವ ಸಾಧಿಸಿ ಸರ್ವವೂ ಶಿವ | ೧೮೬ |
| ಅನಂತಕಾಲ ಅಗಲಿದ ನಲ್ಲನ | ೩೮೪ |
| ಅನಲ ಸಂಗದಿಂದ ಕಾಷ್ಠ ಅನಲ | ೧೭೨ |
| ಅನುಭಾವ ನೆಲೆಗೊಂಡಲ್ಲದೆ | ೨೪೩ |
| ಅನುಭಾವವ ನುಡಿವ ಅಣ್ಣಗಳಿರಾ | ೨೪೪ |
| ಅನುಭಾವವಿಲ್ಲದವನ ಭಕ್ತಿ | ೧೭೯ |
| ಅನುವನರಿದು ಅನುಭಾವಿಯಾದ ಶರಣ | ೩೮೭ |
| ಅನ್ನಮಯ ಪ್ರಾಣಮಯ ಮನೋಮಯ | ೧೨೯ |
| ಅಂಡಜ ಸ್ವೇದಜ ಉದ್ಭಿಜ ಜರಾಯುಜ | ೧೮೨ |
| ಅಂಡ ಪಿಂಡೋಪಾಧಿಗಳಿಲ್ಲದ | ೪೦೫ |
| ಅಣುವಿಂಗೆ ಅಣು ಮಹತ್ತಿಂಗೆ | ೩೭೧ |
| ಅಣುವಿಂಗೆ ಅಣುವಾಗಿ ಮಹತ್ತಿಂಗೆ | ೩೪೭ |
| ಅಂತರಂಗದಲ್ಲಿ ಆಡುವ ಪಕ್ಷಿಯ | ೩೦೬ |
| ಅಂತರಂಗದಲ್ಲಿದ್ದ ನಿರ್ಮಲ ಪರಂಜ್ಯೋತಿ | ೨೪೮ |
| ಅಂತರಂಗದಲ್ಲಿ ಬೆಳಗುವ | ೨೮೮ |
| ಅಂತರಂಗ ಶುದ್ಧವಿಲ್ಲದವರು | ೧೪೮ |
| ಅಂತರಂಗ ಶುದ್ಧವಿಲ್ಲದವರೊಳಗೆ | ೩೧೭ |
| ಅಂತರಂಗ ಸನ್ನಹಿತ ಪರಂ-ಜ್ಯೋತಿರ್ಲಿಂಗ | ೩೮೮ |
| ಅಂತರಂಗ ಸನ್ನಹಿತ ಪ್ರಾಣಲಿಂಗಕ್ಕೆ | ೨೫೬ |
| ಅಂದು ಆದಿಯ ಬಿಂದುವಿಲ್ಲದಂದು | ೧೭ |
| ಅಂಧಕನ ಮುಂದೆ ನೃತ್ಯ ಬಹುರೂಪ | ೧೬೬ |
| ಅಂಬರದಲ್ಲಾಡುವ ಪಕ್ಷಿ ಕೊಂಬಿನ | ೩೩೧ |
| ಅಯ್ಯಾ ಏನು ಏನೂ ಇಲ್ಲದಂದು | ೨ |
| ಅಯ್ಯಾ ಘ್ರಾಣದಲ್ಲಿ ನಿಂದು ಗಂಧವ | ೨೧೦ |
| ಅಯ್ಯಾ ಜಡೆಯೆಡೆಯಲ್ಲಿ | ೭೬ |
| ಅಯ್ಯಾ ನಾನೀ ಜಗ ಹುಟ್ಟುವಂದು | ೧೬ |
| ಅಯ್ಯಾ ನಿನ್ನ ಭಕ್ತನು ನಿನ್ನನಲ್ಲದೆ | ೨೨೬ |
| ಅಯ್ಯಾ ನಿಮಗೆ ಪತ್ರೆ ಪುಷ್ಪದಿಂದ | ೨೧೧ |
| ಅಯ್ಯಾ ನಿಮ್ಮ ಶರಣರು ಕರ್ಮ | ೭೫ |
| ಅರಳಿದ ಪುಷ್ಪ ಪರಿಮಳಿಸಿ | ೨೧೮ |
| ಅರಿದರಿದೆವೆಯಿಕ್ಕದ ದೃಷ್ಟಿಯ | ೨೯೩ |
| ಅರಿದಿಹೆನೆಂಬ ಅವಸ್ಥೆಯಿದ್ದಡೇನು | ೨೫ |
| ಅರಿಯಬಾರದು ಕುರುಹಿಲ್ಲವಾಗಿ | ೪೨೮ |
| ಅರಿವಿನಿಂದ ಅರಿದೆನೆಂಬ ಶಿಷ್ಯನಿಲ್ಲ | ೩೬೩ |
| ಅರುಣೋದಯಕ್ಕೆ ಕತ್ತಲೆ ಹರಿದು | ೧೭೮ |

| ವ. ಆರಂಭ | ವ. ಸಂ. |
|---|---|
| ಅರ್ಕನ ಉದಯಕ್ಕೆ ಕತ್ತಲೆ | ೨೬೦ |
| ಅರ್ಥದಲ್ಲೇನೂ ಸುಖವಿಲ್ಲ | ೨೨ |
| ಅವನಿಯ ಪಿಂಡವ ನುಂಗಿ | ೪೧೦ |
| ಅಶನಕ್ಕಾಗಿ ವ್ಯಸನಕ್ಕಾಗಿ ದೆಸೆ | ೩೩೭ |
| ಅಸ್ತಿ ಜಾಯತೇ ವಿಪರಿಣಮತೇ | ೧೨೬ |
| ಆಚಾರದನುಭಾವವಿಡಿದು | ೨೯೯ |
| ಆಚಾರವನನಾಚಾರವ ಮಾಡಿ ನುಡಿವರು | ೧೦೬ |
| ಆಚಾರವಿಲ್ಲದವರಿಗೆ ಜ್ಞಾನವಿಲ್ಲ | ೯೩ |
| ಆಚಾರವೆ ಭಕ್ತಂಗೆ ಅಲಂಕಾರವು | ೮೯ |
| ಆಚಾರವೆಂಬ ಭಿತ್ತಿಯ ಮೇಲೆ | ೩೧೦ |
| ಆಜ್ಞಾಚಕ್ರದ ಮಧ್ಯಹೃದಯದಲ್ಲಿ | ೨೯೧ |
| ಆಡಿನ ಕೋಡಗದ ಕೂಟದ | ೩೫೨ |
| ಆತ್ಮ ಪರಮಾತ್ಮಯೋಗವ | ೨೯೨ |
| ಆದಿ ಅನಾದಿಯೆಂಬವಕ್ಕೆ | ೩೫೮ |
| ಆದಿ ಬಿಂದು ಬೀಜವನರಿದು | ೧೪೫ |
| ಆದಿ ಮಧ್ಯಾವಸಾನಂಗಳಿಂದತ್ತತ್ತ | ೧೮ |
| ಆದಿಮುಕ್ತನ ಅನಾದಿಮುಕ್ತನ ನಾವ | ೧೯೧ |
| ಆದಿಯ ಪ್ರಸಾದವ ಸಾಧಿಸ | ೩೪೬ |
| ಆದಿಯಲ್ಲಿ ನಾನು ಲಿಂಗದಲ್ಲಿ | ೧೨ |
| ಆದ್ಯರ ವಚನವ ಕೇಳಿ | ೮೪ |
| ಆಧಾರದಲ್ಲಿ ಆಚಾರಲಿಂಗವ | ೭೨ |
| ಆಧಾರ ಸ್ವಾಧಿಷ್ಠಾನ ಮಣಿಪೂರಕ | ೨೬೩ |
| ಆನೆಯ ಕೋಣನು ಕೂಡಿ | ೩೨೭ |
| ಆಯುಧವೈನೂರಿದ್ದರೇನು | ೩೫೦ |
| ಆರಾದರೂ ಆಗಲಿ ತಮ್ಮ ಕುಲ | ೧೧೦ |
| ಆರನರಿದು ಮೂರ ತಿಳಿದು ಎರಡರೊಳು | ೩೯೯ |
| ಆರಾಧಾರದ ಆರು ಕಮಲಂಗಳಲ್ಲಿ | ೨೪೬ |
| ಆರಾಧಾರದ ನಿಚ್ಚಣಿಗೆಯನೇರಿ | ೩೪೮ |
| ಆವ ಕ್ರೀಯ ಮಾಡಿದಡೇನು | ೩೬೪ |
| ಆವ ವೇಷವ ಧರಿಸಿದಡೇನು ದೇಹವೆಂಬ | ೧೦೪ |
| ಆವಾವ ಕಾಲದಲ್ಲಿ ಆವಾವ | ೩೯೩ |
| ಆವಾವ ಘಟವ ಧರಿಸಿ | ೧೯೪ |
| ಆವಾವ ಜಾತಿ ಯೋನಿಗಳಲ್ಲಿ | ೧೮೦ |
| ಆವಾವ ದೇಹ ತೊಟ್ಟರೂ | ೩೪ |
| ಆವಾವ ಪರಿಯಲ್ಲಿ ಭಾವಿಸುತ್ತಿಹ | ೪೦೩ |
| ಆವಾವ ಭಾಷಾಂಗವ ತೊಟ್ಟರೂ | ೩೩೪ |
| ಆವಾವ ಲೋಕದಲ್ಲಿರ್ದರೂ | ೩೧ |
| ಆಶೆಯೆಂಬ ಶೃಂಖಲೆಯಿಂದ | ೩೨೫ |
| ಆಸನ ಬಂಧವ ಮಾಡಿ | ೨೬೭ |
| ಆಸೆಯೆಂಬ ವೇಶಿ ಆರನಾದರೂ | ೪೬ |
| ಆಸೆಯೆಂಬ ಸ್ತ್ರೀಗೆ ಮನಸೋತ | ೪೭ |
| ಇದ ಮಾಡಬಹುದೆಂಬ | ೩೭೮ |
| ಇಂದಿಗೆಂತು ನಾಳಿಂಗೆಂತೆಂದು | ೧೧೭ |
| ಇಂದು ಭಾನುವನೊಂದುಗೂಡಿಸಿ | ೧೯೬ |
| ಇಬ್ಬರು ಮೂವರು ದೇವರೆಂದು | ೧೬೫ |
| ಇಂಬಾದ ಬ್ರಹ್ಮದಲ್ಲಿ ತುಂಬಿದ | ೨೬೯ |
| ಈಶ ವೇಷವ ಧರಿಸಿದಡೇನು | ೩೩೬ |
| ಉದಯಾಸ್ತಮಯವೆಂಬೆರಡಿಲ್ಲದ | ೩೯೬ |
| ಉರಗನ ಫಣಾಮಣಿಯ | ೩೨೯ |
| ಊರ ಮೇಗಡೆಯಲೊಂದು | ೨೭೩ |
| ಊರೊಂದೆಸೆ ಕಾಡೊಂದೆಸೆ | ೩೧೬ |
| ಊರ್ಧ್ವಮುಖಮೂಲ | ೨೧೬ |
| ಊರ್ಧ್ವಮುಖವಾದ | ೧೨೮ |
| ಎತ್ತನೇರಿ ನಡೆಸುವ ಅಣ್ಣಾ | ೧೮೧ |
| ಎನ್ನ ಶ್ರೀಗುರು ಮಾಡಿದ | ೬೨ |
| ಎರವಿನ ಬದುಕು ಸ್ಥಿರವಲ್ಲ | ೫೭ |
| ಎಲುವಿಲ್ಲದ ನಾಲಗೆಯ | ೧೦೧ |
| ಎಲೆ ಅಯ್ಯಾ ನೀವು | ೫ |
| ಎಲೆಯುದುರಿದ ವೃಕ್ಷ | ೩೭೨ |

| ವ. ಆರಂಭ | ವ. ಸಂ. |
| --- | --- |
| ಎಲೆ ಶಿವನೆ ನಾ ನಿಮ್ಮನೊಂದ | ೧೩೨ |
| ಎಲ್ಲೆಲ್ಲಿ ನೋಡಿದಡಲ್ಲಲ್ಲಿ ನೀನೇ | ೩೭೩ |
| ಏನನೋದಿ ಏನ ಕೇಳಿ ಏನ | ೧೬೦ |
| ಏನ ಮಾಡುವೆನಯ್ಯಾ | ೩೮ |
| ಏನೆಂದರಿಯದು ಎಂತೆಂದರಿಯದು | ೧೪೯ |
| ಏಳು ಜನ್ಮದಲ್ಲಿ ಮಾಡಿದ ಪಾಪ | ೭೮ |
| ಏಳುನೆಲೆಯ ಮಣಿಮಾಡದ | ೨೭೦ |
| ಏಳು ನೆಲೆಯಲ್ಲಿ ಹೊಳೆವ | ೨೬೨ |
| ಒಡಲೆಂಬ ಗುಡಿಯೊಳಗೆ | ೨೬೧ |
| ಒಳಗೆ ಹೊರಗಾಯಿತ್ತು | ೨೫೯ |
| ಕಕ್ಷೆಯಲ್ಲಿ ಲಿಂಗವ ಧರಿಸಿ | ೭೦ |
| ಕಣ್ಣು ಕಾಲು ಎರಡುಳ್ಳವ | ೯೨ |
| ಕತ್ತಲೆಯ ಮನೆಯ ಹೊಕ್ಕು | ೪೨ |
| ಕನ್ನದ ಸವೆದ ಕನ್ನಗತ್ತಿಗೆ | ೩೫ |
| ಕಮಲನಾಳದ ಸೂತ್ರ | ೩೫೩ |
| ಕರಣದ ಕಲ್ಮಷ ಹರಿಯಿತ್ತಾಗಿ | ೧೦ |
| ಕರ್ಣಂಗಳು ಕೇಳಿದ ಶಬ್ದದಿಂದಾದ | ೨೨೪ |
| ಕರ್ಮರಹಿತನಾದ ನಿರ್ಮಲ | ೧೭೪ |
| ಕರ್ಮದ ನುಂಗಿತ್ತು ಹಾವೆ | ೩೦೨ |
| ಕಾಡೊಳಗಣ ಹುಲುಗಿಣಿಯ | ೧೧೧ |
| ಕಾದಬಲ್ಲೆವೆಂಬವರೆಲ್ಲ | ೧೯೨ |
| ಕಾಬುದೊಂದು ಜ್ಞಾನ | ೩೬೯ |
| ಕಾಯದ ಕರದಲ್ಲಿ ಲಿಂಗವ | ೨೧೨ |
| ಕಾಯದ ಕಳವಳದ ಗೆಲಲರಿಯದ | ೧೧೫ |
| ಕಾಯದ ಸ್ಥಿತಿಗತಿಯನರಿದು | ೨೫೪ |
| ಕಾಯವೆಂಬ ಪಟ್ಟಣಕ್ಕೆ | ೩೫೧ |
| ಕಾರ್ಯಕಾರಣವಾದ ತತ್ತ್ವ | ೪೧೪ |
| ಕಾಲ ಕೈಯೊಳಗಿರಿಸಿ ನಡೆವಾತನ | ೩೦೪ |
| ಕಾಲೋಚಿತವಾಗಿ ಅರ್ಪಿತಕ್ಕೆ | ೨೩೪ |
| ಕಾಶಿಯಲ್ಲಿ ಗೋವಧೆಯ | ೩೨೬ |
| ಕಾಷ್ಠದ ಮೇಲೊಂದು ಕಾಷ್ಠವ | ೩೦೧ |
| ಕಾಷ್ಠದಲ್ಲಿ ಹುಟ್ಟಿದ ಅಗ್ನಿ ಕಾಷ್ಠವ | ೩೬೭ |
| ಕಿಚ್ಚಿನೊಳಗೆ ಕಿಚ್ಚು ಹುಟ್ಟಿ ಉರಿ | ೩೩೩ |

| ವ. ಆರಂಭ | ವ. ಸಂ. |
| --- | --- |
| ಕುಂಭಿನಿಯ ಘಟಪುರುಷನು | ೪೧೯ |
| ಕುರುಡ ಕನ್ನಡಿಯ ಹಿಡಿದ | ೧೬೩ |
| ಕೆಲರೊಳ್ಳಿದನೆಂಬರು ಕೆಲರು | ೩೧೮ |
| ಕೊಡುವಾತ ನಾನಲ್ಲ | ೧೪೧ |
| ಕೋಳಿ ಕೂಗಿದಡೆ ಹಾವು ಹಡೆ | ೨೭೫ |
| ಕ್ಷುತ್ತು ಪಿಪಾಸೆ ಶೋಕ ಮೋಹ | ೧೧೯ |
| ಖಂಡಿತಜ್ಞಾನವಳಿದು | ೩೯೫ |
| ಖಂಡಿತವಿಲ್ಲದ ಅಖಂಡಿತರೂಪ | ೨೫೩ |
| ಖೇಚರದ ಗಮನವ ಖೇಚರ | ೩೭೪ |
| ಗಂಡಿಗೆ ಹೆಣ್ಣು ರೂಪಾಗಿ | ೩೩ |
| ಗರುಡನ ಗರಿಯ ಮುರಿದು | ೨೭೭ |
| ಗಿರಿ ತರು ಗುಹೆ ಮಹಾಪಿಪಿನ | ೧೬೪ |
| ಗುರುತತ್ವನರಿದು ಆ ಶ್ರೀಗುರು | ೩೬೨ |
| ಗುರುದೇವನೆ ಮಹಾದೇವನು | ೧೩೮ |
| ಗುರು ಲಿಂಗ ಜಂಗಮ | ೧೫೮ |
| ಗುರು ಲಿಂಗ ಪ್ರಸಾದವನು | ೨೩೩ |
| ಗುರುವ ತಲೆಯಲಿ ಹೊತ್ತು | ೩೦೮ |
| ಗುರುವ ನರಭಾವದಲ್ಲಿ ಕಂಡಡೆ | ೧೩೭ |
| ಗುರುವನರಿದು ಗುರುಭಕ್ತಿಯ | ೯೯ |
| ಗುರುವ ನಿಂದಿಸಿದವನು ಲಿಂಗವ | ೯೬ |
| ಗುರುವನೆ ಲಿಂಗವೆಂದರಿದ | ೧೩೫ |
| ಗುರುವ ಬೆಸಗೊಳಹೋದಡೆ | ೬೪ |
| ಗುರುವೆಂದರಿಯದು | ೧೦೩ |
| ಗುರುವೇ ನಮೋ ನಮೋ | ೬೮ |
| ಗುರು ಶಿಷ್ಯನ ಕೊಂದು | ೩೦೯ |
| ಗುರುಶಿಷ್ಯಭಾವದಿಂದ | ೬೯ |
| ಗುರುಹಸ್ತ ಸರೋಜ | ೬೫ |
| ಘಟಮಠೋಪಾಧಿಯೊಡನೆ | ೩೭೦ |
| ಘ್ರಾಣಕ್ಕೂ ಗುದಕ್ಕೂ | ೭೧ |
| ಘ್ರಾಣಕ್ಕೂ ಮುಟ್ಟದ ಮುನ್ನ | ೨೦೯ |
| ಚಂದ್ರಕಾಂತದ ಶಿಲೆಯಲ್ಲಿ | ೯ |
| ಚಂದ್ರ ಚಂದ್ರಿಕೆಯಂತೆ | ೪೨೭ |
| ಚಂದ್ರನಿಲ್ಲದ ರಾತ್ರಿ | ೧೫೧ |

| ವ. ಆರಂಭ | ವ. ಸಂ. |
|---|---|
| ಚಂದ್ರಸೂರ್ಯರ | ೩೦೩ |
| ಚಿತ್ತೆಂಬ ಚಿತ್ತು | ೭ |
| ಚೌಪೀಠದ ಮಂಟಪದಲ್ಲಿ | ೬೭ |
| ಜಗದಗಲದ ಮಾಯಾಜಾಲದ | ೭೨ |
| ಜಗದಗಲದಲ್ಲಿ ಮುಸುಕಿದ | ೪೦೧ |
| ಜಗದ ಪ್ರಾಣಿಗಳಂತೆ | ೧೧೨ |
| ಜಗಭರಿತ ಶಿವನೆಂದು ನೆಗಳೆ | ೩೫೭ |
| ಜಪ ತಪ ನಿತ್ಯ ನೇಮ | ೧೫೬ |
| ಜಂಬೂದ್ವೀಪದ ಮಧ್ಯದಲ್ಲಿ | ೨೯೪ |
| ಜಾಗ್ರತ್ ಸ್ವಪ್ನ ಸುಷುಪ್ತಿ | ೩೭೯ |
| ಜಾವ ಗಳಿಗೆಯ ನೇಮದ | ೧೨೩ |
| ಜಾಳು ಮಾತೆಂದೆಡೆ ನಲಿದು | ೧೧೩ |
| ಜ್ಞಾತೃ ಜ್ಞಾನ ಜ್ಞೇಯ | ೩೮೦ |
| ಜ್ಞಾನವಿಲ್ಲದವಂಗೆ ಆಚಾರವಿಲ್ಲ | ೯೧ |
| ಜ್ಞಾನಾನಂದ ಪರಬ್ರಹ್ಮದ | ೩೨೧ |
| ಜ್ಞಾನಿಯ ನಡೆ ನುಡಿ ಅಜ್ಞಾನಿಗೆ | ೩೧೫ |
| ತಟಿದಂಕುರದಂತೆ ಕ್ಷಣದಲ್ಲಿ | ೫೯ |
| ತತ್ವಮೂವತ್ತಾರರಿಂದತತ್ತ | ೩೭೬ |
| ತತ್ತಿಯೊಳಗಣ ಪಕ್ಷಿಯಂತೆ | ೫೪ |
| ತನು ಮನ ಪ್ರಾಣವ ಲಿಂಗಕ್ಕರ್ಪಿಸಿ | ೩೭೫ |
| ತನು ಮುಂತಾದ ಕ್ರೀಯಿಂದ | ೧೩೯ |
| ತನುವಿಂಗೆ ತನುರೂಪಾಗಿ | ೨೫೨ |
| ತನುವಿಂಗೆ ತನುವಾಗಿ | ೧೮೯ |
| ತನುವೆಂಬ ಭೂಮಿಯು | ೨೬೫ |
| ತನ್ನಲ್ಲಿ ತಾನು ಪ್ರತ್ಯಕ್ಷಾನುಭವದಿಂದ | ೧೮೫ |
| ತನ್ನಲ್ಲಿ ಸುಗುಣವ ಸಂಪಾದಿಸದುದೀ | ೩೯ |
| ತನ್ನೊಳಡಗಿಹ ಅನಂತ ಕೋಟಿ | ೪೨೫ |
| ತಪವೆತ್ತ ಪೆರರ ಕೇಡಿಂಗೆ | ೧೦೫ |
| ತಪ ಸತ್ಕ್ರೀ ಜಪ ಧ್ಯಾನ ಜ್ಞಾನ | ೧೪೬ |
| ತರಗೆಲೆಯ ಮೆದ್ದು ತಪಹಿದ್ದರೂ | ೨೯ |
| ತಾನು ಲಿಂಗಾವಧಾನಿಯಾಗಿ | ೨೩೬ |
| ತಾನೆಂಬುದನರಿಯ | ೧೭೭ |
| ತಾನೇ ಲಿಂಗರೆಂದರಿದು ಮತ್ತೆ | ೩೬೬ |
| ತಾಲು ಮೂಲ ದ್ವಾದಶಾಂತದ | ೨೯೦ |
| ತಾಳಮರದ ಮೇಲಣ ಕೋಡಗ | ೩೩೨ |
| ತಿರುಳ ಕರಗಿದ ಬೀಜ ಮರಳೆ | ೨೫೧ |
| ತುದಿ ಮೊದಲಾಯಿತ್ತು ಮೊದಲೇ | ೩೨೩ |
| ತುಂಬಿ ಇಂಬಿನ ತುಂಬಿ | ೪೦೨ |
| ತೆರಹಿಲ್ಲದ ಕುರುಹಿಲ್ಲದ | ೪೨೧ |
| ತೋರಿಯಡಗುವ | ೨೦ |
| ತ್ರಾಸಿನ ತೂಕದಂತೆ ಅಂಗ ಲಿಂಗ | ೨೩೯ |
| ದಶದಿಕ್ಕುಗಳಿಂದ ರೂಹಿಸಬಾರದಾಗಿ | ೪೧೫ |
| ದೇವಂಗೂ ಭಕ್ತಂಗೂ | ೨೨೭ |
| ದೇವಾ ನಿನ್ನ ಭಕ್ತನು ಶ್ರೋತ್ರಮುಖ | ೨೨೫ |
| ದೇಹವೆಂಬ ಹುತ್ತಿನೊಳಗೆ | ೪೪ |
| ದೇಹವೆಂಬುದೊಂದು ನಡುಮನೆಗೆ | ೧೯ |
| ಧರೆಜಲ ಅಗ್ನಿ ವಾಯು | ೩ |
| ಧ್ಯಾತೃ ಧ್ಯಾನ ಧ್ಯೇಯವೆಂಬ | ೧೪೭ |
| ನಡುರಂಗದ ಜ್ಯೋತಿ ಕವಲು | ೩೨೨ |
| ನಡೆವ ಗತಿಗಳಲ್ಲಿ ನಿಮ್ಮ ಕೂಡಿ | ೨೧೫ |
| ನಡೆವ ಬಟ್ಟೆಯ ಬಿಡಿಸಿ ನಡೆಯದ | ೨೪೫ |
| ನನ್ನಿಂದರಿದೆನೆಂಬೆನೆ ನನ್ನಿಂದರಿದದ | ೧೫ |
| ನರ ಸುರ ಮನು ಮುನಿ | ೩೧೩ |
| ನಾನು ನಾನೆಂಬ ಅಹಂಭಾವ | ೪೨೪ |
| ನಾನು ಭಕ್ತನೆಪ್ಪನಯ್ಯಾ ನಿಮ್ಮ | ೧೩೧ |
| ನಾನು ಹಿರಿಯ ತಾನು ಹಿರಿಯ | ೩೩೫ |
| ನಾನೆಲ್ಲಿಂದ ಬಂದ ಎನಗೆ | ೧೧೪ |
| ನಾ ಬಲ್ಲೆ ತಾ ಬಲ್ಲೆನೆಂಬ | ೨೦೦ |
| ನಾಲ್ಕು ಬಾಗಿಲು ಕೂಡಿದ | ೨೪೭ |
| ನಿಚ್ಚ ನಿಚ್ಚ ಲಿಂಗಪೂಜೆಯ | ೧೦೮ |
| ನಿಚ್ಚ ಸಾವಿರ ನೋಂಪಿಯ | ೧೦೯ |
| ನಿಜವನರಿದು ನಿಜವಾಕಾರದ | ೩೬೮ |
| ನಿಜವನರಿದು ನಿರ್ಮಲ | ೧೫೫ |
| ನಿತ್ಯಾನಂದ ಸಂವಿದಾಕಾರ | ೩೯೦ |
| ನಿತ್ಯಾನಿತ್ಯ ವಿಚಾರವಿದಿದು | ೧೮೪ |
| ನಿಮ್ಮ ಪೂಜೆಯ ಮಾಡುವ | ೩೦೭ |
| ನಿರಾಳದಿಂದ ಸಹಜವಾಯಿತ್ತು | ೭೭ |

| ವ. ಆರಂಭ | ವ. ಸಂ. |
|---|---|
| ನೀರು ನೀರಿನ ಕೂಡಿ ಕ್ಷೀರ | ೪೩೦ |
| ನುಡಿಯೊಳಗೆ ಸತ್ಯ ಹೃದಯದಲ್ಲಿ | ೨೮೯ |
| ನೆಲವಿಲ್ಲವಲ್ಲಿಯ ಉದಕವ | ೩೨೪ |
| ಪಕ್ವ ಫಲದಲ್ಲಿಹ ಸ್ವಾದುವಿನಂತೆ | ೧೪ |
| ಪಂಚೇಂದ್ರಿಯವೆಂಬ ಹೆಡೆಯನುಳ್ಳ | ೩೦ |
| ಪದಾರ್ಥದ ಪೂರ್ವವ ಕಳೆದಲ್ಲದೆ | ೨೨೩ |
| ಪದಾರ್ಥವನರ್ಪಿಸಿ ಪ್ರಸಾದವ | ೨೨೦ |
| ಪರಮಾತ್ಮಲಿಂಗದಲ್ಲಿ ಅರ್ಪಿತವಾಗಿ | ೨೩೫ |
| ಪರಮೇಶ್ವರನ ಪರಮೈಶ್ವರ್ಯವೆನಿಪ | ೮೫ |
| ಪರಿಶುದ್ಧ ಮನದಿಂದ ಲಿಂಗವ | ೧೯೯ |
| ಪಿಂಡ ಪಿಂಡವೆಂದೇನು? ತನು | ೧೦ |
| ಪೂರ್ವಜನ್ಮದಲ್ಲಿ ಮಾಡಿದ | ೫೨ |
| ಪೂರ್ವಾದ್ವಾರಮಂ ಬಂಧಿಸಿ | ೨೫೭ |
| ಪೃಥ್ವಿ ಅಪ್ಪು ತೇಜ ವಾಯು | ೧೯೦ |
| ಪೃಥ್ವಿಯ ಬೀಜ ಅಪ್ಪುವ | ೪೧೮ |
| ಪ್ರಕಾಶದ್ವಾರ ಗಂಧದ್ವಾರ ಶಬ್ದದ್ವಾರ | ೨೧೪ |
| ಪ್ರಸಾದ ಪ್ರಸಾದವೆಂದೆಂಬರು | ೩೪೦ |
| ಪ್ರಸಾದವನು ಪ್ರಸಾದಿಯನು | ೨೪೨ |
| ಪ್ರಸಾದವ ಬಯಸಿ ಪರವನರಿದ | ೧೪೦ |
| ಪ್ರಾಣಲಿಂಗೈಕ್ಯವಾದ ಬಳಿಕ | ೨೯೫ |
| ಪ್ರಾಣಾಪಾನ ಸಂಘಟದಿಂದ | ೨೭೧ |
| ಬಡಕಲ ಪಶುವಿಂಗೆ ಬಲುಗಂಡಿಯ | ೪೩ |
| ಬಂದುದ ಕಿರಿದುಮಾಡಿ | ೪೮ |
| ಬಯಲಲ್ಲಿ ಹುಟ್ಟಿದ ಶಿಶುವಿಂಗೆ | ೪೧೭ |
| ಬಳ್ಳಿಯಲಡಗಿ ಕೋಟರದಲ್ಲಿ | ೧೩ |
| ಬಿಂದು ನಾದವನೊಂದು ರೂಪು | ೨೫೮ |
| ಬಿಸಜ ತಂತುವಿನ ಶೃಂಖಲದಿಂದ | ೧೪೩ |
| ಬೀಜದಿಂದ ಅಂಕುರ ತೋರಿದ | ೧೯೫ |
| ಬೆಳಗು ಬರಲು ಕತ್ತಲೆ | ೪೦೦ |
| ಬ್ರಹ್ಮ ಕಲ್ಪಿತವಾದ ತ್ರಿಪುರವ | ೮೭ |
| ಬ್ರಹ್ಮನಾಳಾಗ್ರದ ಸಹಸ್ರದಳ | ೩೫೬ |
| ಬ್ರಹ್ಮ ವಿಷ್ಣು ಇಂದ್ರಾದಿ | ೧೬೯ |
| ಬ್ರಹ್ಮವಿಷ್ಣುಗಳಿಗಗೋಚರ | ೩೪೧ |
| ಬ್ರಹ್ಮಸ್ಥಾನದ ಬಳಿಯ ಸಹಸ್ರದಳ | ೨೬೪ |
| ಬ್ರಹ್ಮಾದಿ ದೇವತೆಗಳೇನು | ೧೬೮ |
| ಬ್ರಾಹ್ಮಣ ಮೂರ್ಖ ಪಂಡಿತ | ೮೮ |
| ಭಕ್ತಂಗೆ ವ್ರತವಾದರಲ್ಲಿ ತದ್ಗತ | ೯೮ |
| ಭಕ್ತನ ಕಾಯದ ಶಿವನ ಕಾಯ | ೧೩೩ |
| ಭಕ್ತನಾದಡೆ ಇಂದ್ರಿಯಂಗಳ | ೨೩೭ |
| ಭಕ್ತಸ್ಥಲ ಬಸವಣ್ಣಂಗಾಯಿತ್ತು | ೧೫೩ |
| ಭಕ್ತಿ ಜ್ಞಾನವೈರಾಗ್ಯದಿಂದಲ್ಲದೆ | ೯೭ |
| ಭಕ್ತಿಯ ಭಾವನಿಷ್ಠ ನಿಷ್ಪರಸಲಾಗಿ | ೯೪ |
| ಭಾವಲಯವಾದ ಮತ್ತೆ ಇನ್ನು | ೪೧೩ |
| ಭಾವಿಸಬಾರದ ಪ್ರಸಾದವ | ೩೪೫ |
| ಭಾವಿಸಿಹೆನೆಂಬ ಭಾವಕರಿಗೆ | ೩೫೪ |
| ಭಾವಿಸುವ ಭಾವದ ವಿಕಾರ | ೪೧೬ |
| ಭೂತಪಂಚಕ ಕಾಯದ ಕಳದು | ೨೯೮ |
| ಭೂಮಿ ಜಲ ಅಗ್ನಿ ಮರುತ | ೮೨ |
| ಭೂಮಿಯ ಮೇಲಣ ಅಗ್ನಿ | ೨೭೬ |
| ಮನದಲ್ಲಿ ತೋರುವ ನಾನಾ | ೪೦೬ |
| ಮನ ಮನದ ಬೆರಸಿ ಸ್ನೇಹ | ೨೧೩ |
| ಮನವಿದು ಕ್ಷಣದೊಳಗೆ | ೪೦ |
| ಮನವಿದೊಮ್ಮೆ ಪ್ರಪಂಚವತ್ತ | ೩೭ |
| ಮನೋವಾಕ್ಕಾಯದಿಂದ ಹುಟ್ಟಿದ | ೫೧ |
| ಮರ ಮೊದಲಿಗೆ ಬೀಳಲು ಕೊನೆ | ೨೮೪ |
| ಮರುಳು ಮಾಯೆಯ | ೮೦ |
| ಮರಹೆಂಬ ಕತ್ತಲೆಯೊಳಗೆ | ೪೫ |
| ಮರಹೆಂಬುದಾವರಿಸಿದವರಾ | ೫೫ |
| ಮಹಾಕರ್ತನು ತನ್ನ ಶಕ್ತಿ | ೮ |
| ಮಾತಾಪಿತರುಗಳಿಲ್ಲದ ಸಹೋದರ | ೬ |
| ಮಾತಿನ ಹಸರದ ವ್ಯವಹಾರ | ೧೦೨ |
| ಮಿಂಚಿನ ರವೆಯಂತೆ | ೨೭೪ |
| ಮುನ್ನಲುಳ್ಳ ಕರ್ಮ ಬೆನ್ನ | ೪೯ |
| ಮೂರುಮಂಡಲದಲ್ಲಿ ತೋರುವ | ೨೮೨ |
| ಮೂರುಮುಖದಗ್ನಿಯೆದ್ದು ಮೂರು | ೧೮೩ |
| ಮೂರ್ಖನಾಗಲಿ ಪಂಡಿತನಾಗ | ೮೧ |

| ವ. ಆರಂಭ | ವ. ಸಂ. | ವ. ಆರಂಭ | ವ. ಸಂ. |
|---|---|---|---|
| ಶ್ರೀಗುರು ಕರುಣಿಸಿ ಅಂಗದ | ೭೪ | ಸೂರ್ಯನ ಕರಜಾಲಂಗಳು | ೪೦೮ |
| ಶ್ರೀಗುರುವಿನ ಉಪದೇಶದಿಂದ | ೪೨೦ | ಸೂರ್ಯೋದಯವಾಗೆ ತಿಮಿರ | ೧೭೬ |
| ಶ್ರೀಗುರುವಿನ ಮಂತ್ರೋಪದೇಶ | ೨೩೮ | ಸೇವ್ಯ ಗುರುವಿನ ಮಹಾ | ೩೬೧ |
| ಶ್ರೀಗುರುಸದ್ಭಾವಜಾತಲಿಂಗವು | ೧೮೮ | ಸ್ಥಾವರ ಜಂಗಮಾತ್ಮಕವಾದ | ೩೯೧ |
| ಶ್ರೀವಿಭೂತಿಯನೊಲಿದು ಧರಿಸಲು | ೭೯ | ಸ್ಥೂಲ ಸೂಕ್ಷ್ಮ ಕಾರಣವೆಂಬ | ೨೯೭ |
| ಶ್ರೀವಿಭೂತಿಯ ರುದ್ರಾಕ್ಷಿಯ | ೧೩೦ | ಸ್ಫಟಿಕದ ಘಟದಂತೆ ಒಳಹೊರಗೆ | ೩೦೫ |
| ಶ್ರೋತ್ರೇಂದ್ರಿಯವನು | ೨೨೧ | ಸ್ವರ್ಗ ಮರ್ತ್ಯ ಪಾತಾಳವೆಂಬ | ೨೦೨ |
| ಷಡಧ್ವಾಶ್ರಯವಾದ ಪರಬಿಂದು | ೧೨೭ | ಸ್ವಯಂಜ್ಯೋತಿರ್ಲಿಂಗಸಂಗ | ೨೭೮ |
| ಸಂಸಾರಕ್ಕೆ ಹೇಸಿ ಗುರುವ | ೬೦ | ಸ್ವಸ್ಥ ಸಿದ್ಧಾಸನದಲ್ಲಿ ಕುಳ್ಳಿರ್ದು | ೨೭೨ |
| ಸಂಸಾರ ವಿಷಯರಸವೆಂಬ | ೨೮ | ಹಗಲಿರುಳ ನುಂಗಿದರೆ ಉದಯಾಸ್ತಮಾನ | ೩೯೭ |
| ಸಂಸಾರವೆಂಬ ಮಹಾ | ೧೫೨ | ಹಣೆಗಣ್ಣು ಕೊರಳಕಪ್ಪು ಫಣಿ | ೧೯೩ |
| ಸಂಸಾರವೆಂಬ ಮಹಾಘೋರಾರಣ್ಯ | ೨೪ | ಹದಿನಾಲ್ಕು ಭುವನದಲ್ಲಿ | ೩೮೬ |
| ಸಂಸಾರವೆಂಬ ಮಹಾವ್ಯಾಧಿ | ೫೮ | ಹರಗಣಂಗಳೆಲ್ಲ ನರಗಣಂಗಳಾಗಿ ಒಬ್ಬರ | ೩೩೮ |
| ಸಂಸಾರವೆಂಬ ವಿಷವೃಕ್ಷಕ್ಕೆ | ೨೧ | ಹರಹರ ಶಿವಶಿವ ಪ್ರಸಾದದ | ೩೪೪ |
| ಸಂಸಾರವೆಂಬ ಸುಖವೆತ್ತ | ೫೬ | ಹರಿವ ಮನ ವಾಯುವನೊಂದು | ೨೮೩ |
| ಸಂಸಾರ ಸೌಖ್ಯವಲ್ಲ ಸಂಸಾರ | ೩೨ | ಹರಿವ ಹರಿಯ ನಿಲಿಸಿ ಉರಗನ | ೩೨೮ |
| ಸಂಚಿತ ಪ್ರಾರಬ್ಧ ಆಗಾಮಿ | ೫೦ | ಹಲವು ಕಾಲದಿಂದಗಿದಗಿದು | ೩೬ |
| ಸತ್ಯ ಸದಾಚಾರವಂತರು | ೮೬ | ಹಲವು ತೃಣಕಾಷ್ಠಗಳಲ್ಲಿ | ೨೦೪ |
| ಸತ್ವ ರಜ ತಮದ ಮೇಲೆ | ೨೮೧ | ಹಲವು ದೇವರುಗಳ ಭಜಿಸಿ | ೧೬೭ |
| ಸತ್ತು ಚಿತ್ತು ಆನಂದ | ೩೬೦ | ಹಲವು ಬಣ್ಣದ ಮೃಗದ | ೩೪೯ |
| ಸದಾಚಾರವನಾಚರಿಸುವ | ೯೦ | ಹಲವು ಮಾತ ಕಲಿತ ಉಲಿಗಿತಿ | ೧೦೭ |
| ಸಪ್ತವ್ಯಸನಂಗಳು | ೩೩೦ | ಹಾವಾಡಿಗ ಹಾವನಾಡಿಸುವಲ್ಲಿ | ೧೧೬ |
| ಸಮತೆಯೆಂಬ ಕಂಥೆಯ | ೩೪೩ | ಹಿಂದು ಮುಂದಣ ಮನದ | ೪೧೨ |
| ಸರ್ವಕ್ರೀಯ ಲಯಸ್ಥಾನವಾದ | ೩೧೯ | ಹುಟ್ಟು ಹೊಂದೆಂಬುದಿಲ್ಲದ | ೪ |
| ಸರ್ವಶಾಸ್ತ್ರೋಪಾಧಿಯಿಂದ | ೩೮೯ | ಹುರಿದ ಬೀಜದಂತೆ ಬೆಂದ | ೧೭೩ |
| ಸರ್ವಾಂಗವು ಲಿಂಗಸಂಗವಾಗಿ | ೩೭೭ | ಹುಲ್ಲು ಹೊರೆಯೊಳಗೊಂದು | ೨೬೬ |
| ಸರ್ವೇಂದ್ರಿಯಂಗಳಲ್ಲಿ | ೨೦೮ | ಹುಸಿಯಿಲ್ಲದ ಶಿಷ್ಯನು | ೬೬ |
| ಸಿತ ಕೆಂಪು ಕೃಷ್ಣವೆಂಬ | ೨೧೭ | ಹೇಡಿಮನದ ಸುಖತ್ವ | ೪೧ |
| ಸುಖದುಃಖಮೋಪದೊಡಲು | ೧೧೮ | ಹೊತ್ತುಳ್ಳಲ್ಲಿ ಅಗ್ಘವಣಿ ಪತ್ರೆ | ೧೨೨ |
| ಸುಜ್ಞಾನವೆಂಬ ಹಡಗನೇರಿದ | ೨೦೫ | ಹೊನ್ನು ಹೆಣ್ಣು ಮಣ್ಣೆಂಬ | ೨೬ |
| ಸುವಿಚಾರವರಿವು ಕಣ್ದೆರೆದು | ೧೯೭ | | |

# ಶೂನ್ಯಮಂತ್ರಗೋಪ್ಯದ ಅಕಾರಾದಿ


| ಪ. ಆರಂಭ | ಪ. ಸಂ. | ಪ. ಆರಂಭ | ಪ. ಸಂ. |
|---|---|---|---|
| ಅಮರ್ದುಗೈಯನ | ೫ | ಇಂತು ಮಧ್ಯವೃತ್ತದ | ೮೧ |
| ಅಂಗಾತ್ಮ ಪ್ರಾಣೇಂದ್ರಿಯ | ೩ | ಇಂತು ಮೂಲಪ್ರಸಾದ | ೧೦೬ |
| ಅಯಷ್ಟವಿಧವೊಳಗಾ | ೪೩ | ಇಂತು ವರ್ಗತ್ರಯ | ೮೭ |
| ಇದಕ್ಕೆ [ತತ್ವಮಸಿ] | ೧೯ | ಇಂತು ಶಿವ ಸದಾಶಿವ | ೧೧೭ |
| ಇನ್ನು ಪ್ರಾಣಲಿಂಗಿಸ್ಥಲಮೆ | ೧೫ | ಇಂತು ಷೋಡಶರುದ್ರ | ೧೮೪ |
| ಇನ್ನುಮಷ್ಟವಿಧ ಸಕೀಲ | ೪೪ | ಇಂತು ಸದಾಶಿವ ಮಂತ್ರ | ೧೧೫ |
| ಇನ್ನುಮಾ ವ್ಯಾಪಕ | ೬೮ | ಈ ತೆರದಿಂ ತತ್ವಪ್ರಸಾದ | ೧೦೭ |
| ಇನ್ನು ಸೃಷ್ಟಿವರ್ಗ ನಿರೂಪಣಾ | ೮೬ | ಈ ತೆರದಿಂದೀ ಮಹಾಲಿಂಗ | ೧೯೧ |
| ಇನ್ನುಂ ಸೋಪರಿಜ | ೫೪ | ಈ ಮಂತ್ರೋದ್ಧರಣಕ್ಕೆ | ೧೦೩ |
| ಇಲ್ಲಿಯಷ್ಟವಿಧ ಸಕೀಲ | ೩೭ | ಈ ಲಿಂಗಾರ್ಪಿತ | ೩೬ |
| ಇಂತಪ್ಪ ದಿವ್ಯಚಕ್ರ | ೮೩ | ಈ ವಿದ್ಯಾಂಗ | ೧೪೨ |
| ಇಂತಷ್ಟಾಕ್ಷರ ಮಂತ್ರ | ೧೧೩ | ಕೂಟಾಂಗ ನಿರೂಪಣಾ | ೧೪೧ |
| ಇಂತಾಚಾರಲಿಂಗವೊಂಬತ್ತು | ೨೭ | ಕ್ಷಕಾರಂ ವಿದ್ಯಾತತ್ವಾತ್ಮಕ | ೮೦ |
| ಇಂತೀ ಮಹಾಲಿಂಗದ | ೧೯೦ | ಗಂಧ ರಸ ರೂಪ | ೪೦ |
| ಇಂತೀ ಮಹಾಲಿಂಗದ | ೧೯೩ | ಗುಣ ರೂಪಂಗಳ ಮೀರಿ | ೭ |
| ಇಂತೀ ಸ್ಥಿತಿಮಾರ್ಗವೈದು | ೧೦೯ | ತತ್ವಾಂಗ ಕರ ಸಾದಾಖ್ಯ | ೩೯ |
| ಇಂತು ಕರ್ಣಿಕಾಗ್ನಿಂದು | ೮೨ | ತತ್ವೋಂಗ ಹಸ್ತ | ೪೫ |
| ಇಂತು ಕಾಮಿಕಾದಿ | ೧೯೯ | ತ್ರಯೋದಶ ನಾಮಕ್ಕೆ | ೮೮ |
| ಇಂತು ತತ್ವಮಸಿ ಎಂಬ | ೨೮ | ದೇವತಾನ್ಯಾಸಾನಂತರ | ೬೬ |
| ಇಂತು ಪಂಚ ಪ್ರಣವ | ೧೨೯ | ನಾದ ಸಂಜ್ಞಿತವಾದ | ೧೧೮ |
| ಇಂತು ಪಂಚ ಪ್ರಾಣವ | ೧೨೮ | ಪುನರಪಿ ಐಕ್ಯಸ್ಥಲಮೆ | ೧೭ |
| ಇಂತು ಪಂಚಭೌತಿಕವಾ | ೧೦೫ | ಪೂರ್ಣಿಮಾದಿಯಾಗಿ | ೭೯ |
| ಇಂತು ಪೂರ್ವೋಕ್ತ ಪಂಚಬ್ರಹ್ಮ | ೧೩೦ | ಪೂರ್ವೋಕ್ತ ಸಕಾರವುಂ | ೧೪೭ |
| ಇಂತು ಭಕ್ತನ ಪದಿನೈದುಂ | ೧೮ | ಬಳಿಕಂ ಪೂರ್ವೋಕ್ತ | ೯೭ |
| ಇಂತು ಭ್ರೂಮಧ್ಯ ಸಂಜ್ಞಿತ | ೭೮ | ಬಳಿಕಮಾ ಲಿಂಗಸ್ಥಲ | ೧೧ |

| ವ. ಆರಂಭ | ವ. ಸಂ. |
|---|---|
| ಬಳಿಕಲುಂ ದ್ವ್ಯಂಗುಲದ | ೫೮ |
| ಬಳಿಕ್ಕಂ ಭೂತಾಂತಮ | ೧೧೧ |
| ಬಳಿಕ್ಕಮಗ್ನಿಮಂಡಲದ | ೭೪ |
| ಬಳಿಕ್ಕಮಾಜ್ಯಪ್ರಧಾರಿಕೆಯೆ | ೧೭೭ |
| ಬಳಿಕ್ಕಮಾ ಬಾಹ್ಯದ | ೬೧ |
| ಬಳಿಕ್ಕಮಾ ಮಹಾಲಿಂಗದ | ೧೮೧ |
| ಬಳಿಕ್ಕಮಾ ಮಂತ್ರಗಳ | ೨೦೩ |
| ಬಳಿಕ್ಕಮಾ ಲಿಂಗದಧಃಕಂಜಮೆ | ೧೭೩ |
| ಬಳಿಕ್ಕಮಾ ಶಿವಸದಸದ್ವಸ್ತು | ೯೦ |
| ಬಳಿಕ್ಕಮೀ ಕಾರಣ | ೩೧ |
| ಬಳಿಕ್ಕಮೀ ಚಕ್ರದ ಕರ್ಣಿಕಾ | ೯೨ |
| ಬಳಿಕ್ಕಮೀ ಚಕ್ರಸ್ಥ | ೮೪ |
| ಬಳಿಕ್ಕಮೀ ಪಂಚವಿಂಶತಿ | ೧೩೧ |
| ಬಳಿಕ್ಕಮೀ ಮೂಲಪ್ರಸಾದವೆ | ೧೦೧ |
| ಬಳಿಕ್ಕಮೀಯೂರ್ಧ್ವದ | ೧೭೮ |
| ಬಳಿಕ್ಕಮೀ ಸಾಮಾನ್ಯಾಂಗ | ೧೪೯ |
| ಬಳಿಕ್ಕಮೀ ಸೂಕ್ಷ್ಮಪಂಚಾಕ್ಷರ | ೧೯೪ |
| ಬಳಿಕ್ಕಮೂರ್ಧ್ವಾಬ್ಜಮೆಂಬ | ೧೭೫ |
| ಬಳಿಕ್ಕಮೆಲರುಗೊಂಟು | ೫೩ |
| ಬಳಿಕ್ಕಂ ಕಠಿಣ ಮೃದೂಷ್ಣ | ೪೮ |
| ಬಳಿಕ್ಕಂ ಕೇವಲಂ ಜ್ಞಾನಜಂ | ೧೬೦ |
| ಬಳಿಕ್ಕಂ ಗುರುಲಿಂಗಮೆ | ೨೨ |
| ಬಳಿಕ್ಕಂ ಚತುರ್ಭುಜ | ೧೫೬ |
| ಬಳಿಕ್ಕಂ ಜಪಾಕುಸುಮ | ೧೫೩ |
| ಬಳಿಕ್ಕಂ ಜಂಗಮಲಿಂಗಮೆ | ೨೪ |
| ಬಳಿಕ್ಕಂ ಡ ವಿರಜೆ | ೧೮೭ |
| ಬಳಿಕ್ಕಂ ಪ್ರಸಾದಿಸ್ಥಲಮೆ | ೧೪ |
| ಬಳಿಕ್ಕಂ ಭೂತಾಂಗ ನಿರೂಪಣಾ | ೧೪೦ |
| ಬಳಿಕ್ಕಂ ಪರಮ ನ್ಯಾಯದಂತೆ | ೨೦೫ |
| ಬಳಿಕ್ಕಂ ಶಾಂತಿಕಮಂತ್ರ | ೧೧೪ |
| ಬಳಿಕ್ಕಂ ಶಿವಲಿಂಗದಲ್ಲಿ | ೧೨೧ |
| ಬಳಿಕ್ಕಂ ಶಿವಲಿಂಗಸ್ಥಲಮೆ | ೨೩ |
| ಬಳಿಕ್ಕಂ ಶಿವಾಸ್ತ್ರಮಂತ್ರಂ | ೧೬೫ |
| ಬಳಿಕ್ಕಂ ಶುಕ್ಲವರ್ಣ | ೧೬೩ |
| ಬಳಿಕ್ಕಂ ಷಡಂಗಮಂತ್ರ | ೧೭೧ |
| ಬಳಿಕ್ಕಾದಿಪ್ರಸಾದ ನಿರೂಪಣಾ | ೧೦೮ |
| ಬಳಿಕ್ಕಾಧಾರಶಕ್ತಿ ಸಂಜ್ಞಿತ | ೧೪೬ |
| ಬಳಿಕ್ಕೆಯುಮಗ್ನಿಮಂಡಲದ | ೭೫ |
| ಬಳಿಕ್ಕೆಯುಮಗ್ನಿಮಂಡಲದೀಶಾನ | ೭೭ |
| ಬಳಿಕ್ಕೆಯುಮಾ ಪಿಂಡಬ್ರಹ್ಮಗಳ | ೧೩೫ |
| ಬಳಿಕ್ಕೆಯುಂ ಪಾಂತವೆ | ೧೯೭ |
| ಭೂವರ್ಗದ ಮೂರನೆಯ | ೧೧೬ |
| ಭೇದಾಭೇದಂಗಳೇನು | ೨ |
| ಮತ್ತಮಗ್ನಿಮಂಡಲ | ೭೧ |
| ಮತ್ತಮಗ್ನಿಯ ಮೂಲೆಯ | ೫೨ |
| ಮತ್ತಮಂಗ ಲಿಂಗ ಶಕ್ತಿ ಭಕ್ತಿ | ೩೩ |
| ಮತ್ತಮಂಗ ಹಸ್ತ ಶಕ್ತಿ ಲಿಂಗ | ೪೧ |
| ಮತ್ತಮಾ ಇಷ್ಟಲಿಂಗಮೆ | ೨೦ |
| ಮತ್ತಮಾ ಚೌಕದ ನಡುವೆ | ೫೭ |
| ಮತ್ತಮಾ ಪೃಥ್ವ್ಯಾದಿಭೂತಂ | ೧೩೩ |
| ಮತ್ತಮಾ ಮಹಾಲಿಂಗದಧಃಕಂಜ | ೧೮೦ |
| ಮತ್ತಮಾ ಮಹಾಲಿಂಗದ ಶಿವ | ೧೭೨ |
| ಮತ್ತಮಾ ಮಾಹೇಶ್ವರ | ೧೩ |
| ಮತ್ತಮಾ ಮೂವತ್ತಾರಂಗ | ೧೫೦ |
| ಮತ್ತಮಾಯಂಗಸ್ಥಲ | ೧೦ |
| ಮತ್ತಮಾಯಗ್ನಿಂದು | ೭೦ |
| ಮತ್ತಮಾ ಶಕ್ತಿಬೀಜವಾದ | ೧೪೩ |
| ಮತ್ತಮಾ ಶಿವಾತ್ಮಕ | ೯೮ |
| ಮತ್ತಮಾ ಶುದ್ಧಪ್ರಸಾದಂ | ೯೧ |
| ಮತ್ತಮಾ ಸದ್ಯಾದಿಗಳಿಂ | ೧೩೨ |
| ಮತ್ತಮಾ ಸಹಸ್ರಕಮಲದ | ೨೦೭ |
| ಮತ್ತಮಿಲ್ಲಿ ಕಕಾರಾದಿ | ೨೦೮ |
| ಮತ್ತಮಿಂತು ಮಂತ್ರಭೇದ | ೧೨೫ |
| ಮತ್ತಮೀ ಪತ್ತೊಂಬತ್ತಕ್ಕೆ | ೨೦೧ |

| ವ. ಆರಂಭ | ವ. ಸಂ. |
|---|---|
| ಮತ್ತಮೀ ಮಹಾವಾಕ್ಯಾರ್ಥಕ್ಕೆ | ೨೯ |
| ಮತ್ತಮೀ ಮಂತ್ರಜಾತಮೆಂತೆನೆ | ೨೦೦ |
| ಮತ್ತಮೀ ಮೂಲಪ್ರಸಾದ | ೧೦೦ |
| ಮತ್ತಮೀ ಷಡಂಗಕ್ಕೈಶ್ವರ್ಯ | ೩೨ |
| ಮತ್ತಮೀ ಷಡಂಗ ಮಂತ್ರಂಗಳೀ | ೧೩೮ |
| ಮತ್ತಮೀ ಷೋಡಶ ಸ್ವರ | ೧೭೯ |
| ಮತ್ತಮುಮಾದಿ ಶಕ್ತಿ | ೧೫೯ |
| ಮತ್ತಮೆರಡನೆಯ | ೯೯ |
| ಮತ್ತಂ ಅಧಃಪಟ್ಟಿಕೆಯೆಂದು | ೧೭೨ |
| ಮತ್ತಂ ಆ ಶಾಂಭವಚಕ್ರಮೆ | ೨೦೬ |
| ಮತ್ತಂ ಕ್ರಮದಿಂ | ೧೨೨ |
| ಮತ್ತಂ ಗಣಸಂಜ್ಞಿತವಾದ | ೧೧೯ |
| ಮತ್ತಂ ಗುಹ್ಯಮಂ | ೧೧೨ |
| ಮತ್ತಂ ತಮ್ಮ ತಮ್ಮ | ೫೦ |
| ಮತ್ತಂ ತರದಿಂ ಪಂಚಬ್ರಹ್ಮ | ೧೩೪ |
| ಮತ್ತಂ ತರದಿಂ ವ್ಯೋಮ | ೧೫೪ |
| ಮತ್ತಂ ದುಗ್ಧ ದಧಿ | ೪೯ |
| ಮತ್ತಂ ನಾಡಜನವು | ೯೬ |
| ಮತ್ತಂ ಪಡುವ ತೊಡಗಿ | ೧೬೯ |
| ಮತ್ತಂ ಪರಿವಿಡಿಯಿಂ | ೧೫೫ |
| ಮತ್ತಂ ಪ್ರಣವಭೇದ | ೧೩೭ |
| ಮತ್ತಂ ಪ್ರಥಮಮದಗ್ನಿ | ೬೩ |
| ಮತ್ತಂ ಪಿಂದಣ ಚಕ್ರೋದ್ಧರಣ | ೧೯೨ |
| ಮತ್ತಂ ಪೂಜಕನಾದ | ೧೬೬ |
| ಮತ್ತಂ ಪೃಥ್ವೀ ಪೀಠ | ೧೫೧ |
| ಮತ್ತಂ ಭವಿಗಳ | ೨೦೯ |
| ಮತ್ತಂ ಭೂತಜ | ೧೬೧ |
| ಮತ್ತಂ ಮಹಾಲಿಂಗಮೆ | ೨೬ |
| ಮತ್ತಂ ಮಂತ್ರರೂಪಮೆಂತೆನೆ | ೨೦೨ |
| ಮತ್ತಂ ವಾಹನ | ೨೦೪ |
| ಮತ್ತಂ ಮೊದಲಂಗ | ೧೨ |
| ಮತ್ತಂ ಶಕ್ತ್ಯಂಗ ನಿರೂಪಣಾ | ೧೪೮ |
| ಮತ್ತಂ ಶಕ್ತಿ ಸಂಜ್ಞಿತ | ೧೧೦ |
| ಮತ್ತಂ ಶಿವನೆ ಜೀವ | ೮೯ |
| ಮತ್ತಂ ಶಿವ ಷಟ್ಚಕ್ರ | ೧೮೫ |
| ಮತ್ತಂ ಶಿವಾಂಗ ಮಂತ್ರ | ೧೩೯ |
| ಮತ್ತಂ ಷಡಧ್ವನ್ಯಾಸ | ೧೯೮ |
| ಮತ್ತಂ ಸಕೇಸರ | ೯೩ |
| ಮತ್ತಂ ಸಚಿತ್ರ | ೫೫ |
| ಮತ್ತಂ ಸ್ಥಲವೊಂದೆ | ೯ |
| ಮತ್ತಂ ಸಾಕಲ್ಯಪ್ರಣವ | ೧೨೭ |
| ಮತ್ತಂ ಹಸ್ತಮೆನೆ | ೩೫ |
| ಮತ್ತೆ ಎರಡನೆಯ | ೬೪ |
| ಮತ್ತೆಯು ಪೃಥ್ವಪ್ತೇಜೋ | ೩೮ |
| ಮತ್ತೆಯುಮಗ್ನಿಮಂಡಲದ | ೭೬ |
| ಮತ್ತೆಯುಮಂಗಭೇದ | ೧೬೭ |
| ಮತ್ತೆಯುಮಾಚಾರಲಿಂಗಮೆ | ೨೧ |
| ಮತ್ತೆಯುಮಾ ಮಂತ್ರ | ೧೨೩ |
| ಮತ್ತೆಯುಮೀ ಮಹಾಲಿಂಗ | ೧೮೩ |
| ಮತ್ತೆಯುಮೀಯ್ಯೆದು | ೧೬೨ |
| ಮತ್ತೆಯುಮೀ ಶಿವಬೀಜಂ | ೧೦೪ |
| ಮತ್ತೆಯುಮೂರ್ಧ್ವಪಟ್ಟಿಕೆ | ೧೭೬ |
| ಮತ್ತೆಯುಂ ಕರ್ಣಿಕೆಯಂ | ೬೭ |
| ಮತ್ತೆಯುಂ ಕ ಮಹಾಕಾಳಿ | ೧೮೬ |
| ಮತ್ತೆಯುಂ ಕ್ರಿಯೆಯೆ | ೧೨೪ |
| ಮತ್ತೆಯುಂ ಕೂಟಾಂಗ | ೧೫೮ |
| ಮತ್ತೆಯುಂ ಚಕ್ರದ | ೮೫ |
| ಮತ್ತೆಯುಂ ಧನುರ್ಗತಿ | ೫೧ |
| ಮತ್ತೆಯುಂ ರಕ್ತವರ್ಣದಿಂ | ೬೦ |
| ಮತ್ತೆಯುಂ ರೂಪ ದ್ರವ್ಯ | ೪೭ |
| ಮತ್ತೆಯುಂ ವ ವಾರುಣಿ | ೧೮೯ |
| ಮತ್ತೆಯುಂ ಶರಣಸ್ಥಲ | ೧೬ |
| ಮತ್ತೆಯುಂ ಸಮಸ್ತಕಲೆಗಳಲ್ಲಿ | ೧೩೬ |
| ಮತ್ತೆಯುಂ ಸಮಸ್ತ ಕಾರ್ಯ | ೯೫ |
| ಮತ್ತೆಯುಂ ಸರ್ವಜ್ಞಶಕ್ತಿ | ೩೦ |
| ಮತ್ತೆಯುಂ ಸ್ಥೂಲ ಪಂಚಾಕ್ಷರ | ೧೯೬ |

| ವ. ಆರಂಭ | ವ. ಸಂ. |
|---|---|
| ಮರಲ್ದು ಪ್ರಸಾದಲಿಂಗಮು | ೨೫ |
| ಮರಲ್ದುಮಗ್ನಿಮಂಡಲದ | ೭೩ |
| ಮರಲ್ದುಮಾಜ್ಞೆಯಿಂ | ೫೬ |
| ಮರಲ್ದುಮಾ ಪ್ರಣವಂ | ೧೨೬ |
| ಮರಲ್ದುಮಾ ಮಹಾಲಿಂಗದ | ೧೮೨ |
| ಮರಲ್ದುಮಾ ಮೂವತ್ತಾರ | ೪೨ |
| ಮರಲ್ದುಮಾ ಲಿಂಗದ | ೧೭೪ |
| ಮರಲ್ದುಮಿಂದ್ರಾಗ್ನಿ | ೬೯ |
| ಮರಲ್ದುಮೆರಡನೆಯ | ೯೪ |
| ಮರಲ್ದು ಷಡಕ್ಷರನ್ಯಾಸಮಂ | ೧೯೫ |
| ಮರಲ್ದುಂ ಕೇವಲ ಹೃದಯ | ೧೬೪ |
| ಮರಲ್ದುಂ ಗುಳಿ ತೆವರಿಲ್ಲದ | ೧೬೮ |
| ಮರಲ್ದುಂ ಪಾದಾದಿ | ೧೫೭ |
| ಮರಲ್ದುಂ ಪೂರ್ವೋಕ್ತ | ೧೪೪ |
| ಮರಲ್ದುಂ ಬ ವಾಙ್ಮಯೀ | ೧೮೮ |

| ವ. ಆರಂಭ | ವ. [illegible] |
|---|---|
| ಮರಲ್ದುಂ ಮೂರನೆಯ | [illegible] |
| ಮರಲ್ದುಂ ರಕ್ತವರ್ಣ | [illegible] |
| ಮರಲ್ದೇಕಾದಶ ಸಕೀಲ | [illegible] |
| ಮಂತ್ರೋತ್ಪತ್ತಿ ನಿರೂಪಣಾನಂತರ | ೧[illegible] |
| ಮೇಣ್ ಅಗ್ನಿಮಂಡಲದ | [illegible] |
| ಮೇಣ್ಣಕ್ರನ್ಯಾಸದ | [illegible] |
| ಮೇಣ್ಣಮಂತ್ರಮೂರ್ತಿಗೆ | ೧[illegible] |
| ಮೊದಲಾಧಾರ ಶಕ್ತಿ | ೧೪[illegible] |
| ಶಕ್ತಿ ಎನಲಾ | [illegible] |
| ಶ್ರೀಮತ್ಸ್ವಸ್ತಿ ಸಮಸ್ತ | [illegible] |
| ಶ್ವೇತಂ ರಕ್ತಂ | ೧೫[illegible] |
| ಸಚ್ಚಿದಾನಂದ ಲಕ್ಷಣ | [illegible] |
| ಸ್ವಸ್ತಿ ಶ್ರೀಮನ್ನಿರಂಜನ | [illegible] |
| ಸ್ಥೂಲ ಸೂಕ್ಷ್ಮ ಕಾರಣಾಂಗ | [illegible] |

## ಸಮಗ್ರ ವಚನಸಾಹಿತ್ಯ ಪ್ರಕಟನ ಯೋಜನೆ

'ಸಮಗ್ರ ವಚನಸಾಹಿತ್ಯದ ಪ್ರಕಟನ ಯೋಜನೆ' ಕರ್ನಾಟಕ ಸರ್ಕಾರದ ಈವರೆಗಿನ ಸಾಹಿತ್ಯಕ ಸಾಧನೆಗಳಲ್ಲಿ ಒಂದು ಮಹತ್ವದ ದಾಖಲೆಯಾಗಿದೆ. ಇದು ಒಂದು ಸಾಹಿತ್ಯಕೃತಿಯ ಪ್ರಕಟನೆಯಲ್ಲ; ಒಂದು ಸಾಹಿತ್ಯ ಪ್ರಕಾರದ ಪ್ರಕಟನೆ.

ತತ್ವಕ್ಕೆ ತತ್ವ, ಸಾಹಿತ್ಯಕ್ಕೆ ಸಾಹಿತ್ಯವಾಗಿರುವ 'ವಚನ ವಾಙ್ಮಯ' ಏಕಕಾಲಕ್ಕೆ ಆತ್ಮಕಲ್ಯಾಣವನ್ನೂ ಸಮಾಜ ಕಲ್ಯಾಣವನ್ನೂ ಪ್ರತಿಪಾದಿಸುವ ಮೂಲಕ ಜಾಗತಿಕ ಮಹತ್ವ ಗಳಿಸಿದೆ. ಈ ಮೌಲಿಕ ಸಾಹಿತ್ಯವನ್ನು ಸುಲಭ ಬೆಲೆಯಲ್ಲಿ ಜನತೆಗೆ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ಇವತ್ತಿನ ಮಿತಿಗೆ ಸಿಗುವ ಬಸವಯುಗ ಮತ್ತು ಬಸವೋತ್ತರ ಯುಗಗಳ ಎಲ್ಲ ಶರಣರ ಎಲ್ಲ ವಚನಗಳನ್ನು ಸಂಗ್ರಹಿಸಿ, ಸಂಸ್ಕರಿಸಿ, ಪ್ರಕಟಿಸಿದ ಪ್ರಯತ್ನವಿದು. ಈ ಮೂಲಕ ಬಸವಯುಗದ ಹಲವು ಹೊಸ ವಚನಗಳು ಬೆಳಕಿಗೆ ಬರುವುದರೊಂದಿಗೆ, ಬಸವೋತ್ತರ ಯುಗದ ಸಮಗ್ರ ವಚನ ಸಂಪತ್ತು ಪ್ರಥಮಸಲ ಹೊರ ಬರುತ್ತಿರುವುದು ಈ ಯೋಜನೆಯ ವಿಶೇಷ ಸಾಧನೆಯಾಗಿದೆ.

೮೦೦ ವರ್ಷಗಳುದ್ದಕ್ಕೂ ಬೆಳೆದುಬಂದ ಈ ಸಾಹಿತ್ಯದ ವ್ಯಾಪ್ತಿಯನ್ನು ಪ್ರಥಮಬಾರಿ ಗುರುತಿಸಿಕೊಡುತ್ತಿರುವ ಈ ಸಾಹಸದ ಫಲವಾಗಿ, ೨೦ಸಾವಿರ ವಚನಗಳು ಸುಮಾರು ೧೦ಸಾವಿರ ಪುಟ ವ್ಯಾಪ್ತಿಯ ೧೫ ಸಂಪುಟಗಳಲ್ಲಿ (ವಚನ ಪರಿಭಾಷಾಕೋಶ ಸೇರಿ) ಬೆಳಕು ಕಾಣುತ್ತಿವೆ.

ISBN : 81-7713-098-6